ಸರಮಾ— ಸರನೂ ಸರಣಾತ್ (ನಿರು ೧೧-೨೪) ಎಂದು ಯಾಸ್ಕರು ನಿರ್ವಚನಮಾಡಿರುತ್ತಾರೆ. (ಹೋಗುವುದು ಎಂದರ್ಥ) ಸೃ ಗತೌ ಧಾತು ಇದಕ್ಕೆ **ಔಣಾದಿಕ** ಅಸು ಪ್ರತ್ಯಯ. ಅಸು ಪರದಲ್ಲಿರುವಾಗ ಧಾತುವಿಗೆ ತನ್ನಿಮಿತ್ತವಾಗಿ ಗುಣ ಸ್ತ್ರೀತ್ವದಲ್ಲಿ ಆದಂತನಿಮಿತ್ತವಾಗಿ ಟಾಪ್ ಸರಮಾ ಎಂದು ರೂಪವಾಗುತ್ತದೆ. ಪ್ರತ್ಯಯ ಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ

ಧಾಸಿಮ್—ಧೇಟ್ ಸಾನೇ ಧಾತು. ಧೀಯತೇ ಪೀಯತೇ ಇತಿ ಧಾಸಿಃ **ಔಣಾದಿಕ**ವಾದ ಸಿಪ್ರತ್ಯಯ. ಸಿಪರದಲ್ಲಿರುವಾಗ **ಆದೇ ಚ ಉಪದೇಶೇಽಶಿತಿ** (ಪಾ ಸೂ ೬-೧-೪೫) ಎಂಬುದರಿಂದ ಧಾತುವಿಗೆ ಆತ್ವ ಧಾಸಿ ಎಂದಾಗುತ್ತದೆ. ದ್ವಿತೀಯಾ ಏಕವಚನರೂಪ ಪ್ರತ್ಯಯಸ್ವರ. ಅಥವಾ ಡುಧಾಞ್ ಧಾರಣಪೋಷಣಯೋಃ ಧಾತು. ಪೋಷಣಾರ್ಥದಲ್ಲಿ **ಈ** ಧಾತುವಿಗೆ ಸಿಪ್ರತ್ಯಯ ಹಿಂದಿನಂತೇ ರೂಪಸಿದ್ಧಿ

ಬೃಹಸ್ಪತಿಃ -ತದ್ಬೃಹತೋ ಕರಪತ್ಯೋಶ್ಚೋರದೇವತಯೋಃ ಸುಟ್ ತಲೋಪಶ್ಚ (ಪಾ ಸೂ ೬-೧-೧೫೬ ಗ) ಎಂಬುದರಿಂದ ದೇವತಾರೂಪ ಅರ್ಥತೋರುವುದರಿಂದ ಸುಡಾಗಮ ಬೃಹತಿನ ತಕಾರಕ್ಕೆ ಲೋಪ ಬೃಹಸ್ಪತಿ ಎಂದು ರೂಪವಾಗುತ್ತದೆ ಬೃಹತ್ ಎಂಬುದು ಅಂತೋದಾತ್ತವಾದ ಪದ. ಇದಕ್ಕೆ ಕೆಲವರು ಆದ್ಯುದಾತ್ತವನ್ನೂ ಹೇಳುತ್ತಾರೆ ಎಂದು ಹಿಂದೆ ಹೇಳಿರುತ್ತೇವೆ. ಪತಿಶಬ್ದವು ಡತಿಪ್ರತ್ಯಯಾಂತವಾದುದರಿಂದ ಆದ್ಯುದಾತ್ತ ಹೀಗಿರುವಾಗ ಸಮಾಸದಲ್ಲಿ **ಉಭೇವನಸ್ಪತ್ಯಾದಿಷು** (ಪಾ ಸೂ ೬-೧-೧೪೮) ಎಂಬುದರಿಂದ ಪೂರ್ವೋತ್ತರ ಪದಗಳಿಗೆ ಏಕಕಾಲದಲ್ಲಿ ಪ್ರಕೃತಿಸ್ವರ ಬರುತ್ತದೆ.

ಉಸ್ರಿಯಾಭಿಃ—ನಿವಸತಿ ಅಸ್ಯಾಂ ಕ್ಷೀರಾದಿಕಮಿತಿ ಉಸ್ರಾ ಗೌಃ, ವಸ ನಿವಾಸೇ ಧಾತು **ಸ್ಫಾಯಿತಞ್ಚಿ-ವಂಚಿಶಕಿ** (ಉ ಸೂ ೪೧-೧೭೦) ಎಂಬುದರಿಂದ ಅಧಿಕರಣಾರ್ಥದಲ್ಲಿ ರಕ್ ಕಿತ್ತಾದುದರಿಂದ **ವಚಿಸ್ವಪಿಯಜಾದೀನಾಂ ಕಿತಿ** (ಪಾ ಸೂ ೬-೧-೧೫) ಎಂಬುದರಿಂದ ಸಂಪ್ರಸಾರಣ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. ಉಸ್ರ ಎಂದಾಗುತ್ತದೆ **ಉಸ್ರಾ ಶಬ್ದಾತ್ ಸ್ವಾರ್ಥೇ ಪೃಷೋದರಾದಿತ್ವೇನ ಫಪ್ರತ್ಯಯಃ** ಎಂಬ ನಿಘಂಟುಭಾಷ್ಯದಿಂದ ಫಪ್ರತ್ಯಯ **ಆಯನೇಯೀಯಾ** ಸೂತ್ರದಿಂದ ಆದಕ್ಕೆ ಇಯಾದೇಶ ಉಸ್ರಿಯಾ ಎಂದು ರೂಪವಾಗುತ್ತದೆ ತೃತೀಯಾ ಬಹುವಚನಾಂತರೂಪ ಪ್ರತ್ಯಯಸ್ವರದಿಂದ ಸ್ರಿ ಎಂಬಲ್ಲಿರುವ ಇಕಾರವು ಉದಾತ್ತವಾಗುತ್ತದೆ

ವಾವಶಂತೆ—ವಾಶೃ ಶಬ್ದೇ ಧಾತು ಭ್ವಶಾರ್ಧದಲ್ಲಿ **ಧಾತೋರೇಕಾಚೋ ಹಲಾದೇಃ** ಸೂತ್ರದಿಂದ ಯಙ್ **ಸನ್ಯಙೋಃ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ **ಹ್ರಸ್ವ** ಎಂಬುದರಿಂದ ಹ್ರಸ್ವ **ದೀರ್ಘೋಽಕಿತಿ** ಎಂಬುದರಿಂದ ಪುನಃ ಅಭ್ಯಾಸಕ್ಕೆ ದೀರ್ಘ. ವ್ಯತ್ಯಯದಿಂದ ಧಾತುವಿನ ಉಪಧೆಗೆ ಹ್ರಸ್ವ ಲಜ್ ಪ್ರಥಮಪುರುಷ ಬಹುವಚನಕ್ಕೆ **ಝೋಽತಃ** ಎಂಬುದರಿಂದ ಅಂತಾದೇಶ **ಕರ್ತರಿ ಶಪ್** ಎಂಬುದರಿಂದ ಶಪ್ **ಛಂದಸ್ಯುಭಯಥಾ** ಎಂಬುದರಿಂದ ಶಪ್ಪಿಗೆ ಆರ್ಧಧಾತುಕಸಂಜ್ಞೆ ಬರುವುದರಿಂದ **ಅತೋಲೋಪಃ** ಎಂಬುದರಿಂದ ಯಜ್ನ ಅಕಾರಕ್ಕೆ **ಲೋಪ ಯಸ್ಯ ಹಲ** ಎಂಬುದರಿಂದ ಯಲೋಪ ವಾವಶಂತ ಎಂದಾಗುತ್ತದೆ ಅಥವಾ ವಶ ಕಾಂತೌ ಧಾತು. ಹಿಂದಿನಂತೆ ಭ್ವಶಾರ್ಧದಲ್ಲಿ ಯಙ್ ಬರುತ್ತಾದುದರಿಂದ ಸಂಪ್ರಸಾರಣವು ಪ್ರಾಪ್ತವಾದರೆ

ನವಶಃ (ಪಾ. ಸೂ. ೬-೧-೨೦) ಎಂಬುದರಿಂದ ಅದಕ್ಕೆ ಪ್ರತಿಷೇಧ ಬರುತ್ತದೆ ಹಿಂದಿನಂತೇ ಸ್ರಕ್ರಿಯಾ. ಅತಿಜಂತದ ಪರದಲ್ಲಿರುವುದರಿಂದ ತಿಜಂತನಿಘಾತಸ್ವರ ಬರುತ್ತದೆ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ॥ ೩ ॥

॥ ಸಂಹಿತಾಪಾಠಃ ॥

ಸ ಸುಷ್ಟುಭಾ ಸ ಸ್ತುಭಾ ಸಪ್ತ ವಿಪ್ರೈಃ ಸ್ವರೇಣಾದ್ರಿಂ ಸ್ವರ್ಯೋಷ್ಣಿ ನವಗ್ವೈಃ ।
ಸರಣ್ಯುಭಿಃ ಫಲಿಗಮಿಂದ್ರ ಶಕ್ರ ವಲಂ ರವೇಣ ದರಯೋ ದಶಗ್ವೈಃ ॥ ೪ ॥

॥ ಪದಪಾಠಃ ॥

ಸಃ । ಸುಸ್ತುಭಾ । ಸಃ । ಸ್ತುಭಾ । ಸಪ್ತ । ವಿಪ್ರೈಃ । ಸ್ವರೇಣ । ಅದ್ರಿಂ । ಸ್ವರ್ಯಃ । ನವಗ್ವೈಃ ॥
ಸರಣ್ಯುಭಿಃ । ಫಲಿಗಂ । ಇಂದ್ರ । ಶಕ್ರ । ವಲಂ । ರವೇಣ । ದರಯಃ । ದಶಗ್ವೈಃ ॥ ೪ ॥

॥ ಸಾಯಣಭಾಷ್ಯಂ ॥

ಆಂಗಿರಸೋ ದ್ವಿವಿಧಾಃ । ಸತ್ರೇಯಾಗಮನುತಿಷ್ಠಂತೋ ಯೇ ನವಭಿರ್ಮಾಸೈಃ ಸಮಾಪ್ಯ ಗತಾಸ್ತೇ ನವಗ್ವಾಃ ॥ ನವಗ್ವಾ ನವನೀತಗತಯ ಇತಿ ಯಾಸ್ಕೋ ವ್ಯಾಚಖ್ಯೌ । ನಿ. ೧೧-೧೯ । ಯೇ ತು ದಶಭಿರ್ಮಾಸೈಃ ಸಮಾಪ್ಯ ಜಗ್ಮುಸ್ತೇ ದಶಗ್ವಾಃ । ತಾದೃಶೈರುಭಯವಿಧೈರ್ವಿಪ್ರೈರ್ಮೇಧಾವಿಭಿಃ

सरण्युभिः सरणं शोभनानां गतिमिच्छद्भिः सप्त सप्तसंख्याकैः । सप्त ह्यत्र मेधातिथि-प्रभृतयोऽङ्गिरसो दृश्यन्ते । एवंभूतैरंगिरोभिः सुष्वुभा शोभनस्तोभयुक्तेन स्तरेणोदात्तादिस्वरव्यस्तरोपेतेन । यदा । मंद्रमध्यमादिस्वरेण स्तुभा स्तोत्रेण स्वर्यः सुष्ठु प्राप्यः । यदा । शब्दनीयः । स्तुत्य इत्यर्थः । हे शक्र शक्तिमन्निंद्र एवंभूतः स त्वमद्रिमादरणीयः । वज्रेण छित्त्वेत्यर्थः । फलिगं । प्रतिफलं प्रति-बिंबं । तदस्मिन्नस्तीति फली स्वच्छमुदकं । तद्गच्छत्याधारत्वेनेति फलिगः । यदा । व्रीह्यादि फलं । तदस्त्यस्मिन्नस्तीति भवतीति फली वृष्टिजलं । तद्गच्छतीति फलिगः । एवंभूतं वलं मेघं रवेणात्मीयेन शब्देन दरयः । अधायंयः । त्वदीयशब्दश्रवणमात्रेण मेघोऽयं बिभेतीत्यर्थः । यदा । अद्रिः सर्वतः । आदृतेऽस्मिन्पटलादिकमिति । फलिगोऽ मेघः । फलिग उपल इति तन्नामसु पाठात् । वलोऽसुरः । देवा वै वलेऽ गाः पर्यपश्यन् । ऐ. ब्रा. ६-३४ । इत्यादावसुरेऽ प्रयुक्तत्वात् । एतेऽ त्रयोऽपि त्वदीयशब्दश्रवणमात्रेणाबिभयुरित्यर्थः ॥ स इत्येकः । पादपूरणः । सुष्वुभा । स्तोभतिः स्तुतिकर्मा । संपदादिलक्षणोऽ भावेऽ क्विप् । शोभनः स्तुप् स्तोभोऽ यस्य । नञ्सुभ्यामित्युत्तरपदान्तोदात्तत्वं । उपसर्गात्सुनोतीति षत्वं । स्तुभा । करणभूतस्याऽपि स्तोत्रस्य स्वव्यापारे कर्तृत्वात् स्तोभति स्तौतीति क्विप्टेति कर्तरि क्विप् । सावेकाचे इति विभक्तेरुदात्तत्वं । सप्त । सुपां सुलुगिति भिसोऽ लुक् । स्वर्यः । स्वृ शब्दोपतापयोः । ऋहलोर्ण्यदिति ण्यत् । वृद्ध्यभावश्छांदसः । तित्स्वरित इति स्वरितत्वं । नवगृभिः । नवशब्द उपपदे गमेर्ढ्रावे क्विप् गमः क्वाविति सुनासिकलोपऽ ऊ च गमादीनामिति वक्तव्यं । पा ६-४-४०-१ । इत्यूकारान्तादेशः । नवभिर्गूऽ र्गमनं येषां ते नवगवाः । अकारोपजनश्छांदसः । यदा । गमेर्ढ्रावे ड्वप्रत्ययः । पूर्ववद्बहुव्रीहिः । बहुव्रीहौ पूर्वपदप्रकृतिस्वरत्वं । सरण्युभिः । सरण-मात्मन इच्छंतः सरण्यवः । क्यच्यंतेभ्यो लोपश्छांदसः । क्याच्छंदसीत्युः । फलिगं । फल्युदकं गच्छतीति फलिगः । डोऽन्येभ्योऽपि दृश्यते । पा. ३-२-४८ । इति गमेर्डगः । वलं । वृणोतीति वलः । पचाद्यच् । कपिलकादित्वाल्लत्वं । मं ८-२-८८ । दरयः । दृ विदारणे । वृद्भ्यो कृताय्यां व्य भय इति घटादिषु पाठान्नित्त्वेऽ मिताम् ह्रस्व इति ह्रस्वत्वं ॥

॥ प्रतिपदार्थ ॥

सः—इंद्रनु । नवगृभिः—ಒಂಭತ್ತು ತಿಂಗಳುಗಳಲ್ಲಿ ಸತ್ರಯಾಗವನ್ನು ಮುಗಿಸಿದ । दशगृभिः—ಹತ್ತು ತಿಂಗಳುಗಳಲ್ಲಿ ಸತ್ರಯಾಗವನ್ನು ಮುಗಿಸಿದ । सरण्युभिः –ಸದ್ಗತಿಯನ್ನಪೇಕ್ಷಿಸುವ । सप्त—ಏಳು

ಜನ । **ವಿಶ್ಪ್ರೈಃ**—ಮೇಧಾವಿಗಳಾದ (ಅಂಗಿರಸರುಗಳಿಂದ) । **ಸುಷ್ಟುಭಾ** -ಒಳ್ಳೆಯ ಸ್ತೋತ್ರರೂಪವಾದ । **ಸ್ವರೀಣ** -ಉದಾತ್ತಾದಿ ಸ್ವರಗಳು ಅಥವಾ ಮಂದ್ರಾದಿ ಸ್ವರಗಳಿಂದ ಯುಕ್ತನಾದ । **ಸ್ತುಭಾ**—ಸ್ತುತಿ ವಾಕ್ಯಗಳಿಂದ । **ಸ್ವರ್ಯಃ**—ಪ್ರಾಪ್ಯನು । **ಶಕ್ರ**—ಶಕ್ತಿಯು ತನಾದ । **ಇಂದ್ರೆ**—ಇಂದ್ರನೇ । **ಸಃ**—ಅಂತಹ ನೀನು । **ಅದ್ರಿಂ**—ಆದರಣೀಯವಾದ (ವಜ್ರದಿಂದ ಭೇದಿಸಲ್ಪಡಜೇಕಾದ) । **ಫಲಿಗಂ**—ಪ್ರತಿಬಿಂಬವನ್ನು ಕೊಡುವಷ್ಟು ಸ್ವಚ್ಛವಾದ ನೀರಿಗೆ ಆಶ್ರಯವಾದ ಅಥವಾ ವೃಷ್ಟ್ಯಾದಿ ಫಲಕೊಡುವ ವೃಷ್ಟಿಜಲವುಳ್ಳ । **ವಲಂ**—ಮೇಘವನ್ನು । ಅಥವಾ, [**ಅದ್ರಿಃ**—ವಜ್ರದಿಂದ ಭೇದಿಸಲ್ಪಡುವ ಪರ್ವತನನ್ನು । **ಫಲಿಗಂ**—ವೃಷ್ಟಿ ಜಲಕ್ಕೆ ಆಧಾರವಾದ **ವಲಂ**—ವಲನಾಮಕ ರಾಕ್ಷಸನನ್ನು] । **ರವೇಣ**—(ನಿನ್ನ ಸಂಬಂಧವಾದ) ಶಬ್ದದಿಂದ । **ದರಯಃ**—ಭಿ ತನನ್ನಾಗಿ ಮಾಡಿದೆ, ಭೇದಿಸಿದೆ ॥

॥ ಭಾವಾರ್ಥ ॥

ಸತ್ರಯಾಗವನ್ನು ಒಂಭತ್ತು ಅಥವಾ ಹತ್ತು ತಿಂಗಳುಗಳಲ್ಲಿ ಮುಗಿಸಿದ ಏಳು ಜನ ಮೇಧಾವಿಗಳಾದ ಅಂಗಿರಸರು ನಿನ್ನನ್ನು ಉದಾತ್ತಾದಿ ಶ್ರಾವ್ಯವಾದ ಸ್ವರಯುಕ್ತವಾಗಿ ಅಥವಾ ಮಂದ್ರಮಧ್ಯಮಾದಿ ಸ್ವರಯುಕ್ತವಾಗಿ ಸ್ತುತಿಸಿ ನಿನ್ನನ್ನು ಹೊಂದಿದರು ಒಲಿಸ್ಯನಾದ ನಿನ್ನ ಶಬ್ದಮಾತ್ರದಿಂದಲೇ ಮೇಘ, ಪರ್ವತ ಮತ್ತು ವಲಾಸುರ, ಈ ಮೂವರೂ ಭೀತರಾಗುತ್ತಾರೆ

English Translation

O powerful India you are to be gratified with a laudatory and well-accented hymn by the seven priests when engaged for nine months or for ten, and desirous of safe protection, you have terrified by your voice the divisible and fructifying cloud

॥ ವಿಶೇಷವಿಷಯಗಳು ॥

ಸುಷ್ಟುಭಾ—ಸ್ತೋಭತಿಃ ಸ್ತುತಿಕರ್ಮಾ । ಶೋಭನಃ ಸ್ತೋಭೋ ಯಸ್ಯ । ಉತ್ತಮವಾದ ಸ್ತೋತ್ರಗಳಿಂದ ಯುಕ್ತವಾದ

ಸ್ತುಭಾ—ಸ್ತೋತ್ರದಿಂದ

ಸಪ್ತ ವಿಪ್ರೈಃ—ಮೇಧಾತಿಥಿ ಮೊದಲಾದ ಏಳು ಜನ ಅಂಗಿರಾಋಷಿಯ ವಂಶಸ್ಥರಿಂದ; ಸ್ಕಂದಸ್ವಾಮಿಯು ಈ ಶಬ್ದಗಳಿಗೆ— **ಸಪ್ತರ್ಷಯೋ ಭರದ್ವಾಜಃ ಕಶ್ಯಪೋ ಗೌತಮೋಽತ್ರಿಃ । ವಿಶ್ವಾಮಿತ್ರೋ ಜಮದಗ್ನಿರ್ವಸಿಷ್ಠಃ ಸಪ್ತಮಃ ಸ್ಮೃತಃ ॥** ಭರದ್ವಾಜ, ಕಶ್ಯಪ, ಗೌತಮ, ಅತ್ರಿ, ವಿಶ್ವಾಮಿತ್ರ, ಜಮದಗ್ನಿ, ವಸಿಷ್ಠ, ಎಂಬ ಪ್ರಸಿದ್ಧರಾದ ಸಪ್ತರ್ಷಿಗಳೆಂದು ಅರ್ಥವಿವರಣೆ ಮಾಡಿರುವರು ವಿಪ್ರೈಃ ಎಂದರೆ ಮೇಧಾವಿಗಳಾದ ಎಂದರ್ಥವು.

ಸ್ವರೇಣ—ಸ್ವರೇಣೋದಾತ್ತಾದಿಶ್ರವ್ಯಸ್ವರೋಪೇತೇನ ಅಥವಾ ಮಂದ್ರಮಧ್ಯಮಾದಿಸ್ವರೋಪೇತೇನ ಎಂದರೆ ಋಗ್ವೇದಸ್ವರಗಳಾದ ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯಗಳೆಂಬ ನಾಲ್ಕು ವಿಧವಾದ ಸ್ವರಗಳಿಂದ ಆಥವಾ ಮಂದ್ರ ಮಧ್ಯಮ ಮೊದಲಾದ ಸಪ್ತ ಸ್ವರಗಳಿಂದ ಯುಕ್ತವಾದ ಎಂದು ಭಾಷ್ಯಕಾರರ ವಿವರಣೆಯು. ಸ್ಕಂದಸ್ವಾಮಿಯು—**ಸ್ವರತಿ ವೇನತೀತ್ಯರ್ಚತಿ ಕರ್ಮಸು ಪಾಠಾತ್ ಸ್ವರಶಬ್ದ ಇಹ ಸ್ತೋತ್ರವಚನಃ । ಅನ್ಯೇನ ಚ ಸ್ತೋತ್ರಾ ಜನೇನ ಸ್ತುತ್ಯೇಃ ।** ಎಂದರೆ ಸ್ವರತಿ ಧಾತುವಿಗೆ ಪೂಜಿಸು, ಸ್ತೋತ್ರ ಮಾಡು ಎಂದರ್ಥವು. ಸ್ವರ್ಯಃ ಎಂದರೆ ಇತರ ಜನರಿಂದ ಸ್ತುತಿಸಲ್ಪಡುವವನು ಎಂಬರ್ಥವನ್ನು ಹೇಳಿದ್ದಾರೆ.

ಅದ್ರಿಂ—ಪರ್ವತವನ್ನು ಅಥವಾ ಮೇಘವನ್ನು (ನಿ. ೨-೨೧)

ಸ್ವರ್ಯಃ—ಸ್ವೃ ಶಬ್ದೋಪತಾಪಯೋಃ । ಸುಷ್ಠು ಪ್ರಾಪ್ಯೇಃ । ಯದ್ವಾ ಶಬ್ದನೀಯಃ ಸ್ತುತ್ಯ ಇತ್ಯರ್ಥಃ । ಹೊಂದಲ್ಪಡುವವನು ಅಥವಾ ಸ್ತುತಿಸಲ್ಪಡುವವನು

ನವಗ್ವೈಃ, ದಶಗ್ವೈಃ—ನವಭಿರ್ಮಾಸೈರ್ಗಚ್ಛಂತೀತಿ ನವಗ್ವಾಃ । ದಶಭಿರ್ಮಾಸೈರ್ಗಚ್ಛಂತೀತಿ ದಶಗ್ವಾಃ । ಅಂಗಿರಸಾಂ ಸತ್ರಮಾಸೀನಾನಾಂ ಮಧ್ಯೇ ಯೇ ನವಭಿರ್ಮಾಸೈರವಾಪ್ತಫಲಾ ಉತ್ಥಿತಾಸ್ತೇಷಾಂ ನವಗ್ವಾ ಇತಿ ಸಂಜ್ಞಾ । ದಶಭಿರ್ಮಾಸೈರ್ದಶಗ್ವಾ ಇತಿ ಚ ॥ ಅಂಗಿರಾಋಷಿಯ ವಂಶದಲ್ಲಿ ಕೆಲವರು ಸಂವತ್ಸರಕಾಲಮಾಡುವ ಸತ್ರಯಾಗದಲ್ಲಿ ಒಂಭತ್ತು ತಿಂಗಳಲ್ಲಿಯೇ ಯಜ್ಞಾನುಷ್ಠಾನದಿಂದ ಸಿದ್ಧಿಯನ್ನು ಪಡೆದಿರುವರು ಅವರನ್ನು **ಅಂಗಿರಸ್ತಮಾ ನವಗ್ವಾಃ** ಒಂಭತ್ತು ತಿಂಗಳಲ್ಲಿಯೇ ಇಷ್ಟಸಿದ್ಧಿಯನ್ನು ಪಡೆದ ಅಂಗಿರಾಋಷಿವಂಶಸ್ಥರಲ್ಲಿ ಶ್ರೇಷ್ಠರಾದವರು ಎಂದೂ ಹತ್ತು ತಿಂಗಳಲ್ಲಿ ಇಷ್ಟಸಿದ್ಧಿಯನ್ನು ಪಡೆದ ಅಂಗಿರಾಋಷಿವಂಶಸ್ಥರನ್ನು **ದಶಗ್ವಾಃ** ಎಂದೂ ಹೇಳುವ ರೂಢಿ ಇದೆ ಈ ವಿಷಯದಲ್ಲಿ ಪಾಶ್ಚಾತ್ಯ ಪಂಡಿತರು ಈ ಶಬ್ದದ ಅರ್ಥವಿವರಣೆ ಮಾಡುವಾಗ—The term Navagva is applied to a man generally an Angiras, in the highest degree (Angirastama-ಅಂಗಿರಸ್ತಮ) who appears as a mystic race of olden times coupled with, and conceived probably as related to the Angirases they are often associated with the Dasagvas (ದಶಗ್ವ) ಈ ಶಬ್ದ ಪ್ರಯೋಗವು ಋಗ್ವೇದದ ಅನೇಕ ಸೂಕ್ತಗಳಲ್ಲಿರುವುದು ಕೆಲವು ಉದಾಹರಣೆಗಳನ್ನು ಕೊಡುವೆವು

ಯೇನಾ ನವಗ್ವೋ ದಧ್ಯಙ್ಙಪೋರ್ಣುತೇ ಯೇನ ವಿಪ್ರಾಸ ಆಪಿರೇ ।

(ಋ ಸಂ ೯-೧೦ ೪೪)

ನವಗ್ವೋ ನು ದಶಗ್ವೋ ಅಂಗಿರಸ್ತಮಃ ಸಚಾ ದೇವೇಷು ಮಂಹತೇ

(ಋ ಸಂ ೧೦-೬೨-೬)

ಸಖಾ ಹ ಯತ್ರ ಸಖಿಭಿರ್ನವಗ್ವೈರಭಿಜ್ಞ್ವಾ ಸತ್ವಭಿರ್ಗಾ ಅನುಗ್ಮನ್ ।

(ಋ. ಸಂ. ೩-೩೯-೫)

ಅಂಗಿರಸೋ ನಃ ಪಿತರೋ ನವಗ್ವಾ ಅಥರ್ವಾಣೋ ಭೃಗವಃ ಸೋಮ್ಯಾಸಃ ।

(ಋ ಸಂ ೧೦-೧೪-೬)

ಯೇನಾ ನವಗ್ವೇ ಅಂಗಿರೇ ದಶಗ್ವೇ ಸಪ್ತಾಸ್ಯೇ ರೇವತೀ ರೇವದೂಷ ॥

(ಋ. ಸಂ ೪-೫೧ ೪)

ಇತ್ಯಾದಿ ಅನೇಕ ಋಗ್ವೇದದ ಋಕ್ಕುಗಳಲ್ಲಿಯೂ, ಅಥರ್ವೇದ ಸಂ ೧೯-೧೦-೫೬, ೧೮-೩-೭೦ ಮೊದಲಾದ ಮಂತ್ರಗಳಲ್ಲಿಯೂ ಈ ಶಬ್ದಗಳ ಪ್ರಯೋಗವಿದೆ. ಇವುಗಳಲ್ಲಿ ಎರಡನೆಯ ಉದಾಹರಣೆಯಲ್ಲಿ ಹೇಳಿರುವ ನವಗ್ವ ಮತ್ತು ದಶಗ್ವ ಎಂಬ ಪ್ರತ್ಯಾತಿ ನಾಮವನ್ನು ಸಡೆದ ಅಂಗಿರಾಋಷಿವಂಶದಲ್ಲಿ ಶ್ರೇಷ್ಠನಾದವನು ದೇವತೆಗಳಿಂದಲೂ ಗೌರವಿಸಲ್ಪಡುತ್ತಾನೆ ಎಂಬುದು ಗಮನಾರ್ಹವಾಗಿದೆ

ಸರಣ್ಯುಭಿಃ—**ಸರಣಂ ಶೋಭನಾಗತಿಮಿಚ್ಛದ್ಭಿಃ**—ಉತ್ತಮವಾದ ಗಮನಯುಕ್ತರಾದ.

ಫಲಿಗಂ—**ಪ್ರತಿಫಲಂ ಪ್ರತಿಬಿಂಬಂ । ತದಸ್ಮಿನ್ನಸ್ತೀತಿ ಫಲಿ ಸ್ವಚ್ಛಮುದಕಂ ।** ತದ್ಗಚ್ಛತ್ಯಾ-**ಧಾರತ್ವೇನೇತಿ ಫಲಿಗಂ । ಯದ್ವಾ ವ್ರೀಹ್ಯಾದಿಫಲಂ । ತದಸ್ತ್ಯಸ್ಮಿನ್ನಸ್ತಿ ಭವತೀತಿ ಫಲಿ ವೃಷ್ಟಿಜಲಂ । ತದ್ಗಚ್ಛತೀತಿ ಫಲಿಗಃ ಮೇಘಃ ॥** ಪ್ರತಿಫಲ ಅಥವಾ ಪ್ರತಿಬಿಂಬವು ಇದರಲ್ಲಿ ಕಾಣಿಸುವುದರಿಂದ ಇದಕ್ಕೆ ಫಲಿ ಎಂದರೆ ನೀರು ಎಂದು ಹೆಸರು ಅಂತಹ ಸ್ವಚ್ಛವಾದ ನೀರನ್ನು ದೊರೆಯುವಂತೆ ಮಾಡುವ ಮೇಘವು. ಅಥವಾ ಫಲಸೆಂದರೆ ವ್ರೀಹ್ಯಾದಿಧಾನ್ಯರೂಪವಾದ ಫಲವು ಅವುಗಳನ್ನು ಉಂಟುಮಾಡುವ ಜಲಕ್ಕೆ ಫಲಿ ಎಂದು ಹೆಸರು ಅಂತಹ ಜಲವನ್ನು ವೃಷ್ಟಿರೂಪದಲ್ಲಿ ಸುರಿಯುವ ಮೇಘಕ್ಕೆ ಫಲಿಗು ಎಂದು ಹೆಸರು.

ವಲಂ ವಲಂ ಎಂದರ ವಲ ಎಂಬ ಅಸುರನನ್ನು ಅಥವಾ ಮೇಘವನ್ನು ಎಂಬರ್ಥವು

ರವೇಣ ದರಯಃ- **ಮಹತಾ ಶಬ್ದೇನೈವ ವಿದಾರಿತವಾನಸಿ ।** ಘಟ್ಟಿಯಾದ ಶಬ್ದಮಾತ್ರದಿಂದಲೇ ಸೀಳುವೆ ಎಂದರೆ ವಜ್ರಾಯುಧದಿಂದ ಉಂಟಾಗುವ ಶಬ್ದದಿಂದಲೇ ಪರ್ವತವನ್ನ ಅಥವಾ ಮೇಘವನ್ನೂ ಸೀಳಿ ಮೇಘವು ನುಳಿಯನ್ನು ಹುಯ್ಯುವಂತೆ ಮಾಡುವೆ ಎಂದಭಿಪ್ರಾಯವು

" ವ್ಯಾಕರಣಪ್ರಕ್ರಿಯಾ "

ಸಃ—ಇಲ್ಲಿ ಒಂದು ಸ ಎಂಬುದು ಪಾದಪೂರಣೆಗೋಸ್ಕರ ಗೃಹೀತವಾಗಿದೆ

ಸುಷ್ಟುಭಾ—ಸ್ತೋಭತಿಃ ಸ್ತುತಿಕರ್ಮಾ **ಸಂಪದಾದಿಭ್ಯಃ ಕ್ವಿಪ್** (ವಾ ೩೭೩೫) ಎಂಬುದರಿಂದ ಭಾವಾರ್ಥದಲ್ಲಿ ಕ್ವಿಪ್ ಸ್ತುಪ್ ಎಂದಾಗುತ್ತದೆ ಸ್ತೋಭನಃ ಸ್ತುವ್ ಸ್ತೋಭೋ ಯಸ್ಯ ಸುಷ್ಟುಪ್ **ನಞ್ಸುಭ್ಯಾಂ** ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ ಸು+ಸ್ತುಪ್ ಎಂದಿರುವಾಗ **ಉಪಸರ್ಗಾತ್ ಸುನೋತಿ** (ಪಾ ಸೂ ೮-೩-೬೫) ಎಂಬುದರಿಂದ ಧಾತುವಿಗೆ ಷತ್ವ. ತೃತೀಯಾ ಏಕವಚನರೂಪ

ಸ್ತುಭಾ—ಯದ್ಯಪಿ ಸ್ತೋತ್ರವು ಕರಣವಾಗಿರುತ್ತದೆ ಆದರೂ ಸ್ವವ್ಯಾಪಾರದಲ್ಲಿ **ಕರ್ತೃವಾದುದರಿಂದ,** ಸ್ತೋಭತಿ ಸ್ತೌತಿ (ಇತಿ) ಎಂಬರ್ಥದಲ್ಲಿ **ಕ್ವಿಪ್ ಚ** ಎಂಬುದರಿಂದ ಕರ್ತೃರ್ಥದಲ್ಲಿ ಕ್ವಿಪ್ ತೃತೀಯಾ ಏಕವಚನದಲ್ಲಿ ಸ್ತುಭಾ ಎಂದು ರೂಪವಾಗುತ್ತದೆ. **ಸಾವೇಕಾಚಃ ತೃತೀಯಾದಿಃ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಸಪ್ತ—ಸಪ್ತಃ ಭಿಸ್ ಎಂದಿರುವಾಗ **ಸುಪಾಂಸುಲುಕ್** ಎಂಬುದರಿಂದ ಭಿಸಿಗೆ **ಲುಕ್**

ಸ್ವರ್ಯಃ—ಸ್ವೃ ಶಬ್ದೋಪತಾಪಯೋಃ ಧಾತು **ಋಹಲೋರ್ಣ್ಯತ್** ಎಂಬುದರಿಂದ ಣ್ಯತ್ ಣಿತ್ತಾದುದರಿಂದ **ಅಚೋಞ್ಣಿತಿ** ಎಂಬುದರಿಂದ ವೃದ್ಧಿಯು ಛಾಂದಸವಾಗಿ ಬರುವುದಿಲ್ಲ ಗುಣ ಬಂದರೆ ಸ್ವರ್ಯ ಎಂದು ರೂಪವಾಗುತ್ತದೆ **ತಿತ್ಸ್ವರಿತಮ್** ಎಂಬುದರಿಂದ ಸ್ವರಿತಸ್ವರ ಬರುತ್ತದೆ.

ನವಗ್ವೈಃ—ನವ ಶಬ್ದವು ಉಪಪದವಾಗಿರುವಾಗ ಗಮ್ ಧಾತುವಿಗೆ ಭಾವಾರ್ಥದಲ್ಲಿ ಕ್ವಿಪ್ **ಗಮಃ ಕ್ವೌ** (ಪಾ ಸೂ ೬-೪-೪೦) ಎಂಬುದರಿಂದ ಗಮಿನ ಅನುನಾಸಿಕವಾದ ಮಕಾರಕ್ಕೆ ಲೋಪ. ನವಗ ಎಂದಿರುವಾಗ **ಊಚ ಗಮಾದೀನಾಮಿತಿ ವಕ್ತವ್ಯಮ್** (ಪಾ. ಸೂ. ೬-೪-೪೦-೨) ಎಂಬುದರಿಂದ ಊಕಾರವು ಅಂತಾದೇಶವಾಗಿ ಬರುತ್ತದೆ. ನವಭಿಃ ಗೂಃ=ಗಮನಂ ಯೇಷಾಂ ತೇ ನವಗ್ವಾಃ ಇಲ್ಲಿ ಅಕಾರವು ಛಾಂದಸವಾಗಿ ಬರುತ್ತದೆ. ಅಥವಾ ಗಮ್ ಧಾತುವಿಗೆ ಭಾವಾರ್ಥದಲ್ಲಿ ಡ್ವಪ್ರತ್ಯಯ ಡಿತ್ತಾದುದರಿಂದ ಟಿಲೋಪ ಗ್ವ ಎಂದು ಸ್ವರಸವಾಗಿ ರೂಪವಾಗುತ್ತದೆ ಹಿಂದಿನಂತೆಯೇ ಬಹುವ್ರೀಹಿಸಮಾಸ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಂ** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರವು ಬರುತ್ತದೆ

ಸರಣ್ಯುಭಿಃ—ಸರಣಂ ಆತ್ಮನಃ ಇಚ್ಛಂತಃ ಸರಣ್ಯವಃ **ಸುಪ ಆತ್ಮನಃ ಕ್ಯಚ್** ಎಂಬುದರಿಂದ ಸರಣ ಶಬ್ದದ ಸೇಲೆ ಕ್ಯಚ್ ಕ್ಯಚ್‌ಪರದಲ್ಲಿರುವಾಗ ಛಾಂದಸವಾಗಿ ಅಂತ್ಯಲೋಪ ಸರಣ್ಯ ಎಂಬುದು ಧಾತ-ಸಂಜ್ಞೆಯನ್ನು ಹೊಂದುತ್ತದೆ **ಕ್ಯಾಚ್ಛಂದಸಿ** ಎಂಬುದರಿಂದ ಕ್ಯಜಂತದ ಮೇಲೆ ಉಪ್ರತ್ಯಯ **ಅತೋ ಲೋಪಃ** ಎಂಬುದರಿಂದ ಅಕಾರಲೋಪ ಸರಣ್ಯು ಶಬ್ದವಾಗುತ್ತದೆ ಪ್ರತ್ಯಯಸ್ವರದಿಂದ ಅಂತೋದಾತ್ತ ಸರಣ್ಯುಭಿಃ ತೃತೀಯಾ ಬಹುವಚನಾಂತರೂಪ.

ಫಲಿಗಮ್—ಫಲಿ ಉದಕಂ ಗಚ್ಛತಿ ಇತಿ ಫಲಿಗಃ ಗಮ್ಲೃ ಗತೌ ಧಾತು **ಡೋಽನ್ಯತ್ರಾಪಿ ದೃಶ್ಯತೇ** (ಪಾ ಸೂ. ೩-೨-೪೮) ಎಂಬುದರಿಂದ ಇದಕ್ಕೆ ಡಪ್ರತ್ಯಯ ಡಿತ್ತಾದುದರಿಂದ ಭಸಂಜ್ಞಾ ಇಲ್ಲದಿದ್ದರೂ ಸಾಮರ್ಥ್ಯದಿಂದ ಧಾತುವಿನ ಟಿಗೆ ಲೋಪ. ಸಮಾಸದಲ್ಲಿ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ,

ವಲಮ್—ವೃಣೋತೀತಿ ವಲಃ. ಪಚಾದಿಯಲ್ಲಿ ಸೇರಿರುವುದರಿಂದ **ನಂದಿಗ್ರಹಪಚಾದಿಭ್ಯಃ** ಎಂಬುದರಿಂದ ಅಚ್ ಪ್ರತ್ಯಯ. ಕಾಪಿಲಾದಿಯಲ್ಲಿ ಸೇರಿರುವುದರಿಂದ **ಕಾಪಿಲಕಾದಿತ್ವಾತ್ ಲತ್ವಂ** (ಪಾ ಪ ೮-೩-೧೮) ಎಂಬ ವಚನದಿಂದ ಲತ್ವ ವಲ ಎಂದು ರೂಪವಾಗುತ್ತದೆ

ದರಯಃ—ದೃ. ವಿದಾರಣೇ ಧಾತುಃ ಣಿಚ್ ಮಾಡಿದಾಗ **ಅಚೋಞ್ಣಿತಿ** ಎಂಬುದರಿಂದ ವೃದ್ಧಿ ಘಟಾದಿಯಲ್ಲಿ ಇದೇ ಧಾತುವು ಅರ್ಥಾಂತರದಲ್ಲಿ ದೃ ಭಯೇ ಎಂದು ಪರಿತವಾದುದರಿಂದ ಮಿತ್‌ಸಂಜ್ಞಾ ಬರುತ್ತದೆ ಆದುದರಿಂದ **ಮಿತಾಂ ಹ್ರಸ್ವಃ** ಎಂಬುದರಿಂದ ಹ್ರಸ್ವಬರುತ್ತದೆ **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಅತಿಜಂತದಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೪ ॥

॥ संहिताकारः ॥

गृणानो अंगिरोभिर्दस्म वि वरुषसा सूर्येण गोभिरंधः ।
वि भूम्या अप्रथय इंद्र सानु दिवो रज उपरमस्तभायः ॥ ४ ॥

॥ पदकारः ॥

गृणानः । अंगिरःऽभिः । दस्म । वि । वः । उषसा । सूर्येण । गोभिः । अंधः ॥
वि । भूम्याः । अप्रथयः । इंद्र । सानु । दिवः । रजः । उपरं । अस्तभायः ॥ ४ ॥

॥ सायणभाष्यं ॥

हे दस्म दर्शनीय शत्रूणामुपक्षयितर्वेंद्र त्वमंगिरोभिर्ऋषिभिर्गृणानः स्तूयमानः सन् उषसा सूर्येण च सह गोभिः किरणैरंधोऽन्धकारं वि वः । व्यवृणोः । व्यनाशय इत्यर्थः । तथा हे इंद्र त्वं भूम्याः पृथिव्याः सानु समुच्छ्रितप्रदेशं व्यप्रथयः । विशेषेण विस्तीर्णमकरोः । विषमामिमां सन्निकृतवानित्यर्थः । तथा दिवोऽन्तरिक्षस्य रजो रजसो लोकस्योपरमुपस्थं मूलप्रदेशमस्तभायः । अस्तभ्नाः । यद्यथान्तरिक्षलोकस्य मूलं दृढं भवति तथाकार्षीरित्यर्थः ॥
गृणानः । कर्मणि लटः शानचि यकि प्राप्ते व्यत्ययेन श्ना । प्वादीनां ह्रस्व इति ह्रस्वत्वं । चित्स्वरेणान्तोदात्तत्वं । दस्म । दसु उपक्षयेः । इषियुधीन्धिदसीत्यादिना मक् । वः । वृञ् वरणे । लुङि सिचि मंत्रे घसेत्यादिना च्लेर्लुक् । गुणे हल्ङ्याब्भ्य इति सलोपः । बहुलं छंदसीमाज्योगेऽपीत्यडभावः । अंधः ।

ತಮೋಽಸ್ಯಂಧ ಉಚ್ಯತೇ ನಾಸ್ಮಿನ್ನ್ಯಾನಂ ಭವತಿ । ನಿ. ೫-೧ । ಇತಿ ಯೋಸ್ಯಃ । ರಜಃ । ಲೋಕಾ ರಾಜಾಂಸ್ಯುಚ್ಯಂತ ಇತ್ಯುಕ್ತ್ವಾದ್ರಜಃಶಬ್ದೋ ಲೋಕವಚನಃ । ಸುಸಾಂ ಸುಲುಗಿತಿ ಷಷ್ಠ್ಯಾಲುಕ್ । ಅಸ್ತಭಾಯಃ । ಲಙಿ ಸ್ತಂಭುಸ್ತುಂಭ್ವಿತ್ಯಾದಿನಾ । ಸಾ. ೩-೧-೬೨ । ಶ್ನಾಪ್ರತ್ಯಯಃ । ಛಂದಸಿ ಶಾಯಜಪಿ । ಸಾ. ೩-೧-೬೪ । ಇತ್ಯಹಾವಪಿ ವ್ಯತ್ಯಯೇನ ಶ್ನಾಪ್ರತ್ಯಯಸ್ಯ ಶಾಯಜಾದೇಶಃ । ಅನಿದಿತಾಮಿತಿ ನಲೋಪಃ ಆಡಾಗಮಃ ॥

॥ ಪ್ರತಿಪದಾರ್ಥ ॥

ದಸ್ಮ—ದರ್ಶನೀಯನೇ (ಸುಂದರನಾದ ಇಂದ್ರನೇ) ಅಥವಾ ಶತ್ರುನಾಶಕನೇ (ನೀನು) । **ಅಂಗಿರೋಭಿಃ**—ಅಂಗಿರಸರುಗಳಿಂದ । **ಗೃಣಾನಃ**—ಸ್ತುತಿಸಲ್ಪಟ್ಟವನಾಗಿ । **ಉಷಸಾ**—ಉಷಸ್ಸಿನಿಂದಲೂ । **ಸೂರ್ಯೇಣ**—ಸೂರ್ಯನಿಂದಲೂ (ಕೂಡಿ) । **ಗೋಭಿಃ**—ಕಿರಣಗಳಿಂದ । **ಅಂಧಃ**—ಅಂಧಕಾರವನ್ನು । **ವಿವಃ**—ತೆರೆದೆ (ನಾಶಮಾಡಿದೆ) । **ಇಂದ್ರ**—ಎಲೈ ಇಂದ್ರನೇ । **ಭೂಮ್ಯಾಃ**—ಭೂಮಿಯ । **ಸಾನು**—ಎತ್ತರವಾದ ಪ್ರದೇಶಗಳನ್ನು । **ವಿ ಅಪ್ರಥಯಃ**—ವಿಸ್ತೀರ್ಣವನ್ನಾಗಿ ಮಾಡಿದ (ಸಮಮಾಡಿದ) । (**ತಥಾ**—ಹಾಗೆಯೇ) । **ದಿವಃ ರಜಃ**—ಅಂತರಿಕ್ಷಲೋಕದ । **ಉಪರಾಃ**—ಮೂಲಪ್ರದೇಶವನ್ನು । **ಅಸ್ತಭಾಯಃ**—ದೃಢಪಡಿಸಿದೆ ॥

॥ ಭಾವಾರ್ಥ ॥

ಸುಂದರಾಕೃತಿಯುಳ್ಳ, ಶತ್ರುನಾಶಕನಾದ ಇಂದ್ರನೇ, ನೀನು ಅಂಗಿರಸರಿಂದ ಸ್ತುತನಾಗಿ, ಉಷಸ್ಸು, ಸೂರ್ಯ. ಇವರುಗಳಿಂದ ಯುಕ್ತನಾಗಿ ಅಂಧಕಾರವನ್ನು ನಾಶಮಾಡಿದ. ಭೂಮಿಯ ಎತ್ತರವಾದ ಪ್ರದೇಶಗಳನ್ನು ಸಮಮಾಡಿದೆ ಮತ್ತು ಅಂತರಿಕ್ಷಲೋಕದ ಮೂಲವನ್ನು ದೃಢಪಡಿಸಿದೆ.

English Translation

Destroyer of foes, praised by the Angirasas you have scattered the darkness with the dawn, and with the rays of the Sun; you have strengthened the foundations of the firmament beneath the heaven

॥ ವಿಶೇಷವಿಷಯಗಳು ॥

ಅತ್ರೇದಮುಕ್ತಂ ಭವತಿ—ಹೇ ಇಂದ್ರ ಯತ್ತ್ವಂ ಸೂರ್ಯಾದಿತೇಜಸಾಮಾವರಕಂ ವೃತ್ರಂ ಹತ್ವಾ ತತ್ಕಿರಣರೂಪಾ ಗಾ ಮೋಚಿತವಾನಸಿ ತಥಾ ಯತ್ತ್ವಂ ಪೃಥಿವೀಂ ಸೃಷ್ಟ್ವಾ ತಸ್ಯಾಸ್ತಲಂ ವಿಸ್ತೀರ್ಣಂ ಕೃತವಾನಸಿ, ಅಂತರಿಕ್ಷಸ್ಯೋಪರಿ ಚ ದ್ಯುಲೋಕಂ ಸೃಷ್ಟ್ವಾ ಧಾರಯಸಿ ತತ್ಸರ್ವಮಸ್ಮಾಕಂ ಪಿತೃಭಿಃ ಅಂಗಿರೋಭಿಃ ಸ್ತುತಃ ಸನ್ನೇವ ಕೃತವಾನಸಿ ನಾನ್ಯಥಾ । ಅತಃ ಕಾರಣಾತ್ ತೇಷಾಮೇವಾಂಗಿರಸಾಂ ಪುತ್ರಾ ವಯಂ ತ್ವಾಂ ಸ್ತೋತುಮರ್ಹಾಮಃ ತ್ವಂ ಚ ನಃ ಸ್ತೋತ್ರಂ ಸಾವಧಾನಂ ಶ್ರೋತುಮರ್ಹಸೀತಿ ॥ ಮುಖ್ಯಾಭಿಸ್ಸಾಯವೇನೆಂದರೆ—ಎಲೈ ಇಂದ್ರನೇ, ನಮ್ಮ ಪಿತೃಗಳಾದ ಅಂಗಿರಾ ಋಷಿಗಳು

ನಿನ್ನನ್ನು ಸ್ತೋತ್ರಮಾಡಲಾಗಿ ನೀನು ಅವರ ಸ್ತೋತ್ರವನ್ನು ಕೇಳಿ ಸೂರ್ಯನ ತೇಜಸ್ಸನ್ನು ಆವರಿಸಿದ್ದ ಮೇಘವನ್ನು ನಿವಾರಣೆ ಮಾಡಿ ಸೂರ್ಯನ ಕಿರಣಗಳನ್ನು ಪ್ರಕಾಶಿಸುವಂತೆ ಮಾಡಿದೆ ಭೂಮಿಯ ತಲವನ್ನು ಸಮನಾಗಿಯೂ ವಿಸ್ತೀರ್ಣವಾಗಿಯೂ ಆಗುವಂತೆ ಮಾಡಿದೆ ಅಂತರಿಕ್ಷದಲ್ಲಿ ಸ್ವರ್ಗಲೋಕವನ್ನು ಸೃಷ್ಟಿಸಿ ಅದನ್ನೂ ದೃಢವಾಗಿರುವಂತೆ ಮಾಡಿರುತ್ತೀಯೆ ಈ ವಿಧವಾದ ಕರ್ಮಗಳನ್ನು ನಮ್ಮ ಪಿತೃಗಳಾದ ಅಂಗಿರಾಋಷಿಗಳು ಮಾಡಿದ ಸ್ತೋತ್ರಗಳಿಂದ ಸಂತೋಷಪಟ್ಟು ಮಾಡಿರುವೆ. ಅದುದರಿಂದ ಅಂಗಿರಾಋಷಿಯ ಪುತ್ರರಾದ ನಮ್ಮ ಸ್ತೋತ್ರವನ್ನು ಸಾವಧಾನವಾಗಿ ಕೇಳು ಎಂದಭಿಪ್ರಾಯವು

ಗೃಣಾನಃ—**ಸ್ತೂಯಮಾನಃ ಸನ್** । ಸ್ತೋತ್ರಮಾಡಲ್ಪಟ್ಟವನಾಗಿ

ದಸ್ಮ—**ದರ್ಶನೀಯ** । **ಅಥವಾ ದಸು ಉಪಕ್ಷಯೇ** । **ಶತ್ರೂಣಾಮುಪಕ್ಷಯಿತರೀಂದ್ರ** । ಸುಂದರನಾದ ಅಥವಾ ಶತ್ರುಗಳನ್ನು ನಾಶಮಾಡುವ

ಗೋಭಿಃ—ಕಿರಣಗಳಿಂದ, **ಸರ್ವೇಽಪಿ ರಶ್ಮಯೋ ಗಾವ ಉಚ್ಯಂತೇ** (ನಿ – ೬).

ಅಂಧಃ – ತಮಸ್ಸು, ಕತ್ತಲೆ (ನಿ ೫-೧).

ರಜಃ –ಲೋಕವು । **ಲೋಕಾ ರಜಾಂಸ್ಯುಚ್ಯಂತೇ** (ನಿ ೪-೧೯).

ಸಾನು—**ಸಮುಚ್ಛ್ರಿತಪ್ರದೇಶಂ** । ಎತ್ತರವಾದ ಪ್ರದೇಶವನ್ನು (ಸಮನಾಗಿ ಮಾಡಿದೆ)

॥ ವ್ಯಾಕರಣಪ್ರಕ್ರಿಯಾ ॥

ಗೃಣಾನಃ— ಕರ್ಮಾರ್ಥದಲ್ಲಿ ಲಟ್ ಬಂದಾಗ ಅದಕ್ಕೆ ಶಾನಚ್ ಕರ್ಮಣಿಯಲ್ಲಿ **ಸಾರ್ವಧಾತುಕೇಯಕ್** ಎಂಬುದರಿಂದ ವಿಕರಣಸ್ಥಾನದಲ್ಲಿ ಯಕ್ ಪ್ರಾಪ್ತವಾದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ ಅದಕ್ಕೆ ಶ್ನಾ ಬರುತ್ತದೆ ಪ್ಸಾದಿಯಲ್ಲಿ ಸೇರಿರುವುದರಿಂದ ಶ್ನಾ ಪರದಲ್ಲಿರುವಾಗ **ಪ್ಸಾದೀನಾಂ ಹ್ರಸ್ವಃ** (ಪಾ ಸೂ ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ ಬರುತ್ತದೆ. **ಋವರ್ಣಾನ್ನೇಸ್ಯ ಣತ್ವಂ ವಾಚ್ಯಂ** ಎಂಬ ವಚನದಿಂದ ಶ್ನಾ ನಕಾರಕ್ಕೆ ಣತ್ವ ಗೃಣಾನಃ ಎಂದು ರೂಪವಾಗುತ್ತದೆ ಶಾನಚ್ ಚಿತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ

ದಸ್ಮ—ದಸು ಉಪಕ್ಷಯೇ ಧಾತು **ಇಷಿಯುಧೀಂಧಿದಸಿ**—(ಉ ಸೂ ೧-೧೪೨) ಎಂಬುದರಿಂದ ಮಕ್ ಪ್ರತ್ಯಯ, ದಸ್ಮ ಎಂದಾಗುತ್ತದೆ ಸಂಬುದ್ಧಿಯಲ್ಲಿಯೂ ಸುಲೋಪದಿಂದ ದಸ್ಮ ಎಂದಾಗುತ್ತದೆ. **ಆಮಂತ್ರಿತಸ್ಯ ಚ** ಎಂಬುದುದರಿಂದ ನಿಘಾತಸ್ವರ

ವಃ—ವೃಞ್ ವರಣೇ ಧಾತು ಲುಜ್‌ನಲ್ಲಿ ಮಧ್ಯಮಪುರುಷ ಏಕವಚನ ಸಿಪ್ **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಚ್ಲಿಲುಙಿ** ಎಂಬುದರಿಂದ ಚ್ಲಿವಿಕರಣ. ಅದಕ್ಕೆ **ಮಂತ್ರೇಘಸಹ್ವರಣ** (ಪಾ ಸೂ ೨-೪-೮೦) ಎಂಬುದರಿಂದ ಲುಕ್. ಸಿಪ್ ನಿಮಿತ್ತವಾಗಿ ಧಾತುವಿಗೆ ಗುಣ **ಉರಣ್ರಪರಃ** ಎಂಬುದರಿಂದ

ರಪರವಾಗಿ ಅರ್ ಬರುತ್ತದೆ. ಆಗ ಹಲ್ ಪರದಲ್ಲಿ ಸಿಪ್ಪಿನ ಅಪೃಕ್ತವಿರುವುದರಿಂದ **ಹಲ್ ಙ್ಯಾಭ್ಯೋದೀರ್ಘಾ—** ಸೂತ್ರದಿಂದ ಆದಕ್ಕೆ ಲೋಪ. ರೇಫಕ್ಕೆ **ಖರವಸಾನಯೋರ್ವಿಸರ್ಜನೀಯಃ** ಎಂಬುದರಿಂದ ವಿಸರ್ಗ. **ಬಹುಲಂ ಛಂದಸ್ಯಮಾಙ್ಯೋಗೇ೨ಪಿ** ಎಂಬುದರಿಂದ ಅಂಗಕ್ಕೆ ಆಡಾಗಮ ಬರುವುದಿಲ್ಲ ವಃ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ **ತಿಜ್ಜ ತಿಜಃ** ಎಂಬುದರಿಂದ ನಿಘಾತಸ್ವರ

ಅಂಧಃ—ತಮೋ೨ಸ್ಯಂಧ ಉಚ್ಯತೇ ನಾಸ್ಮಿನ್ ಧ್ಯಾನಂ ಭವತಿ (ನಿರು ೫-೧) ಎಂಬುದಾಗಿ ಯಾಸ್ಕರು ಹೇಳಿರುತ್ತಾರೆ ಕತ್ತಲೆಯು ಧ್ಯಾನಕ್ಕೆ ಅಡ್ಡಿಯಾದುದರಿಂದ ಅಂಧಶಬ್ದದಿಂದ ವ್ಯವಹೃತವಾಗುತ್ತದೆ

ರಜಃ—ಲೋಕಾ ರಜಾಂಸ್ಯುಚ್ಯಂತೇ (ನಿರು ೪-೧೯) ಎಂದು ಹೇಳಿರುವುದರಿಂದ ರಜಃಶಬ್ದವು ಲೋಕವಾಚಿಯಾಗಿರುತ್ತದೆ **ಸುಪಾಂ ಸುಲುಕ್** ಎಂಬುದರಿಂದ ಷಷ್ಠಿಗೆ ಲುಕ್ ಬಂದಿದೆ

ಅಸ್ತಭಾಯಃ—ಸ್ತಂಭು ಸೌತ್ರವಾದ ಧಾತು. ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ **ಇತಶ್ಚ** ಎಂಬುದರಿಂದ ಇಕಾರ ಲೋಪ **ಸ್ತಂಭು ಸ್ತುಂಭು**— (ಪಾ ಸೂ. ೩-೧-೮೨) ಎಂಬುದರಿಂದ ಶ್ನಾ ಪ್ರತ್ಯಯ. **ಛಂದಸಿ ಶಾಯಜಪಿ** (ಪಾ. ಸೂ. ೩-೧-೪೪) ಎಂಬುದರಿಂದ ಹಿ ಪರದಲ್ಲಿ ಇಲ್ಲದೇ ಇದ್ದರೂ ವ್ಯತ್ಯಯದಿಂದ ಶ್ನಾ ಪ್ರತ್ಯಯಕ್ಕೆ ಶಾಯಜಾದೇಶ **ಸಾರ್ವಧಾತುಕಮಪಿತ್** ಎಂಬುದರಿಂದ ಶಾಯಜ್ ಬಿತ್ತಾಗುವುದರಿಂದ **ಅನಿದಿತಾಂ-ಹಲಉಪಧ**—ಸೂತ್ರದಿಂದ ಉಪಧಾಭೂತವಾದ ನಕಾರಕ್ಕೆ ಲೋಪ. ಲಙ್ ನಿಮಿತ್ತಕವಾಗಿ ಅಂಗಕ್ಕೆ ಆಡಾಗಮ. ಪ್ರತ್ಯಯಸಕಾರಕ್ಕೆ ರುತ್ವ ವಿಸರ್ಗಗಳು ಬಂದರೆ ಅಸ್ತಭಾಯಃ ಎಂದು ರೂಪವಾಗುತ್ತದೆ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಸ್ರಧಯಃ—ಪ್ರಧ ಪ್ರಜ್ಞಾನೇ ಧಾತು. ಭ್ವಾದಿ. ಣಿಚ್ಚಿನಲ್ಲಿ, ಮಿತ್ ಸಂಜ್ಞಾ ಇರುವುದರಿಂದ **ಮಿತಾಂ ಹ್ರಸ್ವಃ** ಎಂಬುದರಿಂದ ಹ್ರಸ್ವ. ಲಙ್ ಮಧ್ಯಮಪುರುಷ ಏಕವಚನದಲ್ಲಿ ಅಸ್ರಧಯಃ ಎಂದು ರೂಪವಾಗುತ್ತದೆ **ತಿಜ್ಜ ತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತದು ಪ್ರಯಕ್ಷತಮಮಸ್ಯ ಕರ್ಮ ದಸ್ಮಸ್ಯ ಚಾರುತಮಮಸ್ತಿ ದಂಸಃ ।
ಉಪಹ್ವರೇ ಯದುಪರಾ ಅಪಿನ್ವನ್ಮಧ್ವರ್ಣಸೋ ನದ್ಯಶ್ಚತಸ್ರಃ ॥ ೬ ॥

॥ ಪದಪಾಠಃ ॥

ತತ್ । ಊಂ ಇತಿ । ಪ್ರಯಕ್ಷತಮಂ । ಅಸ್ಯ । ಕರ್ಮ । ದಸ್ಮಸ್ಯ । ಚಾರು-ತಮಂ । ಅಸ್ತಿ । ದಂಸಃ ।
ಉಪ-ಹ್ವರೇ । ಯತ್ । ಉಪರಾಃ । ಅಪಿನ್ವತ್ । ಮಧು-ಅರ್ಣಸಃ । ನದ್ಯಃ ।
ಚತಸ್ರಃ ॥ ೬ ॥

॥ ಸಾಯಣಭಾಷ್ಯಂ ॥

ಪ್ರವರ್ಗ್ಯೇಽಭಿಷ್ಟವೇ ತದು ಪ್ರಯಕ್ಷತಮಮಿತ್ಯೇಷಾ । ಅಥೋತ್ತರಮಿತ್ಯತ್ರ ಸೂತ್ರಿತಂ । ತದು ಪ್ರಯಕ್ಷತಮಮಸ್ಯ ಕರ್ಮಾತ್ಮನ್ವನ್ನಭೋ ದುಹ್ಯತೇ ಘೃತಂ ಪಯಃ । ಆ. ೪-೭ । ಇತಿ ॥

ದಸ್ಮಸ್ಯ ದರ್ಶನೀಯಸ್ಯಾಸ್ಯೇಂದ್ರಸ್ಯ ತದು ತದೇವ ಕರ್ಮ ಪ್ರಯಕ್ಷತಮಂ । ಅತಿಶಯೇನ ಪೂಜ್ಯಂ । ದಂಸ ಇತಿ ಕರ್ಮನಾಮ । ದಂಸಸ್ತದೇವ ಕರ್ಮ ಚಾರುತಮಂ । ಅತಿಶಯೇನ ಶೋಭನಂ । ಕಿಂ ತದಿತ್ಯತ ಆಹ । ಅಯಮಿಂದ್ರ ಉಪಹ್ವರ ಉಪಹ್ವರ್ತವ್ಯೇ ಗಂತವ್ಯೇ ಪೃಥಿವ್ಯಾಃ ಸಂಬಂಧಿನಿ ಸಮೀಪದೇಶ ಉಪರಾ ಉಪ್ತಾಃ ಸ್ಥಾಪಿತಾ ಮಧ್ವರ್ಣಸೋ ಮಧುರೋದಕಾಶ್ಚತಸ್ರೋ ನದ್ಯಃ ಪ್ರಧಾನಭೂತಾ ಗಂಗಾದಿನದೀರಪಿನ್ವತ್ । ಅಸಿಂಚದಿತಿ । ಯದೇತತ್ಕರ್ಮ ಕದನ್ಯೇನ ಕರ್ತುಮಶಕ್ಯತ್ವಾ-ತ್ಪೂಜ್ಯಮಿತ್ಯರ್ಥಃ ॥ ಪ್ರಯಕ್ಷತಮಂ । ಯಕ್ಷ ಪೂಜಾಯಾಂ । ಯಕ್ಷ್ಯತ ಇತಿ ಯಕ್ಷಃ । ಅತಿಶಯೇನ

ಯಕ್ಷೋ ಯಕ್ಷತಮಃ । ಪುನಃ ಪ್ರಾದಿಸಮಾಸೇ೭ವ್ಯಯಪೂರ್ವಪದಪ್ರಕೃತಿಸ್ವರತ್ವಂ । ದಂಸಃ । ದಸಿ ದಂಸನದರ್ಶನಯೋಃ । ಚುರಾದಿರಾತ್ಮನೇಪದೀ । ದಂಸ್ಯತೇ ಕರ್ತವ್ಯತಯಾ ದೃಶ್ಯತ ಇತಿ ದಂಸಃ ಕರ್ಮ । ಔಣಾದಿಕಃ ಕರ್ಮಣ್ಯಸುನ್ । ಉಪಹ್ವರೇ । ಹ್ವೃ ಕೌಟಿಲ್ಯೇ । ಕೌಟಿಲ್ಯಲಕ್ಷಣಗತಿವಾಚಿನಾತ್ರ ಗತಿಮಾತ್ರಂ ಲಕ್ಷ್ಯತೇ । ಉಪಹ್ವರಂತಿ ಗಚ್ಛಂತ್ಯಸ್ಮಿನ್ನಿದ್ಯ ಇತ್ಯುಪಹ್ವರೋ ಭೂಪ್ರದೇಶಃ । ಪುಂಸಿ ಸಂಜ್ಞಾಯಾಂ ಘಃ ಪ್ರಾಯೇಣೇತ್ಯಧಿಕರಣೇ ಘಪ್ರತ್ಯಯಃ । ಗುಣಃ । ಕೃದುತ್ತರಪದಪ್ರಕೃತಿಸ್ವರತ್ವಂ । ಅಪಿನ್ವತ್ । ಪಿವಿ ಸೇಚನೇ । ಭ್ವಾದಿಕಃ । ಚತಸ್ರಃ । ಶಸ್ । ತ್ರಿಚತುರೋಃ ಸ್ತ್ರಿಯಾಂ ತಿಸೃಚತಸೃ ಇತಿ ಚತುರ್ಶಬ್ದಸ್ಯ ಚತಸ್ರಾದೇಶ ಆದ್ಯುದಾತ್ತೋ ನಿಪಾತಿತಃ। ಪೂರ್ವಸವರ್ಣದೀರ್ಘೇ ಪ್ರಾಪ್ತೇ೭ಚಿ ರ ಋತ ಇತಿ ರೇಫಾದೇಶಃ। ಪಾ. ೭-೨-೯೯, ೧೦೦ । ಚತುರ್ಶಬ್ದಸ್ಯಾದ್ಯುದಾತ್ತತ್ವಾತ್ಸ್ಥಾನಿವದ್ಭಾವೇನ ಚತಸ್ರಾದೇಶಸ್ಯಾದ್ಯುದಾತ್ತತ್ವೇ ಸಿದ್ಧೇ೭ಪಿ ಪುನರಾದ್ಯುದಾತ್ತನಿಪಾತನಸಾಮರ್ಥ್ಯಾದ್ಯಣಾದೇಶಸ್ಯ ವಾ ಪೂರ್ವವಿಧೌ ಸ್ಥಾನಿವದ್ಭಾವಾಚ್ಚತುರಃ ಶಸೀತ್ಯಂತೋದಾತ್ತತ್ವಸ್ಯಾಭಾವಃ । ನ ಚ ನ ಪದಾಂತೇತಿ ಸ್ಥಾನಿವದ್ಭಾವಪ್ರತಿಷೇಧಃ । ಸ್ವರದೀರ್ಘಯಲೋಪೇಷು ಲೋಪಾಜಾದೇಶ ಏವ ನ ಸ್ಥಾನಿವತ್ ಅನ್ಯತ್ರು ಸ್ಥಾನಿವದೇವ । ಮ. ೧-೧-೫೮ । ಇತಿ ನಿಯಮಾತ್ ॥

॥ ಪ್ರತಿಪದಾರ್ಥ ॥

ಯತ್ —ಯಾವಕಾರಣದಿಂದ (ಈ ಇಂದ್ರನು) । **ಉಪಹ್ವರೇ**—(ನದಿಗಳು) ವಕ್ರವಾಗಿ ಹರಿಯುವ ಭೂಪ್ರದೇಶದಲ್ಲಿ । **ಉಪರಾಃ**—ಸ್ಥಾಪಿತವಾದ । **ಮಧ್ವರ್ಣಸಃ**—ಸಿಹಿ ನೀರುಳ್ಳ । **ಚತಸ್ರಃ**—ನಾಲ್ಕು (ಮುಖ್ಯವಾದ) । **ನದ್ಯಃ**—(ಗಂಗಾದಿ) ನದಿಗಳನ್ನು । **ಅಪಿನ್ವತ್**—ನೀರುಳ್ಳವುಗಳನ್ನಾಗಿ ಮಾಡಿದನೋ । (**ತತ್**—ಆದ್ದರಿಂದ) । **ದಸ್ಮಸ್ಯ**—ದರ್ಶನೀಯನಾದ (ಶತ್ರುದಮನನಾದ) । **ಅಸ್ಯ**—ಈ ಇಂದ್ರನ । **ತದು**—ಅದೇ । **ಕರ್ಮ**—ಕಾರ್ಯವು । **ಪ್ರಯಕ್ಷತಮಂ**—ಅತ್ಯಂತಪೂಜ್ಯವಾದುದು । **ದಂಸಃ**—(ಅದೇ) ಕಾರ್ಯವು । **ಚಾರುತಮಂ**—ಅತ್ಯಂತ ಮಂಗಳಕರವಾದುದು ॥

॥ ಭಾವಾರ್ಥ ॥

ಈ ಇಂದ್ರನು ಭೂಮಿಯಲ್ಲಿ ಹರಿಯುವ ಸಿಹಿ ನೀರುಳ್ಳ ಗಂಗಾದಿ ನಾಲ್ಕು ನದಿಗಳಿಗೆ ನೀರನ್ನು ಒದಗಿಸುವ (ಇತರರಿಂದ ಅಸಾಧ್ಯವಾದ) ಕಾರ್ಯವನ್ನು ಮಾಡಿದನು. ಆದುದರಿಂದ, ಇವನ ಈ ಕಾರ್ಯವು ಅತ್ಯಂತ ಸ್ತೋತ್ರಾರ್ಹವೂ ಪರಮಮಂಗಳಕರವೂ ಆದದ್ದು

English Translation.

The deeds of that handsome Indra are most admirable; his exploits are most glorious in that he has replenished the four rivers of sweet water spread over the surface of the earth.

ಪ್ರವರ್ಗ್ಯವೆಂಬ ಯಾಗವಿಶೇಷದಲ್ಲಿ **ತದು ಪ್ರಯಕ್ಷತಮಂ** ಎಂಬ ಈ ಋಕ್ಕನ್ನು ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ತದು ಪ್ರಯಕ್ಷತಮಮಸ್ಯ ಕರ್ಮಾತ್ಮನ್ನಗ್ನೇ ಭೋ ದುಹ್ಯತೇ ಹೃತಂ ಪಯಃ** ಎಂಬ ಸೂತ್ರದಿಂದ ವಿವೃತವಾಗಿರುವುದು (ಅ ೪-೭)

ತತ್ ಉ--ತದೇವ । ಅದೇ, ಆ ಕರ್ಮವೇ.

ಪ್ರಯಕ್ಷತಮಂ--ಯಕ್ಷ ಪೂಜಾಯಾಂ । **ಯಕ್ಷ್ಯತ ಇತಿ ಯಕ್ಷಃ** । **ಅತಿಶಯೇನ ಯಕ್ಷೋ ಯಕ್ಷತಮಃ** । **ಅತಿಶಯೇನ ಪೂಜ್ಯಂ** । ಅತಿಶಯವಾಗಿ ಪೂಜಿಸಲ್ಪಡುವ, ಪ್ರಶಸ್ಯಾರ್ಹವಾದ

ದಸ್ಮಸ್ಯ--ದಸಿ ದಂಸನದರ್ಶನಯೋಃ ದರ್ಶನೀಯಸ್ಯೇಂದ್ರಸ್ಯ । ಸುಂದರನಾದ ಇಂದ್ರನ

ದಂಸಃ—ಅಸಃ ಅಪ್ಸಃ ಮೊದಲಾದ ಇಪ್ಪತ್ತಾರು ಕರ್ಮನಾಮಗಳ ಮಧ್ಯದಲ್ಲಿ ದಂಸಃ ಎಂಬ ಶಬ್ದವು ಪಠಿತವಾಗಿರುವುದರಿಂದ ದಂಸಃ ಎಂದರೆ ಕರ್ಮವು, ಸಾಧಿಸಕಾರ್ಯವು ಎಂದರ್ಥವು (ನಿ ೩-೧)

ಉಪಹ್ವರೇ—ಹ್ವೃ ಕೌಟಿಲ್ಯೇ । **ಕೌಟಿಲ್ಯಲಕ್ಷಣಗತಿವಾಚಿನಾತ್ರ ಗತಿಮಾತ್ರಂ ಲಕ್ಷ್ಯತೇ** । **ಉಪಹರ್ತವ್ಯೇ ಗಂತವ್ಯೇ** । ವಕ್ರವಾಗಿ ಹೋಗುವ ಅಥವಾ ಹರಿಯುವ

ಮಧ್ವರ್ಣಸಃ—ಮಧುರೋದಕಾಃ । ಸಿಹಿನೀರಿನಿಂದ ಪೂರ್ಣವಾದ ನದಿಗಳು

ಚತಸ್ರಃ—ನಾಲ್ಕು (ನದಿಗಳು) ಭಾಷ್ಯಕಾರರು ಇಲ್ಲಿ ನಾಲ್ಕು ನದಿಗಳೆಂದರೆ ಗಂಗಾದಿ ನಾಲ್ಕು ನದಿಗಳೆಂದು ಹೇಳಿರುವರು. ಆದರೆ ಇಲ್ಲಿ ಉಕ್ತವಾಗಿರುವುದು ಗಂಗಾದಿನದಿಗಳೋ ಅಥವಾ ಬೇರೆ ನದಿಗಳೋ ಯಾವುದೂ ಸ್ಪಷ್ಟವಾಗಿಲ್ಲ ಸ್ಕಂದಸ್ವಾಮಿಯು ಈ ಶಬ್ದಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ ನದಿಗಳು ಹರಿಯುವಂತೆ ಮಾಡಿದನೆಂದು ಅರ್ಥ ವಿವರಿಸಿ ಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ಪ್ರಯಕ್ಷತಮಮ್—ಯಕ್ಷ ಪೂಜಾಯಾಂ ಧಾತು ಯಕ್ಷ್ಯತೇ ಇತಿ ಯಕ್ಷಃ ಅತಿಶಯೇನ ಯಕ್ಷಃ ಯಕ್ಷತಮಃ (ಹೆಚ್ಚಾಗಿ ಪೂಜಿಸಲ್ಪಡುವವನು) ಆನೇಲೆ ಪ್ರ ಎಂಬುದರೊಡನೆ ಪ್ರಾದಿಸಮಾಸ **ತತ್ಪುರುಷೇ ತುಲ್ಯಾರ್ಥತೃತೀಯಾ** (ಪಾ. ಸೂ. ೬-೨-೨) ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿಸ್ವರವು ಬರುತ್ತದೆ

ದಂಸಃ—ದಸಿ ದಂಶನದರ್ಶನಯೋಃ ಧಾತು. ಚುರಾದಿ, ನಿತ್ಯವಾಗಿ ಆತ್ಮನೇಪದೀ. **ಇದಿತೋ ನುಮ್ ಧಾತೋಃ** ಎಂಬುದರಿಂದ ನುಮಾಗಮ ದಂಸ್ಯತೇ ಕರ್ತವ್ಯತಯಾ ದೃಶ್ಯತೇ ಇತಿ ದಂಸಃ ಕರ್ಮ (ಅವಶ್ಯ ಮಾಡಬೇಕೆಂದಿರುವುದು ಕಾರ್ಯ) ಕರ್ಮಾರ್ಥದಲ್ಲಿ ಔಣಾದಿಕವಾದ ಅಸುನ್ (ಸರ್ವಧಾತುಭ್ಯೋ ಽಸುನ್) ದಂಸಸ್ ಶಬ್ದವಾಗುತ್ತದೆ ಅಸುನ್ ನಿತ್ಯಾದುದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಉಪಹ್ವರೇ—ಹ್ವೃ ಕೌಟಿಲ್ಯೇ ಧಾತು ಕೌಟಿಲ್ಯೇ ಎಂಬುದರಿಂದ ಕುಟಿಲಗತಿವಾಚಕತ್ವವು ವಿವಕ್ಷಿತವಾಗಿರುವುದು ಇಲ್ಲಿ ಮಾತ್ರ ಕೇವಲ ಗತಿವಾಚಕತ್ವವನ್ನು ಸ್ವೀಕರಿಸಬೇಕು ಉಪಹ್ವರಂತಿ ಗಚ್ಛಂತಿ ಅಸ್ಮಿನ್ ನದ್ಯಃ

ಇತಿ ಉಪಪ್ಲರೋ ಭೂಪ್ರದೇಶಃ (ನದಿಗಳು ಹರಿಯುವ ದೇಶವೆಂದರ್ಥ) **ಪುಂಸಿ ಸಂಜ್ಞಾಯಾಂ ಘಃ ಪ್ರಾಯೇಣ** (ಪಾ. ಸೂ. ೩-೩-೧೧೮) ಎಂಬುದರಿಂದ ಅಧಿಕರಣಾರ್ಥದಲ್ಲಿ ಘಪ್ರತ್ಯಯ ಇದು ಆರ್ಧಧಾತುಕಸಂಜ್ಞೆಯನ್ನು ಹೊಂದಿರುವುದರಿಂದ ಇದನ್ನು ನಿಮಿತ್ತೀಕರಿಸಿ ಧಾತುವಿಗೆ ಗುಣ ಪ್ರಾದಿಸಮಾಸವಾದಾಗ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ ಸಪ್ತಮಿಾ ಏಕವಚನಾಂತರೂಪ

ಅಪಿನ್ವತ್--ಪಿವಿ ಸೇಚನೇ ಧಾತು ಭ್ವಾದಿ **ಇದಿತೋನುಮ್ ಧಾತೋಃ** ಎಂಬುದರಿಂದ ಧಾತುವಿಗೆ ನುಮ್ ಲಙ್ ಪ್ರಥಮಪುರುಷೈಕವಚನದಲ್ಲಿ ಅಪಿನ್ವತ್ ಎಂದು ರೂಪವಾಗುತ್ತದೆ ಯತ್ ಎಂದು ಹಿಂದೆ ಇರುವುದರಿಂದ **ಯದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಪ್ರತಿಷೇಧ ಬರುವುದರಿಂದ ಆಡಃದಾತ್ತವೆಂಬುದರಿಂದ ಆದ್ಯುದಾತ್ತವಾದ ಪದವಾಗುತ್ತದೆ

ಚತಸ್ರಃ—ಚತುರ್ ಶಬ್ದ ಶಸ್ ಪರದಲ್ಲಿರುವಾಗ ಸ್ತ್ರೀತ್ವದಲ್ಲಿ **ತ್ರಿಚತುರೋಃ ಸ್ತ್ರಿಯಾಂ ತಿಸೃಚತಸೃ** (ಪಾ ಸೂ ೭-೨-೯೯) ಎಂಬುದರಿಂದ ಚತಸೃ ಆದೇಶವು ಆದ್ಯುದಾತ್ತವಾಗಿ ನಿಪಾತಿತವಾಗಿದೆ ಚತಸೃ+ಅಸ್ ಎಂದಿರುವಾಗ ಪೂರ್ವಸವರ್ಣದೀರ್ಘವು ಪ್ರಾಪ್ತವಾದರೆ **ಅಚಿರಶಿತಃ** (ಪಾ ಸೂ. ೬-೩-೧೦೦) ಎಂಬುದರಿಂದ ಶಕಾರಕ್ಕೆ ರೇಫಾದೇಶ ಬರುತ್ತದೆ ಚತಸ್ರಃ ಎಂದು ರೂಪವಾಗುತ್ತದ. ಇಲ್ಲಿ ಚತುರ್ ಎಂಬುದು ಮೊದಲೇ ಆದ್ಯುದಾತ್ತನಾಗಿರುವಾಗ ಸ್ವಾನಿವದ್ಭಾವದಿಂದ ಚತಸ್ರಾದೇಶಕ್ಕೂ ಆದ್ಯುದಾತ್ತತ್ವವು ಸಿದ್ಧವಾಗುವಾಗ ಪುನಃ ಆದೇಶ ಕಾಲದಲ್ಲಿ ಆದ್ಯುದಾತ್ತವನ್ನು ನಿಪಾತಮಾಡಿದುದರಿಂದಲೇ ಯಣಾದೇಶಕ್ಕೆ **ಅಚಃ ಪರಸ್ಮಿನ್ ಪೂರ್ವವಿಧೌ** ಎಂಬುದರಿಂದ ಸ್ವಾನಿವದ್ಭಾವನನ್ನು ಮಾಡಿಕೊಂಡು **ಚತುರಃ ಶಸಿ** (ಪಾ ಸೂ ೬-೧-೧೬೭) ಎಂಬುದರಿಂದ ಅಂತೋದಾತ್ತತ್ವವು ಬರುವುದಿಲ್ಲ ಇಲ್ಲಿ ಸ್ವರಕಾರ್ಯಮಾಡುವುದರಿಂದ **ನಪದಾಂತದ್ವಿರ್ವಚನ**-ಸೂತ್ರದಿಂದ ಸ್ಥಾನಿವದ್ಭಾವಪ್ರತಿಷೇಧ ಬರುವುದರಿಂದ ಹಿಂದೆ ಹೇಳಿದ ಪ್ರಕ್ರಿಯೆಯು ಸಿದ್ಧಿಸುವುದಿಲ್ಲವಲ್ಲ ಎಂದ. ಶಂಕೆ ಬರುತ್ತದೆ ಆದರೆ **ಸ್ವರದೀರ್ಘಲೋಪೇಷು ಲೋಪಾಜಾದೇಶ ಏವ ನ ಸ್ಥಾನಿವತ್, ಅನ್ಯತ್ತು ಸ್ಥಾನಿವದೇವ** (ಪಾ ಸೂ. ೧-೧-೫೮-೧) ಎಂದು ಲೋಪರೂಪ ಆಜಾದೇಶ ವಿಷಯದಲ್ಲೆಯೇ ಈ ಸ್ಥಾನಿವದ್ಭಾವಪ್ರತಿಷೇಧವಿರುವುದರಿಂದ ಇಲ್ಲಿ ಯಣ್ ಬಂದಿರುವುದರಿಂದ ನಿಷೇಧ ಬರುವುದಿಲ್ಲ. ಆದುದರಿಂದ ಆದ್ಯುದಾತ್ತ ನಿಪಾತಕ್ಕೆ ಭಂಗ ಬರುವುದಿಲ್ಲ ॥ ೬ ॥

॥ संहितापाठः ॥

द्विता वि वव्रे सनजा सनीळे अयास्यः स्तवमानेभि-
रर्क्यैः ।
भगो न मेने परमे व्योमन्नधारयद्रोदसी
सुदंसाः ॥ ६ ॥

॥ पदपाठः ॥

द्विता । वि । वव्रे । सनऽजा । सनीळे इति सऽनीळे । अयास्यः । स्तव-
मानेभिः । अर्क्यैः ।
भगः । न । मेने इति । परमे । विऽओमन् । अधारयत् । रोदसी
इति । सुऽदंसाः ॥ ६ ॥

॥ सायणभाष्यं ॥

अयास्यः । यासः प्रयत्नः । तत्साध्यो यास्यः । न यास्योऽयास्यः । यु
द्धरूपैः प्रयत्नैः साधयितुमशक्यः इत्यर्थः । कथं साध्यत इत्यत आह । स्तवमा-
नेभिः स्तोत्रं कुर्वद्भिः पुरुषैरर्क्यैः स्तुतिरूपैर्मन्त्रैः स्तूयमानः सन्निन्द्रः
सुसाध्यो भवति । यद्वा । अयास्यः पंचवृत्तिर्मुख्यप्राणः । स ह्यास्यान्मुखादयते
गच्छति निष्क्रामति । तदुपासकोऽप्यंगिरा उपचारादयास्य उच्यते । तथा च
छंदोगैरामनातं । तं हायास्य उद्गीथमुपासांचक्र एतमु एवायास्यं
मन्यंत आस्याद्यदयते तेन । छां उ. १-३-१७ । इति । अथवा । अयेनास्ये मुखे
वर्तत इत्यायास्यः । तथा च वाजसनेयकं । तै होचुः क्व नु सोऽभूदो य
इत्थमस्तुत्येत्ययेमास्येऽन्तरिति । श. ब्रा. १४-४-१-६ । इति । पूर्ववदुपासकोऽस्य-

ಯಾಸ್ಯಃ । ತೇನ ಋಷಿಣಾ ಸ್ತವಮಾನೇಭಿರ್ಗುಣಿನಿಷ್ಠಗುಣಾಭಿಧಾನಲಕ್ಷಣಾಂ ಸ್ತುತಿಂ ಕುರ್ವದ್ಭಿರರ್ಕೈರ್ಮಂತ್ರೈಃ ಕರಣಭೂತೈಃ ಸ್ತೂಯಮಾನಃ ಸನ್ ಸನಜಾ । ಸನೇತಿ ನಿಪಾತೋ ನಿತ್ಯಾರ್ಥಃ । ನಿತ್ಯಜಾತೇ । ಸರ್ವದಾ ವಿದ್ಯಮಾನಸ್ವಭಾವೇ ಇತ್ಯರ್ಥಃ । ಪ್ರಥಮಭಾವವಿಕಾರವಾಚಿನಾ ಜನಿನಾ ದ್ವಿತೀಯೋ ಭಾವವಿಕಾರಃ ಸತ್ತಾ ಲಕ್ಷ್ಯತೇ । ಯಥೌತ್ಪತ್ತಿಕಸ್ತು ಶಬ್ದಸ್ಯಾರ್ಥೇನ ಸಂಬಂಧ ಇತ್ಯೌತ್ಪತ್ತಿಕಮಿತಿ ನಿತ್ಯಂ ಬ್ರೂಮ ಇತಿ ಹಿ ತದ್ಭಾಷ್ಯಂ । ಸನೀಳೇ ಸಮಾನಂ ನೀಳಮೇಕೋ ನಿವಾಸಸ್ಥಾನಂ ಯಯೋಸ್ತೇ । ಸಂಲಗ್ನೇ ಇತ್ಯರ್ಥಃ । ಏವಂವಿಧೇ ದ್ಯಾವಾಪೃಥಿವ್ಯೌ ದ್ವಿತಾ ದ್ವಿಧಾ ವಿ ವವ್ರೇ । ವಿವೃತೇ ಅಕರೋತ್ । ಭೇದೇನಾಸ್ಥಾಪಯದಿತ್ಯರ್ಥಃ । ಮೇನೇ ಮನನೀಯೇ ಪರಮ ಉತ್ಕೃಷ್ಟೇ ವ್ಯೋಮನ್ ವಿವಿಧರಕ್ಷಣೇ ನಭಸಿ ವರ್ತಮಾನೋ ಭಗೋ ನ ಸೂರ್ಯ ಇವ ಸುದಂಸಾಃ ಶೋಭನಕರ್ಮೇಂದ್ರೋ ರೋದಸೀ ದ್ಯಾವಾಪೃಥಿವ್ಯಾವಧಾರಯತ್ । ಅಪೋಷಯತ್ । ಯದ್ವಾ । ಮೇನೇತಿ ಸ್ತ್ರೀನಾಮ । ತಥಾ ಚ ಯಾಸ್ಕಃ । ಮೇನಾ ಗ್ನಾ ಇತಿ ಸ್ತ್ರೀಣಾಂ ಮೇನಾ ಮಾನಯಂತ್ಯೇನಾ ಇತಿ । ನಿ. ೩ ೨೧ । ಸ್ತ್ರೀರೂಪೇ ಮಾಪನ್ನೇ ರೋದಸೀ ಇಂದ್ರೋ೨ಪುಷ್ಯದಿತ್ಯರ್ಥಃ । ದ್ವಿತಾ । ದ್ವಿಧೇತ್ಯಸ್ಯ ಧಕಾರಸ್ಯ ತಕಾರಶ್ಛಾಂದಸಃ । ಸನಜಾ । ಜನೀ ಪ್ರಾದುರ್ಭಾವೇ । ಆಸ್ಮಾದ್ಭಾವೇ೨ನ್ಯೇಷ್ವಪಿ ದೃಶ್ಯತ ಇತಿ ದೃಶಿಗ್ರಹಣಸ್ಯ ಸರ್ವೋಪಾಧಿವ್ಯಭಿಚಾರಾರ್ಥತ್ವಾತ್ ಕೇವಲಾದಪಿ ಜನೇರ್ಡಪ್ರತ್ಯಯಃ । ಸನಾ ನಿತ್ಯಂ ಜೋ ಜನನಂ ಯಯೋಸ್ತೇ ಸನಜೇ । ಪೂರ್ವಪದಸ್ಯ ಹ್ರಸ್ವಶ್ಛಾಂದಸಃ । ಏವಮಾದಿತ್ವಾದಂತೋದಾತ್ತತ್ವಂ । ತದೇವ ಬಹುವ್ರೀಹಿಸ್ವರೇಣ ಶಿಷ್ಯತೇ । ಸುಪಾಂ ಸುಲುಗಿತಿ ವಿಭಕ್ತೇರಾಕಾರಃ । ಆಯಾಸ್ಯಃ । ಯಸು ಪ್ರಯತ್ನೇ । ಯಾಸಃ ಪ್ರಯತ್ನಃ । ತತ್ರ ಭವೋ ಯಾಸ್ಯಃ । ಭವೇ ಛಂದಸೀತಿ ಯತ್ । ನ ಯಾಸ್ಯೋ೨ಯಾಸ್ಯಃ । ಪರಾದಿಶ್ಛಂದಸಿ ಬಹುಲಮಿತ್ಯುತ್ತರಪದಾದ್ಯುದಾತ್ತತ್ವಂ । ಶ್ರುತ್ಯುಕ್ತನಿರ್ವಚನೇ ತು ಸೃಷೋದರಾದಿತ್ವಾದಭಿಮತರೂಪಸ್ವರಸಿದ್ಧಿಃ । ಮೇನೇ । ಸಪ್ತಮ್ಯೇಕವಚನಸ್ಯ ಸುಪಾಂ ಸುಲುಗಿತಿ ಶೇ ಆದೇಶಃ । ಶೇ । ಪಾ. ೧-೧-೧೩ । ಇತಿ ಪ್ರಗೃಹ್ಯತ್ವಂ । ಯದ್ವಾ । ಮನ್ಯತ ಇತಿ ಮೇನಾ । ಪಚಾದ್ಯಚ್ । ನಶಿಮನ್ಯೋರಲಿಟ್ಯೇತ್ವಂ ವಕ್ತವ್ಯಂ । ಪಾ. ೬-೪-೧೨೦-ಚಿ । ಇತ್ಯೇತ್ವಂ । ತತಷ್ಟಾಪ್ । ದ್ವಿವಚನ ಈದೂದೇದ್ದ್ವಿವಚನಂ । ಪಾ. ೧-೧--೧೧ । ಇತಿ ಪ್ರಗೃಹ್ಯತ್ವಂ । ಸುದಂಸಾಃ । ದಂಸ ಇತಿ ಕರ್ಮವಾಚೀ । ಅಸುನ್ಪ್ರತ್ಯಯಾಂತ ಆದ್ಯುದಾತ್ತಃ । ಬಹುವ್ರೀಹಾವಾದ್ಯುದಾತ್ತಂ ದ್ವ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಆಯಾಸ್ಯಃ—(ಯುದ್ಧಾದಿ) ಪ್ರಯತ್ನ ಸಾಧ್ಯವಲ್ಲದ ಅಥವಾ ಅಸ್ಯ ಅಂದರೆ ಮುಖದಲ್ಲಿರುವ ವಾಯುವಿನ ಉಪಾಸಕನಾದ ಅಂಗಿರಸನು (ಅವನಿಂದ) । **ಸ್ತವಮಾನೇಭಿಃ**—ಸ್ತುತಿಸುವವರಿಂದ (ಸ್ತುತಿಸುವ ಪುರುಷರಿಂದ) ಅಥವಾ ಸ್ತುತಿಸಲ್ಪಡುವ । **ಅರ್ಕೈಃ**—(ಸ್ತುತಿರೂಪವಾದ) ಮಂತ್ರಗಳಿಂದ (ಸುಸಾಧ್ಯವಾದ ಇಂದ್ರನು) । **ಸನಜಾ**—ಸ್ವಭಾವತಃ ನಿತ್ಯವಾದ । **ಸನೀಳೇ**—ಒಂದೇ ಸ್ಥಳದಲ್ಲಿರುವ (ಭೂಮ್ಯಾಕಾಶಗಳನ್ನು) । **ದ್ವಿತಾ**—ಎರಡು ಭಾಗವಾಗಿ । **ವಿ ವವ್ರೇ**—ವಿಂಗಡಿಸಿಟ್ಟನು । **ಸುದಂಸಾಃ**—ಮಂಗಳಕರವಾದ ಕರ್ಮಗಳುಳ್ಳ (ಇಂದ್ರನು) । **ಮೇನೇ**—ಮನನೀಯವಾದ (ಭವ್ಯವಾದ) । **ಪರಮೇ**—ಉತ್ಕೃಷ್ಟವಾದ । **ವ್ಯೋಮನ್**—ಆಕಾಶದಲ್ಲಿ

(ಇರುವ) । **ಭಗೋ ನ**—ಸೂರ್ಯನಂತೆ । (**ಮೇನೇ**—ಸ್ತ್ರೀರೂಪವನ್ನು ಧರಿಸಿದವ) । **ರೋದಸೀ**—ಭೂಮ್ಯಾಕಾಶಗಳನ್ನು । **ಅಧಾರಯತ್**—ಸ್ತೋಷಿಸಿದನು

॥ ಭಾವಾರ್ಥ ॥

ಇಂದ್ರನು ಯುದ್ಧಾದಿ ಪ್ರಯತ್ನಗಳಿಂದ ಒಲಿಸಿಕೊಳ್ಳಲು ಸಾಧ್ಯನಲ್ಲ ಸ್ತುತಿರೂಪವಾದ ಮಂತ್ರಗಳಿಂದ ಸ್ತೋತ್ರ ಮಾಡುವವರಿಗೆ ಸುಲಭಸಾಧ್ಯನು ಅಥವಾ ವಾಯು ಉಪಾಸಕನಾದ ಅಂಗಿರಸನ ಸ್ತುತಿರೂಪವಾದ ಮಂತ್ರಗಳಿಗೆ ಸಾಧ್ಯನು. ಈ ಇಂದ್ರನು ನಿತ್ಯವಾದ ಮತ್ತು ಒಂದಾಗಿದ್ದ ಭೂಮ್ಯಾಕಾಶಗಳನ್ನು ಪ್ರತ್ಯೇಕಿಸಿ, ಭವ್ಯವಾದ ಮತ್ತು ಉತ್ಕೃಷ್ಟವಾದ ಆಕಾಶದಲ್ಲಿರುವ ಸೂರ್ಯನಂತೆ ಸ್ತ್ರೀರೂಪಧಾರಿಗಳಾದ ಈ ಭೂಮ್ಯಾಕಾಶಗಳನ್ನು ಸ್ತೋಷಿಸಿದನು

English Translation

He who is not to be attained by violence but easily propitiated by those who praise him with sacred hymns, parted the spheres of heaven and earth, like the Sun in the august and most excellent sky

॥ ವಿಶೇಷನಿಷಯಗಳು ॥

ಅಯಾಸ್ಯಃ—**ಯಸು ಪ್ರಯತ್ನೇ । ಯಾಸಃ ಪ್ರಯತ್ನಃ । ತತ್ಸಾಧ್ಯೋ ಯಾಸ್ಯಃ । ನ ಯಾಸ್ಯೋಽಯಾಸ್ಯಃ । ಯುದ್ಧರೂಪೈಃ ಪ್ರಯತ್ನೈಃ ಸಾಧಯಿತುಮಶಕ್ಯ ಇತ್ಯರ್ಥಃ ।** ಯಾಸವೆಂದರೆ ಪ್ರಯತ್ನವು ಪ್ರಯತ್ನದಿಂದ ಸಾಧ್ಯವಾದುದು ಯಾಸ್ಯವು ಪ್ರಯತ್ನದಿಂದ ಸಾಧ್ಯವಲ್ಲದ್ದು ಅಯಾಸ್ಯವು ಎಂದರೆ ಯುದ್ಧಾದಿಪ್ರಯತ್ನಗಳಿಂದ ಇಂದ್ರನನ್ನು ಒಲಿಸಿಕೊಳ್ಳುವುದು ಅಸಾಧ್ಯವು. ಆದರೆ ಸ್ತೋತ್ರಗಳಿಂದ ಸುಲಭವಾಗಿ ವಶನಾಗುವನು ಎಂದಭಿಪ್ರಾಯವು ಅಥವಾ **ಅಯಾಸ್ಯಃ ಪಂಚವೃತ್ತಿರ್ಮುಖ್ಯಪ್ರಾಣಃ । ಸ ಹ್ಯಾಸ್ಯಾನ್ಮುಖಾದಯತೇ ಗಚ್ಛತಿ ನಿಷ್ಕ್ರಾಮತಿ ತದುಪಾಸಕೋಽಸ್ಯಂಗಿರಾ ಉಪಚಾರಾದಯಾಸ್ಯ ಉಚ್ಯತೇ । ತಥಾ ಛಂದೋಗೈರಾಮ್ನಾತಂ । ತಂ ಹಾಯಾಸ್ಯ ಉದ್ಗೀಥಮುಪಾಸಾಂ ಚಕ್ರ ಏತಮು ಏವಾಯಾಸ್ಯಂ ಮನ್ಯಂತ ಆಸ್ಯಾದ್ಯದಯತೇ ತೇನ** (ಛಾಂ ಉ ೧-೩-೧೩) ಇತಿ । ಅಥವಾ ಅಯಾಸ್ಯ ಎಂದರೆ ಪ್ರಾಣವು (ಪ್ರಾಣವಾಯುವು) ಅದು ಮುಖದಿಂದ ಹೋಗುವುದುದಾದ್ದರಿಂದ ಅಯಾಸ್ಯವೆಂದು ಹೇಳಲ್ಪಡುವುದು ಅಂತಹ ಪ್ರಾಣೋಪಾಸಕನಾದುದರಿಂದ ಅಂಗಿರಾಋಷಿಯು ಔಪಚಾರಿಕವಾಗಿ ಅಯಾಸ್ಯನೆಂದು ಹೇಳಲ್ಪಡುವನು ಈ ವಿಷಯದಲ್ಲಿ ಛಾಂದೋಗ್ಯ ಉಪನಿಷದ್ವಾಕ್ಯವು ಇರುವುದು. ಅಥವಾ—**ಅಯಮಾಸ್ಯೇ ಮುಖೇ ವರ್ತತ ಇತ್ಯಯಾಸ್ಯಃ । ತಥಾ ಚ ವಾಜಸನೇಯಕಂ । ತೇ ಹೋಚುಃ ಕ್ವ ನು ಸೋಽಭೂದ್ಯೋ ನ ಇತ್ಥಮಸಕ್ತೇತ್ಯಯಮಾಸ್ಯೇಂತರಿತಿ** (ಶತ ಬ್ರಾ. ೧೪-೪-೧-೯) ಅಥವಾ ಅಯಂ ಎಂದರೆ ಈ ಪ್ರಾಣವು ಆಸ್ಯ—ಮುಖದಲ್ಲಿರುವುದರಿಂದ ಇದಕ್ಕೆ ಅಯಾಸ್ಯವೆಂದು ಹೆಸರು. ಈ ವಿಷಯದಲ್ಲಿ ಶತಪಥ ಬ್ರಾಹ್ಮಣವಾಕ್ಯವಿರುವುದು. ಇಂತಹ ಪ್ರಾಣೋಪಾಸಕನಾದ

ಅಂಗಿರಾ ಋಷಿಗೆ ಆಯಾಸ್ಯನೆಂದು ಹೆಸರು. ಈ ಋಷಿಯಿಂದ ಸ್ತುತಿಸಲ್ಪಟ್ಟ ಇಂದ್ರನು ಎಂದು ಆರ್ಥವನ್ನು ಹೇಳ ಬಹುದು.

ಸನಜಾ—ಜನೀ ಪ್ರಾದುರ್ಭಾವೇ । ಸನಾ ನಿತ್ಯಂ ಜೋ ಜನನಂ ಯಯೋಸ್ತೇ ಸನಜೇ । ಸದಾಕಾಲವೂ ಇರುವವರು ಎಂದರೆ ನಿತ್ಯವೂ ಒಂದೇ ಸ್ಥಳದಲ್ಲಿ ಯಾವಾಗಲೂ ಇರುವವರು. ಭೂಮಂತ್ಯರಿಕ್ಷಗಳು ಯಾವಾಗಲೂ ಒಂದೇ ಸ್ಥಳದಲ್ಲಿ ಜತೆಯಾಗಿಯೇ ಇರುವವು ಎಂದಭಿಪ್ರಾಯವು

ಸನೀಳೇ—ಸಮಾನಂ ನೀಳಮೋಕೋ ನಿವಾಸಸ್ಥಾನಂ ಯಯೋಸ್ತೇ । ಸಮಾನವಾದ ವಾಸಸ್ಥಾನ ವುಳ್ಳ, ಒಟ್ಟಿಗೆ ಇರುವ ಒಂದೇ ಕಡೆ ಇರುವ,

ಭಗೋ ನ—ಸೂರ್ಯನಂತೆ, ದ್ವಾದಶಾದಿತ್ಯರಲ್ಲಿ ಭಗನು ಒಬ್ಬನು

ಸುದಂಸಾಃ—ದಂಸಃ ಎಂದರೆ ಕರ್ಮವು (ನಿ ೩-೧) ಉತ್ತಮವಾದ ಕರ್ಮಗಳುಳ್ಳ ಎಂದರೆ ಉತ್ತಮ ಕಾರ್ಯಗಳನ್ನು ಮಾಡುವ

॥ ವ್ಯಾಕರಣಪ್ರಕ್ರಿಯಾ ॥

ದ್ವಿತಾ--ದ್ವಿಧಾ ಎಂದಿರುವಾಗ ಧಕಾರಕ್ಕೆ ತಕಾರಾದೇಶವು ಛಾಂದಸವಾಗಿ ಬರುತ್ತದೆ ಸಂಖ್ಯಾಯಾ ವಿಧಾರ್ಥೇ ಧಾ (ಪಾ ಸೂ. ೫-೪-೪೨) ಎಂಬುದರಿಂದ ಧಾ ಪ್ರತ್ಯಯ ಪ್ರತ್ಯಯಸ್ವರದಿಂದ ಅಂತೋದಾತ್ತ

ಸನಜಾ—ಜನೀ ಪ್ರಾದುರ್ಭಾವೇ ಧಾತು ದಿವಾದಿ **ಆನ್ಯೇಭ್ಯೋಽಪಿ ದೃಶ್ಯತೇ** ಎಂಬಲ್ಲಿ ವೃತ್ತಿಗ್ರಹಣವು **ಎಲ್ಲಾ** ವಿಶೇಷಣಗಳ ತ್ಯಾಗದಲ್ಲಿಯೂ ಪ್ರತ್ಯಯವಿಧಾನಕ್ಕೋಸ್ಕರ ಉಪಾತ್ತವಾಗಿದೆ ವಾಸ್ತವವಾಗಿ ಉಪಪದವಿರುವಾಗ ಪ್ರತ್ಯಯವು ಅದರಿಂದ ಬರುವುದಾದರೂ ಹಿಂದಿನಂತೆ ವೃತ್ತಿಗ್ರಹಣದಿಂದ ಕೇವಲವಾದ ಈ ಧಾತುವಿಗೂ ಭಾವಾರ್ಥದಲ್ಲಿ ಡಪ್ರತ್ಯಯ ಬರುತ್ತದೆ ಡಿತ್ತಾದುದರಿಂದ ಸಾಮರ್ಥ್ಯದಿಂದ ಭಸಂಜ್ಞಾ, ಇಲ್ಲದಿದ್ದರೂ ಜಸಿನ ಟಿಗೆ (ಅನ್) ಲೋಪ ಬರುತ್ತದ ಜ ಎಂಬ ರೂಪವಾಗುತ್ತದೆ ಸನಾ=ನಿತ್ಯಂ ಜೋ ಜನನಂ ಯಯೋಸ್ತೇ ಸನಜೇ ಪೂರ್ವಪದಕ್ಕೆ ಛಾಂದಸವಾಗಿ ಹ್ರಸ್ವ ಬರುತ್ತದೆ **ನಿವಾದೀನಾಮಂತಃ** (ನಿ ಸೂ ೭೬) ಎಂಬಲ್ಲಿ ಈ ಶಬ್ದವು ಸೇರಿರುವುದರಿಂದ ಅಂತೋದಾತ್ತವಾಗುತ್ತದ ಬಹುವ್ರೀಹಿ ಸಮಾಸದಲ್ಲಿಯೂ ಈ ಅಂತೋದಾತ್ತಸ್ವರವೇ ಉಳಿಯುತ್ತದೆ ದ್ವಿವಚನದ ಟೆ ವಿಭಕ್ತಿಗೆ **ಸುಪಾಂಸುಲುಕ್** ಸೂತ್ರದಿಂದ ಆಕಾರಾದೇಶ ಬರುತ್ತದೆ

ಆಯಾಸ್ಯಃ—ಯಸು ಪ್ರಯತ್ನೇ . ಧಾತು. ಯಾಸಃ=ಪ್ರಯತ್ನಃ ಫಞ್‌ಪ್ರತ್ಯಯ ಯಾಸೇ ಭವಃ ಯಾಸ್ಯಃ-**ಭವೇ ಛಂದಸಿ** (ಪಾ ಸೂ. ೪-೪-೧೧೦) ಎಂಬುದರಿಂದ ಯತ್‌ಪ್ರತ್ಯಯ **ಯಸ್ಯೇತಿಚ** ಎಂಬುದರಿಂದ ಅಕಾರಲೋಪ ನ ಯಾಸ್ಯಃ ಆಯಾಸ್ಯಃ **ಪರಾದಿಶ್ಛಂದಸಿಬಹುಲಂ** (ಪಾ ಸೂ ೬-೩-೧೧೯) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ. ಇಲ್ಲ ಶ್ರುತ್ಯುಕ್ತಶಬ್ದಸಿನರ್ವಚನಮಾಡುವುದಾದರೆ **ಸೃಹೋದರಾದೀನಿ ಯಥೋಪದಿಷ್ಟಂ** ಎಂಬುದರಿಂದ ಸೃಹೋದರಾಢ್ಯಯು ಆಕೃತಿಗಣವಾದುದರಿಂದ ಅದರಲ್ಲಿ ಈ ಪದವನ್ನು ಸೇರಿಸಿ ಅಭಿಮತಸ್ವರಸಿದ್ಧಿಯನ್ನು ಸ್ವೀಕರಿಸಬೇಕು

ಮೇನೇ—ಮೇನಾ ಎಂಬುದು ಸ್ತ್ರೀಯ ಹೆಸರು ಸಪ್ತಮಿಯ ಏಕವಚನಕ್ಕೆ **ಸುಪಾಂಸುಲುಕ್** ಎಂಬುದರಿಂದ ಶೇ ಆದೇಶ ಶಿತ್ತಾದೇಶದರಿಂದ ಸರ್ವಾದೇಶ **ಶೇ** (ಪಾ. ಸೂ ೧-೧-೫೩) ಎಂಬುದರಿಂದ ಪ್ರಗೃಹ್ಯ ಸಂಜ್ಞೆಯು ಬರುತ್ತದೆ. ಅಥವಾ **ಮನ್ಯತೇ** ಇತಿ ಮೇನಾ ಮನಧಾತುವು **ಪಚಾದಿಯಲ್ಲಿ ಸೇರಿರುವುದರಿಂದ ನಂದಿಗ್ರಹಿಪಚಾದಿಭ್ಯಃ** ಸೂತ್ರದಿಂದ ಅಚ್ ಪ್ರತ್ಯಯ. **ನಶಿಮನ್ಯೋರಲಿಟಿ ಏತ್ವಂ ವಕ್ತವ್ಯಮ್** (ಪಾ. ಸೂ ೬ ೪ ೧೨೦-೪) ಎಂಬುದರಿಂದ ಅಚ್ ಪರದಲ್ಲಿರುವಾಗ ಧಾತುವಿನ ಆಕಾರಕ್ಕೆ ಏತ್ವ. ಮೇನ ಶಬ್ದವಾಗುತ್ತದೆ. ಸ್ತ್ರೀತ್ವದಲ್ಲಿ **ಅಜಾದ್ಯತಃ** ಸೂತ್ರದಿಂದ ಟಾಪ್ ದ್ವಿವಚನ ಪರದಲ್ಲಿರುವಾಗ **ಔಙಆಪಃ** ಎಂಬುದರಿಂದ ಆದಕ್ಕೆ ಶೇ ಆದೇಶ ಗುಣ, ಮೇನೇ ಎಂದು ರೂಪವಾಗುತ್ತದೆ ದ್ವಿವಚನವು ಈಗ ಏದಂತವಾಗಿರುವುದರಿಂದ **ಈದೂದೇದ್ದ್ವಿವಚನಂ ಪ್ರಗೃಹ್ಯಮ್** (ಪಾ ಸೂ ೧-೧-೧೧) ಎಂಬುದರಿಂದ ಪ್ರಗೃಹ್ಯಸಂಜ್ಞೆ ಬರುತ್ತದೆ

ವ್ಯೋಮನ್—ಸಪ್ತಮೀ ಏಕವಚನಕ್ಕೆ **ಸುಪಾಂಸುಲುಕ್** ಎಂಬುದರಿಂದ ಲುಕ್

ಅಧಾರಯತ್—ಣಿಜಂತದ ಲಙ್ ಪ್ರಥಮಪುರುಷ ಏಕವಚನರೂಪ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಅಡುದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ.

ಸುದಂಸಾಃ—ದಂಸವೆಂಬುದು ಕರ್ಮವಾಚಕವಾದ ಪದ ದಸಿ ದಂಸನದರ್ಶನಯೋಃ ಧಾತು ಅಸುನ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತ. ಶೋಭನಂ ದಂಸಃ ಯಸ್ಯ ಸಃ ಸುದಂಸಾಃ **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ. ಸೂ ೬-೨-೧೧೯) ಎಂಬುದರಿಂದ ಒಹುವ್ರೀಹಿಯಲ್ಲಿ ದ್ವ್ಯಚ್ಚುವುಳ್ಳ ಉತ್ತರಪದವಿರುವುದರಿಂದ ಉತ್ತರಪದ ಆದ್ಯುದಾತ್ತಸ್ವರವು ಬರುತ್ತದೆ ದಕಾರೋತ್ತರಾಕಾರವು ಉದಾತ್ತವಾಗುವುದರಿಂದ ಸುದಂಸಾಃ ಎಂಬುದು ಮಧ್ಯೋದಾತ್ತವಾದ ಪದವಾಗುತ್ತದೆ

॥ ಸಂಹಿತಾಪಾಠಃ ॥

ಸನಾದ್ಯುವಂ ಪರಿ ಭೂಮಾ ವಿರೂಪೇ ಪುನರ್ಭುವಾ ಯುವತೀ ಸ್ವೇಭಿರೇವೈಃ ।
ಕೃಷ್ಣೇಭಿರಕ್ತೋಷಾ ರುಶದ್ಭಿರ್ವಪುರ್ಭಿರಾ ಚರತೋ ಅನ್ಯಾನ್ಯಾ ॥ ೮ ॥

॥ पदपाठः ॥

सनात् । दिवं । परि । भूमं । विरूपे इति वि ऽरूपे । पुनः ऽभुवा ।
युवतीः इति । स्वेभिः । एवैः ।
कृष्णेभिः । अक्ता । उषाः । रुशत्ऽभिः । वपुः ऽभिः । आ । चरतः ।
अन्या ऽअन्या ॥ ९ ॥

॥ सायणभाष्यं ॥

विरूपे शुक्लकृष्णतयोर्विषमरूपे पुनर्भुवा पुनःपुनः प्रतिदिवं संजायमाने युवतीः तरुण्यौ । रात्र्युषसोः सर्वदैकरूपस्यादेवंभूते रात्र्युषसौ दिवं द्युलोकं भूमं भूमिं च सनाच्चिरकालादारभ्य स्वेभिरेवैः स्वकीयैर्गमनैः परि चरतः । पर्यायवर्तेते । अयमेवार्थः स्पष्टीक्रियते । अक्ता रात्रिः कृष्णेभिरंधकाररूपैर्वर्णैरुपलक्षिता उषाश्च रुशद्भिर्दीप्यमानैर्वर्णैर्वपुर्भिः स्वशरीरभूतैस्तेजोभिरुपलक्षिता अन्यान्या परस्परव्यतिहारेणा चरतः । आवर्तेतेते । हे इन्द्र एतत्सर्वं त्वय्येव कार्यतेति त्वदधीनत्वात्तत्सर्वासां देवतानामित्यर्थः ॥ भूमं । सुपां सुलुगिति द्वितीयायाः डादेशः । छान्दसो ह्रस्वः । एवैः । इण् गतौ । इण्भ्यो ज्भ्यां वन् । उ. ८-८७ । इति भावे वन्प्रत्ययः । नित्त्वादाद्युदात्तत्वं । अक्ता । नक्तेति रात्रिनाम । नलोपश्छान्दसः । वपुर्भिः । अर्तिपॄवपीत्यादिना । उ ३-८८ । उसः । नित्त्वादाद्युदात्तः । अन्यान्या । कर्मव्यतिहारे सर्वनाम्नो द्वे भवत इति वक्तव्यं समासवच्चेति बहुलं । मं. ९-८-८३-८८ । इति द्विर्भावे तस्य परमाम्रेडितमित्याम्रेडितसंज्ञायामनुदात्तं चेत्याम्रेडितस्यानुदात्तत्वं ॥

॥ प्रतिपदार्थ ॥

विरूपे—(शुक्ल, कृष्णगळंब) विविध रूपगळुळ्ळ । **पुनर्भुवा**—पुनः पुनः जनिसुव । **युवतीः**—(सर्वदा) तरुणियरादा (हगलु रात्रिगळु) । **दिवं**—आकाशवन्नू । **भूमं**—भूमियन्नू । **सनात्**—अनादिकालदिंदलू । **स्वेभिरेवैः**—तम्म गमनागमनगळिंद । **परि (चरतः)**—सुत्तुत्तिरुत्तारे । **अक्ता**—रात्रियु । **कृष्णेभिः**—कप्पाद (रूपदिंदलू)

(ಅಂಧಕಾರದಿಂದಲೂ) । **ಉಷಾಃ**—ಉಷಸ್ಸು (ಹಗಲು) । **ರುಶದ್ಭಿಃ**—ಪ್ರಕಾಶಮಾನವಾದ । **ವಪುರ್ಭಿಃ**—ಶರೀರಗಳಿಂದಲೂ (ತೇಜಸ್ಸಿನಿಂದ) । **ಅನ್ಯಾನ್ಯಾ**—ಒಬ್ಬರಾದಮೇಲೊಬ್ಬರು । **ಆ ಚರತಃ**—ತಿರುಗುತ್ತಿರುತ್ತಾರೆ

॥ ಭಾವಾರ್ಥ ॥

ಎಲೈ ಇಂದ್ರನೇ ಹಗಲು ರಾತ್ರಿಗಳು ಪ್ರತಿ ದಿನವೂ ಹುಟ್ಟುತ್ತವೆ, ಸಾಯುತ್ತವೆ, ಆದರೂ ತಾರುಣ್ಯವುಳ್ಳವರಾಗಿಯೇ ಇರುತ್ತಾರೆ ಇವರಿಬ್ಬರಲ್ಲಿ ಹಗಲು ತನ್ನ ಪ್ರಕಾಶದಿಂದಲೂ, ರಾತ್ರಿಯು ತನ್ನ ಅಂಧಕಾರದಿಂದಲೂ ಅನಾದಿಕಾಲದಿಂದ ಈ ಭೂಮ್ಯಾಕಾಶಗಳನ್ನು ಸರದಿಯ ಮೇಲೆ, ಒಂದಾದಮೇಲೊಂದು, ನಿನ್ನಾಜ್ಞೆಗೊಳಪಟ್ಟು। ಆವರಿಸಿರುತ್ತವೆ

English Translation

Night and dawn of various complexion, repeatedly born, but ever youthful, have traversed their revolutions alternately, from a remote period, earth and heaven, night with her dark, dawn with her liminous limbs.

॥ ವಿಶೇಷವಿಷಯಗಳು ॥

ಸನಾತ್—ಬಹು ಪ್ರಾಚೀನಕಾಲದಿಂದ, ಅತಿ ಪುರಾತನ ಕಾಲದಿಂದ, from a remote period

ವಿರೂಪೇ—ಪರಸ್ಪರ ವಿಷಮರೂಪಗಳುಳ್ಳ ಎಂದರೆ ರಾತ್ರಿಯು ಕತ್ತಲೆಯ ರೂಪದಿಂದಿರುವುದು ಉಷಸ್ಸು ಪ್ರಕಾಶ(ಬೆಳಕು) ರೂಪದಿಂದ ಇರುವುದು ಆದುದರಿಂದ ರಾತ್ರ್ಯುಷಸ್ಸುಗಳು ಪರಸ್ಪರ ವ್ಯತಿರಿಕ್ತವಾದ ರೂಪಗಳುಳ್ಳವು ಎಂದಭಿಪ್ರಾಯವು

ಪುನರ್ಭುವಾ—ಮತ್ತೆ ಮತ್ತೆ ಎಂದರೆ ಪ್ರತಿದಿನವೂ ಹುಟ್ಟುತ್ತಿರುವ, ಹಗಲುರಾತ್ರಿಗಳು ಪ್ರತಿದಿನವೂ ಒಂದಾಗುತ್ತಲೊಂದು ಎಡಬಿಡದೆ ಪರಿವರ್ತನಕ್ರಮದಿಂದ ಉಂಟಾಗುವವು

ಆ ಚರತಃ ಅನ್ಯಾನ್ಯಾ—ಒಂದಾಗುತ್ತಲೊಂದು, ರಾತ್ರಿಯಾದ ಮೇಲೆ ಉಷಃಕಾಲವು, ಹಗಲು ಆದ ಮೇಲೆ ರಾತ್ರಿಯೂ ಒಂದಾದನಂತರ ಮತ್ತೊಂದು ಪ್ರಾಪ್ತವಾಗುವುದೆಂದಭಿಪ್ರಾಯವು

ಯುವತೀ—ಪ್ರತಿದಿನವೂ ಪ್ರಾಪ್ತವಾಗುವುದರಿಂದ ಯುವತಿಯರೆಂದು ಹೇಳಲ್ಪಡುವರು

ಕೃಷ್ಣೇಭಿಃ ಅಕ್ತಾ । ಉಷಾ ರುಶದ್ಭಿಃ ವಪುರ್ಭಿಃ—ರಾತ್ರಿಯು ಕತ್ತಲೆ ಎಂಬ ಶರೀರಗಳಿಂದಲೂ ಉಷಸ್ಸು ಪ್ರಕಾಶಮಾನವಾದ ಬೆಳಕೆಂಬ ಶರೀರಗಳಿಂದಲೂ ಸಂಚರಿಸುವವು.

॥ ವ್ಯಾಕರಣಪ್ರಕ್ರಿಯಾ ॥

ಭೂಮ— ಭೂಮಿ ಶಬ್ದದ ಮೇಲೆ ದ್ವಿತೀಯಾ ಏಕವಚನವಿರುವಾಗ **ಸುಪಾಂಸುಲುಕ್**—ಎಂಬುದರಿಂದ ವಿಭಕ್ತಿಗೆ ಡಾದೇಶ. ಡಿತ್ತಾದುದರಿಂದ ಪ್ರಾತಿಪದಿಕದ ಟಿಗೆ(ಇ) ಲೋಪ. ಭೂಮಾ ಎಂದಾಗಬೇಕಾಗುತ್ತದೆ. ಸಂಹಿತಾದಲ್ಲಿ ಛಾಂದಸವಾಗಿ ಹ್ರಸ್ವ ಬಂದಿದೆ.

ಯುವತೀ—ಯುವನ್ ಶಬ್ದಕ್ಕೆ ಸ್ತ್ರೀತ್ವದಲ್ಲಿ **ಯೂನಸ್ತಿಃ** (ಪಾ ಸೂ ೪-೧-೭೭) ಎಂಬುದರಿಂದ ತದ್ಧಿತಸಂಜ್ಞೆಯುಳ್ಳ ತಿಪ್ರತ್ಯಯ **ಸ್ವಾದಿಷ್ವಸರ್ವನಾಮಸ್ಥಾನೇ** ಸೂತ್ರದಿಂದ ಪದಸಂಜ್ಞಾ ಇರುವುದರಿಂದ **ನಲೋಪಸ್ಪ್ರಾತಿಪದಿಕಾಂತಸ್ಯ** ಎಂಬುದರಿಂದ ನಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತ ದ್ವಿವಚನಾಂತರೂಪ

ಏವೈಃ—ಇಣ್ ಗತೌ ಧಾತು. **ಇಣ್ ಶೀಜ್ಭ್ಯಾಂ ವನ್** (ಉ. ಸೂ ೧-೫೫೦) ಎಂಬುದರಿಂದ ಭಾವಾರ್ಥದಲ್ಲಿ ವನ್ ಪ್ರತ್ಯಯ. ವನ್ ಪರದಲ್ಲಿರುವಾಗ ಧಾತುವಿಗೆ ಗುಣ ಏವ ಎಂದಾಗುತ್ತದೆ, ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ತೃತೀಯಾ ಬಹುವಚನಾಂತರೂಪ

ಅಕ್ತಾ— ನಕ್ತಾ ಎಂಬಲ್ಲಿ ಅಕ್ತಾ ಎಂದಾಗಿದೆ ಛಾಂದಸವಾಗಿ ನ ಲೋಪ ಬಂದಿದೆ

ಕೃಷ್ಟೇಭಿಃ—**ಬಹುಲಂ ಛಂದಸಿ** ಎಂಬುದರಿಂದ **ಆತೋ ಭಿಸ ಐಸ್** ಎಂಬುದರಿಂದ ಐಸ್ ಭಿಸಿಗೆ ಬರುವುದಿಲ್ಲ. **ಬಹುವಚನೇ ಝಲ್ಯೇತ್** ಎಂಬುದರಿಂದ ಅಂಗಕ್ಕೆ ಏತ್ವ ಬಂದರೆ ಕೃಷ್ಟೇಭಿಃ ಎಂದು ರೂಪವಾಗುತ್ತದೆ

ವಪುರ್ಭಿಃ—ಡುವಪ್ ಬೀಜಸಂತಾನೇ ಧಾತು **ಅರ್ತಿಪ್ಲಿ ವಪಿಯಜಿ** (ಉ ಸೂ. ೨-೨೭೪) ಎಂಬುದರಿಂದ ಉಸ್ ಪ್ರತ್ಯಯ ವಪುಸ್ ಶಬ್ದವಾಗುತ್ತದೆ ಸೂತ್ರದಲ್ಲಿ ಅದಕ್ಕೆ ನಿತ್ ಎಂದು ನಿತ್ವ ವಿಧಾನ ಮಾಡಿರುವುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತವಾಗುತ್ತದೆ ತೃತೀಯಾ ಬಹುವಚನಾಂತರೂಪ

ಅನ್ಯಾನ್ಯಾ—**ಕರ್ಮವ್ಯತಿಹಾರೇ ಸರ್ವನಾಮ್ನೋ ದ್ವೇ ಭವತ ಇತಿ ವಕ್ತವ್ಯಂ ಸಮಾಸವಚ್ಚ ಬಹುಲಮ್** (ಪಾ ಮ ೪-೧-೧೨-೧೧) ಕರ್ಮವ್ಯತಿಹಾರವು ತೋರುವಾಗ ಸರ್ವನಾಮಶಬ್ದಕ್ಕೆ ದ್ವಿತ್ವ ಬರುತ್ತದೆ ಅದು ಸಮಾಸದಂತೆ ಆಗುತ್ತದೆ, ಎಂಬುದರಿಂದ ಇಲ್ಲಿ ಅನ್ಯ ಎಂಬ ಸರ್ವನಾಮಶಬ್ದಕ್ಕೆ ದ್ವಿತ್ವ ಆಗ **ತಸ್ಯ ಪರಮಾಮ್ರೇಡಿತಮ್** (ಪಾ ಸೂ ೪-೧-೨) ಎಂಬುದರಿಂದ ಪರದರೂಪಕ್ಕೆ ಆಮ್ರೇಡಿತ ಸಂಜ್ಞೆ ಬರುತ್ತದೆ. ಸಮಾಸಛಾನ ಹೇಳಿರುವುದರಿಂದ ವಿಭಕ್ತಿಗೆ **ಸುಪೋಧಾತುಪ್ರಾತಿಪದಿಕಯೋಃ** ಎಂಬುದರಿಂದ ಲುಕ್ ಬರುತ್ತದೆ. **ಅನುದಾತ್ತಂ ಚ** (ಪಾ ಸೂ ೪-೧-೩) ಎಂಬುದರಿಂದ ಆಮ್ರೇಡಿತಕ್ಕೆ ಅನುದಾತ್ತಸ್ವರ ಬರುತ್ತದೆ.

ಅ ಚರತಃ—ಚರ ಗತಿಭಕ್ಷಣಯೋಃ ಧಾತು. ಲಟ್ ಪ್ರಥಮಪುರುಷ ದ್ವಿವಚನಲ್ಲಿ ಚರತಃ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

॥ संहितापाठः ॥

सनेमि सख्यं स्वपस्यमानः सूनुर्दार्धार शवसा सुदंसाः ।

आमासु चिद्दधिषे पक्ष्यमंतः पयः कृष्णासु रुशद्रोहिणीषु ॥ ७ ॥

॥ पदपाठः ॥

सनेमि । सख्यं । सु ऽ अपस्यमानः । सूनुः । दार्धार । शवसा । सु ऽ दंसाः ।

आमासु । चित् । दधिषे । पक्ष्यं । अंतरिति । पयः । कृष्णासु । रुशत् । रोहिणीषु ॥ ७ ॥

॥ सायणभाष्यं ॥

स्वपस्यनानः । स्वपः शोभनं कर्म । तदिनाचरन् शवसा शवसो बलस्य सूनुः पुत्रः । अतिबलवानित्यर्थः । सुदंसाः शोभनयागादिकर्मयुक्तः । एवंभूत इंद्रः सख्यं यजमानानां सख्यित्वं सनेमि पुराणं दार्धार । धारयति । पोषयतीत्यर्थः । सनेमिति पुराणनाम । प्रवयाः सनेमिति पारात् । किंचामासु चित् आर्द्रास्वपरिपक्वासु गोषु चान्तर्मध्ये पक्ष्यं परिपक्वं पयो दधिषे । धारयसि । तथा कृष्णासु कृष्णवर्णासु रोहिणीषु लोहितवर्णासु च गोषु तद्विपरीतं रुशद्दीप्यमानं श्वेतवर्णं पयो दधिषे ॥ सख्यं । सख्युर्भावः सख्यं । सख्युर्य इति यः । प्रत्ययस्वरः । दार्धार । धृङ् धारणे । तुजादित्वादभ्यासस्य दीर्घत्वं । पक्ष्यं । पक्षो वः ।

सा. ६-३-७३ । इति निष्ठातकारस्य वत्वं । रोहिणीषु । रुह बीजजन्मनि प्रादुर्भावे । रुहेः रक्ष लोप वा । उ. ३-६४ । इतीतस्त्यप्रत्ययान्तो रोहितशब्द आद्युदात्तो वर्णवाची । वर्णादनुदात्तात्तोपधात्तोनः । पा. ४-१-३९ । इति ङीप् । तत्संनियोगेन तकारस्य नकारादेशश्च । ङीपः पित्त्वादनुदात्तत्वे प्रातिपदिकस्वर एव शिष्यते ॥

॥ प्रतिपदार्थ ॥

स्वपस्यमानः—मंगलकरवाद कर्मदंतै आचरिसुव (मंगलकरवाद कर्मगळन्नाचरिसुव) । **शवसा सूनुः**—बलद पुत्रनाद (बलिष्ठनाद) । **सुदंसाः**—यागादि पवित्र कर्मगळुळ्ळ (इंद्रनु) । **सनेमि**—पुराणनाद । **सख्युः**—(यज्ञगळ यजमानरुगळ) सख्यवन्नु । **दाधार**—आश्रयवुळ्ळद्दन्नागि माडुत्तानै (प्रेरिसुत्तानै) । (इंद्रनाद नीनु) **अमासु चित्**—असरिसक्तवाद गोवुगळल्लियू । **अंतः**—ओळगडे । **पक्वं**—सक्ववाद । **पयः**—क्षीरवन्नु । **दधिषे**—इडुत्तीयेयो । **कृष्णासु**—कप्पाद (गोवुगळल्लियू) । **रोहिणीषु**—केंपाद (गोवुगळल्लियू) । **रुशत्**-स्वकांतिसुत्तिरुव (बेळगिरुव) । (**पयः**—हालन्नु) । (**दधिषे**--इडुत्तीयेयो) ॥

॥ भावार्थ ॥

इंद्रनु महाबलिष्ठनु मंगलकरवाद मत्तु पवित्रवाद कर्मगळुळ्ळवनु. मत्तु यजमानर स्नेहितनु इवनु असरिसक्तवाद गोवुगळल्लियू कूड सक्तवाद क्षीरवन्नुंटु माडुत्तानै. मत्तु गोवुगळु कप्पागिरलि, केंपागिरलि. अवुगळल्लि बेळगिरुव, शुभ्रवाद हालन्नेकल्पिसिरुत्तानै

English Translation

(Indra) the son of strength, full of good works, diligent in pious acts retains his ancient friendships for his people; O Indra, you placed the ripened milk in immature cows whether black or red and white milk in the black cows.

॥ विशेषविषयगळु ॥

सनेमि—प्रश्नं, प्रदिवः मोदलाद आरु पुराणनामगळ मध्यदल्लि सनेमि एंब शब्दवु पठितवागिरुवुदरिंद (नि ३-३०) पुराणनवाद, हळेयदाद बहळ हिंदिन, सनेमि एंदरे बहळ हिंदिनिंद बंद स्नेह, old friendship.

ಸ್ವಪಸ್ಯಮಾನಃ--ಅಪಃ ಎಂದರೆ ಕರ್ಮವು. (ಸು ೩-೧) ಸು+ಅಪಃ ಎಂದರ ಶೋಭನಕರ್ಮವು ಅಂತಹ ಕರ್ಮವುಳ್ಳವನು ಇಂದ್ರನು ಎಂದಭಿಪ್ರಾಯವು

ಸೂನುಃ ಶವಸಾ--ಬಲಸ್ಯ ಪುತ್ರಃ । ಶಕ್ತಿಯ ಪುತ್ರನು. ಅತಿಬಲಶಾಲಿಯು ಎಂದರ್ಥವು

ಸುದಂಸಾಃ—ದಂಸಃ ಎಂದರೆ ಕರ್ಮವು (ಸು ೩ ೧) ಸುದಂಸಾಃ ಎಂದರೆ ಅನೇಕ ಸಾಹಸಕಾರ್ಯಗಳನ್ನು ಮಾಡಿದವನು

ಅಮಾಸು ಚಿತ್ ಪಥಿಷೇ ಪಕ್ವಂ ಅಂತಃ ಪಯಃ- ಅಪರಿಪಕ್ವಾಸು ಗೋಷು ಚಾಂತರ್ಮಧ್ಯೇ ಪಕ್ವಂ ಪಯೋ ದಧಿಷೇ । ಈ ಮಂತ್ರದ ಉತ್ತರಾರ್ಧದಲ್ಲಿ ಎರಡು ವಾಕ್ಯಗಳಿರುವವು ಈ ಎರಡು ವಾಕ್ಯಗಳೂ ಇಂದ್ರನ ಎರಡು ಮಹಿಮೆಗಳನ್ನು ವರ್ಣಿಸುವವು ಅವುಗಳಲ್ಲಿ ಒಂದಾದ ಈ ವಾಕ್ಯವು— ಹಸುಗಳು ಚೆನ್ನಾಗಿ ಬೆಳೆದು ಕರುಗಳನ್ನು ಹಾಕುವುದಕ್ಕೆ ಮುಂಚೆಯೇ ಅವುಗಳಲ್ಲಿ ಹಾಲು ಉತ್ಪತ್ತಿಯಾಗುವಂತೆ ಮಾಡುವ ಮಹಿಮೆಯು ವರ್ಣಿತವಾಗಿರುವುದು ಮತ್ತೊಂದು ವಾಕ್ಯವಾದ -

ಪಯಃ ಕೃಷ್ಣಾಸು ರುಶತ್ ರೋಹಿಣೀಷು--ಎಂಬ ಈ ವಾಕ್ಯದಲ್ಲಿ ಹಸುಗಳು ಕಪ್ಪಾಗಿರಲಿ ಅಥವಾ ಕೆಂಪಗಿರಲಿ ಅವುಗಳ ಹಾಲು ಮಾತ್ರ ಬಿಳ್ಳಗೇ ಇರುವುದು ಇಂತಹ ಕಾರ್ಯವನ್ನು ಮಾಡುವುದಕ್ಕೆ ಇಂದ್ರನಿಗೆ ಮಾತ್ರ ಸಾಮರ್ಥ್ಯವಿರುವುದು ಎಂಬ ಇಂದ್ರನ ಎರಡನೆಯ ಮಹಿಮೆಯು ವರ್ಣಿತವಾಗಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಸಖ್ಯುಮ್--ಸಖ್ಯುರ್ಭಾವಃ ಸಖ್ಯಮ್ **ಸಖ್ಯುರ್ಯಃ** (ಪಾ. ಸೂ ೫-೧-೧೨೬) ಎಂಬುದರಿಂದ ಭಾವಾರ್ಥದಲ್ಲಿ ಯ ಪ್ರತ್ಯಯ **ಯಸ್ಯೇತಿ ಚ** ಎಂಬುದರಿಂದ ಯಾದಿಪ್ರತ್ಯಯ ನಿಮಿತ್ತಕ ಭಸಂಜ್ಞಾ ಇರುವುದರಿಂದ ಇಕಾರಲೋಪ ಬರುತ್ತದೆ ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ

ಸ್ವಪಸ್ಯಮಾನಃ—ಸ್ವರಃ ಇವ ಆಚರತಿ ಎಂಬರ್ಥದಲ್ಲಿ ಸ್ವಪಃ ಎಂಬುದಕ್ಕೆ **ಕ್ಯಚ್** ಸ್ವಪಸ್ಯತೇ ಇತಿ ಸ್ವಪಸ್ಯಮಾನಃ ಕ್ಯಬಂತದ ಮೇಲೆ ಲಡರ್ಥದಲ್ಲಿ ಶಾನಚ್ **ಆನೇ ಮುಕ್** ಎಂಬುದರಿಂದ ಆಜಂತಕ್ಕೆ ಮುಕಾಗಮ. ಅದುಪದೇಶವ ಪರದಲ್ಲಿರುವುದರಿಂದ ಲಸಾರ್ವ ಧಾತುಕವು ಅನುದಾತ್ತ ಕ್ಯಚ್ ಸ್ವರವು ಸಶಿತಿತ್ಕ್ವಾಗುತ್ತದೆ

ದಾಧಾರ -ಧೃಞ್ ಧಾರಣೇ ಲಿಟ್ ಪ್ರಥಮಪುರುಷೈಕವಚನಕ್ಕೆ **ಪರಸ್ಮೈಪದಾನಾಂ**—ಸೂತ್ರದಿಂದ ಣಲಾದೇಶ **ಲಿಣ್ನಿಮಿತ್ತಕವಾಗಿ** ಧಾತುವಿಗೆ ದ್ವಿತ್ವ ಅಭ್ಯಾಸಕ್ಕ ಉರದತ್ವ, ಹಲಾದಿಶೇಷ ಜಸ್ತ್ವ ಣಲ್ ನಿಮಿತ್ತಕವಾಗಿ **ಅಚೋ ಞ್ಣಿತಿ** ಎಂಬುದರಿಂದ ಧಾತುವಿನ ಯಕಾರಕ್ಕೆ ವೃದ್ಧಿ **ಉರಣ್ರಪರಃ** ಎಂಬುದರಿಂದ ರಪರವಾಗಿ ಬಂದರೆ ದಧಾರ ಎಂದಾಗುತ್ತದೆ. ತುಜಾದಿಯಲ್ಲಿ ಸೇರಿರುವುದರಿಂದ **ತುಜಾದೀನಾಂ ದೀರ್ಘೋಽಭ್ಯಾಸಸ್ಯ** (ಪಾ ಸೂ. ೬-೧-೭) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ **ತಿಜ್ಞತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ

ಪಕ್ವಮ್—ಡುಪಚಷ್ ಪಾಕೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ ಬರುತ್ತದೆ. ಪಚ್+ತ ಎಂದಿರುವಾಗ **ಪಚೋ ವಃ** (ಪಾ ಸೂ.೮-೨-೫೨) ಎಂಬುದರಿಂದ ನಿಷ್ಠಾತಕಾರಕ್ಕೆ ವತ್ವ. ಇದು ಅಸಿದ್ಧವಾದುದರಿಂದ **ಚೋಃ ಕುಃ** (ಪಾ. ಸೂ ೮-೨-೩೦) ಎಂಬುದರಿಂದ ಚಕಾರಕ್ಕೆ ತಕಾರಾದೇಶ ಬರುತ್ತದೆ. ಪಕ್ವ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ರೋಹಿಣೀಷು—ರುಹ ಬೀಜಜನ್ಮನಿ ಪ್ರಾದುರ್ಭಾವೇ ಧಾತು **ರುಹೇ ರಶ್ಚ ಲೋ ವಾ** (ಉ. ಸೂ. ೩-೩೭೪) ಎಂಬುದರಿಂದ ಇತನ್ ಪ್ರತ್ಯಯ. ಪ್ರತ್ಯಯ ನಿಮಿತ್ತಕವಾಗಿ ಧಾತುವಿನ ಲಕ್ಷೂಪಧೆಗೆ ಗುಣ ರೋಹಿತ ಎಂದು ಅದ್ಯುದಾತ್ತವಾದ ಪದವಾಗುತ್ತದೆ ಇದು ವರ್ಣವಾಚಕವಾಗುತ್ತದೆ. ಆದುದರಿಂದ ಸ್ತ್ರೀತ್ವದಲ್ಲಿ **ವರ್ಣಾದನುದಾತ್ತಾತ್ತೋಪಧಾತ್ತೋನಃ** (ಪಾ. ಸೂ. ೪-೧-೩೯) ಎಂಬುದರಿಂದ ಙೀಪ್. ತತ್ಸಂನಿಯೋಗದಿಂದ ತಕಾರಕ್ಕೆ ನಕಾರಾದೇಶ ಆನುದಾತ್ತ ವಿಶಿಷ್ಟವಾಗಿ ತಕಾರ ಉಪಧೆಯಾಗಿ ವರ್ಣವಾಚಕವಾಗಿರುವ ರೋಹಿತ ಶಬ್ದಕ್ಕೆ ಪೂರ್ವೋಕ್ತ ಕಾರ್ಯಗಳು ಬಂದರೆ ರೋಹಿಣೀ ಎಂದು ರೂಪವಾಗುತ್ತದೆ ಠೇಫದ ಪರದಲ್ಲಿ ನಕಾರ ಬಂದುದರಿಂದ **ಅಟ್ಕುಪ್ವಾಙ್** ಸೂತ್ರದಿಂದ ಣತ್ವ ಬಂದಿದೆ ಇಲ್ಲಿ ಙೀಪ್ ಪಿತ್ತಾದುದರಿಂದ ಅನುದಾತ್ತವಾಗುವುದರಿಂದ ಪ್ರಾತಿಪದಿಕಸ್ವರವು ಉಳಿಯುತ್ತದೆ ಸಪ್ತಮೀ ಬಹುವಚನದಲ್ಲಿ ರೋಹಿಣೀಷು ಎಂದು ರೂಪವಾಗುತ್ತದೆ. ಆದ್ಯುದಾತ್ತವಾದ ಪದವಾಗುತ್ತದೆ.

॥ ಸಂಹಿತಾಪಾಠಃ ॥

ಸ್ತನಾತ್ಸನೀಳಾ ಅವನೀರವಾತಾ ವ್ರತಾ ರಕ್ಷಂತೇ ಅಮೃತಾಃ
ಸಹೋಭಿಃ ।
ಪುರೂ ಸಹಸ್ರಾ ಜನಯೋ ನ ಪತ್ನೀರ್ದುವಸ್ಯಂತಿ ಸ್ವಸಾರೋ
ಅಹ್ರಯಾಣಂ ॥ ೧೦ ॥

॥ ಪದಪಾಠಃ ॥

ಸನಾತ್ । ಸ ऽ ನೀಳಾಃ । ಅವನೀಃ । ಅವಾತಾಃ । ವ್ರತಾ । ರಕ್ಷಂತೇ । ಅಮೃತಾಃ ।
ಸಹಃ ऽ ಭಿಃ ।
ಪುರು । ಸಹಸ್ರಾ । ಜನಯಃ । ನ । ಪತ್ನೀಃ । ದುವಸ್ಯಂತಿ । ಸ್ವಸಾರಃ । ಅಹ್ರ-
ಯಾಣಂ ॥ ೧೦ ॥

॥ ಸಾಯಣಭಾಷ್ಯಂ ॥

ಸನಾಚ್ಛಿರಕಾಲಾದಾರಭ್ಯ ಸನೀಳಾಃ ಸಮಾನನಿವಾಸಸ್ಥಾನಾ ಅವಾತಾಃ । ನಾತಂ ಗಮನಂ ತದ್ರಹಿತಾಃ । ಏಕಸಾಣ್ಯವಸ್ಥಾನಾತ್ । ಅವನಯ ಇತ್ಯಂಗುಲಿನಾಮ । ಏವಂಭೂತಾ ಅವನೀರಂಗುಲ-ಯಃ ಪುರು ಪುರೂಣಿ ಬಹೂನಿ ಸಹಸ್ರಸಂಖ್ಯಾತಾನಿ ವ್ರತಾ ವ್ರತಾನೀಂದ್ರಸಂಬಂಧೀನಿ ಕರ್ಮಾಣ್ಯ-ಮೃತಾಃ ಪುನಃಪುನಃಕರಣೇ ऽ ಪ್ಯಾಲಸ್ಯರಹಿತಾಃ ಸತ್ಯಃ ಸಹೋಭಿರಾತ್ಮೀಯೈರ್ಬಲೈಃ ಃ ರಕ್ಷಂತೇ । ಸಾಲಯಂತಿ । ಅಪಿ ಚ ಸ್ವಸಾರಃ ಸ್ವಯಮೇವ ಸರಂತ್ಯೋ ऽ ಂಗುಲಯಃ ಪತ್ನೀಃ ಸಾಲಯಿತ್ರ್ಯೋ ऽ ಹ್ರ-ಯಾಣಂ ಲಜ್ಜಾರಹಿತಂ । ಪ್ರಗಲ್ಭಮಿತ್ಯರ್ಥಃ । ಯದ್ವಾ । ಅಹ್ರೀತಕಯಾನಂ ಪ್ರಶಸ್ತಗಮನಮಿಂದ್ರಂ ಜನಯೋ ನ । ಜನಯ ಇತಿ ದೇವಾನಾಂ ಪ್ರತ್ನ ಉಚ್ಯಂತೇ । ದೇವಾನಾಂ ವೈ ಪತ್ನೀರ್ಜನಯ ಇತಿ ಶ್ರುತೇಃ । ತಾ ಇವ ದುನಸ್ಯಂತಿ । ಪರಿಚರಂತಿ । ಆಂಜಲಿಬಂಧನೇನೇಂದ್ರಂ ಪ್ರೀಣಯಂತೀತ್ಯರ್ಥಃ ॥ ಅವನೀಃ । ಅವನಯೋ ऽ ಂಗುಲಯೋ ಭವಂತ್ಯವಂತಿ ಕರ್ಮಾಣಿ । ನಿ ೩-೯ । ಇತಿ ಯಾಸ್ಕಃ । ಸುಪಾಂ ಸುಲುಗಿತಿ ಜಸಃ ಪೂರ್ವಸವರ್ಣದೀರ್ಘತ್ವಂ । ಅವಾತಾಃ । ವಾ ಗತಿಗಂಧನಯೋಃ । ಅಸಿಹಸೀತ್ಯಾದಿನಾ ಭಾವೇ ತನ್ಪ್ರತ್ಯಯಃ । ಬಹುಪ್ರೀಹೌ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ವ್ರತಾ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ದುವಸ್ಯಂತಿ । ದುವಸ್ಯತಿಃ ಪರಿಚರಣಕರ್ಮಾ । ಕಂಡ್ವಾದಿಃ । ಅತೋ ಯಕ ಏವ ಸ್ವರಃ ಶಿಷ್ಯತೇ । ಸಾದಾದಿತ್ವಾನ್ನಿಘಾತಾಭಾವಃ । ಅಹ್ರಯಾಣಂ । ಹ್ರೀ ಲಜ್ಜಾಯಾಂ । ಬಹುಲಂ ಛಂದಸೀತಿ ಶ್ಲೋರಭಾವಃ । ವ್ಯತ್ಯಯೇನ ಶಾನಚ್ । ಮುಗಭಾವಶ್ಛಂದಸಃ । ನಞ್ಸುಮಾಸೇ ऽ ವ್ಯಯ ಪೂರ್ವಪದ-ಪ್ರಕೃತಿಸ್ವರತ್ವಂ । ಯದ್ವಾ । ಬಹುಲಂ ಛಂದಸೀತಿ ಶಪೋ ಲುಕಿ ಛಂದಸ್ಯುಭಯಥೇತಿ ಶಾನಚಿ ಆರ್ಧಧಾತುಕತ್ವೇನ ಜುತ್ವಾಭಾವೇ-ಗುಣಾಯಾದೇಶೌ । ಪೂರ್ವವತ್ಸಮಾಸಸ್ವರೌ । ಯಾಸ್ಕ ಸ್ತ್ವೇವಂ ವ್ಯಾಖ್ಯತ್ । ಅಹರ್ಯಾಣೋ ऽ ಹ್ರೀತಯಾನಃ । ನಿ. ೫-೧೫ । ಇತಿ ॥

॥ ಪ್ರತಿಪದಾರ್ಥ ॥

ಸನಾತ್ -- ಅನಾದಿಕಾಲದಿಂದಲೂ । **ಸನೀಳಾಃ**—ಸಮಾನ ನಿವಾಸಸ್ಥಾನವುಳ್ಳ । **ಅವಾತಾಃ**---(ಒಂದೇ ಕೈಯಲ್ಲಿರುವುದರಿಂದ) ಗಮನವಿಲ್ಲದ । **ಅವನೀಃ**—ಬೆರಳುಗಳು । **ಪುರು**—ಅನೇಕ । **ಸಹಸ್ರಾ**—ಅಸಂ

ಖ್ಯಾತವಾದ । **ವ್ರತಾ**—(ಇಂದ್ರ ಸಂಬಂಧವಾದ) ಕರ್ಮಗಳನ್ನು । **ಅಮೃತಾಃ**—(ಪುನಃ ಪುನಃ ಮಾಡಿದರೂ) ಆಲಸ್ಯವಿಲ್ಲದವುಗಳಾಗಿ । **ಸಹೋಭಿಃ**—ತಮ್ಮ ಬಲದಿಂದ । **ರಕ್ಷಂತೇ**—ಕಾಪಾಡಿಕೊಂಡು ಬಂದಿವೆ. । **ಪತ್ನೀಃ**—ರಕ್ಷಕರಾದ । **ಸ್ವಸಾರಃ**—ಸ್ವತಃ ಚಲಿಸುವ (ಅಂಗುಲಿಗಳು) । **ಅಹ್ರಯಾಣಂ**—ಲಜ್ಜಾರಹಿತವಾಗಿ ಅಥವಾ ಅವ್ಯಾಹತಗಮನವುಳ್ಳ (ಇಂದ್ರನನ್ನು) । **ಜನಯೋ ನ**—ದೇವಸ್ತ್ರೀಯರಂತೆ । **ದುವಸ್ಯಂತಿ**—ಸೇವಿಸುತ್ತವೆ.

॥ ಭಾವಾರ್ಥ ॥

ಒಂದೇ ಕಡೆ ಇರುವ, ಸ್ಥಳಪಲ್ಲಟವಿಲ್ಲದ, ಬೆರಳುಗಳು ಇಂದ್ರನ ಸಂಬಂಧವಾದ ಅಸಂಖ್ಯಾತ ಕರ್ಮಗಳನ್ನು ಅನಾದಿಕಾಲದಿಂದಲೂ ಸ್ವಕೀಯವಾದ ಬಲದಿಂದ ನಡೆಸಿಕೊಂಡು ಬಂದಿವೆ. ರಕ್ಷಕಗಳಾದ, ಸ್ವತಃ ಚಲಿಸಲು ಶಕ್ತಿಯುಳ್ಳ ಅಂಗುಲಿಗಳು ದೇವಸ್ತ್ರೀಯರುಗಳಂತೆ ಅಂಜಲಿ ಬಂಧಾದಿಗಳಿಂದ ಲಜ್ಜಾರಹಿತವಾಗಿ ಇಂದ್ರನ ಸೇವೆಯನ್ನು ಮಾಡುತ್ತವೆ

English Translation.

From a remote time the contiguous, unshifting and unwearied fingers practise with all their energies many thousand acts of devotion towards Indra; and like the wives of the gods the protecting sisters (fingers) worship him who is without shame.

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವು ಸ್ವಲ್ಪ ತೊಡಕಾಗಿರುವುದು. ಋಷಿಯ ಅಭಿಪ್ರಾಯವು ಸ್ಪಷ್ಟವಾಗಿ ವರ್ಣಿತವಾಗಿಲ್ಲ

ಸನೀಳಾಃ—ನೀಳಂ ಎಂದರೆ ಗೃಹ ಅಥವಾ ವಾಸಸ್ಥಾನವು (ನಿ. ೩-೧೩) ಸನೀಳಾಃ ಎಂದರೆ ಸಮಾನ ವಾಸಸ್ಥಾನ ಎಂದರೆ ಒಂದೇ ಕಡೆ ಇರುವ ಎಂದಭಿಪ್ರಾಯವು.

ಅವನೀಃ--ಅಗ್ರುವಃ ಅಣ್ಯಃ । ಮೊದಲಾದ ಇಪ್ಪತ್ತೈರಡು ಅಂಗುಲಿನಾಮಗಳ ಮಧ್ಯದಲ್ಲಿ ಅವನಯಃ ಎಂಬ ಶಬ್ದವು ಪಠಿತವಾಗಿರುವುದರಿಂದ ಅವನೀಃ ಎಂದರೆ ಬೆರಳುಗಳನ್ನು ಎಂದರ್ಥವು (ನಿ. ೩-೯)

ಅವಾತಾಃ—ವಾ ಗತಿಗಂಧನಯೋಃ । ವಾತಂ ಗಮನಂ ತದ್ರಹಿತಾಃ । ಗಮನರಹಿತವಾದ ಎಂದರೆ ನಿಯಮಿತಸ್ಥಳವನ್ನು ಬಿಟ್ಟು ಚಲಿಸದಿರುವ.

ವ್ರತಾ—ಇಂದ್ರಸಂಬಂಧೀನಿ ಕರ್ಮಾಣಿ । ವ್ರತವೆಂದರೆ ಕರ್ಮವು (ನಿ ೩-೧) ವ್ರತಾ ಎಂಬ ಶಬ್ದವು ದ್ವಿತೀಯಾ ಬಹುವಚನವು.

ಅಮೃತಾಃ--ಪುನಃಪುನಃಕರಣೇಽಪ್ಯಾಲಸ್ಯರಹಿತಾಃ । ಮತ್ತೆ ಮತ್ತೇ ಕೆಲಸ ಮಾಡುವುದರಲ್ಲಿ ಆಲಸ್ಯವಿಲ್ಲದಿರುವ.

ಸಹೋಭಿಃ—ಅತ್ಮೀಯೈರ್ಬಲೈಃ । ಸಹಃ ಎಂದರೆ ಬಲವು (ನಿ ೩-೯)

ಜನಯೋ ನ—ಜನಯಃ ಎಂದರೆ ಸ್ತ್ರೀಯರು. **ಜನೀನಾಂ ಜಾಯಾನಾಂ** (ನಿ ೧೦-೯೧) ಎಂದು ನಿರುಕ್ತವಚನವಿರುವುದು ಸ್ತ್ರೀಯರಂತೆ, ಸಖ್ಗಿಯರಂತೆ

ದುವಸ್ಯಂತಿ ದುವಸ್ಯತಿ ಪರಿಚರಣಕರ್ಮಾ (ನಿ ೩-೧೩) ಪರಿಚರಂತಿ । ಸೇವೆ ಮಾಡುತ್ತವೆ

ಸ್ವಸಾರಃ—ಸ್ವಯಮೇವ ಸರಂತ್ಯೋಂಗುಲಯಃ । ಪ್ರೇರಣೆ ಇಲ್ಲದ ತಾನೇ ಚಲಿಸುವುದರಿಂದ ಸ್ವಸಾರಃ ಎಂದರೆ ಅಂಗುಲಿಗಳು ಬೆರಳುಗಳು. ಸ್ವಸಾರಃ ಎಂದರೆ ಸಹೋದರಿಯರು, sisters ಎಂದೂ ಅರ್ಥವು

ಅಹ್ರಯಾಣಂ—ಹ್ರೀ ಲಜ್ಜಾಯಾಂ । ಲಜ್ಜಾರಹಿತಂ । ಲಜ್ಜಾರಹಿತನಾದ, ನಾಚಿಕೆಯಿಲ್ಲದ ಯಾಸ್ಕರು ಅಪ್ರಯಾಣೋಽಪ್ರೀತಯಾನಃ (ನಿ ೫-೧೨) ಎಂದು ಹೇಳಿರುವರು

॥ ವ್ಯಾಕರಣಾದಿಕ್ರಿಯಾ ॥

ಅವನೀಃ ಅವನಯೋಽಂಗುಲಯೋ ಭವಂತಿ, ಅವಂತಿ ಕರ್ಮಾಣಿ (ನಿರು ೩-೮) ಎಂಬುವಾಗಿ ಯಾಸ್ಕರು ಹೇಳಿರುತ್ತಾರೆ ಅವನಿ ಎಂದರೆ ಕೈಬೆರಳುಗಳು. ಕೆಲಸವನ್ನು ರಕ್ಷಿಸುತ್ತವೆ (ಮಾಡಲು ಸಹಾಯವಾಗುತ್ತವೆ) ಆದುದರಿಂದ ಅನ್ಯರ್ಥನಾದ ಹರಿ ಎಂದು ತಾತ್ಪರ್ಯ ಅವನಿಃ ಜಸ್ ಎಂದಿರುವಾಗ **ಸುಹಾಂಸುಲುಕ್** ಎಂಬುದರಿಂದ ಜಸ್ಸಿಗೆ ಸ್ರ್ವಸವರ್ಣದೀರ್ಘ ಸಕಾರಕ್ಕೆ ರುತ್ವವಿಸರ್ಗ ಅವನೀಃ ಎಂದು ರೂಪವಾಗುತ್ತದೆ

ಅವಾತಾಃ—ವಾ ಗತಿಗಂಧನಯೋಃ ಧಾತು **ಅಸಿಹಸಿ**—ಎಂಬುದರಿಂದ ಭಾವಾರ್ಥದಲ್ಲಿ ತನ್ ಪ್ರತ್ಯಯ. ನ ವಿದ್ಯತೇ ವಾತಃ ಗಮನಂ ಯಾಸಾಂ ತಾಃ ಅವಾತಾಃ ಬಹುವ್ರೀಹಿಯಲ್ಲಿ **ನಞ್ ಸುಭ್ಯಾಂ** (ಪಾ ಸೂ ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತ ಸ್ವರವು ಬರುತ್ತದೆ

ವ್ರತಾ ವೃತಃ ಜಸ್ ಎಂದಿರುವಾಗ **ಜಶ್ಶಸೋಃ ಶಿಃ** ಎಂಬುದರಿಂದ ಶಿ ಆದೇಶ **ಶಿ ಸರ್ವನಾಮಸ್ಥಾನಮ್** ಎಂಬುದರಿಂದ ಸರ್ವನಾಮಸ್ಥಾನಸಂಜ್ಞೆ ಇರುವುದರಿಂದ **ನಪುಂಸಕಸ್ಯ ಝಲಚಃ** ಎಂಬುದರಿಂದ ನುಮಾಗಮ **ಸರ್ವನಾಮಸ್ಥಾನೇಚಾಸಂಬುದ್ಧೌ** ಎಂಬುದರಿಂದ ದೀರ್ಘ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ ನಲೋಪ ವ್ರತಾ ಎಂದು ರೂಪವಾಗುತ್ತದೆ

ರಕ್ಷಂತೇ—ರಕ್ಷ ಪಾಲನೇ ಧಾತು ಲಟ್ ಪ್ರಥಮಪುರುಷ ಬಹುವಚನರೂಪ ತಿಜಂತಸಿಚ್ಛಾತಸ್ವರ ಬರುತ್ತದೆ

ದುವಸ್ಯಂತಿ- ದ್ಯುವಸ್ಯತಿಃ ಪರಿಚರಣಕರ್ಮಾ (ನೇಪಾ) ಕಂಡ್ವಾದಿಯು ಆಕೃತಿಗಣವೆಂಬುದರಿಂದ ಈ ಧಾತುವು ಅಲ್ಲಿ ಸೇರುತ್ತದೆ ಅಲ್ಲಿ ದುವಸ್ ಸಂದೀಪನೆ ಎಂದು ವ್ಯಾಖ್ಯಾಂತರದಲ್ಲಿ ಹೇಳಿರುತ್ತಾರೆ **ಕಂಡಾದ್ವಿಭ್ಯೋ ಯಕ್** (ಪಾ ಸೂ ೩-೧-೨೭) ಎಂಬುದರಿಂದ ಸ್ವಾರ್ಥದಲ್ಲಿ ಯಕ್ ಬರುತ್ತದೆ ಸನಾಎಯಲ್ಲಿ ಯಕ್ ಸೇರಿರುವುದರಿಂದ **ಸನಾದ್ಯಂತಾ ಧಾತವಃ** ಎಂಬುದರಿಂದ ದುವಸ್ಯ ಎಂಬುದಕ್ಕೆ ಧಾತುಸಂಜ್ಞೆ ಬರುತ್ತದೆ ಲಟ್ ಪ್ರಥಮಪುರುಷ

ಬಹುವಚನದ ಝಿಗೆ **ಝೋಂತಃ** ಎಂಬುದರಿಂದ ಅಂತಾದೇಶ ಬರುತ್ತದೆ ಅಂತಿಪರದಲ್ಲಿರುವಾಗ **ಕರ್ತರಿ ಶಪ್** ಸೂತ್ರದಿಂದ ಶಪ್ **ಅತೋಗುಣೇ** ಎಂಬುದರಿಂದ ಪರರೂಪ. ಇಲ್ಲಿ ಯಕ್ಕಿನ ಸ್ವರವು ಸತಿಶಿಷ್ಟವಾಗುವುದರಿಂದ ಅದಕ್ಕೇ ಏಕಾದೇಶ ಬಂದಿರುವುದರಿಂದ ಸ್ಯ ಎಂಬಲ್ಲಿರುವ ಆಕಾರವು ಉದಾತ್ತವಾಗುತ್ತದೆ. ಪಾದದ ಆದಿಯಲ್ಲಿರುವುದರಿಂದ **ಆಷಾದಾದೌ** ಎಂದು ನಿಷೇಧಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ

ಅಹ್ರಯಾಣಮ್—ಹ್ರೀ ಲಜ್ಜಾಯಾಂ ಧಾತು ಜುಹೋತ್ಯಾದಿ **ವ್ಯತ್ಯಯೋ ಬಹುಲಂ** ಎಂಬುದರಿಂದ ನಿಮಿತ್ತವಿಲ್ಲದಿದ್ದರೂ ಶಾನಚ್ ಬರುತ್ತದೆ **ಬಹುಲಂ ಛಂದಸಿ** ಸೂತ್ರದಿಂದ ಶ್ಲು ವಿಕರಣ ಬರುವುದಿಲ್ಲ ಶಾನಚ್ ಪರದಲ್ಲಿರುವಾಗ ಧಾತುವಿಗೆ ಗುಣ ಗುಣದ ಏಕಾರಕ್ಕೆ ಅಯಾದೇಶ. ಛಾಂದಸವಾಗಿ ಮುಕಾಗಮ ಬಾರದಿರುವುದರಿಂದಲೇ ಹಿಂದಿನ ಕಾರ್ಯಗಳು ಬರುತ್ತವೆ ರೇಫದ ಪರದಲ್ಲಿರುವುದರಿಂದ ನಕಾರಕ್ಕೆ ಣತ್ವ ಹ್ರಿಯಾಣ ಎಂದು ರೂಪವಾಗುತ್ತದೆ ನಞ್ ಸಮಾಸವಾದಾಗ **ತತ್ಪುರುಷೇ ತುಲ್ಯಾರ್ಥ** ಸೂತ್ರದಿಂದ ಅವ್ಯಯಪೂರ್ವಪದ ಪ್ರಕೃತಿ ಸ್ವರ ಬರುತ್ತದೆ ಅಥವಾ ಪೂರ್ವೋಕ್ತವಾದ ಧಾತುವಿಗೆ **ಬಹುಲಂ ಛಂದಸಿ** ಎಂಬುದರಿಂದ ಶಪ್ ಪ್ರಾಪ್ತವಾಗಿ ಅದಕ್ಕೆ ಲುಕ್ ಬರುತ್ತದೆ. **ಛಂದಸ್ಯುಭಯಥಾ** (ಪಾ ಸೂ ೩-೪-೧೧೭) **ಎಂಬು**ದರಿಂದ ಶಾನಚಿಗೆ ಆರ್ಧಧಾತುಕ ಸಂಜ್ಞೆ ಇರುವುದರಿಂದ **ಸಾರ್ವಧಾತುಕಮಪಿತ್** ಸೂತ್ರದಿಂದ ಶಾನಚಿಗೆ ಙಿತ್ವ ಬರುವುದಿಲ್ಲ ತನ್ನಿಮಿತ್ತವಾಗಿ ಧಾತುವಿಗೆ ಗುಣಾಯಾದೇಶಗಳು ಬರುತ್ತವೆ ಅಜಂತವಾಗದಿರುವುದರಿಂದಲೇ ಮುಕಾಗಮ ಬರುವುದಿಲ್ಲ. ಸಮಾಸ ಮತ್ತು ಸ್ವರವು ಹಿಂದಿನಂತೆಯೇ ಬರುತ್ತವೆ ಯಾಸ್ಕರು ಈ ರೀತಿಯಾಗಿ ವಾಖ್ಯಾನಮಾಡಿರುತ್ತಾರೆ. **ಅಹ್ರಯಾಣೋಽಹ್ರೀತಯಾನಃ** (ನಿರು ೫-೧೫) ॥ ೧೦ ॥

॥ ಸಂಹಿತಾಪಾಠಃ ॥

ಸನಾಯುವೋ ನವಮಸಾ ನವ್ಯೋ ಅರ್ಕ್ಯೈರ್ವಸೂಯವೋ ಮ-
ತಯೋ ದಸ್ಮ ದದ್ರುಃ ।
ಪತಿಂ ನ ಪತ್ನೀರುಶತೀರುಶಂತಂ ಸ್ಪೃಶಂತಿ ತ್ವಾ ಶವಸಾ-
ವನ ತ್ಮನೀಷಾಃ ॥ ೧೧ ॥

॥ ಕವಷಾರಃ ॥

ಸ್ನಾ ೨ ಯುವಃ । ನಮಸಾ । ನವ್ಯಃ । ಅರ್ಕ್ಯಃ । ವಸು ೨ ಯವಃ । ಮತಯಃ । ದಸ್ಮ । ದದ್ರುಃ ।

ಪತಿಂ । ನ । ಪತ್ನೀಃ । ಉಶತೀಃ । ಉಶಂತಂ । ಸ್ಪೃಶಂತಿ । ತ್ವಾ । ಶವಸಾ ೨ ವನ್ । ಮನೀಷಾಃ ॥೧೧ ॥

॥ ಸಾಯಣಭಾಷ್ಯಂ ॥

ಹೇ ದಸ್ಮ ದರ್ಶನೀಯೇಂದ್ರ ಅರ್ಕ್ಯೈಃ ಶಸ್ತ್ರರೂಪೈರ್ಮಂತ್ರೈರ್ನಮಸಾ ನಮಸ್ಕಾರೇಣ ಯಸ್ತ್ವಂ ನವ್ಯಃ ಸ್ತುತ್ಯೋ ಭವಸಿ । ಸನಾಯುವಃ ಸನಾತನಮಗ್ನಿಹೋತ್ರಾದಿ ನಿತ್ಯಂ ಕರ್ಮಾತ್ಮನ ಇಚ್ಛಂತೋ ವಸೂಯವೋ ವಸು ಧನಮಾತ್ಮನ ಇಚ್ಛಂತೋ ಧನಕಾಮಾ ವಾ ಮತಯೋ ಮೇಧಾವಿನಸ್ತ್ವಾಂ ದದ್ರುಃ । ಬಹುನಾ ಪ್ರಯಾಸೇನ ಜಗ್ಮುಃ । ಹೇ ಶವಸಾವನ್ ಬಲವನ್ನಿಂದ್ರ ತೈಃ ಪ್ರಯುಕ್ತಾ ಮನೀಷಾಃ ಸ್ತುತಯಸ್ತ್ವಾಂ ತ್ವಾಂ ಸ್ಪೃಶಂತಿ । ಪ್ರಾಪ್ನುವಂತಿ । ತತ್ರ ದೃಷ್ಟಾಂತಃ ಉಶತೀರುಶತ್ಯಃ ಕಾಮಯಮಾನಾಃ ಪತ್ನೀಃ ಪತ್ನ್ಯ ಉಶಂತಂ ಕಾಮಯಮಾನಂ ಪತಿಂ ನ । ಯಥಾ ಪತಿಂ ಸಂಭಜಂತೇ ತದ್ವತ್ ॥ ಸನಾ ಯುವಃ । ಸನೇತ್ಯೇತದವ್ಯಯಂ ನಿತ್ಯತ್ವಮಾಚಷ್ಟೇ । ತೇನ ಚ ತದ್ವಾನ್ ಲಕ್ಷ್ಯತೇ । ಸನಾ ಸನಾತನಂ ಕರ್ಮಾತ್ಮನ ಇಚ್ಛಂತೀತಿ ಸನಾಯುವಃ । ಕ್ಯಾಚ್ಛಂದಸೀತ್ಯುಪ್ರತ್ಯಯಃ । ಜಸಿ ವರ್ಣವ್ಯತ್ಯಯೇನೋತ್ವಂ । ಮತಯಃ । ಮನಜ್ಞಾನೇ । ಮನ್ಯಂತ ಇತಿ ಮತಯಃ ಸ್ತೋತಾರಃ । ಕ್ತಿಚ್ಕೌ ಚ ಸಂಜ್ಞಾಯಾಮಿತಿ ಕ್ತಿಚ್ । ನ ಕ್ತಿಚೀ ದೀರ್ಘಶ್ಚೇತಿ ನಿಷೇಧೇ ಪ್ರಾಪ್ತೇ ಬಾಹುಲಕಾನನುದಾತ್ತೋಪದೇಶೇತ್ಯಾದಿನಾನು ನಾಸಿಕಲೋಪಃ । ಚಿತ್ತ್ವಾದಂತೋದಾತ್ತತ್ವಂ । ದದ್ರುಃ । ದ್ರಾ ಕುತ್ಸಾಯಾಂ ಗತೌ । ಲಿಟ್ಯಾತೋ ಲೋಪ ಇಟಿ ಚೇತ್ಯಾಕಾರಲೋಪಃ । ಉಶತೀಃ । ವಶ ಕಾಂತೌ । ಲಟಃ ಶತೃ । ಆದಾದಿತ್ವಾಚ್ಛಪೋಲುಕ್ । ಶತುರ್ಜಿತ್ವಾನ್ನದ್ಯಾಹಿಜ್ಯಾದಿನಾ ಸಂಪ್ರಸಾರಣಂ । ಉಗಿತಶ್ಚೇತಿ ಙೀಪ್ । ಶತುರನುಮ ಇತಿ ನದ್ಯಾ ಉದಾತ್ತತ್ವಂ । ನಾ ಛಂದಸೀತಿ ಪೂರ್ವಸವರ್ಣದೀರ್ಘಃ । ಶವಸಾವನ್ । ಮತುಪ್ಯಾಕಾರೋಪಜನ ಶ್ಛಾಂದಸಃ । ಯದ್ವಾ । ಮತ್ಕರ್ತೃಕೇಯಂ ಅವನಿಪ್ ॥

॥ ಕನ್ನಡಾರ್ಥ ॥

ದಸ್ಮ— ಸುಂದರನಾದ ಇಂದ್ರನೇ (ನೀನು) । **ಅರ್ಕ್ಯೈಃ**—(ಶಸ್ತ್ರರೂಪ) ಮಂತ್ರಗಳಿಂದಲೂ । **ನಮಸಾ**— ನಮಸ್ಕಾರದಿಂದಲೂ । **ನವ್ಯಃ**—ಸ್ತುತ್ಯನು । **ಸನಾಯುವಃ**—ಸನಾತನವಾದ (ಅಗ್ನಿಹೋತ್ರಾದಿ) ಕರ್ಮಗಳನ್ನು ಇಚ್ಛಿಸುವ । **ವಸೂಯವಃ** ಧನಕಾಮರಾದ । **ಮತಯಃ**—ಮೇಧಾವಿಗಳು । **ದದ್ರುಃ**- ಬಹಳ ಪ್ರಯಾಸದಿಂದ (ನಿನ್ನನ್ನು) ಪ್ರಾಪ್ತರಾದರು । **ಶವಸಾವನ್**—ಬಲಿಷ್ಠನಾದ ಇಂದ್ರನೇ । **ಮನೀಷಾಃ**—

ಸ್ತೋತ್ರಗಳು । **ತ್ವಾ**—ನಿನ್ನನ್ನು । **ಉಶತೀಃ**—ಪ್ರೀತಿಪಾತ್ರರಾದ । **ಪತ್ನೀಃ**—ಪತ್ನಿಯರು । **ಉಶಂತಂ**—ಪ್ರೇಮಿಯಾದ । **ಪತಿಂ ನ**—ಪತಿಯನ್ನು ಹೇಗೋ ಹಾಗೆ । **ಸ್ಪೃಶಂತಿ**—ಹೊಂದುತ್ತವೆ.

॥ ಭಾವಾರ್ಥ ॥

ಸುಂದರಾಕೃತಿಯುಳ್ಳ ಇಂದ್ರನೇ, ನೀನು ಸ್ತುತಿವಾಕ್ಯಗಳಿಂದಲೂ ನಮಸ್ಕಾರಗಳಿಂದಲೂ ಪ್ರಾಪ್ಯನು ಅಗ್ನಿ ಹೋತ್ರಾದಿಕರ್ಮಗಳನ್ನು ಮಾಡಲು ಇಚ್ಛಿಸುವ ಮತ್ತು ಧನಾದಿಗಳನ್ನು ಅಪೇಕ್ಷಿಸುವ ಮೇಧಾವಿಗಳು ಬಹಳ ಪ್ರಯಾಸದಿಂದ ನಿನ್ನನ್ನು ಒಲಿಸಿಕೊಳ್ಳುತ್ತಾರೆ ಅವರ ಸ್ತುತಿವಾಕ್ಯಗಳು, ಪತಿಪ್ರೀತಿಪಾತ್ರಳಾದ ಪತ್ನಿಯು ಪ್ರೇಮಿಯಾದ ಪತಿಯನ್ನು ಹೇಗೆ ಹೊಂದುತ್ತಾಳೋ ಹಾಗೆ ನಿನ್ನನ್ನು ಸೇರುತ್ತವೆ

English Translation.

O beautiful Indra, you are to be praised with holy hymns; the pious who are desirous of holy rites, those who are anxious for riches and those who are wise approach you with veneration; O powerful Indra, their minds adhere to you as affectionate wives to a loving husband.

॥ ವಿಶೇಷವಿಷಯಗಳು ॥

ಸನಾಯುವಃ—ಸನೇತ್ಯೇದದವ್ಯಯಂ ನಿತ್ಯತ್ವಮಾಚಷ್ಟೇ । ಸನಾ ಸನಾತನಂ ಕರ್ಮಾತ್ಮನ ಇಚ್ಛಂತೀತಿ ಸನಾಯುವಃ । ಸನಾ ಎಂಬ ಶಬ್ದವು ಅವ್ಯಯವು ಇದು ನಿತ್ಯನೆಂಬ ಅರ್ಥವನ್ನು ಸೂಚಿಸುವುದು. ಆದುದರಿಂದ ಸನಾ ಎಂದರೆ ನಿತ್ಯವಾದ ಸನಾತನಕರ್ಮಗಳನ್ನು ಅಥವಾ ಯಜ್ಞಾದಿಕರ್ಮಗಳನ್ನು ಯುವಃ- ಮಾಡಲಪೇಕ್ಷಿಸುವ ಜನರು ಎಂದರ್ಥವು

ನವ್ಯಃ—ಸ್ತುತ್ಯಃ । ಸ್ತುತ್ಯನು, ಸ್ತುತಿಸಲ್ಪಡಲು ಆರ್ಹನು.

ಅರ್ಕೈಃ—ಶಸ್ತ್ರರೂಪವಾದ ವೇದಮಂತ್ರಗಳಿಂದ

ವಸೂಯವಃ—ಧನವನ್ನು ಇಚ್ಛಿಸುವವರು

ಮತಯಃ—ಮೇಧಾವಿನಃ । ಬುದ್ಧಿವಂತರಾದ ಜನರು, ವಿವೇಕಿಗಳು.

ದದ್ರುಃ—ದ್ರಾ ಕುತ್ಸಾಯಾಂ ಗತೌ । ಹೊಂದಿದರು ಅಥವಾ ನಿನ್ನ ಸಮೀಪಕ್ಕೆ ಬಂದರು ಅಥವಾ ಬರುವರು.

ಶವಸಾವನ್—ಶವಃ ಎಂದರೆ ಬಲವು. (ನಿ ೯-೧) ಶವಸಾವನ್ ಬಲವುಳ್ಳವನು ಇದು ಸಂಬುದ್ಧಿ ಪ್ರಥಮೈಕವಚನವು.

ಉಶತೀಃ ಉಶಂತಂ ವಶ ಕಾಂತೌ । ಉಶತ್ಯಃ ಕಾಮಯಮಾನಾಃ ಪತ್ನ್ಯಃ । ಉಶಂತಂ ಕಾಮಯಮಾನಂ ಪತಿಮಿವ । ಪತಿಯನ್ನು ಪ್ರೀತಿಸುವ ಪತ್ನಿಯು ತನ್ನನ್ನು ಪ್ರೀತಿಸುವ ಪತಿಯು ಸಮೀಪಕ್ಕೆ ಹೋಗುವಂತೆ ಇಲ್ಲಿ ಉಶತೀಃ ಎಂಬ ಶಬ್ದವು ಪತ್ನೀಃ ಎಂಬ ಶಬ್ದಕ್ಕೂ ಉಶಂತಂ ಎಂಬ ಶಬ್ದವು ಪತಿಂ ಎಂಬ ಶಬ್ದಕ್ಕೂ ವಿಶೇಷಣಗಳು

ಸ್ಪೃಶಂತಿ ಪ್ರಾಪ್ನುವಂತಿ । ಸ್ಪೃಶ ಸ್ಪರ್ಶನೇ । ಹೋಗುವರು, ಹೊಂದುವರು

ಮನೀಷಾಃ -ಸ್ತುತಯಃ । ಮನೀಷಯಾ ಮನಸ ಈಷಯಾ ಸ್ತುತ್ಯಾ ಪ್ರಜ್ಞಯಾ ವಾ (ನಿ ೨-೫೫) ಎಂದು ನಿರುಕ್ತನಚನವಿರುವುದರಿಂದ ಮನೀಷಾಃ ಎಂದರೆ ಸ್ತುತಿಗಳು, ಸ್ತೋತ್ರಗಳು ಎಂದರ್ಥವು

॥ ವ್ಯಾಕರಣಪ್ರಕ್ರಿಯಾ ॥

ಸನಾಯುವಃ -ಸನಾ ಎಂಬುದು ಒಂದು ಅವ್ಯಯ ಇದು ನಿತ್ಯಸ್ವರೂಪಾರ್ಥವನ್ನು ಬೋಧಿಸುತ್ತದೆ ಇದರಿಂದ ಲಕ್ಷಣಾವೃತ್ತಿಯಿಂದ ನಿತ್ಯತ್ವವುಳ್ಳದ್ದು ಎಂದು ಬೋಧಿತವಾಗುತ್ತದೆ ಸನಾ ಸನಾತನಂ ಕರ್ಮ ಆತ್ಮನ ಇಚ್ಛತಿ ಎಂಬರ್ಥದಲ್ಲಿ **ಸುಪ ಆತ್ಮನಃ ಕ್ಯಚ್** ಎಂಬುದರಿಂದ ಕ್ಯಚ್ ಬರುತ್ತದೆ ಸನಾಯ ಎಂಬುದು **ಸನಾದ್ಯಂತಾಧಾತವಃ** ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ ಇದರಿಂದಲೇ **ಕ್ಯಾಚ್ಛಂದಸಿ** (ವಾ. ಸೂ ೩-೧ ೮೭೦) ಎಂಬುದರಿಂದ ಉಸ್ಪ್ರತ್ಯಯ **ಅತೋಲೋಪಃ** ಸೂತ್ರದಿಂದ ಕ್ಯಚ್ಚಿನ ಅಕಾರಕ್ಕೆ ಲೋಪ ಸನಾಯು ಶಬ್ದವಾಗುತ್ತದೆ ಜಸ್ಸಿನಲ್ಲಿ **ಜಸಿಚ** ಎಂಬುದರಿಂದ ಉಕಾರಕ್ಕೆ ಗುಣಾವಾದೇಶಗಳು ಬಂದರೆ ಸಕಾರಕ್ಕೆ ರುತ್ವ ವಿಸರ್ಗಗಳಿಂದ ಸನಾಯವಃ ಎಂದು ರೂಪವಾಗುತ್ತದೆ ಅವಾದೇಶದ ಅಕಾರಕ್ಕೆ ಉಕಾರವು ಛಾಂದಸವಾಗಿ ಬರುತ್ತದೆ. ಉ ಪ್ರತ್ಯಯಸ್ವರ ಒರುತ್ತದೆ

ವಸೂಯವಃ -ಹಿಂದಿನಂತೇ ಪ್ರಕ್ರಿಯಾ ವಸು ಆತ್ಮನಃ ಇಚ್ಛಂತಿ ವಸೂಯಂತಿ **ಕ್ಯಚಿ ಚ** ಎಂಬುದರಿಂದ ಪೂರ್ವಕ್ಕೆ ದೀರ್ಘ ವಸೂಯಂತಿ ಇತಿ ವಸೂಯವಃ ಉ ಪ್ರತ್ಯಯ ಗುಣ, ಅವಾದೇಶ ಹಿಂದಿನಂತೆ ಸ್ವರ

ಮತಯಃ ಮನ ಜ್ಞಾನೇ ಧಾತು ಮನ್ಯಂತೇ ಇತಿ ಮತಯಃ ಸ್ತೋತಾರಃ ಈ ಧಾತುವಿಗೆ **ಕ್ತಿಚ್ಕ್ತೌಚ ಸಂಜ್ಞಾಯಾಂ** (ಪಾ. ಸೂ ೩-೩-೧೭೪) ಎಂಬುದರಿಂದ ಸಂಜ್ಞಾತೋರುವಾಗ ಕ್ತಿಚ್ ಪ್ರತ್ಯಯಃ **ನಕ್ತಿಚಿ ದೀರ್ಘಶ್ಚ** (ಪಾ ಸೂ ೬-೪-೩೯) ಎಂಬುದರಿಂದ ನಿಷೇಧವು ಪ್ರಾಪ್ತವಾದರೂ ಬಹುಲಗ್ರಹಣದಿಂದ **ಅನುದಾತ್ತೋಪದೇಶವನತಿ**-ಸೂತ್ರದಿಂದ ಮನು ಧಾತುವಿನ ನಕಾರಕ್ಕೆ ಲೋಪ ಬರುತ್ತದೆ ಕ್ತಿಚ್ ಚಿತ್ತಾದುದರಿಂದ **ಚಿತಃ** ಸೂತ್ರದಿಂದ ಅಂತೋದಾತ್ತಸ್ವರ ಬರುತ್ತದೆ ಮತಿ ಶಬ್ದಕ್ಕೆ ಜಸ್ ಪರದಲ್ಲಿರುವಾಗ **ಜಸಿಚ** ಸೂತ್ರದಿಂದ ಗುಣಾಯಾದೇಶಗಳು ಬಂದಾಗ ಮತಯಃ ಎಂದು ರೂಪವಾಗುತ್ತದೆ

ದದ್ರುಃ—ದ್ರಾ ಕುತ್ಸಾಯಾಂ ಗತೌ ಧಾತು. ಲಿಟ್ ಪ್ರಥಮಸ್ಪರುಷ ಬಹುವಚನದ ಝಿಗೆ **ಪರಸ್ಮೈಪದಾನಾಂ**—ಸೂತ್ರದಿಂದ ಉಸಾದೇಶ ಲಿನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ ದದ್ರಾ-ಉಸ್ ಎಂದಿರುವಾಗ **ಆತೋಲೋಪ ಇಟಿಚ** (ಪಾ. ಸೂ. ೬-೪-೬೪) ಎಂಬುದರಿಂದ ಆಕಾರಲೋಪ. ಪ್ರತ್ಯಯ

ಸಕಾರಕ್ಕೆ ರುತ್ವವಿಸರ್ಗಗಳು ಬಂದರೆ ದದ್ರುಃ ಎಂದು ರೂಪವಾಗುತ್ತದೆ ಅತಿಜಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ.

ಉಶತೀಃ - ವಶ ಕಾಂತೌ ಧಾತು ಕಾಂತಿಯೆಂದರೆ ಇಚ್ಛಾ ಲಡರ್ಥದಲ್ಲಿ **ಲಟಃ ಶತೃಶಾನಚಾ**–ಸೂತ್ರದಿಂದ ಶತೃಪ್ರತ್ಯಯ. ಅದಾದಿಯಾದುದರಿಂದ **ಅದಿಪ್ರಭೃತಿಭ್ಯಃ ಶಪಃ** ಸೂತ್ರದಿಂದ ಶಪಿಗೆ ಲುಕ್ **ಸಾರ್ವಧಾತುಕಮಪಿತ್** ಎಂಬುದರಿಂದ ಶತೃ ಙಿತ್ತಾದುದರಿಂದ **ಗ್ರಹಿಜ್ಯಾವಯಿ**—(ಪಾ ಸೂ ೬-೧-೧೬) ಸೂತ್ರದಿಂದ ಸಂಪ್ರಸಾರಣ ಬರುತ್ತದೆ **ಸಂಪ್ರಸಾರಣಾಚ್ಚ** ಸೂತ್ರದಿಂದ ಪೂರ್ವರೂಪ ಉಶತ್ ಶಬ್ದವಾಗುತ್ತವ ಸ್ತ್ರೀತ್ವದಲ್ಲಿ ಶತೃ ಙಿತ್ತಾದುದರಿಂದ **ಉಗಿತಶ್ಚ** ಎಂಬುದರಿಂದ ಙೀಪ್ ಬರುತ್ತದೆ ಉಶತೀ ಶಬ್ದಕ್ಕೆ ಶಸ್ ಪರದಲ್ಲಿರುವಾಗ **ವಾಛಂದಸಿ** ಸೂತ್ರದಿಂದ ಪೂರ್ವಸವರ್ಣದೀರ್ಘ ಬಂದರೆ ಉಶತೀಃ ಎಂದು ರೂಪವಾಗುತ್ತದೆ **ಶತರನುನೋನದ್ಯಜಾದೀ**-(ಪಾ. ಸೂ ೬-೧-೧೭೩) ಎಂಬುದರಿಂದ ನುಮಾಗಮ ಇಲ್ಲಿ ಬಾರದಿರುವುದರಿಂದ ನದಿಗೆ (ಈಗೆ) ಉದಾತ್ತಸ್ವರ ಬರುತ್ತದೆ

ಸ್ಪೃಶಂತಿ—ಸ್ಪೃಶ ಸಂಸ್ಪರ್ಶನೇ ಧಾತು ತುದಾದಿ ಲಟ್ ಪ್ರಥಮಪುರುಷ ಬಹುವಚನದಲ್ಲಿ ಉಕ್ತರೂಪವಾಗುತ್ತದೆ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ವಿಕರಣಸ್ವರ ಬರುತ್ತದೆ

ಶವಸಾವನ್—ಶವಃ ಬಲಂ ಅಸ್ಯಾಸ್ತೀತಿ ಎಂಬರ್ಥದಲ್ಲಿ ಮತುಪ್ ಪ್ರತ್ಯಯ ಸಕಾರೋತ್ತರಾಕಾರವು ಛಾಂದಸವಾಗಿ ಬರುತ್ತದೆ. ಆಕಾರದ ಪರದಲ್ಲಿರುವುದರಿಂದ **ಮಾದುಪಧಾಯಾ**—ಸೂತ್ರದಿಂದ ಮತುಪ್ಪಿನ ಮಕಾರಕ್ಕೆ ವಕಾರಾದೇಶ ಸಂಬುದ್ಧಿಯಲ್ಲಿ ಶವಸಾವನ್ ಎಂದು ರೂಪವಾಗುತ್ತದೆ. ಅಥವಾ ಶವಸ್ ಶಬ್ದದ ಮೇಲೆ ಮತ್ವರ್ಥದಲ್ಲಿ ಆವನಿಪ್ ಪ್ರತ್ಯಯ ಹಿಂದಿನಂತೆಯೇ ರೂಪವಾಗುತ್ತದೆ **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೧೧ ॥

॥ ಸಂಹಿತಾಪಾಠಃ ॥

ಸನಾದೇವ ತವ ರಾಯೋ ಗಭಸ್ತೌ ನ ಕ್ಷೀಯಂತೇ ನೋಪ ದಸ್ಯಂತಿ ದಸ್ಮ ।
ದ್ಯುಮೌ ಅಸಿ ಕ್ರತುಮೌ ಇಂದ್ರ ಧೀರಃ ಶಿಕ್ಷಾ ಶಚೀವಸ್ತವ ನಃ ಶಚೀಭಿಃ ॥ ೧೨ ॥

॥ ಸಪದಪಾಠ ॥

ಸನಾತ್ । ಏವ । ತವ । ರಾಯಃ । ಗಭಸ್ತೌ । ನ । ಕ್ಷೀಯಂತೇ । ನ । ಉಪ । ದಸ್ಯಂತಿ । ದಸ್ಮ ।

ದ್ಯುಮಾನ್ । ಅಸಿ । ಕ್ರತುಮಾನ್ । ಇಂದ್ರ । ಧೀರಃ । ತಿಕ್ಷ । ಶಚೀವಃ ।

ತವ । ನಃ । ಶಚೀಭಿಃ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ದಸ್ಮ ದರ್ಶನೀಯೇಂದ್ರ । ಗಭಸ್ತಿರಿತಿ ಬಾಹುನಾಮ । ತವ ಗಭಸ್ತೌ ಹಸ್ತೇ ಸನಾದೇವ ಚಿರಕಾಲಾದಾರಭ್ಯ ಸ್ಥಿತಾನಿ ರಾಯೋ ಧನಾನಿ ನ ಕ್ಷೀಯಂತೇ । ನ ಏನಶ್ಯಂತಿ । ನೋಪ ದಸ್ಯಂತಿ ಚ । ಸ್ತೋತೃಭ್ಯೋ ದತ್ತೇಽಪಿ ತ್ವದ್ಧಸ್ತಗತಂ ಧನಮುಪಕ್ಷಯಂ ನ ಪ್ರಾಪ್ನೋತಿ । ಅಸಿ ತು ವರ್ಧತೇ । ಹೇ ಇಂದ್ರ ಧೀರೋ ಬುದ್ಧಿಮಾನ್ ಧೃಷ್ಣೋ ವಾ ತ್ವಂ ದ್ಯುಮಾನ್ ದೀಪ್ತಿಮಾನಸಿ । ತಥಾ ಕ್ರತುಮಾನ್ ಲೋಕರಕ್ಷಣಹೇತುಭೂತಕರ್ಮಯುಕ್ತೋಽಸಿ । ಹೇ ಶಚೀವಃ ಕರ್ಮವನ್ನಿಂದ್ರ ತವ ಶಚೀಭಿಸ್ತ್ವದೀಯೈಃ ಕರ್ಮಭಿರ್ನೋಽಸ್ಮಭ್ಯಂ ಧನಂ ತಿಕ್ಷ । ದೇಹಿ । ತಿಕ್ಷತಿರ್ದಾನಕರ್ಮಾ ॥ ಕ್ಷೀಯಂತೇ । ಕ್ಷೀಙ್ ಹಿಂಸಾಯಾಂ । ಅಸ್ಮಾತ್ಕರ್ಮಕರ್ತರಿ ಕರ್ಮವದ್ಭಾವಾದ್ಯಗಾತ್ಮನೇಪದೇ । ಪತ್ಕರಣಂ ಸ್ವಾಶ್ರಯಮಪಿ ಯಥಾ ಸ್ಯಾದಿತಿ ಕರ್ತೃವದ್ಭಾವಾದಚಃ ಕರ್ತ್ರರ್ಥಕೇ । ಪಾ. ೬-೧-೧೯೫ । ಇತ್ಯಾದ್ಯುದಾತ್ತತ್ವಂ । ಚಾದಿಲೋಪೇ ವಿಭಾಷೇತಿ ನಿಘಾತಪ್ರತಿಷೇಧಃ । ಶಚೀವಃ । ಶಚ್ಯಸ್ಯಾಸ್ತೀತಿ ಶಚೀವಾನ್ । ಭಂವನೀರಃ ಇತಿ ಮತುಪೋ ವತ್ವಂ । ಸಂಬುದ್ಧೌ ಮತುವಸೋ ರುರಿತಿ ನಕಾರಸ್ಯ ರುತ್ವಂ ॥

॥ ಪ್ರತಿಪದಾರ್ಥ ॥

ದಸ್ಮ– ದರ್ಶನೀಯನಾದ ಇಂದ್ರನೇ । **ತವ**—ನಿನ್ನ । **ಗಭಸ್ತೌ**—ಕೈಯಲ್ಲಿ । **ಸನಾದೇವ**—ಅನಾದಿಕಾಲದಿಂದಲೂ (ಇರುವ) । **ರಾಯಃ**—ದ್ರವ್ಯವು । **ನ ಕ್ಷೀಯಂತೇ**—ನಾಶವಾಗುವುದಿಲ್ಲ । **ನ ಉಪ ದಸ್ಯಂತಿ**—ಸ್ತೋತೃಗಳಿಗೆ ಕೊಟ್ಟಾಗ್ಯೂ ಕಡಿಮೆಯಾಗುವುದಿಲ್ಲ । **ಹೇ ಇಂದ್ರ**—ಎಲೈ ಇಂದ್ರನೇ । **ಧೀರಃ**—ಬುದ್ಧಿಯುಕ್ತನಾದ ಅಥವಾ ಧೀರನಾದ (ಶೂರ) । **ದ್ಯುಮಾನ್**—ಪ್ರಕಾಶಯುಕ್ತನೂ । **ಕ್ರತುಮಾನ್**—(ಲೋಕರಕ್ಷಕವಾದ) ಕರ್ಮಗಳುಳ್ಳವನೂ (ಆಗಿದ್ದೀಯೆ) । **ಶಚೀವಃ**—ಕರ್ಮಿಷ್ಠನಾದ ಇಂದ್ರನೇ । **ತವ**—ನಿನ್ನ । **ಶಚೀಭಿಃ**—ಕರ್ಮಗಳಿಂದ । **ನಃ**—ನಮಗೆ । **ತಿಕ್ಷ**—(ಧನವನ್ನು) ಕೊಡು ॥

॥ ಭಾವಾರ್ಥ ॥

ಇಂದ್ರನೇ ನೀನು ಧೀರನು, ತೇಜಸ್ವಿಯು, ಲೋಕರಕ್ಷಣಾರ್ಥವಾಗಿಯೇ ಕರ್ಮಗಳನ್ನು ಮಾಡತಕ್ಕವನು. ನಿನ್ನ ಹಸ್ತದಲ್ಲಿ ಅನಾದಿಕಾಲದಿಂದಲೂ ಇರುವ ದ್ರವ್ಯವು ನಾಶವಾಗುವುದಿಲ್ಲ ಅಥವಾ ನಿನ್ನನ್ನು ಸ್ತುತಿಸುವವರಿಗೆ ದಾನಮಾಡಿದರೂ ಕಡಿಮೆಯಾಗುವುದಿಲ್ಲ ಆದುದರಿಂದ ನೀನು ನಮಗೆ ಧನವನ್ನು ಕೊಡು

English Translation

O beautiful Indra, the riches that have long been held in your hands do not diminish, nor do they perish; Indra, you are illustrious, wise, diligent of action; doer of good deeds, enrich us by your acts

॥ ವಿಶೇಷವಿಷಯಗಳು ॥

ಸನಾತ್ ಏವ—ಬಹಳ ಹಿಂದಿನಕಾಲದಿಂದಲೂ, ಎಂದರೆ ಯಾವಾಗಲೂ

ರಾಯಃ—ರಯಿಃ ರಾಯಃ (ನಿ ೩-೯) ಧನಗಳು

ಗಭಸ್ತ್ಯೋ- ಆಯತೀ ಚ್ಯವಾನಾ ಮೊದಲಾದ ಹನ್ನೆರಡು ಬಾಹುನಾಮಗಳ ಮಧ್ಯದಲ್ಲಿ ಗಭಸ್ತಿಶಬ್ದವು ಪಠಿತವಾಗಿರುವುದರಿಂದ ಗಭಸ್ತೌ ಎಂದರೆ ಬಾಹುವಿನಲ್ಲಿ. ಹಸ್ತದಲ್ಲಿ, ಕೈಯಲ್ಲಿ

ನ ಕ್ಷೀಯಂತೇ ನೋಪ ದಸ್ಯಂತಿ--ನಾಶವಾಗುವುದೂ ಇಲ್ಲ ಕಡಿಮೆಯಾಗುವುದೂ ಇಲ್ಲ ಮತ್ತು ಅಭಿವೃದ್ಧಿಯಾಗುವುದು ಎಂದಭಿಪ್ರಾಯವು.

ದ್ಯುಮಾನ್—ದೀಪ್ತಿಮಾನ್ । ಪ್ರಕಾಶವುಳ್ಳವನು ಎಂದರೆ ಮಹಿಮಾನ್ವಿತನು, ಪ್ರಸಿದ್ಧನು.

ಕ್ರತುಮಾನ್—ಕ್ರತುವೆಂದರೆ ಕರ್ಮ (ನಿ ೩ ೧) ಅನೇಕ ಸಾಹಸ ಕರ್ಮಗಳುಳ್ಳವನು, ಸ್ತೋತ್ರಮಾಡುವವರಿಗೆ ಫಲರೂಪವಾದ ಕರ್ಮಗಳನ್ನು ಕೊಡುವವನು

ಶಚೀವಃ, ಶಚೀಭಿಃ--ಶಚೀ ಎಂದರೆ ಕರ್ಮ (ನಿ ೩-೧) ಶಚೀವಃ ಎಂದರೆ **ಶಚ್ಯೈಸ್ಯಾಸ್ತೀತಿ ಶಚೀವಾನ್** । ಕರ್ಮಗಳುಳ್ಳವನು ಎಂದರೆ ಶತ್ರುವಧಾದಿಕರ್ಮಗಳನ್ನು ಮಾಡುವವನು, ಶಚೀಭಿಃ ಎಂದರೆ ಕರ್ಮಗಳಿಂದ, ಸಾಹಸಕೃತ್ಯಗಳಿಂದ

॥ ವ್ಯಾಕರಣಪ್ರಕ್ರಿಯಾ ॥

ರಾಯಃ--ರೈ ಶಬ್ದ ಜಸ್ ಪರದಲ್ಲಿರುವಾಗ ಆಯಾದೇಶ ಸಕಾರಕ್ಕೆ ರುತ್ವವಿಸರ್ಗ ರಾಯಃ ಎಂಬ ರೂಪವಾಗುತ್ತದೆ

ಕ್ಷೀಯಂತೇ—ಕ್ಷೀಞ್ ಹಿಂಸಾಯಾಂ ಧಾತು ಇದಕ್ಕೆ ಕರ್ಮಕರ್ತರಿಯಲ್ಲಿ ಲಟ್ (ಕರ್ಮಕ್ಕೆ ಸ್ವವ್ಯಾಪಾರದಲ್ಲಿ ಪ್ರಾಧಾನ್ಯವಿವಕ್ಷಾಮಾಡಿದಾಗ ಕರ್ತೃತ್ವವಿರುವುದರಿಂದ ಕರ್ಮವೇ ಕರ್ತೃವಾಗುತ್ತದೆ. ಕರ್ಮ

ಕರ್ತರಿಯಲ್ಲಿ ಕರ್ಮವದ್ಭಾವ ಹೇಳಿರುವುದರಿಂದ **ಆತ್ಮನೇಪದಪ್ರತ್ಯಯ** ಒರುತ್ತದೆ **ಸಾರ್ವಧಾತುಕೇ ಯಕ್** ಎಂಬುದರಿಂದ ಯಕ್ **ಲ್ಯೋಂತಃ** ಸೂತ್ರದಿಂದ ಪ್ರತ್ಯಯಕ್ಕೆ ಅಂತಾದೇಶ　ಪ್ಲೇಯಂತೇ ಎಂದು ರೂಪವಾಗುತ್ತದೆ **ಕರ್ಮವತ್ ಕರ್ಮಣಾ** ಸೂತ್ರದಲ್ಲಿ **ವತ್ಕರಣಂ ಸ್ವಾಶ್ರಯೇಮಪಿ ಯಥಾಸ್ಯಾತ್** (ಕಾ ೩-೧-೮೬) ಎಂಬುದರಿಂದ ಕರ್ತೃವದ್ಭಾವವೂ ಇರುವುದರಿಂದ **ಅಚಃ ಕರ್ತೃಯಕಿ** (ಪಾ ಸೂ ೬-೧-೧೯೫) ಎಂಬ ಸೂತ್ರದಿಂದ ಆದ್ಯುದಾತ್ತ ಸ್ವರ ಬರುತ್ತದೆ **ಚಾದಿಲೋಪೇ ವಿಭಾಷಾ** (ವಾ ಸೂ ೮-೧-೬೩) ಎಂಬುದರಿಂದ ಹಿಂದೆ ಚಾದಿಯಲ್ಲಿರುವ ಸಶಬ್ದದ ಯೋಗವಿರುವುದರಿಂದ ನಿಘಾತಪ್ರತಿಷೇಧ ಒರುತ್ತದೆ

ದಸ್ಯಂತಿ—ದಸು ಉಪಕ್ಷಯೇ ಧಾತು　ದಿವಾದಿ **ಲ್ಯೋಂತಃ** ಸೂತ್ರದಿಂದ ಲಿಟ್ಟಿನ ಯಿಗೆ ಅಂತಾದೇಶ **ದಿವಾದಿಭ್ಯಃ ಶ್ಯನ್** ಸೂತ್ರದಿಂದ ಶ್ಯನ್ ವಿಕರಣ **ಆತೋಗುಣೇ** ಸೂತ್ರದಿಂದ ಸರರೂಪ　ದಸ್ಯಂತಿ ಎಂದು ರೂಪವಾಗುತ್ತದೆ　ಅತಿಜಂತದ ಸರದಲ್ಲಿರುವುದರಿಂದ ನಿಘಾತಸ್ವರ ಬರುತ್ತದ

ತಿಕ್ಷ—ತಿಕ್ಷ ವಿದ್ಯೋಪಾದಾನೇ ಧಾತು ಇಲ್ಲಿ ದಾನಕ್ರಿಯಾದಲ್ಲಿ ಸ್ವೀಕೃತವಾಗಿದೆ　ಲೋಣ್ಮ್ಯಧ್ಯಮಪುರುಷ ಏಕವಚನದಲ್ಲಿ ತಿಕ್ಷ ಎಂದು ರೂಪವಾಗುತ್ತದೆ　ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ　ಧಾತು ಸ್ವರದಿಂದ ಆದ್ಯುದಾತ್ತವಾಗುತ್ತದೆ **ದ್ವ್ಯಚೋ೭ತಸ್ತಿಙಃ** ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದ

ಶಚೀವಃ—ಶಚೀ ಅಸ್ಯಾಸ್ತೀತಿ ಶಚೀವಾನ್ **ತದಸ್ಯಾಸ್ತಿ**—ಸೂತ್ರದಿಂದ ಮತುಪ್ **ಛಂದಸೀರಃ** ಎಂಬುದರಿಂದ ವ ತುಪಿನ ವಕಾರಕ್ಕೆ ವತ್ಪ ಶಚೀವತ್ ಶಬ್ದವಾಗುತ್ತದೆ　ಸಂಬುದ್ಧಿಯಲ್ಲಿ **ಮತುವಸೋರುಃ ಸಂಬುದ್ಧೌ** ಎಂಬುದರಿಂದ ನಕಾರಕ್ಕೆ ರುತ್ಪ ಬರುತ್ತದೆ　ಶಚೀವರ್ ಎಂದಿರುವಾಗ **ಖರವಸಾನ**—ಸೂತ್ರದಿಂದ ವಿಸರ್ಗ **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ದ್ಯುಮ್ಞ ಆಸಿ—ದ್ಯುಮಾನ್+ಆಸಿ ಎಂದಿರುವಾಗ **ದೀರ್ಘಾದಟಿ ಸಮಾನಪಾದೇ** (ಪಾ ಸೂ ೮-೩-೯) ಎಂಬುದರಿಂದ ಹಿಂದೆ ನಕಾರಕ್ಕೆ ರುತ್ಪ ಬರುತ್ತದೆ **ಅತೋಟಿ ನಿತ್ಯಂ** ಎಂಬುದರಿಂದ ಹಿಂದೆ ಇರುವ ಆಕಾರಕ್ಕೆ ನಿತ್ಯವಾಗಿ ಅನುನಾಸಿಕಪ್ಲುತ ಒರುತ್ತದೆ　॥ ೧೩ ॥

॥ ಸಂಹಿತಾಸ್ವರಃ

ಸನಾಯತೇ ಗೋತಮ ಇಂದ್ರ ನವ್ಯಮತಕ್ಷದ್ಬ್ರಹ್ಮ ಹರಿಯೋ-
ಜನಾಯ ।
ಸುನೀಥಾಯ ನಃ ಶವಸಾನ ನೋಧಾಃ ಪ್ರಾತರ್ಮಕ್ಷೂ ಧಿಯಾ-
ವಸುರ್ಜಗಮ್ಯಾತ್ ॥ ೧೩ ॥

॥ ಪದಪಾಠಃ ॥

ಸನಾ ೩ ಯತೇ । ಗೋತಮಃ । ಇಂದ್ರ । ನವ್ಯಂ । ಅತಕ್ಷತ್ । ಬ್ರಹ್ಮ । ಹರಿ ೩ -
ಯೋಜನಾಯ ।
ಸು ೩ ನೀಥಾಯ । ನಃ । ಶವಸಾನ । ನೋಧಾಃ । ಪ್ರಾತಃ । ಮಕ್ಷು । ಧಿಯಾ ೩ -
ವಸುಃ । ಜಗಮ್ಯಾತ್ ॥ ೧೩ ॥

॥ ಸಾಯಣಭಾಷ್ಯಂ ॥

ಸ ಇಂದ್ರಃ ಸನಾಯತೇ । ನಿತ್ಯ ಇವಾಚರತಿ । ಸರ್ವೇಷಾಮಾದ್ಯೋ ಭವತಿ । ಹೇ ಶವಸಾನ ಬಲವನ್ನಿಂದ್ರ ಹರಿಯೋಜನಾಯ । ಹರೀ ಅಶ್ವೌ ರಥೇ ಯೋಜಯತೀತಿ ಹರಿಯೋಜನಃ । ಸುನೀಥಾಯ ಸುಷ್ಠು ನೇತ್ರೇ । ಏವಂಭೂತಾಯ ತಸ್ಮೈ ತುಭ್ಯಂ ಗೋಮತೋ ಗೋತಮಸ್ಯ ಋಷೇಃ ಪುತ್ರೋ ನೋಧಾ ಋಷಿರ್ನವ್ಯಂ ನೂತನಂ ಬ್ರಹ್ಮೈತತ್ಸೂಕ್ತರೂಪಂ ಸ್ತೋತ್ರಂ ನೋ ೩ ಸ್ಮದರ್ಥಮತಕ್ಷತ್ । ಅಕರೋತ್ । ಅತೋ ೩ ಸ್ಮಾಭರನೇನ ಸ್ತೋತ್ರೇಣ ಸ್ತುತಃ ಸನ್ಧಿಯಾ ಬುದ್ಧ್ಯಾ ಕರ್ಮಣಾ ವಾ ವ್ಯಾಪ್ತವಸು-ರಿಂದ್ರಃ ಪ್ರಾತಃಕಾಲೇ ಮಕ್ಷು ಶೀಘ್ರಂ ಜಗಮ್ಯಾತ್ । ಆಗಚ್ಛತು ॥ ಸನಾಯತೇ । ಸನೇತಿ ನಿಪಾತೋ ನಿತ್ಯಶಬ್ದಸಮಾನಾರ್ಥಃ । ತಸ್ಮಾದಾಚಾರಾರ್ಥೇ ಕ್ಯಚ್ಪ್ರತ್ಯಯಃ । ಸುನೀಥಾಯ । ಣೀಞ್ ಪ್ರಾಪಣ ಇತ್ಯಸ್ಮಾದೌಣಾದಿಕಸ್ಥಕ್ಪ್ರತ್ಯಯಃ । ಥಾಥಾದಿಸ್ವರಃ ॥

॥ ಶಬ್ದಾರ್ಥ ॥

ಶವಸಾನ- ಬಲಿಷ್ಠನಾದ । **ಇಂದ್ರ**---ಇಂದ್ರನೇ । **ಸನಾಯತೇ**--ನಿತ್ಯನಂತೆ ಆಚರಿಸುವ (ಸರ್ವರಿಗೂ ಆದ್ಯನಾದ) । **ಹರಿಯೋಜನಾಯ**--ಕುದುರೆಗಳನ್ನು ರಥಕ್ಕೆ ಹೂಡುವ । **ಸುನೀಥಾಯ**—ಒಳ್ಳೆಯ ನೇತೃವಾದ ನಿನಗೆ । **ಗೋತಮಃ**—ಗೋತಮ ಋಷಿಯ ಪುತ್ರನಾದ । **ನೋಧಾಃ**—ನೋಧಸ್ ಎಂಬ ಋಷಿಯು । **ನವ್ಯಂ**—ನೂತನವಾದ । **ಬ್ರಹ್ಮ**— ಈ ಸೂಕ್ತರೂಪವಾದ ಸ್ತುತಿಯನ್ನು । **ನಃ**—ನಮಗೋಸ್ಕರ । **ಅತಕ್ಷತ್**---ಮಾಡಿದನು,(ಆದುದರಿಂದ ನನ್ನಿಂದ ಸ್ತುತನಾದ ಇಂದ್ರನು) । **ಧಿಯಾವಸುಃ**—ಸ್ವಬುದ್ಧಿಯಿಂದ ಅಥವಾ ಕರ್ಮಗಳಿಂದ ಸಂಪಾದಿಸಿದ ಧನವುಳ್ಳವನಾಗಿ । **ಪ್ರಾತಃ**---ಪ್ರಾತಃಕಾಲದಲ್ಲಿ । **ಮಕ್ಷು**--ಶೀಘ್ರವಾಗಿ । **ಜಗಮ್ಯಾತ್**--ಬರಲಿ ॥

॥ ಭಾವಾರ್ಥ ॥

ಬಲಿಷ್ಠನಾದ ಇಂದ್ರನೇ, ಸರ್ವರಿಗೂ ಆದ್ಯನಾದ, ರಥಕ್ಕೆ ಅಶ್ವಗಳನ್ನು ಹೂಡುತ್ತಿರುವ, ಒಳ್ಳೆಯ ನಾಯಕನಾದ ನಿನ್ನನ್ನುದ್ದೇಶಿಸಿ, ಗೋತಮ ಪುತ್ರನಾದ ನೋಧಸನು ನೂತನವಾದ ಇದೊಂದು ಸೂಕ್ತರೂಪವಾದ ಸ್ತುತಿಯನ್ನು ರಚಿಸಿದಾನೆ. ಇದರಿಂದ ಸ್ತುತನಾದ (ಇಂದ್ರನು) ತನ್ನ ಸ್ವಂತಬುದ್ಧಿಯಿಂದ ಅಥವಾ ಕರ್ಮಗಳಿಂದ ಸಂಪಾದಿಸಿದ ದ್ರವ್ಯವುಳ್ಳವನಾಗಿ ಪ್ರಾತಃಕಾಲದಲ್ಲಿ ಶೀಘ್ರನಾಗಿ ನಮ್ಮಲ್ಲಿಗೆ ಬರಲಿ

English Translation

O mighty Indra, Nodhas, the son of Gotama has composed for us this new hymn addressed to you who exist for ever, you harness your horses to your chariot, and you are the sure guide of all. May he (Indra) who has acquired wealth by pious acts come hither quickly in the morning.

॥ ವಿಶೇಷವಿಷಯಗಳು ॥

ಪ್ರಥಮ ಮಂಡಲದಲ್ಲಿ ಹನ್ನೊಂದನೆಯ ಅನುವಾಕ ಎಂದರೆ ೫೮-೬೪ ಸೂಕ್ತಗಳಿಗೆ ಗೋತಮ ಪುತ್ರನಾದ ನೋಧಾ ಎಂಬುವನು ಋಷಿಯು ಈ ನೋಧನು ಈ ಸೂಕ್ತಗಳಿಗೂ (೭೪ ಋಕ್ಕುಗಳು) ಎಂಟನೆಯ ಮಂಡಲದಲ್ಲಿ ೮೮ ನೆಯ ಸೂಕ್ತಕ್ಕೂ (೬ ಋಕ್ಕು) ಒಂಭತ್ತನೆಯ ಮಂಡಲದಲ್ಲಿ ೯೩ ನೆಯ ಸೂಕ್ತಕ್ಕೆ (೫ ಋಕ್ಕು) ಒಟ್ಟು ೮೫ ಋಕ್ಕುಗಳಿಗೆ ಋಷಿಯಾಗಿರುವನು ಈ ಋಷಿಯು ಸಾಧಾರಣವಾಗಿ ಪ್ರತಿಸೂಕ್ತದ ಕೊನೆಯ ಋಕ್ಕಿನ ಕೊನೆಯ ಪಾದವನ್ನು **ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್** ಎಂಬ ಪಲ್ಲವಿಯಂತಿರುವ ವಾಕ್ಯದಿಂದ ಸೂಕ್ತವನ್ನು ಸಮಾಪ್ತಿಗೊಳಿಸಿರುವನು. ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್— ಎಂದರೆ ಯಜ್ಞಾದಿಕರ್ಮಗಳಿಂದ ಆಧನಾ ಸ್ತ್ರೋತ್ರಗಳಿಂದ ಸ್ತುತಿಸಲ್ಪಡುವ (ಇಂದ್ರನು) ಪ್ರಾತಃಕಾಲದಲ್ಲಿ ಬೇಗನೆ (ಯಜ್ಞಭೂಮಿಗೆ) ಬರಲಿ ಎಂದರ್ಥವು

ಸನಾಯತೇ— ನಿತ್ಯ ಇವಾಚರತಿ । ಯಾವಾಗಲೂ ಇರುವವನು, ನಾಶರಹಿತನು

ಹರಿಯೋಜನಾಯ— ಹರೀ ಎಂಬ (ಇಂದ್ರನ) ಅಶ್ವಗಳನ್ನು ರಥಕ್ಕೆ ಕಟ್ಟುವುದು

ಸುನೀಥಾಯ— ಣೀಙ್ ಪ್ರಾಪಣೇ । ಜನಗಳಿಗೆ ಉತ್ತಮ ಮಾರ್ಗದರ್ಶಕನಾದ ಇಂದ್ರನಿಗಾಗಿ

ಶವಸಾನ— ಬಲವನ್ನಿಂದ್ರ । ಶವಃ ಎಂದರೆ ಬಲವು. ಶವಸಾನ ಎಂದರೆ ಬಲವುಳ್ಳ ಇಂದ್ರನು

ಧಿಯಾವಸುಃ— ಅಸ್ಮಾಭಿರನೇನ ಸ್ತೋತ್ರೇಣ ಸ್ತುತಸ್ಸನ್ ಬುದ್ಧ್ಯಾ ಕರ್ಮಣಾ ವಾ ಪ್ರಾಪ್ತ-ವಸುರಿಂದ್ರಃ । ನಮ್ಮಿಂದ ಸ್ತುತಿಸಲ್ಪಟ್ಟ ಅಥವಾ ಯಜ್ಞಾದಿಕರ್ಮಗಳಿಂದ ಆರಾಧಿಸಲ್ಪಟ್ಟ ಇಂದ್ರನು

ಜಗಮ್ಯಾತ್— ಆಗಚ್ಛತು । ಬರಲಿ

॥ ವ್ಯಾಕರಣಪ್ರಕ್ರಿಯಾ ॥

ಸನಾಯತೇ—ಸನಾ ಎಂಬುದು ನಿಪಾತ. ಇದು ನಿತ್ಯಶಬ್ದಸಮಾನಾರ್ಥವಾಗಿದೆ ಇದಕ್ಕೆ ಆಚಾರ್ಯರ್ಥದಲ್ಲಿ **ಕರ್ತುಃ ಕ್ಯಙ್ ಸಲೋಪಶ್ಚ** ಎಂಬುದರಿಂದ ಕ್ಯಙ್ ಪ್ರತ್ಯಯ **ಸನಾದ್ಯಂತಾ ಧಾತವಃ** ಸೂತ್ರದಿಂದ ಸನಾಯ ಎಂಬ ಕ್ಯಙಂತವು ಧಾತುಸಂಜ್ಞೆಯನ್ನು ಹೊಂದುತ್ತದೆ. ಕ್ಯಙ್ ಬೆತ್ತಾದುದರಿಂದ ಆತ್ಮನೇಪದಪ್ರತ್ಯಯ ಬರುತ್ತದೆ ಸನಾಯತೇ ಎಂದು ರೂಪವಾಗುತ್ತದೆ ಾದದ ಆದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದ

ಅತಕ್ಷತ್- ತಕ್ಷೂ ತನೂಕರಣೇ ಧಾತು ಲಙ್ ಪ್ರಥಮಪುರುಷ ಏಕವಚನದಲ್ಲಿ **ಇತಶ್ಚ** ಸೂತ್ರದಿಂದ ಪ್ರತ್ಯಯ ಇಕಾರಕ್ಕೆ ಲೋಪ. ಶಪ್ ವಿಕರಣ, ಅಂಗಕ್ಕೆ ಆಡಾಗಮ ಅತಕ್ಷತ್ ಎಂದು ರೂಪವಾಗುತ್ತದೆ ಾದದ ಆದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಶಪ್ ನಿತ್ತಾದುದರಿಂದ ಆನುದಾತ್ತವಾಗುತ್ತದೆ ಆಗ ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ

ಹರಿಯೋಜನಾಯ—ಹರೀ ಯೋಜಯತೀತಿ ಹರಿಯೋಜನಃ. ಯುಜಿರ್ ಯೋಗೇ ಧಾತು ಲ್ಯುಟ್ ಪ್ರತ್ಯಯ **ಯುವೋರನಾಕೌ** ಎಂಬುದರಿಂದ ಅಡಕ್ಕೆ ಆನಾದೇಶ ಲಿತ್ತಾದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವವು ಉದಾತ್ತವಾಗುತ್ತದೆ ಸಮಾಸವಾದಾಗ **ಗತಿಕಾರಕೋಪಪದಾತ್ಕೃತ್** ಸೂತ್ರದಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಸುನೀಥಾಯ—ಣೀಞ್ ಪ್ರಾಪಣೇ ಧಾತು. ಇಬಕ್ಕೆ ಉಣಾದಿಸಿದ್ಧವಾದ ಥಕ್ ಪ್ರತ್ಯಯ ಕಿತ್ತಾದುದರಿಂದ **ಕ್ಙಿತಿಚ** ಸೂತ್ರದಿಂದ ಧಾತುವಿಗೆ ಇಕ್‌ಲಕ್ಷಣ ಗುಣಪ್ರತಿಷೇಧ ಬರುತ್ತದೆ. ಸುಷ್ಠು ನೀಧಃ ಸುನೀಧಃ ತಸ್ಮೈ **ಥಾಥಘ್‌ಞ್‌ಕ್ತಾಜ**—(ಪಾ. ಸೂ. ೬-೩-೧೪೪) ಸೂತ್ರದಿಂದ ಗತಿಯು ಉಪಪದವಾಗಿರುವುದರಿಂದ ಅಂತ ಉದಾತ್ತವಾಗುತ್ತದೆ ॥ ೧೩ ॥

ಶವಸಾನ—ಸಂಬುದ್ಧಿಯಲ್ಲಿ **ಆಮಂತ್ರಿತಸ್ಯ ಚ** ಸೂತ್ರದಿಂದ ನಿಘಾತಸ್ವರ ಬರುತ್ತದೆ.

ಆರವತ್ತೆರಡನೆಯ ಸೂಕ್ತವು ಸಮಾಪ್ತವು.

ಆರವತ್ತಮೂರನೆಯ ಸೂಕ್ತವು

ತ್ವಂ ಮಹಾನಿತಿ ನವರ್ಚಂ ಷಷ್ಠಂ ಸೂಕ್ತಂ । ನೋಧಸ ಆರ್ಷಂ ತ್ರೈಷ್ಟುಭಮೈಂದ್ರಂ । ಅನುಕ್ರಮ್ಯತೇ ಚ । ತ್ವಂ ನವೇತಿ ॥ ಸಮೂಳ್ಹೇ ದಶರಾತ್ರೇ ದ್ವಿತೀಯೇ ಛಂದೋಮೇ ಮರುತ್ವತೀಯೇ ಶಸ್ತ್ರ ಏತತ್ಸೂಕ್ತಂ । ವಿಶ್ವಜಿತೋಽಗ್ನಿಂ ನರ ಇತಿ ಖಂಡೇ ಸೂತ್ರಿತಂ । ತಾಂ ಸು ತೇ ಕೀರ್ತಿಂ ತ್ವಂ ಮಹಾ ಇಂದ್ರ ಯೋ ಹ ॥ ಆ. ೮-೭ । ಇತಿ ॥

ಅನುವಾದವು—**ತ್ವಂ ಮಹಾನ್** ಎಂಬುದು ಹನ್ನೊಂದನೆಯ ಅನುವಾಕದಲ್ಲಿ ಆರನೆಯ ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವವು **ಈ** ಸೂಕ್ತಕ್ಕೆ ನೋಧಾ ಎಂಬುವನು ಋಷಿಯು. ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು **ತ್ವಂ ನವ** ಎಂದು ಅನುಕ್ರಮಣಿಕೆಯಲ್ಲಿ ಹೇಳಿರುವುದು **ಸಮೂಳ್ಹೇ** ಎಂಬ ಹತ್ತು ದಿನಗಳಲ್ಲಿ ಮಾಡುವ ಯಾಗ ವಿಶೇಷದಲ್ಲಿ ದ್ವಿತೀಯ ಛಂದೋಮಾ ಮಂತ್ರಗಳನ್ನು ಪರಿಸುವಾಗ ಮರುತ್ವತೀಯಶಸ್ತ್ರ ಮಂತ್ರಪರನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ವಿಶ್ವಜಿತೋಽಗ್ನಿಂ ನರ** ಎಂಬ ಖಂಡದಲ್ಲಿ **ತಾಂ ಸುತೇ ಕೀರ್ತಿಂ ತ್ವಂ ಮಹಾ ಇಂದ್ರ ಯೋ ಹ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೮-೭)

ಸೂಕ್ತ—೬೩

॥ ಓಂ ॥

॥ ಮಂಡಲ—೧ ॥ ಅನುವಾಕ—೧೧ ॥ ಸೂಕ್ತ—೬೩ ॥

॥ ಅಷ್ಟಕ—೧ ॥ ಅಧ್ಯಾಯ—೫ ॥ ವರ್ಗ—೪, ೫ ॥

॥ ಸೂಕ್ತವಲ್ಲಿರುವ ಋಕ್ಸಂಖ್ಯೆ—೯ ॥

॥ ಋಷಿಃ—ನೋಧಾ ಗೌತಮಃ ॥

ದೇವತಾ—ಇಂದ್ರಃ ॥

ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತ್ವಂ ಮಹಾ ಇಂದ್ರ ಯೋ ಹ ಶುಷ್ಮೈರ್ದ್ಯಾವಾ ಜಜ್ಞಾನಃ ಪೃಥಿವೀ ಅಮೇ ಧಾಃ ।

यद्द्य॑ त्वे विश्वा॑ गिर॑यश्चि॒दभ्वा॑ भि॒या द्यु॒ष्णासः॑ क्षि॒रणा॑ न्यैज॑न् ॥ ७ ॥

॥ पदपाठः ॥

त्वं । म॒हान् । इ॒न्द्र॒ । यः । ह॒ । शुष्म्यैः॑ । द्यावा॑ । ज॒ज्ञा॒नः । पृ॒थि॒वी इति॑ । अमे॑ । धाः॑ ।
यत् । ह॒ । ते॒ । विश्वा॑ । गिर॑यः । चित् । अभ्वा॑ । भि॒या । द्यु॒ष्णासः॑ । क्षि॒रणा॑ । न । ऐज॑न् ॥ ७ ॥

॥ सायणभाष्यं ॥

हे इन्द्र त्वं महान् गुणैः सर्वाधिको भवसि । यो ह यः खलु त्वमु-नोऽसुरक्षयते भयेन सति जज्ञानस्तदानीमेव स्वादुर्भूतः सन् शुष्म्यैः शत्रूणां शोषकैरात्मीयैर्बलैर्द्यावापृथिवी द्यावापृथिव्यौ धाः । आधारयः । तादृशाद्भ-यादमूमुचः इत्यर्थः । किंच । यद्य ते यस्य खलु तव संबन्धिन्या भया भीत्या विश्वा विश्वानि व्याप्तानि यानि भूतजातानि गिरयश्चित् येऽपि शिलोच्चयाः । अभ्वा । महन्नामैतत् । अन्यान्यपि महान्ति यानि सन्ति । तेऽपि सर्वे द्युष्णासो द्युस्थाः । आक्षिप्ता ऐजन् । अकंपिषत । तत्र दृष्टान्तः । क्षिरणा न । यथा सूर्यरश्मय इतस्ततो नभसि कंपन्ते तद्वत् ॥ जज्ञानः । जनेः स्वादुर्भावे । लिटः कानच् । गमहनेत्यादि-नोपधालोपः । स्थानिवद्भावाद्भिर्भावादि । जेत इत्यन्तोदात्तत्वं । द्यावापृथिवी इत्यस्य समस्तपदस्य मध्ये जज्ञान इत्यस्य पारश्छन्दसः । यत् । सुपां सुलुगिति षष्ठ्याः लुक् । अभ्वा । आ समन्ताद्भवन्ति सद्भावं प्राप्नुवन्तीत्यभ्वा महान्तः । आङ्पूर्वाद्भवतेरौणादिको ड्वन्प्रत्ययः । उपसर्गस्य ह्रस्वत्वं च । यद्वा । नञ्पूर्वाद्भवतेः प्राप्त्यर्थान्नञ्भू भुवो डिदिति क्वन्प्रत्ययः । महान्तो हि प्राप्तुं न शक्यन्ते । शेश्छन्दसि बहुलमिति शेर्लोपः । क्षिरणाः । क्षेर्यन्तीति क्षिरणयः ।

ಇತಿ ಕಿರಣಾಃ । ಕ್ಯ ಏಕ್ಷೇಣೇ । ಕ್ಯ ಪ್ಯ ವೃಜಿಮಂದಿನಿಧಾಞ್ಭ್ಯಃ ಕ್ಯುಃ । ಉ. ೨-೮೧ । ಇತಿ ಕ್ಯುಪ್ರತ್ಯಯಃ । ಯೋರನಾದೇಶೇ ಪ್ರತ್ಯಯಾದ್ಯುದಾತ್ತತ್ವಂ । ಋತ ಇದ್ಧಾತೋರಿತೀತ್ವಂ । ಐಜನ್ । ಏಜೃ ಕಂಪನೇ । ಲಙ್ಯಾಡಾಗಮಃ । ಸ ಚೋದಾತ್ತಃ । ವೃದ್ಧಿಶ್ಚ ॥

॥ ಪ್ರತಿಪದಾರ್ಥ ॥

ಇಂದ್ರ—ಇಂದ್ರನೇ । **ತ್ವಂ**—ನೀನು । **ಮಹಾನ್**—ಗುಣಾಧಿಕನು । **ಯೋ ಹ**—ಯಾವ ನೀನೇ । **ಅಮೇ**—(ಅಸುರರಿಂದ) ಭಯವುಂಟಾದಾಗ । **ಜಜ್ಞಾನಃ**—ಆವಿರ್ಭೂತನಾಗಿ । **ಶುಷ್ಮ್ಯಃ**—ಶತ್ರುನಾಶಕವಾದ ನಿನ್ನ ಬಲಗಳಿಂದ । **ದ್ಯಾವಾಪೃಥಿವೀ**—ಭೂಮ್ಯಾಕಾಶಗಳನ್ನು । **ಧಾಃ**—ಆಧಾರವುಳ್ಳದ್ದನ್ನಾಗಿ ಮಾಡಿದೆ (ಅವುಗಳನ್ನು ಭಯರಹಿತವನ್ನಾಗಿ ಮಾಡಿದೆ) । **ಯದ್ಧ ತೇ**—ಯಾವ ನಿನ್ನದೇ ಆದ । **ಭೇತ್ಯಾ**—ಭಯದಿಂದ । **ವಿಶ್ವಾ**—ವ್ಯಾಪಿಸಿಕೊಂಡಿದ್ದ ಎಲ್ಲ ಭೂತ ಸಮುದಾಯಗಳೂ । **ಗಿರಯಶ್ಚಿತ್**—ಪರ್ವತಗಳೂ । **ಅಭ್ವಾ**—ಇತರ ದೊಡ್ಡ ದೊಡ್ಡ ವಸ್ತುಗಳೂ । **ದೃಳ್ಹಾಸಃ**—ದೃಢವಾಗಿದ್ದಾಗ್ಯೂ । **ಕಿರಣಾನ**—(ಸೂರ್ಯನ) ಕಿರಣಗಳಂತೆ । **ಐಜನ್**—ನಡುಗಿದುವು

॥ ಭಾವಾರ್ಥ ॥

ಭೂಮ್ಯಾಕಾಶಗಳಿಗೆ ಅಸುರ ಸಂಬಂಧನಾದ ಭಯವುಂಟಾಗಲು ಮಹಾತ್ಮನಾದ ನೀನು ತಕ್ಷಣವೇ ಆವಿರ್ಭೂತನಾಗಿ ಅವೆರಡಕ್ಕೂ ಒದಗಿದ್ದ ಭಯವನ್ನು ಪರಿಹಾರಮಾಡಿದ ನಿನ್ನ ಭಯದಿಂದಲೇ, ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿದ್ದ ಭೂತಗಳೂ, ದೃಢವಾಗಿದ್ದ ಪರ್ವತಗಳೂ ಮತ್ತು ಇತರ ದೊಡ್ಡ ದೊಡ್ಡ ವಸ್ತುಗಳೂ ಕೂಡ, ಸೂರ್ಯನ ಕಿರಣಗಳು ಕಂಪಿಸುವಂತೆ, ಕಂಪಿಸಿದುವು

English Translation

O Indra, you are the mighty one, who becoming manifest in the hour of alarm, sustained, by you energies, heaven and earth, then through fear of you, all creatures and the mountains, and all other vast and solid things trembled like the rays of the Sun.

॥ ವಿಶೇಷವಿಷಯಗಳು ॥

ಜಜ್ಞಾನಃ—**ತದಾನೀಮೇವ ಪ್ರಾದುರ್ಭೂತಃ** ಆಗಿನ ಕಾರ್ಯಕ್ಕನುಗುಣವಾದ ಆಕಾರವೂ ಆಯುಧವೂ ಇವುಗಳನ್ನು ಧರಿಸಿ ಪ್ರಕಟವಾದವನು

ಶುಷ್ಮ್ಯಃ—**ಶತ್ರೂಣಾಂ ಶೋಷಕೈರಾತ್ಮೀಯೈರ್ಬಲೈಃ** ಶತ್ರುಗಳನ್ನು ಹೆದರಿಸುವ ಅಥವಾ ನಡುಗುವಂತೆ ಮಾಡುವ ತನ್ನ ಸಾಮರ್ಥ್ಯಗಳಿಂದ. ಶುಷ್ಮಶಬ್ದವು ಓಜಃ, ಸಾಜಃ ಮೊದಲಾದ ಇಪ್ಪತ್ತೆಂಟು ಬಲನಾಮಗಳ ಮಧ್ಯದಲ್ಲಿ ಪಠಿತವಾಗಿರುವುದು (ನಿ ೨-೯).

ದ್ಯಾವಾಪೃಥಿವೀ-ದ್ಯಾವಾಪೃಥಿವ್ಯೌ ಭೂಮ್ಯಂತರಿಕ್ಷಗಳು ಇಲ್ಲಿ ಸಂಹಿತೆಯಲ್ಲಿ ಜಜ್ಞಾನಃ ಎಂಬ ಪದವು ಸಮಸ್ತ ಪದವಾದ ದ್ಯಾವಾಪೃಥಿವೀ ಎಂಬ ಪದಗಳ ಮಧ್ಯದಲ್ಲಿ ಪ್ರಯುಕ್ತವಾಗಿರುವುದು ವೈದಿಕ ಪ್ರಯೋಗವಾಗಿರುತ್ತದೆ.

ಅಭ್ವಾ—ಮಹತ್ ಬ್ರಧ್ನಃ ಮೊದಲಾದ ಇಪ್ಪತ್ತೈದು ಮಹನ್ನಾಮಗಳ ಮಧ್ಯದಲ್ಲಿ ಅಭ್ವಾ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ ೩-೧೩) ಈ ಶಬ್ದಕ್ಕೆ ದೊಡ್ಡ ವಸ್ತುಗಳು ಎಂದರೆ ಗೃಹಪಾಷಾಣಾದಿಗಳು ಎಂದೂ. ಅಣಃ ಕ್ಷೋದಃ ಮೊದಲಾದ ನೂರೊಂದು ಉದಕನಾಮಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ ಈ ಶಬ್ದಕ್ಕೆ ಉದಕವೆಂದೂ (ನಿ ೨-೨೪) ಅರ್ಥಗಳಿರುವವು ಪ್ರಸಕ್ತಸಂದರ್ಭದಲ್ಲಿ ಈ ಶಬ್ದಕ್ಕೆ ಮಹತ್ ಎಂದರೆ ದೊಡ್ಡವಸ್ತುಗಳು ಎಂಬರ್ಥವನ್ನು ಹೇಳಬೇಕು

ದೃಳ್ಹಾಸಃ—**ದೃಢಾಃ** ಬಲವಾದವು ಶಕ್ತಿಯುಳ್ಳವು ಎಂದು ಅರ್ಥವು. ಋಗ್ವೇದದಲ್ಲಿ ಜಜ್ಞಾಧ್ಯಸ್ಥವಾದ ಡಕಾರಕ್ಕೆ ಳಕಾರವೂ ಢಕಾರಕ್ಕೆ ಳ್ಹಕಾರವೂ ಉಪಯೋಗಿಸುವ ರೂಢಿ ಇರುವುದು. ಇಲ್ಲಿ ದೃಳ್ಹಾಸಃ ಎಂಬುದು ಸ್ರಧಮಾ ಬಹುವಚನ ವೈದಿಕಪ್ರಯೋಗವು

ಕಿರಣಾಃ— **ಕೀರ್ಯಂತೇ ವಿಕ್ಷಿಪ್ಯಂತ ಇತಿ ಕಿರಣಾಃ** ರಶ್ಮಿಗಳು ಎಂದು ಅರ್ಥವು (ನಿ ೧-೫) ರಲ್ಲಿ ಇಪ್ಪತ್ತೈದು ರಶ್ಮಿನಾಮಗಳ ಮಧ್ಯದಲ್ಲಿ ಈ ಶಬ್ದವು ಪಠಿತವಾಗಿರುವುದು.

ನ—**ಇವ.** ಉಪಮಾರ್ಥಕವು. ಯಾಸ್ಕರು ಇದಮಿವ, ಎಂಬ ಇವೇ ಮೊದಲಾದ ಹನ್ನೆರಡು ಉಪಮಾವಾಚಕಗಳ ಮಧ್ಯದಲ್ಲಿ ನ ಎಂಬ ಶಬ್ದವನ್ನೂ ಸಾರಮಾಡಿರುವರು. (ನಿ. ೩-೧೩) ಸ್ಕಂದ ಸ್ವಾಮಿಗಳು ತಮ್ಮ ಭಾಷ್ಯದಲ್ಲಿ ನಿಪಾತಪ್ರಾಯತ್ವಾತ್ ಶಬ್ದನಿರ್ವಚನಸ್ಯಾವಕ್ತವ್ಯತ್ವಾತ್, ಎಂದು ಈ ಶಬ್ದದ ಅರ್ಥವನ್ನು ಹೇಳಿರುವರು

ಕಿರಣಾ ನ ಏಜನ್—ಸೂರ್ಯನ ಕಿರಣಗಳಂತೆ ಕಂಪಿಸಿದವು, ಸೂರ್ಯನ ಕಿರಣಗಳು ಅಚಲವಾಗಿದ್ದರೂ ಅವು ವಾಯುಮಂಡಲದ ಮೂಲಕ ಪ್ರವೇಶಿಸಿ ನಮ್ಮ ಸಮೀಪಕ್ಕೆ ಬರುವಾಗ ವಾಯುವಿನ ಚಲನೆಯಿಂದ ಕಂಪಿಸುವಂತೆ ತೋರುವವು ಹೇಗೆಂದರೆ ಆಲೆಗಳಿಂದ ಯುಕ್ತವಾದ ನೀರಿನಲ್ಲಿ ಸೂರ್ಯ ಅಥವಾ ಚಂದ್ರಬಿಂಬವು ಪ್ರತಿಫಲಿತವಾದಾಗ ಆ ಬಿಂಬವು ಚಲನರಹಿತವಾಗಿದ್ದರೂ ಜಲವು ಚಲನಯುಕ್ತವಾದ್ದರಿಂದ ಕಂಪಿಸುವಂತೆ ತೋರುವುದು ಅದರಂತೆ ಇಲ್ಲಿಯೂ ಊಹಿಸಬೇಕು

॥ ವ್ಯಾಕರಣಪ್ರಕ್ರಿಯಾ ॥

ಇಂದ್ರ—**ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ

ಜಜ್ಞಾನಃ—ಜನೀ ಪ್ರಾದುರ್ಭಾವೇ ಧಾತು. ಇದಕ್ಕೆ ಲಿಟ್ ವಿವಕ್ಷಾವಾಡಿದಾಗ **ಲಿಟ ಕಾನಜ್ವಾ** (ವಾ ಸೂ ೩-೨-೧೦೬) ಸೂತ್ರದಿಂದ ಆದಕ್ಕೆ ಕಾನಚ್ ಜನ್+ಆನ ಎಂದಿರುವಾಗ **ಗಮಹನಜನ** (ವಾ ಸೂ ೬-೪-೯೮) ಎಂಬುದರಿಂದ ಧಾತುವಿನ ಉಪಧೆಗೆ ಲೋಪ **ಸ್ಥಾನಿವದಾದೇಶ** ಸೂತ್ರದಿಂದ ಕಾನಿಚಿಗೆ ಸ್ಥಾನಿವದ್ಭಾವದಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ. ಜಜ್ಞಾನ ಎಂದು ರೂಪವಾಗುತ್ತದೆ ಕಾನಚ್ ಚಿತ್ವಾದುದ

ರಿಂದ **ಚಿತಃ** ಸೂತ್ರದಿಂದ ಅಂತೋದಾತ್ತಸ್ವರ ಬರುತ್ತದೆ ಇಲ್ಲಿ ದ್ಯಾವಾಪೃಥಿವೀ ಎಂಬುದು ಸಮಸ್ತವಾದ ಪದ ಸಮುಸ್ತಪದದ ಮಧ್ಯದಲ್ಲಿ ಜಜ್ಞಾನಃ ಎಂದು ಪಾರಮಾಡಿರುವುದು ಛಾಂದಸಪ್ರಯೋಗ ಎಂದು ತಿಳಿಯಬೇಕು.

ದ್ಯಾವಾಪೃಥಿವೀ—ದ್ಯೌಶ್ಚ ಪೃಥಿವೀ ಚ ಎಂದು ಸಮಾಸಮಾಡಿದಾಗ **ದಿವೋ ದ್ಯಾವಾ** (ಪಾ ಸೂ ೬-೩-೨೯) ಎಂಬುದರಿಂದ ದಿವ್ ಶಬ್ದಕ್ಕೆ ದ್ಯಾವಾದೇಶ ಬರುತ್ತದೆ **ದೇವತಾದ್ವಂದ್ವೇಚ** (ಪಾ ಸೂ ೬-೩-೨೯) ಎಂಬುದರಿಂದ ಉಭಯಪದಗಳಿಗೆ ಯುಗಪತ್ ಪ್ರಕೃತಿಸ್ವರ ಬರುತ್ತದೆ

ಯತ್—ಷಷ್ಠೀ ಏಕವಚನಪರದಲ್ಲಿರುವಾಗ **ಸುಪಾಂ ಸುಲುಕ್**—ಸೂತ್ರದಿಂದ ಷಷ್ಠಿಗೆ ಲುಕ್.

ಅಭ್ವಾ—ಆ ಸಮಂತಾತ್ ಭವಂತಿ ಪದಾನ್ಯವಂ ವ್ಯಾಪ್ನುವಂತೀತಿ ಅಭ್ವಾ ಮಹಾಂತಃ (ಒಳಗೂ ಹೊರಗೂ ಪದಾರ್ಥವನ್ನು ಹೊಂದಿರುವವರು ಎಂದರ್ಥ) ಆಜ್ ಪೂರ್ವಕವಾದ ಭೂ ಧಾತುವಿಗೆ ಔಣಾದಿಕವಾದ ಡ್ವನ್ ಪ್ರತ್ಯಯ ಡಿತ್ವಾದುದರಿಂದ ಧಾತುವಿನ ಟಿಗೆ ಲೋಪ. ಉಪಸರ್ಗಕ್ಕೆ ಬಹುಲಗ್ರಹಣದಿಂದ ಹ್ರಸ್ವ ಅಭ್ವ ಎಂದಾಗುತ್ತದೆ ಅಥವಾ ನಞ್ಪೂರ್ವಕವಾದ ಸ್ವಾಸ್ಥ್ಯಾರ್ಥಕವಾದ ಭೂ ಧಾತುವಿಗೆ **ನಞಿ ಭುವೋ ಡಿತ್** ಎಂಬುದರಿಂದ ಕ್ವನ್ ಪ್ರತ್ಯಯ ಡಿತ್ವವಿಧಾನದಿಂದ ಹಿಂದಿನಂತೆ ಧಾತುವಿನ ಟಿಗೆ ಲೋಪ ಅಭ್ವ ಎಂದು ರೂಪವಾಗುತ್ತದೆ ಮಹತ್ವ, ರನ್ನು ಹೊಂದಲು ಕಶ್ಚವಾದುದರಿಂದ ಅಪ್ರಾಪ್ಯರು ಎಂದರ್ಥವಾಗುತ್ತದೆ. ಬಹುವಚನದಲ್ಲಿ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ ನಞ್‌ಸ್ವರ ಬರುತ್ತದೆ

ಕೆರಣಾಃ—ಕೀರ್ಯಂತೇ ವಿಕ್ಷಿಪ್ಯಂತೇ ಇತಿ **ಕೆರಣಾಃ** ಕೃ ವಿಕ್ಷೇಪೇ ಧಾತು **ಋೂತ ಇದ್ಧಾತೋಃ** ಎಂಬುದರಿಂದ ಧಾತುವಿಗೆ ಇತ್ವ **ಉರಣ್‌ರಪರಃ** ಸೂತ್ರದಿಂದ ರಪರವಾಗಿ ಬರುತ್ತದೆ **ಕೃ ಹ್ವೃ ವೃಜಿ ಮಂದಿ ನಿಧಾಞ್‌ಭ್ಯಃ ಕ್ಯುಃ** (ಉ ಸೂ ೨-೨೪೯) ಎಂಬುದರಿಂದ ಕ್ಯುಪ್ರತ್ಯಯ **ಯುವ್ವೋರನಾಕೌ** ಸೂತ್ರದಿಂದ ಅದಕ್ಕೆ ಅನಾದೇಶ ರೇಫದ ಪರದಲ್ಲಿರುವುದರಿಂದ **ಅಟ್‌ಕುಪ್ವಾಙ್** ಸೂತ್ರದಿಂದ ನಕಾರಕ್ಕೆ ಣತ್ವ ಕೆರಣ ಎಂದು ರೂಪವಾಗುತ್ತದೆ ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾದ ಶಬ್ದವಾಗುತ್ತದೆ

ಐಜನ್—ಏಜೃ ಕಂಪನೇ ಧಾತು ಲಜ್ ಸ್ವಧಮಪುರುಷಬಹುವಚನದಲ್ಲಿ ಝಿ ಪ್ರತ್ಯಯ **ಝೋಂತಃ** ಎಂಬುದರಿಂದ ಝಕಾರಕ್ಕೆ ಅಂತಾದೇಶ **ಕರ್ತರಿ ಶಪ್** ಸೂತ್ರದಿಂದ ಶಪ್ ವಿಕರಣ **ಆಡಜಾದೀನಾಂ** ಎಂಬುದರಿಂದ ಅಂಗಕ್ಕೆ ಆಡಾಗಮ **ಆಟಶ್ಚ** ಎಂಬುದರಿಂದ ಧಾತುವಿನ ಏಕಾರಕ್ಕೂ ಆಟಾಗಮಕ್ಕೂ ವೃದ್ಧಿ ಏಕಾದೇಶವಾಗಿ ಬರುತ್ತದೆ ಸಂಯೋಗಾಂತಲೋಪದಿಂದ ಪ್ರತ್ಯಯದ ತಕಾರಕ್ಕೆ ಲೋಪ. ಐಜನ್ ಎಂದು ರೂಪವಾಗುತ್ತದೆ. ನ ಶಬ್ದದ ಯೋಗವಿರುವುದರಿಂದ **ಚಾದಿ ಲೋಪೇ ವಿಭಾಷಾ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ ಆಟಾಗಮವು ಉದಾತ್ತವಾದುದರಿಂದ **ಏಕಾದೇಶ ಉದಾತ್ತೇನೋದಾತ್ತಃ** ಎಂಬುದರಿಂದ ಬಂದಿರುವ ಏಕಾದೇಶವೂ ಉದಾತ್ತವಾಗುತ್ತದೆ ॥ ೧ ॥

॥ संहितापाठः ॥

आ यद्धरी इन्द्र विव्रता वेरा ते वज्रं जरिता बाह्वोर्धात् ।
यो नाविहर्यतक्रतो अमित्रान्त्स ते इष्णसि पुरुहूत पूर्वीः ॥ ७ ॥

॥ पदपाठः ॥

आ । यत् । हरी इति । इन्द्र । विव्रता । वेः । आ । ते । वज्रं । जरिता । बाह्वोः । धात् ।
यो । नु । अविहर्यतक्रतो इत्यविहर्यतऽक्रतो । अमित्रान् । पुरः । इष्णसि । पुरुऽहूत । पूर्वीः ॥ ७ ॥

॥ सायणभाष्यं ॥

हे इन्द्र त्वं यद्यदा विविधा व्रता विविधकर्माणौ हरी त्वदीयौ वशाश्वा वेः रथं आगमयसि । रथे योजयसीत्यर्थः । तदानीं ते तव बाह्वोरहस्तयोर्जरिता स्तोता वज्रमा धात् । सोत्रेण स्थापयति । स्तोत्रा स्तुतेः प्रयत्नमन्तरेण वज्रं त्वद्धस्ते दृश्यत इत्यर्थः । हे अविहर्यतक्रतो प्रेरितकर्मवन्निन्द्र अमित्रान् शत्रून्नेन वज्रेणेष्णसि अभिगच्छसि । हे पुरुहूत पुरुभिर्बहुभिर्यजमानैराहूत त्वं पूर्वीर्बह्वीः पुरोऽसुरपुराणि भेत्तुमभिगच्छसीत्यर्थः ॥ विव्रता । व्रतमिति कर्मनाम । विविधं व्रतं ययोस्तौ । सुपां सुलुगिति पूर्वसवर्णदीर्घत्वं । बहुवचनेन पूर्वपदप्रकृतिस्वरत्वं । वेः । वी गतिप्रजनकान्त्यशनखादनेषु । आतश्चोपसर्गे इति कर्मण्यर्थाच्छन्दसि लञ् । सिप्यदाधिघ्वदाप्भ्यश्चेति पो लुक् । बहुलं छन्दस्यमाङ्योगेऽपीति

ತ್ಯಡಭಾವಃ । ಧಾತ್ । ದಧಾತೇಶ್ಛಾಂದಸೇ ಲುಙಿ ಗಾತಿಸ್ಥೇತಿ ಸಿಚೋ ಲುಕ್ । ಪೂರ್ವವದಡಭಾವಃ । ಅವಿಹರ್ಯತಕ್ರತೋ । ಹರ್ಯತಿಃ ಪ್ರೇಪ್ಸಾಕರ್ಮೇತಿ ಯಾಸ್ಕಃ । ನಿ. ೭-೧೭ । ಹರ್ಯ ಗತಿಕಾಂತ್ಯೋಃ । ಕಾಂತಿರಭಿಲಾಷಃ । ವಿಹರ್ಯತೋಽನಭಿಲಷಿತಃ । ಅವಿಹರ್ಯತೋಽಭಿಲಷಿತ ಇತ್ಯರ್ಥಃ । ತಾದೃಶಃ ಕ್ರತುಃ ಕರ್ಮ ಯಸ್ಯ ಸ ತಥೋಕ್ತಃ । ಅಮಿತ್ರಾನ್ । ನ ಸಂತಿ ಮಿತ್ರಾಣ್ಯೇಷ್ವಿತಿ ಬಹುವ್ರೀಹೌ ನಞಃ ಜರಮರಮಿತ್ರಮೃತಾ ಇತ್ಯುತ್ತರಪದಾದ್ಯುದಾತ್ತತ್ವಂ । ಇಷ್ಣಸಿ । ಇಷ ಆಭೀಕ್ಷ್ಣ್ಯೇ । ಅತ್ರ ಗತ್ಯರ್ಥಃ । ಕ್ರ್ಯಾದಿಭ್ಯಃ ಶ್ನಾ । ಸಿಪಃ ಪಿತ್ತ್ವಪಕ್ಷೇ ತಸ್ಯೈವ ಸ್ವರಃ ಶಿಷ್ಯತೇ । ಯದ್ವೃತ್ತಯೋಗಾದನಿಘಾತಃ ॥

॥ ಕ್ರತಿಪದಾರ್ಥ ॥

ಇಂದ್ರ– ಇಂದ್ರನೇ । **ಯತ್**– ಯಾವಾಗ । **ವಿವ್ರತಾ**—ವಿವಿಧ ಕರ್ಮಗಳುಳ್ಳ । **ಹರೀ**—(ನಿನ್ನ) ಎರಡು ಅಶ್ವಗಳನ್ನು । **ಆ ನೇಃ**—ರಥಕ್ಕೆ ಯೋಜಿಸೆ ಮಾಡಿದಿಯೋ (ಆಗ)। **(ಹೇ) ಅವಿಹರ್ಯತಕ್ರತೋ**—ಇಷ್ಟಬಂದಂತೆ ಕೆಲಸಮಾಡಬಲ್ಲವನೇ (ಇಂದ್ರನೇ)। **ಅಮಿತ್ರಾನ್**—ಶತ್ರುಗಳನ್ನು । **ಯೇನ**—ಯಾವ ವಜ್ರದಿಂದ । **ಇಷ್ಣಸಿ** ಎದುರಿಸುತ್ತೀಯೋ (ಅತ್ತು)। **ಪುರುಹೂತ**- ಅನೇಕರಿಂದ ಆಹೂತನಾದ ಇಂದ್ರನೇ । **ಪೂರ್ವೀಃ**- ಅನೇಕವಾದ । **ಪುರಃ**—ಶತ್ರುಗಳ ಪಟ್ಟಣಗಳನ್ನು । **ಇಷ್ಣಾಸಿ**- ಎದುರಿಸುತ್ತೀಯೋ । **ತೇ** –ಅಂತಹ ನಿನ್ನ । **ಬಾಹ್ವೋಃ**– ಕೈಗಳಲ್ಲಿ । **ಜರಿತಾ** ಸ್ತೋತೃವು । **ವಜ್ರಂ**—ವಜ್ರಾಯುಧವನ್ನು । **ಆ ಧಾತ್**—ಇಡುತ್ತಾನೆ ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಸ್ವೇಚ್ಛಾಪ್ರವೃತ್ತಿಯುಳ್ಳವನು. ನಿನ್ನನ್ನು ಅನೇಕರು ಆಹ್ವಾನಿಸುತ್ತಾರೆ. ನೀನು ಯಾವಾಗ ರಥಕ್ಕೆ ಕುದುರೆಗಳನ್ನು ಹೂಡುತ್ತೀಯೋ ಆಗ ಸ್ತೋತೃಗಳು ಸ್ತೋತ್ರ ಮಾಡುತ್ತಾರೆ. ಸ್ತೋತ್ರಮಾಡಿ ಮುಗಿಸಿ, ವಜ್ರಾಯುಧವು ನಿನ್ನ ಕೈಯಲ್ಲಿ ಅನಾಯಾಸವಾಗಿ ಬಂದು ಕುಳಿತುಕೊಳ್ಳುತ್ತದೆ. ಅದರಿಂದ ಯುಕ್ತನಾಗಿ, ನೀನು ಶತ್ರುಗಳನ್ನು ಎದುರಿಸಿ, ಅವರ ಅನೇಕ ಪಟ್ಟಣಗಳನ್ನು ನಾಶಮಾಡುತ್ತೀಯೆ.

English Translation

India, when you harness your variously moving horses, your praiser places your thunderbolt in your hands, performer of undesired (of enemies) acts, you assail your enemies, and glorified by many destroy their numerous cities

॥ ವಿಶೇಷ ವಿಷಯಗಳು ॥

ವಿವ್ರತಾ—ವ್ರತಮಿತಿ ಕರ್ಮನಾಮ । ವಿವಿಧಂ ವ್ರತಂ ಯಯೋಸ್ತೌ ವಿವಿಧ ಕರ್ಮಾಣೌ—ಬಹಳ ವಿಧವಾದ ಕೆಲಸಗಳನ್ನು ಮಾಡತಕ್ಕವುಗಳು ಎಂದು ಅರ್ಥವು. ವ್ರತ ಶಬ್ದವು ಇಲ್ಲಿ ಕರ್ಮಸಾಮಾನ್ಯವಾಚಕವಾಗಿ

ಪ್ರಯುಕ್ತವಾಗಿರುವುದು ಈ ಶಬ್ದವು ಆಪಃ, ಅಪ್ನಃ ಎಂಬ ಇಪ್ಪತ್ತಾರು ಕರ್ಮನಾಮಗಳ ಮಧ್ಯದಲ್ಲಿ (೩–೧) ಪಠಿತವಾಗಿರುವುದು.

ಹರೀ—ಇಂದ್ರನ ಕುದುರೆಗಳು ಯಾಸ್ಕರು ಆತ್ಯಃ, ಹಯಃ, ಆರ್ವಾ, ಎಂಬ ಇವೇ ಮೊದಲಾದ ಇಪ್ಪತ್ತಾರು ಅಶ್ವನಾಮಗಳ ಮಧ್ಯದಲ್ಲಿ ಹರೀ ಶಬ್ದವನ್ನು ಹೇಳಿಲ್ಲವು ಆದರೆ **ದಶೋತ್ತರಾಣ್ಯಾದಿಸ್ಪೋಪ ಯೋಜನಾನೀತ್ಯಾಚಕ್ಷತೇ ಸಾಹಚರ್ಯಜ್ಞಾನಾಯ** (ನಿ ೩–೩೮) ಎಂದು ಪ್ರಾರಂಭಮಾಡಿ, **ಹರೀ ಇಂದ್ರಸ್ಯ** (೧) **ರೋಹಿತೋಽಗ್ನೇಃ** (೨) **ಹರಿತ ಆದಿತ್ಯಸ್ಯ** (೩) **ರಾಸಭಾವಶ್ವಿನೋಃ** (೪) **ಅಜಾಃ ಪೂಷ್ಣಃ** (೫) **ಪೃಷತ್ಯೋ ಮರುತಾಂ** (೬) **ಅರುಷ್ಯೋ ಗಾವ ಉಷಸಃ** (೭) **ಶ್ಯಾವಾಃ ಸವಿತುಃ** (೮) **ವಿಶ್ವರೂಪಾ ಬೃಹಸ್ಪತೇಃ** (೯) **ನಿಯುತೋ ವಾಯೋಃ** (೧೦) ಎಂದು ಆಯಾಯ ದೇವತೆಗಳ ವಾಹನಗಳನ್ನು ಹೇಳುವಾಗ ಇಂದ್ರನ ವಾಹನವನ್ನು ಹರೀಶಬ್ದವು ಬೋಧಿಸುವುದು ಎಂದು ಹೇಳಿರುವರು

ಜರಿತಾ—ಸ್ತೋತಾ. ಸ್ತೋತ್ರಮಾಡುವ ಯಜಮಾನನು ರೇಭಃ, ಜರಿತಾ, (ನಿ. ೩–೧೯) ಎಂಬ ಇವೇ ಮೊದಲಾದ ಹದಿಮೂರು ಸ್ತೋತ್ರ ಮಾಡುವವರ ನಾಮಗಳ ಮಧ್ಯದಲ್ಲಿ ಈ ಶಬ್ದವೂ ಪಠಿತವಾಗಿರುವುದು.

ಪುರುಹೂತ—ಪುರುಭಿರ್ಯಜಮಾನೈರಾಹೂತ. ಯಜ್ಞಮಾಡತಕ್ಕವರಾದ ಬಹಳ ಮಂದಿ ಯಜಮಾನರಿಂದ ಕರೆಯಲ್ಪಟ್ಟವನು ಇಂದ್ರನು ಎಂದು ಅರ್ಥವು

ಅವಿಹರ್ಯತಕ್ರತೋ—ಹರ್ಯತಿಃ ಪ್ರೇಪ್ಸಾಕರ್ಮ (ನಿ ೭–೧೭) **ಪ್ರೇಪ್ಸಿತಕರ್ಮನ್,** ಅಥವಾ **ಹರ್ಯ ಗತಿಕಾಂತ್ಯೋಃ ಕಾಂತಿರಭಿಲಾಷಃ । ವಿಹರ್ಯತೋಽನಭಿಲಷಿತಃ । ಅವಿಹರ್ಯತೋಽಭಿಲಷಿತ ಇತ್ಯರ್ಥಃ ।** ಹರ್ಯ ಧಾತುವಿಗೆ ಆಪೇಕ್ಷಿಸು, ಅಭಿಲಾಷೆಪಡು ಎಂಬರ್ಥವಿರುವುದು ವಿಹರ್ಯತಃ ಎಂದರೆ ಅಭಿಲಾಷೆ ಇಲ್ಲದ ಎಂದರ್ಥವು ಅವಿಹರ್ಯತಃ ಎಂದರೆ ಅಪೇಕ್ಷಿಸಿದ ಎಂದರೆ ಅಭಿಲಷಿತವಾದ, ಎಲ್ಲರಿಗೂ ಹಿತಕರವಾದ ಎಂದಭಿಪ್ರಾಯವು **ಅಭಿಲಷಿತಃ ಕ್ರತುಃ ಕರ್ಮ ಯಸ್ಯ ಸಃ** ಎಲ್ಲರಿಗೂ ಹಿತಕರವಾದ ಕೆಲಸಗಳನ್ನು ಮಾಡತಕ್ಕವನು. ಇಲ್ಲಿ ಕ್ರತುಶಬ್ದವು ಕರ್ಮಸಾಮಾನ್ಯವಾಚಕವಾಗಿ ಪ್ರಯುಕ್ತವಾಗಿರುವುದು

॥ ವ್ಯಾಕರಣಪ್ರಕ್ರಿಯಾ ॥

ಹರೀ—ಹರೀ ಎಂಬುದು ಈಕಾರಾಂತವಾದ ದ್ವಿವಚನ **ಈದೂದೇದ್ದ್ವಿವಚನಂ ಪ್ರಗೃಹ್ಯಂ** ಎಂಬುದರಿಂದ ಪ್ರಗೃಹ್ಯಸಂಜ್ಞಾ ಬರುವುದರಿಂದ **ಪ್ಲುತಪ್ರಗೃಹ್ಯಾ ಅಚೀನಿತ್ಯಂ** ಸೂತ್ರದಿಂದ ಪ್ರಕೃತಿಭಾವ ಬರುತ್ತದೆ

ವಿವ್ರತಾ—ವ್ರತವೆಂಬುದು ಕರ್ಮದ ಹೆಸರು. ವಿವಿಧಂ ವ್ರತಂ ಯಯೋಃ ತೌ ವಿವ್ರತೌ. ಸಂಹಿತಾದಲ್ಲಿ **ಸುಪಾಂಸುಲುಕ್**—ಸೂತ್ರದಿಂದ ಔಕಾರಕ್ಕೆ ಪೂರ್ವಸವರ್ಣದೀರ್ಘ ಬರುತ್ತದೆ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಂ** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ

ವೇಃ- ವೀ ಗತಿಪ್ರಜನಕಾಂತ್ಯಶನ ಖಾದನೇಷು, ಧಾತು. ಣಿಜರ್ಥವು ಇದರ ಅರ್ಥದಲ್ಲಿ ಅಂತರ್ಭೂತವಾಗಿದೆ. ಣ್ಯರ್ಥವುಳ್ಳ ಈ ಧಾತುವಿನ **ಮೇಲೆ ವರ್ತಮಾನಾರ್ಥದಲ್ಲಿ ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್, **ಇತಶ್ಚ** ಸೂತ್ರದಿಂದ ಇಕಾರಕ್ಕೆ ಲೋಪ. ಅದಾದಿಯಾದುದರಿಂದ **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಸಿಗೆ ಲುಕ್ -ಪ್ ನಿಮಿತ್ತಕವಾಗಿ ಧಾತುವಿಗೆ ಗುಣ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಂಗಕ್ಕೆ ಅಡಾಗಮ ಬರುವುದಿಲ್ಲ ವೇಃ ಎಂದು ರೂಪವಾಗುತ್ತದೆ ಯತ್ ಎಂದು ಹಿಂದೆ ಇರುವುದರಿಂದ **ಯುದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರನಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ

ಜರಿತಾ—ಜೃಷ್ ವಯೋಹಾನೌ ಧಾತು ಇಲ್ಲಿ ಸ್ತುತಿಕರ್ಮದಲ್ಲಿ ಸ್ವೀಕೃತವಾಗಿದೆ ಕರ್ತೃರ್ಥದಲ್ಲಿ ತೃಚ್ ಸ್ವರೃಯ ವಲಾದಿಯಾದುದರಿಂದ ಇಡಾಗಮ ಆರ್ಧಧಾತುಕವಾದುದರಿಂದ ತಸ್ನಿಮಿತ್ತವಾಗಿ ಧಾತುವಿಗೆ ಗುಣ. **ಜೆತಃ** ಎಂಬುದರಿಂದ ಅಂತೋದಾತ್ತವಾಗುತ್ತದ

ಧಾತ್—ಡುಧಾಞ್ ಧಾರಣಪೋಷಣಯೋಃ ಧಾತು ಹಿಂದಿನಂತೆಯೇ **ಛಂದಸಿಲುಙ್**--ಸೂತ್ರದಿಂದ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಇತಶ್ಚ** ಸೂತ್ರದಿಂದ ಅದರ ಇಕಾರಕ್ಕೆ ಲೋಪ **ಚ್ಲೇಃ ಸಿಚ್** ಎಂಬುದರಿಂದ ಪ್ರಾಪ್ತವಾದ ಸಿಚಿಗೆ **ಗಾತಿಸ್ಥಾಘುಪಾಭೂಭ್ಯಃ**—ಸೂತ್ರದಿಂದ ಲುಕ್ **ಬಹುಲಂ ಛಂದಸ್ಯಮಾಙಯೋಗೇಽಪಿ** ಸೂತ್ರದಿಂದ ಅಡಭಾವ ಧಾತ್ ಎಂದು ರೂಪವಾಗುತ್ತದೆ ನಿಘಾತಸ್ವರ ಬರುತ್ತದೆ

ಅವಿಹರ್ಯತಕ್ರತೋ—ಹರ್ಯತಃ ಪ್ರೇಪ್ಸಾಕರ್ಮಾ (ನಿರು ೭-೧೭) ಎಂದು ಯಾಸ್ಕರು ಹೇಳಿರುತ್ತಾರೆ (ಅತ್ಯಂತೇಚ್ಛಾ ಎಂದರ್ಥ) ಹರ್ಯ ಗತಿಕಾಂತ್ಯೋಃ ಧಾತು ಇಲ್ಲಿಯೂ ಕಾಂತಿ ಎಂದರೆ ಅಭಿಲಾಷೆ ಎಂದರ್ಥ ವಿಹರ್ಯತಃ ಅನಭಿಲಷಿತಃ (ಇಚ್ಛೆ ಇಲ್ಲದವನು ಎಂದರ್ಥ) ವಿಹರ್ಯತಃ ನ ಭವತಿ ಇತಿ ಅವಿಹರ್ಯತಃ **ಅಭಿಲಷಿತಃ** (ಇಚ್ಛೆಪಟ್ಟವನು ಎಂದರ್ಥ) ತಾದೃಶಃ ಕ್ರತುಃ ಕರ್ಮ ಯಸ್ಯ ಸಃ ತಥೋಕ್ತಃ (ಆ ರೀತಿಯಾದ ಇಚ್ಛೆಪಟ್ಟರುವ ಕರ್ಮವುಳ್ಳವನು ಎಂದು ತಾತ್ಪರ್ಯ) ಸಂಬುದ್ಧಿಯಲ್ಲಿ **ಹ್ರಸ್ವಸ್ಯ ಗುಣಃ** ಎಂಬುದರಿಂದ ಗುಣಬಂದಾಗ ಏಜಂತದ ಪರದಲ್ಲಿರುವುದರಿಂದ ಸುಲೋಪ ಬರುತ್ತದೆ **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ

ಅಮಿತ್ರಾನ್—ನ ಸಂತಿ ಮಿತ್ರಾಣಿ ಏಷ್ವಿತಿ ಅಮಿತ್ರಾಃ ತಾನ್ ಅಮಿತ್ರಾನ್ **ನಞೋ ಜರಮರಮಿತ್ರಮೃತಾಃ** (ಪಾ ಸೂ ೬-೩-೧೧೬) ಎಂಬುದರಿಂದ ಉತ್ತರಪದ ಆದ್ಯುದಾತ್ತ ಸ್ವರ ಬರುತ್ತದೆ

ಇಷ್ಣಾಸಿ—ಇಷ ಆಭೀಕ್ಷ್ಣ್ಯೇ ಧಾತು ಇಲ್ಲಿ ಗತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ **ಕ್ರ್ಯಾದಿಭ್ಯಃ ಶ್ನಾ** ಎಂಬುದುಂದ ಶ್ನಾ ವಿಕರಣ ಅಸಿತ್ತಾದುದರಿಂದ ಇದಕ್ಕೆ ಬಿದ್ವದ್ಭಾವ ಬರುತ್ತದೆ ಆದುದರಿಂದ ಲಘೂಪಧಗುಣ ಬರುವುದಿಲ್ಲ **ರಷಾಭ್ಯಾಂ ನೋ ನಃ ಸಮಾನಪದೇ** ಸೂತ್ರದಿಂದ ಆದಕ್ಕೆ ಣತ್ವ ಇಷ್ಣಾಸಿ ಎಂದು ರೂಪವಾಗುತ್ತದೆ ಸಿಪ್ ಪಿತ್ತಾದುದರಿಂದ ಅನುದಾತ್ತ ಆಗ ವಿಕರಣ ಸ್ವರ ಉಳಿಯುತ್ತದೆ ಯೇನ ಎಂದು ಹಿಂದೆ ಇರುವುದರಿಂದ **ಯುದ್ವೃತ್ತಾನ್ನಿತ್ಯಂ** ಸೂತ್ರದಿಂದ ನಿಘಾತಸ್ವರನಿಷೇಧ ಬರುತ್ತದೆ. ॥ ೨ ॥

॥ ಸಂಹಿತಾಪಾಠಃ ॥

ತ್ವಂ ಸತ್ಯ ಇಂದ್ರ ಧೃಷ್ಣುರೇತಾನ್ತ್ವಮೃಭುಕ್ಷಾ ನರ್ಯಸ್ತ್ವಂ ಷಾಟ್ ।
ತ್ವಂ ಶುಷ್ಣಂ ವೃಜನೇ ಪೃಕ್ಷ ಆಣೌ ಯೂನೇ ಕುತ್ಸಾಯ ದ್ಯುಮತೇ ಸಚಾಹನ್ ॥ ೩ ॥

॥ ಪದಪಾಠಃ ॥

ತ್ವಂ । ಸತ್ಯ । ಇಂದ್ರ । ಧೃಷ್ಣುಃ । ಏತಾನ್ । ತ್ವಂ । ಋಭುಕ್ಷಾಃ । ನರ್ಯಃ । ತ್ವಂ ಷಾಟ್ ॥
ತ್ವಂ । ಶುಷ್ಣಂ । ವೃಜನೇ । ಪೃಕ್ಷೇ । ಆಣೌ । ಯೂನೇ । ಕುತ್ಸಾಯ । ದ್ಯುಮತೇ । ಸಚಾ । ಅಹನ್ ॥ ೩ ॥

। ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಸತ್ಯಃ ಸತ್ಸು ಭವಃ । ಸರ್ವೋತ್ಕೃಷ್ಟ ಇತ್ಯರ್ಥಃ । ಏತಾನ್ ಶತ್ರೂನಭಿಗತಃ ಸನ್ ಧೃಷ್ಣುಸ್ತೇಷಾಂ ಧರ್ಷಯಿತಾ ತಿರಸ್ಕರ್ತಾ । ಕಿಂಚ ತ್ವಮೃಭುಕ್ಷಾ ಋಭೂಣಾಮಧಿಪತಿಃ । ತೇಷು ಕೃತನಿವಾಸೋ ವಾ । ಯದ್ವಾ । ಮಹನ್ನಾಮೈತತ್ । ಮಹಾನ್ವೃದ್ಧೋಽಸಿ । ನರ್ಯೋ ನೃಭ್ಯೋ ಹಿತಃ । ತಥಾ ತ್ವಂ ಷಾಟ್ ಶತ್ರೂಣಾಮಭಿಭವಿತಾ । ಹಂತೇತ್ಯರ್ಥಃ । ಕಿಂಚ । ವೃಜನ ಇತ್ಯಾದೀನಿ ತ್ರೀಣಿ ಸಂಗ್ರಾಮನಾಮಾನಿ । ಅತ್ರ ಪೂರ್ವೇ ವಿಶೇಷಣೇ । ವೃಜನೇ ವರ್ಜನಯುಕ್ತೇ । ಸಂಗ್ರಾಮೇ ಹಿ ವೀರಾಃ ಪುರುಷಾ ವರ್ಜ್ಯಂತೇ ಹಿಂಸ್ಯಂತೇ । ಪೃಕ್ಷೇ ಸಂಪರ್ಚನೀಯೇ ವೀರ್ಯೈರ್ಯೋದ್ಧುಂ ಪ್ರಾಪ್ತವ್ಯೇ । ಏವಂವಿಧ ಆಣೌ ಸಂಗ್ರಾಮೇ ದ್ಯುಮತೇ ದೀಪ್ತಿಮತೇ ಯೂನೇ ತರುಣಾಯ ಕುತ್ಸಾಯ ಸಚಾ ತ್ವಂ ಸಹಾಯೋ ಭೂತ್ವಾ ಶುಷ್ಣಂ ಶೋಷಯಿತಾರಮೇತತ್ಸಂಜ್ಞಮಸುರಮಹನ್ । ಅವಧೀಃ ॥ ಋಭುಕ್ಷಾಃ । ಋಭುರಿತಿ ನೇಧಾನಾಮ । ಉರು ವಿಸ್ತೀರ್ಣಂ ಭಾತಿ । ಯದ್ವಾ । ಋತೇನ ಯಜ್ಞೇನ

ಭಾತಿ ಭವತೀತಿ ವಾ ಋಭುಃ । ಉರುಶಬ್ದೇ ಋತಶಬ್ದೇ ವೋಪಸದೇ ಭಾತೇರ್ಭವತೇರ್ವಾ ಮೃಗಯ್ವಾದಯೇಶ್ಚ । ಉ. ೧-೩೮ । ಇತಿ ಕುಪ್ರತ್ಯಯಃ । ಪೂರ್ವಪದಸ್ಯ ಋಭಾವಶ್ಚ ನಿಪಾತ್ಯತೇ । ಕ್ಷಯತಿರೈಶ್ವರ್ಯಕರ್ಮಾ । ತೇಷಾಮಿಷ್ಟ ಇತ್ಯೃಭುಕ್ಷಾಃ । ಯದ್ವಾ । ಕ್ಷಿ ನಿವಾಸಗತ್ಯೋಃ । ತೇಷು ನಿವಸತೀತಿ ಪತೇಸ್ಥ । ಉ. ೪-೧೨ । ಇತಿ ವಿಧೀಯಮಾನ ಇನಿಪ್ರತ್ಯಯೋ ಬಹುಲವಚನಾದಸ್ಮಾದಪಿ ಭವತಿ । ಟಿಲೋಪಶ್ಚ । ಸೌ ಪಥಿಮಥ್ಯೃಭುಕ್ಷಾಮಾತ್ । ಪಾ. ೬-೧-೬೫ । ಇತ್ಯಾತ್ವಂ । ಪ್ರತ್ಯಯಸ್ವರಃ । ಷಾಟ್ । ಸಹ ಅಭಿಭವೇ । ಛಂದಸಿ ಸಹ ಇತಿ ಕೇವಲಾದಪಿ ಣ್ವಿಃ । ಷತ್ವಂ ಛಾಂದಸಂ । ದ್ಯುಮತೇ । ದ್ಯೌರ್ದೀಪ್ತಿರಸ್ಮಿನ್ನಸ್ತೀತಿ ದ್ಯುಮಾನ್ । ಸ್ವಾದಿಷ್ವಸರ್ವನಾಮಸ್ಥಾನ ಇತಿ ಪದಸಂಜ್ಞಾಯಾಂ ದಿವ ಉದಿತ್ಯುತ್ವಂ । ಹ್ರಸ್ವನುಡ್ಭ್ಯಾಂ ಮತುಬಿತಿ ಮತುಪ ಉದಾತ್ತತ್ವಂ ॥

॥ ಶ್ರುತಿಪದಾರ್ಥ ॥

ಇಂದ್ರ—ಇಂದ್ರನೇ । **ತ್ವಂ**—ನೀನು । **ಸತ್ಯಃ**—ಸರ್ವೋತ್ಕೃಷ್ಟನು । **ಏತಾನ್**—ಶತ್ರುಗಳನ್ನು (ಎದುರಿಸಿ) । **ಧೃಷ್ಣುಃ**—ತಿರಸ್ಕರಿಸುವವನು (ಅವಮಾನಮಾಡುವವನು) । **ತ್ವಂ**—ನೀನು । **ಋಭುಕ್ಷಾಃ**—ಋಭುಗಳಿಗೆ ಅಧಿಪತಿಯು, ಋಭುಗಳಲ್ಲಿ ವಾಸಿಸುವನು, ಅಥವಾ ಸರ್ವಶ್ರೇಷ್ಠನು । **ನರ್ಯಃ**—ಮನುಷ್ಯರಿಗೆ ಹಿತಕರನು । **ತ್ವಂ**—ನೀನು । **ಷಾಟ್**—ಶತ್ರುಗಳನ್ನು ಸೋಲಿಸುವವನು । **ವೃಜನೇ**—(ಯುದ್ಧದಲ್ಲಿ ಶತ್ರುಗಳಿಗೆ) ಹಿಂಸಾಯುಕ್ತನಾದ । **ಶ್ವೈತ್ರೇ**—(ವೀರರಿಂದ ಯುದ್ಧಾರ್ಥವಾಗಿ) ವ್ಯಾಪ್ತವ್ಯನಾದ । **ಆಜೌ**—ಯುದ್ಧದಲ್ಲಿ । **ದ್ಯುಮತೇ**—ತೇಜಸ್ವಿಯಾದ । **ಯೋನೇ**—ತರುಣನಾದ । **ಕುತ್ಸಾಯ**—ಕುತ್ಸನಿಗೆ । **ತ್ವಂ**—ನೀನು । **ಸಚಾ**—ಸಹಾಯಕನಾಗಿ । **ಶುಷ್ಣಂ**—ಶೋಷಣೆ ಮಾಡತಕ್ಕ ಶುಷ್ಣನೆಂಬ ಅಸುರನನ್ನು । **ಆಹನ್**—ವಧಮಾಡಿದ

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಸರ್ವೋತ್ಕೃಷ್ಟನು ಮನುಷ್ಯರಿಗೆ ಹಿತವನ್ನುಂಟುಮಾಡುವವನು ಋಭುಗಳಿಗೆ ಅಧಿಪತಿಯು, ಶತ್ರುಗಳಿಗೆ ಅವಮಾನವಮಾಡುವವನು ಮತ್ತು ಅಪಜಯ ಮಾಡುವವನು ಘೋರನಾದ ಯುದ್ಧದಲ್ಲಿ ತೇಜಸ್ವಿಯಾದ, ತರುಣನಾದ ಕುತ್ಸನಿಗೆ ಸಹಾಯಕನಾಗಿ ಶುಷ್ಣನೆಂಬ ರಾಕ್ಷಸನನ್ನು ನಷ್ಟಮಾಡಿದ

English Translation

Indra, you are the best of all beings, the assailer and humiliator (of your enemies), the chief of Ribhus, the friend of man, the subduer of enemies, you aided the young and illustrious Kutsa and killed Sushna, in the deadly and close-faught battle.

॥ ವಿಶೇಷವಿಷಯಗಳು ॥

ಸತ್ಯಃ ಸತ್ಸು ಭವಃ, ಸರ್ವೋತ್ಕೃಷ್ಟಃ ಎಲ್ಲರಿಗಿಂತಲೂ ಹೆಚ್ಚಾದವನು. ಪೂಜ್ಯನಾದವನು.

ಋಭುಕ್ಷಾಃ—ಋಭೂಣಾಮಧಿಪತಿಃ, ತೇಷು ಕೃತನಿವಾಸಃ, ಅಥವಾ ಮಹನ್ನಾಮೈತತ್, ಮಹಾನ್ ಪ್ರವೃದ್ಧೋಽಸಿ. ಋಭುಗಳೆಂದರೆ ಬಹಳ ಬುದ್ಧಿಯುಳ್ಳವರು ಅವರಲ್ಲಿ ಶ್ರೇಷ್ಠನು ಎಂದು ಅರ್ಥವು ಅಥವಾ ಬುದ್ಧಿಯುಳ್ಳವರಿಗೆ ಅಷ್ಟುಮಟ್ಟಿನ ಬುದ್ಧಿ ಶಕ್ತಿಯನ್ನು ಅನುಗ್ರಹಿಸುವವನು, ಪೂಜ್ಯವಾದ ಸ್ಥಾನದಲ್ಲಿ ವಾಸಮಾಡುವವನು ಎಂದು ಅರ್ಥವು. ಅಥವಾ ಎಲ್ಲರಿಗಿಂತಲೂ ಮಿಗಿಲಾದವನು ಎಂದು ಅರ್ಥವು ಋಭ್ಕ್ಷಃ ಮೊದಲಾದ ಇಪ್ಪತ್ತೈದು ಮಹನ್ನಾಮಗಳ ಮಧ್ಯದಲ್ಲಿ ಈ ಶಬ್ದವು ಪಠಿತವಾಗಿರುವುದು (ನಿ ೩–೧೩)

ಧೃಷ್ಣುಃ—ಧರ್ಷಯಿತಾ, ತಿರಸ್ಕರ್ತಾ ಶತ್ರುಗಳನ್ನು ಎದುರಾಳಾಗಿ ನಿಂತು ಹಿಮ್ಮೆಟ್ಟಿಸುವವನು ಓಡಿಸುವವನು

ನರ್ಯಃ—ನೃಭ್ಯೋ ಹಿತಃ ಮನುಷ್ಯರಿಗೆ ಹಿತವನ್ನು ಉಂಟುಮಾಡುವವನು

ಷಾಟ್—ಶತ್ರೂಣಾಮಭಿಭವಿತಾ ಶತ್ರುಗಳನ್ನು ಓಡಿಸುವವನು

ಶುಷ್ಣಂ—ಶೋಷಯಿತಾರಮೇತತ್ಸಂಜ್ಞಮಸುರಂ ಎಲ್ಲರನ್ನೂ ಹಿಂಸೆಮಾಡುವ ಸ್ವಭಾವದಿಂದ ದಿದ್ದ ಶುಷ್ಣನೆಂದು ಹೆಸರುಳ್ಳ ರಾಕ್ಷಸನೆಂದು ಅರ್ಥವು ಕುತ್ಸನೆಂಬವನಿಗೆ ಇಂದ್ರನು ಸಹಾಯಕನಾಗಿ ಲೋಕಕ್ಕೆ ತೊಂದರೆಯನ್ನು ಉಂಟುಮಾಡುತ್ತಿದ್ದ ಶುಷ್ಣನೆಂಬ ಅಸುರನನ್ನು ಯುದ್ಧದಲ್ಲಿ ನಾಶಮಾಡಿರುವನೆಂದು ಇತಿಹಾಸದಲ್ಲಿ ಪ್ರಸಿದ್ಧವಾಗಿರುವುದು.

ವೃಜನೇ—ವರ್ಜನಯುಕ್ತೇ ಸಂಗ್ರಾಮೇ ಹಿ ವೀರಾಃ ಪುರುಷಾಃ ವರ್ಜ್ಯಂತೇ ಹಿಂಸ್ಯಂತೇ, ಶೂರರಾದವರು ತಮ್ಮ ಶರೀರದ ಹಂಗು ತೊರೆದು ತಮ್ಮ ಪ್ರಾಣಗಳನ್ನು ಕಳದುಕೊಳ್ಳುವ ಸನ್ನಿವೇಶವಾದ ಯುದ್ಧ ವೆಂದು ವೃಜನಶಬ್ದಕ್ಕೆ ಅರ್ಥವಾಗಿರುತ್ತದೆ ಇಲ್ಲಿ ವೃಜನ ಶಬ್ದವು ಹಿಂಸೆಯು ಉಂಟಾಗುವ ಕ್ರಿಯಾವಾಚಕವಾಗಿರುವುದು ಆದ್ದರಿಂದಲೇ ಈ ಶಬ್ದವನ್ನು ಯುದ್ಧವೆಂಬ ಅರ್ಥದಲ್ಲಿ ಸಾಯಣರು ಉಪಯೋಗಿಸಿರುವರು

ಆಣೌ--ಸಂಗ್ರಾಮೇ, ಯುದ್ಧದಲ್ಲಿ. ಪೃಕ್ಷೇ. ವೃಜನೇ ಎಂಬ ಶಬ್ದಗಳೂ ಈ ಶಬ್ದವೂ ಕೂಡ ಸಂಗ್ರಾಮ ವಾಚಕವೆಂದು ಸಾಯಣರು ಹೇಳಿರುವರು. ಯಾಸ್ಕರು ಸಂಗ್ರಾಮ ಪರವಾದ ನಲವತ್ತಾರು ಶಬ್ದಗಳಲ್ಲಿ ಪೃಕ್ಷೇ, ಆಣೌ ಎಂಬ ಶಬ್ದಗಳನ್ನು (ನಿ. ೩–೯) ಪಾಠಮಾಡಿ ಇರುವರು. ಸ್ವಂದ ಸ್ವಾಮಿಗಳು **ತ್ವಂ ಶುಷ್ಣಂ ವೃಜನೇ ಪೃಕ್ಷ ಆಣೌ** ಎಂಬ ಈ ಋಕ್ಸನ್ನೇ ಉದಾಹರಿಸಿ ಆಣೌ ಎಂಬ ಪದವು ಸಂಗ್ರಾಮಪರವಾಗಿರುವುದು ಎಂದು ಹೇಳಿರುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

ಋಭುಕ್ಷಾಃ--ಋಭುರಿತಿ ಮೇಧಾನಿನಾಮ (ಬುದ್ಧಿಯುಳ್ಳವ) ಉರು ವಿಸ್ತೀರ್ಣಂ ಭಾತಿ (ಹೆಚ್ಚಾಗಿ ಪ್ರಕಾಶಿಸುವವನು) ಅಥವಾ. ಋತೇನ, ಯಜ್ಞೇನ ಭಾತಿ, ಭವತೀತಿ ವಾ ಋಭುಃ (ಯಜ್ಞದಿಂದ ಪ್ರಕಾಶಿಸುವವನು, ಅಥವಾ ಆಗುವವನು, ಇರುವವನು) ಉರುಶಬ್ದ ಅಥವಾ ಋತಶಬ್ದವು ಉಪಪದವಾಗಿರುವಾಗ ಭಾ ದೀಪ್ತೌ ಅಥವಾ ಭೂ ಸತ್ತಾಯಾಂ ಧಾತುವಿಗೆ **ಮೃಗಯ್ವಾದಯಶ್ಚ** (ಉ ಸೂ ೧–೩೮) ಎಂಬುದರಿಂದ ಕುಪ್ರತ್ಯಯ ಪೂರ್ವಪದಕ್ಕೆ ಋಭಾವವೂ ಅದರಿಂದಲೇ ನಿಪಾತಿತವಾಗುತ್ತದೆ ಋಭು ಎಂದು ರೂಪವಾಗುತ್ತದೆ ಕ್ಷಯತಿರೈಶ್ವರ್ಯಕರ್ಮಾ

(ಕ್ಷೈ ಎಂಬ ಧಾತುವು ಐಶ್ವರ್ಯಾರ್ಥದಲ್ಲಿದೆ) ತೇಷಾಂ **ಈಷ್ಟೇ** ಇತಿ ಋಭುಕ್ಷಾಃ ಅಥವಾ ಕ್ಷಿ ನಿವಾಸಗತ್ಯೋಃ **ಧಾತು. ಋಭುಷು** ನಿವಸತಿ ಇತಿ ಋಭುಕ್ಷಾಃ **ಪತೇಶ್ಚ** (ಉ ಸೂ ೪-೪೫೭) ಎಂಬುದರಿಂದ ವಿಧಿಸಲ್ಪಡುವ ಇನಿಪ್ರತ್ಯಯವು ಉಣಾದಿಯ ಬಹುಲಗ್ರಹಣದಿಂದ ಈ ಧಾತುವಿಗೂ ಬರುತ್ತದೆ ಟಲೋಪವೂ ಅದರಿಂದಲೇ ಸಿದ್ಧವಾಗುತ್ತದೆ ಋಭುಕ್ಷಿನ್ ಶಬ್ದವಾಗುತ್ತದೆ ಸು ಪರದಲ್ಲಿರುವಾಗ **ಪಥಿಮಥ್ಯೃಭುಕ್ಷಾಮಾತ್** (ಸಾ ಸೂ ೭-೧-೮೫) ಎಂಬುದರಿಂದ ಆತ್ವಬರುತ್ತದೆ **ಇತೋತ್ ಸರ್ವನಾಮಸ್ಥಾನೇ** (ಪಾ ಸೂ ೭-೧-೮೬) ಎಂಬುದರಿಂದ ಇಕಾರಕ್ಕೆ ಅಕಾರಾದೇಶ ಬರುತ್ತದೆ ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ ಋಭುಕ್ಷಾಃ ಎಂದು ರೂಪಸಾಗುತ್ತದೆ ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ

ಧೃಷ್ಣುಃ—ಞಿಧೃಷಾ ವ್ರಾಗಲ್ಭ್ಯೇ ಧಾತು **ತ್ರಸಿಗೃಧಿ ಧೃಷಿ**-(ಸಾ ಸೂ ೩ ೨-೧೪೦) ಎಂಬುದರಿಂದ ಕ್ನು ಪ್ರತ್ಯಯ, ಕಿತ್ತಾದುದರಿಂದ **ಲಘೂಪಧಗುಣ** ಬರುವುದಿಲ್ಲ ಷಕಾರದ ಪರದಲ್ಲಿ ನಕಾರ ಬಂದುದರಿಂದ ಣತ್ವ ಧೃಷ್ಣುಃ ಎಂದು ರೂಪವಾಗುತ್ತದೆ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ನರ್ಯಃ—ನರಾಯ ಹಿತಃ ನರ್ಯಃ **ತಸ್ಮೈ ಹಿತಂ** ಎಂಬುದರಿಂದ ಯತ್ ಪ್ರತ್ಯಯ. **ಯಸ್ಯೇತಿ ಚ** ಸೂತ್ರದಿಂದ ಆಕಾರಲೋಪ **ಯತೋಽನಾವಃ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಷಾಟ್—ಸಹ ಅಭಿಭವೇ ಧಾತು **ಛಂದಸಿ ಸಹಃ** (ಪಾ ಸೂ ೩-೨-೬೩) ಎಂಬುದರಿಂದ **ಕೇವಲ**ವಾದ ಸಹಧಾತುವಿಗೂ ಣ್ವಿಪ್ರತ್ಯಯ ಬರುತ್ತದೆ ನಿತ್ತಾದುದರಿಂದ **ಅತ ಉಪಧಾಯಾಃ** ಎಂಬುದರಿಂದ ಉಪಧಾವೃದ್ಧಿ ಒರುತ್ತದೆ ಸಾಹ್ ಎಂದಿರುವಾಗ ಪತ್ವವು ಛಾಂದಸವಾಗಿ ಬರುತ್ತದೆ ಸು ಪರವಾಗಿರುವಾಗ **ಹೋಢಃ** ಸೂತ್ರದಿಂದ ಢತ್ವ **ಜಲಾಂ ಜಶೋಂತೇ** ಸೂತ್ರದಿಂದ ಜಸ್ತ್ವ **ವಾವಸಾನೇ** ಎಂಬುದರಿಂದ ಚರ್ತ್ವ ಷಾಟ್ ಎಂದು ರೂಪವಾಗುತ್ತದೆ

ದ್ಯುಮತೇ—ದ್ಯೌಃ ದೀಪ್ತಿಃ ಅಸ್ಯಾನ್ ಅಸ್ತೀತಿ ದ್ಯುಮಾನ್ **ತದಸ್ಯಾಸ್ತಿ**—ಸೂತ್ರದಿಂದ ಮತುಪ್ **ಸ್ವಾದಿಷ್ವಸರ್ವನಾಮಸ್ಥಾನೇ** ಎಂಬುದರಿಂದ ಸದಸಂಜ್ಞಾ ಇರುವಾಗ **ದಿವ ಉತ್** (ಪಾ ಸೂ ೬-೧-೧೩೧) ಎಂಬುದರಿಂದ ದಿವ್ ಶಬ್ದಕ್ಕೆ ಉತ್ತ್ವ ಯಣಾದೇಶ ದ್ಯುಮತ್ ಶಬ್ದವಾಗುತ್ತದೆ ಸು ಪರದಲ್ಲಿರುವಾಗ ಉಗಿತ್ತಾದುದರಿಂದ **ಉಗಿದಚಾಂ** ಸೂತ್ರದಿಂದ ನುಮಾಗಮ **ಅತ್ವಸಂತಸ್ಯಚಾಽಧಾತೋಃ** ಸೂತ್ರದಿಂದ ದೀರ್ಘ **ಹಲ್ ಙ್ಯಾಭ್ಯೋ** ಸೂತ್ರದಿಂದ ಸುಲೋಪ, **ಸಂಯೋಗಾಂತಸ್ಯ ಲೋಪಃ** ಸೂತ್ರದಿಂದ ತಲೋಪ ದ್ಯುಮಾನ್ ಎಂದು ರೂಪವಾಗುತ್ತದೆ **ಹ್ರಸ್ವನುಡ್ಭ್ಯಾಂ ಮತುಪ್** (ಪಾ ಸೂ ೬-೧-೧೭೬) ಎಂಬುದರಿಂದ ಮತುಪಿಗೆ ಉದಾತ್ತಸ್ವರ ಬರುತ್ತದೆ

ಅಹನ್—ಹನ ಹಿಂಸಾಗತ್ಯೋಃ ಧಾತು **ಲಜ್ ಪ್ರಥಮಪುರುಷ** ಏಕವಚನದಲ್ಲಿ ತಿಪ್ **ಇತಶ್ಚ** ಸೂತ್ರದಿಂದ ಇಕಾರಲೋಪ **ಆದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್ **ಹಲ್ ಙ್ಯಾಭ್ಯೋ** ಸೂತ್ರದಿಂದ ಅವ್ಯಕ್ತವಾದ ತಿಗೆ ಲೋಪ, ಅಂಗಕ್ಕೆ ಅಡಾಗಮ. ಅಹನ್ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೩ ॥

॥ संहितापाठः ॥

त्वं ह त्यदिंद्र चोदीः सखा वृत्रं यद्वज्रिन्वृष-
कर्मन्नुभ्नाः ।
यद्वृ शूर वृषमणः पराच्यैर्वि दस्यूयोर्नाना-
वक्कृतोः वृथाषाट् ॥ ४ ॥

॥ पदपाठः ॥

त्वं । ह । त्यत् । इंद्र । चोदीः । सखा । वृत्रं । यत् । वज्रिन् ।
वृषऽकर्मन् । उभ्नाः ॥
यत् । अ । शूर । वृषऽमनः । पराच्यैः । वि । दस्यून् । योनौ ।
अक्कृतः । वृथाषाट् ॥ ४ ॥

॥ सायणभाष्यं ॥

हे इंद्र त्वं ह त्यं खलु सखा कुत्सस्य सहायः सन् त्यत्तत्प्रसिद्धं धनं जय-
लक्षणं यशो वा चोदीः । प्रेरितवान् । अकार्षीरित्यर्थः । हे वृषकर्मन्
वृषण्यकदकसेचनरूपकर्मोपेत वज्रिन् वज्रवन्निंद्र वृत्रं सर्वस्य धनस्यावरीतारं
कुत्सस्य शत्रुं यद्यदोभ्नाः अतुभ्नाः अहिंसीः । अपि च हे शूर शत्रूणाम् प्रेरक
वृषमणः कामाभिवर्षकमनस्केंद्र वृथाषाट् अनायासेन शत्रूणामभिभवितः त्वं
यद्वृ यदा खलु योनौ वीरैर्मिश्रणीये संग्रामे दस्यून्कुत्सस्योपक्षयित्र-
न्यान् शत्रून्परराज्यैः परागमनैर्व्यक्कृतः परराज्यमुखा यथा भवंति तथा व्यचीनः ।
तदानीं कुत्सः सर्वं यशः प्राप्नोदित्यर्थः ॥ चोदीः । चुद प्रेरणे । लुङः
नेटीति सिचि वृद्धिप्रतिषेधः । उभ्नाः । णभ तुभ हिंसायाम् । क्र्यादिकः । लङि सिपि

ತಲೋಪಶ್ಛಾಂದಸಃ । ಬಹುಲಂ ಛಂದಸ್ಯಮಾಙ್ಯೋಗೇ೨ಪೀತ್ಯಡಭಾವಃ । ಪರಾಚ್ಯೈರಿತ್ಯೇತದವ್ಯಯಂ । ನೀಚ್ಯೈರುಚ್ಚೈರಿತಿವದಿತಿ ಭಟ್ಟಭಾಸ್ಕರಮಿಶ್ರಃ । ಪರಾಚ್ಯೈಃ ಪರಾಂಚನ್ಯೈರಿತಿ ನಿರುಕ್ತಂ । ನಿ. ೧೧-೨೫ । ದಸ್ಯೂನ್ । ದೀರ್ಘಾದಟಿಸಮಾನಪಾದ ಇತಿ ನಕಾರಸ್ಯ ರುತ್ವಂ । ಆತ್ಸಾನುನಾಸಿಕಃ ಪೂರ್ವಸ್ಯ ತು ವೇತ್ಯೊಕಾರಸ್ಯ ಸಾನುನಾಸಿಕತಾ । ಅಕೃತಃ । ಕೃತೀ ಛೇದನೇ । ಲಙಿ ಸಿಪಿ ತುದಾದಿತ್ವಾಚ್ಛಪ್ರತ್ಯಯಃ । ಅಗಮಾನುಶಾಸನಸ್ಯಾನಿತ್ಯತ್ವಾತ್ ಶೇ ಮುಚಾದೀನಾಮಿತಿ ನುಮಾಗಮಸ್ಯಾಭಾವಃ । ಶಸ್ಯ ಜಿತ್ತ್ವಾದ್ಗುಣಾಭಾವಃ ॥

॥ ಪ್ರತಿಪದಾರ್ಥ ॥

(ಹೇ) **ವೃಷಕರ್ಮನ್**—ವೃಷ್ಟಿಯನ್ನುಂಟುಮಾಡುವ ಕರ್ಮಯುಕ್ತನಾದ । **ವಜ್ರಿನ್** - ವಜ್ರಾಯುಧವುಳ್ಳ (ಇಂದ್ರನೇ) । **ವೃತ್ರಂ**—(ಕುತ್ಸಶತ್ರುವಾದ) ವೃತ್ರಾಸುರನನ್ನು । **ಯತ್**—ಯಾವಾಗ । **ಉಭ್ನಾಃ** ಒಂಸಿದೆಯೋ । (ಮತ್ತೂ) **ಶೂರ**—ಶೂರನಾದ । **ವೃಷಮಣ**—ಇಷ್ಟಾರ್ಥವನ್ನು ಕೊಡುವ ಮನಸ್ಸುಳ್ಳ ಇಂದ್ರನೇ । **ವೃಥಾಷ್ಟೇ**—ಅನಾಯಾಸವಾಗಿ ಶತ್ರುಗಳನ್ನು ಪರಾಜಯಗೊಳಿಸುವ ನೀನು । **ಯದ್ಧ**—ಯಾವಾಗ । **ಯೋನೌ**—ವೀರರು ಸೇರುವ ಯುದ್ಧದಲ್ಲಿ । **ದಸ್ಯೂನ್** - ಕುತ್ಸನ ಇತರ ಶತ್ರುಗಳನ್ನು । **ಪರಾಚೈಃ**—ಪರಾಗನ್ನಸದಿಂದ । **ಏ ಅಕೃತಃ**- ಕತ್ತರಿಸಿದೆಯೋ (ಸಂಹಾರ ಮಾಡಿದೆಯೋ) । (**ತದಾ**—ಆಗ) । **ಇಂದ್ರ**—ಎಲೈ ಇಂದ್ರನೇ । **ತ್ವಂ ಹ**—ನೀನೇ । **ಸಖಾ**—(ಕುತ್ಸನಿಗೆ) ಸಹಾಯಕನಾಗಿ । **ತ್ಯತ್**—ಅದನ್ನು (ಪ್ರಸಿದ್ಧವಾದ ಜಯರೂಪವಾದ ಯಶಸ್ಸನ್ನು) । **ಚೋದೀಃ** ಪ್ರೇರಿಸಿದೆ (ಉಂಟುಮಾಡಿದ) ॥

॥ ಭಾವಾರ್ಥ ॥

ಹೇ ಇಂದ್ರ, ನೀನು ವೃಷ್ಟಿಕಾರಕನು, ವಜ್ರಾಯುಧವುಳ್ಳವನು, ಈಪ್ಸಿತವಾದದ್ದನ್ನು ಕೊಡುವವನು, ಅನಾಯಾಸವಾಗಿ ಶತ್ರುಗಳನ್ನು ಸೋಲಿಸುವವನು. ನೀನೇ ವೃತ್ರಾಸುರನನ್ನೂ ಅವನ ಸಹಾಯಕರಾದ, ಇತರ ಕುತ್ಸನ ಶತ್ರುಗಳನ್ನೂ ಪರಾಜಯಗೊಳಿಸಿ, ಕುತ್ಸನಿಗೆ ಕೀರ್ತಿಯುಂಟಾಗುವಂತೆ ಮಾಡಿದೆ.

English Translation.

Sender of rain and wielder of thunderbolt, you verily animated him to acquire such renown as that which you acquired when you slew Vritra, munificent hero, you easily conquer your foes, you put to flight the Dasyus in battle

॥ ವಿಶೇಷವಿಷಯಗಳು ॥

ತ್ಯತ್—**ತತ್, ಪ್ರಸಿದ್ಧಂ ಧನಂ, ಜಯಲಕ್ಷಣಂ ಯಶೋ ವಾ** । ಲೋಕದಲ್ಲಿ ಬಹಳಮಟ್ಟಿಗೆ ಎಲ್ಲರಿಗೂ ಉಪಯೋಗಕರವಾಗಿರುವ ದ್ರವ್ಯವು ಎಂದು ಅರ್ಥವು. ಅಥವಾ ದ್ರವ್ಯದಂತೆ ಸಂಪಾದಿಸಲು ತಕ್ಕದ್ದಾದ ಕೀರ್ತಿಯು

ವೃಷಕರ್ಮನ್—**ವೃಷ್ಟ್ಯುದಕಸೇಚನಕರ್ಮೋಪೇತ.** ಮಳೆಯ ನೀರನ್ನು ಸುರಿಸುವ ಕೆಲಸವನ್ನು ಮಾಡುವವನು.

ವೃಷಮಣಃ—**ಕಾಮಾಭಿವರ್ಷಕಮನಸ್ಕ** ಆವರವರ ಅಭಿಲಾಷೆಗಳನ್ನು ನೆರನೇರಿಸುವ ಮನಸ್ಸುಳ್ಳವನು.

ವೃಥಾಷಾಟ್—**ಅನಾಯಾಸೇನ ಶತ್ರೂಣಾಮಭಿಭವಿತಾ.** ಕೊಂಚವೂ ಆಯಾಸಪಡದಂತೆ ಶತ್ರುಗಳನ್ನು ನಿಗ್ರಹಮಾಡುವವನು ಎಂದು ಅರ್ಥವು.

ಪರಾಚ್ಯೈಃ—**ಪರಾಗಮನೈಃ** ಹಿಂದಕ್ಕೆ ಹೋಗುವುದು ಹಿನ್ಮೆಟ್ಟುವುದು. ಭಟ್ಟಭಾಸ್ಕರರು **ಪರಾಚ್ಯೈಃ ಇತ್ಯೇತದವ್ಯಯಂ ನೀಚ್ಯೈರುಚ್ಚೈರಿತಿವತ್** ಎಂದು ಅರ್ಥಮಾಡಿರುವರು ಯಾಸ್ಕರು **ಪರಾಚ್ಯೈಃ ಪರಾಂಚನೈಃ** (ನಿ ೧೧-೫೫) ಎಂದು ಅರ್ಥವನ್ನು ವಿವರಿಸಿ ಇರುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

ಚೋದೀಃ— ಚುದ ಪ್ರೇರಣೇ ಧಾತು ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ **ಇತಶ್ಚ** ಸೂತ್ರದಿಂದ ಇಕಾರಲೋಪ. ಚ್ಲಿ ಪ್ರಾಪ್ತವಾದಾಗ **ಚ್ಲೇಃ ಸಿಚ್** ಸೂತ್ರದಿಂದ ಅದಕ್ಕೆ ಸಿಚಾದೇಶ **ಆರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಅದಕ್ಕೆ ಇಡಾಗಮ **ಅಸ್ತಿ ಸಿಚೋಽಪೃಕ್ತೇ** (ಪಾ. ಸೂ ೭-೩-೯೬) ಎಂಬುದರಿಂದ ಅಪ್ಪಕ್ತವಾದ ಸಿಪ್ಪಿಗೆ ಈಡಾಗನು **ನೇಟ** (ಪಾ ಸೂ ೭-೩-೪) ಇಡಾದಿಯಾದ ಸಿಚ್ ಪರದಲ್ಲಿರುವಾಗ ವೃದ್ಧಿ ಬರುವುದಿಲ್ಲ ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ ಬರುವುದಿಲ್ಲ **ಇಟ ಈಟಿ** (ಪಾ ಸೂ. ೮-೩-೭೮) ಎಂಬುದರಿಂದ ಸಿಚ್ಚಿಗೆ ಲೋಪ **ಪುಗಂತಲಘೂಪಧಸ್ಯ** ಸೂತ್ರದಿಂದ **ಲಘೂಪಧೆಗೆ ಗುಣ ಬಹುಲಂ ಛಂದಸ್ಯಮಾಙ್-ಯೋಗೇಽಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ ಅತಿಜಂತವ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಉಭ್ನಾಃ—ಣಭ ತುಭ ಹಿಂಸಾಯಾಂ ಧಾತು ಕ್ಯಾದಿ ಲಙ್ ಮಧ್ಯಮಪುರುಷದ ಸಿಪ್ಪಿನ ಇಕಾರಕ್ಕೆ ಲೋಪ, **ಕ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. ಆಪಿತ್ ಸಾರ್ವಧಾತುಕವಾದುದರಿಂದ ಬಿತ್ತಾಗುತ್ತದೆ. ಆದುದರಿಂದ ಲಘೂಪಧಗುಣ ಬರುವುದಿಲ್ಲ ಧಾತುವಿನ ತಕಾರಕ್ಕೆ ಛಾಂದಸವಾಗಿ ಲೋಪಬರುತ್ತದೆ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಸೂತ್ರದಿಂದ ಆಡಾಗಮ ಬರುವುದಿಲ್ಲ ಯತ್ ಎಂದು ಹಿಂದೆ ಇರುವುದರಿಂದ **ಯದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಬರುವುದಿಲ್ಲ ಆಗ ವಿಕರಣದ ಸ್ವರ ಬರುತ್ತದೆ ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗಗಳು ಬಂದರೆ ಉಭ್ನಾಃ ಎಂದು ರೂಪವಾಗುತ್ತದೆ

ಪರಾಚ್ಯೈಃ—ಭಟ್ಟಭಾಸ್ಕರಮಿಶ್ರರು ನೀಚ್ಯೈಃ ಉಚ್ಚೈಃ ಎಂಬುದು ಹೇಗೆ ಅವ್ಯಯವೋ ಹಾಗೆ ಪರಾಚ್ಯೈಃ ಎಂಬುದೂ ಅವ್ಯಯವೆಂದು ವಿವರಿಸಿರುತ್ತಾರೆ ಪರಾಚ್ಯೈಃ ಪರಾಂಚನೈಃ (ನಿರು ೧೧-೫೫) ಎಂದು ನಿರುಕ್ತದಲ್ಲಿ ಹೇಳಿದೆ.

ದಸ್ಯೂನ್—**ದೀರ್ಘಾದಟಿ ಸಮಾನಪಾದೇ** (ಪಾ ಸೂ ೮-೩-೯) ಎಂಬುದರಿಂದ ನಕಾರಕ್ಕೆ ರುತ್ವ **ಆತ್ಯಾನುನಾಸಿಕಃ ಪೂರ್ವಸ್ಯತುವಾ** (ಪಾ-ಸೂ-೮-೩-೩) ಸೂತ್ರದಿಂದ ರುವಿನ ಪೂರ್ವದಲ್ಲಿರುವ ಊಕಾರಕ್ಕೆ ಅನುನಾಸಿಕತ್ವ ಬರುತ್ತದೆ.

ಅಕೃತಃ—ಕೃತೀ ಛೇದನೇ ಧಾತು. ಲಬ್‌ನ ಸಿಪ್ಪಿಗೆ **ಇತಶ್ಚ** ಎಂಬುದರಿಂದ ಇಕಾರ ಲೋಪ **ತುದಾದಿಭ್ಯ ಶಃ** ಎಂಬುದರಿಂದ ಶ ವಿಕರಣ, ಮುಚಾದಿಯಲ್ಲಿ ಸೇರಿದರೂ **ಆಗಮಶಾಸ್ತ್ರಸ್ಯ ಅನಿತ್ಯತ್ವಂ** ಎಂಬ ನಚನದಿಂದ **ಶೇಮುಚಾದೀನಾಂ** (ಪಾ ಸೂ ೭-೧-೫೯) ಎಂಬುದರಿಂದ ನುಮಾಗಮ ಬರುವುದಿಲ್ಲ ವಿಕರಣವು ಅಪಿತ್ತಾದುದರಿಂದ **ಸಾರ್ವಧಾತುಕಮಪಿತ್** ಎಂಬುದರಿಂದ ಪಿತ್ತಾಗುತ್ತದೆ ಆದುದರಿಂದ ತನ್ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ ಲಜ್‌ನಿಮಿತ್ತವಾಗಿ ಅಂಗಕ್ಕೆ ಆಡಾಗಮ ಅಕೃತಃ ಎಂದು ರೂಪವಾಗುತ್ತದೆ. ವ್ಯವಹಿತವಾದರೂ ಯಜ್ಞೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಆಡಾಗಮ ಉದಾತ್ತವಾದುದರಿಂದ ಅಕೃತಃ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ

ವೃಥಾಷಾಟ್—ಹಿಂದೆ ಪ್ರಕ್ರಿಯಾ ತೋರಿಸಿದೆ. ಸಮಾಸವಾದಾಗ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ ॥ ೪ ॥

॥ ಸಂಹಿತಾಪಾಠಃ ॥

ತ್ವಂ ಹ ತ್ಯದಿಂದ್ರಾರಿಷಣ್ಯನ್ದ್ರಳ್ಹಸ್ಯ ಚಿನ್ಮರ್ತಾನಾಮಜುಷ್ಟೌ ।
ವ್ಯಸ್ಮದಾ ಕಾಷ್ಠಾ ಅರ್ವತೇ ವರ್ಷನೇವ ವಜ್ರಿನ್ಭ್ನಥಿಹ್ಯ-
ಮಿತ್ರಾನ್ ॥ ೫ ॥

। ಪದಪಾಠಃ ।

ತ್ವಂ । ಹ । ತ್ಯತ್ । ಇಂದ್ರ । ಅರಿಷಣ್ಯನ್ । ದ್ರಳ್ಹಸ್ಯ । ಚಿತ್ । ಮರ್ತಾನಾಂ । ಅಜುಷ್ಟೌ ॥
ವಿ । ಅಸ್ಮತ್ । ಆ । ಕಾಷ್ಠಾಃ । ಅರ್ವತೇ । ವಃ । ಘನಾ ಇವ । ವಜ್ರಿನ್ । ಭ್ನಥಿಹಿ । ಅಮಿತ್ರಾನ್ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಹ ತ್ವಂ ಖಲು ತ್ಯತ್ ತಸ್ಯ ದೃಳ್ಹಸ್ಯ ಚಿತ್ ದೃಢಸ್ಯ ಕಸ್ಯಚಿದಪ್ಯರಿಷಣ್ಯನ್ ರೇಷಣಮನಿಚ್ಛನ್ ಏವಂಸ್ವಭಾವೋ ಭವಸಿ । ದೇವತಾಶ್ಚೇನಾನುಗ್ರಹೀತೃತ್ವಾತ್ । ತಥಾಪಿ ಮರ್ತಾನಾಂ ಸ್ತೋತೃಣಾಮಸ್ಮಾಕಂ ಶತ್ರುಭಿರಜುಷ್ಟಾವಪ್ರೀತೌ ಸತ್ಯಾಮಸ್ಮದರ್ವತೇಽಸ್ಮದೀಯಾಶ್ವಾಯ ಗಂತುಂ ಕಾಷ್ಠಾ ದಿಶ ಆ ಸಮಂತಾತ್ ಏ ವಃ । ವಿವೃತಾಃ ಕುರು । ಯಥಾ ಸರ್ವಾಸು ದಿಕ್ಷ್ವಸ್ಮದೀಯಾ ಅಶ್ವಾಃ ಪ್ರತಿರೋಧಮಂತರೇಣ ಗಚ್ಛಂತಿ ತಥಾ ಕುರ್ವಿತ್ಯರ್ಥಃ । ಕಿಂಚ ತತ್ರತ್ಯಾನಮಿತ್ರಾನ್ ಹೇ ವಜ್ರಿನ್ವಜ್ರವನ್ನಿಂದ್ರ ಘನೇವ ಘನೇನ ಕರಿನೇನ ಪರ್ವತೇನೇವ ವಜ್ರೇಣ ಶ್ನಥಿಹಿ । ಶ್ನಥಯ । ಜಹೀತ್ಯರ್ಥಃ । ಯದ್ವಾ । ಮರ್ತಾನಾಂ ಮನುಷ್ಯಾಣಾಂ ಮಧ್ಯೇ ಯಸ್ಮಿನ್ನಸ್ಮಿಂಶ್ಚಿತ್ತವಾಪ್ರೀತೌ ಸತ್ಯಾಂ ತಸ್ಯ ಶತ್ರೋರ್ದೃಢಸ್ಯಾಪ್ಯರಿಷಣ್ಯನ್ ರೇಷಣಂ ಹಿಂಸನಮನಿಚ್ಛನ್ತ್ವರ್ತಸೇ । ಯಸ್ಮಿಂಸ್ತು ಕುತ್ಸಾದೌ ಪ್ರೀತಿರಸ್ತಿ ತಸ್ಯ ಶತ್ರುವಧಂ ಚಿಕೀರ್ಷಸೇ । ಅತಸ್ತವ ಪ್ರಿಯಾಣಾಮಸ್ಮಾಕಮರ್ವತಃ ಇತ್ಯಾದಿ ಪೂರ್ವವತ್ ॥ ತ್ಯತ್ । ಸುಪಾಂ ಸುಲುಗಿತಿ ಷಷ್ಠ್ಯಾ ಲುಕ್ । ಅರಿಷಣ್ಯನ್ । ರಿಷ್ಪಶಬ್ದಾತ್ ಕ್ಯಚಿ ದುರಸ್ಯುರ್ದ್ರವಿಣಸ್ಯುರ್ವೃಷಣ್ಯತಿರಿಷಣ್ಯತಿ । ಪಾ. ೭-೪-೩೬ । ಇತಿ ರಿಷಣ್ಭಾವೋ ನಿಪಾತ್ಯತೇ । ನಜ್ಸಮಾಸೇಽವ್ಯಯಪೂರ್ವಪದಪ್ರಕೃತಿಸ್ವರತ್ವಂ । ಅಸ್ಮತ್ । ಪೂರ್ವವತ್ ಷಷ್ಠ್ಯಾ ಲುಕ್ । ಅರ್ವತೇ ಅರ್ವಣಸ್ತ್ರಸಾವನಘ ಇತಿ ನಕಾರಸ್ಯ ತಕಾರಾದೇಶಃ । ವನಿಪ್ಪುಸೌ ಪಿತ್ತ್ವಾದನುದಾತ್ತೌ । ಪರಿಶೇಷಾದ್ಧಾತುಸ್ವರಃ । ಘನೇವ । ಮೂರ್ತೌ ಘನಃ । ಪಾ. ೩-೩-೭೭ । ಇತಿ ಕಾರಿನ್ಯೇ ಗಮ್ಯಮಾನೇ ಹಂತೇರಪ್ಪ್ರತ್ಯಯಾಂತೋ ನಿಪಾತ್ಯತೇ । ಶ್ನಥಿಹಿ । ಶ್ನಥ್ಯ ಹಿಂಸಾರ್ಥಃ । ಣ್ಯಂತಾಲ್ಲೋಟಿ ಬಹುಲಂ ಛಂದಸೀತಿ ಶಪೋ ಲುಕ್ ॥ ೪ ॥

॥ ಪ್ರತಿಪದಾರ್ಥ ॥

ಇಂದ್ರ—ಇಂದ್ರನೇ । **ತ್ವಂ ಹ** -ನೀನಾದರೋ । **ದೃಳ್ಹಸ್ಯ**- ದೃಢನಾದ । **ತ್ಯತ್ ಚಿತ್**—ಯಾವ ಸೊಬ್ಬನಿಗೂ । **ಅರಿಷಣ್ಯನ್**—ಹಿಂಸೆಮಾಡಲು ಇಚ್ಛಿಸುವವನಲ್ಲ । (**ತಥಾಪಿ** —ತಾಗಾದರೂ) । **ಮರ್ತಾನಾಂ** ಸ್ತೋತೃಗಳಾದ ನಮಗೆ । **ಅಜುಷ್ಟ್ಯೌ**—(ಶತ್ರುಗಳಿಂದ) ಅಪ್ರೀತಿಯುಂಟಾದಲ್ಲಿ । **ಅಸ್ಮತ್** ನಮ್ಮ । **ಅರ್ವತೇ**—ಅಶ್ವಕ್ಕೆ (ಹೋಗಲು) । **ಕಾಷ್ಠಾಃ**- -ದಿಕ್ಕುಗಳನ್ನ । **ಆ** (ಎಲ್ಲಾ ಕಡೆಗಳಲ್ಲಿಯೂ) ಸುತ್ತಲೂ । **ಏ ವಃ**—ತೆರೆದಿಡು । (**ಕಿಂಚ**- ಮತ್ತು) । **ವಜ್ರಿನ್**--ವಜ್ರಾಯುಧವುಳ್ಳ ಇಂದ್ರನೇ । **ಅಮಿತ್ರಾನ್**—(ಆ ದಿಕ್ಕುಗಳಲ್ಲಿರುವ ನಮ್ಮ) ಶತ್ರುಗಳನ್ನ । **ಘನೇವ**—ಕರಿನವಾದ ಪರ್ವತದಂತೆ ಇರುವ ವಜ್ರಾಯುಧದಂತೆ । **ಶ್ನಥಿಹಿ**—(ವಧಮಾಡು) (ವಜ್ರದಿಂದ) ಉರುಳಿಸು । [ಅಥವಾ **ಇಂದ್ರ**—ಇಂದ್ರನೇ । **ತಂ ಹ**—ನೀನಾದರೋ । **ಮರ್ತಾನಾಂ** --ಮನುಷ್ಯರಲ್ಲಿ (ಯಾರ ವಿಷಯದಲ್ಲಿಯಾದರೂ) । **ಅಜುಷ್ಟ್ಯೌ** -(ನಿನಗೆ) ಅಪ್ರೀತಿಯುಂಟಾದಲ್ಲ । **ತ್ಯತ್**—ಆವನ ಶತ್ರುವಿನ ವಿಷಯದಲ್ಲಿ । **ದೃಳ್ಹಸ್ಯ ಚಿತ್** --ದೃಢನಾಗಿದ್ದರೂ । **ಅರಿಷಣ್ಯನ್** --ಹಿಂಸಿಸಲು ಇಚ್ಛೆಯಿಲ್ಲದವನು । (**ತಥಾಪಿ**—ಹಾಗಿದ್ದಾಗ್ಯೂ) । **ಮರ್ತಾನಾಂ** —ಸ್ತೋತೃಗಳಾದ । **ಅಸ್ಮತ್**- ನಮ್ಮ । **ಅರ್ವತೇ**- -ಅಶ್ವಕ್ಕೆ (ಅಶ್ವಗಳು ಸಂಚರಿಸಲು) । **ಕಾಷ್ಠಾಃ**—ದಿಕ್ಕುಗಳನ್ನು । **ಆ** —ಸುತ್ತಲೂ । **ಏ ವಃ**—ತೆರೆದಿಡು ಇತ್ಯಾದಿ] ॥

॥ ಭಾವಾರ್ಥ ॥

ಎಲೈ ಇಂದ್ರನೇ, ದೃಢಚಿತ್ತನಾದ ಯಾವನೊಬ್ಬ ಮನುಷ್ಯನಿಗೂ ಹಿಂಸೆ ಮಾಡದಿರುವುದು ಅಥವಾ ಮನುಷ್ಯರಲ್ಲಿ ಯಾರಾದರೂ ನಿನ್ನ ಅಪ್ರೀತಿಗೊಳಗಾಗಿದ್ದಾರೆ, ಅಂತಹ ಮನುಷ್ಯರು ದೃಢಚಿತ್ತವುಳ್ಳವರಾದರೂ, ಅವರ ಶತ್ರುಗಳಿಗೆ ಹಿಂಸೆ ಮಾಡದಿರುವುದೂ ನಿನ್ನ ಸ್ವಭಾವ ಆದರೂ ನಿನ್ನ ಸ್ತೋತೃಗಳಾದ ನಮಗೆ ಶತ್ರುಗಳಿಂದ ಭಯ ಬಂದಾಗ, ಎಲೈ ವಜ್ರಿಯೇ, ನಮ್ಮ ಅಶ್ವಗಳು ಎಲ್ಲ ದಿಕ್ಕುಗಳಲ್ಲಿಯೂ ಓಡಾಡುವಂತೆ ಅನುಕೂಲಪಡಿಸು ಮತ್ತು ಅಲ್ಲಿರಬಹುದಾದ ನಮ್ಮ ಶತ್ರುಗಳನ್ನು, ವಜ್ರದಿಂದ ಕಠಿನವಾದ ಪರ್ವತಗಳನ್ನು ಛೇದಿಸುವಂತೆ, ನಾಶಮಾಡು

English Translation

Indra, you who are unwilling to harm any resolute mortal, set open all the quarters of the horizen to the horses of us who praise you when we are exposed to the aversion of our enemies, and wielder of the thunderbolt, demolish our foes as with a club

॥ ವಿಶೇಷ ವಿಷಯಗಳು ॥

ಅರಿಷಣ್ಯನ್ —**ರೇಷಣಮಿಚ್ಛನ್** ಹಿಂಸೆಯನ್ನು ಮಾಡಲು ಇಚ್ಛೆಯಿಲ್ಲದವನು

ಮರ್ತಾನಾಂ—ಸ್ತೋತೄಣಾಂ ಹೊಗಳತಕ್ಕ, ಸ್ತುತಿಮಾಡತಕ್ಕ ಮನುಷ್ಯರು,

ವಿ ವಃ- ವಿವೃತಾಃ ಕುರು । ಯಥಾ ಸರ್ವಾಸು ದಿಕ್ಷು ಅಸ್ಮದೀಯಾಃ ಅಶ್ವಾಃ ಪ್ರತಿರೋಧಮಂತರೇಣ ಗಚ್ಛಂತಿ ತಥಾ ಕುರು. ಎಲ್ಲಾ ದಿಕ್ಕುಗಳಲ್ಲಿಯೂ ಯಾವ ತಡೆಯೂ ಇಲ್ಲದ ಹಾಗೆ ನಮ್ಮ ಕುದುರೆಗಳು ತಿರುಗಾಡುವ ಹಾಗೆ ಮಾಡು

॥ ವ್ಯಾಕರಣಕ್ರಿಯಾ ॥

ತೃತ್ -ಷಷ್ಠೀ ಏಕವಚನ ಪರವಲ್ಲಿರುವಾಗ **ಸುಪಾಂ ಸುಲುಕ್**—ಸೂತ್ರದಿಂದ ಷಷ್ಠಿಗೆ ಲುಕ್

ಅರಿಷಣ್ಯನ್—ರೇಷಣಂ ಆತ್ಮನಃ ಇಚ್ಛತಿ ರಿಷಣ್ಯತಿ ರಿಷ್ಯ ಶಬ್ದದಮೇಲೆ **ಸುಪ ಆತ್ಮನಃ ಕ್ಯಚ್** ಎಂಬುದರಿಂದ ಕ್ಯಚ್ ವಿವಕ್ಷಾಮಾಡಿದಾಗ **ದುರಸ್ಯು ದ್ರುವಿಣಸ್ಯುರ್ವ್ಯಷಣ್ಯತಿ ರಿಷಣ್ಯತಿ** (ಪಾ ಸೂ ೭-೪-೩೬) ಎಂಬುದರಿಂದ ರಿಷಣ್ ಎಂಬ ಸ್ವರೂಪವು ನಿಪಾತಿತವಾಗುತ್ತದೆ ರಿಷಣ್ಯತಿ ಇತಿ ರಿಷಣ್ಯನ್ ರಿಷಣ್ಯ ಎಂಬ ಕ್ಯಜಂತದ ಮೇಲೆ ಲಡರ್ಥದಲ್ಲಿ ಶತೃಪ್ರತ್ಯಯ ನ ರಿಷಣ್ಯನ್ ಅರಿಷಣ್ಯನ್ ನಞಸಮಾಸವಾದಾಗ **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೨-೨) ಸೂತ್ರದಿಂದ ಅವ್ಯಯಸ್ವರ್ವಪದಪ್ರಕೃತಿಸ್ವರ ಬರುತ್ತದೆ

ಅಸ್ಮತ್—ಅಸ್ಮಚ್ಛಬ್ದದಮೇಲೆ ಷಷ್ಠೀ ಏಕವಚನವಿರುವಾಗ **ಸುಪಾಂ ಸುಲುಕ್**—ಸೂತ್ರದಿಂದ ಲುಕ್

ಅರ್ವತೇ—ಋಧಾತುವಿಗೆ **ಅನ್ಯೇಭ್ಯೋಽಪಿದೃಶ್ಯತೇ** ಎಂಬುದರಿಂದ ವನಿಪ್ ಪ್ರತ್ಯಯ ವನಿಪ್ ಸರದಲ್ಲಿರುವಾಗ ಧಾತುವಿಗೆ ಗುಣ ಅರ್ವನ್ ಶಬ್ದವಾಗುತ್ತದೆ ಚತುರ್ಥೀ ಏಕವಚನಪರದಲ್ಲಿರುವಾಗ **ಅರ್ವಣಸ್ತ್ರ್ಯ-**

ಸಾವನಘಾಃ (ಪಾ ಸೂ. ೬-೪-೧೩೭) ಎಂಬುದರಿಂದ ನಕಾರಕ್ಕೆ ತಕಾರಾದೇಶ ಅರ್ನತೀ ಎಂದು ರೂಪವಾಗುತ್ತದೆ. ವನಿಪ್ ಪ್ರತ್ಯಯ ಙೀ ಸುಪ್ ವಿಭಕ್ತಿಯು **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತಗಳಾಗುವುದರಿಂದ ಪರಿಶೇಷದಿಂದ ಧಾತುಸ್ವರ ಉಳಿಯುತ್ತದೆ.

ಘನೇವ--ಮೂರ್ಧ್ನಿ ಘನಃ (ಪಾ ಸೂ ೩-೩-೭೭) ಎಂಬುದರಿಂದ **ಕಾರಿಣ್ಯವು** ತೋರುತ್ತಿರುವಾಗ ಹನ್ ಧಾತುವಿಗೆ ಅಪ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ

ಶ್ನಥಿಹಿ—ಶ್ನಥ ಹಿಂಸಾಯಾಂ ಧಾತು. ಪ್ರಯೋಜಕವ್ಯಾಪಾರ **ಶೋರುತ್ತಿರುವಾಗ ಹೇತುಮತಿ ಚ** ಸೂತ್ರದಿಂದ ಣಿಚ್. ಣಿಜಂತದ ಮೇಲೆ ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. ಅದಕ್ಕೆ ಹಿ ಆದೇಶ. **ಕರ್ತರಿ ಶಪ್** ಸೂತ್ರದಿಂದ ಪ್ರಾಪ್ತವಾದ ಶಪ್ಪಿಗೆ **ಬಹುಲಂ ಛಂದಸಿ** ಎಂಬುದರಿಂದ ಲುಕ್, ಶ್ನ ಧಿಹಿ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ **ತಿಜ್ಜತಿಜಃ** ಸೂತ್ರದಿಂದ ನಿಘಾತಸ್ವರ ಬರುತ್ತದೆ. ॥ ೫ ॥

॥ ಸಂಹಿತಾಪಾಠಃ ॥

त्वां ह त्यदिन्द्रार्णसातौ स्वर्मीळ्हे नर आजा हवन्ते ।
तव स्वधाव इयमा समर्य ऊतिर्वाजेष्वतसाय्या भूत् ॥ ६ ॥

॥ ಪದಪಾಠಃ ॥

त्वां । ह । त्यत् । इन्द्र । अर्णःऽसातौ । स्वरःऽमीळ्हे । नरः । आजा । हवन्ते ।

तव । स्वधाऽवः । इयं । आ । सऽमर्ये । ऊतिः । वाजेषु । अत-साय्या । भूत् ॥ ६ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅರ್ಣಸಾತಾವರ್ಣಾನಾಂ ಗಂತ್ರಾಣಾಂ ಯುದ್ಧೇ ಪ್ರವೃತ್ತಾನಾಂ ಪುರುಷಾಣಾಂ ಸಾತಿರ್ಲಾಭೋ ಯಸ್ಮಿನ್ ಸ್ವರ್ಮೀಳ್ಹೇ। ಮೀಳ್ಹಮಿತಿ ಧನನಾಮ। ಸುಷ್ಠ್ವರಣೀಯಂ ಧನಂ ಯಸ್ಮಿನ್। ಏವಂಭೂತ ಆಜಾ ಆಜೌ ಸಂಗ್ರಾಮೇ ತ್ವತ್ತಂ ಪ್ರಸಿದ್ಧಂ ತ್ವಾಮೇವ ನರೋ ಯೋದ್ಧುಕಾಮಾಃ ಪುರುಷಾಃ ಸಹಾಯಾರ್ಥಂ ಹವಂತೇ। ಆಹ್ವಯಂತಿ। ಯದ್ವಾ। ಅರ್ಣಸ ಉದಕಸ್ಯ ಸಾತಿರ್ಲಾಭೋ ಯಸ್ಮಿನ್ಸ್ವರ್ಗಾದಿಯುದ್ಧೇ ತಸ್ಮಿನ್ನಿತ್ಯರ್ಥಃ। ವೃಷ್ಟಿನಿರೋಧಕೇನ ವೃತ್ರೇಣ ಸಹ ವರ್ಷಣಾರ್ಥಂ ತವ ಯದ್ಯುದ್ಧಂ ತತ್ರ ಸ್ತೋತಾರಸ್ತ್ವಾಂ ಪ್ರೋತ್ಸಾಹಯಂತೀತಿ ಭಾವಃ। ಯಸ್ಮಾದೇವಂ ತಸ್ಮಾತ್ ಹೇ ಸ್ವಧಾವೋ ಹೇ ಅನ್ನವನ್ ಬಲವನ್ವೇಂದ್ರ ಸಮರ್ಯೇ ಸಂಗ್ರಾಮೇ ತವ ಸಂಬಂಧಿನೀಯಮೂತಿಸ್ತ್ವದೀಯಮಿದಂ ರಕ್ಷಣಂ ಆ ಅಸ್ಮದಾಭಿಮುಖ್ಯೇನ ಭೂತ್। ಭವತು। ವಾಜೇಷು ಸಂಗ್ರಾಮೇಷು ಯೈಷೋತಿರತಸಾಯ್ಯಾ ಯೋದ್ಧೃಭಿಃ ಪ್ರಾಪ್ತವ್ಯಾ ಭವತಿ॥ ತ್ಯತ್। ಸುಪಾಂ ಸುಲುಗಿತಿ ದ್ವಿತೀಯಾಯಾ ಲುಕ್। ಅರ್ಣಸಾತೌ। ಋ ಗತೌ। ಬಹುಲವಚನಾದೌಣಾದಿಕೋ ನಸ್ಪ್ರತ್ಯಯಃ। ಷಣು ದಾನ ಇತ್ಯಸ್ಮಾದ್ಭಾವೇ ಕ್ತಿನಿ ಜನಸನಖನಾಮಿತ್ಯನುನಾಸಿಕಸ್ಯಾತ್ವಂ। ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ। ಯದ್ವಾ। ಉದಕೇ ನುಟ್ಚ। ಉ. ೪-೧೯೬। ಇತ್ಯರ್ತೇರಸುನ್ಪ್ರತ್ಯಯೋ ನುಡಾಗಮಶ್ಚ। ಪೀವೋಪವಸನಾದೀನಾಂ ಛಂದಸಿ ಲೋಪೋ ವಕ್ತವ್ಯಃ। ಮ. ೬-೩-೧೦೯-೬। ಇತಿ ಸಲೋಪಃ। ನಿತ್ತ್ವಾದಾದ್ಯುದಾತ್ತತ್ವಂ। ಪೂರ್ವವದ್ಬಹುವ್ರೀಹಿಸ್ವರಃ। ಸ್ವರ್ಮೀಳ್ಹೇ। ಸ್ವರ್ಶಬ್ದೋ ನ್ಯಙ್ಸ್ವರೌ ಸ್ವರಿತಾವಿತಿ ಸ್ವರಿತಃ। ಬಹುವ್ರೀಹಿಸ್ವರೇಣ ಸ ಏವ ಶಿಷ್ಯತೇ। ಆಜಾ। ಸುಪಾಂ ಸುಲುಗಿತಿ ಸಪ್ತಮ್ಯಾ ಡಾದೇಶಃ। ಸ್ವಧಾವಃ। ಮತುವಸೋರುರಿತಿ ಮತುಪೋ ರುತ್ವಂ। ಅತಸಾಯ್ಯಾ। ಅತ ಸಾತತ್ಯಗಮನೇ। ಔಣಾದಿಕಃ ಸಾಯ್ಯಪ್ರತ್ಯಯಃ। ತಸ್ಯಾಡಾಗಮಶ್ಚ। ಆಗಮಾನುದಾತ್ತತ್ವೇ ಪ್ರತ್ಯಯಾದ್ಯುದಾತ್ತತ್ವಂ। ಭೂತ್। ಛಂದಸಿ ಲುಙ್ಲಙ್ಲಿಟ ಇತಿ ಪ್ರಾರ್ಥನಾಯಾಂ ಲುಙ್ ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ॥

॥ ಪ್ರತಿಪದಾರ್ಥ ॥

ಇಂದ್ರ—ಇಂದ್ರನೇ। **ಅರ್ಣಸಾತೌ**—ಹೊರಟಿರುವವರಿಗೆ (ಯುದ್ಧದಲ್ಲಿ ತೊಡಗಿರುವವರಿಗೆ) ಲಾಭದಾಯಕವಾದ। **ಸ್ವರ್ಮೀಳ್ಹೇ**—ಪ್ರಯತ್ನಸಾಧ್ಯವಾದ ಧನವುಳ್ಳ। **ಆಜಾ**—ಸಂಗ್ರಾಮದಲ್ಲಿ। **ತ್ಯತ್**—(ಪ್ರಸಿದ್ಧನಾದ) ನಿನ್ನನ್ನೇ। **ನರಃ**—ಯುದ್ಧಪೇಕ್ಷೆಗಾದವರು। **ಹವಂತೇ**—(ಸಹಾಯಕ್ಕಾಗಿ) ಕರೆಯುತ್ತಾರೆ। [ಅಥವಾ **ಅರ್ಣಸಾತೌ**—ಉದಕ ಲಾಭವುಳ್ಳ (ವೃತ್ರಾದಿಗಳೊಡನೆ ನಡೆದ)। **ಸ್ವರ್ಮೀಳ್ಹೇ**—ಪ್ರಯತ್ನಸಾಧ್ಯವಾದ ಧನವುಳ್ಳ। **ತವ**—ನಿನ್ನ ಸಂಬಂಧವಾದ। **ಆಜಾ**—ಯುದ್ಧದಲ್ಲಿ। **ತ್ಯತ್**—ಆ (ಪ್ರಸಿದ್ಧನಾದ) ನಿನ್ನನ್ನ। **ನರಃ**—ಸ್ತೋತೃಗಳು। **ಹವಂತೇ**—ಪ್ರೋತ್ಸಾಹಿಸುತ್ತಾರೆ।] **ಸ್ವಧಾವಃ**—ಅನ್ನಯುಕ್ತನಾದ ಅಥವಾ ಬಲಿಷ್ಠನಾದ ಎಲೈ ಇಂದ್ರನೇ। **ವಾಜೇಷು**—ಯುದ್ಧಗಳಲ್ಲಿ। **ಅತಸಾಯ್ಯಾ**—ಯೋದ್ಧೃಗಳಿಗೆ ನಿನ್ನಿಂದ ಯಾವ ರಕ್ಷಣೆಯು ಕೊಡಲ್ಪಡುವುದೋ। **ಇಯಂ ಊತಿಃ**—ಅಂತಹ ರಕ್ಷಣೆಯು। **ಸಮರ್ಯೇ**—ನಾವು ಮಾಡುವ ಯುದ್ಧದಲ್ಲಿಯೂ (ನಮಗೆ)। **ಭೂತ್**—ಆಗಲಿ (ಲಭಿಸಲಿ)

॥ ಭಾವಾರ್ಥ ॥

ಎಲೈ ಇಂದ್ರನೇ, ಅನೇಕ ಮನುಷ್ಯರಿಂದ ಧನಲಾಭಕ್ಕೋಸ್ಕರ ಮಾಡಲ್ಪಡುತ್ತಿರುವ ಯುದ್ಧದಲ್ಲಿ, ಮನುಷ್ಯರು ನಿನ್ನನ್ನು ಸಹಾಯಾರ್ಥಿಗಳಾಗಿ ಸ್ತುತಿಸುತ್ತಾರೆ. (ವೃಷ್ಟಿ ನಿರೋಧಕನಾದ ವೃತ್ರಾಸುರನೊಡನೆ ವೃಷ್ಟಿಯನ್ನುಂಟು ಮಾಡಲು ನೀನು ಮಾಡಿದ ಯುದ್ಧದಲ್ಲಿ ನಿನ್ನನ್ನು ಮನುಷ್ಯರು ಪ್ರೋತ್ಸಾಹಿಸುತ್ತಾರೆ) ಬಲಿಷ್ಠನಾದ ಇಂದ್ರನೇ, ನಿನ್ನ ರಕ್ಷಣೆಯು ಯುದ್ಧದಲ್ಲಿ ತೊಡಗಿರುವ ಎಲ್ಲ ಯೋದ್ಧೃಗಳಿಗೂ ಅತ್ಯಾವಶ್ಯಕ ಅಂತಹ ನಿನ್ನ ರಕ್ಷಣೆಯು ನಮಗೆ ಲಭಿಸಲಿ.

English Translation

Men invoke you, such as you are in the thick-thronged and wealth bestowing conflict. O powerful Indra, may this succour ever be granted in war, worthy to be enjoyed in battle

॥ ವಿಶೇಷವಿಷಯಗಳು ॥

ಅರ್ಣಸಾತೌ-- ಅರ್ಣಾನಾಂ ಗಂತ್ರ್ಣಾಂ ಯುದ್ಧೇ ಪ್ರವೃತ್ತಾನಾಂ ಪುರುಷಾಣಾಂ ಸಾತಿರ್ಲಾಭೋ ಯಸ್ಮಿನ್ । ಅರ್ಣಸ ಉದಕಸ್ಯ ಸಾತಿರ್ಲಾಭೋ ಯಸ್ಮಿನ್ । ಯುದ್ಧದಲ್ಲಿ ಎಂದು ಅರ್ಥವು ವೃತ್ರನೆಂಬ ಅಸುರನು ಲೋಕಕ್ಕೆ ಮಳೆಯು ಆಗದೆ ಇರುವಂತೆ ಪ್ರತಿಬಂಧಕವನ್ನು ಮಾಡಿದಾಗ ಇಂದ್ರನು ಅವನೊಡನೆ ಯುದ್ಧವನ್ನು ಮಾಡಿ ಮಳೆಯು ಒರುವಂತೆ ಮಾಡಿದನು ಯುದ್ಧಕ್ಕಾಗಿ ಉದ್ಯುಕ್ತರಾದ ವೀರಪುರುಷರು ಸೇರುವ ಸನ್ನಿವೇಶವು ಯುದ್ಧವೆನಿಸಿರುವುದು ವೃತ್ರಾಸುರನೊಡನೆ ಇಂದ್ರನು ನಡೆಸಿದ ವ್ಯವಹಾರವು ಫಲವು ಉದಕಪ್ರಾಪ್ತಿಯಾಗಿರುವದರಿಂದ ಅಂತಹ ಯುದ್ಧದಲ್ಲಿ ಎಂದು ಅರ್ಥವು

ಸ್ಪಧಾವಃ—ಆನ್ನವನ್, ಬಲವನ್ ವಾ. ಅನ್ನವನ್ನು ಅಥವಾ ಬಲವನ್ನು ಹೊಂದಿರುವ ಇಂದ್ರನು ಎಂದು ಅರ್ಥವು

ಅತಸಾಯ್ಯೈ-- ಅನುಪಕ್ಷೀಣಾ, ಸತತಗಾಮಿನೀ ವಾ. ಕೊಂಚವೂ ಕಡಿಮೆಯಾಗದಿರುವುದು ಅಥವಾ ಒಂದೇ ಸಮನಾಗಿ ನಡೆಯುತ್ತಿರುವುದು ಎಂಬುವುದಾಗಿ ಸ್ಕಂದಸ್ವಾಮಿಗಳು ಅರ್ಥಮಾಡಿರುವರು ಸಾಯಣ ಭಾಷ್ಯದಲ್ಲಿ ನಿನ್ನ ರಕ್ಷಣೆಯು ಯುದ್ಧ ಮಾಡುವ ನೈಸರ್ಗಿಕರಿಂದ ಹೊಂದಲ್ಪಡುವುದು ಎಂದು (ಊತಿಃ ಅತಸಾಯ್ಯಾ ಯೋದ್ಧೃಭಿಃ ಪ್ರಾಪ್ತವ್ಯಾ ಭವತಿ) ಅರ್ಥವನ್ನು ನಿವರಿಸಿರುವರು

ಸಮರ್ಯೇ—ಸಂಗ್ರಾಮೇ ಮರ್ಯೈಃ ಮರಣಧರ್ಮಿಭಿಃ ಸಹ ವರ್ತತೇ ಇತಿ ಸಮರ್ಯಃ ಯುದ್ಧವು ರಣಃ, ವಿವಾಕ್. ಮೊದಲಾದ ನಲವತ್ತಾರು ಯುದ್ಧವಾಚಕಗಳಲ್ಲಿ **ಈ** ಪದವೂ (ನಿ ೩-೯) ಸರಿತವಾಗಿರುವುದು

ಸ್ಪರ್ಮೀಳ್ಹೇ--ಮೀಳ್ಹಮಿತಿ ಧನನಾಮ ಸುಷ್ಠು ಅರಣೀಯಂ ಧನಂ ಯಸ್ಮಿನ್. ಅಪೇಕ್ಷಿತವಾಗಿರುವ ಧನವು ಎಂದು ಅರ್ಥವು. ಮಘಂ, ರೇಕ್ಣಃ, ರಿಕ್ಥಂ, ಎಂಬ ಇಪ್ಪತ್ತೈಂಟು ಧನನಾಮಗಳಲ್ಲಿ ಮೀಳ್ಹಶಬ್ದವು

(ನಿ ೩-೯) ಪರಿತವಾಗಿರುವುದು. ಮೀಳ್ಹುಂ ಮೀಳ್ಹಂ, ಎಂದು ಈ ಧನವಾಚಕವಾದ ಶಬ್ದವು ಉಕಾರಾಂತವಾಗಿಯೂ ಅಕಾರಾಂತವಾಗಿಯೂ ಇರುವುದು ನಿರುಕ್ತದಲ್ಲಿ ಉಕಾರಾಂತನಾಗಿ ಪಾಠಮಾಡಿರುವುದು ನಿರುಕ್ತವ್ಯಾಖ್ಯಾನದಲ್ಲಿ ಭಟ್ಟಭಾಸ್ಕರ ಮಿಶ್ರರು ಮಾಡಿರುವ ಭಾಷ್ಯದಲ್ಲಿ "ಮಿಳ್ಹುಷ್ಟಮ ಶಿವತಮ." ಎಂದು ಪಾಠವನ್ನು ಅಂಗೀಕರಿಸಿ ವ್ಯಾಖ್ಯಾನ ಮಾಡಿರುವರು " ರುದ್ರಸ್ಯ ಯೇ ಮಿಳ್ಹುಷಃ ಸಂತಿ ಪುತ್ರಾಃ " " ತಾಂ ಆರುದ್ರಸ್ಯ ಮಿಳ್ಹುಷಃ " ಎಂದು ಋಕ್ಸಂಹಿತಾ ಪಾಠದಲ್ಲಿ ಉಕಾರಾಂತವಾಗಿರುವುದು. ಆದ್ದರಿಂದ ಈ ಶಬ್ದವು ಉಕಾರಾಂತವಾಗಿರಬೇಕೆಂದು ಕೆಲವರು ಅಭಿಪ್ರಾಯ ಪಡುವರು ಇನ್ನೂ ಕೆಲವರು " ಮಿಳ್ಹಃ " " ಮಿಳ್ಹಾವ್ದಸಂ " ಎಂದು ಸಕಾರಾಂತವೆಂದು ಈ ಶಬ್ದವನ್ನು ನಿರ್ಣಯ ಮಾಡಿರುತ್ತಾರೆ ಈ ಪ್ರಕಾರವಾದ ಭಿನ್ನಭಿನ್ನವಾದ ಅಭಿಪ್ರಾಯಗಳು ಇರುವ ಕಾರಣ ಅಕಾರಾಂತ ಮತ್ತು ಉಕಾರಾಂತವಾದ ಎಂಬ ಎರಡು ವಿಧವಾದ ಪಾಠವನ್ನೂ ಅಂಗೀಕರಿಸಿರುವರು ಎಂದು ತಿಳಿಯಬೇಕು.

" ವ್ಯಾಕರಣಪ್ರಕ್ರಿಯಾ "

ತ್ಯತ್—ತ್ಯತ್ ಈವು ಐದಿರುವಾಗ **ಸುಪಾಂ ಸುಲುಕ್** ಸೂತ್ರದಿಂದ ಲುಕ್

ಅರ್ಣಸಾತೌ - ಋ ಗತೌ ಧಾತು ಉಣ್ಣಾದಿಸೂತ್ರದಲ್ಲಿ ಒಪುಲಗ್ರಹಣದಿಂದ ಉಣ್ಣಾದಿಸಿನ್ ಪ್ರತ್ಯಯವು ಈ ಧಾತುವಿಗೂ ಒರುತ್ತದೆ ನ ಸರದಲ್ಲಿರುವಾಗ ಧಾತುಸಿಗೆ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಗುಣ **ರಷಾಭ್ಯಾಂ ನೋ ನಃ ಸಮಾನಪದೇ** ಸೂತ್ರದಿಂದ ನಕಾರಕ್ಕೆ ಣತ್ವ ಅರ್ಣ ಎಂದಾಗುತ್ತದೆ. ಷಣು ದಾನೇ ಧಾತು ಇದಕ್ಕೆ ಭಾವಾರ್ಥದಲ್ಲಿ **ಸ್ತ್ರಿಯಾಂ ಕ್ತಿನ್** ಎಂಬುದರಿಂದ ಕ್ತಿನ್ ಪ್ರತ್ಯಯ ಕಿತ್ತಾದುದರಿಂದ **ಜನಸನಖನಾಂ** (ಪಾ ಸೂ ೬-೪-೪೨) ಎಂಬುದರಿಂದ ಧಾತುವಿನ ನಕಾರಕ್ಕೆ ಆತ್ವ. ಅರ್ಣಾನಾಂ ಸಾತಿಃ ಯಸ್ಮಿನ್ ಅರ್ಣಸಾತಿ ತಸ್ಮಿನ್ ಅರ್ಣಸಾತೌ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರಃ ಒರುತ್ತದೆ ಅಥವಾ **ಉದಕೇ ನುಟ್ ಚ** (ಉ ಸೂ ೪೩೬) ಎಂಬುದರಿಂದ ಹಿಂದಿನಂತೆಯೇ ಋಧಾತುವಿಗೆ ಅಸುನ್ ಪ್ರತ್ಯಯ ಆದರೆಯದನ ನುಡಾಗಮವೂ ಕೂಡಾ ಒರುತ್ತದೆ ಧಾತುವಿಗೆ ಗುಣ ಬಂದಾಗ **ಅರ್ಣಸ್** ಎಂದು ರೂಪವಾಗುತ್ತದೆ ಸಾತಿಃ ಎಂಬುದು ಹಿಂದಿನಂತೆಯೇ ಆಗುತ್ತದೆ ಸಮಾಸವಾದಾಗ (ಅರ್ಣಸಃ ಸಾತಿಃ ಯಸ್ಮಿನ್) **ಪೀವೋಪಸನಾದೀನಾಂ ಛಂದಸಿ ಲೋಪೋ ವಕ್ತವ್ಯಃ** (ಪಾ ವ. ೬-೩-೧೦೯-೬) ಎಂಬುದರಿಂದ ಆ ಗಣದಲ್ಲಿ ಇದು ಸೇರಿರುವುದರಿಂದ ಸಲೋಪ ಬರುತ್ತದೆ ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತಸ್ವರ (ಅರ್ಣಸ್) ಬರುತ್ತದೆ ಹಿಂದಿನಂತೇ ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ

ಸ್ವರ್ಮಿಳ್ಹೇ—ಸ್ವರ್ ಎಂಬುದು ಅವ್ಯಯ ಇದು **ನ್ಯಙ್ ಸ್ವರೌ ಸ್ವರಿತೌ** (ಫಿ ಸೂ. ೭೪) ಎಂಬ ಸೂತ್ರದಿಂದ ಸ್ವರಿತವಾಗುತ್ತದೆ ಸ್ವರ್ ಮಿಳಹಂ ಯಸ್ಮಿನ್ ಎಂದು ಬಹುವ್ರೀಹಿಯಲ್ಲಿ **ಬಹುವ್ರೀಹೌ** ಸೂತ್ರದಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ

ಆಜಾ—ಆಜಿ+ಜಿ ಎಂದಿರುವಾಗ **ಸುಪಾಂ ಸುಲುಕ್** ಸೂತ್ರದಿಂದ ಸಪ್ತಮಿಯ ವಿಭಕ್ತಿಗೆ ಡಾದೇಶ ಬರುತ್ತದೆ ಡಿತ್ತಾದುದರಿಂದ ಟಲೋಪ ಬಂದು ಆಜಾ ಎಂದು ರೂಪವಾಗುತ್ತದೆ.

ಸ್ವಧಾವಃ—ಸ್ವಧಾ ಅಸ್ಯ ಅಸ್ತಿ ಇತಿ ಸ್ವಧಾವಾನ್ **ತದಸ್ಯಾಸ್ತ್ಯ**-ಸೂತ್ರದಿಂದ ಮತುಪ್ ಸಂಬುದ್ಧಿಯಲ್ಲಿ **ಮತುವಸೋರುಃ ಸಂಬುದ್ಧೌ** (ಪಾ ಸೂ ೮-೩-೧) ಎಂಬುದರಿಂದ ಮತುಸಿಗೆ ರುತ್ವ. ಆಕಾರದ ಪರದಲ್ಲಿರುವುದ

ರಿಂದ **ಮಾದುಸಥಾಯಾಃ** ಸೂತ್ರದಿಂದ ಮತುಪಿನ ಮಕಾರಕ್ಕೆ ವಕಾರಾದೇಶ. ಸ್ವಥಾವರ್ ಎಂದಿರುವಾಗ **ಖರವಸಾನಯೋರ್ವಿಸರ್ಜನೀಯಃ** ಎಂಬುದರಿಂದ ಅವಸಾನದಲ್ಲಿ ವಿಸರ್ಗ ಬರುತ್ತದೆ. ಸ್ವಥಾವಃ ಎಂದು ರೂಪವಾಗುತ್ತದೆ

ಅತಸಾಯ್ಯಾ—ಅತ ಸಾತತ್ಯ ಗಮನೇ ಧಾತು. ಇದಕ್ಕೆ ಉಣಾದಿಸಿದ್ಧವಾದ ಸಾಯ್ಯ ಪ್ರತ್ಯಯ ಆದಕ್ಕೆ ಆಡಾಗಮವೂ ಬರುತ್ತದೆ. **ಆಗಮಾ ಅನುದಾತ್ತಾಃ** ಎಂದುದರಿಂದ ಸ್ವರ್ಯಯದ ಆದ್ಯುದಾತ್ತಸ್ವರದಿಂದ ಸಕಾರೋತ್ತ ರಾಕಾರವು ಉದಾತ್ತವಾಗುತ್ತದೆ

ಭೂತ್—ಭೂ ಸತ್ತಾಯಾಂ ಧಾತು. ವ್ಯಾರ್ಧನಾರೂಪಾರ್ಧದಲ್ಲಿ **ಥಂದಸಿ ಲುಙ್‌ಲುಙ್‌ಲಿಟಃ** ಎಂಬುದರಿಂದ ಲುಙ್. ಪ್ರಥಮಪುರುಷ ಏಕವಚನದ ತಿಪ್ಪಿನ ಇಕಾರಕ್ಕೆ **ಇತಶ್ಚ** ಎಂಬುದರಿಂದ ಲೋಪ ಚ್ಲಿಗೆ ಪ್ರಾಪ್ತವಾದ ಸಿಚ್ಚಿಗೆ **ಗಾತಿಸ್ಥಾಘುಪಾ**–ಸೂತ್ರದಿಂದ ಲುಕ್ **ಬಹುಲಂ ಥಂದಸ್ಯಮಾಙ್‌ಯೋಗೇ೭ಪಿ** ಎಂಬುದ ರಿಂದ ಮಾಙ್ ಸಂಬಂಧವಿಲ್ಲದಿದ್ದರೂ ಅಡಾಗನು ಬರುವುದಿಲ್ಲ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ತ್ವಂ ಹ ತ್ಯದಿಂದ್ರ ಸಪ್ತ ಯುಧ್ಯನ್ಪುರೋ ವಜ್ರಿನ್ಪುರುಕುತ್ಸಾಯ ದರ್ದರಃ ।
ಬರ್ಹಿರ್ನ ಯತ್ಸುದಾಸೇ ವೃಥಾ ವರ್ಗಂಹೋ ರಾಜನ್ವರಿವಃ ಪೂರವೇ ಕರಃ ॥ ೭ ॥

॥ ಪದಪಾಠಃ ॥

ತ್ವಂ । ಹ । ತ್ಯತ್ । ಇಂದ್ರ । ಸಪ್ತ । ಯುಧ್ಯನ್ । ಪುರಃ । ವಜ್ರಿನ್ । ಪುರು ಕುತ್ಸಾಯ । ದರ್ದರಿತಿ ದರ್ದರಃ ।

ಬರ್ಹಿಃ । ನ । ಯತ್ । ಸುದಾಸೇ । ವೃಥಾ । ವರ್ಕ್ । ಅಂಹೋಃ । ರಾಜನ್ ।
ವರಿವಃ । ಪೂರವೇ । ಕರಿತಿ ಕಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ವಜ್ರಿನ್ ವಜ್ರವನ್ನಿಂದ್ರ ಪುರುಕುತ್ಸಾಯೈತತ್ಸಂಜ್ಞಾಯ ಋಷಯೇ ಯುಧ್ಯನ್ ತದೀಯೈ-
ಶತ್ರುಭಿಃ ಸಹ ಯುದ್ಧಂ ಕುರ್ವಾಣಸ್ತ್ವಮೇವ ತ್ಯತ್ ತಾಃ ಸಪ್ತ ಪುರಃ ತದೀಯಾನಿ ಸಪ್ತಸಂಖ್ಯಾನಿ
ನಗರಾಣಿ ದರ್ದಃ । ವ್ಯದಾರಯಃ । ಅಭೈತ್ಸೀರಿತ್ಯರ್ಥಃ । ಅಪಿ ಚ ಸುದಾಸ ಏತತ್ಸಂಜ್ಞಾಯ ರಾಜ್ಞೇ೭ಂ-
ಹೋರೇತತ್ಸಂಜ್ಞಸ್ಯಾಸುರಸ್ಯ ಸಂಬಂಧಿ ಯದ್ಧನಮಸ್ತಿ ತದ್ಬೃಥಾನಾಯಾಸೇನ ಬರ್ಹಿರ್ನ ಬರ್ಹಿರಿವ
ವರ್ಕ್ । ಆವೃಣಕ್ । ಆಚ್ಛಿನ ಇತ್ಯರ್ಥಃ । ತದನಂತರಂ ಪೂರವೇ ತ್ವಾಂ ಹವಿಷಾ ಪೂರಯತೇ ತಸ್ಮೈ
ಸುದಾಸೇ ಹೇ ರಾಜನ್ ಸ್ವಾಮಿನ್ನಿಂದ್ರ ವರಿವೋ ಧನಂ ಕಃ । ಅಕಾರ್ಷೀಃ ॥ ತ್ಯತ್ । ಸುಪಾಂ ಸುಲುಗಿತಿ
ವಿಭಕ್ತೇರ್ಲುಕ್ । ದರ್ದಃ । ದೃ ವಿದಾರಣೇ । ಅಸ್ಮಾದ್ಯಙ್ಲುಗಂತಾಲ್ಲಙಿ ಸಿಪ್ಯದಾದಿವಚ್ಛೀತಿ ವಚನಾ-
ಚ್ಛಪೋ ಲುಕ್ । ಹಲ್ಙ್ಯಾಬ್ಭ್ಯ ಇತಿ ಸಲೋಪಃ । ಬಹುಲಂ ಛಂದಸ್ಯಮಾಙ್ಯೋಗೇ೭ಪೀತ್ಯಡಭಾವಃ ।
ಸುದಾಸೇ । ಶೋಭನಂ ದದಾತೀತಿ ಸುದಾಃ । ಅಸುನ್ । ಸುದಾಃ ಕಲ್ಯಾಣದಾನಃ । ನಿ. ೨-೨೪ । ಇತಿ
ಯಾಸ್ಕಃ । ವರ್ಕ್ । ವೃಜೀ ವರ್ಜನೇ । ಲಙಿ ಸಿಪಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಲಘೂ-
ಪಧಗುಣೇ ಪೂರ್ವವತ್ಸಲೋಪಃ । ಅಡಭಾವಶ್ಚ । ಚೋಃ ಕುರಿತಿ ಕುತ್ವಂ । ಕಃ । ಡುಕೃಞ್ ಕರಣೇ ।
ಲುಙಿ ಸಿಪಿ ಮಂತ್ರೇ ಘಸೇತಿ ಚ್ಲೇರ್ಲುಕ್ । ಪೂರ್ವವತ್ಸಲೋಪಾಡಭಾವೌ ॥

॥ ಪ್ರತಿಪದಾರ್ಥ ॥

ವಜ್ರಿನ್ ಇಂದ್ರ—ವಜ್ರಧಾರಿಯಾದ ಎಲೈ ಇಂದ್ರನೇ । **ಪುರುಕುತ್ಸಾಯ**—ಪುರುಕುತ್ಸನೆಂಬ ಋಷಿಗೆ
(ಅವನ ಪರವಾಗಿ) । **ಯುಧ್ಯನ್**—ಅವನ ಶತ್ರುಗಳೊಡನೆ ಯುದ್ಧಮಾಡಿದ । **ತ್ವಂ**—ನೀನು । **ತ್ಯತ್**—ಆ
(ಅವನ)। **ಸಪ್ತಪುರಃ**—ಏಳು ಪಟ್ಟಣಗಳನ್ನು । **ದರ್ದರಃ**—ಸೀಳಿದೆ (ನಾಶಮಾಡಿದ ಮತ್ತೂ)। **ಸುದಾಸೇ**—
ಸುದಾಸನೆಂಬ ರಾಜನಿಗೆ (ಅವನಿಗೋಸ್ಕರ) । **ಅಂಹೋಃ**—ಅಂಹಸ್ ಎಂಬ ಅಸುರನ । **ಯತ್ (ತತ್)**—
ಯಾವ (ಧನವಿತ್ತೋ ಅದನ್ನು)। **ವೃಥಾ**—ಅನಾಯಾಸವಾಗಿ । **ಬರ್ಹಿರ್ನ**—ಸಮಿತ್ತಿನಂತೆ । **ವರ್ಕ್**—
ಕತ್ತರಿಸಿದೆ (ನಾಶಮಾಡಿದೆ) । **ಪೂರವೇ**—(ನಿನ್ನನ್ನು) ಹವಿಸ್ಸಿನಿಂದ ತುಂಬುತ್ತಿದ್ದ (ಹವಿಸ್ಸನ್ನು ಅರ್ಪಿಸುತ್ತಿದ್ದ
ಸುದಾಸನಿಗೆ)। **ರಾಜನ್**—ಸ್ವಾಮಿಯೇ (ಇಂದ್ರನೇ)। **ವರಿವಃ**—ಧನವನ್ನ । **ಕಃ**—ಉಂಟುಮಾಡಿದ ॥

॥ ಭಾವಾರ್ಥ ॥

ವಜ್ರಧಾರಿಯಾದ ಎಲೈ ಇಂದ್ರನೇ, ಪುರುಕುತ್ಸನೆಂಬ ಋಷಿಯ ಸಲುವಾಗಿ ಯುದ್ಧಮಾಡಿ, ಅವನ ಶತ್ರುಗಳ
ಏಳು ಪುರಗಳನ್ನು ನಾಶಮಾಡಿದೆ ನಿನಗೆ ಹವಿಸ್ಸನ್ನು ಅರ್ಪಿಸುತ್ತಿದ್ದ ಸುದಾಸನೆಂಬ ರಾಜನಿಗಾಗಿ ಅವನ ಶತ್ರುವಾದ

ಅಂಅಸ್ಸೆಂಬ ಅಸುರನನ್ನು ಒಂದು ದರ್ಭಿಯನ್ನು ತುಂದುಮಾಡುವನ್ನು ಸುಲಭವಾಗಿ ಸೋಲಿಸಿ, ಅವನ ಧನವನ್ನು ಸುದಾಸನಿಗೆ ಕೊಡಿಸಿದೆ.

English Translation

India, wielder of the thunderbolt, fighting on behalf of Purukutsa, you overturned the seven cities; O king, you did cut off for Sudas the wealth of Amhas, as if it had been a tuft of sacred grass and gave it to him, who pleased you with oblations.

॥ ವಿಶೇಷವಿಷಯಗಳು ॥

ಪುರುಕುತ್ಸಾಯ—ಪುರುಕುತ್ಸನೆಂಬ ಒಬ್ಬ ಋಷಿಯು **ಏತತ್ಸಂಜ್ಞಾಯ ಋಷಯೇ** ಈ ಹೆಸರಿಂದ ಪ್ರಸಿದ್ಧನಾದ ಒಬ್ಬ ಋಷಿಗೋಸ್ಕರವಾಗಿ ಇಂದ್ರನು ಅವನ ಶತ್ರುಗಳೊಡನೆ ಯುದ್ಧವನ್ನು ಮಾಡಿ ಅವರ ಏಳು ನಗರಗಳನ್ನೂ ನಾಶಮಾಡಿರುವನು.

ಸುದಾಸೇ—ಏತತ್ಸಂಜ್ಞಾಯ ರಾಜ್ಞೇ. ಶೋಭನಂ ದದಾತೀತಿ ಸುದಾಃ, ಸುದಾಃ ಕಲ್ಯಾಣದಾನಃ (ನಿ. ೨-೨೪) ಇತಿ ಯಾಸ್ಕಃ ಸುದಾ ಎಂಬ ಹೆಸರುಳ್ಳ ರಾಜನು ಈ ರಾಜನಿಗಾಗಿ ಅಂಹು ಎಂದು ಹೆಸರುಳ್ಳ ಅಸುರನ ಧನವನ್ನೆಲ್ಲವನ್ನೂ ಇಂದ್ರನು ನಾಶಗೊಳಿಸಿರುವನು ಮತ್ತು ಅದನ್ನು ಆ ರಾಜನಿಗೆ ಕೊಟ್ಟಿರುವನು

ಅಂಹೋಃ—ಏತತ್ಸಂಜ್ಞಸ್ಯಾಸುರಸ್ಯ. ಅಂಹು ಎಂದು ಹೆಸರುಳ್ಳ ಅಸುರನು ಸ್ಕಂದಸ್ವಾಮಿಗಳು—ಅಂಹು ಶಬ್ದವು ಪಾಪರೂಪಾರ್ಥದಲ್ಲಿ ಇರುವ ಕಾರಣ ಸುದಾ ಎಂಬ ರಾಜನ ಪಾಪಗಳನ್ನೆಲ್ಲವನ್ನೂ ನಾಶಮಾಡಿರುವನೆಂದು ಅರ್ಥಮಾಡಿರುವರು.

ಪೂರವೇ—ಹವಿಷಾ ತ್ವಾ ಪೂರಯತೀತಿ ಪೂರುಃ ಹವಿಸ್ಸುಗಳಿಂದ ತೃಪ್ತಿಪಡಿಸುವವನು

ವರಿವಃ— ಧನಂ ದ್ರವ್ಯವೆಂದು ಅರ್ಥವು.

॥ ವ್ಯಾಕರಣಪ್ರಕ್ರಿಯಾ ॥

ತ್ಯತ್—ತ್ಯತ್+ಶಸ್ ಎಂದಿರುವಾಗ **ಸುಪಾಂಸುಲುಕ್** ಸೂತ್ರದಿಂದ ಶಸ್ಸಿಗೆ ಲುಕ್

ಸಪ್ತ- ನಾಂತವಾದ ಸಂಖ್ಯಾವಾಚಕವಾದುದರಿಂದ ಪರದಲ್ಲಿರುವ ಶಸಿಗೆ **ಷಡ್ಭ್ಯೋ ಲುಕ್** ಎಂಬುದರಿಂದ ಲುಕ್ **ನಲೋಪಃ ಪ್ರಾತಿ**—ಸೂತ್ರದಿಂದ ನಕಾರಲೋಪ

ದರ್ದಃ—ದೃ ವಿದಾರಣೇ ಧಾತು. ಇದಕ್ಕೆ ಅತಿಶಯಾರ್ಥದಲ್ಲಿ ಯಙ್ ಅದಕ್ಕೆ **ಯಜಿಜ್ಞೋ೭ಚಿ ಚ** ಎಂಬುದರಿಂದ ಲುಕ್ ಯಙ್‌ಲುಙಂತದ ಮೇಲೆ ಲಙ್‌ನಲ್ಲಿ ಸಿಪ್ ಯಜನ್ನು ನಿಮಿತ್ತೀಕರಿಸಿ **ಸನ್ಯಙೋಃ** ಎಂಬುದರಿಂದ ಧಾತುಸಿಗೆ ದ್ವಿತ್ವ. ಅಭ್ಯಾಸಕ್ಕೆ **ರುಕ್‌ರಿಕೌ ಚ ಲುಕಿ** (ಪಾ. ಸೂ ೭-೪-೭೧) ರುಕಾಗಮ ಯಙ್‌ಲುಕಿಗೆ **ಅದಾದಿವಚ್ಚ** ಎಂದುದರಿಂದ ಶಸಿಗೆ ಲುಕ್ ಸಿಪ್ ನಿಮಿತ್ತಕವಾಗಿ ಧಾತುವಿನ ಋಕಾರಕ್ಕೆ ಗುಣ

ಹಲ್‌ಜ್ಯಾಭ್ಯೋ—ಸೂತ್ರದಿಂದ ಅಪೃಕ್ತವಾದ ಸಿಪ್ಪಿಗೆ ಲೋಪ ರೇಫಕ್ಕೆ **ಖರವಸಾನಯೋರ್ವಿಸರ್ಜನೀಯಃ** ಎಂಬುದರಿಂದ ಅವಸಾನನಿಮಿತ್ತಕವಾಗಿ ವಿಸರ್ಗ **ಬಹುಲಂ ಛಂದಸ್ಯಮಾಙ್‌ಯೋಗೇ೨ಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ ದರ್ದರಃ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸುದಾನೇ—ಲೋಭನಂ ದದಾತೀತಿ ಸುದಾಃ. ಷುದಾಞ್ ದಾನೇ ಧಾತು. ಸರ್ವಧಾತುನಿಬಂಧನವಾದ ಔಣಾದಿಕ ಅಸುನ್ ಪ್ರತ್ಯಯ ಬರುತ್ತದೆ ಸುದಾಸ್ ಶಬ್ದವಾಗುತ್ತದೆ ಚತುರ್ಥೀಯಲ್ಲಿ ಸುದಾನೇ ಎಂದು ರೂಪವಾಗುತ್ತದೆ **ಸುದಾಃ ಕಲ್ಯಾಣದಾನಃ** (ನಿರು ೨ ೨೪) ಎಂದು ಯಾಸ್ಕರು ಹೇಳಿರುತ್ತಾರೆ (ಚನ್ನಾಗಿ ದಾನ ಮಾಡುವವನು) ಸಿತ್ ಪ್ರತ್ಯಯಾಂತವಾದುದರಿಂದ ಅದ್ಯುದಾತ್ತವಾಗುತ್ತದ ಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

ವರ್ಕ್—ವೃಜೀ ವರ್ಜನೇ ಧಾತು ಲಙ್ ಮಧ್ಯಮಪುರುಷ ಏಕವಚನದ ಸಿಪ್ಪಿಗೆ **ಇತಶ್ಚ** ಎಂಬುದರಿಂದ ಇಕಾರಲೋಪ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್ ಸಿಪ್ ನಿಮಿತ್ತಕವಾಗಿ **ಪುಗಂತ-ಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಲಘೂಪಧೆಗೆ ಗುಣ **ಹಲ್‌ಜ್ಯಾಭ್ಯೋ** ಸೂತ್ರದಿಂದ ಪ್ರತ್ಯಯಕ್ಕೆ ಲೋಪ **ಬಹುಲಂ ಛಂದಸ್ಯಮಾಙ್‌ಯೋಗೇ೨ಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ ವರ್ಜ್ ಎಂದಿರುವಾಗ **ಚೋಃ ಕುಃ** ಎಂಬ ದರಿಂದ ಕುತ್ವ ಬಂದರೆ ವರ್ಕ್ ಎಂದು ರೂಪವಾಗುತ್ತದೆ

ರಾಜನ್—**ನ ಜೌ ಸಂಬುದ್ಧ್ಯೋಃ** ಎಂಬುದರಿಂದ ನಲೋಪ ನಿಷೇಧ ಅಸಂಬುದ್ಧೌ ಎಂಬುದರಿಂದ ದೀರ್ಘಾಭಾವ **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದ

ಕಃ- ಡುಕೃಞ್ ಕರಣೇ ಧಾತು ಲುಙಿನಲ್ಲಿ ಸಿಪ್ ಆದರ ಇಕಾರಕ್ಕೆ ಹಿಂದಿನಂತೆ ಲೋಪ. **ಚ್ಲಿ ಲುಙಿ** ಸೂತ್ರದಿಂದ ಚ್ಲಿ ಪ್ರಾಪ್ತವಾದಾಗ **ಮಂತ್ರೇ ಘಸಹ್ವರಣ**-(ಪಾ ಸೂ. ೨-೪-೮೦) ಎಂಬ ಸೂತ್ರದಿಂದ ಮಂತ್ರದಲ್ಲಿ ಚ್ಲಿಗೆ ಲುಕ್ ಬರುತ್ತದ ಆಗ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಋಕಾರಕ್ಕೆ ಗುಣ ಹಲ್‌ಜ್ಯಾದಿ ಸೂತ್ರದಿಂದ ಸಿಪ್ಪಿಗೆ ಲೋಪ ಹಿಂದಿನಂತೆಯೇ ಆಡಾಗಮ ಬರುವುದಿಲ್ಲ ಧಾತುವಿನ ರೇಫಕ್ಕೆ ಆವಸಾನನಿಮಿತ್ತಕವಾಗಿ ವಿಸರ್ಗ ಕಃ ಎಂದು ರೂಪವಾಗುತ್ತದೆ **ತಿಜ್ಜತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೭ ॥

॥ ಸಂಹಿತಾಪಾಠಃ ॥

ತ್ವಂ ತ್ಯಾಂ ನ ಇಂದ್ರ ದೇವ ಚಿತ್ರಾಮಿಷಮಾಪ್ತೋ ನ ಪೀಪಯಃ

ಪರಿಜ್ಮನ್ ।

यꣳयꣳया शूर प्रत्यस्मभ्यं यंसि त्मꣳनमूर्जꣳ न विश्वधꣳ
क्षꣳरध्यै ॥ ९ ॥

॥ पदपाठः ॥

त्वं । त्याꣳ । नः । इन्द्र । देव । चित्राꣳ । इषꣳ । आपः । न । पीपयः ।
परिꣳज्मन् ।
यꣳयꣳया । शूर । प्रति । अस्मभ्यं । यंसि । त्मꣳनं । ऊर्जꣳ । न ।
विश्वधꣳ । क्षꣳरध्यै ॥ ९ ॥

॥ सायणभाष्यं ॥

हे देव द्योतमानेन्द्र त्वं नोऽस्माकं चित्रां चायनीयां त्यां तामिषमन्नं परिज्मन् परितो व्याप्तायां भूमौ पीपयः । प्यायधयः । यथा सर्वा भूमिरन्नेन परिपूर्णा भवति तथा कुर्वित्यर्थः । तत्र दृष्टान्तः । आपो न । यथापो वृष्ट्युदकानि भूम्यां वर्षणेन प्रवर्धयसि तद्वत् । यद्वा । भूमौ वर्तमानानस्मान्यथापयः पायययसि तद्वच्छित्रामिषमपि पाययेति भावः । हे शूरेन्द्र यꣳयेषात्मनमात्मानं जीवनमस्मभ्यं प्रति यंसि । प्रयच्छसि । तत्र दृष्टान्तः । विश्वध विश्वतः सर्वतः क्षरध्यै क्षरितुमूर्जं न ऊर्जमिव । यथास्मभ्यं बहुलमुदकं प्रयच्छसि तद्वत्त्राणधारणरूपं जीवनमपि प्रयच्छेति भावः ॥ आपः । शसि प्राप्ते व्यत्ययेन जस् । अप्त्यृन्नित्यादिना दीर्घः । पीपयः । स्फायी ओप्यायी वृद्धौ । ण्यन्ताच्छान्दसे लुङ् स्यायः पीः । सा. ६-८१-७ । इति व्यत्ययेन पीभावः । णिश्रिद्रुस्रुभ्य इति च्लेरङादेशः । णिलोपादीत्वे । यद्वा । पीजृ पाने इत्यस्माल्लुङ् चिजृ पूर्ववत् । बहुलं छन्दस्यमाङ्योगेऽपीत्यडभावः । परिज्मन् । जमतिर्गतिकर्मा । अज गतिक्षेपणयोः । आभ्यां परिपूर्वाभ्यां श्वन्सुक्षन्नित्यादौ कनिन्प्रत्ययान्तो निपातितः । सुपां सुलुगिति सप्तम्या लुक् । यंसि । यमु उपरमे । बहुलं छन्दसीति शपो लुक् । त्मनं । आज्योऽन्यत्रापि च्छन्दसि दृश्यते ।

ಕಾ೬-೪-೧೪೧-೧ । ಇತ್ಯಾತ್ಮನ ಆಕಾರಲೋಪಃ । ಸಂಜ್ಞಾಪೂರ್ವಕಸ್ಯ ವಿಧೇರನಿತ್ಯತ್ವಾದುಪಧಾದೀರ್ಘಾಭಾವಃ । ವಿಶ್ವಧ । ವಿಶ್ವಶಬ್ದಾತ್ತಸಿಲಃ ಸಕಾರಲೋಪೋ ಧತ್ವಂ ಚ ಪೃಷೋದರಾದಿತ್ವಾತ್ । ಕ್ಷರಧ್ಯೈ । ಕ್ಷರ ಸಂಚಲನೇ । ತುಮರ್ಥೇ ಸೇಸೇನಿತ್ಯಧ್ಯೈಪ್ರತ್ಯಯಃ । ನಿತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಶೂರ—ಶೂರನಾದ ಇಂದ್ರನೇ । **ಯಯೋ**- ಯಾವ ಅನ್ನದಿಂದ । **ತ್ಮನಂ**—ಆತ್ಮವನ್ನು (ನಮ್ಮ ಜೀವವನ್ನು) । **ಅಸ್ಮಭ್ಯಂ**—ನಮಗೆ । **ವಿಶ್ವತಃ**—ಸುತ್ತಲೂ । **ಕ್ಷರಧ್ಯೈ**—ವ್ಯಾಪಿಸಲು । **ಊರ್ಜಂ ನ**—ನೀರನ್ನು ಹೇಗೋ (ಹಾಗೆ) । **ಪ್ರತಿ ಯಂಸಿ**—ಕೊಡುತ್ತೀಯೋ । **ತ್ಯಾಂ**--ಅಂತಹ । **ಚಿತ್ರಾಂ**—ವಿವಿಧವಾದ । **ಇಷಂ**—ಅನ್ನವನ್ನು । **ದೇವ**—ಪ್ರಕಾಶಮಾನನಾದ । **ಇಂದ್ರ**—ಎಲೈ ಇಂದ್ರನೇ । **ತ್ವಂ**—ನೀನು । **ನಃ**—ನಮಗೆ । **ಪರಿಜ್ಮನ್**—ವ್ಯಾಪ್ತವಾದ ಭೂಮಿಯಲ್ಲಿ । **ಪೀಪಯಃ**—ಅಭಿವೃದ್ಧಿಪಡಿಸಿದೆ ॥

॥ ಭಾವಾರ್ಥ ॥

ಶೂರನೂ, ಪ್ರಕಾಶಮಾನನೂ ಆದ ಇಂದ್ರನೇ, ನಮಗೆ ನೀರನ್ನು ಒದಗಿಸಿ ಪ್ರಾಣಧಾರಣ ಮಾಡಿಸುವಂತೆ, ಯಾವ ಅನ್ನವನ್ನು ಕೊಟ್ಟು ಪ್ರಾಣಧಾರಣ ಮಾಡಿಸುತ್ತೀಯೋ ಹೇಗೆ ವೃಷ್ಟ್ಯುದಕವು ಭೂಮಿಯನ್ನೆಲ್ಲಾ ವ್ಯಾಪಿಸುವಂತೆ ಮಾಡುತ್ತೀಯೋ ಅದೇ ರೀತಿ ನಾನಾವಿಧವಾದ ಆಹಾರವು ಭೂಮಿಯಲ್ಲಿ ವರ್ಧಿಸುವಂತೆ ಮಾಡು

English Translation

O divine Indra, increase, for us throughout the earth, abundant food (that it may be as plentiful) as water, by which, O hero, you bestow upon us (existence) as you cause water to flow on every side

ವಿಶೇಷವಿವರಣೆಗಳು

ಚಿತ್ರಾಂ ಚಾಯನೀಯಾಂ. ಶ್ಚೋಟನೀಯವಾದ ಎಂದು ಅರ್ಥವು ಸ್ಕಂದಸ್ವಾಮಿಗಳು ಸ್ಪಾಜನೀಯಾಂ ವಿಚಿತ್ರಾಂ ವಾ ಎಂದು ವ್ಯಾಖ್ಯಾನವನ್ನು ಮಾಡಿರುವರು ಇದರಿಂದ ಹೊಗಳಲು ತಕ್ಕುದಾದ ಅಥವಾ ಅನೇಕ ವಿಧವಾದ ಎಂದು ತಾತ್ಪರ್ಯವು

ಇಷಂ - ಅನ್ನಂ. ಅನ್ನವು ಎಂದು ಸಾಯಣರು ಹೇಳಿರುವರು ಅನ್ನವೆಂದರೆ ಉದಕವು, ನೀರು ಎಂದು ಅರ್ಥವು. ಅನ್ನ ಶಬ್ದವು ನೂರೊಂದು ಉದಕನಾಮಗಳ ಮಧ್ಯದಲ್ಲಿ (ನಿ ೨-೪೪) ಉಕ್ತವಾಗಿರುತ್ತದೆ ಇಷ ಶಬ್ದವು ಅನ್ನವೆಂಬರ್ಥದಲ್ಲಿ ಇಪ್ಪತ್ತೆಂಟು ನಾಮಗಳ (ನಿ ೩ ೮) ಮಧ್ಯದಲ್ಲಿ ಪಠಿತವಾಗಿರುವುದು ಸ್ಕಂದಸ್ವಾಮಿಗಳು ಇಷ ಶಬ್ದವು ಸೋಮರೂಪವಾದ ಅನ್ನವೆಂದು ಅರ್ಥಮಾಡಿರುವರು **ಸೋಮಲಕ್ಷಣಂ ಅನ್ನಂ** ಎಂದು ಹೇಳಿರುವರು

ಆಪೋ ನ ಪೀಪಯಃ---ಯಥಾ ವೃಷ್ಟ್ಯುದಕಾನಿ ಭೂಮ್ಯಾಂ ಪ್ರವರ್ಧಯಸಿ, ಯದ್ವಾ ಭೂಮೌ ವರ್ತಮಾನಾನಸ್ಮಾನ್ ಯಥಾ ಆಪಃ ಪಾಯಯೆಯಸಿ. ಮಳೆಯ ನೀರು ಭೂಮಿಯಲ್ಲಿ ಬಹಳ ಮಟ್ಟಿಗೆ ವೃದ್ಧಿಯಾಗುವ ಹಾಗೆ ಮಾಡುತ್ತೀಯೆ ಎಂದು ಒಂದು ವಿಧವಾದ ಅರ್ಥವು ಭೂಮಿಯಲ್ಲಿ ಜೀವಿಸುತ್ತಿರುವ ನಾವುಗಳು ನೀರನ್ನು ಕುಡಿಯುವ ಹಾಗೆ ವೃದ್ಧಿ ಮಾಡುತ್ತೀಯೆ ಎಂದು ಇನ್ನೊಂದು ವಿಧವಾದ ಅರ್ಥವು. ಇಲ್ಲಿ ನ ಎಂಬ ಶಬ್ದವು ಉಪಮಾರ್ಥವನ್ನು ಹೇಳುವ ಇವ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು ವೃದ್ಧ್ಯರ್ಥಕವಾದ ಓಪ್ಯಾಯೀ ಎಂಬ ಧಾತುವೂ ಕೂಡ ಣಿಜರ್ಥದಲ್ಲಿ ಉಪಯೋಗಿಸಲ್ಪಟ್ಟು ನೀರು ತಾನಾಗಿ ವೃದ್ಧಿಯಾಗುವಂತೆ ಮಾಡುತ್ತೀಯೆ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು.

ತ್ಮನಂ- ಆತ್ಮಾನಂ ಜೀವಂ ಈ ಶರೀರದಲ್ಲಿ ಅಭಿಮಾನದಿಂದ ಇರುವ ಅಹಂಕಾರಾಸ್ಪದನಾದ ಜೀವನೆಂದು ಅರ್ಥವು

ವಿಶ್ವಧ ವಿಶ್ವತಃ ಸರ್ವತಃ ಎಲ್ಲಾ ಪ್ರದೇಶದಲ್ಲಿಯೂ, ಎಲ್ಲಾ ವಿಧದಿಂದಲೂ ಎಂದು ಅರ್ಥವು

ಊರ್ಜಂ ನ—ಉದಕಮಿವ. ನೀರುಗಳನ್ನು ವೃದ್ಧಿಮಾಡಿ ನಮಗೆ ಅನುಗ್ರಹಿಸಿ ಕೊಟ್ಟಿರುವ ತಾಗೆ ಎಂದು ಅರ್ಥವು. ಇಲ್ಲಿ ನ ಎಂಬುವುದು ಉಪಮಾವಾಚಕವಾಗಿ ನಿರುಕ್ತದಲ್ಲಿ (ನಿ. ೩-೪) ಪಠಿತವಾಗಿರುವುದು

ಪರಿಜ್ಮನ್—ಪರಿತಃ ವ್ಯಾಪ್ತಾಯಾಂ ಭೂಮೌ. ಸುತ್ತಲೂ ವ್ಯಾಪಿಸಿ ಇರುವ ಭೂಮಿಯಲ್ಲಿ ಎಂದು ಅರ್ಥವು

॥ ವ್ಯಾಕರಣಪ್ರಕ್ರಿಯಾ ॥

ಆಪಃ—ಅಪ್ ಶಬ್ದ. ಶಸ್ ಪ್ರಾಪ್ತವಾದಾಗ **ವ್ಯತ್ಯಯೋ ಬಹುಲಂ** ಎಂಬುದರಿಂದ ಜಸ್ ಬರುತ್ತದೆ ಅಪ್+ಜಸ್ ಎಂದಿರುವಾಗ **ಅಪ್ತೃನ್ತೃಚ್**-(ಪಾ ಸೂ ೬-೪-೧೧) ಎಂಬುದರಿಂದ ಜಸ್ಸಿಗೆ ಸರ್ವನಾಮಸ್ಥಾನ ಸಂಜ್ಞೆ ಇರುವುದರಿಂದ ಉಪಧಾದೀರ್ಘ ಬರುತ್ತದೆ. ಜಸಿನ ಸಕಾರಕ್ಕೆ ರುತ್ವವಿಸರ್ಗ ಬಂದರೆ ಆಪಃ ಎಂದು ರೂಪವಾಗುತ್ತದೆ

ಪೀಪಯಃ—ಸ್ಥಾಯಾ ಓಪ್ಯಾಯಾ ವೃದ್ಧೌ ಪ್ರಾರ್ಥನಾರೂಪ ಅರ್ಥದಲ್ಲಿ **ಭಂವಸಿಲುಙ್ ಲುಙ್ಲಿಟಃ** ಸೂತ್ರದಿಂದ ಲುಙ್ ಪ್ರೇರಕವ್ಯಾಪಾರ ತೋರುವುದರಿಂದ ಧಾತುವಿಗೆ ಣಿಚ್ ಬರುತ್ತದೆ ವ್ಯತ್ಯಯದಿಂದ ನಿಷ್ಯಾಸರನಾಗಿರುವಾಗ ವಿಧಿಸಿರುವ **ಪ್ಯಾಯಃ ಪೀ** (ಪಾ ಸೂ ೬-೧-೩೮) ಎಂಬುದರಿಂದ ಪೀ ಭಾವವು ಲುಙ್‌ನಲ್ಲಿಯೂ ಬರುತ್ತದೆ ಪೀ+ಇ ಲುಙ್ ಎಂದಿರುವಾಗ **ಣಿಶ್ರಿದ್ರುಸ್ರುಭ್ಯಃ ಕರ್ತರಿ ಚಙ್** ಎಂಬುದರಿಂದ ಚ್ಲಿಗೆ ಚಙ್ ಆದೇಶ. **ಣೇರನಿಟಿ** ಎಂಬುದರಿಂದ ಅನಿಡಾದಿಯಾದ ಅರ್ಥಧಾತುಕವು ಪರದಲ್ಲಿರುವುದರಿಂದ ಣಿಗೆ **ಲೋಪ ಚೆಜಿ** ಸೂತ್ರದಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ **ಹ್ರಸ್ವಃ** ಎಂಬುದರಿಂದ ಹ್ರಸ್ವ ಣಿಚ್ ನಿಮಿತ್ತಕವಾಗಿ ಧಾತುವಿನ ಇಕಾರಕ್ಕೆ ವೃದ್ಧಿ ಆಯಾದೇಶ. **ಣೌಚಙ್ಯುಪಧಾಯಾಃ ಹ್ರಸ್ವಃ** ಸೂತ್ರದಿಂದ ಉಪಧಾಹ್ರಸ್ವ **ಸನ್ವಲಘುನಿ ಚೆಜ್ ಪರೇಽನಗ್ಲೋಪೇ** ಎಂಬುದರಿಂದ ಸನ್ವದ್ಭಾವವಿರುವುದರಿಂದ **ದೀಘೋಽಲಘೋಃ** ಸೂತ್ರದಿಂದ ಅಭ್ಯಾಸಕ್ಕೆ

ದೀರ್ಘ ಬರುತ್ತದೆ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಒರುವಿಲ್ಲ ಸೀಷಯಃ ಎಂದು ರೂಪವಾಗುತ್ತದೆ ಅಥವಾ ಸೀಙ್ ಷಾನೇ ಧಾತು ಇದಕ್ಕೆ ಹಿಂದಿನಂತೆ ಣಿಚ್ ಣಿಜಂತದ ಮೇಲೆ ಲುಙ್. ಚಜಾದಿಗಳು ಹಿಂದಿನಂತೇ ಬಂದು ಉಕ್ರೂಪವಾಗುತ್ತದೆ ಅತಿಬಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಪರಿಜ್ಮನ - ಗತಿಕರ್ಮಕವಾದ ಜಮಧಾತು ಅಥವಾ ಅಜ ಗತಿಕ್ಷೇಪಣಯೋಃ ಧಾತು ಇವುಗಳಿಗೆ ಪರಿಸೂರ್ವವಾಗಿರುವಾಗ **ಶ್ವನ್ಯುಷ್ಟನ್ ಪೂಷನ್** (ಉ ಸೂ ೧-೧೫೬) ಎಂಬುದರಿಂದ ಕನಿನ್ ಪ್ರತ್ಯಯಾಂತವಾಗಿ ನಿಘಾತಿತರೂಪವಾಗುತ್ತದೆ ನಿಘಾತದಿಂದಲೇ ವರ್ಣವಿಕಾರ ಸಿದ್ಧವಾಗುತ್ತದೆ. ಸಪ್ತಮಿಯಲ್ಲಿ **ಸುಪಾಂ ಸುಲುಕ್**— ಸೂತ್ರದಿಂದ ವಿಭಕ್ತಿಗೆ ಲುಕ್ ಬರುತ್ತದೆ ನಿತ್ಸ್ವರತೆಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ

ಯಂಸಿ ಯಮ ಉಪರಮೇ ಧಾತು ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್ **ನಶ್ಚಾಪದಾಂತಸ್ಯ ಝಲಿ** ಸೂತ್ರದಿಂದ ಮೀಕಾರಕ್ಕೆ ಅನುಸ್ವಾರ. ಸಿಪ್ ನಿತ್ವಾದುದರಿಂದ ಅನುದಾತ್ತ ಧಾತುವಿನ ಅಂತೋದಾತ್ತಸ್ವರದಿಂದ ಆದ್ಯುದಾತ್ತವಾದ ಪದವಾಗುತ್ತದೆ ಯಯಾ ಎಂದು ಹಿಂದೆ ಇರುವುದರಿಂದ ನಿಘಾತಸ್ವರ ಬರುವುದಿಲ್ಲ

ತ್ಮನಮ್— **ಆಜಿರ್ಯೇನ್ಯತ್ರಾಪಿ ಚ್ಛಂದಸಿ ದೃಶ್ಯತೇ** (ಕಾ ೬-೪-೧೪೧-೧) ಎಂಬುದರಿಂದ **ಆತ್ಮನ್** ಶಬ್ದದ ಆಕಾರಕ್ಕೆ ಲೋಪ **ಸಂಜ್ಞಾಪೂರ್ವಕೋ ವಿಧಿರನಿತ್ಯಃ** ಎಂದುದರಿಂದ **ಸರ್ವನಾಮಸ್ಥಾನೇಚ್ಚಾಸಂಬುದ್ಧೌ** ಎಂಬುದರಿಂದ ಉಪಧಾದೀರ್ಘ ಬರುವುದಿಲ್ಲ

ವಿಶ್ವಧ—ಪೆಂಚಮ್ಯಾಸ್ತಸಿಲ್ (ಪಾ ಸೂ ೫-೩-೭) ಎಂಬುದರಿಂದ ವಿಶ್ವಶಬ್ದಕ್ಕೆ ಪ್ರಾಪ್ತವಾದ ತಸಿಲಿನ ಸಕಾರಕ್ಕೆ ಲೋಪವೂ ತಕಾರಕ್ಕೆ ಧಕಾರವೂ **ಪೃಷೋದರಾದೀನಿ ಯಥೋಪದಿಷ್ಟಂ** ಎಂಬುದರಿಂದ ಅದರಲ್ಲಿ ಸೇರಿರುವುದರಿಂದ ಸಿದ್ಧವಾಗುತ್ತದೆ

ಕ್ಷರಧ್ಯೈ—ಕ್ಷರ ಸಂಚಲನೇ ಧಾತು ಕ್ಷರಿತುಂ ಎಂದು ತುಮನ್ ಬರುವಾಗ **ತುಮರ್ಥೇ ಸೇಸೇನಸೇ-** (ಪಾ. ಸೂ ೩-೪-೯) ಎಂಬುದರಿಂದ **ಅಧ್ಯೈನ್** ಪ್ರತ್ಯಯ ಬರುತ್ತದೆ ಕ್ಷರಧ್ಯೈ ಎಂದು ರೂಪವಾಗುತ್ತದೆ ಪ್ರತ್ಯಯ ನಿತ್ವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ॥೯॥

॥ संहितापाठः ॥

अकारि त इन्द्र गोतमेभिर्ब्रह्माण्योक्था नमसा हरिभ्यां ।

सुपेशसं वाजमा भरा नः प्रातर्मक्षू धियावसुर्जगम्यात् ॥ ९ ॥

॥ पदपाठः ॥

अकारि । ते । इन्द्र । गोतमेभिः । ब्रह्माणि । आ ऽउक्था । नमसा ।

हरिऽभ्यां ।

सुऽपेशसं । वाजं । आ । भर । नः । प्रातः । मक्षु । धियाऽवसुः ।

जगम्यात् ॥ ९ ॥

॥ सायणभाष्यं ॥

हे इन्द्र ते तव गोतमेभिर्गंतृतमैरेतत्सञ्ज्ञैर्ऋषिभिरकारि । स्तोत्रं कृतमित्यर्थः । एतदेव स्पष्टीकरोति । ब्रह्माणि मंत्रजातानि नमसा हविर्लक्षणेनान्नेन सह हरिभ्यामश्वाभ्यां युक्ता युक्तानि तुभ्यमोक्था । आभिमुख्येनोक्तानि । यद्वा । मर्यादायामाकारः । यथाशास्त्रं प्रयुक्तानि । स त्वं सुपेशसं । पेश इति रूपनाम । बहुविधरूपयुक्तं वाजमन्नं नोऽस्मभ्यमा भर । आहर । देहीति यावत् । धिया बुद्ध्या कर्मणा वा स्वाप्तधन इन्द्रः प्रातःकालेऽस्मद्रक्षणार्थं जगम्यात् । आगच्छतु ॥ ओक्था । शेश्छन्दसि बहुलमिति शेर्लोपः । सुपेशसं । पिश अवयवे । असुन् । बहुव्रीहावाद्युदात्तं द्व्यच्छन्दसीत्युत्तरपदाद्युदात्तत्वं । भर । हृग्रहोर्भ इति भत्वं । द्व्यचोऽतस्तिङ इति संहितायां दीर्घः ॥ ७ ॥

॥ ಪ್ರತಿಪದಾರ್ಥ ॥

ಇಂದ್ರ—ಇಂದ್ರನೇ । **ತೇ**—ನಿನಗೆ । **ಗೋತಮೇಭಿಃ**—ಗೋತಮಪುತ್ರರಾದ ಋಷಿಗಳಿಂದ । **ಆಕಾರಿ**—(ಸ್ತೋತ್ರವು) ಮಾಡಲ್ಪಟ್ಟಿತು । **ಬ್ರಹ್ಮಾಣಿ**—ಮಂತ್ರಗಳು । **ನಮಸಾ** ಹವೀರೂಪವಾದ ಅನ್ನದೊಡನೆ । **ಹರಿಭ್ಯಾಂ**—ಎರಡು ಕುದುರೆಗಳಿಂದ (ಯುಕ್ತನಾದ ನಿನಗೆ) । **ಓಕ್ತಾ**—ವಿಧಿಪೂರ್ವಕವಾಗಿ ಅರ್ಪಿಸಲ್ಪಟ್ಟವೆ । (**ಸ ತ್ವಂ** -ಆಂತಹ ನೀನು) । **ನಃ**—ನಮಗೆ । **ಸುಪೇಶಸಂ**—ನಾನಾ ರೂಪನಾದ । **ವಾಜಂ**—ಅನ್ನವನ್ನು । **ಆ ಭರ**—ತೆಗೆದುಕೊಂಡು ಬಾ (ಕೊಡು) । **ಧಿಯಾವಸುಃ**—ಬುದ್ಧಿಯಿಂದ (ಕರ್ಮಗಳಿಂದ) ಪ್ರಾಪ್ತವಾದ ಧನವುಳ್ಳ (ಇಂದ್ರನು) । **ಪ್ರಾತಃ** - ಪ್ರಾತಃಕಾಲದಲ್ಲಿ । **ಮಕ್ಷು** -ಶೀಘ್ರವಾಗಿ । **ಜಗಮ್ಯಾತ್**—ಬರಲಿ ॥

॥ ಭಾವಾರ್ಥ ॥

ಎಲೈ ಇಂದ್ರನೇ, ಗೋತಮಪುತ್ರರಾದ ಋಷಿಗಳು ಮಂತ್ರಪೂರ್ವಕವಾಗಿ ಹವಿಸ್ಸನ್ನು ಶಾಸ್ತ್ರಪ್ರಕಾರವಾಗಿ ಅಶ್ವಗಳಿಂದ ಯುಕ್ತನಾದ ನಿನಗೆ ಅರ್ಪಿಸಿದ್ದಾರೆ ಸ್ತುತನಾದವನೂ, ನಿನ್ನ ಬುದ್ಧಿಯಿಂದ ಅಥವಾ ಕರ್ಮಗಳಿಂದ ಆರ್ಜಿತವಾದ ಧನಯುಕ್ತನಾದವನೂ ಆದ ನೀನು ಪ್ರಾತಃಕಾಲದಲ್ಲಿ ಶೀಘ್ರವಾಗಿ ಬಂದು, ನಮಗೆ ನಾನಾರೂಪವಾದ ಅನ್ನವನ್ನು ಕೊಡು.

English Translation

O India, praises have been offered to you by the sons of Gotama; they have been uttered with reverence to you, borne hither by your horses; grant us various sorts of food. May he (Indra) who has acquired wealth by pious acts come hither quickly in the morning.

॥ ವಿಶೇಷವಿಷಯಗಳು ॥

ಗೋತಮೇಭಿಃ—ಗಂತೃತಮೈರೇತತ್ಸಂಜ್ಞೈಃ ಋಷಿಭಿಃ—ಸಂಚರಿಸುವ ಸ್ವಭಾವವುಳ್ಳವರಾದ ಕಾರಣ ಗೋತಮರೆಂದು ಹೆಸರನ್ನು ಹೊಂದಿರುವ ಋಷಿಗಳು ಎಂದು ಅರ್ಥವು **ಗೋತಮಪುತ್ರೈಃ** ಎಂದು ಸ್ಕಂದಸ್ವಾಮಿಗಳು ಹೇಳಿರುವರು

ನಮಸಾ—ಹವಿರ್ಲಕ್ಷಣೇನಾನ್ನೇನ. ಹವಿಸ್ಸಿನ ರೂಪದಿಂದ ಇರುವ ಅನ್ನದಿಂದ ಎಂದು ಸಾಯಣರು ಅರ್ಥಮಾಡಿರುವರು. ಸ್ಕಂದಸ್ವಾಮಿಗಳು **ನಮಸ್ಕಾರೇಣ ಸಹ ಹವಿರ್ಲಕ್ಷಣೇನ ಅನ್ನೇನ ವಾ** ಎಂದು ಎರಡು ವಿಧವಾದ ಅರ್ಥವನ್ನೂ ಹೇಳಿರುವರು

ಹರಿಭ್ಯಾಂ—ಇಂದ್ರನ ಕುದುರೆಗಳಿಂದ ಎಂದು ಅರ್ಥವು ಹರೀ ಶಬ್ದವು ಇಂದ್ರನ ಕುದುರೆಗಳೆಂದು ನಿರುಕ್ತದಲ್ಲಿ (ನಿ. ೭-೨೮) ಉಕ್ತವಾಗಿರುವುದು

ಓಕ್ತಾ—**ಆಭಿಮುಖ್ಯೇನ ಉಕ್ತಾನಿ ಯೆದ್ವಾ ಯಥಾಶಾಸ್ತ್ರಂ ಪ್ರಯುಕ್ತಾನಿ** ಆ+ಉಕ್ತಾ. ಆ ಎಂಬ ಉಪಸರ್ಗಕ್ಕೆ ಎರಡು ವಿಧವಾದ ಅರ್ಥವೂ ಉಕ್ತವಾಗಿರುವುದು ಎದುರಿಗೆ; ಶಾಸ್ತ್ರಕ್ರಮಕ್ಕನುಸಾರವಾಗಿ ಸ್ತೋತ್ರವು ಹೇಳಲ್ಪಟ್ಟಿರುವುದು ಎಂದು ಅರ್ಥವು

ಸು ಪೇಶಸಂ—**ಪೇಶ ಇತಿ ರೂಪನಾಮ ಬಹುವಿಧರೂಪಯುಕ್ತಂ,** ಬಹಳ ವಿಧವಾದ ಆಕಾರದಿಂದ ಇರುವ ಎಂದು ಅರ್ಥವು. ಪೇಶ ಶಬ್ದವು (ನಿರುಕ್ತ ೩-೧೩) ರೂಪ ಎಂಬ ಅರ್ಥದಲ್ಲಿ ಹದಿನಾರು ಶಬ್ದಗಳ ಮಧ್ಯದಲ್ಲಿ ಉಕ್ತವಾಗಿರುತ್ತದೆ.

ವಾಜಂ—**ಅನ್ನಂ.** ಅನ್ನವ ಎಂದು ಅರ್ಥವು ವಾಜಶಬ್ದವು ಅಂದಾ. ವಾಜಃ ಎಂಬ ಇಪ್ಪತ್ತೆಂಟು ಅನ್ನ ನಾಮಗಳ ಮಧ್ಯದಲ್ಲಿ (ನಿ ೩-೮) ಉಕ್ತವಾಗಿರುತ್ತದೆ

ಧಿಯಾವಸುಃ—**ಬುದ್ಧ್ಯಾ ಕರ್ಮಣಾ ವಾ ಪ್ರಾಪ್ತಧನಃ** ಬುದ್ಧಿಯಿಂದಲಾಗಲಿ, ಕೆಲಸಮಾಡುವುದರಿಂದಲಾಗಲಿ ದ್ರವ್ಯವನ್ನು ಹೊಂದಿದವನು.

॥ ವ್ಯಾಕರಣಕ್ರಿಯಾ ॥

ಆಕಾರಿ—ಡುಕೃಞ್ ಕರಣೇ ಧಾತು ಕರ್ಮಣಿಯಲ್ಲಿ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ **ಚಿಣ್ ಭಾವಕರ್ಮಣೋಃ** (ಪಾ ಸೂ ೩-೧ ೬೬) ಎಂಬುದರಿಂದ ಚ್ಲಿಗೆ ಚಿಣ್ ಆದೇಶ **ಚಿಣೋಲುಕ್** ಎಂಬುದರಿಂದ ಚಿಣಿನ ಪರದಲ್ಲಿರುವ ತಶಬ್ದಕ್ಕೆ ಲುಕ್ ಬರುತ್ತದೆ ಚಿಣ್ ಣಿತ್ವಾದುದರಿಂದ **ಅಚೋಞ್ಣಿತಿ** ಸೂತ್ರದಿಂದ ಧಾತುವಿನ ಋಕಾರಕ್ಕೆ ವೃದ್ಧಿ ಆಂಗಕ್ಕೆ ಆಡಾಗಮ ಆಕಾರಿ ಎಂದು ರೂಪವಾಗುತ್ತದೆ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ

ಓಕ್ತಾ—ಆಙ್ ಉಸರ್ಗ ಪೂರ್ವಕ ಸರಿಭಾಷಣೇ ಧಾತು. ಕರ್ಮಣಿಯಲ್ಲಿ ಕ್ತಪ್ರತ್ಯಯ **ವಚಿಸ್ವಪಿಯಜಾದೀನಾಂ ಕಿತಿ** ಎಂಬುದರಿಂದ ಧಾತುವಿಗೆ ಸಂಪ್ರಸಾರಣ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ **ಚೋಃಕುಃ** ಸೂತ್ರದಿಂದ ಚಕಾರಕ್ಕೆ ಕುತ್ವ ಆಙ್ ಸಂಬಂಧ ಬಂದಾಗ ಗುಣ ನಪುಂಸಕದಲ್ಲಿ **ಜಶ್ಶಶೋಃ ಶಿಃ** ಎಂಬುದರಿಂದ ಜಸ್ಸಿಗೆ ಶಿ ಆದೇಶ. **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ ಓಕ್ತಾ ಎಂದು ರೂಪವಾಗುತ್ತದೆ

ಸುಪೇಶಸಮ್—ಪಿಶ ಅವಯವೇ ಧಾತು **ಸರ್ವಧಾತುಭ್ಯೋಽಸುನ್** (ಉ ಸೂ ೪-೬೮) ಎಂಬುದರಿಂದ ಅಸುನ್ ಪ್ರತ್ಯಯ ಪ್ರತ್ಯಯ ಸಿವಿತ್ತಕವಾಗಿ ಧಾತುವಿನ **ಲಘೂಪಧಗುಣ.** ಪೇಶಸ್ ಶಬ್ದವಾಗುತ್ತದೆ ಶೋಭನಾನಿ ಪೇಶಾಂಸಿ ಯಸ್ಯ ಸಃ 'ಸುಪೇಶಾಃ ತಂ ಸುಪೇಶಸಮ್ ಬಹುವ್ರೀಹಿ ಸಮಾಸದಲ್ಲಿ **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ ಸೂ. ೬-೨-೧೧೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ಭರ—ಹೃಞ್ ಹರಣೇ ಧಾತು 'ಉಪಸರ್ಗೇಣ ಧಾತ್ವರ್ಥೋ ಬಲಾದನ್ಯಃ ಪ್ರತೀಯತೇ' ಎಂಬ ವಚನದಿಂದ ಆಙ್ ಉಪಸರ್ಗಸಂಬಂಧ ಬಂದಾಗ ದಾನ ಎಂಬ ಅರ್ಥವು ತೋರುತ್ತದೆ. **ಲೋಟನಲ್ಲಿ** ಸಿಪ್ಪಿಗೆ ಹಿ ಆದೇಶ

ಕರ್ತರಿ ಶಪ್ ಸೂತ್ರದಿಂದ ಶಪ್ ವಿಕರಣ **ಅತೋ ಹೇಃ** ಎಂಬುದರಿಂದ ಹಿಗೆ ಲುಕ್ ಶಪ್ ನಿಮಿತ್ತಕವಾಗಿ ಧಾತುವಿನ ಇಕಿಗೆ ಗುಣ **ಹೃಗ್ರಹೋರ್ಭಶ್ ಛಂದಸಿ** ಎಂಬುದರಿಂದ ಧಾತುವಿನ ಹಕಾರಕ್ಕೆ ಭಕಾರಾದೇಶ ಅತಿಬಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ಸಂಹಿತಾದಲ್ಲಿ **ದ್ವ್ಯಚೋ೭ತಸ್ತಿಙಃ** (ಪಾ ಸೂ ೬-೩-೧೩೫) ಎಂಬುದರಿಂದ ಧಾತುವಿನ ಅಂತ್ಯಾಕಾರಕ್ಕೆ ದೀರ್ಘ ಬರುತ್ತದೆ

ಜಗಮ್ಯಾತ್—ಗಮ್ಲೃ ಗತೌ ಧಾತು ವಿಧಿಲಿಙ್‌ನಲ್ಲಿ ತಿಪ್ ಪ್ರತ್ಯಯ **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ **ಬಹುಲಂ ಛಂದಸಿ** ಎಂಬುದರಿಂದ ಶ್ಲುವಿಕರಣ **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ **ಕುಹೋಶ್ಚುಃ** ಎಂಬುದರಿಂದ ಗಕಾರಕ್ಕೆ ಜಕಾರದೇಶ ಲಿಙಿಗೆ ಯಾಸುಟ್‌ಆಗಮ ಜಗಮ್ಯಾತ್ ಎಂದು ರೂಪವಾಗುತ್ತದೆ **ತಿಜ್ಜಶ್ತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೯ ॥

ಹದಿನೈದನೇ ಸೂಕ್ತವು ಸಮಾಪ್ತವಾಗಿದೆ

ಹದಿನಾಲ್ಕನೆಯ ಸೂಕ್ತವು

ವೃಷ್ಣೋ ಶರ್ಧಾಯೇತಿ ಪಂಚದಶರ್ಚಂ ಸಪ್ತಮಂ ಸೂಕ್ತಂ । ನೋಧಸ ಆರ್ಷಂ ಮಾರುತಂ । ಆಂತ್ಯಾ ತ್ರಿಷ್ಟುಪ್ । ಶಿಷ್ಟ್ವಾಚತುರ್ದಶ ಜಗತ್ಯಃ । ತಥಾ ಚಾನುಕ್ರಾಂತಂ । **ವೃಷ್ಣೋ ಪಂಚೋನಾ ಮಾರುತಂ ತ್ರಿಷ್ಟುಬಂತಮಿತಿ** ॥ ಚಾತುರ್ವಿಂಶಿಕೇ೭ಹನ್ಯಗ್ನಿಮಾರುತ ಇದಂ ಮಾರುತಂ ನಿವಿದ್ಧಾನೀಯಂ । **ಸೂತ್ರಿತಂ ಚ । ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ ಯಜ್ಞೇನ ವರ್ಧತೇತ್ಯಾಗ್ನಿಮಾರುತಂ** । ಆ ೭-೪ । ಇತಿ ॥ ಆಭಿಪ್ಲವಿಕೇ ಪಂಚಮೇ೭ಹನ್ಯಪ್ಯೇತದಾಗ್ನಿಮಾರುತೇ ಮಾರುತನಿವಿದ್ಧಾನಂ । **ಸೂತ್ರಿತಂ ಚ । ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ ನೂ ಚಿತ್ಸಹೋಚಾ ಇತ್ಯಾಗ್ನಿಮಾರುತಂ** । ಆ । ೭-೭ । ಇತಿ ॥

ಅನುವಾದಸ್ಯ—**ವೃಷ್ಣೋ ಶರ್ಧಾಯ** ಎಂಬ ಸೂಕ್ತವು ಪ್ರಥಮ ಮಂಡಲದ ಹನ್ನೊಂದನೆಯ ಅನುವಾಕದಲ್ಲಿ ಏಳನೆಯ ಸೂಕ್ತವು ಇದರಲ್ಲಿ ಇರಿಸ್ಪೆದು ಋಕ್ಕುಗಳಿರುವವು ಈ ಸೂಕ್ತಕ್ಕೆ ನೋಧಾ ಗೌತಮನೆಂಬುವನು ಋಷಿಯು ಮರುತ್ತುಗಳೇ ದೇವತೆಗಳು ಕೊನೆಯ ಋಕ್ಕು ತ್ರಿಷ್ಟುಪ್ ಛಂದಸ್ಸವು ಉಳಿದ ಹದಿನಾಲ್ಕು ಋಕ್ಕುಗಳು ಜಗತೀಛಂದಸ್ಸಿನವು ಅನುಕ್ರಮಣಿಕೆಯಲ್ಲಿ **ವೃಷ್ಣೋ ಪಂಚೋನಾ ಮಾರುತಂ ತ್ರಿಷ್ಟುಬಂತಮಿತಿ** ಎಂದು ತೇಳಿರುವುದು ಯಜ್ಞದ ಇಪ್ಪತ್ತನಾಲ್ಕನೆಯ ದಿನ ಆಗ್ನಿಮಾರುತಶಸ್ತ್ರ ಮಂತ್ರ ಪಠನಕಾಲದಲ್ಲಿ ಮರುದ್ದೇವತಾಕವಾದ ನಿವಿದ್ಧಾನೀಯ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಅಶ್ವಲಾಯನಶ್ರೌತಸೂತ್ರದ **ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ ಯಜ್ಞೇನ ವರ್ಧತೇತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ ೭-೪) ಅಭಿಪ್ಲವಯಾಗದಲ್ಲಿಯೂ ಐದನೆಯ ದಿನಸದಲ್ಲಿ ಆಗ್ನಿಮಾರುತಶಸ್ತ್ರ ಮಂತ್ರಗಳಲ್ಲಿ ಮಾರುತ ನಿವಿದ್ಧ ಮಂತ್ರಗಳಿಗಾಗಿ ಈ ಸೂಕ್ತವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ ನೂ ಚಿತ್ಸಹೋಜಾ ಇತ್ಯಾಗ್ನಿಮಾರುತಂ** ಎಂಬ ಸೂತ್ರವು ನಿರ್ದೇಶಿಸುವುದು. (ಆ ೭-೭)

ಸೂಕ್ತ—೬೪

॥ ಓಂ ॥

॥ ಮಂಡಲ—೧ ॥ ಅನುವಾಕ—೧೧ ॥ ಸೂಕ್ತ—೬೪ ॥

॥ ಅಷ್ಟಕ- ೧ ॥ ಅಧ್ಯಾಯ- ೫ ॥ ವರ್ಗ—೬, ೭, ೮ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥

॥ ಋಷಿಃ—ನೋಧಾ ಗೌತಮಃ ॥

ದೇವತಾ—ಮರುತಃ ॥

ಛಂದಃ—೧-೧೪ ಜಗತೀ । ೧೫ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ವೃಷ್ಟ್ಯೇ ಶರ್ಧಾಯ ಸುಮಖಾಯ ವೇಧಸೇ ನೋಧಃ ಸುವ್ಯಕ್ತಿಂ
ಪ್ರ ಭರಾ ಮರುದ್ಭ್ಯಃ ।
ಅಪ್ಸೋ ನ ಧೀರೋ ಮನಸಾ ಸುಹಸ್ತ್ಯೋ ಗಿರಃ ಸಮಂಜೇ
ವಿದಥೇಷ್ವಾಭುವಃ ॥ ೧ ॥

॥ ಪದಪಾಠಃ ॥

ವೃಷ್ಟ್ಯೇ । ಶರ್ಧಾಯ । ಸು ಽ ಮಖಾಯ । ವೇಧಸೇ । ನೋಧಃ । ಸು ಽ ವ್ಯಕ್ತಿಂ ।
ಪ್ರ । ಭರ । ಮರುತ್ ಽ ಭ್ಯಃ ।
ಅಪಃ । ನ । ಧೀರಃ । ಮನಸಾ । ಸು ಽ ಹಸ್ತ್ಯಃ । ಗಿರಃ । ಸಂ । ಅಂಜೇ । ವಿದ-
ಥೇಷು । ಆ ಽ ಭುವಃ ॥ ೧ ॥

॥ ಸಾಯಣಭಾಷ್ಯಂ ॥

ಅತ್ರ ಪೂರ್ವಾರ್ಧೇನ ಸ್ತುತೌ ನೋಧಾಃ ಪ್ರೇರ್ಯತೇ । ಹೇ ನೋಧೋ ವೃಷ್ಣೇ ಕಾಮಾನಾಂ ವರ್ಷಿತ್ರೇ ಸುಮಖಾಯ ಶೋಭನಯಜ್ಞಾಯ ವೇಧಸೇ ಪುಷ್ಪಫಲಾದೀನಾಂ ಕರ್ತ್ರೇ । ವಾಯೌ ಸತಿ ಹಿ ಪುಷ್ಪಾಣಿ ಫಲಾನಿ ಚೋತ್ಪದ್ಯಂತೇ । ಏವಂವಿಧಾಯ ಮರುದ್ಭ್ಯಃ । ವಿಭಕ್ತಿವ್ಯತ್ಯಯಃ । ಮರುತಾಂ ಮಿತರಾವಿಣಾಂ ಶರ್ಧಾಯ ಸಮೂಹಾಯ ಸುವೃಕ್ತಿಂ ಸುಷ್ಟ್ವವರ್ಜಕಂ ಸುಷ್ಠು ಪ್ರವೃತ್ತಂ ವಾ ಸ್ತೋತ್ರಂ ಪ್ರ ಭರ । ಪ್ರೇರಯ । ಸ್ತುಹೀತಿ ಯಾವತ್ । ಸ್ತುತೌ ಪ್ರೇರಿತೋ ನೋಧಾ ಅಹ । ಧೀರೋ ಧೀಮಾನ್ ಸುಹಸ್ತ್ಯಃ ಶೋಭನಾಂಗುಲಿಯುಕ್ತಃ । ಕೃತಾಂಜಲಿರಿತ್ಯರ್ಥಃ । ಏವಂಭೂತೋಽಹಂ ಮನಸಾ ಗಿರಃ ಸ್ತುತಿಲಕ್ಷಣಾ ವಾಚಃ ಸಮಂಜೇ । ಸಮ್ಯಗ್ವ್ಯಕ್ತಾಃ ಕರೋಮಿ । ಯಾ ಗಿರೋ ವಿದಥೇಷು ಯಜ್ಞೇಷ್ವಾಭುವಃ । ಆಙ್ ಮರ್ಯಾದಾಯಾಂ । ಯಥಾಶಾಸ್ತ್ರಂ ಪ್ರಯುಕ್ತಾ ಭವಂತೀತ್ಯಾಭುವಃ । ದೇವತಾಭಿಮುಖೀಕರಣಾಯ ಸಮರ್ಥಾಃ। ಯಜ್ಞಯೋಗ್ಯಾಃ ಸ್ತೋತ್ರೈರ್ಮನಃಪೂರ್ವಕಂ ಮರುದ್ಗಣಂ ಸ್ತೌಮೀತಿ ಭಾವಃ । ತತ್ರ ದೃಷ್ಟಾಂತಃ । ಅಪೋ ನ । ಯಥಾ ಪರ್ಜನ್ಯೋ ಯುಗಪದೇವ ಬಹುಷು ಪ್ರದೇಶೇಷು ಬಹುಶೋ ಜಲಾನಿ ವರ್ಷತಿ ತದ್ವತ್ ॥ ವೃಷ್ಣೇ । ವೃಷು ಸೇಚನೇ । ಕನಿನ್ಯುವೃಷಿತಕ್ಷಿ-ತ್ಯಾದಿನಾ ಕನಿನ್ಪ್ರತ್ಯಯಃ । ಕಿತ್ತ್ವಾದ್ಗುಣಾಭಾವೋ ನಿತ್ತ್ವಾದಾದ್ಯುದಾತ್ತತ್ವಂ । ಚತುರ್ಥ್ಯೇಕವಚ ನೇ ಲ್ಲೋಪೋ ಽನ ಇತ್ಯಕಾರಲೋಪಃ । ಶರ್ಧಾಯ ॥ ಶೃಧು ಪ್ರಸಹನೇ । ಶರ್ಧ್ಯತೇ ಪ್ರಸಹ್ಯತೇ ಽನೇನ ಪರ್ವತಾದಿಕಮಿತಿ ಶರ್ಧೋ ಮರುತ್ಸಂಘಃ । ಕರಣೇ ಘಞ್ । ಞಿತ್ತ್ವಾದಾದ್ಯುದಾತ್ತತ್ವಂ । ಸುಮ-ಖಾಯ । ಶೋಭನೋ ಮಖೋ ಯಸ್ಯ । ನಞ್ಸುಭ್ಯಾಮಿತಿ ಪ್ರಾಪ್ತೇ ವ್ಯತ್ಯಯೇನ ಪೂರ್ವಪದಪ್ರಕೃತಿ-ಸ್ವರತ್ವಂ । ನೋಧಃ । ಪಾದಾದಿತ್ವಾತ್ ಷಾಷ್ಠಿಕಮಾಮಂತ್ರಿತಾದ್ಯುದಾತ್ತತ್ವಂ । ಸುಹಸ್ತ್ಯಃ । ಹಸ್ತೇ ಭವಾ ಹಸ್ತ್ಯಃ । ಭವೇ ಛಂದಸೀತಿ ಯತ್ । ಯತೋ ನಾವ ಇತ್ಯಾದ್ಯುದಾತ್ತತ್ವಂ । ತತಃ ಸುಶಬ್ದೇನ ಬಹುವ್ರೀಹಾವಾದ್ಯುದಾತ್ತಂ ದ್ರ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ನೋಧಃ—ನೋಧಸನೇ । **ವೃಷ್ಣೇ**—ಇಷ್ಟಾರ್ಥಪ್ರದರಾದ । **ಸುಮಖಾಯ**—ಮಂಗಳಕರವಾದ ಯಜ್ಞವುಳ್ಳ । **ವೇಧಸೇ**—ಫಲಪುಷ್ಪಾದಿಕರ್ತೃವಾದ । **ಮರುದ್ಭ್ಯಃ**—ಮರುತ್ತುಗಳ । **ಶರ್ಧಾಯ**—ಸಮೂಹಕ್ಕೆ । **ಸುವೃಕ್ತಿಂ**—ಚೆನ್ನಾಗಿ ಪ್ರಸನ್ನೀಕರಿಸಿಕೊಳ್ಳುವ ಸ್ತುತಿಯನ್ನು । **ಪ್ರ ಭರ**—ಪ್ರೇರಿಸು (ಮಾಡು) । **ಧೀರಃ**—ಧೀಮಂತನಾದ ನಾನು । **ಸುಹಸ್ತ್ಯಃ**—ಒಳ್ಳೆಯ ಅಂಗುಳಿಗಳಿಂದ ಯುಕ್ತನಾಗಿ (ಅಂಜಲಿಬದ್ಧನಾಗಿ) । **ಮನಸಾ**—ಮನಸ್ಸಿನಿಂದ । **ವಿದಥೇಷು**—ಯಜ್ಞಗಳಲ್ಲಿ । **ಆಭುವಃ**—ಶಾಸ್ತ್ರಪ್ರಕಾರ ಪ್ರಯುಕ್ತವಾದ (ದೇವತೆಗಳನ್ನು ಅಭಿಮುಖೀಕರಿಸಿಕೊಳ್ಳುವ) । **ಗಿರಃ**—ಸ್ತುತಿರೂಪವಾದ ವಾಕ್ಯಗಳನ್ನು । **ಅಪೋ ನ**—ನೀರಿನಂತೆ । **ಸಮಂಜೇ**—ಚೆನ್ನಾಗಿ ವ್ಯಕ್ತಪಡಿಸುತ್ತೇನೆ ॥

॥ ಭಾವಾರ್ಥ ॥

ಎಲೈ ನೋಧಸಋಷಿಯೇ, ಇಷ್ಟಾರ್ಥಪ್ರದರಾದ, ಯಜ್ಞದಲ್ಲಿ ಸ್ತುತ್ಯರಾದ, *ಫಲಪುಷ್ಪಕರ್ತೃಗಳಾದ ಮರುದ್ದೇವತೆಗಳನ್ನು ಚೆನ್ನಾಗಿ ಪ್ರಸನ್ನರಾಗುವಂತೆ ಸ್ತುತಿಸು. ನೋಧಋಷಿಯಾದ ನಾನು ಸಮಾಹಿತನಾಗಿ, ಅಂಜಲಿಬದ್ಧನಾಗಿ, ಯಜ್ಞಗಳಲ್ಲಿ ದೇವತೆಗಳನ್ನು ಅಭಿಮುಖರನ್ನಾಗಿ ಮಾಡಬಲ್ಲ ಸ್ತುತಿವಾಕ್ಯಗಳನ್ನು, ಜಲಪ್ರವಾಹದಂತೆ, ಸುಲಭವಾಗಿ ಉಚ್ಚರಿಸುತ್ತೇನೆ.

English Translation

Offer, Nodhas, earnest praise to the company of the Maruts, the senders of rain and ripeners of fruit, deserving of adoration Composed, and with folded-hands, I utter the praises conceived in my mind, which are efficacious in sacred rites (and flow readily) as the waters

॥ ವಿಶೇಷವಿಷಯಗಳು ॥

ವೃಷ್ಟೇ—ಕಾಮಾನಾಂ ವರ್ಷಿತ್ರೇ ತಮ್ಮನ್ನು ಸೇವಿಸುವವರ ಅಭಿಲಾಷೆಗಳನ್ನು ಪೂರ್ತಿಮಾಡುವವರು. ಈ ಮರುದ್ದೇವತೆಗಳೆಂದು ಅಭಿಪ್ರಾಯವು. ಈ ಮರುದ್ದೇವತೆಗಳು ನಲವತ್ತೊಂಭತ್ತು ಮಂದಿ ಇರುವುದರಿಂದ ಇವರ ಸಮೂಹವನ್ನು ಉದ್ದೇಶಮಾಡಿಕೊಂಡು ಇಲ್ಲಿ ಏಕವಚನವು ಪ್ರಯುಕ್ತವಾಗಿರುವುದು

ಶರ್ಧಾಯ—ಶರ್ಧ್ಯತೇ ಪ್ರಸಹ್ಯತೇ ಅನೇನ ಪರ್ವತಾದಿಕಂ ಇತಿ ಶರ್ಧಃ ಮರುತ್ಸಂಘಃ. ಬೆಟ್ಟವೇ ಮೊದಲಾದವುಗಳನ್ನು ಕೂಡ ಅಲುಗಾಡುವಂತೆ ಮಾಡುವಕಾರಣ ಮರುದ್ದೇವತೆಗಳ ಗುಂಪಿಗೆ ಶರ್ಧವೆಂದು ಹೆಸರು ಉಂಟಾಗಿರುವುದು.

ವೇಧಸೇ—ಪುಷ್ಪಫಲಾದೀನಾಂ ಕರ್ತ್ರೇ। ವಾಯೌ ಹಿ ಸತಿ ಪುಷ್ಪಾಣಿ ಫಲಾನಿ ಚ ಉತ್ಪದ್ಯಂತೇ ವಾಯುವಿನ ಚಲನವಲನಾದಿಗಳಿಂದ ವೃಕ್ಷಗಳೂ ಮತ್ತು ಲತೆಗಳು ಮೊದಲಾದ ಸ್ಥಾವರ ಜಂಗಮಾತ್ಮಕವಾದ ಪ್ರಪಂಚದಲ್ಲಿ ಆಯಾಯ ಪುಷ್ಪಫಲಾದಿಗಳೇ ಮೊದಲಾದವುಗಳು ಉತ್ಪನ್ನವಾಗುವುವು ಆದ್ದರಿಂದಲೇ ಈ ಮರುದ್ದೇವತೆಗಳು ವೇಧಶಬ್ದದಿಂದ ಬೋಧ್ಯರಾಗಿರುವರು. ಸ್ತುತಿಸ್ತೋಮಗಳು ನೇಧಶಬ್ದಕ್ಕೆ ತಾತ್ಪರ್ಯವೆಂಬ ಅರ್ಥವನ್ನು ಮಾಡಿರುವರು

ಸುಹಸ್ತ್ಯಃ—ಶೋಭನಾಂಗುಲಿಯುಕ್ತಃ ಸ್ತೋತ್ರವನ್ನು ಮಾಡುವ ಕಾಲಕ್ಕನುಗುಣವಾಗಿ ವಿನ್ಯಾಸ ಮಾಡಿರುವ ಅಂಗುಲಿಗಳಿಂದ ಕೂಡಿದ ಹಸ್ತವುಳ್ಳವನೆಂದು ಅಭಿಪ್ರಾಯವು

ವಿದಥೇಷು—ಯಜ್ಞೇಷು। ಯಜ್ಞಗಳಲ್ಲಿ ವಿದಥಶಬ್ದವು ಯಜ್ಞನಾಮಗಳಲ್ಲಿ ಪರಿವಾಗಿರುವುದು (ನಿ ೩-೧೯)

ಆಭುವಃ—ಯಥಾಶಾಸ್ತ್ರಂ ಪ್ರಯುಕ್ತಾ ಭವಂತೀತ್ಯಾಭುವಃ ದೇವತಾಭಿಮುಖೀಕರಣಾಯ ಸಮರ್ಥಾಃ ಯಜ್ಞದಲ್ಲಿ ಪರಿಸರವ ಸ್ತೋತ್ರಗಳು ಶಾಸ್ತ್ರಕ್ಕನುಸಾರವಾಗಿ ಪ್ರಯುಕ್ತಗಳಾಗಿ ಆಯಾಯ ದೇವತೆಗಳನ್ನು

ಯಜ್ಞಮಾಡುವ ಯಜಮಾನರಿಗೆ ಅಭಿಮುಖರನ್ನಾಗಿ ಮಾಡುವುದರಲ್ಲಿ ತಕ್ಕವುಟ್ಟನ ಶಕ್ತಿಯನ್ನು ಹೊಂದಿರುವುವು ಎಂದು ಅಭಿಪ್ರಾಯವು. ಸ್ಕಂದಸ್ವಾಮಿಗಳು—" ಶರ್ಧಶಬ್ದವು " ಉತ್ಸಾಹವುಳ್ಳ ಎಂದು ಅರ್ಥವನ್ನು ಹೇಳುವುದು ನೇಧಶ್ಶಬ್ದವು ಪ್ರಾಜ್ಞರೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು ಸುಹಸ್ತ್ಯಃ-ಸುವರ್ಣಾಲಂಕಾರವುಳ್ಳ ಹಸ್ತವುಳ್ಳವನು ಮತ್ತು ಸುಹಸ್ತ್ಯಃ-ವಾಕ್ಯಗಳು ಆ ಭುವಃ --ಮಹತ್ತಾದವುಗಳು" ಎಂದು. ಈ ಶಬ್ದಗಳಿಗೆ ಬೇರೆ ಬೇರೆ ಯಾವ ಅರ್ಥವನ್ನು ಹೇಳಿರುವರು. ಗಣಪಂಚ ಶಬ್ದವನ್ನು ಅಧ್ಯಾಹಾರ ಮಾಡಿಕೊಂಡು ಆಂತರಾತ್ಮನಾದ ನಾನು ಮನಸ್ಸಿನೊಡನೆ ಸೇರಿ ಮರುದ್ಗಣಕ್ಕಾಗಿ ಸ್ತೋತ್ರವನ್ನು ಹೇಳುತ್ತೇನೆ ಆದ್ದರಿಂದ ಶರೀರಾತ್ಮನಾದ **ಎಲೈ ನೋಧ** ಋಷಿಯೇ ನೀನೂ ಕೂಡ ಮರುದ್ಗಣದ ವಿಷಯವಾಗಿ ಪೂಜ್ಯವಾದ ಸ್ತೋತ್ರವನ್ನು ಪರಿಸು ಎಂದು ಅರ್ಥ ಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ವೃಷ್ಣೇ—ವೃಷು ಸೇಚನೇ ಧಾತು **ಕನಿನ್ಯುವೃಷಿತಕ್ಷಿ**-(ಉ ಸೂ ೧-೧೫೪) ಎಂಬುದರಿಂದ ಕನಿನ್ ಪ್ರತ್ಯಯ ಕಿತ್ತಾದುದರಿಂದ ದ ಲಘೂಪಧಗುಣ ಬರುವುದಿಲ್ಲ ವೃಷನ್ ಶಬ್ದವಾಗುತ್ತದೆ ಚತುರ್ಥೀ ಏಕವಚನದಲ್ಲಿ **ಅಲ್ಲೋಪೋ೽ನಃ** ಎಂಬುದರಿಂದ ಅಕಾರಲೋಪ. **ರಷಾಭ್ಯಾಂ**-ಸೂತ್ರದಿಂದ ನಕಾರಕ್ಕೆ ಣತ್ವ. ವೃಷ್ಣೇ ಎಂದು ರೂಪವಾಗುತ್ತದೆ ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ

ಶರ್ಧಾಯೈ—ಶೃಧು ಪ್ರಸಹನೇ ಧಾತು ಶರ್ಧ್ಯತೇ ಪ್ರಸಹ್ಯತೇ ಅನೇನ ಪರ್ವತಾದಿಕಮಿತಿ ಶರ್ಧಃ ಮರುತ್ಸಂಘಃ (ಗಾಳಿಯ ಸಾಧನದಿಂದ ಪರ್ವತಾದಿಗಳು ಸಹಿಸಲ್ಪಡುತ್ತವೆ) ಕರಣಾರ್ಥದಲ್ಲಿ ಘಞ್ ಪ್ರತ್ಯಯ. **ಪುಗಂತಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಉಪಧೆಗೆ ಗುಣ ಶರ್ಧ ಎಂದು ರೂಪವಾಗುತ್ತದೆ. ಚತುರ್ಥೀ ಏಕವಚನದ ರೂಪ **ಘ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಪ್ರತ್ಯಯ ಘ್ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ.

ಸುಮಖಾಯ—ಶೋಭನಃ ಮಖೋ ಯಸ್ಯ ಸಃ ಸುಮಖಃ ತಸ್ಮೈ ಸುಮಖಾಯ **ನಞ್ಸುಭ್ಯಾಂ** (ಪಾ ಸೂ ೬-೨-೧೭೨) ಎಂಬುದರಿಂದ ಸ್ವರವು ಪ್ರಾಪ್ತವಾದರೆ ವ್ಯತ್ಯಯದಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ

ನೋಧಃ--ಸಂಬುದ್ಧಿಯಲ್ಲಿ ಸಕಾರಕ್ಕೆ ರುತ್ವ ವಿಸರ್ಗಬಂದರೆ ನೋಧಃ ಎಂದು ರೂಪವಾಗುತ್ತದೆ ಪಾದದ ಆದಿಯಲ್ಲಿರುವುದರಿಂದ **ಆಮಂತ್ರಿತಸ್ಯ** (ಪಾ ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಸುವೃಕ್ತಿಂ ವೃಜೀ ವರ್ಜನೇ ಧಾತು **ಸ್ತ್ರಿಯಾಂ ಕ್ತಿನ್** ಎಂಬುದರಿಂದ ಕ್ತಿನ್ ಸ್ತ್ರತ್ಯಯ **ಚೋಃ ಕುಃ** ಸೂತ್ರದಿಂದ ಧಾತುವಿನ ಜಕಾರಕ್ಕೆ ಕುತ್ವ **ಖರಿ ಚ** ಎಂಬುದರಿಂದ ಚರ್ತ್ವ ದ್ವಿತೀಯಾ ಏಕವಚನರೂಪ **ಗತಿಕಾರಕೋಪಪದಾತ್ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

ಭರ—ಹಿಂದಿನ ಮಂತ್ರದಲ್ಲಿ ಪ್ರಕ್ರಿಯಾ ಹೇಳಿದೆ

ಸುಹಸ್ತ್ಯಃ—ಹಸ್ತೇ ಭವಾಃ ಹಸ್ತ್ಯಃ **ಭವೇ ಛಂದಸಿ** (ಪಾ ಸೂ ೪.೪ ೧೧೦) ಎಂಬುದರಿಂದ ಭವಾರ್ಥದಲ್ಲಿ ಯತ್ ಪ್ರತ್ಯಯ **ಯತೋ೽ನಾವಃ** (ಪಾ ಸೂ ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ

ಬರುತ್ತದೆ ಶೋಭನಾಃ ಹಸ್ತಾಃ ಯಸ್ಯ ಸಃ ಸುಹಸ್ತ್ಯಃ ಬಹುವ್ರೀಹಿಸಮಾಸದಲ್ಲಿ **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ ಸೂ ೬-೨-೧೧೯) ಎಂಬುದರಿಂದ ದ್ವ್ಯಚ್ಚಾದ ಪದವು ಉತ್ತರಪದವಾಗಿರುವುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ

ಸಮಜ್ಞಿೀ—ಸಮ್ ಉಪಸರ್ಗ. ಅಂಜೂ ವ್ಯಕ್ತೆಮರ್ಷಣಕಾಂತಿಗತಿಷು ಧಾತು. ವ್ಯತ್ಯಯದಿಂದ ಆತ್ಮನೇ ಪದಪ್ರತ್ಯಯ ಬರುತ್ತದೆ. **ಶ್ನಸೋರಲ್ಲೋಪ** ಎಂಬುದರಿಂದ ಶ್ನಮಿನ ಆಕಾರಕ್ಕೆ ಲೋಪ ಉತ್ತಮಪುರುಷದ ಇಟಿಗೆ **ಟಿತ ಆತ್ಮನೇಪದಾನಾಂ**- -ಸೂತ್ರದಿಂದ ಏತ್ವ. ಅಂಜೇ ಎಂದು ರೂಪವಾಗುತ್ತದೆ **ತಿಜ್ಜತಿಜಿಃ** ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೧ ॥

॥ ಸಂಹಿತಾಪಾಠಃ ॥

ತೇ ಜಜ್ಞಿರೇ ದಿವ ಋಷ್ವಾಸ ಉಕ್ಷಣೋ ರುದ್ರಸ್ಯ ಮರ್ಯಾ
ಅಸುರಾ ಅರೇಪಸಃ ।
ಪಾವಕಾಸಃ ಶುಚಯಃ ಸೂರ್ಯಾ ಇವ ಸತ್ವಾನೋ ನ ದ್ರಪ್ಸಿನೋ
ಘೋರವರ್ಪಸಃ ॥ ೨ ॥

॥ ಪದಪಾಠಃ ॥

ತೇ । ಜಜ್ಞಿರೇ । ದಿವಃ । ಋಷ್ವಾಸಃ । ಉಕ್ಷಣಃ । ರುದ್ರಸ್ಯ । ಮರ್ಯಾಃ ।
ಅಸುರಾಃ । ಅರೇಪಸಃ ।
ಪಾವಕಾಸಃ । ಶುಚಯಃ । ಸೂರ್ಯಾಃ ಇವ । ಸತ್ವಾನಃ । ನ । ದ್ರಪ್ಸಿನಃ ।
ಘೋರವರ್ಪಸಃ ॥ ೨ ॥

॥ ಸಾಯಣಭಾಷ್ಯಂ ॥

ತೇ ಮರುತೋ ದಿವೋ೭ಂತರಿಕ್ಷಾಜ್ಜಜ್ಞಿರೇ । ಪ್ರಾದುರ್ಬಭೂವುಃ । ಕೀದೃಶಾಃ । ಋಷ್ವಾಸೋ ದರ್ಶನೀಯಾಃ ಉಕ್ಷಣಃ ಸೇಕ್ತಾರಃ । ಯುವಾನ ಇತ್ಯರ್ಥಃ । ರುದ್ರಸ್ಯ ಮರ್ಯಾಃ । ಮರ್ಯಶಬ್ದೋ ಮನುಷ್ಯವಾಚೀಹ ಮರುತಾಂ ಮರ್ತ್ಯತ್ವಾಸಂಭವಾತ್ಪುತ್ರಾ ಇತ್ಯಸ್ಮಿನ್ನರ್ಥೇ ಪರ್ಯವಸ್ಯತಿ । ಮರುತಾಂ ರುದ್ರಪುತ್ರತ್ವಂ ಚ ಮಂತ್ರಾಂತರೇ ಸ್ಪಷ್ಟಂ । ಆ ತೇ ಪಿತರ್ಮರುತಾಂ ಸುಮ್ನಮೇತು । ಋಗ್ವೇ ೨-೩೩-೧ । ಇತಿ । ಅಸುರಾಃ ಶತ್ರೂಣಾಂ ನಿರಸಿತಾರಃ ಅರೇಪಸಃ । ರೇಪ ಇತಿ ಪಾಪನಾಮ । ಪಾಪರಹಿತಾಃ ಪಾವಕಾಸಃ ಸರ್ವೇಷಾಂ ಶೋಧಕಾಃ ಸೂರ್ಯಾ ಇವ ಶುಚಯೋ ದೀಪ್ತಾಃ ಸತ್ವಾನೋ ನ ಯಥಾ ಪರಮೇಶ್ವರಸ್ಯ ಭೂತಗಣಾ ಅತಿಶಯೇನ ಬಲಪರಾಕ್ರಮಾಃ । ತತ್ಸದೃಶಾ ಇತ್ಯರ್ಥಃ । ಸತ್ವಾನ ಇತಿ ಭೂತಗಣಾ ಉಚ್ಯಂತೇ । ಅಥೋ ಯೇ ಅಸ್ಯ ಸತ್ವಾನಃ । ತೈ. ಸಂ ೪-೫-೧-೩ । ಇತ್ಯಾದೌ ತಥಾ ದರ್ಶನಾತ್ । ದ್ರಪ್ಸಿನೋ ವೃಷ್ಣ್ಯದಕಬಿಂದುಭಿರ್ಯುಕ್ತಾಃ । ಮರುತಃ ಸ್ರಷ್ಟಾಂ ವೃಷ್ಟಿಂ ನಯಂತೀತಿ ಶ್ರುತೇಃ । ತೈ. ಸಂ ೨-೪-೧೦-೨ । ಘೋರವರ್ಪಸಃ । ವರ್ಪ ಇತಿ ರೂಪನಾಮ । ಘೋರರೂಪಾಃ । ಶತ್ರೂಣಾಂ ಭಯಂಕರರೂಪಾ ಇತ್ಯರ್ಥಃ । ಯದ್ವಾ । ಸತ್ವಾನೋ ನ ಘೋರವರ್ಪಸಃ । ಯಥಾ ಭೂತಗಣಾ ಭಯಂಕರರೂಪಾಸ್ತದ್ವದೇತೇ೭ಪೀತ್ಯರ್ಥಃ ॥ ಋಷ್ವಾಸಃ । ಋಷೀ ಗತೌ । ಗತ್ಯರ್ಥಾ ಬುದ್ಧ್ಯರ್ಥಾ ಇತ್ಯತ್ರ ಜ್ಞಾನಾರ್ಥಃ । ಸರ್ವನಿಘೃಷ್ವೀತ್ಯಾದೌ । ಉ ೧-೧೫೩ । ವಪ್ರತ್ಯಯಾಂತೋ ನಿಪಾತಿತಃ । ಅಜ್ಜಸೇರಸುಕ್ । ಉಕ್ಷಣಃ । ವಾ ಷಪೂರ್ವಸ್ಯ ನಿಗಮ ಇತ್ಯುಪಧಾದೀರ್ಘಾಭಾವಃ । ಅರೇಪಸಃ । ಬಹುವ್ರೀಹೌ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಸತ್ವಾನಃ । ಷದ್ಲೃ ವಿಶರಣಗತ್ಯವಸಾದನೇಷು । ಪ್ರ ಈರಸದ್ಯೋಸ್ತುಟ್ಚ । ಉ. ೪-೧೧೬ । ಇತಿ ವಿಧೀಯಮಾನಃ ಕ್ವನಿಪ್ಪ್ರತ್ಯಯೋ ಬಹುಲವಚನಾತ್ಕೇವಲಾದಪಿ ಭವತಿ । ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ ॥

॥ ಪ್ರತಿಪದಾರ್ಥ ॥

ತೇ—ಆ ಮರುದ್ದೇವತೆಗಳು । **ಋಷ್ವಾಸಃ**—ಮನೋಹರ ರೂಪವುಳ್ಳವರಾಗಿಯೂ, (ಗಮನಸ್ವಭಾವವುಳ್ಳವರಾಗಿ, ಜ್ಞಾನಿಗಳಾಗಿ) । **ಉಕ್ಷಣಃ**—ತರುಣರಾಗಿಯೂ । **ರುದ್ರಸ್ಯ ಮರ್ಯಾಃ**—ರುದ್ರನ ಪುತ್ರರಾಗಿಯೂ । **ಅಸುರಾಃ**—ಶತ್ರುನಾಶಕರಾಗಿಯೂ । **ಅರೇಪಸಃ**—ಪಾಪರಹಿತರಾಗಿಯೂ । **ಪಾವಕಾಸಃ**—(ಎಲ್ಲರನ್ನೂ) ಪವಿತ್ರರನ್ನಾಗಿ ಮಾಡುವವರಾಗಿಯೂ । **ಸೂರ್ಯಾ ಇವ**—ಸೂರ್ಯನಂತೆ । **ಶುಚಯಃ**—ಪ್ರಕಾಶಮಾನರಾಗಿಯೂ । **ಸತ್ವಾನೋ ನ** (ಪರಮೇಶ್ವರನ ಭೂತಗಣದಂತೆ) ಬಲಿಷ್ಠರಾಗಿಯೂ । **ದ್ರಪ್ಸಿನಃ**—ಜಲಬಿಂದುಯುಕ್ತರಾಗಿಯೂ । **ಘೋರವರ್ಪಸಃ**—(ಶತ್ರುಗಳಿಗೆ) ಭಯಂಕರಾಕಾರವುಳ್ಳವರಾಗಿಯೂ । **ದಿವಃ**—ಅಂತರಿಕ್ಷದಿಂದ । **ಜಜ್ಞಿರೇ**—ಆವಿರ್ಭೂತರಾದರು ॥

॥ ಭಾವಾರ್ಥ ॥

ಮನೋಹರವಾದ ರೂಪವುಳ್ಳವರೂ, ತರುಣರೂ, ರುದ್ರನ ಪುತ್ರರೂ, ಶತ್ರುನಾಶಕರೂ, ತಾವು ಸ್ವಯಂ ಶುದ್ಧರೂ, ಇತರರನ್ನು ಶುದ್ಧಿಮಾಡತಕ್ಕವರೂ ಸೂರ್ಯನಂತೆ ಪ್ರಕಾಶಮಾನರೂ, ಭೂತಗಣಗಳಂತೆ ಬಲಿಷ್ಠರೂ, ಶತ್ರು

ಗಳಿಗೆ ಭಯಂಕರವಾದ ರೂಪವುಳ್ಳವರೂ, ಆದ ಮರುದ್ದೇವತೆಗಳು ವೃಷ್ಟ್ಯುದಕ ಬಿಂದುಗಳಿಂದ ಯುಕ್ತರಾಗಿ ಅಂತರಿಕ್ಷದಿಂದ ಅವಿರ್ಭೂತರಾದರು.

English Translation.

They were born handsome and vigorous from the sky, the sons of Rudra, the conquerors of their foes, pure from sin, and purifying all, radiant as suns, powerful as evil spirits, diffusers of raindrops, and of fearful forms

॥ ವಿಶೇಷ ವಿಷಯಗಳು ॥

ಋಷ್ವಾಸಃ— ದರ್ಶನೀಯಾಃ । ಸೌಂದರ್ಯಶಾಲಿಗಳು, ರೂಪವಂತರು.

ಉಕ್ಷಣಃ— ಸೇಕ್ತಾರಃ, ಯುವಾನಃ, ವರ್ಷಿತಾರಃ, ಮಳೆಯನ್ನು ಹುಯ್ಯುವಂತೆ ಮಾಡುವವರು, ಯೌವನದಿಂದ ಕೂಡಿರುವರು, ಮರುದ್ದೇವತೆಗಳು

ರುದ್ರಸ್ಯ ಮರ್ಯಾಃ—ಮರ್ಯ ಶಬ್ದಃ ಮನುಷ್ಯವಾಚೀ ಇಹ ಮರುತಾಂ ಮರ್ತ್ಯತ್ವಾಸಂಭವಾತ್ ಪುತ್ರಾ ಇತಿ ಅರ್ಥೇ ಪರ್ಯವಸ್ಯತಿ. ಮರುತಾಂ ರುದ್ರಪುತ್ರತ್ವಂ "ಆ ತೇ ಪಿತರ್ಮರುತಾಂ ಸುಮ್ನಮೇತು" (ಋ. ಸಂ. ೨-೩೩-೧) ಇತಿ. ಮರ್ಯ ಎಂದರೆ ಮನುಷ್ಯರೆಂದು ಅರ್ಥವು ಮರುದ್ದೇವತೆಗಳಿಗೆ ಮರಣಧರ್ಮವುಳ್ಳ ಮನುಷ್ಯತ್ವವು ಉಂಟಾಗದಿರುವ ಕಾರಣ ಇವರು ಮಕ್ಕಳಾಗಿರುವರು ಎಂದು ತಿಳಿಯಬೇಕು "ಆ ತೇ ಪಿತರ್ಮರುತಾಂ" ಎಂಬ ಋಕ್ಸಂಹಿತಾವಾಕ್ಯವು ಮರುದ್ದೇವತೆಗಳು ರುದ್ರನ ಪುತ್ರರಾಗಿರುವರೆಂಬ ಅಭಿಸ್ರಾಯವನ್ನು ವ್ಯಕ್ತಗೊಳಿಸುತ್ತದೆ

ಸ್ಕಂದಸ್ವಾಮಿಗಳು— ಈ ಮರುದ್ದೇವತೆಗಳು ("ತೇ ದಿವಸ್ಕಾಶಾತ್ ಜಜ್ಞಿರೇ ದ್ಯೌರೇಷಾಂ ಮಾತಾ") ಅಂತರಿಕ್ಷದಿಂದ ಉತ್ಪನ್ನರಾದವರು ಅಂತರಿಕ್ಷದೇ ಇವರಿಗೆ ಜನಸಿಯೂ ಎಂದು ಹೇಳಿರುವರು ಮತ್ತು ಅದಿತಿದೇವಿ ಕರ್ತೃಪುರುಷಳು ಇವರಿಂದ ಮರುದ್ದೇವತೆಗಳು ಜನ್ಮವನ್ನು ಪಡೆದಿರುವರೆಂಬುದು ಸ್ಪಷ್ಟವಾದಿದ್ದಲ್ಲಿ ಸ್ವಷ್ಟವಾಗಿರುತ್ತದೆ ಈ ಮರುದ್ದೇವತೆಗಳು ತಮ್ಮ ನಿರತಿಶಯವಾದ ಮಹಿಮೆಯನ್ನು ಎಲ್ಲರಿಗೂ ತಿಳಿಯುವಂತೆ ಮಾಡುವುದಕ್ಕಾಗಿ ಹೀಗೆ ತಮ್ಮ ಉತ್ಪತ್ತಿಯನ್ನು ವ್ಯಕ್ತಮಾಡಿರುವರು ಎಂದು ತಿಳಿಯಬೇಕು ಮತ್ತು— "ರುದ್ರಸ್ಯ ಯೇ ಮಿಳ್ಹುಷಃ ಸಂತಿ ಪುತ್ರಾಃ" (ಋ. ಸಂ ೬-೬೬-೩) ಯಾಮನ್ ರುದ್ರಸ್ಯ ಸೂನವಃ ಋ. ಸಂ ೧-೬೪-೧ ಎಂಬ ಮಂತ್ರಗಳಿಂದ ಈ ಮರುದ್ದೇವತೆಗಳು ರುದ್ರನ ಪುತ್ರರಾಗಿರುವರು ಎಂಬ ಅರ್ಥವನ್ನು ಹೇಳಿರುತ್ತಾರೆ

ಅಸುರಾಃ- ಶತ್ರೂಣಾಂ ನಿರಸಿತಾರಃ ಯಜ್ಞಮಾಡುವ ಯಜಮಾನರುಗಳ ಶತ್ರುಗಳನ್ನು ನಾಶ ಮಾಡುವವರು.

ಅರೇಪಸಃ—ಪಾಪರಹಿತಾಃ. ರೇಪ ಇತಿ ಪಾಪನಾಮ। ಮರುದ್ದೇವತೆಗಳು ಪಾಪಸಂಬಂಧವಿಲ್ಲದವರು. ರೇಪವೆಂದರೆ ಪಾಪವೆಂದು ಅರ್ಥವು.

ಸಾವಕಾಸಃ—ಸರ್ವೇಷಾಂ ಶೋಧಕಾಃ ಅಗ್ನಿಯು ಇತರ ಪದಾರ್ಥಗಳನ್ನು ಶುದ್ಧಿಮಾಡುವ ಹಾಗೆ ಈ ಮರುದ್ದೇವತೆಗಳು ಎಲ್ಲಕ್ಕೂ ಪರಿಶುದ್ಧಿಯನ್ನು ಉಂಟುಮಾಡುವವರು

ಸತ್ವಾನೋ ನ—ಸತ್ವಾನ ಇತಿ ಭೂತಗಣಾ ಉಚ್ಯಂತೇ। ಅಧೋ ಯೇ ಅಸ್ಯ ಸತ್ವಾನಃ ಇತ್ಯಾದೌ ತಥಾದರ್ಶನಾತ್। (ತೈ. ಸಂ. ೪-೫-೧-೩) ನ ಶಬ್ದವು ಉಪಮಾವಾಚಕವಾಗಿರುವುದು **ಸತ್ವಾನಃ** ಎಂಬ ಪದದಿಂದ ಪರಮೇಶ್ವರನ ಭೂತಗಣಗಳು ಎಂಬ ಅರ್ಥವು ಉಂಟಾಗುವುದು. ಈ ಮರುದ್ದೇವತೆಗಳು ಪರಮೇಶ್ವರನ ಭೂತಗಣಗಳ ಹಾಗೆ ಬಹಳ ಪರಾಕ್ರಮಶಾಲಿಗಳಾಗಿರುವರೆಂದು ಅಭಿಪ್ರಾಯವು

ದ್ರಪ್ಸಿನಃ ವೃಷ್ಟ್ಯುದಕಬಿಂದುಭಿರ್ಯುಕ್ತಾಃ ಮಳೆಯ ನೀರನ್ನು ಸುರಿಸುವ ಕಣ್ಣಾಹಸಿಗಳಿಂದ ಕೂಡಿದವರು. ಈ ಮರುದ್ದೇವತೆಗಳು ಎಂದರ್ಥವು **ಮರುತಃ ಸೃಷ್ಟಿಂ ನಯಂತಿ** (ತೈ. ಸಂ. ೩-೪-೧೦ ೩) ಸೃಷ್ಟಿಯು ಎಲ್ಲಾ ಕಡೆಯಲ್ಲಿಯೂ ಆಗುವಂತೆ ಮಾಡುವರು ಎಂದು ದ್ರಪ್ಸಿನಃ ಎಂಬ ಪದಕ್ಕೆ ಅರ್ಥವು. ಸ್ವಂದ ಗ್ರಂಥಗಳು **"ವೃಷ್ಟ್ಯುದಕಲಕ್ಷಣೇನ ರಸೇನ ರಸವಂತಃ। ಅಥವಾ ಸತ್ವಾನೋ ನೇತಿ ಶಬ್ದಾತ್ ಯಥಾ ಇಂದ್ರಪ್ರಭೃತಯೋ ದಾತಾರೋ ದ್ರಪ್ಸಿನಃ ತಥಾ ದ್ರಪ್ಸಿನಃ"** ಮಳೆಯ ನೀರಿನ ರೂಪವಾದ ಹನಿಗಳಿಂದ ಕೂಡಿದ ಮರುದ್ದೇವತೆಗಳು ಇಂದ್ರನೇ ಮೊದಲಾದ ದೇವತೆಗಳಂತೆ ಮಳೆಯ ಸಣ್ಣಸಣ್ಣ ಬಿಂದುಗಳಿಂದ ಕೂಡಿದವರು ಎಂದು ಅರ್ಥವನ್ನು ಹೇಳಿರುವರು

ಘೋರವರ್ಪಸಃ—ವರ್ಪ ಇತಿ ರೂಪನಾಮ. ಘೋರರೂಪಾಃ ಶತ್ರೂಣಾಂ ಭಯಂಕರ ರೂಪಾಃ। ಯಥಾ ಭೂತಗಣಾ ಭಯಂಕರರೂಪಾಃ ತದ್ವತ್ ಏತೇಽಪಿ ಈ ಮರುದ್ದೇವತೆಗಳು ಯಜ್ಞ ಮಾಡುವ ಯಜಮಾನರುಗಳ ಶತ್ರುಗಳಿಗೆ ಪರಮೇಶ್ವರನ ಭೂತಗಣಗಳ ಹಾಗೆ ಭಯವನ್ನು ಉಂಟುಮಾಡುವ ಆಕಾರವನ್ನು ಧರಿಸಿ ಇರುವವರಾಗಿ ಕಾಣಿಸಿಕೊಳ್ಳುವರು. ವರ್ಪಃ ಶಬ್ದವು ಹದಿನಾರು ರೂಪನಾಮಗಳ ಮಧ್ಯದಲ್ಲಿ ಪಠಿತವಾಗಿರುವುದು (ನಿ ೬ ೧೫)

॥ ವ್ಯಾಕರಣಪ್ರಕ್ರಿಯಾ ॥

ಜಜ್ಞಿರೇ ಜನೀ ಪ್ರಾದುರ್ಭಾವೇ ಧಾತು ಲಿಟ್ ಪ್ರಥಮಪುರುಷ ಬಹುವಚನದಲ್ಲಿ **ಲಿಟಸ್ತ್ರುಝೋ-ರೇಶಿರೇಚ್** ಎಂಬುದರಿಂದ ಇರೇಚ್ ಆದೇಶ ದ್ವಿತ್ವಾದಿಗಳು ಬಂದಾಗ **ಉಕ್ತರೂಪವಾಗುತ್ತದೆ** ತಿಙಂತನಿಘಾತಸ್ವರ ಬರುತ್ತದೆ

ದಿವಃ—ಊಡಿದಂಶದಾದಿ—ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಋಷ್ವಾಸಃ—ಋಷೀ ಗತೌ ಧಾತು ಗತ್ಯರ್ಥಾಃ ಬುದ್ಧ್ಯರ್ಥಾ, ಎಂಬುದುರಿಂದ ಇಲ್ಲಿ ಜ್ಞಾನಾರ್ಥಕ-ವಾಗಿದೆ **ಸರ್ವನಿಘೃಷ್ವರಿಷ್ವಲಷ್ವ**—(ಉ ಸೂ. ೧-೧೫೧) ಎಂಬುದರಿಂದ ವಪ್ರತ್ಯಯಾಂತವಾಗಿ ನಿಪಾತಿತವಾಗಿದೆ.

ಋಷ್ವ ಜಸ್ ಎಂದಿರುವಾಗ **ಅಜ್ಜಸೇರಸುಕ್** ಎಂಬುದರಿಂದ ಜಸಿಗೆ ಅಸುಕಾಗಮ ಅಸಸ್ ಎಂದಿರುವಾಗ ಸಕಾರಕ್ಕೆ ರುತ್ವ ವಿಸರ್ಗ ಋಷ್ವಾಸಃ ಎಂದು ರೂಪವಾಗುತ್ತದೆ

ಉಕ್ಷಣಃ—ಉಕ್ಷನ್ ಶಬ್ದ **ಶ್ವನ್ಯುಕ್ಷನ್**—(ಉ. ಸೂ. ೧. ೧೫೭) ಎಂಬುದರಿಂದ ಕನಿಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಪ್ರಥಮಾ ಜಸ್ಸಿನಲ್ಲಿ **ಸರ್ವನಾಮಸ್ಥಾನೇ ಚಾಸಂಬುದ್ಧೌ** ಸೂತ್ರದಿಂದ ದೀರ್ಘವು ಪ್ರಾಪ್ತವಾದರೆ **ನಾ ಷಪೂರ್ವಸ್ಯ ನಿಗಮೇ** (ಪಾ. ಸೂ. ೬-೪-೯) ಎಂಬುದರಿಂದ ಉಪಧಾ ದೀರ್ಘ ಬರುವುದಿಲ್ಲ

ಅರೇಪಸಃ—ನ ವಿದ್ಯತೇ ರೇಪಃ ಯೇಷಾಂ ತೇ ಅರೇಪಸಃ ಬಹುವ್ರೀಹಿಸಮಾಸ **ನಞಸುಭ್ಯಾಂ** (ಪಾ ಸೂ. ೬-೨-೧೭೨) ಎಂಬುದರಿಂದ ಉತ್ತರಪದ ಆಂತೋದಾತ್ತಸ್ವರ ಬರುತ್ತದೆ. ಪ್ರಥಮಾ ಬಹುವಚನಾಂತ ರೂಪ

ಪಾವಕಾಸಃ—ಪಾವಕ+ಜಸ್ ಎಂದಿರುವಾಗ **ಅಜ್ಜಸೇರಸುಕ್** (ಪಾ ಸೂ ೭-೧-೫೦) ಎಂಬುದರಿಂದ ಅಸುಕಾಗಮ. ರುತ್ವವಿಸರ್ಗ ಬಂದರೆ ಪಾವಕಾಸಃ ಎಂದು ರೂಪವಾಗುತ್ತದೆ.

ಸತ್ವಾನಃ—ಷದ್ಲೃ ವಿಶರಣಗತ್ಯವಸಾದನೇಷು ಧಾತು **ಪ್ರ ಈರಸದ್ಯೋಸ್ತುಟ್ ಚ** (ಉ. ಸೂ. ೪-೫೨೬) ಎಂಬುದರಿಂದ ವಿಧಿಸಲ್ಪಡುವ ಕ್ವನಿಪ್ ಪ್ರತ್ಯಯವು **ಉಣಾದಯೋ ಬಹುಲಂ** ಎಂದು ಬಹುವಚನದಿಂದ ಕೇವಲವಾಗಿರುವಾಗಲೂ ಬರುತ್ತದೆ **ಧಾತ್ವಾದೇಃ ಷಃ ಸಃ** ಎಂಬುದರಿಂದ ಆದಿಗೆ ಸಕಾರಾದೇಶ ಸತ್ವನ್ ಶಬ್ದವಾಗುತ್ತದೆ ಜಸಿನಲ್ಲಿ **ಸರ್ವನಾಮಸ್ಥಾನೇಷ್ವಾ**-ಎಂಬುದರಿಂದ ನಾಂತೋಪಧೆಗೆ ದೀರ್ಘ. ಸತ್ವಾನಃ ಎಂದು ರೂಪವಾಗುತ್ತದೆ. ವನಿಪ್ ಪಿತ್ವಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ. ಆಗ **ಧಾತೋಃ** ಎಂಬುದರಿಂದ ಬಂದಿರುವ ಧಾತುಸ್ವರವೇ ಉಳಿಯುತ್ತದೆ. ಸತ್ವಾನಃ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ

ಘೋರವರ್ಪಸಃ—ಘೋರಂ ವರ್ಪಃ ಏಷಾಂ ತೇ ಘೋರವರ್ಪಸಃ. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** ಎಂಬುದರಿಂದ ಸುರ್ವಸದ ಪ್ರಕೃತಿಸ್ವರ ಬರುತ್ತದೆ ॥ ೨ ॥

॥ ಸಂಹಿತಾಪಾಠ ॥

ಯುವಾನೋ ರುದ್ರಾ ಅಜರಾ ಅಭೋಗ್ಘನೋ ವವಕ್ಷುರಧ್ರಿಗಾವಃ ಪರ್ವತಾ ಇವ ।

ದೃಳ್ಹಾ ಚಿದ್ವಿಶ್ವಾ ಭುವನಾನಿ ಪಾರ್ಥಿವಾ ಪ್ರ ಚ್ಯಾವಯಂತಿ
ದಿವ್ಯಾನಿ ಮಜ್ಮನಾ ॥ ೩ ॥

॥ ಪದಪಾಠಃ ॥

ಯುವಾನಃ । ರುದ್ರಾಃ । ಅಜರಾಃ । ಅಭೋಕ್ಷಸಃ । ವವಕ್ಷುಃ । ಅಧ್ರಿಗಾವಃ । ಪರ್ವತಾಃಽಇವ ।
ದೃಳ್ಹಾ । ಚಿತ್ । ವಿಶ್ವಾ । ಭುವನಾನಿ । ಪಾರ್ಥಿವಾ । ಪ್ರ । ಚ್ಯವಯಂತಿ ।
ದಿವ್ಯಾನಿ । ಮಜ್ಮನಾ ॥ ೩ ॥

॥ ಸಾಯಣಭಾಷ್ಯಂ ॥

ಯುವಾನಸ್ತರುಣಾ ರುದ್ರಾ ರುದ್ರಪುತ್ರಾ ಅಜರಾ ಜರಾರಹಿತಾ ಅಭೋಗ್ಧೃನೋ ಯೇ ದೇವಾನ್ಹವಿರ್ಭಿರ್ನ ಭೋಜಯಂತಿ ತೇಷಾಂ ಹಂತಾರಃ ಅಧ್ರಿಗಾವೋಽಧೃತಗಮನಾಃ ಪರೈರನಿವಾರಿತಗತಯಃ ಪರ್ವತಾ ಇವ ದೃಢಾಂಗಾಃ ಏವಂಭೂತಾ ಮರುತೋ ವವಕ್ಷುಃ । ಸ್ತೋತೄಣಾಮಭಿಮತಂ ಪ್ರಾಪಯಿತುಮಿಚ್ಛಂತಿ । ಅಪಿ ಚ ವಿಶ್ವಾ ಸರ್ವಾಣಿ ಭುವನಾನಿ ಸದ್ಭಾವಂ ಪ್ರಾಪ್ತಾನಿ ಪಾರ್ಥಿವಾ ಪೃಥಿವ್ಯಾಂ ಭವಾನಿ ದಿವ್ಯಾನಿ ದಿವಿ ಭವಾನಿ ಚ ವಸೂನಿ ದೃಳ್ಹಾ ಚಿತ್ ದೃಢಾನ್ಯಪಿ ಮಜ್ಮನಾ । ಮಜ್ಮನೇತಿ ಬಲನಾಮ । ಮಜ್ಮನಾ ಶೋಧಕೇನ ಬಲೇನ ಪ್ರಚ್ಯಾವಯಂತಿ । ಪ್ರಚಾಲಯಂತಿ ॥ ಅಭೋಗ್ಧೃನಃ । ಭೋಜಯಂತೀತಿ ಭೋಜಃ । ನ ಭೋಜೋಽಭೋಜಃ । ತೇಷಾಂ ಹಂತಾರಃ । ಬಹುಲಂ ಛಂದಸೀತಿ ಹಂತೇಃ ಕ್ವಿಪ್ । ಋಯೋ ಹೋಽನ್ಯತರಸ್ಯಾಂ । ಪಾ. ೮ ೪-೬೨ । ಇತಿ ಹಕಾರಸ್ಯ ಘತ್ವಂ । ಇನ್ಹನ್ಪೂಷಾರ್ಯಮ್ಣಾಂ ಶೌ । ಪಾ. ೬-೪-೧೨ । ಇತಿ ನಿಯಮಾದ್ವೀರ್ಘಾಭಾವ. । ವವಕ್ಷುಃ । ವಹ ಪ್ರಾಪಣೇ । ಅಸ್ಮಾದಿಚ್ಛಾಸನ್ಯೇಕಾಚ ಇತೀಟ್ಪ್ರತಿಷೇಧಃ । ದ್ವಿರ್ಭಾವಃ । ಧತ್ವಕತ್ವಷತ್ವಾನಿ । ಸನ್ಯತ ಇತೀತ್ವಾಭಾವಶ್ಛಾಂದಸಃ । ಲಿಟ್ಯಸ್ಯಮಂತ್ರೇ । ಪಾ. ೩-೧-೩೫ । ಇತಿ ನಿಷೇಧಾದಾಮ್ಪ್ರತ್ಯಯಾಭಾವೇಽತೋ ಲೋಪ ಇತ್ಯಾಕಾರಲೋಪಃ । ಪ್ರತ್ಯಯಸ್ವರಃ । ಪಾದಾದಿತ್ವಾನ್ನಿಘಾತಾಭಾವಃ ॥

॥ ಪ್ರತಿಪದಾರ್ಥ ॥

ಯುವಾನಃ—ತರುಣರಾದ । **ರುದ್ರಾಃ**—ರುದ್ರಪುತ್ರರಾದ । **ಅಜರಾಃ**—ಜರಾರಹಿತರಾದ । **ಅಭೋಗ್ಧೃನಃ**—ದೇವತೆಗಳಿಗೆ ಹವಿಸ್ಸನ್ನು ಅರ್ಪಿಸದೇ ಇರುವವರನ್ನು ವಧೆ ಮಾಡುವ । **ಅಧ್ರಿಗಾವಃ**—ಅವ್ಯಾ

ಹತಗತಿಯುಳ್ಳ । **ಪರ್ವತಾ ಇವ**—ಪರ್ವತಗಳಂತೆ ದೃಢಾಂಗರಾದ (ಮರುದ್ದೇವತೆಗಳು) । **ವವಕ್ಷುಃ**—(ಸ್ತೋತೃಗಳ ಇಷ್ಟಾರ್ಥವನ್ನು) ಒದಗಿಸಲು ಇಚ್ಛಿಸುತ್ತಾರೆ । **(ಅಪಿ ಚ**—ಮತ್ತೂ) । **ವಿಶ್ವಾ**—ಎಲ್ಲಾ । **ಪಾರ್ಥಿವಾ**—ಭೂಮಿಯಲ್ಲಿರುವ । **ದಿವ್ಯಾನಿ** -ಅಂತರಿಕ್ಷದಲ್ಲಿರುವ (ಸ್ವರ್ಗದಲ್ಲಿರುವ) । **ಭುವನಾನಿ**—ಇರುವಂಥವುಗಳನ್ನು (ಪದಾರ್ಥಗಳನ್ನು) । **ದೃಳ್ಹಾ ಚಿತ್**—ದೃಢವಾಗಿದ್ದಾಗ್ಯೂ । **ಮಜ್ಮನಾ**—ಬಲದಿಂದ । **ಪ್ರ ಚ್ಯಾವಯಂತಿ**—ಅಲ್ಲಾಡಿಸುತ್ತಾರೆ (ಚಲಿಸುವಂತೆ ಮಾಡುತ್ತಾರೆ ॥

॥ ಭಾವಾರ್ಥ ॥

ಮರುದ್ದೇವತೆಗಳು ತರುಣರು, ರುದ್ರಪುತ್ರರು, ಜರಾರಹಿತರು, ಅವ್ಯಾಹತಗತಿಯುಳ್ಳವರು, ಪರ್ವತಗಳಂತೆ ದೃಢಾಂಗರು ಅಧವಾ ಅಚಲರು, ದೇವತೆಗಳನ್ನು ಪೂಜಿಸದವರನ್ನು ವಧಮಾಡುತ್ತಾರೆ ಸ್ತೋತೃಗಳ ಇಷ್ಟಾರ್ಥವನ್ನು ಪೂರೈಸುವುದರಲ್ಲಿ ಮಗ್ನರು ಇವರು, ಭೂಮಿಯಲ್ಲೇ ಆಗಲೀ, ಸ್ವರ್ಗದಲ್ಲಾಗಲೀ ಇರುವ ಪದಾರ್ಥಗಳು ಎಷ್ಟೇ ದೃಢವಾಗಿದ್ದರೂ. ಅವುಗಳನ್ನು ಚಲಿಸುವಂತೆ ಮಾಡುತ್ತಾರೆ.

English Translation

Youthful Rudras, and undecaying, destructive of those who do not worship (the gods), of unobstructed progress, and immovable as mountains, they are desirous of granting (the wishes of the worshipper) and by their strength agitate all substances, whether of heaven or of earth

॥ ವಿಶೇಷ ವಿಷಯಗಳು ॥

ರುದ್ರಾಃ—**ರುದ್ರಪುತ್ರಾಃ** । ರುದ್ರನ ಮಕ್ಕಳು. ಮರುದ್ದೇವತೆಗಳು ರುದ್ರಪುತ್ರರೆಂಬ ವಿಷಯದಲ್ಲಿ ಪ್ರಮಾಣವನ್ನು ಇದರ ಹಿಂದಿನ ಸೂಕ್ತದಲ್ಲಿ ಹೇಳಿರುವುದು.

ಅಭೋಗ್ಯಸಃ—**ಯೇ ದೇವಾ ಹವಿರ್ಭಿಃ ನ ಭೋಜಯಂತಿ ತೇಷಾಂ ಹಂತಾರಃ** । ದೇವತೆಗಳನ್ನು ಹವಿಸ್ಸುಗಳಿಂದ ತೃಪ್ತಿಪಡಿಸದೆ ಇರುವವರನ್ನು ನಾಶಮಾಡುವವರು

ಅಧ್ರಿಗಾವಃ ಅಧೃತಗಮನಾಃ ಪರೈರನಿವಾರಿತಗತಯಃ । ಇತರರಿಂದ ತಡೆಯಲಾಗದ ಶಕ್ತಿಯುಳ್ಳವರು. ಮರುದ್ದೇವತೆಗಳು ಸಂಚಾರ ಮಾಡುವಾಗ ಇವರನ್ನು ಯಾರೂ ತಡೆಯಲಾರರೆಂದು ಅರ್ಥವು

ದೃಳ್ಹಾಃ ಪರ್ವತಾ ಇವ—**ದೃಢಾಂಗಾಃ** । ಬೆಟ್ಟಗಳ ಹಾಗೆ ಬಲವಾದ ಅವಯವಗಳುಳ್ಳ ಶರೀರವನ್ನು ಹೊಂದಿರುವವರು

ಮಜ್ಮನಾ ಪ್ರ್ಯಚ್ಯಾವಯಂತಿ—ಮಜ್ಮನಾ ಶೋಧಕೇನ ಬಲೇನ । ಮಜ್ಮನೇತಿ ಬಲನಾಮ । **ಪ್ರಚಾಲಯಂತಿ** । ಮರುದ್ದೇವತೆಗಳು ಪೃಥಿವಿಯಲ್ಲಿಯೂ, ದೇವಲೋಕದಲ್ಲಿಯೂ ಉತ್ಪನ್ನವಾದ ಪದಾರ್ಥಗಳು

ದೃಢವಾಗಿದ್ದರೂ ಕೂಡ ಅವುಗಳನ್ನು ತಮ್ಮ ಬಲದಿಂದ ನಾಶಮಾಡುವರು ಎಂದು ಅರ್ಥವು ಮಜ್ಮನಾ ಎಂಬ ಪದವು ಬಲವೆಂಬ ಅರ್ಥದಲ್ಲಿ ಓಜಃ ಪಾಜಃ ಎಂಬ ಇಪ್ಪತ್ತೈದಂಟು ಬಲನಾಮಗಳ ಮಧ್ಯದಲ್ಲಿ ಪಠಿತವಾಗಿರುವುದು (ನಿ ೩-೯) ಸ್ಕಂದಸ್ವಾಮಿಗಳು ಈ ಋಕ್ಪಿನಲ್ಲಿರುವ ವಿವಕ್ಷಃ ಎಂಬ ಪದವನ್ನು ಬಹುವಚನಸ್ಥಾನೇ ಏಕವಚನಂ ಎಂದು ವೈದಿಕಪ್ರಯೋಗಕ್ಕೆ ಕಾರಣವನ್ನು ಹೇಳಿ. ವಿವಕ್ಷವಃ ಎಂದು ಶಬ್ದವನ್ನು ಅಂಗೀಕರಿಸಿ ಇರುವರು. ಇದರಿಂದ ವಿವಕ್ಷಿಥ ಎಂಬ ಪದವು ಮಹನ್ನಾಮದಲ್ಲಿ ಪಠಿತವಾಗಿ ಇರುವುದರಿಂದ ವಿವಕ್ಷವಃ ಎಂಬ ಈ ಶಬ್ದವು ಮಹನ್ನಾಮವಾಗಿರುವುದು ಎಂದು ಅರ್ಥಮಾಡಿರುತ್ತಾರೆ

ಭುವನಾನಿ ಸದ್ಮವಂ ಪ್ರಾಸ್ತಾನಿ। ಉತ್ಪತ್ತಿಯಿಂದ ಸ್ಥಿತಿಯನ್ನು ಹೊಂದಿರುವುವುಗಳು

॥ ವ್ಯಾಕರಣಸ್ರಕ್ರಿಯಾ ।

ಅಭೋಗ್ಫನಃ - ಭೋಜಯಂತೀತಿ ಭೋಜಃ। ನ ಭೋಜಃ ಅಭೋಜಃ। ತೇಷಾಂ ಹಂತಾರಃ ಹನ ಹಿಂಸಾಗತ್ಯೋಃ ಧಾತು ಇದಕ್ಕೆ **ಬಹುಲಂ ಛಂದಸಿ** ಎಂಬುದರಿಂದ ಕ್ವಿಪ್ ಪ್ರತ್ಯಯ ಅಭೋಜ್+ಹನ್ ಎಂದಿರುವಾಗ **ಝಯೋ ಹೋನ್ಯತರಸ್ಯಾಂ** (ಪಾ ಸೂ ೮-೪-೬೨) ಎಂಬುದರಿಂದ ಹಕಾರಕ್ಕೆ ಪೂರ್ವಸವರ್ಣ ಸಂವಾರನಾದ ಘೋಷಪ್ರಯುಕ್ತ ಸಾವಕಾಶದಿಂದ ಘಕಾರ ಬರುತ್ತದೆ ನೊದಲು ಜಕಾರಕ್ಕೆ **ಚೋಃ ಕುಃ** ಎಂಬುದರಿಂದ ಕುತ್ವ ಅಭೋಗ್ಫನ್ ಶಬ್ದವಾಗುತ್ತದ ಜಸ್ ಪರದಲ್ಲಿರುವಾಗ ಉಪಧಾದೀರ್ಘಕ್ಕೆ **ಇನ್ ಹನ್ ಪೂಷಾರ್ಯ್ಯಮ್ಣಾಂ ಶೌ** (ಪಾ ಸೂ ೬-೪-೧೩) ಎಂಬುದರಿಂದ ಸಿಯವಮಾಡಿರುವುದರಿಂದ ದೀರ್ಘ ಬರುವುದಿಲ್ಲ ಕಾರಕ ಸ್ಮರ್ವಪದವಾಗಿರುವುದರಿಂದ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

ವವಕ್ಷುಃ—ವಪ ಪ್ರಾಪಣೇ ಧಾತು ಇಚ್ಛಾರ್ಥದಲ್ಲಿ **ಧಾತೋಃ ಕರ್ಮಣಃ ಸಮಾನ** ಎಂಬುದರಿಂದ ಸನ್ **ಏಕಾಚೋ ಉಪದೇಶೇನುದಾತ್ತಾತ್** ಎಂಬುದರಿಂದ ಸನ್ನಿಗೆ ಇಣ್ನಿಷೇಧ ಬರುತ್ತದೆ **ಸನ್ಯಙೋಃ** ಎಂಬುದರಿಂದ ಧಾತುವಿಗೆ ದ್ವಿರ್ಭಾವ ಅಭ್ಯಾಸಕ್ಕೆ ಹಲಾದಿಶೇಷ **ಸನ್ಯತಃ** ಎಂಬುದರಿಂದ ಇತ್ವನ್ವ ಭಾಂದಸವಾಗಿ ಇಲ್ಲ ಬರುವುದಿಲ್ಲ ಧಾತುವಿನ ಹಕಾರಕ್ಕೆ ಝಲ್ ಪರದಲ್ಲಿರುವುದರಿಂದ **ಹೋಢಃ** ಎಂಬುದರಿಂದ ಢತ್ವ ಸಕಾರ ಪರದಲ್ಲಿರುವುದರಿಂದ **ಷಢೋಃ ಕಃ ಸಿ** ಎಂಬುದರಿಂದ ಕತ್ವ ಕಕಾರನ ಪರದಲ್ಲಿ ಸಕಾರ ಬಂದುದರಿಂದ **ಆದೇಶಪ್ರತ್ಯಯಯೋಃ** ಎಂಬುದರಿಂದ ಷತ್ವ **ಸನಾದ್ಯಂತಾ ಧಾತವಃ** ಎಂಬ ಸೂತ್ರದಿಂದ ಸವಕ್ಕೆ ಎಂಬ ಸನ್ನಂತವು ಧಾತುಸಂಜ್ಞೆಯನ್ನು ಹೊಂದುತ್ತದೆ ಇದಕ್ಕೆ ಲಿಟ್ಟಿನಲ್ಲಿ ಪ್ರಾಪ್ತವಾದ ಪ್ರತ್ಯಯಕ್ಕೆ **ಪರಸ್ಮೈಪದಾನಾಂ**-ಸೂತ್ರದಿಂದ ಉಸ್ ಆದೇಶ. **ಕಾಸ್ ಪ್ರತ್ಯಯಾದಾಮಮಂತ್ರೇ ಲಿಟಿ** ಎಂಬಲ್ಲಿ ಅಮಂತ್ರೇ ಎಂದು ನಿಷೇಧಮಾಡಿರುವುದರಿಂದ ಆಮ್ ಬರುವುದಿಲ್ಲ **ಆತೋ ಲೋಪಃ** ಎಂಬುದರಿಂದ ಸನ್ನಿನ ಆಕಾರಕ್ಕೆ ಲೋಪ **ಲಿಟಿ ಧಾತೋರನಭ್ಯಾಸಸ್ಯ** ಎಂಬಲ್ಲಿ ಅನಭ್ಯಾಸಸ್ಯ ಎಂದುದರಿಂದ ಸನ ಲಿನ್ನಿಮಿತ್ತಕವಾಗಿ ದ್ವಿತ್ವ ಬರುವುದಿಲ್ಲ. ವವಕ್ಷಃ ಎಂದು ರೂಪವಾಗುತ್ತದ ಪ್ರತ್ಯಯದ ಆದ್ಯುದಾತ್ತಸ್ವರವಿಂದ ಅಂತೋದಾತ್ತವಾಗುತ್ತದ **ಅಸಾದಾದೌ** ಎಂದು ನಿಷೇಧಮಾಡಿರುವುದರಿಂದ ಸಾದದ ಆದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ

ವಿಶ್ವಾ—ವಿಶ್ವ+ಜಸ್ ಎಂದಿರುವಾಗ **ಜಶ್ಶಸೋಃ ಶಿಃ** ಎಂಬುದರಿಂದ ಪ್ರಾಪ್ತವಾದ ಶಿಗೆ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಲೋಪ

ವ್ಯಾವಯಂತಿ– ಚ್ಯು ಸಹನೇ ಧಾತು ಚುರಾದಿ **ಸತ್ಯಾಪಸಾಶ** ಸೂತ್ರದಿಂದ ಸ್ವಾರ್ಥದಲ್ಲಿ ಣಿಚ್ ಬರುತ್ತದೆ ಣಿಚ್ ನಿಮಿತ್ತಕವಾಗಿ ಧಾತುವಿಗೆ ವೃದ್ಧಿ ಆವಾದೇಶ. ಲಟ್‌ನಲ್ಲಿ ಝಿ ಪ್ರತ್ಯಯ **ಝೋಂತಃ** ಎಂಬುದರಿಂದ ಅಂತಾದೇಶ ಶಪ್ ವಿಕರಣ. ತನ್ನಿಮಿತ್ತಕವಾಗಿ ಣಿಚ್ಚಿಗೆ ಗುಣ ಆಯಾದೇಶ. ವ್ಯಾವಯಂತಿ ಎಂದು ರೂಪವಾಗುತ್ತದೆ ॥ ೩ ॥

॥ ಸಂಹಿತಾಪಾಠಃ ॥

ಚಿತ್ರೈರಂಜಿಭಿರ್ವಪುಷೇ ವ್ಯಂಜತೇ ವಕ್ಷಃಸು ರುಕ್ಮಾ ಅಧಿ-
ಯೇತಿರೇ ಶುಭೇ ।
ಅಂಸೇಷ್ವೇಷಾಂ ನಿ ಮಿಮೃಕ್ಷುರ್ಋಷ್ಟಯಃ ಸಾಕಂ ಜಜ್ಞಿರೇ
ಸ್ವಧಯಾ ದಿವೋ ನರಃ ॥ ೪ ॥

॥ ಪದಪಾಠಃ ॥

ಚಿತ್ರೈಃ । ಅಂಜಿಭಿಃ । ವಪುಷೇ । ವಿ । ಅಂಜತೇ । ವಕ್ಷಃಸು । ರುಕ್ಮಾನ್ ।
ಅಧಿ । ಯೇತಿರೇ । ಶುಭೇ ।
ಅಂಸೇಷು । ಏಷಾಂ । ನಿ । ಮಿಮೃಕ್ಷುಃ । ಋಷ್ಟಯಃ । ಸಾಕಂ । ಜಜ್ಞಿರೇ ।
ಸ್ವಧಯಾ । ದಿವಃ । ನರಃ ॥ ೪ ॥

॥ ಸಾಯಣಭಾಷ್ಯಂ ॥

ವಪುರಿತಿ ರೂಪನಾಮ । ವಪುಷೇ ರೂಪಾಯ ಶೋಭಾರ್ಥಂ ಮರುತಶ್ಚಿತ್ರೈರ್ನಾನಾವಿಧೈರಂಜಿಭೀ
ರೂಪಾಭಿವ್ಯಂಜನಸಮರ್ಥೈರಾಭರಣೈಃ ಸ್ವಶರೀರಾಣಿ ವ್ಯಂಜತೇ । ವ್ಯಕ್ತಂ ಕುರ್ವಂತಿ । ಅಲಂಕುರ್ವಂತೀ-
ತ್ಯರ್ಥಃ । ವಕ್ಷಃಸು ಭುಜಾಂತರೇಷು ರುಕ್ಮಾನ್ ರೋಚಮಾನಾನ್ಹಾರಾನಧಿ ಯೇತಿರೇ । ಉಪರಿ ಚಕ್ರಿರೇ ।

ಕಿಮರ್ಥಂ ಶುಭೇ ಶೋಭನಾರ್ಥಂ । ಅಪಿ ಚೈಷಾಂ ಮರುತಾಮಂಸೇಷ್ವೃಷ್ಟಯ ಆಯುಧಾನಿ ನಿ ಮಿಮೃಕ್ಷುಃ । ನಿಮೃಷ್ಟಾಃ ಸ್ಥಿತಾ ಬಭೂವುಃ । ತೈರಾಯುಧೈಃ ಸಹಿತಾ ನರೋ ನೇತಾರೋ ಮರುತೋ ದಿವೋಽಂತರಿಕ್ಷಾತ್ಸ್ವಧಯಾ ಸ್ವಕೀಯೇನ ಬಲೇನ ಸಾಕಂ ಸಹ ಜಜ್ಞಿರೇ । ಪ್ರಾದುರ್ಬಭೂವುಃ ॥ ಯೇತಿರೇ । ಯತೀ ಪ್ರಯತ್ನೇ । ಲಿಟ್ಯತ ಏಕಹಲ್ಮಧ್ಯ ಇತ್ಯೇತ್ವಾಭ್ಯಾಸಲೋಪೌ । ಶುಭೇ । ಶುಭ ದೀಪ್ತೌ । ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ಸಾನೇಕಾಚ ಇತಿ ಚತುರ್ಥ್ಯಾ ಉದಾತ್ತತ್ವಂ । ಮಿಮೃಕ್ಷುಃ । ಮೃಜೂಷ್ ಶುದ್ಧೌ । ಸನ್ಯುದಿತ್ವಾದಿಡಭಾವಃ । ಹಲಂತಾಚ್ಚೇತಿ ಸನಃ ಕಿತ್ತ್ವಾದ್ಗುಣಾಭಾವಃ । ದ್ವಿರ್ವಚನಾದಿ । ಸನ್ಯತ ಇತೀತ್ವಂ । ಲಿಟ್ಯುಸ್ಯತೋ ಲೋಪ ಇತ್ಯಾಕಾರಲೋಪಃ । ಜಜ್ಞಿರೇ । ಜನೀ ಪ್ರಾದುರ್ಭಾವೇ । ಲಿಟ ಗಮಹನೇತ್ಯಾದಿನೋಪಧಾಲೋಪಃ ॥

॥ ಪ್ರತಿಪದಾರ್ಥ ॥

ವಪುಷೇ—ಅಲಂಕಾರಕ್ಕಾಗಿ (ಮರುತ್ತುಗಳು) । **ವಿಶ್ವೈಃ**—ನಾನಾವಿಧವಾದ । **ಅಂಜಿಭಿಃ**—ಆಭರಣಗಳಿಂದ (ತಮ್ಮ ಶರೀರಗಳನ್ನು) । **ವಿ ಅಂಜತೇ**—ವ್ಯಕ್ತಪಡಿಸಿಕೊಳ್ಳುತ್ತಾರೆ । **ವಕ್ಷಃಸು**—ಎದೆಯ ಭಾಗಗಳಲ್ಲಿ । **ರುಕ್ಮಾನ್**—ಮನೋಹರವಾದ (ಹಾರಗಳನ್ನು) । **ಶುಭೇ**—ಅಲಂಕಾರಕ್ಕೋಸ್ಕರ । **ಅಧಿ ಯೇತಿರೇ**—ಮೇಲೆ ಮಾಡಿಕೊಂಡರು (ಧರಿಸಿದರು) । **ಏಷಾಂ**—ಈ ಮರುದ್ದೇವತೆಗಳ । **ಅಂಸೇಷು**—ಭುಜಗಳ ಮೇಲೆ । **ಋಷ್ಟಯಃ**—ಆಯುಧಗಳು । **ನಿ ಮಿಮೃಕ್ಷುಃ**—ಧರಿಸಲ್ಪಟ್ಟವು (ಅವುಗಳಿಂದ ಯುಕ್ತರಾಗಿ) । **ನರಾಃ**—ನೇತೃಗಳಾದ (ಮರುದ್ದೇವತೆಗಳು) । **ಸ್ವಧಯಾ ಸಾಕಂ**—ಸ್ವಕೀಯವಾದ ಬಲದೊಡನೆ । **ದಿವಃ**—ಅಂತರಿಕ್ಷದಿಂದ । **ಜಜ್ಞಿರೇ**—ಪ್ರಾದುರ್ಭೂತರಾದರು ।

॥ ಭಾವಾರ್ಥ ॥

ಒಲಿಸಲ್ಪಡೂ ಉತ್ತಮ ನೇತೃಗಳೂ ಆದ ಮರುದ್ದೇವತೆಗಳು, ವಿಚಿತ್ರವಿಚಿತ್ರವಾದ ಆಭರಣಗಳನ್ನೂ, ಎದೆಯ ಭಾಗದಲ್ಲಿ ಮನೋಹರವಾದ ಹಾರಗಳನ್ನೂ, ಭುಜಗಳಲ್ಲಿ ಆಯುಧಗಳನ್ನೂ ಧರಿಸಿಕೊಂಡು, ಅಂತರಿಕ್ಷದಿಂದ ಆವಿರ್ಭೂತರಾದರು.

English Translation

They decorate their persons with various ornaments, they have placed, for elegance, brilliant garlands, on their breasts, lances are borne upon their shoulders, and with them and their own strength have they been born, leaders, from the sky

॥ ವಿಶೇಷವಿಷಯಗಳು ॥

ವಪುಷೇ—ರೂಪಾಯ ಶೋಭಾರ್ಥಂ । ವಪುರಿತಿ ರೂಪನಾಮ । ವಪ್ಯಂಬ ಶಬ್ದವು ನಿರ್ಣಿಕ್, ವಪ್ರಃ (ನಿ ೩-೧೩) ಎಂಬ ಇನೇ ಮೊದಲಾದ ಹದಿನಾರು ರೂಪನಾಮಗಳ ಮಧ್ಯದಲ್ಲಿ ಪಠಿತವಾಗಿರುವುದು ಅಲಂಕಾರನಾಗಿ ಕಾಂತಿಯುಳ್ಳದ್ದಾಗಿ ಕಾಣಿಸುವ ಉದ್ದೇಶದಿಂದ.

चित्रैः—अञ्जिभिः रूपाभिव्यञ्जनसमर्थैराभरणैः अकारವು ಚಿನ್ನಾಗಿ ಕಾಣಿಸುವ ಹಾಗೆ ಮಾಡುವ ಒಡವೆಗಳು ಮೊದಲಾದವುಗಳಿಂದ ಈ ಆಭರಣಗಳು ಅನೇಕ ವಿಧವಾಗಿರುವುವು.

रुक्मा--रोचमानान् हारान् । ಕಾಂತಿಯನ್ನು ಹೊಂದಿ ಹೊಳೆಯುವ ಹಾರಗಳನ್ನು.

अधियेतिरे—उपरि चक्रिरे । ಮರುದ್ದೇವತೆಗಳು ತಮ್ಮ ಶರೀರದ ಸೌಂದರ್ಯವು ಚೆನ್ನಾಗಿ ಎಲ್ಲರಿಗೂ ಕಾಣಬೇಕೆಂಬ ಉದ್ದೇಶದಿಂದ ಅನೇಕವಾದ ಬಹಳ ಕಾಂತಿಯಿಂದ ಹೊಳೆಯುತ್ತಿರುವ ಆಭರಣಗಳನ್ನು ಧರಿಸಿರುವರು ವಕ್ಷಃಪ್ರದೇಶದಲ್ಲಿ ಹಾರಗಳನ್ನು ಧರಿಸಿ ಇರುವರು

नरः - नेतारो मरुतः । ತಮ್ಮನ್ನು ಆಶ್ರಯಿಸಿದ ಯಜಮಾನರುಗಳನ್ನು ಸರಿಯಾದ ಮಾರ್ಗದಲ್ಲಿ ನೀರಿಸುವ ಮರುತ್ಪ್ರವನತೆಗಳು.

स्वधया—स्वकीयेन बलेन । ತಮ್ಮ ಬಲದಿಂದ ತಾವಾಗಿಯೇ ಪ್ರಕಟವಾದರು ಎಂದು ಅರ್ಥವು.

॥ स्वाकरणप्रक्रिया ॥

व्यंजते—ಅಂಜೂ ವ್ಯಕ್ತಿ ವ್ಯಕ್ಷ್ಣಕಾಂತಿಗತಿಷು ಧಾತು ಲಿಟ್ ಪ್ರಥಮಪುರುಷ ಬಹುವಚನದ ರೂಪ. ತಿಙಂತನಿಘಾತಸ್ವರ ಬರುತ್ತದೆ

येतिरे—ಯತೀ ಪ್ರಯತ್ನೇ ಧಾತು ಲಿಟ್ಟಿನ ಪ್ರಥಮಪುರುಷ ಬಹುವಚನಕ್ಕೆ **लिटस्तुझयोः**-ಸೂತ್ರದಿಂದ ಇರೇಜಾದೇಶ ಲಿಣ್ಣಿಮಿತ್ತವಾಗಿ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ ಯಯತ್+ಇರೇ ಎಂದಿರುವಾಗ **अत इनिठनोर्मध्येनादेशादेर्लिटि** (ಪಾ. ಸೂ. ೬-೪-೭೦) ಎಂಬುದರಿಂದ ಆಕಾರವು ಸಂಯೋಗಮಧ್ಯದಲ್ಲಿ ಇಲ್ಲದಿರುವುದರಿಂದ ಧಾತುವಿನ ಆಕಾರಕ್ಕೆ ಏತ್ವವೂ ಅಭ್ಯಾಸಕ್ಕೆ ಲೋಪವೂ ಬರುತ್ತವೆ. ಯೇತಿರೇ ಎಂದು ರೂಪವಾಗುತ್ತದೆ. **तिङ्ङतिङः** ಎಂಬುದರಿಂದ ನಿಘಾತಸ್ವರ ಬರುತ್ತದೆ

शुभ्रे--ಶುಭ ದಿ ಪ್ತೌ ಧಾತು ಸಂಪದಾದಿಯಲ್ಲಿ ಸೇರಿರುವುದರಿಂದ **संपदादिभ्यः क्विप्** (ವಾ ೩೬೩೩) ಎಂಬುದರಿಂದ ಕ್ವಿಪ್. ಶುಭ್ ಶಬ್ದವಾಗುತ್ತದೆ. ಚತುರ್ಥೀ ಏಕವಚನದಲ್ಲಿ ಶುಭ್ರೇ ಎಂದು ರೂಪವಾಗುತ್ತದೆ **सावेकाचस्तृतीयादिः** (ಪಾ. ಸೂ ೬-೧-೧೬೮) ಎಂಬುದರಿಂದ ಚತುರ್ಥೀಗೆ ಉದಾತ್ತ ಸ್ವರ ಬರುತ್ತದೆ.

मिमृक्षुः—ಮೃಜೂಷ್ ಶುದ್ಧೌ ಧಾತು ಇಚ್ಛಾ ತೋರುವಾಗ **धातोः कर्मणः समानकर्तृकादिच्छायां वा** ಎಂಬುದರಿಂದ ಸನ್. ಉದಿತ್ತಾದ ಧಾತುವಿನ ಸರದಲ್ಲಿ ಬಂದುದರಿಂದ ಸನಿಗೆ ಇಡಾಗಮ ಬರುವುದಿಲ್ಲ. **हलन्ताच्च** (ಪಾ. ಸೂ. ೧-೨-೧೦) ಇಕ್ ಸನಿಪಾಪದ ಹಲಿನ ಪರದಲ್ಲಿರುವ ಋಾದಿಯಾದ ಸನ್ ಕಿತ್ತಾಗುತ್ತದೆ ಎಂಬುದರಿಂದ ಇಲ್ಲಿ ಋಕಾರದ ಪರದಲ್ಲಿ ಜಕಾರವಿದ್ದು ಅವರೆ ಸರದಲ್ಲಿ ಸನ್ ಬಂದುದರಿಂದ ಕಿದ್ವದ್ಭಾವವನ್ನು ಹೊಂದುತ್ತದೆ ಆದುದರಿಂದ **लक्षूसदृगुण** ಬರುವುದಿಲ್ಲ. **सन्यङोः** ಎಂಬುದರಿಂದ

ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಆದಿಹಲ್‌ಶೇಷ **ಉರತ್** ಎಂಬುದರಿಂದ ಅತ್ವ ಪುನಃ ಹಲಾದಿಶೇಷ. ಮಮೃಜ್‌ಸ ಎಂದಿರುವಾಗ **ಸನ್ಯತಃ** ಎಂಬುದರಿಂದ ಅಭ್ಯಾಸಾಕಾರಕ್ಕೆ ಇತ್ವ ಧಾತುವಿನ ಜಕಾರಕ್ಕೆ **ಚೋಃಕುಃ** ಎಂಬುದರಿಂದ ಕುತ್ವ **ಖರಿಚ** ಸೂತ್ರದಿಂದ ಅದಕ್ಕೆ ಕತ್ವ ಕಕಾರದ ಪರದಲ್ಲಿರುವುದರಿಂದ ಸನಿನ ಸಕಾರಕ್ಕೆ **ಆದೇಶ-ಪ್ರತ್ಯಯಯೋಃ** ಎಂಬುದರಿಂದ ಷತ್ವ ಕಸಗಳ ಸಂಬಂಧದಿಂದ ಕ್ಷಕಾರವಾಗುತ್ತದೆ ಮಿಮೃಕ್ಷ ಎಂಬುದು **ಸನಾದ್ಯಂತಾ ಧಾತವಃ** ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಲಿಟಿನ ಬಹುವಚನಕ್ಕೆ ಬಂದ ಆದೇಶವಾದ ಉಸಿನಲ್ಲಿ (ಲಿಟಿನ ತಿಙ್‌ಗೆ ಆರ್ಧಧಾತುಕಸಂಜ್ಞೆ ಬರುತ್ತದೆ) **ಆತೋ ಲೋಪಃ** ಎಂಬುದರಿಂದ ಸನಿನ ಆಕಾರಕ್ಕೆ ಲೋಪ ಮಿಮೃಕ್ಷುಃ ಎಂದು ರೂಪವಾಗುತ್ತದೆ ತಿಙಂತನಿಘಾತಸ್ವರ ಬರುತ್ತದೆ.

ಜಜ್ಞಿರೇ—ಜನೀ ಪ್ರಾದುರ್ಭಾವೇ ಧಾತು ಲಿಟಿನ ಝಿ ಪ್ರತ್ಯಯಕ್ಕೆ ಇರೇಚ್ ಆದೇಶ ಲಿಣ್ಣಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ **ಗಮಹನ ಜನಖ-**(ಪಾ. ಸೂ. ೬-೪-೯೮) ಎಂಬುದರಿಂದ ಧಾತುವಿನ ಉಪಧೆಗೆ ಲೋಪ ಬರುತ್ತದೆ ಜಜ್ಞಿರೇ ಎಂದು ರೂಪವಾಗುತ್ತದೆ **ತಿಜ್ಞಿತಿಜಃ** ಸೂತ್ರದಿಂದ ನಿಘಾತಸ್ವರ ಬರುತ್ತದೆ.

ದಿವಃ—**ಊಡಿದಂ ಪದಾದಿ-**(ಪಾ ಸೂ ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ ॥ ೪ ॥

॥ ಸಂಹಿತಾಪಾಠಃ ॥

ಈಶಾನಕೃತ್ರೋ ಧುನಯೋ ರಿಶಾದಸೋ ವಾತಾನ್ವಿದ್ಯುತ್ತಸ್ತ-
ವಿಷೀಭಿರಕ್ರತ ।
ದುಹಂತ್ಯೂಧರ್ದಿವ್ಯಾಸಿ ಧೂತಯೋ ಭೂಮಿಂ ಪಿನ್ವಂತಿ
ಪಯಸಾ ಪರಿಜ್ರಯಃ ॥ ೫ ॥

॥ ಪದಪಾಠಃ

ಈಶಾನಕೃತಃ । ಧುನಯಃ । ರಿಶಾದಸಃ । ವಾತಾನ್ । ವಿದ್ಯುತ್ತಃ । ತವಿಷೀಭಿಃ ।
ಅಕ್ರತ ।

ದುಹಂತಿ । ಊಧಃ । ದಿವ್ಯಾನಿ । ಧೂತಯಃ । ಭೂಮಿಂ । ಪಿನ್ವಂತಿ । ಪಯಸಾ ।
ಪರಿಜ್ರಯಃ ॥ ೫ ॥

॥ ಸಾಯಣಭಾಷ್ಯಂ ॥

ಈಶಾನಕೃತಃ ಸ್ತೋತಾರಮಿಶಾನಂ ಧನಾಧಿಪತಿಂ ಕುರ್ವಾಣಾ ಧುನಯೋ ಮೇಘಾದೀನಾಂ ಕಂಪಯಿತಾರೋ ರಿಶಾದಸೋ ರಿಶಾನಾಂ ಹಿಂಸಕಾನಾಮತ್ತಾರಃ । ಯದ್ವಾ ರಿಶತಾಂ ಹಿಂಸತಾಮಸಿತಾರೋ ನಿರಸಿತಾರಃ । ಏವಂಭೂತಾ ಮರುತಸ್ತನಿಷೀಭಿರಾತ್ಮೀಯೈರ್ಬಲೈರ್ವಾತಾನ್ ಪುರೋವಾತಾದೀನ್ ವಿದ್ಯುತೋ ವಿದ್ಯೋತಮಾನಾಸ್ತದಿತಶ್ಚಾಕೃತ । ಕುರ್ವಂತಿ । ಕೃತ್ವಾ ಚ ಪರಿಜ್ರಯಃ ಪರಿತೋ ಗಂತಾರೋ ಧೂತಯಃ ಕಂಪಯಿತಾರೋ ಮರುತೋ ದಿವ್ಯಾನಿ ದಿವಿಭವಾನ್ಯೂಧರೂಧಃಸ್ಥಾನೀಯಾನ್ಯಭ್ರಾಣಿ ದುಹಂತಿ । ರಿಕ್ತೀಕುರ್ವಂತಿ । .ಜಲರಹಿತಾನಿ ಕುರ್ವಂತೀತ್ಯರ್ಥಃ । ತದನಂತರಂ ಭೂಮಿಂ ಪಯಸಾ ಮೇಘಾನ್ನಿರ್ಗತೇನೋದಕೇನ ಜಲೇನ ಪಿನ್ವಂತಿ । ಸಿಂಚಂತಿ ॥ ರಿಶಾದಸಃ । ರಿಶ ಹಿಂಸಾಯಾಂ । ಇಗುಪಧಲಕ್ಷಣಃ ಕಃ । ರಿಶಂತಿ ಹಿಂಸಂತೀತಿ ರಿಶಾಃ ಶತ್ರವಃ । ತಾನದಂತೀತಿ ರಿಶಾದಸಃ । ಆಸುನ್ । ನಿತ್ತ್ವಾದಾದ್ಯುದಾತ್ತತ್ವಂ । ಕೃದುತ್ತರಪದಪ್ರಕೃತಿಸ್ವರತ್ವಂ । ಯದ್ವಾ । ರಿಶಚ್ಛಬ್ದಾಚ್ಛೃಂತಾದಸು ಕ್ಷೇಪಣ ಇತ್ಯಸ್ಮಾತ್ ಕ್ಸಿಪ್ । ನ್ಯತ್ಯಯೇನ ಪೂರ್ವಪದಸ್ಯೋಪಧಾದೀರ್ಘಃ । ಅಂತೋದಾತ್ತತ್ವಂ ಚ । ಅಕೃತ । ಕರೋತೇಶ್ಛಾಂದಸೋ ವರ್ತಮಾನೇ ಲುಙ್ । ಮಂತ್ರೇ ಘಸೇತಿ ಚ್ಲೇರ್ಲುಕ್ । ಊಧಃ । ಸುಪಾಂ ಸುಲುಗಿತಿ ವಿಭಕ್ತೇರ್ಲುಕ್ ॥

॥ ಪ್ರತಿಪದಾರ್ಥ ॥

ಈಶಾನಕೃತಃ—ಸ್ತೋತೃವನ್ನು ಧನಾಧಿಪತಿಯನ್ನಾಗಿ ಮಾಡುವ । **ಧುನಯಃ**—ಮೇಘಾದಿಗಳನ್ನು ಕಂಪಿಸುವಂತೆ ಮಾಡುವ । **ರಿಶಾದಸಃ**—ಹಿಂಸಕರನ್ನು ಭಕ್ಷಣಮಾಡುವ (ಹಿಂಸಕರನ್ನು ನಾಶಮಾಡುವ) ಮರುತ್ತುಗಳು । **ತನಿಷೀಭಿಃ**— ಸ್ವಕೀಯವಾದ ಬಲದಿಂದ । **ವಾತಾನ್**—ಪುರೋವಾತಗಳನ್ನೂ । **ವಿದ್ಯುತಃ**—ಮಿಂಚುಗಳನ್ನೂ । **ಅಕೃತ**—ಮಾಡಿದರು । **ಪರಿಜ್ರಯಃ**—ಎಲ್ಲಾ ದಿಕ್ಕುಗಳಲ್ಲಿಯೂ ಸಂಚರಿಸುವ । **ಧೂತಯಃ**—ಕಂಪನ ಉಂಟುಮಾಡುವ (ಮರುದ್ದೇವತೆಗಳು) । **ದಿವ್ಯಾನಿ**—ಅಂತರಿಕ್ಷದಲ್ಲಿ ಇರುವ । **ಊಧಃ**—ಕೆಚ್ಚಲಿನಂತಿರುವ ಮೇಘಗಳನ್ನು । **ದುಹಂತಿ**—ಕರೆಯುತ್ತವೆ । **ಭೂಮಿಂ**—ಭೂಮಿಯನ್ನು । **ಪಯಸಾ**—(ಮೇಘದಿಂದ ಬಂದ) ನೀರಿನಿಂದ । **ಪಿನ್ವಂತಿ**—ಚುಮುಕಿಸುತ್ತವೆ

॥ ಭಾವಾರ್ಥ ॥

ಮರುದ್ದೇವತೆಗಳು ಸ್ತೋತ್ರಮಾಡುವವರನ್ನು ಧನಿಕರನ್ನಾಗಿ ಮಾಡುತ್ತಾರೆ, ಹಿಂಸಕರನ್ನು ವಧಮಾಡುತ್ತಾರೆ. ಮತ್ತು ಎಲ್ಲಾ ಪದಾರ್ಥಗಳನ್ನೂ ಕಂಪಿಸುವಂತೆ ಮಾಡುತ್ತಾರೆ. ಇವರು ಮೇಘಗಳನ್ನು ಕಂಪಿಸುವಂತೆ ಮಾಡಿ,

ಪುರೋವಾತಗಳನ್ನೂ ಮಿಂಚುಗಳನ್ನೂ ಉಂಟುಮಾಡಿ ಎಲ್ಲಾ ದಿಕ್ಕುಗಳಲ್ಲಿಯೂ ಸಂಚಾರಮಾಡಿ ಮಳೆಯನ್ನು ಉಂಟುಮಾಡುತ್ತಾರೆ ಆ ನೀರಿನಿಂದ ಭೂಮಿಯನ್ನು ಆವೃತವನ್ನಾಗಿ ಮಾಡುತ್ತಾರೆ

English Translation

Enriching their worshipper, agitating the clouds, devourers of foes, they create the winds and lightnings by their power, the circumambient and agitating Maruts milk heavenly udders, and sprinkle the earth with the water

॥ ಪದಪಾಠ ॥

ಈಶಾನಕೃತಃ ಸ್ತೋತಾರಮೀಶಾನಂ ಧನಾಧಿಪತಿಂ ಕುರ್ವಾಣಃ । ಮರುದ್ದೇವತೆಗಳು ತಮ್ಮನ್ನು ಸ್ತುತಿಮಾಡುವವರು ಧನಾಧಿಪತಿಗಳಾಗಿ ಇರುವ ಹಾಗೆ ಅನುಗ್ರಹವನ್ನು ಮಾಡುವರು

ಧುನಯಃ—ಮೇಘಾದೀನಾಂ ಕಂಪಯಿತಾರಃ । ಮೇಘನೇ ಮೊದಲಾದವುಗಳನ್ನು ಅಲುಗಾಡಿಸುವರು

ರಿಶಾದಸಃ—ರಿಶಾನಾಂ ಹಿಂಸಕಾನಾಮತ್ತಾರಃ । ರಿಶತಾಂ ಹಿಂಸತಾಮಸಿತಾರೋ ನಿರಸಿತಾರಃ । ರಿಶಂತಿ ಹಿಂಸಂತೀತಿ ಶತ್ರವಃ ತಾನ್ ಅದಂತೀತಿ ರಿಶಾದಸಃ । ತೊಂದರೆಯನ್ನು ಉಂಟುಮಾಡಿ ಹಿಂಸೆಯನ್ನು ಮಾಡುವ ಶತ್ರುಗಳನ್ನು ನಾಶಪಡಿಸುವವರು ಅಥವಾ ಓಡಿಸುವವರು ಈ ಮರುದ್ದೇವತೆಗಳೆಂದು ಅರ್ಥವು.

ತವಿಷೀಭಿಃ—ಆತ್ಮೀಯೈಃ ಬಲೈಃ ತವಸ್ ಎಂಬ ಶಬ್ದವು (ನಿ ೩-೯) ಓಜಃ ಸಾಹಃ ಎಂಬ ಇಪ್ಪತ್ತೆಂಟು ಬಲನಾಮಗಳಲ್ಲಿ ಪರಿತವಾಗಿರುವುದು, ತಮ್ಮ ಸಾಮರ್ಥ್ಯದಿಂದ

ವಿದ್ಯುತಃ ಅಕ್ರತ-ವಿದ್ಯೋತಮಾನಾಸ್ತಡಿತಶ್ಚ ಕುರ್ವಂತಿ । ಪ್ರಕಾಶಿಸುವ ಮಿಂಚುಗಳನ್ನೂ ಮತ್ತು ಸುಂಟರಗಾಳಿಯೇ ಮೊದಲಾದವುಗಳನ್ನು ಕೂಡ ಈ ಮರುದ್ದೇವತೆಗಳು ಉತ್ಪನ್ನಮಾಡುವರು

ಪರಿಜ್ರಯಃ ಊಧಃ ದುಹಂತಿ—ಪರಿತೋ ಗಂತಾರಃ ಊಧಸ್ಥಾನೀಯಾನ್ಯಭ್ರಾಣಿ ರಿಕ್ತೀಕುರ್ವಂತಿ । ಮರುದ್ದೇವತೆಗಳು ಅಂತರಿಕ್ಷದಲ್ಲಿ ಸುತ್ತಲೂ ಸಂಚರಿಸುತ್ತಾ ನೀರಿನಿಂದ ತುಂಬಿರುವ ಮೇಘಗಳಿಂದ ಹಸುಗಳ ಕೆಚ್ಚಲಿನಿಂದ ಹಾಲನ್ನು ಕರೆಯುವ ಹಾಗೆ ಮಳೆಯ ನೀರನ್ನು ಭೂಮಿಗೆ ಹಿಂಡುವರು. ಮೇಘಗಳು ಬರಿದಾಗಿ ಇರುವಂತೆ ಮಾಡುವರು.

॥ ವ್ಯಾಕರಣಪ್ರಕ್ರಿಯಾ ॥

ಈಶಾನಕೃತಃ—ಈಶಾನಂ ಕುರ್ವಂತಿ ಇತಿ ಈಶಾನಕೃತಃ ಡುಕೃಞ್ ಕರಣೇ ಧಾತು ಕ್ವಿಪ್ ಪ್ರತ್ಯಯ. **ಹ್ರಸ್ವಸ್ಯ ಪಿತಿಕೃತಿ ತುಕ್** ಎಂಬುದರಿಂದ ಧಾತುವಿಗೆ ತುಕಾಗಮ ಕೃದಂತವಾಗಿರುವುದರಿಂದ ಕಾರಕಸ್ವರ್ವದಲ್ಲಿ ರುವುದರಿಂದ ಸಮಾಸದಲ್ಲಿ **ಗತಿಕಾರಕೋ**-ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ಸ್ತೋತಾರಂ ಬಹುವಚನಾಂತರೂಪ.

ರಿಶಾದಸಃ—ರಿಶ ಹಿಂಸಾಯಾಂ ಧಾತು **ಇಗುಪಧಜ್ಞಾಪ್ರೀಕಿರಃ ಕಃ** (ಪಾ. ಸೂ ೩-೧-೧೩೫) ಎಂಬುದರಿಂದ ಈ ಧಾತುವು ಇಗುಪಧವಾಗಿರುವುದರಿಂದ ಕಪ್ರತ್ಯಯ. ಪ್ರತ್ಯಯ ಕಿತ್ತಾದುದರಿಂದ ಲಘೂಪಧಗುಣ ಒರುವುದಿಲ್ಲ ರಿಶಂತಿ ಹಿಂಸಂತಿ ಇತಿ ರಿಶಾಃ ಶತ್ರವಃ (ಹಿಂಸೆಮಾಡುವವರು) ರಿಶಾನ್ ಅದಂತಿ ಇತಿ ರಿಶಾದಸಃ ಅದ ಭಕ್ಷಣೇ ಧಾತು. **ಸರ್ವಧಾತುಭ್ಯೋ ಽಸುನ್** ಎಂಬುದರಿಂದ ಅಸುನ್ ಪ್ರತ್ಯಯ. ಅದಸ್ ಶಬ್ದವಾಗುತ್ತದೆ. ಪ್ರತ್ಯಯ ನಿತ್ತಾದುದರಿಂದ **ಘ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಸಮಾಸವಾದಾಗ **ಗತಿಕಾರಕೋಪಪದಾತ್ಕೃತ್** ಎಂಬುದರಿಂದ ಕಾರಕಉಪಪದವಾಗಿರುವುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ಅಥವಾ ರಿಶ ಧಾತುವಿಗೆ **ಲಡರ್ಧದಲ್ಲಿ** ಶತೃಪ್ರತ್ಯಯ. **ತುದಾದಿಭ್ಯಃ ಶಃ** ಎಂಬುದರಿಂದ ಶ ವಿಕರಣ. **ಸಾರ್ವಧಾತುಕಮಪಿತ್** ಎಂಬುದರಿಂದ ಅದು ಬಿದ್ದುದ್ಭಾವನನ್ನು ಹೊಂದುವುದರಿಂದ ಲಘೂಪಧಗುಣ ಬರುವುದಿಲ್ಲ. ರಿಶತ್ ಎಂದು ಶಬ್ದವಾಗುತ್ತದೆ ವ್ಯತ್ಯಯದಿಂದ ಛಂದಸ್ಸಿನಲ್ಲಿ ರಿಶತ್ ಶಬ್ದದ ಉಪಧೆಗೆ ದೀರ್ಘ ಬರುತ್ತದೆ ರಿಶತಃ ಅಸ್ಯಂತಿ ಇತಿ ರಿಶಾದಸಃ ಟಿಸು ಕ್ಷೇಪಣೇ ಧಾತು **ಕ್ವಿಪ್ ಚ** (ಪಾ ಸೂ ೩-೨-೭೬) ಎಂಬುದರಿಂದ ಈ ಧಾತುವಿಗೆ ಕ್ವಿಪ್ ಪ್ರತ್ಯಯ ಕ್ವಿಪ್ಪಿನಲ್ಲಿ ಸರ್ವವೂ ಲೋಪವಾಗುತ್ತದೆ ರಿಶಾದಸ್ ಶಬ್ದವಾಗುತ್ತದ ವ್ಯತ್ಯಯದಿಂದಲೇ ಸ್ಪೂರ್ವಪದಾಂತೋದಾತ್ತಸ್ವರ ಬರುತ್ತದೆ. ಬಹುವಚನದಲ್ಲಿ ರಿಶಾದಸಃ ಎಂದು ರೂಪವಾಗುತ್ತದೆ

ಅಕ್ರತ—ಡುಕೃಞ್ ಕರಣೇ ಧಾತು ವರ್ತಮಾನಾರ್ಥದಲ್ಲಿ **ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ಲುಙ್ ಲುಙ್ ಬಹುವಚನದ ಝಿ ಪ್ರತ್ಯಯಕ್ಕೆ **ಅತ್ಮನೇಪದೇಷ್ವನತಃ** (ಪಾ ಸೂ ೭-೧-೬) ಎಂಬುದರಿಂದ ಅತಾದೇಶ ಬರುತ್ತದೆ **ಚ್ಲಿಲುಙಿ** ಎಂಬುದರಿಂದ ಪ್ರಾಪ್ತವಾದ ಚ್ಲಿಗೆ **ಮಂತ್ರೇ ಘಸಹ್ವರಣ**-(ಪಾ. ಸೂ ೩-೪-೭೫) ಎಂಬ ಸೂತ್ರದಿಂದ ಲುಕ್ ಲುಙ್ ನಿಮಿತ್ತವಾಗಿ ಆಂಗಕ್ಕೆ ಆಡಾಗಮ. ಆಚ್ ಪರದಲ್ಲಿರುವುದರಿಂದ ಪ್ರತ್ಯಯವು ಬೆತ್ತಾದುದರಿಂದ ಗುಣಬಾರದಿರುವಾಗ **ಇಕೋ ಯಣಚಿ** ಸೂತ್ರದಿಂದ ಋಕಾರಕ್ಕೆ ಯಣಾದೇಶ ಅಕ್ರತ ಎಂದು ರೂಪವಾಗುತ್ತದೆ **ತಿಙ್ಶಿತಿಙಃ** ಸೂತ್ರದಿಂದ ನಿಘಾತಸ್ವರ ಬರುತ್ತದೆ

ದುಹಂತಿ– ದುಹ ಪ್ರಪೂರಣೇ ಧಾತು. ಲಟ್ ಪ್ರಥಮಪುರುಷ ಬಹುವಚನದಲ್ಲಿ ಶಪ್ಪಿಗೆ ಲುಕ್ ಬಂದುದರಿಂದ **ಕ್ಷ್ಣುತಿಚ** ಸೂತ್ರದಿಂದ ಗುಣ ನಿಷೇಧ ಬರುವುದರಿಂದ ಅಂತಾದೇಶ ಬಂದಾಗ ದುಹಂತಿ ಎಂದು ರೂಪವಾಗುತ್ತದೆ. ಪ್ರತ್ಯಯ ಸ್ವರದಿಂದ ಮಧ್ಯೋದಾತ್ತನಾಗುತ್ತದ. ಪಾದದ ಆದಿಯಲ್ಲಿರುವುದರಿಂದ ನಿಘಾತಸ್ವರ ಒರುವುದಿಲ್ಲ

ಊಧಃ– ಊಧಸ್+ಶಸ್ ಎಂದಿರುವಾಗ **ಸುಪಾಂ ಸುಲುಕ್**–ಸೂತ್ರದಿಂದ ವಿಭಕ್ತಿಗೆ ಲುಕ್ ಪ್ರಾತಿಪದಿಕದ ಸಕಾರಕ್ಕೆ ರುತ್ವವಿಸರ್ಗಗಳು ಬರುತ್ತವೆ.

ಪಿನ್ವಂತಿ—ಓಪಿ ಸೇಚನೇ ಧಾತು. ಇದಿತ್ತಾದುದರಿಂದ ನುಮಾಗಮ ಬರುತ್ತದೆ. ಪ್ರತ್ಯಯಕ್ಕೆ **ಝೋಂತಃ** ಎಂಬುದರಿಂದ ಅಂತಾದೇಶ. **ಕರ್ತರಿ ಶಪ್** ಸೂತ್ರದಿಂದ ಶಪ್ ವಿಕರಣ **ಅತೋ ಗುಣೇ** ಎಂಬುದರಿಂದ ಪರರೂಪ. ಪಿನ್ವಂತಿ ಎಂದು ರೂಪವಾಗುತ್ತದ ತಿಙಂತನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಪಿನ್ವಂತ್ಯಪೋ ಮರುತಃ ಸುದಾನವ ಪಯೋ ಘೃತವದ್ವಿದಥೇಷ್ವಾಭುವಃ ।
ಅತ್ಯಂ ನ ಮಿಹೇ ವಿ ನಯಂತಿ ವಾಜಿನಮುತ್ಸಂ ದುಹಂತಿ ಸ್ತನಯಂತಮಕ್ಷಿತಂ ॥ ೬ ॥

॥ ಪದಪಾಠಃ ॥

ಪಿನ್ವಂತಿ । ಅಪಃ । ಮರುತಃ । ಸುಽದಾನವಃ । ಪಯಃ । ಘೃತಽವತ್ । ವಿದಥೇಷು । ಆಽಭುವಃ ।
ಅತ್ಯಂ । ನ । ಮಿಹೇ । ವಿ । ನಯಂತಿ । ವಾಜಿನಂ । ಉತ್ಸಂ । ದುಹಂತಿ । ಸ್ತನಯಂತಂ । ಅಕ್ಷಿತಂ ॥ ೬ ॥

॥ ಸಾಯಣಭಾಷ್ಯಂ ॥

ಮರುತ್ಸತೀಯಶಸ್ತ್ರೇ ಪಿನ್ವಂತ್ಯಪ ಇತ್ಯೇಷಾ ಧಾಯ್ಯಾ । ಸೂತ್ರಿತಂ ಚ । ಅಗ್ನಿರ್ನೇತಾ ತ್ವಂ ಸೋಮ ಕ್ರತುಭಿಃ ಪಿನ್ವಂತ್ಯಪ ಇತಿ ಧಾಯ್ಯಾಃ । ಆ ೫ ೧೪ । ಇತಿ ॥

ಸುದಾನವಃ ಶೋಭನದಾನಾ ಮರುತಃ ಪಯಃ ಕ್ಷೀರವತ್ ಸಾರವತೀರಪಃ ಪಿನ್ವಂತಿ । ಸಿಂಚಂತಿ । ಆಭುವಃ । ಅಭವಂತೀತ್ಯಾಭುವ ಋತ್ವಿಜಃ । ತೇ ವಿಧಥೇಷು ಯಜ್ಞೇಷು ಘೃತವತ್ । ಯಥಾ ಘೃತಂ ಸಿಂಚಂತ್ಯೇವಂ ಮರುತೋಽಪಿ ವೃಷ್ಟಿಂ ಕುರ್ವಂತೀತಿ ಭಾವಃ । ತತ್ರ ಹೇತುಮಾಹ । ಅತ್ಯಂ ನ ಯಥಾಶ್ವಂ ಸಾದಿನೋ ವಿನಯಂತಿ ಯುದ್ಧಾರ್ಥಂ ಶಿಕ್ಷಂತ್ಯೇವಂ ಮರುತೋ ವಾಜಿನಂ ವೇಗವಂತಂ ಮೇಘಂ ಮಿಹೇ ವರ್ಷಣಾಯ ವಿ ನಯಂತಿ । ಸ್ವಾಧೀನಂ ಕುರ್ವಂತೀತಿ ಭಾವಃ । ವಿನೀಯ ಚ ಸ್ತನಯಂತಂ ಗರ್ಜಂತಮಕ್ಷಿತಮಕ್ಷೀಣಮುತ್ಸಂ । ಉತ್ಸವಂತ್ಯಸ್ಮಾದಾಪ ಇತ್ಯುತ್ಸೋ ಮೇಘಃ । ತಂ

ದುಹಂತಿ। ರಿಕ್ತೀಕುರ್ವಂತಿ॥ ಸುದಾನವಃ। ನುಪ್ರತ್ಯಯೋಂತೋ ದಾನುಶಬ್ದ ಆದ್ಯುದಾತ್ತಃ। ಬಹು-ವ್ರೀಹಾವಾದ್ಯುದಾತ್ತಂ ದ್ವ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ। ಮಿಹೇ। ಮಿಹ ಸೇಚನೇ। ಸಂಪದಾದಿಲಕ್ಷಣೋ ಭಾವೇ ಕ್ವಿಪ್। ಸಾನೇಕಾಚ ಇತಿ ವಿಭಕ್ತಿರುದಾತ್ತಾ। ಸ್ತನಯಂತಂ। ಸ್ತನ ಶಬ್ದೇ। ಚುರಾದಿರದಂತಃ। ಅತೋ ಲೋಪಸ್ಯ ಸ್ವಾನಿವದ್ಭಾವಾದ್ವೃದ್ಧ್ಯಭಾವಃ॥

॥ ಪ್ರತಿಪದಾರ್ಥ ॥

ಸುದಾನವಃ- ಒಳ್ಳೆಯ ದಾನಿಗಳಾದ। **ಮರುತಃ**—ಮರುದ್ದೇವತೆಗಳು। **ಪಯಃ** -ಕ್ಷೀರದಂತೆ ಸಾರವತ್ತಾದ। **ಅಪಃ**--ನೀರನ್ನು। **ಆಭುವಃ**- ಋತ್ವಿಜರು। **ವಿದಥೇಷು**—ಯಜ್ಞಗಳಲ್ಲಿ। **ಘೃತನತ್**—ತುಪ್ಪದಂತೆ। **ಪಿನ್ವಂತಿ**- ಚುಮುಕಿಸುತ್ತಾರೆ। **ಅತ್ಯಂ ನ**--ಕುದುರೆಯನ್ನು (ಯುದ್ಧಕ್ಕಾಗಿ ಶಿಕ್ಷಣೆ ಕೊಟ್ಟು ಸ್ವಾಧೀನಪಡಿಸಿಕೊಳ್ಳುವಂತೆ)। **ವಾಜಿನಂ**—ವೇಗವಾಗಿ (ಚಲಿಸುತ್ತಿರುವ) ಮೇಘವನ್ನು। **ಮಿಹೇ** ಮಳೆ ಸುರಿಸುವುದಕ್ಕೋಸ್ಕರ। **ವಿ ನಯಂತಿ**—ಸ್ವಾಧೀನಪಡಿಸಿಕೊಳ್ಳುತ್ತಾರೆ। **ಸ್ತನಯಂತಂ**—ಗರ್ಜಿಸುತ್ತಿರುವ। **ಅಕ್ಷಿತಂ**—ಅಕ್ಷಯವಾದ। **ಉತ್ಸಂ**—ಮೇಘವನ್ನು। **ದುಹಂತಿ**—ಕರೆಯುತ್ತಾರೆ (ಮಳೆ ಬೀಳಿಸುತ್ತಾರೆ)॥

॥ ಭಾವಾರ್ಥ ॥

ಒಳ್ಳೆಯ ದಾನಿಗಳಾದ ಮರುದ್ದೇವತೆಗಳು, ಯುದ್ಧಕ್ಕಾಗಿ ಅಶ್ವಗಳನ್ನು ಸ್ವಾಧೀನಪಡಿಸಿಕೊಳ್ಳುವಂತೆ, ವೇಗವಾಗಿ ಚಲಿಸುತ್ತಿರುವ, ಗರ್ಜಿಸುತ್ತಿರುವ ಮೇಘಗಳನ್ನು ಸ್ವಾಧೀನಪಡಿಸಿಕೊಂಡು, ಋತ್ವಿಜರು ಯಜ್ಞಗಳಲ್ಲಿ ಘೃತವನ್ನು ಸುರಿಯುವಂತೆ, ಕ್ಷೀರದಂತೆ ಸಾರವತ್ತಾದ ನೀರನ್ನು ಭೂಮಿಯ ಮೇಲೆ ವೃಷ್ಟಿಯ ರೂಪದಲ್ಲಿ ಸುರಿಸುತ್ತಾರೆ.

English Translation.

The munificent Maruts scatter the nutritious water as priests, at sacrifices, the clarified butter; as grooms lead forth a horse, they bring forth, for its rain, the fleet-moving cloud, and milk it, thundering, and unexhausted

॥ ವಿಶೇಷವಿಷಯಗಳು ॥

ಮಾರುತ್ಯರ್ತೀಯ ಶಸ್ತ್ರಮಂತ್ರಪಠನಕಾಲದಲ್ಲಿ **ಪಿನ್ವಂತ್ಯಪಃ** ಎಂಬ ಈ ಋಕ್ಕನ್ನು ಧಾಯ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಅಗ್ನಿರ್ನೇತಾ ತ್ವಂ ಸೋಮ ಕ್ರತುಭಿಃ ಪಿನ್ವಂತ್ಯಪ ಇತಿ ಧಾಯ್ಯಾಃ** ಎಂಬ ಸೂತ್ರದಿಂದ ವಿವೃತವಾಗಿರುವುದು (ಅ. ೫-೧೪)

ಸುದಾನವಃ—ಶೋಭನದಾನಾಃ। ಬಹಳ ಮಟ್ಟಿಗೆ ಶುಭವನ್ನು ಉಂಟುಮಾಡುವ ಸ್ವಭಾವವುಳ್ಳವರು.

ಆಭುವಃ—ಆಭುವಂತೀತ್ಯಾಭುವಃ । ಋತ್ವಿಜಃ । ಋತ್ವಿಕ್ಕುಗಳು ಎಂದು ಸಾಯಣರು ಅರ್ಥವನ್ನು ಹೇಳಿರುವರು ಸ್ಕಂದಸ್ವಾಮಿಗಳು ಈ ಶಬ್ದವು ಮಹನ್ನಾಮವಾಗಿರುವುದರಿಂದ ಮರುತಃ ಎಂಬ ಶಬ್ದಕ್ಕೆ ವಿಶೇಷಣವನ್ನಾಗಿ ಹೇಳಿರುತ್ತಾರೆ.

ಪಯಃ ಘೃತವತ್ ಪಿನ್ವಂತಿ ಕ್ಷೀರವತ್ ಸಾರವತೀಃ ಆಪಃ ಸಿಂಚಂತಿ । ಮರುದ್ದೇವತೆಗಳು ಹಾಲಿನ ಹಾಗೆ ರುಚಿಕರವಾದ ಮತ್ತು ಸಾರವಾದ ನೀರನ್ನು ಮಳೆಯ ರೂಪದಿಂದ ಸುರಿಸುವರು ಯಜ್ಞಮಾಡುವ ಪ್ರದೇಶಗಳಲ್ಲಿ ಗೋವುಗಳು ಕೂಡ ವೃಷ್ಟಿಯ ಮೂಲಕವಾಗಿ ಬಹಳವಾಗಿ ಹಾಲನ್ನು ಹಿಂಡುವಂತೆ ಮಾಡುವರೆಂಬು ಸ್ಕಂದಸ್ವಾಮಿಗಳು ಅರ್ಥಮಾಡುವರು

ಅತ್ಯಂ ನ ಮಿಹೇ—ಅತ್ಯ ಇತ್ಯಶ್ವನಾಮ । ಮಿಹ ಸೇಚನೇ । ಅಶ್ವವನ್ನು ನೀರಿನಲ್ಲಿ ತೊಳೆಯುವುದಕ್ಕಾಗಿ ಅಲ್ಲಲ್ಲಿಗೆ ಕರೆದುಕೊಂಡು ಹೋಗುವಂತೆ ವೇಗವಾಗಿರುವ ಮೇಘವನ್ನು ಮರುದ್ದೇವತೆಗಳು ವೃಷ್ಟಿಗಾಗಿ ತಮ್ಮ ಸ್ವಾಧೀನಮಾಡಿಕೊಂಡು ಇರುವರು

ವಿದಥೇಷು ಘೃತವತ್—ಯಥಾ ಘೃತಂ ಸಿಂಚಂತಿ ಏವಂ ಮರುತೋಪಿ ವೃಷ್ಟಿಂ ಕುರ್ವಂತಿ । ವಿದಥೇಷು ಎಂಬ ಶಬ್ದವು ಯಜ್ಞಃ, ವೇನಃ ಎಂಬ ಪದನೈದೆದು ಯಜ್ಞನಾಮಗಳ ಮಧ್ಯದಲ್ಲಿ (ನಿ ೩-೧೯) ಪಠಿತವಾಗಿ ಇರುವುದು ಯಜ್ಞದಲ್ಲಿ ತುಪ್ಪವನ್ನು ಅಗ್ನಿಯಲ್ಲಿ ಹೋಮಮಾಡುವ ಹಾಗೆ ಮರುದ್ದೇವತೆಗಳು ಮಳೆಯ ನೀರನ್ನು ವೃಷ್ಟಿರೂಪದಿಂದ ಧಾರಾಕಾರವಾಗಿ ಸುರಿಸುವರು.

ಉತ್ಸಂ—ಉತ್ಸ್ರವಂತ್ಯಸ್ಮಾದಾಪ ಇತಿ ಉತ್ಸೋ ಮೇಘಃ ನೀರುಗಳು ಬಹಳವಾಗಿ ಸುರಿಯುವುದರಿಂದ ಮೇಘಕ್ಕೆ ಉತ್ಸವೆಂದು ಹೆಸರು ಸ್ಕಂದಸ್ವಾಮಿಗಳು **ಉತ್ಸಶಬ್ದೋಽತ್ರ ಮೇಘವಚನಃ** ಉತ್ಸ ಎಂಬ ಶಬ್ದವು ಮೇಘವೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು. ಅದದೊರುತ್ಸಂ (ಋ ಸಂ ೫-೫೬-೧) ಎಂದು ಉದಾಹರಣೆಯನ್ನು ಕೊಟ್ಟಿರುವರು.

ವಾಜಿನಂ—ವಾಜಮಿತಿ ಅಪರಿತಮಪಿ ಬಲನಾಮ ವೇಗವಚನಂ ವಾ । ಉಪಮಾನಭೂತಸ್ಯ ಚಾತ್ಯಸ್ಯೇದಂ ವಿಶೇಷಣಂ ಬಲವಂತಂ ವೇಗವಂತಂ ವಾ ಅಶ್ವಮಿವ ಅಥವಾ ವಾಜ ಇತ್ಯನ್ನನಾಮ । ಇಹ ಚ ತತ್ಕಾರಣತ್ವಾತ್ ವೃಷ್ಟಿಲಕ್ಷಣೇ ಉದಕೇ ಪ್ರವೃತ್ತಂ । ಇದಂ ಮೇಘಸ್ಯ ವಿಶೇಷಣಂ । ವೃಷ್ಟ್ಯುದಕವಂತಮಿತ್ಯರ್ಥಃ । ಎಂದು ಸ್ಕಂದಸ್ವಾಮಿಗಳು ಹೇಳಿರುವರು. ವಾಜಶಬ್ದವು ಬಲನಾಮಗಳ ಮಧ್ಯದಲ್ಲಿ ಪಠಿತವಲ್ಲದಿದ್ದರೂ ವಾಜವೆಂದರೆ ಬಲವೆಂದು ಅರ್ಥವು ಈ ಪದವು ಅತ್ಯವೆಂದರೆ ಅಶ್ವವೆಂದು ಹೇಳುವ ಅತ್ಯಪದಕ್ಕೆ ವಿಶೇಷಣವು ಈ ಅತ್ಯಪದ ಬೋಧ್ಯನಾದ ಅಶ್ವವು ಮೇಘಪದಕ್ಕೆ ವಿಶೇಷಣವಾಗಿ ಪ್ರಯುಕ್ತವಾಗಿರುವುದು ಈ ಪದವು ವಿಶೇಷಣವಾಗಿರುವುದರಿಂದ ಮೇಘವು ಬಲವುಳ್ಳದ್ದಾಗಿಯೂ, ಅಥವಾ ವೇಗವುಳ್ಳದ್ದಾಗಿಯೂ ಇರುವುದೆಂದು ಅರ್ಥವು ಹೀಗೆ ಇರುವ ಮೇಘಗಳನ್ನು ಮರುದ್ದೇವತೆಗಳು ತಮ್ಮ ಅಧೀನದಲ್ಲಿ ಇರಿಸಿಕೊಂಡಿರುವರೆಂದು ಅರ್ಥವು ಅಥವಾ ವಾಜವೆಂಬ ಶಬ್ದವು ಅನ್ನನಾಮಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ ಅನ್ನವು ಉಂಟಾಗಲು

ಕಾರಣವಾದ ವೃಷ್ಟ್ಯುದಕವೆಂಬ ಅರ್ಥವು ಈ ಪದದಿಂದ ಉಂಟಾಗುವುದು. **ಈ** ಪದವು ಮೇಘಪದಕ್ಕೆ ವಿಶೇಷಣವಾಗಿ ಇರುವುದರಿಂದ ಮೇಘವು ವೃಷ್ಟ್ಯುದಕವುಳ್ಳದ್ದೆಂದು ಅರ್ಥವಾಗುವುದು

॥ ವ್ಯಾಕರಣಪ್ರಕ್ರಿಯಾ ॥

ಸುದಾನವಃ—ಶೋಭನಃ ದಾನುಃ ಯೇಷಾಂ ತೇ ಸುದಾನವಃ ಡುದಾಞ್ ದಾನೇ ಧಾತು ಔಣಾದಿಕವಾದ ನು ಪ್ರತ್ಯಯ ಬರುತ್ತದೆ. ವ್ಯತ್ಯಯದಿಂದ ದಾನು ಶಬ್ದವು ಆದ್ಯುದಾತ್ತವಾಗುತ್ತದೆ ಬಹುವ್ರೀಹಿ ಸಮಾಸವಾದಾಗ **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ. ಸೂ. ೬-೨-೧೯೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ಘೃತವತ್—ತೇನ ತುಲ್ಯಂ ಕ್ರಿಯಾ ಚೇದ್ವತಿಃ (ಪಾ ಸೂ ೫-೧ ೧೧೫) ಎಂಬುದರಿಂದ ವತಿ ಪ್ರತ್ಯಯ

ಆಭುವಃ—ಆ ಭವಂತಿ ಇತಿ ಆಭುವಃ **ಕ್ವಿಪ್ ಚ** ಎಂಬುದರಿಂದ ಭೂ ಧಾತುವಿಗೆ ಕ್ವಿಪ್ ಪ್ರತ್ಯಯ ಭೂ ಶಬ್ದವಾಗುತ್ತದೆ **ನ ಭೂಸುಧಿಯೋಃ** ಎಂಬುದರಿಂದ ಯಣ್ ನಿಷೇಧ ಬರುವುದರಿಂದ ಉವಙಾದೇಶ ಬರುತ್ತದೆ

ಮಿಹೇ—ಮಿಹ ಸೇಚನೇ ಧಾತು ಸಂಪದಾದಿಯಲ್ಲಿ ಸೇರಿರುವುದರಿಂದ **ಸಂಪದಾದಿಭ್ಯಃ ಕ್ವಿಪ್** ಎಂಬುದರಿಂದ ಕ್ವಿಪ್ ಪ್ರತ್ಯಯ ಅಲ್ಲಿ ಸರ್ವಲೋಪವಾಗುವುದರಿಂದ ಮಿಹ್ ಶಬ್ದವಾಗುತ್ತದೆ ಚತುರ್ಥಿಯಲ್ಲಿ ಮಿಹೇ ಎಂದು ರೂಪವಾಗುತ್ತದೆ **ಸಾನೇಕಾಚಸ್ತೃತೀಯಾದಿಃ** (ಪಾ ಸೂ ೬-೧-೧೬೮) ಎಂಬುದರಿಂದ ಏಕಾಚ್ಚಿನ ಪರದಲ್ಲಿ ಬಂದುದರಿಂದ ವಿಭಕ್ತಿಯು ಉದಾತ್ತವಾಗುತ್ತದೆ

ನಯಂತಿ—ಣೀಞ್ ಪ್ರಾಪಣೇ ಧಾತು ಭ್ವಾದಿ ಲಟ್ ಬಹುವಚನದಲ್ಲಿ ನಯಂತಿ ಎಂದು ರೂಪವಾಗುತ್ತದೆ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಸ್ತನಯಂತಮ್-ಸ್ತನ ಶಬ್ದೇ ಧಾತು ಚುರಾದಿ ಇದು ಆದಂತವಾದ ಧಾತು ಆದುದರಿಂದ **ಸತ್ಯಾಪಪಾಶ**-ಸೂತ್ರದಿಂದ ಸ್ವಾರ್ಥದಲ್ಲಿ ಣಿಚ್ ಬಂದಾಗ **ಅತೋ ಲೋಪಃ** ಎಂಬುದರಿಂದ ಆ ಅಕಾರಕ್ಕೆ ಲೋಪ ಒರುತ್ತದೆ **ಅಚಃ ಪರಸ್ಮಿನ್ ಪೂರ್ವವಿಧೌ** ಎಂಬುದರಿಂದ ಅದರ ಪೂರ್ವಕ್ಕೆ ವೃದ್ಧ್ಯಾದಿಗಳನ್ನು ಮಾಡಬೇಕೆಂದಿರುವಾಗ ಸ್ವಾನಿವದ್ಭಾವ ಬರುವುದರಿಂದ ಣಿಚ್ ನಿಮಿತ್ತಕವಾಗಿ ಉಪಧಾವೃದ್ಧಿ ಮುಂತಾದ ಕಾರ್ಯಗಳು ಬರುವುದಿಲ್ಲ. ಸ್ತನಿ ಎಂಬ ಣಿಜಂತ ಧಾತುವಿನ ಮೇಲೆ ಲಡರ್ಥದಲ್ಲಿ ಶತೃಪ್ರತ್ಯಯ **ತರ್ಕರಿ ಶಪ್** ಎಂಬುದರಿಂದ ಶಪ್. ತನ್ನಿಮಿತ್ತಕವಾಗಿ ಣಿಚ್ಚಿನ ಇಕಾರಕ್ಕೆ ಗುಣ ಅಯಾದೇಶ **ಅತೋ ಗುಣೇ** ಎಂಬುದರಿಂದ ಪರರೂಪ. ಸ್ತನಯತ್ ಎಂದು ಶಬ್ದವಾಗುತ್ತದೆ ಶಪ್ ಪಿತ್ತಾದುದರಿಂದ ಅನುದಾತ್ತ ಆದುಪದೇಶದ ಪರದಲ್ಲಿ ಲಸಾರ್ವಧಾತುಕವು (ಶತೃ) ಬಂದುದರಿಂದ **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ ದ್ವಿತೀಯಾ ಏಕವಚನದಲ್ಲಿ ಉಗಿತ್ತಾದುದರಿಂದ ನುಮಾಗವು ಬರುತ್ತದೆ ಸ್ತನಯಂತಮ್ ಎಂದು ರೂಪವಾಗುತ್ತದೆ.

ಅಕ್ಷಿತಮ್—ಕ್ಷಿ ಕ್ಷಯೇ ಧಾತು ಪ್ರತ್ಯಯ ಕಿತ್ತಾದುದರಿಂದ ಗುಣ ಬರುವುದಿಲ್ಲ ನ ಕ್ಷಿತಃ ಅಕ್ಷಿತಃ ತಂ ಅಕ್ಷಿತಮ್ **ತತ್ಪುರುಷೇ ತುಲ್ಯಾರ್ಥ** (ಪಾ. ಸೂ ೬-೩-೨) ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿಸ್ವರ ಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ಮ॒ಹಿ॒ಷಾಸೋ॑ ಮಾ॒ಯಿ॑ನ॒ಶ್ಚಿ॒ತ್ರಭಾ॑ನವೋ॒ ಗಿರ॑ಯೋ॒ ನ ಸ್ವ॒ತ॑ವಸೋ॒ ರಘು॑ಷ್ಯದಃ ।
ಮೃ॒ಗಾ ಇ॑ವ ಹ॒ಸ್ತಿ॑ನಃ ಖಾ॒ದಥಾ॒ ವನಾ॑ ಯದಾ॑ರುಣೀ॒ಷು ತ॑ವಿ॒ಷೀರ॑ಯುಗ್ಮ॒ಂ ॥ ೭ ॥

॥ ಪದಪಾಠಃ ॥

ಮ॒ಹಿ॒ಷಾಸಃ॑ । ಮಾ॒ಯಿನಃ॑ । ಚಿ॒ತ್ರಭಾ॑ನವಃ । ಚಿ॒ತ್ರ ಭಾ॑ನವಃ । ಗಿರ॑ಯಃ । ನ । ಸ್ವ॒ತ॑ವಸಃ । ಸ್ವ॒ತ ತ॑ವಸಃ । ರಘು॑ ಷ್ಯದಃ ।
ಮೃ॒ಗಾಃ ಇ॑ವ । ಹ॒ಸ್ತಿ॑ನಃ । ಖಾ॒ದಥ॑ । ವನಾ॑ । ಯತ್ । ಆ॒ರು॒ಣೀ॒ಷು । ತ॒ವಿ॒ಷೀಃ । ಅ॒ಯು॒ಗ್ಮ॒ಂ ॥ ೭ ॥

॥ ಸಾಯಣಭಾಷ್ಯಂ ॥

ಮಹಿಷ ಇತಿ ಮಹನ್ನಾಮ । ಮಹಿಷಾಸೋ ಮಹಾಂತಃ । ಮಾಯೇತಿ ಜ್ಞಾನನಾಮ । ಮಾಯಿನಃ ಸ್ಯಾಜ್ಜ್ಞಾಶ್ಚಿತ್ರಭಾನವಃ ಶೋಭನದೀಪ್ತಯೋ ಗಿರಯೋ ನ ಸ್ವತವಸಃ ಪರ್ವತಾ ಇವ ಸ್ವಕೀಯೇನ ಬಲೇನ ಯುಕ್ತಾ ರಘುಷ್ಯದಃ ಶೀಘ್ರಗಮನಾ ಹೇ ಮರುತ ಏವಂಭೂತಗುಣವಿಶಿಷ್ಟಾ ಯೂಯಂ

हस्तिनो हस्तवंतो मृगा इव गजा इव वना वनानि वृक्षजातानि खादथ । भक्षयेथ । प्रभंक्ष्येति यावत् । येद्यस्मादारुणीष्वरुणवर्णासु वडवासु तविषीर्बलान्यायुग्ध्वं संयोजितवंतः । तस्माद्भवतामिव वाहनस्यापि प्रबलत्वात्त्वंयुक्ता भवंतः सर्वं भंजंतीत्यर्थः ॥ रघुष्यदः । स्यंदू प्रस्रवणे । रघु शीघ्रं स्यंदंते गच्छंतीति रघुष्यदः । क्ष्विंदे क्ष्विंद् । आनिदितामिति नलोपः । वालमूलालघ्वलमिति लत्वविकल्पः । मं. ९-३-८९ । कृदुत्तरपदप्रकृतिस्वरत्वं । खादथ । खाद्य भक्षणे । अयुग्ध्वं । युजिर् योगे । लुङि क्लेः सिच् । एकाच इतीट्प्रतिषेधः । धि च । सा. ल ७-३७ । इति सकारलोपः । चोः कुरिति कुत्वं । अडागमे उदात्तः । येद्यस्मात्त्वंयोगादनिश्चितः ॥

॥ प्रतिपदार्थ ॥

महिषासः— महात्मरूप । **मायिनः**—प्राज्ञरूप । **चित्रभानवः**—शोभायमान वाद कांतियुक्त । **गिरयो न**—पर्वतगळंते । **स्वतवसः**—स्वकीयवाद बलयुक्तरूप । **रघुष्यदः**—शीघ्रगामिगळाद(एळ्ळे मरुद्देवतेगळे)। **येत्**—यावे कारणदिंद । **अरुणीषु**—अरुणवर्णवुळ्ळ अश्वगळल्लि । **तविषीः**—बलवन्नु । **अयुग्ध्वं**—योजने माडिद्दीरो (अदरिंद) । **हस्तिनः**—सोंडलुळ्ळ । **मृगा इव**—गजगळंते । **वना**- वनगळन्नु । **खादथ** भक्षणमाडुत्तीरि (मुरिदुहाकुत्तीरि.) ॥

॥ भावार्थ ॥

महात्मरू, प्राज्ञरू ऒळ्ळेय कांतियुक्तरू, पर्वतगळंते बलाढ्यरू, शीघ्रगामिगळू आद एळ्ळे मरुद्देवतेगळे, बलाढ्यवाद सिम्म वाहनगळिंद (जिंकेगळिंद) युक्तरागि, गजगळु हेगे काडुगळल्लि तम्म सोंडिलुगळिंद वृक्षगळन्नु मुरियुत्तवो हागे, काडुगळन्नु नाशमाडुत्तीरि

English Translation

Vast, possessed of knowledge, bright-shining like mountains in stability, and quick in motion, you like elephants, break down the forests when you put vigour into your ruddy (mares)

॥ विशेषविषयगळु ॥

महिषासः—महान्तः । दोड्डवरु, पूज्यरु **महिष इति महन्नाम** महिष एंब पदवु (नि ३-८३) महत् ब्रह्मः मोदलाद इप्पत्तेरडु महन्नामगळ मध्यदल्लि पठनागिद.

ಮಾಯಿನಃ—ಪ್ರಾಜ್ಞಾಃ । ಸರ್ವಜ್ಞರಾದವರು. **ಮಾಯಾ ಇತಿ ಜ್ಞಾನನಾಮ** ಮಾಯಾ ಎಂಬ ಪದವು ಕೇತಃ ಕೇತುಂ (ನಿರು ೩-೯) ಎಂಬ ಶಬ್ದೊಂದ ಸ್ವಜ್ಞಾನಾರ್ಥಕ ಶಬ್ದವಲ್ಲಿ ಪಠಿತವಾಗಿರುವದು.

ಮೃಗಾ ಇವ ಹಸ್ತಿನಃ ಖಾದಥ ವನಾ—ವನಶಬ್ದಃ ವೃಕ್ಷವಚನಃ ಯಥಾ ಮೃಗಾಃ ತೃಣಾನಿ ಖಾದಂತಿ ಯಥಾ ಚ ಹಸ್ತಿನೋ ವೃಕ್ಷಾನ್ ಖಾದಂತಿ ತದ್ವತ್ ಯೂಯಂ ಸ್ವಸಾಮರ್ಥ್ಯಾತ್ ಶತ್ರೂನ್ ಖಾದಥ । ಅಥವಾ ಯಥಾ ಸಿಂಹಾ ವ್ಯಾಘ್ರಾ ವಾ ಗತ್ವಾ ಹಸ್ತಿನಃ ಖಾದಂತಿ ತದ್ವತ್ ಯೂಯಂ ಉದಕವತೋ ಮೇಘಾನ್ ಖಾದಥ । ಸ್ಪಂದಸ್ವಾಮಿಗಳು ಇಲ್ಲಿ ಅರ್ಥಮಾಡಿರುವ ಕ್ರಮವಿದು—ವನ ಶಬ್ದವು ವೃಕ್ಷವೆಂಬ ಅರ್ಥವನ್ನು ಬೋಧಿಸುವುದು ಹೃಗಗಳು ಹುಲ್ಲುಕಡ್ಡಿಯನ್ನು ಭಕ್ಷಿಸಿ ನಾಶಮಾಡುವಂತೆಯೂ, ಆನೆಗಳು ಮರಗಳನ್ನು ಮುರಿದು ತಿನ್ನುವ ಹಾಗೆಯೂ ಮರುದ್ದೇವತೆಗಳಾದ ನೀವು ನಿಮ್ಮ ಸ್ವಂತ ಸಾಮರ್ಥ್ಯದಿಂದ ಯಜ್ಞಮಾಡುವ ಯಜಮಾನರ ಶತ್ರುಗಳನ್ನು ನಾಶಮಾಡಿ ಎಂದು ಒಂದು ವಿಧವಾದ ಅರ್ಥವು ಅಥವಾ ಹುಲಿಯೇ ಆಗಲಿ, ಸಿಂಹವೇ ಆಗಲಿ, ಸಂಚರಿಸುತ್ತಾ ಹೋಗಿ ಆನೆಗಳನ್ನು ಭಕ್ಷಿಸುವ ಹಾಗೆ ಮರುದ್ದೇವತೆಗಳಾದ ನೀವು ನೀರಿನಿಂದ ತುಂಬಿರುವ ಮೇಘಗಳನ್ನು ವೃಷ್ಟಿಯನ್ನು ಉಂಟುಮಾಡುವುದರ ಮೂಲಕ ನಾಶಮಾಡಿರಿ ಎಂದು ಇನ್ನೊಂದರ್ಥವು

ಯದಾರುಣೀಷು ತವಿಷೀರಯುಗ್ಧ್ವಂ—ಅರುಣವರ್ಣಾಸು ಬಡವಾಸು ಬಲಾನಿ ಸಂಯೋಜಿತವಂತಃ ಕೆಂಪು ಬಣ್ಣವುಳ್ಳ ಜಿಂಕೆಗಳನ್ನು ವಾಹನವನ್ನಾಗಿ ಉಪಯೋಗಿಸಿಕೊಂಡು ಅವುಗಳಲ್ಲಿ ನಿಮ್ಮ ಸಾಮರ್ಥ್ಯವನ್ನು ಅನುಗ್ರಹಿಸಿರುವಿರಿ ಎಂದು ಅರ್ಥವು. ಇಲ್ಲಿ ಪೃಷತ್ಯೋಮರುತಾಂ (ನಿ ೩-೨೮) ಎಂದು ಯಾಸ್ಕರ ನಿರುಕ್ತ ವಚನವಿರುವುದು ಸ್ಪಂದಸ್ವಾಮಿಗಳು ತವಿಷೀರಯುಗ್ಧ್ವಂ=ಬಲದಿಂದ ಕೂಡಿರುವ ಕುದುರೆಗಳನ್ನು ಯುದ್ಧಕ್ಕಾಗಿ ಮರುದ್ದೇವತೆಗಳು ನಿಮ್ಮ ರಥಗಳಿಗೆ ಕಟ್ಟಿರುವರೆಂದು ಅರ್ಥವನ್ನು ಹೇಳಿರುವರು

ರಘುಷ್ಯದಃ—ಶೀಘ್ರಗಮನಾಃ ರಘು । ಲಘು ಶೀಘ್ರಂ ಸ್ಯಂದಂತೇ ಗಚ್ಛಂತಿ ಮರುದ್ದೇವತೆಗಳು ಬಹಳವೇಗದಿಂದ ಚಾಗ್ರತೆಯಾಗಿ ಸಂಚರಿಸುವವರು.

ಸ್ಯಾತರಣಪ್ರಕ್ರಿಯಾ ॥ ೬

ಮಹಿಷಾಸಃ—ಮಹಿಷ+ಜಸ್ ಎಂದಿರುವಾಗ **ಅಜ್ಜಸೇರಸುಕ್** (ಪಾ ಸೂ ೭ ೧-೫೦) ಎಂಬುದರಿಂದ ಅಸುಕಾಗಮ ಬರುತ್ತದೆ ಸಕಾರಕ್ಕೆ ರುತ್ವ ವಿಸರ್ಗ ಬಂದರೆ ಮಹಿಷಾಸಃ ಎಂದು ರೂಪವಾಗುತ್ತದೆ

ಮಾಯಿನಃ—ಮಾಯಾ ಅಸ್ಯ ಅಸ್ತೀತಿ ಮಾಯೀ, ವ್ರೀಹ್ಯಾದಿಯಲ್ಲಿ ಇದು ಪಠಿತವಾದುದರಿಂದ **ವ್ರೀಹ್ಯಾದಿಭ್ಯಶ್ಚ** (ಪಾ ಸೂ ೫-೨ ೧೬) ಎಂಬುದರಿಂದ ಇನಿ ಪ್ರತ್ಯಯ ಬರುತ್ತದೆ **ಯಸ್ಯೇತಿ ಚ** ಸೂತ್ರದಿಂದ ಆಕಾರ ಲೋಪ ಮಾಯಿನ್ ಶಬ್ದವಾಗುತ್ತದೆ ಬಹುವಚನದಲ್ಲಿ ಮಾಯಿನ ಎಂದು ರೂಪವಾಗುತ್ತದೆ

ಚಿತ್ರಭಾನವಃ ಚಿತ್ರಾ ಭಾನವೋ ಯೇಷಾಂ ತೇ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಸ್ವರವನ್ನು ಪ್ರಕೃತಿಸ್ವರ ಬರುತ್ತದೆ

ಸ್ವತವಸಃ—ಸ್ವಕೀಯಂ ತನಃ ಯೇಷಾಂ ತೇ ಸ್ವತನಸಃ. ಬಹುವ್ರೀಹಿಸಮಾಸ ಹಿಂದಿನಂತೆಯೇ ಸ್ವರ ಬರುತ್ತದೆ

ರಘುಷ್ಯದಃ—ಸ್ಯಂದೂ ಪ್ರಸ್ರವಣೇ ಧಾತು ರಘು ಏಳ್ಪಂ ಸ್ಯಂದಂತೇ ಗಚ್ಛಂತಿ ಇತಿ ರಘುಷ್ಯದಃ **ಕ್ವಿಪ್ ಚ** ಎಂಬುದರಿಂದ ಇದಕ್ಕೆ ಕ್ವಿಪ್ ಪ್ರತ್ಯಯ ಕಿತ್ತಾದ ಪ್ರತ್ಯಯ ಪರದಲ್ಲಿ ಬಂದುದರಿಂದ **ಅನಿದಿತಾಂ ಹಲ ಉಪಧಾಯಾಃ**- ಎಂಬುದರಿಂದ ಉಪಧಾಭೂತ ನಕಾರಕ್ಕೆ ಲೋಪ ರಘುಸ್ಯದ ಶಬ್ದವಾಗುತ್ತದೆ **ವಾಲಮೂಲ-ಲಘ್ವಲಮ್** (ಪಾ ಮ ೮-೩-೧೮) ಎಂಬುದರಿಂದ ರಘು ಎಂಬಲ್ಲಿ ಲತ್ವ ವಿಕಲ್ಪವಾದುದರಿಂದ ಲತ್ವ ಬರುವುದಿಲ್ಲ ಬಹುವಚನದಲ್ಲಿ ರಘುಷ್ಯದಃ ಎಂದು ರೂಪವಾಗುತ್ತದೆ. **ಗತಿಕಾರಕೋಪಪದಾತ್ ಕೃತ್** ಎಂದುದರಿಂದ ಕೃದುತ್ತರ ಪದ ಪ್ರಕೃತಿಸ್ವರ ಬರುತ್ತದೆ. ಕ್ವಿಪ್ಪಿನಲ್ಲಿ ಸರ್ವವೂ ಲೋಪವಾದುದರಿಂದ ಧಾತುವಿನ ಅಕಾರವು ಉದಾತ್ತವಾಗುತ್ತದೆ

ಹಸ್ತಿನಃ– ಹಸ್ತಃ ಅಸ್ಯ ಅಸ್ತಿ ಇತಿ ಹಸ್ತೀ ಮತ್ವರ್ಥದಲ್ಲಿ **ಅತ ಇನಿಠನೌ** ಎಂಬುದರಿಂದ ಇನಿ ಪ್ರತ್ಯಯ ಬಹುವಚನದಲ್ಲಿ ಹಸ್ತಿನಃ ಎಂದು ರೂಪವಾಗುತ್ತದ ಪ್ರತ್ಯಯ ಸ್ವರದಿಂದ ಇಕಾರ ಉದಾತ್ತವಾಗುತ್ತದೆ

ಖಾದಥ--ಖಾದೃ ಭಕ್ಷಣೇ ಧಾತು ಲಟ್ ಮಧ್ಯಮಪುರುಷದಲ್ಲಿ ಥ ಪ್ರತ್ಯಯ **ಕರ್ತರಿ ಶಪ್** ಎಂಬುದರಿಂದ ಶಪ್ ವಿಕರಣ ಖಾದಥ ಎಂದು ರೂಪವಾಗುತ್ತದ ಅತಿಬಂತದ ಪರದಲ್ಲಿರುವುದರಿಂದ ನಿಘಾತಸ್ವರ ಒರುತ್ತದೆ **ಅನ್ಯೇಷಾಮಪಿ ದೃಶ್ಯತೇ** ಎಂಬುದರಿಂದ ಮಂತ್ರದಲ್ಲಿ ದೀರ್ಘ ಬರುತ್ತದೆ

ಆಯುಗ್ಧ್ವಂ—ಯುಜಿರ್ ಯೋಗೇ ಧಾತು ಲುಙಿನಲ್ಲಿ ಮಧ್ಯಮಪುರುಷ ಬಹುವಚನದಲ್ಲಿ ಧ್ವಮ್ ಪ್ರತ್ಯಯ **ಚ್ಲಿ ಲುಙಿ** ಸೂತ್ರದಿಂದ ಪ್ರಾಪ್ತವಾದ ಚ್ಲಿಗೆ **ಚ್ಲೇಃ ಸಿಚ್** ಎಂಬುದರಿಂದ ಸಿಚಾದೇಶ **ಏಕಾಚ ಉಪದೇಶೇಽನುದಾತ್ತಾತ್** ಎಂಬುದರಿಂದ ಸಿಚ್ಚಿಗೆ ಇಡಾಗಮ ಬರುವುದಿಲ್ಲ **ಧಿ ಚ** (ಪಾ ಸೂ ೮-೩-೫೫) ಧಕಾರಾದಿಯಾದ ಪ್ರತ್ಯಯ ಪರದಲ್ಲಿರುವಾಗ ಸಕಾರಕ್ಕೆ ಲೋಪ ಬರುತ್ತದೆ ಎಂಬುದರಿಂದ ಸಿಚ್ಚಿಗೆ ಲೋಪ **ಚೋಃ ಕುಃ** ಸೂತ್ರದಿಂದ ಧಾತುವಿನ ಜಕಾರಕ್ಕೆ. ಕುತ್ವದಿಂದ ಗಕಾರಾದೇಶ. ಲುಙ್ ನಿಮಿತ್ತಕವಾಗಿ ಆಂಗಕ್ಕೆ ಆಡಾಗಮ ಆಯುಗ್ಧ್ವಮ್ ಎಂದು ರೂಪವಾಗುತ್ತದೆ ಆಡುದಾತ್ತಃ ಎಂಬುದರಿಂದ ಆದ್ಯುದಾತ್ತವಾದ ಪದವಾಗುತ್ತದೆ ಯತ್ ಎಂದು ಹಿಂದೆ ಇರುವುದರಿಂದ **ಯದ್ಯೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ಸಿಂಹಾ ಇವ ನಾನದತಿ ಪ್ರಚೇತಸಃ ಪಿಶಾ ಇವ ಸುಪಿಶೋ ವಿಶ್ವ-
ವೇದಸಃ ।

ಕ್ಷಪೋ ಜಿನ್ವಂತಃ ಪೃಷತೀಭಿರ್ಋಷ್ಟಿಭಿಃ ಸಮಿತ್ಸಬಾಧಃ ಶವಸಾಹಿಮನ್ಯವಃ ॥ ೮ ॥

॥ ಪದಪಾಠಃ ॥

ಸಿಂಹಾಽಇವ । ನಾನದತಿ । ಪ್ರಽಚೇತಸಃ । ಪಿಶಾಽಇವ । ಸುಽಪಿಶಃ ।
ವಿಶ್ವಽವೇದಸಃ ।
ಕ್ಷಪಃ । ಜಿನ್ವಂತಃ । ಪೃಷತೀಭಿಃ । ಋಷ್ಟಿಽಭಿಃ । ಸಂ । ಇತ್ । ಸ್ವಽಬಾಧಃ ।
ಶವಸಾ । ಅಹಿಽಮನ್ಯವಃ ॥ ೮ ॥

॥ ಸಾಯಣಭಾಷ್ಯಂ ॥

ಪ್ರಚೇತಸಃ ಪ್ರಕೃಷ್ಟಜ್ಞಾನಾ ಮರುತಃ ಸಿಂಹಾ ಇವ ನಾನದತಿ । ಭೃಶಂ ಶಬ್ದಂ ಕುರ್ವಂತಿ । ಯಥಾ ಸಿಂಹಾ ಗಿರಿಗಹ್ವರೇಷು ಗಂಭೀರಂ ಶಬ್ದಂ ಕುರ್ವಂತಿ ಏವಂ ಮರುತ್ಸ್ವಸ್ಯಾಗತೇಷು ಗಂಭೀರಃ ಶಬ್ದ ಉತ್ಪದ್ಯತ ಇತಿ ಭಾವಃ । ತಥಾ ಸುಪಿಶಃ ಶೋಭನಾವಯವಾಃ ಶೋಭನಾಲಂಕಾರಾ ವಾ । ತತ್ರ ದೃಷ್ಟಾಂತಃ । ಪಿಶಾ ಇವ । ಪಿಶ ಇತಿ ರುರುನಾಮ । ಯಥಾ ರುರವಃ ಸ್ವಶರೀರಗತೈಃ ಶ್ವೇತವಿಂದುಭಿರಲಂಕೃತಾಸ್ತದ್ವತ್ । ವಿಶ್ವವೇದಸಃ ಸರ್ವಜ್ಞಾಃ ಕ್ಷಪಃ ಶತ್ರೂಣಾಂ ಕ್ಷಪಯಿತಾರೋ ಜಿನ್ವಂತಃ ಸ್ತೋತೄನ್ಪ್ರೀಣಯಂತಃ ಶವಸಾ ಬಲೇನಾಹಿಮನ್ಯವ ಆಹನನಶೀಲಮನ್ಯುಯುಕ್ತಾಃ । ಯದ್ವಿಷಯಃ ಕೋಪೋ ಜಾಯತೇ ತಸ್ಯ ಹನನೇ ಸಮರ್ಥಾ ಇತ್ಯರ್ಥಃ । ಯದ್ವಾ । ಮನನಂ ಜ್ಞಾನಂ ಮನ್ಯುಃ । ಅಹೀನಜ್ಞಾನಾಃ । ಉತ್ಕೃಷ್ಟಬುದ್ಧಯ ಇತ್ಯರ್ಥಃ । ಏವಂಭೂತಾ ಮರುತಃ ಪೃಷತೀಭಿಃ । ಪೃಷತ್ಯ ಇತಿ ಮರುತಾಂ ವಾಹನಸ್ಯಾಖ್ಯಾ । ಪೃಷತ್ಯಃ ಶ್ವೇತವಿಂದ್ವಂಕಿತಾ ಮೃಗ್ಯ ಇತ್ಯೈತಿಹಾಸಿಕಾಃ । ನಾನಾವರ್ಣಾ ಮೇಘಮಾಲಾ ಇತಿ ನೈರುಕ್ತಾಃ । ತಾಭಿರ್ಋಷ್ಟಿಭಿರಾಯುಧೈಶ್ಚ ಸಹಿತಾಃ ಸಂತಃ ಸಬಾಧಃ ಶತ್ರುಭಿರ್ಬಾಧಿತಾನ್ಯಜಮಾನಾನ್ ಸಮಿತ್ ಸಮಾನಮೇವ ಯುಗಪದೇವ ರಕ್ಷಿತುಮಾಗಚ್ಛಂತೀತಿ ಶೇಷಃ ॥ ನಾನದತಿ । ನದ ಅವ್ಯಕ್ತೇ ಶಬ್ದೇ । ಅಸ್ಮಾದ್ಯಙ್ಲುಗಂತಾಲ್ಲಟ್ । ಪಿಶಾ ಇವ । ಪಿಶ ಅವಯವೇ । ಇಗುಪಧಲಕ್ಷಣಃ ಕಃ । ಸುಪಿಶಃ । ಸುಪೂರ್ವಾತ್ಪಿಶ ಅವಯವೇ ಇತ್ಯಸ್ಮಾತ್ ಕ್ವಿಪ್ಪ್ರತ್ಯಯೇ ಕ್ವಿಪ್ । ಪೃಷತೀಭಿಃ । ಪೃಷು ಸೇಚನೇ । ವರ್ತಮಾನೇ ಪೃಷದ್ಬೃಹನ್ಮಹಜ್ಜಗಚ್ಛತ್ಯವಚ್ಚ । ಉ ೨-೮೪ । ಇತಿ ಶತ್ರವದ್ಭಾವಾ-

ದುಗಿಶಶ್ಚೇತಿ ಜೀಪ್ । ಅತ ಏವ ಶತುರನುಮ ಇತಿ ನೆದ್ಯಾ ಉದಾತ್ತತ್ವೇ ಪ್ರಾಪ್ತೇ ಬೃಹನ್ಮಹತೋರುಪಸಂಖ್ಯಾನಮಿತಿ ನಿಯಮಾತ್ತ್ಯಾಭಾವಃ ॥

॥ ಪ್ರತಿಪದಾರ್ಥ ॥

ಪ್ರಚೇತಸಃ- ಒಳ್ಳೆಯ ಜ್ಞಾನಿಗಳಾದ (ಮರುತ್ತುಗಳು) । **ಸಿಂಹಾ ಇವ**--ಸಿಂಹಗಳಂತೆ । **ನಾನದತಿ**--ಜೋರಾಗಿ ಶಬ್ದವನ್ನು ಮಾಡುತ್ತಾರೆ । **ಪಿಶಾ ಇವ**--ಜಿಂಕೆಗಳಂತೆ । **ಸುಪಿಶಃ**—ಅಲಂಕೃತವಾದ ಅವಯವಗಳುಳ್ಳ । **ವಿಶ್ವವೇದಸಃ**—ಸರ್ವಜ್ಞರಾದ । **ಕ್ಷಪಃ**--ಶತ್ರುನಾಶಕರಾದ । **ಜಿನ್ವಂತಃ**--ಸ್ತೋತೃಗಳನ್ನು ಆನಂದಪಡಿಸುವ । **ಶವಸಾ**—ಬಲದಿಂದ (ಯುಕ್ತರಾದ) । **ಅಹಿಮನ್ಯವಃ** ಹನನಶೀಲವಾದ ಕೋಪವುಳ್ಳ ಅಧಮಾ ಅಹೀನವಾದ ಜ್ಞಾನವುಳ್ಳ (ಮರುತರು) । **ಪೃಷತೀಭಿಃ**—ತಮ್ಮ ವಾಹನಗಳಾದ, ಬಿಳೀ ಚುಕ್ಕೆಗಳುಳ್ಳ ಜಿಂಕೆಗಳಿಂದ,(ನಾನಾವರ್ಣವಾದ ಮೇಘಮಾಲೆಯಿಂದ) । **ಋಷ್ಟಿಭಿಃ**--ಆಯುಧಗಳಿಂದ (ಯುಕ್ತರಾಗಿ) । **ಸಬಾಧಃ**--ಶತ್ರುಗಳಿಂದ ಬಾಧಿತನಾದ (ಯಜಮಾನನನ್ನು) । **ಸಮಿತ್**--ಕೂಡಲೇ (ರಕ್ಷಿಸಲು ಬರುತ್ತಾರೆ) ॥

॥ ಭಾವಾರ್ಥ ॥

ಮರುದ್ದೇವತೆಗಳು ಸಿಂಹದಂತೆ ಗಂಭೀರವಾದ ಧ್ವನಿಮಾಡತಕ್ಕವರು, ಸರ್ವಜ್ಞರು, ಜೆನ್ನಾಗಿ ಅಲಂಕೃತರು, ಶತ್ರುನಾಶಕರು, ಆಹಿತರನ್ನು ಹನನಮಾಡುವಷ್ಟು ಕೋಪವುಳ್ಳವರು, ಸ್ತೋತೃಗಳನ್ನು ಆನಂದಪಡಿಸತಕ್ಕವರು ಇಂಥವರು, ಯಜಮಾನನಿಗೆ ತೊಂದರೆಬಂದಾಗ, ತಮ್ಮ ವಾಹನಗಳ ಮೇಲೆ, ಆಯುಧಸಮೇತರಾಗಿ ಬಂದು ರಕ್ಷಿಸಲಿ

English Translation

The most wise Maruts roar like lions, the all-knowing are graceful as the spotted deer, destroying (their foes) delighting (their worshippers), of deadly strength in their anger, they come with their antelopes, and their arms (to defend the sacrificer) against interruption.

॥ ವಿಶೇಷವಿಷಯಗಳು ॥

ಸಿಂಹಾ ಇವ ನಾನದತಿ--ಭೃಶಂ ಶಬ್ದಂ ಕುರ್ವಂತಿ । ಯಥಾ ಸಿಂಹಾಃ ಗಿರಿಗಹ್ವರೇಷು ಗಂಭೀರಂ ಶಬ್ದಂ ಕುರ್ವಂತಿ ಏವಂ ಮರುತ್ಸು ಅಪ್ಯಾಗತೇಷು ಗಂಭೀರಃ ಶಬ್ದಃ ಉತ್ಪದ್ಯತೇ । ಸಿಂಹಗಳು ಸರ್ವತಗಳ ಗುಹೆಗಳಲ್ಲಿ ಗಂಭೀರಧ್ವನಿಯನ್ನು ಮಾಡುವಂತೆ ಮರುದ್ದೇವತೆಗಳು ಬಂದಾಗ ಬಲವಾದ ಧ್ವನಿಯು ಕೇಳಿಸುವುದು ಆದ್ದರಿಂದ ಈ ಮರುದ್ದೇವತೆಗಳು ಘಟ್ಟಿಯಾದ ಧ್ವನಿಯನ್ನು ಮಾಡುವವರು

ಪಿಶಾ ಇವ ಸುಪಿಶಃ—ಪಿಶ ಇತಿ ರುರುನಾಮ ಶೋಭನಾವಯವಾ ಶೋಭನಾಲಂಕಾರಾ ವಾ । ಪಿಶ ಎಂಬ ಶಬ್ದವು ಜಿಂಕೆ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು ಜಿಂಕೆಗಳು ತಮ್ಮ ಶರೀರದಲ್ಲಿ ಇರುವ ಬಿಳಿಯ

ಚುಕ್ಕೆಗಳಿಂದ ಅಲಂಕಾರವುಳ್ಳದ್ದಾಗಿರುವ ಹಾಗೆ ಈ ಮರುದ್ದೇವತೆಗಳು ಚೆನ್ನಾಗಿ ಕಾಣುವಂತೆ ಇರುವ ಉತ್ತಮವಾದ ಆಭರಣಗಳಿಂದ ತಮ್ಮ ಶರೀರವನ್ನು ಅಲಂಕರಿಸಿಕೊಂಡಿರುವರು ಅಥವಾ ಸ್ವಭಾವದಿಂದಲೇ ಚೆನ್ನಾಗಿ ಕಾಣಿಸುವ ಮಂಗಳಕರವಾದ ಶರೀರವುಳ್ಳವರು

ಶವಸಾ ಅಹಿಮನ್ಯವಃ—**ಬಲೇನ ಆಹನನಶೀಲಮನ್ಯುಯುಕ್ತಾಃ । ಯದ್ವಾ ಮಾನನಂ ಜ್ಞಾನಂ ಮನ್ಯುಃ । ಅಹೀನಜ್ಞಾನಾಃ ಉತ್ಕೃಷ್ಟಬುದ್ಧಯಃ ।** ಇವರಿಗೆ ಕೋಪವು ಉಂಟಾದವರನ್ನು (ಯಾರ ಮೇಲೆ ಕೋಪವು ಬಂದಿರುವುದೋ ಅವರನ್ನು) ಇವರು ತಮ್ಮ ಸ್ವಂತಸಾಮರ್ಥ್ಯದಿಂದಲೇ ನಿಗ್ರಹ ಮಾಡುವ ಸ್ವಭಾವವುಳ್ಳವರು ಎಂದು ಒಂದು ವಿಧವಾದ ಅರ್ಥವು ಮನ್ಯು ಶಬ್ದವು ಜ್ಞಾನವೆಂಬ ಅರ್ಥದಲ್ಲಿ ಇರುವುದರಿಂದ ಬಹಳ ಹೆಚ್ಚಾದ ಜ್ಞಾನವುಳ್ಳವರು ಉತ್ತಮವಾದ ಬುದ್ಧಿಯುಳ್ಳವರು ಎಂದು ಇನ್ನೊಂದು ವಿಧವಾದ ಅರ್ಥವು

ಪೃಷತೀಭಿಃ ಋಷ್ಟಿಭಿಃ ಸಬಾಧಃ— **ಪೃಷತ್ಯ ಇತಿ ಮರುತಾಂ ವಾಹನಸ್ಯಾಖ್ಯಾ । ಪೃಷತ್ಯಃ ಶ್ವೇತ ಬಿಂದ್ವಂಕಿತಾ ಮೃಗ್ಯ ಇತಿ ಐತಿಹಾಸಿಕಾಃ । ನಾನಾವರ್ಣಾ ಮೇಘಮಾಲಾ ಇತಿ ನೈರುಕ್ತಾಃ । ತಾಭಿಃ ಆಯುಧೈಶ್ಚ ಸಹಿತಾಃ ಶತ್ರುಭಿರ್ಬಾಧಿತಾ ಯಜಮಾನಾರ್ಥಾ ಯುಗಪದೇವ ರಕ್ಷಿತುಂ ಆಗಚ್ಛಂತೀತ್ಯರ್ಥಃ ।** ಬಿಳಿಯ ಚುಕ್ಕಿಗಳಿಂದ ಕೂಡಿದ ಜಿಂಕೆಯು ಪೃಷತೀ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವುದು ಎಂದು ಪೌರಾಣಿಕರು ಹೇಳಿರುವರು ಅನೇಕವಾದ ಬಣ್ಣಗಳುಳ್ಳ ಮೇಘಮಾಲೆಗೆ ಪೃಷತೀ ಎಂದು ಹೆಸರು ಎಂದು ನಿಘಂಟು ಕಾರರು ಹೇಳುತ್ತಾರೆ ಮರುದ್ದೇವತೆಗಳು ತಮ್ಮ ವಾಹನವಾದ ಪೃಷತೀ ಅಥವಾ ಜಿಂಕೆಗಳನ್ನು ವಾಹನವಾಗಿ ಮಾಡಿಕೊಂಡು, ಅಥವಾ ಅನೇಕ ಬಣ್ಣವುಳ್ಳ ಮೇಘಮಾಲೆಯನ್ನು ಏರಿಕೊಂಡು ಆಯುಧಗಳನ್ನು ಧರಿಸಿ, ಯಜ್ಞ ಮಾಡುತ್ತಿರುವ ಯಜಮಾನರ ಶತ್ರುಗಳನ್ನು ನಿಗ್ರಹಮಾಡುವುದಕ್ಕಾಗಿ ಆ ಕ್ಷಣದಲ್ಲಿಯೇ ಬರುವರು

ಸ್ಪಂದನ್ವಿಮಿಗಳು **ಶಿಶಾ ಇವ ಸುಶಿಶಃ**—**ಅಗ್ನಯ ಇವ ಸುರೂಪಾಃ** ಮರುದ್ದೇವತೆಗಳು ಅಗ್ನಿಯಂತೆ ಇರುವ ಆಕಾರವುಳ್ಳವರು. **ಕ್ಷುಪಃ ಸಂಜಿನ್ವಂತಃ ನಾನದತಿ—ಉದಕಂ ಮೇಘಾತ್ ಸಂಕ್ಷರಯಂತಃ ನಾನದತಿ** ನೀರುಗಳನ್ನು ಮೇಘಗಳಿಂದ ಸುರಿಸುವಾಗ ಆರ್ಭಟಮಾಡುವರು

ಅಹಿಮನ್ಯವಃ – ಅವಿನಷ್ಟಾ ದೀಪ್ತಿರೇತೇಭ್ಯಃ । ದೀಪ್ತಿಮಂತಃ । ಅಥವಾ ಅಹೀನದೀಪ್ತಯಃ ಉತ್ಕೃಷ್ಟದೀಪ್ತಯಃ ಅಥವಾ ಅಹಿರ್ಮೇಘೋ ಅಸುರೋವಾ ತದ್ವಿಷಯಃ ಕ್ರೋಧೋ ಯೇಷಾಂ ತೇ । ನಾಶವನ್ನು ಹೊಂದದ ಇರುವಕಾಂತಿಯುಳ್ಳವರು ಅಥವಾ ಬಹಳ ಹೆಚ್ಚಾದ ಕಾಂತಿಯುಳ್ಳವರು, ಎಂದು ಅಹಿಮನ್ಯವ ಶಬ್ದದ ಅರ್ಥವನ್ನು ಹೇಳಿರುವರು ಮತ್ತು ಅಹಿಶಬ್ದವು ಮೇಘ ಅಥವಾ ಅಸುರ ಎಂದು ಹೆಸರುಳ್ಳ ಅಸುರ ಎಂದು ಅರ್ಥವನ್ನು ಬೋಧಿಸುವುದು. ಮರುದ್ದೇವತೆಗಳು ಈ ಮೇಘಗಳ ಅಥವಾ ಅಸುರನ ವಿಷಯದಲ್ಲಿ ಕೋಪವುಳ್ಳವರು ಎಂದು ಇನ್ನೊಂದುವಿಧವಾಗಿ ಅರ್ಥಮಾಡಿರುವರು

ವ್ಯಾಕರಣಪ್ರಕ್ರಿಯಾ ।

ಸಿಂಹಾ ಇವ ಏಸಿ ಹಿಂಸಾಯಾಂ ಧಾತು. ಇದಿತ್ತಾದುದರಿಂದ ನುಮಾಗಮ ಅಚ್ ಪ್ರತ್ಯಯ ಸೃಸೃದಿ ರಾದಿಯಲ್ಲಿ ಸೇರಿರುವುದರಿಂದ ವರ್ಣವ್ಯತ್ಯಾಸ ಬರುತ್ತೆ **ಜಿತಃ** ಎಂಬುದರಿಂದ ಅಂತೋದಾತ್ತವಾಗುತ್ತದ

ನಾನದತಿ—ನದ ಅವ್ಯಕ್ತೇ ಶಬ್ದೇ ಧಾತು. ಭೃಶಾರ್ಥದಲ್ಲಿ ಯಙ್ **ಯೆಜಿಕೋ೭ಚಿ ಚ** ಸೂತ್ರದಿಂದ ಅದಕ್ಕೆ ಲುಕ್ **ಸನ್ಯಙೋಃ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ **ಹಲಾದಿಶೇಷ ದೀರ್ಘೋ೭ಕಿತಃ** (ಪಾ. ಸೂ ೭-೪-೮೩) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ ನಾನದ್ ಎಂಬ ಯಙ್‌ಲುಗಂತದ ಮೇಲೆ ಲಟ್ ಪ್ರಥಮಪುರುಷ ಬಹುವಚನದ ಝಿಗೆ **ಅದಭ್ಯಸ್ತಾತ್** ಎಂಬುದರಿಂದ ಅತಾದೇಶ-ನಾನದತಿ-ಎಂದು ರೂಪವಾಗುತ್ತದೆ. **ತಿಙ್ಶಿತಿಜಿಃ** ಸೂತ್ರದಿಂದ ನಿಘಾತಸ್ವರ ಬರುತ್ತದೆ

ಪಿಶಾ ಇವ ಪಿಶ ಅವಯವೇ ಧಾತು. **ಇಗುಪಧಜ್ಞಾಪ್ರೀಕಿರಃ ಕಃ** (ಪಾ ಸೂ ೩-೧-೧೩೫) ಎಂಬುದರಿಂದ ಕ ಪ್ರತ್ಯಯ ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ ಒಹುವಚನದಲ್ಲಿ ಪಿಶಾಃ ಎಂದು ರೂಪವಾಗುತ್ತದೆ.

ಸುಪಿಶಃ—ಸುಪೂರ್ವಕವಾದ ಪಿಶ (ಅವಯವೇ) ಧಾತುವಿಗೆ **ಕ್ವಿಪ್ ಚ** ಎಂಬುದರಿಂದ ಕ್ವಿಪ್ ಪ್ರತ್ಯಯ. ಸುಪಿಶ್ ಎಂದು ಶಬ್ದವಾಗುತ್ತದೆ ಒಹುವಚನದ ರೂಪ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಪ್ರಕೃತಿಸ್ವರ ಬರುತ್ತದೆ.

ವಿಶ್ವವೇದಸಃ—ಬಹುವ್ರೀಹಿಯಲ್ಲಿ **ಬಹುವ್ರೀಹೌ ಪ್ರಕೃತ್ಯಾ**-ಸೂತ್ರದಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ

ಜಿನ್ವಂತಃ—ಜಿವಿ ಪ್ರೀಣನೇ ಧಾತು **ಇದಿತೋನುಮ್ ಧಾತೋಃ** ಎಂಬುದರಿಂದ ನುಮಾಗಮ ಲಡರ್ಥದಲ್ಲಿ ಶತೃಪ್ರತ್ಯಯ ಶಪ್ ವಿಕರಣ ಜಿನ್ವತ್ ಶಬ್ದವಾಗುತ್ತದೆ ಅದುಪದೇಶದ ಪರದಲ್ಲಿರುವುದರಿಂದ ಶತೃ **ಶಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತವಾಗುತ್ತದೆ. ಶಪ್ ಪಿತ್ತಾದುದರಿಂದ ಅನುದಾತ್ತ. ಧಾತುವಿನ ಸ್ವರ ಉಳಿಯುತ್ತದೆ ಬಹುವಚನದಲ್ಲಿ ನುಮಾಗಮ ಬರುವುದರಿಂದ ಜಿನ್ವಂತಃ ಎಂದು ರೂಪವಾಗುತ್ತದೆ

ಪೃಷತೀಭಿಃ—ಪೃಷು ಸೇಜನೇ ಧಾತು **ವರ್ತಮಾನೇ ಪೃಷದ್‌ಬಹನ್ಮಹಜ್ಜಗಚ್ಛೃವಚ್ಚ** (ಉ ಸೂ ೨-೭೪೧) ಎಂಬುದರಿಂದ ನಿಪಾತಿತವಾಗಿದೆ ಶತೃವದ್ಭಾವ ಹೇಳಿರುವುದರಿಂದ **ಉಗಿತಶ್ಚ** ಎಂಬ ಸೂತ್ರದಿಂದ ಸ್ತ್ರೀತ್ವವಿವಕ್ಷಾ ಮಾಡಿದಾಗ ಙೀಪ್ ಬರುತ್ತದೆ ಪೃಷತೀ ಎಂದು ರೂಪವಾಗುತ್ತದೆ ತೃತೀಯಾ ಬಹುವಚನದಲ್ಲಿ **ಶತುರನುಮೋನದ್ಯಜಾದೀ** (ಪಾ ಸೂ ೬-೧-೧೭೩) ಎಂಬುದರಿಂದ ಶತೃವದ್ಭಾವವಿರುವುದರಿಂದ ನದಿಗೆ ೪(ಈಕಾರಕ್ಕೆ) ಉದಾತ್ತಸ್ವರವು ಪ್ರಾಪ್ತವಾದರೆ **ಬೃಹನ್ಮಹತೋರುಪಸಂಖ್ಯಾನಂ** ಎಂಬುದರಿಂದ ಎರಡುಶಬ್ದಕ್ಕೇ ನಿಯಮಮಾಡಿರುವುದರಿಂದ ಉದಾತ್ತ ಸ್ವರ ಒರುವುದಿಲ್ಲ ಧಾತುಸ್ವರದಿಂದ ಅದ್ಯುದಾತ್ತವಾಗುತ್ತದೆ.

ಅಹಿಮನ್ಯವಃ—ಬಹುವ್ರೀಹಿ ಸಮಾಸದಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ ॥ ೮ ॥

॥ ಸಾಯಣಭಾಷ್ಯಂ ॥

ರೋದಸೀ ಆ ವದತಾ ಗಣಶ್ರಿಯೋ ನೃಷಾಚಃ ಶೂರಾಃ ಶವ-
ಸಾಹಿಮನ್ಯವಃ ।
ಆ ವಂಧುರೇಷ್ವಮತಿರ್ನ ದರ್ಶತಾ ವಿದ್ಯುನ್ನ ತಸ್ಥೌ ಮರುತೋ
ರಥೇಷು ವಃ ॥ ೯ ॥

॥ ಪದಪಾಠಃ ॥

ರೋದಸೀ ಇತಿ । ಆ । ವದತ । ಗಣಽಶ್ರಿಯಃ । ನೃಽಸಾಚಃ । ಶೂರಾಃ
ಶವಸಾ । ಅಹಿಽಮನ್ಯವಃ ।
ಆ । ವಂಧುರೇಷು । ಅಮತಿಃ । ನ । ದರ್ಶತಾ । ವಿಽದ್ಯುತ್ । ನ । ತಸ್ಥೌ ।
ಮರುತಃ । ರಥೇಷು । ವಃ ॥ ೯ ॥

॥ ಸಾಯಣಭಾಷ್ಯಂ ॥

ಹೇ ಗಣಶ್ರಿಯೋ ಗಣಶಃ ಶ್ರಯಮಾಣಾಃ ಸಪ್ತಗಣರೂಪೇಣಾವಸ್ಥಿತಾ ನೃಷಾಚೋ ನೃನ್
ಯಜಮಾನಾನ್ಸಾಯಿಸ್ವೀಕರಣಾಯ ಸೇವಮಾನಾಃ ಶೂರಾಃ ಶೌರ್ಯೋಪೇತಾ ಏವಂಭೂತಾ ಹೇ ಮರುತಃ
ಶವಸಾ ಬಲೇನಾಹಿಮನ್ಯವ ಆಹನನಸ್ವಭಾವಕೋಪಯುಕ್ತಾಃ ಸಂತೋ ರೋದಸೀ ದ್ಯಾವಾಪೃಥಿವ್ಯಾವಾ
ವದತ । ಆ ಸಮಂತಾಚ್ಛಬ್ದಯತ । ಯುಷ್ಮದಾಗಮನೇ ಸತಿ ಭವದೀಯಶಬ್ದೇನ ದ್ಯಾವಾಪೃಥಿವ್ಯೌ
ಪೂರ್ಣೇ ಕುರುತೇತಿ ಭಾವಃ । ಕಿಂಚ ಹೇ ಮರುತೋ ವೋ ಯುಷ್ಮಾಕಂ ತೇಜೋ ವಂಧುರೇಷು ।
ಬಂಧಕಕಾಷ್ಠಾನಿರ್ಮಿತಂ ಸಾರಥೇಃ ಸ್ಥಾನಂ ವಂಧುರಮಿತ್ಯುಚ್ಯತೇ । ತದ್ಯುಕ್ತೇಷು ರಥೇಷ್ವಾ ತಸ್ಥೌ ।
ಆತಿಷ್ಠತಿ । ಅವಸ್ಥಿತಂ ಸತ್ಸರ್ವೈರ್ದೃಶ್ಯತೇ । ತತ್ರ ದೃಷ್ಟಾಂತೆವ್ವೆಯಮುಚ್ಯತೇ । ಅಮತಿರ್ನ । ಅಮತಿ-
ರಿತಿ ರೂಪನಾಮ । ಯಥಾ ನಿರ್ಮಲಂ ರೂಪಂ ಸರ್ವೈರ್ದೃಶ್ಯತೇ । ದರ್ಶತಾ ವಿದ್ಯುನ್ನ । ಯಥಾ ವಾ
ದರ್ಶನೀಯಾ ವಿದ್ಯುನ್ನೋಪಸ್ಥಾ ಸರ್ವೈರ್ದೃಶ್ಯತೇ । ಏವಂ ರಥೇ ಸ್ಥಿತಾನಾಂ ಯುಷ್ಮಾಕಂ ಜ್ಯೋತಿರಸಿ

ಸರ್ವೈರ್ದೃಶ್ಯತ ಇತ್ಯರ್ಥಃ ॥ ವದತ । ಋಚಿ ತುಸುಫೇತ್ಯಾದಿನಾ ದೀರ್ಘಃ । ನೃಷಾಚಃ । ಸಾದಾದಿತ್ವಾ-ದಾಮಂತ್ರಿತಾದ್ಯುದಾತ್ತತ್ವಂ । ಅಮತಿಃ । ಅಮ ಗತ್ಯಾದಿಷು । ಅನೋರತಿಃ । ಉ. ೪-೫೯ । ಇತ್ಯೌ-ಣಾದಿಕೋಽತಿಪ್ರತ್ಯಯಃ । ಪ್ರತ್ಯಯೋದ್ಯುದಾತ್ತತ್ವಂ । ದರ್ಶತಾ । ಭೃಮೃದೃಶೀತ್ಯಾದಿನಾತೆಚ್ ಪ್ರತ್ಯಯಃ। ಚಿತ್ತ್ವಾದಂತೋದಾತ್ತತ್ವಂ ॥

॥ ಪ್ರತಿಪದಾರ್ಥ ॥

ಗಣಶ್ರಿಯಃ ಏಳರ ಗುಂಪುಗಳಲ್ಲಿರುವ । **ನೃಷಾಚಃ** ಮನುಷ್ಯರನ್ನು (ಯಜಮಾನರನ್ನು ಹವಿಸ್ಸಿ ನಾಗಿ) ಆಶ್ರಯಿಸುವ। **ಶೂರಾಃ** ಶೂರರಾದ ಎಲೈ ಮರುದ್ದೇವತೆಗಳೇ। **ಶವಸಾ** – ಒಲದಿಂದ । **ಅಹಿಮನ್ಯವಃ** – (ಅಹಿತರ ವಿಷಯದಲ್ಲಿ) ಕನಸ್ಸಭಾವವುಳ್ಳ ಕೋಪಯುಕ್ತರಾಗಿ । **ರೋದಸೀ** – ಭೂಮ್ಯಾಕಾಶಗಳಲ್ಲಿ । **ಆ ವದತ**— ಫಟ್ಟೆಂದಾಗಿ ಶಬ್ದಮಾಡಿ । (**ಕಂಚಿತ್** ಮತ್ತೂ)। **ಮರುತಃ**—ಮರುತ್ತುರೇ । **ವಃ**—ನಿಮ್ಮ ತೇಜಸ್ಸು । **ವಂಧುರೇಷು**—ಕಾಮ್ಯಸಿರ್ಮಿತವಾದ ಸಾರಥಿಸ್ಥಾನಯುಕ್ತವಾದ । **ರಥೇಷು**—ರಥಗಳಲ್ಲಿ । **ಆಮತಿರ್ನ**—ಪ್ರಕಾಶಮಾನವಾದ ರೂಪದಂತೆಯೂ । **ದರ್ಶತಾ**—ರಮ್ಯವಾದ । **ವಿದ್ಯುನ್ನ**—ಮಿಂಚಿನಂತೆಯೂ। **ಆ ತಸ್ಥೌ**—ಇರುತ್ತದೆ ॥

॥ ಭಾವಾರ್ಥ ॥

ಏಳು ಏಳರಂತೆ ಗುಂಪುಗಳಾಗಿ ವಿಭಕ್ತರಾದ, ಮನುಷ್ಯರಿಂದ ದತ್ತವಾದ ಹವಿಸ್ಸನ್ನು ಸ್ವೀಕರಿಸುವ, ಶೂರರಾದ, ಬಲಿಷ್ಠರಾದ, ಅಹಿತರ ವಿಷಯದಲ್ಲಿ ಮಹಾ ಕೋಪಿಷ್ಠರಾದ ಎಲೈ ಮರುದ್ದೇವತೆಗಳೇ, ನೀವು ಭೂಮ್ಯಾಕಾಶಗಳನ್ನು ಆವರಿಸಿ ಫಟ್ಟೆಯಾಗಿ ಶಬ್ದಮಾಡಿ. ಮತ್ತು ರಥದಲ್ಲಿರುವ ನಿಮ್ಮ ತೇಜಸ್ಸು, ಮೇಘಮಧ್ಯದಲ್ಲಿರುವ ಮಿಂಚು ಅಥವಾ ನಿರ್ಮಲವಾದ ಸುಂದರಾಕೃತಿಯು ಹೇಗೆ ಎಲ್ಲರಿಗೂ ಮನೋಹರವಾಗಿ ಕಾಣಿಸುತ್ತದೋ ಅದರಂತೆ ಕಾಣಿಸುತ್ತದೆ

English Translation.

Maruts, who are distinguished in troops, who are benevolent to men, who are heroes, nnd whose strength is deadly in your anger, you make heaven and earth resound (at your coming); your (glory) sits in the seat-furnished chariots, conspicuous as (a beautiful) form, or as the lovely lightning.

॥ ವಿಶೇಷವಿಷಯಗಳು ॥

ನೃಷಾಚಃ—ನೄನ್ ಯಜಮಾನಾನ್ ಹವಿಸ್ಸ್ವೀಕರಣಾಯ ಸೇವಮಾನಾನ್ । ಯಜ್ಞಮಾಡುವ ಯಜಮಾನರುಗಳು ಒಪ್ಪಿಸುವ ಹವಿಸ್ಸನ್ನು ಸ್ವೀಕರಿಸುವುದಕ್ಕಾಗಿ ಯಜಮಾನರುಗಳನ್ನು ರಕ್ಷಿಸುತ್ತಾ ಅವರನ್ನು ಪ್ರತೀಕ್ಷೆ ಮಾಡುತ್ತಿರುವವರು.

ತವಸಾ ಅಹಿಮನ್ಯವಃ—**ಬಲೇನ ಅಹನನಸ್ಯಭಾವಕೋಪಯುಕ್ತಾಃ** ಮರುದ್ದೇವತೆಗಳು ತಮ್ಮ ನೈಸರ್ಗಿಕವಾದ ಸಾಮರ್ಥ್ಯದಿಂದ ಯಜಮಾನರ ಶತ್ರುಗಳನ್ನು ಹೊಡೆಯುವ ಸ್ವಭಾವದಿಂದ ಕೂಡಿರುವ ಕೋಪವುಳ್ಳವರು

ರೋದಸೀ ಅವದತ—**ಯುಷ್ಮದಾಗಮನೇ ಸತಿ** ಭವದೀಯಶಬ್ದೇನ ದ್ಯಾವಾಪೃಥಿವ್ಯೌ ಪೂರ್ಣೇ ಕುರುತ । ನೀವು ಬರುವಾಗ ಉಂಟಾಗುವ ಧ್ವನಿಯಿಂದ ಭೂಮ್ಯಂತರಿಕ್ಷಗಳು ತುಂಬುವುವು

ಅಮತಿರ್ನ—**ಅಮತಿರಿತಿರೂಪನಾಮ ।** ನಿರ್ಣಕ್, ವಪ್ರಃ ಎಂಬ ಇವೇ ಮೊದಲಾದ ಹದಿನಾರು ರೂಪನಾಮಗಳ ಮಧ್ಯದಲ್ಲಿ (ನಿ ೩-೧೩) ಅಮತಿಃ ಎಂಬ ಶಬ್ದವು ಪಠಿತವಾಗಿರುವುದು. **ಯಥಾ ನಿರ್ಮಲಂ ರೂಪಂ ಸರ್ವೈರ್ದೃಶ್ಯತೇ ಏವಂ ರಥೇ ಸ್ಥಿತಾನಾಂ ಯುಷ್ಮಾಕಂ ಜ್ಯೋತಿರಪಿ ಸರ್ವೈಃ ದೃಶ್ಯತೇ ।** ಕೊಳೆಯು ಇಲ್ಲದಿರುವುದರಿಂದ ಚೆನ್ನಾಗಿರುವ ಆಕಾರವು ಎಲ್ಲರಿಗೂ ಕಾಣಿಸುವ ಹಾಗೆ ರಥದಲ್ಲಿ ಇರುವ ನಿಮ್ಮ ಜ್ಯೋತಿ ಸ್ವರೂಪದಿಂದ ಇರುವ ಆಕಾರವೂ ಕೂಡ ಎಲ್ಲರಿಗೂ ಕಾಣಿಸುವುದು. ಈ ವಿಷಯದಲ್ಲಿ **ದರ್ಶತಾ ವಿದ್ಯುನ್ನ**—**ಯಥಾ ವಾ ದರ್ಶನೀಯಾ ವಿದ್ಯುತ್ ಮೇಘಸ್ಥಾ ಸರ್ವೈಃ ದೃಶ್ಯತೇ**—ಮೇಘದ ಮಧ್ಯದಲ್ಲಿ ಚೆನ್ನಾಗಿ ಹೊಳೆಯುವ ಮಿಂಚು ಎಲ್ಲರಿಗೂ ಕಾಣಿಸುವ ಹಾಗೆ ಎಂದು ಉಪಮಾನವನ್ನು ಹೇಳಿರುವುದು

ಗಣಶ್ರಿಯಃ—**ಗಣಶಃ ಶ್ರೂಯಮಾಣಾಃ ಸಪ್ತಗಣರೂಪೇಣಾವಸ್ಥಿತಾಃ** ಮರುದ್ದೇವತೆಗಳು ಗುಂಪಾಗಿ ಇರುವರೆಂದು ಪ್ರಸಿದ್ಧಿಯು ಏಳು ಗುಂಪಾಗಿರುವರೆಂದು ಅರ್ಥವು

॥ ವ್ಯಾಕರಣಪ್ರಕ್ರಿಯಾ ॥

ವದತ- ವದ ವ್ಯಕ್ತಾಯಾಂ ವಾಚಿ, ಲೋಟ್ ಮಧ್ಯಮಪುರುಷ ಬಹುವಚನದಲ್ಲಿ ಧ ಪ್ರತ್ಯಯ **ಲೋಟೋ ಲಙ್ವತ್** ಎಂಬುದರಿಂದ **ತಸ್ಥಸ್ಥಮಿಪಾಂ ತಾಂತಂತಾಮಃ** ಸೂತ್ರದಿಂದ ಧಕ್ಕೆ ತ ಆದೇಶ ಬರುತ್ತದೆ **ಕರ್ತರಿ ಶಪ್** ಎಂಬುದರಿಂದ ಶಪ್ ವಿಕರಣ ವದತ ಎಂದು ರೂಪವಾಗುತ್ತದೆ **ಯುಚಿ ತುನುಘ** (ಪಾ ಸೂ ೬-೩-೧೩೬) ಎಂಬುದರಿಂದ ಮಂತ್ರದಲ್ಲಿ ದೀರ್ಘ ಬರುತ್ತದೆ ಆಲ್ಲಿ ತಙ್ ಗ್ರಹಣದಿಂದ ಧ ಎಂಬುದು ಆದೇಶವಾಗಿ ಬಂದ ತ ಎಂಬುದೇ ವ್ಯಾಖ್ಯಾನದಿಂದ ಗೃಹೀತವಾಗಿದೆ **ತಿಜ್ಜತಿಜಿಃ** ಎಂಬುದರಿಂದ ನಿಘಾತಸ್ವರ ಬರುತ್ತದೆ

ಗಣಶ್ರಿಯಃ - ಸಂಬೋಧನಾ ಬಹುವಚನಾಂತರೂಪ **ಆಮಂತ್ರಿತಸ್ಯ ಚ** ಎಂಬ ದಿಂದ ನಿಘಾತಸ್ವರ ಬರುತ್ತದೆ

ನೃಷಾಚಃ ಇಲ್ಲಿಯೂ ಆಮಂತ್ರಿತಸಂಜ್ಞೆ ಬಂದರೂ ಪಾದಾದಿಯಲ್ಲಿ ಬಂದಿರುವುದರಿಂದ ಆಸ್ಪುಟಿಕನಿಘಾತ ಬರುವುದಿಲ್ಲ **ಆಮಂತ್ರಿತಸ್ಯ** (ಪಾ ಸೂ ೬-೧ ೧೯೮) ಎಂಬುದರಿಂದ ಆನ್ಯುದಾತ್ತಸ್ವರ ಬರುತ್ತದೆ

ಅಮತಿಃ—ಅಮ ಧಾತು ಗತ್ಯಾದ್ಯರ್ಥದಲ್ಲಿದೆ **ಅಮೇರತಿಃ** (ಉ ಸೂ ೪-೪೯) ಎಂಬುದರಿಂದ ಟಿಣಾದಿಕವಾದ ಅತಿಪ್ರತ್ಯಯ ಬರುತ್ತದೆ **ಆದ್ಯುದಾತ್ತೌ ಚ** ಎಂಬುದರಿಂದ ಬಂದಿರುವ ಪ್ರತ್ಯಯದ ಆದ್ಯುದಾತ್ತಸ್ವರ ದಿಂದ ಮಕಾರೋತ್ತರಾಕಾರವು ಉದಾತ್ತವಾಗುತ್ತದೆ. ಪ್ರಥಮಾ ಏಕವಚನದಲ್ಲಿ ಅಮತಿಃ ಎಂದು ರೂಪವಾಗುತ್ತದೆ.

ದರ್ಶತಾ— ದೃಶಿರ್ ಪ್ರೇಕ್ಷಣೇ ಧಾತು **ಭೃಮೃದೃಶಿಯಜಿ ಪವಿ** (ಉ. ಸೂ. ೧-೭) ಎಂಬುದರಿಂದ ಅತಚ್ ಪ್ರತ್ಯಯ ಪ್ರತ್ಯಯ ನಿಮಿತ್ತಕವಾಗಿ ಧಾತುವಿನ ಉಪಧೆಗೆ ಗುಣ ಪ್ರತ್ಯಯ ಚಿತ್ವಾದುದರಿಂದ **ಚಿತೇಃ** ಎಂಬುದರಿಂದ ಅಂತೋದಾತ್ತವಾಗುತ್ತದೆ ಸ್ತ್ರೀತ್ವದಲ್ಲಿ **ಆಜಾದ್ಯತಷ್ಟಾಪ್** ಸೂತ್ರದಿಂದ ಟಾಪ್ ದರ್ಶತಾ ಎಂದು ರೂಪವಾಗುತ್ತದೆ.

ತಸ್ಥೌ— ಷ್ಠಾ ಗತಿನಿವೃತ್ತೌ ಧಾತು **ಥಂದಸಿ ಲುಙ್ಲಙ್ಲಿಟಃ** ಎಂಬುದರಿಂದ ಲಿಟ್ **ಆತ ಔಣಲಃ** ಎಂಬುದರಿಂದ ತಿಪಿಗೆ ಆದೇಶವಾಗಿ ಬಂದ ಣಲಿಗೆ ಔ ಆದೇಶ ಬರುತ್ತದೆ ಧಾತುವಿಗೆ ದ್ವಿತ್ವ **ಶರ್ಪೂರ್ವಾಃ ಖಯಃ** ಎಂಬುದರಿಂದ ಅಭ್ಯಾಸದ ಖರಾದ ತಕಾರಕ್ಕೆ ಶೇಷ. ವೃದ್ಧಿ, ತಸ್ಥೌ ಎಂದು ರೂಪವಾಗುತ್ತದೆ ಆತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಮರುತಃ—ಆಮಂತ್ರಿತಸ್ಯ ಚ (ಪಾ ಸೂ ೮-೧-೧೯) ಎಂಬುದರಿಂದ ಸರ್ವಾನುದಾತ್ತಸ್ವರ ಬರುತ್ತದೆ ॥ ೯ ॥

॥ ಸಂಹಿತಾಪಾಠಃ ॥

ವಿಶ್ವವೇದಸೋ ರಯಿಭಿಃ ಸಮೋಕಸಃ ಸಂಮಿಶ್ಲಾಸಸ್ತವಿಷೀಭಿ-
ರ್ವಿರಪ್ಶಿನಃ ।
ಅಸ್ತಾರ ಇಷುಂ ದಧಿರೇ ಗಭಸ್ತ್ಯೋರನಂತಶುಷ್ಮಾ ವೃಷಖಾ-
ದಯೋ ನರಃ ॥ ೧೦ ॥

॥ ಪದಪಾಠಃ ॥

ವಿಶ್ವಽವೇದಸಃ । ರಯಿಽಭಿಃ । ಸಂಽಓಕಸಃ । ಸಂಽಮಿಶ್ಲಾಸಃ । ತವಿಷೀಭಿಃ ।
ವಿಽರಪ್ಶಿನಃ ।

ಅಸ್ತಾರಃ । ಇಷುಂ । ದಧಿರೇ । ಗಭಸ್ತ್ಯೋಃ । ಅನಂತಶುಷ್ಮಾಃ । ವೃಷಖಾದಯಃ । ನರಃ ॥ ೧೦ ॥

॥ ಸಾಯಣಭಾಷ್ಯಂ ॥

ವಿಶ್ವವೇದಸಃ ಸರ್ವಜ್ಞಾ ರಯಿಭಿರ್ಧನೈಃ ಸಮೋಕಸಃ ಸಮಾನನಿವಾಸಾಃ ಸಮವೇತಾ ವಾ ಧನಾಧಿಪತಯ ಇತ್ಯರ್ಥಃ । ತವಿಷೀಭಿರ್ಬಲೈಃ ಸಂಮಿಶ್ಲಾಸಃ ಸಂಮಿಶ್ರಾಃ । ಸಂಯುಕ್ತಾ ಇತ್ಯರ್ಥಃ । ವಿರಪ್ಶಿನಃ । ಮಹನ್ನಾಮೈತತ್ । ಮಹಾಂತಃ । ಅಸ್ತಾರಃ ಶತ್ರೂಣಾಂ ನಿರಸಿತಾರಃ ಅನಂತಶುಷ್ಮಾ ಅನವಚ್ಛಿನ್ನಬಲಾಃ ವೃಷಖಾದಯಃ । ವೃಷೇಂದ್ರಃ ಖಾಧಿರಾಯುಧಸ್ಥಾನೀಯೋ ಯೇಷಾಂ ತೇ ತಥೋಕ್ತಾಃ । ಯದ್ವಾ । ನೃವಾ ಸೋಮಃ ಖಾದಿಃ ಖಾದ್ಯಃ ಪೇಯೋ ಯೇಷಾಂ ತೇ । ನರೋ ನೇತಾರಃ । ಏವಂಭೂತಾ ಮರುತಃ । ಗಭಸ್ತಿರಿತಿ ಬಾಹುನಾಮ । ಗಭಸ್ತ್ಯೋರ್ಬಾಹ್ವೋರಿಷುಂ ದಧಿರೇ । ಶತ್ರೂಣಾಂ ನಿರಸನಾಯ ಧನುರ್ಬಾಣಾಧಿಕಮಾಯುಧಂ ಧಾರಯಂತಿ ॥ ಸಮೋಕಸಃ । ಉಚ ಸಮವಾಯೇ । ಆಸುನಿ ಬಹುಲವಚನಾತ್ಕ್ತ್ವಿಮಿತ್ಯೋಕ ಉಚಃ ಕೇ । ಪಾ. ೭-೩ ೬೪ । ಇತ್ಯೋಕ್ತ್ಯೋಕ್ತಂ । ಬಹುಪ್ರೇಹೌ ಪೂರ್ವಪದಪ್ರಕೃತಿಸ್ವರತ್ವಂ । ಸಂಮಿಶ್ಲಾಸಃ । ಕಪಿಲಕಾದಿತ್ವಾಲ್ಲತ್ವಂ । ವಿರಪ್ಶಿನಃ । ರಪ ಲಪ ವ್ಯಕ್ತಾಯಾಂ ವಾಚಿ । ವಿಪೂರ್ವಾದಸ್ಮಾದ್ಬಹುಲವಚನಾತ್ ಶಕ್ವರ್ತ್ಯಯಃ । ವಿವಿಧಂ ಶಬ್ದಂ ರಪಂತೀತಿ ವಿರಪ್ಶಾಃ ಸ್ತೋತಾರಃ । ತ ಏಷಾಂ ಸಂತೀತಿ ವಿರಪ್ಶಿನಃ । ಯದ್ವಾ । ವಿವಿಧಂ ರಪಣಂ ವಿರಪ್ಶಂ । ತದೇಷಾಮಸ್ತೀತಿ । ಮರುತೋ ಹಿ ವಿವಿಧಂ ಶಬ್ದಂ ಕುರ್ವತೇ । ಇನಿಪ್ರತ್ಯಯಸ್ವರಃ । ಅಸ್ತಾರಃ । ತಾಚ್ಛೀಲಿಕಸ್ತೃನ್ । ಇಡಭಾವಶ್ಛಾಂದಸಃ । ನಿತ್ತ್ವಾದಾದ್ಯುದಾತ್ತತ್ವಂ । ಅನಂತಶುಷ್ಮಾಃ । ನಾಸ್ತ್ಯಂತೋಽಸ್ಯೇತ್ಯನಂತಃ । ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಆನಂತಃ ಶುಷ್ಮೋ ಬಲಂ ಯೇಷಾಂ । ಬಹುಪ್ರೇಹೌ ಪೂರ್ವಪದಪ್ರಕೃತಿಸ್ವರತ್ವಂ । ವೃಷಖಾದಯಃ । ಖಾದ್ಯ ಭಕ್ಷಣೇ ಔಣಾದಿಕ ಇನ್ಪ್ರತ್ಯಯಃ । ವೃಷಣ್ಯಿಬ್ಬಃ ಕನಿನ್ಪ್ರತ್ಯಯಾಂತ ಆದ್ಯುದಾತ್ತಃ । ಬಹುಪ್ರೇಹೌ ಪೂರ್ವಪದಪ್ರಕೃತಿಸ್ವರತ್ವಂ ॥ ೭ ॥

॥ ಪ್ರತಿಪದಾರ್ಥ ॥

ವಿಶ್ವವೇದಸಃ- ಸರ್ವಜ್ಞರಾದ । **ರಯಿಭಿಃ**—ಐಶ್ವರ್ಯದಿಂದ (ಐಶ್ವರ್ಯದೊಡನೆ) । **ಸಮೋಕಸಃ**—ಸಮಾನ ನಿವಾಸವುಳ್ಳ (ಐಶ್ವರ್ಯಯುಕ್ತರಾದ) । **ತವಿಷೀಭಿಃ**—ಬಲದಿಂದ । **ಸಂಮಿಶ್ಲಾಸಃ** -ಯುಕ್ತರಾದ । **ವಿರಪ್ಶಿನಃ**—ಮಾಹಾತ್ಮ್ಯರಾದ । **ಅಸ್ತಾರಃ**—ಶತ್ರುನಿರಾಸಕರಾದ । **ಅನಂತಶುಷ್ಮಾಃ**—ಅಪಾರವಾದ ಶಕ್ತಿಯುಳ್ಳ । **ವೃಷಖಾದಯಃ**—ಇಂದ್ರನೇ ಆಯುಧವಾಗಿ ಉಳ್ಳ ಅಥವಾ ಸೋಮರಸವೇ ಪಾನೀಯವಾಗಿ ಉಳ್ಳ । **ನರಃ**—ನೇತೃಗಳಾದ ಮರುದ್ದೇವತೆಗಳು । **ಗಭಸ್ತ್ಯೋಃ**—ಎರಡೂ ಬಾಹುಗಳಲ್ಲಿಯೂ । **ಇಷುಂ**—ಆಯುಧವನ್ನು । **ದಧಿರೇ** - ಧರಿಸಿದ್ದಾರೆ.

॥ ಭಾವಾರ್ಥ ॥

ಸರ್ವಜ್ಞರೂ, ಐಶ್ವರ್ಯವಂತರೂ, ಬಲಿಷ್ಠರೂ, ಮಹಾತ್ಮರೂ, ಅಪಾರವಾದ ದೇಹಶಕ್ತಿಯುಳ್ಳವರೂ, ಇಂದ್ರನನ್ನೇ ಆಯುಧಸ್ಥಾನದಲ್ಲಿ ಹೊಂದಿರುವವರೂ, ಸೋಮರಸವೇ ಪಾನೀಯವಾಗಿ ಉಳ್ಳವರೂ, ಒಳ್ಳೆಯ ನಾಯಕರೂ ಆದ ಮರುದ್ದೇವತೆಗಳು ಎರಡೂ ಬಾಹುಗಳಲ್ಲಿಯೂ ಶತ್ರುನಿರಸನಾರ್ಥವಾಗಿ ಆಯುಧಗಳನ್ನು ಧರಿಸಿದ್ದಾರೆ.

English Translation

The Maruts, who are all-knowing, co-dwellers with wealth, combined with strength, loud-sounding, repellers of foes, of infinite prowess, whose weapon (of offence) is Indra, and who are leaders (of men), hold in their hands, the shaft.

॥ ವಿಶೇಷ ವಿಷಯಗಳು ॥

ವಿರಪ್ಶಿನಃ—ಮಹನ್ನಾಮೈತತ್ । ಮಹಾಂತಃ । ವಿವಿಧಂ ಶಬ್ದಂ ರಪಂತೀತಿ ವಿರಪ್ಶಾಃ ಸ್ತೋತಾರಃ ತೇ ಏಷಾಂ ಸಂತೀತಿ ವಿರಪ್ಶಿನಃ । ಯದ್ವಾ ವಿವಿಧಂ ರಪಣಂ ವಿರಪ್ಶಮ್ ತದೇಷಾಮಸ್ತೀತಿ । ಮರುತೋಹಿ ವಿವಿಧಂ ಶಬ್ದಂ ಕುರ್ವಂತೇ । ವಿರಪ್ಶ ಶಬ್ದವು ಇಪ್ಪತ್ತೈದು ಮಹನ್ನಾಮಗಳ (ನಿ ೧೩–೩) ಮಧ್ಯದಲ್ಲಿ ಉಕ್ತವಾಗಿರುವುದು. ಪೂಜ್ಯರು, ದೊಡ್ಡವರು ಎಂದು ಅರ್ಥವು ಅನೇಕವಾದ ಶಬ್ದಗಳನ್ನು ಉಚ್ಚರಿಸುತ್ತಾ ಸ್ತೋತ್ರಮಾಡುವವರ ಸ್ತುತಿಗಳಿಗೆ ವಿಷಯರಾಗಿ ಇರುವವರು ಎಂದು ಅರ್ಥವು ಮರುದ್ದೇವತೆಗಳು ಉಂಟು ಮಾಡುವ ಧ್ವನಿಯು ಬಹಳ ವಿಧವಾಗಿರುವುದು. ಆದ್ದರಿಂದ ಇವರಿಗೆ ಈ ಹೆಸರು ಬಂದಿರುವುದು ಎಂದು ಮತ್ತೊಂದು ವಿಧವಾದ ಅರ್ಥವು

ಅನಂತಶುಷ್ಮಾಃ—ಅನವಚ್ಛಿನ್ನಬಲಾಃ । ನಾಸ್ತಿ ಅಂತೋ ಅಸ್ಯೇತಿ ಅನಂತಃ ಶುಷ್ಮಃ ಬಲಂ ಯೇಷಾಂ । ಓಜಃ, ಸಾಹಃ, ವಾಜಃ ಎಂಬ ಇಪ್ಪತ್ತೆಂಟು ಬಲನಾಮಗಳ (ನಿ ೩–೯) ಮಧ್ಯದಲ್ಲಿ ಶುಷ್ಮಶಬ್ದವು ಪಠಿತವಾಗಿರುವುದು. ಆಳಿಸಿ ಮಾಡಿ ಅಥವಾ ಊಹೆ ಮಾಡಿ ಹೇಳಲು ಸಾಧ್ಯವಿಲ್ಲದಿರುವ ಬೆಲವುಳ್ಳವರು ಎಂದು ಮರುದ್ದೇವತೆಗಳಿಗೆ ಇದು ವಿಶೇಷಣವಾಗಿರುವುದು

ವೃಷಖಾದಯಃ—ವೃಷಾ ಇಂದ್ರಃ ಖಾದಿಃ ಆಯುಧಸ್ಥಾನೀಯೋ ಯೇಷಾಂ ತೇ । ಯದ್ವಾ ವೃಷಾ ಸೋಮಃ ಖಾದಿಃ ಖಾದ್ಯಃ ಸೇಯೋ ಯೇಷಾಂ ತೇ । ವೃಷ ಶಬ್ದವು ಇಂದ್ರನು ಮತ್ತು ಸೋಮ ಲತೆಯು ಎಂದು ಎರಡು ವಿಧವಾದ ಅರ್ಥಗಳುಳ್ಳದ್ದಾಗಿರುವುದು ಶತ್ರುಗಳನ್ನು ನಿಗ್ರಹಮಾಡುವುದಕ್ಕಾಗಿ ಆಯುಧಗಳನ್ನು ಧರಿಸಿರುವ ಹಾಗೆ ಈ ಮರುದ್ದೇವತೆಗಳು ಇಂದ್ರನನ್ನು ತಮ್ಮ ಪ್ರಾಮುಖ್ಯದಲ್ಲಿ ಇರಿಸಿಕೊಂಡಿರುವರು ಅಥವಾ ಸೋಮರಸವನ್ನು ಪಾನಮಾಡುವರು ಎಂದೂ ಅರ್ಥವು.

ಸ್ಕಂದಸ್ವಾಮಿಗಳು—ವೃಷಖಾದಯಃ ವರ್ಷಿತುರ್ಮೇಘಸ್ಯ ಖಾದಿತಾರಃ । ಅಥವಾ ಖಾದಿಶಬ್ದ ಇಹ ಕವಚನವಚನಃ ಕಟ್ಯರಿಕಾ ಕಾರಾಯುಧವಿಶೇಷವಾಚಿನೋ ವಾ । ಅಂಸೇಷು ರಿಷ್ಟಯೋ ಪತ್ಸು ಖಾದಯ

(ಋ ಸಂ. ೫-೫೪-೧೧) ತ್ವೇಷಂ ಗಣಂ ತನಸಂ ಖಾದಿಹಸ್ತಂ (ಋ ಸಂ ೫-೫೮-೨) ಇತ್ಯಾದಿಸು ದರ್ಶನಾತ್ । ಮರುದ್ದೇವತೆಗಳು ವೃಷ್ಟಿಯ ಉದಕವನ್ನು ಸುರಿಸುವ ಮೇಘವನ್ನು ನಾಶಪಡಿಸುವವರು ಎಂದು ಅರ್ಥವನ್ನು ಹೇಳುವರು. ಮತ್ತು ಅಂಸೇಷು—ಹೆಗಲುಗಳಲ್ಲಿ, ರಿಷ್ಟಯಃ—ಆಯುಧಗಳು, ಹಸ್ತ-ಪಾದಗಳಲ್ಲಿ, ಖಾದಯಃ—ಅವರಣಗಳು, ಎಂದು ಅರ್ಥವುಳ್ಳ ಶ್ರುತಿವಾಕ್ಯವನ್ನು ಉದಾಹರಿಸಿ ಖಾದಿಶಬ್ದವು ಕವಚವೆಂಬ ಅರ್ಥವನ್ನು ಹೇಳುವುದು ಎಂದು ಅರ್ಥಮಾಡಿರುವರು ಮತ್ತು ಒಂದು ವಿಧವಾದ ಆಯುಧವಿಶೇಷವಾಚಕವು ಎಂದು ಹೇಳಿರುವರು

ಗಭಸ್ಯೋಃ— **ಗಭಸ್ತಿರಿತಿ ಬಾಹುನಾಮ.** ಗಭಸ್ತಿ ಎಂದರೆ ಬಾಹುಗಳು, ತೋಳುಗಳೆಂದರ್ಥವು ಗಭಸ್ತೀ ಶಬ್ದವು ಆಯತೀ. ಚ್ಯವಾನಾ ಮೊದಲಾದ ಹನ್ನೆರಡು (ಸಿ ೩-೮) ಬಾಹುನಾಮಗಳ ಮಧ್ಯದಲ್ಲಿ ಸರಿತವಾಗಿರುವುದು ಸ್ಕಂದಸ್ವಾಮಿಗಳು **ಗಭಸ್ತ್ಯೋಃ**— **ಬಾಹುನಾಮೈತತ್ ತತ್ಸಂಬಂಧಾತ್ತ್ರಹ ಹಸ್ತಯೋಃ ಪ್ರಯುಕ್ತಂ । ಆತ್ಮೀಯಯೋಃ ಹಸ್ತಯೋಃ ಇಷುಂ ದಧಿರೇ ಧಾರಯಂತಿ** । ಗಭಸ್ತಿ ಶಬ್ದವು ಬಾಹು ಎಂಬ ಅರ್ಥವನ್ನು ಬೋಧಿಸುವುದು ಬಾಹು ಸಂಬಂಧದಿಂದ ಇಲ್ಲಿ ಹಸ್ತವು ಎಂದು ಅರ್ಥವನ್ನು ಹೇಳಬೇಕು ಇದರಿಂದ ಮರುದ್ದೇವತೆಗಳು ತಮ್ಮ ಹಸ್ತಗಳಲ್ಲಿ ಧನಸ್ಸು ಬಾಣ ಮೊದಲಾದ ಆಯುಧಗಳನ್ನು ಧರಿಸಿರುವರು ಎಂದು ಅರ್ಥವನ್ನು ಹೇಳಿರುವರು

ನರಃ— **ನೇತಾರಃ** ಯಜಮಾನರನ್ನು ಮುಂದುವರಿಯುವಂತೆ ಮಾಡುವರು ಮರುದ್ದೇವತೆಗಳು ಸ್ಕಂದ ಸ್ವಾಮಿಗಳು **ನರಃ ಮನುಷ್ಯಾಕಾರಾಃ** ಮನುಷ್ಯರಂತೆ ಆಕಾರವನ್ನು ಹೊಂದಿರುವವರು ಎಂದು ಅರ್ಥಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ಸಮೋಕಸಃ—ಉಚ ಸಮವಾಯೇ ಧಾತು ಸರ್ವಧಾತುಸಿಬಂಧನವಾದ ಅಸುನ್ ಪ್ರತ್ಯಯ. ಉಣಾದಿಯಲ್ಲಿ ಬಹುಲವಚನವಿರುವುದರಿಂದ ಅಸುನ್ ಪರದಲ್ಲಿರುವಾಗ ಧಾತುವಿನ ಚಕಾರಕ್ಕೆ ಕುತ್ವ. ಇದು **ಓಕ ಉಚಃ ಕೇ** (ಕಾ ೭-೩-೬೪) ಎಂಬಲ್ಲಿ ವಿವರಿಸಲ್ಪಟ್ಟಿದೆ ಸಮಾನಂ ಓಕಃ ಯೇಷಾಂ ತೇ ಸಮೋಕಸಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಸಂಮಿಶ್ಲಾಸಃ—ಸಂಮಿಶ್ಲಾಸಃ ಎಂದಿರುವಾಗ ಇದು ಕಪಿಲಕಾದಿಯಲ್ಲಿ ಸೇರಿರುವುದರಿಂದ ವಿಕಲ್ಪವಾಗಿ ಲತ್ವ ಬರುತ್ತದೆ ಮಿಶ್ರ ಸಂಪರ್ಕೇ ಧಾತು. ಹಿಂದಿನಂತೆ ಬಹುವ್ರೀಹಿಯಲ್ಲಿ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ವಿರಪ್ಶಿನಃ—ರಪ ಲಪ ವ್ಯಕ್ತಾಯಾಂ ವಾಚಿ ಧಾತು. ವಿಸ್ಪೋರ್ವವಾಗಿರುವಾಗ ಇದಕ್ಕೆ ಉಣಾದಿಯ ಬಹುಲವಚನದಿಂದ ರಕ್ ಪ್ರತ್ಯಯ ವಿವಿಧಂ ಶಬ್ದಂ ರಪಂತೀತಿ ವಿರಪ್ಶಾಃ ಸ್ತುತಾರಃ ವಿರಪ್ಶಾಃ ವಿಷಾಂ ಸಂತಿ ಇತಿ ವಿರಪ್ಶಿನಃ ಮತ್ವರ್ಥದಲ್ಲಿ **ಅತ ಇನಿಠನೌ** ಎಂಬುದರಿಂದ ಇನಿ ಪ್ರತ್ಯಯ. ವಿರಪ್ಶಿನ್ ಶಬ್ದವಾಗುತ್ತದೆ ಬಹುವಚನಾಂತರೂಪ ಸ್ತ್ರೀಪ್ರತ್ಯಯ ಸ್ವರದಿಂದ ಇಕಾರವು ಉದಾತ್ತವಾಗುತ್ತದೆ ಅಥವಾ ವಿವಿಧಂ ರಪಣಂ ವಿರಪ್ಶಂ ತತ್ ವಿಷಾಮಸ್ತೀತಿ ವಿರಪ್ಶಿನಃ ಮರುತೋ ಹಿ ವಿವಿಧಂ ಶಬ್ದಂ ಕುರ್ವತೇ (ಹಿಂದಿನ ವೀತಿಯಲ್ಲಿ ನಾನಾಶಬ್ದ ಮಾಡುವ, ಸ್ತುತಿಮಾಡುವವರಿಂದ ಕೂಡಿದುದು ಎಂದೂ, ಎರಡನೇ ವೀತಿಯಲ್ಲಿ ನಾನಾ ಶಬ್ದಮಾಡತಕ್ಕದ್ದು ಎಂದೂ, ಅರ್ಥವಾಗುತ್ತದೆ.)

ಅಸ್ತಾರಃ—ಅಸು ಕ್ಷೇಪಣೇ ಧಾತು. ತಚ್ಛೀಲಾರ್ಥದಲ್ಲಿ ತೃನ್ ಪ್ರತ್ಯಯ ಛಾಂದಸವಾಗಿ ಇಡಾಗಮ ಬರುವುದಿಲ್ಲ. ಅಸ್ತೃ ಶಬ್ದವಾಗುತ್ತದೆ. ಜಸಿನಲ್ಲಿ **ಋತೋಽಙ್ ಸರ್ವನಾಮಸ್ಥಾನಯೋಃ** (ಪಾ. ಸೂ ೭-೩-೧೧೦) ಎಂಬುದರಿಂದ ಋದಂತಾಂಗಕ್ಕೆ ಗುಣ. **ಅಸ್ತೃನ್ತೃಚ್**--ಸೂತ್ರದಿಂದ ಉಪಧಾದೀರ್ಘ. ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ. ಅಸ್ತಾರಃ ಎಂದು ರೂಪವಾಗುತ್ತದೆ. ತೃನ್ ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ.

ಅನಂತಶುಷ್ಮಾಃ—ನಾಸ್ತಿ ಅಂತೋಽಸ್ಯ ಇತಿ ಅನಂತಃ **ನಞ್ಸುಭ್ಯಾಂ** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದ ಅಂತೋದಾತ್ತಸ್ವರ ಬರುತ್ತದೆ. ಅನಂತಃ ಶುಷ್ಮೋ ಬಲಂ ಯೇಷಾಂ ತೇ ಅನಂತಶುಷ್ಮಾಃ ಬಹುವ್ರೀಹಿ ಸಮಾಸವಾದಾಗ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ವೃಷಖಾದಯಃ—ಖಾದೃ ಭಕ್ಷಣೇ ಧಾತು. **ಸರ್ವಧಾತುಭ್ಯ ಇನ್** (ಉ. ಸೂ. ೪-೧೫೭) ಎಂಬುದರಿಂದ ಇನ್ ಪ್ರತ್ಯಯ ಖಾದಿ ಎಂದು ರೂಪವಾಗುತ್ತದೆ. ವೃಷನ್ ಶಬ್ದವು ಕನಿನ್ ಪ್ರತ್ಯಯಾಂತವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತವಾಗುತ್ತದೆ ವೃಷಾ ಖಾದಿಃ ಯೇಷಾಂ ತೇ ವೃಷಖಾದಯಃ ಹಿಂದಿನಂತೆಯೇ ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ. ವೃಷಖಾದಿ+ಜಸ್ ಎಂದಿರುವಾಗ **ಜಸಿಚ** ಎಂಬುದರಿಂದ ಇಗಂತಾಂಗಕ್ಕೆ ಗುಣ ಅಯಾದೇಶ ವೃಷಖಾದಯಃ ಎಂದು ರೂಪವಾಗುತ್ತದೆ ॥ ೧೦ ॥

॥ ಸಂಹಿತಾಪಾಠಃ ॥

ಹಿರಣ್ಯಯೇಭಿಃ ಪವಿಭಿಃ ಪಯೋವೃಧ ಉಜ್ಜಿಘ್ನಂತ ಆಪಥ್ಯೋ ನ ಪರ್ವತಾನ್ ।
ಮಖಾ ಅಯಾಸಃ ಸ್ವಸೃತೋ ಧ್ರುವಚ್ಯುತೋ ದುಧ್ರಕೃತೋ ಮರುತೋ ಭ್ರಾಜದೃಷ್ಟಯಃ ॥ ೧೧ ॥

। ಪದಪಾಠಃ ।

ಹಿರಣ್ಯಯೇಭಿಃ । ಪವಿಭಿಃ । ಪಯಃವೃಧಃ । ಉತ । ಜಿಘ್ನಂತೇ । ಆ-
ಪಥ್ಯ । ನ । ಪರ್ವತಾನ್ ।
ಮಖಾಃ । ಅಯಾಸಃ । ಸ್ವಸೃತಃ । ಧ್ರುವಚ್ಯುತಃ । ದುಧ್ರಕೃತಃ । ಮರುತಃ ।
ಭ್ರಾಜತ್ಋಷ್ಟಯಃ ॥ ೧೧ ॥

। ಸಾಯಣಭಾಷ್ಯಂ ।

ಮರುತೋ ಹಿರಣ್ಯಯೇಭಿಃ ಸುವರ್ಣಮಯೈಃ । ಯದ್ವಾ । ಹಿತರಮಣೀಯೈಃ ಪವಿಭಿಃ ರಥಾನಾಂ ಚಕ್ರೈಃ ಪರ್ವತಾನ್ಪರ್ವವತೋ ಮೇಘಾನ್ ಯದ್ವಾ ಶಿಲೋಚ್ಚಯಾನುಜ್ಜಿಘ್ನಂತೇ । ಊರ್ಧ್ವಂ ಗಮಯಂತಿ । ಸ್ಥಾನಾತ್ಪ್ರಚ್ಯಾವಯಂತೀತ್ಯರ್ಥಃ । ತತ್ರ ದೃಷ್ಟಾಂತಃ । ಪಥ್ಯೋ ನ । ಯಥಾ ಪಥಿ ಗಚ್ಛನ್ರಥೋ ಮಾರ್ಗ ಆಸ್ಥಿತಂ ತೃಣವೃಕ್ಷಾದಿಕಂ ಚೂರ್ಣೀಕೃತ್ಯೋರ್ಧ್ವಂ ನಯತಿ ಗಮಯತಿ । ಯದ್ವಾ । ಯಥಾ ಸಂಯುಕ್ತಾ ಗಜಾ ಮಾರ್ಗಸ್ಥಿತಂ ವೃಕ್ಷಾದಿಕಂ ಭಗ್ನಂ ಕುರ್ವಂತಿ । ಕೀದೃಶಾ ಮರುತಃ । ಪಯೋವೃಧಃ ಪಯಸೋ ವೃಷ್ಟ್ಯುದಕಸ್ಯ ವರ್ಧಯಿತಾರಃ । ಯದ್ವಾ । ಪೃಶ್ನೇಃ ಪಯಸಾ ವರ್ಧಮಾನಾಃ । ಪೃಶ್ನಿಯೈಃ ವೈ ಪಯಸೋ ಮರುತೋ ಜಾತಾಃ । ತೈ. ಸಂ ೨-೨-೧೧-೪ । ಇತಿ ಶ್ರೂಯತೇ । ಮಖಾಃ । ಮಖ ಇತಿ ಯಜ್ಞನಾಮ । ತದ್ವಂತಃ । ಆಯಾಸೋ ದೇವಯಜನದೇಶಂ ಪ್ರತಿ ಗಂತಾರಃ ಸ್ವಸೃತಃ ಶತ್ರೂನ್ಪ್ರತಿ ಸ್ವಯಮೇವ ಸರಂತೋ ಗಚ್ಛಂತಃ ಧ್ರುವಚ್ಯುತೋಃ ಧ್ರುವಾಣಾಂ ನಿಶ್ಚಲಾನಾಂ ಪರ್ವತಾದೀನಾಮಪಿ ಚ್ಯಾವಯಿತಾರಃ ದುಧ್ರಕೃತೋ ದುಧ್ರಂ ದುಷ್ಟಾನಾಂ ಧಾರಯಿತಾರಮಾತ್ಮಾನಂ ಕುರ್ವಾಣಾಃ । ಯದ್ವಾ । ದುರ್ಧರಮನ್ಯೈರ್ಧರ್ತುಮಶಕ್ಯಮಾತ್ಮಾನಂ ಕುರ್ವಾಣಾಃ । ಭ್ರಾಜದೃಷ್ಟಯಃ । ದೀಪ್ಯಮಾನಾಯುಧಾಃ ॥ ಉಜ್ಜಿಘ್ನಂತೇ । ಹಂತೇರ್ವ್ಯತ್ಯಯೇನಾತ್ಮನೇಪದಂ । ಬಹುಲಂ ಛಂದಸೀತಿ ಶಪಃ ಶ್ಲುಃ । ಬಹುಲಂ ಛಂದಸೀತ್ಯಭ್ಯಾಸಸ್ಯೇತ್ವಂ । ಗಮಹನೇತ್ಯಾದಿನೋಪಧಾಲೋಪಃ । ಹೋ ಹಂತೇರಿತಿ ಘತ್ವಂ । ವ್ಯತ್ಯಯೇನಾಂತಾದೇಶಃ । ಪಥ್ಯಃ । ಪಥಿ ಭವಃ । ಭವೇ ಛಂದಸೀತಿ ಯತ್ । ನಸ್ತದ್ಧಿತೇ । ಪಾ. ೬-೪ ೧೪೪ । ಇತಿ ಟಿಲೋಪಃ । ವ್ಯತ್ಯಯೇನಾಂತಸ್ವರಿತತ್ವಂ । ಯದ್ವಾ । ಛಂದಸೀವನಿಪಾವಿತಿ ಮತ್ವರ್ಥೀಯ ಈಕಾರಃ । ಉದಾತ್ತಸ್ವರಿತಯೋರ್ಯಣ ಇತಿ ವಿಭಕ್ತೇಃ ಸ್ವರಿತತ್ವಂ । ಆಯಾಸಃ । ಆಯು ಪಯು ಗತೌ । ಆಯಂತ ಇತ್ಯಯಾಃ । ಪಚಾದ್ಯಚ್ । ಆಜ್ಜಸೇರಸುಕ್ । ದುಧ್ರಕೃತಃ । ಅತ್ರ ದುಃಶಬ್ದೇನ ದುಷ್ಟಾ ಲಕ್ಷ್ಯಂತೇ । ಧೃಙ್ ಧಾರಣೇ । ದುಷ್ಟಾನ್ ಧಾರಯತೀತಿ ದುಧ್ರಃ । ಮೂಲವಿಭುಜಾದಿತ್ವಾತ್ । ಪಾ. ೩-೨-೫-೨ । ಕಪ್ರತ್ಯಯಃ । ಯದ್ವಾ । ಈಷದ್ದುಃಸುಷ್ವಿತಿ

ದುಃಶಬ್ದ ಉಪಪದೇ ಕರ್ಮಣಿ ಖಲ್ । ಗುಣಾಭಾವಶ್ಛಾಂದಸಃ । ತಂ ಕುರ್ವಂತೀತಿ ದುಧ್ರಕೃತಃ ಕ್ವಿಪ್ಚೇತಿ ಕ್ವಿಪ್ । ರೇಫಲೋಪಶ್ಛಾಂದಸಃ ॥

॥ ಪ್ರತಿಪದಾರ್ಥ ॥

ಪಯೋವೃಧಃ ವೃಷ್ಟ್ಯುದಕವನ್ನು ಅಭಿವೃದ್ಧಿಪಡಿಸುವ ಆಕಾಶದ ಉದಕದಿಂದ ಅಭಿವೃದ್ಧಿಹೊಂದಿದ । **ಮಖಾಃ**--ಯಜ್ಞಗಳುಳ್ಳ । **ಅಯಾಸಃ**--(ದೇವತೆಗಳನ್ನುದ್ದೇಶಿಸಿ ಯಜ್ಞಮಾಡುವ ಸ್ವದೇಶಕ್ಕೆ ತಾನೇ) ಹೋಗುವ । **ಸ್ವಸೃತಃ**--(ಶತ್ರುಗಳನ್ನೆದುರಿಸಿ) ತಾನೇ ಹೋಗುವ । **ಧ್ರುವಚ್ಯುತಃ**--ಅಚಲವಾದ ಪರ್ವತಗಳನ್ನೂ ಕೂಡ ಬೀಳಿಸುವ । **ದುಧ್ರಕೃತಃ** - (ತಮ್ಮನ್ನು ಇತರರಿಂದ) ಧರಿಸಲಸಾಧ್ಯರನ್ನಾಗಿ ಮಾಡುವ **ಭ್ರಾಜದೃಷ್ಟಯಃ**-- ದೀಪ್ಯಮಾನವಾದ ಆಯುಧಗಳುಳ್ಳ । **ಮರುತಃ**--ಮರುದ್ದೇವತೆಗಳು । **ಹಿರಣ್ಯಯೇಭಿಃ**-ಸುವರ್ಣಮಯವಾದ, (ಹಿತವಾದ ಮತ್ತು ರಮಣೀಯವಾದ) । **ಪವಿಭಿಃ**--ರಥಚಕ್ರಗಳಿಂದ । **ಪರ್ವತಾನ್** ಮೇಘಗಳನ್ನೂ (ಶಿಲಾಸಮೂಹಗಳನ್ನೂ) । **ಆ ರಥ್ಯೇವ ನ**--(ರಥವು) ಮಾರ್ಗದಲ್ಲಿರುವ (ತೃಣವೃಕ್ಷಾದಿಗಳನ್ನೂ) ಹೇಗೋ ಹಾಗೆ । **ಉಜ್ಜಿಘ್ನಂತೇ**--ಮೇಲಕ್ಕೆ ಹೊರಡಿಸುತ್ತಾರೆ

॥ ಭಾವಾರ್ಥ ॥

ವೃಷ್ಟ್ಯುದಕವನ್ನು ಅಭಿವೃದ್ಧಿಪಡಿಸುವವರೂ, ಯಾಗಾದಿ ಕರ್ಮವುಳ್ಳವರೂ, ಯಾಗ ಸ್ಥಳಕ್ಕೇ ತಾವೇ ಹೋಗತಕ್ಕವರೂ, ಶತ್ರುಗಳನ್ನು ತಾವೇ ಎದುರಿಸುವವರೂ, ಅಚಲವಾದ ಪರ್ವತಗಳನ್ನೂ ಕೂಡ ಬೀಳಿಸಬಲ್ಲವರೂ, ಇತರರಿಂದ ತಡೆಯಲಸಾಧ್ಯರೂ, ಪ್ರಕಾಶಮಾನವಾದ ಆಯುಧಗಳುಳ್ಳವರೂ, ಆದ ಮರುದ್ದೇವತೆಗಳು, ತಮ್ಮ ಸುವರ್ಣಮಯವಾದ ಚಕ್ರಯುಕ್ತವಾದ ರಥದಲ್ಲಿ ಕಳಿತು, ರಥವು ಗಮನನೇಗದಲ್ಲಿ ದಾರಿಯಲ್ಲಿರುವ ತೃಣಶಿಲಾದಿಗಳನ್ನು ಮೇಲಕ್ಕೆ ಹಾರಿಸುವಂತೆ, ಮೇಘಗಳನ್ನು ಚದರಿಸುತ್ತಾರೆ

English Translation.

Augmenters of rain, they drive with golden wheels the clouds asunder, as elephants (in a herd break down the trees in their way) they are honoured with sacrifices, visitants of the hall of offering, spontaneous assailers of (their foes) subverters of what are stable, immovable themselves, and wearers of shining weapons

॥ ವಿಶೇಷ ವಿಷಯಗಳು ॥

ಹಿರಣ್ಯಯೇಭಿಃ--**ಸುವರ್ಣಮಯೈಃ, ಯದ್ವಾ ಹಿತರಮಣೀಯೈಃ** ಸುವರ್ಣಮಯವಾದ, ಅಥವಾ ಸುಖಕರವಾಗಿಯೂ ಮನೋಹರವಾಗಿಯೂ ಇರುವ ರಥದ ಚಕ್ರಗಳಿಂದ.

ಅಪಥ್ಯಃ ನ - ಯಥಾ ಪಥಿ ಗಚ್ಛೇ ರಥೋ ಮಾರ್ಗೇ ಆಸ್ಥಿತಂ ತೃಣವೃಕ್ಷಾದಿಕಂ ಚೂರ್ಣೀಕೃತ್ಯೋರ್ಧ್ವಂ ನಯತಿ ಯದ್ವಾ ಯಥಾ ಸಂಯುಕ್ತಾ ಗಜಾ ಮಾರ್ಗಸ್ಥಿತಂ ವೃಕ್ಷಾದಿಕಂ ಭಗ್ನಂ ಕುರ್ವನ್ತಿ, ತಥಾ ಪರ್ವತಾ ಉಜ್ಜಿಘ್ನಂತೇ। ದಾರಿಕಾರನು ಆಚರಿಸುವ ಹಾಗೆ ಎಂದು ಅರ್ಥವು। ದಾರಿಯಲ್ಲಿ ಹೋಗುತ್ತಿರುವ ರಥವು ದಾರಿಯಲ್ಲಿ ಅಡ್ಡಲಾಗಿರುವ ಮರವೇ ಮೊದಲಾದವುಗಳನ್ನು ಮುರಿದು ತುಂಡು ತುಂಡು ಮಾಡಿ ಎಸೆಯುವಂತೆಯೂ, ಹಿಂಡು ಹಿಂಡಾಗಿರುವ ಆನೆಗಳು ದಾರಿಯಲ್ಲಿ ಇರುವ ಮರವೇ ಮೊದಲಾದವುಗಳನ್ನು ಮುರಿಯುವಂತೆಯೂ ಮರುದ್ವೇವತೆಗಳು ಮೇಘಗಳನ್ನೂ ಬೆಟ್ಟುಗಳನ್ನೂ ಕೆತ್ತು ಮೇಲಕ್ಕೆ ಎಸೆಯುವರು

ಪಯೋವೃಧಃ -ಪಯಸೋ ವೃಷ್ಣ್ಯೋದಕಸ್ಯ ವರ್ಧಯಿತಾರಃ ಯದ್ವಾ ಪೃಶ್ನೇಃಪಯಸಾ ವರ್ಧಮಾನಾಃ। ಮಳೆಯ ನೀರನ್ನು ಹೆಚ್ಚು ಮಾಡುವವರು ಅಥವಾ ಪೃಶ್ನಿಯ ಹಾಲಿನಿಂದ ವೃದ್ಧಿಯನ್ನು ಹೊಂದಿ ಇರುವವರು ಮರುದ್ವೇವತೆಗಳು **ಪೃಶ್ನಿಯೈ ವೈ ಪಯಸೋ ಮರುತೋ ಜಾತಾಃ** ಎಂಬ ತೈತ್ತಿರೀಯ (ಸಂ ೨-೩-೧೪ ೪) ಎಂಬ ವಾಕ್ಯದಿಂದ ಈ ಪೃಶ್ನಿಯ ಹಾಲಿನಿಂದ ಮರುದ್ವೇವತೆಗಳು ವೃದ್ಧಿಯನ್ನು ಹೊಂದಿದ ರೆಂಬ ವಿಷಯವು ಸ್ಪಷ್ಟವಾಗುತ್ತದೆ

ಮಖಾಃ- ಮಖ ಇತಿ ಯಜ್ಞನಾಮ ತದ್ವಂತಃ ಮಖ ಎಂಬ ಶಬ್ದವು ಯಜ್ಞವೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು ಯಜ್ಞಗಳನ್ನು ಆಚರಿಸುವವರು ಮರುದ್ವೇವತೆಗಳೆಂದು ಅಭಿಪ್ರಾಯವು ಯಾಸ್ಕರು ಮಖಶಬ್ದವನ್ನು ಯಜ್ಞಃ, ವೇನಃ (ನಿ ೩-೧೯) ಎಂಬ ನಿರುಕ್ತದಲ್ಲಿ ಯಜ್ಞನಾಮಗಳ ಮಧ್ಯದಲ್ಲಿ ಸಾರಮಾಡಿರುವರು

ಧ್ರುವಚ್ಯುತಃ--ಧ್ರುವಾಣಾಂ ನಿಶ್ಚಲಾನಾಂ ಪರ್ವತಾದೀನಾಮಪಿ ಚ್ಯಾವಯಿತಾರಃ। ಸ್ಥಿರವಾಗಿ ಚಲಿಸದೆ ಇರುವ ಪರ್ವತವೇ ಮೊದಲಾದವುಗಳನ್ನೂ ಅವುಗಳ ನಿಯತವಾದ ಪ್ರದೇಶದಿಂದ ಕದಲಿಸುವವರು

ದುಧ್ರಕೃತಃ--ಅತ್ರ ದುಃಶಬ್ದೇನ ದುಷ್ಪಾಃ ಲಕ್ಷ್ಯಂತೇ। ದುಷ್ಪಾ ಧಾರಯತೀತಿ ದುಧ್ರಃ ದುಷ್ಪಾನಾಂ ಧಾರಯಿತಾರಮಾತ್ಮಾನಂ ಕುರ್ವಾಣಾಃ। ಯದ್ವಾ ದುರ್ಧರಮನ್ಯೈರ್ದುರ್ತುಮಶಕ್ಯಮಾತ್ಮಾನಂ ಕುರ್ವಾಣಾಃ। ದುಃ ಎಂಬ ಶಬ್ದದಿಂದ ದುಷ್ಟರು ಎಂಬ ಅರ್ಥವನ್ನು ಹೇಳಬೇಕು. ದುಷ್ಟರನ್ನು ಹತೋಟಿಯ ಲ್ಲಿ ಇರಿಸಿರುವವನು ದುಧ್ರಸೆನಿಸಿರುವನು ದುಷ್ಟರನ್ನು ತಮ್ಮ ಸಾವರ್ಥ್ಯದಿಂದ ಅಧೀನದಲ್ಲಿ ಇರುವ ಹಾಗೆ ಮಾಡಿರುವರು ಈ ಮರುದ್ವೇವತೆಗಳು ಅಥವಾ ಈ ಮರುದ್ವೇವತೆಗಳು ಇತರರಿಂದ ಅಧೀನದಲ್ಲಿ ಇರುವಂತೆ ಮಾಡಲುಶಕ್ತರು ಎಂದು ಅರ್ಥವು

ಸ್ವಂದಸ್ವಾಮಿಗಳು-- **ಹಿರಣ್ಮಯೇಭ್ಯಃ ಪವಿಭಿಃ ಪಯೋವೃಧಃ** ಸುವರ್ಣಮಯವಾದ ರಥದ ಚಕ್ರಧಾರೆಗಳಿಂದ ವೃಷ್ಟ್ಯುದಕ ಧಾರಗಳನ್ನು ಅಭಿವೃದ್ಧಿಮಾಡುವರು. **ಆಪಥ್ಯೋ ನ--ಆಸಧಯೋ ನಿಸಧಯೋ ಅನ್ತಸ್ಪಥಾ ಅನುಪಥಾಃ** (ಋ. ವೇ ೫-೫೨-೧೦) ಇತ್ಯ ಪ್ರಯೋಗದರ್ಶನಾತ್ ಆಸಧಯಃ ಮರುತಃ ಉಚ್ಯಂತೇ। ತೇಷಾಂ ಸ್ವಭೂತಾ ಆಸಧ್ಯಃ। ಅಥವಾ ಅವಿದ್ಯಮಾನಾ ನಿಯತಃ ಪಂಥಾಃ ಯಸ್ಮಿನ್ ತತ್ ಅಂತರಿಕ್ಷಂ। ತತ್ರ ಭವಾಃ ಆಪಥ್ಯಃ। ಆಪಥಯ ಶಬ್ದವು ಉಕ್ತವಾಗಿರುವ ಪ್ರಯೋಗದಿಂದ ಮರುದ್ವೇವತೆಗಳನ್ನು ಬೋಧಿಸುವುದು ಈ ಮರುದ್ವೇವತೆಗಳು ಅಪಥಯಃ ನಿಯತವಾದ ಮಾರ್ಗವನ್ನು ಹೊಂದಿರುವವರಲ್ಲವು ನಿಸಥಯಃ ಬಹಳ

ಮಾರ್ಗಗಳಲ್ಲಿ ಸಂಚರಿಸುತ್ತಿರುವವರು ಅನ್ತಸ್ಪಥಾಃ—ಒಳದಾರಿ ಎಂದರೆ ಸಣ್ಣ ಸಣ್ಣ ದಾರಿಯಲ್ಲಿಯೂ ಸಂಚರಿಸುವವರು. ಮತ್ತು ಅನುಪಥಾಃ ಒಂದು ಮಾರ್ಗವನ್ನು ಅನುಸರಿಸಿರುವ ಇನ್ನೊಂದು ದಾರಿಯಲ್ಲಿಯೂ ಸಂಚರಿಸುವವರು ಆದ್ದರಿಂದ ಇವರನ್ನು ಅಪಥಯಃ ಎಂಬ ಶಬ್ದದಿಂದ ಕರೆಯುವರು ಇವರ ಸಮೂಹವು ಅಪಥ್ಯವೆನಿಸಿರುವುದು. ಅಥವಾ ನಿಯತವಾದ ಮಾರ್ಗವು ಇಲ್ಲದೆ ಸರ್ವತಃ ಸಂಚರಿಸುವುದಕ್ಕೆ ಅನುಕೂಲವಾಗಿರುವುದು ಅಂತರಿಕ್ಷವು ಈ ಅಂತರಿಕ್ಷದಲ್ಲಿ ಉತ್ಪನ್ನರಾಗುವರು, ಪ್ರಕಟವಾಗಿ ತೋರುವರು, ಮರುದ್ದೇವತೆಗಳು ಅಪಥ್ಯರೆನಿಸುವರು ಎಂದು ಅರ್ಥವನ್ನು ವಿವರಿಸಿರುವರು. ಮತ್ತು ಪರ್ವತಾ ಉಜ್ಜಿಘ್ನಂತಃ ಪರ್ವತಾ ಮೇಘನಾನ್ಯೈತತ್ ಮೇಘಾನಾಮುಪರಿ ಚಂಕ್ರಮ್ಯಮಾಣಾಃ ರಥಚಕ್ರಧಾರಾಭಿಃ ಮೇಘಾ ಭಿಂದಂತಿ। ಶ್ಯಾವಾಶ್ಚೋಪಿ ವಕ್ಷ್ಯತಿ ಉತಪರ್ವ್ಯಾ ರಥಾನಾಮದ್ರಿಂ ಭಿಂದಂತ್ಯೋಜಸಾ (ಋ ವೇ ೫-೫೮-೯) ಇತಿ ಪರ್ವತಾ ಎಂಬುವುದು ಮೇಘನಾಮವಾಗಿರುವುದು ಮರುದ್ದೇವತೆಗಳು ಮೇಘಗಳ ಮೇಲುಗಡೆಯ ಲ್ಲಿ ಸಂಚರಿಸುತ್ತಾ ತಮ್ಮ ರಥದ ಚಕ್ರಧಾರೆಗಳಿಂದ ಮೇಘಗಳನ್ನು ಭೇದಿಸುವರು ಋಗ್ವೇದಗತವಾದ ಮಂತ್ರದಿಂದ ಶ್ಯಾವಾಶ್ವನೆಂಬ ಋಷಿಯೂ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುವನು. ಈ ಮರುದ್ದೇವತೆಗಳು ರಥಾನಾಂ ಸಘ್ಯಾ ರಥಚಕ್ರಧಾರೆಗಳಿಂದ ಅದ್ರಿಂ ಓಜಸಾ ಭಿಂದಂತಿ ಮೇಘಗಳನ್ನು ತಮ್ಮ ಬಲದಿಂದ ಭೇದಿಸುವರು ಎಂದು ಅರ್ಥಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ಹಿರಣ್ಯಯೇಭಿಃ—ತೃತೀಯಾ ಬಹುವಚನದಲ್ಲಿ **ಬಹುಲಂ ಛಂದಸಿ** (ಪಾ ಸೂ ೭-೧-೧೦) ಎಂಬುದರಿಂದ ಭಿಸಿಗೆ ಐಸಾದೇಶ ಬರುವುದಿಲ್ಲ **ಬಹುವಚನೇ ಝಲ್ಯೇತ್** ಎಂಬುದರಿಂದ ಏತ್ವ ಬರುತ್ತದೆ

ಉಜ್ಜಿಘ್ನಂತೇ—ಹನ ಹಿಂಸಾಗತ್ಯೋಃ ಧಾತು **ವ್ಯತ್ಯಯೋ ಬಹುಲಂ** ಎಂಬುದರಿಂದ ಲಟ್ಸನಲ್ಲಿ ಆತ್ಮನೇಪದ ಪ್ರತ್ಯಯ ಬರುತ್ತದೆ **ಝೋಂತಃ** ಎಂಬುದರಿಂದ ಅದಕ್ಕೆ ಅಂತಾದೇಶ **ಬಹುಲಂ ಛಂದಸಿ** (ಪಾ. ಸೂ ೨-೪-೭೬) ಎಂಬುದರಿಂದ ಶಪ್ಪಿಗೆ ಶ್ಲು ಆದೇಶ. **ಶ್ಲೌ** ಸೂತ್ರದಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ **ಕುಹೋಶ್ಚುಃ** ಎಂಬುದರಿಂದ ಚುತ್ವ **ಅಭ್ಯಾಸೇ ಚರ್ಚ** ಸೂತ್ರದಿಂದ ಅದಕ್ಕೆ ಜಸ್ತ್ವ ಜಹನ್ ಅಂತೇ ಎಂದಿರುವಾಗ ಪ್ರತ್ಯಯವು ಅಪಿತ್ತಾದುದರಿಂದ **ಸಾರ್ವಧಾತುಕಮಪಿತ್** ಸೂತ್ರದಿಂದ ಪಿತ್ತಾಗುವುದರಿಂದ **ಗಮಹನಜನ**—(ಪಾ ಸೂ ೬-೪-೯೮) ಎಂಬುದರಿಂದ ಧಾತುವಿನ ಉಪಧೆಗೆ ಲೋಪ ಬರುತ್ತದೆ **ಹೋಹಂತೇರ್ಞ್ಣಿನ್ನೇಷು** ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಧಾತುವಿನ ಹಕಾರಕ್ಕೆ ನಕಾರ ಕುತ್ವದಿಂದ ಘಕಾರಾದೇಶ. **ಬಹುಲಂ ಛಂದಸಿ** (ಪಾ ಸೂ ೭-೪-೭೮) ಎಂಬುದರಿಂದ ಅಭ್ಯಾಸದ ಅಕಾರಕ್ಕೆ ಇತ್ವ ಜಿಘ್ನಂತೇ ಎಂದು ರೂಪನಾಗುತ್ತದೆ ಅಚ್ಚಿಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಪಥ್ಯ ಪಥಿ ಭವಃ ಸಧ್ರ್ಯ **ಭವೇ ಛಂದಸಿ** (ಪಾ ಸೂ ೪-೪-೧೧೦) ಎಂಬುದರಿಂದ ಯತ್ ಪ್ರತ್ಯಯ ಯಾದಿಪ್ರತ್ಯಯಾದುದರಿಂದ **ಯಚಿ ಭಮ್** ಎಂಬುದರಿಂದ ಪೂರ್ವಕ್ಕೆ ಭಸಂಜ್ಞೆ ಇರುತ್ತದೆ ಆದುದರಿಂದ **ನಸ್ತದ್ಧಿತೇ** (ಪಾ. ಸೂ ೬-೪-೧೪೪) ಎಂಬುದರಿಂದ ನಾಂತವಾದ ಪಥಿನ್ ಶಬ್ದದ ಟಿಗೆ ಲೋಪ ಬರುತ್ತದೆ **ಯಸ್ಕೋಽನಾವಃ** ಎಂಬುದು ಚಾರದೆ ನ್ಯತ್ಯಯದಿಂದ ಅಂತಸ್ವರಿತವು ಬರುತ್ತದೆ. ಅಧನಾ ಪಂಥಾ ಅಸ್ಯ ಅಸ್ತಿ ಎಂಬ

ಮತ್ವರ್ಥದಲ್ಲಿ **ಛಂದಸೀ ವನಿಷಾ** (ಪಾ. ಸೂ. ೫-೨-೧೦೯-೨) ಎಂಬುದರಿಂದ ಈಕಾರ ಬರುತ್ತದೆ. ಟಿಲೋಪ ಬಂದರೆ ಪಥೀ ಎಂದಾಗುತ್ತದೆ. ಪ್ರತ್ಯಯ ಸ್ವರದಿಂದ ಆಂತೋದಾತ್ತವಾದಾಗ ಜಸ್ಸಿನಲ್ಲಿ ಯಣಾದೇಶ ಬರುತ್ತದೆ ಆಗ **ಉದಾತ್ತ ಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** ಎಂಬುದರಿಂದ ವಿಭಕ್ತಿಗೆ ಸ್ವರಿತ ಸ್ವರ ಬರುತ್ತದೆ

ಅಯಾಸಃ—ಅಯ ಪಯ ಗತೌ ಧಾತು. ಅಯಂತೇ ಇತಿ ಅಯಾಃ ಸಚಾದಿಯಲ್ಲಿ ಸೇರಿರುವುದರಿಂದ **ನಂದಿಗ್ರಹ ಪಚಾದಿಭ್ಯೋ**—(ಪಾ. ಸೂ ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ. ಆಯ ಎಂದು ರೂಪವಾಗುತ್ತದೆ. ಪ್ರಥಮಾ ಬಹುವಚನ ಜಸ್ ಪರದಲ್ಲಿರುವಾಗ **ಆಜ್ಜಸೇರಸುಕ್**—(ಪಾ. ಸೂ. ೭-೧-೫೦) ಎಂಬುದರಿಂದ ಜಸಿಗೆ ಅಸುಕಾಗಮ ಬರುತ್ತದೆ ಅಂತ್ಯ ಸಕಾರಕ್ಕೆ ರುತ್ವ ವಿಸರ್ಗ ಬಂದರೆ ಅಯಾಸಃ ಎಂದು ರೂಪವಾಗುತ್ತದೆ.

ಧ್ರುವ ಚ್ಯುತಃ—ಧ್ರುವಾಣಾಂ ಚ್ಯಾವಯಿತಾರಃ ಧ್ರುವಚ್ಯುತಃ. ಚ್ಯುತಿರ್ ಕ್ಷರಣೇ ಣಿಜಂತದ ಮೇಲೆ ಕ್ವಿಪ್ ಪ್ರತ್ಯಯ. ಪ್ರಥಮಾ ಬಹುವಚನಾಂತವಾದ ರೂಪ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ

ದುಧ್ರಕೃತಃ—ಇಲ್ಲಿ ದುಃ ಶಬ್ದದಿಂದ ದುಷ್ಕರು ಎಂದು ಲಕ್ಷಣಾವೃತ್ತಿಯಿಂದ ಸ್ವೀಕರಿಸಬೇಕು ದುಷ್ಕಾನ್ ಧಾರಯತಿ ದುಧ್ರಃ. ಧೃಞ್ ಧಾರಣೇ ಧಾತು ಮೂಲವಿಭುಜಾದಿಯಲ್ಲಿ ಸೇರಿರುವುದರಿಂದ **ಕ ಪ್ರಕರಣೇ ಮೂಲವಿಭುಜಾದಿಭ್ಯ ಉಪಸಂಖ್ಯಾನಮ್** (ಪಾ ಸೂ ೩-೨-೫-೨) ಎಂಬುದರಿಂದ ಕಪ್ರತ್ಯಯ. ಕಿತ್ತಾದುದರಿಂದ ಗುಣನಿಷೇಧ ಯಣಾದೇಶದಿಂದ ಧ್ರ ಎಂದು ರೂಪವಾಗುತ್ತದೆ ಅಥವಾ **ಈಷದ್ದುಃಸುಷು**—(ಪಾ ಸೂ ೩-೩-೧೨೬) ಎಂಬುದರಿಂದ ದುಃಶಬ್ದವು ಉಪಸದವಾಗಿರುವಾಗ ಕರ್ಮಣಿಯಲ್ಲಿ ಖಲ್ ಪ್ರತ್ಯಯ ಆಗ ಧಾತುವಿಗೆ ಗುಣಾಭಾವವನ್ನು ಛಾಂದಸವೆಂದು ಹೇಳಬೇಕು. ದಧ್ರಂ ಕುರ್ವಂತಿ ಇತಿ ದಧ್ರಕೃತಃ. ಡುಕೃಞ್ ಕರಣೇ ಧಾತು **ಕ್ವಿಪ್ ಚ** ಎಂಬುದರಿಂದ ಕ್ವಿಪ್ ಪ್ರತ್ಯಯ. **ಹ್ರಸ್ವಸ್ಯ ಪಿತಿ ಕೃತಿತುಕ್** ಎಂಬುದರಿಂದ ಕೃಧಾತುವಿನ ಋಕಾರಕ್ಕೆ ತುಕಾಗಮ ದುಧ್ರಕೃತ್ ಶಬ್ದವಾಗುತ್ತದೆ. ಬಹುವಚನಾಂತರೂಪ. ದುರಿನ ರೇಫಕ್ಕೆ ಛಾಂದಸವಾಗಿ ಲೋಪ ಹೇಳಬೇಕು **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿ ಸ್ವರದಿಂದ ಕಕಾರದ ಮೇಲಿರುವ ಯಕಾರವು ಉದಾತ್ತವಾಗುತ್ತದೆ ॥ ೧೧ ॥

॥ ಸಂಹಿತಾಪಾಠಃ ॥

ಘೃಷ್ವಿಂ ಪಾವಕಂ ವನಿನಂ ವಿಚರ್ಷಣಿಂ ರುದ್ರಸ್ಯ ಸೂನುಂ
ಹವಸಾ ಗೃಣೀಮಸಿ ।

रजस्तुरं तवसं मारुतं गणमृजीषिणं वृषणं सश्चत श्रियेऽ ॥ ८७ ॥

॥ प्रथमा ॥

घृषुं । पावकं । वनिनं । विचर्षणिं । रुद्रस्य । सूनुं । हवसा गृणीमसि ।

रजःतुरं । तवसं । मारुतं । गणं । ऋजीषिणं । वृषणं । सश्चत । श्रियेऽ ॥ ८७ ॥

॥ सायणभाष्यं ॥

घृषुं शत्रूणां बलस्य घर्षकं विनाशयितारं पावकं सर्वेषां शोधकं वनिनं । वनमित्युदकनाम । उदकवंतं । वृष्टिप्रदमित्यर्थः । विचर्षणिं विशेषेण सर्वस्य द्रष्टारं रुद्रस्य महादेवस्य सूनुं पुत्रभूतं । एवंविधं मरुतां समूहं हवसाह्वानसाधनेन स्तोत्रेण गृणीमसि । शब्दयामः । स्तुम इत्यर्थः । हे ऋत्विग्यजमानाः यूयमपि श्रिय ऐश्वर्यायं धनार्थं मारुतं गणं मरुतां संघं सश्चत । प्राप्नुत । कीदृशं । रजस्तुरं पार्थिवस्य पांसोरुत्प्लावयितारं । प्रेरकमित्यर्थः । तवसं प्रवृद्धं ऋजीषिणं । तृतीयसवने हि मरुतः स्तूयंतेऽ तत्र च ऋजीषमभिषुण्वंतीति ऋजीषसंबंधः श्रुतेः । अतस्तद्वंतं वृषणं कामानां वर्षितारं ॥ हवसा । ह्वेञोऽसिप्रत्ययेऽ बहुलं छंदसीति संप्रसारणं । गृणीमसि । गॄ शब्दे । इदंतोऽ मसिः । प्वादीनां ह्रस्व इति ह्रस्वत्वं । रजस्तुरं । रजांसि तुतोरित्तीति रजस्तूः । तुर त्वरणे । क्विप्चेति क्विप् । वृषणं । वा षपूर्वस्य निगम इति दीर्घाभावः । सश्चत । ग्लस्ज सज्ज गताविति त्रय सक्तिमप्येक इति धातुवृत्त्याऽवुक्तं । गतिकर्मसु च सश्चतीति पठितं । श्रियेऽ । सावेकाचेऽ इति विभक्तेरुदात्तत्वं ॥

॥ ಪ್ರತಿಪದಾರ್ಥ ॥

ಘೃಷುಂ—ಶತ್ರುಗಳ ಬಲವನ್ನು ನಾಶಮಾಡುವ । **ಪಾವಕಂ** (ಎಲ್ಲರನ್ನೂ ಎಲ್ಲವನ್ನೂ) ಶುದ್ಧಿಮಾಡುವ **ವನಿನಂ**—ನೀರು ಉಳ್ಳ । **ವಿಚರ್ಷಣಿಂ**—ಚೆನ್ನಾಗಿ (ಎಲ್ಲವನ್ನೂ) ನೋಡುವ । **ರುದ್ರಸ್ಯ**—ರುದ್ರನ । **ಸೂನುಂ**—ಪುತ್ರರಾದ (ಮರುದ್ಗಣವನ್ನು) । **ಹವಸಾ**—ಆಹ್ವಾನಸಾಧಕವಾದ ಸ್ತೋತ್ರದಿಂದ । **ಗೃಣೀಮಸಿ**—ಸ್ತುತಿಸೋಣ (ಎಲೈ ಋತ್ವಿಜರೇ ಮತ್ತು ಯಜಮಾನರೇ) । **ರಜಸ್ತುರಂ**—ಧೂಳನ್ನೆಬ್ಬಿಸುವ । **ತವಸಂ**—ಪ್ರವೃದ್ಧವಾದ (ವೇಗವುಳ್ಳ) । **ಋಜೀಷಿಣಂ**—ಋಜೀಷನೆಂಬ ಪಾತ್ರೆಯುಳ್ಳ । **ವೃಷಣಂ**—(ಇಷ್ಟಾರ್ಥಗಳನ್ನು) ವರ್ಷಿಸುವ । **ಮಾರುತಂ ಗಣಂ** -ಮರುದ್ಗಣವನ್ನು । **ಶ್ರಿಯೇ**—ಐಶ್ವರ್ಯಕ್ಕಾಗಿ । **ಸಶ್ಚಿತ**—ಆಶ್ರಯಿಸಿ (ಸ್ತುತಿಸಿ)

॥ ಭಾವಾರ್ಥ ॥

ಶತ್ರುನಾಶಕರೂ, ಎಲ್ಲರನ್ನೂ ಎಲ್ಲ ಪದಾರ್ಥಗಳನ್ನೂ ಶುದ್ಧಿಮಾಡುವವರೂ ವೃಷ್ಟ್ಯುದಕವುಳ್ಳವರೂ, ಸರ್ವ ದೃಷ್ಟ್ಯಾಗಳೂ, ರುದ್ರನ ಪುತ್ರರೂ, ಆದ ಮರುದ್ದೇವತೆಗಳನ್ನು ಸ್ತುತಿಸುತ್ತೇವೆ.ಎಲೈ ಋತ್ವಿಜರೇ ಮತ್ತು ಯಜಮಾನನೇ, ನೀವೂ ಕೂಡ ಧೂಳನ್ನೆಬ್ಬಿಸುವ, ವೇಗವುಳ್ಳ, ಋಜೀಷನೆಂಬ ಪಾತ್ರೆಯಿಂದ ಹವಿಸ್ಸನ್ನು ಸ್ವೀಕರಿಸುವ ಇಷ್ಟಾರ್ಥಪ್ರದರಾದ ಮರುದ್ದೇವತೆಗಳನ್ನು ಐಶ್ವರ್ಯಲಾಭಕ್ಕಾಗಿ ಸ್ತುತಿಸಿ

English Translation

We Invoke with praise the foe destroying, all-purifying, water-shelding, all-surveying band of Maruts, the offspring of Rudra, priests, to obtain prosperity, have recourse to the dust-raising and powerful band of Maruts, receiving libations from sacred vessels, and showering down (benefits)

॥ ನಿರ್ವಚನನಿರುಕ್ತಗಳು ॥

ಘೃಷುಂ ಶತ್ರೂಣಾಂ ಬಲಸ್ಯ ವರ್ಧಕಂ ವಿನಾಶಯಿತಾರಂ ಶತ್ರುಗಳ ಶಕ್ತಿಯನ್ನು ನಾಶಮಾಡುವವರು

ರಜಸ್ತುರಂ—ಪಾರ್ಥಿವಸ್ಯ ಪಾಂಸೋಸ್ತ್ವರಯಿತಾರಂ ಪ್ರೇರಕಂ ಭೂಮಿಯ ಧೂಳನ್ನು ಎಬ್ಬಿಸುವವರು.

ಋಜೀಷಿಣಂ—**ತೃತೀಯಸವನೇ ಹಿ ಮರುತಃ ಸ್ತೂಯಂತೇ ತತ್ರ ಚ ಋಜೀಷಮಭಿಷುಣ್ವಂತಿ ಇತಿ ಋಜೀಷಸಂಬಂಧಃ ಶ್ರುತಃ** । **ಅತಸ್ತದ್ವಂತಂ** । ಯಜ್ಞವು ನಡೆಯುತ್ತಿರುವಾಗ ಸಾಯಂ ಸವನಕಾಲವು

ಸೂರನೆಯ ಸವನವೆನಿಸಿಕೊಂಡಿರುವುದು ಇದು ಸೋಮಾಭಿಷವ ಕರ್ಮದ ಕಾಲವು. ಈ ಕಾಲವು ಪ್ರಾಪ್ತವಾದಾಗ ಹೋತೃವು ತನಗೆ ಸಂಬಂಧಪಟ್ಟ ಋತ್ವಿಕ್ಕುಗಳೊಡನೆ ಮರುದ್ದೇವತೆಗಳನ್ನು ಆಯಾಯ ಮಂತ್ರಗಳಿಂದ ಸ್ತೋತ್ರಮಾಡುವನು. ಆಗ ಅಗ್ನಿಯಲ್ಲಿ ಹೋಮ ಮಾಡುವುದಕ್ಕಾಗಿ ಸೋಮಲತೆಯನ್ನು ಹಿಂಡಿ ರಸವನ್ನು ತೆಗೆಯುವರು ಆದ್ದರಿಂದ ಈ ಸೋಮರಸದ ಸಂಬಂಧವು ಮರುತ್ತಗಳಿಗೆ ಉಂಟಾಗುವುದು. ಇದರಿಂದ ತದ್ವಂತಂ ಸೋಮ ಸಂಬಂಧವುಳ್ಳವರು ಮರುದ್ದೇವತೆಗಳು ಎಂದು ಆರ್ಥವು.

ವೃಷಣಂ ಮಾರುತಂ ಗಣಂ ಶ್ರಿಯೇ ಸಕ್ಷತ—ಕಾಮಾನಾಂ ವರ್ಷಯಿತಾರಂ ಮರುತಂ ಸಮೂಹಂ ಐಶ್ವರ್ಯಾಯ ಪ್ರಾಪ್ನುತ । ಎಲೈ ಯಜ್ಞಮಾಡುವ ಯಜಮಾನರುಗಳೇ, ನೀವು ನಿಮ್ಮ ಅಭಿಲಾಷೆಗಳೆಲ್ಲವನ್ನೂ ಸಾಧಿಸಿಕೊಡುವ ಮರುದ್ದೇವತೆಗಳ ಸಂಘವನ್ನು ಐಶ್ವರ್ಯವನ್ನು ಹೊಂದುವುದಕ್ಕಾಗಿ ಆಶ್ರಯಿಸಿರಿ

॥ ವ್ಯಾಕರಣಪ್ರಕ್ರಿಯಾ ॥

ವನಿನಮ್ —ವನಂ (ಜಲಂ) ಅಸ್ಯ ಅಸ್ತಿ ಎಂಬರ್ಥದಲ್ಲಿ **ಅತ ಇನಿಠನೌ** ಎಂಬುದರಿಂದ ಇನಿ ಪ್ರತ್ಯಯ. ದ್ವಿತೀಯಾ ಏಕವಚನದಲ್ಲಿ ವನಿನಮ್ ಎಂದು ರೂಪವಾಗುತ್ತದೆ ಪ್ರತ್ಯಯಸ್ವರದಿಂದ ಇಕಾರ ಉದಾತ್ತವಾಗುತ್ತದೆ.

ಹವಸಾ ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು ಇವಕ್ಕೆ ಉಣಾದಿಸಿದ್ಧವಾದ ಅಸಿ ಪ್ರತ್ಯಯ ಪರದಲ್ಲಿರುವಾಗ **ಬಹುಲಂ ಛಂದಸಿ** ಎಂಬುದರಿಂದ ಸಂಪ್ರಸಾರಣ ಬರುತ್ತದೆ **ಸಂಪ್ರಸಾರಣಾಚ್ಚ** ಎಂಬುದರಿಂದ ಏಕಾರಕ್ಕೆ ಪೂರ್ವರೂಪ. ಹ್ವಃ+ಅಸ್ ಎಂದಿರುವಾಗ ಆರ್ಧಧಾತುಕ ನಿಬಂಧನವಾಗಿ ಧಾತುವಿಗೆ ಗುಣ ಆವಾದೇಶ ಹವಸ್ ಶಬ್ದವಾಗುತ್ತದೆ ತೃತೀಯಾ ಏಕವಚನದಲ್ಲಿ ಹವಸಾ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಹವಸಾ ಎಂಬುದು ಮಧ್ಯೋದಾತ್ತವಾಗುತ್ತದೆ

ಗೃಣೇಮಸಿ—ಗೃ ಶಬ್ದೇ ಧಾತು ಕ್ರಾದಿ. ಲಟ್ ಮಧ್ಯಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ **ಪ್ಸಾದೀನಾಂ ಹ್ರಸ್ವಃ** ಎಂಬುದರಿಂದ ಪ್ಸಾದಿಯಲ್ಲಿ ಇದು ಸೇರಿರುವುದರಿಂದ ಹ್ರಸ್ವ ಬರುತ್ತದೆ ಪ್ರತ್ಯಯವು ಅಪಿತ್ತಾದುದರಿಂದ ಙಿತ್ತಾಗುತ್ತದೆ ಆದುದರಿಂದ **ಈಹಲ್ಯಘೋಃ** (ಪಾ. ಸೂ ೬-೪-೧೧೩) ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಈತ್ವ. ಋಕಾರದ ಪರದಲ್ಲಿರುವುದರಿಂದ ನಕಾರಕ್ಕೆ ಣತ್ವ. **ಇದಂತೋಮಸಿ** (ಪಾ ಸೂ. ೭-೧-೪೬) ಎಂಬುದರಿಂದ ಪ್ರತ್ಯಯಕ್ಕೆ ಇಕಾಗಮ ಗೃಣೇಮಸಿ ಎಂದು ರೂಪವಾಗುತ್ತದೆ **ತಿಜ್ಞಿತಿಜಿಃ** ಎಂಬುದರಿಂದ ನಿಘಾತಸ್ವರ ಬರುತ್ತದೆ

ರಜಸ್ತುರಮ್—ರಜಾಂಸಿ ತುರೋತಿ ಇತಿ ರಜಸ್ತೂಃ ತುರ ತ್ವರಣೇ ಧಾತು. **ಕ್ವಿಪ್ ಚ** (ಪಾ. ಸೂ ೩-೨-೭೬) ಎಂಬುದರಿಂದ ಇದಕ್ಕೆ ಕ್ವಿಪ್ ರಜಸ್ತುರ್ ಎಂದು ರೇಫಾಂತ ಶಬ್ದವಾಗುತ್ತದೆ. ದ್ವಿತೀಯಾ ಏಕವಚನದಲ್ಲಿ ರಜಸ್ತುರಂ ಎಂದು ರೂಪವಾಗುತ್ತದೆ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಮಾರುತಮ್—ಮರುತಾಂ ಸಮುದಾಯಃ ಮಾರುತಮ್ **ತಸ್ಯ ಸಮೂಹಃ** ಎಂಬುದರಿಂದ ಅಣ್ ಪ್ರತ್ಯಯ. **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ.

ವೃಷಣಮ್- ವೃಷನ್ ಶಬ್ದದ ಮೇಲೆ ದ್ವಿತೀಯಾ ಏಕವಚನವಿರುವಾಗ **ವಾ ಷಪೂರ್ವಸ್ಯ ನಿಗಮೇ** (ಪಾ. ಸೂ ೬-೪-೯) ಎಂಬುದರಿಂದ ಉಪಧಾದೀರ್ಘ ಒರುವುದಿಲ್ಲ. **ಅಟ್ ಕುಪ್ವಾಙ್**—ಸೂತ್ರದಿಂದ ಣತ್ವ ಒರುತ್ತದೆ

ಸಶ್ಚತ—ಗ್ಲುಞ್ಚ್ವ ಷಸ್ಜ ಗತೌ ಧಾತು. ಓಗೆ ಧಾತುಪಾರವಿರುವಾಗ ಕೆಲವರು ಸಶ್ಚ ಎಂದೂ ಹೇಳುತ್ತಾರೆ ಎಂದು ಧಾತುವೃತ್ತಿಯಲ್ಲಿ ಹೇಳಿದೆ. ಗತ್ಯರ್ಥಕ ಧಾತುಗಳಲ್ಲಿ ಸಶ್ಚ ಎಂಬುದೂ ಪರಿತವಾಗಿದೆ ಲೋಟ್ ಮಧ್ಯಮ ಪುರುಷದ ಬಹುವಚನಕ್ಕೆ ಲಜ್ಸುದ್ಭವನಿರುವುದರಿಂದ **ತಸ್ಥಸ್ಥ**—ಸೂತ್ರದಿಂದ ತ ಎಂಬ ಆದೇಶ ಬರುತ್ತದೆ ಶಪ್ ವಿಕರಣ ಸಶ್ಚತ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ

ಶ್ರಿಯೇ—ಚತುರ್ಥೀ ಏಕವಚನದಲ್ಲಿ **ಆಚಿಶ್ನು ಧಾತುಭ್ರುವಾಂ**-ಸೂತ್ರದಿಂದ ಇಯಙಾದೇಶ **ಸಾವೇಕಾಚಸ್ತೃತೀಯಾದಿಃ** (ಪಾ ಸೂ ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ ॥ ೧೨ ॥

॥ ಸಂಹಿತಾಪಾಠಃ ॥

ಪ್ರ ನೂ ಸ ಮರ್ತಃ ಶವಸಾ ಜನಾಁ ಅತಿ ತ್ವಸ್ಪ್ಸ ವ ಊತೀ ಮರುತ್ವೋ ಯಮಾವತ ।
ಅರ್ವದ್ಭಿರ್ವಾಜಂ ಭರತೇ ಧನಾ ನೃಭಿರಾಪೃಚ್ಛ್ಯಂ ಕ್ರತುಮಾಁ ಕ್ಷೇತಿ ಪುಷ್ಯತಿ ॥ ೧೩ ॥

॥ ಪದಪಾಠಃ ॥

ಪ್ರ । ನು । ಸಃ । ಮರ್ತಃ । ಶವಸಾ । ಜನಾನ್ । ಅತಿ । ತಸ್ಥೌ । ವಃ । ಊತೀ ।
ಮರುತಃ । ಯಂ । ಆವತ ।
ಅರ್ವತ್ಽಭಿಃ । ವಾಜಂ । ಭರತೇ । ಧನಾ । ನೃಽಭಿಃ । ಆಽಪೃಚ್ಛ್ಯಂ । ಕ್ರತುಂ ।
ಆ । ಕ್ಷೇತಿ । ಪುಷ್ಯತಿ ॥ ೧೩ ॥

॥ ಸಾಯಣಭಾಷ್ಯಂ ॥

ಸ ಮರ್ತೋ ಮನುಷ್ಯಃ ಶವಸಾ ಬಲೇನ ಜನಾನ್ ಜಾತಾನನ್ಯಾನ್ಪುರುಷಾನತಿ ಅತೀತ್ಯ ನು ಕ್ಷಿಪ್ರಂ ತಸ್ಥೌ । ಪ್ರತಿಷ್ಠಿತೋ ಭವತಿ । ಹೇ ಮರುತೋ ವೋ ಯುಷ್ಮಾಕಮೂತೀ ಊತ್ಯಾ ರಕ್ಷಣೇನ ಯಂ ಪುರುಷಮಾವತ ಅರಕ್ಷತ । ಅಪಿ ಚ ಸ ಪುರುಷೋಽರ್ವದ್ಭಿರಶ್ವೈಃ ಸಾಧನಭೂತೈರ್ವಾಜಮನ್ನಂ ನೃಭಿಃ ಸ್ವಕೀಯೈರ್ಮನುಷ್ಯೈರ್ಧನಾ ಧನಾನಿ ಚ ಭರತೇ । ಸಂಪಾದಯತಿ । ತಥಾಪೃಚ್ಛ್ಯಮಾಪ್ರಷ್ಟವ್ಯಂ ಶೋಭನಂ ಕ್ರತುಮಗ್ನಿಷ್ಟೋಮಾದಿಕರ್ಮ ಕ್ಷೇತಿ । ಆಪ್ನೋತಿ । ಪುಷ್ಯತಿ । ಪ್ರಜಯಾ ಪಶುಭಿಃ ಪುಷ್ಟೋ ಭವತಿ ಚ ॥ ಊತೀ । ತೃತೀಯಾಯಾಃ ಪೂರ್ವಸವರ್ಣದೀರ್ಘತ್ವಂ । ನೃಭಿಃ । ನೃ ಚಾನ್ಯತರಸ್ಯಾಮಿತಿ ವಿಭಕ್ತ್ಯುದಾತ್ತತ್ವಪ್ರತಿಷೇಧಃ । ಆಪೃಚ್ಛ್ಯಂ । ಛಂದಸಿ ನಿಷ್ಪರ್ಕ್ಯೇತ್ಯಾದಾವಾಙ್ಪೂರ್ವಾತ್ಪ್ರಚ್ಛೇಃ ಕ್ಯಚ್ಪ್ರತ್ಯಯಾಂತೋ ನಿಪಾತ್ಯತೇ । ಗ್ರಹಿಜ್ಯಾದಿನಾ ಸಂಪ್ರಸಾರಣಂ । ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ಕೃದುತ್ತರಪದಪ್ರಕೃತಿಸ್ವರತ್ವಂ । ಕ್ಷೇತಿ । ಕ್ಷಿ ನಿವಾಸಗತ್ಯೋಃ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಪುಷ್ಯತಿ । ಪುಷ ಪುಷ್ಟೌ । ದಿವಾದಿತ್ವಾತ್ ಶ್ಯನ್ । ನಿತ್ತ್ವಾದಾದ್ಯುದಾತ್ತತ್ವಂ । ತಿಙಃ ಪರತ್ವಾನ್ನಿಘಾತಾಭಾವಃ ॥

॥ ಪ್ರತಿಪದಾರ್ಥ ॥

ಮರುತಃ—ಎಲೈ ಮರುದ್ದೇವತೆಗಳೇ । **ವಃ**—ನಿಮ್ಮ । **ಊತೀ**—ರಕ್ಷಣೆಯಿಂದ । **ಯಂ**—ಯಾವ (ಮನುಷ್ಯನನ್ನು) । **ಆವತ**—ರಕ್ಷಿಸಿದಿರೋ । **ಸಃ ಮರ್ತಃ**—ಆ ಮನುಷ್ಯನು । **ಶವಸಾ**—ಬಲದಿಂದ । **ಜನಾನ್**—(ಇತರ) ಮನುಷ್ಯರನ್ನು । **ಅತಿ**—ಮೀರಿ । **ನು**—ಶೀಘ್ರವಾಗಿ । **ತಸ್ಥೌ**—ಪ್ರತಿಷ್ಠಿತನಾಗುತ್ತಾನೆ । **ಅರ್ವದ್ಭಿಃ**—(ಸಾಧನಗಳಾದ) ಅಶ್ವಗಳಿಂದ । **ವಾಜಂ**—ಅನ್ನವನ್ನೂ । **ನೃಭಿಃ**—(ತನ್ನವರಾದ) ಪುರುಷರಿಂದ **ಧನಾ**—ದ್ರವ್ಯವನ್ನೂ । **ಭರತೇ**—ಸಂಪಾದಿಸುತ್ತಾನೆ । **ಆಪೃಚ್ಛ್ಯಂ**—ಕರ್ತವ್ಯವಾದ । **ಕ್ರತುಂ**—(ಅಗ್ನಿಷ್ಟೋಮಾದಿ) ಯಾಗಗಳನ್ನೂ । **ಆ ಕ್ಷೇತಿ**—ಮೊದಲುತ್ತಾನೆ (ಮಾಡುತ್ತಾನೆ) । **ಪುಷ್ಯತಿ**—ಪುಷ್ಟನಾಗುತ್ತಾನೆ.

॥ ಭಾವಾರ್ಥ ॥

ಎಲೈ ಮರುದ್ದೇವತೆಗಳೇ, ನಿಮ್ಮಿಂದ ರಕ್ಷಿಸಲ್ಪಟ್ಟ ಪುರುಷನು, ಬಲದಲ್ಲಿ ಇತರರನ್ನು ಮೀರಿಸುತ್ತಾನೆ. ಅಶ್ವಗಳ ಮೂಲಕ ಅನ್ನವನ್ನೂ, ತನ್ನ ಪುರುಷರ ಮೂಲಕ ಧನವನ್ನೂ, ಸಂಪಾದಿಸಿ ಪ್ರಪ್ಪನಾಗುತ್ತಾನೆ. ಕರ್ತವ್ಯವಾದ ಅಗ್ನಿಷ್ಟೋಮಾದಿಗಳನ್ನು ಮಾಡುತ್ತಾನೆ

English Translation

The man whom, Maruts, you defend with your protection, quickly surpasses all men in strength, with his horses, he acquires food, and with his men, riches, he performs the required worship, and he prospers

॥ ವಿಶೇಷವಿಷಯಗಳು ॥

ಸ ಮರ್ತಃ ನು ಜನಾನತಿ ಪ್ರತಸ್ಥೌ— ಸ ಮನುಷ್ಯಃ ಜಾಗರ್ತಾ ಅನ್ಯಾನ್ ಪುರುಷಾ ಕ್ಷಿಪ್ರಮತೀತ್ಯ ಪ್ರತಿಷ್ಠಿತೋ ಭವತಿ। ನು ಎಂಬುವ ಪದವು ಜಾಗ್ರತೆಯಾಗಿ ಎಂಬ ಅರ್ಥದಲ್ಲಿ (ನಿ ೩-೯) ಮಂಕ್ಷು ದ್ರವತಾ ಮೊದಲಾದ ಇಪ್ಪತ್ತಾರು ಕ್ಷಿಪ್ರ ಪದಗಳ ಮಧ್ಯದಲ್ಲಿ ಪಠಿತವಾಗಿರುವುದು ಮರುದ್ದೇವತೆಗಳ ರಕ್ಷಣೆಯನ್ನು ಅನುಭವಿಸುತ್ತಿರುವ ಮನುಷ್ಯನು ಜನ್ಮವನ್ನು ಹೊಂದಿರುವ, ತನಗಿಂತಲೂ ಬೇರೆಯಾಗಿ ಇರುವ ಇತರ ಮನುಷ್ಯರೆಲ್ಲರನ್ನೂ ಮೀರಿ ಇರುವ ಶ್ರೇಷ್ಠವಾದ ಸ್ಥಿತಿಯನ್ನು ಜಾಗ್ರತೆಯಾಗಿ ಹೊಂದುವನು

ಆಪೃಚ್ಛ್ಯಮ್ ಕ್ರತುಮ್—ಆಪೃಷ್ಟವ್ಯಂ ಶೋಭನಂ ಅಗ್ನಿಷ್ಟೋಮಾದಿಕರ್ಮ। ಯಾವನನ್ನೂ ಲಕ್ಷೀಕರಿಸದೇ ಮಂಗಳಕರವಾದ ಅಗ್ನಿಷ್ಟೋಮವೇ ಮೊದಲಾದ ಯಾಗರೂಪವಾದ ಕರ್ಮಗಳನ್ನು ಎಂದು ಅರ್ಥವು. ಸ್ಕಂದಸ್ವಾಮಿಗಳು **ಆಪೃಚ್ಛ್ಯಂ ಕ್ರತುಂ** ಎಂಬ ಪದಕ್ಕೆ **ಸರ್ವಾರ್ಥೇಷು ಸರ್ವಮನುಷ್ಯೈರಾಪ್ರಶ್ನಾರ್ಹಾಂ ಚ ಪ್ರಜ್ಞಾಂ।** ಎಲ್ಲಾ ವಿಷಯಗಳಲ್ಲಿಯೂ ಎಲ್ಲಾ ಮನುಷ್ಯರಿಂದಲೂ ಪ್ರಶ್ನೆಯನ್ನು ಮಾಡಿ ತಿಳಿಯದೆ ಇರುವಂತೆ ಇರುವ ಉತ್ತಮವಾದ ಜ್ಞಾನವನ್ನು ಅಥವಾ ಬುದ್ಧಿಶಕ್ತಿಯನ್ನು ಎಂದು ಅರ್ಥವನ್ನು ಹೇಳಿರುವರು

॥ ವ್ಯಾಕರಣಪ್ರಕ್ರಿಯಾ ॥

ತಸ್ಥೌ—ಷ್ಠಾ ಗತಿನಿವೃತ್ತೌ ಧಾತು **ಲಿಟ್ಟನ** ಣಲಿಗೆ **ಆತ ಔ ಣಲಃ** ಎಂಬುದರಿಂದ ಔಕಾರಾದೇಶ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಖಯ್ ವರ್ಣವಾದ ತಕಾರಕ್ಕೆ ಶೇಷ ವೃದ್ಧಿ ಬಂದರೆ ತಸ್ಥೌ ಎಂದು ರೂಪವಾಗುತ್ತದೆ ಪಾದಾದಿಯಲ್ಲಿರುವುದರಿಂದ ಸಿಘಾತಸ್ವರ ಬರುವುದಿಲ್ಲ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಊತೀ—ಊತಿ ಶಬ್ದದ ಮೇಲೆ ತೃತೀಯಾ ಏಕವಚನದ ಟಾ ಸರದಲ್ಲಿರುವಾಗ **ಸುಪಾಂ ಸುಲುಕ್**—ಸೂತ್ರದಿಂದ ಪೂರ್ವಸವರ್ಣದೀರ್ಘ **ಏಕಾದೇಶ ಉದಾತ್ತೇನೋದಾತ್ತಃ** ಎಂಬುದರಿಂದ ವಿಭಕ್ತಿಗೆ ಏಕಾದೇಶವಾಗಿ ಬಂದುದೂ ಉದಾತ್ತವಾಗುತ್ತದೆ

ಮರುತಃ—**ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ

ಆವತ– ಅವ ರಕ್ಷಣೇ ಧಾತು ಲಟ್ ಮಧ್ಯಮಪುರುಷದ ಬಹುವಚನಕ್ಕೆ **ತಸ್ಥಸ್ಥ**—ಸೂತ್ರದಿಂದ ತಾದೇಶ **ಕರ್ತರಿ ಶಪ್** ಎಂಬುದರಿಂದ ಶವ್ ವಿಕರಣ ಅಂಗಕ್ಕೆ ಆಡಾಗಮ. ಆವತ ಎಂದು ರೂಪವಾಗುತ್ತದೆ. ಯಮ್ ಎಂದು ಹಿಂದೆ ಇರುವುದರಿಂದ **ಯಮ್ಮೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದ ಆಡಾಗಮ ಉದಾತ್ತವಾದುದರಿಂದ ಅದ್ಯುದಾತ್ತವಾಗುತ್ತದೆ

ಆರ್ವದ್ಭಿಃ ಅರ್ವಣಸ್ತ್ರಸಾವನಞ್ಚ ಎಂಬುದರಿಂದ ತೃತೀಯಾ ಬಹುವಚನ ಸರದಲ್ಲಿರುವಾಗ ತಕಾರಾಂತಾದೇಶ ಬರುತ್ತದೆ ಕಸಿನ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ

ಧನಾ ಧನ ಶಬ್ದದ ಮೇಲೆ ಪ್ರಾಪ್ತವಾದ ಶಸಿಗೆ ಶ ಆದೇಶ ಒಂದಾಗ ಸುಮಾಗಮದೀರ್ಘಗಳು ಬರುತ್ತವೆ **ಶೇಚ್ಛಂದಸಿ ಬಹುಲಂ** ಎಂಬುದರಿಂದ ವಿಗ ಲೋಸ

ನೃಭಿಃ ಸಾನೇಕಾಚಸ್ತೃತೀಯಾದಿಃ ಎಂಬುದರಿಂದ ವಿಭಕ್ತಿಗೆ ಉದಾತ್ತತ್ವ ಪ್ರಾಪ್ತವಾದರ **ನೃಚಾನ್ಯತರಸ್ಯಾಮ್** (ಪಾ. ಸೂ ೬-೧-೧೭೪) ಎಂಬುದರಿಂದ ವಿಭಕ್ತ್ಯುದಾತ್ತತ್ವ ಪ್ರತಿಷೇಧ ಬರುತ್ತದೆ

ಆಪೃಚ್ಛ್ಯಮ್—ಪ್ರಚ್ಛ ಜ್ಞೀಪ್ಸಾಯಾಂ ಪಾಚಿ, ಧಾತು. **ಛಂದಸಿ ನಿಷ್ಪ್ರಕ್ರ್ಯ ದೇವಹೂಯ** (ಪಾ. ಸೂ ೩-೧-೧೩೫) ಎಂಬ ಸೂತ್ರದಲ್ಲಿ ಆಬ್ ಪೂರ್ವವಾಗಿರುವಾಗ ಈ ಧಾತುವಿಗೆ ಕ್ಯಪ್ ಪ್ರತ್ಯಯಾಂತವಾಗಿ ನಿಪಾತಿತವಾಗಿದ. **ಗ್ರಹಿಜ್ಯಾವಯಿವ್ಯಧಿ**—ಸೂತ್ರದಿಂದ ಧಾತುವಿಗೆ ಸಂಪ್ರಸಾರಣ. (ರೇಫಬರುತ್ತದೆ.) ಪ್ರತ್ಯಯವು ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ ಆಗ ಧಾತ.ವಿನ ಅಂತೋದಾತ್ತ ಸ್ವರದಿಂದ ಋಕಾರವು ಉದಾತ್ತವಾಗುತ್ತದೆ. ಆಬ್ ಎಂಬ ಗತಿಯೊಡನೆ ಸಮಾಸವಾದಾಗ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಕ್ಷೇತಿ—ಕ್ಷಿ ನಿವಾಸಗತ್ಯೋಃ ಧಾತು. ಲಟ್ ಪ್ರಥಮ ಪುರುಷ ಏಕವಚನ ಪರದಲ್ಲಿರುವಾಗ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಇಕಾರಕ್ಕೆ ಗುಣ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದ

ಪುಷ್ಯತಿ—ಪುಷ ಪುಷ್ಟೌ ಧಾತು ದಿವಾದಿ ಲಟ್ ಪ್ರಥಮ ಪುರುಷದಲ್ಲಿ ತಿಪ್ ಪ್ರತ್ಯಯ. **ದಿವಾದಿಭ್ಯಃ ಶ್ಯನ್** ಎಂಬುದರಿಂದ ಶ್ಯನ್ ವಿಕರಣ. **ಸಾರ್ವಧಾತುಕಮಪಿತ್** ಎಂಬ ಸೂತ್ರದಿಂದ ಆದು ಜಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. ಶ್ಯನ್ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ ಹಿಂದೆ ತಿಙಂತ ಶಬ್ದವಿರುವುದರಿಂದ ಅತಿಙಃ ಎಂದು ನಿಷೇಧಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ. ॥ ೧೩ ॥

॥ संहितापाठः ॥

चर्क्र्त्यं मरुतः पृत्सु दुष्परं द्युमंतं शुष्मं
मघवत्सु धत्तन ।
घनस्पृतमुक्थ्यं विश्वचर्षणिं तोकं पुष्येम तन-
यं शतं हिमाः ॥ ८९ ॥

॥ पदपाठः ॥

चर्क्र्त्यं । मरुतः । पृत्ऽसु । दुस्परं । द्युऽमंतं । शुष्मं ।
मघवत्ऽसु । धत्तन ।
घनऽस्पृतं । उक्थ्यं । विश्वऽचर्षणिं । तोकं । पुष्येम । तन-
यं । शतं । हिमाः ॥ ८९ ॥

॥ सायणभाष्यं ॥

हे मरुतो मघवत्सु हविर्लक्षणधनयुक्तेषु यजमानेषु पुत्रं धत्तन । स्थापयत । दत्तेति यावत् । कीदृशं पुत्रं । चर्क्र्त्यं कार्य्येषु पुनःपुनः पुरस्कर्तव्यं । सर्वकर्मकुशलमित्यर्थः । पृत्सु संग्राममेषु दुष्परं दुःखेन तरितव्यं । अजेयमित्यर्थः । द्युमंतं दीप्तिमंतं शुष्मं शत्रूणां शोषकं बलवंतं धनस्पृतं धनानां स्प्रष्टारं धनैः प्रीतं वा उक्थ्यं । उक्थं स्तोत्रं । तदर्हं । प्रशस्यमित्यर्थः । विश्वचर्षणिं विशेषेण द्रष्टारं सर्वज्ञं । एवंविधं तोकं पुत्रं तनयं पौत्रं च शतं हिमा हेमंतर्तूपलक्षितान् शतं संवत्सरान् जीवंतः संतः पुष्येम । पोषयेम । अत्र हिमशब्देन तदुक्ता हेमंतर्तवोऽभिधीयंते ।

ತಥಾಚ ಬ್ರಾಹ್ಮಣಮೇವಮಾಮ್ನಾಯತೇ । ಶತಂ ಹಿಮಾ ಇತ್ಯಾಹ ಶತಂ ತ್ವಾ ಹೇಮಂತಾನಿ ಧಿಷೀಯೇತಿ ವಾವೈತದಾಹೇತಿ ॥ ಚಿಕೃತ್ಯಂ । ಪ್ರಕೃತಿಗ್ರಹಣೇ ಯಜ್ಲುಗಂತಸ್ಯಾಪಿ ಗ್ರಹಣಂ । ಪರಿ ೯೩-೭ । ಇತಿ ನ್ಯಾಯೇನ ಕರೋತೇರ್ಯಜ್ಲುಗಂತಾದ್ವಿಭಾಷಾ ಕೃವೃಷೋಃ । ಪಾ. ೩-೧-೧೨೦ । ಇತಿ ಕ್ಯಪ್ । ತುಗಾಗಮಃ । ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ಪೃತ್ಸು । ಪದಾದಿಷು ಮಾಂಸ್ಪೃತ್ಸ್ನಾನಾಮುಪಸಂಖ್ಯಾನಂ । ಪಾ. ೬-೧-೬೩-೧ । ಇತಿ ಪೃತನಾಶಬ್ದಸ್ಯ ಪೃದಾದೇಶಃ । ದುಷ್ಪರಂ । ತ್ಯ ಪ್ಲವನತರಣಯೋಃ । ಈಷದ್ದುಃಸುಷ್ವಿತಿ ಖಲ್ । ಸುಷಾಮಾದೇರಾಕೃತಿಗಣತ್ವಾತ್ ಷತ್ವಂ । ಲಿತ್ಸ್ವರೇಣ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಧತ್ತನ । ತಸ್ತನಸ್ತನಥನಾಶ್ಚೇತಿ ತಸ್ಯ ತನಾದೇಶಃ ॥

॥ ಪ್ರತಿಪದಾರ್ಥ ॥

ಮರುತಃ ಮರುತರೇ । **ಮಘವತ್ಸು**—ಶ್ರವೀರೋಸನಾದ ಧನವುಳ್ಳವರಾದ ಯಜಮಾನರಲ್ಲಿ । **ಚಿಕೃತ್ಯಂ**—ಕರ್ಮಗಳಲ್ಲಿ ಪುನಃ ಪುನಃ ಪುರಸ್ಕೃತನಾಗುವ (ಸರ್ವಕರ್ಮಕುಶಲನಾದ) । **ಪೃತ್ಸು** ಯುದ್ಧಗಳಲ್ಲಿ **ದುಷ್ಪರಂ**—ದುಃಖದಿಂದ ಪಾಟಬಡುದಾವ (ಅಜೇಯನಾದ) । **ದ್ಯುಮಂತಂ**—ತೇಜಸ್ಸಿಯಾದ । **ಕುಷ್ಮಂ**—ಶತ್ರುಗಳನ್ನು ಶೋಷಿಸುವ (ನಾಶಮಾಡುವ) । **ಧನಸ್ಪೃತಂ**—ಧನವನ್ನು ಸಂಪಾದನೆಮಾಡುವ । **ಉಕ್ಥ್ಯಂ**—ಸ್ತೋತ್ರಾರ್ಹನಾದ । **ವಿಶ್ವಚರ್ಷಣಿಂ**—ಸರ್ವಜ್ಞನಾದ (ಪುತ್ರನನ್ನು) । **ಧತ್ತನ**—ಇಡಿ (ಅನುಗ್ರಹ ಮಾಡಿ) । **ತೋಕಂ**—(ಇಂತಹ) ಮಗನನ್ನೂ । **ತನಯಂ**—ಮೊಮ್ಮಗನನ್ನೂ । **ಶತಂ ಹಿಮಾಃ**—ನೂರು ಸಂವತ್ಸರಗಳವರೆಗೂ । **ಪುಷ್ಯೇಮ**—ಪೋಷಣೆಮಾಡೋಣ

॥ ಭಾವಾರ್ಥ ॥

ಎಲ್ಲೆ ಮರುದ್ದೇವತೆಗಳೇ, ಹವಿಸ್ಸಿನಿಂದ ಪೂಜೆಮಾಡುವ ಯಜಮಾನರಿಗೆ, ಕರ್ಮ ಕುಶಲನಾದ, ಯುದ್ಧಗಳಲ್ಲಿ ಅಜೇಯನಾದ, ತೇಜಸ್ವಿಯಾದ, ಧನವನ್ನು ಸಂಪಾದನೆ ಮಾಡುವ, ಸ್ತೋತ್ರಾರ್ಹನಾದ, ಸರ್ವಜ್ಞನಾದ ಪುತ್ರನನ್ನು ಮೊಮ್ಮಗನನ್ನು ಅನುಗ್ರಹಮಾಡಿ ಆ ಮಕ್ಕಳು ಮೊಮ್ಮಕ್ಕಳನ್ನು ನೂರಾರು ವರ್ಷಗಳು ಪೋಷಣೆ ಮಾಡುವಂತೆಯೂ ಅನುಗ್ರಹಮಾಡಿ

English Translation


ಅಮೇ ದೇವಾನ್ ಧಾತ್—ಭಯೇ ಅಗ್ನೌ ಹವಿರ್ಭಿಸ್ಸಹ ಪಲಾಯಿತೇ ಸತಿ ಸರ್ವೇ ದೇವಾ ಅಭೈಷುಃ । ಅಗ್ನಿಯು ಹವಿಸ್ಸುಗಳೊಡನೆ ಗೂಢವಾದ ಪ್ರದೇಶದಲ್ಲಿ (ನೀರಿನಲ್ಲಿ ಅಥವಾ ಔಶತ್ಥವೃಕ್ಷದಲ್ಲಿ) ಅವಿತುಕೊಂಡಿರಲು ದೇವತೆಗಳು ಭಯವನ್ನು ಹೊಂದಿದರು

ನೃಮ್ಣಾ---**ನೃಮ್ಣಾನಿ ಧನಾನಿ ಹವಿರ್ಲಕ್ಷಣಾನಿ ।** ನೃಮ್ಣ ಶಬ್ದವು ಮಹ, ತೀಕ್ಷ್ಣ ಎಂಬ ಇಪ್ಪತ್ತೆಂಟು ಧನನಾಮಗಳ ಮಧ್ಯದಲ್ಲಿ (ನಿ. ೩-೯) ಉಕ್ತವಾಗಿರುವುದು ಮತ್ತು ಬಲನಾಮಗಳ ಮಧ್ಯದಲ್ಲಿ ಈ ಶಬ್ದವು ಪಠಿತವಾಗಿದ್ದರೂ ಇಲ್ಲಿ ಧನವೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು. ಹವಿಸ್ಸಿನ ರೂಪವಾದ ಧನವೆಂದು ಅರ್ಥವು

ಧಿಯಂ ಧಾಃ—ಕರ್ಮಣಾಂ ಬುದ್ಧೀನಾಂ ವಾ ಧಾರಯಿತಾರಃ। ಯಜ್ಞರೂಪವಾದ ಕರ್ಮಗಳನ್ನು ಆಚರಿಸುವವರು ಅಥವಾ ಪ್ರಜ್ಞಾವಂತರಾದವರು ಎಂದು ಅರ್ಥವು

॥ ವ್ಯಾಕರಣಪ್ರಕ್ರಿಯಾ ॥

ದಧಾನಃ—ಡುಧಾಞ್ ಧಾರಣಪೋಷಣಯೋಃ ಧಾತ ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಜುಹೋತ್ಯಾದಿಯಾಮದರಿಂದ ಶ್ಲು ವಿಕರಣ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಜಸ್ತ್ವ. ಹ್ರಸ್ವ **ಅಭ್ಯಸ್ತಾನಾಮಾದಿಃ** (ಪಾ. ಸೂ ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ನೃಮ್ಣಾ—ನಪುಂಸಕದಲ್ಲಿ ದ್ವಿತೀಯಾ ಬಹುವಚನದಲ್ಲಿ ಶಸ್ಪಿಗೆ ಶಿ ಆದೇಶ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ

ಧಾತ್—ಧಾಞ್ ಧಾತುವಿಗೆ **ಲುಙ್** ಪ್ರಥಮಪುರುಷ ಏಕವಚನದಲ್ಲಿ ತಿಪ್ರತ್ಯಯ ಅದರ ಇಕಾರಕ್ಕೆ **ಇತಶ್ಚ** ಸೂತ್ರದಿಂದ ಲೋಪ ಚ್ಲಿಗೆ ಬಂದ ಸಿಚ್ಚಿಗೆ **ಗಾತಿಸ್ಥಾಘುಪಾ**—ಸೂತ್ರದಿಂದ ಲೋಪ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ನಿಘಾತಸ್ವರ ಬರುತ್ತದೆ

ಗುಹಾ—ಸಪ್ತಮೀ ಏಕವಚನಕ್ಕೆ **ಸುಪಾಂ ಸುಲುಕ್** ಸೂತ್ರದಿಂದ ಡಾ ಆದೇಶ

ನಿಷೀದನ್—ಷದಲೃ ವಿಶರಣಗತ್ಯವಸಾದನೇಷು ಧಾತು ಲಡರ್ಥದಲ್ಲಿ ಶತೃಪ್ರತ್ಯಯ **ಪಾಘ್ರಾಧ್ಮಾಸ್ಥಾ**—ಸೂತ್ರದಿಂದ ಧಾತುವಿಗೆ ಸೀದ ದೇಶ. ಸೀದತ್ ಶಬ್ದವಾಗುತ್ತದೆ. ಸಿ ಸಂಬಂಧವಿರುವಾಗ **ಸದಿರಪ್ರತೇಃ** (ಪಾ ಸೂ ೮-೩-೬೬) ಎಂಬುದರಿಂದ ಧಾತುವಿನ ಸಕಾರಕ್ಕೆ ಷತ್ವ ಬರುತ್ತದೆ ಪ್ರಥಮಾ ಸುವಿನಲ್ಲಿ ನುಮಾಗನು ಸುಲೋಪ ಸೀದನ್ ಎಂಬಲ್ಲಿ ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ ಗತಿಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

ವಿದಂತಿ—ವಿದ ಜ್ಞಾನೇ ಧಾತು ಅದಾದಿ ಲಟ್ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯಕ್ಕೆ ಅಂತಾದೇಶ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್ ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ಧಿಯಂ ಧಾಃ—ಧಿಯಂ ಧಾರಯಂತಿ ಇತಿ ಧಿಯಂಧಾಃ ಡುಧಾಞ್ ಧಾರಣಪೋಷಣಯೋಃ ಧಾತು. **ಅತೋನುಪಸರ್ಗೇಕಃ** (ಪಾ ಸೂ ೩-೩-೩) ಎಂಬುದರಿಂದ ಕ ಪ್ರತ್ಯಯ **ಅತೋ ಲೋಪಇಟಿ ಚ** ಸೂತ್ರದಿಂದ ಆಕಾರಲೋಪ. ದ್ವಿತೀಯಾ ತತ್ಪುರುಷಸಮಾಸವಾದಾಗ **ತತ್ಪುರುಷೇ ಕೃತಿ ಬಹುಲಂ** ಎಂಬಲ್ಲಿ ಬಹುಲ ಗ್ರಹಣದಿಂದ ದ್ವಿತೀಯಾ ವಿಭಕ್ತಿಗೂ ಅಲುಕ್ ಬರುತ್ತದೆ. **ಗತಿಕಾರಕೋಪಪದಾತ್ಕೃತ್** ಸೂತ್ರದಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ

ತಷ್ಟಾನ್—ತಕ್ಷೂ ತ್ವಕ್ಷೂ ತನೂಕರಣೇ. ಧಾತು ಇದಕ್ಕೆ ನಿಷ್ಠಾಕ್ತಪ್ರತ್ಯಯ. ಊದಿತ್ವಾದುದರಿಂದ-- **ಊದಿತೋ ವಾ** ಎಂಬುದರಿಂದ ವಿಕಲ್ಪವಾಗಿ ಇಟ್ ಬರುವುದರಿಂದ **ಯಸ್ಯ ವಿಭಾಷಾ** ಸೂತ್ರದಿಂದ ಕ್ತ ಪ್ರತ್ಯಯಕ್ಕೆ ಇಡಾಗಮ ಬರುವುದಿಲ್ಲ **ಸ್ಕೋಃ ಸಂಯೋಗಾದ್ಯೋರಂತೇ ಚ** ಎಂಬುದರಿಂದ ಕಕಾರಲೋಪ ಷ್ಟುತ್ವದಿಂದ ಕ್ತ ಪ್ರತ್ಯಯದ ತಕಾರಕ್ಕೆ ಟಕಾರಾದೇಶ ದ್ವಿತೀಯಾ ಬಹುವಚನದಲ್ಲಿ ತಷ್ಟಾನ್ ಎಂದು ರೂಪವಾಗುತ್ತದೆ ಪ್ರತ್ಯಯಸ್ವರದಿಂದ ಅಂತೋದಾತ್ತ

ಅಶಂಸನ್—ಶಂಸು ಸ್ತುತೌ ಧಾತು. ಲಙ್ಪ್ರಥಮಪುರುಷ ಬಹುವಚನದಲ್ಲಿ ಅಶಂಸನ್ ಎಂದು ರೂಪವಾಗುತ್ತದೆ ಯಙ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ ॥ ೪-೫ ॥

॥ ಸಂಹಿತಾಪಾಠಃ ॥

ಅಜೋ॑ ನ ಕ್ಷಾಂ ದಾ॒ಧಾರ॑ ಪೃಥಿ॒ವೀಂ ತ॑ಸ್ತಂ॒ಭ ದ್ಯಾಂ ಮಂ॒-
ತ್ರೇ॑ಭಿಃ ಸ॒ತ್ಯೈಃ ।
ಪ್ರಿಯಾ॑ ಪ॒ದಾನಿ॑ ಪ॒ಶ್ವೋ॑ ನಿ ಷ॑ಸಾದ ವಿಶ್ವಾ॒ಯುರ॑ಗ್ನೇ॑ ಗು॒ಹಾ
ಗು॑ಹಂ॒ ಗಾಃ ॥ ೫ ॥ ೬ ॥

॥ ಪದಪಾಠಃ ॥

ಅಜಃ । ನ । ಕ್ಷಾಂ । ದಾ॒ಧಾರ॑ । ಪೃಥಿ॒ವೀಂ । ತ॒ಸ್ತಂ॒ಭ । ದ್ಯಾಂ । ಮಂ॒ತ್ರೇ॑ಭಿಃ ।
ಸ॒ತ್ಯೈಃ ।
ಪ್ರಿಯಾ॑ । ಪ॒ದಾನಿ॑ । ಪ॒ಶ್ವಃ । ನಿ । ಷ॒ಸಾ॒ದ । ವಿ॒ಶ್ವ॒ಆ॑ಯುಃ । ಅ॒ಗ್ನೇ॒ । ಗು॒ಹಾ
ಗು॑ಹಂ । ಗಾಃ ॥ ೫ ॥ ೬ ॥

॥ ಸಾಯಣಭಾಷ್ಯಂ ॥

ಅಜೋ ನ । ಅಜತಿ ಗಚ್ಛತೀತ್ಯಜಃ ಸೂರ್ಯಃ । ಯದ್ವಾ । ನ ಜಾಯತ ಇತ್ಯಜಃ । ಜನ್ಮರಹಿತ ಇತ್ಯರ್ಥಃ । ಸ ಇವ । ಕ್ಷ್ಮೇತಿ ಪೃಥಿವೀನಾಮ । ಕ್ಷ್ಮಾಂ ಭೂಮಿಂ ದಾಧಾರ । ಅಯಮಗ್ನಿಃ ಪ್ರಕಾಶಕತ್ವೇನ ಧಾರಯತಿ । ಪೃಥಿವೀತ್ಯಂತರಿಕ್ಷನಾಮ । ಪೃಥಿವೀಮಂತರಿಕ್ಷಂ ಚ ಧಾರಯತೀತ್ಯೇವ । ದ್ಯಾಂ ದ್ಯುಲೋಕಂ ಸತ್ಯೈರವಿತಥಾರ್ಥೈರ್ಮಂತ್ರೈರಭಿಮಂತ್ರ್ಯ ತ್ವಂ ಸ್ತಂಭ । ಸ್ತಭ್ನಾತಿ । ಯಥಾಧೋ ನ ಪತತಿ ಉಪರ್ಯೇವ ತಿಷ್ಠತಿ ತಥಾ ಕರೋತೀತ್ಯರ್ಥಃ । ಮಂತ್ರೈರ್ದಿವೋ ಧಾರಣಂ ತೈತ್ತಿರೀಯೇ ಸಮಾಮ್ನಾತಂ । ದೇವಾ ವಾ ಅದಿತ್ಯಸ್ಯ ಸುವರ್ಗಲೋಕಸ್ಯ ಪರಾಜೋ೨ತಿಪಾತಾದಬಿಭ್ಯಯುಃ । ತಂ ಭಂಡೋಭಿರದೃಹನ್ಪೃತ್ಯಾ ಇತಿ । ಯದ್ವಾ । ಸತ್ಯೈರ್ಮಂತ್ರೈಃ ಸ್ತೂಯಮಾನೋ೨ಗ್ನಿರ್ದ್ಯಾಂ ತಸ್ತಂಭೇತಿ । ಹೇ ಅಗ್ನೇ ವಿಶ್ವಾಯುಃ ವಿಶ್ವಂ ಸರ್ವಮಾಯುರನ್ನಂ ಯಸ್ಯ ಸ ತ್ವಂ ಪಶ್ವಃ ಪಶೋಃ ಪ್ರಿಯಾ ಪ್ರಿಯಾಣಿ ಪದಾನಿ ಶೋಭನತೃಣೋದಕೋಪೇತಾನಿ ಸ್ಥಾನಾನಿ ನಿ ಪಾಹಿ । ನಿತರಾಂ ಪಾಲಯ । ಮಾ ಧಾಕ್ಷೀರಿತ್ಯರ್ಥಃ । ತರ್ಹಿ ಕುತ್ರ ನಿವಸಾಮೀತಿ ಚೇತ್ ತತ್ರಾಹ । ಗುಹಾ ಗುಹಾಯಾ ಅಪಿ ಗುಹಂ ಗುಹಾಂ ಗವಾಂ ಸಂಚಾರಯೋಗ್ಯಸ್ಥಾನಂ ಗಾಃ । ಗಚ್ಛ । ತತ್ರೈವ ನಿವಸೇತ್ಯರ್ಥಃ ॥ ಪಶ್ವಃ । ಜಸಾದಿಷು ಛಂದಸಿ ವಾನವಚನಮಿತಿ ಘೇರ್ಜಿತೀತಿ ಗುಣಾಭಾವೇ ಯಣಾದೇಶಃ । ಉದಾತ್ತಯಣ ಇತಿ ವಿಭಕ್ತೇರುದಾತ್ತತ್ವಂ । ಗುಹಾ । ಸುಪಾಂ ಸುಲುಗಿತಿ ಪಂಚಮ್ಯಾ ಆಜಾದೇಶಃ । ಚಿತ್ತ್ವಾದಂತೋದಾತ್ತತ್ವಂ । ಗುಹಂ ವ್ಯತ್ಯಯೇನ ಹ್ರಸ್ವತ್ವಂ । ಗಾಃ । ಛಾಂದಸೋ ಲುಙ್ । ಇಣೋ ಗಾ ಲುಙೀತಿ ಗಾದೇಶಃ ॥

॥ ಪ್ರತಿಪದಾರ್ಥ ॥

ಅಜೋ ನ—ಗಮನಶೀಲನಾದ (ಜನ್ಮರಹಿತನಾದ) ಸೂರ್ಯನಂತೆ । ಕ್ಷ್ಮಾಂ—ಭೂಮಿಯನ್ನೂ । ಪೃಥಿವೀಂ—ಅಂತರಿಕ್ಷವನ್ನೂ । ದಾಧಾರ—(ಪ್ರಕಾಶಕನಾಗಿ) ಧಾರಣಮಾಡಿದನು । ದ್ಯಾಂ—ಸ್ವರ್ಗಲೋಕವನ್ನೂ । ಸತ್ಯೈಃ—ಅವಿತಥವಾದ । ಮಂತ್ರೈಃ—ಮಂತ್ರಗಳಿಂದ । ತಸ್ತಂಭ—ನಿಲ್ಲುವಂತೆ ಮಾಡಿದನು । ಅಗ್ನೇ—ಅಗ್ನಿಯೇ । ವಿಶ್ವಾಯುಃ—ಎಲ್ಲವೂ ಅನ್ನವಾಗಿ ಉಳ್ಳ (ನೀನು) । ಪಶ್ವಃ—ಪಶುಗಳಿಗೆ । ಪ್ರಿಯಾ—ಪ್ರಿಯವಾದ । ಪದಾನಿ—(ತೃಣೋದಕಯುಕ್ತವಾದ) ಸ್ಥಾನಗಳನ್ನು । ನಿ ಪಾಹಿ—ಚೆನ್ನಾಗಿ ರಕ್ಷಿಸು । ಗುಹಾ—ಗುಹೆಗಳಲ್ಲಿ । ಗುಹಂ—(ಸಂಚಾರಾಯೋಗ್ಯವಾದ) ಗುಹೆಯನ್ನು । ಗಾಃ—ಹೋಗು.

॥ ಭಾವಾರ್ಥ ॥

ಅಗ್ನಿಯು ತನ್ನ ಪ್ರಕಾಶದಿಂದ ಸೂರ್ಯನಂತೆ, ಭೂಮ್ಯಾಕಾಶಗಳನ್ನೂ ಧಾರಣಮಾಡುತ್ತಾನೆ ವ್ಯರ್ಥವಲ್ಲದ ಮಂತ್ರಗಳ ಶಕ್ತಿಯಿಂದ ಸ್ವರ್ಗಲೋಕವನ್ನೂ ಸ್ಥಾಯಿಯಾಗಿ ನಿಲ್ಲುವಂತೆ ಮಾಡುತ್ತಾನೆ. ಎಲೈ ಅಗ್ನಿಯೇ, ಈ ಭೂಮಿಯಲ್ಲಿ ಎಲ್ಲವೂ ನಿನ್ನ ಆಹಾರಭೂತವಾದದು. ಆದರೆ, ಪಶುಗಳಿಗೆ ಪ್ರಿಯವಾದ ತೃಣೋದಕಗಳಿರುವ ಪ್ರದೇಶಗಳನ್ನು ಮಾತ್ರ ಕಾಪಾಡು ನೀನು ಪಶ್ವಾದಿಗಳ ಸಂಚಾರಕ್ಕೆ ಅಯೋಗ್ಯವಾದ ಗುಹೆಗಳಲ್ಲಿ ವಾಸಿಸು.

English Translation.

Like the unborn (Sun) he sustains the earth and the firmament, and props up the heaven with true prayers. O Agni, the source of sustenance unto all, protect the pasture that is grateful unto animals and repair to the cave which is unfit for grazing

॥ ವಿಶೇಷವಿಷಯಗಳು ॥

ಅಜೋ ನ ಕ್ಷಾಂ—ಅಜತಿ ಗಚ್ಛತೀತ್ಯಜಃ ಸೂರ್ಯಃ। **ಯದ್ವಾ ನ ಜಾಯತೇ ಇತ್ಯಜಃ।** **ಜನ್ಮರಹಿತಃ।** ಯಾವಾಗಲೂ ಸಂಚಾರ ಮಾಡುವನವನಾದ ಕಾರಣದಿಂದ ಅಜ ಧಾತುವಿಗೆ ಗತ್ಯರ್ಥವನ್ನು ಅಂಗೀಕರಿಸಿ ಸೂರ್ಯನೆಂದು ಅಜ ಶಬ್ದಕ್ಕೆ ಅರ್ಥವು. ಜನನಮರಣಾದಿಗಳು ಯಾವುದೂ ಇಲ್ಲದಿರುವುದರಿಂದ ಸೂರ್ಯನು ಎಂದು ಇನ್ನೊಂದು ವಿಧವಾಗಿಯೂ ಅಜ ಶಬ್ದಕ್ಕೆ ಅರ್ಥವನ್ನು ಹೇಳಿರುವರು ಕ್ಷಾ ಎಂಬುದು ಇಪ್ಪತ್ತೊಂದು ಪೃಥವೀನಾಮಗಳ ಮಧ್ಯದಲ್ಲಿ (ನಿ. ೨-೫) ಪಠಿತವಾಗಿರುವುದು ನ ಎಂಬುವುದು ಉಪಮಾವಾಚಕವು. ಅಗ್ನಿಯು ಸೂರ್ಯನ ಹಾಗೆ ಭೂಮಿಯನ್ನು ಧರಿಸಿರುವನು ಸೂರ್ಯನು ಭೂಮಿಯಲ್ಲಿ ಪ್ರಕಾಶವನ್ನು ಬೀರುತ್ತಾ ಎಲ್ಲರಿಗೂ ಚೈತನ್ಯಾದಿಗಳನ್ನು ಉಂಟುಮಾಡಿರುವಂತೆ ಅಗ್ನಿಯೂ ಕೂಡ ತನ್ನ ಪ್ರಕಾಶಗಳಿಂದ ಭೂಲೋಕವೆಲ್ಲವನ್ನೂ ಧರಿಸಿರುವನು.

ಪೃಥಿವೀಂ ದ್ಯಾಂ ತಸ್ತಂಭ—ಪೃಥಿವೀತ್ಯಂತರಿಕ್ಷನಾಮ। **ಆಂತರಿಕ್ಷಂ ಚ ದ್ಯುಲೋಕಂ ಸ್ತಭ್ನಾತಿ ಯಥ್ಸಾಧೋ ನ ಪತತಿ ಉಪರ್ಯೇವ ತಿಷ್ಠತಿ ತಥಾ ಕರೋತಿ ॥** ಸ್ಪಥಪೀ ಶಬ್ದವು ಹದಿನಾರು ಅಂತರಿಕ್ಷನಾಮಗಳ ಮಧ್ಯದಲ್ಲಿ (ನಿ ೨-೧೦) ಉಕ್ತವಾಗಿರುವುದು. ಅಂತರಿಕ್ಷವೂ ಮತ್ತು ಸ್ವರ್ಗಲೋಕವೂ ಕೆಳಕ್ಕೆ ಬೀಳದಿರಯಾವಾಗಲೂ ಮೇಲೆಯೇ ಇರುವ ಹಾಗೆ ಅಗ್ನಿಯು ಸತ್ಯಾರ್ಥಗಳಾದ ಮಂತ್ರಗಳಿಂದ ಧರಿಸಿರುವನು ಅಥವಾ ಸತ್ಯವಾದ ಅರ್ಥವನ್ನು ಹೇಳುವ ಮಂತ್ರಗಳಿಂದ ಸ್ತುತಿಸಲ್ಪಡುವ ಅಗ್ನಿಯು ಸ್ವರ್ಗಲೋಕವು ಒಂದೇ (ಸ್ಥಾನದಲ್ಲಿ) ರೀತಿಯಲ್ಲಿ ಇರುವಂತೆ ಧರಿಸಿರುವನು ಮಂತ್ರಗಳಿಂದ ಸ್ವರ್ಗವನ್ನು ಧರಿಸಿರುವ ವಿಷಯವು "**ದೇವಾ ವಾ ಆದಿತ್ಯಸ್ಯ ಸುವರ್ಗಸ್ಯ ಲೋಕಸ್ಯ ಪರಾಚೋ೭ತಿಪಾದಾದಬಿಭಯುಃ। ತಂ ಛಂದೋಭಿರದ್ಯೆಂರ್ಹ ಧೃತ್ಯೈ**" (ತೈ ಬ್ರಾ. ೧-೩-೪-೨) ಎಂಬ ವಾಕ್ಯದಿಂದ ಉಕ್ತವಾಗಿರುತ್ತದೆ

ಸಾಯಣರು **ಪಶ್ವಃ ಪ್ರಿಯಾ ಸಿಷಾಹಿ** ಎಂಬ ಈ ವಾಕ್ಯಕ್ಕೆ ಪಶುಗಳಿಗೆ ಪ್ರೀತಿಕರವಾಗಿರುವ ಉತ್ತಮವಾದ ತೃಣಗಳೂ ಉದಕವೂ ಇರುವ ಪ್ರದೇಶಗಳನ್ನು ರಕ್ಷಿಸು, ಸುಡಬೇಡ ಎಂದು ಅರ್ಥವನ್ನು ಮಾಡಿರುವರು

ಸ್ಕಂದಸ್ವಾಮಿಗಳು ಅಜ ಶಬ್ದಕ್ಕೆ ಪ್ರಜಾಪತಿ ಎಂದು ಅರ್ಥವನ್ನು ಅಂಗೀಕರಿಸಿ ಬ್ರಹ್ಮನು ಮೂರು ಲೋಕಗಳನ್ನು ಧರಿಸಿರುವಂತೆ ಅಗ್ನಿಯು ಮೂರು ಲೋಕಗಳಲ್ಲಿಯೂ (ಭೂಮಿ, ಅಂತರಿಕ್ಷ, ಸ್ವರ್ಗ) ಯಜ್ಞರೂಪವಾದ ಧರ್ಮಾಚರಣೆಯಿಂದ ಸ್ಥಿತಿಯು ಉಂಟಾಗುವಂತೆ ಧರಿಸಿರುವನು ಎಂದೂ, ಪಶುಸದೃಶನಾಗಿರುವ ನನಗೆ ಹಿತಕರ

ವಾದ ಸ್ಥಾನಗಳನ್ನು ಇಲ್ಲಿಯೂ ಪರಲೋಕದಲ್ಲಿಯೂ ನಿಯತವಾಗಿ ರಕ್ಷಿಸು ಅಥವಾ ನಿನ್ನ ಪ್ರೀತಿಗೆ ಆಸ್ಪದವಾಗಿರುವ ಸ್ಥಾನಗಳನ್ನೂ ತಿಳಿದಿರುವ ನಮ್ಮನ್ನು ರಕ್ಷಿಸು ಎಂದೂ ಅರ್ಥವನ್ನು ಹೇಳಿರುವರು. ಇದರಿಂದ **ಪಶ್ವಃ** ಎಂಬ ಶಬ್ದಕ್ಕೆ ಪಶುಸದೃಶಃ, **ಪಶ್ವಃ** ದೃಶೇರಿದಂ ರೂಪಂ ಎಂದೂ ಅರ್ಥವನ್ನು ಮಾಡಿರುತ್ತಾರೆ.

॥ ನ್ಯಾಕರಣಪ್ರಕ್ರಿಯಾ ॥

ದಧಾರ—ಧೃಞ್ ಧಾತುವಿಗೆ ಛಾಂದಸವಾದ ಲಿಟ್ ಪ್ರಥಮಪುರುಷ ಏಕವಚನದಲ್ಲಿ ರೂಪ. **ನಿಸಾತ್ಯೆರ್ಯದಿ**—ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುತ್ತದೆ ಣಲ್ ಲಿತ್ತಾದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತವಾಗುತ್ತದೆ.

ತಸ್ತಂಭ—ಷ್ಟಭಿ ಗಾತ್ರವಿನಾಮೇ ಧಾತು **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲಿಟ್ ಇದಿತ್ತಾದುದರಿಂದ ನುಮಾಗಮ. **ಶರ್ಪೂರ್ವಾಃ ಖಯಃ** ಎಂಬುದರಿಂದ ತಕಾರಕ್ಕೆ ಶೇಷ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಹಿಂದಿನಂತೆ **ಲಿತಿ** ಸೂತ್ರದಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ

ಮಂತ್ರೇಭಿಃ—**ಬಹುಲಂ ಛಂದಸಿ** ಎಂಬುದರಿಂದ ತೃತೀಯಾದಲ್ಲಿ ಭಿಸ್ಸಿಗೆ ಏಸಾದೇಶ ಬರುವುದಿಲ್ಲ. **ಬಹುವಚನೇ ಝಲ್ಯೇತ್** ಎಂಬುದರಿಂದ ಅಂಗಕ್ಕೆ ಏತ್ವ

ಪ್ರಿಯಾ—ಪ್ರಿಯಾಣಿ ಎಂದಿರುವಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ನಪುಂಸಕದಲ್ಲಿ ಆದೇಶವಾಗಿ ಬಂದ ಶಿಗೆ ಲೋಪ.

ಪಶ್ವಃ—**ಜಸಾದಿಷು ಛಂದಸಿ ವಾ ವಚನಮ್** ಎಂಬುದರಿಂದ. ಪಶು+ಜಸ್ ಎಂದಿರುವಾಗ **ಘೇರ್ಙಿತಿ** ಎಂಬುದರಿಂದ ಗುಣ ಬರುವುದಿಲ್ಲ **ಇಕೋ ಯಣಚಿ** ಸೂತ್ರದಿಂದ ಯಣಾದೇಶ. ಉದಾತ್ತವಾದ ಉಕಾರಕ್ಕೆ ಯಣಾದೇಶಬಂದು ಅದರ ಪರದಲ್ಲಿ ವಿಭಕ್ತಿ ಬಂದುದರಿಂದ **ಉದಾತ್ತಯಣೋಹಲ್‌ಪೂರ್ವಾತ್** ಸೂತ್ರದಿಂದ ವಿಭಕ್ತಿಯು ಉದಾತ್ತವಾಗುತ್ತದೆ.

ಗುಹಾ—ಗುಹಾ+ಙಸಿ ಎಂದು ಪಂಚಮೀ ಏಕವಚನವಿರುವಾಗ **ಸುಸಾಂ ಸುಲುಕ್**—ಎಂಬುದರಿಂದ ವಿಭಕ್ತಿಗೆ ಆಚಾದೇಶ ಚಿತ್ತಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ.

ಗುಹಮ್—ಗುಹಾಶಬ್ದಕ್ಕೆ ಅಮ್ ಪರದಲ್ಲಿರುವಾಗ **ಅಮಿ ಪೂರ್ವಃ** ಸೂತ್ರದಿಂದ ಪೂರ್ವರೂಪ ಬಂದಾಗ **ವ್ಯತ್ಯಯೋ ಬಹುಲಂ** ಎಂಬುದರಿಂದ ಹ್ರಸ್ವ ಬರುತ್ತದೆ.

ಗಾಃ—ಇಣ್ ಗತೌ ಧಾತು. ಲೋಡರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲುಙ್. ಲುಙ್ ಮಧ್ಯಮಪುರುಷ ಏಕವಚನದ ಸಿಪ್ಪಿನ ಇಕಾರಕ್ಕೆ **ಇತಶ್ಚ** ಎಂಬುದರಿಂದ ಲೋಪ. **ಇಣೋ ಗಾ ಲುಙಿ** (ಪಾ ಸೂ. ೨-೪-೪೫) ಎಂಬುದರಿಂದ ಧಾತುವಿಗೆ ಗಾ ಆದೇಶ **ಬಹುಲಂ ಛಂದಸ್ಯಮಾಙ್‌ಯೋಗೇಽಸಿ** ಎಂಬುದರಿಂದ ಆಡಾಗಮ ಬರುವುದಿಲ್ಲ ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗಗಳು ಬಂದರೆ ಗಾಃ ಎಂದು ರೂಪವಾಗುತ್ತದೆ

ಪಾಹಿ—ಪಾ ರಕ್ಷಣೇ ಧಾತು ಲೋಟ್ ಮಧ್ಯಮಪುರುಷದ ಸಿಪ್ಪಿಗೆ ಹಿ ಆದೇಶ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್. **ತಿಙ್ಶಿತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ಅಗ್ನೇ—**ಹ್ರಸ್ವಸ್ಯ ಗುಣಃ** ಎಂಬುದರಿಂದ ಸಂಬುದ್ಧಿಯಲ್ಲಿ ಗುಣ **ಏಙ್ಹ್ರಸ್ವಾತ್ಸಂಬುದ್ಧೇಃ** ಎಂಬುದರಿಂದ ಸುಲೋಪ **ಆಮಂತ್ರಿತಸ್ಯ ಚ** (ಪಾ. ಸೂ ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೫-೬ ॥

॥ ಸಂಹಿತಾಪಾಠಃ ॥

ಯ ಈಂ ಚಿಕೇತ ಗುಹಾ ಭವಂತಮಾ ಯಃ ಸಸಾದ ಧಾರಾ-
ಮೃತಸ್ಯ ।
ವಿ ಯೇ ಚೃತನ್ತ್ಯೃತಾ ಸಪಂತ ಆದಿದ್ವಸೂನಿ ಪ್ರ ವವಾ-
ಚಾಸ್ಮೈ ॥ ೬ ॥ ೮ ॥

॥ ಪದಪಾಠಃ ॥

ಯಃ । ಈಂ । ಚಿಕೇತ । ಗುಹಾ । ಭವಂತಂ । ಆ । ಯಃ । ಸಸಾದ । ಧಾರಾಂ ।
ಋತಸ್ಯ ।
ವಿ । ಯೇ । ಚೃತಂತಿ । ಋತಾ । ಸಪಂತಃ । ಆತ್ । ಇತ್ । ವಸೂನಿ । ಪ್ರ ।
ವವಾಚ । ಅಸ್ಮೈ ॥ ೬ ॥ ೮ ॥

॥ ಸಾಯಣಭಾಷ್ಯಂ ॥

ಯಃ ಪುಮಾನ್ ಈಮೇನಂ ಗುಹಾ ಭವಂತಂ ಗುಹಾಯಾಂ ಸಂತಮಗ್ನಿಂ ಚಿಕೇತ ಜಾನಾತಿ। ಯಶ್ಚ ಋತಸ್ಯ ಸತ್ಯಸ್ಯ ಯಜ್ಞಸ್ಯ ವಾ ಧಾರಾಂ ಧಾರಯಿತಾರಮೇನಮಗ್ನಿನಾ ಸಸಾದ ಆಸೀದತಿ। ಉಪಾಸ್ತ ಇತ್ಯರ್ಥಃ। ಯೇ ಚ ಋತಾ ಯತಾನಿ ಸತ್ಯಾನಿ ಯಜ್ಞಾನ್ವಾ ಸಪಂತಃ ಸಮವಯಂತಃ ಸ್ಪೃಶಂತೋ ವಾ ಪುರುಷಾ ಏತಮಗ್ನಿಂ ವಿ ಚೈತಂತಿ ಅಗ್ನಿಮುದ್ದಿಶ್ಯ ಸ್ತುತೀರ್ಗ್ರಥ್ನಂತಿ। ಕುರ್ವಂತೀತ್ಯರ್ಥಃ। ಆದಿತ್ ಸ್ತುತ್ಯನಂತರಮೇವಾಸ್ಮೈ ಸರ್ವಸ್ಮೈ ಸ್ತೋತೃಜನಾಯ ವಸೂನಿ ಧನಾನಿ ಪ್ರ ವನಾಚ। ಪ್ರಕಥಯತಿ॥ ಚಿಕೇತ। ಕಿತ ಜ್ಞಾನೇ। ಲಿಟಿ ಣಲಿ ಲಿಕ್ಷ್ಯರಃ। ಚೈತಂತಿ। ಚೈತೀ ಹಿಂಸಾಗ್ರಂಥನಯೋಃ। ತೌದಾದಿಕಃ। ಲಸಾರ್ವಧಾತುಕಾನುದಾತ್ತತ್ವೇ ವಿಕರಣಸ್ವರಃ ಶಿಷ್ಯತೇ। ವನಾಚ। ಲಿಟಿ ಬ್ರುವೋ ವಚಿಃ। ಲಿಟ್ಯಭ್ಯಾಸಸ್ಯೋಭಯೇಷಾಂ। ಪಾ. ೬-೧-೧೭। ಇತ್ಯಭ್ಯಾಸಸ್ಯ ಸಂಪ್ರಸಾರಣಂ। ಸಂಪ್ರಸಾರಣಾಚ್ಚೇತಿ ಪರಪೂರ್ವತ್ವಸ್ಯ ವಾ ಛಂದಸಿ। ಪಾ. ೬-೧-೧೮। ಇತಿ ವಿಕಲ್ಪನಾದ್ಯಣಾದೇಶಃ॥

॥ ಪ್ರತಿಪದಾರ್ಥ ॥

ಯಃ—ಯಾವನು। **ಈಂ**—ಈ ಅಗ್ನಿಯನ್ನು। **ಗುಹಾ ಭವಂತಂ**- ಗುಹೆಯಲ್ಲಿ ವಾಸಿಸುತ್ತಿರುವವನನ್ನಾಗಿ। **ಚಿಕೇತ**—ತಿಳಿಯುತ್ತಾನೆಯೋ। **ಯಃ (ಚ)**—ಯಾವನು। **ಋತಸ್ಯ**—ಸತ್ಯದ। **ಧಾರಾಂ**—ಆಶ್ರಯನನ್ನಾಗಿ। **ಆ ಸಸಾದ**—ಉಪಾಸನೆಮಾಡುತ್ತಾನೋ। **ಯೇ (ಚ)**—ಯಾರು। **ಋತಾ**—ಸತ್ಯವನ್ನು (ಯಜ್ಞಗಳನ್ನು)। **ಸಂಪತೆಃ**—ಆಶ್ರಯಿಸತಕ್ಕವರಾಗಿ (ಮಾಡತಕ್ಕವರಾಗಿ)। **ವಿ ಚೈತಂತಿ**—(ಅಗ್ನಿಯನ್ನುದ್ದೇಶಿಸಿ) ಸ್ತುತಿಗಳನ್ನು ರಚಿಸುತ್ತಾರೋ। **ಅಸ್ಮೈ**—ಈ ಸ್ತೋತೃವೃಂದಕ್ಕೆ। **ಆದಿತ್**—ಸ್ತುತಿಸಿದ ಮೇಲೆಯೇ। **ವಸೂನಿ**—ಧನವನ್ನು। **ಪ್ರ ವವಾಚ**--ದಾನಮಾಡುತ್ತಾನೆ

॥ ಭಾವಾರ್ಥ ॥

ಅಗ್ನಿಯು ಗೂಢವಾಗಿರುವವನು, ಸತ್ಯಕ್ಕೆ, ಯಜ್ಞಗಳಿಗೆ ಆಶ್ರಯನು ಎಂದು ತಿಳಿದು, ಯಜ್ಞಗಳನ್ನು ಆಚರಿಸಿದವರಾಗಿ, ಅವನನ್ನುದ್ದೇಶಿಸಿ ಸ್ತುತಿಗಳನ್ನು ರಚಿಸಿ ಸ್ತುತಿಸುವವರಿಗೆ ಮಾತ್ರ, ಅಗ್ನಿಯು ಧನಾದಿಗಳನ್ನು ಕೊಡುತ್ತಾನೆ

English Translation

He who knows Agni hidden in the cave; he who approaches him who is the maintainer of sacrifice, those who,after performing a sacrifice, praise him, to them he, forsooth, promises affluence.

॥ ವಿಶೇಷವಿಷಯಗಳು ॥

ಋತಸ್ಯ ಧಾರಾಂ—ಯಜ್ಞಸ್ಯ ಸತ್ಯಸ್ಯ ವಾ ಧಾರಯಿತಾರಂ । ಧಾರಾ ಎಂಬ ಶಬ್ದವು ಯಜ್ಞವನ್ನು ಅಥವಾ ಸತ್ಯವನ್ನು ಧರಿಸಿರುವವನು ಎಂದು ಅರ್ಥವುಳ್ಳದ್ದು ಎಂದು ಸಾಯಣರು ಹೇಳಿರುವರು ಸ್ಕಂದಸ್ವಾಮಿಗಳು ಧಾರಾ ಶಬ್ದಕ್ಕೆ ಸ್ತುತಿರೂಪವಾದ ವಾಕ್ಯ ಎಂದೂ, ಋತಸ್ಯ ಎಂಬ ಪದಕ್ಕೆ ಪರೋಕ್ಷವಲ್ಲಿರುವವನ ಎಂದೂ ಅರ್ಥವನ್ನು ಹೇಳಿರುವರು

ಸಾಯಣರು—**ಋತಾ**—**ಸತ್ಯಾನಿ ಯಜ್ಞಾನ್ವಾ ಸಪನ್ತಃ**—**ಸಮವಯಂತಃ ಸ್ಪೃಶಂತೋ ವಾ । ಆದಿತ್ ಸ್ತುತ್ಯನಂತರಮೇವ** ಎಂಬುದಾಗಿ **ಋತಾ ಸಪಂತಃ, ಆದಿತ್** ಎಂಬ ಪದಗಳಿಗೆ ಅರ್ಥವನ್ನು ಮಾಡಿರುವರು. ಸ್ಕಂದಸ್ವಾಮಿ ಗಳು **ಸಪಂತಃ ಆದಿತ್** ಎಂಬ ಪದಗಳು ಪಾದಪೂರಣಾರ್ಥಗಳಾಗಿರುವುವು ಎಂದೂ. **ವಸೂನಿ ಪ್ರ ವವಾಚ** ಎಂಬ ಪದಕ್ಕೆ **ಯುಷ್ಮಭ್ಯಂ ಏತಾನಿ ಧನಾನಿ ಇತ್ಯೇವಂ ಪ್ರಕರ್ಷೇಣ ಬ್ರವೀತಿ** ಅಗ್ನಿಯು ತನ್ನನ್ನು ಸೇವಿಸುವವರಿಗೆ ತಾನಾಗಿ ಬಂದು ಈ ಧನವು ನಿಮಗಾಗಿ ಸಿದ್ಧವಾಗಿರುವುದು ಎಂದು ಬಲಾತ್ಕರಿಸಿ ಹೇಳುವನು ಎಂದೂ ಅರ್ಥವನ್ನು ಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ಚಿಕೇತ—ಕೇತ ಜ್ಞಾನೇ ಧಾತು **ಲಿಟ್** ಪ್ರಥಮಪುರುಷ ಏಕವಚನದಲ್ಲಿ **ಪರಸ್ಮೈಪದಾನಾಂ**—ಸೂತ್ರದಿಂದ ಣಲಾದೇಶ ಧಾತುವಿಗೆ ಲಿಣ್ನಿಮಿತ್ತವಾಗಿ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ **ಕುಹೋಶ್ಚುಃ** ಎಂಬುದರಿಂದ ಚುತ್ವದಿಂದ ಕಕಾರಾದೇಶ ಪ್ರತ್ಯಯನಿಮಿತ್ತವಾಗಿ ಧಾತುವಿನ **ಲಘೂಪಧೆಗೆ** ಗುಣ **ಚಿಕೇತ** ಎಂಬ ರೂಪವಾಗುತ್ತದೆ ಣಲ್ ಲಿತ್ವಾದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವವು ಉದಾತ್ತವಾಗುತ್ತದೆ ಯಃ ಎಂದು ಹಿಂದೆ ಇರುವುದರಿಂದ **ಯದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದೆ

ಗುಹಾ—ಸಪ್ತಮೀ ಏಕವಚನಸರದಲ್ಲಿರುವಾಗ **ಸುಪಾಂ ಸುಲುಕ್**—ಸೂತ್ರದಿಂದ ಆದಕ್ಕೆ ಾಕಾರಾದೇಶ ಬರುತ್ತದ

ಸಸಾದ- ಷದ್ಲೃ ವಿಶರಣಗತ್ಯವಸಾದನೇಷು ಧಾತು **ಲಿಟ್** ಪ್ರಥಮಪುರುಷ ಏಕವಚನದಲ್ಲಿ ಸಸಾದ ಎಂದು ರೂಪವಾಗುತ್ತದೆ ಇಲ್ಲಿಯೂ ಯಃ ಎಂದು ಹಿಂದೆ ಸಂಬಂಧವಿರುವುದರಿಂದ ನಿಘಾತಸ್ವರ ಪ್ರತಿಷಿದ್ಧವಾಗಿ **ಲಿತಿ** ಎಂಬುದರಿಂದ ಪ್ರತ್ಯಯಪೂರ್ವವು ಉದಾತ್ತವಾಗುತ್ತದೆ

ಚೈತಂತಿ—ಚೃತೀ ಹಿಂಸಾಗ್ರಂಥನಯೋಃ ಧಾತು. ತುದಾದಿ ಬಹುವಚನದಲ್ಲಿ **ಝೋಂತಿಃ** ಎಂಬುದರಿಂದ ಅಂತಾದೇಶ **ತುದಾದಿಭ್ಯಃ ಶಃ** ಎಂಬುದರಿಂದ ಶ ವಿಕರಣ **ಸಾರ್ವಧಾತುಕಮಪಿತ್** ಸೂತ್ರದಿಂದ ಅದು ಪಿತ್ತಾದುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ ಅದುಪದೇಶದಪರದಲ್ಲಿ **ಲಸಾರ್ವಧಾತುಕ** (ಅಂತಿ)ವು ಬಂದುದರಿಂದ **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ವಿಕರಣಸ್ವರ ಉಳಿಯುತ್ತದೆ ಯೇ ಎಂದು ಹಿಂದಿರುವುದರಿಂದ ನಿಘಾತಸ್ವರವು ಪ್ರತಿಷ್ಠಿತವಾಗುತ್ತದೆ.

ಋತಾ—ನಪುಂಸಕದಲ್ಲಿ ಶಸ್ಸಿಗೆ ಬಂದ ಶಿಗೆ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಲೋಪ ಬರುತ್ತದೆ.

ವವಾಚ—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು ಲಿಟ್ಪಿನಲ್ಲಿ **ಬ್ರುವೋ ವಚಿಃ** (ಪಾ. ಸೂ. ೨-೪-೫೩) ಎಂಬುದರಿಂದ ಧಾತುವಿಗೆ ವಚ್ಯಾದೇಶ ಲಿಣ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ. **ಲಿಟ್ಯಭ್ಯಾಸಸ್ಯೋಭಯೇಷಾಂ** (ಪಾ ಸೂ. ೬-೧-೧೭) ವಚ್ಯಾದಿಗಳಿಗೂ ಗ್ರಹ್ಯಾದಿಗಳಿಗೂ ಲಿಟ್ಪಿನಲ್ಲಿ ಸಂಪ್ರಸಾರಣ ಬರುತ್ತದೆ. ಎಂಬುದರಿಂದ ಅಭ್ಯಾಸಕ್ಕೆ ಸಂಪ್ರಸಾರಣ ಬರುತ್ತದೆ **ಸಂಪ್ರಸಾರಣಾಚ್ಚ** ಸೂತ್ರದಿಂದ ಪೂರ್ವರೂಪವು ಪ್ರಾಪ್ತವಾದರೆ **ವಾ ಛಂದಸಿ** (ಪಾ. ಸೂ. ೬-೧-೧೦೬) ಎಂಬುದರಿಂದ ಛಂದಸ್ಸಿನಲ್ಲಿ ವಿಕಲ್ಪವಾದ್ದರಿಂದ ಇಲ್ಲಿ ಬರುವುದಿಲ್ಲ. ಉ+ಅ+ವಚ್+ಅ ಎಂದಿರುವಾಗ ಯಣಾದೇಶದಿಂದ ಉಕಾರಕ್ಕೆ ವಕಾರ. **ಅತ ಉಪಧಾಯಾಃ** ಸೂತ್ರದಿಂದ ಉಪಧಾವೃದ್ಧಿ ವವಾಚ ಎಂದು ರೂಪವಾಗುತ್ತದೆ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೬-೭ ॥

॥ ಸಂಹಿತಾಪಾಠಃ ॥

ವಿ ಯೋ ವೀರುತ್ಸು ರೋಧನ್ಮಹಿತ್ವೋತ ಪ್ರಜಾ ಉತ ಪ್ರಸೂಷ್ವಂತಃ ।
ಚಿತ್ತಿರಪಾಂ ದಮೇ ವಿಶ್ವಾಯುಃ ಸದ್ಮೇವ ಧೀರಾಃ ಸಮಾಯು ಚಕ್ರುಃ ॥ ೯ ॥ ೧೦ ॥

॥ ಪದಪಾಠಃ ॥

ವಿ । ಯಃ । ವೀರುತ್ಸು । ರೋಧತ್ । ಮಹಿತ್ವಾ । ಉತ । ಪ್ರಜಾಃ । ಉತ । ಪ್ರಸೂಷು । ಅಂತರಿತಿ ।
ಚಿತ್ತಿಃ । ಅಪಾಂ । ದಮೇ । ವಿಶ್ವಆಯುಃ । ಸದ್ಮಇವ । ಧೀರಾಃ । ಸಂ-ಆಯು । ಚಕ್ರುಃ ॥ ೯ ॥ ೧೦ ॥

॥ ಸಾಯಣಭಾಷ್ಯಂ ॥

ಯೋಽಗ್ನಿರೀರುತ್ಸ್ವೌಷಧೀಷು ಮಹಿತ್ವಾ ಯಾನಿ ಮಹತ್ತ್ವಾನಿ ಸಂತಿ ತಾನಿ ವಿ ರೋಧತ್ ವಿರುಣದ್ಧಿ ವಿಶೇಷೇಣಾವೃಣೋತಿ ನಾವಶೇಷಯತಿ। ಉತಾಪಿ ಚ ಪ್ರಜಾಃ ಪ್ರಕರ್ಷೇಣೋತ್ಪನ್ನಾಃ ಪುಷ್ಪಫಲಾದಿಲಕ್ಷಣಾಃ ಪ್ರಸೂಷೂತ್ಪಾದಯತಿ ಪ್ರೇಷು ಮಾತೃಸ್ಥಾನೀಯಾಸ್ವೌಷಧೀಷ್ವಂತರ್ಮಧ್ಯೇ ವಿರುಣದ್ಧೀತ್ಯೇವ । ದ್ವಿತೀಯ ಉತಶಬ್ದಃ ಸಾದಪೂರಣಃ। ತಥಾ ಚೆತ್ತಿಶ್ಚೇತಯಿತಾ ಜ್ಞಾಪಯಿತಾಪಾಂ ದಮೇ ಜಲಾನಾಂ ಮಧ್ಯಭೂತೇ ಗೃಹೇ ವಿಶ್ವಾಯುಃ ಸರ್ವಾನ್ನೋ ಯೋಽಗ್ನಿರ್ವರ್ತತ ಇತಿ ಶೇಷಃ। ತಮಗ್ನಿಂ ಧೀರಾ ಮೇಧಾವಿನಃ ಸಂಮಾಯೈ ಸಂಮಾನನಂ ಪೂಜನಂ ಕೃತ್ವಾ। ಸ್ತುತಿಭಿಃ ಸ್ತುತ್ವೇತ್ಯರ್ಥಃ। ಚಕ್ರುಃ। ಕರ್ಮಾಣಿ ಕುವಂತಿ। ತತ್ರ ದೃಷ್ಟಾಂತಃ। ಸದ್ಮೇವ। ಯಥಾ ಸದನಂ ಗೃಹಂ ಪ್ರಥಮತಃ ಸಂಪೂಜ್ಯ ಪಶ್ಚಾತ್ತತ್ರ ಕರ್ಮಾಣ್ಯಾಚರಂತಿ ತದ್ವತ್ ॥ ವೀರುತ್ಸು । ವಿಪೂರ್ವಾದ್ರೋಹತೇಃ ಕ್ವಿಪ್ । ನ್ಯಂಕ್ವಾದಿಷು ವೀರುಧ್ । ಪಾ. ೭-೩-೫೩ । ಇತಿ ಪರಿತ್ವಾದುಪಸರ್ಗಸ್ಯ ದೀರ್ಘೋ ಧಕಾರಶ್ಚಾಂತಾದೇಶಃ । ಉಕ್ತಂ ಚ । ವೀರುಧ ಓಷಧಯೋ ಭವಂತಿ । ನಿ. ೬-೩ । ರೋಧತ್ । ರುಧಿರ್ ಆವರಣೇ। ಲೇಟ್ಯಡಾಗಮಃ । ಇತಶ್ಚ ಲೋಪೇ ಇತೀಕಾರಲೋಪಃ । ಸಂಮಾಯೈ । ಮಾಙ್ ಮಾನೇ ಶಬ್ದೇ ಚ । ಸಮಾಸೇ೨ನಞ್ಪೂರ್ವೇ ಕ್ತ್ವೋ ಲ್ಯಪ್ । ೭-೧-೩೭ । ನ ಲ್ಯಪಿ । ಪಾ ೬-೪-೬೯ । ಇತೀತ್ವ ಪ್ರತಿಷೇಧಃ ॥

॥ ಪ್ರತಿಪದಾರ್ಥ

ಯಃ—ಯಾವ ಅಗ್ನಿಯು । **ವೀರುತ್ಸು**—ಓಷಧಿಗಳಲ್ಲಿ । **ಮಹಿತ್ವಾ** (ಇರುವ) ಮಹಿಮೆಗಳನ್ನು । **ವಿ ರೋಧತ್**—ವಿಶೇಷವಾಗಿ ಮುಚ್ಚುವಂತೆ ಮಾಡುತ್ತಾನೋ । **ಉತ** - ಮತ್ತು । **ಪ್ರಜಾಃ**—ಪುಷ್ಪಫಲಾದಿಗಳನ್ನು । **ಪ್ರಸೂಷು**—ಮಾತೃಸ್ಥಾನೀಯವಾದ ಓಷಧಿಗಳಲ್ಲಿ । **ಅಂತಃ** -ಮಧ್ಯದಲ್ಲಿ । (**ವಿ ರೋಧತ್**—ಇರುವಂತೆ ಮಾಡುತ್ತಾನೋ) । **ಚಿತ್ತಿಃ**—ಜ್ಞಾನದಾಯಕನೋ । **ಅಪಾಂ ದಮೇ** ಉದಕಮಧ್ಯದಲ್ಲಿರುವ ಗೃಹದಲ್ಲಿ । **ವಿಶ್ವಾಯುಃ**—ಸರ್ವವೂ ಅನ್ನವಾಗಿ ಉಳ್ಳ ಅಗ್ನಿಯು ಇವಾನೆಯೋ । (**ತಮಗ್ನಿಂ**—ಆ ಅಗ್ನಿಯನ್ನು) । **ಸದ್ಮೇವ**—ಮನೆಯನ್ನು ಹೇಗೋ (ಹಾಗೆ) । **ಸಂಮಾಯೈ**—ಪೂಜಿಸಿ । **ಚಕ್ರುಃ**—(ಕರ್ಮಾದಿಗಳನ್ನು) ಮಾಡುತ್ತಾರೆ.

॥ ಭಾವಾರ್ಥ ॥

ಅಗ್ನಿಯು ಓಷಧಿ ವನಸ್ಪತಿಗಳಲ್ಲಿ ಇರುವ ಮಹಿಮೆಗಳಿಗೆ ಕಾರಣಭೂತನು, ಮತ್ತು ಅವುಗಳಲ್ಲಿ ಪ್ರಜಾಸ್ಥಾನೀಯ ಫಲಪುಷ್ಪಾದಿಗಳಿಗೆ ಕಾರಣನು, ಎಲ್ಲರಿಗೂ ಜ್ಞಾನದಾಯಕನು, ಜಲಮಧ್ಯದಲ್ಲಿ ವಾಸಮಾಡುವವನು ಮೊದಲು ವಾಸಗೃಹವನ್ನು ಪೂಜಿಸಿ ಅನಂತರ ಇತರ ಪೂಜಾದಿಗಳನ್ನು ಮಾಡುವಂತೆ, ಮೊದಲು ಅಗ್ನಿಯನ್ನು ಸ್ತುತಿವಾಕ್ಯಗಳಿಂದ ಸ್ತುತಿಸಿ, ಅನಂತರ ಯಜ್ಞಾದಿಗಳನ್ನು ಮಾಡುತ್ತಾರೆ.

English Translation.

The wise (first) adoring Agni, as they do a dwelling, perform sacrifices-(Agni) who implants their (peculiar) virtues in herbs, and places flowers and fruits in mother-like herbs, and who is the giver of knowledge and substenance

॥ ವಿಶೇಷವಿಷಯಗಳು ॥

ಚಿತ್ತಿಃ—ಅಪಾಂ ದಮೇ— ಚೇತಯಿತಾ ಜ್ಞಾಪಯಿತಾ ಅಗ್ನಿಃ ಜಲಾನಾಂ ಮಧ್ಯ ಭೂತೇ ಗೃಹೇ । ಚಿತಿ ಜ್ಞಾನೇ ಎಂಬ ಧಾತುವಿನಿಂದ ನಿಷ್ಪನ್ನವಾದ ಚಿತ್ತಿ ಶಬ್ದಕ್ಕೆ ಜ್ಞಾನಪ್ರದನು. ಜ್ಞಾನವನ್ನು ಹೊಂದಿರುವವನು. ಎಂದು ಅರ್ಥವು ಜ್ಞಾನವಂತನಾಗಿಯೂ ಇತರರಿಗೆ ಜ್ಞಾನವನ್ನು ಅನುಗ್ರಹಿಸುವವನೂ ಆದ ಅಗ್ನಿಯು ಉದಕಗಳ ಮಧ್ಯಪ್ರದೇಶವೆಂಬ ಗೃಹದಲ್ಲಿ ವಾಸವಾಡುವವನು ಎಂದು ಅರ್ಥವನ್ನು ಸಾಯಣರು ಹೇಳಿರುವರು

ಸ್ಕಂದಸ್ವಾಮಿಗಳು—**ಸಃ ಚಿತ್ತಿಃ-ಜ್ಞಾತಾ ಅಪಾಂ ವೃಷ್ಟಿಲಕ್ಷಣಾನಾಂ ಅಥವಾ ಅಪ ಇತ್ಯಂತರಿಕ್ಷನಾಮ ।** ಚಿತ್ತಿಃ ಎಂಬುವುದು ಜ್ಞಾನಿಯು ಎಂದು ಅರ್ಥವನ್ನು ಬೋಧಿಸುವುದು. ಅಗ್ನಿಯು ಜ್ಞಾನವಂತನಾಗಿ ವೃಷ್ಟಿಯ ರೂಪದಿಂದ ಇರುವ ಉದಕಗಳ ಮಧ್ಯದಲ್ಲಿ ಇರುವನು. ಅಥವಾ ಅಪಃ ಎಂಬ ಶಬ್ದವು ಅಂತರಿಕ್ಷವನ್ನು ಬೋಧಿಸುವ ಕಾರಣದಿಂದ ಅಂತರಿಕ್ಷಪದದ ಸಾಹಚರ್ಯದಿಂದ ಮೂರುಲೋಕಗಳೂ ಪರಾವೃಷ್ಟವಾಗಿರುತ್ತವೆ ದಮಶಬ್ದದ ಅರ್ಥವು ಮಧ್ಯಪ್ರದೇಶವಾಚಕವಾಗಿರುವುದು ಮೂರುಲೋಕಗಳ ಯಜ್ಞಗೃಹಗಳ ಮಧ್ಯಪ್ರದೇಶಗಳಲ್ಲಿ ಅಗ್ನಿಯು ಹೋತೃತ್ವೇನ ಸ್ತೋತ್ರವಾಡಲ್ಪಡುವನು ಅಥವಾ ವಾಸವಾಡುವನು ಎಂದು ಅರ್ಥವನ್ನು ಹೇಳುವರು

ಸಂಮಾಯೆ---ಸಮಾನನಂ ಪೂಜಾಂ ಕೃತ್ವಾ, ಸದ್ಮೇವ—ಮೊದಲು ಮನೆಯನ್ನು ಅಲಂಕರಿಸಿ ಅನಂತರದಲ್ಲಿ ಕರ್ಮಗಳನ್ನು ಆಚರಿಸುವ ಹಾಗೆ ಮೇಧಾವಿಗಳಾದವರು. ಮೊದಲು ಅಗ್ನಿಯನ್ನು ಸ್ತುತಿಗಳಿಂದ ಪೂಜಿಸುವರು ಎಂದು ಅರ್ಥವು

॥ ವ್ಯಾಕರಣಪ್ರಕ್ರಿಯಾ ॥

ವೀರುತ್ಸು—ರುಹ ಬೀಜಜನ್ಮನಿ ಪ್ರಾದುರ್ಭಾವೇ ಚ, ಧಾತು ವಿ ಉಪಸರ್ಗಪೂರ್ವಕವಾಗಿರುವಾಗ ಈ ಧಾತುವಿಗೆ **ಕ್ವಿಪ್ ಚ** ಎಂಬುದರಿಂದ ಕ್ವಿಪ್ ಪ್ರತ್ಯಯ. **ನ್ಯಂಕ್ವಾದೀನಾಂ ಚ** (ಪಾ· ಸೂ ೭-೩-೫೩) ಎಂಬಲ್ಲಿ ವೀರುಧ್ ಎಂದು ಸಾತವಾಡಿರುವುದರಿಂದ ವಿ ಎಂಬ ಉಪಸರ್ಗಕ್ಕೆ ದೀರ್ಘವೂ, ಧಾತುವಿನ ಹಕಾರಕ್ಕೆ ಧಕಾರಾದೇಶವೂ ಬರುತ್ತದೆ ವೀರುಧ್ ಎಂದು ಧಕಾರಾಂತವಾದ ಶಬ್ದವಾಗುತ್ತದೆ. ಸಸ್ತುಮಿಯಲ್ಲಿ ಸುಪರವಾದಾಗ ಜಸ್ತ್ವದಿಂದ ದಕಾರಾದೇಶವೂ **ಖರಿ ಚ** ಸೂತ್ರದಿಂದ ಚರ್ತ್ವದಿಂದ ತಕಾರಾದೇಶವೂ ಬರುತ್ತದೆ. ಕೃದುತ್ತರಪದ ಪ್ರಕೃತಿಸ್ವರದಿಂದ ಉಕಾರವು ಉದಾತ್ತವಾಗುತ್ತದೆ. ಯಾಸ್ಕರೂ ಈ ಶಬ್ದದ ವಿಷಯದಲ್ಲಿ ಹೀಗೆ ಹೇಳಿರುತ್ತಾರೆ **ವೀರುಧ ಓಷಯೋ ಭವಂತಿ** (ನಿ ೬-೩) ವನೌಷಧಿಗಳಿಗೆ ವೀರುತ್ ಎಂದು ಹೆಸರು

ರೋಧತ್—ರುಧಿರ್ ಆವರಣೇ ಧಾತು ಲೇಟಿನಲ್ಲಿ ಪ್ರಥಮಪುರುಷ ಏಕವಚನದ ತಿ ಪ್ರತ್ಯಯ **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಅದರ ಇಕಾರಕ್ಕೆ ಲೋಪ **ಲೇಟೋಡಾಟೌ** ಸೂತ್ರದಿಂದ ಅದಕ್ಕೆ ಅಡಾಗಮ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಲಘೂಪಧಕ್ಕೆ ಗುಣ ರೋಧತ್ ಎಂದು ರೂಪವಾಗುತ್ತದೆ. ಯಃ ಎಂದು ಹಿಂದೆ ಇರುವುದರಿಂದ **ಯದ್ಯುತ್ತಾನ್ನಿತ್ಯಂ** ಸೂತ್ರದಿಂದ ನಿಘಾತಪ್ರತಿಷೇಧ ಬರುತ್ತದೆ. ಧಾತುಸ್ವರ ಉಳಿಯುತ್ತದೆ.

ಮಹಿತ್ವಾ – ನಪುಂಸಕದಲ್ಲಿ ಆದೇಶವಾಗಿ ಬಂದ ದ್ವಿತೀಯಾ ಬಹುವಚನದ ಶಿಗೆ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಲೋಪ

ಚಿತ್ತಿಃ—ಚಿತೀ ಸಂಜ್ಞಾನೇ ಧಾತು. **ಸ್ತ್ರಿಯಾಂ ಕ್ತಿನ್** ಎಂಬುದರಿಂದ ಕ್ತಿನ್ ಪ್ರತ್ಯಯ ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಆಸಾಂ—ಅಪ್ ಶಬ್ದದ ಷಷ್ಠೀ ಬಹುವಚನಾಂತರೂಪ. **ಊಡಿದಂಪದಾದಿ**—(ಪಾ ಸೂ ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ವಿಶ್ವಾಯುಃ—**ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ

ಸಂಮಾಯ—ಮಾಙ್ ಮಾನೇ ಶಬ್ದೇ ಚ ಧಾತು. ಪೂರ್ವಕಾಲಕ್ರಿಯಾವಾಚಕನಾದಾಗ, **ಸಮಾಸೇ ನಞ್ ಪೂರ್ವೇ ಕ್ತ್ವೋ ಲ್ಯಪ್** (ಪಾ ಸೂ. ೭-೧-೩೭) ಎಂಬುದರಿಂದ ನಞ್ ಪೂರ್ವದಲ್ಲಿ ಇಲ್ಲದಿರುವುದರಿಂದ ಸಮ್ ಎಂಬುದರೊಡನೆ ಸಮಾಸನಾದುದರಿಂದ ಪ್ರಾಪ್ತವಾದ ಕ್ತ್ವಾ ಪ್ರತ್ಯಯಕ್ಕೆ ಲ್ಯಪ್ ಆದೇಶ ಬರುತ್ತದೆ ಅನುಬಂಧವಾದ ಕಕಾರವು ಸ್ಥಾನಿವದ್ಭಾವದಿಂದ ಲ್ಯಪ್ಪಿನಲ್ಲಿಯೂ ಒಡನಿರುವುದರಿಂದ **ಘುಮಾಸ್ಥಾಗಾಪಾಂ** (ಪಾ ಸೂ. ೬-೪-೬೬) ಎಂಬುದರಿಂದ ಧಾತುವಿಗೆ ಈತ್ವವು ಪ್ರಾಪ್ತವಾದರೆ **ನಲ್ಯಪಿ** (ಪಾ ಸೂ ೬-೪-೬೮) ಎಂಬುದರಿಂದ ಲ್ಯಪ್ ಪರವಾದಾಗ ಈತ್ವಕ್ಕೆ ನಿಷೇಧ ಬರುತ್ತದೆ ಕಿತ್ತಾದುದರಿಂದ ಅನುದಾತ್ತವಾಗಿರುವುದರಿಂದ ಧಾತುಸ್ವರ ಉಳಿಯುತ್ತದೆ. ಸಮಾಸದಲ್ಲಿ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

ಚಕ್ರುಃ ಡುಕೃಞ್ ಕರಣೇ ಧಾತು ಲಿಟ್ಪ್ರಥಮಪುರುಷ ಬಹುವಚನದಲ್ಲಿ ಉಕ್ತರೂಪವಾಗುತ್ತದೆ **ತಿಙ್ಶಿತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ

ಹದನೆತ್ತೇಳನೇ ಸೂಕ್ತ ಸಮಾಪ್ತವ

ಅರವತ್ತೆಂಟನೆಯ ಸೂಕ್ತವು

ಶ್ರೀಣನ್ನಿತಿ ದ್ವೈಪದಂ ದಶರ್ಚಂ ಚತುರ್ಥಂ ಸೂಕ್ತಂ। ತತ್ಪಾಧ್ಯಯನತಃ ಪಂಚರ್ಚಂ। ಋಷ್ಯಾದ್ಯಾಃ ಪೂರ್ವವತ್ ॥ ವಿನಿಯೋಗಸ್ತು ಲೈಂಗಿಕಃ ॥

ಅನುವಾದವು—ಶ್ರೀಣನ್ನುಪ ಎಂಬ ಸೂಕ್ತವು ಹನ್ನೆರಡನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು ಇದರಲ್ಲಿ ದ್ವಿಪದಾವಿರಾಟ್‌ಛಂದಸ್ಸಿನ ಹತ್ತು ಋಕ್ಕುಗಳು ಅಥವಾ ಅಧ್ಯಯನಾನುಸಾರವಾಗಿ ಐದು ಋಕ್ಕುಗಳು ಇರುವುವು. ಋಷಿದೇವತಾ ಛಂದಸ್ಸುಗಳು ಹಿಂದಿನ ಸೂಕ್ತದಂತೆ ವಿನಿಯೋಗವು ಲೈಂಗಿಕವು.

ಸೂಕ್ತ—೬೮

॥ ಓಂ ॥

॥ ಮಂಡಲ—೧ ॥ ಅನುವಾಕ—೧೨ ॥ ಸೂಕ್ತ—೬೮ ॥
॥ ಅಷ್ಟಕ—೧ ॥ ಅಧ್ಯಾಯ—೫ ॥ ವರ್ಗ—೧೨ ॥
॥ ಸೂಕ್ತವಲ್ಲಿಪುನ ಋಕ್ಸಂಖ್ಯೆ—೫ (೧೦) ॥
॥ ಋಷಿಃ—ಪಾರಾಶರಃ ಶಾಕ್ತ್ಯಃ ॥
ದೇವತಾ—ಅಗ್ನಿಃ ॥
ಛಂದಃ—ದ್ವಿಪದಾ ವಿರಾಟ್ ।

। ಸಂಹಿತಾಪಾಠಃ ।

ಶ್ರೀಣನ್ನುಪ ಸ್ಥಾದ್ಧ್ವಿವಂ ಭುರಣ್ಯಂ ಸ್ಥಾತುಶ್ಚರಥಮುಕ್ಥ್ಯಂ-
ನ್ಯೃಣೋರ್ತ್ ।
ಪರಿ ಯದೇಷಾಮೇಕೋ ವಿಶ್ವೇಷಾಂ ಭುವದ್ದೇವೋ ದೇವಾನಾಂ
ಮಹಿತ್ವಾ ॥ ೧ ॥ ೨ ॥

॥ ಪದಕಾರಃ ॥

ಶ್ರೀಣನ್ । ಉಪ । ಸ್ಥಾತ್ । ದಿವಂ । ಭುರಣ್ಯುಃ । ಸ್ಥಾತುಃ । ಚರಥಂ ।
ಅಕ್ತೂನ್ । ವಿ । ಊರ್ಣೋತ್ ।

ಪರಿ । ಯತ್ । ಏಷಾಂ । ಏಕಃ । ವಿಶ್ವೇಷಾಂ । ಭುವತ್ । ದೇವಃ । ದೇವಾನಾಂ ।
ಮಹಿತ್ವಾ ॥ ೧ ॥ ೨ ॥

॥ ಸಾಯಣಭಾಷ್ಯಂ ॥

ಭುರಣ್ಯುರ್ಹವಿಷಾಂ ಭರ್ತಾ ಧಾರಯಿತಾ ಪಯಃಪ್ರಭೃತಿನಾ ಶ್ರಯಣದ್ರವ್ಯೇಣ ಸೋಮಮಿವ ತೈರ್ಹವಿರ್ಭಿಃ ಶ್ರೀಣನ್ ಮಿಶ್ರಯನ್ಸಿವಮುಪ ಸ್ಥಾತ್ ಉಪಶಿಷ್ಟಿತಿ । ಪ್ರಾಪ್ನೋತೀತ್ಯರ್ಥಃ । ಸ್ಥಾತುಃ ಸ್ಥಾವರಂ ಚರಥಂ ಜಂಗಮಂ ತದುಭಯಾತ್ಮಕಂ ಜಗದಕ್ತೂನ್ ಸರ್ವಾ ರಾತ್ರೀಶ್ಚ ವ್ಯೂರ್ಣೋತ್ । ಸ್ವತೇಜಸಾ ವಿಶೇಷೇಣಾಚ್ಛಾದಯತಿ । ಹವಿರ್ವಹನಂ ಕುರ್ವನ್ಸರ್ವಮಪಿ ಜಗತ್ಸ್ವಭಾಸಾ ಪ್ರಕಾಶಯತಿ ಸ್ಮೇತಿ ಭಾವಃ । ವಿಶ್ವೇಷಾಂ ಸರ್ವೇಷಾಂ ದೇವಾನಾಂ ದಾನಾದಿಗುಣಯುಕ್ತಾನಾಮಿಂದ್ರಾದೀನಾಂ ಮಧ್ಯೇ ದೇವೋ ದ್ಯೋತಮಾನ ಏಕ ಏವಾಯಮಗ್ನಿರೇಷಾಂ ಪೂರ್ವೋಕ್ತಾನಾಂ ಸ್ಥಾವರಾದೀನಾಂ ಮಹಿತ್ವಾ ಮಹತ್ತ್ವಾನಿ ಮಾಹಾತ್ಮ್ಯಾನಿ ಯದ್ಯಸ್ಮಾತ್ಪರಿ ಭುವತ್ ಪರಿಭವತಿ ಪರಿಗೃಹ್ಣಾತಿ ಪರಿತೋ ವ್ಯಾಪ್ಯ ವರ್ತತೇ। ಪರಿಪೂರ್ವೋ ಭವತಿಃ ಪರಿಗ್ರಹಾರ್ಥಃ । ಯದ್ವಾ । ಏಷಾಂ ವಿಶ್ವೇಷಾಂ ಸ್ಥಾವರಾದೀನಾಂ ಮಧ್ಯೇ ವರ್ತಮಾನೋಽಯಂ ದೇವೋಽಗ್ನಿರ್ದೇವಾನಾಂ ಮಹತ್ತ್ವಾನಿ ಯದ್ಯದಾ ಪರಿ ಭುವತ್ ಪರಿತೋ ವ್ಯಾಪ್ನೋತಿ । ತದಾನೀಮಿತಿ ಪೂರ್ವತ್ರಾನ್ವಯಃ ॥ ಊರ್ಣೋತ್ ಊರ್ಣುಙ್ ಆಚ್ಛಾದನೇ । ಊರ್ಣೋತೇರ್ವಿಭಾಷಾ । ಪಾ. ೭-೨-೬ । ಇತಿ ವೃದ್ಧೇರ್ವಿಕಲ್ಪಃ ॥

॥ ಪ್ರತಿಪದಾರ್ಥ ॥

ವಿಶ್ವೇಷಾಂ --(ದಾನಾದಿಗುಣಯುಕ್ತರಾದ ಇಂದ್ರಾದಿ) ದೇವತೆಗಳ (ಮಧ್ಯದಲ್ಲಿ) । **ದೇವಃ**—ಪ್ರಕಾಶಮಾನನಾದ । **ಏಕಃ**—ಒಬ್ಬನೇ । **ಏಷಾಂ**—(ಚರಸ್ಥಾವರಪ್ರಪಂಚದಲ್ಲಿರುವ) ದೇವತೆಗಳ । **ಮಹಿತ್ವಾ**—ಮಹಾತ್ಮ್ಯಗಳನ್ನು । **ಯತ್**—ಯಾವ ಕಾರಣ । **ಪರಿಭುವತ್**—ವ್ಯಾಪಿಸಿಕೊಂಡಿರುತ್ತಾನೆಯೋ । (**ತತ್**—ಆದಕಾರಣ) । **ಭುರಣ್ಯುಃ**—ಹವಿರ್ವಹನ ಮಾಡುವ ಅಗ್ನಿಯು । **ಶ್ರೀಣ**—(ಹವಿಸ್ಸನ್ನು ಇತರ ಪದಾರ್ಥಗಳೊಡನೆ) ಮಿಶ್ರಮಾಡಿ । **ದಿವಂ**—ಸ್ವರ್ಗವನ್ನು । **ಉಪ ಸ್ಥಾತ್**—ಪ್ರಾಪ್ತನಾಗುತ್ತಾನೆ । **ಸ್ಥಾತುಃ**—ಸ್ಥಾವರವಾದ (ಮತ್ತು) । **ಚರಥಂ**—ಚರವಾದ (ಜಗತ್ತೆಲ್ಲವನ್ನೂ) । **ಅಕ್ತೂನ್**—ಎಲ್ಲಾ ರಾತ್ರಿಗಳನ್ನೂ । **ವ್ಯೂರ್ಣೋತ್**--ತನ್ನ ಪ್ರಕಾಶದಿಂದ ಆವರಿಸುತ್ತಾನೆ

॥ ಭಾವಾರ್ಥ ॥

ಇಂಪ್ರಾದಿಸೇವತೆಗಳ ಮಧ್ಯದಲ್ಲಿ ಪ್ರಕಾಶಮಾನನಾದ, ತನ್ನಲ್ಲಿ ಎಲ್ಲ ದೇವತೆಗಳ ಅಥವಾ ಚರಾಚರಾತ್ಮಕ ಪ್ರಪಂಚದ ಮಹಾತ್ಮಿಗಳನ್ನು ಸೇರಿಸಿಟ್ಟುಕೊಂಡಿರುವ. ದೇವತೆಗಳಿಗೆ ಹವಿಸ್ಸನ್ನು ತೆಗೆದುಕೊಂಡುಹೋಗುವ ಅಗ್ನಿಯು, ಹವಿಸ್ಸನ್ನು ಇತರ ಪದಾರ್ಥಗಳೊಡನೆ ಮಿಶ್ರಮಾಡಿ, ತೆಗೆದುಕೊಂಡು ಸ್ವರ್ಗಕ್ಕೆ ಹೋಗುತ್ತಾ, ಪ್ರಪಂಚವನ್ನೆಲ್ಲಾ ತನ್ನ ಸ್ರಕಾಶದಿಂದ ಬೆಳಗುತ್ತಾನೆ

English Translation.

The bearer (of the oblations, Agni), mixing them (with other ingredients), ascends to heaven, and clothes all things, moveable and immoveable, and the nights themselves (with light), radiant amongst the Gods, and in himself alone comprehending the virtues of all these (substances).

॥ ವಿಶೇಷವಿಷಯಗಳು ॥

ಭುರಣ್ಯುಃ– ಹವಿಷಾಂ ಭರ್ತಾ ಧಾರಯಿತಾ । ಯಜ್ಞದಲ್ಲಿ ಅರ್ಪಿಸುವ ಹವಿಸ್ಸುಗಳನ್ನು ರಕ್ಷಿಸಿಮಾಡಿ ಅವುಗಳನ್ನು ಧರಿಸುವ ಅಗ್ನಿಯು, ಸೋಮರಸವನ್ನು ಹಾಲು ಮೊದಲಾದವುಗಳಿಂದ ಬೆರಸಿರುವ ಹಾಗೆ ಆ ಹವಿಸ್ಸುಗಳನ್ನು ಶೇಖರಿಸಿಕೊಂಡು ಅಂತರಿಕ್ಷಲೋಕವನ್ನು ಹೊಂದುವನು ಎಂದು ಸಾಯಣರು ಅರ್ಥಮಾಡಿರುವರು ಸ್ಕಂದಸ್ವಾಮಿಗಳು ಭುರಣ್ಯುಃ–ಎಂಬುವ ಪದಕ್ಕೆ ಕ್ಷಿಪ್ರಗಾಮಿ ಎಂದು ಅರ್ಥವನ್ನು ಮಾಡಿರುತ್ತಾರೆ. ಮತ್ತು ಶ್ರೀಣ ಎಂಬ ಪದವನ್ನು ದಾಹವೆಂಬ ಅರ್ಥದಲ್ಲಿ ಉಪಯೋಗಿಸಿ ದಾಹರೂಪವಾದ ಅಗ್ನಿಯು ತೃಣೌಷಧಿವನಸ್ಪತಿಗಳನ್ನು ಸುಡಲಿ ಎಂದೂ ವಿವರಿಸಿರುವರು

ಸಾಯಣಭಾಷ್ಯದಲ್ಲಿ ಸ್ಥಾವರಜಂಗಮಾತ್ಮಕವಾದ ಜಗತ್ತನ್ನೂ ಮತ್ತು ಎಲ್ಲಾ ರಾತ್ರಿಗಳನ್ನೂ ಕೂಡ ಅಗ್ನಿಯು ತನ್ನ ಕಾಂತಿಗಳಿಂದ ವ್ಯಾಪಿಸಿರುವನು ಎಂದು **ಅಕ್ತೂ ಸರ್ವಾ ರಾತ್ರೀಶ್ಚ ವ್ಯುನೋತ್** ಎಂಬ ಪದಕ್ಕೆ ಅರ್ಥವನ್ನು ಮಾಡಿರುವರು ದಾನಾದಿಗುಣವುಳ್ಳ ಇಂದ್ರನೇ ಮೊದಲಾದ ದೇವತೆಗಳ ಮಧ್ಯದಲ್ಲಿ ಪ್ರಕಾಶಿಸುತ್ತಿರುವ ಈ ಅಗ್ನಿಯು ಒಬ್ಬನೇ ಎಲ್ಲರನ್ನೂ ಮೀರಿ ಒಹಳ ಮಹಿಮೆಯುಳ್ಳವನಾಗಿ ಎಲ್ಲವನ್ನೂ ವ್ಯಾಪಿಸಿ ಇರುವನು ಎಂಬುವುದಾಗಿ **ಪರಿಭುವತ್ ಪರಿಭವತಿ ಪರಿಗೃಹ್ಣಾತಿ ಪರಿತೋ ವ್ಯಾಪ್ಯ ವರ್ತತೇ । ಪರಿಪೂರ್ವಃ ಭವತಿಃ ಪರಿಗ್ರಹಾರ್ಥಃ ।** ಎಂದು ಹೇಳಿರುವರು

ಸ್ಕಂದಸ್ವಾಮಿಗಳು **ರಾತ್ರೀಶ್ಚ ತಮೋರೂಪಾಸ್ತಸೀಃ ಸ್ವೇನ ಜ್ಯೋತಿಷಾ ಪ್ರಕಾಶರೂಪಾಃ ಕರೋತಿ। ಸ್ಥಾವರಂ ಜಂಗಮಂ ಚ ರಾತ್ರಿಷು ಪ್ರಕಾಶಯತೀತ್ಯರ್ಥಃ ।** ಕಗ್ಗತ್ತಲೆಯ ರೂಪದಿಂದ ಇರುವ ರಾತ್ರಿಗಳನ್ನೂ ತನ್ನ ಪ್ರಕಾಶದಿಂದ ಅಗ್ನಿಯು ಪ್ರಕಾಶವುಳ್ಳವುಗಳನ್ನಾಗಿ ಮಾಡುವನು ಮತ್ತು ಸ್ಥಿರಚರವಾದ ವಸ್ತುಗಳನ್ನೂ ರಾತ್ರಿಯಲ್ಲಿ ತನ್ನ ಪ್ರಕಾಶದಿಂದ ಎಲ್ಲರೂ ನೋಡುವಂತೆ ಮಾಡುವನು ಎಂದು ಅರ್ಥವನ್ನೂ ಮಾಡುವನು

॥ ವ್ಯಾಕರಣಪ್ರಕ್ರಿಯಾ ॥

ಶ್ರೀಣನ್—ಶ್ರೀಞ್ ಸಾಕೇ ಧಾತು ಉಭಯಪದಿ ಕ್ರ್ಯಾದಿಲತರ್ಧದಲ್ಲಿ ಶತೃಪ್ರತ್ಯಯ **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾವಿಕರಣ ಶತೃಪ್ರತ್ಯಯವು **ಸಾರ್ವಧಾತುಕಮಪಿತ್** ಎಂಬುದರಿಂದ ಙಿತ್ತಾಗುವುದರಿಂದ **ಶ್ನಾಭ್ಯಸ್ತಯೋರಾತಃ** (ಪಾ ಸೂ ೬-೪-೧೧೨) ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಲೋಪ ಬರುತ್ತದೆ **ಅಟ್‌ಕುಪ್ವಾಙ್**—ಸೂತ್ರದಿಂದ ನಕಾರಕ್ಕೆ ಣತ್ವ. ಶ್ರೀಣತ್ ಶಬ್ದವಾಗುತ್ತದೆ ಪ್ರತ್ಯಯಸ್ವರದಿಂದ ಅಕಾರ ಉದಾತ್ತವಾಗುತ್ತದೆ ಪ್ರಥಮಾ ಸುವಿನವಾದಾಗ ನುಮಾಗಮ ಸುಲೋಪ ಅಂತ್ಯತಕಾರಲೋಪ ಶ್ರೀಣನ್ ಎಂದು ರೂಪವಾಗುತ್ತದೆ

ಸ್ಥಾತ್—**ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲುಙ್ **ಇತಶ್ಚ** ಸೂತ್ರದಿಂದ ತಿಪ್ರತ್ಯಯದ ಇಕಾರಕ್ಕೆ ಲೋಪ **ಗಾತಿಸ್ಥಾಘುಪಾ**—ಎಂಬುದರಿಂದ ಚ್ಲಿಗೆ ಬಂದ ಸಿಚ್ಚಿಗೆ ಲೋಪ ಬಹುಲಂ **ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ

ಊರ್ಣೋತ್ ಊರ್ಣುಞ್ ಆಚ್ಛಾದನೇ ಧಾತು ಒಬ್‌ನಲ್ಲಿ ತಿಪ್ರತ್ಯಯ ಹಿಂದಿನಂತೆ ಅದರ ಇಕಾರಕ್ಕೆ ಲೋಪ ಇಲ್ಲಿ **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್ ಬಂದಮೇಲೆ **ಉತೋವೃದ್ಧಿ-ರ್ಲುಕಿ ಹಲಿ** ಎಂಬುದರಿಂದ ವೃದ್ಧಿಯು ಬರಬೇಕಾಗುತ್ತದೆ ಆದರೆ **ಊರ್ಣೋತೇರ್ವಿಭಾಷಾ** (ಪಾ. ಸೂ ೭-೩-೯೦) ಹಲಾದಿಯಾದ ಪಿತ್ತಾದ ಸಾರ್ವಧಾತುಕ ಪರವಾದಾಗ **ವಿಕಲ್ಪವಾಗಿ** ವೃದ್ಧಿ ಬರುತ್ತದೆ ಎಂಬುದರಿಂದ ಇಲ್ಲಿ ವೃದ್ಧಿ ಬರುವುದಿಲ್ಲ ಆಗ **ಗುಣೋಽರ್ತಿಸಂಯೋಗಾದ್ಯೋಃ** (ಪಾ ಸೂ ೭-೪-೧೬) ಎಂಬುದರಿಂದ ಹಿಂದೆ ಹೇಳಿದ ಪಿವಿತ್ತ ವಿರುವಾಗ ಗುಣ ಬರುತ್ತದೆ **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಊರ್ಣೋತ್ ಎಂದು ರೂಪವಾಗುತ್ತದೆ ಈ ಬಂತದ ಪರವಿರುವುದರಿಂದ ನಿಘಾತಸ್ವರ ಬರುತ್ತದೆ

ಭುವತ್—(೧-೫೬-೬೭-೧, ೨) ಮಂತ್ರದಲ್ಲಿ ವಾಖ್ಯಾತವಾಗಿದೆ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಧಾತುಸ್ವರದಿಂದ ಉಕಾರ ಉದಾತ್ತವಾಗುತ್ತದೆ

ಮಹಿತ್ವಾ—ಹಿಂದಿನಂತೆ **ಶೇಶ್ಛಂದಸಿ ಬಹುಲಂ** ಎಂಬುದರಿಂದ ವಿ ಲೋಪವಾಗುತ್ತದೆ ॥ ೧೦-೨ ॥

॥ ಸಂಹಿತಾಪಾಠಃ ॥

ಆದಿತ್ತೇ ವಿಶ್ವೇ ಕ್ರತುಂ ಜುಷಂತ ಶುಷ್ಕಾದ್ಯದ್ಧೇವ ಜೀವೋ ಜನಿಷ್ಟಾಃ ।

ಭಜಂತ ವಿಶ್ವೇ ದೇವತ್ವಂ ನಾಮ ಋತಂ ಸಪಂತೋ ಅಮೃತ-
ಮೇವೈಃ ॥ ೩ ॥ ೪ ॥

॥ ಪದಪಾಠಃ ॥

ಆತ್ । ಇತ್ । ತೇ । ವಿಶ್ವೇ । ಕ್ರತುಂ । ಜುಷಂತ । ಶುಷ್ಮಾತ್ । ಯತ್ । ದೇವ ।
ಜೀವಃ । ಜನಿಷ್ಮಾಃ ।
ಭಜಂತ । ವಿಶ್ವೇ । ದೇವ ಽ ತ್ವಂ । ನಾಮ । ಋತಂ । ಸಪಂತಃ । ಅಮೃತಂ ।
ಏವೈಃ ॥ ೩ ॥ ೪ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನಾಗ್ನೇ ಜೀವೋ ಜೀವನ್ಪ್ರಜ್ವಲನ್ ಶುಷ್ಮಾನ್ನೀರಸಾದರಣಿರೂಪಾತ್ಕಾ-ಷ್ಠಾದ್ಯದ್ಯದಾ ಜನಿಷ್ಮಾಃ ಪ್ರಾದುರ್ಭವಸಿ ಮಥನೇನೋತ್ಪದ್ಯಸೇ ಆದಿತ್ ಅನಂತರಮೇವ ವಿಶ್ವೇ ಸರ್ವೇ ಯಜಮಾನಾಸ್ತೇ ತುಭ್ಯಂ ಕ್ರತುಂ ಕರ್ಮ ಜುಷಂತ । ಸೇವಂತೇ । ಅನುತಿಷ್ಠಂತಿ । ತಥಾನುಷ್ಠಾಯ ಚ ವಿಶ್ವೇ ತೇ ಸರ್ವೇ ನಾಮ ನಾಮಕಮೃತಮವಿತಥಂ ದೇವತ್ವಂ ದೇವತಾತ್ವಂ ಭಜಂತ । ಭಜಂತೇ । ಪ್ರಾಪ್ನುವಂತಿ । ಕಿಂ ಕುರ್ವಂತಃ । ಅಮೃತಮಮರಣಂ ತ್ವಾಮೇನೈಸ್ತ್ವಾಂ ಗಂತೃಭಿಃ ಸ್ತೋತೃಭಿಃ ಸಪಂತಃ ಸಮವಯಂತಃ । ಪ್ರಾಪ್ನುವಂತ ಇತ್ಯರ್ಥಃ ॥ ಜುಷಂತೇತ್ಯಾದೀನಿ ತ್ರೀಣ್ಯಾಖ್ಯಾತಾನಿ ಚ್ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನಾರ್ಥಾನಿ । ಏವೈಃ । ಯೆಂತಿ ಸ್ತೋತವ್ಯಾಭಿಮುಖ್ಯೇನ ಗಚ್ಛಂತೀತ್ಯೇ-ವಾನಿ ಸ್ತೋತಾರಾಣಿ । ಇಣ್ ಶೀಙ್ಭ್ಯಾಂ ವನ್ । ಉ. ೧-೧೫೨ ॥

॥ ಪ್ರತಿಪದಾರ್ಥ ॥

ದೇವ--ಪ್ರಕಾಶಮಾನನಾದ ಅಗ್ನಿಯೇ । **ಜೀವಃ**—ಜ್ವಲಿಸುತ್ತಾ । **ಶುಷ್ಮಾತ್**--ಒಣಗಿದ । **ಕಾಷ್ಠಾತ್**—ಕಟ್ಟಿಗೆಯಿಂದ (ಅರಣಿಯಿಂದ) । **ಯತ್**—ಯಾವಾಗ । **ಜನಿಷ್ಮಾಃ**—(ಮಥನದಿಂದ) ಉದ್ಭೂತ ನಾದೆಯೋ । **ಆದಿತ್**—ಅನಂತರವೇ । **ವಿಶ್ವೇ**--ಎಲ್ಲರೂ (ಯಜಮಾನರೂ) । **ತೇ**—ನಿನ್ನ । **ಕ್ರತುಂ**--ಕರ್ಮವನ್ನು । **ಜುಷಂತೆ**—ಸೇವಿಸುತ್ತಾರೆ (ಯಜ್ಞವನ್ನು ಮಾಡುತ್ತಾರೆ) । **ಅಮೃತಂ**—ಅಮರನಾದ

(ನಿನ್ನನ್ನು) । **ವಿಶ್ವೇ**—ಪ್ರಾಪ್ತವಾಗುವ (ಸ್ತುತಿಗಳಿಂದ) । **ಸಪಂತಃ**—ಸೇರುವವರಾಗಿ (ಸ್ತುತಿಸುವವರಾಗಿ) । **ವಿಶ್ವೇ**—(ಅವರು) ಎಲ್ಲರೂ । **ನಾಮ**—ನಿಜವಾಗಿಯೂ । **ಋತಂ**—ಜೀವಿತಧನವನ್ನು । **ದೇವತ್ವಂ** ದೇವ ತಾತ್ವವನ್ನು । **ಭಜಂತೆ**—ಹೊಂದುತ್ತಾರೆ

॥ ಭಾವಾರ್ಥ ॥

ಅರಣಿಮಥನದಿಂದ ಪ್ರಜ್ವಲಿಸುತ್ತಾ ಉತ್ಪನ್ನನಾದ ನಿನ್ನನ್ನು ಸ್ತುತಿವಾಕ್ಯಗಳಿಂದ ಸ್ತುತಿಸಿ, ನಿನ್ನ (ನಿನ್ನನ್ನು ಉದ್ದೇಶಮಾಡಿ ಮಾಡುವ) ಕರ್ಮಗಳನ್ನು ಮಾಡಿ, (ನಿನ್ನ ಪ್ರಸಾದದಿಂದ) ನಿಜವಾಗಿಯೂ ದೇವತ್ವವನ್ನು ಪಡೆಯುತ್ತಾರೆ

English Translation

O divine Agni, when you are born living from the dry wood, (by attrition), then all (your worshippers) perform the sacred ceremony, and obtain verily true divinity by lauding you, who are immortal, with hymns that reach you

॥ ವಿಶೇಷವಿಷಯಗಳು ॥

ಜೀವಃ ಪ್ರಜ್ವಲನ್ ಜೀವನ್ । ಅಗ್ನಿಯು ಪ್ರಜ್ವಲಿಸುವವನಾಗಿ ಒಣಗಿರುವ ಕಟ್ಟಿಗೆಯ ರೂಪದಿಂದ ಇರುವ ಅರಣಿಯಿಂದ ಮಥನಮಾಡುವಾಗ ಉತ್ಪನ್ನವಾಗಿ ಇರುವನು ಹೀಗೆ ಇರುವ ಈ ಅಗ್ನಿಯನ್ನು ಯಜ್ಞ ಮಾಡುವ ಯಜಮಾನರುಗಳು ಯಾಗರೂಪವಾದ ಕರ್ಮಗಳ ಆಚರಣೆಯಿಂದ ಸ್ತುತಿಸಿ, ಸ್ತೋತ್ರಮಾಡಿ ದೇವತ್ವವನ್ನು ಹೊಂದುವರು ಜಡವಸ್ತುವಿನಿಂದ ಉತ್ಪನ್ನನಾಗಿ ಇರುವ ಅಗ್ನಿಯು ತನ್ನನ್ನು ಸೃಜಿಸಿದವರಿಗೆ ದೇವ ತಾತ್ವವನ್ನು ಅನುಗ್ರಹಿಸುವ ಮಹಿಮೆಯುಳ್ಳವನಾಗಿರುವನು ಸ್ತುತಿಸುವವರೂ ಈ ಅರ್ಥವನ್ನು ವಿವರಿಸಿರುವರು

ವ್ಯಾಕರಣಪ್ರಕ್ರಿಯಾ

ತೇ—ಯುಷ್ಮಚ್ಛಬ್ದಕ್ಕೆ ಚತುರ್ಥೀ ಏಕವಚನದಲ್ಲಿ **ತೇ ಮಯೋವೇಕವಚನಸ್ಯ** (ಪಾ ಸೂ ೭-೧-೩೯) ಎಂಬುದರಿಂದ ಅನುದಾತ್ತವಾದ ತೇ ಎಂಬ ಆದೇಶಬರುತ್ತದೆ

ಜುಷಂತ—ಜುಷೀ ಪ್ರೀತಿಸೇವನಯೋಃ ಧಾತು. ಇದಕ್ಕೆ ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌-ಲಿಟಃ** ಎಂಬುದರಿಂದ ಲಙ್ ಪ್ರಥಮಪುರುಷ ಬಹುವಚನದಲ್ಲಿ **ಝೋಽಂತಃ** ಎ ಬುದರಿಂದ ಅಂತಾದೇಶ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಅದಿಬಂತದ ಸರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಶುಷ್ಮಾತ್—ಶುಷ ಧಾತುವಿಗೆ ನಿಷ್ಠಾತಕಾರ ಪರದಲ್ಲಿರುವಾಗ **ಶುಷಃ ಕಃ** (ಪಾ ಸೂ ೮-೩-೫೯) ಎಂಬುದರಿಂದ ತಕಾರಕ್ಕೆ ಕಕಾರಾದೇಶ ಬರುತ್ತದೆ

ಜನಿಷ್ಮಾಃ—ಜನೀ ಪ್ರಾದುರ್ಭಾವೇ ಹಿಂದಿನಂತೆ ವರ್ತಮಾನಾರ್ಥದಲ್ಲಿ ಲುಙ್ ಮಧ್ಯಮಪುರುಷ ಏಕವಚನದಲ್ಲಿ ಥಾಸ್ ಪ್ರತ್ಯಯ. **ಚ್ಲೇಃ ಸಿಚ್** ಎಂಬುದರಿಂದ ಚ್ಲಿಗೆ ಸಿಚಾದೇಶ ಆದಕ್ಕೆ ಇಡಾಗಮ. **ಆದೇಶಪ್ರತ್ಯಯಯೋಃ** ಸೂತ್ರದಿಂದ ಆದಕ್ಕೆ ಷತ್ವ. ಷ್ಟುತ್ವದಿಂದ ಪ್ರತ್ಯಯ. ಧಕಾರಕ್ಕೆ ರಕಾರಾದೇಶ. ಹಿಂದಿನಂತೆ ಆಡಾಗಮ ಬರುವುದಿಲ್ಲ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ

ಭಜಂತ—ಹಿಂದಿನಂತೆ ವರ್ತಮಾನಾರ್ಥದಲ್ಲಿ ಛಾಂದಸಿಕವಾದ ಲಙ್ ಪಾದಾದಿಯಲ್ಲಿರುವುದರಿಂದ ನಿಘಾತ ಸ್ವರ ಬರುವುದಿಲ್ಲ ಅದುಪದೇಶದ ಪರದಲ್ಲಿರುವುದರಿಂದ **ತಾಸ್ಯನುದಾತ್ತೇತ್**—ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತ. ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ

ಏನ್ಯೈಃ—ಯಂತಿ ಸ್ತೋತವ್ಯಾಭಿಮುಖ್ಯೇನ ಗಚ್ಛಂತಿ ಇತಿ ಏನಾನಿ ಸ್ತೋತ್ರಾಣಿ. ಇಙ್ ಗತೌ ಧಾತು. **ಇಙ್ ಶೀಙ್ಭ್ಯಾಂ ವನ್** (ಉ ಸೂ ೧-೧೫೦) ಎಂಬುದರಿಂದ ವನ್ ಪ್ರತ್ಯಯ. ಪ್ರತ್ಯಯ ನಿಮಿತ್ತವಾಗಿ ಧಾತುವಿಗೆ ಗುಣ. **ಇಷ್ಣಿತ್ಯಾದಿರ್ನಿತ್ಯಂ** ಎಂಬುದರಿಂದ ನಿತ್‌ಪ್ರತ್ಯಯಾಂತವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ತೃತೀಯಾ ಬಹುವಚನದಲ್ಲಿ **ಏನ್ಯೈಃ** ಎಂದು ರೂಪವಾಗುತ್ತದೆ ॥ ೩-೪ ॥

॥ ಸಂಹಿತಾಪಾಠಃ ॥

ಋತಸ್ಯ ಪ್ರೇಷಾ ಋತಸ್ಯ ಧೀತಿರ್ವಿಶ್ವಾಯುರ್ವಿಶ್ವೇ ಅಪಾಂಸಿ ಚಕ್ರುಃ ।

ಯಸ್ತುಭ್ಯಂ ದಾಶಾದ್ಯೋ ನಾ ತೇ ಶಿಕ್ಷಾತ್ತಸ್ಮೈ ಚಿಕಿತ್ವಾನ್ರಯಿಂ ದಯಸ್ವ ॥ ೫ ॥ ೬ ॥

॥ ಪದಪಾಠಃ ॥

ಋತಸ್ಯ । ಪ್ರೇಷಾಃ । ಋತಸ್ಯ । ಧೀತಿಃ । ವಿಶ್ವಽಆಯುಃ । ವಿಶ್ವೇ । ಅಪಾಂಸಿ । ಚಕ್ರುಃ ।

ಯಃ । ತುಭ್ಯಂ । ದಾಶಾತ್ । ಯಃ । ನಾ । ತೇ । ಶಿಕ್ಷಾತ್ । ತಸ್ಮೈ । ಚಿಕಿತ್ವಾನ್ । ರಯಿಂ । ದಯಸ್ವ ॥ ೫ ॥ ೬ ॥

॥ ಸಾಯಣಭಾಷ್ಯಂ ॥

ಋತಸ್ಯ ಗತಸ್ಯ ದೇವಯಜನಂ ಪ್ರಾಪ್ತಸ್ಯಾಗ್ನೇಃ ಪ್ರೇಷಾಃ ಪ್ರಕರ್ಷೇಣೇಷ್ಯಮಾಣಾಃ ಸ್ತುತಯಃ ಕ್ರಿಯಂತೇ । ಧೀತಿಃ । ಧೀಯತೇ ಸೋಮಃ ಪೀಯತೇಽಸ್ಮಿನ್ನಿತಿ ಧೀತಿರ್ಯಾಗಃ । ಸೋಽಪಿ ಋತಸ್ಯ ದೇವಯಜನದೇಶಂ ಪ್ರಾಪ್ಯಸ್ಯಾಗ್ನೇರೇವ ಕ್ರಿಯತೇ । ಅತಃ ಸೋಽಗ್ನಿರ್ವಿಶ್ವಾಯುಃ । ವಿಶ್ವಂ ಸರ್ವಮಾಯುರನ್ನಂ ಯಸ್ಯ ಸ ತಥಾವಿಧೋ ಭವತಿ । ಅಪಿ ಚಾಸ್ಮೈ ವಿಶ್ವೇ ಸರ್ವೇ ಯಜಮಾನಾ ಆಸಾಂಸಿ ದರ್ಶಪೂರ್ಣಮಾಸಾದೀನಿ ಕರ್ಮಾಣಿ ಚಕ್ರುಃ । ಕುರ್ವಂತಿ । ಹೇ ಅಗ್ನೇ ತುಭ್ಯಂ ಯೋ ದಾಶಾನ್ ಚರುಪುರೋಡಾಶಾದೀನಿ ಹವೀಂಷಿ ದದಾತಿ । ಯೋ ವಾನ್ಯೋಽಪಿ ಯೋ ಯಜಮಾನಸ್ತೇ ಶಿಕ್ಷಾತ್ ತ್ವದೀಯಂ ಕರ್ಮ ಕರ್ತುಂ ಶಕ್ತೋ ಭೂಯಾಸಮಿತೀಚ್ಛತಿ । ಉಭಯವಿಧಾಯೈ ತಸ್ಮೈ ಯಜಮಾನಾಯ ಚಿಕಿತ್ವಾನ್ ತತ್ಕೃತಮನುಷ್ಠಾನಂ ಜಾನಂಸ್ತ್ವಂ ರಯಿಂ ದಯಸ್ವ । ಧನಂ ದೇಹಿ ॥ ದಾಶಾತ್ । ದಾಶೃ ದಾನೇ । ಲೇಟ್ಯಾಡಾಗಮಃ । ಶಿಕ್ಷಾತ್ । ಶಕ್ಲೃ ಶಕ್ತೌ । ಇಚ್ಛಾರ್ಥೇ ಸನ್ । ಸನಿ ಮಾಮಾಘುರಭಲಭಶಕೇತ್ಯಕಾರಸ್ಯೇಸಾದೇಶಃ । ಪಾ ೭-೪-೫೪ । ಅತ್ರಲೋಪೋಽಭ್ಯಾಸಸ್ಯೇತ್ಯಭ್ಯಾಸ-ಲೋಪಃ । ಸ್ಕೋಃ ಸಂಯೋಗಾದ್ಯೋರಿತಿ ಸಕಾರಲೋಪಃ । ಪೂರ್ವವಲ್ಲೇಟ್ಯಾಡಾಗಮಃ । ಚಿಕಿತ್ವಾನ್ । ಕಿತ ಜ್ಞಾನೇ । ಲಿಟಃ ಕ್ವಸುಃ । ದಯಸ್ವ । ದಯೆ ದಾನಗತಿರಕ್ಷಣಹಿಂಸಾದಾನೇಷು ॥

॥ ಪ್ರತಿಪದಾರ್ಥ ॥

ಋತಸ್ಯ—(ಯಾಗ ಸ್ಥಳವನ್ನು) ಪ್ರಾಪ್ತನಾದ (ಅಗ್ನಿಯನ್ನುದ್ದೇಶಿಸಿ) । **ಪ್ರೇಷಾಃ**—ಸ್ತುತಿವಾಕ್ಯಗಳು (ಉಚ್ಚರಿಸಲ್ಪಡುತ್ತವೆ) । **ಧೀತಿಃ**—(ಸೋಮಪಾನವಿಹಿತವಾದ) ಯಾಗವು । **ಋತಸ್ಯ**—ಯಾಗಶಾಲೆಯನ್ನು ಪ್ರಾಪ್ತನಾದ (ಅಗ್ನಿಯನ್ನುದ್ದೇಶಿಸಿಯೇ ಮಾಡುವುದು) । **(ಅತಃ**—ಆದುದರಿಂದಲೇ) । **ವಿಶ್ವಾಯುಃ**—ಸಮಸ್ತವೂ ಆಹಾರವಾಗಿ ಉಳ್ಳವನು । **ವಿಶ್ವೇ**—ಎಲ್ಲರೂ (ಯಜಮಾನರು) । **ಆಸಾಂಸಿ**—(ದರ್ಶಪೂರ್ಣಮಾಸಾದಿ) ಕರ್ಮಗಳನ್ನು । **ಚಕ್ರುಃ** ಮಾಡುತ್ತಾರೆ । **ತುಭ್ಯಂ**—(ಅಗ್ನಿಯೇ) ನಿನಗೆ । **ಯಃ**- ಯಾವನು । **ದಾಶಾತ್**-ಪುರೋಡಾಶಾದಿಗಳನ್ನು ಕೊಡುತ್ತಾನೋ । **ಯೋ ವಾ**- ಬೇರೆ ಯಾವನು । **ತೇ** - ನಿನ್ನ । **ಶಿಕ್ಷಾತ್**-ಕರ್ಮಗಳನ್ನು ಮಾಡಲು ಶಕ್ತನಾಗಬೇಕೆಂದು ಇಚ್ಛಿಸುತ್ತಾನೋ । **ತಸ್ಮೈ**- ಅಂತಹ ಯಜಮಾನನಿಗೆ । **ಚಿಕಿತ್ವಾನ್**—ತತ್ಕೃತವಾದ ಕರ್ಮಗಳನ್ನು ತಿಳಿದ ನೀನು । **ರಯಿಂ**—ಧನವನ್ನು । **ದಯಸ್ವ**—ಕೊಡು

॥ ಭಾವಾರ್ಥ ॥

ಯಜ್ಞಶಾಲೆಗೆ ಪ್ರಾಪ್ತನಾದ ನಿನ್ನನ್ನು ಉದ್ದೇಶಿಸಿಯೇ ಸ್ತೋತ್ರಗಳೂ, ಯಜ್ಞಗಳೂ ಮಾಡಲ್ಪಡುವುವು. ಆದುದರಿಂದಲೇ ನಿನಗೆ ವಿಶ್ವಾಯು (ಸಮಸ್ತವೂ ಆಹಾರವಾಗಿ ಉಳ್ಳವನು) ಎಂದು ಹೆಸರು ನಿನಗೋಸ್ಕರವೇ ದರ್ಶ ಪೂರ್ಣಮಾಸಾದಿಗಳನ್ನು ಯಜಮಾನರು ಮಾಡುವುದು ನಿನಗೆ ಚರ್ವಾದಿಗಳನ್ನು ಕೊಡುವವನಿಗೂ, ನಿನ್ನನ್ನುದ್ದೇಶಿಸಿ ಕರ್ಮಮಾಡಬೇಕೆಂದು ಇಚ್ಛಿಸುವವನಿಗೂ ಕೂಡ ನೀನು ಧನಾದಿಗಳನ್ನು ಕೊಡು

English Translation.

Laudatory hymns are addressed to him when he comes (to the sacrifice); oblations are offered when he comes; he is the source of sustenance unto all, all (worshippers) perform all rites (for him) Do you, Agni, knowing (the thoughts of the worshipper), grant riches to him who presents to you oblations, or who wishes (to be able to present them).

॥ ವಿಶೇಷವಿಷಯಗಳು ॥

ಪ್ರೈಷಃ—ಪ್ರಕರ್ಷೇಣೇಷ್ಯಮಾಣಾಃ ಸ್ತುತಯಃ । ಪ್ರ ಎಂಬ ಉಪಸರ್ಗದ ಸಂಗಡ ಇರುವ ಇಷು ಧಾತುವಿಗೆ ಅತಿಶಯಿತವಾದ ಇಚ್ಛೆಯೆಂದು ಅರ್ಥವಾಗುವುದು. ಅಗ್ನಿಯ ಉದ್ದೇಶ್ಯವಾಗಿ ಆಚರಿಸಲ್ಪಡುವ ಯಜ್ಞರೂಪವಾದ ಕರ್ಮದಲ್ಲಿ ಈ ವಿಧವಾದ ಇಚ್ಛೆಯು ಸ್ತೋತ್ರದಲ್ಲಿ ಪರ್ಯವಸಿತವಾಗುವುದಾದ್ದರಿಂದ ಸ್ತುತಿಗಳು ಎಂದು ಅರ್ಥವು

ಧೀತಿಃ—ಧೀಯತೇ ಸೋಮಃ ಪೀಯತೇ ಅಸ್ಮಿನ್ನಿತಿ ಧೀತಿಃ । **ಯಾಗಃ** । ಸೋಮಲತೆಯ ರಸವು ಪಾನಮಾಡಲ್ಪಡುವುದರಿಂದ ಯಾಗವು ಧೀತಿಯೆನಿಸಿರುವುದು. ಧೇಟ್ ಪಾನೇ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಸಾಮಾನ್ಯವಾಗಿ ಪೇಯದ್ರವ್ಯವೆಂದೂ ಅರ್ಥವಾಗುವುದಾದರೂ ಇಲ್ಲಿ ವಿಶೇಷಾರ್ಥರೂಪವಾಗಿ ಯಾಗವೆಂಬ ಅರ್ಥವನ್ನು ನಿರ್ದೇಶಮಾಡಿರುತ್ತದೆ

ವಿಶ್ವಾಯುಃ—ವಿಶ್ವಂ ಸರ್ವಂ ಆಯುರನ್ನಂ ಯಸ್ಯ । ಎಲ್ಲಾ ಯಜ್ಞಗಳಲ್ಲಿಯೂ ಹವಿಸ್ಸುಗಳು ಅಗ್ನಿಯಲ್ಲಿಯೇ ಅರ್ಪಿಸಲ್ಪಡುವ ಕಾರಣ ಅಗ್ನಿಯು ವಿಶ್ವಾಯುವೆನಿಸಿರುವನು. ಪ್ರಾಣಿಗಳ ಜೀವಿತಕಾಲವನ್ನು ಬೋಧಿಸುವ ಆಯುಶ್ಶಬ್ದವು ಪ್ರಾಣಧಾರಣರೂಪವಾದ ತತ್ಪಾಧನವೆಂಬ ಅರ್ಥದಲ್ಲಿ ಇಪ್ಪತ್ತೆಂಟು ಅನ್ನನಾಮಗಳ ಮಧ್ಯದಲ್ಲಿ (ನಿ ೩-೯) ಪಠಿತವಾಗಿರುವುದು. ಎಲ್ಲಾ ಅನ್ನವನ್ನೂ ಸ್ವೀಕರಿಸುವ ಕಾರಣ ಯಾಗವನ್ನು ಮಾಡುವವರಿಗೂ, ದರ್ಶಪೂರ್ಣಮಾಸವೇ ಮೊದಲಾದ ಯಾಗಗಳಲ್ಲಿ ಚರುಪುರೋಡಾಶಾದಿಗಳನ್ನು ಅರ್ಪಿಸುವವರಿಗೂ, ಈ ಪ್ರಕಾರವಾದ ಕರ್ಮಗಳನ್ನು ಆಚರಿಸಲು ಇಚ್ಛೆಯುಳ್ಳ ಯಜಮಾನರಿಗೂ ಧನವನ್ನು ಕೊಡು ಎಂಬುದಾಗಿ **ಆಪಾಂಸಿ, ಶಿಕ್ಷತಾತ್** ಎಂಬ ಪದಗಳಿಗೆ ಅರ್ಥವು

॥ ವ್ಯಾಕರಣಪ್ರಕ್ರಿಯಾ ॥

ಚಕ್ರುಃ—ಡುಕೃಞ್ ಕರಣೇ ಧಾತು ಲಿಟ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ ಉಸಾದೇಶ. ಕಿತ್ವಾದುದರಿಂದ ಗುಣಾದಿಗಳು ಬರುವುದಿಲ್ಲ ಅತಿಙಂತದಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ದಾಶಾತ್—ದಾಶೃ ದಾನೇ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ರತ್ಯಯ. **ಇತಶ್ಚ ಲೋಪಃ ಪರಸ್ಮೈಪದೇಷು** ಸೂತ್ರದಿಂದ ಇಕಾರಕ್ಕೆ ಲೋಪ **ಲೇಟೋಽಡಾಟೌ** ಎಂಬುದರಿಂದ ಪ್ರತ್ಯಯಕ್ಕೆ ಆಡಾಗಮ. ದಾಶಾತ್ ಎಂದು ರೂಪವಾಗುತ್ತದೆ. ಹಿಂದೆ ಯಃ ಎಂದು ಯಚ್ಛಬ್ದವಿರುವುದರಿಂದ **ಯೆದ್ಯೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ ಲಸಾರ್ವಧಾತುಕವು ಅನುದಾತ್ತವಾದುದರಿಂದ ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ.

ಶಿಕ್ಷಾತ್ -ಶಕ್ಲೃ ಶಕ್ತೌ ಧಾತು ಇಚ್ಛಾರ್ಥೋರುವಾಗ **ಧಾತೋಃ ಸಮಾನಕರ್ತೃಕಾದಿಚ್ಛಾಯಾಂ ವಾ** ಸೂತ್ರದಿಂದ ಸನ್ ಸನ್ನಂತದನೇಲೆ ಲೇಟ್‌ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಸನ್ಯಙೋಃ** ಎಂಬುದರಿಂದ ಧಾತುವಿನ ಏಕಾಚಿಗೆ ದ್ವಿತ್ವ. **ಸನಿ ಮೀಮಾ**—(ಪಾ. ಸೂ ೭-೪-೫೪) ಎಂಬುದರಿಂದ ಧಾತುವಿನ ಉತ್ತರಖಂಡದಲ್ಲಿರುವ ಅಕಾರಕ್ಕೆ ಇಸಾದೇಶ **ಅತ್ರಲೋಪೋಭ್ಯಾಸಸ್ಯ** (ಪಾ ಸೂ ೭-೪-೫೮) ಎಂಬುದರಿಂದ ಇಸಾದೇಶ ಬಂದಾಗ ಅಭ್ಯಾಸಕ್ಕೆ ಲೋಪ ಶಿಸ್‌ಕ್‌ ಸ ಎಂದಿರುವಾಗ **ಸ್ಕೋಃ ಸಂಯೋಗಾದ್ಯೋರಂತೇ ಚ** ಎಂಬುದರಿಂದ ಸ ನಿಮಿತ್ತವಾಗಿ ಸಂಯೋಗಾದಿಯಾದ ಸಕಾರಕ್ಕೆ ಲೋಪ. ಕಕಾರವನ್ನು ನಿಮಿತ್ತೀಕರಿಸಿ ಸನ್ನಿನ ಸಕಾರಕ್ಕೆ ಷತ್ವ. (ಕಕಾರಷಕಾರಯೋಗದಿಂದ ಕ್ಷಕಾರ) ಶಿಕ್ಷ ಎಂಬುದು ಸನ್ನಂತವಾಗುತ್ತದೆ. **ಲೇಟೋಽಡಾಟೌ** ಎಂಬುದರಿಂದ ಪ್ರತ್ಯಯಕ್ಕೆ ಆಡಾಗಮ. ಇಲ್ಲಿಯೂ ಯಃ ಎಂಬುದು ಹಿಂದೆ ಇರುವುದರಿಂದ ನಿಘಾತಸ್ವರ ಬರುವುದಿಲ್ಲ ಸನ್ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಚಿಕಿತ್ವಾನ್– ಕಿತ ಜ್ಞಾನೇ ಧಾತು **ಕ್ವಸುಶ್ಚ** (ಪಾ ಸೂ. ೩-೨-೧೦೭) ಎಂಬುದರಿಂದ ಲಿಟ್‌ಗೆ ಕ್ವಸು ಆದೇಶ ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ **ಕುಹೋಶ್ಚುಃ** ಎಂಬುದರಿಂದ ಚುತ್ವದಿಂದ ಚಕಾರಾದೇಶ. ಚಿಕಿತ್ವಸ್ ಶಬ್ದವಾಗುತ್ತದೆ ಪ್ರಥಮಾ ಸು ಪರವಾದಾಗ **ಅತ್ವಸಂತಸ್ಯಚಾಧಾತೋಃ** ಸೂತ್ರದಿಂದ ಅಸಂತೋಪಧೆಗೆ ದೀರ್ಘ. ಕ್ವಸುವಿನಲ್ಲಿ ಉಗಿತ್ತಾದುದರಿಂದ **ಉಗಿದಚಾಂ**—ಸೂತ್ರದಿಂದ ನುಮಾಗಮ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ಸುಲೋಪ ಸಂಯೋಗಾಂತಲೋಪದಿಂದ ಸಕಾರಲೋಪ. ಪ್ರತ್ಯಯಸ್ವರದಿಂದ ವಸ್ಸಿನ ಅಕಾರ ಉದಾತ್ತವಾಗುತ್ತದೆ

ದಯಸ್ವ— ದಯ **ದಾನ**ಗತಿರಕ್ಷಣಹಿಂಸಾದಾನೇಷು, ಧಾತು ಅನುದಾತ್ತೇತ್ತಾದುದರಿಂದ ಆತ್ಮನೇ ಪದ ಲೋಟ್‌ಮಧ್ಯಮಪುರುಷ ಏಕವಚನದಲ್ಲಿ **ಸವಾಭ್ಯಾಂ ವಾಮೌ** ಎಂಬುದರಿಂದ ಏತ್ವಕ್ಕೆ ವ ಆದೇಶ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೫-೬ ॥

॥ ಸಂಹಿತಾಪಾಠಃ ॥

ಯೋತ್ತಾ ನಿಷತ್ತೋ ಮನೋರಪತ್ಯೇ ಸ ಚಿನ್ನ್ವಸ್ವಾಂ ಪತೀ ರಯೀಣಾಂ ।

ಇಚ್ಛಂತ ರೇತೋ ಮಿಥಸ್ತನೂಷು ಸಂ ಜಾನತ ಸ್ವೈರ್ದಕ್ಷೈರಮೂರಾಃ ॥ ೭ ॥ ೪ ॥

॥ पदपाठः ॥

होता । निऽसत्तः । मनोः । अपत्ये । सः । चित् । नु । आसाम् ।

पतिः । रयीणाम् ।

इच्छन्त । रेतः । मिथः । तनूषु । सम् । जानत । स्वैः । दक्षैः ।

अमूराः ॥ २ ॥ ९ ॥

॥ सायणभाष्यम् ॥

हे अग्ने त्वं मनोरपत्ये यजमानस्वरूपायां प्रजायां होता देवानामह्वाता सन् निषत्तोऽसि निषण्णः । मानव्यो हि प्रजाः । तै सं. ५-८-५-६ । इति हि ब्राह्मणम् । स चिन्नु स एव त्वमासां प्रजानां रयीणां गवादीनां धनानामपि पतिः स्वामी । अतस्ताः प्रजास्तनूष्वात्मीयेषु शरीरेषु मिथः संसृष्टमेकीभूतं पुत्ररूपेण परिणतं रेतोवीर्यमिच्छन्ते । इच्छन् । श्वेदनुग्रहेण पुत्रमलभन्तेति यावत् । लब्धपुत्राश्च ताः प्रजा अमूराः अमूढाः सत्यः स्वैः स्वकीयैर्दक्षैः समर्थैः पुत्रैः सह सं जानते । सम्यगवगच्छन्ति । चिरकालं जीवन्तीत्यर्थः । यद्वा । दक्षशब्दः प्राणवाची । प्राणो वै दक्षोऽसानः कर्तुरिति श्रुतेः । स्वैर्दक्षैः स्वकीयैः प्राणैरमूराः संगतास्त्वय्येव सर्वं जानन्ति ॥ इच्छन्त । व्यत्ययेनात्मनेपदम् । जानत । छान्दसो लङ् । ऋग्यादादेशे श्नाभ्यस्तयोरातः इत्याकारलोपः । अमूराः । मूरा अमूरेत्यत्रयास्क एवं व्याचख्यौ । मूढा वयं स्मोऽमूढास्त्वमसि । नि. ६-७ । इति । अतोऽत्राप्यमूरशब्देनामूढत्वमुच्यते । वर्णव्यापत्त्या ढकारस्य रेफः । ह्रदाद्वा । मुह्यन्ति मोहसमुच्चार्योयोगः । अस्मात्सिपदादिलक्षणो भावे क्विप् । रालोपेप इति धलोपः । रो मत्वर्थीयः । न मूराः अमूराः । अथवा । अमु गत्यादिषु । अस्मादौणादिके ऊरन्प्रत्ययः ॥

॥ ಪ್ರತಿಪದಾರ್ಥ ॥

(**ಅಗ್ನೇ**--ಅಗ್ನಿಯೇ ನೀನು)। **ಮನೋರಪತ್ಯೇ**—ಯಜಮಾನರೂಪರಾದ ಪ್ರಜೆಗಳಲ್ಲಿ। **ಹೋತಾ**--ದೇವತೆಗಳನ್ನು ಆಹ್ವಾನಿಸುವವನಾಗಿ। **ನಿಷತ್ತ**ಃ—ಇರುವವನು। **ಸ ಚಿನ್ನು**—ಅದೇ ನೀನು। **ಅಸಾಂ**—ಈ ಪ್ರಜೆಗಳ। **ರಯೀಣಾಂ**--ಧನಾದಿಗಳಿಗೆ। **ಪತಿಃ**—ಸ್ವಾಮಿಯು। **ತನೂಷು**—ಸ್ವಕೀಯ ಶರೀರಗಳಲ್ಲಿ। **ಮಿಥಃ**—ಏಕೀಭೂತವಾದ (ಪುತ್ರರೂಪವಾಗಿ ಪರಿಣತವಾಗುವ)। **ರೇತಃ**—ವೀರ್ಯವನ್ನು। **ಇಚ್ಛಂತ**—ಅಪೇಕ್ಷಿಸುತ್ತಾರೆ। **ಅಮೂರಾಃ**—ಜ್ಞಾನಿಗಳಾಗಿ। **ಸ್ವೈಃ**—ತಮ್ಮ। **ದಕ್ಷೈಃ**—ಸಮರ್ಥರಾದ (ಪುತ್ರರೊಡನೆ)। **ಸ ಜಾನತೆ**--ಚೆನ್ನಾಗಿ ತಿಳಿದುಕೊಳ್ಳುತ್ತಾರೆ (ಚಿರಕಾಲ ಬಾಳುತ್ತಾರೆ)। (**ಸ್ವೈರ್ದಕ್ಷೈಃ**—ತಮ್ಮ ಪ್ರಾಣಗಳಿಂದ। **ಅಮೂರಾಃ**--ಯುಕ್ತರಾಗಿ। **ಸಂ ಜಾನಂತಿ**—ನಿನ್ನಿಂದ ಎಲ್ಲವನ್ನೂ ತಿಳಿಯುತ್ತಾರೆ)

॥ ಭಾವಾರ್ಥ ॥

ಎಲೈ ಅಗ್ನಿಯೇ ನೀನೇ ಯಜಮಾನರಿಗಾಗಿ ದೇವತೆಗಳನ್ನು ಆಹ್ವಾನಿಸಿ ಸವನು ನೀನೇ ಅವರ ಧನಾದಿಗಳಿಗೆ ಸ್ವಾಮಿಯು ನಿನ್ನಿಂದಲೇ ಸಂತಾನಪ್ರದವಾದ ವೀರ್ಯವನ್ನು ಪಡೆಯುತ್ತಾರೆ ತಮ್ಮ ಸಮರ್ಥರಾದ ಪುತ್ರರಿಂದ ಕೂಡಿ (ನಿನ್ನ ಪ್ರಸಾದದಿಂದ) ಚಿರಕಾಲ ಬಾಳುತ್ತಾರೆ

English Translation

You have abided with the descendants of Manu as the invoker (of the gods), you are indeed the lord of their possessions, They have desired (of you) procreative vigour in their bodies, and associated with their own excellant offsping, they contemplate (all things) undisturbed

॥ ವಿಶೇಷವಿಷಯಗಳು ॥

ಮನೋರಪತ್ಯೇ—ಯಜಮಾನಸ್ವರೂಪಾಯಾಂ ಪ್ರಜಾಯಾಂ। ತ-ಕ್, ತೋಕಂ, ತನಯಃ, ಎಂಬ ಹದಿನೈದು ಪುತ್ರನಾಮಗಳ ಮಧ್ಯದಲ್ಲಿ (ನಿ ೩-೬) ಅಪತ್ಯಶಬ್ದವು ಪರಿತವಾಗಿರುವುದರಿಂದ ಇಲ್ಲಿ ಮನು-ವಿನ ಅಪತ್ಯವು ಮನುವಿನಿಂದ ಉತ್ಪನ್ನರಾದ ಪ್ರಜೆಗಳು ಮನುಷ್ಯರು ಎಂದು ಅರ್ಥವು **ಮಾನವ್ಯೋ ಹಿ ಪ್ರಜಾಃ** (ತೈ. ಸಂ ೫-೧-೫ ೬) ಎಂದು ಶ್ರುತಿಯು ಬೋಧಿಸುವುದು. ಈ ವಿಧನಾದ ಪ್ರಜೆಯು ಯಜ್ಞಮಾಡುವ ಯಜಮಾನರೂಪದಿಂದ ಇರುವನು. ಇವನು ಯಜ್ಞಮಾಡುವಾಗ ದೇವತೆಗಳನ್ನು ಅವರವರ ಹವಿರ್ಭಾಗದ ಸ್ವೀಕಾರಕ್ಕಾಗಿ ಅಗ್ನಿಯ ರೂಪದಿಂದಲೇ ಆಹ್ವಾನಮಾಡುವನು. ಇದೇ ಅರ್ಥವನ್ನು **ಪ್ರಜಾಯಾಂ ಹೋತಾ ದೇವಾನಾಮಾಹ್ವಾತಾ ಸನ್ ಅಗ್ನಿಃ ನಿಷತ್ತೇ ನಿಷಣ್ಣಃ** ಎಂದು ಹೇಳಿರುತ್ತದೆ

ಮಿಥಸ್ತನೂಷು ರೇತಃ ಇಚ್ಛಂತ—ಅತ್ಮೀಯೇಷು ಶರೀರೇಷು ಸಂಸೃಷ್ಟಮೇಕೀಭೂತಂ ಪುತ್ರ-ರೂಪೇಣ ಪರಿಣತಂ ವೀರ್ಯಮೈಚ್ಛನ್ । ಅಗ್ನಿದೆವನು ಎಲ್ಲಾ ವಿಧವಾದ ಧನಗಳನ್ನೂ ಅನುಗ್ರಹಿಸುವವನಾದಕಾರಣ ಯಜ್ಞಮಾಡುವವರು ತಮ್ಮ ತಮ್ಮ ಶರೀರಗಳಲ್ಲಿ ಸೇರಿಕೊಂಡಿರುವ ಪುತ್ರರ ರೂಪದಿಂದ ಪರಿಣಾಮವನ್ನು ಹೊಂದುವ, ಉದಕರೂಪದಿಂದ ಇರುವ ವೀರ್ಯವನ್ನು ನಿನ್ನ ಅನುಗ್ರಹದಿಂದ ಹೊಂದಲು ಅಪೇಕ್ಷಿಸಿದರು. ಮತ್ತು ಅದನ್ನು ಹೊಂದಿದರು ಎಂದು ಅರ್ಥವು. ರೇತಃ ಶಬ್ದವು ನೂರು ಉದಕನಾಮಗಳ ಮಧ್ಯದಲ್ಲಿ (ನಿ ೧-೧೪) ಉಕ್ತವಾಗಿರುವುದು. ರೇತಸ್ಸೆಂದರೆ ಉದಕವೆಂದು ಅರ್ಥವು **ರೀಯತೇ ಸ್ರವತಿ ಇತಿ ರೇತಃ, ಯದ್ವಾ ವೃಷ್ಟಿಲಕ್ಷಣಾನಾಂ ಅಪಾಂ ದೇವಾನಾಂ ರೇತಸ್ತ್ವಾತ್ ರೇತ ಉಚ್ಯತೇ ।** ಈ ಉದಕವು ಸ್ರವಿಸುವ ಕಾರಣ ರೇತಸ್ಸೆಂಬುದಾಗಿಯೂ. ವೃಷ್ಟಿರೂಪವಾಗಿರುವ ಉದಕಗಳು ದೇವತೆಗಳ ರೇತಸ್ಸಾಗಿರುವುದೆಂಬುದಾಗಿಯೂ ಅರ್ಥವನ್ನು ವಿವರಿಸಿರುವರು ಈ ಶಬ್ದವು—

ರಾಜಂತೀ ಅಸ್ಯ ಭುವನಸ್ಯ ರೋದಸೀ ಅಸ್ಮೇ ರೇತಃ ಸಿಂಚತೆಂ ಯನ್ಮನುರ್ಹಿತಂ ।

(ಋ. ಸಂ. ೬-೭೦-೨)

ಸಸ್ತಾರ್ಧಗರ್ಭಾ ಭುವನಸ್ಯ ರೇತೋ ವಿಷ್ಣೋಸ್ತಿಷ್ಠಂತಿ ಪ್ರದಿಶಾ ವಿಧರ್ಮಣಿ ।

(ಋ ಸಂ ೧-೧೬೪-೩೬)

ಎಂಬ ಋಕ್ಕುಗಳಲ್ಲಿ ಉದಕವೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುತ್ತದೆ

ದಕ್ಷೈಃ ಅಮೂರಾಃ ಸಂಜಾನಂತ--ಸಮರ್ಥೈಃ ಪುತ್ರೈಃ ಸಹ ಸಮ್ಯಗವಗಚ್ಛಂತಿ ಚಿರಕಾಲಂ ಜೀವಂತೀತ್ಯರ್ಥಃ । ಯದ್ವಾ ದಕ್ಷಶಬ್ದಃ ಪ್ರಾಣ ವಾಚೀ । ಪ್ರಾಣೋ ವೈ ದಕ್ಷೋಽಪಾನಃ ಕೃತುಃ (ತೈ. ಸಂ. ೨-೫-೨-೪) ಇತಿ ಶ್ರುತೇಃ । ಸ್ವೈಃ ದಕ್ಷೈಃ ಪ್ರಾಣೈಃ ಅಮೂರಾಃ ಸಂಗತಾಸ್ತ್ವಯೈವ ಸರ್ವಂ ಜಾನಂತಿ । ಯಜ್ಞಮಾಡುವ-ಯಜಮಾನರುಗಳು ಸಮರ್ಥರಾದ ಮಕ್ಕಳೊಡನೆ ಬಹಳ ಕಾಲದವರೆಗೂ ಜೀವಿಸಿರುವರೆಂದು ಅರ್ಥವು. ಅಥವಾ ದಕ್ಷ ಎಂಬ ಶಬ್ದವು **ಪ್ರಾಣೋ ವೈ ದಕ್ಷಃ** ಎಂಬ ತೈತ್ತಿರಿಯ ಶ್ರುತಿಯಲ್ಲಿ ಉಕ್ತವಾಗಿರುವ ಪ್ರಕಾರ ಪ್ರಾಣವಾಚಿ ಯಾಗಿರುವುದು ಅಜ್ಞರಾಗಿರುವ ಯಜಮಾನರುಗಳ ತಮ್ಮ ಪ್ರಾಣಗಳೊಡನೆ ಕೂಡಿದವರಾಗಿ ಬಹಳಕಾಲದವರಿಗೂ ನಿನ್ನ ಅನುಗ್ರಹದಿಂದ ಎಲ್ಲವನ್ನೂ ತಿಳಿದು ಇರುವ ಸರ್ವಜ್ಞರಾಗಿರುವರು ಎಂದು ಅರ್ಥವು

ಅಮೂರಾಃ—ಅಮೂಢಾಃ । ಯಾಸ್ಕರು **ಮೂರಾ, ಅಮೂರಾ** ಎಂಬ ಪದಗಳಿಗೆ **"ಮೂಢಾ ವಯಂ ಸ್ಮೋ ಅಮೂಢಸ್ತ್ವಮಸಿ"** (ನಿ ೬-೮) ಎಂಬದಾಗಿ ವ್ಯಾಖ್ಯಾನಮಾಡಿ-ನಾವು ಮೂಢರಾಗಿರುವೆವು ನೀನು ಎಲ್ಲರನ್ನೂ ತಿಳಿದಿರುವವನಾಗಿ ಇರುತ್ತೀಯೆ ಎಂದು ಅರ್ಥವನ್ನು ಹೇಳಿರುವರು ಮುರ್ಛಾ **ಮೋಹ** ಸಮುಚ್ಛ್ರಾಯಯೋಃ ಎಂಬದಾಗಿ ಮೋಹವೆಂಬ ಅರ್ಥವುಳ್ಳ ಮುರ್ಛಾಧಾತುವಿನಿಂದ ನಿಷ್ಪನ್ನವಾದ **ಮೂರಾ** ಎಂಬ ಶಬ್ದಕ್ಕೆ ಮೂಢರೆಂದು ಅರ್ಥವು **ನಮೂರಾಃ** ಎಂದರೆ ಮೂಢರಲ್ಲದವರ **ಅಮೂರರು** ಎಂದು **ಅರ್ಥವು**

ಸ್ಕಂದಸ್ವಾಮಿಗಳು **ಇಚ್ಛಂತ ರೇತಃ** ಎಂಬ ಪದಕ್ಕೆ ಅರ್ಥವನ್ನು ಹೇಳುವಾಗ **ಮಿಥಸ್ತನೂಷು** ಎಂಬ ಪದಕ್ಕೆ **ಸಹಭೂತಾಯಾ ಅಪಿ ನಕೇವಲಾಯಾ ಏವ, ಆತ್ಮೀಯೇಷು ಶರೀರೇಷು, ಸ್ವಶರೀರಂ ವಾ ರೇತಃ ।** ಎಂದು ವ್ಯಾಖ್ಯಾನಮಾಡಿರುವರು

ಪುತ್ರರನ್ನು ಅಪೇಕ್ಷಿಸುವವರು ತಮ್ಮ ಪತ್ನಿಯರ ಮತ್ತು ತಮ್ಮ ಶರೀರದಲ್ಲಿ ರೇತಸ್ಸು ಉಂಟಾಗಲಿ ಎಂದು ಇಚ್ಛೆಪಡುವರು. ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಣೆಮಾಡಿ ಔರಸಪುತ್ರರನ್ನು ಅಪೇಕ್ಷಿಸುವರು ಇವರು ಅಗ್ನಿಯ ಪ್ರಭಾವವನ್ನು ಚೆನ್ನಾಗಿ ತಿಳಿದಿರುತ್ತಾರೆ. ಆದ್ದರಿಂದಲೇ ಅಗ್ನಿಪರಿಚರಣವನ್ನು ಸಮುದಿತರಾಗಿಯೇ ಆಚರಿಸುವರು ಎಂದು ಅರ್ಥವು ಮತ್ತು ದಕ್ಷ ಶಬ್ದವು—**''ಚಿತ್ತಿಂ ದಕ್ಷಸ್ಯ ಸುಭಗತ್ವಂ''**(ಋ ಸಂ. ೨-೨೧-೬) **''ಶ್ರೇಯಾಂಸಂ ದಕ್ಷಂ''** (ಋ. ಸಂ. ೧೦-೩೧-೨) ಎಂಬ ಋಕ್ಕುಗಳಲ್ಲಿ ಉದಾಹರಿಸಿರುವುದರಿಂದ ಮನಸ್ಸು, ಆತ್ಮಾ ಎಂಬ ಅರ್ಥದಲ್ಲಿ ಪ್ರಸಿದ್ಧವಾಗಿರುವುದು ಮನಸ್ಸಿನ ಸಂಬಂಧವಿರುವುದರಿಂದ ಜ್ಞಾನವೆಂಬ ಅರ್ಥದಲ್ಲಿ ಪ್ರಯುಕ್ತವಾಗಿ ತನ್ನ ಮನಸ್ಸಿನಿಂದ ಉತ್ಪನ್ನವಾದ, ಅಥವಾ ತನ್ನಿಂದ ಉಂಟಾದ ಜ್ಞಾನವೆಂದು ಅರ್ಥವು ಎಂದು ವಿವರಿಸಿರುತ್ತಾರೆ **ಅಮೂರಾಃ, ವಿನಿಕ್ತಪ್ರಜ್ಞಾವಂತಃ** ಎಂಬ ಶಬ್ದಕ್ಕೆ ವಿವೇಚನೆಮಾಡುವ ಜ್ಞಾನವುಳ್ಳವರು ಎಂಬುದಾಗಿ ಅರ್ಥವನ್ನು ಹೇಳಿರುವರು

॥ ವ್ಯಾಕರಣಪ್ರಕ್ರಿಯಾ ॥

ಇಚ್ಛೆಂತೆ—ಇಷು ಇಚ್ಛಾಯಾಂ ಧಾತು ಲಜಿನಲ್ಲಿ **ವ್ಯತ್ಯಯೋ ಬಹುಲಂ** ಎಂಬುದರಿಂದ ಆತ್ಮನೇಪದ ಪ್ರತ್ಯಯ ಬರುತ್ತದೆ ಪ್ರಥಮಪುರುಷ ಬಹುವಚನದಲ್ಲಿ **ಝೋಂತಃ** ಎಂಬುದರಿಂದ ಅಂತಾದೇಶ **ಇಷುಗಮಿಯಮಾಂ ಛಃ** (ಪಾ. ಸೂ. ೭-೩-೭೭) ಎಂಬುದರಿಂದ ಧಾತುವಿಗೆ ಛಾದೇಶ. **ಬಹುಲಂ ಛಂದಸ್ಯಮಾಙ್-ಯೋಗೇ೭ಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಪಾದಾದಿಯಲ್ಲಿ ಬಂದುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣ ಸ್ವರದಿಂದ ಮಧ್ಯೋದಾತ್ತವಾದ ಶಬ್ದವಾಗುತ್ತದೆ

ಜಾನತೆ—ಜ್ಞಾ ಅವಬೋಧನೇ ಧಾತು **ಛಂದಸಿ ಲುಙ್ ಲಙ್ ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ **ಕ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ **ಜ್ಞಾಜನೋರ್ಜಾ** (ಪಾ. ಸೂ ೭-೩-೭೯) ಎಂಬುದರಿಂದ ಧಾತುವಿಗೆ ಜಾ ದೇಶ. ದೀರ್ಘಾಕಾರದ ಪರದಲ್ಲಿರುವುದರಿಂದ **ಆತ್ಮನೇಪದೇಷ್ವನತಃ** ಸೂತ್ರದಿಂದ ಝಿ ಪ್ರತ್ಯಯಕ್ಕೆ ಅತಾದೇಶ **ಸಾರ್ವಧಾತುಕಮಪಿತ್** ಸೂತ್ರದಿಂದ ಇದಕ್ಕೆ ಬಿತ್ತ್ವ ಅತಿದೇಶವಾಗಿರುವುದರಿಂದ **ಶ್ನಾಭ್ಯಸ್ತಯೋರಾತಃ** (ಪಾ ಸೂ ೬-೪-೧೧೨) ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಲೋಪ. **ಬಹುಲಂ ಛಂದಸ್ಯಮಾಙ್ಯೋಗೇ೭ಪಿ** ಸೂತ್ರದಿಂದ ಅಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಮೂರಾಃ—ಮೂರಾ ಅಮೂರಾ ಎಂಬಲ್ಲಿ ಯಾಸ್ಕರು ಈ ರೀತಿಯಾಗಿ ವ್ಯಾಖ್ಯಾನಮಾಡಿರುತ್ತಾರೆ-**ಮೂಢಾ ವಯಂ ಸ್ಮೋ೭ಮೂಢಸ್ತ್ವಮಸಿ** (ನಿರು. ೬-೮) ಢಕಾರಕ್ಕೆ ರೇಫ ಬಂದಿದೆ ಎಂದು ತಾತ್ಪರ್ಯ. ಆದುದರಿಂದ ಇಲ್ಲಿಯೂ ಕೂಡ ಅಮೂರ ಶಬ್ದದಿಂದ ಅಮೂಢತ್ವವು ಉಕ್ತವಾಗುತ್ತದೆ. ವರ್ಣವ್ಯತ್ಯಯದಿಂದ ಢಕಾರಕ್ಕೆ ರೇಫಾದೇಶ. ಅಥವಾ ಮುರ್ಛಾ ಮೋಹಸಮುಚ್ಛ್ರಾಯಯೋಃ ಧಾತು. ಸಂಪದಾದಿಯಲ್ಲಿ ಸೇರಿರುವುದರಿಂದ ಭಾವಾರ್ಥದಲ್ಲಿ **ಸಂಪದಾದಿಭ್ಯಃ ಕ್ವಿಪ್** ಎಂಬುದರಿಂದ ಕ್ವಿಪ್. ಮುರ್ಛ್ ಎಂದಿರುವಾಗ **ರಾಲ್ಲೋಪಃ**

ಎಂಬುದರಿಂದ ಸಂಯೋಗಾಂತ ಳಕಾರಕ್ಕೆ ಲೋಪ ಉಪಧಾ ದೀರ್ಘ ಮತ್ವರ್ಥದಲ್ಲಿ ರ ಬರುತ್ತದೆ. ನ ಮೂರಾ ಅಮೂರಾಃ ಅಥವಾ ಅಮ ಗತ್ಯಾದಿಷು ಧಾತು **ಉಣಾದಯೋಬಹುಲಂ** ಎಂದು ಬಹುಲಗ್ರಹಣಮಾಡಿರುವುದರಿಂದ ಇದಕ್ಕೆ ಉಣಾದಿಸಿದ್ಧವಾದ ಊರನ್ ಪ್ರತ್ಯಯ. ಅಮೂರಾ ಎಂದಾಗುತ್ತದೆ ನಿತ್ ಪ್ರತ್ಯಯಾಂತವಾದುದರಿಂದ **ಙ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೭-೮ ॥



॥ ಸಂಹಿತಾಪಾಠಃ ॥

ಪಿತುರ್ನ ಪುತ್ರಾಃ ಕ್ರತುಂ ಜುಷಂತ ಶ್ರೋಷನ್ಯೇ ಅಸ್ಯ ಶಾಸಂ
ತುರಾಸಃ ।
ವಿ ರಾಯ ಔರ್ಣೋದ್ದುರಃ ಪುರುಕ್ಷುಃ ಪಿಪೇಶ ನಾಕಂ ಸ್ತೃಭಿ-
ರ್ದಮೂನಾಃ ॥ ೯ ॥ ೧೦ ॥

॥ ಪದಪಾಠಃ ॥

ಪಿತುಃ । ನ । ಪುತ್ರಾಃ । ಕ್ರತುಂ । ಜುಷಂತ । ಶ್ರೋಷನ್ । ಯೇ । ಅಸ್ಯ
ಶಾಸಂ । ತುರಾಸಃ ।
ವಿ । ರಾಯಃ । ಔರ್ಣೋತ್ । ದುರಃ । ಪುರುಕ್ಷುಃ । ಪಿಪೇಶ । ನಾಕಂ
ಸ್ತೃಭಿಃ । ದಮೂನಾಃ ॥ ೯ ॥ ೧೦ ॥

॥ ಸಾಯಣಭಾಷ್ಯಂ ॥

ಅಸ್ಯಾಗ್ನೇಃ ಶಾಸಂ ಶಾಸನಂ ತುರಾಸಸ್ತ್ವರಮಾಣಾಃ ಸಂತೋ ಯೇ ಯಜಮಾನಾಃ ಶ್ರೋಷನ್ ಶೃಣ್ವಂತಿ ತೇ ಸರ್ವೇ ತೇನಾನುಶಿಷ್ಟಂ ಕೃತುಂ ಕರ್ಮ ಜುಷಂತೇ । ಸೇವಂತೇ । ತತ್ರ ದೃಷ್ಟಾಂತಃ । ಪಿತುರ್ನ ಪುತ್ರಾಃ । ಯಥಾ ಪುತ್ರಾಃ ಪುರು ಬಹುಲಂ ತ್ರಾಯಕಾಃ ಪುನ್ನಾಮ್ನೋ ನರಕಾದ್ವಾ ರಕ್ಷಕಾಸ್ತನಯೋಃ ಪಿತುರಾಜ್ಞಾಂ ಕುರ್ವಂತಿ ತದ್ವತ್ । ಪುತ್ರಃ ಪುರು ತ್ರಾಯತೇ ನಿಪರಣಾದ್ವಾ ಪುನ್ನರಕಂ ತತಸ್ತ್ರಾಯತ ಇತಿ ವಾ । ನಿ. ೨-೧೧ । ಇತಿ ಯಾಸ್ಕಃ । ಪುರುಕ್ಷುಃ । ಕ್ಷು ಇತ್ಯನ್ನನಾಮ । ಬಹ್ವನ್ನಃ ಸೋಽಗ್ನಿರೇಷಾಂ ಯಜಮಾನಾನಾಂ ದುರೋ ದ್ವಾರಾಣಿ ಯಜ್ಞಸ್ಯ ದ್ವಾರಭೂತಾನಿ ರಾಯೋ ಧನಾನಿ ವ್ಯೌರ್ಣೋತ್ । ವಿವೃಣೋತಿ । ಪ್ರಕಾಶಯತಿ । ದದಾತೀತಿ ಯಾವತ್ । ಅಪಿ ಚ ದಮೂನಾ ದಮೇ ಯಜ್ಞಗೃಹೇ ಮನೋ ಯಸ್ಯ ಸೋಽಗ್ನಿಃ । ನಾಸ್ಮಿನ್ನಕಂ ದುಃಖಮಸ್ತೀತಿ ನಾಕೋ ದ್ಯುಲೋಕಃ । ತಂ । ಸ್ತೃಭಿರಿತಿ ನಕ್ಷತ್ರನಾಮ । ಸ್ತೃಭಿರ್ನಕ್ಷತ್ರೈಃ ಪಿಪೇಶ । ಅವಯವೀಚಕಾರ । ನಕ್ಷತ್ರೈರ್ಯುಕ್ತಮಕರೋದಿತ್ಯರ್ಥಃ ॥ ಶ್ರೋಷನ್ । ಶ್ರು ಶ್ರವಣೇ । ಲೇಟ್ಯಡಾಗಮಃ । ಸಿಬ್ಬಹುಲಂ ಲೇಟೀತಿ ಸಿಪ್ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಇತಶ್ಚ ಲೋಪ ಇತೀಕಾರಲೋಪಃ । ಸಂಯೋಗಾಂತಸ್ಯ ಲೋಪಃ । ಪಿಪೇಶ । ಪಿಶ ಅವಯವೇ ॥

॥ ಪ್ರತಿಪದಾರ್ಥ ॥

ಅಸ್ಯ—ಈ ಅಗ್ನಿಯ । **ಶಾಸಂ**—ಶಾಸನವನ್ನು । **ತುರಾಸಃ**—ತ್ವರಾಯುಕ್ತರಾಗಿ । **ಯೇ**—ಯಾವ (ಯಜಮಾನರು) । **ಪುತ್ರಾಃ**—ಪುತ್ರರು । **ಪಿತುರ್ನ**—ತಂದೆಯ (ಅಪ್ಪಣೆಯನ್ನು ಹೇಗೆ) । **ಶ್ರೋಷನ್**—ಕೇಳುತ್ತಾರೋ ಹಾಗೆ । **ಕೃತುಂ**—ಅಗ್ನ್ಯುದ್ದಿಶ್ಯಕವಾದ ಕರ್ಮವನ್ನು । **ಜುಷಂತೇ**—ಸೇವಿಸುತ್ತಾರೋ (ಮಾಡುತ್ತಾರೋ) । **(ತೇಷಾಂ**—ಅವರಿಗೆ) । **ಪುರುಕ್ಷುಃ**—ಬಹ್ವನ್ನಪ್ರದನಾದ (ಅಗ್ನಿಯು) । **ದುರಃ**—(ಯಜ್ಞಕ್ಕೆ) ದ್ವಾರಭೂತವಾದ । **ರಾಯಃ**—ಧನಾದಿಗಳನ್ನು । **ವಿ ವ್ಯೌರ್ಣೋತ್**—ಪ್ರಕಾಶಪಡಿಸುತ್ತಾನೆ (ಕೊಡುತ್ತಾನೆ) । **ದಮೂನಾಃ**—ಯಾಗಶಾಲೆಯಲ್ಲೇ ಮನಸ್ಸುಳ್ಳ (ಅಗ್ನಿಯು) । **ನಾಕಂ**—ದ್ಯುಲೋಕವನ್ನು । **ಸ್ತೃಭಿಃ**—ನಕ್ಷತ್ರಗಳಿಂದ । **ಪಿಪೇಶ**—ಅವಯವವುಳ್ಳದ್ದನ್ನಾಗಿ ಮಾಡಿದನು (ಯುಕ್ತವಾದದ್ದನ್ನಾಗಿ ಮಾಡಿದನು)

॥ ಭಾವಾರ್ಥ ॥

ತಂದೆಯ ಆಜ್ಞೆಯನ್ನು ಪುತ್ರರು ಪಾಲಿಸುವಂತೆ ಯಾರು ಅಗ್ನಿಯ ಅಪ್ಪಣೆಗಳಿಗನುಸಾರವಾಗಿ ಯಾಗಾದಿಗಳನ್ನು ಮಾಡುತ್ತಾರೋ ಅವರಿಗೆ ಬಹ್ವನ್ನಪ್ರದನಾದ ಅಗ್ನಿಯು ಯಾಗಸಾಧನವಾದ ಧನಾದಿಗಳನ್ನು ಒದಗಿಸುತ್ತಾನೆ ಯಾಗಶಾಲೆಯಲ್ಲೇ ನೆಟ್ಟಮನಸ್ಸುಳ್ಳ ಇವನು ಆಕಾಶವನ್ನು ನಕ್ಷತ್ರಗಳಿಂದ ತುಂಬುತ್ತಾನೆ

English Translation

Hastening to obey the commands of Agni, like sons (obedient to the orders) of a father, they celebrate his workship: abounding in food, Agni sets open before them treasures that are at the doors of sacrifice, and he who delights in the sacrificial chamber has studded the sky with constellations

। ವಿಶೇಷವಿಷಯಗಳು ।

ಪಿತುಃ ನ ಪುತ್ರಾಃ--ಯಥಾ ಪುತ್ರಾಃ ಪುರು ಬಹುಲಂ ತ್ರಾಯಕಾಃ ಪುನ್ನಾಮ್ನೋ ನರಕಾದ್ವಾ ರಕ್ಷಕಾಃ ಪಿತುರಾಜ್ಞಾಂ ಕುರ್ವಂತಿ । ಪುತ್ರಃ ಪುರು ತ್ರಾಯತೇ ನಿಪರಣಾದ್ವಾ ಪುನ್ನರಕಂ ತತಸ್ತ್ರಾಯತ ಇತಿ ವಾ (ನಿ. ೩-೧೧) ಇತಿ ಯಾಸ್ಕಃ । ಪುತ್ರ ಶಬ್ದವು ಬಹಳವುಟ್ಟಿಗೆ ತ್ರಾಣವನ್ನೂ ಉಂಟುಮಾಡುವುದು ಅಥವಾ ಪುತ್ ಎಂಬ ನರಕದಿಂದ ರಕ್ಷಿಸುವುದು ಎಂಬ ಅರ್ಥವನ್ನು ಬೋಧಿಸುವುದು ಈ ಕಾರ್ಯವನ್ನು ಆಚರಿಸುವವರು ಪುತ್ರರೆನಿಸಿರುವರು ಇವರು ಪಿತೃಗಳ ಆಜ್ಞೆಯನ್ನು ತಪ್ಪದೆ ನಡೆಸುವವರು ಯಾಸ್ಕರು ಇದೇ ಅರ್ಥವನ್ನು ವಿವರಿಸಿರುವರು ಯಜ್ಞಮಾಡುವವರು ಅಗ್ನಿಯ ಆಜ್ಞೆಯನ್ನು ಜಾಗ್ರತೆಯಾಗಿ ಪಾಲಿಸುತ್ತಾ ಅಗ್ನಿಯು ಶ್ರೇರಿಸುವ ಕರ್ಮಗಳೆಲ್ಲವನ್ನೂ ತಂದೆಯ ಆಜ್ಞೆಯನ್ನು ಮಕ್ಕಳು ತಪ್ಪದೆ ಪಾಲಿಸುವಂತೆ ಆಚರಿಸುವರು

ಪುರುಕ್ಷುಃ—ಕ್ಷು ಇತ್ಯನ್ನನಾಮ । ಕ್ಷು ಎಂಬ ಶಬ್ದವು ಇಪ್ಪತ್ತೆಂಟು ಅನ್ನನಾಮಗಳ ಮಧ್ಯದಲ್ಲಿ (ನಿ ೩-೮) ಪರಿಠವಾಗಿರುವುದು ಪುರು ಬಹಳವಾದ ಕ್ಷು ಅನ್ನವುಳ್ಳವನು, ಅನ್ನವನ್ನು ಕೊಡುವವನು

ದುರಃ ರಾಯಃ ವಿ ಔರ್ಣೋತ್—ದ್ವಾರಾಣಿ ಧನಾನಿ ದದಾತಿ । ಬಹಳ ಅನ್ನವುಳ್ಳ ಅಗ್ನಿಯು ಯಜಮಾನರಿಗೆ ಯಜ್ಞಮಾಡಲು ಸಾಧನವಾದ ಧನವೇ ಮೊದಲಾದವುಗಳನ್ನು ಕೊಡುವನು ವಿ ಎಂಬ ಉಪಸರ್ಗ ಸೂಡನೆ ಇರುವ ಊರ್ಣುಧಾತುವು ಇಲ್ಲಿ ಪ್ರಕಾಶಪಡಿಸುವುದು ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು ಇದರಿಂದ ಕೊಡುವುದು ಎಂಬ ಅರ್ಥವು ಪರ್ಯವಸಿತವಾಗುತ್ತದೆ. ರಾಯಃ ಎಂಬ ಶಬ್ದವು ಇಪ್ಪತ್ತೆಂಟು ಧನನಾಮಗಳ ಮಧ್ಯದಲ್ಲಿ (ನಿ ೩-೯) ಉಕ್ತವಾಗಿರುತ್ತದೆ

ದಮೂನಾಃ--ದಮೇ ಯಜ್ಞಗೃಹೇ ಮನೋ ಯಸ್ಯ— ದಮ ಎಂದರೆ ಯಜ್ಞ ನಡೆಯುವ ಯಾಗ ಶಾಲೆಯು ಅಲ್ಲಿ ಮನಸ್ಸನ್ನು ಇರಿಸುವವನು ಅಗ್ನಿಯು ಎಂದು ಅರ್ಥವು

ನಾಕಂ--ನ ಅಕಂ ದುಃಖಂ ಯಸ್ಮಿನ್ ಅಸ್ತಿ ಇತಿ ನಾಕಂ ದ್ಯುಲೋಕಃ । ದುಃಖವು ಇಲ್ಲದಿರುವ ಸ್ಥಳವು, ಸ್ವರ್ಗವು ಎಂದು ಅರ್ಥವು

ಸ್ಕಂದಸ್ವಾಮಿಗಳು, ಕೃತು ಶಬ್ದವು ಪನ್ನೊಂದು ಪ್ರಜ್ಞಾನಾಮಗಳ ಮಧ್ಯದಲ್ಲಿ (ನಿ ೩-೧೩) ಉಕ್ತವಾಗಿರುವುದರಿಂದ, ಈ ಶಬ್ದವು ಪ್ರಜ್ಞಾನವೆಂಬ ಅರ್ಥವನ್ನು ಹೇಳುವುದು ಇದರಿಂದ-ತಂದೆಯಿಂದ ಜ್ಞಾನವನ್ನು ಹೊಂದಿದವರಾಗಿ ಯಜ್ಞಮಾಡುವವರು ಅಗ್ನಿಯಿಂದ ಪ್ರಜ್ಞಾವಂತರಾಗುತ್ತಾರೆ, **ತುರಾ ಸಃ** ಎಂಬ ಪದವು ಹಿಂಸಾರ್ಥದಲ್ಲಿ ಇರುವ ಕಾರಣಶ ಶತ್ರುಗಳನ್ನು ಹಿಂಸೆಮಾಡುತ್ತಾರೆ ಎಂದು ಅರ್ಥವನ್ನು ವಿವರಿಸಿರುವರು ಮತ್ತು **''ಕೃಧಿ ಕ್ಷುಮನ್ತಂ ವಾಜಂ (ಋಗ್ವೇ ೩-೪-೬)** ಎಂಬ ಋಕ್ಕಿನಲ್ಲಿ ಹೇಳಿರುವಂತೆ ಕೀರ್ತಿಯುಳ್ಳವನು, ಬಹಳ **ದಮೂನಾಃ** ಎಂಬ ಪದವು **ದಾಂತೇ ಪುರುಷೇ ವಾ, ದಮೇ ಯಜ್ಞಗೃಹೇ ಮನೋ ಯಸ್ಯೇತಿ ವಾ** ಎಂಬ (ನಿ ೪-೪) ಅರ್ಥದಲ್ಲಿ ಉಕ್ತವಾಗಿರುವುದರಿಂದ ಅಗ್ನಿಯು ಉಪಶಾಂತಿಯುಳ್ಳ ದಾಸ್ತ ಪುರುಷನೆಂದೂ ಧರ್ಮಗಳೆಲ್ಲವೂ ಅಗ್ನಿಯ ಮೂಲಕವಾಗಿರುವ ಕಾರಣ ಧರ್ಮಮೂಲಕಾರಣನಾದ ಅಗ್ನಿಯು ದ್ಯುಲೋಕವನ್ನು ಅಲಂಕರಿಸಿ ಇರುವನನೆಂದೂ **ಪಿಪೇಶ ನಾಕಂ** ಎಂಬ ಶಬ್ದಗಳಿಗೆ ಅರ್ಥವನ್ನು ಹೇಳಿರುವರು

॥ ವ್ಯಾಕರಣಪ್ರಕ್ರಿಯಾ ॥

ಜುಷಂತ— ಜುಷೀ ಪ್ರೀತಿಸೇವನಯೋಃ ಧಾತು. ಲಟ್ ಪ್ರಥಮಪುರುಷ ಬಹುವಚನಕ್ಕೆ **ಝೋಂತಃ** ಸೂತ್ರದಿಂದ ಅಂತಾದೇಶ. **ಸರ್ವೇ ವಿಧಯಃ ಛಂದಸಿ ವಿಕಲ್ಪ್ಯಂತೇ** ಎಂಬುದರಿಂದ ವಿತ್ಸ್ ಬರುವುದಿಲ್ಲ ಅಥವಾ ಛಾಂದಸವಾಗಿ ಲಙ್ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ ತಿಙಂತನಿಘಾತಸ್ವರವೂ ಬರುವುದಿಲ್ಲ

ಶ್ರೋಷನ್—ಶ್ರು ಶ್ರವಣೇ ಧಾತು **ಲೇಟ್** ಪ್ರಥಮಪುರುಷಬಹುವಚನಕ್ಕೆ ಅಂತಾದೇಶ **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಅಂತ್ಯ ಇಕಾರಕ್ಕೆ ಲೋಪ. ಸಂಯೋಗಾಂತಲೋಪದಿಂದ ತಕಾರ ಲೋಪ ಆಡಾಗಮ **ಸಿಬ್ಬಹುಲಂ ಲೇಟಿ** (ಪಾ. ಸೂ ೩-೧-೩೪) ಎಂಬುದರಿಂದ ಸಿಪ್ **ಬಹುಲಂಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್ **ಸಾರ್ವಧಾತುಕಾರ್ಧಧಾತುಕಯೋಃ** ಸೂತ್ರದಿಂದ ಧಾತುವಿನ ಇಕ್ಕಿಗೆ ಗುಣ **ಆದೇಶಪ್ರತ್ಯಯಯೋಃ** ಎಂಬುದರಿಂದ ಸಿಪ್ಪಿನ ಸಕಾರಕ್ಕೆ ಷತ್ವ ಶ್ರೋಷನ್ ಎಂದು ರೂಪವಾಗುತ್ತದ. **ತಿಙ್ಶಿತಿಙಃ** ಸೂತ್ರದಲ್ಲಿ ಅತಿಙಃ ಎಂದು ಪರ್ಯುದಾಸಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ

ಶಾಸಮ್— ಶಾಸು ಅನುಶಿಷ್ಟೌ ಧಾತು ಶಾಸ್ಯತೇ ಇತಿ ಶಾಸಃ ಘಞ್ ಪ್ರತ್ಯಯ. ಆದ್ಯುದಾತ್ತಸ್ವರ ಬರುತ್ತದ

ಬಿಭರ್ತ್—ಭೃಞ್ ಆಹ್ವಾದನೇ ಧಾತು ಲಟ್ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ **ಗುಣೋಽರ್ತಿ** (ಪಾ ಸೂ ೭-೪-೧೮) ಎಂಬುದರಿಂದ ವೃದ್ಧಿಗೆ ಅಪವಾದವಾಗಿ ಉಕಾರಕ್ಕೆ ಗುಣ ಬರುತ್ತದೆ ತಿಙಂತ ನಿಘಾತಸ್ವರ ಬರುತ್ತದ

ಪಿಪೇಶ—ಪಿಶ ಅವಯವೇ ಧಾತು ಲಿಟ್ ಪ್ರಥಮಪುರುಷ ಏಕವಚನದಲ್ಲಿ **ಪರಸ್ಮೈಪದಾನಾಂ**— ಸೂತ್ರದಿಂದ ಣಲಾದೇಶ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಉಪಧೆಗೆ ಗುಣ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಣಲ್ ಲಿತ್ತಾದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಮಧ್ಯೋದಾತ್ತವಾದ ಪದವಾಗುತ್ತದೆ ॥ ೯-೧೦ ॥

ಅರವತ್ತೈಂಟನೇ ಸೂಕ್ತವು ಸಮಾಪ್ತವು

ಅರವತ್ತೊಂಭತ್ತನೆಯ ಸೂಕ್ತವು

ಶುಕ್ರ ಇತಿ ದ್ವಿಪದಂ ದಶರ್ಚಮಧ್ಯಯನತಃ ಪಂಚರ್ಚಂ ಪಂಚಮಂ ಸೂಕ್ತಂ ಪರಾಶರ-ಸ್ಯಾರ್ಷಮಾಗ್ನೇಯಂ । ಶುಕ್ರ ಇತ್ಯನುಕ್ರಾಂತಂ ॥ ವಿನಿಯೋಗೋ ಲೈಂಗಿಕಃ ॥

ಅನುವಾದವು— **ಶುಕ್ರಃ** ಎಂಬ ಈ ಸೂಕ್ತವು ಹನ್ನೆರಡನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ದ್ವಿಪದಾ ವಿರಾಟ್ ಛಂದಸ್ಸಿನ ಹತ್ತು ಋಕ್ಕುಗಳು ಆಥವಾ ಅಧ್ಯಯನಾನುಸಾರವಾಗಿ ಐದು ಋಕ್ಕುಗಳು ಇರುವುವು. ಈ ಸೂಕ್ತಕ್ಕೆ ಪರಾಶರನು ಋಷಿಯು, ಅಗ್ನಿಯು ದೇವತೆಯು. ಅನುಕ್ರಮಣಿಕೆಯಲ್ಲಿ **ಶುಕ್ರಃ**— ಎಂದು ಹೇಳಿರುವುದು ವಿನಿಯೋಗವು ಲೈಂಗಿಕವು

ಸೂಕ್ತ—೬೯

॥ ಓಂ ॥

॥ ಮಂಡಲ—೧ ॥ ಅನುವಾಕ—೧೨ ॥ ಸೂಕ್ತ—೬೯ ॥
॥ ಅಷ್ಟಕ- ೧ ॥ ಅಧ್ಯಾಯ- ೪ ॥ ವರ್ಗ—೧೩ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ (೧೦) ॥
॥ ಋಷಿಃ—ಪಾರಾಶರಃ ಶಾಕ್ತ್ಯಃ ॥
ದೇವತಾ—ಆಗ್ನಿಃ ॥
ಛಂದಃ—ದ್ವಿಪದಾ ವಿರಾಟ್ ॥

॥ ಸಂಹಿತಾಪಾಠಃ ॥

ಶುಕ್ರಃ ಶುಶುಕ್ವಾꣳ ಉಷಸೋ ನ ಜಾರಃ ಪಪ್ರಾ ಸಮೀಚೀ ದಿವೋ ನ ಜ್ಯೋತಿಃ ।
ಪರಿ ಪ್ರಜಾತಃ ಕ್ರತ್ವಾ ಬಭೂಥ ಭುವೋ ದೇವಾನಾಂ ಪಿತಾ ಪುತ್ರಃ ಸನ್ ॥ ೧ ॥ ೨ ॥

॥ ಪದಪಾಠಃ ॥

ಶುಕ್ರಃ । ಶುಶುಕ್ವಾನ್ । ಉಷಃ । ನ । ಜಾರಃ । ಪಸ್ಪಾ । ಸಮ್ಯೋಚೀ ಇತಿ ಸಂ ೨ ಈಚೀ । ದಿವಃ । ನ । ಜ್ಯೋತಿಃ ।

ಪರಿ । ಪ್ರ ೨ ಜಾತಃ । ಕೃತ್ವಾ । ಬಭೂಥ । ಭುವಃ । ದೇವಾನಾಂ । ಪಿತಾ । ಪುತ್ರಃ ಸನ್ ॥ ೧ ॥ ೨ ॥

॥ ಸಾಯಣಭಾಷ್ಯಂ ॥

ಶುಕ್ರಃ ಶುಭ್ರವರ್ಣೋಽಯಮಗ್ನಿರುಷಸೋ ನ ಜಾರ ಉಷಸೋ ಜರಯಿತಾ ಸೂರ್ಯ ಇವ ಶುಶುಕ್ವಾನ್ ಶೋಚಯಿತಾ ಸರ್ವಸ್ಯ ಪ್ರಕಾಶಯಿತಾ ಭವತಿ । ತಥಾ ಸಮ್ಯೋಚೀ ಸಂಗತೇ ದ್ಯಾವಾಪೃಥಿವ್ಯೌ ದಿವೋ ನ ಜ್ಯೋತಿರ್ದ್ಯೋತಮಾನಸ್ಯ ಸೂರ್ಯಸ್ಯ ಜ್ಯೋತಿರಿವ ಪಸ್ಪಾ । ಸ್ವತೇಜಸಾ ಪೂರಯಿತಾ । ಹೇ ಅಗ್ನೇ ಅತಸ್ತ್ವಂ ಪ್ರಜಾತಃ ಪ್ರಾದುರ್ಭೂತಃ ಸನ್ ಕೃತ್ವಾ ಕರ್ಮಣಾ ಯದ್ವಾ ಜ್ಞಾನಹೇತುನಾ ಪ್ರಕಾಶನೋತ್ಕರ್ಷಕಾರೇಣ ಸರ್ವಂ ಜಗತ್ಪರಿ ಬಭೂವ । ಪರಿತೋ ವ್ಯಾಪ್ನೋಷಿ । ದಿವ್ಯಂ ತೀತಿ ದೇವಾ ಋತ್ವಿಜಃ । ತೇಷಾಂ ಪುತ್ರಃ ಸನ್ ಪುನ್ನಾಮ್ನೋ ನರಕಾತ್ತ್ರಾಯಕಃ ಸನ್ ಪಿತಾ ಭುವಃ । ಪಾಲಯಿತಾ ಭವಸಿ । ಯದ್ವಾ । ದೇವಾನಾಮಿಂದ್ರಾದೀನಾಮೇವ ಪುತ್ರಃ ಸನ್ ಪುತ್ರ ಇವ ದೂತೋ ಭೂತ್ವಾ ಪಿತಾ ಹವಿರ್ಭಿಃ ಪಾಲಯಿತಾ ಭವಸಿ ॥ ಶುಶುಕ್ವಾನ್ । ಶುಚ ದೀಪ್ತೌ । ಲಿಟಃ ಕ್ವಸುಃ । ವ್ಯತ್ಯಯೇನ ಕುತ್ವಂ । ಪಸ್ಪಾ । ಸ್ಪೃ ಪಾಲನಪೂರಣಯೋರಿತ್ಯಸ್ಮಾದಾದೃಗಮಹನಜನ ಇತಿ ಕಿಪ್ರತ್ಯಯಃ । ಸುಪಾಂ ಸುಲುಗಿತಿ ಸೋರ್ಡಾದೇಶಃ । ಸಮ್ಯೋಚೀ । ಸಂಪೂರ್ವಾದಂಚತೇರ್ಗತ್ಯರ್ಥಾತ್ಕ್ವಿಗಿತ್ಯಾದಿನಾ ಕ್ವಿನ್ । ಸಮಃ ಸಮಿ । ಪಾ. ೬-೩-೯೩ । ಇತಿ ಸಮ್ಯಾದೇಶಃ । ಅಂಚತೇರ್ಙೀಶ್ಚೇತಿ ವಕ್ತವ್ಯಮಿತಿ ಙೀಪ್ । ಅಚ ಇತ್ಯಕಾರಲೋಪೇ ಚಾವಿತಿ ದೀರ್ಘತ್ವಂ । ಉದಾತ್ತನಿವೃತ್ತಿಸ್ವರೇಣ ಙೀಪ ಉದಾತ್ತತ್ವಂ । ವಾ ಛಂದಸೀತಿ ಪೂರ್ವಸವರ್ಣ-ದೀರ್ಘತ್ವಂ । ಯದಿ ತು ಸಂ೨ಈಚೀ ಇತಿ ಪದವಿಭಾಗಃ ಕ್ರಿಯತೇ ತರ್ಹ್ಯುದ ಈತ್ । ಪಾ ೬-೪-೧೩೯ । ಇತಿ ವಿಧೀಯಮಾನಮಿತ್ವಂ ಸಮ ಉತ್ತರಸ್ಯಾಪಿ ದ್ರಷ್ಟವ್ಯಂ । ಬಭೂಥ । ಬಭೂಥಾ ತತಂಥ । ಪಾ ೬-೪-೧೪ । ಇತಿ ನಿಪಾತನಾದಿಡಭಾವಃ ॥

॥ ಪ್ರತಿಪದಾರ್ಥ ॥

ಶುಕ್ರಃ—ಶುಭ್ರವರ್ಣನಾದ (ಅಗ್ನಿಯು) । **ಉಷಃ**· ಉಷಸ್ಸಿಗೆ । **ಜಾರಃ ನ**—ಜರೆಯನ್ನುಂಟು ಮಾಡುವ ಸೂರ್ಯನಂತೆ । **ಶುಶುಕ್ವಾನ್**—ಪ್ರಕಾಶಕನು । **ಸಮ್ಯೋಚೀ**—ಏಕತ್ರಸಂಗತವಾದ ಭೂಮ್ಯಾಕಾಶ ಗಳನ್ನು । **ದಿವಃ**—ದೇದೀಪ್ಯಮಾನನಾದ ಸೂರ್ಯನ । **ಜ್ಯೋತಿರ್ನ**—ಪ್ರಕಾಶದಂತೆ । **ಪಸ್ಪಾ**—(ತನ್ನ

ತೇಜಸ್ಸಿನಿಂದ) ಪೂರಣಮಾಡುವವನು (ಆದುದರಿಂದ ನೀನು) । **ಪ್ರಜಾತಃ**—ಪ್ರಾದುರ್ಭೂತನಾಗಿ । **ಕೃತ್ವಾ**—ಕರ್ಮದಿಂದ (ಜ್ಞಾನಸಾಧನವಾದ ಪ್ರಕಾಶದಿಂದ) । **ಪರಿ ಬಭೂಥ**—(ಜಗತ್ತನ್ನೆಲ್ಲಾ) ವ್ಯಾಪಿಸಿದ್ದೀಯೆ । **ದೇವಾನಾಂ**—(ಇಂದ್ರಾದಿ) ದೇವತೆಗಳಿಗೆ । **ಪುತ್ರೈಃ ಸ**—ಪುತ್ರನಾಗಿ । **ಪಿತಾ ಭುವಃ**—ಪಾಲಕನಾಗಿದ್ದೀಯೆ.

॥ ಭಾವಾರ್ಥ ॥

ಉಷಸ್ಸನ್ನು ನಾಶಮಾಡುವ (ಉಷಃಕಾಲವಾದಮೇಲೆ ಉದಯಿಸುವ) ಸೂರ್ಯನಂತೆ ಎಲ್ಲ ಪದಾರ್ಥಗಳನ್ನೂ ಪ್ರಕಾಶಗೊಳಿಸುವ (ಕಾಣುವಂತೆ ಮಾಡುವ), ಭೂಮ್ಯಾಕಾಶಗಳನ್ನು ತನ್ನ ತೇಜಸ್ಸಿನಿಂದ ಸೂರ್ಯನ ಪ್ರಕಾಶದಂತೆ, ಬೆಳಗುವ, ಎಲೈ ಅಗ್ನಿಯೇ, ಜ್ವಲಿತನಾದ ನೀನು ಜ್ಞಾನಸಾಧನವಾದ ಕಾಂತಿಯಿಂದ ಜಗತ್ತನ್ನೆಲ್ಲಾ ವ್ಯಾಪಿಸಿದ್ದೀಯೇ. ದೇವಾದಿಗಳಿಗೆ ಪುತ್ರನಂತೆ, ಹವಿರಾದಿಗಳನ್ನು ತೆಗೆದುಕೊಂಡುಹೋಗಿ ಕೊಟ್ಟು, ರಕ್ಷಣಮಾಡುತ್ತೀಯೆ.

English Translation

White shining (Agni), like(the sun), the extinguisher of the dawn, is the illuminator of all, and fills united (heaven and earth with light), like the luste of the radiant (sun). As soon as you manifest, you pervade all the world with devout acts, being (both) the father and son of the Gods.

॥ ವಿಶೇಷವಿಷಯಗಳು ॥

ಶುಕ್ರಃ—ಶುಭ್ರವರ್ಣಃ । ಶುಕ್ರ ಎಂಬ ಶಬ್ದವು ಇಲ್ಲಿ ಶುಭ್ರವಾದ ಅಂದರೆ ಬಿಳಿಯದಾದ, ಅಥವಾ ಇನ್ನೊಂದು ಬಣ್ಣವೂ ಬೆರಕೆ ಇಲ್ಲದಿರುವ ವರ್ಣವುಳ್ಳವನು ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು- ಶುಕ್ಲ ಶಬ್ದವು ಬಿಳಿಯ ಬಣ್ಣವನ್ನು ಬೋಧಿಸುವುದು. ರಲಯೋರಭೇದಃ ಎಂಬ ನ್ಯಾಯದಿಂದ ಶುಕ್ಲ ಶಬ್ದವು ಶುಕ್ರಃ ಎಂದು ಪ್ರಯುಕ್ತವಾಗಿರುತ್ತದೆ. ಶುಕ್ರ ಶಬ್ದವು ನೂರೊಂದು ಉದಕನಾಮಗಳಲ್ಲಿ (ನಿ ೨-೨೪) ಪಠಿತವಾಗಿರುವುದಾದರೂ ಇಲ್ಲಿ ಶುಭ್ರವರ್ಣವಿಶಿಷ್ಟಃ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುತ್ತದೆ.

ಉಷೋ ನ ಜಾರಃ— ಉಷಸಃ ಜರಯಿತಾ ಸೂರ್ಯ ಇವ । ಅಗ್ನಿಯು ಉಷಃ ಕಾಲದಲ್ಲಿ ಯಜ್ಞ ಮಾಡುವವರು ಆರ್ಪಿಸುವ ಹವಿಸ್ಸುಗಳಿಗಾಗಿ ಉದ್ದೀಪ್ತನಾಗಿ ತನ್ನ ಪ್ರಕಾಶವನ್ನು ಹರಡುವುದರಿಂದ ಉಷೋದೇವಿಗೆ ವಾರ್ಧಕ್ಯವನ್ನು (ಮುಪ್ಪನ್ನು) ಉಂಟುಮಾಡುವ ಸೂರ್ಯನಂತೆ ಅಗ್ನಿಯು ಪ್ರಕಾಶದಿಂದ ಕೂಡಿರುವನು. ಉಷಃ ಕಾಲದ ಪ್ರಕಾಶವು ಕಡಿಮೆಯಾಗುವುದು ಈ ಕಾಲದಲ್ಲಿಯೇ ಸೂರ್ಯನೂ ಕೂಡ ತನ್ನ ಕಿರಣಗಳ ಕಾಂತಿಯಿಂದ ಉಷಃಕಾಲದ ಕಾಂತಿಯನ್ನು ಕಡಿಮೆಮಾಡುವಕಾರಣ ಜರಯಿತೃತ್ವ (ಮುಪ್ಪನ್ನು ಉಂಟುಮಾಡುವಿಕೆ) ಎಂಬ ಧರ್ಮವನ್ನು ಹೊಂದಿರುವನು. ಜಾರ ಇವ ಎಂಬ ಉಪಮಾನದಿಂದ ಅಗ್ನಿಯೂ, ಸೂರ್ಯನೂ ಕೂಡ ಉಷಸ್ಸಿಗೆ ಮುಪ್ಪನ್ನು ಉಂಟುಮಾಡುವನೆಂದು ಅರ್ಥವಾಗುತ್ತದೆ. ಆದರೆ " **ಪುನಃ ಪುನಃ.....ಜರಯಂತ್ಯಾಯುಃ** "

ಎಂಬ (ಋ. ಸಂ. ೧–೯೨–೧೦) ಋಕ್ಕಿನಲ್ಲಿ ಹೇಳುವಂತೆ ಉಷಃಕಾಲವೂ ಕೂಡ ಪ್ರಾಣಿಗಳ ಆಯುಸ್ಸನ್ನು ಆವರವರ ಅನುಭವದಿಂದ ಕಡಿಮೆಮಾಡುವಹಾಗೆ ಅಗ್ನಿಯೂ, ಆದಿತ್ಯನೂ ಕಡಿಮೆಮಾಡುವರು ಎಂದು ಉಷ ಇವ, ಅಗ್ನಿಃ, ಆದಿತ್ಯಃ ಚಾರಃ ಎಂಬ ಅರ್ಥವೂ ಇಲ್ಲಿ ತೋರುತ್ತದೆ　ಇದರಿಂದ ಅಲಂಕಾರಾಂತರವೂ ಕಾವ್ಯಶೈಲಿಯಿಂದ ಈ ವೇದ ಭಾಷೆಯಲ್ಲಿ ಉಕ್ತವಾಗಿರುತ್ತದೆ

ಶುಶುಕ್ವಾ—ಸೂರ್ಯ ಇವ ಶೋಚಯಿತಾ ಸರ್ವಸ್ಯ ಪ್ರಕಾಶಯಿತಾ ಭವತಿ ಶುಚ ದೀಪ್ತೌ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದದಿಂದ ಬಹಳ ಪ್ರಕಾಶವೆಂಬ ಅರ್ಥವೂ, ಆ ಪ್ರಕಾಶದಿಂದ ಕೂಡಿದವನು ಎಂದು ಅರ್ಥವೂ ಆಗುವುದರಿಂದ ಸೂರ್ಯನ ಹಾಗೆ ಈ ಅಗ್ನಿಯು ಎಲ್ಲವನ್ನೂ ತನ್ನ ಪ್ರಕಾಶದಿಂದ ಪ್ರಕಾಶವುಳ್ಳವನ್ನಾಗಿ ಮಾಡುವನು ಎಂದು ಅರ್ಥವು　ಈ ಅರ್ಥವು ಈ ಶಬ್ದದಿಂದ ಉಂಟಾಗಲು ಯಜಂತವಾದ ಶುಚಧಾತುವನ್ನು ಉಪಯೋಗಿಸಿರುವುದೇ ಕಾರಣವಾಗಿರುತ್ತದೆ

ದಿವೋ ನ ಜ್ಯೋತಿಃ ಪಸ್ಯಾ—ದ್ಯೋತಮಾನಸ್ಯ ಸೂರ್ಯಸ್ಯ ಜ್ಯೋತಿರಿವ ದ್ಯಾವಾಪೃಥಿವ್ಯೌ ಸ್ವತೇಜಸಾ ಪೂರಯಿತಾ। ಒಟ್ಟಿಗೆ ಇರುವ ಭೂಮ್ಯಂತರಿಕ್ಷದ್ಯುಲೋಕಗಳನ್ನು ತನ್ನ ತೇಜಸ್ಸುಗಳಿಂದ ಬೆಳಗಿಸುವ ಆದಿತ್ಯನ ಹಾಗೆ ಅಗ್ನಿಯೂ ತನ್ನ ಪ್ರಕಾಶಗಳಿಂದ ವ್ಯಾಪಿಸಿ ತುಂಬುವನು ಎಂದು ಅರ್ಥವು.

ದೇವಾನಾಂ ಪುತ್ರಸ್ಯ ಭುವಃ ಪಿತಾ—ದೇವಾಃ ಋತ್ವಿಜಃ ತೇಷಾಂ ಪುನ್ನಾಮ್ನೋ ನರಕಾತ್ ತ್ರಾಯಕಸ್ಯ ಭುವಃ ಪಾಲಯಿತಾ ಪಿತಾ ಭವಸಿ। ಯದ್ವಾ—ದೇವಾನಾಂ ಇಂದ್ರಾದೀನಾಮೇವ ಪುತ್ರ ಇವ ದೂತೋ ಭೂತ್ವಾ ಪಿತಾ ಹವಿರ್ಭಿಃ ಪಾಲಯಿತಾ ಭವಸಿ। ದಿವು ಧಾತುವಿಗೆ ಇರುವ ಅನೇಕವಾದ ಅರ್ಥಗಳಲ್ಲಿ ಪ್ರಕಾಶ, ವರ್ತ್ತು ಸ್ತೋತ್ರಮಾಡುವುದು ಎಂಬ ಎರಡರ್ಥಗಳನ್ನು ಅಂಗೀಕರಿಸಿ ದೀವ್ಯಂತಿ ಪ್ರಕಾಶಿಸುವರು ಅಥವಾ ಪ್ರಕಾಶಗೊಳಿಸುವರು ಅಗ್ನಿಯನ್ನು ಸ್ತೋತ್ರಮಾಡುವವರಾದಕಾರಣ ಸಂತೃಪ್ತಿಪಡಿಸುವರು ಪುತ್ರ ಶಬ್ದವು ಪುತ್ ಎಂಬ ನರಕದಿಂದ ತ್ರಾಣವನ್ನು ಉಂಟುಮಾಡಿ ರಕ್ಷಿಸುವುದು ಎಂದು ಪುತ್ರ ಶಬ್ದಕ್ಕೆ ಅರ್ಥವು ಅಗ್ನಿಯು ಯಜ್ಞವನ್ನು ಮಾಡುವ ಯಜಮಾನರನ್ನು ಪುತ್ರವಂತರನ್ನಾಗಿ ಮಾಡುವುದರಿಂದಲೂ, ತನ್ನನ್ನು ಸ್ತುತಿ ಮಾಡುವ ದೇವತೆಗಳಿಗೆ ಹವಿರ್ಭಾಗಗಳನ್ನು ಕೊಡುವುದರಿಂದಲೂ ಇಬ್ಬರಿಗೂ ಪುತ್ರರ ಕಾರ್ಯವನ್ನು ಮಾಡುತ್ತಿರುವನು.　ಪಾಲನ, ರಕ್ಷಣವೆಂಬ ಅರ್ಥವುಳ್ಳ ಪ್ಯಧಾತುವಿನಿಂದ ನಿಷ್ಪನ್ನವಾದ ಪಿತಾ ಎಂಬ ಶಬ್ದದಿಂದ ಪಾಲಕನು ಎಂದು ಅರ್ಥವಾಗುವುದು, ಭೂಮಿಯಲ್ಲಿ (ವೃಷ್ಟಿಪ್ರದಾನ) ಮಳೆಯನ್ನು ಹುಯ್ಯುವುದೇ ಮೊದಲಾದವುಗಳಿಂದ ಸಸ್ಯಾಭಿವೃದ್ಧಿಯನ್ನು ಅನ್ನವನ್ನೂ ಉಂಟುಮಾಡಿ, ಪಿತೃವಿನ ಕಾರ್ಯವನ್ನು ಈ ಅಗ್ನಿಯು ಮಾಡುತ್ತಿರುವನು, ಎಂದು ಅರ್ಥವು　ಇಂದ್ರನೇ ಮೊದಲಾದ ದೇವತೆಗಳಿಗೆ ವಿಧೇಯನಾಗಿ ಅವರು ಅಪೇಕ್ಷಿಸುವ ಕರ್ಮಗಳನ್ನು ಪುತ್ರನು ಆಚರಿಸುವ ಹಾಗೆ (ದೂತನಾಗಿ) ಸೇವಕವಾಗಿ ಅಗ್ನಿಯು ಹವಿಸ್ಸುಗಳನ್ನು ಒಯ್ಯುವುದರಿಂದ (ರಕ್ಷಿಸುವ) ಪಾಲನೆಮಾಡುವನಾದಕಾರಣ ಇವನು ದೇವತೆಗಳಿಗೆ ಪುತ್ರಸದೃಶನಾದ ದೂತನೂ, ಪಾಲನೆಮಾಡುವ ತಂದೆಯೂ ಆಗಿರುವನೆಂದು ಇನ್ನೊಂದು ಅರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಶುಶುಕ್ವಾನ್—ಶುಚ ದೀಪ್ತೌ ಧಾತು. ಲಿಟ್ಟಿನ ಸ್ಥಾನದಲ್ಲಿ **ಕ್ವಸುಶ್ಚ**—ಎಂಬುದರಿಂದ ಕ್ವಸು ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ವ್ಯತ್ಯಯೋ ಬಹುಲಂ** ಎಂಬುದರಿಂದ ಧಾತುವಿನ ಚಕಾರಕ್ಕೆ ಕುತ್ವ. ಶುಶುಕ್ವಸ್ ಶಬ್ದವಾಗುತ್ತದೆ. ಪ್ರಥಮಾ ಸು ಪರವಾದಾಗ ಉಗಿತ್ತಾದುದರಿಂದ **ಉಗಿದಚಾಂ**—ಸೂತ್ರದಿಂದ ನುಮ್. ಉಪಧಾದೀರ್ಘ. ಸುಲೋಪ. ಸಲೋಪ. ಅದಕ್ಕೆ ಲುಪರದಲ್ಲಿರುವಾಗ **ದೀರ್ಘಾದಟಿಸಮಾವಪಾದೇ** ಎಂಬುದರಿಂದ ರುತ್ವ. **ಅತೋಟಿನಿತ್ಯಂ** ಸೂತ್ರದಿಂದ ಅನುನಾಸಿಕತ್ವ. ಪ್ರತ್ಯಯ-ಸ್ವರ ಬರುತ್ತದೆ.

ಪಸ್ಯಾ—ಸ್ಯ ಪಾಲನಪೂರಣಯೋಃ ಧಾತು ಇದಕ್ಕೆ **ಆದ್ಯೃಗಮಹನಜನಃ**—(ಪಾ ಸೂ. ೩-೨-೧೭೧) ಎಂಬುದರಿಂದ ಕ ಪ್ರತ್ಯಯ. ಇದಕ್ಕೆ ಲಿಡ್ವದ್ಭಾವವಿರುವುದರಿಂದ ಧಾತುವಿಗೆ ದ್ವಿತ್ವ **ಉರತ್** ಸೂತ್ರದಿಂದ ಅಭ್ಯಾಸಕ್ಕೆ ಅತ್ವ ರಪರವಾಗಿ ಬಂದಾಗ ಹಲಾದಿಶೇಷ **ಇಕೋ ಯಣಚಿ** ಸೂತ್ರದಿಂದ ಧಾತುವಿನ ಋಕಾರಕ್ಕೆ ಯಣಾದೇಶ. ಪಸ್ರಿ ಶಬ್ದವಾಗುತ್ತದೆ. ಪ್ರಥಮಾ ಸು ಪರನಾದಾಗ **ಸುಪಾಂ ಸುಲುಕ್**— ಸೂತ್ರದಿಂದ ವಿಭಕ್ತಿಗೆ ಡಾದೇಶ ಡಿತ್ತಾದುದರಿಂದ ಸಾಮರ್ಥ್ಯದಿಂದ ಟಿಲೋಪ. **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** (ಪಾ. ಸೂ. ೬-೧-೧೬೧) ಎಂಬುದರಿಂದ ಆಕಾರಕ್ಕೆ ಉದಾತ್ತಸ್ವರ ಬರುತ್ತದೆ.

ಸಮೀಚೀ—ಅಂಚು ಗತಿಪೂಜನಯೋಃ ಧಾತು. ಸಮ್ ಉಪಸರ್ಗ ಪೂರ್ವದಲ್ಲಿರುವಾಗ **ಋತ್ವಿಕ್-ದಧೃಕ್**—(ಪಾ. ಸೂ. ೩-೨-೫೯) ಸೂತ್ರದಿಂದ ಕ್ವಿನ್ ಪ್ರತ್ಯಯ **ಅನಿದಿತಾಂ ಹಲಉಪ**--ಸೂತ್ರದಿಂದ ಧಾತುವಿನ ಉಪಧಾನಕಾರಕ್ಕೆ ಲೋಪ. **ಸಮಃ ಸಮಿ** (ಪಾ. ಸೂ ೬-೩-೯೩) ಎಂಬುದರಿಂದ ಸಮಿಗೆ ಸಮ್ಯಾದೇಶ **ಅಂಚತೇರ್ಹ್ಯೇತಿವಕ್ತವ್ಯಮ್** ಎಂಬ ವಚನದಿಂದ ಸ್ತ್ರೀತ್ವ ತೋರುವಾಗ ಜೀಪ್. ಆಗ **ಅಚಿಃ** ಸೂತ್ರದಿಂದ ಧಾತುವಿನ ಆಕಾರಕ್ಕೆ ಲೋಪ. ಲುಪ್ತಾಕಾರ ಅಂಚುಧಾತು ಪರದಲ್ಲಿರುವುದರಿಂದ **ಚೌ** ಎಂಬ ಸೂತ್ರದಿಂದ ಪೂರ್ವ-ಪದಕ್ಕೆ ದೀರ್ಘ ಸಮೀಚೀ ಎಂದು ರೂಪವಾಗುತ್ತದೆ. ಜೀಪ್ ನಿಮಿತ್ತನಾಗಿ ಧಾತುವಿನ ಉದಾತ್ತ ಆಕಾರ ಲೋಪವಾದುದರಿಂದ ಜೀಪ್ ಪಿತ್ತಾದುದರಿಂದ ಅನುದಾತ್ತವಾದರೂ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** ಎಂಬುದರಿಂದ ಉದಾತ್ತವಾಗುತ್ತದೆ ಸಮೀಚೀ+ಙಿ ಎಂದಿರುವಾಗ **ವಾ ಛಂದಸಿ** ಎಂಬುದರಿಂದ ಪೂರ್ವಸವರ್ಣ-ದೀರ್ಘ ಏಕಾದೇಶವಾಗಿ ಬರುತ್ತದೆ ಪದವಿಭಾಗಮಾಡುವಾಗ ಸಮ್+ಈಚೀ ಎಂದು ವಿಭಾಗಮಾಡುವುದಾದರೆ ಆಗ **ಉದೀಚ್** (ಪಾ ಸೂ. ೬-೪-೧೩೯) ಎಂಬುದರಿಂದ ವಿಧೀಯಮಾನನಾದ ಈತ್ವವು ಸಮ್ಮಿನ ಸರದಲ್ಲಿಯೂ ಛಾಂದಸವಾಗಿ ಬರುತ್ತದೆ.

ದಿವಃ—**ಊಡಿದಂಪದಾದಿ**— ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಬಭೂಥ—ಭೂ ಸತ್ತಾಯಾಂ ಧಾತು. ಲಿಟ್ ಮಧ್ಯಮಪುರುಷ ಏಕವಚನದ ರೂಪ. **ಬಭೂಥಾತತಂಥ**—(ಪಾ. ಸೂ. ೭-೨-೬೪) ಎಂಬುದರಿಂದ ನಿಪಾತಮಾಡಿರುವುದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** ಸೂತ್ರದಿಂದ ಥಲಿಗೆ ಇಡಾಗಮ ಬರುವುದಿಲ್ಲ ॥ ೧-೨ ॥

॥ ಸಂಹಿತಾಪಾಠಃ ॥

ವೇಧಾ ಅದೃಪ್ತೋ ಅಗ್ನಿರ್ವಿಜಾನನ್ನೂಧರ್ನ ಗೋನಾಂ ಸ್ವಾದ್ಮಾ ಪಿತೂನಾಂ ।
ಜನೇ ನ ಶೇವ ಆಹೂರ್ಯಃ ಸನ್ಮಧ್ಯೇ ನಿಷತ್ತೋ ರಣ್ವೋ ದುರೋಣೇ ॥ ೩ ॥ ೪ ॥

॥ ಪದಪಾಠಃ ॥

ವೇಧಾಃ । ಅದೃಪ್ತಃ । ಅಗ್ನಿಃ । ವಿಽಜಾನನ್ । ಊಧ್ನಃ । ನ । ಗೋನಾಂ । ಸ್ವಾದ್ಮ । ಪಿತೂನಾಂ ।
ಜನೇ । ನ । ಶೇವಃ । ಆಽಹೂರ್ಯಃ । ಸನ್ । ಮಧ್ಯೇ । ನಿಽಸತ್ತಃ । ರಣ್ವಃ । ದುರೋಣೇ ॥ ೩ ॥ ೪ ॥

॥ ಸಾಯಣಭಾಷ್ಯಂ ॥

ವೇಧಾಃ । ಮೇಧಾವಿನಾಮೈತತ್ । ಮೇಧಾವೀ । ಯದ್ವಾ । ವಿಧಾತಾ ಸರ್ವಸ್ಯ ಕರ್ತಾ । ಅದೃಪ್ತೋ ದರ್ಪರಹಿತೋ ವಿಜಾನನ್ ಕರ್ತವ್ಯಾಕರ್ತವ್ಯವಿಭಾಗಂ ಜಾನನ್ನಗ್ನಿರ್ಗೋನಾಂ ಗವಾಮೂಧರ್ನ ಗೋಸಂಬಂಧಿಪಯಸಃ ಆಶ್ರಯಭೂತಂ ಸ್ಥಾನಮಿವ ಪಿತೂನಾಮನ್ನಾನಾಂ ಸ್ವಾದ್ಮ ಸ್ವಾದಯಿತಾ ರಸಯಿತಾ । ಯಥಾ ಗೋರೂಧಃ ಪಯಃಪ್ರದಾನೇನ ಸರ್ವಾಣ್ಯನ್ನಾನಿ ಸ್ವಾದೂನಿ ಕರೋತಿ ತದ್ವದಗ್ನಿರಪಿ ಸಮ್ಯಕ್ಪಾಕೇನ ಸರ್ವಾಣ್ಯನ್ನಾನಿ ಸ್ವಾದೂನಿ ಕರೋತೀತ್ಯರ್ಥಃ । ಅಪಿ ಚೈವಂಭೂತೋಽಗ್ನಿರ್ಜನೇ ನ ಶೇವೋ ಜನಪದೇ ಲೋಕಸುಖಕರಃ ಪುರುಷ ಇವ ಮಧ್ಯೇ ಯಜ್ಞೇಷು ಮಧ್ಯ ಆಹೂರ್ಯ ಆಹ್ವಾತವ್ಯಃ ಸನ್ ದುರೋಣೇ ಯಜ್ಞಗೃಹೇ ನಿಷತ್ತೋ ನಿಷಣ್ಣೋ ರಣ್ವೋ ರಮಯಿತಾ ಸ್ತುತ್ಯೋ ವಾ ಭವತಿ ॥ ಗೋನಾಂ । ಗೋಃ ಷಾದಾಂತೇ । ಷಾ. ೭-೧-೫೭ । ಇತ್ಯಷಾದಾಂತೇಽಪಿ ನುಟ್ । ಸ್ವಾದ್ಮ । ಸ್ವಾದ ಆಸ್ವಾದನೇ । ಅಂತರ್ಭಾವಿತಣ್ಯರ್ಥಾದಸ್ಯೇಭ್ಯೋಽಪಿ ದೃಶ್ಯಂತೇ ಇತಿ ಮನಿನ್ । ಸುಷಾಂ ಸುಲು-

ಗಿತಿ ಸೋಲುಗ್ । ಪಿತೂನಾಂ । ನಾಮಸ್ಯತರಸ್ಯಾಮಿತಿ ನಾಮ ಉದಾತ್ತತ್ವಂ । ಆಹೂರ್ಯಃ । ಆಙ್-ಪೂರ್ವಾತ್ ಹ್ವಯತೇರಚೋ ಯದಿತಿ ಯತ್ । ಬಹುಲಂ ಛಂದಸೀತಿ ಸಂಪ್ರಸಾರಣಂ । ಹಲ ಇತಿ ದೀರ್ಘಃ । ರೇಫ್ಲೋಪಜನಶ್ಛಾಂದಸಃ । ಯತೋ೭ನಾವ ಇತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ವೇಧಾಃ—ಮೇಧಾವಿಯಾದ (ಸರ್ವಕರ್ತೃವಾದ) । **ಅದೃಪ್ತಃ**—ದರ್ಪರಹಿತನಾದ । **ವಿಜಾನನ್**—ಕರ್ತವ್ಯಾಕರ್ತವ್ಯಜ್ಞಾನವುಳ್ಳ । **ಅಗ್ನಿಃ**—ಅಗ್ನಿಯು । **ಗೋನಾಂ**—ಗೋವುಗಳ । **ಊಧರ್ನ**—ಕೆಚ್ಚಲಿನಂತೆ । **ಪಿತೂನಾಂ**—ಅನ್ನಗಳಿಗೆ । **ಸ್ವಾದ್ಮಾ**—ರುಚಿಯನ್ನುಂಟುಮಾಡುತ್ತಾನೆ (ಮತ್ತೂ) । **ಜನೇ**—ದೇಶದಲ್ಲಿ । **ಶೇವಃ ನ**—(ಜನಗಳಿಗೆ) ಸುಖಕರವಾದ ಕೆಲಸಗಳನ್ನು ಮಾಡುವವನಂತೆ । **ಮಧ್ಯೇ**—(ಯಜ್ಞಾಗಳ) ಮಧ್ಯದಲ್ಲಿ । **ಆಹೂರ್ಯಃ**—ಕರೆಯಲ್ಪಡುವವನಾಗಿ । **ದುರೋಣೇ**—ಯಜ್ಞಾಗೃಹದಲ್ಲಿ । **ನಿಷಣ್ಣಃ**—ಆಸೀನನಾಗಿ । ರಣ್ವಃ—ಸುಖಕರನು (ಸ್ತುತ್ಯನು) (ಆಗುತ್ತಾನೆ)

॥ ಭಾವಾರ್ಥ ॥

ಸರ್ವಕರ್ತೃವಾದರೂ ಗರ್ವವಿಲ್ಲದ, ಕರ್ತವ್ಯಾಕರ್ತವ್ಯಜ್ಞಾನವುಳ್ಳ ಅಗ್ನಿಯು, ಹಾಲು ಬೆಣ್ಣೆಗಳಿಗೆ ರುಚಿ ಕೊಡುವಂತೆ, (ಅನ್ನವನ್ನು ಪಚನಮಾಡುವುದರಿಂದ) ರುಚಿಕರವಾಗಿ ಮಾಡುತ್ತಾನೆ ಜನರಿಗೆ ಉಪಕಾರಮಾಡುವ ಮನುಷ್ಯನು ಹೇಗೆ ಆಹೂತನಾಗಿ ಪೂಜಿತನೋ ಹಾಗೆ, ಆಹೂತನಾಗಿ, ಯಜ್ಞಾಗೃಹದಲ್ಲಿ ಆಸೀನನಾಗಿ, ಸ್ತುತ್ಯನಾಗುತ್ತಾನೆ

English Translation.

The wise, the humble and discriminating Agni, is the giver of flavour to food, as the udder of cows (gives sweetness to the milk); invited (to the ceremony), he sits in the sacrificial chamber, diffusing happiness, ike a benevolent man, amongst mankind.

॥ ವಿಶೇಷವಿಷಯಗಳು ॥

ವೇಧಾಃ—ಮೇಧಾವಿ ನಾಮೈತತ್ । ಮೇಧಾವೀ ಯದ್ವಾ । ವಿಧಾತಾ ಸರ್ವಸ್ಯ ಕರ್ತಾ । ವೇಧಸ್ ಶಬ್ದವು ಇಪ್ಪತ್ತುನಾಲ್ಕು ಮೇಧಾವಿ ನಾಮಗಳಲ್ಲಿ (ನಿ ೩-೧೯) ಉಕ್ತವಾಗಿರುತ್ತದೆ ಉಪಸರ್ಗವು ಧಾತುವಿನ ಸಂಗಡ ಪ್ರಯುಕ್ತವಾಗಿರುವುದರಿಂದ ಧಾರಣಾರ್ಥವಾದ ಧಾತುವು ಬೇರೆಯ ಅರ್ಥವನ್ನು ಬೋಧಿಸುವುದು ಇದರಿಂದ ಮೇಧಾವಿಯು= ಜ್ಞಾನವಂತನೆಂಬ ಅರ್ಥವಾಗುವುದು ಈ ಅರ್ಥದಲ್ಲಿ ಪ್ರಯುಕ್ತವಾಗಿರುವ ಉದಾಹರಣೆಯನ್ನು ಕೊಟ್ಟಿರುವರು.

ಅಭ್ರಾಜಿ ಶರ್ಧೋ ಮರುತೋ ಯದರ್ಣಸಂ ನೋಷಥಾ ವೃಕ್ಷಂ ಕಕುಭೇವ ನೇಥಸಃ ।

(ಋ. ಸಂ ೫-೫೪-೬)

ಸೋನೋ ನ ನೇಥಾ ಯುತ ಪ್ರಜಾತಃ ಪಶುರ್ನ ಶಿಶ್ವಾ ವಿಭುರ್ದೂರೇಭಾಃ ।

(ಋ ಸಂ ೧-೬೫-೧೦)

ದಿವಶ್ಚಿತ್ಪೂರ್ವೋ ನ್ಯಸಾದಿ ಯೋತಾಪೈಷ್ಯೋ ವಿಶ್ವತಿರ್ನಿಷ್ಟು ನೇಥಾಃ

(ಋ ಸಂ ೧-೬೦-೩)

ಅಗ್ನಿಯು ಪ್ರಜ್ಞಾವಂತನಾಗಿರುವನು ಎಂದು ಅರ್ಥವು ಮತ್ತು ಯಜ್ಞವಮಾಡುವವರೇ ಮೊದಲಾದವರೆಲ್ಲರಿಗೂ ಅವರವರ ಇಷ್ಟಾರ್ಥಗಳನ್ನು ಅನುಗ್ರಹಿಸಿ ಎಲ್ಲವನ್ನೂ (ಸೃಷ್ಟಿ) ಹೊಸದಾಗಿ ಉಂಟುಮಾಡುವ ಕಾರಣ ವಿಧಾತೃ ಶಬ್ದವಾಚ್ಯನಾದ ಬ್ರಹ್ಮನೂ ಆಗಿರುವನೆಂದು ತಾತ್ಪರ್ಯವು

ಗವಾಂ ಊಧರ್ನ ಪಿತೂನಾಂ ಸ್ವಾದ್ಮ್ಯ--ಗೋ ಸಂಬಂಧಿ ಪಯಸಃ ಆಶ್ರಯಭೂತಂ ಸ್ಥಾನಮಿವ ಅನ್ನಾನಾಂ ಸ್ವಾದಯಿತಾ ರಸಯಿತಾ । ನ ಎಂಬುವ ಪದವು ಉಪಮಾವಾಚಕವು, ಇವ ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು ಗೋವುಗಳ ಕೆಚ್ಚಲುಗಳು ರುಚಿಕರವಾಗಿ ಮಾಡುವ ಹಾಲನ್ನು ಕೊಡುವುದರಿಂದ ಪದಾರ್ಥಗಳನ್ನು ರಸವತ್ತಾಗಿ ಮಾಡುವಂತೆ ಅಗ್ನಿಯೂ ಕೂಡ ಚೆನ್ನಾಗಿ ಪದಾರ್ಥಗಳನ್ನು ಪಚನಮಾಡುವುದರಿಂದ ಅವುಗಳು ರುಚಿಕರವಾಗಿಯೂ ರಸವತ್ತಾಗಿಯೂ ಇರುವಂತೆ ಮಾಡುವನೆಂದು ಅರ್ಥವು ಪಿತು ಶಬ್ದವು ಇಪ್ಪತ್ತೆಂಟು ಅನ್ನನಾಮಗಳ ಮಧ್ಯದಲ್ಲಿ (ನಿ. ೩-೯) ಉಕ್ತವಾಗಿರುವುದು ಓಪ್ಯಾಯಿ ಎಂಬ ಧಾತುವಿನಿಂದಲಾಗಲಿ, ಪಾಧಾತುವಿನಿಂದಲಾಗಲಿ ನಿಷ್ಪನ್ನವಾದ ಪಿತು ಶಬ್ದವು ಅನ್ನವೆಂಬ ಅರ್ಥದಲ್ಲಿ ಇಲ್ಲಿ ಪ್ರಯುಕ್ತವಾಗಿರುವಂತೆಯೇ **"ಪಿತುಂ ನು ಸ್ತೋಷಂ"** (ಋ ಸಂ. ೧-೧೮೭-೧) **ಪ್ರಮಂದಿನೇ ಪಿತುಮದರ್ಚನಾ ವಚಃ** (ಋ ಸಂ. ೧-೧೦೧-೧) ಎಂಬ ಋಕ್ಕುಗಳಲ್ಲಿಯೂ ಈ ಅರ್ಥದಲ್ಲಿಯೇ ಪ್ರಯುಕ್ತವಾಗಿರುವುದು

ಜನೇ ನ ಶೇವಃ--ಜನಪದೇ ಲೋಕೇಸುಖಕರಃ ಪುರುಷ ಇವ । ತಿಂಬಾತಾ, ಶತರಾ, ಮೊದಲಾದ ಇಪ್ಪತ್ತು ಸುಖನಾಮಗಳ ಮಧ್ಯದಲ್ಲಿ (ನಿ ೩-೧೩) ಶೇವಪದವು ಪಠಿತವಾಗಿರುವುದು ಇಲ್ಲಿ ಸುಖಕರ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವ ಕಾರಣದಿಂದಲೂ, ಜನಶಬ್ದಕ್ಕೆ ಲೋಕನೆಂದು ಅರ್ಥಮಾಡಿರುವುದರಿಂದಲೂ ಅಗ್ನಿಯು ಲೋಕಕ್ಕೆ ಹಿತಕಾರಿಯಾದ ಮನುಷ್ಯನ ಹಾಗೆ ಯಜ್ಞಮಾಡುವವರೇ ಮೊದಲಾದ ಎಲ್ಲರಿಗೂ ಮತ್ತು ಲೋಕಕ್ಕೂ ಕೂಡ ಸುಖವನ್ನು ಉಂಟುಮಾಡುವವನೆಂದು ಅರ್ಥವು.

ಸ್ಕಂದಸ್ವಾಮಿಗಳು--**ಜನೇನ ಶೇವಃ ಜನಯಿತೈತ್ವಾತ್ ಜನಃ ಪಿತಾ । ಪಿತೇವ ಸುಖಕರೋ ಅಗ್ನಿಃ ।** ಜನಶಬ್ದವು ಉತ್ಪತ್ತಿಗೆ ಕಾರಣನಾಗಿರುವುದರಿಂದ ತಂದೆಯು ಎಂದು ಅರ್ಥವನ್ನು ಬೋಧಿಸುವುದು. ಅಗ್ನಿಯು ತಂದೆಯ ಹಾಗೆ ಸುಖವನ್ನು ಉಂಟುಮಾಡುವವನು ಎಂದು ಅರ್ಥವನ್ನು ಹೇಳುವರು ಮತ್ತು **ಜನಶಬ್ದೋ ಲೋಕವಚನಃ, ದುರೋಣೇ ಮಧ್ಯೇ ಯಜ್ಞಗೃಹೇ ನೇದ್ಯಾಂ ನಿಷತ್ತಃ**

ರಣ್ವಃ ರಮಣೀಯಃ ಸುಖಃ । ದುರೋಣ ಶಬ್ದದ ಅರ್ಥವಾದ ಯಜ್ಞಗೃಹಕ್ಕೂ ಲೋಕವೆಂಬ ಅರ್ಥವುಳ್ಳ ಜನಶಬ್ದಕ್ಕೂ ಉಪಮಾನೋಪಮೇಯಭಾವವನ್ನು ಅಂಗೀಕರಿಸಿ ಲೋಕದಲ್ಲಿ ಅಗ್ನಿಯು ಸುಖವಾಗಿಯೂ, ಸುಖಕರನಾಗಿಯೂ ಇರುವಂತೆ, ಯಜ್ಞಗೃಹದ ವೇದಿಯ ಮಧ್ಯದಲ್ಲಿ ಸುಖವಾಗಿ ಕೂತುಕೊಂಡು ಎಲ್ಲರಿಗೂ ಸುಖಕರನಾಗಿರುವನು ಎಂದು ಅರ್ಥವನ್ನು ಉಪಪಾದನೆ ಮಾಡಿರುವರು

ದುರೋಣೆ—ದುರೋಣ ಶಬ್ದವು ಇಪ್ಪತ್ತೆರಡು ಗೃಹನಾಮಗಳ ಮಧ್ಯದಲ್ಲಿ (ನಿ. ೩-೧೩) ಉಕ್ತವಾಗಿರುವುದರಿಂದ ಇಲ್ಲಿ ಯಜ್ಞಗೃಹವೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು.

ಸ್ಕಂದಸ್ವಾಮಿಗಳು—**ಆಹುರ್ಯಃ—ಚಂಚಲತ್ವಾತ್ ಜ್ವಾಲಾನಾಂ ಕುಟಿಲಃ** ಅಗ್ನಿಯ ಜ್ವಾಲೆಗಳು ಕುಟಿಲವಾಗಿ (ವಕ್ರವಾಗಿ) ಸ್ಥಿರವಾಗಿಲ್ಲವಾದಕಾರಣ ಅಗ್ನಿಯೂ ಕುಟಿಲನಾಗಿ ಇರುವನು ಎಂದೂ, ಸಾಯಣರು **ಆಹುರ್ಯಃ—ಯಜಮಾನೈರಾಹ್ವಾತವ್ಯಃ** ಯಜ್ಞಮಾಡುವವರಿಂದ ಅಗ್ನಿಯು ಕರೆಯಲ್ಪಡತಕ್ಕವನೆಂದೂ ಅರ್ಥಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ಅದೃಪ್ತಃ—ದೃಪ ಹರ್ಷಮೋಹನಯೋಃ ಧಾತು. ಇದಕ್ಕೆ ಕ್ತಪ್ರತ್ಯಯ ಮೋಹನ ಎಂದರೆ ಗರ್ವ. ನ ದೃಪ್ತಃ ಅದೃಪ್ತಃ. ನಞ್‌ತತ್ಪುರುಷ ಸಮಾಸವಾದಾಗ **ತತ್ಪುರುಷೇ ತುಲ್ಯಾರ್ಥ**— ಸೂತ್ರದಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ.

ವಿಜಾನನ್—ಜ್ಞಾ ಅವಬೋಧನೇ ಧಾತು. ಲಡರ್ಥದಲ್ಲಿ ಶತೃಪ್ರತ್ಯಯ. **ಜ್ಞಾಜನೋರ್ಜಾ**—ಸೂತ್ರದಿಂದ ಜಾದೇಶ. **ಕ್ಶ್ಯಾದಿಭ್ಯಃ ಶ್ನಾ** ಸೂತ್ರದಿಂದ ಶ್ನಾ ವಿಕರಣ. ಶತೃ ಜ್ಞಾತ್ರಾದುದರಿಂದ **ಶ್ನಾಭ್ಯಸ್ತಯೋರಾತಃ** ಎಂಬುದರಿಂದ ಶ್ನಾ ವಿಕರಣದ ಆಕಾರಕ್ಕೆ ಲೋಪ ಪ್ರತ್ಯಯಸ್ವರ ಬರುತ್ತದೆ

ಗೋನಾಮ್—ಗೋ ಶಬ್ದಕ್ಕೆ ಷಷ್ಠೀ ಬಹುವಚನ ಪರವಾದಾಗ **ಗೋಃ ಪಾದಾಂತೇ** (ಪಾ. ಸೂ ೬-೧-೬೭) ಎಂಬುದರಿಂದ ಪಾದಾಂತದಲ್ಲಿ ವಿಧಿಸಿರುವ ನುಡಾಗಮವು ಛಾಂದಸವಾಗಿ ಅಪಾದಾಂತದಲ್ಲಿಯೂ ಬರುತ್ತದೆ.

ಸ್ವಾದ್ಮ—ಸ್ವಾದ ಆಸ್ವಾದನೆ ಧಾತು. ಣಿಜರ್ಥ (ಪ್ರೇರಣಾರ್ಥ)ವು ಧಾತ್ವರ್ಥದಲ್ಲಿ ಅಂತರ್ಭೂತವಾಗಿದೆ. **ಅನ್ಯೇಭ್ಯೋಽಪಿ ದೃಶ್ಯಂತೇ** (ಪಾ. ಸೂ. ೩-೨-೭೫) ಎಂಬುದರಿಂದ ಮನಿನ್ ಪ್ರತ್ಯಯ ಸ್ವಾದ್ಮನ್ ಶಬ್ದವಾಗುತ್ತದೆ. ಪ್ರತ್ಯಯ ನಿತ್ವಾದುದರಿಂದ ಆದ್ಯುದಾತ್ತವಾಗುತ್ತದೆ ಸ್ವಾದ್ಮನ್+ಸು ಎಂದಿರುವಾಗ **ಸುಪಾಂ ಸುಲುಕ್**—ಸೂತ್ರದಿಂದ ಸುವಿಗೆ ಲುಕ್. ಪದಾಂತವಾದುದರಿಂದ **ನಲೋಪಃ ಪ್ರಾತಿಪದಿಕಾಂತಸ್ಯ** ಎಂಬುದರಿಂದ ಪ್ರಾತಿಪದಿಕದ ಕೊನೆಯ ನಕಾರಕ್ಕೆ ಲೋಪ.

ಪಿತೂನಾಮ್—ಪಿತು ಶಬ್ದದ ಷಷ್ಠೀ ಬಹುವಚನರೂಪ. **ನಾಮನ್ಯತರಸ್ಯಾಮ್** (ಪಾ ಸೂ ೬-೧-೧೭೭) ಎಂಬುದರಿಂದ ನಾಮಿಗೆ (ನುಟ್‌ಸಹಿತವಾದ ವಿಭಕ್ತಿ) ಉದಾತ್ತಸ್ವರ ಬರುತ್ತದೆ

ಅಹೂರ್ಯಃ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ. ಧಾತು. ಆಙ್ ಉಪಸರ್ಗ ಪೂರ್ವದಲ್ಲಿರುವಾಗ **ಅಚೋ ಯತ್** (ಪಾ ಸೂ. ೩-೧-೯೭) ಎಂಬುದರಿಂದ ಅಜಂತಧಾತುವಾದುದರಿಂದ ಯತ್ ಪ್ರತ್ಯಯ **ಬಹುಲಂ ಛಂದಸಿ** ಎಂಬುದರಿಂದ ನಿಮಿತ್ತವಿಲ್ಲದಿದ್ದರೂ ಧಾತುವಿಗೆ (ವಕಾರಕ್ಕೆ) ಸಂಪ್ರಸಾರಣ. **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ **ಹಲಃ** (ಪಾ. ಸೂ ೬-೪-೨) ಅಂಗಾವಯದ ಹಲಿನ ಪರದಲ್ಲಿರುವ ಸಂಪ್ರಸಾರಣಕ್ಕೆ ದೀರ್ಘ. ಮಧ್ಯದಲ್ಲಿ ರೇಫಾಧಿಕ್ಯವು ಛಾಂದಸವಾಗಿ ಒರುತ್ತದೆ. **ಯತೋಽನಾವಃ** (ಪಾ ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಊಕಾರವು ಉದಾತ್ತನಾಗುತ್ತದೆ.

ನಿಷತ್ತಃ—ಷದ್ಲೃ ವಿಶರಣಗತ್ಯವಸಾದನೇಷು ಧಾತು. ಇದಕ್ಕೆ ನಿಷ್ಠಾ ಪ್ರತ್ಯಯ. **ರದಾಭ್ಯಾಂ**--ಸೂತ್ರದಿಂದ ನತ್ವವು ಪ್ರಾಪ್ತವಾದರೆ **ನಸತ್ತ ನಿಷತ್ತ**—(ಪಾ. ಸೂ ೮-೪-೬೧) ಎಂಬುದರಿಂದ ನತ್ವಾಭಾವವು ನಿಪಾತಿತವಾಗಿದೆ. ಪ್ರತ್ಯಯಸ್ವರದಿಂದ ಅಂತೋದಾತ್ತ. ॥ ೩-೪ ॥

॥ ಸಂಹಿತಾಪಾಠಃ ॥

ಪುತ್ರೋ ನ ಜಾತೋ ರಣ್ವೋ ದುರೋಣೇ ವಾಜೀ ನ ಪ್ರೀತೋ ವಿಶೋ ವಿ ತಾರೀತ್ ।

ವಿಶೋ ಯದಹ್ವೇ ನೃಭಿಃ ಸನೀಳಾ ಅಗ್ನಿರ್ದೇವತ್ವಾ ವಿಶ್ವಾನ್ಯಶ್ಯಾಃ ॥ ೫ ॥ ೬ ॥

॥ ಪದಪಾಠಃ ॥

ಪುತ್ರಃ । ನ । **ಜಾತಃ** । **ರಣ್ವಃ** । **ದುರೋಣೇ** । **ವಾಜೀ** । ನ । **ಪ್ರೀತಃ** । **ವಿಶಃ** । ವಿ । **ತಾರೀತ್** ।

ವಿಶಃ । **ಯತ್** । **ಅಹ್ವೇ** । **ನೃಭಿಃ** । **ಸನೀಳಾಃ** । **ಅಗ್ನಿಃ** । **ದೇವತ್ವಾ** । **ವಿಶ್ವಾನಿ** । **ಅಶ್ಯಾಃ** ॥ ೫ ॥ ೬ ॥

॥ ಸಾಯಣಭಾಷ್ಯಂ ॥

ಪುತ್ರೋ ನ ಪುತ್ರ ಇವ ಜಾತಃ ಪ್ರಾದುರ್ಭೂತೋಽಗ್ನಿರ್ದುರೋಣೇ ಗೃಹೇ ರಣ್ವೋ ರಮಯಿತಾ ಭವತಿ । ವಾಜೀ ನ ಅಶ್ವ ಇವ ಪ್ರೀತೋ ಹರ್ಷಯುಕ್ತಃ ಸನ್ವಿಶಃ ಸಂಗ್ರಾಮೇ ವರ್ತಮಾನಾಃ ಶತ್ರುಭೂತಾಃ ಪ್ರಜಾ ವಿ ತಾರೀತ್ । ವಿಶೇಷೇಣ ತರತಿ । ಅತಿಕ್ರಾಮತಿ । ಅಪಿ ಚ ನೃಭಿರ್ಮನುಷ್ಯೈರ್ಯುಕ್ತೈರ್ಮನುಷ್ಯೈಃ ಸಹಿತೋಽಹಂ ಸನೀಳಾಃ ಸಮಾನನಿವಾಸಸ್ಥಾನಾ ವಿಶೋ ದೈವೀಃ ಪ್ರಜಾ ಯದ್ಯದಾಹ್ವೇ ಆಹ್ವಯಾಮಿ ತದಾನೀಮಯಮಗ್ನಿರ್ವಿಶ್ವಾನಿ ಸರ್ವಾಣಿ ದೇವತಾ ದೇವತಾನ್ಯಶ್ನಾಃ । ಅಶ್ನುತೇ । ಪ್ರಾಪ್ನೋತಿ । ಸ್ವಯಮೇವ ತತ್ತದ್ದೇವತಾರೂಪೋ ಭವತೀತ್ಯರ್ಥಃ । ತಥಾ ಚ ಮಂತ್ರಾಂತರಮಾಮ್ನಾಸ್ಯತೇ । ತ್ವಮಗ್ನೇ ವರುಣೋ ಜಾಯಸೇ ಯತ್ತ್ವಂ ಮಿತ್ರೋ ಭವಸಿ ಯತ್ಸಮಿದ್ಧ ಇತ್ಯಾದಿ । ಋಗ್ವೇ. ೫-೩-೧ ॥ ಅಶ್ನಾಃ । ಅಶೂ ವ್ಯಾಪ್ತೌ । ಲಿಙಿ ವ್ಯತ್ಯಯೇನ ಪರಸ್ಮೈಪದಮಧ್ಯಮೌ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ ॥

॥ ಪ್ರತಿಪದಾರ್ಥ ॥

ಪುತ್ರೋ ನ—ಪುತ್ರನಂತೆ । **ಜಾತಃ**—(ಅರಣಿಯಿಂದ) ಉದ್ಭೂತನಾದ (ಅಗ್ನಿಯು) । **ದುರೋಣೇ**—ಮನೆಯಲ್ಲಿ । **ರಣ್ವಃ**—ಸುಖಕರನು (ಆಗುತ್ತಾನೆ) । **ವಾಜೀ ನ**—ಅಶ್ವದಂತೆ । **ಪ್ರೀತಃ**—ಹರ್ಷಯುಕ್ತನಾಗಿ । **ವಿಶಃ**—ಸಂಗ್ರಾಮದಲ್ಲಿ ಶತ್ರುಭೂತರಾದವರನ್ನು । **ವಿ ತಾರೀತ್**—ವಿಶೇಷವಾಗಿ ದಾಟುತ್ತಾನೆ (ಅತಿಕ್ರಮಿಸುತ್ತಾನೆ) । **ನೃಭಿಃ**—ಋತ್ವಿಜರಿಂದ (ಯುಕ್ತನಾದ ನಾನು) । **ಸನೀಳಾಃ**—ಸಮಾನನಿವಾಸಸ್ಥಾನವುಳ್ಳ । **ವಿಶಃ**—ದೇವತೆಗಳನ್ನು । **ಯತ್**—ಯಾವಾಗ । **ಆಹ್ವೇ**—ಆಹ್ವಾನಿಸುತ್ತೇನೆಯೋ (ಆಗ) । **ಅಗ್ನಿಃ**—ಅಗ್ನಿಯು । **ವಿಶ್ವಾನಿ**—ಎಲ್ಲಾ । **ದೇವತ್ಯಾ**—ದೇವತ್ವವನ್ನೂ । **ಅಶ್ಯಾಃ**—ಹೊಂದುತ್ತಾನೆ

॥ ಭಾವಾರ್ಥ ॥

ಅರಣಿಯಿಂದುದ್ಭೂತನಾದ ಅಗ್ನಿಯು ಯಾಗಗೃಹವನ್ನು ಸುಖಕರವನ್ನಾಗಿ ಮಾಡುತ್ತಾನೆ. ಸಂಗ್ರಾಮದಲ್ಲಿ ಉತ್ತಮಾಶ್ವದಂತೆ (ಶತ್ರುಗಳನ್ನೆದುರಿಸಿ) ಅವರನ್ನು ಪರಾಜಿತರನ್ನಾಗಿ ಮಾಡುತ್ತಾನೆ ಋತ್ವಿಜರಿಂದ ಯುಕ್ತನಾಗಿ, ಏಕತ್ರಸಂಗತರಾದ ಯಾವದೇವತೆಗಳನ್ನು ಆಹ್ವಾನಿಸಿದರೂ, ಅಗ್ನಿಯು ಅವರೆಲ್ಲರ ದೇವತ್ವವನ್ನು ತಾನೇ ವಹಿಸಿಕೊಳ್ಳುತ್ತಾನೆ (ಅವರಪರವಾಗಿ ಬಂದು ಪೂಜಾದಿಗಳನ್ನು ಸ್ವೀಕರಿಸುತ್ತಾನೆ)

English Translation

He diffuses happiness in a dwelling, like a son (newly) born; he overcomes enemies in battle, like an animated charger; when I, along with other men, invoke gods living in one place, you, Agni, assume all (their) celestial natures.

॥ ವಿಶೇಷವಿಷಯಗಳು ॥

ವಾಜೇ ನ ವಿಶಃ ವಿತಾರೀತ್—ಅಶ್ವ ಇವ ಸಂಗ್ರಾಮೇ ವರ್ತಮಾನಾಃ ಶತ್ರುಭೂತಾಃ ವಿಶೇಷೇಣ ಅತಿಕ್ರಾಮತಿ । ವಿಶಃ ಎಂಬ ಪದವು ಇಪ್ಪತ್ತೈದು ಮನುಷ್ಯನಾಮಗಳ ಮಧ್ಯದಲ್ಲಿ (ನಿ. ೩-೭) ಪಠಿತವಾಗಿರುತ್ತದೆ. ಅಗ್ನಿಯು ಕುದುರೆಯು ಹಾಗೆ ಶತ್ರುಜನರನ್ನು ಯುದ್ಧಗಳಲ್ಲಿ ಬಹಳ ಮಟ್ಟಿಗೆ ಜಯಿಸುವನು ಎಂದು ಸಾಯಣರು ಅರ್ಥಮಾಡಿರುವರು

ಸ್ವಂದಸ್ವಾಮಿಗಳು—**ವಿಪೂರ್ವಸ್ತರತಿಃ ಸರ್ವತ್ರ ವೃದ್ಧ್ಯರ್ಥಃ** ವಿ ಉಪಸರ್ಗದಿಂದ ಕೂಡಿದ ತೃಧಾತುವಿಗೆ ವೃದ್ಧಿ ಎಂದು ಅರ್ಥವು ಕುದುರೆಯು ಯುದ್ಧದಲ್ಲಿ ಜಯಶೀಲವಾಗಿರುವಂತೆ, ಅಗ್ನಿಯು ಯಾಗಮಾಡುವವರನ್ನೂ, ಸ್ತೋತ್ರಮಾಡುವವರನ್ನೂ ಅನೇಕವಿಧವಾಗಿ ವೃದ್ಧಿಗೊಳಿಸುವನು ಎಂದು ಅರ್ಥವನ್ನು ಹೇಳಿರುತ್ತಾರೆ.

ವಿಶ್ವಾನಿ ದೇವತ್ರಾ ಅಶ್ಯಾಃ—ಸರ್ವಾಣಿ ದೇವತ್ರಾನಿ ಪ್ರಾಪ್ನೋತಿ । ಅಗ್ನಿಯು ಯಜ್ಞಮಾಡುವ ಯಜಮಾನರುಗಳಿಂದ ಯಾಗದಲ್ಲಿ ಹವಿರ್ಭಾಗಗಳನ್ನು ಸ್ವೀಕರಿಸುವುದಕ್ಕಾಗಿ ತನಗೆ ಸಮಾನವಾದ ಸ್ಥಾನಮಾನಗಳುಳ್ಳ ದೇವತೆಗಳನ್ನು ಕರೆಯಲ್ಪಟ್ಟ ಕಾಲದಲ್ಲಿ ತಾನೇ ಆಯಾಯ ದೇವತೆಗಳನ್ನು ವ್ಯಾಪಿಸಿ ಆಯಾಯ ದೇವತಾರೂಪದಿಂದ ಇರುವನು **"ತ್ವಮಗ್ನೇ ವರುಣೋ ಜಾಯಸೇ ಯತ್ತ್ವಂ ಮಿತ್ರೋ ಭವಸಿ ಯತ್ಸಮಿದ್ಧಃ"** (ಋ. ಸಂ. ೫-೩-೧) ಇತ್ಯಾದಿ ಎಲೈ ಅಗ್ನಿಯೇ, ನೀನು ಯಜ್ಞವೇದಿಯಲ್ಲಿ ಚೆನ್ನಾಗಿ ಉದ್ದೀಪ್ತನಾಗಿ ವರುಣನೂ ಮತ್ತು ಮಿತ್ರನೂ ಆಗುತ್ತೀಯೆ. ವರುಣ ಮತ್ತು ಮಿತ್ರ ಎಂಬುವುದು ದೇವತೆಗಳ ಇಬ್ಬರ ಹೆಸರುಗಳು ಎಂಬುದಾಗಿ ಈ ಮಂತ್ರದ ಅರ್ಥವು. ಇವರಿಂದ ಅಗ್ನಿಯು ಸರ್ವದೇವತಾ ಸ್ವರೂಪದಿಂದ ಇರುವನೆಂದೂ ಅಗ್ನಿಯ ಮಹಿಮೆಯು ವರ್ಣನಾತೀತವೆಂದೂ ತಿಳಿಯುವುದು

॥ ವ್ಯಾಕರಣಪ್ರಕ್ರಿಯಾ ॥

ಜಾತಃ—ಜನೀ ಪ್ರಾದುರ್ಭಾವೇ ಧಾತು. ಇದಕ್ಕೆ ಕ್ತಪ್ರತ್ಯಯ **ಜ್ಞಾಜನೋರ್ಜಾ** ಎಂಬುದರಿಂದ ಧಾತುವಿಗೆ ಜಾ ಆದೇಶ. ಪ್ರತ್ಯಯಸ್ವರದಿಂದ ಅಂತೋದಾತ್ತ.

ವಾಜೀ—ವಾಜಂ ಅಸ್ಯ ಅಸ್ತಿ ಇತಿ ವಾಜೀ **ಅತ ಇನಿಠನೌ** ಸೂತ್ರದಿಂದ ಮತ್ವರ್ಥದಲ್ಲಿ ಇನಿಪ್ರತ್ಯಯ ವಾಜಿನ್ ಶಬ್ದವಾಗುತ್ತದೆ ಪ್ರಥಮಾವಿಭಕ್ತಿವಚನಾಂತರೂಪ.

ಪ್ರೀತಃ—ಪ್ರೀಞ್ ತರ್ಪಣೇ ಧಾತು ನಿಷ್ಠಾಪ್ರತ್ಯಯಸ್ವರದಿಂದ ಅಂತೋದಾತ್ತ

ತಾರೀತ್—ತೃ ಪ್ಲವನತರಣಯೋಃ ಧಾತು. ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲುಙ್. ಪ್ರಥಮಪುರುಷ ಏಕವಚನದಲ್ಲಿ ತಿಪ್ರತ್ಯಯ **ಇತಶ್ಚ** ಸೂತ್ರದಿಂದ ಇಕಾರಲೋಪ. **ಅಸ್ತಿ ಸಿಚೋಽಪೃಕ್ತೇ** ಎಂಬುದರಿಂದ ಆದಕ್ಕೆ ಈಡಾಗಮ ಚ್ಲಿಗೆ ಸಿಜಾದೇಶ ಆದಕ್ಕೆ ಇಡಾಗಮ **ಸಿಚಿ ವೃದ್ಧಿಃ**-ಸೂತ್ರದಿಂದ ವೃದ್ಧಿ **ಇಟಈಟಿ** ಎಂಬುದರಿಂದ ಸಿಚ್ಚಿಗೆ ಲೋಪ. **ಬಹುಲಂ ಛಂದಸ್ಯಮಾಙ್‌ಯೋಽಗೇಽಪಿ** ಎಂಬುದರಿಂದ ಅಡಾಗನು ಬರುವುದಿಲ್ಲ ತಿಙಂತನಿಘಾತಸ್ವರ ಬರುತ್ತದೆ

ಅಹ್ವೇ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. ಛಾಂದಸವಾಗಿಲಙ್ ಉತ್ತಮಪುರುಷ ಏಕವಚನದಲ್ಲಿ ಇಟ್ ಪ್ರತ್ಯಯ. **ಬಹುಲಂ ಛಂದಸಿ** ಸೂತ್ರದಿಂದ ಶಪ್ಪಿಗೆ ಲುಕ್. **ಆದೇಚೆಉಪದೇಶೇ೨ಶಿತಿ** ಎಂಬುದರಿಂದ ಧಾತುವಿಗೆ ಆತ್ವ. ಗುಣ. ಯತ್ ಎಂದು ಹಿಂದೆ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗವ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ದೇವತ್ರಾ—**ಶೇಶ್ಛಂದಸಿ ಬಹುಲಂ** ಎಂಬುದರಿಂದ ನಪುಂಸಕದಲ್ಲಿ ಆದೇಶವಾಗಿ ಬಂದ ಶಿಗೆ ಲೋಪ.

ಆಶ್ಯಾಃ—ಅಶೂ ವ್ಯಾಪ್ತೌ ಧಾತು. **ವ್ಯತ್ಯಯೋ ಬಹುಲಂ** ಎಂಬುದರಿಂದ ಲಿಙ್‌ನಲ್ಲಿ ಪರಸ್ಮೈಪದ ಪ್ರತ್ಯಯವೂ ಪ್ರಥಮಪುರುಷದ ಸಿಪ್ ಪ್ರತ್ಯಯವೂ ಬರುತ್ತದೆ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ (ಶ್ನು) ಲುಕ್ **ಯಾಸುಟ್ ಪರಸ್ಮೈ**—ಸೂತ್ರದಿಂದ ಲಿಙ್‌ಗೆ ಯಾಸುಟಾಗಮ ಸಿಪ್ಪಿನ ಇಕಾರಕ್ಕೆ **ಇತಶ್ಚ** ಎಂಬುದರಿಂದ ಲೋಪ. ಸಕಾರಕ್ಕೆ ರುತ್ವವಿಸರ್ಗ **ಆಶ್ಯಾಃ** ಎಂದು ರೂಪವಾಗುತ್ತದೆ **ತಿಙ್ಶಿತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೬-೭ ॥

॥ ಸಂಹಿತಾಪಾಠಃ ॥

ನಕಿಷ್ಟ ಏತಾ ವ್ರತಾ ಮಿನಂತಿ ನೃಭ್ಯೋ ಯದೇಭ್ಯಃ ಶ್ರುಷ್ಟಿಂ ಚಕರ್ಥ ।
ತತ್ತು ತೇ ದಂಸೋ ಯದಹನ್ತ್ಸಮಾನೈರ್ನಭಿರ್ಯದ್ಯುಕ್ತೋ ವಿವೇ ರಪಾಂಸಿ ॥ ೭ ॥ ೮ ॥

॥ ಪದಪಾಠಃ ॥

ನಕಿಃ । ತೇ । ಏತಾ । ವ್ರತಾ । ಮಿನಂತಿ । ನೃಭ್ಯಃ । ಯತ್ । ಏಭ್ಯಃ ।
ಶ್ರುಷ್ಟಿಂ । ಚಕರ್ಥ ।
ತತ್ । ತು । ತೇ । ದಂಸಃ । ಯತ್ । ಅಹನ್ । ಸಮಾನ್ಯೈಃ । ನೃಭಿಃ । ಯತ್ ।
ಯುಕ್ತಃ । ವಿವೇಃ । ರಪಾಂಸಿ ॥ ೭ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತೇ ತವ ಸಂಬಂಧೀನ್ಯೇತಾ ವ್ರತಾ ಏತಾನಿ ಪರಿದೃಶ್ಯಮಾನಾನಿ ದರ್ಶಪೂರ್ಣಮಾಸಾದೀನಿ ಕರ್ಮಾಣಿ ನಕಿರ್ಮಿನಂತಿ । ರಾಕ್ಷಸಾದಯೋ ಬಾಧಕಾ ನ ಹಿಂಸಂತಿ । ಯದ್ಯಸ್ಮಾತ್ತ್ವಮೇಭ್ಯಃ ಕರ್ಮಸು ವರ್ತಮಾನೇಭ್ಯೋ ನೃಭ್ಯೋ ಯಜ್ಞಸ್ಯ ನೇತೃಭ್ಯೋ ಯಜಮಾನೇಭ್ಯಃ ಶ್ರುಷ್ಟಿಂ । ಶು ಆಶ್ವಶ್ನುತೇ ವ್ಯಾಪ್ನೋತೀತಿ ಶ್ರುಷ್ಟಿರ್ಯಜ್ಞಫಲರೂಪಂ ಸುಖಂ । ತಚ್ಚಿಕರ್ಥ ಕೃತವಾನಸಿ । ಸತಿ ಹಿ ತವ ವ್ರತಾನಾಂ ಬಾಧಕ ಏತನ್ನೋಪಪದ್ಯತೇ । ಅತೋಽವಗಮ್ಯತೇ ತವ ವ್ರತಾನಾಂ ಹಿಂಸಕಾ ನ ಸಂತೀತಿ । ಹೇ ಅಗ್ನೇ ತೇ ತ್ವದೀಯಂ ತತ್ತು ದಂಸಸ್ತದೇವ ಕರ್ಮ ಯದ್ಯದಿ ರಾಕ್ಷಸಾದಿರಹನ್ ಹಂತಿ ನಾಶಯತಿ ಕದಾನೀಂ ಸಮಾನ್ಯೈಃ ಸಪ್ತಗಣರೂಪೇಣ ಸದೃಶೈರ್ನಭಿರ್ನೇತೃಭಿರ್ಮರುದ್ಭಿಃ ಯುಕ್ತಸ್ತ್ವಂ ರಪಾಂಸಿ ಬಾಧಕಾನಿ ರಾಕ್ಷಸಾದೀನಿ ಯದ್ಯಸ್ಮಾತ್ತ್ವಂ ವಿವೇಃ ಗಮಯಸಿ ಪಲಾಯನಂ ಪ್ರಾಪಯಸಿ । ತಸ್ಮಾತ್ತವ ವ್ರತಾನಿ ನ ಹಿಂಸಂತೀತಿ ಯೋಜ್ಯಂ ॥ ಮಿನಂತಿ । ಮಿಞ್ ಹಿಂಸಾಯಾಂ । ಕ್ರ್ಯಾದಿಕಃ । ಸ್ನಾದೀನಾಂ ಹ್ರಸ್ವ ಇತಿ ಹ್ರಸ್ವತ್ವಂ । ವಿವೇಃ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲಙ್ । ವೀ ಗತ್ಯಾದಿಷು । ಸಿಪ್ಯದಾದಿತ್ವಾಚ್ಛಪೋ ಲುಕಿ ಪ್ರಾಪ್ತೇ ಬಹುಲಂ ಛಂದಸೀತಿ ಶಪಃ ಶ್ಲುಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ತೇ**—ನಿನ್ನ ಸಂಬಂಧವಾದ । **ತತ್ತು ದಂಸಃ**—ಆದೇ ಕರ್ಮವನ್ನು । **ಯತ್ ಅಹನ್**—ಯಾವಾಗ ರಾಕ್ಷಸಾದಿಗಳು ಹಾನಿಮಾಡುತ್ತಾರೋ (ಆಗ) । **ಸಮಾನ್ಯೈಃ**—ನಿನಗೆ ಸದೃಶರಾದ । **ನೃಭಿಃ**—(ಮನುಷ್ಯರಿಗೆ) ನೇತೃಗಳಾದ (ಮರುದ್ದೇವತೆಗಳಿಂದ) । **ಯುಕ್ತಃ**—ಯುಕ್ತನಾದ (ನೀನು) । **ರಪಾಂಸಿ**—ಬಾಧಕರಾದ ರಾಕ್ಷಸಾದಿಗಳನ್ನು । **ಯತ್**—ಯಾವ ಕಾರಣ । **ವಿವೇಃ**—ಹೊರಡಿಸುತ್ತೀಯೋ (ಓಡಿಸುತ್ತೀಯೋ) । **ಯತ್**—ಯಾವ ಕಾರಣ । **ಏಭ್ಯಃ**—(ಕರ್ಮಗಳಲ್ಲಿ ನಿರತರಾದ) ಈ । **ನೃಭ್ಯಃ**—

ಯಜಮಾನರುಗಳಿಗೆ । **ತುಷ್ಟಿಂ**—ಯಜ್ಞರೂಪವಾದ ಸುಖವನ್ನು । **ಚಕರ್ಥ**—ಉಂಟುಮಾಡುತ್ತೀಯೋ । **(ತತ್**—ಆದಕಾರಣ) । **ತೇ**—ನಿನ್ನ ಉದ್ದಿಶ್ಯಕವಾದ । **ವಿತಾ ವ್ರತಾ**—ಈ (ದರ್ಶಪೂರ್ಣಮಾಸಾದಿ) ಕರ್ಮಗಳನ್ನು । **ನಕಿಃ ಮಿನಂತಿ**—ರಾಕ್ಷಸಾದಿಗಳು ಹಿಂಸಿಸುವುದಿಲ್ಲ

॥ ಭಾವಾರ್ಥ ॥

ಮನುಷ್ಯರು ನಿನ್ನನ್ನುದ್ದೇಶಿಸಿ ಪ್ರಾರಂಭಿಸಿದ ಯಾಗಾದಿಗಳಿಗೆ ರಾಕ್ಷಸಾದಿಗಳಿಂದ ಬಾಧೆ ಬಂದರೆ, ಕೂಡಲೇ, ನಿನಗೆ ಸಮಾನರಾದ ಮರುದ್ದೇವತೆಗಳಿಂದ ಯುಕ್ತನಾಗಿ ಬಂದು ಅವರನ್ನು ಓಡಿಸುತ್ತೀಯೆ ಮತ್ತು ಯಾಗನಿರತರಾದವರಿಗೆ ತತ್ಫಲರೂಪವಾವೆ ಸುಖವನ್ನು ಶೀಘ್ರವಾಗಿ ಕೊಡುವುದರಿಂದ, ನಿನ್ನ ಸಂಬಂಧವಾದ ಯಜ್ಞಗಳಿಗೆ ರಾಕ್ಷಸಾದಿ ಬಾಧೆಯಿಲ್ಲವೆಂಬುದು ಸ್ಪಷ್ಟವಾಗಿದೆ.

English Translation.

Never may (The Rakshasas) interrupt the rites performed for you, since you confer on the sacrificers happiness (as a reward), for should (such spirits) disturb your sacrifice, then assisted by leaders (Maruts), equally (competent) like yourself, you put the intruders to flight.

॥ ವಿತೀಕ್ಷನಿಷಯಗಳು ॥

ನೃಭ್ಯಃ ಶ್ರುಷ್ಟಿಂ ಚಕರ್ಥ—ಯಜ್ಞಸ್ಯ ನೇತೃಭ್ಯೋ ಯಜಮಾನೇಭ್ಯಃ ಶು ಆಶು ಅಶ್ನುತೇ ವ್ಯಾಪ್ನೋತೀತಿ **ಶ್ರುಷ್ಟಿರ್ಯಜ್ಞಫಲರೂಪಸುಖಂ ತತ್ ಕೃತವಾನಸಿ । ತತ್ ನಕಿಃ ಮಿನಂತಿ**—**ರಾಕ್ಷಸಾದಯೋ ಬಾಧಕಾ ನ ಹಿಂಸಂತಿ ।** ನಕಿಃ ಎಂಬ ಶಬ್ದವು (ನಿ ೩-೧೪) ಹಿಕಮ್. ನುಕಮ್ ಎಂಬ ಒಂಭತ್ತು ಪದಗಳು ಸರ್ವಪದಾರ್ಥಗಳನ್ನು ಬೋಧಿಸುವುವು ಎಂದು ನಿಪಾತಿತವಾಗಿರುತ್ತದೆ ಶ್ರುಷ್ಟಿ ಶಬ್ದವು (ನಿ. ೬-೧೩) ಸುಖಾಭಿಯುಕಃ, ಧಾನ್ಯಶಲಾಕಾಯಾಶ್ಚ ಎಂಬುದಾಗಿ ನಿಪಾತಿತವಾಗಿರುವುದು. ಅಗ್ನಿಯು ಯಜ್ಞವನ್ನು ಆಚರಿಸುವ ಯಜಮಾನರಿಗೆ ಜಾಗ್ರತಿಯಾಗಿ ಯಜ್ಞಫಲಾನುಭವರೂಪವಾದ ಸುಖವನ್ನು ಅನುಗ್ರಹಿಸುವವನಾದುದರಿಂದ ಯಜ್ಞಕರ್ತರುಗಳು ಆಚರಿಸುವ ಕರ್ಮಗಳಿಗೆ ಬಾಧಕವನ್ನು ಮಾಡುವ ರಾಕ್ಷಸಾದಿಗಳೂ ನಿನ್ನಿಂದ ಬಾಧಿಸಲ್ಪಡುವರೆಂದು ಕಾರ್ಯದಿಂದ ಕಾರಣವು ಸ್ಪಷ್ಟವಾಗಿ ತಿಳಿದುಬರುತ್ತದೆ ಯಜ್ಞಮಾಡುವ ಯಜಮಾನರುಗಳಿಗೆ ಯಜ್ಞಫಲಾನುಭವವು ನಿರ್ವಿಘ್ನವಾಗಿ ಆಚರಿಸಿದ ಯಜ್ಞದಿಂದ ಉಂಟಾಗುವುದು ರಾಕ್ಷಸರೇ ಮೊದಲಾದ ಯಜ್ಞವಿಘ್ನಕರ್ತರ ವಿನಾಶವು ಅಗ್ನಿಯಿಂದ ಆಚರಿಸಲ್ಪಡುವಕಾರಣ ಯಜ್ಞ ಮತ್ತು ಯಜಮಾನರುಗಳ ರಕ್ಷಣೆಯು ಅಗ್ನಿಯಿಂದಲೇ ಆಗುತ್ತಿರುವುದೆಂದು ತಾತ್ಪರ್ಯವು.

॥ ವ್ಯಾಕರಣಪ್ರಕ್ರಿಯಾ ॥

ಏತಾ, ವೃತಾ - ನಪುಂಸಕ ಬಹುವಚನದಲ್ಲಿ ಆದೇಶವಾಗಿ ಬಂದ ಶಿಗೆ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಲೋಪ

ಮಿನಂತಿ—ಮಿಞ್ ಹಿಂಸಾಯಾಂ ಧಾತು. ಕ್ರ್ಯಾದಿ. ಪ್ವಾದಿಯಲ್ಲಿ ಸೇರಿರುವುದರಿಂದ **ಪ್ವಾದೀನಾಂ ಹ್ರಸ್ವಃ** (ಪಾ ಸೂ ೭-೩-೮೦) ಎಂಬುದರಿಂದ ಹ್ರಸ್ವ **ಕ್ರ್ಯಾದಿಭ್ಯಃ ಶ್ನಾ** ಸೂತ್ರದಿಂದ ಶ್ನಾವಿಕರಣ ಲಟ್ ಪ್ರಥಮಪುರುಷ ಬಹುವಚನಕ್ಕೆ ಅಂತಾದೆ.ಶ. ಇದಕ್ಕೆ **ಸಾರ್ವಧಾತುಕಮಪಿತ್** ಸೂತ್ರದಿಂದ ಙಿದ್ವದ್ಭಾವವಿರುವುದರಿಂದ **ಶ್ನಾಭ್ಯಸ್ತಯೋರಾತಃ** ಎಂಬುದರಿಂದ ವಿಕರಣದ ಆಕಾರಕ್ಕೆ ಲೋಪ ಅತಿಬಿಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಚಕರ್ಥ—ಡುಕೃಞ್ ಕರಣೇ ಧಾತು ಲಿಟ್ ಮಧ್ಯಮಪುರುಷ ಏಕವಚನದಲ್ಲಿ ಥಲಾದೆ ಶ ಕ್ರಾದಿ ನಿಯಮದಿಂದ ಇಟ್ ಒರುವುದಿಲ್ಲ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಥಲ್ ಲಿತ್ತಾದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

ಅಹನ್—ಹನ ಹಿಂಸಾಗತ್ಯೋಃ ಧಾತು ಲಙ್ ಪ್ರಥಮಪುರುಷ ಏಕವಚನರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಮತ್ತು ಅಡಾಗಮ ಉದಾತ್ತವಾದದುರಿಂದ ಆದ್ಯುದಾತ್ತನಾಗುತ್ತದೆ

ವಿವೇಃ—ವೀ ಗತ್ಯಾದಿಸು ಧಾತು **ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲಙ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ **ಅದಿಪ್ರಭೃತಿಭ್ಯಃ**-ಸೂತ್ರದಿಂದ ಶಪಿಗೆ ಲುಕ್ ಪ್ರಾಪ್ತವಾದರೆ **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ **ಹ್ರಸ್ವಃ** ಸೂತ್ರದಿಂದ ಹ್ರಸ್ವಃ ಸಿಪ್ ನಿಮಿತ್ತಕವಾಗಿ ಧಾತುವಿನ ಇಕಾರಕ್ಕೆ ಗುಣ ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗ. **ಯದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುಸ್ವರದಿಂದ ಏಕಾರ ಉದಾತ್ತವಾಗುತ್ತದೆ

ರಸಾಂಸಿ—ರಸ ವ್ಯಕ್ತಾಯಾಂ ವಾಚಿ. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಬಾಧಾರ್ಥದಲ್ಲಿ ಪ್ರಯುಕ್ತವಾಗಿದೆ. ಸರ್ವಧಾತು ನಿಬಂಧನವಾದ ಅಸುನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ. ದ್ವಿತೀಯಾ ಬಹುವಚನಾಂತರೂಪ. ॥ ೮-೯ ॥

॥ संहितापाठः ॥

उषो न जारो विभावोस्रः संजग्मानतरूपश्चिकेत-
दस्मै ।
त्मना वहन्तो दुरो व्यृण्वन्नवन्त विश्वे स्वर्दृ-
शीकेे ॥ ६ ॥ ८० ॥

॥ पदपाठः ॥

उषः । न । जारः । विभाऽवा । उस्रः । संजग्मानऽरूपः । चिकेतत् ।
अस्मै ।
त्मना । वहन्तः । दुरः । वि । ऋण्वन् । नवन्त । विश्वे । स्वः ।
दृशीकेे ॥ ६ ॥ ८० ॥

॥ सायणभाष्यं ॥

उषो न जार उषसो जरयितादित्य इव विभावा विशिष्टप्रकाशयुक्त उस्रो निवासयिता संजग्मानतरूपः सर्वैः प्राणाभिरवगतस्वरूपः । देवतान्तरवदप्रत्यक्षो न भवतीत्यर्थः । एवंभूतोऽग्निरस्मै यजमानाय चिकेतत् । जानातु । अभिमतफलं ददात्वित्यर्थः । यद्वा । विभक्तिव्यत्ययः । अस्मा इदं सूक्तरूपं स्तोत्रं चिकेतत् । जानातु । तथास्य रश्मयस्त्मनात्मनैव स्वयमेव वहन्तो हविर्वहनं कुर्वन्तो दुरो यज्ञगृहद्वाराणि व्यृण्वन् । विशेषेण गच्छन्ति । व्याप्नुवन्तीत्यर्थः । तदनन्तरं दृशीकेे दर्शनीये स्वर्नभसि विश्वे सर्वे ते रश्मयो नवन्त । गच्छन्ति । नवतिर्गतिकर्मा । देवानाप्नुवन्तीत्यर्थः ॥ उस्रः । वस निवासे । स्थायितंचीत्यादिना रक् । यजादित्वात्संप्रसारणं । चिकेतत् । कित ज्ञाने । जौहोत्यादिकः । लेट्यडागमः ।

ಬಹುಲಂ ಛಂದಸೀತಿ ವಕ್ತವ್ಯಂ । ಕಾ. ೭-೩-೮೭-೧ । ಇತಿ ವಚನಾನ್ನಾಭ್ಯಸ್ತಸ್ಯಾಚಿ ಪಿತೀತಿ ಲಘೂಪಧಗುಣಪ್ರತಿಷೇಧಾಭಾವಃ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ಋಣ್ವನ್ । ಇವಿ ರಿವಿ ರವಿ ಧವಿ ಗತ್ಯರ್ಥಾಃ । ಇದಿತ್ತ್ವಾನ್ನುಮ್ । ಛಾಂದಸೋ ಲಙ್ । ವ್ಯತ್ಯಯೇನ ರೇಫಸ್ಯ ಸಂಪ್ರಸಾರಣಂ । ಯದ್ವಾ ಋಣು ಗತೌ । ತನೋತ್ಯಾದಿಃ ॥

॥ ಪ್ರತಿಪದಾರ್ಥ ॥

ಉಷೋ ನ ಜಾರಃ—ಉಷಸ್ಸನ್ನು ಜಾರಯುಕ್ತವನ್ನಾಗಿ ಮಾಡುವ ಸೂರ್ಯನಂತೆ । **ವಿಭಾವಾ**—ವಿಶೇಷ ಕಾಂತಿಯುಕ್ತನಾದ । **ಉಸ್ರಃ**—ವಾಸಸ್ಥಳವನ್ನೊದಗಿಸುವ । **ಸಂಜ್ಞಾತರೂಪಃ**—(ಎಲ್ಲರಿಂದಲೂ) ಜ್ಞಾತವಾದ ರೂಪವುಳ್ಳ (ಅಗ್ನಿಯು) । **ಅಸ್ಮೈ**—ಯಜಮಾನನ (ಈ ಸ್ತುತಿಯನ್ನೂ) । **ಚಿಕೇತತ್**—ತಿಳಿಯಲಿ (ಅಭಿಮತಫಲವನ್ನು ಕೊಡಲಿ) । **ತ್ಮನಾ**—(ರಶ್ಮಿಗಳು) ತಾವಾಗಿಯೇ । **ವಹಂತಃ**—ಹವಿರ್ವಹನ ಕಾರ್ಯವನ್ನು ಮಾಡುವವುಗಳಾಗಿ । **ದುರಃ**—ಯಜ್ಞಗೃಹದ್ವಾರಗಳನ್ನು । **ವ್ಯೃಣ್ವಿ**—ವಿಶೇಷವಾಗಿ ಹೋಗುತ್ತವೆ । **ದಿವಿಷ್ಠೇ**—ಸರಿದೃಶ್ಯಮಾನವಾದ । **ಸ್ವಃ**—ಆಕಾಶದಲ್ಲಿ । **ವಿಶ್ವೇ**—ಎಲ್ಲ ರಶ್ಮಿಗಳು । **ನವಂತ**—ಹೋಗುತ್ತವೆ

॥ ಭಾವಾರ್ಥ ॥

ಉಷಃಕಾಲದ ಕಾಂತಿಯನ್ನು ಕಡಮೆಮಾಡುವ ಸೂರ್ಯನಂತೆ ವಿಶೇಷಕಾಂತಿಯುಳ್ಳ, ವಾಸಗೃಹವನ್ನು ಒದಗಿಸುವ, ಎಲ್ಲರಿಗೂ ಪ್ರತ್ಯಕ್ಷನಾದ (ಇತರ ದೇವತೆಗಳಂತೆ ಅಪ್ರತ್ಯಕ್ಷನಲ್ಲದ) ಅಗ್ನಿಯು ಯಜಮಾನನಿಗೆ ಅಭಿಮತ ಫಲವನ್ನು ಅನುಗ್ರಹಿಸಲಿ ಅಗ್ನಿಯ ರಶ್ಮಿಗಳೇ ಹವಿಸ್ಸನ್ನು ತೆಗೆದುಕೊಂಡು ಯಜ್ಞಗೃಹದ್ವಾರಗಳಿಂದ ಹೊರಟು, ನಭೋಮಂಡಲವನ್ನು ಬೆಳಗುತ್ತ, ದ್ಯುಲೋಕಕ್ಕೆ ಹೋಗುತ್ತವೆ (ಹವಿಸ್ಸನ್ನು ಇತರ ದೇವತೆಗಳಿಗೆ ತೆಗೆದುಕೊಂಡು ಯೋಗಿ ಕೊಡುತ್ತವೆ)

English Translation

May Agni, who is possessed of manifold light, like the extinguisher of the dawn, the granter of habitation, and of cognizable form, know (the desires of) this, (his worshipper), (his rays), spontaneously bearing the oblation, open the doors (of the sacrificial chamber), and all spread through the visible heaven.

॥ ವಿಶೇಷವಿಷಯಗಳು ॥

ಉಷೋ ನ ಜಾರಃ ವಿಭಾವಾ—**ಉಷಸಃ ಜಾರಯಿತಾ ಆದಿತ್ಯ ಇವ ವಿಶಿಷ್ಟಪ್ರಕಾಶಯುಕ್ತಃ ।** ನ ಎಂಬ ಪದವು ಇವ ಎಂಬ ಅರ್ಥದಲ್ಲಿ ಉಪಮಾವಾಚಕಗಳ ಮಧ್ಯದಲ್ಲಿ (ನಿ ೩-೧೩) ಉಕ್ತವಾಗಿರುತ್ತದೆ ಉಷಃಕಾಲದ ಕಾಂತಿಯನ್ನು ಕಡಿಮೆಮಾಡುವ ಸೂರ್ಯನಂತೆ ಅಗ್ನಿಯು ಬಹಳವಾದ ಪ್ರಕಾಶವುಳ್ಳವನಾಗಿ ಇರುತ್ತಾನೆ

उस्रः—निवासयिता। यज्ञं नमाडुव यजमानरुगळन्नु सुखदिन्द इरिसुवनु. उस्र शब्दवु गौः एंब अर्थदल्लि (नि. ३–२) ऒंभत्तु गोनामगळ मध्यदल्लि उक्तवागिरुत्तदे. मत्तु रश्मि एंब अर्थदल्लि (नि. ३–७४) हदिनैदु पदगळ मध्यदल्लि परितवागिरुवुदु. स्कंदस्वामिगळु इदरिंद अग्नियु गोविशेषनाद नृषभसदृशनागि गूळेयंते इरुवनु एंदु अर्थमाडिरुवरु

चिकेतत् **असृग्रं** एंबल्लि असृग्रं एंब पदवु अमुं एंदु द्वितीयान्तवागिरुवुदेंदूं **चिकेतत्** एंब पदवु बहुवचनक्के बदलागि ऐकवचनदल्लि प्रयुक्तवागिरुवुदेंदूं विवरिसि अग्निय स्वरूपवन्नु सरियागि तिळिदुकॊंडिरुव यजमानरुगळु अग्नि गोस्वरूपवागि स्तुतियन्नूं माडुवरु. मत्तु हविस्सुगळन्नु अर्पिसुवरु. इवरु अग्निय उद्देशवागि स्तुतियन्नु माडुवागलूं हविस्सन्नु अर्पिसुवागलूं तम्मल्लि अग्निय स्वरूप ज्ञानदिंद इरुत्ता द्रव्यवु दॊरेयुव अनेक विधवाद (दारिगळन्नु) उपायगळन्नु तिळिदुकॊंडु धनवन्नु हॊंदुवरु एंपू. सायणरु **असृग्रं—यजमानाय चिकेतत्–जानातु, अभिमतफलं ददात्वित्यर्थः। यद्वा इदं सूक्तरूपं स्तोत्रं जानातु।** अग्नियु यजमानन्निगागि अवन इष्टवन्नु नेरवेरिसलि अथवा ई सूक्तरूपवाद स्तोत्रवन्नु तिळिदुकॊळ्ळुव हागे अनुग्रहवन्नु कॊडलि एंदु अर्थवन्नु माडिरुवरु. मत्तु ई अग्निय किरणगळु तम्मप्पनिक्के तावागियेय हविस्सन्नु वहिसुववुगळागि यज्ञगृहगळन्नु व्याप्तिसुवुवु. अनंतर अंतरिक्षदल्लि देवतेगळन्नु व्याप्तिसुवुवु एंदु नवधातुविगे गमनवेंदु अर्थमाडिरुवरु

स्कंदस्वामिगळु—**नवंतः** एंब पदक्के स्तोत्रमाडुव एल्ला मनुष्यरूं अग्नियु यज्ञ वेदिय मध्यदल्लि प्रकाशिसुत्तिरुवाग अवन प्रकाशवेल्लवन्नूं नोडुवरु. मत्तु स्वर्गदल्लियूं अवन प्रकाशवन्नु नोडुवुदक्काग अग्नियन्नु स्तुतिसुवरु एंदु विवरणे माडिरुवरु. एरडु भाष्यगळल्लि ऒंदु पदक्के इब्बरू बेरे बेरेयाद रीतियल्लि बेरेय पददॊडने संबंधमाडि अर्थदल्लिरुव न्यूनत्ववन्नु निवदपडिसिरुवरु

॥ व्याकरणप्रक्रिया ॥

विभ्वा—भा दीप्तौ धातु **अतोमनिन्क्वनिप्वनिपश्च** सूत्रदिंद वनिप् प्रत्ययः. विभ्वन् शब्दवागुत्तदे. वनिप् पित्तादुदरिंद अनुदात्त.

उस्रः—वस निवासे धातु. इदक्के **स्फायितंचि**—(उ. सू ३-१३०) एंबुदरिंद रक् प्रत्ययः. ई धातुवु यजादियल्लि सेरिरुवुदरिंद इदक्के कित्ताद प्रत्ययवु परदल्लिरुवुदरिंद

ವಚಿಸ್ವಪಿಯಜಾದೀನಾಂ ಕಿತಿ (ಪಾ. ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಚಿಕೇತತ್—ಕಿತ ಜ್ಞಾನೇ ಧಾತು. ಜುಹೋತ್ಯಾದಿ ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿವ್ ಪ್ರತ್ಯಯ **ಇತಶ್ಚ ಲೋಪಃ**—ಸೂತ್ರದಿಂದ ಇಕಾರಲೋಪ. ಶ್ಲು ವಿಕರಣ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ **ಕುಹೋಶ್ಚುಃ** ಎಂಬುದರಿಂದ ಚುತ್ವ **ಲೇಟೋಽಡಾಟೌ** ಸೂತ್ರದಿಂದ ಪ್ರತ್ಯಯಕ್ಕೆ ಅಡಾಗಮ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಲಘೂಪಧಗೆ ಗುಣ. ಯದ್ಯಪಿ ಇಲ್ಲಿ ಅಭ್ಯಸ್ತ ಸಂಜ್ಞೆ (ದ್ವಿತ್ವವನ್ನು ಹೊಂದಿದ ಎರಡೂ ಖಂಡಗಳು) ಇರುವುದರಿಂದ **ನಾಭ್ಯಸ್ತಸ್ಯಾಚಿ ಪಿತಿ ಸಾರ್ವಧಾತುಕೇ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣಪ್ರತಿಷೇಧ ಪ್ರಾಪ್ತವಾಗುತ್ತದೆ ಆದರೆ **ಬಹುಲಂ ಛಂದಸೀತಿ ವಕ್ತವ್ಯಮ್** (ಕಾ ೭-೩-೮೬ ೧) ಎಂಬ ವಚನದಿಂದ ಇಲ್ಲಿ ನಿಷೇಧ ಬರುವುದಿಲ್ಲ **ಅಭ್ಯಸ್ತಾನಾಮಾದಿಃ** (ಪಾ ಸೂ ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ತ್ಮನಾ—ಆತ್ಮನ್ ಶಬ್ದ ತೃತೀಯಾ ಏಕವಚನ ಪರವಾದಾಗ **ಮಂತ್ರೇಷ್ವಾಙ್ಯಾದೇರಾತ್ಮನಃ** (ಪಾ ಸೂ ೬-೪-೧೪೧) ಎಂಬುದರಿಂದ ಆದಿಯ ಆಕಾರಕ್ಕೆ ಲೋಪ

ಋಣ್ವನ್—ಇಪಿ ರವಿ ಧವಿ ಗತ್ಯರ್ಥಾಃ ಧಾತು **ಇದಿತೋ ನುಮ್ ಧಾತೋಃ** ಎಂಬುದರಿಂದ ನುಮಾಗಮ ವರ್ತಮಾನಾರ್ಥದಲ್ಲಿ ಛಾಂದಸವಾದ ಲಙ್ ಪ್ರಥಮಪುರುಷ ಬಹುವಚನದಲ್ಲಿ ಅಂತಾದೇಶ **ವ್ಯತ್ಯಯೋ ಬಹುಲಂ** ಎಂಬುದರಿಂದ ರೇಫಕ್ಕೆ ಸಂಪ್ರಸಾರಣ ಆದೇಶ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. **ಋವರ್ಣಾನ್ನಸ್ಯ ಣತ್ವಂ ವಾಚ್ಯಂ** ಎಂಬ ವಚನದಿಂದ ನುಮ್ಮಿನ ನಕಾರಕ್ಕೆ ಣತ್ವ ಋಣ್ವನ್ ಎಂದಾಗುತ್ತದೆ ಅಥವಾ ಋಣೆ ಗತೌ ಧಾತು ತನೋತ್ಯಾದಿ **ತನಾದಿಕೃಞ್ಭ್ಯ ಉಃ** ಎಂಬುದರಿಂದ ಉ ವಿಕರಣ ಹಿಂದಿನಂತೆ ರೂಪಸಿದ್ಧಿಯಾಗುತ್ತದೆ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ನವಂತ—ನವ ಗತೌ ಧಾತು ಇಲ್ಲಿಯೂ ಛಾಂದಸವಾದ ಲಙ್ **ಬಹುಲಂ ಛಂದಸ್ಯಮಾಙ್-ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಜಂತದ ಪರದಲ್ಲಿರುವುದರಿಂದಲೂ ಪಾದಾದಿಯಲ್ಲಿರುವುದರಿಂದಲೂ ನಿಘಾತಸ್ವರ ಬರುವುದಿಲ್ಲ ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ ॥ ೯-೧೦ ॥

ಆರವತ್ತೋಂಛತ್ಮನೇ ಸೂಕ್ತವು ಸಮಾಪ್ತವು

ಎಪ್ಪತ್ತನೆಯ ಸೂಕ್ತವು

ವನೇಮೇತಿ ದ್ವೈಪದಮೇಕಾದಶರ್ಚಮಧ್ಯಯನತಃ ಷಡೃಚಂ ಷಷ್ಠಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಅನುಕ್ರಾಂತಂ ಚ । ವನೇಮೈಕಾದಶೇತಿ ॥ ವಿನಿಯೋಗೋ ಲೈಂಗಿಕಃ ॥

ಅನುವಾದವು—**ವನೇಮ** ಎಂಬ ಈ ಸೂಕ್ತವು ಹನ್ನೆರಡನೆಯ ಅನುವಾಕದಲ್ಲಿ ಆರನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವುವು ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಅನುಕ್ರಮಣಿಕೆಯಲ್ಲಿ **ವನೇಮೈಕಾದಶ** ಎಂದು ಹೇಳಿರುವುದು ವಿನಿಯೋಗವು ಲೈಂಗಿಕವು

ಸೂಕ್ತ—೭೦

॥ ಓಂ ॥

॥ ಮಂಡಲ—೧ ॥ ಅನುವಾಕ—೧೨ ॥ ಸೂಕ್ತ—೭೦ ॥
॥ ಅಷ್ಟಕ—೧ ॥ ಅಧ್ಯಾಯ—೫ ॥ ವರ್ಗ—೧೪ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ (೧೧) ॥
॥ ಋಷಿಃ—ಪಾರಾಶರಃ ಶಾಕ್ತ್ಯಃ ॥
ದೇವತಾ—ಅಗ್ನಿಃ ॥
ಛಂದಃ—ದ್ವಿಪದಾ ವಿರಾಟ್ ॥

॥ ಸಂಹಿತಾಪಾಠಃ ॥

ವನೇಮ॑ ಪೂರ್ವೀರರ್ಯೋ ಮನೀಷಾ ಅಗ್ನಿಃ ಸುಶೋಕೋ ವಿಶ್ವಾನ್ಯಶ್ಯಾಃ ।
ಅ ದೈವ್ಯಾನಿ ವ್ರತಾ ಚಿಕಿತ್ವಾನಾ ಮಾನುಷಸ್ಯ ಜನಸ್ಯ ಜನ್ಮ ॥ ೧ ॥ ೨ ॥

॥ ಪದಪಾಠಃ ॥

ವನೇಮ । ಪೂರ್ವೀಃ । ಅರ್ಯಃ । ಮನೀಷಾ । ಅಗ್ನಿಃ । ಸುಽಶೋಕಃ । ವಿಶ್ವಾನಿ ।
ಅಶ್ಯಾಃ ।

ಆ । ದೈವ್ಯಾನಿ । ವ್ರತಾ । ಚಿಕಿತ್ವಾನ್ । ಆ । ಮಾನುಷಸ್ಯ । ಜನಸ್ಯ ।
ಜನ್ಮ ॥ ೧ ॥ ೨ ॥

॥ ಸಾಯಣಭಾಷ್ಯಂ ॥

ಪೂರ್ವೀಃ ಪ್ರಭೂತಾ ಇಷೋಽನ್ನಾನಿ ವನೇಮ । ಸಂಭಜೇಮಹಿ । ಅಗ್ನಿಸ್ತಾದೃಶಾನ್ಯನ್ನಾನಿ ದದಾತ್ವಿತ್ಯರ್ಥಃ । ಮನೀಷಾ ಮನೀಷಯಾ ಬುದ್ಧ್ಯಾರ್ಯೋ ಗಂತವ್ಯಃ ಸ್ವಾಪ್ತವ್ಯಃ । ಯದ್ವಾ । ಮನೀಷಯಾರ್ಯಃ ಸ್ವಾಮೀ । ಸುಶೋಕಃ ಶೋಭನದೀಪ್ತಿಃ । ಏವಂಭೂತೋಽಗ್ನಿರ್ವಿಶ್ವಾನಿ ಸರ್ವಾಣಿ ಕರ್ಮಾಣ್ಯಶ್ಯಾಃ । ಅಶ್ನುತೇ । ವ್ಯಾಪ್ನೋತಿ । ಕಿಂ ಕುರ್ವನ್ । ದೈವ್ಯಾನಿ ದೇವೇಷು ಭವಾನಿ ವ್ರತಾ ವ್ರತಾನಿ ಕರ್ಮಾಣಿ ಚಿಕಿತ್ವಾನ್ ಆ ಸಮಂತಾಜ್ಜಾನನ್ । ತಥಾ ಮಾನುಷಸ್ಯ ಜನಸ್ಯ ಮನುಷ್ಯಜಾತಸ್ಯ ಜನ್ಮೋತ್ಪತ್ತಿರೂಪಂ ಕರ್ಮ ಚಿಕಿತ್ವಾನ್ ಅಭಿಮುಖ್ಯೇನ ಜಾನನ್ । ದ್ಯಾವಾಪೃಥಿವ್ಯೋಃ ಸಂಬಂಧೀನಿ ಯಾನಿ ಕರ್ಮಾಣಿ ತಾನಿ ಸರ್ವಾಣ್ಯವಗಚ್ಛನ್ ಅವಗತ್ಯ ವ್ಯಾಪ್ನೋತೀತ್ಯರ್ಥಃ ॥ ವನೇಮ । ವನ ಷಣ ಸಂಭಕ್ತ್ಯಾ । ಶಪಿ ಪ್ರಾಪ್ತೇ ವ್ಯತ್ಯಯೇನ ಶಃ । ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ವಿಕರಣ-ಸ್ವರಃ ಶಿಷ್ಯತೇ । ಪೂರ್ವೀಃ । ಪುರುಶಬ್ದಾದ್ವೋತೋ ಗುಣವಚನಾದಿತಿ ಙೀಷ್ । ಹಲಿ ಚೇತಿ ದೀರ್ಘಃ । ಮನೀಷಾ । ಈಷಾಅಶ್ಲ್ಯಾದಿತ್ವಾತ್ಪ್ರಕೃತಿಭಾವಃ । ಪಾ. ೬-೧ ೧೨೬-೭ । ಸುಶೋಕಃ । ಶುಚ ದೀಪ್ತೌ । ಭಾವೇ ಘಞ್ । ಚಜೋಃ ಕು ಘಿಣ್ಯತೋರಿತಿ ಕುತ್ವಂ । ಶೋಭನಃ ಶೋಕೋ ಯಸ್ಯ । ಆದ್ಯುದಾತ್ತಂ ದ್ವ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ । ಅಶ್ಯಾಃ । ದೇವತ್ವಾ ವಿಶ್ವಾನ್ಯಶ್ಯಾಃ । ಋಗ್ವೇ ೧-೬೯-೬ । ಇತಿವತ್ । ಚಿಕಿತ್ವಾನ್ । ಕಿತ ಜ್ಞಾನೇ । ಲಿಟಃ ಕ್ವಸುಃ ॥

॥ ಪ್ರತಿಪದಾರ್ಥ ॥

ಪೂರ್ವೀಃ—ಹೆಚ್ಚಾದ ಅನ್ನವನ್ನು । **ವನೇಮ**—(ಅಗ್ನಿಪ್ರಸಾದದಿಂದ) ಪಡೆಯೋಣ । **ಮನೀಷಾ**—ಬುದ್ಧಿಯಿಂದ । **ಆರ್ಯಃ**—ಪ್ರಾಪ್ಯನಾದ (ಸ್ವಾಮಿಯಾದ) । **ಸುಶೋಕಃ**—ಮಂಗಳಕರವಾದ ಕಾಂತಿಯುಳ್ಳ । **ಅಗ್ನಿಃ**—ಅಗ್ನಿಯು । **ದೈವ್ಯಾನಿ**—ದೇವತೆಗಳ ಸಂಬಂಧವಾದ । **ವ್ರತಾ**—ಕರ್ಮಗಳನ್ನೂ । **ಮಾನುಷಸ್ಯ ಜನಸ್ಯ**—ಮನುಷ್ಯರ । **ಜನ್ಮ**—ಉತ್ಪತ್ತಿರೂಪವಾದ ಕರ್ಮಗಳನ್ನು । **ಆ ಚಿಕಿತ್ವಾನ್**—ಸಂಪೂರ್ಣವಾಗಿ ತಿಳಿದಿರುವವನಾಗಿ । **ವಿಶ್ವಾ**—ಎಲ್ಲಾ ಕರ್ಮಗಳನ್ನೂ । **ಅಶ್ಯಾಃ**—ವ್ಯಾಪಿಸುತ್ತಾನೆ.

॥ ಭಾವಾರ್ಥ ॥

ಧ್ಯಾನದಿಂದ ಸ್ತಾಷ್ಯನಾದವನೂ ಶೋಭನಕಾಂತಿಯುಕ್ತನಾದವನೂ ಆದ ಅಗ್ನಿಯು ದೇವತಾಸಂಬಂಧವಾದ ಮತ್ತು ಮನುಷ್ಯರ ಉತ್ಪತ್ತಿಸಂಬಂಧವಾದ ವಿಷಯಗಳೆಲ್ಲವನ್ನೂ ತಿಳಿದಿರುವುದರಿಂದಲೇ ಎಲ್ಲಾ ಕರ್ಮಗಳನ್ನೂ ವ್ಯಾಪಿಸುತ್ತಾನೆ. ಅಂತಹ ಅಗ್ನಿಯು ನಮಗೆ ಯಥೇಚ್ಛವಾಗಿ ಅನ್ನವನ್ನು ಅನುಗ್ರಹಿಸಲಿ.

English Translation.

We solicit abundant (food). Agni, who is to be approached by meditation, and shines with pure light, pervades all holy rites, knowing well the acts that are addressed to the Dieties, and (those which regulate) the birth of the human race.

॥ ವಿಶೇಷವಿಷಯಗಳು ॥

ಪೂರ್ವೀಃ—ಪ್ರಭೂತಾ ಇಷೋ ಅನ್ನಾನಿ—ಅಗ್ನಿಯು ಯಜ್ಞಮಾಡುವ ಯಜಮಾನರುಗಳು ಅಪೇಕ್ಷಿಸುವ ಆಯಾಯ ವಿಧವಾಗಿರುವ ಅನ್ನಗಳನ್ನು ಅನುಗ್ರಹಿಸಲಿ ಎಂದು ಸಾಯಣರೂ, **ಚಿರಂತನೀಃ—ಸಾಮರ್ಥ್ಯಾತ್ ಸಮೃದ್ಧೀರಾಶಿಷೋ ವಾ** ಪೂರ್ವಿಕರು ಅನುಭವಿಸಿರುವ ಪುರಾತನವಾದ ಎಲ್ಲಾ ವಿಧವಾದ ಮಹಿಮೆಯೇ ಮೊದಲಾದವುಗಳ ಅತಿಶಯವನ್ನು ಅಥವಾ ಅವುಗಳನ್ನು ಉಂಟುಮಾಡುವ ಆಶೀರ್ವಾದಗಳನ್ನು ಅಗ್ನಿಯು ಕೊಡಲಿ ಎಂದು ಸ್ಕಂದಸ್ವಾಮಿಗಳೂ ಅರ್ಥವನ್ನು ಮಾಡಿರುತ್ತಾರೆ

ಮನೀಷಾ ಅರ್ಯಃ—ಬುದ್ಧ್ಯಾ ಗಂತವ್ಯಃ ಸ್ತಾಷ್ತವ್ಯಃ ಯದ್ವಾ ಅರ್ಯಃ ಸ್ವಾಮೀ—ಅಗ್ನಿಯು ಸರಿಯಾದ ತಿಳುವಳಿಕೆಯುಳ್ಳ ಮತ್ತು ಧೃಢವಾದ ನಿಶ್ಚಯವುಳ್ಳ ಬುದ್ಧಿಯಿಂದ ತಿಳಿಯಲು ತಕ್ಕವನಾಗಿರುವನು ಅಥವಾ ಸರಿಯಾದ ಬುದ್ಧಿಯಿಂದ ಭಾವನೆ ಮಾಡಿದವರಿಂದ ಹೊಂದಲು ಅರ್ಹನಾಗಿರುವನು. ಅಥವಾ ಅಗ್ನಿಯು ತನ್ನ ಬುದ್ಧಿಯ ವೈಭವದಿಂದ ಹವಿರ್ಭಾಗಗಳನ್ನು ಸ್ವೀಕರಿಸುವ ಪೂಜಾರ್ಹನಾದ ಒಡೆಯನಾಗಿರುವನು ಎಂದು ಸಾಯಣಭಾಷ್ಯದಲ್ಲಿ ವಿವೃತವಾಗಿರುವುದು ಮನೀಷಾ ಶಬ್ದಕ್ಕೆ ಸ್ತುತಿಯೆಂಬುವುದಾಗಿ ಅರ್ಥವನ್ನು ಹೇಳಿ ಅಗ್ನಿಯು ಇತರರು ಮಾಡುವ ಸ್ತುತಿಗಳಿಂದ ಕೂಡಿದವನಾಗಿ ಬಹಳ ಕಾಂತಿಯುಳ್ಳವನಾಗಿ ಇರುವನೆಂದು ಸ್ಕಂದಸ್ವಾಮಿಗಳು ಅರ್ಥವನ್ನು ವಿವರಿಸಿರುವರು.

ಮಾನುಷಸ್ಯ ಜನಸ್ಯ ಜನ್ಮ ಆ ಚಿಕಿತ್ವಾ—ಮನುಷ್ಯಜಾತಸ್ಯ ಉತ್ಪತ್ತಿರೂಪಂ ಕರ್ಮ ಅಭಿಮುಖ್ಯೇನ ಜಾನನ್ ತಾನಿ ಸರ್ವಾಣಿ ಅಸಗತ್ಯೈ ವ್ಯಾಪ್ನೋತಿ । ಮನುಷ್ಯರ ಉತ್ಪತ್ತಿಯು ಆಗಲು ಕರ್ಮವು ಯಾವುದೆಂಬುವುದನ್ನೂ, ಆ ಕರ್ಮಗಳು ಭೂಮ್ಯಂತರಿಕ್ಷಗಳಿಗೆ ಸಂಬಂಧಪಟ್ಟಿರುವುದನ್ನೂ ಚೆನ್ನಾಗಿ ತಿಳಿದು ಅವುಗಳಲ್ಲಿ ಅಗ್ನಿಯು ವ್ಯಾಪಿಸುವನು.

ಸುಶೋಕಃ—ಶೋಭನಃ ಶೋಕೋ ಯಸ್ಯ ಒಳ್ಳೆಯದಾದ ಅಥವಾ ಉತ್ತಮವಾದ ಕಾಂತಿಯುಳ್ಳವನು ಎಂದು ಅರ್ಥವು.

ಸ್ಕಂದಸ್ವಾಮಿಗಳು—**ವಿಶ್ವಾನಿ** ಎಂಬ ಶಬ್ದಕ್ಕೆ ಯಜಮಾನರುಗಳು ಅರ್ಪಿಸುವ ಹವಿಸ್ಸುಗಳೆಂದೂ, **ಆ ಮಾನುಷಸ್ಯ ಜನಸ್ಯ ಜನ್ಮ** ಎಂಬ ಪದಗಳಿಗೆ—ಅಗ್ನಿಯು ಹವಿಸ್ಸುಗಳು ಆಯಾಯ ದೇವತೆಗಳ ಉದ್ದೇಶದಿಂದ ತನ್ನಲ್ಲಿ ಅರ್ಪಿಸಲ್ಪಡುವಕಾರಣ, ಅದನ್ನು ಆಯಾಯ ದೇವತೆಗಳಿಗೆ ತಾನು ಒಯ್ಯುವಕಾರಣ, ಆಯಾಯ ಯಜಮಾನರುಗಳ ಉತ್ಪತ್ತಿಯನ್ನು ತಿಳಿಯುವನು ಎಂದು ವಿವರಿಸಿರುವರು

॥ ವ್ಯಾಕರಣಪ್ರಕ್ರಿಯಾ ॥

ವನೇಮ—ವನ ಷಣ ಸಂಭಕ್ತೌ ಧಾತು ವಿಧಿಲಿಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ನಿತ್ಯಂ ಙಿತಃ** ಎಂಬುದರಿಂದ ಸಕಾರಲೋಪ. **ವ್ಯತ್ಯಯೋ ಬಹುಲಂ** ಸೂತ್ರದಿಂದ ಶಪ್ಪಿಗೆ ಶ ವಿಕರಣ. ಲಙಿಗೆ ಯಾಸುಟ್ಆಗಮ. **ಅತೋ ಯೇಯಃ** (ಪಾ. ಸೂ ೭-೨-೮೦) ಎಂಬುದರಿಂದ ಅಕಾರದ ಪರದಲ್ಲಿರುವುದರಿಂದ ಯಾಸಿಗೆ ಇಯಾದೇಶ ಗುಣ **ಲೋಪೋವ್ಯೋರ್ವಲಿ** ಎಂಬುದರಿಂದ ಯಕಾರಕ್ಕೆ ಲೋಪ. ಆದುಪದೇಶದ ಪರದಲ್ಲಿಲ ಸಾರ್ವಧಾತುಕವು (ಮ) ಬಂದುದರಿಂದ **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತವಾಗುತ್ತದೆ ಆಗ ವಿಕರಣ (ಶ) ಸ್ವರ ಉಳಿಯುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ

ಪೂರ್ವೀಃ—ಪೃ೧ ಶಬ್ದದ ಮೇಲೆ **ವೋತೋ ಗುಣವಚನಾತ್** (ಪಾ ಸೂ ೪-೧-೪೪) ಎಂಬುದರಿಂದ ಇದು ಗುಣವಾಚಕವಾದುದರಿಂದ ಸ್ತ್ರೀತ್ವದಲ್ಲಿ ಙೀಷ್ **ಹಲಿ ಚ** ಎಂಬುದರಿಂದ ರೇಫಾಂತದ ಉಪಧೆಗೆ ದೀರ್ಘ ದ್ವಿತೀಯಾ ಬಹುವಚನಾಂತರೂಪ, ಪ್ರತ್ಯಯಸ್ವರದಿಂದ ಅಂತೋದಾತ್ತ.

ಮನೀಷಾ ಇದಕ್ಕೆ ಅಗ್ನಿಃ ಎಂದು ಪರದಲ್ಲಿರುವುದರಿಂದ ಸವರ್ಣದೀರ್ಘವು ಪ್ರಾಪ್ತವಾಗುತ್ತದೆ. ಆದರೆ **ಈಷಾ** ಅಕ್ಷಾದಿಯಲ್ಲಿ ಸೇರಿರುವುದರಿಂದ **ಈಷಾ ಅಕ್ಷಾದೀನಾಂ**—(ಪಾ. ಸೂ ೬-೧-೧೩೭-೨) ಎಂಬ ವಚನದಿಂದ ಪ್ರಕೃತಿಭಾವ ಬರುತ್ತದೆ.

ಸುಶೋಕಃ—ಶುಚ ದೀಪ್ತೌ ಧಾತು. ಭಾವಾರ್ಥದಲ್ಲಿ ಘಞ್ ಪ್ರತ್ಯಯ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಲಘೂಪಧೆಗೆ ಗುಣ. **ಚಜೋಃ ಕು ಘಿಣ್ಯತೋಃ** (ಪಾ ಸೂ ೭-೩-೫೩) ಎಂಬುದರಿಂದ ಚಕಾರಕ್ಕೆ ಕುತ್ವ ಶೋಭನಃ ಶೋಕೋ ಯಸ್ಯ ಸಃ ಸುಶೋಕಃ **ಅದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ ಸೂ ೬-೨-೧೯೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ

ಅಶ್ಯಾಃ—**ದೇವತ್ರಾ ವಿಶ್ವಾನ್ಯಶ್ಯಾಃ** (ಋ ಸ ೧-೬೯-೭) ಎಂಬಲ್ಲಿ ಇದು ವ್ಯಾಖ್ಯಾತವಾಗಿದೆ.

ವ್ರತಾ—ವ್ರತಾನಿ ಎಂದಿರುವಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ

ಚಿಕಿತ್ವಾನ್—ಕಿತ ಜ್ಞಾನೇ ಧಾತು ಲಿಟಿಗೆ **ಕ್ವಸುಶ್ಚ** ಸೂತ್ರದಿಂದ ಕ್ವಸು ಆದೇಶ. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಚುತ್ವ ಕಿತ್ತಾದುದರಿಂದ ವಸ್‌ನಿಮಿತ್ತವಾಗಿ ಗುಣ ಬರುವುದಿಲ್ಲ

ಚಿಕಿತ್ವಸ್ ಶಬ್ದವಾಗುತ್ತದೆ. ಪ್ರಥಮಾ ಸು ಪರವಾದಾಗ ಉಪಧಾಧೀರ್ಘ. ನುಮಾಗಮ. ಸುಲೋಪ ಸಂಯೋಗಾಂತಲೋಪ. ಪ್ರತ್ಯಯಸ್ವರದಿಂದ ಆಕಾರ ಉದಾತ್ತವಾಗುತ್ತದೆ

ಮಾನುಷಸ್ಯ—ಮನೋರ್ಜಾತಾವಞ್ಯತೌ ಸುಕ್ ಚ (ಪಾ. ಸೂ. ೪-೧-೧೬೧) ಎಂಬುದರಿಂದ ಮನು ಶಬ್ದಕ್ಕೆ ಅಞ್ ಪ್ರತ್ಯಯ. ತತ್ಸಂನಿಯೋಗದಿಂದ ಪೂರ್ವಕ್ಕೆ ಸುಕಾಗಮ. **ತದ್ಧಿತೇಷ್ವಚಾ**—ಸೂತ್ರದಿಂದ ಆದಿವೃದ್ಧಿ. ಷಷ್ಠೀಏಕವಚನಾಂತರೂಪ. ಞ್ತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೧-೭ ॥

॥ ಸಂಹಿತಾಪಾಠಃ ॥

ಗರ್ಭೋ॑ ಯೋ ಅ॒ಪಾಂ ಗರ್ಭೋ॑ ವನಾ॑ನಾಂ ಗರ್ಭ॑ಶ್ಚ
ಸ್ಥಾ॒ತಾಂ ಗರ್ಭ॑ಶ್ಚರಥಾ॑ಂ ।
ಅದ್ರೌ॒ ಚಿದಸ್ಮಾ॒ ಅಂತರ್ದು॑ರೋ॒ಣೇ ವಿ॒ಶಾಂ ನ ವಿಶ್ವೋ॑
ಅ॒ಮೃತಃ॑ ಸ್ವಾ॒ಧೀಃ ॥ ೩ ॥ ೪ ॥

॥ ಪದಪಾಠಃ ॥

ಗರ್ಭ॑ಃ । ಯಃ । ಅ॒ಪಾಂ । ಗರ್ಭ॑ಃ । ವನಾ॑ನಾಂ । ಗರ್ಭ॑ಃ । ಚ॒ । ಸ್ಥಾ॒ತಾಂ ।
ಗರ್ಭ॑ಃ । ಚ॒ರಥಾ॑ಂ ।
ಅದ್ರೌ॑ । ಚಿತ್ । ಅ॒ಸ್ಮೈ॒ । ಅಂ॒ತಃ । ದು॒ರೋ॒ಣೇ । ವಿ॒ಶಾಂ । ನ । ವಿಶ್ವ॑ಃ । ಅ॒ಮೃ॒-
ತಃ॑ । ಸು॒ಽಆ॒ಧೀಃ ॥ ೩ ॥ ೪ ॥

॥ ಸಾಯಣಭಾಷ್ಯಂ ॥

ಯೋ೨ಗ್ನಿರಪಾಂ ಗರ್ಭೋ೧ ಗರ್ಭವದಂತರ್ವರ್ತಿ೧ ಅಪಾಂನಪಾತ್ಸಂಜ್ಞಃ । ಯಶ್ಚ ವನಾನಾ-ಮರಣ್ಯಾನಾಂ ಗರ್ಭೋ೧ ದಾವಾಗ್ನಿರೂಪೇಣ ತನ್ಮಧ್ಯೇ ವರ್ತತೇ । ಯಶ್ಚ ಸ್ಥಾತಾಂ ಸ್ಥಾವರಾಣಾಂ ಕಾಷ್ಠಾದೀನಾಂ ಗರ್ಭೋ೧೨ಂತರವಸ್ಥಾತಾ । ಚರಥಾಂ ಚರಣವತಾಂ ಜಂಗಮಾನಾಂ ಗರ್ಭೋ೧ ಜಾಠರ-ರೂಪೇಣ ದೇಹಮಧ್ಯೇ೨ವತಿಷ್ಠತೇ । ಏವಂಭೂತಾಯೋಸ್ಮಾ ಅಗ್ನಯೇ ದುರೋಣೇ ದುಸ್ತೆರ್ಯಗೃ-ಹೇ೨ದ್ರೌ ಚಿತ್ ಪರ್ವತೇ೨ಸ್ಯಂತರ್ಮಧ್ಯೇ ಹವಿಃ ಪ್ರಯಚ್ಛಂತೀತಿ ಶೇಷಃ । ಸೋ೨ಯಮಮೃತೋ೨-ಮರಣಧರ್ಮಾಗ್ನಿಃ ಸ್ವಾಧೀಃ ಶೋಭನಕರ್ಮಯುಕ್ತಃ ಶೋಭನಾಧ್ಯಾನೋ ವಾ । ಅಸ್ಮಾಕಂ ಭವತ್ವಿತಿ ಶೇಷಃ । ತತ್ರ ದೃಷ್ಟಾಂತಃ । ವಿಶ್ವೋ ನಿವೇಶಯಿತಾ ಸುಖೇನಾವಸ್ಥಾಪಯಿತಾ ರಾಜಾ ವಿಶಾಂ ನ । ಪ್ರಜಾನಾಂ ಯಥಾ ರಕ್ಷಣರೂಪಶೋಭನಕರ್ಮಯುಕ್ತೋ ಭವತಿ ತದ್ವತ್ ॥ ಸ್ಥಾತಾಂ । ತಿಷ್ಠತೇಃ ಕ್ವಿಪಿ ಛಾಂದಸಸ್ತುಕ್ । ಯದ್ವಾ । ಔಣಾದಿಕಸ್ತುಪ್ರತ್ಯಯಃ । ಆಮ್ಯಂತ್ಯಲೋಪಶ್ಛಾಂದಸಃ । ಚರಥಾಂ । ಶೀಙ್ಶಪಿರುಗಮಿ । ಉ. ೩-೧೧೩ । ಇತಿ ವಿಧೀಯಮಾನೋ೨ಥಪ್ರತ್ಯಯೋ ಬಹುಲವಚನಾಚ್ಚೇರಪಿ ದ್ರಷ್ಟವ್ಯಃ । ಅಗಮಾನುಶಾಸನಸ್ಯಾನಿತ್ಯತ್ವಾದಾನೋ ನುಡಭಾವೇ ಸವರ್ಣದೀರ್ಘಃ । ವಿಶ್ವಃ । ವಿಶ ಪ್ರವೇಶನೇ । ಅಸ್ಮಾದಂತರ್ಭಾವಿತಣ್ಯರ್ಥಾದಶಿಪುಶೀತ್ಯಾದಿನಾ ಕ್ವನ್ಪ್ರತ್ಯಯಃ । ನಿತ್ವಾದಾದ್ಯು-ದಾತ್ತತ್ವಂ ॥

॥ ಪ್ರತಿಪದಾರ್ಥ ॥

ಯಃ—ಯಾವ ಅಗ್ನಿಯು । **ಅಪಾಂ ಗರ್ಭಃ**—ಉದಕ ಮಧ್ಯದಲ್ಲಿರುವವನೋ (ಅಪಾಂನಪಾತ್ ಎಂಬ ಹೆಸರುಳ್ಳವನೋ) । **ವನಾನಾಂ ಗರ್ಭಃ**—(ದವಾಗ್ನಿರೂಪದಿಂದ) ಅರಣ್ಯದಲ್ಲಿರುವವನೋ । **ಚ**—ಮತ್ತು । **ಸ್ಥಾತಾಂ ಗರ್ಭಃ**—ಸ್ಥಾವರವಾದ ಕಾಷ್ಠಾದಿಗಳಲ್ಲಿರುವವನೋ । **ಚರಥಾಂ ಗರ್ಭಃ**--ಜಂಗಮವಾದ ಪ್ರಾಣಿಗಳಲ್ಲಿ (ಜಠರದಲ್ಲಿ) ಇರುವವನೋ । **ಅಸ್ಮೈ**—ಅಂತಹ ಅಗ್ನಿಗೆ । **ದುರೋಣೇ**—ಯಾಗ ಗೃಹಗಳಲ್ಲಿ । **ಅದ್ರೌ ಚಿತ್**—ಪರ್ವತಗಳಲ್ಲಿಯೂ । **ಅಂತಃ**—ಮಧ್ಯದಲ್ಲಿ (ಹವಿಸ್ಸನ್ನು ಅರ್ಪಿಸುತ್ತಾರೆ) । **ಅಮೃತಃ**—ಅಮರನಾದ ಅಗ್ನಿಯು । **ವಿಶ್ವಃ**—ಪ್ರಜೆಗಳಿಗೆ ಸುಖಕರನಾದ ರಾಜನು । **ವಿಶಾಂ ನ**—ಪ್ರಜೆಗಳ ವಿಷಯದಲ್ಲಿ ಹೇಗೋ ಹಾಗೆ । **ಸ್ವಾಧೀಃ**- (ನಮ್ಮ ವಿಷಯದಲ್ಲಿ) ಸುಖಕರವಾದ ಕರ್ಮವುಳ್ಳವನಾಗಲಿ .

॥ ಭಾವಾರ್ಥ ॥

ಉದಕಮಧ್ಯದಲ್ಲಿಯೂ ಅರಣ್ಯಗಳಲ್ಲಿಯೂ ಚರಾಚರ ವಸ್ತುಗಳಲ್ಲಿಯೂ ಇರುವ ಅಗ್ನಿಗೆ ಯಾಗಗೃಹಗಳಲ್ಲಿಯೂ ಪರ್ವತಪ್ರದೇಶದಲ್ಲಿಯೂ ಸಹ ಹವಿಸ್ಸನ್ನು ಅರ್ಪಿಸುತ್ತಾರೆ ಈ ಅಮರನಾದ ಅಗ್ನಿಯು, ಪ್ರಜಾಹಿತೈಷಿಯಾದ ರಾಜನು ಪ್ರಜೆಗಳ ವಿಷಯದಲ್ಲಿ ಹೇಗೆ ಹಿತವಾದ ರೀತಿಯಲ್ಲಿ ವರ್ತಿಸುತ್ತಾನೋ ಹಾಗೆ ನಮ್ಮ ವಿಷಯದಲ್ಲಿ ಹಿತವಾದ ಕರ್ಮವುಳ್ಳವನಾಗಲಿ (ಹಿತವನ್ನುಂಟುಮಾಡಲಿ)

English Translation

(They offer oblations) on the mountain, or in the mansion, to that Agni, who is within the waters, within woods, and within all movable and immovable things, immortal, and performing pious acts, like a benevolent (prince) among his people

॥ ವಿಶೇಷವಿಷಯಗಳು ॥

ಅಪಾಂ ಗರ್ಭಃ—ಗರ್ಭವದಂತರ್ವರ್ತೀ ಅಪಾಂನಪಾತ್ ಸಂಜ್ಞಃ । ಅಗ್ನಿಯು ನೀರುಗಳ ಮಧ್ಯದಲ್ಲಿ ಇರುವವನಾಗಿ ಅಪಾನ್ನಪಾತ್ ಎಂದು ಹೆಸರನ್ನು ಹೊಂದಿರುವನು. ಈ ಅಪಾನ್ನಪಾತ್ ಎಂಬ ದೇವನು ಮಧ್ಯ ಸ್ಥಾನದೇವತೆಗಳಲ್ಲಿ ಸೇರಿರುವನು ನಿರುಕ್ತದಲ್ಲಿ ಅಪಾನ್ನಪಾತ್ ಎಂಬ ಶಬ್ದವು (ನಿ. ೧೦-೧೪) ಪಠಿತವಾಗಿರುತ್ತದೆ ಈ ಶಬ್ದದಲ್ಲಿ ಇರುವ ನಪಾತ್ ಎಂಬ ಪದಕ್ಕೆ ಅಪತ್ಯನೆಂದು ಅರ್ಥಮಾಡಿರುವರು. ಇಲ್ಲಿ ಆ ಶಬ್ದವು ಪೌತ್ರನೆಂದು ಪ್ರಯುಕ್ತವಾಗಿರುತ್ತದೆ. ಅಗ್ನಿಯು ಉದಕಗಳ ಪೌತ್ರನೆಂದು ವಿವರಿಸಿ **ಅಪಾನ್ನಪಾನ್ನಧುಮತೀರಪೋ ದಾ ಯಾಭಿರಿಂದ್ರೋ ವೃವಧೇ ವೀರ್ಯಾಯ** ಎಂಬ ಋಕ್ಕನ್ನು (ಋ ಸಂ ೧೦-೩೦-೪) ಉದಾಹರಿಸಿರುವರು ಉದಕಗಳು, ಅರಣ್ಯಗಳು, ಸ್ಥಾವರವಸ್ತುಗಳಾದ ಕಾಷ್ಠಾದಿಗಳ ಮತ್ತು ಜಂಗಮಪ್ರಾಣಿಗಳ ಮಧ್ಯದಲ್ಲಿ ಆಯಾಯ ಹೆಸರುಗಳಿಂದ ಪ್ರಸಿದ್ಧನಾಗಿರುವ ಅಗ್ನಿಗೆ ಯಾಗಮಾಡುವ ಯಜಮಾನರುಗಳು ಪರ್ವತಗಳ ಮಧ್ಯದಲ್ಲಿಯೂ ದುಷ್ಪ್ರವೇಶ್ಯವಾದ ಸ್ಥಾನದಲ್ಲಿಯೂ ಹವಿಸ್ಸುಗಳನ್ನು ಅರ್ಪಿಸುವರು ಎಂದು ಸಾಯಣರು ವ್ಯಾಖ್ಯಾನಮಾಡಿರುವರು. ಸ್ವಂದಸ್ವಾಮಿಗಳು—ಈ ಪ್ರಕಾರದಿಂದ ಇರುವ ಅಗ್ನಿಗೆ ಪರ್ವತದ ಮಧ್ಯದಲ್ಲಿಯೂ ಸ್ಥಾನವಿರುವುದು ಮತ್ತು ಯಜ್ಞವು ನಡೆಯುವ ಯಾಗಶಾಲೆಯ ಮಧ್ಯದಲ್ಲಿಯೂ ಸ್ಥಾನವಿರುವುದು ಎಂದು ಅರ್ಥಮಾಡಿರುವರು

ವಿಶಾಂ ನ ವಿಶ್ವಃ ಅಮೃತಃ ಸ್ವಾಧೀಃ—ಸುಖೇನಾವ ಸ್ಥಾಪಯಿತಾ ರಾಜಾ ಪ್ರಜಾನಾಂ ರಕ್ಷಣ-ರೂಪಶೋಭನಕರ್ಮಯುಕ್ತೋ ಭವತಿ ತಥಾ ಅಮರಣಧರ್ಮಾ ಅಗ್ನಿಃ ಶೋಭನಾಧ್ಯಾನೋ ವಾ ಅಸ್ಮಾಕಂ ಭವತು—ಪ್ರಜೆಗಳನ್ನೂ ಎಲ್ಲರನ್ನೂ ಸುಖವಾಗಿರುವಂತೆ ಅವರವರಿಗೆ ಅನುಕೂಲವಾಗುವ ಕರ್ಮಗಳನ್ನು ಆಚರಿಸುವ ಆಲೋಚನೆಯನ್ನು ಮಾಡುವ ರಾಜನ ಹಾಗೆ ಅಗ್ನಿಯು ದೇವತಾರೂಪದಿಂದ ಇರುತ್ತಾ ನಮ್ಮೆಲ್ಲರಿಗೂ ಸುಖವಾಗುವ ಹಾಗೆ (ಸಂಕಲ್ಪವನ್ನು) ಅನುಗ್ರಹಿಸಲಿ ಎಂದು ನ ಎಂಬ ನಿರುಕ್ತದಲ್ಲಿ ಉಕ್ತವಾಗಿರುವ ಉಪಮಾರ್ಥವನ್ನು ಸ್ವೀಕರಿಸಿ ಸಾಯಣರು ಅರ್ಥಮಾಡಿರುವರು

ಸ್ವಂದಸ್ವಾಮಿಗಳು—ವಿಶಾಂ ಎಂಬುದಕ್ಕೆ **ಯೇಷ್ಟೃಣಾಂ, ಸ್ತೋತೃಣಾಂ** ಯಾಗಮಾಡುವವರು, ಅಥವಾ ಸ್ತೋತ್ರಮಾಡುವವರು ಎಂಬ ಅರ್ಥವನ್ನೂ, **ವಿಶ್ವಃ** ಎಂಬ ಪದವು ಎಲ್ಲಾ ಕಾರ್ಯಗಳನ್ನೂ ಆಚರಿಸುವವನಾದ ಕಾರಣ ಸರ್ವನೆಂದು ಅಗ್ನಿಯು ವ್ಯಪದಿಷ್ಟನಾಗಿರುವನು ಎಂದೂ, ನ ಎಂಬುವುದು ಉಪಮಾರ್ಥವಾಗಿದ್ದಾಗ್ಯೂ (ನಿ ೭-೩೧) ಸಂಪ್ರತಿ ಎಂಬರ್ಥದಲ್ಲಿ ಪ್ರಯುಕ್ತವಾಗಿರುವುದೆಂದೂ **ಯಾವನ್ಮಾತ್ರಮುಷಸೋ ನ ಪ್ರತೀಕಂ** (ಋ ಸಂ. ೧೦-೮೮-೧೯) ಎಂದು ಹೇಳಿ ಈ ವಾಕ್ಯಕ್ಕೆ ಮುಂದಿನ ವಾಕ್ಯದ ಸಂಗಡ ಅರ್ಥವನ್ನು ಹೇಳುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

ಅಸಾಂ—ಅಪ್ ಶಬ್ದ ಷಷ್ಠೀಬಹುವಚನಾಂತರೂಪ. **ಊಡಿದಂಪದಾದಿ**—ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಸ್ಥಾತಾಮ್—ಷ್ಠಾ ಗತಿ ನಿವೃತ್ತೌ ಧಾತು **ಕ್ವಿಪ್ಚ** (ಪಾ ಸೂ. ೩-೨-೭೬) ಎಂಬುದರಿಂದ ಕ್ವಿಪ್ ಧಾತ್ವಾದಿಗೆ ಸಕಾರಾದೇಶ. ಹ್ರಸ್ವನಿಮಿತ್ತವಿಲ್ಲದಿದ್ದರೂ ಛಾಂದಸವಾಗಿ ತುಕಾಗಮ ಬರುತ್ತದೆ. ಸ್ಥಾತ್ ಎಂದು ಶಬ್ದವಾಗುತ್ತದೆ. ಅಥವಾ ಬಹುಲಗ್ರಹಣದಿಂದ ಉಣಾದಿಸಿದ್ಧವಾದ ತು ಪ್ರತ್ಯಯ. ಸ್ಥಾತು ಶಬ್ದವಾಗುತ್ತದೆ. ಆಮ್ ಪರವಾದಾಗ ಅಂತ್ಯ (ಉಕಾರ) ಲೋಪವು ಛಾಂದಸವಾಗಿ ಬರುತ್ತದೆ. **ಸಾನೇಕಾಚಸ್ತೃತೀಯಾದಿಃ** (ಪಾ ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಚರಥಾಮ್—ಚರ ಗತಿಭಕ್ಷಣಯೋಃ ಧಾತು **ಶೀಙ್‌ಶಪಿರುಗಮಿ**—(ಉ. ಸೂ. ೩-೪೫) ಎಂಬುದರಿಂದ ವಿಧಿಸಲ್ಪಡುವ ಅಥ ಪ್ರತ್ಯಯವು **ಉಣಾದಯೋ ಬಹುಲಂ** ಎಂಬಲ್ಲಿ ಬಹುಲಗ್ರಹಣದಿಂದ **ಈ** ಧಾತುವಿಗೂ ಬರುತ್ತದೆ. ಷಷ್ಠೀಬಹುವಚನವಲ್ಲಿ ಚರಥ+ಆಮ್ ಎಂದಿರುವಾಗ **ಆಗಮಶಾಸ್ತ್ರಮನಿತ್ಯಂ** ಎಂಬ ವಚನದಿಂದ **ಹ್ರಸ್ವನದ್ಯಾಪ್ಸೋನುಟ್** ಎಂಬುದರಿಂದ ಬರಬೇಕಾದ ನುಡಾಗಮ ಇಲ್ಲಿ ಬರುವುದಿಲ್ಲ ಆಗ ಸವರ್ಣದೀರ್ಘ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ರೇಫೋತ್ತರಾಕಾರವು ಉದಾತ್ತವಾಗುತ್ತದೆ

ವಿಶಾಮ್—ಷಷ್ಠೀ ಬಹುವಚನಾಂತರೂಪ. **ಸಾನೇಕಾಚಸ್ತೃತೀಯಾದಿಃ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ವಿಶ್ವಕಿ—ವಿಶ ಪ್ರವೇಶನೇ ಧಾತು ಣಿಜರ್ಥವು (ಪ್ರೇರಣಾ) ಧಾತ್ವರ್ಥಾಂತರ್ಭೂತವಾಗಿರುವಾಗ **ಅಶಿಪ್ರುಷಿಲಟಿಕಣಿ**—(ಉ ಸೂ ೧-೧೪೯) ಎಂಬುದರಿಂದ ಕ್ವನ್ ಪ್ರತ್ಯಯ ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತವಾಗುತ್ತದೆ ॥ ೩-೪ ॥

॥ ಸಂಹಿತಾಕಾರಃ ॥

ಸ ಹಿ ಕ್ಷಪಾವಾಁ ಅಗ್ನೀ ರಯೀಣಾಂ ದಾಶದ್ಯೋ ಅಸ್ಮಾ ಅರಂ ಸೂಕ್ತೈಃ ।
ಏತಾ ಚಿಕಿತ್ವೋ ಭೂಮಾ ನಿ ಪಾಹಿ ದೇವಾನಾಂ ಜನ್ಮ ಮರ್ತಾಂಶ್ಚ ವಿದ್ವಾನ್ ॥ ೫ ॥ ೬ ॥

॥ पदपाठः ॥

सः । हि । क्षपाऽवान् । अग्निः । रयीणाम् । दाशत् । यः । अस्मै ।
अरम् । सुऽस्तुतिऽभिः ।
एता । चिकित्वः । भूमा । नि । पाहि । देवानाम् । जन्म । मर्तान् ।
च । विद्वान् ॥ ४ ॥ ६ ॥

॥ सायणभाष्यं ॥

स ह्यग्निः क्षपावान् । क्षपेति रात्रिनाम । रात्रिमान् । आग्नेयी वै रात्रिः । तै. ब्रा. ३-८-३-६ । इति श्रुतेः । रात्रेरग्निसंबंधोऽस्याग्निर्ज्योतिर्ज्योतिरग्निः स्वाहेति हूयमानत्वात् । तै. ब्रा. ३-८-३-८० । यद्वा । रात्रिसादीनाम् क्षपणेन नाशनेन युक्तः । एवंभूतोऽग्निः स्तोत्रे यजमानाय रयीणाम् धनानि दाशत् । दाशति प्रयच्छति । योऽयं यजमानोऽस्मा अग्नये सूक्तैः सुष्टूक्तैर्यथाशास्त्रं प्रयुक्तैर्मन्त्रैररमलं पर्याप्तं स्तोत्रं करोति तस्मा इत्यर्थः । हे चिकित्वः । चिकित्वांश्चेतनावान् । नि. ३-८८ । इति यास्कः । हे चेतनावान् सर्वज्ञाग्ने त्वं देवानामिन्द्रादीनां जन्म जनान्नि मर्तान्मनुष्यांश्च विद्वान् जानन्नेतैस्तान् भूमा भूम्युपलक्षितानि भूतजातानि नि पाहि । नितरां पालय । यतस्त्वं देवमनुष्यादीन्सर्वान् जानासि अत एवमुच्यत इत्यर्थः ॥ रयीणाम् । क्रियाग्रहणं कर्तव्यमिति कर्मणः संप्रदानत्वाच्छेषत्वार्थ्यर्थे षष्ठी । दाशत् । दाशृ दानेः । लेट्यडागमः । अरम् । वालमूलेत्यादिना लत्वनिकल्पः । सूक्तैः । सूपसमानात् क्तः । पा. ६-३-८५४ । इत्युत्तरपदादन्तोदात्तत्वं । चिकित्वः । मतुवसो रुरिति नकारस्य रुत्वं । भूमा । सुपां सुलुगिति भूमिशब्दादुत्तरस्या द्वितीयायाया डादेशः । पदकाले ह्रस्वश्छान्दसः ॥

॥ प्रतिपदार्थ ॥

यः—यावं यजमाननु । **अस्मै**—(अग्निगे) इवनिगे । **सूक्तैः**—जेन्नागि उपचरिसल्पट्ट (शास्त्रोक्तवाद) मंत्रगळिंद । **अरं**—जेन्नागि (स्तोत्रमाडुत्तानो) । (**तस्मै**—अंतह यजमानननिगे) । **क्षपावान्**—रात्रिसंबंधवुळ्ळ (रात्रिसादिगळ नाशयुक्तनाद) । **स अग्निः**—

ಆ ಅಗ್ನಿಯು । **ರಯೀಣಾಂ**—ಧನವನ್ನು । **ದಾಶತ್ ಹಿ**—ಕೊಡುತ್ತಾನೆಯಷ್ಟೆ । **ಚಿಕಿತ್ವಃ**—ಜ್ಞಾನಿಯಾದ (ಸರ್ವಜ್ಞನಾದ) ಎಲೈ ಅಗ್ನಿಯೇ । **ದೇವಾನಾಂ**—ಇಂದ್ರಾದಿ ದೇವತೆಗಳ । **ಜನ್ಮ**—ಜನ್ಮವನ್ನು । **ಮರ್ತಾನ್-ಚ**—ಮನುಷ್ಯರನ್ನೂ । **ವಿದ್ವಾ**—ತಿಳಿದ (ನೀನು) । **ಇತಾ**—ಈ । **ಭೂಮು**—ಭೂಮಿಯಲ್ಲಿರುವ (ಭೂತ ಜಾತಗಳನ್ನು) । **ನಿ ಪಾಹಿ**—ಚೆನ್ನಾಗಿ ರಕ್ಷಿಸು

॥ ಭಾವಾರ್ಥ ॥

ರಾತ್ರಿಗೆ ಯಜಮಾನನೂ ರಾಕ್ಷಸನಾಶಕನೂ ಆದ ಅಗ್ನಿಯು ತನ್ನನ್ನು ಸೂಕ್ತಗಳಿಂದ ಸ್ತುತಿಸುವವರಿಗೆ ಧನಾದಿಗಳನ್ನು ಅನುಗ್ರಹಿಸುತ್ತಾನೆ ಇಂದ್ರಾದಿ ದೇವತೆಗಳ ಮತ್ತು ಮನುಷ್ಯರ ಜನನಾದಿಗಳೆಲ್ಲವನ್ನೂ ತಿಳಿದ ಸರ್ವಜ್ಞನಾದ ಎಲೈ ಅಗ್ನಿಯೇ, ಈ ಭೂಮಿಯಲ್ಲಿರುವ ಭೂತಜಾತಗಳೆಲ್ಲವನ್ನೂ ರಕ್ಷಿಸು

English Translation

Agni, the lord of night, grants riches to (the worshipper) who adores him with sacred hymns. Agni, who are omniscient, and know the origin of Gods and men, protect all these (beings dwelling) upon earth.

॥ ವಿಶೇಷವಿಷಯಗಳು ॥

ಅಗ್ನಿಃ ಕ್ಷಪಾವಾನ್—**ಕ್ಷಪಾ ಇತಿ ರಾತ್ರಿನಾಮ** । **ಆಗ್ನೇಯೀ ವೈ ರಾತ್ರಿಃ (ತೈ. ಬ್ರಾ. ೨-೧-೨-೭) "ಅಗ್ನಿರ್ಜ್ಯೋತಿರ್ಜ್ಯೋತಿರಗ್ನಿಃ ಸ್ವಾಹಾ" (ತೈ. ಬ್ರಾ. ೨-೧-೨-೧೦) ಯದ್ವಾ ರಾಕ್ಷಸಾನಾಂ ಕ್ಷಪಣೇನ ನಾಶನೇನ ಯುಕ್ತಃ**—ಅಗ್ನಿಯು ರಾತ್ರಿಯ ಸಂಬಂಧವನ್ನು ಹೆಚ್ಚಾಗಿ ಹೊಂದಿ ಇರುವನು ಕ್ಷಪಾಶಬ್ದವು ಇಪ್ಪತ್ತುಮೂರು ರಾತ್ರಿನಾಮಗಳ ಮಧ್ಯದಲ್ಲಿ (ನಿ. ೨-೧೪) ಉಕ್ತವಾಗಿರುತ್ತದೆ ಕ್ಷಪಾ ಶಬ್ದವು ಅಂತೋದಾತ್ತವಾಗಿರುವಾಗ ರಾತ್ರಿವಾಚಕವಾಗಿರುತ್ತದೆ ಆದ್ಯುದಾತ್ತವಾಗಿರುವಾಗ ಕ್ಷಪಣವನ್ನು ಬೋಧಿಸುವುದು **ನೃಣಾಂ ನರ್ಯೋ ನೃತಮಃ ಕ್ಷಪಾವಾ (ಋ. ಸಂ. ೧೦-೭೯-೧) ತ್ವಮಿದಸಿ ಕ್ಷಪಾವಾ (ಋ. ಸಂ. ೮-೭೧-೨)** ಎಂದು ಎರಡು ವಿಧವಾದ ಅರ್ಥಗಳಿಗೂ ಉದಾಹರಣೆಯಿರುವುದು ತೈತ್ತಿರೀಯ ಬ್ರಾಹ್ಮಣದಲ್ಲಿಯೂ ರಾತ್ರಿಯು ಅಗ್ನಿಗೆ ಸಂಬಂಧಪಟ್ಟಿರುವುದು ಎಂದು ಹೇಳಿರುತ್ತದೆ ಯಜ್ಞಮಾಡುವವರೂ ಕೂಡ **"ಅಗ್ನಿರ್ಜ್ಯೋತಿಃ"** ಎಂಬ ಮಂತ್ರದಿಂದ ಆಹುತಿಯನ್ನು ಅಗ್ನಿಗೆ ಅರ್ಪಿಸುವರು ರಾಕ್ಷಸರನ್ನು ಬಹಳವಾಗಿ ನಾಶಮಾಡುವವನಾದ್ದರಿಂದಲೂ, ಕ್ಷಸ ಧಾತುವಿಗೆ ನಾಶವೆಂದು ಅರ್ಥವಿರುವುದರಿಂದಲೂ, ಅಗ್ನಿಯು ಕ್ಷಪಾವಂತನಾಗಿರುವನು.

ಸ್ವಂದಸ್ವಾಮಿಗಳು—**ಕ್ಷಪಾ ಇತಿ ರಾತ್ರಿನಾಮ** ಕ್ಷಪಾ ಶಬ್ದವು ರಾತ್ರಿವಾಚಕವಾಗಿರುತ್ತದೆ ಅಯೋ ರಾತ್ರಿಗಳೆರಡರಲ್ಲಿಯೂ ಅಗ್ನಿಯ ಸಂಬಂಧವು ಇದ್ದಾಗ್ಯೂ ರಾತ್ರಿಯಲ್ಲಿ ಅಗ್ನಿಯ ಸಂಬಂಧವು ವಿಶೇಷವಾಗಿದ್ದು ಅಗ್ನಿಯು ಬಹಳ ಪ್ರಕಾಶವುಳ್ಳವನಾದುದರಿಂದ ಅವಶ್ಯಕವಾಗಿರುವುದು. ಈ ಪ್ರಕಾಶದ ಸಂಬಂಧದಿಂದ ಅಗ್ನಿಯು ಕ್ಷಪಾವಂತನೆಂದು ವ್ಯಪದಿಷ್ಟನಾಗಿರುವನು ಅಥವಾ ಸ್ತುತಿಗಳುಶಕ್ತಿಯನ್ನು [ಹೆಚ್ಚುಮಾಡುತ್ತಾ ದರ್ಬಲತ್ವವನ್ನು ನಾಶಮಾಡುವವು

ಆದ್ದರಿಂದ **"ಕ್ಷಪಯಂತಿ ನಿರ್ವೀರ್ಯಕರ್ತಾಂ"** ಎಂಬ ವ್ಯಾಖ್ಯಾನದಿಂದ ಕ್ಷಪಾ ಶಬ್ದಕ್ಕೆ ಸ್ತುತಿ ಎಂದು ಅರ್ಥವು. ದೇವತೆಗಳನ್ನು ಸ್ತೋತ್ರಮಾಡುವುದರಿಂದ ಅವರ ದುರ್ಬಲತ್ವವು ನಾಶವಾಗಿ ಅವರ ಸಾಮರ್ಥ್ಯವು ವೃದ್ಧಿಯಾಗುವುದು. ಈ ಪ್ರಕಾರವಾದ ಸ್ತೋತ್ರಗಳಿಗೆ ಕಾರಣನಾಗಿರುವ ಕಾರಣ ಅಗ್ನಿಯು ಕ್ಷಪಾವಂತನಾಗುವನೆಂದು ಅರ್ಥಮಾಡಿರುವರು

ಚಿಕಿತ್ವಃ—ಚೇತನಾವರ್ ಸರ್ವಜ್ಞ "ಚಿಕಿತ್ವಾ ಚೇತನಾವಾ" (ನಿ. ೩-೧೧) **ಇತಿಯಾಸ್ಕಃ** । ಜ್ಞಾನವಂತನು ಎಲ್ಲವನ್ನೂ ತಿಳಿದು ಇರುವ ಕಾರಣ ಅಗ್ನಿಯು ಸರ್ವಜ್ಞನೆನಿಸಿರುವನು **ಕಿತಿ ಜ್ಞಾನೇ** ಎಂಬ ಧಾತುವಿನಿಂದ ನಿಷ್ಪನ್ನವಾದ ಚಿಕಿತ್ವಾ ಎಂಬ ಶಬ್ದಕ್ಕೆ ಚೇತನಾವಾ ಜ್ಞಾನವಂತನು ಎಂದು ಅರ್ಥವನ್ನು ಮಾಡಿರುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

ಕ್ಷಪಾವಾನ್—ಕ್ಷಪಾ ಅಸ್ಯ ಅಸ್ತಿ ಇತಿ ಕ್ಷಪಾವಾನ್. **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** ಸೂತ್ರದಿಂದ ಮತುಪ್ ಪ್ರತ್ಯಯ **ಮಾದುಪಧಾಯಾಃ**—ಸೂತ್ರದಿಂದ ಆಕಾರದ ಪರದಲ್ಲಿರುವುದರಿಂದ ಮತುಪಿನ ಮಕಾರಕ್ಕೆ ವಕಾರಾದೇಶ ಮತುಪ್ ಪಿತ್ತಾದುದರಿಂದ ಅನುದಾತ್ತವಾಗುತ್ತದೆ.

ರಯೀಣಾಂ—ಕರ್ಮಣಾ ಯಮಭಿಪ್ರೈತಿ ಸ ಸಂಪ್ರದಾನಮ್ ಎಂಬ ಸೂತ್ರದಲ್ಲಿ **ಕ್ರಿಯಾಗ್ರಹಣಂ ಕರ್ತವ್ಯಂ** ಎಂಬ ವಚನವಿರುವುದರಿಂದ ಕರ್ಮಕ್ಕೆ ಸಂಪ್ರದಾನ ಸಂಜ್ಞೆ ಇರುವುದರಿಂದ ಚತುರ್ಥ್ಯರ್ಥದಲ್ಲಿ ಷಷ್ಠೀ ಬಂದಿದೆ. **ನಾಮನ್ಯತರಸ್ಯಾಂ**—(ಪಾ. ಸೂ. ೬-೧-೧೭೭) ಎಂಬುದರಿಂದ ನಾಮಿಗೆ ಉದಾತ್ತಸ್ವರ ಬರುತ್ತದೆ.

ದಾಶತ್—ದಾಶೃ ದಾನೇ ಧಾತು ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್‌ಪ್ರತ್ಯಯ. **ಇತಶ್ಚ ಲೋಪಃ**—ಸೂತ್ರದಿಂದ ಇಕಾರಲೋಪ **ಲೇಟೋಽಡಾಟೌ** ಸೂತ್ರದಿಂದ ಅದಕ್ಕೆ ಅಡಾಗನು ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಲಸಾರ್ವಧಾತುಕವು **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

ಅರಮ್—ಅಲಮ್ ಎಂದಿರುವಾಗ **ವಾಲಮೂಲ**—ಎಂಬ ವಚನದಿಂದ ಲತ್ವ ವಿಕಲ್ಪಿತವಾಗುತ್ತದೆ. ಲತ್ವ ಬಾರದಿರುವಾಗ ರೇಫ ಶ್ರವಣವಾಗುತ್ತದೆ.

ಸೂಕ್ತೈಃ—ವಚ ಪರಿಭಾಷಣೇ ಧಾತು ಇದಕ್ಕೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ **ವಚಿಸ್ವಪಿಯಜಾದೀನಾಂ**—(ಪಾ. ಸೂ ೬-೧-೧೫) ಎಂಬುದರಿಂದ ಸಂಪ್ರಸಾರಣ. ಪೂರ್ವರೂಪ. ಸುಷ್ಠು ಉಕ್ತಾನಿ **ಸೂಪಮಾನಾತ್ ಕ್ತಃ** (ಪಾ. ಸೂ ೬-೩-೧೪೫) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.।

ಏತಾ—ನಪುಂಸಕ ದ್ವಿತೀಯಾ ಬಹುವಚನಲ್ಲಿ ಶಿ ಆದೇಶ ಬಂದಾಗ **ಶೇಶ್ಚಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ

ಚಿಕಿತ್ವಃ—ಚಿಕಿತ್ವಾನ್ ಎಂದಿರುವಾಗ ಸಂಬುದ್ಧಿಯಲ್ಲಿ **ಮತುವಸೋರುಃ ಸಂಬುದ್ಧೌ** (ಪಾ ಸೂ. ೮-೩-೧) ಎಂಬುದರಿಂದ ನಕಾರಕ್ಕೆ ರುತ್ವ.

ಭೂಮ—ಭೂಮಿಶಬ್ದ ಇಕಾರಾಂತ ಸ್ತ್ರೀಲಿಂಗ. ಇದಕ್ಕೆ ದ್ವಿತೀಯಾ ವಿಭಕ್ತಿ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ವಿಭಕ್ತಿ ಡಾದೇಶ ಡಿತ್ಸಾಮರ್ಥ್ಯದಿಂದ ಭಸಂಜ್ಞಾ ಇಲ್ಲದಿದ್ದರೂ ಪ್ರಕೃತಿಯ ಟಿಗೆ (ಇ) ಲೋಪ. ಪದಕಾಲದಲ್ಲಿ ಛಾಂದಸನಾಗಿ ಹ್ರಸ್ವ ಬರುತ್ತದೆ

ಪಾಹಿ—ಪಾ ರಕ್ಷಣೇ ಧಾತು. ಲೋಟ್ ಮಧ್ಯಮಪುರುಷ ಏಕವಚನರೂಪ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೫–೬ ॥

॥ ಸಂಹಿತಾಪಾಠಃ ॥

ವರ್ಧಾನ್ಯಂ ಪೂರ್ವೀಃ ಕ್ಷಪೋ ವಿರೂಪಾಃ ಸ್ಥಾತುಶ್ಚ ರಥಮೃತ-
ಪ್ರವೀತಂ ।
ಅರಾಧಿ ಹೋತಾ ಸ್ವ೧ರ್ನಿಷತ್ತಃ ಕೃಣ್ವನ್ವಿಶ್ವಾನ್ಯಪಾಂಸಿ
ಸತ್ಯಾ ॥ ೭ ॥ ೮ ॥

॥ ಪದಪಾಠಃ ॥

ವರ್ಧಾನ್ । ಯಂ । ಪೂರ್ವೀಃ । ಕ್ಷಪಃ । ವಿ೨ರೂಪಾಃ । ಸ್ಥಾತುಃ । ಚ । ರಥಂ । ಋತ೨ಪ್ರವೀತಂ ।
ಅರಾಧಿ । ಹೋತಾ । ಸ್ವಃ । ನಿ೨ಸತ್ತಃ । ಕೃಣ್ವನ್ । ವಿಶ್ವಾನಿ । ಅಪಾಂಸಿ ।
ಸತ್ಯಾ ॥ ೭ ॥ ೮ ॥

॥ ಸಾಯಣಭಾಷ್ಯಂ ॥

ಪೂರ್ವೀರ್ಬಹ್ವ್ಯ ಉಷಸಃ ಕ್ಷಪೋ ನಿಶಾಶ್ಚ ವಿರೂಪಾಃ ಶುಕ್ಲಕೃಷ್ಣತಯಾ ವಿವಿಧರೂಪಾಃ ಸತ್ಯೋ ಯಮಗ್ನಿಂ ವರ್ಧಾನ್ ವರ್ಧಯಂತಿ। ತಥಾ ಸ್ಥಾತುಃ ಸ್ಥಾವರಂ ವೃಕ್ಷಾದಿಕಂ ರಥಂ ರಮಮಾಣಂ ಜಂಗಮಂ ಮನುಷ್ಯಾದಿಕಂ ಚ ಯತಪ್ರವೀತಮೃತೇನೋದಕೇನ ಸತ್ಯೇನ ಯಜ್ಞೇನ ವಾ ಪ್ರಕರ್ಷೇಣ ನೇಷ್ಟಿತಂ ಯಮಗ್ನಿಂ ವರ್ಧಯಂತಿ। ಸೋಽಗ್ನಿಃ ಸ್ವಃ ಸುಷ್ವರಣೀಯೇ ದೇವಯಜನೇ ನಿಷತ್ತೋ ನಿಷಣ್ಣ ಉಪವಿಷ್ಟಃ ಸನ್ ಹೋತಾ ದೇವಾನಾಮಾಹ್ವಾತಾರಾಧಿ। ಸಂಸಿದ್ಧೋಽಭೂತ್। ಯದ್ವಾ। ಋತ್ವಿಗ್ಭಿರರಾಧಿ। ಆರಾಧಿತ ಇತ್ಯರ್ಥಃ। ಕಿಂ ಕುರ್ವನ್। ವಿಶ್ವಾನಿ ಸರ್ವಾಣಿ ಸತ್ಯಾ ಸತ್ಸು ಯಜಮಾನೇಷು ಭವನಾನಿ ಯದ್ವಾ ಸತ್ಯಫಲಾನ್ಯಪಾಂಸಿ ಕರ್ಮಾಣಿ ಕೃಣ್ವನ್ ಕುರ್ವನ್ ॥ ವರ್ಧಾನ್। ವೃಧೇರ್ಣ್ಯಂತಾಲ್ಲ್ಯುಟ್ಯಾಡಾಗಮಃ। ಛಂದಸ್ಯುಭಯಥೇತಿ ಶಪ ಆರ್ಧಧಾತುಕತ್ವಾತ್ ಣಿಲೋಪಃ। ಇತಶ್ಚ ಲೋಪ ಇತೀಕಾರಲೋಪೇ ಸಂಯೋಗಾಂತಲೋಪಃ। ಯತಪ್ರವೀತಂ। ನ್ಯೇಙ್ ಸಂವರಣೇ। ಅಸ್ಮಾತ್ಕರ್ಮಣಿ ನಿಷ್ಠಾ। ವಚಿಸ್ವಪಿಯಜಾದಿನಾ ಸಂಪ್ರಸಾರಣಂ। ಕೃದ್ಗ್ರಹಣೇ ಗತಿಕಾರಕಪೂರ್ವಸ್ಯ ಗ್ರಹಣಾತ್ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವಂ। ಆರಾಧಿ। ರಾಧ ಸಾಧ ಸಂಸಿದ್ಧೌ। ಕರ್ತರಿ ಲುಙ್ ವ್ಯತ್ಯಯೇನ ಚ್ಲೇಶ್ಚಿಣ್ ॥

॥ ಪ್ರತಿಪದಾರ್ಥ ॥

ಪೂರ್ವೀಃ—ಅನೇಕಗಳಾದ (ಉಷಸ್ಸುಗಳು)। **ಕ್ಷಪಃ**—ರಾತ್ರಿಗಳೂ। **ವಿರೂಪಾಃ**—(ಶುಕ್ಲಕೃಷ್ಣಾದಿ) ನಾನಾರೂಪಗಳಾಗಿ। **ಯಂ**—ಯಾವ ಅಗ್ನಿಯನ್ನು। **ವರ್ಧಾನ್**—ಅಭಿವೃದ್ಧಿಪಡಿಸುತ್ತವೋ। **ಸ್ಥಾತುಃ**—ಸ್ಥಾವರವಾದ ವೃಕ್ಷಾದಿಗಳೂ। **ರಥಂ ಚ**—ಚರವಾದ ಮನುಷ್ಯಾದಿಪ್ರಾಣಿಗಳೂ। **ಋತಪ್ರವೀತಂ**—ಉದಕದಿಂದ (ಸತ್ಯದಿಂದ, ಯಜ್ಞದಿಂದ) (ಆವೃತನಾದ ಅಗ್ನಿಯನ್ನು)। **ವರ್ಧಾನ್**—ಅಭಿವೃದ್ಧಿಪಡಿಸುತ್ತವೋ। **(ಸಃ**—ಆ ಅಗ್ನಿಯು)। **ಸ್ವಃ**—ಯಾಗಗೃಹದಲ್ಲಿ। **ವಿಶ್ವಾನಿ**—ಎಲ್ಲಾ। **ಸತ್ಯಾ**—ಯಜಮಾನಸ್ಥಿತವಾದ। **ಅಪಾಂಸಿ**—ಕರ್ಮಗಳನ್ನು। **(ವಿಶ್ವಾ ಅಪಾಂಸಿ**—ಎಲ್ಲಾ ಕರ್ಮಗಳನ್ನೂ। **ಸತ್ಯಾ**—ಸತ್ಯಫಲಗಳನ್ನಾಗಿ)। **ಕೃಣ್ವನ್**—ಮಾಡುತ್ತಾ। **ನಿಷತ್ತಃ**—ಆಸೀನನಾಗಿ। **ಹೋತಾ**—ದೇವತೆಗಳನ್ನು ಆಹ್ವಾನಿಸುವವನಾಗಿ। **ಆರಾಧಿ**—(ಋತ್ವಿಜರಿಂದ) ಆರಾಧಿಸಲ್ಪಟ್ಟನು.

॥ ಭಾವಾರ್ಥ ॥

ಶುಕ್ಲಕೃಷ್ಣವರ್ಣಗಳಾದ ಅನೇಕ ಉಷಸ್ಸು ಮತ್ತು ರಾತ್ರಿ ಕಾಲಗಳಲ್ಲಿ ಪ್ರವರ್ಧಮಾನನಾದ, ಸ್ಥಾವರವಾದ ವೃಕ್ಷಾದಿಗಳಿಂದ (ದಹ್ಯಪದಾರ್ಥಗಳಾದುದರಿಂದ) ಮತ್ತು ಚರವಾದ ಮನುಷ್ಯಾದಿಗಳಿಂದ (ಪೂಜಾದಿಗಳಿಂದ) ಅಭಿವೃದ್ಧನಾದ, ಉದಕಸ್ಥನಾದ ಅಗ್ನಿಯು, ಯಾಗಗೃಹದಲ್ಲಿ ಋತ್ವಿಜರಿಂದ ಆರಾಧಿತನಾಗಿ, ಇತರ ದೇವತೆಗಳನ್ನು ಯಾಗಕ್ಕೆ ಆಹ್ವಾನಿಸುತ್ತಾ, ಯಜಮಾನಕೃತವಾದ ಕರ್ಮಗಳೆಲ್ಲವನ್ನೂ ಸತ್ಯಫಲಗಳನ್ನಾಗಿ ಮಾಡಲಿ

English Translation.

Agni, whom many variously-tinted (mornings) and nights increase, whom, invested with truth, all movable and immovable things augment, has been propitiated, and is kindly seated at the holy rite, as the invoker (of the Gods), and rendering all (pious) acts (productive) of reward.

॥ ವಿಶೇಷವಿಷಯಗಳು ॥

ಪೂರ್ವೀಃ ವಿರೂಪಾಃ ಕ್ಷಪಃ ಯಂ ವರ್ಧಾನ್-ಬಹ್ವ್ಯಃ ಉಷಸಃ ನಿಶಾಶ್ಚ ಶುಕ್ಲಕೃಷ್ಣತಯಾ ವಿವಿಧ-ರೂಪಾಃ ಸತ್ಯಃ ಅಗ್ನಿಂ ವರ್ಧಯಂತಿ । ಕತ್ತಲೆ ಮತ್ತು ಬೆಳಕು ಇವುಗಳಿಂದ ಬೇರೆಯದಾದ ರೂಪವನ್ನು ಹೊಂದುತ್ತಿರುವ ಉಷಃಕಾಲಗಳಲ್ಲಿಯೂ, ರಾತ್ರಿಗಳಲ್ಲಿಯೂ ಕೂಡ ಅಗ್ನಿಯಲ್ಲಿ ಹೋಮವನ್ನು ಮಾಡುವುದರಿಂದ ಉಷಃಕಾಲಗಳೂ ಮತ್ತು ರಾತ್ರಿಯೂ ಕೂಡ ಅಗ್ನಿಯನ್ನು ವೃದ್ಧಿಗೊಳಿಸುತ್ತವೆ ಎಂದು ರಾತ್ರಿಗಳಿಗೂ ಉಷಃಕಾಲಗಳಿಗೂ ಕರ್ತೃತ್ವವನ್ನು ಸಾಯಣಭಾಷ್ಯದಲ್ಲಿ ಹೇಳಿರುತ್ತಾನೆ ಸ್ವಂದಸ್ವಾಮಿಗಳು ಕ್ಷಪಾಶಬ್ದಕ್ಕೆ ರಾತ್ರಿ ಮತ್ತು ಸ್ತುತಿ ಎಂಬ ಎರಡು ವಿಧವಾದ ಅರ್ಥವನ್ನು ಹೇಳಿರುತ್ತಾರೆ.

ಋತಪ್ರವೀತಂ—ಋತೇನ ಉದಕೇನ ಸತ್ಯೇನ ಯಜ್ಞೇನ ವಾ ಪ್ರಕರ್ಷೇಣ ನೇಷ್ಟಿತಂ । ಋತ ಶಬ್ದಕ್ಕೆ ಉದಕಗಳಿಂದಲೂ, ಸತ್ಯದಿಂದಲೂ, ಯಜ್ಞರೂಪವಾದ ಕರ್ಮಗಳಿಂದಲೂ ಅಗ್ನಿಯು ಕೂಡಿರುವನೆಂದು ಅರ್ಥವು. ಸ್ವಂದಸ್ವಾಮಿಗಳು ಋತಶಬ್ದವು ಯಜ್ಞವಾಚಿಯಾಗಿರುವುದು. ಯಜ್ಞಕ್ಕಾಗಿ ಯಜಮಾನರುಗಳಿಂದ ಯಜ್ಞದಲ್ಲಿ ಬಹಳಮಟ್ಟಿಗೆ ತಿಳಿಯಲ್ಪಟ್ಟಿರುವವನು ಅಥವಾ ಯಜ್ಞವನ್ನು ಆಚರಿಸುವವರಿಗಾಗಿ ಅರಣಿಯಲ್ಲಿ ಉತ್ಪನ್ನನಾದವನು, ಅಥವಾ ಯಜ್ಞಕರ್ಮಗಳಲ್ಲಿ ಹವಿರ್ಭಾಗಸ್ವೀಕಾರಕ್ಕಾಗಿ ನಿಯತವಾಗಿ ಇರುವವನು ಎಂದು ಋತಪ್ರವೀತ ಶಬ್ದಕ್ಕೆ ಅರ್ಥವನ್ನು ವಿವರಿಸಿರುವರು **ಮತ್ತು ಈ ಪ್ರಕಾರವಾಗಿರುವ ಅಗ್ನಿಯು** ಎಲ್ಲಾ ಯಜ್ಞಕರ್ಮಗಳಲ್ಲಿಯೂ ವೇದಿಯಲ್ಲಿ ಸುಖವಾಗಿ ಉಪವಿಷ್ಟನಾಗಿ ಹವಿರ್ಭಾಗಗಳಿಂದ ದೇವತೆಗಳನ್ನು ಸೇವಿಸುವನು ಎಂದೂ ಅರ್ಥವನ್ನು ಹೇಳಿರುವರು

ಸ್ವಃ ನಿಷತ್ತಃ ಹೋತಾ ಆರಾಧಿ—ಅರಣೇಯೇ ದೇವಯಜನೇ ಸುಷ್ಠು ನಿಷಣ್ಣ ಉಪವಿಷ್ಟಸ್ಸನ್ ದೇವಾನಾಂ ಆಹ್ವಾತಾ ಸಂಸಿದ್ಧೋ ಅಭೂತ್ । **ಯದ್ವಾ ಋತ್ವಿಗ್ಭಿರರಾಧಿ ಆರಾಧಿತ ಇತ್ಯರ್ಥಃ** । ಅಗ್ನಿಯು ಅರಣಿಯಲ್ಲಿ ಉತ್ಪನ್ನನಾಗಿ ದೇವತೆಗಳಿಗಾಗಿ ಹವಿಸ್ಸನ್ನು ಅರ್ಪಿಸುವ ವೇದಿಯಲ್ಲಿ ಉಪವಿಷ್ಟನಾಗಿ ದೇವತೆಗಳನ್ನು ಹವಿರ್ಭಾಗಸ್ವೀಕಾರಕ್ಕಾಗಿ ಆಹ್ವಾನಮಾಡುವದರಲ್ಲಿ ಸಿದ್ಧನಾಗಿರುವನು. ಅಥವಾ ಯಜ್ಞಗಳಲ್ಲಿ ಋತ್ವಿಕ್ಕುಗಳಾದ ಜನರಿಂದ ಸೇವಿಸಲ್ಪಟ್ಟಿರುವನು ಎಂದು ಸಾಯಣರು ಅರ್ಥಮಾಡಿರುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

ವರ್ಧಾನ್—ವೃಧು ವೃದ್ಧೌ ಧಾತು. ಇದಕ್ಕೆ ಪ್ರಯೋಜಕ ವ್ಯಾಪಾರತೋರುವುದರಿಂದ **ಹೇತುಮತಿ ಚ** ಎಂಬುದರಿಂದ ಣಿಚ್. **ಸನಾದ್ಯಂತಾಧಾತವಃ** ಎಂಬುದರಿಂದ ಣಿಜಂತಕ್ಕೆ ಧಾತುಸಂಜ್ಞಾ. ಣಿಚ್ ನಿಮಿತ್ತವಾಗಿ

ಧಾತುವಿನ ಲಕ್ಷೊಷಧೆಗೆ ಗುಣ. ಣಿಜಂತದ ಮೇಲೆ ಲೇಟ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ **ಝೋಂತಃ** ಎಂಬುದರಿಂದ ಅಂತಾದೇಶ. **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಆದರ ಅಂತ್ಯ ಇಕಾರಕ್ಕೆ ಲೋಪ **ಲೇಟೋಽಡಾಟೌ** ಎಂಬುದರಿಂದ ಅಡಾಗಮ **ಛಂದಸ್ಯುಭಯಥಾ** (ಪಾ ಸೂ ೩-೪-೧೧೭) ಎಂಬುದರಿಂದ ಶಪ್ಪಿಗೆ ಆರ್ಧಧಾತುಕ ಸಂಜ್ಞೆ ಇರುವುದರಿಂದ ತನ್ನಿಮಿತ್ತವಾಗಿ ಣಿಚ್ಚಿಗೆ **ಣೇರನಿಟಿ** (ಪಾ ಸೂ. ೬-೪ ೫೧) ಎಂಬುದರಿಂದ ಲೋಪ. **ಸಂಯೋಗಾಂತಸ್ಯ ಲೋಪಃ** ಸೂತ್ರದಿಂದ ಪ್ರತ್ಯಯದ ಅಂತ್ಯ ತಕಾರಕ್ಕೆ ಲೋಪ. ವರ್ಧಾನ್ ಎಂದು ರೂಪವಾಗುತ್ತದೆ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದು ಧಾತು ಸ್ವರದಿಂದ ಆದ್ಯುದಾತ್ತವಾಗುತ್ತದೆ.

ಋತಪ್ರವೀತಮ್—ವ್ಯೇಞ್ ಸಂವರಣೇ ಧಾತು ಇದಕ್ಕೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ **ವಚಿಸ್ವಪಿ-ಯಜಾದೀನಾಂ ಙ್ಕಿತಿ** (ಪಾ ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣ ಇಲ್ಲಿ ಸಂಪ್ರಸಾರಣವನ್ನು ಹೊಂದುವ ವರ್ಣಗಳು ಎರಡು ಇರುವುದರಿಂದ **ನ ಸಂಪ್ರಸಾರಣೇ ಸಂಪ್ರಸಾರಣಮ್** ಎಂಬುದರಿಂದ ಪೂರ್ವಕ್ಕೆ ಸಂಪ್ರಸಾರಣ ನಿಷೇಧ ಬರುತ್ತದೆ ಯಕಾರಕ್ಕೆ ಇಕಾರರೂಪ ಸಂಪ್ರಸಾರಣ ಬಂದಾಗ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. **ಹಲಃ** (ಪಾ ಸೂ ೬-೪-೨) ಎಂಬುದರಿಂದ ಆದಕ್ಕೆ ದೀರ್ಘ. ಋತೇನ ಪ್ರಕರ್ಷೇಣ ವೀತಮ್ ಋತಪ್ರವೀತಮ್ **ಕೃದ್ಗ್ರಹಣೇ ಗತಿಕಾರಕ ಪೂರ್ವಸ್ಯಾಪಿ ಗ್ರಹಣಮ್** ಎಂಬ ಪರಿಭಾಷೆಯಿಂದ (ಕೃದಂತಕ್ಕೆ ಗ್ರಹಣ ಅಂದರೆ ಉಪಾದಾನವಿರುವಾಗ ಗತಿ ಅಥವಾ ಕಾರಕ ಪೂರ್ವದಲ್ಲಿ ಇದ್ದರೆ ತದ್ವಿಶಿಷ್ಟಕ್ಕೂ ಉಪಾದಾನವಿದೆ ಎಂದು ಪರಿಭಾಷೆಯ ತಾತ್ಪರ್ಯ) ಇಲ್ಲಿ ವೀತವೆಂಬ ಕೃದಂತದಿಂದ ಪ್ರ ಎಂಬ ಗತಿವಿಶಿಷ್ಟವಾದ ಪ್ರವೀತವೆಂಬುದಕ್ಕೂ ಗ್ರಹಣವಿರುವುದರಿಂದ **ತೃತೀಯಾಕರ್ಮಣಿ** (ಪಾ ಸೂ ೬-೩-೪೯) ಎಂಬುದರಿಂದ ಸಮಾಸದಲ್ಲಿ ಪೂರ್ವಪದ ಪ್ರಕೃತಿಸ್ವರವು ಬರುತ್ತದೆ.

ಅರಾಧಿ—**ರಾಧ** ಸಾಧ ಸಂಸಿದ್ಧೌ ಧಾತು. ಕರ್ತರಿಯಲ್ಲೇ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ **ವ್ಯತ್ಯಯೋ ಬಹುಲಮ್** ಎಂಬುದರಿಂದ ಲುಙ್‌ನಲ್ಲಿ ಪ್ರಾಪ್ತವಾದ ಚ್ಲಿಗೆ ಚಿಣಾದೇಶ **ಚಿಣೋ ಲುಕ್** (ಪಾ. ಸೂ ೬-೪-೧೦೪) ಎಂಬುದರಿಂದ ಚಿಣ್ಣಿನ ಪರದಲ್ಲಿರುವ ತ ಶಬ್ದಕ್ಕೆ ಲುಕ್. ಅಂಗಕ್ಕೆ ಅಡಾಗಮ ಅರಾಧಿ ಎಂದು ರೂಪವಾಗುತ್ತದೆ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ.

ನಿಷತ್ತಃ—ಷದ್‌ಲೃ ವಿಶರಣಗತ್ಯವಸಾದನೇಷು, ಧಾತು ಇದಕ್ಕೆ ಕ್ತ ಪ್ರತ್ಯಯ **ರದಾಭ್ಯಾಂ ನಿಷ್ಠಾತೇಃ** - (ಪಾ ಸೂ. ೮-೪-೪೨) ಸೂತ್ರದಿಂದ ಕ್ತ ಪ್ರತ್ಯಯಕ್ಕೆ ನತ್ವವು ಪ್ರಾಪ್ತವಾದರೆ **ನ ಸತ್ತ, ನಿಷತ್ತಾನುತ್ತ**—(ಪಾ ಸೂ ೮-೪-೬೧) ಎಂಬುದರಿಂದ ನತ್ವಾಭಾವವು ನಿಪಾತಿತವಾಗಿದೆ.

ಕೃಣ್ವನ್—ಕೃವಿ ಧಾತುವು ಹಿಂಸಾರ್ಥದಲ್ಲಿದೆ ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಕರಣಾರ್ಥದಲ್ಲಿವೆ ಇದಿತ್ತಾದುದರಿಂದ ನುಮಾಗಮ ಲಡರ್ಥದಲ್ಲಿ ಶತೃಪ್ರತ್ಯಯ. ಅಥವಾ ಡುಕೃಞ್ ಕರಣೇ ಧಾತು. ಇದಕ್ಕೆ ಶತೃ ವಿನಕ್ವಾಮಾಡಿದಾಗ ವ್ಯತ್ಯಯದಿಂದ ಶ್ನು ವಿಕರಣ ಪ್ರಥಮಾ ಏಕವಚನಾಂತರೂಪ. ॥ ೬-೮ ॥

॥ ಸಂಹಿತಾಪಾಠಃ ॥

ಗೋಷು ಪ್ರಶಸ್ತಿಂ ವನೇಷು ಧಿಷೇ ಭರಂತ ವಿಶ್ವೇ ಬಲಿಂ ಸ್ವರ್ಣಃ ।
ವಿ ತ್ವಾ ನರಃ ಪುರುತ್ರಾ ಸಪರ್ಯನ್ಪಿತುರ್ನ ಜಿವ್ರೇರ್ವಿ ವೇದೋ ಭರಂತ ॥ ೯ ॥ ೧೦ ॥

॥ ಪದಪಾಠಃ ॥

ಗೋಷು । ಪ್ರಶಸ್ತಿಂ । ವನೇಷು । ಧಿಷೇ । ಭರಂತ । ವಿಶ್ವೇ । ಬಲಿಂ । ಸ್ವಃ । ನಃ ।
ವಿ । ತ್ವಾ । ನರಃ । ಪುರುತ್ರಾ । ಸಪರ್ಯನ್ । ಪಿತುಃ । ನ । ಜಿವ್ರೇಃ । ವಿ । ವೇದಃ । ಭರಂತ ॥ ೯ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ವನೇಷು ವನನೀಯೇಷು ಸಂಭಜನೀಯೇಷು ಗೋಷ್ವಸ್ಮದೀಯೇಷು ಪಶುಷು ಪ್ರಶಸ್ತಿಂ ಪಶಂಸಾಂ ಧಿಷೇ । ದಧಿಷೇ । ಸ್ಥಾಪಯಸಿ । ಅಸ್ಮಾಕಂ ಪ್ರಶಸ್ತಾ ಗವಾದಿಪಶವೋ ಭವಂತ್ವಿತ್ಯರ್ಥಃ । ವಿಶ್ವೇ ಸರ್ವೇ ಜನಾ ನೋಽಸ್ಮಭ್ಯಂ ಸ್ವಃ ಸುಷ್ಠ್ವರಣೀಯಂ ಬಲಿಮುಪಾಯನರೂಪಂ ಧನಂ ಭರಂತ । ಆಹರಂತು । ಹೇ ಅಗ್ನೇ ತ್ವಾ ತ್ವಾಂ ನರೋ ಮನುಷ್ಯಾಃ ಪುರುತ್ರಾ ಬಹುಷು ದೇವಯಜನದೇಶೇಷು ವಿ ಸಪರ್ಯನ್ । ವಿವಿಧಂ ಪೂಜಯಂತಿ । ಪೂಜಯಿತ್ವಾ ಚ ವೇದೋ ಧನಂ ವಿ ಭರಂತ । ತ್ವತ್ತೋ ವಿಶೇಷೇಣ ಹರಂತಿ । ಗೃಣ್ಹಂತೀತ್ಯರ್ಥಃ । ತತ್ರ ದೃಷ್ಟಾಂತಃ । ಜಿವ್ರೇರ್ಜೀರ್ಣಾರ್ಥಸ್ಯ ದ್ಯಾತ್ಪಿತುರ್ನ ಪಿತುರಿವ । ಯಥಾ ಪುತ್ರಾ ವೃದ್ಧಾಪಿತುಃ ಸಕಾಶಾದ್ಧನಂ ಹರಂತಿ ತದ್ವತ್ ॥ ಧಿಷೇ । ಛಾಂದಸೋ ವರ್ತಮಾನೇ ಲಿಟ್ । ದ್ವಿರ್ವಚನಸ್ಪ್ರಕರಣೇ ಛಂದಸಿ ನ್ಮೇತಿ ವಕ್ತವ್ಯಂ । ಕಾ ೬-೧-೮-೧ । ಇತಿ ದ್ವಿರ್ವ-

ಚನಾಭಾವಃ । ಭರಂತೇ । ಹೃಞ್ ಹರಣೇ । ಕೇವಲೋಽಪಿ ಸೋಪಸರ್ಗಾರ್ಥೋ ದ್ರವ್ಯವ್ಯಃ । ಛಾಂದ ಸೋಲಙ್ । ಹೃಗ್ರಹೋರ್ಭ ಇತಿ ಭತ್ವಂ । ಪುರುತ್ರಾ । ದೇವಮನುಷ್ಯಪುರುಷಪುರುಮರ್ತ್ಯೇತ್ಯಾದಿನಾ ಸಪ್ತಮ್ಯರ್ಥೇ ತ್ರಾಪ್ರತ್ಯಯಃ । ಜಿವ್ರೇಃ । ಜ್ಯಾಷ್ ವಯೋಹಾನೌ । ಜ್ಯಾಶ್ಯಾಸ್ಭ್ಯಾಜಾಗೃಭ್ಯಃ ಕ್ವಿನ್ । ಉ. ೪-೫೪ । ಋತ ಇದ್ಧಾತೋರಿತೀತ್ವಂ । ಉಣಾದಯೋಽವ್ಯುತ್ಪನ್ನಾನಿ ಪ್ರಾತಿಪದಿಕಾನೀತಿ ಜಿವ್ರಿಃ ಕಿರ್ಯೋರ್ಗಿರ್ಯೋರಿತ್ಯೇವಮಾದಿಷು ದೀರ್ಘೋ ನ ಭವತಿ । ಕಾ. ೮-೨-೭೮ । ಇತ್ಯುಕ್ತತ್ವಾತ್ ಹಲಿ ಚೇತಿ ದೀರ್ಘಸ್ಯಾಭಾವಃ । ರೇಫವಕಾರಯೋರ್ವಿಪರ್ಯಯಃ । ಉಕ್ತಂ ಚ । ವರ್ಣಾಗಮೋ ವರ್ಣವಿಪರ್ಯಯಶ್ಚ । ಕಾ. ೬-೩-೧೦೯ । ಇತಿ । ನಿತ್ತ್ವಾದಾದ್ಯುದಾತ್ತತ್ವಂ । ವೇದ ಇತಿ ಧನನಾಮ । ವಿದ್ಯತೇ ಲಭ್ಯತ ಇತಿ ವೇದಃ । ವಿದ್ಲೃ ಲಾಭೇ । ಕರ್ಮಣ್ಯಸುನ್ ।

॥ ಪ್ರತಿಪದಾರ್ಥ ॥

(ಅಗ್ನೇ—ಅಗ್ನಿಯೇ ನೀನು) । ವನೇಷು—ಪೂಜ್ಯವಾದ (ನಮ್ಮ ಸಂಬಂಧವಾದ) । ಗೋಷು ಪಶುಷು—ಗೋವೇ ಮೊದಲಾದ ಪಶುಗಳಲ್ಲಿ । ಪ್ರಶಸ್ತಿಂ—ಪ್ರಶಂಸೆಯನ್ನು । ಧಿಷೇ—ಸ್ಥಾಪಿಸುತ್ತೀ । ವಿಶ್ವೇ—ಎಲ್ಲರೂ । ನಃ—ನಮಗೆ । ಸ್ಯೈ—ಅಪೇಕ್ಷಿತವಾದ । ಬಲಿಂ—ಉಪಾಯನರೂಪವಾದ (ಧನವನ್ನು) । ಭರಂತ—ಒದಗಿಸಲಿ । (ಅಗ್ನೇ—ಅಗ್ನಿಯೇ) । ತ್ವಾ—ನಿನ್ನನ್ನು । ನರಃ—ಮನುಷ್ಯರು । ಪುರುತ್ರಾ—ಅನೇಕ ಯಾಗಶಾಲೆಗಳಲ್ಲಿ । ವಿ ಸಪರ್ಯನ್—ಚೆನ್ನಾಗಿ ಪೂಜೆಮಾಡುತ್ತಾರೆ। (ಮತ್ತು) ಜಿವ್ರೇಃ—ವೃದ್ಧನಾದ । ಪಿತುರ್ನ—ತಂದೆಯಿಂದ ಹೇಗೆ (ಮಕ್ಕಳು ಧನವನ್ನು ಪಡೆಯುತ್ತಾರೋ ಹಾಗೆ) । ವೇದಃ—ಧನವನ್ನು । ವಿ ಭರಂತ—ವಿಶೇಷವಾಗಿ ಪಡೆಯುತ್ತಾರೆ ॥

॥ ಭಾವಾರ್ಥ ॥

ಅಗ್ನಿಯೇ. (ನಿನ್ನ ಪ್ರಸಾದದಿಂದ) ನಮಗೆ ಉತ್ತಮವಾದ ಗವಾದಿ ಪಶುಗಳೂ, ಎಲ್ಲಾ ಜನಗಳಿಂದ ಉಪಾಯನರೂಪವಾಗಿ ದ್ರವ್ಯವೂ ಪ್ರಾಪ್ತವಾಗಲಿ. ಮನುಷ್ಯರು ಅನೇಕ ಯಾಗಶಾಲೆಗಳಲ್ಲಿ ನಿನ್ನನ್ನು ವಿಶೇಷವಾಗಿ ಹವಿರಾದಿಗಳಿಂದ ಪೂಜೆಮಾಡಿ, ವೃದ್ಧನಾದ ತಂದೆಯಿಂದ ಪುತ್ರರು ಧನವನ್ನು ಪಡೆಯುವಂತೆ, ನಿನ್ನಿಂದ ಧನವನ್ನು ವಿಶೇಷವಾಗಿ ಪಡೆಯುತ್ತಾರೆ.

English Translation.

Agni, confer excellence upon our valued cattle, and may all men bring us acceptable tribute; offering in many places sacrifices to you, men receive riches from you, as (sons) from an aged father.

॥ ವಿಶೇಷವಿಷಯಗಳು ॥

ಜಿನ್ವೇಃ ಪಿತುರ್ನ ವೇದಃ ವಿಭರಂತೆ—ಜೀರ್ಣಾತ್ ವೃದ್ಧಾತ್ ಪಿತುರಿವ ತ್ವತ್ತೋ ವಿಶೇಷೇಣ ಧನಂ ಗೃಹ್ಣಂತಿ । ಯಥಾ ಪುತ್ರಾಃ ವೃದ್ಧಾತ್ ಪಿತುಸ್ಸಕಾಶಾತ್ ಧನಂ ಹರಂತಿ । ಅಗ್ನಿಯು ಯಜಮಾನರೂ ಋತ್ವಿಜರೂ ಮತ್ತು ಸರ್ವರಿಂದಲೂ ಸ್ತೋಜಿಸಲ್ಪಟ್ಟವನಾಗಿ ಅವರಿಗೆ ಎಲ್ಲವನ್ನೂ ಅನುಗ್ರಹಿಸುವ ಕಾರಣ ಅಗ್ನಿಯಿಂದ ಅನೇಕ ವಿಧವಾದ ಧನವೇ ಮೊದಲಾದವುಗಳನ್ನು ಹೊಂದುವರು ಲೋಕದಲ್ಲಿ ತಂದೆಯು ಮುದುಕನಾದನಂತರ ಮಕ್ಕಳುಗಳು ಅವನ ಧನವೆಲ್ಲವನ್ನೂ ಸಮ್ಮತಿಯಿಂದ ಸ್ವೀಕರಿಸುವರು. ಇದರಂತೆಯೇ ಅಗ್ನಿಯ ಸೇವೆಯಿಂದ ಋತ್ವಿಗಾದಿಗಳು ಧನವನ್ನು ಸ್ವೀಕರಿಸುವರು ಎಂದು ಅರ್ಥವು

ಸ್ಕಂದಸ್ವಾಮಿ ಭಾಷ್ಯದಲ್ಲಿ ವೇದಶಬ್ದಕ್ಕೆ ಹವಿಸ್ಸಿನ ರೂಪವಾದ ಧನವೆಂದು ಅರ್ಥವನ್ನು ಹೇಳಿ, ಮುದುಕನಾದ ತಂದೆಗೆ ಮಕ್ಕಳುಗಳು ರುಚಿಕರವಾದ ನಾನಾವಿಧವಾದ ಅನ್ನವೇ ಮೊದಲಾದವುಗಳನ್ನು ತಂದುಕೊಡುವ ಹಾಗೆ ಅಗ್ನಿಗೂ ಕೂಡ ಯಜ್ಞಮಾಡುವವರು ಅನೇಕವಿಧವಾದ ಹವಿಸ್ಸುಗಳನ್ನು ಅರ್ಪಿಸುವರೆಂದು ವಿವರಿಸಿರುತ್ತಾರೆ

ವನೇಷು—ವನನೀಯೇಷು ಚಾಶ್ವಾದಿಷು । ಉದಕನಾಮು ವಾ ವನಶಬ್ದಃ ಉದಕೇಷು । (ಸ್ಕಂ ಭಾ)ವನ ಶಬ್ದವು ನೂರೊಂದು ಉದಕನಾಮಗಳಲ್ಲಿ (ನಿ ೨-೨೪) ಪಠಿತವಾಗಿರುವುದು ಅಶ್ವರೂಪಾರ್ಥದಲ್ಲಿ ಈ ಶಬ್ದವು ಉಪಚಾರದಿಂದ ಪ್ರಯುಕ್ತವಾಗಿ ಅತ್ಯಂತ ವೇಗವಾಗಿ ಸಂಚರಿಸುವ ಪ್ರಾಣಿಗಳು ಎಂಬ ಅರ್ಥವನ್ನು ಹೇಳುವುದು ಅಗ್ನಿಯು ಇವುಗಳಿಗೆ ಈ ಸಾಮರ್ಥ್ಯವನ್ನು ಅನುಗ್ರಹಿಸುತ್ತಿರುವನು ಎಂದು ತಾತ್ಪರ್ಯವು.

ವೇದಃ—ವಿದ್ಯತೇ ಲಭ್ಯತೇ ಇತಿ ವೇದಃ । ವೇದ ಇತಿ ಧನನಾಮ । ಇರುವುದು ಮತ್ತು ಎಲ್ಲರಿಂದಲೂ ಹೊಂದಲ್ಪಡುವುದು ಆದ್ದರಿಂದ ವೇದ ಎಂದರೆ ಧನವೆಂದು ಅರ್ಥವು ವಘಂ ರೇಕ್ಷಣಃ, ಇವೇ ಮೊದಲಾದ ಇಪ್ಪತ್ತೈದು ಧನನಾಮಗಳಲ್ಲಿ ವೇದ ಶಬ್ದವು (ನಿ ೩-೯) ಉಕ್ತವಾಗಿರುವುದು ನಿರುಕ್ತವ್ಯಾಖ್ಯಾನದಲ್ಲಿ ವಿದಲೃ ಲಾಭೇ ಎಂಬ ಧಾತುವಿನಿಂದ ನಿಷ್ಪನ್ನವಾದ ವೇದ ಶಬ್ದಕ್ಕೆ **ವಿದ್ಯತೇ ಧರ್ಮಾದಿಃ ಅನೇನ** ಇದರಿಂದ ಧರ್ಮವೇ ಮೊದಲಾದವುಗಳು ಹೊಂದಲ್ಪಡುವವು ಎಂದು ಅರ್ಥವನ್ನು ಮಾಡಿ, **''ಹೋತಾರಂ ವಿಶ್ವವೇದಸಂ''** (ಋ ಸಂ ೧-೧೬-೧) ಎಂದು ಉದಾಹರಣೆಯನ್ನು ಕೊಟ್ಟಿರುವರು.

ಗೋಷು- ಅಸ್ಮದೀಯೇಷು ಪಶುಷು. ಗೋ ಶಬ್ದವು ದ್ಯೌ, ಆದಿತ್ಯ, ಚಿಶ್ವ, ವಾಕ್ಕು, ಸೀತಾ, ರಶ್ಮಿ, ಎಂಬ ಅರ್ಥಗಳಲ್ಲಿ ನಿರುಕ್ತದಲ್ಲಿ ಆಯಾಯಾ ಶಬ್ದಗಳ ವ ಧ್ಯದಲ್ಲಿ ಪಠಿತವಾಗಿದ್ದರೂ ಇಲ್ಲಿ ಪಶು (ಹಸು) ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುತ್ತದೆ ಯಜ್ಞಾದಿಗಳಿಗೆ ಅನುಕೂಲವಾಗಿರುವಂತೆ ಉತ್ತಮವಾದ ಪಶುಗಳು ನಮಗೆ ದೊರಕಲಿ ಎಂದು ಅಗ್ನಿಯನ್ನು ಯಜಮಾನರುಗಳು ಪ್ರಾರ್ಥಿಸುವರು

॥ ವ್ಯಾಕರಣಪ್ರಕ್ರಿಯಾ ॥

ಧಿಷೇ—ಡುಧಾಞ್ ಧಾರಣಪೋಷಣಯೋಃ ಧಾತು ವರ್ತಮಾನಾರ್ಥದಲ್ಲಿ **ಭಂದಸಿ ಲುಙ್ಲಙ್-ಲಿಟಃ** ಎಂಬುದರಿಂದ ಲಿಟ್. ಮಧ್ಯಮಪುರುಷ ಏಕವಚನದಲ್ಲಿ ಥಾಸ್ ಬಂದಾಗ **ಥಾಸಃ ಸೇ** (ಪಾ. ಸೂ.

೩-೪-೮೦) ಎಂಬುದರಿಂದ ಸೇ ಆದೇಶ **ಆರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಇಡಾಗಮ. **ದ್ವಿರ್ವಚನ ಪ್ರಕರಣೇ ಛಂದಸಿ ವೇತಿ ವಕ್ತವ್ಯಮ್** (ಕಾ. ೬-೧-೮-೧) ಎಂಬುದರಿಂದ ಲಿಟನಲ್ಲಿ ದ್ವಿತ್ವ ಬರುವುದಿಲ್ಲ. **ಅಸಂಯೋಗಾಲ್ಲಿಟ್ ಕಿತ್**(ಪಾ. ಸೂ. ೧-೨-೫) ಎಂಬುದರಿಂದ ಪ್ರತ್ಯಯಕ್ಕೆ ಕಿತ್ವವಿರುವುದರಿಂದ **ಅತೋಲೋಪ ಇಟಿ ಚ** (ಪಾ ಸೂ. ೬-೪-೬೪) ಎಂಬುದರಿಂದ ಪ್ರತ್ಯಯ ನಿಮಿತ್ತವಾಗಿ ಧಾತುವಿನ ಆಕಾರಕ್ಕೆ ಲೋಪ. **ಆದೇಶ ಪ್ರತ್ಯಯಯೋಃ** ಎಂಬುದರಿಂದ ಪ್ರತ್ಯಯಸಕಾರಕ್ಕೆ ಷತ್ವ. ಧಿಷೇ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ **ತಿಜ್ಞತಿಜಿಃ** (ಪಾ. ಸೂ. ೮-೧-೩೮) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಭರಂತ—ಹೃಞ್ ಹರಣೇ ಧಾತು. ಧಾತುವು ಉಪಸರ್ಗಸಮಭಿವ್ಯಾಹಾರದಿಂದ ವಿಶೇಷಾರ್ಥವನ್ನು ಪ್ರಕಾಶಪಡಿಸುವುದಾದರೂ ಇಲ್ಲಿ ಕೇವಲ ಧಾತುವಿನಿಂದ ಉಪಸರ್ಗ (ಆಙ್) ವಿಶಿಷ್ಟವಾದುವರಿಂದ ತೋರುವ ಅರ್ಥವು ಅಭಿವ್ಯಕ್ತವಾಗುತ್ತದೆ. ಇಲ್ಲಿಯೂ ಹಿಂದಿನಂತೆಯೇ ವರ್ತಮಾನಾರ್ಥದಲ್ಲಿ ಛಾಂದಸವಾದ ಲಙ್ ಬರುತ್ತದೆ ಪ್ರಥಮ ಪುರುಷ ಬಹುವಚನದಲ್ಲಿ ಝಿ ಪ್ರತ್ಯಯಕ್ಕೆ **ಝೋಂತಃ** ಎಂಬುದರಿಂದ ಅಂತಾದೇಶ. ಶಪ್ ವಿಕರಣ. ತನ್ನಿಮಿತ್ತವಾಗಿ ಧಾತುವಿನ ಇಕ್ಕೆಗೆ ಗುಣ **ಅತೋ ಗುಣೇ** ಎಂಬುದರಿಂದ ಪರರೂಪ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** (ಪಾ. ಸೂ. ೬-೪-೭೫) ಎಂಬುದರಿಂದ ಆಡಾಗಮ ಬರುವುದಿಲ್ಲ. **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಧಾತುವಿನ ಹಕಾರಕ್ಕೆ ಭಕಾರಾದೇಶ. ಭರಂತ ಎಂದು ರೂಪವಾಗುತ್ತದೆ. **ಅತಿಜಿಃ** ಎಂದು ನಿಷೇಧ ಮಾಡಿರುವುದರಿಂದ ಇಲ್ಲಿ ಧಿಷೇ ಎಂಬ ತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್, ಲಸಾರ್ವಧಾತುಕವೂ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ

ಪುರುತ್ರಾ—ಪುರು ಎಂಬ ಶಬ್ದಕ್ಕೆ ಸಪ್ತಮ್ಯರ್ಥದಲ್ಲಿ **ದೇವಮನುಷ್ಯಪುರುಷಪುರುಮನುಷ್ಯೇ**— (ಪಾ. ಸೂ ೫-೪-೫೬) ಎಂಬುದರಿಂದ ತ್ರಾ ಪ್ರತ್ಯಯ.

ಜಿವ್ರೇಃ—ಜೃಷ್ ವಯೋಹಾನೌ ಧಾತು. ಇದಕ್ಕೆ **ಜ್ವಾಶ್ವಸ್ತ್ರಾ ಜಾಗೃಭ್ಯಃ ಕ್ವಿನ್** (ಉ. ಸೂ. ೪-೪೪) ಎಂಬುದರಿಂದ ಕ್ವಿನ್ ಪ್ರತ್ಯಯ **ಋೂತ ಇದ್ಧಾತೋಃ** (ಪಾ. ಸೂ ೭-೧-೧೦೦) ಎಂಬುದರಿಂದ ಧಾತುವಿನ ಋಕಾರಕ್ಕೆ ಇತ್ವ. **ಉರಣ್ರಪರಃ** ಎಂಬುದರಿಂದ ರಪರವಾಗಿ ಬರುತ್ತದೆ. ಜಿರ್+ವಿ ಎಂದಿರುವಾಗ **ಹಲಿಚ** ಎಂಬುದರಿಂದ ದೀರ್ಘವು ಪ್ರಾಪ್ತವಾದರೆ **ಉಣಾದಯೋ೭ವ್ಯುತ್ಪನ್ನಾನಿ ಪ್ರಾತಿಪದಿಕಾನೀತಿ ಜಿವ್ರಿಃ ಕಿರ್ಯೋ೭ರ್ಗಿರ್ಯೋರಿತ್ಯೇವಮಾದಿಷು ದೀರ್ಘೋ ನ ಭವತಿ** (ಕಾ ೪-೨-೭೪) ಎಂಬ ವಚನದಿಂದ ಬರುವುದಿಲ್ಲ. (ಉಣಾದಿಯಲ್ಲಿ ವ್ಯುತ್ಪತ್ತಿಪಕ್ಷ ಅವ್ಯುತ್ಪತ್ತಿಪಕ್ಷವೆಂದು ಎರಡು ಪ್ರಕಾರವಿರುವಾಗ ಇಂಥಾ ಸ್ಥಳದಲ್ಲಿ ಅವ್ಯುತ್ಪತ್ತಿಪಕ್ಷವನ್ನು ಸ್ವೀಕರಿಸುವುದರಿಂದ ಪ್ರಕೃತಿಪ್ರತ್ಯಯ ವಿನೇಚನ ಯಾವಾಗ ಇಲ್ಲವೋ ಆಗ ಧಾತುವಿನ ಉಪಧಾ ಇಲ್ಲದಿರುವುದರಿಂದ ಸೂತ್ರದಿಂದ ಕಾರ್ಯವಾಗುವುದಿಲ್ಲವೆಂದು ತಾತ್ಪರ್ಯ.) ಛಾಂದಸವಾಗಿ ರೇಫ ವಕಾರಗಳಿಗೆ ವ್ಯತ್ಯಯ ಬರುವುದರಿಂದ ಉಕ್ತರೂಪ ಸಿದ್ಧಿಯಾಗುತ್ತದೆ ಕ್ವಿನ್ ಪ್ರತ್ಯಯ ನಿತ್ವಾದುದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ವೇದಃ— ವೇದ ಎಂಬುದು ದ್ರವ್ಯದ ಹೆಸರು (ಹಣ). ವಿದ್ಯತೇ ಲಭ್ಯತೇ ಇತಿ ವೇದಃ (ಹೊಂದಲ್ಪಡುವುದು) ವಿದ್ಲೃ ಲಾಭೇ ಧಾತು. ಕರ್ಮಣಿಯಲ್ಲಿ ಅಸುನ್ ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿನ

ಲಘೂಪಧೆಗೆ ಗುಣ. ವೇದಸ್ ಎಂಬುದು ಸಕಾರಾಂತ ನಪುಂಸಕಲಿಂಗ ಶಬ್ದವಾಗುತ್ತದೆ. ಇಲ್ಲಿ ದ್ವಿತೀಯಾ ಏಕವಚನಾಂತರೂಪ.

ಭರಂತೆ—ಹಿಂದೆ ಪ್ರಕ್ರಿಯಾ ಉಕ್ತವಾಗಿದೆ. ಅತಿಙಂತದ ಪರದಲ್ಲಿರುವುದರಿಂದ **ತಿಙ್ಙತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೯-೧೦ ॥

॥ ಸಂಹಿತಾಪಾಠಃ ॥

साधुर्न गृध्नुरस्तेव शूरो यातेव भीमस्त्वेषः समत्सु ॥ ८८ ॥

॥ ಪದಪಾಠಃ ॥

साधुः । न । गृध्नुः । अस्ता ऽइव । शूरः । याता ऽइव । भीमः । त्वेषः । समत् ऽसु ॥ ८८ ॥

॥ ಸಾಯಣಭಾಷ್ಯಂ ॥

ದ್ವಿಪದಾಸ್ಸಯುಕ್ಸಂಖ್ಯಾಸು ಯಾಂತ್ಯಾತಿರಿಚ್ಯತೇ ಸಾ ತಥೈವ ಸಂಹಿತವ್ಯೇತ್ಯುಕ್ತಂ । ಉತ್ತರಾ ತಾದೃಶೀ ದ್ವಿಪದಾ ॥

ಅಯಮಗ್ನಿಃ ಸಾಧುರ್ನ ಸಾಧಕ ಇವ ಗೃಧ್ನುರ್ಗೃಹೀತಾ । ಯಥಾ ಸಾಧಕಃ ಸಾಧ್ಯಫಲಮಾಶು ಗೃಹ್ಣಾತಿ ತದ್ವದಗ್ನಿರಪಿ ಸರ್ವಂ ಸ್ವೀಕರೋತೀತ್ಯರ್ಥಃ । ತಥಾಯಮಗ್ನಿರಸ್ತೇವ ಶೂರಃ । ಯಥೇಷೂಣಾಂ ಕ್ಷೇಪ್ತಾ ಧಾನುಷ್ಕಃ ಶತ್ರೂನ್ಪ್ರೇರಯತಿ ತದ್ವದಗ್ನಿರಪಿ ದಹನ್ ಸರ್ವಾಂ ಪ್ರಾಣಿಜಾತಂ ಪ್ರೇರಯತಿ । ತಥಾ ಯಾತೇವ ಭೀಮಃ । ಯಾತಾ ಯಾತಯಿತಾ ಹಿಂಸಕೋ ಭೀಮಃ ಸರ್ವೇಷಾಂ ಭಯಂಕರೋ ಭವತಿ । ತದ್ವದಗ್ನಿರಪಿ ದೃಷ್ಟಮಾತ್ರೇಣ ಸರ್ವೇಷಾಂ ಭಯಮುತ್ಪಾದಯತಿ । ಅತ ಏವಂವಿಧೋ ಽಗ್ನಿಃ ಸಮತ್ಸು ಸಂಗ್ರಾಮೇಷು ತ್ವೇಷೋ ದೀಪ್ತಃ ಸನ್ ಅಸ್ಮಾಕಂ ಸಹಾಯೋ ಭವತ್ವಿತ್ಯರ್ಥಃ ॥ ಗೃಧ್ನುಃ । ಗೃಧು

अभिकाङ्क्षायाम् । क्रैसिगृधिधृषिक्षिपेः क्नुः । शूरः । शु गतौ । अंतर्भावितण्यर्थादस्मात् शुषिचेमिनाम् दीर्घश्च । उ. ३-३५ । इति क्रन् ॥

॥ प्रतिपदार्थ ॥

साधुनर्त—(हिडिद कार्यगळन्नु बिडदे) साधिसुवनन्तॆ । **गृध्नुः**—ऎल्लवन्नू ग्रहिसुवनु । **असितेव**—(बाणवन्नु) ऎसेयुव योधनन्तॆ । **शूरः**—शूरनादवनू । **यातेव**—हिंसकनन्तॆ । **भीमः**—भयंकरनादवनू ऊद (अग्नियु) । **समत्सु**—संग्रामगळल्लि । **त्वेषः**—दीप्तनागि (नमगॆ सहायकनागलि) ॥

॥ भावार्थ ॥

कैगॊंड कार्यगळन्नु साधिसुतक्कवनू, योधनु बाणदिंद हेगॆ शत्रुगळन्नु ऒडिसुत्तानो हागॆ दहनशक्तियिंद ऎल्लवन्नू हॆदरिसि ऒडिसुवनन्नू, हिंसकनाद मनुष्यनु हेगॆ भयंकराकारनो हागॆ (दृष्टमात्रनागियॆ शत्रुगळगॆ) भयवन्नुंटुमाडुववनू ऊद अग्नियु संग्रामगळल्लि दीप्तनागि नमगॆ सहायकनागलि

English Translation.

(May Agni), who is like one who succeeds (in his undertakings), and aquires (what he wishes for), who is like a warrior casting a dart, and resembles a fearful adversary, who is brilliant in combats, (be to us a friend),

॥ विशेषविषयंगळु ॥

इदुवरॆगॆ हेळिद द्विपदाविराट् छंदस्सिन ऋक्कुगळन्नु परिसिदंतॆयॆ ई ऋक्कन्नु परिसबेकु. हिंदिन सूक्तगळल्लि द्विपदाविराट् छंदस्सिन हत्तॆ हत्तु ऋक्कुगळिरुवुवु ई सूक्तदल्लि ई ऋक्कू सेरि हन्नॊंदु ऋक्कुगळिरुववु. इदे कॊनॆय ऋक्कु

साधुनर्त गृध्नुः—साधकः साध्यफलमाशु यथा गृह्णाति तथा अयमग्निरपि सर्वं स्वीकरोतीत्यर्थः । न ऎंबुवुदु उपमानवाचकवागिरुवुदु. लोकदल्लि कार्यवन्नु साधिसिदवनु, साध्यवाद फलवन्नु बेगनॆ हॊंदुव हागॆ अग्नियु तनगॆ अर्पितवादुवुगळॆल्लवन्नू जाग्रतॆयागि स्वीकरिसुवनु.

ಸ್ಕಂದಸ್ವಾಮಿಗಳು **ಗೃಧ್ನುಃ—ಅಭಿಕಾಂಕ್ಷಿತಾ**=ಅಪೇಕ್ಷಿಸುವವನು. **ಯಥಾ ಸಾಧುಃ ಪುರುಷಃ ನ್ಯಾಯೇನೈವ ಅರ್ಥಾನಭಿಕಾಂಕ್ಷತಿ ಏವಮಗ್ನಿಃ ಸ್ತುತೀರ್ಹವೀಂಷಿ ಚ ಅಭಿಕಾಂಕ್ಷತಿ.** ಸಾಧುವಾದವನು, ಸರಿಯಾದ ರೀತಿಯಿಂದ ಕಾರ್ಯಗಳನ್ನು ಸಾಧಿಸಿ ಪ್ರಯೋಜನಗಳನ್ನು ಹೊಂದಲು ಅಪೇಕ್ಷಿಸುವಹಾಗೆ ಈ ಅಗ್ನಿಯೂ ಕೂಡ ನ್ಯಾಯವಾದ ರೀತಿಯಿಂದಲೇ ಯಜಮಾನರುಗಳಿಂದ ಸ್ತುತಿಗಳನ್ನೂ, ಹವಿಸ್ಸುಗಳನ್ನೂ ಅಪೇಕ್ಷಿಸುತ್ತಿರುವನು ಎಂದು ಅರ್ಥವನ್ನು ಹೇಳಿರುವರು

ಅಸ್ತೇವ ಶೂರಃ—**ಅಸ್ತಾ ಕ್ಷೇಪಣಶೀಲಃ** "ಅಸು ಕ್ಷೇಪಣೇ" ಎಂಬ ಧಾತುವಿನಿಂದ ನಿಷ್ಪನ್ನವಾದ ಅಸ್ತಾ ಎಂಬ ಶಬ್ದವು ಅಸ್ಯತೀತ್ಯಸ್ತಾ ಎಸೆಯುವವನು ಎಂದು ಅರ್ಥವನ್ನು ಬೋಧಿಸುವುದು ಶೂರನಾದವನು ಬಾಣವನ್ನಾಗಲಿ ಇತರ ಆಯುಧವನ್ನಾಗಲಿ ಶತ್ರುಗಳನ್ನು ಕೊಲ್ಲುವುದಕ್ಕಾಗಿ ಎಸೆಯುವಂತೆ ಅಗ್ನಿಯೂ ಕೂಡ ಶತ್ರುಗಳನ್ನು ನಿಗ್ರಹಿಸುವನು ಎಂದರ್ಥವು

ಯೋತೇವ ಭೀಮಃ—ಯಾ ಧಾತುವು ಹಿಂಸಾರ್ಥದಲ್ಲಿ ಪ್ರಯುಕ್ತವಾಗಿರುವುದೆಂದು (ಸಾ. ಭಾ) ಸಾಯಣರು ಹೇಳಿರುವರು ಸ್ಕಂದಸ್ವಾಮಿಗಳು **ಯಾತಿರತ್ರ ವಧಾರ್ಥಃ** ಎಂದು ಹೇಳಿ "**ಆಹೇರ್ಯಾತಾರಂ**" (ಋ ಸಂ. ೧-೩೨-೧೪) ಎಂದು ಉದಾಹರಿಸಿರುವರು ಯಾತಾ ಎಂದರೆ ಹಿಂಸೆಮಾಡುವವನು ಎಂದು ಅರ್ಥವಾಗುವುದರಿಂದ ಅಗ್ನಿಯು ಹಿಂಸೆಮಾಡುವವನ ಹಾಗೆ ಕಂಡಕೂಡಲೆ ಭಯವನ್ನು ಉಂಟುಮಾಡುವವನು

ಸಮತ್ಸು—**ಸಂಗ್ರಾಮೇಷು** ಯುದ್ಧಗಳಲ್ಲಿ ಎಂದು ಅರ್ಥವು ಸಮತ್ಸು ಎಂಬ ಶಬ್ದವು (ನಿ ೩-೧) ನಲವತ್ತಾರು ಸಂಗ್ರಾಮನಾಮಗಳಲ್ಲಿ ಉಕ್ತವಾಗಿರುತ್ತದೆ

॥ ವ್ಯಾಕರಣಪ್ರಕ್ರಿಯಾ ॥

ಗೃಧ್ನುಃ—ಗೃಧು ಅಭಿಕಾಂಕ್ಷಾಯಾಂ ಧಾತು ಇದಕ್ಕೆ **ತ್ರಸಿಗೃಧಿಧೃಷಿಕ್ಷಿಪೇಃ ಕ್ನುಃ** (ಪಾ ಸೂ ೩-೨-೧೪೦) ಎಂಬುದರಿಂದ ಕ್ನು ಪ್ರತ್ಯಯ ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ ಪ್ರತ್ಯಯಸ್ವರದಿಂದ ಅಂಕೋದಾತ್ತವಾಗುತ್ತದೆ

ಅಸ್ತಾ—ಅಸು ಕ್ಷೇಪಣೇ ಧಾತು ಇದಕ್ಕೆ ಕರ್ತೃರ್ಥದಲ್ಲಿ ತೃನ್ ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ. ಪ್ರಥಮಾ ಸು ಪರವಾದಾಗ **ಋದುಶನಸ್ಪು**—ಸೂತ್ರದಿಂದ ಅನಙಾದೇಶ. **ಅಸ್ತೃನ್**-ಸೂತ್ರದಿಂದ ಉಪಧಾದೀರ್ಘ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ಸುಲೋಪ. **ನಲೋಪಃ ಪ್ರಾ**—ಎಂಬುದರಿಂದ ನಲೋಪ

ಶೂರಃ—ಶು ಗತೌ ಧಾತು ಣ್ಯರ್ಥವು (ಪ್ರೇರಣಾ) ತೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಈ ಧಾತುವಿನ ಮೇಲೆ **ಶುಷಿಚಿಮಿನಾಂ ದೀರ್ಘಶ್ಚ** (ಉ ಸೂ ೩-೧೫೩) ಎಂಬುದರಿಂದ ಕ್ರನ್ ಪ್ರತ್ಯಯ **ಲಶಕ್ವತದ್ಧಿತೇ** ಎಂಬುದರಿಂದ ಆದಿ ಕಕಾರಕ್ಕೆ ಇತ್‌ಸಂಜ್ಞಾ ಬರುವುದರಿಂದ ಲೋಪ ಧಾತುವಿಗೆ ದೀರ್ಘವೆಂದುದರಿಂದ ಶೂರ ಎಂದು ರೂಪವಾಗುತ್ತದೆ ಪ್ರತ್ಯಯ ನಿತ್ತಾದುದರಿಂದ **ಙ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ತ್ವೇಷಃ—ದೀಪ್ತ್ಯರ್ಥವಾದ ತ್ವಿಷ ಧಾತುವಿಗೆ **ನಂದಿಗ್ರಹಪಚಾದಿಭ್ಯಃ**— (ಪಾ. ಸೂ. ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿನ **ಲಘೂಪಧೆಗೆ** ಗುಣ. ಪ್ರತ್ಯಯ ಚಿತ್ತಾದುದರಿಂದ **ಚಿತೇಃ**—(ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ ಸ್ವರ ಬರುತ್ತದೆ.

ಎಪ್ಪತ್ತನೆಯ ಸೂಕ್ತವು ಸಮಾಪ್ತವು



ಎಪ್ಪತ್ತೊಂದನೆಯ ಸೂಕ್ತವು

ಉಪ ಪ್ರೇತಿ ದಶರ್ಚಂ ಸಪ್ತಮಂ ಸೂಕ್ತಂ । ಆತ್ರಾನುಕ್ರಮ್ಯತೇ । ಉಪ ಪ್ರ ದಶೇತಿ । ಋಷಿ-ಶ್ಚಾನ್ಯಸ್ಮಾದಿತಿ ಪರಿಭಾಷಯಾ ಶಕ್ತಿಪುತ್ರಃ ಪರಾಶರ ಋಷಿಃ । ಅನಾದೇಶಪರಿಭಾಷಯಾ ತ್ರಿಷ್ಟುಪ್ । ಪರಮಾಗ್ನೇಯಮೈಂದ್ರಾದಿತಿ ಪರಿಭಾಷಿತತ್ವಾದಗ್ನಿರ್ದೇವತಾ ॥ ಪ್ರಾತರನುವಾಕಸ್ಯಾಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸೀದಮಾದೀನಿ ತ್ರೀಣಿ ಸೂಕ್ತಾನಿ । ಆಥೈತಸ್ಯಾ ಇತಿ ಖಂಡೇ ತಥೈವ ಸೂತ್ರಿತಂ । ಉಪ ಪ್ರ ಜಿನ್ವನ್ನಿತಿ ತ್ರೀಣಿ ಕಾ ತ ಉಪೇತಿರಿತಿ ಸೂಕ್ತೇ । ಆ. ೪-೧೩। ಇತಿ॥ ಆಶ್ವಿನಶಸ್ತ್ರೇಷ್ವಪಿ ಪ್ರಾತರನುವಾ-ಕಾತಿದೇಶಾದಿದಮಾದೀನಿ ತ್ರೀಣಿ ಸೂಕ್ತಾನಿ । ತಥೈವ ಸೂತ್ರ್ಯತೇ । ಏತಯಾಗ್ನೇಯಂ ಗಾಯತ್ರಮುಪ-ಸಂತನುಯಾತ್ । ಪ್ರಾತರನುವಾಕನ್ಯಾಯೇನ । ಆ. ೬-೫॥ ಇತಿ ॥

ಅನುವಾದವು—**ಉಪ ಪ್ರ ಜಿನ್ವನ್** ಎಂಬ ಈ ಸೂಕ್ತವು ಹನ್ನೆರಡನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ಉಪ ಪ್ರ ದಶೇತಿ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಶಕ್ತಿಪುತ್ರನಾದ ಪರಾಶರನು ಋಷಿಯು ತ್ರಿಷ್ಟುಪ್ ಛಂದಸ್ಸು. ಅಗ್ನಿಯು ದೇವತೆಯು. ಪ್ರಾತರನು ವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ತ್ರಿಷ್ಟುಪ್ ಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತವೂ ಮುಂದಿನ ಎರಡು ಸೂಕ್ತಗಳೂ ಉಪಯೋಗಿಸಲ್ಪಡುವವು ಎಂದು ಆಶ್ವಲಾಯನಶ್ರೌತ ಸೂತ್ರದ **ಆಥೈತಸ್ಯಾ** ಎಂಬ ಖಂಡದಲ್ಲಿ **ಉಪ ಪ್ರ ಜಿನ್ವನ್ನಿತಿ ತ್ರೀಣಿ ಕಾ ತ ಉಪೇತಿರಿತಿ ಸೂಕ್ತೇ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೪-೧೩) ಪ್ರಾತರನುವಾಕಸಂಬಂಧವಾದ ಆಶ್ವಿನಶಸ್ತ್ರಮಂತ್ರಪಠನಕ್ಕಾಗಿಯೂ ಈ ಮೂರು ಸೂಕ್ತಗಳ ವಿನಿಯೋಗ ವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಏತಯಾಗ್ನೇಯಂ ಗಾಯತ್ರಮುಪಸಂತನುಯಾತ್ ಪ್ರಾತರನು-ವಾಕನ್ಯಾಯೇನ** ಎಂಬ ಸೂತ್ರದಿಂದ ನಿರ್ದಿಷ್ಟವಾಗಿರುವುದು. (ಆ. ೬-೫).

ಸೂಕ್ತ—೭೧

॥ ಓಂ ॥

॥ ಮಂಡಲ—೧ ॥ ಅನುವಾಕ—೧೨ ॥ ಸೂಕ್ತ—೭೧ ॥

॥ ಅಷ್ಟಕ—೧ ॥ ಅಧ್ಯಾಯ—೫ ॥ ವರ್ಗ—೧೫, ೧೬ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥

॥ ಋಷೀ—ಪಾರಾಶರಃ ಶಾಕ್ತ್ಯಃ ॥

ದೇವತಾ—ಅಗ್ನಿಃ ॥

ಛಂದಃ—ತ್ರಿಷ್ಟುಪ್ ॥

॥ ಸಂಹಿತಾಸ್ವರಃ ॥

ಉಪ॒ ಪ್ರ ಜಿ॑ನ್ವನ್ನು॒ಶತೀ॑ರು॒ಶಂತ॒ಂ ಪತಿ॑ಂ ನ ನಿ॒ತ್ಯಂ ಜ॑ನ॒ಯಃ॑ ಸನೀ॑ಳಾಃ ।
ಸ್ವಸಾ॑ರಃ ಶ್ಯಾ॒ವೀ॒ಮರು॑ಷೀ॒ಮಜು॑ಷ್ಟು॒ಞ್ಚಿ॒ತ್ರಮು॑ಚ್ಛಂ॒ತೀ॒ಮು॒ಷಸ॑ಂ ನ ಗಾ॒ವಃ॑ ॥ ೧ ॥

॥ ಪದಸ್ವರಃ ॥

ಉಪ॑ । ಪ್ರ । ಜಿ॒ನ್ವ॒ನ್ । ಉ॒ಶತೀಃ॑ । ಉ॒ಶಂತ॑ಂ । ಪತಿ॑ಂ । ನ । ನಿ॒ತ್ಯಂ । ಜ॒ನ॒ಯಃ॑ ।
ಸ॒ನ॒ನೀ॑ಳಾಃ ।
ಸ್ವಸಾ॑ರಃ । ಶ್ಯಾ॒ವೀಂ । ಅರು॑ಷೀಂ । ಅಜು॑ಷ್ಟುನ್ । ಚಿ॒ತ್ರಂ । ಉ॒ಚ್ಛಂ॒ತೀಂ ।
ಉ॒ಷಸ॑ಂ । ನ । ಗಾ॒ವಃ॑ ॥ ೧ ॥

॥ ಸಾಯಣಭಾಷ್ಯಂ ॥

ಉಶತೀರುಶತ್ಯಃ ಕಾಮಯಮಾನಾಃ ಸನೀಳಾಃ । ನೀಳೋ ನಿವಾಸಸ್ಥಾನಂ । ಸಮಾನನಿವಾಸಸ್ಥಾನಾಃ । ಏಕಸಾಮ್ನ್ಯವಸ್ಥಾನಾತ್ । ಸ್ವಸಾರ ಇತ್ಯಂಗುಲಿನಾಮ । ಏವಂಭೂತಾ ಅಂಗುಲಯ ಉಶಂತಂ ಕಾಮಯಮಾನಮಗ್ನಿಂ ಜನಯೋ ಜಾಯಾ ನಿತ್ಯಮಸಾಧಾರಣಂ ಪತಿಂ ನ ಭರ್ತಾರಮಿವೋಪ ಪ್ರ ಜಿನ್ವನ್ । ಉಪೇತ್ಯ ಹವಿಷ್ಪ್ರದಾನಾದಿಕರ್ಮಣಾ ಪ್ರೀಣಯಂತಿ । ಪ್ರೀಣಯಿತ್ವಾ ಚ ಚಿತ್ರಂ ಚಾಯನೀಯಂ ಪೂಜನೀಯಂ ತಮಗ್ನಿಮಂಜಲಿಬಂಧನೇನಾಜುಷ್ಪನ್ । ಆಸೇವಂತ । ತತ್ರ ದೃಷ್ಟಾಂತಃ । ಶ್ಯಾವೀಂ ಶ್ಯಾವವರ್ಣಾಂ ರಾತ್ರಿಸಂಬಂಧಾತ್ಕೃಷ್ಣಾಂ ತತ ಉಚ್ಛಂತೀಂ·ಸೂರ್ಯಕಿರಣಸಂಬಂಧಾತ್ತಮೋ ವರ್ಜಯಂತೀಂ ಅತ ಏವಾರುಷೀಮಾರೋಚಮಾನಾಂ ಯದ್ವಾ ಶುಭ್ರರೂಪಯುಕ್ತಾಮುಷಸಂ ನ ಉಷೋದೇವತಾಂ ಗಾವೋ ರಶ್ಮಯೋ ಯಥಾ ಸೇವಂತೇ ತದ್ವತ್ । ಯಥಾ ರಶ್ಮಯ ಉಷಸಾ ನಿತ್ಯಸಂಬದ್ಧಾ ಏವಂ ಸರ್ವೇಷು ಯೆಜ್ಞೇಷ್ವಗ್ನಿಪರಿಚರಣೇನಾಂಗುಲಯೋ ನಿತ್ಯಸಂಬದ್ಧಾ ಇತಿ ತಾತ್ಪರ್ಯಾರ್ಥಃ ॥ ಜಿನ್ವನ್ । ಜಿವಿ ಪ್ರೀಣನಾರ್ಥಃ । ಇದಿತ್ತ್ವಾನ್ನುಮ್ । ಲೇಟ್ಯಡಾಗಮಃ । ಉಶತೀಃ । ವಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ । ಶತುರನುಮ ಇತಿ ನದ್ಯಾ ಉದಾತ್ತತ್ವಂ । ಸ್ವಸಾರಃ । ಅಸು ಕ್ಷೇಪಣ ಇತ್ಯಸ್ಮಾತ್ಸುಷ್ಯಾಸೇರ್ಯುನ್ । ಉ. ೨-೯೭ । ಇತಿ ಋನ್ । ನ ಷಟ್ಸ್ವಸ್ರಾದಿಭ್ಯಃ । ಪಾ. ೪-೧-೧೦ । ಇತಿ ಙೀಪ್ರತಿಷೇಧಃ । ನಿತ್ತ್ವಾದಾದ್ಯುದಾತ್ತತ್ವಂ । ಅರುಷೀಂ । ಅರುಷಮಿತಿ ರೂಪನಾಮ । ಋ ಗತೌ । ಋಹನಿಭ್ಯಾಮುಷಚ್ । ಉ. ೪-೭೩ । ಛಂದಸೀವನಿಪಾವಿತಿ ಮತ್ವರ್ಥೀಯ ಈಕಾರಃ । ವ್ಯತ್ಯಯೇನಾದ್ಯುದಾತ್ತತ್ವಂ । ಅಜುಷ್ಪನ್ । ಜುಷೀ ಪ್ರೀತಿಸೇವನಯೋಃ । ತೌದಾದಿಕಃ । ಲಙ್ ವ್ಯತ್ಯಯೇನ ಪರಸ್ಮೈಪದಂ । ರುಡಿತ್ಯನುವೃತ್ತೌ ಬಹುಲಂ ಛಂದಸೀತ್ಯಂತಾದೇಶಸ್ಯ ರುಡಾಗಮಃ ॥

॥ ಪ್ರತಿಪದಾರ್ಥ ॥

ಉಶತೀಃ--ಪ್ರೀತಿಯುಕ್ತವಾದ । ಸನೀಳಾಃ—(ಒಂದೇ ಕೈಯಲ್ಲಿರುವುದರಿಂದ) ಸಮಾನವಾಸಸ್ಥಾನವುಳ್ಳ । ಸ್ವಸಾರಃ—ಕೈಬೆರಳುಗಳು । ಉಶಂತಂ—ವಿಶ್ವಾಸಯುಕ್ತನಾದ (ಅಗ್ನಿಯನ್ನು) । ಜನಯಃ—ಪತ್ನಿಯರು । ನಿತ್ಯಂ—ಅಸಾಧಾರಣನಾದ । ಪತಿಂ ನ—ಭರ್ತೃವಿನಂತೆ । ಉಪ ಪ್ರ ಜಿನ್ವನ್—ಸಮೀಪಿಸಿ (ಹವಿರಾದಿಗಳಿಂದ) ಪ್ರೀಣಿಸುತ್ತವೆ । ಚಿತ್ರಂ--ಪೂಜ್ಯನಾದ (ಅಗ್ನಿಯನ್ನು) । ಶ್ಯಾವೀಂ—(ಮೊದಲು) ಶ್ಯಾವವರ್ಣಯುಕ್ತವಾದ । ಉಚ್ಛಂತೀಂ—(ಅನಂತರ ಸೂರ್ಯಕಿರಣ ಸಂಬಂಧದಿಂದ) ತಮಸ್ಸನ್ನು ತ್ಯಜಿಸುತ್ತಿರುವ । ಅರುಷೀಂ—(ಆದುದರಿಂದಲೇ) ಪ್ರಕಾಶಿಸುತ್ತಿರುವ (ಶುಭ್ರವಾದ) । ಉಷಸಂ—ಉಷಸ್ಸನ್ನು । ಗಾವಃ ನ—ಕಿರಣಗಳಂತೆ । ಅಜುಷ್ಪನ್—(ಅಂಜಲಿಬಂಧಾದಿಗಳಿಂದ) ಸೇವಿಸಿದವು ॥

॥ ಭಾವಾರ್ಥ ॥

ಕೈಬೆರಳುಗಳು ವಿಶ್ವಾಸಯುಕ್ತನಾದ, ಪೂಜ್ಯನಾದ, ಅಗ್ನಿಯನ್ನು, ಪ್ರೇಮ-(ಭಕ್ತಿ) ಪುರಸ್ಸರವಾಗಿ ಹವಿರಾದಿಗಳಿಂದ ಪೂಜಿಸಿ, ಮೊದಲು ಶ್ಯಾಮವರ್ಣವಾಗಿದ್ದು, (ಅನಂತರ ಸೂರ್ಯಕಿರಣಸಂಬಂಧದಿಂದ) ಮುಂದಪ್ರಕಾಶವುಳ್ಳ

ದ್ದಾಗಿ, ಕಡೆಗೆ ಶುಭ್ರವರ್ಣವನ್ನು ಪಡೆಯುವ ಉಷಸ್ಸಿನ್ನು ಕಿರಣಗಳು ಹೇಗೆ ಸತತವಾಗಿ ಸೇವಿಸುತ್ತವೋ ಹಾಗೆ, ಅಗ್ನಿಯನ್ನು, ಅಂಜಲಿಬಂಧಾದಿಗಳಿಂದ ಸೇವಿಸುತ್ತವೆ.

English Translation

The contiguous fingers, loving the affectionate Agni, as wives love their own husbands, please him (with offered oblations), and honour him, who is entitled to honour (with gesticulations) as the rays of light (are assiduous in the service) of the dawn, which is (at first) dark, then glimmering, and (finally) radiant.

॥ ವಿಶೇಷನಿಷಯಗಳು ॥

ಭಕ್ತಶ್ರದ್ಧೆಗಳಿಂದ ಕೂಡಿದ ಬೆರಳುಗಳ, ಅಗ್ನಿಗೆ ಮಾಡುವ ಪೂಜೆಯನ್ನೂ ಅಗ್ನಿಯೊಂದಿಗೆ ಅವಕ್ಕಿರುವ ನಿತ್ಯವೂ ಶ್ರೇಷ್ಠವಾದುದೂ ಆದ ಸಂಬಂಧವನ್ನು ವಿವರಿಸಿದೆ. ಇವನ್ನು ಪ್ರೇಮಾತಿಶಯದಿಂದ ಕೂಡಿದ ಪತ್ನಿಯು ಪತಿಗೆ ಮಾಡುವ ಉಪಚಾರಕ್ಕೂ, ಸ್ವತೇಜಸ್ಸಿನಿಂದಲೇ ಬೆಳಗುತ್ತಿರುವ ಉಷಸ್ಸಿಗೆ ಕಿರಣಗಳು ಇನ್ನು ಹೆಚ್ಚು ಕಾಂತಿಯನ್ನು ಕೊಡುತ್ತಾ ಅವಳಿಗೆ ಮಾಡುವ ಸೇವೆಗೂ ಹೋಲಿಸಿದೆ **ಯಥಾ ರಶ್ಮಯ ಉಷಸಾ ನಿತ್ಯಸಂಬದ್ಧಾ ಇತಿ ತಾತ್ಪರ್ಯಾರ್ಥಃ** । ಯಾವ ರೀತಿ ಉಷಸ್ಸಿಗೂ ಕಿರಣಗಳಿಗೂ ನಿತ್ಯಸಂಬಂಧವಿದೆಯೋ ಅಗರಂತೆಯೇ ಬೆಳಗುಗಳಿಗೂ ಅಗ್ನಿಗೂ ಸಹ ಯಜ್ಞಗಳಲ್ಲಿ ನಿತ್ಯವಾಗಿ ಉಪಚಾರಾದಿಗಳನ್ನು ಸಮರ್ಪಿಸುವುದರಿಂದ ನಿತ್ಯಸಂಬಂಧವಿದೆಯೆಂದು ತಾತ್ಪರ್ಯಾರ್ಥವು ಎಂದು ಸಾಯಣರು ವಿವರಿಸುತ್ತಾರೆ

ಸನೀಳಾಃ—ಗಯಃ, ಕೈದರಃ, ಇತ್ಯಾದಿ ೨೨ **ಗೃಹನಾಮಗಳಲ್ಲಿ** ಪರಿತವಾಗಿರುವುದರಿಂದ (ನಿ ೩–೧೩) **ನೀಳ** ಶಬ್ದಕ್ಕೆ ಗೃಹವೆಂದರ್ಥ. ಗೃಹಕ್ಕೆ ಪರ್ಯಾಯವಾಗಿರುವ ವಾಸಸ್ಥಾನಗಳನ್ನು ಹೇಳುವ ಸನ್ನಿವೇಶಗಳಲ್ಲೂ **ನೀಳವೆಂಬ** ಪದವನ್ನೇ ಅನೇಕಕಡೆ ಉಪಯೋಗಿಸಿದೆ ಇಲ್ಲಿ **ಸನೀಳಾಃ** ಎಂದರೆ ಸಮಾನವಾದ ವಾಸಸ್ಥಾನವುಳ್ಳವು ಎಂದು ಅಂಗುಲಿಗಳಿಗೆ ವಿಶೇಷಣವಾಗಿ ಉಪಯೋಗಿಸಿದೆ ಎಲ್ಲಕ್ಕೂ ಸಾಧಾರಣವಾದ ಒಂದೇ ಕೈಯಿನಲ್ಲಿ ಜೊತೆಯಾಗಿರುವುವು ಎಂದರ್ಥ. ಹೀಗೆಯೇ ಋ. ಸಂ ೮–೭೨–೨. ಇತ್ಯಾದಿ ಋಕ್ಕುಗಳಲ್ಲಿ **ಸನೀಳಾಭಿಃ, ಸನೀಳಾಃ,** ಎಂದು ಅಂಗುಲಿಗಳಿಗೆ ವಿಶೇಷಣವಾಗಿ ಉಪಯೋಗಿಸಿದೆ. ಸಾಧಾರಣವಾಗಿ **ಮರುತ್ತುಗಳು** ಯಾವಾಗಲೂ ಜೊತೆಯಲ್ಲಿಯೇ ವಾಸಮಾಡುವುದರಿಂದ ಅವರಿಗೂ ವಿಶೇಷಣವಾಗಿ ಪ್ರಯೋಗಿಸಿದೆ ೧–೧೬೫–೧ ೭–೫೬–೧ ಇತ್ಯಾದಿ ಸ್ಥಳಗಳಲ್ಲಿ **ಮರುತ್ತುಗಳನ್ನು** ವರ್ಣಿಸುತ್ತದೆ

ಸ್ವಸಾರಃ—ಅಗ್ರುವಃ, ಅಣ್ವ್ಯಃ ಇತ್ಯಾದಿ ೨೨ ಅಂಗುಲಿನಾಮಗಳಲ್ಲಿ ಪರಿತವಾಗಿರುವುದರಿಂದ (೩–೯) ಬೆರಳುಗಳೆಂದರ್ಥ. **ಸ್ವಯಮೇವ ಸರಂತ್ಯಂಗುಲಯಃ** । ಅಗ್ನಿಕಾರ್ಯಕ್ಕಾಗಿ ತಾವಾಗಿಯೇ ಚಲಿಸುತ್ತವೆಯಾದ್ದರಿಂದ

ಸ್ವಸಾರಃ ಎಂದಾಗಿದೆ. **ಸವೀಳಾಃ, ಸ್ವಸಾರಃ** ಎಂಬ ಪದಗಳೂ ಬೆರಳುಗಳಿಗೆ ಸಾಧಾರಣವಾಗಿ ಜೊತೆಯಲ್ಲಿಯೇ ಉಪಯೋಗಿಸುವ ವಿಶೇಷಣಗಳು.

ಜನಯಃ—ಜನಯಃ ಇತಿ ದೇವಾನಾಂ ಪತ್ನ್ಯ ಉಚ್ಯಂತೇ–ದೇವಾನಾಂ ವೈ ಪತ್ನೀರ್ಜನಯಃ–ಇತಿ ಶ್ರುತೇಃ। ದೇವಪತ್ನಿಯರಿಗೆ **ಜನಯಃ** ಎಂದು ಪ್ರಸಿದ್ಧವಾಗಿದೆಯೆಂದು ಸಾಯಣರು ೧–೬೨–೧೦ ನೇ ಋಕ್ಕನ್ನು ವಿವೆರಿಸುವಾಗ ತಿಳಿಸುತ್ತಾರೆ. ಆದರೆ ಅವರು ಕೊಡುವ ಉದಾಹರಣೆಯು ಯಾವ ಶ್ರುತಿವಾಕ್ಯವೆಂದು ತಿಳಿಸಲು ಸರಿಯಾದ ಆಧಾರವನ್ನು ಕೊಟ್ಟಿಲ್ಲ. **ಜನಯಃ** ಎಂದರೆ ದೇವಪತ್ನಿಯರೇ ಆಗಬೇಕೆಂಬ ನಿಯಮವಿಲ್ಲ. ಋಕ್ಸಂಹಿತೆಯಲ್ಲಿ **ಉತ್ಪಾದಯಿತ್ರ್ಯಃ ಪತ್ನ್ಯಃ** ಸಂತಾನವನ್ನು ಪಡೆಯತಕ್ಕ ಪತ್ನಿಯರು ಎಂದು ಸಾಧಾರಣವಾಗಿ ದೇವಮಾನವರೆಲ್ಲರಿಗೂ ಸಮಾನವಾಗಿ ಉಪಯೋಗಿಸಿದೆ ಉದಾಹರಣೆಗೆ—

ಅಭ್ರಾತರೋ ನ ಯೋಷಣೋ ನ್ಯಂತಃ ಪತಿರಿಪೋ ನ ಜನಯೋ ದುರೇವಾಃ ।

(ಋ. ಸಂ. ೪–೫–೫)

ಅನಶ್ರವೋ೭ನಮಿವಾಃ ಸುರತ್ನಾ ಆ ರೋಹಂತು ಜನಯೋ ಯೋನಿಮಗ್ರೇ ।

(ಋ ಸಂ. ೧೦–೧೮೫–೭)

ಇತ್ಯಾದಿ ಸ್ಥಳಗಳಲ್ಲೆಲ್ಲಾ ಮಾನವಸ್ತ್ರೀಗಳ ಪರ್ಯಾಯವಾಗಿಯೇ **ಜನಯಃ** ಎಂಬ ಪದದ ಉಪಯೋಗವಿದೆ. ಇಲ್ಲಿಯೂ ಸಹ **ಜನಯಃ–ಜಾಯಾಃ** ಎಂದು ಸಾಮಾನ್ಯವಾಗಿ ಪತ್ನಿಯರು ಎಂದರ್ಥ.

ಜಿನ್ವನ್—ಜಿನ್ವತಿಃ ಪ್ರೀತಿಕರ್ಮಾ—ಪ್ರೀತಿಸು ಎನ್ನುವ ಅರ್ಥದಲ್ಲಿ ಉಪಯೋಗಿಸಿವೆ. (ನಿ. ೬–೨೨) ಯಾವ ರೀತಿ ಪತ್ನಿಯು ಪತಿಯನ್ನು ಪ್ರೀತಿಸುತ್ತಾ ಪ್ರೇಮದಿಂದ ಸಮಿಾಪಿಸಿ ಉಪಚರಿಸುತ್ತಾಳೆಯೋ ಆದರಂತೆ ಅಂಗುಲಿಗಳು ಭಕ್ತಿಯಿಂದ ಅಗ್ನಿಯನ್ನು ಸಮಿಾಪಿಸಿ ಉಪಚರಿಸುತ್ತವೆಯೆಂದರ್ಥ ಆದರೆ ಇದು ಬರೀ ಸಾಧಾರಣವಾದ ಪ್ರೀತಿಯಲ್ಲ ಇದರಲ್ಲಿ ಪೋಷಣಾರ್ಥವೂ ಅಡಕವಾಗಿದೆ ಒಟ್ಟಿನಲ್ಲಿ ಹರ್ಷದಾಯಕವಾದುದೂ ಪುಷ್ಟಿದಾಯಕವಾದುದೂ ಆದ ಪ್ರೀತಿಯೆಂದು ತೋರಿಸಲು ನಿರುಕ್ತಕಾರರು ಅತ್ಯಂತ ಉಚಿತವಾದ ಉದಾಹರಣೆಯನ್ನು ಕೊಡುತ್ತಾರೆ. (ನಿ. ೬–೨೨) ಋಕ್ಸಂಹಿತೆಯ—

ಭೂಮಿಂ ಪರ್ಜನ್ಯಾ ಜಿನ್ವಂತಿ ದಿವಂ ಜಿನ್ವಂತ್ಯಗ್ನಯಃ ।

(ಋ ಸಂ. ೧–೧೬೪–೫೧)

ಎಂಬ ಋಕ್ಕನ್ನು ಉದಹರಿಸಿ ಯಾವ ರೀತಿ ವೃಷ್ಟಿಯು ಭೂಮಿಗೆ ಹರ್ಷದಾಯಕವೂ ಪುಷ್ಟಿದಾಯಕವೂ ಆಗಿರುವುದೋ, ಯಾವ ರೀತಿ ಅಗ್ನಿಗಳು ದ್ಯುಲೋಕಕ್ಕೆ ಪ್ರೀತಿಕರಗಳಾಗಿರುವುವೋ, ಆರೀತಿಯ ಪ್ರೀತಿಯನ್ನು ತೋರಿಸುವಾಗ **ಜಿನ್ವಂತಿ** ಎಂಬ ಪದಪ್ರಯೋಗವು ಸಾಧುವಾಗುತ್ತದೆಂದು ತೋರಿಸುತ್ತಾರೆ. ಇಲ್ಲಿಯೂ ಸಹ ಅಂಗುಲಿಗಳು ಅಗ್ನಿಗೆ ಹರ್ಷದಾಯಕವೂ ಪುಷ್ಟಿದಾಯಕವೂ ಆದ ಪ್ರೀತಿಯುಳ್ಳವು ಎಂದರ್ಥ. ಪತಿಪತ್ನಿಯರ ಪ್ರೀತಿಯ ಉದಾಹರಣೆಯೂ ಅತ್ಯಂತ ಸಮಂಜಸವಾಗಿದೆ.

ಉಚ್ಛಂತೀಂ—ನೈಶಂ ತಮಃ ವರ್ಜಯಂತೀಂ । ರಾತ್ರಿಯ ಕತ್ತಲೆಯನ್ನು ದೂರಕ್ಕೆ ಓಡಿಸುತ್ತಾ ಇರುವ ಉಷಸ್ಸನ್ನು **ಗಾವೋ ನ** ಕಿರಣಗಳು ಸೇವಿಸುವಂತೆ ಎಂದು ಅಂಗುಳಿಗಳ ಸೇವೆಗೆ **ಉಪಮಾನವಾಗಿ** (**ಉಚ್ಛಂತೀಂ** ಎಂಬ ಪದದ ವಿವರಣೆಯನ್ನು ೧-೯೨-೬ ನೇ ಋಕ್ಕಿನ ವಿಶೇಷವಿಷಯದಲ್ಲಿ ನೋಡಿ)

॥ ವ್ಯಾಕರಣಪ್ರಕ್ರಿಯಾ ॥

ಜೀನ್ವನ್—ಜಿವ ಧಾತುವು ಪ್ರೀಣನ (ಸಂತೋಷ) ಎಂಬರ್ಥದಲ್ಲಿದೆ **ಇದಿತೋ ನುಮ್ ಧಾತೋಃ** ಎಂಬುದರಿಂದ ನುಮಾಗಮ ಲೇಟ್‌ಪ್ರಥಮಪುರುಷ ಬಹುವಚನದಲ್ಲಿ **ಝೋಂತಃ** ಎಂಬುದರಿಂದ ಅಂತಾದೇಶ **ಇತಶ್ಚ ಲೋಪಃ**—ಸೂತ್ರದಿಂದ ಅಂತ್ಯ ಇಕಾರಕ್ಕೆ ಲೋಪ ಸಂಯೋಗಾಂತಲೋಪದಿಂದ ಅಂತ್ಯ ತಕಾರಲೋಪ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಉಶತೀಃ –ವಶ ಕಾಂತೌ ಧಾತು ಶತೃಪ್ರತ್ಯಯ. ಸ್ತ್ರೀತ್ವದಲ್ಲಿ **ಉಗಿತಶ್ಚ** ಎಂಬುದರಿಂದ ಙೀಪ್. ಇದಕ್ಕೆ ಜಸ್ ಪರವಾದಾಗ **ವಾ ಛಾಂದಸಿ** ಎಂಬುದರಿಂದ ಪೂರ್ವಸವರ್ಣದೀರ್ಘ ನುಮ್‌ರಹಿತವಾದ ಶತೃವಿನ ಪರದಲ್ಲಿ ಙೀಪ್ ಬಂದುದರಿಂದ **ಶತುರನುನಾಸಿಕಾದ್ಯಜಾದೀ** (ಪಾ ಸೂ ೬-೬-೧೭೩) ಎಂಬುದರಿಂದ ನದೀ ಸಂಜ್ಞೆಯುಳ್ಳ ಈಕಾರಕ್ಕೆ ಉದಾತ್ತಸ್ವರ ಬರುತ್ತದೆ

ನಿತ್ಯಂ—ಅವ್ಯಯಾತ್ ತ್ಯಪ್ (ಪಾ. ಸೂ ೪-೩-೧೦೪) ಎಂದು ಅಧಿಕೃತವಾಗಿರುವಾಗ **ತ್ಯಬ್ನೇರ್ಧ್ರುವ ಇತಿ ವಕ್ತವ್ಯಮ್** (ವಾ. ೩೭೯೦) ಎಂಬ ವಚನದಿಂದ ಶಾಶ್ವತ ಎಂಬರ್ಥದಲ್ಲಿ ನಿ ಎಂಬ ಅವ್ಯಯಕ್ಕೆ ತ್ಯಪ್ ಪ್ರತ್ಯಯ ಪಿತ್ತಾದುದರಿಂದ ಅದು ಅನುದಾತ್ತವಾಗುವುದರಿಂದ ಅವ್ಯಯ ಸ್ವರ ಉಳಿಯುತ್ತದೆ

ಸ್ವಸಾರಃ—ಅಸು ಕ್ಷೇಪಣೇ ಧಾತು ದಿನಾದಿ ಇದಕ್ಕೆ **ಸುಞ್ಯಸೇರ್ಋನ್** (ಉ. ಸೂ ೨-೬೫) ಎಂಬುದರಿಂದ ಸುಞ್ ಉಪಸರ್ಗವಾಗಿರುವಾಗ ಋನ್ ಪ್ರತ್ಯಯ ಸ್ವಸೃ ಶಬ್ದವಾಗುತ್ತದೆ ಸ್ತ್ರೀತ್ವದಲ್ಲಿ ಋದಂತವಾದುದರಿಂದ ಙೀಪ್ ಪ್ರಾಪ್ತವಾದರೆ **ನ ಷಟ್ ಸ್ವಸೃಭ್ಯಾದಿಭ್ಯಃ** (ಪಾ. ಸೂ. ೪-೧-೧೦) ಎಂಬುದರಿಂದ ಙೀಪ್ ಪ್ರತಿಷೇಧ ಬರುತ್ತದೆ ಪ್ರತ್ಯಯ ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಪ್ರಥಮಾ ಬಹುವಚನದಲ್ಲಿ ಜಸ್ ಪರವಾದಾಗ **ಋತೋಜಿ ಸರ್ವನಾಮಸ್ಥಾನಯೋಃ** (ಪಾ ಸೂ. ೬-೩-೧೧೦) ಎಂಬುದರಿಂದ ಗುಣ **ಅಸ್‌ತೃನ್‌ತೃಚ್**—ಸೂತ್ರದಿಂದ ಉಶಧಾದೀರ್ಘ ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ ಸ್ವಸಾರಃ ಎಂದು ರೂಪವಾಗುತ್ತದೆ.

ಆರುಷೀಮ್—ಅರುಷ ಎಂಬುದು ರೂಪದ ಹೆಸರು ಋಗತೌ ಧಾತು **ಋಹನಿಭ್ಯಾಮುಷಚ್** (ಉ ಸೂ. ೪-೫೧೩) ಎಂಬುದರಿಂದ ಇದಕ್ಕೆ ಉಷಚ್ ಪ್ರತ್ಯಯ ಅರುಷಮಸ್ಯ ಅಸ್ತಿ ಎಂದು ಮತ್ವರ್ಥ ವಿವಕ್ಷೆ ಮಾಡುವಾಗ **ಛಂದಸೀವನಿಪೌ** ಎಂಬುದರಿಂದ ಮತ್ವರ್ಥಕವಾದ ಈಕಾರ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವು ಬರುತ್ತದೆ ಪ್ರತ್ಯಯಸ್ವರಬಂದ ಅಂತೋದಾತ್ತವು ಪ್ರಾಪ್ತವಾದರೂ **ವ್ಯತ್ಯಯೋ ಬಹುಲಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದ.

ಅಜುಷ್ಟನ್—ಜುಷೀ ಪ್ರೀತಿಸೇವನಯೋಃ ಧಾತು. ತುದಾದಿ. ಲಙ್ ಪ್ರಥಮಪುರುಷ ಬಹುವಚನ ವಿವಕ್ಷಾ ಮಾಡಿದಾಗ **ವ್ಯತ್ಯಯೋ ಬಹುಲಂ** ಎಂಬುದರಿಂದ ಪರಸ್ಮೈಪದಪ್ರತ್ಯಯ ಬರುತ್ತದೆ. **ಝೋಂತಃ** ಎಂಬುದರಿಂದ ಅಂತಾದೇಶ. **ಇತಶ್ಚ** ಸೂತ್ರದಿಂದ ಅಂತ್ಯ ಇಕಾರಕ್ಕೆ ಲೋಪ **ತೀಜುೋ ರುಟ್** (ಪಾ ಸೂ.೭-೧-೫) ಎಂಬುದರಿಂದ ರುಟ್ ಎಂಬುದು ಅನುವೃತ್ತವಾಗುವಾಗ **ಬಹುಲಂ ಛಂದಸಿ** (ಪಾ.ಸೂ.೭-೧-೮) ಎಂಬುದರಿಂದ ಈ ಧಾತುವಿನ ಪರದಲ್ಲಿರುವ ಅಂತಾದೇಶಕ್ಕೂ ರುಟಾಗಮ. ಅಂಗಕ್ಕೆ ಅಡಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

॥ ಸಂಹಿತಾಸಾರಃ ॥

ವೀಳು ಚಿದ್ದೃಳ್ಹಾ ಪಿತರೋ ನ ಉಕ್ಥೈರದ್ರಿಂ ರುಜನ್ನಂಗಿರಸೋ ರವೇಣ ।
ಚಕ್ರುರ್ದಿವೋ ಬೃಹತೋ ಗಾತುಮಸ್ಮೇ ಅಹಃ ಸ್ವರ್ವಿದುಃ ಕೇತುಮುಸ್ರಾಃ ॥ ೨ ॥

॥ ಪದಸಾರಃ ॥

ವೀಳು । ಚಿತ್ । ದೃಳ್ಹಾ । ಪಿತರಃ । ನಃ । ಉಕ್ಥೈಃ । ಅದ್ರಿಂ । ರುಜನ್ । ಅಂಗಿರಸಃ । ರವೇಣ ।
ಚಕ್ರುಃ । ದಿವಃ । ಬೃಹತಃ । ಗಾತುಂ । ಅಸ್ಮೇ ಇತಿ । ಅಹರಿತಿ । ಸ್ವಃ । ವಿವಿದುಃ । ಕೇತುಂ । ಉಸ್ರಾಃ ॥ ೨ ॥

॥ ಸಾಯಣಭಾಷ್ಯಂ ॥

ನೋಽಸ್ಮಾಕಂ ಪಿತರೋಽಂಗಿರಸ ಏತತ್ಸಂಜ್ಞಾ ಋಷಯ ಉಕ್ಥೈಃ ಶಸ್ತ್ರೈರಗ್ನಿಂ ಸ್ತುತ್ವಾ ವೀಳು ಚಿದ್ಬಳ್ಹಾ । ವೀಳ್ವಿತಿ ಬಲನಾಮ । ಬಲವಂತಂ ದೃಢಾಂಗಮಸ್ಯದ್ರಿಮತ್ತಾರಂ ಪಣಿನಾಮಾನಮಸುರಂ ರವೇಣ ಸ್ತುತಿಶಬ್ದಮಾತ್ರೇಣೈವ ರುಜನ್ । ಅಭಂಜನ್ । ತೈಃ ಸ್ತುತೋಽಗ್ನಿಸ್ತಮಸುರಂ ಹತವಾನಿತ್ಯರ್ಥಃ । ಕಿಂಚ ಬೃಹತೋ ಮಹತೋ ದಿವೋ ದ್ಯುಲೋಕಸ್ಯ ಗಾತುಂ ಮಾರ್ಗಮಸ್ಮೇ ಅಸ್ಮಾಕಂ ಚಕ್ರುಃ । ಕೃತವಂತಃ । ಅವರಕಸ್ಯಾಸುರಸ್ಯಾಗ್ನಿನಾ ಹತತ್ವಾತ್ । ಮಾರ್ಗಂ ಕೃತ್ವಾ ಚ ಸ್ವಃ ಸುಷ್ಠುರಣೀಯಮಸುರರಾಹಿತ್ಯೇನ ಸುಖೇನ ಪ್ರಾಪ್ಯಮಹರ್ದಿವಸಂ ವಿವಿದುಃ । ಅಜಾನನ್ ಲಬ್ಧವಂತೋ ವಾ । ತಥಾ ಕೇತುಮನ್ಹ್ನಾಂ ಕೇತಯಿತಾರಂ ಜ್ಞಾಪಯಿತಾರಮಾದಿತ್ಯಮುಸ್ರಾಃ ಪಣಿನಾಪಹೃತಾ ಗಾಶ್ಚ ವಿವಿದುರಿತ್ಯನುಷಂಗಃ ॥ ವೀಳು । ಸುಪಾಂ ಸುಲುಗಿತಿ ವಿಭಕ್ತೇರ್ಲುಕ್ । ದೃಳ್ಹಾ । ದೃಢಃ ಸ್ಥೂಲಬಲಯೋಃ । ಪಾ.ಕೃ.೭-೨-೨೦ । ಇತಿ ನಿಪಾತಿತಃ । ಸುಪಾಂ ಸುಲುಗಿತಿ ಡಾದೇಶಃ । ರುಜನ್ । ರುಜೋ ಭಂಗೇ । ತೌದಾದಿಕಃ । ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ । ವಿವಿದುಃ । ವಿದ ಜ್ಞಾನೇ ವಿದ್ಲೃ ಲಾಭ ಇತಿ ವಾ । ಲಿಟ್ಯುಸಿ ರೂಪಂ ॥

॥ ಪ್ರತಿಪದಾರ್ಥ ॥

ನಃ—ನಮ್ಮ । **ಪಿತರಃ, ಆಂಗಿರಸಃ**—ಪಿತೃಗಣಕ್ಕೆ ಸೇರಿದ ಆಂಗಿರಸರೆಂಬ ಋಷಿಗಳು । **ಉಕ್ಥೈಃ**—ಶಸ್ತ್ರಗಳಿಂದ (ಸ್ತುತಿಗಳಿಂದ ಅಗ್ನಿಯನ್ನು ಸ್ತುತಿಸಿ) । **ವೀಳು**—ಬಲಿಷ್ಠನಾದ । **ಅದ್ರಿಂ**—ಭಕ್ಷಕನಾದ (ಪಣಿ ನಾಮಕ ಅಸುರನನ್ನು) । **ದೃಳ್ಹಾ ಚಿತ್**—ದೃಢಾಂಗನಾಗಿದ್ದರೂ । **ರವೇಣ**—(ಸ್ತೋತ್ರದ) ಶಬ್ದ(ಮಾತ್ರ)ದಿಂದ । **ರುಜನ್**—ನಾಶಮಾಡಿದರು । **ಬೃಹತಃ**—ದೊಡ್ಡದಾದ (ಮಹಿಮೋಪೇತವಾದ) । **ದಿವಃ**—ಸ್ವರ್ಗಕ್ಕೆ । **ಗಾತುಂ**—ಮಾರ್ಗವನ್ನು । **ಅಸ್ಮೇ**—ನಮಗಾಗಿ । **ಚಕ್ರುಃ**—ಮಾಡಿದರು । **ಸ್ವಃ**—ಸುಖವಾಗಿ ಪ್ರಾಪ್ಯವಾದ । **ಅಹಃ**—ದಿವಸವನ್ನು । **ವಿವಿದುಃ**—ತಿಳಿದರು । **ಕೇತುಂ**—ದಿವಸವನ್ನು ಜ್ಞಾಪಿಸುವ (ಆದಿತ್ಯನನ್ನು) । **ಉಸ್ರಾಃ**—(ಪಣಿಯಿಂದ ಅಪಹೃತವಾದ) ಗೋವುಗಳನ್ನೂ । (**ವಿವಿದುಃ**—ಪಡೆದರು)

॥ ಭಾವಾರ್ಥ ॥

ನಮ್ಮ ಪಿತೃಗಣಕ್ಕೆ ಸೇರಿದ ಆಂಗಿರಸರೆಂಬ ಋಷಿಗಳು ಅಗ್ನಿಯನ್ನು ಉಕ್ಥಗಳಿಂದ ಸ್ತುತಿಸಿ, ಬಲಿಷ್ಠನೂ, ದೃಢಾಂಗನೂ, ಆದ ಪಣಿಯೆಂಬ ಅಸುರನನ್ನು ವಧೆಮಾಡಿಸಿ, ಸ್ವರ್ಗಮಾರ್ಗವನ್ನು ನಮಗೆ ಸುಲಭಮಾಡಿಕೊಟ್ಟರು, ಮತ್ತು ಸುಖವಾಗಿ ಪ್ರಾಪ್ಯವಾದ ದಿವಸವನ್ನೂ, (ಅಂತರಿಕ್ಷವನ್ನೂ ಆವರಿಸಿದ್ದ ಪಣಿಯು ನಾಶವಾದುದರಿಂದ) ಆದಿತ್ಯನನ್ನೂ ಮತ್ತು (ಅವರಿಂದ ಅಪಹೃತವಾದ) ಗೋವುಗಳನ್ನೂ ಸಂಪಾದಿಸಿಕೊಟ್ಟರು

English Translation.

Our forefathers, the Angirasas, by their praises (of Agni), terrified the strong and daring devourer, (Pani) by the sound; they made for us a

path to the vast heaven, and obtained accessible day, the ensign of day, (Aditya), and the cows (that had been stolen).

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ **ಪಣಿ**ಯೆಂಬ ಅಸುರನನ್ನು ಕೊಂದ **ಅಗ್ನಿಯ** ಪ್ರಭಾವವು ವರ್ಣಿತವಾಗಿದೆ. ಸಾಧಾರಣವಾಗಿ ಈ ಮಹತ್ಕಾರ್ಯವು ಇಂದ್ರನ ಮಹಿಮೆಗೆ ಸೇರಿದುದೆಂದು ಪ್ರಸಿದ್ಧವಾಗಿದ್ದರೂ ಸಹ ಒಂದೊಂದು ಸಲ ಅಗ್ನಿಯೂ ಈ ಮಹತ್ಕಾರ್ಯವನ್ನು ಸಾಧಿಸಿ ಆರ್ಯರಿಗೆ ಸುಖವಾದ ಜೀವನವನ್ನು ಕಲ್ಪಿಸಿದನು ಎಂದು ವರ್ಣಿಸಿದೆ. ಉದಾಹರಣೆಗೆ—

ನ್ಯಕ್ರತೂನ್ರ್ಗೃಥಿನೋ ಮೃಧ್ರವಾಚಃ ಪಣೇರಶ್ರದ್ಧಾ ಅವೃಧಂ ಅಯಜ್ಞಾನ್ ।
ಪ್ರಪ್ರ ತಾನ್ಸೂರಿರ್ನಿವಿನಾಯ ಪೂರ್ವಕೃಕಾರಾಸರಾ ಅಯಜ್ಯೂನ್ ॥

(ಋ. ಸಂ ೭-೬-೩)

ಎಂಬ ಋಕ್ಕಿನಲ್ಲಿ ಪಣಿಗಳನ್ನು ನಾಶಮಾಡಿದ ಪರಾಕ್ರಮವನ್ನು ವರ್ಣಿಸಿ, ಮುಂದಕ್ಕೆ ಆ ಸಂಹಾರದಿಂದ ಯಜ್ಞಕರ್ತರಾದ ಋಷಿಗಳಿಗೆ ಆದ ಉಪಕಾರವನ್ನು ಮರ್ಣಿಸಿದೆ ಈ ಋಕ್ಕಿನಲ್ಲಿಯೂ ಅದೇ ಸಂದರ್ಭದ ಸ್ತುತಿಯಿದೆ.

ವೀಳು—ಓಜಃ, ಸಾಜಃ, ಶವಃ—ಇತ್ಯಾದಿ ೩೮ ಬಲನಾಮಗಳಲ್ಲಿ ಪರಿತವಾಗಿರುವುದರಿಂದ (ನಿ ೩-೯) **ವೀಳು** ಶಬ್ದಕ್ಕೆ ಬಲವೆಂದು ಹೆಸರು.

ದೃಳ್ಹಾ—ದೃಢಸ್ಥೂಲಬಲಯೋಃ । ದೃಢವಾದುದೂ ಸಾಮಾನ್ಯವಾಗಿ ಕುಗ್ಗದಿರುವುದೂ ಆದ ಶಕ್ತಿ. **ವೀಳು ದೃಳ್ಹಾ ಚಿತ್—**ಎಂದರೆ ಅತ್ಯಂತ ಬಲಿಷ್ಠನಾಗಿದ್ದಾಗ್ಯೂ ಸಹ ನಮ್ಮ ಪಿತೃಗಳು ಅಗ್ನಿಯ ಸಹಾಯದಿಂದ ರಾಕ್ಷಸನನ್ನು ಸಂಹರಿಸಿದರು ಎಂದರ್ಥ

ಅದ್ರಿಂ—ಅದ್ರಿರಾದೃಣಾತ್ಯೇತೇನ ಅಪಿ ವಾ ಅತ್ತೇಃ ಸ್ಯಾತ್ (ನಿ.೪-೪)ತಿನ್ನು ಎಂದರ್ಥವನ್ನು ಕೊಡುವ **ಅದ್** ಧಾತುವಿನಿಂದ **ಅದ್ರಿ** ಶಬ್ದದ ನಿಷ್ಪತ್ತಿಯಾಗಬಹುದೆಂದು ನಿರುಕ್ತಕಾರರು ವಿವರಿಸುತ್ತಾರೆ ಆ ನಿರ್ವಚನದ ಆಧಾರದ ಮೇಲೆ ಭಾಷ್ಯಕಾರರೂ ಸಹ **ಅದ್ರಿಂ—ಅತ್ತಾರಂ ಪಣೇನಾಮಾನಮಸುರಂ** । ಸರ್ವಭಕ್ಷಕನಾದ ಪಣಿಯೆಂಬ ರಾಕ್ಷಸನನ್ನು ಎಂದು ವಿವರಿಸುತ್ತಾರೆ. ಇದೇ ಅರ್ಥದಲ್ಲಿ—

ಸಸೇನ ಬಿದ್ವಿಮದಾಯಾವಹೋ ವಸ್ವಾಜಾವದ್ರಿಂ ವಾವಸಾನಸ್ಯ ನರ್ತಯೆನ್ ।

(ಋ. ಸಂ. ೧-೫೧-೩)

ಎಂಬ ಋಕ್ಕಿನಲ್ಲಿ **ಅದ್ರಿ** ಶಬ್ದಕ್ಕೆ ಶತ್ರುಭಕ್ಷಕವಾದ ವಜ್ರಾಯುಧವೆಂದು ಅರ್ಥಮಾಡುತ್ತಾರೆ. ಆದರೆ ಇಂತಹ ಅರ್ಥ ಬರುವಂತೆ **ಅದ್ರಿ** ಶಬ್ದವನ್ನು ಪಯೋಗಿಸಿರುವುದು ಅಪರೂಪ. **ಪರ್ವತ** ಅಥವಾ **ಮೇಘ** ಎಂಬ ಅರ್ಥಗಳಲ್ಲಿ ಉಪಯೋಗಿಸಿರುವುದೇ ಹೆಚ್ಚು. ಸ್ಕಂದಸ್ವಾಮಿಗಳು ಈ ಋಕ್ಕಿನಲ್ಲಿರುವ **ಅದ್ರಿ** ಶಬ್ದಕ್ಕೂ **ಪರ್ವತ**ವೆಂದೇ ಅರ್ಥಮಾಡುತ್ತಾ **ಅದ್ರಿಂ—ದುರ್ಗಪರ್ವತಂ ಚಾಸುರಾಣಾಂ ಸ್ವಭೂತಂ** । ಅಸುರರ ನಿವಾಸಸ್ಥಾನವಾದ **ಪರ್ವತ**ವು ಎಷ್ಟು ದೃಢವಾದ ಬಲವುಳ್ಳದ್ದಾಗಿದ್ದರೂ ಸಹ ಅದನ್ನು **ಅಗ್ನಿಯ** ಸಹಾಯದಿಂದ ಸೀಳಿದರು ಎಂದು ವಿವರಿಸುತ್ತಾರೆ.

ಕೇತುಂ—ಅಹ್ನಾಂ ಕೇತಯಿತಾರಂ ಜ್ಞಾಪಯಿತಾರಮಾದಿತ್ಯಂ ಅಹಸ್ಸನ್ನು ತನ್ನ ಪ್ರಕಾಶದಿಂದ ತಿಳಿಸಿಕೊಡುವ ಸೂರ್ಯನನ್ನು ಎಂದರ್ಥ. ಸೂರ್ಯಚಂದ್ರಾದಿಗಳಿಗೆ ಪರ್ಯಾಯವಾದುದೂ ಅವರ ಸ್ವರೂಪವನ್ನು ತಿಳಿಸುವುದೂ ಆದ ಈ ವಿಶೇಷಣವು ಆಗಾಗ್ಗೆ ಉಪಯೋಗಿಸಲ್ಪಟ್ಟಿದೆ. ಉದಾಹರಣೆಗೆ—

ನವೋ ನವೋ ಭವತಿ ಜಾಯಮಾನೋ೭ಹ್ನಾಂ ಕೇತುರುಷಸಾಮೇತ್ಯಗ್ರಂ ।

(ಋ ಸಂ. ೧೦-೮೫-೧೯)

ಎಂಬ ಋಕ್ಕಿನಲ್ಲಿ ಅಹಸ್ಸಿಗೆ **ಕೇತು**ವಾದ ಚಂದ್ರನೆಂದು ನಿರುಕ್ತಕಾರರು ವಿವರಿಸಿರುತ್ತಾರೆ (ನಿ. ೧೧-೫) ಹೀಗೆ ಋಕ್ಸಂಹಿತೆಯಲ್ಲಿ ಧ್ವಜ, ಪ್ರಜ್ಞೆ, ಕರ್ಮ ಇತ್ಯಾದಿ ನಾನಾರ್ಥಗಳಲ್ಲಿ ಕೇತುಶಬ್ದವನ್ನು ಸೂರ್ಯನ ಮತ್ತು ಚಂದ್ರನ ಪರ್ಯಾಯವಾಗಿಯೂ ಉಪಯೋಗಿಸಲಾಗಿದೆ

ಉಸ್ರಾಃ—ಗಾಃ । ಗೋವುಗಳನ್ನು. ಈ ಪದದ ವಿವರಣೆಗೆ ಋ ಸಂ ೧-೮೭-೪ನೇ ಋಕ್ಕಿನ ವಿಶೇಷ ವಿಷಯಗಳನ್ನು ನೋಡಿ

ಅಗ್ನಿಯ ಅನುಗ್ರಹದಿಂದ ಅತ್ಯಂತ ಪ್ರಬಲನಾದ ಶತ್ರುನಾಶನವಾಗಿ, ತನುಷ್ಮನ ನಿವಾರಕನಾದ ಸೂರ್ಯನು ಬೆಳಗಿ ಲೋಕಕ್ಕೆ ಉಪಕಾರವಾಯಿತೆಂದು ಋಕ್ಕಿನ ಮುಖ್ಯಾಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ವೀಳು – ಇದಕ್ಕೆ ದ್ವಿತೀಯಾ ವಿಭಕ್ತಿ ಪರವಾದಾಗ ಅದಕ್ಕೆ **ಸುಪಾಂ ಸುಲುಕ್**—ಎಂಬುದರಿಂದ ಲುಕ್

ದೃಳ್ಹಾ—ದೃಢಃ ಸ್ಥೂಲಬಲಯೋಃ(ಪಾ. ಸೂ ೭-೩-೨೦) ಎಂಬ ಸೂತ್ರವಿಂದ ಇದು ನಿಪಾತಿತವಾಗಿದೆ. ಇದಕ್ಕೆ ದ್ವಿತೀಯಾ ವಿಭಕ್ತಿ ಅಮ್ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ಡಾದೇಶ

ಪಿತರಃ—ಅಸ್ತೃನ್ತೃಚ್—ಸೂತ್ರದಲ್ಲಿ ಉಣಾದಿನಿಪ್ಪನ್ನವಾದ ತೃನ್ ತೃಜಂತಗಳಿಗೆ ದೀರ್ಘಬರುವುದಾದರೆ ನಪ್ತೃದಿಗಳಿಗೆ ಮಾತ್ರವೆಂದು ನಿಯಮಮಾಡಿರುವುದರಿಂದ ಉಪಧಾದೀರ್ಘ ಬರುವುದಿಲ್ಲ.

ರುಜನ್—ರುಜೋ ಭಂಗೇ ಧಾತು ತುದಾದಿ. ಲಟ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. ಅದಕ್ಕೆ **ಝೋಂತಃ** ಎಂಬುದರಿಂದ ಅಂತಾದೇಶ **ಇತಶ್ಚ** ಎಂಬುದರಿಂದ ಅಂತ್ಯ ಇಕಾರಕ್ಕೆ ಲೋಪ **ತುದಾದಿಭ್ಯಃ ಶಃ** (ಪಾ. ಸೂ. ೩-೧-೭೭) ಎಂಬುದರಿಂದ ಶ ವಿಕರಣ **ಬಹುಲಂ ಛಂದಸ್ಯಮಾಙ್ಯೋಗೇ೭ಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಸಂಯೋಗಾಂತ **ಲೋಪ**ದಿಂದ ಪ್ರತ್ಯಯದ ಅಂತ್ಯತಕಾರಕ್ಕೆ ಲೋಪ ಅತಿದಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಚಕ್ರುಃ—ಡುಕೃಞ್ ಕರಣೇ ಧಾತು. ಲಿಟ್ ಪ್ರಥಮಪುರುಷ ಬಹುವಚನರೂಪ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ದಿವಃ—ಊಡಿದಂ ಪದಾದಿ--(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಬೃಹತಃ—ಬೃಹನ್ಮಹತೋರುಪಸಂಖ್ಯಾನಮ್ ಎಂಬ ವಚನದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ವಿವಿದುಃ—ವಿದ ಜ್ಞಾನೇ ಧಾತು ಆದಾದಿ. ಅಥವಾ ವಿದ್‌ಲೃ ಲಾಭೇ ಧಾತು ತುದಾದಿ ಇದಕ್ಕೆ ಲಿಟ್ ಪ್ರಥಮಪುರುಷ ಬಹುವಚನದಲ್ಲಿ **ಪರಸ್ಮೈಪದಾನಾಂ**—(ಪಾ ಸೂ. ೩-೪-೮೨) ಎಂಬುದರಿಂದ ಉಸಾದೇಶ. ಲಿಣ್ಣಿನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಅಸಂಯೋಗಾಲ್ಲಿಟ್ ಕಿತ್** ಎಂಬುದರಿಂದ ಕಿದ್ವದ್ಭಾವವಿರುವುದರಿಂದ ಪ್ರತ್ಯಯ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ವಿವಿದುಃ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ **ತಿಙ್ಶಿತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೨ ॥

॥ ಸಂಹಿತಾಪಾಠಃ ॥

ದಧನ್ನೃತಂ ಧನಯನ್ನಸ್ಯ ಧೀತಿಮಾದಿದರ್ಯೋ ದಿಧಿಷ್ವೋ ವಿಭೃತ್ರಾಃ ।
ಅತೃಷ್ಯಂತೀರಪಸೋ ಯಂತ್ಯಚ್ಛಾ ದೇವಾಞ್ಜನ್ಮ ಪ್ರಯಸಾ ವರ್ಧಯಂತೀಃ ॥ ೩ ॥

॥ ಪದಪಾಠಃ ॥

ದಧನ್ । ಋತಂ । ಧನಯನ್ । ಅಸ್ಯ । ಧೀತಿಂ । ಆತ್ । ಇತ್ । ಅರ್ಯಃ ।
ದಿಧಿಷ್ವಃ । ವಿಽಭೃತ್ರಾಃ ।
ಅತೃಷ್ಯಂತೀಃ । ಅಪಸಃ । ಯಂತಿ । ಅಚ್ಛ । ದೇವಾನ್ । ಜನ್ಮ । ಪ್ರಯಸಾ ।
ವರ್ಧಯಂತೀಃ ॥ ೩ ॥

॥ ಸಾಯಣಭಾಷ್ಯಂ ॥

ಋತಂ ದೇವಯಜನದೇಶಂ ಪ್ರಾಪ್ತಮಗ್ನಿಮಂಗಿರಸೋ ಮಹರ್ಷಯೋ ದಧನ್ । ಗಾರ್ಹ-ಪತ್ಯಾದಿರೂಪೇಣಾಧಾರಯನ್ । ಧಾರಯಿತ್ವಾ ಚಾಸ್ಯಾಗ್ನೇರ್ಧೀತಿಂ ಕರ್ಮಾಗ್ನಿಹೋತ್ರಾದಿಲಕ್ಷಣಂ ಧನಯೆನ್ । ಧನಮಕುರ್ವನ್ । ಯಥಾ ಪುರುಷಾ ಧನಂ ಸಂಪಾದಯಂತಿ ತದ್ವದಗ್ನಿ ದೇವತ್ಯಂ ಕರ್ಮಾ-ನ್ವತಿಷ್ಠನ್ನಿತ್ಯರ್ಥಃ । ಆದಿತ್ ಅಂಗಿರಸಾಮನುಷ್ಠಾನಾನಂತರಮೇವಾರ್ಯೋ ಽರ್ಯಾ ಧನಸ್ಯ ಸ್ವಾಮಿನ್ಯೋ ದಿಧಿಷ್ಟಸ್ತೇನ ಧನೇನ ದಿಧಿಷ್ವೋ ಽಗ್ನೀನಾಂ ಧಾರಣಂ ಕುರ್ವತ್ಯಃ । ಕೃತಾಗ್ನ್ಯಧಾನಾ ಇತ್ಯರ್ಥಃ । ವಿಭೃತ್ರಾ ಆಹಿತಾನಗ್ನೀನಗ್ನಿಹೋತ್ರಾದಿಕರ್ಮಣಿ ವಿಹರಂತ್ಯೋ ಽತೃಷ್ಯಂತೀರ್ವಿಷಯಾಂತರತೃಷ್ಣಾರಹಿತಾ ಅತ ಏವಾಪಸೋ ಽಪಸಾ ಕರ್ಮಣಾ ಯುಕ್ತಾ ಏವಂಭೂತಾ ಯಜಮಾನಲಕ್ಷಣಾಃ ಪ್ರಜಾಃ ಪ್ರಯೆಸಾ ಹವಿರ್ಲಕ್ಷಣೇನಾನ್ನೇನ ದೇವಾನಿಂದ್ರಾದೀಞ್ಜನ್ಮ ಜಾತಾನ್ಮನುಷ್ಯಾಂಶ್ಚ ವರ್ಧಯಂತೀರ್ವರ್ಧಯಂತ್ಯಃ ಸತ್ಯ ಏನಮಗ್ನಿಮಚ್ಛಾಭಿಮುಖ್ಯೇನ ಯಂತಿ । ಪ್ರಾಪ್ನುವಂತಿ । ಪರಿಚರಂತೀತಿ ಯಾವತ್ ॥ ದಧನ್ । ದಧ ಧಾರಣೇ । ಲಙ್ ವ್ಯತ್ಯಯೇನ ಪರಸ್ಮೈಪದಂ । ಬಹುಲಂ ಛಂದಸ್ಯಮಾಙ್ಯೋಗೇ ಽಪೀತ್ಯಡಭಾವಃ । ಧನಯನ್ । ಧನಶಬ್ದಾತ್ತತ್ಕರೋತೀತಿ ಣಿಚ್ । ಇಷ್ಮವಣ್ಲಾ ಪ್ರಾತಿಪದಿಕಸ್ಯೇತೀಷ್ಮವದ್ಭಾವಾಟ್ಟಲೋಪಃ । ಲಙ್ ಪೂರ್ವವತ್ । ಆರ್ಯಃ । ಆರ್ಯಃ ಸ್ವಾಮಿವೈಶ್ಯಯೋಃ । ಪಾ. ೩-೧-೧೦೩ । ಇತಿ ನಿಪಾತಿತಃ । ಲಿಂಗವಚನವ್ಯತ್ಯಯೌ । ಆರ್ಯಃ ಸ್ವಾಮ್ಯಾಖ್ಯಾ ಚೇತ್ । ಫಿ. ೧-೧೮ । ಇತ್ಯಂತೋದಾತ್ತತ್ವಂ । ದಿಧಿಷ್ಟಃ ಡುದಾಞ್ ಧಾರಣಪೋಷಣಯೋಃ ಸೋ ಅಂತಕರ್ಮಣೀತ್ಯಾಭ್ಯಾಮಂದೊದೃಂಭೂಜಂಬೂಕಷೇಲೂ-ಕರ್ಕಂಧೂದಿದಿಷೂಃ । ಉ. ೧-೫೫ । ಇತಿ ಕೂಪ್ರತ್ಯಯಾಂತೋ ನಿಪಾತಿತಃ । ಪ್ರತ್ಯಯಸ್ವರಃ । ಉದಾತ್ತ-ಸ್ವರಿತಯೋರ್ಯಣ ಇತಿ ಜಸಃ ಸ್ವರಿತತ್ವಂ । ವಿಭೃತ್ರಾಃ । ಹೃಞ್ ಹರಣೇ । ವಿಪೂರ್ವಾದಸ್ಮಾದ್ಧಾತ್ರಾದಿಕಃ ಕ್ತ್ರಪ್ರತ್ಯಯಃ । ಹೃಗ್ರಹೋರ್ಭ ಇತಿ ಭತ್ವಂ । ಅತೃಷ್ಯಂತೀಃ । ಞಿತೃಷಾ ಪಿಪಾಸಾಯಾಂ । ಜಸಿ ವಾ ಛಂದಸೀತಿ ಪೂರ್ವಸವರ್ಣದೀರ್ಘಸ್ಯ ವಿಕಲ್ಪಿತತ್ವಾತ್ಪೂರ್ವಸವರ್ಣದೀರ್ಘಃ । ಆವ್ಯಯೆಪೂರ್ವಪದ-ಪ್ರಕೃತಿಸ್ವರತ್ವಂ । ಅಪಸಃ । ಅಪಸ್ಶಬ್ದಾದುತ್ಪನ್ನಸ್ಯ ಮತ್ವರ್ಥೀಯಸ್ಯ ವಿನೋ ಬಹುಲಂ ಛಂದಸೀತಿ ಬಹುಲವಚನಾಲ್ಲುಕ್ । ಪಾ. ೫-೨-೧೨೨ । ವಿನಂತಸ್ಯ ತ್ರಿಲಿಂಗತ್ವೇನ ನಬ್ವಿಷಯತ್ವಾಭಾವಾತ್ಪ್ರಾತಿಪದಿಕ-ಸ್ವರೇಣಾಂತೋದಾತ್ತತ್ವಂ । ಜನ್ಮ । ಜಾಯಂತೇ ಇತಿ ಜನ್ಮಾನೋ ಮನುಷ್ಯಾಃ । ಅನ್ಯೇಭ್ಯೋ ಽಪಿ ದೃಶ್ಯಂತ ಇತಿ ಮನಿನ । ಸುಸಾಂ ಸುಲುಗಿತಿ ಶಸೋ ಲುಕ್ ॥

॥ ಪ್ರತಿಪದಾರ್ಥ ॥

ಋತಂ—ಯಾಗಶಾಲೆಯ ನ್ನು (ಪ್ರಾಪ್ತನಾದ ಅಗ್ನಿಯನ್ನು) । **ದಧ್ರ**- (ಅಂಗಿರಸರು) ಗಾರ್ಹಪತ್ಯಾದಿ ರೂಪದಿಂದ) ಸ್ಥಾಪಿಸಿದರು । **ಅಸ್ಯ**—(ಸ್ಥಾಪಿಸಿ) ಈ ಅಗ್ನಿಗೆ । **ಧೀತಿಂ**—(ಅಗ್ನಿಹೋತ್ರಾದಿ) ಕರ್ಮವನ್ನು । **ಧನಯ್ಯ**—ಧನವನ್ನು ಸಂಪಾದಿಸುವಂತೆ ಅನುಷ್ಠಾನಮಾಡಿದರು । **ಆದಿತ್**—(ಅಂಗಿರಸರ) ಅನುಷ್ಠಾನವಾದ ಮೇಲೆಯೇ । **ಆರ್ಯಃ**—(ಧನದ) ಸ್ವಾಮಿಗಳಾದ । **ದಿಧಿಷ್ಟಿಃ**- ಅಗ್ನಿಸ್ಥಾಪನಾದಿಗಳನ್ನುಮಾಡುವ । **ವಿಭೃತ್ರಾಃ**—ಆಹಿತಾಗ್ನಿಯಲ್ಲಿ ಅಗ್ನಿಹೋತ್ರಾದಿಕರ್ಮಗಳನ್ನು ಆಚರಿಸುವ । **ಅತೃಷ್ಯಂತೀಃ** -ಇತರ ವಿಷಯಗಳಲ್ಲಿ

ಆಸಕ್ತಿಯಿಲ್ಲದ । **ಆಪಸಃ**—ಕರ್ಮಯುಕ್ತರಾದ (ಯಜಮಾನರೂಪರಾದ) ಪ್ರಜೆಗಳು । **ಪೆಯಸಾ**—ಹವಿಸ್ಸಿನರೂಪವಾದ ಅನ್ನದಿಂದ । **ದೇವಾ**—ಇಂದ್ರಾದಿದೇವತೆಗಳನ್ನೂ । **ಜನ್ಮ**—ಜನನಶೀಲರಾದ ಮನುಷ್ಯರನ್ನೂ । **ವರ್ಧಯಂತೀಃ**—ಅಭಿವೃದ್ಧಿಪಡಿಸುತ್ತಾ । **ಅಚ್ಛ**—(ಅಗ್ನಿಯನ್ನು) ಅಭಿಮುಖವಾಗಿಟ್ಟುಕೊಂಡು । **ಯಂತಿ**—ಪ್ರಾಪ್ತರಾಗುತ್ತಾರೆ.

॥ ಭಾವಾರ್ಥ ॥

ಅಂಗಿರಸರು ಯಾಗಶಾಲೆಯಲ್ಲಿ ಅಗ್ನಿಯನ್ನು ಸ್ಥಾಪಿಸಿ ಅಗ್ನಿಹೋತ್ರಾದಿ ಕರ್ಮಗಳನ್ನಾಚರಿಸಿದಮೇಲೆಯೇ, ಧನಿಕರಾದ ಯಾಗಕರ್ತೃಗಳು ಅಗ್ನಿಯನ್ನು ಸ್ಥಾಪಿಸಿ, ವಿಷಯಾಂತರಗಳಲ್ಲಿ ಆಸಕ್ತಿರಹಿತರಾಗಿ, ಹವಿಸ್ಸಿನರೂಪವಾದ ಅನ್ನದಿಂದ ದೇವತೆಗಳಿಗೂ ಮನುಷ್ಯರಿಗೂ ಪೋಷಕರಾಗಿ, ಅಗ್ನಿಗಭಿಮುಖರಾಗಿ, ಅವನ ಸಂಬಧನಾದ ಅಗ್ನಿಹೋತ್ರಾದಿಗಳನ್ನು ಮಾಡುತ್ತಾರೆ.

English Translation

They secured him, (Agni, in the sacrificial chamber), they made his worship the source of wealth; whence opulent votaries preserve his fires and practise his rites Free from all (other) desire, assiduous in his adoration, and sustaining gods and men, by their offerings, they come into his presence.

॥ ವಿಶೇಷವಿಷಯಗಳು ॥

ಧಾರಣಾದ್ಧರ್ಮಃ—ಎಂಬ ನಿಯಮದಂತೆ ಲೋಕವನ್ನೆಲ್ಲಾ ರಕ್ಷಣಾರೂಪದಿಂದ ಧಾರಣಮಾಡುವುದು **ಧರ್ಮ**ವಾದುದರಿಂದಲೂ, ಈ **ಧರ್ಮ**ದ ರಕ್ಷಣೆಗೆ ಯಜ್ಞಯಾಗಾದಿಗಳೇ ಮೂಲವಾದುದರಿಂದಲೂ, **ಅಗ್ನಿಯೇ** ಸಕಲ ಯಜ್ಞಗಳ ನೇತೃವೂ, ಪ್ರಭುವೂ ಆದುದರಿಂದಲೂ ಪರಂಪರೆಯಾಗಿ ದೇವಮನುಷ್ಯಾದಿ ಸಕಲ ಭೂತಗಳ ಧಾರಣವೂ ಅಗ್ನಿಯ ಅನುಗ್ರಹದಿಂದಲೇ ಸಾಧ್ಯವೆಂದೂ ತಿಳಿಸಿ ಅಂತಹ ಅಗ್ನಿಯ ಪರಿಚರಣವು ಎಷ್ಟು ಅಗತ್ಯವೆಂದು ತೋರಿಸುತ್ತಾ ಅಗ್ನಿಪೂಜೆಯನ್ನು ವರ್ಣಿಸುತ್ತಾರೆ.

ಯತಂ—**ದೇವಯಜನದೇಶಂ ಪ್ರಾಪ್ತಂ ಅಗ್ನಿಂ** । ಯಜ್ಞಪ್ರದೇಶದಲ್ಲಿ ಪ್ರತಿಷ್ಠಿತನಾದ ಅಗ್ನಿಯನ್ನು

ದಧನ್—ಸ್ಥಾಪಿಸಿದರು ಗಾರ್ಹಪತ್ಯಾದಿರೂಪದಿಂದ ಮಹರ್ಷಿಗಳು ಸ್ಥಾಪಿಸಿದರೆಂದರ್ಥವು. ಅನಂತರ,

ಧೀತಿಂ—**ಅಗ್ನಿಹೋತ್ರಾದಿಲಕ್ಷಣಂ ಕರ್ಮ** । ಎಂದು ಸಾಯಣರು **ಧೀತಿ ಶಬ್ದಕ್ಕೆ** ಕರ್ಮವನ್ನು ಎಂದೂ, **ಅಪರಿತಮಿಷಿ ಪ್ರಜ್ಞಾನಾಮ ವಿತತ್** । ಎಂದು ಸ್ಕಂದಸ್ವಾಮಿಗಳು ಪ್ರಜ್ಞೆ ಅಥವಾ ಮನಸ್ಸು ಎಂದೂ ವಿವರಿಸಿದ್ದಾರೆ. **ಧೀತಿ** ಶಬ್ದವು ಋಕ್ಸಂಹಿತೆಯಲ್ಲಿ ಈ ಎರಡು ಅರ್ಥಗಳಲ್ಲಿಯೂ ಬೇರೆಬೇರೆ ಸಂದರ್ಭಗಳಲ್ಲಿ ಉಪಯೋಗಿಸಲ್ಪಟ್ಟಿದೆ. ನಿರುಕ್ತಕಾರರು ಸಂಹಿತೆಯಲ್ಲಿ—

ಸಾರಾವತಕ್ಷ್ನೀಮವಸೇ ಸುವೃಕ್ತಿಭಿಃ ಸರಸ್ವತೀಮೂ ನಿವಾಸೇಮ ಧೀತಿಭಿಃ ।

(ಋ ಸಂ. ೬-೬೧-೩)

ಎಂಬ ಋಕ್ಕನ್ನು ಉದಹರಿಸಿ ಇಲ್ಲಿ **ಧೀತಿಭಿಃ** ಎಂಬ ಶಬ್ದಕ್ಕೆ **ಕರ್ಮಭಿಃ** ಎಂದೂ (ನಿ. ೨-೨೪), ಮತ್ತು,

ಋತಸ್ಯ ಹಿ ಶುರುಧಃ ಸಂತಿ ಪೂರ್ವೀರ್ಋತಸ್ಯ ಧೀತಿರ್ವೃಜಿನಾನಿ ಹಂತಿ ।

(ಋ ಸಂ. ೪-೨೩-೮)

ಎಂಬ ಸೂಕ್ತವನ್ನು ಉದಹರಿಸಿ ಅಲ್ಲಿರುವ **ಧೀತಿ**ಶಬ್ದಕ್ಕೆ **ಪ್ರಜ್ಞಾ** ಎಂದೂ ನಿರ್ವಚನವನ್ನು ಮಾಡುತ್ತಾರೆ. (ನಿ ೧೦-೪೧.)

ಧನಯೆನ್— ಆಚರಿಸಿದರು. ಕರ್ಮವನ್ನಾಚರಿಸಿದರು ಅಥವಾ ಧ್ಯಾನವನ್ನು ಮಾಡಿದರು ಎಂದಾಗುತ್ತದೆ

ಆರ್ಯಃ—ರಾಷ್ಟ್ರೀ, ಅರ್ಯಃ, ಸಿಯುತ್ವಾನ್, ಇವಇನ-ಈ ನಾಲ್ಕೂ **ಈಶ್ವರ**ನಾಮಗಳು. (ನಿ. ೩-೧೧.) **ಈಶ್ವರ**ನೆಂದರೆ ಸ್ವಾಮಿ, ಪ್ರಭು, ಒಡೆಯ ಎಂದರ್ಥ ಇಂದ್ರನಿಗೂ ಇತರ ದೇವತೆಗಳಿಗೂ **ಈ** ವಿಶೇಷಣವು ಪದೇ ಪದೇ ಉಪಯೋಗಿಸಲ್ಪಟ್ಟಿದೆ. ಈ ವಿಶೇಷಣವು ಬರೀ ಪ್ರಭುತ್ವವನ್ನು ಮಾತ್ರ ತೋರಿಸದೇ **ಅನೇಕ**ಸಲ ಪ್ರಭುವಿನ ಆದರ ಮತ್ತು ಅನುಗ್ರಹವನ್ನು ಸೂಚಿಸುವುದಾಗಿಯೂ ಇರುತ್ತದೆ ಇಲ್ಲಿ ಮಾತ್ರ **ಧನಸ್ಯ ಸ್ವಾಮಿನ್ಯಃ** ಎಂದು ಯಜ್ಞಕರ್ತರ ಪರವಾಗಿ ಧನಕ್ಕೆ ಸ್ವಾಮಿ ಎಂದು ಅರ್ಥವನ್ನು ಕೊಡುತ್ತದೆ (ಋ. ಸಂ. ೧-೭೩-೫ ಇತ್ಯಾದಿ ಕೆಲವು ಕಡೆಗಳಲ್ಲಿ **ಆರ್ಯಃ** ಎನ್ನುವುದಕ್ಕೆ **ಅರೇಃ ಸಂಬಂಧಿನಂ** । ಶತ್ರುವಿಗೆ ಸೇರಿದುದು ಎಂದಾಗುತ್ತದೆ)

ಅತೃಷ್ಯಂತೀಃ—**ವಿಷಯಾಂತರತೃಷ್ಣಾರಹಿತಾಃ** । ಅಗ್ನಿಪೂಜೆಯನ್ನು ಬಿಟ್ಟು ಇತರ ವಿಷಯಗಳಲ್ಲಿ ಆಸಕ್ತರಾಗಿಲ್ಲದೇ, ತದೇಕಚಿತ್ತರಾಗಿ,

ಅಪಸಃ—**ಅಪಃ, ಅಪ್ನಃ, ದ್ಧಿಷಃ** ಇತ್ಯಾದಿ ೨೬ ಕರ್ಮನಾಮಗಳಲ್ಲಿ ಪರಿತವಾಗಿರುವುದರಿಂದ (ನಿ. ೩-೧) **ಕರ್ಮ**ವೆಂದರ್ಥ **ಅಪಸಃ** ಎಂದರೆ **ಅಪಸಾ ಕರ್ಮಣಾ ಯುಕ್ತಾಃ ಯಜಮಾನಲಕ್ಷಣಾಃ ಪ್ರಜಾಃ** । ಯಾಗಾದಿಕರ್ಮಗಳಿಂದ ಯುಕ್ತರಾದ ಯಜಮಾನರೂಪರಾದ ಪ್ರಜೆಗಳೆಂದರ್ಥ

ಪ್ರಯಸಾ—**ಅಂಧಃ, ವಾಜಃ, ಸಯಃ, ಪ್ರಯಃ** ಇತ್ಯಾದಿ ೨೮ ಅನ್ನನಾಮಗಳಲ್ಲಿ ಪರಿತವಾಗಿರುವುದರಿಂದ (ನಿ ೩-೯) **ಪ್ರಯಃ** ಎಂದರೆ ಅನ್ನವೆಂದರ್ಥ **ಪ್ರಯಸಾ** -ಹವಿಸ್ಸಿನರೂಪದ ಅನ್ನದಿಂದ

ದೇವಾ೯ ಜನ್ಮ ಪ್ರಯಸಾ ವರ್ಧಯಂತೀಃ -ದೇವತೆಗಳನ್ನು ಉತ್ಪನ್ನರಾದ ಮಾನವರನ್ನೂ ವೃದ್ಧಿಯಾಗುವಂತೆ ಮಾಡುತ್ತಾ ಅಗ್ನಿಯನ್ನು ಉಪಚರಿಸುತ್ತಾರೆ

ಅಗ್ನಿನಾ ರಯಿಮಶ್ನವತ್ಪೋಷಮೇವ ದಿವೇದಿವೇ । ಯಶಸಂ ವೀರವತ್ತಮಂ ॥

(ಋ. ಸಂ. ೧-೧ ೩)

ಅಗ್ನೇ ಯಂ ಯಜ್ಞಮಧ್ವರಂ ವಿಶ್ವತಾಃ ಪರಿಭೂರಸಿ । ಸ ಇದ್ದೇವೇಷು ಗಚ್ಛತಿ ।

(ಋ. ಸಂ ೧-೧-೪)

ಇತ್ಯಾದಿ ನೂರಾರು ಸನ್ನಿವೇಶಗಳಲ್ಲಿ ವೇದಮಾನವಾದಿ ಸಕಲ ಭೂತಗಳ ವೃದ್ಧಿಗೂ ಅಗ್ನಿಯೇ **ಕಾರಣನು**, ಯಜ್ಞದಿಂದಲೇ ದೇವತೆಗಳ ತೃಪ್ತಿ, ಯಜ್ಞದಿಂದಲೇ ಮಾನವರ ಸಂಪತ್ತು—ಆ ಯಜ್ಞಕ್ಕೆ ಆತ್ಮನು ಅಗ್ನಿ. ಆದುದರಿಂದ ಸಕಲರ ಸ್ಥಿತಿಗೂ ಬೆಳೆವಣಿಗೆಗೂ ಅಗ್ನಿಯೇ ಕಾರಣನು ಆದುದರಿಂದ ಅಗ್ನಿಯನ್ನು ಉಪಚರಿಸುತ್ತಾರೆ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ದಧನ್—ದಧ ಧಾರಣೇ ಧಾತು ಭ್ವಾದಿ ಅನುದಾತ್ತೇತ್. ಇದಕ್ಕೆ ಲಙ್ ಪ್ರಥಮಪುರುಷ ಬಹುವಚನದಲ್ಲಿ **ವ್ಯತ್ಯಯೋ ಬಹುಲಂ** ಎಂಬುದರಿಂದ ಝಿ ಪ್ರತ್ಯಯ. ಅದಕ್ಕೆ ಅಂತಾದೇಶ ಅಂತ್ಯಲೋಪ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಪಾದಾದಿಯಲ್ಲಿ ಇರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್, ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

ಧನಯನ್—ಧನ ಶಬ್ದದ ಮೇಲೆ **ತತ್ಕರೋತಿ ತದಾಚಷ್ಟೇ** ಎಂಬ ವಾರ್ತಿಕದಿಂದ ಧಾತ್ವರ್ಥ ವಿವಕ್ಷಾಮಾಡಿದಾಗ ಣಿಚ್. **ಇಷ್ಠವಣ್ಲಿ ಪ್ರಾತಿಪದಿಕಸ್ಯ** ಎಂಬ ವಚನದಿಂದ ಣಿಚ್ ಪರವಾದಾಗ ಯಾವ ಯಾವ ಕಾರ್ಯ ಬರುವುದೋ ಅವುಗಳನ್ನು ಅತಿದೇಶಮಾಡಿರುವುದರಿಂದ ಆ ಕಾರ್ಯಗಳೆಲ್ಲವೂ ಬರುತ್ತವೆ. ಪ್ರಕೃತದಲ್ಲಿ **ಟಿಲೋಪ** ಬರುತ್ತದೆ. ಧನಿ ಎಂಬ ಣಿಜಂತವು **ಸನಾದ್ಯಂತಾ ಧಾತವಃ** ಎಂಬುದರಿಂದ ಧಾತುಸಂಜ್ಞೆ ಬರುವುದರಿಂದ ಇದರಮೇಲೆ ಲಙ್‌ನಲ್ಲಿ ಹಿಂದೆ ದಧನ್ ಎಂಬಲ್ಲಿ ಹೇಳಿರುವ ಕಾರ್ಯಗಳು ಬರುತ್ತವೆ ಹಿಂದಿನಂತೆ ಅಡಾಗಮ ಬರುವುದಿಲ್ಲ. ಣಿಚ್ ಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ಆರ್ಯಃ—**ಆರ್ಯಃ ಸ್ವಾಮಿವೈಶ್ಯಯೋಃ** (ಪಾ. ಸೂ ೩-೧-೧೦೩) ಎಂಬುದರಿಂದ ಸ್ವಾಮಿ ಎಂಬರ್ಥದಲ್ಲಿ ನಿಪಾತಿತವಾಗಿದೆ. ಇಲ್ಲಿ ಪ್ರಕರಣಾನುಸಾರವಾಗಿ ಸ್ತ್ರೀಲಿಂಗವೂ ಬಹುವಚನವೂ ಬರಬೇಕಾದುದು ವ್ಯತ್ಯಯದಿಂದ ವಿಪರ್ಯಯ ಬಂದಿದೆ (ಪುಲ್ಲಿಂಗ ಏಕವಚನ ಬಂದಿದೆ) **ಆರ್ಯಃ ಸ್ವಾಮ್ಯಾಖ್ಯಾ ಚೇತ್** (ಫಿ. **ಸೂ** ೧೭) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ

ದಿಧಿಷ್ಣಃ—ಡುಧಾಞ್ ಧಾರಣಪೋಷಣಯೋಃ ಧಾತು. ಷೋ ಅಂತಕರ್ಮಣಿ, ಧಾತು. ಈ ಎರಡು ಧಾತುಗಳಿಗೆ **ಆಂದೂ ದೃಂಭೂಜಂಬೂಕಫೇಲೂ ಕರ್ಕಂಧೂ ದಿಧಿಷೂಃ** (ಉ. ಸೂ. ೧-೯೩) ಎಂಬುದರಿಂದ ಕೂಪ್ರತ್ಯಯ ಬಂದು ನಿಪಾತಿತವಾಗಿದೆ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಇದಕ್ಕೆ ಜಸ್ ಪರವಾದಾಗ **ಯಣಾದೇಶ**. ಉದಾತ್ತಸ್ಥಾನದಲ್ಲಿ ಯಣ್ ಬಂದು ಅದರ ಪರದಲ್ಲಿ ಜಸ್ ಇರುವುದರಿಂದ **ಉದಾತ್ತಸ್ವರಿತ-ಯೋರ್ಯಣಃ**—(ಪಾ. ಸೂ. ೮-೪-೪) ಎಂಬುದರಿಂದ ಜಸ್ಸಿಗೆ ಸ್ವರಿತಸ್ವರ ಬರುತ್ತದೆ


ವಿಭೃತ್ರಾಃ—ಹೃಞ್ ಹರಣೇ ಧಾತು ಇದಕ್ಕೆ ವಿ ಎಂಬ ಉಪಸರ್ಗವು ಪೂರ್ವದಲ್ಲಿರುವಾಗ ಔಣಾದಿಕವಾದ ಕ್ತ್ರಿಪ್ರತ್ಯಯ. **ಲಶಕ್ವತದ್ಧಿತೇ** ಎಂಬುದರಿಂದ ಕಕಾರಕ್ಕೆ ಇತ್ ಸಂಜ್ಞೆಯಿಂದ ಲೋಪ. ಕಿತ್ವಾದುದರಿಂದ ಧಾತುವಿನ ಇಕ್ಕೆಗೆ ಗುಣ ಒರುವುದಿಲ್ಲ **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಧಾತುವಿನ ಹಕಾರಕ್ಕೆ ಭಕಾರಾದೇಶ ದ್ವಿತೀಯೈಾ ಬಹುವಚನಾಂತ ರೂಪ.

ಅತೃಷ್ಯಂತೀಃ—ಇ್ ತೃಷಾ ಪಿಪಾಸಾಯಾಮ್ ಧಾತು. ಇದಕ್ಕೆ ಶತೃಪ್ರತ್ಯಯ ಬಂದಾಗ ಶ್ಯನ್ ವಿಕರಣ ಸ್ತ್ರೀತ್ವದಲ್ಲಿ **ಉಗಿತಶ್ಚ** ಎಂಬುದರಿಂದ ಙೀಪ್. ನ ತೃಷ್ಯಂತೀ ಅತೃಷ್ಯಂತೀ ಇದಕ್ಕೆ ಜಸ್ ಪರವಾದಾಗ **ವಾ ಛಂದಸಿ** ಎಂದು ಪೂರ್ವಸವರ್ಣದೀರ್ಘವು ವಿಕಲ್ಪಿತವಾದುದರಿಂದ ಇಲ್ಲಿ ಪೂರ್ವಸವರ್ಣದೀರ್ಘ. **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ ೬-೨-೨) ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಅಪಸಃ—ಅಪಸ್ ಎಂಬುದು ಕರ್ಮವಾಚಕವಾದ ನಾಂತಶಬ್ದ. ಇದಕ್ಕೆ ಮತ್ವರ್ಥದಲ್ಲಿ **ಅಸ್ಮಾಯಾಮೇಧಾ ಸ್ರಜೋ ವಿನಿಃ** (ಪಾ. ಸೂ ೫-೨-೧೨೨) ಎಂಬುದರಿಂದ ಬಹುಲಗ್ರಹಣಸಾಮರ್ಥ್ಯದಿಂದ ವಿನ್ನಿಗೆ ಲುಕ್. ವಿನ್ನಂತಕ್ಕೆ ಲಿಂಗನಿಯಮವಿಲ್ಲವಿರುವುದರಿಂದ ತ್ರಿಲಿಂಗದಲ್ಲಿಯೂ ಸಂಭವಿಸುವುದರಿಂದ ಕೇವಲ ನಪುಂಸಕ ಅಂದರೆ ನಪುಂಸಕ ವಿಷಯವಾಗದಿರುವುದರಿಂದ ಪ್ರಾತಿಪದಿಕಸ್ವರದಿಂದ ಅಂತೋದಾತ್ತವಾಗುತ್ತದೆ.

ಯಂತಿ- ಇಣ್ ಗತೌ ಧಾತು. ಅದಾದಿ ಝಿಗೆ ಅಂತಾದೇಶ ಬಂದಾಗ ಅಜಾದಿಪ್ರತ್ಯಯ ಪರದಲ್ಲಿರುವುದರಿಂದ **ಇಣೋಯಣ್** ಎಂಬುದರಿಂದ ಧಾತುವಿನ ಇಕಾರಕ್ಕೆ ಯಣಾದೇಶ ಅತಿಡಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಜನ್ಮ—ಜಾಯಂತೇ ಇತಿ ಜನ್ಮಾನೋ ಮನುಷ್ಯಾಃ ಜನೀ ಪ್ರಾದುರ್ಭಾವೇ ಧಾತು ಇದಕ್ಕೆ **ಅನ್ಯೇಭ್ಯೋಽಪಿ ದೃಶ್ಯಂತೇ** (ಪಾ ಸೂ ೩-೨-೭೫) ಎಂಬುದರಿಂದ ಮನಿನ್ ಪ್ರತ್ಯಯ ಜನ್ಮನ್ ಶಬ್ದವಾಗುತ್ತದೆ. ಇದಕ್ಕೆ ದ್ವಿತೀಯಾ ಬಹುವಚನ ಶಸ್ ಪರವಾದಾಗ **ಸುಸಾಂ ಸುಲುಕ್**—ಎಂಬುದರಿಂದ ಶಸ್ಸಿಗೆ ಲುಕ್. **ನಲೋಪಃ ಸ್ರಾತಿಪದಿಕಾಂತಸ್ಯ** ಎಂಬುದರಿಂದ ನಲೋಪ ॥ ೩ ॥



ಸಪ್ತಿಕಾಮಾಃ ।

ಮಧ್ವೀದ್ಯದೀಂ ವಿಭೃತೋ ಮಾತರಿಶ್ವಾ ಗೃಹೇಗೃಹೇ ಶ್ಯೇತೋ ಜೇನ್ಯೋ ಭೂತ್ ।

ಆದೀಂ ರಾಜ್ಞೋ ನ ಸಹೀಯಸೇ ಸಚಾ ಸನ್ನಾ ದೂತ್ಯಂ ಭೃಗವಾಣೋ ವಿವಾಯ ॥ ೪ ॥

॥ पदपाठः ॥

मथ्ऽईत् । यत् । ईं । विऽभृ́तः । मात॑रिश्वा । गृ॒हेऽगृ॑हे ।
श्ये॒तः । जे॒न्यः॑ । भूत् ।
आत् । ईं । राज्ञ॑ । न । सहे॑यसे । सचा॑ । सन् । आ । दू॒त्य॑म् ।
भृ॒गवा॑णः । विवा॑य ॥ ४ ॥

॥ सायणभाष्यं ॥

मातरिश्वा व्यानवृत्तिरूपेणावस्थितो मुख्यप्राण ईमेनमग्निं यदा यदा मथित् अमथ्नात् । अग्नेर्मन्थनस्य व्यानवायुसाध्यत्वमथ यः प्राणापानयोः संधिः स व्यान इत्युपक्रम्य च्छन्दोगैरामनातं । अतो यान्यन्यानि वीर्यवंति कर्माणि यथाग्नेर्मन्थनमाजेः सरणं दृढस्य धनुष आयमनमप्राणन्नपानं-स्तानि करोति । छा. उ. ८-४-४ रिंदञ्च । इति मंत्रान्तरं॰च भवति । अस्यं दिवो मातरिश्वा जभारामथ्नादन्यं परि श्येनो अद्रेः । ऋग्वे. ८-४८-६ । इति । कीदृशोमातरिश्वा । विभृतः प्राणेषु प्राणापानादिसंचरवृत्तिरूपेण विभृतो विभज्य स्थितः । तदपि प्राणसंवादे त्रैरेवाम्नातं । तानरिष्यः प्राण उवाच । मा मोहमापद्यथाहमेवैतित् पंचधात्मानं प्रविभज्यैतित् वाणमवस्रभ्य विधारयामीति । मंथनेनोत्पन्नोऽयमग्निः श्वेतः शुभ्रवर्णोः भूत्वा गृहे गृहे सर्वस्मिन्यज्ञगृहे यदा जेन्यः प्रादुर्भूतोः भूत् । यदा । रक्षसां जेन्योः जेताभिभवितो भूत् । तथा च त्रैस्त्रिरीयकं । देवासुराः संयेत्ता आसन् ते देवा बिभृतोऽग्निं प्राविशन् तस्मादाहुरग्निः सर्वा देवता इति तेऽग्निमेव वरूथं कृत्वासुरानभ्यभवन् । त्रै. सं. ८-२-२-८ । इति । इतरेयिणोऽप्यामनंति । ते देवाः प्रतिबुध्याग्निं पुरुस्तात्प्रातिसवनेः सवनेः सर्योंहंस्तेऽग्निर्नैव पुरस्तात्प्रातिसवनेऽसुररक्षांस्यसाक्षत । ऐ. ब्रा ८-४ । इति । आत् यज्ञगृहे प्रादुर्भावानंतरमिमेनमग्निं भृगवाणः । भृगुर्ऋषिः । स इवाचिरन्यजमानो दूत्यं दूतस्य कर्मा विवाय । शास्त्रमर्यादयाप्रापयामास । तत्र दृष्टान्तः । सचा सन् । सखाभवन्नसौ राजा सहीयसेऽभिभवित्रे

ಪ್ರಬಲಾಯ ರಾಜ್ಞೇ ನ । ಯಥಾ ರಾಜ್ಞೇ ಸ್ವಪುರುಷಂ ದೂತಕರ್ಮ ಪ್ರಾಪಯತಿ ತದ್ವತ್ ॥ ಮಥೀತ್ । ಮಥೇ ವಿಲೋಡನೇ । ಲುಙ್ ಹ್ಮ್ಯಂತಕ್ಷಣೇತಿ ವೃದ್ಧಿಪ್ರತಿಷೇಧಃ । ಜೇನ್ಯಃ । ಜನೇ ಪ್ರಾದುರ್ಭಾವೇ । ಅಸ್ಮಾದ್ಧೋಣಾದಿಕ ಏನ್ಯಪ್ರತ್ಯಯಷ್ಟಿಲೋಪಶ್ಚೇತಿ ಭಟ್ಟಭಾಸ್ಕರಮಿಶ್ರಃ । ಯದ್ವಾ । ಜಿ ಜಯ ಇತ್ಯಸ್ಮಾತ್ಕೃತ್ಯಲ್ಯುಟೋ ಬಹುಲಮಿತಿ ಬಹುಲವಚನಾತ್ಕರ್ತರ್ಯಚೋ ಯದಿತಿ ಯತ್ । ತಸ್ಯ ನುಡಾಗಮಶ್ಚ । ಯತೋಽನಾವ ಇತ್ಯಾದ್ಯುದಾತ್ತತ್ವಂ । ದೂತ್ಯಂ । ದೂತಸ್ಯ ಕರ್ಮ ದೂತ್ಯಂ । ದೂತಸ್ಯ ಭಾಗಕರ್ಮಣೀ ಇತಿ ಯತ್ । ತಿತ್ಸ್ವರಿತ ಇತಿ ಸ್ವರಿತತ್ವಂ । ಯತೋಽನಾವ ಇತ್ಯಾದ್ಯುದಾತ್ತತ್ವಂ ತ್ವನಿತ್ಯಮಿತಿ ವೀರವೀಯೌ ಚೇತ್ಯತ್ರ ಜ್ಞಾಪಿತಂ । ಭೃಗವಾಣಃ । ಭೃಗುರಿವಾಚರನ್ ಸರ್ವಪ್ರಾತಿಪದಿಕೇಭ್ಯಃ ಕ್ವಿಬ್ವಕ್ತವ್ಯಃ । ಮ. ೩-೧-೧೧-೩ । ಇತಿ ವಚನಾತ್ ಕ್ವಿಪ್ । ತದಂತಾಲ್ಲಟೋ ವ್ಯತ್ಯಯೇನ ಶಾನಚ್ । ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಪ್ರತ್ಯಯಾಂತಧಾತೋರಂತೋದಾತ್ತತ್ವೇ ಪ್ರಾಪ್ತೇ ವೃಷಾದೇರಾಕೃತಿಗಣತ್ವಾದಾದ್ಯುದಾತ್ತತ್ವಂ । ವಿವಾಯವೇ । ವೀ ಗತ್ಯಾದಿಷು । ಅಸ್ಮಾದಂತರ್ಭಾವಿತಣ್ಯರ್ಥಾಲ್ಲಿಟ್ ॥

। ಕೃತಿಪದಾರ್ಥ ।

ವಿಭೃತಃ - ಪ್ರಾಣಾಪಾನಾದಿ ಪಂಚವಿಧವಾಗಿ ಸ್ಥಿತನಾದ । ಮಾತರಿಶ್ವಾ ವಾಯುವು । ಈಂ—ಈ ಅಗ್ನಿಯನ್ನು । ಯತ್—ಯಾವಾಗ । ಮಥೀತ್- ಮಥನಮಾಡಿದನೋ (ಆಗ) । ಶ್ಯೇತಃ—ಶುಭ್ರವರ್ಣನಾಗಿ ಗೃಹೇಗೃಹೇ-- ಪ್ರತಿ ಯಾಗಶಾಲೆಯಲ್ಲಿಯೂ । ಜೇನ್ಯಃ ಭೂತ್—ಪ್ರಾದುರ್ಭೂತನಾದನು (ರಾಕ್ಷಸನಾಶಕನಾದನು) । ಅತ್—ಪ್ರಾದುರ್ಭವನಾಂತರದಲ್ಲಿ । ಈಂ--ಈ ಅಗ್ನಿಗೆ । ಭೃಗವಾಣಃ—ಭೃಗುಋಷಿಯಂತೆ ಆಚರಿಸುವ ಯಜಮಾನನು । ಸಚಾ ಸನ್—ಸ್ನೇಹಿತನಾಗಿ (ರಾಜನು) । ಸಹೀಯಸೇ - (ತನ್ನನ್ನು) ಸರಾಜಯಗೊಳಿಸಿದ । ರಾಜ್ಞೇ ನ--ರಾಜನಿಗೆ ಹೇಗೋ (ಹಾಗೆ) । ದೂತ್ಯಂ—ದೂತಕರ್ಮವನ್ನು । ಆ ವಿವಾಯವೇ—ತೊಂದಿಸಿದನು (ಮಾಡಿಸಿದನು) ।

" ಭಾವಾರ್ಥ "

(ಎಲ್ಲ ಪ್ರದೇಶವನ್ನೂ) ಆವರಿಸಿರುವ ವಾಯುವು ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿದಾಗ, ಅಗ್ನಿಯು ಎಲ್ಲ ಯಾಗಶಾಲೆಗಳಲ್ಲಿಯೂ ಶುಭ್ರವರ್ಣನಾಗಿ ಆವಿರ್ಭೂತನಾಗುತ್ತಾನೆ ಯಾಗಕರ್ತೃವು ಭೃಗುಋಷಿಯಂತೆ, ಪರಾಜಿತನಾದ ರಾಜನು, ಸ್ನೇಹಭಾವದಿಂದ ಪರಾಜಯಗೊಳಿಸಿದ ರಾಜನಲ್ಲಿಗೆ ದೂತನನ್ನು ಕಳುಹಿಸುವಂತೆ, ಅಗ್ನಿಯು ದೌತ್ಯಕರ್ಮವನ್ನು (ಮಾಡುವಂತೆ) ಮಾಡುತ್ತಾನೆ

English Translation

When the diffusive vital air excites Agni, he becomes bright and manifest in every mansion, and the institutor of the rite, imitating Bhrigu, prevails on him to perform the function of messenger, as a prince who has become a friend sends an ambassador to his more powerful (conqueror).

॥ ವಿಶೇಷವಿಷಯಗಳು ॥

ಮಾತರಿಶ್ವಾ ಮಥೀತ್—**ಮಾತರಿಶ್ವಾ** ಎಂಬ ಪದದ ವಿವರಣೆಗೆ ಋ ಸಂ. ೧-೯೩-೬ ನೇ ಋಕ್ಕಿನ ವಿಶೇಷವಿಷಯಗಳನ್ನು ನೋಡಿ. **ಕೀದೃಶಃ ಮಾತರಿಶ್ವಾ । ವಿಭೃತಃ । ಪ್ರಾಣೇಷು ಪ್ರಾಣಾಪಾನಾದಿ ಪಂಚ ವೃತ್ತಿರೂಪೇಣ ವಿಹೃತೋ ವಿಭಜ್ಯ ಸ್ಥಿತಃ ।** ಪ್ರಾಣಿಗಳಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂದು ಐದು ವಿಭಾಗವಾಗಿ ವ್ಯಾಪಿಸಿರುವವನು ಎಂದು **ವಿಭೃತಃ** ಎಂಬ ಪದಕ್ಕೆ ಅರ್ಥವನ್ನು ಹೇಳಿ ಅವುಗಳಲ್ಲಿ, ಈ ಸಂದರ್ಭಕ್ಕೆ **ಮಾತರಿಶ್ವಾ** ಎಂದರೆ **ವ್ಯಾನವೃತ್ತಿರೂಪೇಣಾವಸ್ಥಿತೋ ಮುಖ್ಯಪ್ರಾಣಃ।** ವ್ಯಾನವೃತ್ತಿರೂಪದಲ್ಲಿರುವ ಮುಖ್ಯಪ್ರಾಣನಾದ ವಾಯುವೆಂದು ಭಾಷ್ಯಕಾರರು ವಿವರಿಸುತ್ತಾರೆ ಈ ರೂಪದಲ್ಲಿರುವ ವಾಯುವೇ ಅಗ್ನಿಮಥನಕ್ಕೆ ಸಮರ್ಥನೆಂದೂ ಈ ಕಾರ್ಯವನ್ನು ನಿರ್ವಹಿಸಿದನೆಂದೂ ಸಮರ್ಥಿಸುವುದಕ್ಕೆ ಛಾಂದೊಗ್ಯೋಪನಿಷತ್ತಿನ-**ಅಥ ಯೇಃ ಪ್ರಾಣಾಪಾನಯೋಃ ಸಂಧಿಃ ಸ ವ್ಯಾನಃ । ಅತೋ ಯೇನೈನ್ಯಾನಿ ವೀರ್ಯವಂತಿ ಕರ್ಮಾಣಿ ಯಥಾಗ್ನೇರ್ಮಂಥನಮಾಜೇಃ ಸರಣಂ ದೃಢಸ್ಯ ಧನುಷ ಆಯಮನಮಪ್ರಾಣನ್ನನಪಾನಂಸ್ತಾನಿ ಕರೋತಿ ।** ಎಂಬ ವ್ಯಾನರೂಪದ ವಾಯುವಿನ ಪ್ರಶಂಸೆಯನ್ನು ಉದಾಹರಿಸುತ್ತಾರೆ ಪ್ರಾಣಾಪಾನಗಳ ಶಕ್ತಿಗೆ ವಿವರಿದ ಅಗ್ನಿಮಂಥನಾದಿ ಪರಾಕ್ರಮಕಾರ್ಯಗಳನ್ನೆಲ್ಲಾ ವ್ಯಾನರೂಪದ ವಾಯುವು ಮಾತ್ರ ಮಾಡಬಲ್ಲದು ಎಂದು ಈ ಶ್ರುತಿವಾಕ್ಯದ ತಾತ್ಪರ್ಯ (ಛಾ ಉ ೧-೩-೩-೫.)

ಅಗ್ನಿಮಥನಕ್ಕೆ ಪೂರ್ವಪ್ರಸಿದ್ಧವಾದ ಒಂದು ಕಥೆಯಿದೆ ಅದರಲ್ಲಿ ಹೇಳುವಂತೆ **ಸರ್ವಮಿದಮುಂಧಂ ತಮ ಆಸೀತ್ । ಅಥ ಮಾತರಿಶ್ವಾಕಾಶೇ ಸೂಕ್ಷ್ಮಮಗ್ನಿಮಪಶ್ಯತ್ । ತಮಮಥ್ನಾತ್ । ಮಥಿತ್ವಾಚಾನಯೆದಿತಿ ।** ಹಿಂದೆ ಲೋಕವೆಲ್ಲವೂ ಕಗ್ಗತ್ತಲೆಯಿಂದ ಆವೃತವಾಯಿತು ಆಗ ಮಾತರಿಶ್ವನು ಸೂಕ್ಷ್ಮರೂಪದ ಅಗ್ನಿಯನ್ನು ಗುರ್ತಿಸಿ ಮಥನ ಮಾಡಿದನು ಅನಂತರ ಯಜ್ಞಕ್ಕೆ ಅನುಕೂಲವಾಗುವಂತೆ ಪೃಥ್ವಿಗೆ ಕರೆತಂದನು ಎಂದು ಪ್ರಸಿದ್ಧವಾದ ಕಥೆಯು ಸೂಕ್ಷ್ಮವಾಗಿ ಋಕ್ಸಂಹಿತೆಯಲ್ಲಿಯೂ ಅನೇಕಕಡೆ ಹೇಳಲ್ಪಟ್ಟಿದೆ. ಉದಾಹರಣೆಗೆ —

ಅನ್ಯಂ ದಿವೋ ಮಾತರಿಶ್ವಾ ಜಭಾರಾಮಥ್ನಾದನ್ಯಂ ಪರಿ ಶ್ಯೇನೋ ಅದ್ರೇಃ ।

(ಋ ಸಂ ೧-೯೩-೬)

ಆ ದೂತೋ ಅಗ್ನಿಮಭರದ್ವಿವಸ್ವತೋ ನೈಶ್ಚಾನರಂ ಮಾತರಿಶ್ವಾ ಪರಾವತಃ ।

(ಋ ಸಂ ೬-೮-೪)

ಎಂಬ ಋಕ್ಕುಗಳಲ್ಲಿಯೂ ಸಹ ಇಲ್ಲಿ ಪ್ರಶಂಸಿಸುವಂತೆಯೇ ಅಗ್ನಿಪ್ರಶಂಸೆಯನ್ನು ಪೂರ್ವಕಥಾಸಂದರ್ಭದೊಡನೆ ವಿವರಿಸಿರುತ್ತೆ ಹೀಗೆ ಮಾತರಿಶ್ವನು ಕರೆತಂದನಂತರವೇ ಅಗ್ನಿಯು ಯಜ್ಞಗೃಹದಲ್ಲಿ ಬೆಳಗಿದನು ಎಂದರ್ಥ.

ಶ್ಯೇತಃ—**ಶುಭ್ರವರ್ಣೋ ಭೂತ್ವಾ ।** ಶುಭ್ರವಾಗಿ ಪ್ರಕಾಶಿಸುತ್ತಾ,

ಜ್ಯೇನಃ । ಸ್ಯಾದುರ್ಭೂತೇಃ ಭೂತ್ । ಯದ್ವಾ । ರಕ್ಷಣಂ ತಮಸಾಂ ವಾ ಜೇತಾ । ಅಭವತ್ । ಮಾತರಿಶ್ವನು ಯಜ್ಞಗೃಹಕ್ಕೆ ಕರೆತಂದ ಅಗ್ನಿಯು ಮೇಲೆ ಸ್ಯಾದುರ್ಭೂತನಾದನು. ಅಥವಾ ತಮಸ್ಸಿಗೂ ಶತ್ರುಗಳಿಗೂ

ನಾಶಕನಾಗಿ ಜಯಶೀಲನಾಗಿ ಬೆಳಗಿದನು ಎಂಬ ಎರಡರ್ಥವನ್ನೂ ಹೇಳಬಹುದು ಆದರೆ **ಜೇನ್ಯಃ** ಎಂಬ ಪದವು ಋಕ್ಸಂಹಿತೆಯಲ್ಲಿ ಹೆಚ್ಚಾಗಿ ಜಯಶೀಲನಾಗು ಎನ್ನುವ ಅರ್ಥದಲ್ಲಿಯೇ ಪ್ರಯುಕ್ತವಾಗಿದೆ ೧-೧೩೮-೭, ೧-೧೩೦-೬, ೧-೧೪೦-೨, ೨-೫-೧; ೧೦-೪-೩ ಇತ್ಯಾದಿ ನಾನಾ ಋಕ್ಕುಗಳಲ್ಲಿ **ಜಯಶೀಲಃ** ಎಂಬರ್ಥನೇ ಸರಿಯಾಗಿದೆ. ಇಲ್ಲಿಯೂ ಸಹ ಅದರಂತೆಯೇ ಜಯಶೀಲನೆಂಬ ಅರ್ಥವೇ ಸಹಜವಾಗಿದೆ.

ಸಚಾ ಸನ್ --ಸಖಾ ಭವನ್ । ಸ್ನೇಹಿತನಾಗಿ । **ದೂತಸ್ಯ ಕರ್ಮ ಆವಿವಾಯ** । ದೂತಕೃತ್ಯವನ್ನು ವಹಿಸುವಂತೆ ಮಾಡಿದನು. ಯಜ್ಞಕರ್ತನಿಗೂ ದೇವತೆಗಳಿಗೂ ಅತ್ಯಂತ ಪ್ರಿಯನಾದ ಮಿತ್ರನೆಂದು ಅಗ್ನಿಯನ್ನು ಅನೇಕ ಕಡೆ ವರ್ಣಿಸಿದೆ. ಉದಾಹರಣೆಗೆ—

ಅ ಹಿಷ್ಮಾ ಸೂನವೇ ಪಿತಾಪಿರ್ಯಜತ್ಯಾಪಯೇ । ಸಖಾ ಸಖ್ಯೇ ವರೇಣ್ಯಃ ।
(ಋ ಸಂ. ೧-೭೬-೩)

ತ್ವಂ ಜಾಮಿರ್ಜನಾನಾಮಗ್ನೇ ಮಿತ್ರೋ ಅಸಿ ಪ್ರಿಯಃ । ಸಖಾ ಸಖಿಭ್ಯ ಈಡ್ಯಃ ।
(ಋ ಸಂ ೧-೭೫-೪)

ತ್ವಂ ಪುತ್ರೋ ಭವಸಿ ಯಸ್ತೇ೨ವಿಧತ್ತ್ವಂ ಸಖಾ ಸುಶೇವಃ ಪಾಸ್ಯಾಧೃಷಃ ।
(ಋ ಸಂ ೭-೧೧-೯)

ತ್ವಂ ತ್ರಾತಾ ತರಣೇ ಚೇತ್ಯೋ ಭೂಃ ಪಿತಾ ಮಾತಾ ಸದಮಿನ್ಮಾನುಷಾಣಾಂ ।
(ಋ ಸಂ ೬-೧೦-೫)

ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯು ಸಖ್ಯವೂ ಸಹಾಯವೂ ಹೇಳಿರುವಂತೆ ಇಲ್ಲಿಯೂ ಸಹ ಅಂತಹ ಸಖನಾಗಿ ದೂತ ಕರ್ಮವನ್ನು ವಹಿಸಿದನೆಂದು ಪ್ರಶಂಸಿಸಿದೆ ೧೦ನೇ ಮಂಡಲದ ೫೧ನೇ ಸೂಕ್ತದಲ್ಲಿ ಅಗ್ನಿಯು ದೂತಕೃತ್ಯವನ್ನು ವಹಿಸುವಂತೆ ಪ್ರಾರ್ಥಿಸುವ ಅಗ್ನಿಗೂ ಇತರ ದೇವತೆಗಳಿಗೂ ನಡೆಯುವ ಸಂವಾದವು ಈ ಸನ್ನಿವೇಶವನ್ನು ಚೆನ್ನಾಗಿ ವಿವರಿಸುತ್ತದೆ. ಅದಲ್ಲದೇ,

ಅಗ್ನಿಂ ದೂತಂ ವೃಣೀಮಹೇ ಹೋತಾರಂ ವಿಶ್ವವೇದಸಂ ।
(ಋ. ಸಂ. ೧-೧೨-೧)

ದೇವಾಸಸ್ತ್ವಾ ವರುಣೋ ಮಿತ್ರೋ ಅರ್ಯಮಾ ಸಂ ದೂತಂ ಪ್ರತ್ನಮಿಂಧತೇ ।
(ಋ ಸಂ ೧-೧೬೬-೪)

ಜುಷ್ಟೋ ಹಿ ದೂತೋ ಅಸಿ ಹವ್ಯವಾಹನೋ೨ಗ್ನೇ ರಥೀರಧ್ವರಾಣಾಂ ।
(ಋ ಸಂ ೧-೪೪-೨).

ಎಂಬುದಾಗಿ ದೇವತೆಗಳಿಗೂ ಮಾನವರಾದ ಯಜ್ಞಕರ್ತರಿಗೂ ಅಗ್ನಿಯು ಸಮಾನವಾದ ದೂತನಾಗಿರುವುದು ಸಹಜವಾದರೂ ಸಹ ಈ ವಿಧವಾಗಿ ದೂತನಾಗಬೇಕಾದರೆ ಯಜ್ಞಕರ್ತನ ಯೋಗ್ಯತೆಯು ಬಹಳ ಶ್ರೇಷ್ಠವಾಗಿರಬೇಕು ಎಂದು ತೋರಿಸಲು

ಭೃಗವಾಣಃ—ಎಂಬ ವಿಶೇಷಣವನ್ನು ಸೂಚಿಸಿ **ಭೃಗು** ಋಷಿಯಂತೆ ಅತ್ಯಂತ ಶ್ರೇಷ್ಠವಾದ ಕರ್ಮಾಚರಣೆಯಲ್ಲಿ ನಿರತನಾದ ಯಜಮಾನನಿಗೆ ಮಾತ್ರ ಅಗ್ನಿಯ ಈ ವಿಧವಾದ ಸಖ್ಯವು ದೊರೆಯುವುದೆಂದೂ ಸೂಚಿಸಿದೆ. ಅಂತಹ ಸಂದರ್ಭದಲ್ಲಿ ಒಬ್ಬ ರಾಜನಿಗೆ ಇನ್ನೊಬ್ಬ ರಾಜನ ಸಹಾಯವಿದ್ದರೆ ಇಬ್ಬರ ಶಕ್ತಿಯೂ ಹೇಗೆ ಪ್ರಕಾಶಮಾನವಾಗಿಯೂ ಜಯವನ್ನು ಸಂಪಾದಿಸುವುದಾಗಿಯೂ ಆಗುವುದೋ ಹಾಗೆ ಅಗ್ನಿಯಜಮಾನರ ಸಖ್ಯವು ದೇವಮಾನವಾದಿ ಸಕಲರ ಹಿತಕ್ಕೂ ಸಾಧಕವಾಗುವುದೆಂದಭಿಪ್ರಾಯವು ಅಥವಾ ಯಾಗಾದಿಕರ್ಮಗಳಲ್ಲಿ ನಿರತನಾದ ಯಜಮಾನನು ಶ್ರೇಷ್ಠವಾದ ಸ್ಥಾನವನ್ನಾಕ್ರಮಿಸುವುದರಿಂದ ತನ್ನ ಸ್ಥಾನಮಹಿಮೆಯಿಂದ ಒಬ್ಬ ರಾಜನು ತನ್ನ ಸ್ನೇಹಿತನೂ ತನಗಿಂತಲೂ ಹೆಚ್ಚು ಪರಾಕ್ರಮಿಯಾದವನೂ ಆದ ಇನ್ನೊಬ್ಬ ದೊರೆಗೆ ಯಾವ ರೀತಿ ತನ್ನ ದೂತನನ್ನು ಕಳುಹಿಸುವನೋ ಆರೀತಿ ಅಗ್ನಿಯನ್ನು ದೇವತೆಗಳಲ್ಲಿಗೆ ಕಳುಹಿಸುವನು ಎಂದರ್ಥವಾಗುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

ಮಥೀತ್—ಮಥೇ ವಿಲೋಡನೇ ಧಾತು. ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಇತಶ್ಚ** ಎಂಬುದರಿಂದ ಇಕಾರಲೋಪ. **ಚ್ಲೇಃ ಸಿಚ್** ಎಂಬುದರಿಂದ ಚ್ಲಿಗೆ ಸಿಚಾದೇಶ. **ಆರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಇಡಾಗಮ **ಅಸ್ತಿಸಿಚೋಽಪೃಕ್ತೇ** (ಪಾ. ಸೂ. ೭-೩-೯೬) ಅಪೃಕ್ತವಾದ ತಿಪ್ಪಿಗೆ ಈಡಾಗನು. **ಹ್ಯಂತಕ್ಷಣಶ್ವಸೆ**—(ಪಾ ಸೂ. ೭-೨-೫) ಎಂಬುದರಿಂದ ಧಾತುವು ಏದಿತ್ತಾದುದರಿಂದ ವೃದ್ಧಿ ಬರುವುದಿಲ್ಲ **ಇಟ ಈಟಿ** (ಪಾ ಸೂ ೮-೨-೨೮) ಎಂಬುದರಿಂದ ಸಿಚ್ಚಿಗೆ ಲೋಪ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ. ಆಗಮ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ

ಜೇನ್ಯಃ—ಜನೀ ಪ್ರಾದುರ್ಭಾವೇ ಧಾತು. ಇದಕ್ಕೆ ಔಣಾದಿಕವಾದ ಏನ್ಯ ಪ್ರತ್ಯಯವೂ ಟಲೋಪವೂ ಬರುತ್ತವೆ ಎಂದು ಭಟ್ಟಭಾಸ್ಕರಮಿಶ್ರರ ಮತ. ಅಥವಾ ಜಿ ಜಯೇ ಧಾತು ಇದಕ್ಕೆ **ಕೃತ್ಯಲ್ಯುಟೋ ಬಹುಲಂ** (ಪಾ ಸೂ ೩-೩-೧೧೩) ಎಂಬಲ್ಲಿ ಬಹುಲವಚನವಿರುವುದರಿಂದ ಕರ್ತರಿಯಲ್ಲಿ **ಅಚೋಯತ್** (ಪಾ. ಸೂ. ೩-೧-೯೭) ಎಂಬುದರಿಂದ ಯತ್ ಪ್ರತ್ಯಯ ಆದಕ್ಕೆ ನುಡಾಗಮ. ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ. ಜೇನ್ಯ ಎಂದು ರೂಪವಾಗುತ್ತದೆ. **ಯತೋಽನಾವಃ** (ಪಾ ಸೂ. ೬-೧-೨೧೩) ಎಂಬುದರಿಂದ ಸ್ವರಿತವು ಬಾಧಿತವಾಗಿ ಆದ್ಯುದಾತ್ತಸ್ವರ ಬರುತ್ತದೆ.

ಸಹೀಯಸೇ—ಸಹಃ ಎಂಬುದು ಬಲದ ಹೆಸರು. ಅತಿಶಯೇನ ಸಹಃ ಅಸ್ಯ ಅಸ್ತಿ ಎಂಬರ್ಥ ವಿವಕ್ಷೆ ಮಾಡಿದಾಗ ಈಯಸುನ್ ಪ್ರತ್ಯಯ. ನಿತ್ತ್ವಾದುದರಿಂದ ಆದ್ಯುದಾತ್ತವಾಗುತ್ತದೆ **ಚತುರ್ಥೀ ಏಕವಚನಾಂತರೂಪ.**

ದೂತ್ಯಮ್—ದೂತಸ್ಯ ಕರ್ಮ ದೂತ್ಯಮ್ **ದೂತ್ಯಸ್ಯ ಭಾವಕರ್ಮಣೀ** ಎಂಬುದರಿಂದ ಇಲ್ಲಿ ಕರ್ಮಾರ್ಥದಲ್ಲಿ ಯತ್ ಪ್ರತ್ಯಯ. **ಯಸ್ಯೇತಿ ಚ** ಎಂಬುದರಿಂದ ದೂತ ಎಂಬಲ್ಲಿರುವ ಆಕಾರಕ್ಕೆ **ಲೋಪ** ಪ್ರತ್ಯಯ ತಿತ್ತಾದುದರಿಂದ **ತಿತ್ ಸ್ವರಿತಂ** (ಪಾ. ಸೂ ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ. ಯದ್ಯಪಿ ಇದಕ್ಕೆ ಬಾಧಕವಾಗಿ **ಯತೋ ನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರಬೇಕಾಗುತ್ತದೆ,

ದರೆ ಅದರಿಂದ ಬರುವ ಆದ್ಯುದಾತ್ತಸ್ವರವು ಅನಿತ್ಯವೆಂದು **ವೀರವೀರ್ಯೌ ಚ** (ಪಾ ಸೂ ೬-೨-೧೩೦) ಎಂಬ ಸೂತ್ರದಲ್ಲಿ ಜ್ಞಾಪಿತವಾದುದರಿಂದ ಇಲ್ಲಿ ಬರುವುದಿಲ್ಲ.

ಭೃಗವಾಣಃ--ಭೃಗುರಿವ ಆಚರನ್ ಭೃಗವಾಣಃ **ಸರ್ವಪ್ರಾತಿಪದಿಕೇಭ್ಯಃ ಕ್ವಿಬ್ವಕ್ತವ್ಯಃ** (ಪಾ. ವಾ. -೧-೧೧-೩) ಎಂಬ ವಚನದಿಂದ ಭೃಗು ಎಂಬ ಪ್ರಾತಿಪದಿಕದ ಮೇಲೆ ಆಚಾರಾರ್ಥವಿವಕ್ಷಾ ಮಾಡಿದಾಗ ಕ್ವಿಪ್. ಚಾರಾರ್ಥ ಕ್ವಿಪ್ ಆದುದರಿಂದ **ಸನಾದ್ಯಂತಾ ಧಾತವಃ** ಎಂಬುದರಿಂದ ಭೃಗು ಎಂಬ ಕ್ವಿಬಂತಕ್ಕೆ ಧಾತುಸಂಜ್ಞೆ ರುತ್ತದೆ. **ವ್ಯತ್ಯಯೋ ಬಹುಲಂ** ಎಂಬುದರಿಂದ ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಶಪ್ ವಿಕರಣ ತನ್ನಿಮಿತ್ತ ಗಿ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಇಕ್ಕಿಗೆ ಗುಣ. ಅವಾದೇಶ. ಋಕಾರದ ಪರದಲ್ಲಿ ಡಾದಿವ್ಯವಹಿತವಾಗಿ ನಕಾರ ಬಂದುದರಿಂದ ಶಾನಚಿನ ನಕಾರಕ್ಕೆ ಣತ್ವ. ಅದುಪದದೇಶದ ಪರದಲ್ಲಿ ಲಸಾರ್ವಧಾತು ವು (ಶಾನಚ್) ಬಂದುದರಿಂದ **ತಾಸ್ಯನುದಾತ್ತೇಶ್**-ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ಪ್ರತ್ಯಯಾಂತ ತು-ವಿನ (ಭೃಗು) ಆಂತೋದಾತ್ತಸ್ವರವು ಪ್ರಾಪ್ತವಾದಾಗ ವೃಷಾದಿಗಣವು ಆಕೃತಿಗಣವಾದುದರಿಂದ ಅಲ್ಲಿ ಇದನ್ನು ೀರಿಸುವುದರಿಂದ **ವೃಷಾದೀನಾಂ ಚ** (ಪಾ ಸೂ ೬-೧-೨೦೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ವಿವಾಯೆ—ವೀ ಗತ್ಯಾದಿಸು. ಧಾತು ಪ್ರೇರಣಾರ್ಥೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಈ ತುವಿಗೆ ಲಿಟ್ ಪ್ರಥಮಪುರುಷ ಏಕವಚನದಲ್ಲಿ **ಪರಸ್ಮೈಪದಾನಾಂ**-ಎಂಬುದರಿಂದ ತಿಪ್ಪಿಗೆ ಣಲಾದೇಶ ಸ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಹ್ರಸ್ವ. ಣಿರ್ತಪ್ರತ್ಯಯವಾದುದರಿಂದ **ಆಚೋಞ್ಣಿತಿ** ಎಂಬುದರಿಂದ ಈಕಾರಕ್ಕೆ ವೃದ್ಧಿ. ಆಯಾದೇಶ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೪ ॥

॥ ಸಂಹಿತಾಪಾಠಃ ॥

ಮಹೇ ಯತ್ವಿತ್ರ ಈಂ ರಸಂ ದಿವೇ ಕರವ ತ್ಸರತ್ಪೃಶನ್ಯಶ್ವಿಕಿ-
ತ್ವಾನ್ ।
ಸೃಜದಸ್ತಾ ಧೃಷತಾ ದಿದ್ಯುಮಸ್ಮೈ ಸ್ವಾಯಾಂ ದೇವೋ ದುಹಿತರಿ
ತ್ವಿಷಿಂ ಧಾತ್ ॥ ೫ ॥

॥ ಪದಪಾಠಃ ॥

ಮಹೇ । ಯತ್ । ಪಿತ್ರೇ । ಈಂ । ರಸಂ । ದಿವೇ । ಕಃ । ಅವ । ತ್ಸರತ್ ।
ಪೃಶನ್ಯಃ । ಚಿಕಿತ್ವಾನ್ ।
ಸೃಜತ್ । ಅಸ್ತಾ । ಧೃಷತಾ । ದಿದ್ಯುಂ । ಅಸ್ಮೈ । ಸ್ವಾಯಾಂ । ದೇವಃ । ದುಹಿತರಿ ।
ತ್ವಿಷಿಂ । ಧಾತ್ ॥ ೫ ॥

॥ ಸಾಯಣಭಾಷ್ಯಂ ॥

ಮಹೇ ಮಹತೇ ಪಿತ್ರೇ ಪಾಲಯಿತ್ರೇ ದಿವೇ ದ್ಯೋತಮಾನಾಯ ದೇವಗಣಾಯೇಮಿಮಂ ರಸಂ ಪೃಥಿವ್ಯಾಃ ಸಾರಭೂತಂ ಹವಿರ್ಯದ್ಯದಾ ಯಜಮಾನಃ ಕಃ ಕರೋತಿ ತದಾನೀಂ ಪೃಶನ್ಯಃ ಸ್ಪರ್ಶನ-ಕುಶಲೋ ರಾಕ್ಷಸಾದಿಶ್ಚಿಕಿತ್ವಾನ್ ಹವೀಂಷಿ ವಹಂತಂ ಹೇ ಅಗ್ನೇ ತ್ವಾಂ ಜಾನನ್ ಅವ ತ್ಸರತ್ । ತ್ವದ್ಭಯಾತ್ಪಲಾಯತೇ । ಅಸ್ತೇಷುಕ್ಷೇಪಣಶೀಲೋಽಗ್ನಿರ್ಧೃಷತಾ ಧರ್ಷಕೇಣ ಧನುಷಾಸ್ಮೈ ಪಲಾಯ-ಮಾನಾಯ ರಾಕ್ಷಸಾದಯೇ ದಿದ್ಯುಂ ದೀಪ್ಯಮಾನಂ ಬಾಣಂ ಸೃಜತ್ । ಏಸೃಜತಿ । ದೇವೋ ದೀಪ್ಯಮಾನ ಉಷಃಕಾಲಂ ಪ್ರಾಪ್ತೋಽಗ್ನಿಃ ಸ್ವಾಯಾಂ ಸ್ವಕೀಯಾಯಾಂ ದುಹಿತರಿ ದುಹಿತೃವತ್ಸಮನಂತರಭಾವಿನ್ಯಾ-ಮುಷಸಿ ತ್ವಿಷಿಂ ಸ್ವಕೀಯಾಂ ದೀಪ್ತಿಂ ಧಾತ್ । ಸ್ಥಾಪಯತಿ । ಉಷಃಕಾಲೇ ಹಿ ಸೂರ್ಯಕಿರಣಾಃ ಸ್ಪಾದುರ್ಭವಂತಿ । ತೈಃ ಸ್ವಕೀಯಂ ಪ್ರಕಾಶಮೇಕೀಕರೋತಿ । ತಥಾ ಚ ತೈತ್ತಿರೀಯಕಂ । ಉದ್ಯಂತಂ ವಾನಾದಿತ್ಯಮಗ್ನಿರನುಸಮಾರೋಹತಿ ತಸ್ಮಾದ್ಧೂಮ ಏವಾಗ್ನೇರ್ದಿವಾ ದದೃಶೇ । ತೈ. ಬ್ರಾ. ೨-೧-೨-೧೦ । ಇತಿ । ಅತ ಉಷಸಿ ದೀಪ್ತಿಂ ನಿದಧಾತೀತ್ಯುಚ್ಯತೇ ॥ ಕಃ । ಕರೋತೇರ್ಲುಙಿ ಮಂತ್ರೇ ಘಸೇತ್ಯಾದಿನಾ ಚ್ಲೇರ್ಲುಕ್ । ತ್ಸರತ್ । ತ್ಸರ ಚ್ಛದ್ಮಗತೌ । ಲೇಟ್ಯಡಾಗಮಃ । ಇತಶ್ಚೇತೀಕಾರಲೋಪಃ । ಪೃಶನ್ಯಃ । ಸ್ಪೃಶ ಸಂಸ್ಪರ್ಶನೇ । ಕ್ಯಸ್ಯವ್ಯಜೀತಿ । ಉ. ೨-೪೧ । ವಿಧೀಯಮಾನಃ ಕ್ಯಪ್ರತ್ಯಯೋ ಬಹುಲ-ವಚನಾದನ್ಯಾದಪಿ ಭವತಿ । ಸ್ಪೃಶನಂ ಸ್ಪರ್ಶಃ । ತತ್ರ ಸಾಧುರಿತಿ ಯತ್ । ಸಲೋಪಶ್ಛಾಂದಸಃ । ತಿತ್ಸ್ವರಿತಮಿತಿ ಸ್ವರಿತತ್ವಂ । ದಿದ್ಯುಂ । ದಿದ್ಯುದಿತಿ ವಜ್ರನಾಮ । ಅಂತ್ಯಲೋಪಶ್ಛಾಂದಸಃ । ಧಾತ್ । ಛಾಂದಸೋ ವರ್ತಮಾನೇ ಲುಙ್ ॥

॥ ಪ್ರತಿಪದಾರ್ಥ ॥

ಮಹೇ—ಮಹನೀಯನಾದ । ಪಿತ್ರೇ—ಪಾಲಕನಾದ । ದಿವೇ—ಪ್ರಕಾಶಿಸುತ್ತಿರುವ (ದೇವಗಣಕ್ಕೆ) । ಈಂ ರಸಂ—ಈ (ಭೂಮಿಯ) ಸಾರಭೂತವಾದ (ಹವಿಸ್ಸನ್ನು) । ಯತ್—ಯಾವಾಗ (ಯಜಮಾನನು) । ಕಃ—ಮಾಡುತ್ತಾನೋ (ಆಗ) । ಪೃಶನ್ಯಃ—ಸ್ಪರ್ಶನಕುಶಲರಾದ (ರಾಕ್ಷಸರು) । ಚಿಕಿತ್ವಾನ್—(ನೀನು ದೇವತೆ-

ಗಳಿಗೆ ಹವಿಸ್ಸನ್ನು ವಹಿಸುತ್ತಿರುವುದನ್ನು ತಿಳಿದವರಾಗಿ । **ಅವ ತ್ಸರತ್**—ಹಿಂದಕ್ಕೆ ಸರಿದರು । **ಅಸ್ತಾ**—ಬಾಣ ಬಿಡುವುದೇ ಸ್ವಭಾವವಾಗಿ ಉಳ್ಳ ಅಗ್ನಿಯು । **ಧೃಷತಾ**—ಧನುಸ್ಸಿನಿಂದ । **ಅಸ್ಯೈ**—(ಓಡಿಹೋಗುತ್ತಿರುವ) ಈ ರಾಕ್ಷಸರಮೇಲೆ । **ದಿದ್ಯುಂ**—ದೀಪ್ತವಾದ (ಬಾಣವನ್ನು) । **ಸೃಜತ್**—ಬಿಡುತ್ತಾನೆ । **ದೇವಃ**—ಪ್ರಕಾಶಮಾನನಾದ ಅಗ್ನಿಯು । **ಸ್ವಾಯಾಂ**—ಸ್ವಕೀಯಳಾದ । **ದುಹಿತರಿ**—ಮಗಳಂತೆ ಇರುವ ಉಷಸ್ಸಿನಲ್ಲಿ । **ದೀಷ್ಮಿಂ**—ತೇಜಸ್ಸನ್ನು । **ಧಾತ್**—ಇಡುತ್ತಾನೆ. ।

॥ ಭಾವಾರ್ಥ ॥

ಯಜಮಾನನು ಹವಿಸ್ಸನ್ನು ಮುಖ್ಯಾತ್ಮನೂ, ಪಾಲಕನೂ ಆದ ಅಗ್ನಿಗೆ ಅರ್ಪಿಸುತ್ತಲೂ, ಅದನ್ನು ಸ್ವೀಕರಿಸಲು ಕಾದಿರುವ ರಾಕ್ಷಸರು ಹಿಂದಕ್ಕೆ ಸರಿಯುತ್ತಾರೆ. ಆದರೆ, ಧನುರ್ಧರನಾದ ಅಗ್ನಿಯು ಅವರಮೇಲೆ ಬಾಣವನ್ನು ಎಸೆಯುತ್ತಾನೆ ಅನಂತರ ಸಮೀಪಿಸಿರುವ ಮಗಳಂತಿರುವ ಉಷಸ್ಸಿಗೆ ಪ್ರಕಾಶವನ್ನು ಉಂಟುಮಾಡುತ್ತಾನೆ

English Translation.

When (the worshipper) offers an oblation to his great and illustrious protector, the grasping (Rakshas), recognizing you Agni, retires, but Agni, the archer, sends after him a blazing arrow from his dreadful bow, and the God bestows light upon his own daughter, (the dawn)

॥ ವಿಶೇಷವಿಷಯಗಳು ॥

ಅಗ್ನಿಯು ದೇವತೆಗಳ ಮತ್ತು ಮಾನವರಾದ ಯಜ್ಞಕರ್ತರ ದೂತಕೃತ್ಯವನ್ನು ವಹಿಸಿ ಅವರಿಗೆ ಉಪಕಾರಕನಾಗಿರುವುದು ಮಾತ್ರವಲ್ಲದೇ, ದಾರಿಯಲ್ಲಿ ಒದಗುವ ಸಕಲವಾದ ವಿಘ್ನಗಳನ್ನೂ ಪರಿಹರಿಸಲು ಸಮರ್ಥನಾಗಿದ್ದಾನೆ. ರಾಕ್ಷಸರ ಹಾವಳಿಯನ್ನು ತಪ್ಪಿಸಿ, ತಮಸ್ಸನ್ನು ನಾಶಮಾಡಿ, ತನ್ನ ಆವಿರ್ಭವಾನಂತರ ಉದಯಿಸುವ ತನ್ನ ದುಹಿತೃವಾದ ಉಷಸ್ಸಿಗೆ ತನ್ನ ಕಾಂತಿಯನ್ನು ಕೊಟ್ಟು ಬೆಳಗುವಂತೆ ಮಾಡುತ್ತಾನೆ

ಈಂ—ಈ ಪದದ ಸ್ವರೂಪವನ್ನೂ ವೈಶಿಷ್ಟ್ಯವನ್ನೂ ಹಿಂದೆಯೇ ವಿಶದವಾಗಿ ವಿವರಿಸಿದೆ

ಕಃ—**ಕೃ** ಧಾತುವಿನಿಂದ ನಿಷ್ಪನ್ನವಾಗಿ **ಕಃ** ಎಂದರೆ ಮಾಡುತ್ತಾನೆ ಎಂದರ್ಥವಾಗಿದೆ.

ರಸಂ—**ಅಂಧಃ, ವಾಜಃ ಪಯಃ** ಇತ್ಯಾದಿ ೨೮ ಅನ್ನನಾಮಗಳಲ್ಲಿ ಪರಿಗಣಿತವಾಗಿರುವುದರಿಂದ (ನಿ. ೩-೯) **ರಸಂ** ಎಂದರೆ ಇಲ್ಲಿ ಹವಿಸ್ಸಿನ ರೂಪದ ಅನ್ನವನ್ನು ಎಂದರೆ ಪೃಥ್ವಿಯ ಸಾರಭೂತವಾದ ಹವಿಸ್ಸನ್ನು ಎಂದರ್ಥ

ಪೃಶನ್ಯಃ—ಸ್ಪೃಶ—ಸಂಸ್ಪರ್ಶನೇ । ಸ್ಪರ್ಶನಮಾಡು, ಮುಟ್ಟಿಸಿಕೊ ಎನ್ನುವ ಅರ್ಥವನ್ನು ಕೊಡುವ **ಸ್ಪೃಶ** ಧಾತುವಿನಿಂದ **ಪೃಶನ್ಯಃ** ಎಂಬ ರೂಪನಿಷ್ಪತ್ತಿಯಾಗಿದೆ. **ಸ್ಪರ್ಶನಕುಶಲೋ** ರಾಕ್ಷಸಾದಿಃ ಎಂದರೆ ಕೊಳ್ಳೆ

ಹೊಡೆಯುವುದರಲ್ಲಿ ಸಮರ್ಥರಾದ ರಾಕ್ಷಸಾದಿಗಳು ಎಂದರ್ಥವಾಗುತ್ತದೆ. ಇದೇ ರೀತಿಯಲ್ಲಿ **ಪೃಶನಸ್ತ್ಯಯುಃ** (೧-೮೪-೧೧), **ಪೃಶನೀ** (೧೦-೭೩-೨); **ಪೃಶನೇ** (೯-೯೭-೫೪) ಇತ್ಯಾದಿ ರೂಪಗಳೂ ಆಗಿವೆ. **ಪೃಶನ್ಯಃ** । ಎಂಬ ಪದವೇ ಪುನಃ ೧೦-೬೧-೮ನೇ ಋಕ್ಕಿನಲ್ಲಿ ಪ್ರಯೋಗಿಸಿದಾಗ ಇದೇ ಅರ್ಥವುಳ್ಳದ್ದಾಗಿ **ರುದ್ರನಿಗೆ** ವಿಶೇಷಣವಾಗಿದೆ

ಸರತ್ಪದಾ ನ ದಕ್ಷಿಣಾ ಸರಾವ್ಯಜ್ ನ ತಾ ನು ಮೇ ಪೃಶನ್ಯೋ ಜಗೃಭ್ರೇ ।

(ಋ ಸಂ ೧೦-೬೧-೮).

ಅವ ತ್ಸರತ್—ತಪ್ಪಿಸಿಕೊಂಡು ಓಡಿಹೊದನು **ವರ್ತತೇ, ಅಯತೇ, ಲೋಟತೇ**—(ಇತ್ಯಾದಿ) ೧೨೨ ಗತಿ ಕರ್ಮನಾಮಗಳಲ್ಲಿ ಪರಿತವಾಗಿರುವುದರಿಂದ (ನಿ. ೩-೯) ಸಂಚರಿಸು ಚಲಿಸು ಎಂದರ್ಥವಾಗುತ್ತದೆ. ಆದರೆ ಈ ಧಾತುವನ್ನು ಒಂದು ವಿಶೇಷಾರ್ಥದಲ್ಲಿ ಉಪಯೋಗಿಸಿದೆ. **ತ್ಸರುಃ, ತ್ಸರೀ, ತ್ಸರತ್** ಎಂಬ ಪ್ರಯೋಗಗಳು ಬಂದಾಗಲೆಲ್ಲಾ **ಛದ್ಮಗತಿ** ಎಂದರ್ಥವಾಗುತ್ತದೆ ವಕ್ರವಾಗಿ ಚಲಿಸು ಅಥವಾ ಮೋಸದಿಂದ ಸಂಚರಿಸು ಎಂದಭಿಪ್ರಾಯವು ಉದಾಹರಣೆಗೆ—

ವಹತ್ಯುತ್ಸಮಾರ್ಜುನೇಯಂ ಶತಕ್ರತುಃ ತ್ಸರದ್ಗಂಧರ್ವಮಸ್ತೃತಂ ।

(ಋ ಸಂ. ೮-೧-೧೧)

ಎಂಬ ಋಕ್ಕಿನಲ್ಲಿ ಬರುವ **ತ್ಸರತ್** ಶಬ್ದಕ್ಕೆ **ಛದ್ಮಗತ್ಯಾ ಗಚ್ಛೆತ್** । ಮೋಸದಿಂದ ಹೋದನು ಎಂದರ್ಥ. ಆದರಂತೆಯೇ ಇಲ್ಲಿಯೂ ಸಹ ರಾಕ್ಷಸನು ಇತರರನ್ನು ಕೊಳ್ಳೆಹೊಡೆಯಲು ಸಮರ್ಥನಾದರೂ ಸಹ ಅಗ್ನಿಗೆ ಬೆದರಿ ತಪ್ಪಿಸಿಕೊಂಡು ಮೋಸದಿಂದ ಓಡಿಹೋದನು ಎಂದರ್ಥ ಅಗ್ನಿಯ ಸಾಮರ್ಥ್ಯವೂ ಕೌಶಲ್ಯವೂ ಇದಕ್ಕೆ ಕಾರಣವೆಂದು ಹೇಳಿದೆ.

ಅಸ್ತಾ—**ಇಷುಕ್ಷೇಪಣಕುಶಲಃ ಅಗ್ನಿಃ** । ಬಾಣವನ್ನು ಬಿಡುವುದರಲ್ಲಿ ಕುಶಲನಾದ ಅಗ್ನಿಯು

ದಿದ್ಯುಂ ಸೃಜತ್—ದಿವ್ಯವನ್ನು ಬಿಟ್ಟಾಗ **ದಿದ್ಯುತ್, ನೇಮಿಃ, ಹೇತಿಃ** ಇತ್ಯಾದಿ ೧೪ ವಜ್ರನಾಮಗಳಲ್ಲಿ ಪರಿತವಾಗಿರುವುದರಿಂದ (ನಿ ೩-೧೧) **ದಿದ್ಯುವೆಂದರೆ** ಸಾಮಾನ್ಯವಾಗಿ ಇಂದ್ರನ ವಜ್ರಾಯುಧವಾಗುತ್ತದೆ. ಆದರೆ **ಕೆಲವೆಡೆಗಳಲ್ಲಿ** ಪ್ರಕಾಶಮಾನವಾದ ಬಾಣವೆಂದೂ ಆಗುತ್ತದೆ. **ದಿದ್ಯುತ್, ದ್ಯುತೇರ್ವಾ, ದ್ಯುತೇರ್ವಾ, ದ್ಯೋತತೇರ್ವಾ** । ಎಂದರೆ, ಪರಿತಾಪವನ್ನುಂಟುಮಾಡು ಎಂಬರ್ಥದ **ದ್ಯೂ** ಧಾತುವಿನಿಂದಾಗಲಿ, ಆಕ್ರಮಣಮಾಡು, ಮೇಲೆ ಬೀಳು ಎಂಬರ್ಥವನ್ನು ಕೊಡುವ **ದ್ಯು** ಧಾತುವಿನಿಂದಾಗಲಿ ಅಥವಾ ಕಾಂತಿಯನ್ನು ಬೀರು ಎಂದಾಗುವ **ದ್ಯುತ** ಧಾತುವಿನಿಂದಾಗಲಿ **ದಿದ್ಯುತ್** ಎನ್ನುವ ಪದವು ನಿಷ್ಪನ್ನವಾಗುತ್ತದೆ ಎಂದು ನಿರುಕ್ತಕಾರರ ನಿರ್ವಚನವಿದೆ (ನಿ. ೧೦-೭) ಈ ಸಂದರ್ಭದಲ್ಲಿ ನಿರುಕ್ತಕಾರರು ಋಕ್ಸಂಹಿತೆಯ—

ಯಾ ತೇ ದಿದ್ಯುದವಸೃಷ್ಟಾ ದಿವಸ್ಪರಿ ಕ್ಷ್ಮಯಾ ಚರತಿ ಪರಿ ಸಾ ವೃಣಕ್ತು ನಃ ।

(ಋ. ಸಂ. ೭-೪೬-೩)

ಎಂಬ ಋಕ್ಕನ್ನು ಉದಹರಿಸುತ್ತಾರೆ. ಇಲ್ಲಿ **ದಿದ್ಯುತ್** ಎಂಬ ಪದಕ್ಕೆ **ಹೇತಿಃ** ಬಾಣವೆಂದರ್ಥ. ಇದು ರುದ್ರನ ಬಾಣಕ್ಕೆ ವಿಶೇಷಣವು. ಇದರಂತೆಯೇ ೧-೬೬-೪, ೧-೧೬೬-೬, ೫-೮೬-೩, ೬-೭೫-೧. ಇತ್ಯಾದಿ ಅನೇಕ ಋಕ್ಕುಗಳಲ್ಲಿ ಬಾಣವೆಂಬ ಅರ್ಥದಲ್ಲಿ **ಈ** ಪದದ ಪ್ರಯೋಗವಿದೆ. ಆದರೆ. ೬-೬೬-೧೦ ನೇ ಋಕ್ಕಿನಲ್ಲಿ **ಮರುತ್ತು** ಗಳಿಗೆ ವಿಶೇಷಣವಾಗಿ ಬಂದಾಗ **ದಿದ್ಯುತ್—ದ್ಯೋತಮಾನಾಃ** । ಪ್ರಕಾಶಮಾನರಾದ ಮರುತ್ತುಗಳು ಎಂದು ವಿವರಿಸಿದೆ. ಪ್ರಕೃತ ೭೧ನೇ ಸೂಕ್ತದ ಈ ಋಕ್ಕಿನಲ್ಲಿ **ದಿದ್ಯುತ್** ಎಂದರೆ ಅಗ್ನಿಯ ಪ್ರಕಾಶಮಾನವಾದ ಬಾಣವೆಂದರ್ಥ.

ಸ್ವಾಯಾಂ ದುಹಿತರಿ ತ್ವಿಷಿಂ ಧಾತ್—ದ್ಯುಹಿತೃವತ್ ಸಮನಂತರಭಾವಿನ್ಯಾಮುಷಸಿ ಸ್ವಕೀಯಾಂ ದೀಪ್ತಿಂ ಸ್ಥಾಪಯತಿ । ತನಗಿಂತ ಚಿಕ್ಕವಳಾಗಿ ತಾನು ಆವಿರ್ಭವಿಸಿದನಂತರ ಉತ್ಪನ್ನಳಾದವರಿಂದ ತನ್ನ ಮಗ ನಂತಿರುವ ಉಷಸ್ಸಿಗೆ ತನ್ನ ರಶ್ಮಿಗಳನ್ನು ಹರಡಿ ಅವಳನ್ನು ಕಾಂತಿಯುತಳನ್ನಾಗಿ ಮಾಡಿದನೆಂದು ಸಾಯಣರು ವಿವರಿಸುತ್ತಾರೆ. ಆದರೆ **ಅಗ್ನಿಗೂ ಉಷಸ್ಸಿಗೂ** ಪಿತೃದುಹಿತೃಸಂಬಂಧವು ಎಲ್ಲಿಯೂ ಹೇಳಿದಂತೆ ಕಾಣುವುದಿಲ್ಲ ವಿವರಿಬ್ಬರೂ ಪ್ರಿಯಪ್ರೀಯಸಿಯರ ಸಂಬಂಧವನ್ನು ತೋರಿಸುತ್ತಾರೆಂದು ಅನೇಕಸಲ ಹೇಳಿದೆ. ಆದುದರಿಂದ ಈ ವಿವರಣೆಗಿಂತ ಸ್ಕಂದಸ್ವಾಮಿಗಳ ವಿವರಣೆಯು ಹೆಚ್ಚು ಸಮಂಜಸವಾಗಿರುವಂತೆ ಕಾಣುತ್ತದೆ. ಅವರ ವ್ಯಾಖ್ಯಾನದಂತೆ ಅಗ್ನಿಯು ರಾಕ್ಷಸರ ಮೇಲೆ ಬಾಣವನ್ನು ಎಸೆದೊಡನೆಯೇ. **ತದೈವ ಚ ಸ್ವಾಯಾಂ ದೇವಃ ಇಂದ್ರಃ। ದುಹಿತರಿ। ನೃಷ್ಟ್ಯಾ ಸಸ್ಯರೂಪೇಣ ಜನ್ಯಮಾನತ್ವಾದ್ದುಹಿತಾ ಕ್ಷಿತಿರತ್ರಾಭಿಪ್ರೇತಾ। ತಸ್ಯಾಂ ತ್ವಿಷಿಂ ಸಸ್ಯಸಂಪತ್ತಿ-ಲಕ್ಷಣಾಂ ದೀಪ್ತಿಂ। ಆ ಧಾತ್ ದಧಾತಿ** । ಆ ಒಡನೆಯೇ ದೇವನಾದ ಇಂದ್ರನು ಭೂಮಿಯ ಮೇಲೆ ಸಸ್ಯ ಸಂಪತ್ತಿನ ರೂಪವಾದ ಪ್ರಕಾಶನನ್ನು ಹರಡಿದನು. ಮಳೆಯಿಂದ ಸಸ್ಯರೂಪದಲ್ಲಿ ಹುಟ್ಟುವುದರಿದಲೂ, ಇಂದ್ರನು ಮಳೆಗೆ ಕಾರಣನಾದುದರಿಂದಲೂ ಪೃಥ್ವಿಯು ಇಂದ್ರನ ಮಗಳು ಎಂದು ವಿವರಿಸಿದ್ದಾರೆ ಈ ಅಂಶದ ವಿವರಣೆಯು ಕಿಂಚ ತೊಡಕಿನ ಭಾವವಾಗಿರುತ್ತೆ

[ವ್ಯಾಕರಣಪ್ರಕ್ರಿಯಾ]

ಮಹೇ—ಮಹತ್ ಶಬ್ದ. ಇದಕ್ಕೆ ಚತುರ್ಥೀವಿಭಕ್ತಿ ಪರವಾದಾಗ ಭಾಂವಸನಾಗಿ ತಕಾರ ಲೋಪ ವಾಗುತ್ತದೆ.

ದಿವೇ—ಚತುರ್ಥೀವಿಭಕ್ತಿಗೆ **ಊಡಿದಂಸದಾದಿ**—ಎಂಬುದರಿಂದ ಉದಾತ್ತಸ್ವರ ಬರುತ್ತದೆ

ಕಃ—ಡುಕೃಞ್ ಕರಣೇ ಧಾತು. ಇದಕ್ಕೆ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ. **ಚ್ಲಿ ಲುಙಿ** ಎಂಬುದರಿಂದ ಚ್ಲಿ ವಿಕರಣ. ಆದಕ್ಕೆ **ಮಂತ್ರೇ ಘಸ**—(ಪಾ ಸೂ ೩-೪-೭೦) ಎಂಬುದರಿಂದ ಲುಕ್ ತಿಪ್ ನಿಮಿತ್ತವಾಗಿ ಧಾತುವಿಗೆ ಗುಣ **ಉರಣ್ರಪರಃ** ಎಂಬುದರಿಂದ ರಪರವಾಗಿ ಬರುತ್ತದೆ. ಹಲಂತದ ಪರದಲ್ಲಿ ಅಪೃಕ್ತ ತಿಪ್ ಬಂದುದರಿಂದ **ಹಲ್ ಜ್ಯಾಭ್ಯೋ**—ಸೂತ್ರದಿಂದ ತಕಾರಕ್ಕೆ ಲೋಪ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಯದ್ಯೋಗ ವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಧಾತುಸ್ವರದಿಂದ ಉದಾತ್ತವಾಗುತ್ತದೆ

ತ್ವರತ್—ತ್ವರ ಛದ್ಮ ಗತೌ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ ಲೋಪಃ**—ಎಂಬುದರಿಂದ ಇಕಾರಲೋಪ **ಲೇಟೋಽಡಾಟೌ** ಎಂಬುದರಿಂದ ಅದಕ್ಕೆ ಅಡಾಗನು. ತ್ವರತ್ ಎಂದು ರೂಪವಾಗುತ್ತದೆ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸ್ಪೃಶನ್ಯಃ—ಸ್ಪೃಶ ಸಂಸ್ಪರ್ಶನೇ ಧಾತು **ಕ್ಯಾ ಹ್ಯೆ ವ್ಯ ಜೆ**—(ಉ ಸೂ. ೨-೨೪೯) ಎಂಬುದರಿಂದ ವಿಧಿಸಲ್ಪಡುವ ಕ್ಯಪ್ರತ್ಯಯವು ಉಣಾದಿಯಲ್ಲಿ ಬಹುಲಗ್ರಹಣವಿರುವುದರಿಂದ ತತ್ಸಾಮರ್ಥ್ಯದಿಂದ ಈ ಧಾತುವಿಗೂ ಬರುತ್ತದೆ. ಪ್ರತ್ಯಯದಲ್ಲಿ ಯು ಎಂದು ಉಳಿಯುವಾಗ ಅದಕ್ಕೆ **ಯುವೋರನಾಕೌ** ಎಂಬುದರಿಂದ ಅನಾದೇಶ. ಅದು ಕಿತ್ವಾದುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ ಸ್ಪೃಶನಂ ಅಂದರೆ ಸ್ಪರ್ಶ. ಇದಕ್ಕೆ **ತತ್ರ ಸಾಧುಃ** ಎಂಬುದರಿಂದ ಯತ್ ಪ್ರತ್ಯಯ **ಯಸ್ಯೇತಿ ಚ** ಸೂತ್ರದಿಂದ ನಕಾರೋತ್ತರಾಕಾರಕ್ಕೆ ಲೋಪ. ಆದಿಯ ಸಕಾರಕ್ಕೆ ಛಾಂದಸವಾಗಿ ಲೋಪಬರುತ್ತದೆ. ಪೃಶನ್ಯ ಎಂದು ರೂಪನಾಗುತ್ತದೆ **ತಿತ್ಸ್ವರಿತಮ್** (ಪಾ ಸೂ ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ.

ಸೃಜತ್—ಸೃಜ ವಿಸರ್ಗೇ ಧಾತು ಲೇಟ್ ಪ್ರಥಮಪುರುಷ ಏಕವಚನದರೂಪ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶವಿಕರಣಸ್ವರ ಉಳಿಯುತ್ತದೆ

ಅಸ್ತಾ—ಅಸು ಕ್ಷೇಪಣೇ ಧಾತು. ತೃನ್ ಪ್ರತ್ಯಯ. ನಿತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾ ಏಕವಚನಾಂತರೂಪ.

ದಿದ್ಯುಮ್— ದಿದ್ಯುತ್ ಎಂಬುದು ವಜ್ರದ ಹೆಸರ - ದ್ವಿತೀಯಾ ಏಕವಚನದಲ್ಲಿ ಛಾಂದಸನಾಗಿ ತಕಾರ ಲೋಪಬರುವುದರಿಂದ ದಿದ್ಯುಂ ಎಂದು ರೂಪವಾಗುತ್ತದೆ.

ಧಾತ್—ಡುಧಾಞ್ ಧಾರಣಪೋಷಣಯೋಃ ಧಾತು ವರ್ತಮಾನಾರ್ಥದಲ್ಲಿ **ಛಂದಸಿ ಲುಙ್ಲಙ್ ಲಿಟಃ** ಎಂಬುದರಿಂದ ಲುಙ್. ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರ ಲೋಪ. **ಚ್ಲೇಃ ಸಿಚ್** ಸೂತ್ರದಿಂದ ಚ್ಲಿಗೆ ಸಿಚಾದೇಶ. **ಗಾತಿಸ್ಥಾಘು**—(ಪಾ. ಸೂ. ೨-೪-೭೭) ಎಂಬುದರಿಂದ ಸಿಚಿಗೆ ಲೋಪ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗನು ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೫ ॥

॥ संहितापाठः ॥

स्व॒ आ यस्तु॒भ्यं दम॒ आ वि॒भाति॒ नमो॒ वा॒ दाशा॑दु-
श॒तो अ॒नु द्यून् ।
वधू॑र्यो अग्ने॒ वयो॒ अस्य॒ द्विब॑र्हा॒ या सद्मा॒या
स॒रथं॒ यं जु॒नासि॑ ॥ ६ ॥

॥ पदपाठः ॥

स्वे॑ । आ । यः । तुभ्य॑म् । दमे॑ । आ । वि॒ऽभाति॑ । नमः॑ । वा॒ ।
दाशा॑त् । उ॒श॒तः । अ॒नु । द्यून् ।
वधूः॑ऽयो । इति॑ । अग्ने॑ । वयः॑ । अ॒स्य॒ । द्वि॒ऽब॒र्हाः॑ । या । सद्म॑ ।
रा॒या । स॒ऽर॒थम् । यम् । जु॒नासि॑ ॥ ६ ॥

॥ सायणभाष्यं ॥

हे अग्ने तुभ्यं त्वां स्वे दमे स्वकीये यज्ञगृहे यो यजमानः । अथ
अकारो मर्यादायाम् । यथाशास्त्रमा विभाति आ समंतात्सर्वदादिभिः काम्यैः
प्रज्वलयति अनु द्यून् अनुदिवसमुशतः कामयमानाय तुभ्यं नमो वा
दाशात् हविर्लक्षणमन्नं वा दद्यात् । अस्य यजमानस्य हे अग्ने द्विबर्हा द्वयोर्-
मर्धयोरुत्तमस्थानयोर्वर्तमानो वर्धितस्त्वं वयोऽन्नं वर्धयसि । वर्धयैव ।
सरथं रथेन सहितं युयुत्सुं यं पुरुषं जुनासि युद्धे प्रेरयसि स पुरुषो
रायाधनेन यासत् । संगच्छते ॥ तुभ्यं । क्रियाग्रहणं कर्तव्यमिति कर्मणः
संप्रदानत्वाच्चतुर्थी । दाशात् । दाशृ दानै । लेट्याडागमः । उशतः । शतुरनुमु

ಇತಿ ವಿಭಕ್ತೇರುದಾತ್ತತ್ವಂ । ಚತುರ್ಥ್ಯರ್ಥೇ ಬಹುಲಂ ಛಂದಸೀತಿ ಷಷ್ಠೀ । ಅನು ದ್ಯೂನ್ । ದ್ಯುರಿತ್ಯಹರ್ನಾಮ । ಲಕ್ಷಣೇ೨ನೋಃ ಕರ್ಮಪ್ರವಚನೀಯತ್ವಂ । ಕರ್ಮಪ್ರವಚನೀಯಯುಕ್ತ ಇತಿ ದ್ವಿತೀಯಾ । ವರ್ಧೋ೯ । ವರ್ಧ ಅ । ವೃಧೇರ್ಣ್ಯಂತಾಲ್ಲೋಟಿ ಚ್ಛಂದಸ್ಯುಭಯಥೇತಿ ಶಪ ಆರ್ಧಧಾತುಕತ್ವಾನ್ಣೇರನಿಟೀತಿ ಣಿಲೋಪಃ । ಶಪಃ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ಉಘಾಸಹೈಕಾದೇಶ ಉಘಾಃ । ಪಾ. ೧-೧-೧೬ । ಇತಿ ಪ್ರಗೃಹ್ಯತ್ವಂ । ಯಾಸತ್ । ಯಾ ಪ್ರಾಪಣೇ । *ಸಿಬ್ಬಹುಲಂ ಲೇಟೀತಿ ಸಿಪ್ । ಲೇಟೋ೨ಡಾಟಾವಿತ್ಯಡಾಗಮಃ । ಜುನಾಸಿ । ಜು ಇತಿ ಗತ್ಯರ್ಥಃ ಸೌತ್ರೋ ಧಾತುಃ । ಶಪಿ ಪ್ರಾಪ್ತೇ ವ್ಯತ್ಯಯೇನ ಶ್ನಾ ॥

॥ ಪ್ರತಿಪದಾರ್ಥ ॥

(**ಅಗ್ನೇ**—ಅಗ್ನಿಯೇ) । **ತುಭ್ಯಂ**—ನಿನ್ನನ್ನು । **ಸ್ವೇ ದಮೇ**—ತನ್ನ ಮನೆಯಲ್ಲಿ । **ಯಃ**-ಯಾವನು (ಯಜಮಾನನು) । **ಆ**—ಶಾಸ್ತ್ರಪ್ರಕಾರವಾಗಿ । **ಆ ವಿಧಾತಿ**—ಸುತ್ತಲೂ (ಸಮಿದಾದಿಗಳಿಂದ) ಪ್ರಜ್ವಲಿಸುವಂತೆ ಮಾಡುತ್ತಾನೋ । **ಅನು ದ್ಯೂನ್**—ಪ್ರತಿದಿನವೂ । **ಉಶತಃ**—ವಿಶ್ವಾಸಯುಕ್ತನಾದ (ನಿನಗೆ) । **ನಮೋ ವಾ ದಾಶಾತ್**—ಹವಿರ್ಲಕ್ಷಣವಾದ ಅನ್ನವನ್ನಾದರೂ ಕೊಡುತ್ತಾನೋ । **ಅಸ್ಯ**—ಅಂತಹ ಯಜಮಾನನಿಗೆ । **ಅಗ್ನೇ**—ಅಗ್ನಿಯೇ । **ದ್ವಿ ಬರ್ಹಾಃ**—ಎರಡುತರಹ (ಮಧ್ಯಮ, ಉತ್ತಮಗಳೆಂಬ) ವರ್ಧಿತನಾದ (ನೀನು) । **ವಯಃ**—ಅನ್ನವನ್ನು । **ವರ್ಧೋ೯** ಅಭಿವೃದ್ಧಿಪಡಿಸಿಯೇ ಪಡಿಸುತ್ತೀ । **ಸರಥಂ**—ರಥಯುಕ್ತನಾದ (ಯುದಾಪೇಕ್ಷಿಯಾದ) । **ಯಂ**—ಯಾವ ಪುರುಷನನ್ನು । **ಜುನಾಸಿ**- (ಯುದ್ಧದಲ್ಲಿ) ಪ್ರೇರಿಸುತ್ತೀಯೋ (ಅವನು) **ರಾಯಾ**--ಧನದಿಂದ । **ಯಾಸತ್**---ಪ್ರಾಪ್ತನಾಗುತ್ತಾನೆ (ಯುಕ್ತನಾಗುತ್ತಾನೆ)

॥ ಭಾವಾರ್ಥ ॥

ಯಾವ ಯಜಮಾನನು ಪ್ರತಿನಿತ್ಯವೂ ನಿನ್ನನ್ನು ತನ್ನ ಮನೆಯಲ್ಲಿ ಶಾಸ್ತ್ರೋಕ್ತರೀತ್ಯಾ ಸಮಿದಾದಿಗಳಿಂದ ಪ್ರಜ್ವಲಿತನನ್ನಾಗಿ ಮಾಡಿ, ವಿಶ್ವಾಸಯುಕ್ತನಾದ ನಿನಗೆ ಹವಿಸ್ಸನ್ನು ಅರ್ಪಿಸುತ್ತಾನೋ ಅವನಿಗೆ ಅನ್ನವನ್ನು ಅಭಿವೃದ್ಧಿಪಡಿಸು. ಯಾವನು ರಥಯುಕ್ತನಾಗಿ ಯುದ್ಧಕ್ಕೆ ಸನ್ನದ್ಧನಾಗುತ್ತಾನೋ ಅವನು ಧನವನ್ನು ಪಡೆದು (ಹಿಂತಿರುಗಲಿ)

English Translation.

When (the worshipper) kindles you in his own dwelling and presents an oblation to you, daily desiring it, do you, Agni, augmented in two ways (as middling and as best), increase his means of sustenance, may he whom you send with his car to battle, return with wealth.

॥ ವಿಶೇಷವಿಷಯಗಳು ॥

ನಮಃ— ಅಂಧಃ, ವಾಜಃ, ಪಯಃ ಇತ್ಯಾದಿ ೨೮ ಅನ್ನನಾಮಗಳಲ್ಲಿ ಪರಿತವಾಗಿರುವುದರಿಂದ (ನಿ.೨-೯) ಅನ್ನವೆಂದರ್ಥ. ಇಲ್ಲಿ ಹವಿಸ್ಸಿನ ರೂಪದ ಅನ್ನವೆಂದಭಿಪ್ರಾಯ.

ದ್ವಿಬರ್ಹಾಃ—ದ್ವಯೋಃ ಸ್ಥಾನಯೋಃ ಪರಿವೃಢೋ ಮಧ್ಯಮೇ ಚ ಸ್ಥಾನೇ ಉತ್ತಮೇ ಚ। (ನಿ. ೬-೧೭). ಪೃಥಿವ್ಯಂತರಿಕ್ಷಲೋಕಗಳಲ್ಲಿ ಉಲ್ಬಣವಾಗಿಯೂ ದೃಢವಾಗಿಯೂ ವೃದ್ಧಿಹೊಂದಿದವನು, ಎಂದಾಗಲಿ ಅರ್ಥವಾಗುತ್ತದೆ ಈ ವಿಶೇಷಣವು ಇಂದ್ರ, ರುದ್ರ, ಅಗ್ನಿ, ಉಷಸ್ಸು ಈ ದೇವತೆಗಳ ಪರವಾದ ಸೂಕ್ತಗಳಲ್ಲಿ ಆ ದೇವತೆಗಳ ಸ್ಥಾನ ಮತ್ತು ಸ್ವರೂಪಗಳನ್ನು ತಿಳಿಸುತ್ತದೆ ಉದಾಹರಣೆಗೆ—

ಏಷಾ ವ್ಯೇನೀ ಭವತಿ ದ್ವಿಬರ್ಹಾ ಅವಿಷ್ಕೃಣ್ವಾನಾ ತನ್ವಂ ಪುರಸ್ತಾತ್ ।

(ಋ. ಸಂ ೫-೮೦-೪)

ಮಹೌ ಇಂದ್ರೋ ನ್ಯವದಾ ಚರ್ಷಣಿಪ್ರಾ ಉತ ದ್ವಿಬರ್ಹಾ ಅಮಿನಃ ಸಹೋಭಿಃ ।

(ಋ. ಸಂ ೬-೧೯-೧)

ಎಂಬ ಋಕ್ಕುಗಳಲ್ಲಿ ಉಷಸ್ಸು ಮತ್ತು ಇಂದ್ರನ ಸ್ವರೂಪವನ್ನು ಹೇಳಿದೆ. ಹೀಗೆಯೇ ೪-೫-೩, ೭-೮-೬, ೭-೨೪-೨, ೯-೪ ೭, ೯-೪೦-೬, ೧೦-೧೧೬-೪ ಇತ್ಯಾದಿ ಸ್ಥಳಗಳಲ್ಲಿ ಈ ವಿಶೇಷಣದ ಪ್ರಯೋಗವಿದೆ ೯-೧೦೦-೨ನೇ ಋಕ್ಕಿನಲ್ಲಿ **ದ್ವಿಬರ್ಹಸಂ ರಯಿಂ।** ಎರಡು ಲೋಕಗಳಲ್ಲಿಯೂ ವೃದ್ಧಿಯನ್ನು ಹೊಂದುವ ಧನವನ್ನು ಎಂದು ಸಂಪತ್ತಿಗೆ ವಿಶೇಷಣವಾಗಿದೆ ಪ್ರಕೃತವಾದ ಈ ಋಕ್ಕಿನಲ್ಲಿ ಅಗ್ನಿಗೆ ವಿಶೇಷಣವಾದದ್ದರಿಂದ ಪೃಥಿವ್ಯಂತರಿಕ್ಷಗಳಲ್ಲಿ **ಪರಿವೃಢ**ನಾದವನು ಎಂದರ್ಥ

ವಯಃ--ಅಂಧಃ, ವಾಜಃ, ಪಯಃ ಇತ್ಯಾದಿ ೫೦ ಅನ್ನನಾಮಗಳಲ್ಲಿ ಪರಿತವಾಗಿರುವುದರಿಂದ (ನಿ ೩-೯) **ವಯಃ** ಎಂದರೆ ಇಲ್ಲಿ ಅನ್ನವೆಂದರ್ಥ

ಜುನಾಸಿ— ಇದು ಅಪರೂಪವಾದ ಪ್ರಯೋಗ. **ಜು ಇತಿ ಗತ್ಯರ್ಥಃ** ಸಂಚರಿಸು ಎನ್ನುವ ಅರ್ಥವನ್ನು ಕೊಡುವುದರಿಂದ ಹೋಗುತ್ತೀಯೆ ಎಂದು ಸ್ಥೂಲವಾಗಿ ಅರ್ಥವಾಗುತ್ತದೆ. ಇಲ್ಲಿ ಅನ್ವಯವನ್ನು ಬೇರೆ ಬೇರೆ ರೀತಿಯಲ್ಲಿ ಮಾಡಬಹುದು ಮೊದಲನೆಯದಾಗಿ,

ಸರಥಂ ಯಂ ಜುನಾಸಿ ರಾಯೋ ಯಾಸತ್ । ಎಂಬ ಅನ್ವಯದಿಂದ **ರಥೇನ ಸಹಿತಂ ಯುಯುತ್ಸುಂ ಯಂ ಪುರುಷಂ ಯುದ್ಧೇ ಪ್ರೇರಯಸಿ ಸ ಪುರುಷಃ ಧನೇನ ಸಂಗಚ್ಛತೇ ।** ಯುದ್ಧ ಮಾಡಲಿಚ್ಛಿಯುಳ್ಳವನಾಗಿ ಯಾವ ಪುರುಷನು ರಥದೊಡನೆ ಯುದ್ಧಕ್ಕೆ ಹೋಗುತ್ತಾನೆಯೋ ಅವನು ಧನದೊಡನೆ ಸೇರುತ್ತಾನೆ ಎಂದರೆ ಧನವನ್ನು ಪಡೆದೇ ಪಡೆಯುತ್ತಾನೆ ಎಂದಾಗುತ್ತದೆ. **ರಾಯೋ ಧನೇನ ಸಹ ಯಂ ಸ್ತೋತಾರಂ ಯಜಮಾನಂ ಪ್ರತಿ ಜುನಾಸಿ । ಗಚ್ಛಸಿ । ತಸ್ಮಿನ್ನೇವ ರಥೇ ಸ್ವಂ ಆರೋಹಸಿ ಧನಾನ್ಯಪಿ ತತ್ರೈವಾರೋಪ್ಯ ಗಚ್ಛೇರಿತ್ಯರ್ಥಃ ।** ನೀನು ಯಾವ ರಥದಲ್ಲಿ ಕುಳಿತುಕೊಂಡು ಯಜ್ಞಕರ್ತನಲ್ಲಿ ಹೋಗುತ್ತೀಯೋ ಅದೇ ರಥದಲ್ಲಿ ಅವನಿಗೆ ಧನವನ್ನು ತೆಗೆದುಕೊಂಡು ಹೋಗುತ್ತೀಯೆ ಎಂದು ಅನ್ವಯಮಾಡಿ ಸ್ಕಂದಸ್ವಾಮಿಗಳು ವಿವರಿಸುತ್ತಾರೆ. ಆದರೆ ಮೊದಲನೆಯ ಸಾಯಣರ ಅನ್ವಯನೇ ಈ ಸಂದರ್ಭಕ್ಕೆ ಹೆಚ್ಚು ಹೊಂದಿಕೊಳ್ಳುವಂತೆ ಕಾಣುತ್ತದೆ ಏತಕ್ಕೆಂದರೆ, ಯಾವ ಪುರುಷನನ್ನು ಅಗ್ನಿಯು ಯುದ್ಧಕ್ಕೆ ಪ್ರೇರಿಸಿ ಯುದ್ಧದಲ್ಲಿ ಸಹಾಯವನ್ನು

ಮಾಡುತ್ತಾನೆಯೋ ಅವನು ಯುದ್ಧದಲ್ಲಿ ಜಯಿಸಿ ಅಪಾರವಾದ ಧನಸಂಪತ್ತನ್ನು ಪಡೆಯುತ್ತಾನೆಂದು ಅನೇಕಸಲ ಹೇಳಿರುವುದು ಉದಾಹರಣೆಗೆ—

ಯಮಗ್ನೇ ಪೃತ್ಸು ಮರ್ತ್ಯಮವಾ ವಾಜೇಷು ಯಂ ಜುನಾಃ । ಸ ಯಂತಾ ಶಶ್ವತೀರಿಷಃ ।

(ಋ. ಸಂ. ೧-೩೭-೭)

ಎಂಬ ಋಕ್ಕಿನಲ್ಲಿ ಯುದ್ಧದಲ್ಲಿ ಅಗ್ನಿಸಹಾಯವಿದ್ದವನು ಖಂಡಿತವಾಗಿಯೂ ಜಯಿಸಿ ಅಧಿಕವಾದುದೂ ಶಾಶ್ವತವಾದುದೂ ಆದ ಅನ್ನಸಂಪತ್ತನ್ನು ಪಡೆಯುತ್ತಾನೆಂದು ಪ್ರಶಂಸಿಸಿದೆ. ಅದೂ ಅಲ್ಲದೆ **ಜುನಾಃ** ಎಂಬ ಪದಕ್ಕೆ **ಪ್ರೇರಯಸಿ** ಎಂದು ಈ ಉದಾಹರಣಾ ಋಕ್ಕಿನಲ್ಲಿಯೂ ಹೊಂದಿಕೊಳ್ಳುವುದರಿಂದ ಸಾಯಣರ ವಿವರಣೆಯಂತೆ ಪ್ರಕೃತವಾದ ಈ ಋಕ್ಕಿನಲ್ಲಿಯೂ **ಜುನಾಸಿ** ಎನ್ನುವುದಕ್ಕೆ **ಪ್ರೇರಯಸಿ** ಎನ್ನುವುದೇ ಸರಿಯಾಗಿ, ಅಗ್ನಿಯು ಯಾವನನ್ನು ಯುದ್ಧದಲ್ಲಿ ಪ್ರೇರಿಸುತ್ತಾನೆಯೋ ಅವನು ಧನವನ್ನು ಪಡೆಯುತ್ತಾನೆ ಎಂದರ್ಥ.

ಅಗ್ನಿಯು ಯಜ್ಞದಲ್ಲಿ ಹವಿಸ್ಸನ್ನು ಆರ್ಪಿಸಕ್ಕೆ ಯಜಮಾನನಿಗೆ ಮನೆಯಲ್ಲಿದ್ದರೂ ಅತ್ಯಧಿಕವಾದ ಅನ್ನವನ್ನು ಒದಗಿಸುತ್ತಾನೆ ಮತ್ತು ಯುದ್ಧದಲ್ಲಿಯೂ ಸಹ ಜಯವನ್ನೂ ಧನವನ್ನೂ ಸಂಪಾದಿಸಿ ಕೊಡುತ್ತಾನೆಂದು ಅಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ತುಭ್ಯಮ್– ಯುಷ್ಮಚ್ಛಬ್ದ ಚತುರ್ಥ್ಯಂತರೂಪ ಸಂಪ್ರದಾನಸೂತ್ರದಲ್ಲಿ **ಕ್ರಿಯಾಗ್ರಹಣಂ ಕರ್ತವ್ಯಂ** ಎಂಬ ವಚನವಿರುವುದರಿಂದ ಇಲ್ಲಿ **ಕರ್ಮ**ಕ್ಕೆ ಸಂಪ್ರದಾನ ಸಂಜ್ಞೆ ಬರುವುದರಿಂದ **ಚತುರ್ಥೀ ಸಂಪ್ರದಾನೇ** ಎಂಬುದರಿಂದ ಚತುರ್ಥೀ ವಿಭಕ್ತಿ ಬರುತ್ತದೆ

ವಿಭಾತಿ—ಭಾ ದೀಪ್ತೌ ಧಾತು ಲಟ್ ಪ್ರಥಮಪುರುಷ ಏಕವಚನರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಧಾತುಸ್ವರ ಉಳಿಯುತ್ತದೆ.

ದಾಶಾತ್–- ದಾಶೃ ದಾನೇ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಇತಶ್ಚ ಲೋಪಃ ಪರ**—ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ.

ಉಶತಃ—ವಶ ಕಾಂತೌ ಧಾತು. ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ ಇದಕ್ಕೆ **ಸಾರ್ವಧಾತುಕಮಪಿತ್** ಸೂತ್ರದಿಂದ ಙಿತ್ವ ಬರುವುದರಿಂದ ಧಾತುವಿಗೆ ಸಂಪ್ರಸಾರಣ ಪೂರ್ವರೂಪ ಬರುತ್ತದೆ. ಷಷ್ಠೀಏಕವಚನರೂಪನುಮ್‌ರಹಿತವಾದ ಶತೃವಿನ ಪರದಲ್ಲಿ ವಿಭಕ್ತಿ ಬಂದುದರಿಂದ ಇದಕ್ಕೆ **ಶತುರನುನೋ ನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ಉದಾತ್ತಸ್ವರ ಬರುವುದಿಲ್ಲ ಇಲ್ಲಿ ಚತುರ್ಥೀ ಅರ್ಥವು ಅಭಿಪ್ರೇತವಾದರೂ **ಚತುರ್ಥ್ಯರ್ಥೇ ಬಹುಲಂ ಛಂದಸಿ** (ಪಾ. ಸೂ ೨-೩-೬೨) ಎಂಬುದರಿಂದ ಷಷ್ಠೀ ಬಂದಿದೆ.

ಅನು ದ್ಯೂನ್—ದ್ಯು ಎಂಬುದು ಹಗಲಿಗೆ ಹೆಸರು ಅನು ಎಂಬುದಕ್ಕೆ **ಅನುರ್ಲಕ್ಷಣೇ** (ಪಾ ಸೂ ೧-೪-೮೪) ಎಂಬುದರಿಂದ **ಕರ್ಮಪ್ರವಚನೀಯ ಸಂಜ್ಞಾ**. **ತದ್ಯೋಗೆ** ದ್ಯು ಎಂಬುದಕ್ಕೆ ಇರುವುದರಿಂದ **ಕರ್ಮ-ಪ್ರವಚನೀಯಯುಕ್ತೇ ದ್ವಿತೀಯಾ** (ಪಾ ಸೂ. ೨-೩-೮) ಸೂತ್ರದಿಂದ ದ್ವಿತೀಯಾ ಬರುತ್ತದೆ

ವರ್ಧೋ—ವರ್ಧ+ಉ ಎಂದು ಪದಚ್ಛೇದ ವೃಧು ವರ್ಧನೇ ಧಾತು. ಇದಕ್ಕೆ ಣಿಜಂತದ ಮೇಲೆ ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ಪಿಗೆ ಹಿ ಆದೇಶ. **ಛಂದಸ್ಯುಭಯಥಾ** ಎಂಬುದರಿಂದ ವಿಕರಣವಾಗಿ ಬಂದ ಶಪ್ಪಿಗೆ ಆರ್ಧಧಾತುಕಸಂಜ್ಞೆ ಇರುವುದರಿಂದ **ಣೇರನಿಟಿ** (ಪಾ. ಸೂ. ೬-೪-೫೧) ಎಂಬುದರಿಂದ ಣಿಚ್ಚಿಗೆ ಲೋಪ. ಧಾತುವಿನ ಲಘೂಪಧೆಗೆ ಗುಣ **ಆತೋಃ ಹೇಃ** ಎಂಬುದರಿಂದ ಹಿಗೆ ಲುಕ್ ಇಲ್ಲಿ ಶಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ. ಆಗ ಧಾತುಸ್ವರ ಉಳಿಯುತ್ತದೆ ವರ್ಧ+ಉ ಎಂದಿರುವಾಗ **ಅದ್ಗುಣಃ** ಸೂತ್ರದಿಂದ ಏಕಾದೇಶ ಬಂದಮೇಲೆ **ಉಙಃ** (ಪಾ ಸೂ ೧-೧-೭೭) ಎಂಬುದರಿಂದ ಅದಕ್ಕೆ ಪ್ರಗೃಹ್ಯ ಸಂಜ್ಞಾ ಬರುತ್ತದೆ ಆದುದರಿಂದ **ವರ್ಧೋ** ಎಂಬುದಕ್ಕೆ ಆಗ್ನೇ ಎಂಬಲ್ಲಿರುವ ಆಕಾರ ಪರವಾದರೂ ಆವಾದೇಶ ಬರುವುದಿಲ್ಲ **ಪ್ಲುತಪ್ರಗೃಹ್ಯಾ ಅಚಿ ನಿತ್ಯಮ್** (ಪಾ ಸೂ ೬-೧-೧೨೫) ಎಂಬುದರಿಂದ ಪ್ರಕೃತಿಭಾವ ಸಂಧಿಬರುತ್ತದೆ

ಯಾಸತ್—ಯಾ ಪ್ರಾಪಣೇ ಧಾತು ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಇತಶ್ಚ ಲೋಪಃ ಪರ**—ಎಂಬುದರಿಂದ ಇಕಾರಲೋಪ **ಸಿಬ್ಬಹುಲಂ ಲೇಟಿ** (ಪಾ. ಸೂ ೩-೧-೩೪) ಎಂಬುದರಿಂದ ಸಿಪ್ **ಲೇಟೋಽಡಾಟೌ** ಎಂಬುದರಿಂದ ಆಡಾಗಮ ಯಾಸತ್ ಎಂದು ರೂಪವಾಗುತ್ತದೆ ಪಾದಾದಿಯಲ್ಲಿರುವುದರಿಂದ ಸಿಘಾತಸ್ವರ ಬರುವುದಿಲ್ಲ ಧಾತುಸ್ವರ ಉಳಿಯುತ್ತದೆ

ರಾಯಾ—ರೈ ಶಬ್ದ. ತೃತೀಯಾ ಏಕವಚನಾಂತರೂಪ. **ಊಡಿದಂಸೌದಾದಿ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದ.

ಜುನಾಸಿ—ಜು ಎಂಬ ಧಾತುವು ಸೂತ್ರನಿರ್ದಿಷ್ಟವಾಗಿ ಗತ್ಯರ್ಥದಲ್ಲಿದೆ ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಕರ್ತರಿ ಶಪ್** ಎಂಬುದರಿಂದ ಶಪ್ ಪ್ರಾಪ್ತವಾದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ ಶ್ನಾ ವಿಕರಣ ಬರುತ್ತದೆ **ಸಾರ್ವಧಾತುಕಮಪಿತ್** ಎಂಬುದರಿಂದ ವಿಕರಣಕ್ಕೆ ಙಿತ್ವ ಬರುವುದರಿಂದ ತನ್ನಿಮಿತ್ತವಾಗಿ ಧಾತುವಿಗೆ ಗುಣ ಬರುವುದಿಲ್ಲ ಯಮ್ ಎಂದು ಹಿಂದೆ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ಸಿಘಾತಸ್ವರ ಪ್ರತಿಷೇಧ ಬರುತ್ತದೆ. ಆಗ ವಿಕರಣಸ್ವರ ಉಳಿಯುತ್ತದೆ ॥ ೬ ॥

॥ संहितापाठः ॥

अग्निं विश्वा अभि पृक्षः सचन्ते समुद्रं न स्रवतः सप्त यह्वीः ।
न जामिभिर्वि चिकित्ते वयो नो विदा देवेषु प्रमतिं चिकित्वान् ॥ ६ ॥

॥ पदपाठः ॥

अग्निं । विश्वाः । अभि । पृक्षः । सचन्ते । समुद्रं । न । स्रवतः । सप्त । यह्वीः ।
न । जामिऽभिः । वि । चिकित्ते । वयः । नः । विदाः । देवेषु ।
प्रऽमतिं । चिकित्वान् ॥ ६ ॥

॥ सायणभाष्यं ॥

विश्वाः पृक्षः पृक्षन्ते रुपुरोडाशादीनि सर्वान्यन्नान्यग्निमंगनादिगुणयुक्तमेनमभि सचन्ते । अभिमुख्येन समवयन्ति । प्राप्नुवन्ति । तत्र दृष्टान्तः । स्रवन्तः समुद्रं न । यथा स्रवन्त्यो नद्यः समुद्रमभिगच्छन्ति तद्वत् । कीदृश्यो नद्यः । सप्त सप्त-संख्याकाः । इमं मे गंग इत्यस्यामृचि सप्त हि नद्यः प्राधान्येन श्रूयन्ते । यह्वीः । महन्नाम्नैतत् । महत्यः । जमन्त्येकस्मिन्पात्रे सह भुंजत इति जामयोऽज्ञातयः । तैर्नोऽस्मदीयं वयोऽन्नं न वि चिकित्ते । न ज्ञायते । तेभ्यो दातुमस्माकमन्नं प्रभूतं नास्तीति भावः । अतो हे अग्ने त्वं देवेषु । दीव्यन्तीति देवा धनपतयः । तेषु प्रमतिं प्रकर्षेण मननीयं धनं चिकित्वानवगच्छन्नि दाः । अस्मभ्यं लंभय । यद्वा । प्रमतिं प्रकृष्टं स्तोत्रं देवेषु विदाः । वेदय ।

ಜ್ಞಾಪಯ ॥ ಪೃಕ್ಷಃ । ಅನ್ನನಾಮೈತತ್ । ಪೃಚೀ ಸಂಪರ್ಕ ಇತ್ಯಸ್ಮಾದೌಣಾದಿಕಃ ಕರ್ಮಣಿ ಕ್ವಿಪ್ ಧಾತೋಃ ಷುಗಾಗಮಶ್ಚ । ಯದ್ವಾ । ಅಸುನಿ ಸುಸಾಂ ಸುಲುಗಿತಿ ಜಸೋ ಲುಕ್ । ಸ್ರವತಃ । ಸ್ರು ಗತೌ । ಸ್ರವಣಂ ಸ್ರವಃ । ತತ್ಕುರ್ವಂತಿ । ಸರ್ವಪ್ರಾತಿಪದಿಕೇಭ್ಯಃ ಕ್ವಿಬ್ವಕ್ತವ್ಯ ಇತಿ ಕ್ವಿಪ್ । ಏತದಂತಾದ್ಧಾತೋಃ ಕ್ವಿಪ್ಹೇತಿ ಕ್ವಿಪ್ । ಹ್ರಸ್ವಸ್ಯ ಪಿತೀತಿ ತುಕ್ । ಕ್ವಿಬಂತಾದ್ಧಾತೋಃ ಸತಿ ಶಿಷ್ಟತ್ವಾದ್ಧಾತುಸ್ವರೇಣಾಂತೋದಾತ್ತತ್ವಂ । ಯಹ್ವೀಃ । ಪಿಪ್ಪಲ್ಯಾದಿಭ್ಯೋ ಹ್ವೀತಿ ಗೌರಾದಿಷು ಪರಿತತ್ವಾತ್ತಸ್ಯ ಚಾಕೃತಿಗಣತ್ವಾದಕ್ತ್ವಾಪಿ ಜೀಷ್ । ಪಾ. ೪-೧-೪೧ । ವಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ । ಚಿಕಿತೇ । ಛಾಂದಸೋ ವರ್ತಮಾನೇ ಕರ್ಮಣಿ ಲಿಟ್ । ವಿದಾಃ । ವಿದ್ಲೃ ಲಾಭೇ । ಅಂತರ್ಭಾವಿತಣ್ಯರ್ಥಾಲ್ಲೇಟ್ಯಾಡಾಗಮಃ ತುದಾದಿತ್ವಾಚ್ಛಃ । ಅಗಮಾನುಶಾಸನಸ್ಯಾನಿತ್ಯತ್ವಾನ್ನುಮಭಾವಃ । ವಿಕರಣಸ್ವರಃ ಶಿಷ್ಯತೇ । ಯದ್ವಾ । ವಿದೇರ್ಜ್ಞಾನಾರ್ಥಸ್ಯ ಲೇಟಿ ವ್ಯತ್ಯಯೇನ ಶಃ ॥

॥ ಪ್ರತಿಪದಾರ್ಥ ॥

ವಿಶ್ವಾಃ ಪೃಕ್ಷಃ—ಎಲ್ಲಾ (ಪುರೋಡಾಶಾದಿ) ಅನ್ನಗಳೂ । **ಸಪ್ತ**—ಸಪ್ತ ಸಂಖ್ಯಾಕಗಳಾದ । **ಯಹ್ವೀಃ**—ಮಹಾತ್ಮೆಯುಳ್ಳ । **ಸ್ರವತಃ**—ನದಿಗಳು । **ಸಮುದ್ರಂ ನ**—ಸಮುದ್ರವನ್ನು ಹೇಗೋ ಹಾಗೆ । **ಅಗ್ನಿಂ**—ಅಗ್ನಿಯನ್ನು । **ಅಭಿ ಸಚಂತೇ**—ವ್ಯಾಪ್ತವಾಗುತ್ತವೆ । **ಜಾಮಿಭಿಃ**—ಜ್ಞಾತಿಗಳೊಡನೆ । **ನಃ**—ನಮ್ಮ । **ವಯಃ**—ಅನ್ನವು । **ನ ವಿ ಚಿಕಿತೇ**—ತಿಳಿಯುವುದಿಲ್ಲ (ಆದುದರಿಂದ ಅಗ್ನಿಯೇ) । **ದೇವೇಷು**—ಧನಾಧಿಪತಿಗಳಾದ ದೇವತೆಗಳಲ್ಲಿ । **ಪ್ರಮತಿಂ**—ವಿಶೇಷವಾಗಿ ಅಪೇಕ್ಷ್ಯವಾದ ಧನವನ್ನು (ಉತ್ತಮವಾದ ಸ್ತುತಿಯನ್ನು) । **ಚಿಕಿತ್ವಾ**—ತಿಳಿದ (ನೀನು) । **ವಿದಾಃ**—(ನಮಗೆ) ದೊರಕಿಸು (ದೇವತೆಗಳಿಗೆ ತಿಳಿಸು)

॥ ಭಾವಾರ್ಥ ॥

ಪುರೋಡಾಶಾದಿ ಎಲ್ಲಾ ಹವಿರ್ದ್ರವ್ಯಗಳೂ, ಏಳು ಉತ್ತಮ ನದಿಗಳು ಸಮುದ್ರವನ್ನೇ ಸೇರುವಂತೆ, ಅಗ್ನಿಯನ್ನು ಸೇರುತ್ತವೆ; ನಮ್ಮ ಜ್ಞಾತಿಗಳು ನಮ್ಮ ಅನ್ನವನ್ನು ಸ್ವೀಕರಿಸಿಲ್ಲ. ಆದುದರಿಂದ, ಸರ್ವಜ್ಞನಾದ ಎಲೈ ಅಗ್ನಿಯೇ, ನೀನು, ನಮ್ಮ ಅಭಿಲಾಷೆಯನ್ನೂ, ಸ್ತುತಿಗಳನ್ನೂ, ದೇವತೆಗಳಿಗೆ ತಿಳಿಸು

English Translation.

All (sacrificial) viands concentrate in Agni, as the seven great rivers flow into the ocean. our food is not partaken of by our kinsmen, therefore do you, who know (all things), make our desires known to the Gods

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಚರುಪುರೋಡಾಶಾದಿಗಳನ್ನು ಮಹಾನದಿಗಳಿಗೂ, ಅಗ್ನಿಯನ್ನು ಸಮುದ್ರಕ್ಕೂ ಹೋಲಿಸಿದ ಸಪ್ತಮಹಾನದಿಗಳು ತಮ್ಮ ಏಕಮಾತ್ರ ಪತಿಯಾದ ಸಮುದ್ರರಾಜನಲ್ಲಿಗೇ ಹೋಗಿ ಸೇರುವಂತೆ ಚರುಪುರೋಡಾಶಾದಿ

ಗಳೂ ಸಹ ತಮ್ಮ ಏಕಮಾತ್ರ ಪ್ರಭುವಾದ ಅಗ್ನಿಯನ್ನು ಸೇರುತ್ತವೆ. ಇವುಗಳ ಸತ್ತ್ವವೆಲ್ಲವೂ ಅಗ್ನಿಯ ಮೂಲಕ ದೇವತೆಗಳಿಗೆ ವಿಭಕ್ತವಾಗಿ ತತ್ಪ್ರತಿಫಲವಾಗಿ ಯಜಮಾನನಿಗೆ ಬೇಕಾದುದೂ ಅವನನ್ನೂ ಅವನ ಬಂಧುವರ್ಗದವರನ್ನೂ ಪುಷ್ಕಲವಾದ ಜೀವನದಿಂದ ಬೆಳೆಸುವುದೂ ಆದ ಅನ್ನವನ್ನು ಒದಗಿಸಬೇಕೆಂದು ಅಗ್ನಿಯನ್ನು ಪ್ರಾರ್ಥಿಸಿದೆ.

ಪೈಕ್ಷಃ—ಅ ಅನ್ನನಾಮಗಳಲ್ಲಿ ಪರಿತವಾಗಿರುವುದರಿಂದ (ನಿ. ೩–೯) **ಪೈಕ್ಷ** ಶಬ್ದಕ್ಕೆ ಅನ್ನವೆಂದು ಅರ್ಥ ಇಲ್ಲಿ ಚರುಪುರೋಡಾಶಾದ್ಯನ್ನಗಳೆಂದು ಅಭಿಪ್ರಾಯ.

ಯೆಹ್ವೀಃ—**ಯೆಹ್ವ ಇತಿ ಮಹತೋ ನಾಮಧೇಯಂ** (ನಿ. ೮–೮) ದೊಡ್ಡದು, ಪೂಜ್ಯವಾದುದು. ಇತ್ಯಾದ್ಯರ್ಥದಲ್ಲಿ **ಯೆಹ್ವೀಃ** ಎಂಬ ಪದದ ಪ್ರಯೋಗವಿವೆ. ಉದಾಹರಣೆಗೆ—

ತ್ವಂ ದೇವಾನಾಮಸಿ ಯೆಹ್ವ ಹೋತಾ ಸ ಏನಾನ್ಯಕ್ಷೀಷಿತೋ ಯಜೀಯಾನ್ ।

(ಋ ಸಂ ೧೦–೧೧೦–೩)

ಈ ಸೂಕ್ತವನ್ನು ನಿರುಕ್ತಕಾರರು ಉದಹರಿಸಿ **ಯೆಹ್ವ** ಪದಕ್ಕೆ ಮೇಲೆ ವಿವರಿಸಿದಂತೆ ಅರ್ಥವನ್ನು ಮಾಡುತ್ತಾರೆ ಇಲ್ಲಿಯೂ ಸಹ **ಯೆಹ್ವೀಃ** ಎಂಬುದು **ಸಪ್ತ ನದಿ**ಗಳಿಗೆ ವಿಶೇಷಣವಾದುದರಿಂದ **ಮಹತ್ತಾದ** ಅಥವಾ **ಪೂಜ್ಯವಾದ** ಎಂದರ್ಥ

ಇಂತಹ **ಯೆಹ್ವೀಃ ಸಪ್ತ ಸ್ರವತಃ**—ಏಳು ಮಹಾನದಿಗಳು. ಋಕ್ಸಂಹಿತೆಯಲ್ಲಿಯೇ—

ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ ।
ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

(ಋ ಸಂ. ೧೦–೭೫–೫)

ಎಂಬ ಋಕ್ಕಿನಲ್ಲಿ ವಿವರಿಸಿರುವಂತೆ ಸಪ್ತ ಮಹಾನದಿಗಳು, ಗಂಗಾ, ಯಮುನಾ, ಸರಸ್ವತೀ, ಶುತುದ್ರೀ, ಪರುಷ್ಣೀ, ಮರುದ್ವೃಧಾ, ಋಜೀಕೀ ಎಂಬ ನಾಮಧೇಯವುಳ್ಳವು. ಈ ಮಹಾನದಿಗಳು ಸಮುದ್ರರಾಜನನ್ನು ಸೇರುವಂತೆ ಹವಿಸ್ಸುಗಳೆಲ್ಲವೂ ಅಗ್ನಿಯನ್ನು ಸೇರುತ್ತವೆ. ಅಗ್ನಿಯು ಸಕಲ ಹವಿಸ್ಸುಗಳಿಗೂ ಪ್ರಭುವಾಗಿ,

ಅಗ್ನಿರೀಶೇ ಬೃಹತೋ ಅಧ್ವರಸ್ಯಾಗ್ನಿರ್ವಿಶ್ವಸ್ಯ ಹವಿಷಃ ಕೃತಸ್ಯ ।

(ಋ. ಸಂ ೭–೧೧–೪)

ಎಂಬ ಋಕ್ಕಿನಲ್ಲಿ ವರ್ಣಿತವಾದಂತೆ **ವಿಶ್ವಸ್ಯ ಹವಿಷಃ** ಸಕಲ ಹವಿಸ್ಸುಗಳಿಗೂ ಒಡೆಯನಾದುದರಿಂದ ಎಲ್ಲಾ ಹವಿಸ್ಸುಗಳೂ ಅಗ್ನಿಯನ್ನೇ ಸೇರುತ್ತವೆ. ಇಲ್ಲಿ ಉಪಮಾನವು ಅತ್ಯಂತ ಉಚಿತವಾಗಿಯೂ ಶುದ್ಧವಾಗಿಯೂ ಇದೆ

ಜಾಮಿಭಿಃ—**ಜಮಂತಿ ಏಕಸ್ಮಿನ್ ಪಾತ್ರೇ ಸಹ ಭುಂಜತೇ ಇತಿ ಜಾಮಯಃ ಜ್ಞಾತಯಃ ।** ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಭೋಜನವನ್ನು ಮಾಡುವುದರಿಂದ ಜ್ಞಾತಿಗಳಿಗೂ ಬಂಧುಗಳಿಗೂ **ಜಾಮಯಃ**ಎಂಬ ಹೆಸರು ಬಂದಿದೆ. **ಜಾಮಿಭಿಃ** ಎಂದರೆ ನಮ್ಮ ಬಂಧುಗಳೊಡನೆ ಎಂದರ್ಥ.

ಜಾಮಿ—ಶಬ್ದವು ಪ್ರಥಮತಃ ಸಹೋದರಿಯೆನ್ನುವುದಕ್ಕೆ ಪರ್ಯಾಯವಾಗಿದ್ದು ಅನಂತರ ಅದರ ಅರ್ಥವು ಕೊಂಚ ವಿಸ್ತಾರವಾಗಿ **ಬಂಧು** ಎಂಬ ಸಾಧಾರಣವಾದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ನಿರುಕ್ತಕಾರರು ಋಕ್ಸಂಹಿತೆಯ—

ನ ಜಾಮಯೇ ತಾನ್ವೋ ರಿಕ್ಥಮಾರೈಕ್ಚೇಕಾರ ಗರ್ಭಂ ಸನಿತುರ್ನಿಧಾನಂ ।

(ಋ ಸಂ ೩-೩೧-೨).

ಎಂಬ ಋಕ್ಕನ್ನು ಉದಹರಿಸಿ **ಜಾಮಯೇ ಭಗಿನ್ಯೈ** । ಸಹೋದರಿಗೆ ಎಂದು **ಜಾಮಿ** ಶಬ್ದಕ್ಕೆ ಸಹೋದರಿಯೆಂಬ ಅರ್ಥವು ಹೇಗೆ ಸಾಧ್ಯ ಎನ್ನುವುದನ್ನು ವಿವರಿಸುತ್ತಾ **ಜಾಮಿರನ್ಯೇಽಸ್ಯಾಂ ಜನಯಂತಿ ಜಾಮಪತ್ಯಂ । ಜಮತೇರ್ವಾ ಸ್ಯಾದ್ಗತಿಕರ್ಮಣೋ ನಿರ್ಗಮನಪ್ರಾಯಾ ಭವತಿ** । ಇತರನು ಇವಳಲ್ಲಿ ಪುತ್ರನು ಜನಿಸುವಂತೆ ಮಾಡುತ್ತಾನೆ ಆದುದರಿಂದ **ಸಂತತಿ** ಎಂಬರ್ಥವನ್ನು ಕೊಡುವ **ಜಾ** ಎಂಬ ಮೂಲದಿಂದಲಾಗಲಿ **ಅಥವಾ**, ಗಂಡನ ಮನೆಗೆ ಹೊರಟುಹೋಗುವಳಾದ್ದರಿಂದ **ಗತಿಕರ್ಮಾರ್ಥವನ್ನು** ಕೊಡುವ **ಜಮ್** ಎಂಬ ಧಾತುವಿನಿಂದಲಾಗಲಿ ನಿಷ್ಪನ್ನವಾಗಿದೆಯೆಂದು ತಿಳಿಸಿ ಸಹೋದರಿಗೆ ಎಂದು ವಿವರಿಸುತ್ತಾರೆ (ನಿ ೩-೬) ಈ ಅರ್ಥವು ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಂಡಿದೆ. ಇದೂ ಅಲ್ಲದೆ,

ಭಗಸ್ಯ ಸ್ವಸಾ ವರುಣಸ್ಯ ಜಾಮಿರುಷಃ ಸೂನೃತೇ ಪ್ರಥಮಾ ಜರಸ್ವ ।

(ಋ. ಸಂ ೧-೧೨೩-೫)

ಎಂಬ ಋಕ್ಕಿನಲ್ಲಿ ಉಪಯೋಗಿಸುವ **ಜಾಮಿ** ಶಬ್ದಕ್ಕೂ ಸಹೋದರಿಯೆಂದೇ ಅರ್ಥ ಕ್ರಮೇಣ ಈ ಪದಕ್ಕೆ ಬರೀ ಸಹೋದರಿಯೆಂದೇ ಆಗದೇ **ಬಂಧುಗಳು** ಎಂಬ ವಿಸ್ತಾರವಾದ ಅರ್ಥವಾಗುತ್ತದೆ. ಋಕ್ಸಂಹಿತೆಯ ೧-೬೫-೪, ೧-೭೫-೩, ೧-೧೦೦-೧ ಇತ್ಯಾದಿ ಅನೇಕ ಋಕ್ಕುಗಳಲ್ಲಿ **ಬಂಧು** ಎಂಬ ಸಾಮಾನ್ಯವಾದ ಅರ್ಥವಾಗುತ್ತದೆ.

ಇಷ್ಟೇ ಅಲ್ಲದೇ, ಸೋಮಯಾಗದ ಸಂದರ್ಭದಲ್ಲಿ ಕೈಬೆರಳುಗಳ ಪರಿಚರಣಕಾರ್ಯವು ಅತ್ಯವಶ್ಯವಾಗಿ ಬೇಕಾದುದರಿಂದ ಆ ಬೆರಳುಗಳ ಸೇವಾಕಾರ್ಯವನ್ನು ವರ್ಣಿಸುವಾಗ ಅವಕ್ಕೆ ಪರ್ಯಾಯವಾಗಿ **ಜಾಮಿ** ಶಬ್ದದ ಪ್ರಯೋಗವಿದೆ. ಉದಾಹರಣೆಗೆ—

ಏಷ ವೃಷಾ ಕನಿಕ್ರದದ್ದಶಭಿರ್ಜಾಮಿಭಿರ್ಯತಃ ।

(ಋ ಸಂ ೯-೬೮-೪).

ಅಂಶುರ್ಯನೇನ ಪಿಪಿಶೇ ಯತೋ ನೃಭಿಃ ಸಂ ಜಾಮಿಭಿರ್ನಸತೇ ರಕ್ಷತೇ ಶಿರಃ ।

(ಋ ಸಂ. ೯-೬೮-೪)

ಎಂಬ ಋಕ್ಕುಗಳಲ್ಲಿ **ಜಾಮಿಭಿಃ** ಎಂದರೆ ಬಂಧುಗಳಂತೆ ಅನ್ಯೋನ್ಯವಾಗಿ ಸೇರಿಕೊಂಡು ಯಾಗಕ್ರಿಯೆಗಳನ್ನು ನಿರವೇರಿಸುವ **ಕೈಬೆರಳುಗಳು** ಎಂದರ್ಥವಾಗುತ್ತದೆ ಇಲ್ಲಿಯೂ ಬಾಂಧವ್ಯವನ್ನೇ ಸೂಚಿಸುತ್ತದೆ

ಪ್ರಕೃತವಾದ ೧-೭೧-೭ನೇ ಋಕ್ಕಿನಲ್ಲಿ **ಜಾಮಿಭಿಃ** ಎಂದರೆ ಬಂಧುಗಳೊಡನೆ ಎಂದರ್ಥ. ನಮ್ಮ ಬಂಧುಗಳೊಡನೆ ಕೂಡಿಕೊಂಡು ಭೋಜನಮಾಡಲು ಅನ್ನವನ್ನು ಕೊಡು ಎಂದು ಅಗ್ನಿಯನ್ನು ಪ್ರಾರ್ಥಿಸಿದೆ. ಅಗ್ನಿಯು **ಜಾತವೇದಸ್ಸಾದ್ದರಿಂದಲೂ ದೇವದೂತ**ನಾದ್ದರಿಂದಲೂ ದೇವತೆಗಳಿಗೆಲ್ಲಾ ಮಿತ್ರನಾದ್ದರಿಂದಲೂ ದೇವತೆಗಳಿಂದ ಮಾನವರಿಗೆ ಲಭಿಸಬೇಕಾದ ಸಕಲ ಧನಸಂಪತ್ತನ್ನೂ ಯಜಮಾನರಿಗೆ ತಂದೊಗಿಸಬೇಕೆಂದು ಪ್ರಾರ್ಥಿತನಾಗಿದ್ದಾನೆ

॥ ವ್ಯಾಕರಣಪ್ರಕ್ರಿಯಾ ॥

ಪೃಕ್ಷಃ—ಪೃಕ್ಷ ಎಂಬುದು ಅನ್ನದ ಹೆಸರು. ಪೃಚೀ ಸಂಪರ್ಕೇ ಧಾತು ಇದಕ್ಕೆ ಔಣಾದಿಕವಾದ ಕ್ವಿಪ್ ಪ್ರತ್ಯಯವು ಕರ್ಮಣಿಯಲ್ಲಿ ಬರುತ್ತದೆ; ತತ್ಸಂನಿಯೋಗದಿಂದ ಧಾತುವಿಗೆ ಷುಕಾಗಮ. ಕಿತ್ತಾದುದರಿಂದ ಅಂತಾವಯವವಾಗಿ ಬರುತ್ತದೆ. **ಚೋಃಕುಃ** ಎಂಬುದರಿಂದ ಧಾತುವಿನ ಚಕಾರಕ್ಕೆ ಕಕಾರಾದೇಶ. ಕಕಾರ ಷಕಾರಯೋಗದಿಂದ ಕ್ಷಕಾರವಾಗುತ್ತದೆ ಅಥವಾ ಸರ್ವಧಾತುನಿಬಂಧನವಾಗಿ ಬರುವ ಅಸುನ್ ಪ್ರತ್ಯಯ ಪ್ರಥಮಾ ಬಹುವಚನಕ್ಕೆ **ಸುಪಾಂ ಸುಲುಕ್** ಎಂಬುದರಿಂದ ಲುಕ್.

ಸಚಂತೇ- -ಷಚ ಸಮವಾಯೇ ಧಾತು. **ಧಾತ್ವಾದ್ವೇಃ ಷಃ ಸಃ** ಎಂಬುದರಿಂದ ಸಕಾರಾದೇಶ ಲಟ್ ಪ್ರಥಮಪುರುಷ ಬಹುವಚನರೂಪ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸ್ರವತಃ—ಸ್ರು ಗತೌ ಧಾತು. ಸ್ರವಣಂ ಸ್ರವಃ ತತ್ ಕುರ್ವಂತಿ ಎಂದು ಅರ್ಥವಿವಕ್ಷಾ ಮಾಡಿದಾಗ **ಸರ್ವಪ್ರಾತಿಪದಿಕೇಭ್ಯಃ ಕ್ವಿಬ್ವಕ್ತವ್ಯಃ** ಎಂಬುದರಿಂದ ಕ್ವಿಪ್. ಕ್ವಿಪಿನಲ್ಲಿ ಸರ್ವಲೋಪವಾಗುತ್ತದೆ **ಸನಾದ್ಯಂತಾಧಾತವಃ** ಎಂಬುದರಿಂದ ಸ್ರವ ಎಂಬುದಕ್ಕೆ ಧಾತುಸಂಜ್ಞಾ. ಈ ಧಾತುವಿಗೆ **ಕ್ವಿಪ್‌ಚ** (ಪಾ ಸೂ ೩-೨-೭೬) ಎಂಬುದರಿಂದ ಕ್ವಿಪ್ ಕೃತ್ ಪ್ರತ್ಯಯ ಪಿತ್ ಪ್ರತ್ಯಯ ಪರದಲ್ಲಿರುವುದರಿಂದ **ಹ್ರಸ್ವಸ್ಯ ಪಿತಿಕೃತಿ ತುಕ್** ಎಂಬುದರಿಂದ ಪೂರ್ವಕ್ಕೆ ತುಕಾಗಮ ಸ್ರವತ್ ಎಂದು ರೂಪವಾಗುತ್ತದೆ. ಕ್ವಿಬಂತಧಾತುವು ಸತಿಶಿಷ್ಟವಾಗುವುದರಿಂದ **ಧಾತೋಃ** (ಪಾ ಸೂ ೬-೧-೧೬೨) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ ಪ್ರಥಮಾ ಬಹುವಚನಾಂತರೂಪ.

ಯಹ್ವೀಃ—**ಓಪ್ಯಲ್ಯಾದಿಭ್ಯಶ್ಚ** (ಪಾ. ಸೂ. ೪-೧-೪೧) (ಗಣಸೂತ್ರ) ಎಂಬುದು ಗೌರಾದಿಯಲ್ಲಿ ಪಠಿತವಾಗಿದೆ ಇದು ಆಕೃತಿಗಣವಾಗಿರುವುದರಿಂದ ಈ ಶಬ್ದವು ಅಲ್ಲಿ ಸೇರಿದೆಯೆಂದು ಙೀಷ್ ಬರುತ್ತದೆ ಯಹ್ವೀ+ಜಸ್ ಎಂದಿರುವಾಗ **ವಾ ಛಂದಸಿ** ಎಂಬುದರಿಂದ ಪೂರ್ವಸವರ್ಣ ದೀರ್ಘ ಸಕಾರಕ್ಕೆ ರುತ್ವ ವಿಸರ್ಗ

ಚಿಕಿತೇ—ಕಿತ ಜ್ಞಾನೇ ಧಾತು. ವರ್ತಮಾನಾರ್ಥವಿವಕ್ಷಾಮಾಡಿದಾಗ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಕರ್ಮಣಿಯಲ್ಲಿ ಲಿಟ್. **ಲಟಸ್ತ್ರುಯೋರೇತಿಶೇಷೇಷು** ಎಂಬುದರಿಂದ ತ ಪ್ರತ್ಯಯಕ್ಕೆ ಇರೇಚ್ ಆದೇಶ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ **ಕುಹೋಶ್ಚುಃ** ಸೂತ್ರದಿಂದ ಚುತ್ವ. ಪ್ರತ್ಯಯಕ್ಕೆ ಕಿದ್ವದ್ಭಾವವಿರುವುದರಿಂದ ಲಘೂಪಧಗುಣ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ವಿದಾಃ—ವಿದ್ಲೃ ಲಾಭೇ ಧಾತು. ಪ್ರೇರಣಾ ತೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಈ ಧಾತುವಿನ ಮೇಲೆ ಲೇಟ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಇಕಾರ ಲೋಪ. **ಲೇಟೋಽಡಾಟೌ** ಸೂತ್ರದಿಂದ ಅದಕ್ಕೆ ಅಡಾಗಮ ತುದಾದಿ ಪರಿತವಾದುದರಿಂದ **ತುದಾದಿಭ್ಯಃ ಶಃ** (ಪಾ ಸೂ. ೩-೧-೭೭) ಎಂಬುದರಿಂದ ಶ ವಿಕರಣ. ಇದು **ಸಾರ್ವಧಾತುಕಮಪಿತ್** ಸೂತ್ರದಿಂದ ಪಿತ್ವವನ್ನು ಹೊಂದುವುದರಿಂದ ತನ್ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. **ಆಗಮಶಾಸ್ತ್ರಮನಿತ್ಯಮ್** ಎಂಬುದರಿಂದ **ಶೇಮುಚಾದೀನಾಮ್** (ಪಾ ಸೂ ೭-೧-೫೯) ಎಂಬುದರಿಂದ ಬರಬೇಕಾದ ನುಮಾಗಮ ಬರುವುದಿಲ್ಲ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ವಿಕರಣಸ್ವರ ಉಳಿಯುತ್ತದೆ ಅಥವಾ ವಿದ ಜ್ಞಾನೇ ಧಾತು ಅದಾದಿ ಲೇಟ್ ಮಧ್ಯಮಪುರುಷದ ರೂಪ. **ವ್ಯತ್ಯಯೋ ಬಹುಲಂ** ಎಂಬುದರಿಂದ ಶಪ್ಪಿಗೆ ಲುಕ್ ಬಾರದೆ ಶ ವಿಕರಣಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ಆ ಯದ್ದಿಷೇ ನೃಪತಿಂ ತೇಜ ಆನಟ್ಛುಚಿ ರೇತೋ ನಿಷಿಕ್ತಂ ದ್ಯೌರಭೀಕೇ ।
ಅಗ್ನಿಃ ಶರ್ಧಮನವದ್ಯಂ ಯುವಾನಂ ಸ್ವಾಧ್ಯಂ ಜನಯತ್ಸೂದಯಚ್ಚ ॥ ೯ ॥

॥ ಪದಪಾಠಃ ॥

ಆ । ಯತ್ । ಇಷೇ । ನೃ ಽ ಪತಿಂ । ತೇಜಃ । ಆನಟ್ । ಶುಚಿ । ರೇತಃ । ನಿ ಽ ಸಿ-ಕ್ತಂ । ದ್ಯೌಃ । ಅಭೀಕೇ ।
ಅಗ್ನಿಃ । ಶರ್ಧಂ । ಅನವದ್ಯಂ । ಯುವಾನಂ । ಸು ಽ ಆಧ್ಯಂ । ಜನಯತ್ । ಸೂದಯತ್ । ಚ ॥ ೯ ॥

॥ ಸಾಯಣಭಾಷ್ಯಂ ॥

ಅಗ್ನೇರ್ಯತ್ತೇಜೋ ನೃಪತಿಂ ನೃಣಾಮೃತ್ವಿಜಾಂ ಪಾಲಕಂ ಯಜಮಾನಮಾನಟ್ ಜಾಠರ-ರೂಪೇಣ ಆ ಸಮಂತಾದ್ವ್ಯಾಪ್ನೋತ್ । ಕಿಮರ್ಥಂ । ಇಷ ಅನ್ನಾಯ । ಕೀದೃಶಂ । ಶುಚಿ ಶುದ್ಧಂ ದ್ಯೌರ್ದೀಪ್ತಂ । ತೇನ ತೇಜಸಾ ಪರಿಪಕ್ವಮನ್ನಂ ರಸರೂಪಂ ರೇತೋ ವೀರ್ಯಮಭೀಕ್ಷ್ಯಭ್ಯಕ್ತೇಽಭಿ-ಗತೇಽಭಿಪ್ರಾಪ್ತೇ ಗರ್ಭಸ್ಥಾನೇ ನಿಷಿಕ್ತಂ ನಿತರಾಂ ಸಿಕ್ತಮಗ್ನಿರ್ವಕ್ಷ್ಯಮಾಣಗುಣವಿಶಿಷ್ಟಪುತ್ರರೂಪೇಣ ಜನಯತ್ । ಜನಯತು । ಶರ್ಧಂ ಬಲವಂತಮನವದ್ಯಮವದ್ಯರಹಿತಂ ಯುವಾನಂ ತರುಣಂ । ಜರಾರಹಿತಮಿತ್ಯರ್ಥಃ । ಸ್ವಾಧ್ಯಂ ಶೋಭನಕರ್ಮಾಣಂ ಶೋಭನಪ್ರಜ್ಞಂ ವೋತ್ಪನ್ನಂ ಪುತ್ರಂ ಸೂದಯಚ್ಚ । ಯಾಗಾದಿಕರ್ಮಸು ಪ್ರೇರಯತು ಚ । ಯದ್ವಾ । ರೇತ ಇತ್ಯುದಕನಾಮ । ನಿಷಿಕ್ತಂ ಮೇಘೇನ ವೃಷ್ಟ್ಯುದಕಮಿಷೇಽನ್ನಾಯ ಸಸ್ಯಾದಿನಿಷ್ಪತ್ತಯೇಽಗ್ನೇರ್ಯತ್ತೇಜ ಆನಟ್ ವ್ಯಾಪ್ನೋತ್ । ವೃಷ್ಟ್ಯುದಕೇನ ಭೌಮಾಗ್ನೇಃ ಸಂಯೋಗೇ ಸತಿ ಹಿ ಸಸ್ಯಾನ್ಯುತ್ಪದ್ಯಂತೇ । ಕೀದೃಶಂ ತೇಜಃ । ನೃಪತಿಂ ನೃಣಾಂ ರಕ್ಷಕಂ ಶುಚಿ ದೀಪ್ತಂ । ತಾದೃಶೇನ ತೇಜಸಾ ಯುಕ್ತೋ ದ್ಯೌರ್ದೀಪ್ತೋಽಗ್ನಿರಭೀಕ್ಷ್ಣಂ ಅಸನ್ನಕಾಲ ಏವ ಶರ್ಧಾದಿಗುಣವಿಶಿಷ್ಟಂ ಪುತ್ರಂ ಜನಯತು ತಂ ಚ ಪ್ರೇರಯತು ಯಜ್ಞಾದೌ ॥ ಇಷೇ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ನೃಪತಿಂ ಪರಾದಿಶ್ಚಂದಸಿ ಬಹುಲಮಿತ್ಯುತ್ತರಪದಾ-ದ್ಯುದಾತ್ತತ್ವಂ । ಆನಟ್ । ಅಶೂ ವ್ಯಾಪ್ತೌ । ಲಙಿ ವ್ಯತ್ಯಯೇನ ಪರಸ್ಮೈಪದಶ್ನಮೌ । ಆಡಾಗಮಃ । ವ್ರಶ್ಚಾದಿಷಸ್ಜೇ ಷ್ಟುತ್ವಂ । ನಿಷಿಕ್ತಂ । ಷಿಚಿರ್ ಕ್ಷರಣೇ । ಕರ್ಮಣಿ ನಿಷ್ಠಾ । ಗತಿರನಂತರ ಇತಿ ಗತೇಃ ಪ್ರಕೃತಿಸ್ವರತ್ವಂ । ಉಪಸರ್ಗಾತ್ಸುನೋತೀತಿ ಷತ್ವಂ । ಅಭೀಕ್ಷ್ಣೇ । ಅಭಿಪೂರ್ವಾದಂಚತೇಃ ಪಚಾದ್ಯಚಿ ಪೃಷೋದರಾದಿತ್ವಾದ್ರೂಪಸಿದ್ಧಿಃ । ಯದ್ವಾ । ಇಣ್ ಗತಾವಿತ್ಯಸ್ಮಾದೌಣಾದಿಕಃ ಕಪ್ರತ್ಯಯಃ । ಉಭಯ-ಥಾಪಿ ದಾಸೀಭಾರಾದಿತ್ವಾತ್ಪೂರ್ವಪದಪ್ರಕೃತಿಸ್ವರತ್ವಂ । ಸ್ವಾಧ್ಯಂ । ಏರನೇಕಾಚ ಇತಿ ಯಣಾದೇಶಃ । ಉದಾತ್ತಸ್ವರಿತಯೋರ್ಯಣ ಇತಿ ಸ್ವರಿತತ್ವಂ । ಜನಯತ್ । ಜನೇರ್ಣ್ಯಂತಾಲ್ಲೇಟ್ಯಡಾಗಮಃ । ಸೂದಯತ್ । ಷೂದ ಕ್ಷರಣೇ ಪೂರ್ವವಲ್ಲೇಟ್ಯಡಾಗಮಃ ॥

॥ ಪ್ರತಿಪದಾರ್ಥ ॥

(ಅಗ್ನೇಃ—ಅಗ್ನಿಯ) । ಶುಚಿ—ಶುಭ್ರವಾದ । ದ್ಯೌಃ—ದೀಪ್ತವಾದ । ಯತ್ ತೇಜಃ—ಯಾವ ತೇಜಸ್ಸು । ನೃಪತಿಂ—ಋತ್ವಿಜರ ಪಾಲಕನಾದ ಯಜಮಾನನನ್ನು । ಆನಟ್—ಜಾಠರಾಗ್ನಿ ರೂಪದಿಂದ । ಇಷೇ—ಜನ್ನ ಕ್ಕೋಸ್ಕರ । ಆ—ಎಲ್ಲೆಡೆಗಳಲ್ಲಿಯೂ ವ್ಯಾಪಿಸಿತೋ । ರೇತಃ—(ಅಂತಹ ತೇಜಸ್ಸಿನಿಂದ ಪರಿಪಕ್ವವಾದ ಅನ್ನವು (ರಸರೂಪವಾದ ವೀರ್ಯವು) । ಅಭೀಕ್ಷ್ಣಂ—ಗರ್ಭಸ್ಥಾನದಲ್ಲಿ । ನಿಷಿಕ್ತಂ—ಸೇರಿಸಲ್ಪಟ್ಟಿದ್ದಾಗಿ । ಅಗ್ನಿಃ—ಅಗ್ನಿಯು (ಪುತ್ರರೂಪನಾಗಿ) । ಜನಯತ್—ಜನಿಸಲಿ । ಶರ್ಧಂ—ಬಲಿಷ್ಠನಾದ । ಅನವದ್ಯಂ—ದೋಷ ರಹಿತನಾದ । ಯುವಾನಂ—ತರುಣನಾದ (ಜರಾರಹಿತನಾದ) । ಸ್ವಾಧ್ಯಂ—ಮಂಗಳಕರವಾದ ಕರ್ಮ (ಜ್ಞಾನ) ವುಳ್ಳ (ಉತ್ಪನ್ನನಾದ ಮಗನನ್ನೂ) । ಸೂದಯಚ್ಚ—(ಯಾಗಾದಿ ಕರ್ಮಗಳಲ್ಲಿ) ಪ್ರೇರಣೆಯನ್ನೂ ಮಾಡಲಿ ।

ಅಥವಾ [ನಿಷಿಕ್ತಂ—ನೇಥದಿಂದ ಸಿಕ್ತವಾದ । **ರೇತಃ**—ವೃಷ್ಟಿಜಲವು । **ಇಷೇ**—ಅನ್ನಕ್ಕೋಸ್ಕರ । **(ಅಗ್ನೇಃ**-ಅಗ್ನಿಯ) । **ಶುಚಿ**—ಶುಭ್ರವಾದ । **ದೀಪ್ತಂ**—ಪ್ರಜ್ವಲಿಸುವ । **ಯತ್ ತೇಜಃ**—ಯಾವ ತೇಜಸ್ಸನ್ನು । **ಆ ಆನಟ್**—ಸುತ್ತಲೂ ಆವರಿಸಿತೋ । **(ಸಃ**—ಆಂತಹ ತೇಜಸ್ಸಿನಿಂದ ಯುಕ್ತವಾದ) । **ದ್ಯೌಃ**—ದೀಪ್ತನಾದ । **ಅಗ್ನಿಃ**—ಅಗ್ನಿಯು । **ಅಭೀಕೇ**—ಆಸನ್ನಕಾಲದಲ್ಲಿ । **ಶರ್ಧಂ**—ಬಲಿಷ್ಠನೂ । **ಅನವದ್ಯಂ**—ದೋಷರಹಿತನೂ । **ಯುವಾನಂ**—ಜರಾರಹಿತನೂ । **ಸ್ವಾಧ್ಯಂ**—ಒಳ್ಳೆಯ ಕರ್ಮಗಳುಳ್ಳ (ಪುತ್ರನನ್ನು) । **ಜನಯತ್**—ಜನಿಸುವಂತೆ ಮಾಡಲಿ । **ಸೂದಯಥ್ಚೈ**—ಯಾಗಾದಿಕರ್ಮಗಳಲ್ಲಿ ಪ್ರೇರೇಪಿಸಲಿ]

॥ ಭಾವಾರ್ಥ ॥

ಜಾಠರಾಗ್ನಿರೂಪವಾದ, ಶುಭ್ರವಾದ ಮತ್ತು ದೀಪ್ತವಾದ ಅಗ್ನಿಯ ತೇಜಸ್ಸು, ಯಾಗ ಕರ್ತೃವಿಗೆ ರೇತೋರೂಪವಾಗಿ ಪರಿಣಮಿಸಲಿ. ಆದರಿಂದ ಬಲಿಷ್ಠನೂ, ನಿರ್ದೋಷನೂ, ಜರಾರಹಿತನೂ, ಜ್ಞಾನಿಯೂ ಆದ ಪುತ್ರನಾಗಿ ಅಗ್ನಿಯು ಜನಿಸಿ ಆ ಮಗನು ಸತ್ಕರ್ಮನಿರತನೂ ಆಗುವಂತೆ ಮಾಡಲಿ.

English Translation

May that (digestive) faculty (of Agni) which regards food, be imparted to the devout and illustrious protector of priests, as the source of virile vigour, and may Agni be born as (his) robust, irreproachable, youthful, and intelligent son, and instigate him to acts of worship

॥ ವಿಶೇಷವಿಷಯಗಳು ॥

ತಿಷ್ಠತ್ಯೇವ ಹಿ ಭೂತಾನಾಂ ಜರರೇ ಜಠರೇ ಜ್ವಲನ್ ।

(ಬೃಹದ್ದೇವತಾ ೧-೬೫)

ಎಂಬ ವರ್ಣನೆಯಂತೆ ಸಮಸ್ತ ಭೂತಗಳ ಜರರಗಳಲ್ಲಿಯೂ ಜಾಠರಾಗ್ನಿ ರೂಪದಲ್ಲಿ ವ್ಯಾಪಿಸಿರುವ ಅಗ್ನಿಯು ಸಕಲ ಸತ್ಕರ್ಮಕಾರ್ಯಕ್ಕೂ ಯಜಮಾನನನ್ನು ಪ್ರೇರಿಸಿ ಆ ಸತ್ಕರ್ಮಗಳಿಗೆ ತಕ್ಕ ಫಲವನ್ನು ಅನುಗ್ರಹಿಸಲಿ. ಮತ್ತು ದೇಹದಲ್ಲಿ ಉತ್ತಮವಾದ ವೀರ್ಯವನ್ನುಂಟುಮಾಡಿ ಶಕ್ತಿಯುತನೂ ಕರ್ಮನಿರತನೂ ಆದ ಪುತ್ರನು ಜನಿಸುವಂತೆ ಮಾಡಲಿ ಎಂದು ಒಂದು ಅರ್ಥವೂ ಅಥವಾ ಅಗ್ನಿಯ ತೇಜಸ್ಸು ಸೃಧ್ರಿಯಲ್ಲೆಲ್ಲಾ ವ್ಯಾಪಿಸಿ ವೃಷ್ಟ್ಯುದಕದ ರೂಪದಲ್ಲಿರುವ ರೇತಸ್ಸನ್ನು ಹರಡಿ ಸಸ್ಯಸಂಪತ್ತನ್ನು ಬೆಳೆಸಿ ಯಾಗಾದಿಸಾಧನಗಳಾದ ಸಂಪತ್ತುಗಳಿಂದ ಕೂಡಿನ ಪುತ್ರನು ಜನಿಸುವಂತೆ ಮಾಡಲಿ ಎಂದು ಇನ್ನೊಂದರ್ಥವೂ ಬರುವಂತೆ ಅಗ್ನಿಯು ಪ್ರಾರ್ಥಿತನಾಗಿದ್ದಾನೆ

ನೃಪತಿಂ—ನೃಣಾಂ ಋತ್ವಿಜಾಂ ಪಾಲಕಂ ಯಜಮಾನಂ । ಯಾಗಕ್ಕೆ ನೇತೃಗಳಾದ ಋತ್ವಿಕ್ಕುಗಳಿಗೆ ಪಾಲಕನಾದ ಯಜಮಾನನನ್ನು—

ಅನಟ್—ಇನ್ವತಿ, ನಪ್ನತಿ, ಅಶ್ನಾಣಃ, ಅನಟ್ । (ಸಿ. ೩ ೧೦) ಇತ್ಯಾದಿ ಹತ್ತು **ವ್ಯಾಪ್ತಿಕರ್ಮಗಳ** ನಾಮಗಳಲ್ಲಿ ಪರಿತವಾಗಿರುವುದರಿಂದ ವ್ಯಾಪಿಸಿರುವ ಎಂದರ್ಥ.

ಅಭೀಕೇ—ಅಭೀಕ ಇತ್ಯಾಸನ್ನಸ್ಯ । ಅಭೀಕೇ ಅಭ್ಯಕ್ತೇ । ಸಮೀಪ ಅಥವಾ ಸಮೀಪಿಸಿ ವ್ಯಾಪಿಸು ಈ ಅರ್ಥಗಳಲ್ಲಿ ಅಭೀಕ ಶಬ್ದದ ಪ್ರಯೋಗವಿದೆಯೆಂದು ನಿರುಕ್ತಕಾರರು ತಿಳಿಸಿ (ನಿ ೩–೨೦) ಋಕ್ಸಂಹಿತೆಯ **ಅಭೀಕೇ ಚಿದು ಲೋಕಕೃತ್** (ಋ. ಸಂ ೧೦–೧೩೩–೧) ಎಂಬ ಋಕ್ಕನ್ನು ಉದಹರಿಸುತ್ತಾರೆ. ಮೇಲಿನ ಎರಡು ಅರ್ಥಗಳಲ್ಲಿ ಜಠರದಲ್ಲಿ ವ್ಯಾಪಿಸಿರುವ ಅಗ್ನಿಗೆ ಸಂಬಂಧಿಸಿದರೆ ಆಗ ಎಲ್ಲಾ ಭೂತಗಳ ಜಠರಗಳಲ್ಲೂ ವ್ಯಾಪಿಸಿರುವ ಎಂಬರ್ಥವೂ, ಎರಡನೆಯದಾದರೆ, ದ್ಯುಲೋಕದ ಸಮೀಪದಲ್ಲಿ ಎಂದೂ ಆಗುತ್ತದೆ.

ಶರ್ಧಂ—ಓಜಃ, ಪಾಜಃ, ಶವಃ, ಇತ್ಯಾದಿ ೨೮ ಬಲನಾಮಗಳಲ್ಲಿ ಪಠಿತವಾಗಿರುವುದರಿಂದ **ಬಲವುಳ್ಳ** ಎಂಬ **ವಿಶೇಷಣ**ವಾಗುತ್ತದೆ ಬಲಿಷ್ಠನಾದ, ವೀರ್ಯವಂತನಾದ ಎಂದರ್ಥ

ಸ್ವಾಧ್ಯಂ—ಶೋಭನಕರ್ಮಾಣಂ ಶೋಭನಪ್ರಜ್ಞಂ ವಾ । ಶ್ರೇಷ್ಠವಾದ ಕರ್ಮವುಳ್ಳವನನ್ನು ಅಥವಾ ಪ್ರಜ್ಞೆಯುಳ್ಳವನನ್ನು ಎಂದರ್ಥ. ಯಾವಾಗಲೂ ಕಲ್ಯಾಣಾತ್ಮಕನಾಗಿ ಕರ್ಮನಿರತನಾದ ಮಗನನ್ನು ಎಂದು ಒಂದರ್ಥವೂ ಎರಡನೆಯದಾಗಿ ನಮಗೆ ವೃಷ್ಟಿದ್ವಾರಾ ಸಸ್ಯಸಂಪತ್ತನ್ನೊದಗಿಸುವ ಕಲ್ಯಾಣಾತ್ಮಕವಾದುದೂ ಕರ್ಮ ನಿರತವಾದುದೂ ಆದ ಬುದ್ಧಿಯನ್ನೂ ಎಂದು ಇನ್ನೊಂದರ್ಥವೂ ಆಗುತ್ತದೆ

ಸೂದಯತ್—**ಸೂದ** ಶಬ್ದವು ಅನೇಕ ಅರ್ಥಗಳಲ್ಲಿ ಉಪಯೋಗಿಸಿದೆ ಇಲ್ಲಿ **ಪ್ರೇರಿಸಲಿ,** ಯಾಗಾದಿ ಕರ್ಮಗಳಲ್ಲಿ ಪ್ರೇರಿಸಲಿ ಎಂದಾಗುತ್ತದೆ ಅಥವಾ, **ಸೂದಯತಿರತ್ರ ಸಂಸ್ಕಾರಾರ್ಥಃ । ಸಂಸ್ಕರೋತು ಚ ।** ಇಲ್ಲಿ ಸೂದಯತ್ ಎನ್ನುವುದಕ್ಕೆ ಸಂಸ್ಕೃತವುಳ್ಳದ್ದನ್ನಾಗಿ ಎಂದರೆ ಪರಿಪಾಕವುಳ್ಳದ್ದನ್ನಾಗಿ ಎಂದರ್ಥವಾಗುತ್ತದೆ ಎಂದು ಸ್ಕಂದಸ್ವಾಮಿಗಳು ವಿವರಿಸುತ್ತಾರೆ.

॥ ವ್ಯಾಕರಣಪ್ರಕ್ರಿಯಾ ॥

ಇಷೇ—ಇಷ್ ಎಂಬುದು ಅನ್ನದ ಹೆಸರು. ಚತುರ್ಥೀ ಏಕವಚನಾಂತರೂಪ **ಸಾನೇಕಾಚಸ್ತೃತೀಯಾದಿಃ** (ಪಾ ಸೂ ೬–೧–೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ನೃಪತಿಮ್—ನೃಣಾಂ ಪತಿಃ ನೃಪತಿಃ ತಮ್ **ಪರಾದಿಶ್ಚಂದಸಿ ಬಹುಲಂ** (ಪಾ. ಸೂ ೬–೩–೧೯೯) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ಅನಟ್—ಅಶೂ ವ್ಯಾಪ್ತೌ ಧಾತು ಸ್ನಾದಿ. ಅನುದಾತ್ತೇತ್ ಲಬ್‌ನಲ್ಲಿ **ವ್ಯತ್ಯಯೋ ಬಹುಲಂ** ಎಂಬುದರಿಂದ ಪರಸ್ಮೈಪದ ಪ್ರತ್ಯಯವೂ ಶ್ನುವಿಗೆ ಶ್ನಮ್ ವಿಕರವೂ ಬರುತ್ತದೆ. ಶ್ನಮ್ ಮಿತ್ತಾದುದರಿಂದ **ಮಿದಚೋಂತ್ಯಾತ್ಪರಃ** ಎಂಬ ಪರಿಭಾಷೆಯಿಂದ ಧಾತುವಿನ ಅಂತ್ಯಾಚಿನ ಸರವಾಗಿ ಬರುತ್ತದೆ ಪ್ರಥಮಪುರುಷ

ಏಕವಚನದಲ್ಲಿ ತಿಪ್ ಬಂದಾಗ **ಇತೇಶ್ಚ** ಸೂತ್ರದಿಂದ ಇಕಾರ ಲೋಪವಾದಾಗ ಹಲಂತದ ನಂತರದಲ್ಲಿ ಬಂದುದರಿಂದ **ಹಲ್ ಙ್ಯಾಭ್ಭ್ಯೋ**—ಸೂತ್ರದಿಂದ ಅದಕ್ಕೆ ಲೋಪ ಶಕಾರಕ್ಕೆ **ವ್ರಶ್ಚಭ್ರಸ್ಜ**—(ಪಾ ಸೂ ೮-೨ ೩೬) ಎಂಬುದರಿಂದ ಷತ್ವ. **ಝಲಾಂ ಜಶೋಂತೇ** ಸೂತ್ರದಿಂದ ಷಕಾರಕ್ಕೆ ಜಸ್ತ್ವದಿಂದ ಡಕಾರಾದೇಶ ಅದಕ್ಕೆ ಚರ್ತ್ವದಿಂದ ಚಕಾರಾದೇಶ **ಆಡಜಾದೀನಾಂ** ಸೂತ್ರದಿಂದ ಅಂಗಕ್ಕೆ ಆಡಾಗಮ ಆನಟ್ ಎಂದು ರೂಪವಾಗುತ್ತದೆ **ಯಿದ್ವೃತ್ಯಾನ್ನಿತ್ಯಂ** ಎಂಬುದರಿಂದ ಹಿಂದೆ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಆಡಾಗಮ ಉದಾತ್ತವಾಗುವುದರಿಂದ ಆದ್ಯುದಾತ್ತವಾದ ಪದವಾಗುತ್ತದೆ

ನಿಷಿಕ್ತಮ್—ಷಿಚಿರ್ ಕ್ಷರಣೇ ಧಾತು ಕರ್ಮಣಿಯಲ್ಲಿ **ನಿಷ್ಠಾ** ಎಂಬುದರಿಂದ ಕ್ತಪ್ರತ್ಯಯ. **ಚೋಃ ಕುಃ** ಎಂಬುದರಿಂದ ಝಲ್ ಪರದಲ್ಲಿರುವುದರಿಂದ ಧಾತು ಚಕಾರಕ್ಕೆ ಕುತ್ವದಿಂದ ಕಕಾರಾದೇಶ ಷಕಾರಕ್ಕೆ **ಉಪಸರ್ಗಾತ್ ಸುನೋತಿ ಸುವತಿ**—(ಪಾ ಸೂ ೮-೩-೬೫) ಎಂಬುದರಿಂದ ಷತ್ವ **ಗತಿರನಂತರಃ** (ಪಾ ಸೂ. ೬-೨ ೪೯) ಎಂಬುದರಿಂದ ಗತಿಗೆ (ನಿ) ಪ್ರಕೃತಿಸ್ವರ ಬರುತ್ತದೆ

ಅಭೀಕೇ—ಅಂಚು ಗತಿಪೂಜನಯೋಃ ಧಾತು ಸಚಾನಿಯಲ್ಲಿ ಸೇರಿರುವುದರಿಂದ ಅಭಿ ಎಂಬ ಉಪಸರ್ಗವು ಪೂರ್ವದಲ್ಲಿರುವಾಗ ಇದಕ್ಕೆ **ನಂದಿಗ್ರಹಿಪಚಾದಿಭ್ಯೋ**—(ಪಾ ಸೂ ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ. ಭ್ವಾದೋದರಾದಿಯಲ್ಲಿ ಸೇರಿರುವುದರಿಂದ **ಭ್ವಾದೋದರಾದೇಃ ಯತ್ಫೋಪದಿಷ್ಟಮ್** ಎಂಬುದರಿಂದ ಅಭಿಮತರೂಪಸಿದ್ಧಿಯಾಗುತ್ತದೆ. ಅಥವಾ ಇಣ್ ಗತೌ ಧಾತು ಇದಕ್ಕೆ **ಟಿಣ್ಣಾದಿಕ**ವಾದ ಕಕ್ ಪ್ರತ್ಯಯ ಕಿತ್ವಾದುದರಿಂದ ಧಾತುವಿಗೆ ಗುಣ ಬರುವುದಿಲ್ಲ ಎರಡು ರೀತಿಯನ್ನು ಅನುಸರಿಸಿದರೂ ದಾಶೀಭ್ವಾದಿಯಲ್ಲಿ ಸರಿತವಾದುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ ಸಪ್ತಮಿ ಏಕವಚನಾಂತರೂಪ

ಸ್ವಾಧ್ಯಮ್—ಸ್ವಾಧೀ+ಅಮ್ ಎಂದಿರುವಾಗ **ಏರನೇಕಾಚೋ೭ಸಂಯೋಗಪೂರ್ವಸ್ಯ** ಎಂಬುದರಿಂದ ಯಣಾದೇಶ ಉದಾತ್ತಸ್ಥಾನದಲ್ಲಿ ಯಣಾದೇಶ ಬಂದುದರಿಂದ ಅದರ ಪರದಲ್ಲಿ ಅನುದಾತ್ತ (ವಿಭಕ್ತಿ) ಬಂದುದರಿಂದ **ಉದಾತ್ತೇ ಸ್ವರಿತಯೋರ್ಯಣಃ ಸ್ವರಿತೋ೭ನುದಾತ್ತಸ್ಯ** (ಪಾ ಸೂ ೮-೨-೪) ಎಂಬುದರಿಂದ ಅನುದಾತ್ತಕ್ಕೆ ಸ್ವರಿತಸ್ವರ ಬರುತ್ತದೆ

ಜನಯತ್ ಜನೀ ಪ್ರಾದುರ್ಭಾವೇ ಧಾತು **ಪ್ರಯೋಜಕವ್ಯಾಪಾರ** ತೋರುವುದರಿಂದ **ಹೇತುಮತಿ ಚ** (ಪಾ ಸೂ ೩-೧-೨೬) ಎಂಬುದರಿಂದ ಣಿಚ್ **ಜನೀರ್ಜ್ಞಪ್**—ಎಂಬ ಸೂತ್ರದಿಂದ ಮಿತ್ ಸಂಜ್ಞೆ ಬರುವುದರಿಂದ ಣಿಚ್ ನಿಮಿತ್ತವಾಗಿ ಬಂದಿರುವ ಉಪಧಾವೃದ್ಧಿಗೆ **ಮಿತಾಂ ಹ್ರಸ್ವಃ** (ಪಾ ಸೂ ೬-೪-೯೨) ಎಂಬುದರಿಂದ ಹ್ರಸ್ವ ಬರುತ್ತದೆ. ಣಿಜಂತದ ಮೇಲೆ ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಇತಶ್ಚ**—ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಲೇಟೋ೭ಡಾಟೌ** ಎಂಬುದರಿಂದ ಅದಕ್ಕೆ ಆಡಾಗಮ ಶಪ್ ವಿಕರಣ **ಅತೋಗುಣೇ** ಎಂಬುದರಿಂದ ಪರರೂಪ ತಿಪ್ ನಿಮಿತ್ತವಾಗಿ ಣಿಚ್ಚಿಗೆ ಗುಣ ಅಯಾದೇಶ ಜನಯತ್ ಎಂದು ರೂಪವಾಗುತ್ತದೆ ಅತಿದಂತದ ನಂತರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಸೂದಯೆತ್—ಸೂದ ಕ್ಷರಣೇ ಧಾತು **ಧಾತ್ವಾದೇಃ ಷಃ ಸಃ** (ಪಾ ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸತ್ವ. ಹಿಂದಿನಂತೆಯೇ ಲೇಟ್ ಪ್ರಥಮಪುರುಷ ಏಕವಚನರೂಪ ಹಿಂದೆ ತಿಙಂತವಿರುವುದರಿಂದ **ಅತಿಙಃ** ಎಂದು ಸರ್ಯುದಾಸಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ ಣಿಚ್ ಸ್ವರ ಉಳಿಯುತ್ತದೆ. ॥ ೮ ॥

॥ ಸಂಹಿತಾಪಾಠಃ ॥

ಮನೋ ನ ಯೋಽಧ್ವನಃ ಸದ್ಯ ಏತ್ಯೇಕಃ ಸತ್ರಾ ಸೂರೋ ವಸ್ವ ಈಶೇ ।
ರಾಜಾನಾ ಮಿತ್ರಾವರುಣಾ ಸುಪಾಣೀ ಗೋಷು ಪ್ರಿಯಮಮೃತಂ ರಕ್ಷಮಾಣಾ ॥ ೯ ॥

॥ ಪದಪಾಠಃ ॥

ಮನಃ । ನ । ಯಃ । ಅಧ್ವನಃ । ಸದ್ಯಃ । ಏತಿ । ಏಕಃ । ಸತ್ರಾ । ಸೂರಃ । ವಸ್ವಃ । ಈಶೇ ।
ರಾಜಾನಾ । ಮಿತ್ರಾವರುಣಾ । ಸುಪಾಣೀ ಇತಿ ಸುಽಪಾಣೀ । ಗೋಷು । ಪ್ರಿಯಂ । ಅಮೃತಂ । ರಕ್ಷಮಾಣಾ ॥ ೯ ॥

॥ ಸಾಯಣಭಾಷ್ಯಂ ॥

ಯಃ ಸೂರಃ ಸೂರ್ಯ ಏಕ ಏಕಾಕ್ಯಸಹಾಯಃ ಸನ್ನಧ್ವನೋ ದಿವ್ಯಾನ್ಮಾರ್ಗಾನ್ಸದ್ಯ ಏತಿ ಅಶು ಗಚ್ಛತಿ । ಅಸಹಾಯತ್ವಂ ಚ ಶ್ರೂಯತೇ । ಸೂರ್ಯ ಏಕಾಕೀ ಚರತೀತ್ಯಾಹ । ಅಸೌ ವಾ ಆದಿತ್ಯ

ಏಕಾಕೀ ಚರತೀತಿ । ತೈ. ಬ್ರಾ. ೩-೯-೫-೪ । ಶೀಘ್ರಗಮನಂ ಚ ಸ್ಮರ್ಯತೇ । ಯೋಜನಾನಾಂ ಸಹಸ್ರೇ ದ್ವೇ ದ್ವೇ ಶತೇ ದ್ವೇ ಚ ಯೋಜನೇ । ಏಕೇನ ನಿಮಿಷಾರ್ಧೇನ ಕ್ರಮಮಾಣ ನಮೋಽಸ್ತು ತ ಇತಿ । ಶೀಘ್ರಗಮನೇ ದೃಷ್ಟಾಂತಃ । ಮನೋ ನ । ಯಥಾ ಮನಃ ಶೀಘ್ರಂ ಗಚ್ಛತಿ ತದ್ವತ್ । ಸ ಚ ಕೂರೋ ವಸ್ವೋ ಧನಸ್ಯ ಸತ್ಪಾ ಸಹೈವ ಯುಗಪದೇವೇಶೇ । ಈಷ್ಟೇ । ಯೋ ಹಿ ಶೀಘ್ರಂ ಗಚ್ಛತಿ ಸ ಬಹುದೇಶೇಷ್ವವಸ್ಥಿತಾನಿ ಧನಾನಿ ಪ್ರಾಪ್ನೋತಿ । ತಥಾ ರಾಜಾನಾ ರಾಜಮಾನೌ ಸುಪಾಣೀ ಶೋಭನಬಾಹೂ ಮಿತ್ರಾವರುಣಾ ಮಿತ್ರಾವರುಣಾವಸ್ಮದೀಯಾಸು ಗೋಷು ಪ್ರಿಯಂ ಸರ್ವೇಷಾಂ ಪ್ರೀತಿಕರಮಮೃತಮಮೃತವತ್ಸ್ವಾದುಭೂತಂ ಪಯೋ ರಕ್ಷಮಾಣಾ ರಕ್ಷಂತೌ ವರ್ತೇತೇ । ಹೇ ಅಗ್ನೇ ತತ್ರದ್ರೂಪೇಣ ತ್ವಮೇವೈವಂ ವರ್ತಸ ಇತಿ ಭಾವಃ ॥ ವಸ್ವಃ । ಲಿಂಗವ್ಯತ್ಯಯಃ । ಜಸಾದಿಷು ಚ್ಛಂದಸಿ ವಾವಚನಮಿತಿ ಘೇರ್ಙಿತೀತಿ ಗುಣಾಭಾವೇ ಯಣಾದೇಶಃ । ಈಶೇ । ಈಶ ಐಶ್ವರ್ಯೇ । ಲೋಪಸ್ತ ಆತ್ಮನೇಪದೇಷ್ವಿತಿ ತಲೋಪಃ । ಮಿತ್ರಾವರುಣಾ । ದೇವತಾದ್ವಂದ್ವೇ ಚೇತಿ ಪೂರ್ವಪದಸ್ಯಾನಜಾದೇಶಃ । ದೇವತಾದ್ವಂದ್ವೇ ಚೇತ್ಯುಭಯಪದಪ್ರಕೃತಿಸ್ವರತ್ವಂ॥

॥ ಶ್ರುತಿಪದಾರ್ಥ ॥

ಯಃ ಸೂರಃ—ಯಾವ ಸೂರ್ಯನು । **ಏಕಃ**—ಒಬ್ಬನೇ (ಅಸಹಾಯನಾಗಿ) । **ಅಧ್ವನಃ**—(ಅಂತರಿಕ್ಷ ಮಾರ್ಗಗಳನ್ನು । **ಮನೋ ನ**—ಮನಸ್ಸಿನಂತೆ । **ಸದ್ಯಃ ಏತಿ**—ವೇಗವಾಗಿ ಪಾಟುತ್ತಾನೋ । (**ಸಃ**—ಆ ಸೂರ್ಯನು) । **ವಸ್ವಃ ಸತ್ಪಾ**—ಧನಕ್ಕೆ ಒಡೆಯನೇ । **ಈಶೇ**—ಸ್ವಾಮಿಯಾಗುತ್ತಾನೆ । (**ತಥಾ**—ಹಾಗೆಯೇ) । **ರಾಜಾನಾ**—ಪ್ರಕಾಶಮಾನರಾದ । **ಸುಪಾಣೀ**—ಶೋಭನಕರವಾದ ಬಾಹುಗಳುಳ್ಳ । **ಮಿತ್ರಾವರುಣಾ**—ಮಿತ್ರಾವರುಣರು । **ಗೋಷು**—(ನನ್ನ) ಗೋವುಗಳಲ್ಲಿ । **ಪ್ರಿಯಂ**—(ಎಲ್ಲರಿಗೂ) ಸುಖಕರನಾದ । **ಅಮೃತಂ**—ಅಮೃತದಂತೆ ರುಚಿಯಾದ (ಕ್ಷೀರವನ್ನು) । **ರಕ್ಷಮಾಣಾ**—ರಕ್ಷಿಸುವವರಾಗಿ (ಇದ್ದಾರೆ)

॥ ಭಾವಾರ್ಥ ॥

ಹೇಗೆ ಸೂರ್ಯನು ಒಬ್ಬನೇ ಅಂತರಿಕ್ಷ ಮಾರ್ಗಗಳನ್ನೆಲ್ಲಾ ಮನಸ್ಸಿನಂತೆ ವೇಗವಾಗಿ ಕ್ರಮಿಸಿ, ಧನವಂತನಾಗುತ್ತಾನೆಯೋ ಹಾಗೆ ಪ್ರಕಾಶಮಾನರಾದ, ಶುಭಕರವಾದ ಬಾಹುಗಳುಳ್ಳ ಮಿತ್ರಾವರುಣರು, ನನ್ನ ಗೋವುಗಳು ಸುಖಕರವಾದ ಅಮೃತದಂತೆ ರುಚಿಕರವಾದ ಕ್ಷೀರವನ್ನು (ಕರೆಯುವಂತೆ) ಅನುಗ್ರಹಿಸಲಿ

English Translation

The sun, who traverses alone the path of heaven with the speed of thought, is at once lord of all treasures: the two kings, Mitra and Varuna, with bounteous hands, are the guardians of the precious ambrosia of our cattle

॥ ವಿಶೇಷವಿಷಯಗಳು ॥

ಸೂರ್ಯನ ಲೋಕಸಂಚಾರಕಾರ್ಯವೂ, ಮಿತ್ರಾವರುಣರ ಲೋಕರಕ್ಷಣಾಕಾರ್ಯವೂ ಅಗ್ನಿಯ ಪ್ರಭಾವದಿಂದಲೇ ಎನ್ನುವುದನ್ನು ಈ ಋಕ್ಕಿನಲ್ಲಿ ಹೇಳಿದೆ

ಅಗ್ನೇ ನಕ್ಷತ್ರಮಜರಮಾ ಸೂರ್ಯಂ ರೋಹಯೋ ದಿವಿ ।

(ಋ. ಸಂ ೧೦-೧೫೬-೪)

ವಿ ಯೋ ರಜಾಂಸ್ಯಮಿಮೀತ ಸುಕ್ರತುರ್ವೈಶ್ವಾನರೋ ವಿ ದಿವೋ ರೋಚನಾ ಕವಿಃ ।

ಪರಿ ಯೋ ವಿಶ್ವಾ ಭುವನಾನಿ ಪಪ್ರಥೇ೨ದಬ್ಧೋ ಗೋಪಾ ಅಮೃತಸ್ಯ ರಕ್ಷಿತಾ ॥

(ಋ. ಸಂ ೬-೭-೭)

ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯೇ ಸೂರ್ಯಾದಿ ಗ್ರಹಗಳ ಲೋಕಸಂಚಾರಕ್ಕೂ ಲೋಕವನ್ನು ಬೆಳಗುವಂತೆ ಮಾಡುವುದಕ್ಕೂ ಕಾರಣನು ಎಂದು ಹೇಳಿದೆ ಅದರಂತೆಯೇ,

ತ್ವಯಾ ಹ್ಯಗ್ನೇ ವರುಣೋ ಧೃತವ್ರತೋ ಮಿತ್ರಃ ಶಾಶದ್ರೇ ಅರ್ಯಮಾ ಸುದಾನವಃ ।

(ಋ. ಸಂ. ೧-೯೦-೭)

ಇತ್ಯಾದಿ ಋಕ್ಕುಗಳಲ್ಲಿ ಮಿತ್ರಾವರುಣರ ಲೋಕಧಾರಣ ಮತ್ತು ರಕ್ಷಣಾಕಾರ್ಯವೂ ಅಗ್ನಿಯ ಮಹಿಮೆಯಿಂದಲೇ ನಡೆಯುತ್ತದೆಂದು ಹೇಳಿದೆ. ಅದೇ ಪ್ರಶಂಸೆಯೂ ಇಲ್ಲಿಯೂ ಸಹ ಅಗ್ನಿಯ ಪ್ರಭಾವವನ್ನು ತೋರಿಸುತ್ತದ

ಮನೋ ನ ಸದ್ಯ ಏತಿ—ಮನಸ್ಸಿನಂತೆ ಎಂದರೆ ಮನೋವೇಗದಂತೆ ವೇಗವುಳ್ಳ ಸಂಚಾರದಿಂದ ಅಂತರಿಕ್ಷಮಾರ್ಗಗಳಲ್ಲೆಲ್ಲಾ ಶೀಘ್ರವಾಗಿ ಸಂಚರಿಸುತ್ತಾನೆ ಆದ್ದರಿಂದಲೇ ಸೂರ್ಯನಿಗೆ **ತರಣಿಃ** (ಋ. ಸಂ ೧-೫೦) ಎಂಬ ವಿಶೇಷಣವಿದೆ ಸೂರ್ಯನ ಸಂಚಾರದ ವೇಗವನ್ನು ವಿವರಿಸುತ್ತಾ ಸಾಯಣರು ಒಂದು ಶ್ರುತಿವಾಕ್ಯವನ್ನು ಉದಹರಿಸುತ್ತಾರೆ ಆದರೆ ಆ ಶ್ರುತಿವಾಕ್ಯದ ಆಧಾರವಾವುದೆಂಬುದನ್ನು ಮಾತ್ರ ಕೊಟ್ಟಿಲ್ಲ ಆ ವರ್ಣನೆಯಲ್ಲಿ **ಯೋಜನಾನಾಂ ಸಹಸ್ರೇ ದ್ವೇ ದ್ವೇ ಶತೇ ದ್ವೇ ಚ ಯೋಜನೇ । ಏಕೇನ ನಿಮಿಷಾರ್ಧೇನ ಕ್ರಮಮಾಣ ನಮೋ೨ಸ್ತುತೆ ।** ಎಂದು ಸೂರ್ಯನನ್ನು ಹೊಗಳಿದೆ

ಸುಪಾಣೀ—**ಶೋಭನಬಾಹೂ ।** ಶ್ರೇಷ್ಠವಾದ ಅಥವಾ ರಮ್ಯವಾದ ಬಾಹುಗಳುಳ್ಳವರೆಂದರ್ಥ. ಅಶ್ವಿನೀ ದೇವತೆಗಳಿಗೂ (೧-೧೧೯-೪) ಮಿತ್ರಾವರುಣರಿಗೂ ವಿಶೇಷಣವುಂಟು

ರಾಜಾನಾ ಮಿತ್ರಾವರುಣಾ— ಋಕ್ಸಂಹಿತೆಯಲ್ಲಿ ಮಿತ್ರಾವರುಣರ ಪ್ರಶಂಸೆಯು ನಾನಾವಿಧವಾಗಿದೆ. ಮಿತ್ರಾವರುಣರು ಸಕಲಲೋಕಕ್ಕೂ ಸಮ್ರಾಟರೆಂದೂ, ಸೂರ್ಯನೇ ಅವರ ಕಣ್ಣೆಂದೂ ಅವರು ಭೌತಿಕ ಪ್ರಪಂಚದ ವ್ಯವಹಾರವನ್ನು ಮಾತ್ರವಲ್ಲದೇ ನೈತಿಕವಾದ ವ್ಯವಹಾರಗಳನ್ನೂ ದಿವ್ಯದೃಷ್ಟಿಯಿಂದ ವಿಮರ್ಶಿಸುವರೆಂದೂ ಅವರ ಮಹಿಮೆಯನ್ನು ಹೊಗಳಿದೆ ಮತ್ತು

ಅ ರಾಜಾನಾ ಮಹ ಋತಸ್ಯ ಗೋಪಾ ಸಿಂಧುಪತೀ ಕ್ಷತ್ರಿಯಾ ಯಾತಮರ್ವಾಕ್ ।

(ಋ ಸಂ ೭-೬೪-೭)

ಇತ್ಯಾದಿ ಅನೇಕ ಸನ್ನಿವೇಶಗಳಲ್ಲಿ ಅವರ ಪ್ರಭುತ್ವವೂ, ರಕ್ಷಕತ್ವವು ಹೇಳಲ್ಪಟ್ಟು ಅಗ್ನಿಗೂ ಅವರಿಗೂ ಯಜ್ಞ ಕರ್ಮದಲ್ಲಿರುವ ಶಾಶ್ವತವಾದ ಸಾಹಚರ್ಯವೂ ಸಹ ಕೆಳಗೆ ಕಂಡಂತೆ ಪ್ರಶಂಸಿಸಲ್ಪಟ್ಟಿದೆ

ಅಗ್ನೇ ತ್ವಂ ಯಶಾ ಅಸ್ಯಾ ಮಿತ್ರಾವರುಣಾ ವಹ ।

ಋತಾನಾನಾ ಸಮ್ರಾಜಾ ಪೂತದಕ್ಷಸಾ ॥

(ಋ ಸಂ ೮-೮೫-೩೦)

ಎಂಬುದಾಗಿ ಹೇಳಿರುವುದರಿಂದ ಅಗ್ನಿಗೂ, ಮಿತ್ರಾವರುಣರಿಗೂ ಸಾಹಚರ್ಯವಿದ್ದು ಅವರ ಕರ್ತವ್ಯವೂ ಅಗ್ನಿಯ ಪ್ರಭಾವದಿಂದಲೇ ನೆರವೇರತಕ್ಕದ್ದೆಂದು ಸೂಚಿಸಿ ಈ ಋಕ್ಕಿನಲ್ಲಿ ಸೂರ್ಯನ ಮತ್ತು ಮಿತ್ರಾವರುಣರ ಪ್ರಶಂಸೆಯಿದೆ

॥ ವ್ಯಾಕರಣಪ್ರಕ್ರಿಯಾ ॥

ಏತಿ- ಇಣ್ ಗತೌ ಧಾತು ಅದಾದಿ ಲಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ **ಲುಕ್ ಸಾರ್ವಧಾತುಕಾರ್ಧಧಾತೋಕಯೋಃ** ಎಂಬುದರಿಂದ ಧಾತುವಿನ ಇಕ್ಕಿಗೆ ಗುಣ. ಯಃ ಎಂದು ಹಿಂಪೆ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** (ಪಾ ಸೂ ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ

ವಸ್ವಃ—ವಸು ಶಬ್ದ ಧನದ ಹೆಸರನ್ನು ಹೇಳುತ್ತದೆ ಇದು ನಿತ್ಯ ನಪುಂಸಕಶಬ್ದ ಇಲ್ಲಿ ವ್ಯತ್ಯಯದಿಂದ ಪುಲ್ಲಿಂಗದಲ್ಲಿ ಪ್ರಯುಕ್ತವಾಗಿದೆ. ಇದಕ್ಕೆ ಷಷ್ಠೀವಿಭಕ್ತಿ ಏಕವಚನ ಪರವಾದಾಗ **ಜಸಾದಿಷು ಛಂದಸಿ ವಾವಚನಮ್** ಎಂಬ ವಚನದಿಂದ **ಘೇರ್ಙಿತಿ** ಎಂಬುದರಿಂದ ಬರಬೇಕಾದ ಗುಣವು ಬರುವುದಿಲ್ಲ **ಇಕೋ ಯಣಚಿ** ಎಂಬುದರಿಂದ ಯಣಾದೇಶ ಸಕಾರಕ್ಕೆ ರುತ್ವವಿಸರ್ಗ

ಈಶೇ—ಈಶ ಐಶ್ವರ್ಯೇ ಧಾತು. ಅದಾದಿ ಲಟ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ ಬಂದಾಗ **ಟಿತ ಆತ್ಮನೇಪದದಾನಾಂ**—ಎಂಬುದರಿಂದ ಅದಕ್ಕೆ ಏತ್ವ **ಲೋಪಸ್ತ ಆತ್ಮನೇ ಪದೇಷು** (ಪಾ ಸೂ. ೭-೧-೪೧) ಎಂಬುದರಿಂದ ತಕಾರಕ್ಕೆ ಲೋಪ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್ ಈಶೇ ಎಂದು ರೂಪವಾಗುತ್ತದೆ. ಅತಿಜಂತದ ಪರವಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ರಾಜಾನಾ—ರಾಜೃ ದೀಪ್ತೌ ಧಾತು ಲಡರ್ಥದಲ್ಲಿ ಶಾನಚ್ ಪ್ರತ್ಯಯ **ಬಹುಲಂ ಛಂದಸಿ** ಎಂಬುದರಿಂದ ಶಪ್ಪಿಗೆ ಲುಕ್. ರಾಜಾನ ಎಂದು ರೂಪವಾಗುತ್ತದೆ ಇದಕ್ಕೆ ಪ್ರಥಮಾ ದ್ವಿವಚನ ಪರವಾದಾಗ **ಸುಪಾಂ ಸುಲುಕ್**—ಸೂತ್ರದಿಂದ ವಿಭಕ್ತಿಗೆ ಆಕಾರಾದೇಶ

ಮಿತ್ರಾವರುಣಾ—ಮಿತ್ರಶ್ಚ ವರುಣಶ್ಚ ಮಿತ್ರಾವರುಣೌ **ದೇವತಾದ್ವಂದ್ವೇ ಚ** (ಪಾ ಸೂ ೬-೩-೨೬) ಎಂಬುದರಿಂದ ದ್ವಂದ್ವಸಮಾಸಮಾಡಿದಾಗ ಪೂರ್ವಪದಕ್ಕೆ ಆನಙಾದೇಶ ಹಿಂದಿನಂತೆ ದ್ವಿವಚನದಲ್ಲಿ **ಸುಪಾಂ**

ಸುಲುಕ್— ಸೂತ್ರದಿಂದ ಆಕಾರಾದೇಶ **ದೇವತಾದ್ವಂದ್ವೇ ಚ** (ಪಾ ಸೂ ೬-೩-೧೪೧) ಎಂಬುದರಿಂದ ಉಭಯ ಪದ ಪ್ರಕೃತಿಸ್ವರ ಬರುತ್ತದೆ.

ಸುಪಾಣೀ—ಶೋಭನೌ ಪಾಣೀ ಯಯೋಸ್ತೌ ಸುಪಾಣೀ **ನಞ್ ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಬಹುವ್ರೀಹಿಸಮಾಸಮಾಡಿದಾಗ ಉತ್ತರಪದಾಂತೋದಾತ್ತಸ್ವರ ಬರುತ್ತದೆ. ಪ್ರಥಮಾ ದ್ವಿವಚನರೂಪ.

ರಕ್ಷಮಾಣಾ—ರಕ್ಷ ಪಾಲನೇ ಧಾತು ಭ್ವಾದಿ **ವ್ಯತ್ಯಯೋ ಬಹುಲಂ** ಎಂಬುದರಿಂದ ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಶಪ್ ವಿಕರಣ. **ಆನೇಮುಕ್** (ಪಾ. ಸೂ. ೮-೩-೮೨) ಎಂಬುದರಿಂದ ಆಜಂತಾಗಕ್ಕೆ ಮುಕಾಗಮ. ದ್ವಿವಚನಕ್ಕೆ **ಸುಪಾಂ ಸುಲುಕ್**—ಎಂಬುದರಿಂದ ಆಕಾರಾದೇಶ. ಆದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ಶಾನಚ್) **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. ॥ ೯ ॥

॥ ಸಂಹಿತಾಪಾಠಃ ॥

ಮಾ ನೋ ಅಗ್ನೇ ಸಖ್ಯಾ ಪಿತ್ರ್ಯಾಣಿ ಪ್ರ ಮರ್ಷಿಷ್ಠಾ ಅಭಿ ವಿದುಷ್ಕವಿಃ ಸನ್ ।
ನಭ್ಯೋ ನ ರೂಪಂ ಜರಿಮಾ ಮಿನಾತಿ ಪುರಾ ತಸ್ಯಾ ಅಭಿಶಸ್ತೇರಧೀಹಿ ॥ ೧೦ ॥

॥ ಪದಪಾಠಃ ॥

ಮಾ । ನಃ । ಅಗ್ನೇ । ಸಖ್ಯಾ । ಪಿತ್ರ್ಯಾಣಿ । ಪ್ರ । ಮರ್ಷಿಷ್ಠಾಃ । ಅಭಿ । ವಿದುಃ । ಕವಿಃ । ಸನ್ ।
ನಭ್ಯಃ । ನ । ರೂಪಂ । ಜರಿಮಾ । ಮಿನಾತಿ । ಪುರಾ । ತಸ್ಯಾಃ । ಅಭಿಶಸ್ತೇಃ । ಅಧಿ । ಇಹಿ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಪಿತ್ರ್ಯಾಣಿ ಪಿತರಂ ವಸಿಷ್ಠಮುಪಕ್ರಮ್ಯಾಗತಾನಿ **ಸಖ್ಯಾ** ಸಖಿತ್ವಾನಿ **ಮಾ ಪ್ರ ಮರ್ಷಿಷ್ಠಾಃ** । **ಮಾ** ವಿನಾಶಯ । **ಅತ್ರ** ಮೃಷ್ಯತೇರುಪಸರ್ಗವಶಾದರ್ಥಾಂತರೇ ವೃತ್ತಿಃ । **ಯತಸ್ತ್ವಂ ಕವಿಃ** ಕ್ರಾಂತದರ್ಶೀ ಸನ್ **ಅಭ್ಯಾಭಮುಷ್ಯೇನ ವಿದುಃ** ಸರ್ವಂ ವಿದ್ವಾ । **ನಭೋ ನ ರೂಪಂ** । **ಯಥಾಂತರಿಕ್ಷಂ ರೂಪವಂತಃ** ಸೂರ್ಯರಶ್ಮಯ ಆಚ್ಛಾದಯಂತಿ ತದ್ವದಾಚ್ಛಾದಯತಿ । **ಜರಿಮಾ** ಜರಾ ಮಿನಾತಿ । **ಮಾಂ** ಸೂಕ್ತದ್ರಷ್ಟಾರಂ ಹಿನಸ್ತಿ । **ಅಭಿಶಸ್ತೇರ್ಹಿಂಸಾಹೇತೋಸ್ತಸ್ಯಾ** ಜರಾಯಾ **ಪುರಾಧೀಹಿ** । **ಮಾಂ** ಬುಧ್ಯಸ್ವ । **ಸಾ ಯಥಾ ನ ಸ್ಪಾರ್ಶ್ನೋತಿ ತಥಾ ಕುರು** । **ಅಮೃತತ್ವಂ ಪ್ರಯಚ್ಛೇತಿ ಯಾವತ್** ॥ **ಸಖ್ಯಾ** । **ಸಖ್ಯುರ್ಭಾವಃ ಸಖ್ಯಂ** । **ಸಖ್ಯುರ್ಯ ಇತಿ ಯಃ** । **ಪಿತ್ರ್ಯಾಣಿ** । **ಪಿತೃಭ್ಯ ಆಗತಾನಿ । ಪಿತುರ್ಯಚ್ಛ** । **ಪಾ. ೪-೩-೭೯** । **ಇತಿ ಯತ್ಪ್ರತ್ಯಯಃ** । **ರೀಜೃತಃ** । **ಪಾ. ೭-೪-೭೬** । **ಇತಿ ರೀಜಾದೇಶಃ** । **ಯಸ್ಯೇತಿ ಚೇತೀಕಾರಲೋಪಃ** । **ಯತೋ೭ನಾವ ಇತ್ಯಾದ್ಯುದಾತ್ತತ್ವಂ** । **ಮರ್ಷಿಷ್ಠಾಃ** । **ಮೃಷತಿಸ್ತಿತಿಕ್ಷಾಯಾಂ** । **ಸ್ಪಾರ್ಥನಾಯಾಂ ಛಾಂದಸೋ ಲುಙ್** । **ನ ಮಾಙ್ಯೋಗ ಇತ್ಯಡಭಾವಃ** । **ವಿದುಃ** । **ವಿದ ಜ್ಞಾನೇ** । **ಬಹುಲಮನ್ಯತ್ರಾಪೀತ್ಯುಸಿಪ್ರತ್ಯಯಃ** । **ಅತ ಏವ ಬಹುಲವಚನಾದ್ಲುಗಾಭಾವಃ** । **ಛಂದಸಿ ವಾಸ್ರಾವ್ಯೇಡಿತಯೋಃ** । **ಪಾ. ೮-೩-೪೯** । **ಇತಿ ವಿಸರ್ಜನೀಯಸ್ಯ ಷತ್ವಂ** । **ನಭಃ** । **ನಹೇರ್ದಿವಿ ಭಕ್ಷ** । **ಉ. ೪-೨೧೦** । **ಇತ್ಯಸುನ್** । **ಜರಿಮಾ** । **ಜ್ವಷ್ ವಯೋಹಾನೌ** । **ಔಣಾದಿಕೋ ಭಾವ ಇಮನಿಚ್ಪ್ರತ್ಯಯಃ** । **ಮಿನಾತಿ** । **ಮಿಾಙ್ ಹಿಂಸಾಯಾಂ** । **ಪ್ವಾದೀನಾಂ ಹ್ರಸ್ವ ಇತಿ ಹ್ರಸ್ವತ್ವಂ** । **ಅಭಿಶಸ್ತೇಃ** । **ಅಭಿಶಸ್ಯತೇ ಹಿಂಸ್ಯತೇ೭ನಯೇತ್ಯಭಿಶಸ್ತಿಃ** । **ಕರಣೇ ಕ್ತಿನ್** । **ತಾದೌ ಚೇತಿ ಗತೇಃ ಪ್ರಕೃತಿಸ್ವರತ್ವಂ** । **ಅಧೀಹಿ** । **ಇಕ್ ಸ್ಮರಣೇ** । **ಲೋಟ್ಯಡಾದಿತ್ವಾಚ್ಛಪೋ ಲುಕ್** । **ಹೇರಪಿತ್ತ್ವೇನ ಙಿತ್ತ್ವಾದ್ಗುಣಾಭಾವಃ** ॥

॥ ಪ್ರತಿಪದಾರ್ಥ ॥

ಅಗ್ನೇ—ಅಗ್ನಿಯೇ । **ಪಿತ್ರ್ಯಾಣಿ**—ಪಿತೃವಾದ (ವಸಿಷ್ಠರಿಂದ ಉಪಕ್ರಮಿಸಿ) ಒಂಪ । **ಸಖ್ಯಾ**—ಸ್ನೇಹಗಳನ್ನು । **ಕವಿಃ ಸ**—ಹಿಂದೆ ನಡದುದನ್ನೆಲ್ಲಾ ತಿಳಿಯಬಲ್ಲವನಾಗಿ । **ಅಭಿ**—ಅಭಿಮುಖನಾಗಿ । **ವಿದುಃ**—ಎಲ್ಲವನ್ನೂ ತಿಳಿದ (ನೀನು) । **ಮಾ ಪ್ರ ಮರ್ಷಿಷ್ಠಾಃ**—ನಾಶಮಾಡಬೇಡ । **ಜರಿಮಾ**—ಜರೆಯು (ಮುಪ್ಪು) । **ರೂಪಮ್**—ಬೆಳಕು । **ನಭೋ ನ**—ಅಂತರಿಕ್ಷವನ್ನು ಹೇಗೋ ಹಾಗೆ । **ಮಿನಾತಿ**—ಹಿಂಸೆಪಡಿಸುತ್ತದೆ । **ಅಭಿಶಸ್ತೇಃ**—ಹಿಂಸಾಹೇತುವಾದ । **ತಸ್ಯಾಃ**—ಮುಪ್ಪಿಗಿಂತ । **ಪುರಾ**—ಮೊದಲೇ । **ಅಧೀಹಿ**—ಎಚ್ಚರಿಸು

॥ ಭಾವಾರ್ಥ ॥

ಎಲೈ ಅಗ್ನಿಯೇ ಭೂತಭವಿಷದ್ಜ್ಞಾನಿಯಾದ ನೀನು, ವಸಿಷ್ಠಾದಿಗಳ ಕಾಲದಿಂದ ಬಂದ ನಮ್ಮ ಪೂರ್ವಿಕರಿಗೆ ಸಂಬಂಧಿಸಿದ ಸ್ನೇಹವನ್ನು ನಾಶಮಾಡಬೇಡ. ಅಂತರಿಕ್ಷವನ್ನೆಲ್ಲಾ ಬೆಳಕು ಆವರಿಸುವಂತೆ, ನನ್ನನ್ನು ಮುಪ್ಪು ಆವರಿಸುತ್ತಿದೆ ಹಿಂಸಾಜನಕವಾದ ಈ ಮುಪ್ಪು (ತೊಂದರೆ ಕೊಡುವುದಕ್ಕೆ) ಮೊದಲೇ ನನ್ನನ್ನು ಎಚ್ಚರಿಸು (ನನಗೆ ಅಮೃತತ್ವವನ್ನು ದಾನಮಾಡು).

English Translation.

Dissolve not, Agni, our ancestral friendship, for you are cognizant of the past as well as of the present; in like manner as light (speeds over) the sky, so decay impairs (my body); think of me before that source of destruction (prevails)

॥ ವಿಶೇಷನಿಷಯಗಳು ॥

ಅಗ್ನಿಯ ಸಖ್ಯವು ವಂಶಪಾರಂಪರ್ಯವಾಗಿ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿರುವುದರಿಂದಲೂ, ಹಿಂದಿನಿಂದಲೂ ಈ ಋಷಿಯ ವಂಶದವರು ಅಗ್ನಿಯ ಸಖ್ಯಕ್ಕೆ ಎಷ್ಟು ಉತ್ತಮವಾದ ಪಾತ್ರರಾಗಿದ್ದರೆಂದು ಹಿಂದಿನ ಚರಿತ್ರೆಯನ್ನೆಲ್ಲಾ ಅಗ್ನಿಯು ದಿವ್ಯದೃಷ್ಟಿಯಿಂದ ತಿಳಿಯಲು ಸಮರ್ಥನಾದುದರಿಂದಲೂ, ಈಗಲೂ ಅದೇ ಅನುಗ್ರಹದಿಂದ ರಕ್ಷಿಸಬೇಕೆಂದೂ ಮತ್ತು ಜರೆಯು ಪ್ರಾಪ್ತವಾಗಿ ನಾನಾ ವಿಧವಾದ ಹಿಂಸೆಗೊಳಗಾಗುವದಕ್ಕೆ ಮೊದಲೆ ಅಮೃತತ್ವವನ್ನು ಕೊಡಬೇಕೆಂದು ಪ್ರಾರ್ಥಿಸಿದ

ಪಿತ್ರ್ಯಾಣಿ—ಪಿತರಂ ವಸಿಷ್ಠಮುಪಕ್ರಮ್ಯಾಗತಾನಿ । ವಸಿಷ್ಠ ಋಷಿಯಿಂದ ಆರಂಭಿಸಿ ನಡೆದುಕೊಂಡು ಬಂದ ಸಖ್ಯವನ್ನು ಎಂದು ಈ ಋಕ್ಕಿನಲ್ಲಿ ಹೇಳುವ ವಸಿಷ್ಠಋಷಿಗೂ ಅಗ್ನಿಗೂ ಇರುವ ಸಂಬಂಧವನ್ನೂ ಮತ್ತು ಹಿಂದಿನ ಋಕ್ಕಿನಲ್ಲಿ ಸೂಚಿಸಿರುವಂತೆ ಅಗ್ನಿಗೂ ಮಿತ್ರಾವರುಣರಿಗೂ ಇರುವ ಸಂಬಂಧವನ್ನೂ ಪರಿತೀಲಿಸಿದರೆ ಅಗ್ನಿಗೂ ವಸಿಷ್ಠನಿಗೂ ಅತ್ಯಂತ ಅಗ್ನಿಗೂ ನಿಕಟವಾದ ಸಂಬಂಧವಿದೆಯೆಂದು ಗೊತ್ತಾಗುತ್ತದೆ ಹೇಗೆಂದರೆ ವಸಿಷ್ಠನು ಮಿತ್ರಾವರುಣರ ಪುತ್ರನೆಂದು—

ಉತಾಸಿ ಮೈತ್ರಾವರುಣೋ ವಸಿಷ್ಠೋರ್ವಶ್ಯಾ ಬ್ರಹ್ಮನ್ಮನಸೋಧಿ ಜಾತಃ ।

(ಋ ಸಂ. ೭-೩೩-೧೧).

ಎಂಬ ಋಕ್ಸಂಹಿತಾವಾಕ್ಯದಿಂದಲೇ ಗೊತ್ತಾಗುತ್ತದೆ. ಇಂತಹ ವಸಿಷ್ಠನು ಅಗ್ನಿಭಕ್ತನಾಗಿ ಅಗ್ನಿಸ್ತವವನ್ನು ಮಾಡಿರುವುದೂ ಋಕ್ಸಂಹಿತೆಯಿಂದಲೇ ಪ್ರಸಿದ್ಧವಾಗಿದೆ. ಬೃಹದ್ದೇವತೆಯಲ್ಲಿ ವಿವರಿಸುವಂತೆ—

ಋಷಿಸ್ತು ಮೈತ್ರಾವರುಣಿಃ ಸೂಕ್ತೈಃ ಷೋಳಶಭಿಃ ಪರೈಃ ।
ತುಷ್ಟಾವಾಗ್ನಿಮಿತಿ ತ್ವಗ್ನಿಂ ಆಪ್ರಸ್ತುಸ್ಯ ಜುಷಸ್ವ ನಃ ॥

(ಬೃ ದೇ. ೫-೧೬೦).

ಮಿತ್ರಾವರುಣ ಪುತ್ರನಾದ ವಸಿಷ್ಠನು ಅಗ್ನಿಸ್ತವವನ್ನು ಮಾಡುತ್ತಾ ಋಕ್ಸಂಹಿತೆಯ ೭-೧೧-೧ ರಿಂದ ಹದಿನಾರು ಸೂಕ್ತಗಳನ್ನು ರಚಿಸಿದನೆಂದು ಗೊತ್ತಾಗುತ್ತದೆ. ಈ ವಸಿಷ್ಠ ಋಷಿಯ ಮಹಿಮೆಯು ಅತ್ಯಧಿಕವಾಗಿದ್ದುದರಿಂದಲೇ ಅವನನ್ನೂ ಅವನ ವಂಶದಲ್ಲಿ ಉತ್ಪನ್ನರಾದವರನ್ನೂ ಯಜ್ಞಯಾಗಾದಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಸ್ಥಾನದಲ್ಲಿ ಇರಿಸಿ ಗೌರವಿಸಬೇಕೆಂದು ಭಾಲ್ಲವೀಶ್ರುತಿಯ ಉಕ್ತಿಯನ್ನೂ ಬೃಹದ್ದೇವತಾಕಾರರು ಉದಹರಿಸುತ್ತಾರೆ.

ತಸ್ಮಾದ್ಯೇ೨ದ್ಯಾಪಿ ವಾಸಿಷ್ಠಾಃ ಸದಸ್ಯಾಃ ಸ್ಯುಸ್ತು ಕರ್ಹಿಚಿತ್ ।
ಅರ್ಚಯೇದ್ವಕ್ಷಿಣಾಭಿಸ್ತಾನ್ ಭಾಲ್ಲವೇಯಾ ಶ್ರುತಿಸ್ತ್ವಯಂ ॥

(ಬೃ ದೇ ೧-೧೪೯)

ಆದುದರಿಂದ ಅಗ್ನಿಯ ಸಖ್ಯವು ಅತ್ಯಂತ ಪ್ರಸಿದ್ಧವಾದುದೆಂದೂ ಅದರಿಂದಲೇ ಈ ವಂಶದ ಮಹಿಮೆಯೂ ಅಧಿಕವಾಯಿತೆಂದೂ, ಈಗಲೂ ಸಹ ಅದಕ್ಕೆ ವಿಚ್ಛೇದವನ್ನು ತರದೇ ಹಿಂದಿನ ಅಭಿಮಾನವನ್ನೇ ಅನುಸ್ಯೂತವಾಗಿ ಮುಂದುವರಿಸಿ ತಮ್ಮೆಲ್ಲರ ಶ್ರೇಯಸ್ಸಿಗೆ ದಾರಿಯನ್ನು ತೋರಿಸಬೇಕೆಂದೂ ಈ ಋಕ್ಕಿನಲ್ಲಿ ಪ್ರಾರ್ಥಿಸಿದೆ.

ಅಭಿಶಸ್ತೇಃ—ಅಭಿಶಸ್ಯತೇ ಹಿಂಸ್ಯತೇ ಅನಯಾ ಇತ್ಯಭಿಶಸ್ತಿಃ । ಇದರಿಂದ ಹಿಂಸೆಯಾಗುವುದರಿಂದ ಇದು ದೂಷ್ಯವಾದುದು, ಎಂದು ಜರೆಯನ್ನು ವರ್ಣಿಸುತ್ತಾ ಅಂತಹ ನಾಶಕರವಾದ ಮುಪ್ಪು ಆವರಿಸುವುದರೊಳಗಾಗಿ ಅಮೃತತ್ವವನ್ನು ಕೊಡಬೇಕೆಂದು ಪ್ರಾರ್ಥಿಸಿದೆ

ಅಧೀಹಿ—ಮಾಂ ಬುಧ್ಯಸ್ವ । ನನ್ನನ್ನು ಎಚ್ಚರಗೊಳಿಸು ಎಂದರೆ ನನಗೆ ಕರ್ಮವಿಷಯಕವಾದ ಜ್ಞಾನವನ್ನು ಕೊಟ್ಟು ನಾನು ಯಾಗಾದಿಗಳನ್ನು ನೆರವೇರಿಸುವುದರಿಂದ ಅಮೃತತ್ವವನ್ನು ಪಡೆಯುವಂತೆ ಮಾಡು ಎಂದಭಿಪ್ರಾಯ-

'ಪ್ರಾಕರಣಶ್ರುತ್ಯಾ'

ಅಗ್ನೇ- ಆಮಂತ್ರಿತಸ್ಯ ಚ (ಪಾ ಸೂ ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ

ಸಖ್ಯಾ—ಸಖ್ಯುರ್ಭಾವಃ ಸಖ್ಯಮ್ **ಸಖ್ಯುರ್ಯಃ** (ಪಾ ಸೂ ೫-೧-೧೨೬) ಎಂಬುದರಿಂದ ಯ ಪ್ರತ್ಯಯ **ಯಸ್ಯೇತಿ ಚ** ಸೂತ್ರದಿಂದ ಸಖಿ ಶಬ್ದದ ಇಕಾರಕ್ಕೆ ಲೋಪ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ ನಪುಂಸಕದಲ್ಲಿ ಶಸ್ಸಿಗೆ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ

ಪಿತ್ರ್ಯಾಣಿ—ಪಿತೃಭ್ಯ ಆಗತಾನಿ ಪಿತ್ರ್ಯಾಣಿ **ತತ ಆಗತಃ** ಎಂಬರ್ಥದಲ್ಲಿ **ಪಿತುರ್ಯಚ್ಛ** (ಪಾ ಸೂ ೪-೩-೯೭) ಎಂಬುದರಿಂದ ಯತ್ ಪ್ರತ್ಯಯ. ಪಿತೃ+ಯ ಎಂದಿರುವಾಗ **ರೀಜ್ಯತಃ** (ಪಾ ಸೂ ೭-೪-೩೮) ಎಂಬುದರಿಂದ ಋಕಾರಕ್ಕೆ ರೀಜಾದೇಶ ಪಿತ್ರೀ+ಯ ಎಂದಿರುವಾಗ **ಯಸ್ಯೇತಿ ಚ** ಸೂತ್ರದಿಂದ ಈಕಾರಕ್ಕೆ ಲೋಪ. ಪಿತ್ರ್ಯ ಶಬ್ದವಾಗುತ್ತದೆ ದ್ವಿತೀಯಾ ಬಹುವಚನಾಂತರೂಪ **ಯತೋ೨ನಾವಃ** (ಪಾ ಸೂ ೬ ೧-೨೧೩) ಎಂಬುದರಿಂದ ಸ್ವರವು ಬಾಧಿತವಾಗಿ ಆದ್ಯುದಾತ್ತಸ್ವರ ಬರುತ್ತದೆ

ಮರ್ಷಿಷ್ಠಾಃ –ಮೃಷ ತಿತಿಕ್ಷಾಯಾಂ ಧಾತು ಪ್ರಾರ್ಥನಾರೂಪ ಅರ್ಥವು ಸೇರುವಾಗ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲುಙ್ ಮಧ್ಯಮಪುರುಷ ಏಕವಚನದಲ್ಲಿ ಧಾತು ಪ್ರತ್ಯಯ **ಚ್ಲೇಃ ಸಿಚ್** ಸೂತ್ರದಿಂದ ಚ್ಲಿಗೆ ಸಿಚಾದೇಶ. **ಅರ್ಧಧಾತುಕಸ್ಯೇಡ್ವಲಾದೇಃ** ಸೂತ್ರದಿಂದ ಅದಕ್ಕೆ ಇಡಾಗಮ **ಆದೇಶ ಪ್ರತ್ಯಯಯೋಃ** ಸೂತ್ರದಿಂದ ಸಕಾರಕ್ಕೆ ಷತ್ವ **ಷ್ಟುನಾ ಷ್ಟುಃ** ಸೂತ್ರದಿಂದ ಪ್ರತ್ಯಯ ಧಕಾರಕ್ಕೆ ಷ್ಟುತ್ವ ಸಕಾರಕ್ಕೆ ರುತ್ವವಿಸರ್ಗ. ಮಾಙ್ ಸಂಬಂಧವಿರುವುದರಿಂದ **ನ ಮಾಙ್‌ಯೋಗೇ** (ಪಾ ಸೂ ೬-೪-೭೪) ಎಂಬುದರಿಂದ ಆಡಾಗಮ ಬರುವುದಿಲ್ಲ ಅತಿಙಂತದ ಸರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ವಿದುಃ ವಿದ ಜ್ಞಾನೇ ಧಾತು. ಇದಕ್ಕೆ **ಬಹುಲಮನ್ಯತ್ರಾಪಿ** ಎಂಬ ಉಣಾದಿ ಸೂತ್ರದಿಂದ ಉಸಿ ಪ್ರತ್ಯಯ ಬಹುಲಗ್ರಹಣದಿಂದಲೇ ಪ್ರತ್ಯಯನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ **ವಿದುಸ್ ಕವಿಃ** ಎಂದಿರುವಾಗ **ಸಸೇಜುಷೋರುಃ** ಸೂತ್ರದಿಂದ ಸಕಾರಕ್ಕೆ ರುತ್ವ **ಖರವಸಾನಯೋರ್ವಿಸರ್ಜನೀಯಃ** ಎಂಬುದರಿಂದ ಅದಕ್ಕೆ ವಿಸರ್ಗ. **ಛಂದಸಿ ವಾ ಪ್ರಾಮ್ರೇಡಿತಯೋಃ** (ಪಾ. ಸೂ ೮-೩-೩೯) ಎಂಬುದರಿಂದ ವಿಸರ್ಗಕ್ಕೆ ಷತ್ವ ಬರುತ್ತದೆ

ನಭಃ--ಣಹ ಬಂಧನೇ ಧಾತು. **ನೋ ನಃ** ಸೂತ್ರದಿಂದ ಣಕಾರಕ್ಕೆ ನತ್ವ. ಇದಕ್ಕೆ **ನಹೇರ್ದಿವಿ ಭಶ್ಚ** (ಉ ಸೂ ೪-೬೫೦) ಎಂಬುದರಿಂದ ಆಕಾಶರೂಪ ಅರ್ಥ ತೋರುವಾಗ ಅಸುನ್ ಪ್ರತ್ಯಯ **ತತ್ಸಂನಿಯೋಗದಿಂದ ಹಕಾರಕ್ಕೆ ಭಕಾರಾದೇಶ** ನಭಸ್ ಶಬ್ದವಾಗುತ್ತದೆ ನಿತ್ಯಾದುದರಿಂದ **ಘ್ನಿತ್ಯಾದಿರ್ನಿತ್ಯಂ** ಸೂತ್ರದಿಂದ ಆದ್ಯುದಾತ್ತಸ್ವರ ಬರುತ್ತದೆ ದ್ವಿತೀಯಾ ಏಕವಚನಾಂತರೂಪ

ಜರಿಮಾ—ಜೃಷ್ ವಯೋಹಾನೌ ಧಾತು ಇದಕ್ಕೆ ಟೆಣಾದಿಕವಾದ ಇಮನಿಚ್ ಪ್ರತ್ಯಯವು ಭಾವಾರ್ಥವಲ್ಲಿ ಬರುತ್ತದೆ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ಗುಣ ಋಕಾರದ ಸ್ಥಾನದಲ್ಲಿ ಬರುವುದರಿಂದ ರಪರವಾಗಿ ಬರುತ್ತದೆ. ಪ್ರತ್ಯಯ ಚಿತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ ಜರಿವನ್ ಶಬ್ದವಾಗುತ್ತದೆ ಪ್ರಥಮಾ ಏಕವಚನಾಂತರೂಪ

ಮಿನಾತಿ—ಮಿಞ್ ಹಿಂಸಾಯಾಮ್ ಧಾತು. ಕ್ರ್ಯಾದಿ **ಷ್ನಾದೀನಾಂ ಹ್ರಸ್ವಃ** (ಪಾ. ಸೂ ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ ಲಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಅಭಿಶಸ್ತೇಃ--**ಅಭಿಶಸ್ಯತೇ ಹಿಂಸ್ಯತೇ ಅನಯಾ ಇತಿ ಅಭಿಶಸ್ತಿಃ** । ಶಸು ಹಿಂಸಾಯಾಂ ಧಾತು ಭ್ವಾದಿ ಇದಕ್ಕೆ ಕರಣಾರ್ಥದಲ್ಲಿ ಕ್ತಿನ್ ಪ್ರತ್ಯಯ **ತಾದೌ ಚ ನಿತಿ** (ಪಾ ಸೂ ೬-೩-೫೦) ಎಂಬುದರಿಂದ ನಿತ್ಯಾದ ತಾದಿಯಾದ ಪ್ರತ್ಯಯಾಂತವು ಪರದಲ್ಲಿರುವುದರಿಂದ ಗತಿಗೆ (ಅಭಿ) ಪ್ರಕೃತಿಸ್ವರ ಬರುತ್ತದೆ

ಅಧೀಹಿ—ಇಕ್ ಸ್ಮರಣೇ ಧಾತು ಇದು ಸಾಮಾನ್ಯವಾಗಿ ಅಧಿಪೂರ್ವವಾಗಿರುತ್ತದೆ ಲೋಟ್ ಮಧ್ಯಮ ಪುರುಷದಲ್ಲಿ ಸಿಪ್ಪಿಗೆ ಹಿ ಆದೇಶ **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್. ಓ ಆದೇಶಕ್ಕೆ ಅಪಿತ್ವ ಹೇಳಿರುವುದರಿಂದ ಙಿತ್ವ ಬರುವುದರಿಂದ ಧಾತುವಿಗೆ ಗುಣ ಬರುವುದಿಲ್ಲ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೧೦ ॥

ಎಪ್ಪತ್ತೊಂದನೆಯ ಸೂಕ್ತ ಸಮಾಪ್ತವು.

ಎಪ್ಪತ್ತೈರಡನೆಯ ಸೂಕ್ತವು

ನಿ ಕಾವ್ಯೇತಿ ದಶರ್ಚಮಷ್ಟಮಂ ಸೂಕ್ತಂ ತ್ರೈಷ್ಟುಭಮಾಗ್ನೇಯಂ ಪರಾಶರಸ್ಯಾರ್ಷಂ ಅನುಕ್ರಾಂತಂ ಚ । ನಿ ಕಾವ್ಯೇತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ಥೋ ವಿನಿಯೋಗಃ ॥

ಅನುವಾದವು—**ನಿ ಕಾವ್ಯಾ** ಎಂಬ ಸೂಕ್ತವು ಹನ್ನೆರಡನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ ಪರಾಶರನು ಋಷಿಯು, ಅಗ್ನಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ **ನಿ ಕಾವ್ಯಾ** ಎಂದು ಹೇಳಿರುವುದು ಪ್ರಾತರನುವಾಕಮಂತ್ರಗಳಿಗಾಗಿಯೂ ಆಶ್ವಿನ ಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದು

ಸೂಕ್ತ—೭೨

॥ ಓಂ ॥

॥ ಮಂಡಲ—೧ ॥ ಅನುವಾಕ—೧೨ ॥ ಸೂಕ್ತ—೭೨ ॥

॥ ಅಷ್ಟಕ- ೧ ॥ ಅಧ್ಯಾಯ—೫ ॥ ವರ್ಗ—೧೭, ೧೮ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥

॥ ಋಷಿಃ—ಪಾರಾಶರಃ ಶಾಕ್ತ್ಯಃ ॥

ದೇವತಾ—ಆಗ್ನಿಃ ॥

ಛಂದಃ—ತ್ರಿಷ್ಟುಪ್ ॥

॥ ಸಂಹಿತಾಸ್ವರಃ ॥

ನಿ ಕಾವ್ಯಾ ವೇಧಸಃ ಶಶ್ವತಸ್ಕರ್ಹಸ್ತೇ ದಧಾನೋ ನರ್ಯಾ ಪುರೂಣಿ ।

ಅಗ್ನಿರ್ಭುವದ್ರಯಿಪತೀ ರಯೀಣಾಂ ಸತ್ರಾ ಚಕ್ರಾಣೋ ಅಮೃತಾನಿ ವಿಶ್ವಾ ॥ ೧ ॥

॥ ಪದಪಾಠಃ ॥

ನಿ । ಕಾವ್ಯಾ । ವೇಧಸಃ । ಶಶ್ವತಃ । ಕಃ । ಹಸ್ತೇ । ದಧಾನಃ । ನರ್ಯಾ ।
ಪುರೂಣಿ ।
ಅಗ್ನಿಃ । ಭುವತ್ । ರಯಿಃ । ಪತೀಃ । ರಯೀಣಾಂ । ಸತ್ರಾ । ಚಕ್ರಾಣಃ । ಅಮ್ಯ-
ತಾನಿ । ವಿಶ್ವಾ ॥ ೧ ॥

॥ ಸಾಯಣಭಾಷ್ಯಂ ॥

ಶಶ್ವತಃ ಶಾಶ್ವತಸ್ಯ ನಿತ್ಯಸ್ಯ ವೇಧಸೋ ವಿಧಾತುರ್ಬ್ರಹ್ಮಣಃ ಸಂಬಂಧೀನಿ ಕಾವ್ಯಾ ಕಾವ್ಯಾನಿ ಮಂತ್ರರೂಪಾಣಿ ಸ್ತೋತ್ರಾಣ್ಯಯಮಗ್ನಿರ್ನಿ ಕಃ । ನಿಯಮೇನ ಸ್ವಾತ್ಮಾಭಿಮುಖಂ ಕರೋತಿ । ಕಿಂ ಕುರ್ವನ್ । ನರ್ಯಾ ನೃಭ್ಯೋ ಹಿತಾನಿ ನೃಷು ಸಾಧೂನಿ ವಾ ಪುರೂಣಿ ಬಹೂನಿ ಧನಾನಿ ಹಸ್ತೇ ದಧಾನೋ ಹಸ್ತೇ ಧಾರಯನ್ । ಈದೃಗ್ಭೂತಮಗ್ನಿಮವಲೋಕ್ಯ ಸರ್ವೇ ಜನಾಃ ಸ್ತುವಂತೀತಿ ಭಾವಃ । ಸ್ತೋತೃಭ್ಯೋ ಧನೇಷು ದತ್ತೇಷ್ವಸ್ಯಾಗ್ನೇರ್ಧನಂ ನ ಕ್ಷೀಯತೇ ಇತ್ಯಾಹ । ಅಗ್ನಿರಿತಿ । ಅಯಮಗ್ನೀ ರಯೀಣಾಂ ರಯಿಪತಿರ್ಭುವತ್ । ಧನಾನಾಂ ಮಧ್ಯೇ ಯಾನಿ ಧನಾನ್ಯತ್ಯುಪ್ಯಾನಿ ತೇಷಾಂ ಸ್ವಾಮೀ ಭವತಿ । ಕಿಂ ಕುರ್ವನ್ । ವಿಶ್ವಾ ವಿಶ್ವಾನಿ ಸರ್ವಾಣ್ಯಮೃತಾನಿ । ಹಿರಣ್ಯನಾಮೈತತ್ । ಅಮೃತಂ ಹಿರಣ್ಯಂ । ಅಥ ೫-೨೮-೧೧ । ಇತಿ ಶ್ರುತೇಃ । ಸರ್ವಾಣಿ ಹಿರಣ್ಯಾನಿ ಸ್ತೋತೃಭ್ಯಃ ಸತ್ರಾ ಸಹೈವ ಚಕ್ರಾಣಃ ಕುರ್ವನ್ । ಯುಗಪತ್ಪ್ರಯಚ್ಛನ್ನಿತ್ಯರ್ಥಃ ॥ ಕಃ । ಕರೋತೇಶ್ಛಾಂದಸೋ ಲುಙ್ । ಮಂತ್ರೇ ಘಸೇತಿ ಚ್ಲೇರ್ಲುಕ್ । ಹಲ್ಙ್ಯಾಬ್ಭ್ಯ ಇತಿ ತಕಾರಲೋಪಃ । ನರ್ಯಾ । ನರಶಬ್ದಾದ್ಧಿತಾರ್ಥೇ ಗವಾದಿ-ಲಕ್ಷಣೋ ಯತ್ಪ್ರತ್ಯಯೋ ದ್ರಷ್ಟವ್ಯಃ । ಸಾ. ೫-೧-೨ । ಯದ್ವಾ । ತತ್ರ ಸಾಧುರಿತಿ ಯತ್ । ಚಕ್ರಾಣಃ । ಕರೋತೇರ್ಲಟಃ ಶಾನಚ್ । ಬಹುಲಂ ಛಂದಸೀತಿ ವಿಕರಣಸ್ಯ ಶ್ಲುಃ । ನನ್ವೇವಂ ಸತ್ಯಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ ಸ್ಯಾತ್ಪ್ರೋತಿ । ಏವಂ । ತರ್ಹಿ ಲಿಟಃ ಕಾನಚಸ್ತು । ತಸ್ಯಾರ್ಧಧಾತುಕತ್ವೇನಾಭ್ಯ-ಸ್ತಾದ್ಯುದಾತ್ತತ್ವಾಭಾವೇ ಚೆಷ್ಟ್ಸ್ವರ ಏವ ಶಿಷ್ಯತೇ ॥

ಪ್ರತಿಪದಾರ್ಥ

ನರ್ಯಾ -ಮನುಷ್ಯರಿಗೆ ಹಿತವಾದ । ಪುರೂಣಿ—ಹೆಚ್ಚಾದ (ಧನವನ್ನು) । ಹಸ್ತೇ—ಹಸ್ತದಲ್ಲಿ । ದಧಾನಃ—ಧರಿಸಿದವನಾಗಿ । ಶಶ್ವತಃ—ನಿತ್ಯನಾದ । ವೇಧಸಃ—ಬ್ರಹ್ಮನ ಸಂಬಂಧಿಯಾದ (ಬ್ರಹ್ಮನ ಉದ್ದಿಶ್ಯ ಕವಾದ) । ಕಾವ್ಯಾ—ಕಾವ್ಯಗಳನ್ನು (ಸ್ತೋತ್ರಗಳನ್ನು) । ನಿ ಕಃ—ನಿಯಮದಿಂದ ತನ್ನ ಅಭಿಮುಖನಾಗಿ

ಮಾಡಿಕೊಳ್ಳುತ್ತಾನೆ। **ಅಗ್ನಿಃ**--(ಈ) ಅಗ್ನಿಯು। **ವಿಶ್ವಾ**--ಎಲ್ಲಾ। **ಅಮೃತಾನಿ**--ಸುವರ್ಣವನ್ನು। **ಕ್ರತ್ವಾ**—ಏಕಕಾಲದಲ್ಲಿ। **ದಕ್ಷಾಣಃ**—ಮಾಡುತ್ತಾ (ಕೊಡುತ್ತಾ)। **ರಯೀಣಾಂ**—ಧನದಲ್ಲಿ ಉತ್ತಮವಾದ ಧನಕ್ಕೆ। **ರಯಿಪತಿಃ**—ಧನಾಧಿಪತಿಯಾಗುತ್ತಾನೆ

॥ ಭಾವಾರ್ಥ ॥

ಅಗ್ನಿಯು, ತನ್ನ ಹಸ್ತಗಳಲ್ಲಿ ಸ್ತೋತೃಗಳಿಗೆ ಪ್ರಿಯವಾದ ಧನವನ್ನು ಹಿಡಿದುಕೊಂಡು ನಿತ್ಯನಾದ ಬ್ರಹ್ಮನನ್ನು ಉದ್ದೇಶಿಸಿ ಮಾಡಿದ ಸ್ತೋತೃಗಳನ್ನು ತಾನೇ ಸ್ವೀಕರಿಸುತ್ತಾನೆ ಸ್ತೋತೃಗಳಿಗೆ ಶೀಘ್ರವಾಗಿ ಎಲ್ಲಾ ಸುವರ್ಣವನ್ನೂ ದಾನಮಾಡಿ, (ಧನವು ಕ್ಷಯಿಸದೇ ಇರುವುದರಿಂದ) ಧನಾಧಿಪತಿಯಾಗುತ್ತಾನೆ

English Translation

Agni, holding in his hands many good things for men appropriates the prayers addressed to the eternal creator. Agni is the lord of riches, quickly bestowing (on those who praise him) all golden (gifts)

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಅರ್ಥಮಾಡುವಾಗ ಸಾಯಣರ ವಿವರಣೆಗೂ, ಸ್ಕಂದಸ್ವಾಮಿಗಳ ವಿವರಣೆಗೂ ಬಹಳ ವ್ಯತ್ಯಾಸವಿರುತ್ತದೆ. ಸಾಯಣರ ವಿವರಣೆಯ ಪ್ರಕಾರ **ಶಶ್ವತಃ**--ನಿತ್ಯನಾದ. **ವೇಧಸಃ**—ಸೃಷ್ಟಿಕರ್ತನಾದ ಬ್ರಹ್ಮನ, **ಕಾವ್ಯಾ**—ಮಂತ್ರರೂಪನಾದ ಸ್ತೋತ್ರವನ್ನು **ನಿ ಕಃ**—ಖಂಡಿತವಾಗಿಯೂ, ತನ್ನ ಪರವಾಗಿಯೇ ಮಾಡಿಕೊಳ್ಳುತ್ತಾನೆ ಎಂದರೆ ಅಗ್ನಿಯು ಸೃಷ್ಟಿಕರ್ತನಾದ ಬ್ರಹ್ಮನಿಗೆ ಯಜಮಾನನು ಅರ್ಪಿಸಿದ ಮಂತ್ರರೂಪವಾದ ಸ್ತೋತ್ರಗಳೆಲ್ಲವನ್ನೂ ತನಗೆ ಅಭಿಮುಖವಾಗಿಯೇ ತಿರುಗಿಸಿಕೊಂಡು ತನ್ನ ಪರವಾಗಿ ಮಾಡಿಕೊಳ್ಳುತ್ತಾನೆ ಎಂದು ತಾತ್ಪರ್ಯ

ಸ್ಕಂದಸ್ವಾಮಿಗಳ ವಿವರಣೆಯ ಪ್ರಕಾರ, **ಅಗ್ನಿಃ**--ಅಗ್ನಿಯು, **ಶಶ್ವತಃ**—ಬಹುಸಂಖ್ಯಾಕವುಳ್ಳ, **ವೇಧಸಃ**—ಮೇಧಾವಿಯಾದ ಯಜಮಾನನ, **ಕಾವ್ಯಾ**—ಕವಿಯಾದ ಎಂದರೆ ಮೇಧಾವಿಯಾದ ತನ್ನ (ಅಗ್ನಿಯ) ಹವಿರ್ವಹಣವೇ ಮುಂತಾದ ಕಾರ್ಯಗಳನ್ನು **ನಿ ಕಃ**—ಖಂಡಿತವಾಗಿಯೂ ನೆರವೇರಿಸುತ್ತಾನೆ. ಈ ಪ್ರಕಾರ, ಕವಿಯಾದ ಎಂದರೆ ಮೇಧಾವಿಯಾದ ಅಗ್ನಿಯು ಯಜಮಾನನ ಹವಿಸ್ಸನ್ನು ವಹಿಸುವುದೇ ಮೊದಲಾದ ತನ್ನ ಕರ್ತವ್ಯಗಳನ್ನೂ ಖಂಡಿತವಾಗಿಯೂ ನೆರವೇರಿಸುತ್ತಾನೆ ಎಂದರ್ಥ

ಈ ಎರಡು ವಿಧವಾದ ವಿವರಣೆಗಳಲ್ಲಿ ಸ್ಕಂದಸ್ವಾಮಿಗಳದೇ ಹೆಚ್ಚು ಸಮಂಜಸವಾಗಿರುವಂತೆ ತೋರುತ್ತದೆ ಏತಕ್ಕೆಂದರೆ **ವೇಧಸಃ**—ಎಂಬ ಪದಕ್ಕೆ ಉತ್ಪಾದಕನು ಎಂಬ ಅರ್ಥವು ಅನೇಕ ಕಡೆಗಳಲ್ಲಿದ್ದರೂ ಸಹ ಸಂಕ್ಲಿಂಹಿತೆಯಲ್ಲಿ ಯಜ್ಞಫಲೋತ್ಪಾದಕನು ಎಂದಾಗುತ್ತದೆಯೇ ಹೊರತು, ಸೃಷ್ಟಿಕರ್ತನಾದ ಬ್ರಹ್ಮನ ಪರವಾಗಿ ಈ ವಿಶೇಷಣವು ಉಪಯೋಗಿಸಿರುವಂತೆ ಕಾಣುವುದಿಲ್ಲ **ವೇಧಸ್** -ಶಬ್ದವು **ವಿಪ್ರಃ, ವಿಗ್ರಃ, ಗೃತ್ಸಃ** ಇತ್ಯಾದಿ **ಮೇಧಾವಿ** ನಾಮಗಳಲ್ಲಿ ಪರಿಕಲ್ಪನವಾಗಿರುವುದರಿಂದ (ನಿ ೩-೧೯) **ವೇಧಸಃ**—ಎಂದರೆ ಮೇಧಾವಿಯಾದ ಯಜಮಾನನ ಎಂದೂ

ುತ್ತು **ಶಶ್ವತ್** ಶಬ್ದವು **ಉರು, ಪುರು, ತುವಿ** ಇತ್ಯಾದಿ **ಬಹುನಾಮಗಳಲ್ಲಿ** (ನಿ. ೩–೧೩) ಪರಿತವಾಗಿರುವುದರಿಂದ **ಶಶ್ವತೀಃ** ಎಂದರೆ ಬಹುಸಂಖ್ಯಾಕವಾದ ಯಜಮಾನನ ಅಥವಾ ಯಜಮಾನರ ಎಂದೂ, **ಕಾವ್ಯಾನಿ** ಎನ್ನುವುದಕ್ಕೆ ಗ್ನಿಯು **ಕವಿ** ಎಂದರೆ ಮೇಧಾವಿ ಅಥವಾ ಕ್ರಾಂತಪ್ರಜ್ಞನಾದುದರಿಂದಲೂ, **ಹವಿರ್ವಹಣವು** ಅವನ ಕರ್ತವ್ಯವಾದ್ದ ಂದಲೂ ಇಲ್ಲಿ **ಕಾವ್ಯಾನಿ** ಎನ್ನುವುದಕ್ಕೆ ಕವಿಯ ಕರ್ಮಗಳು, ಹವಿರ್ವಹಣನೇ ಮೊದಲಾದ ಕರ್ತವ್ಯಗಳು ಎಂಬುದಾಗಿ ಅರ್ಥಮಾಡುವುದು ಸಹಜವಾಗಿದೆ. ಮುಖ್ಯವಾಗಿ, ಕವಿಯಾದ ಅಗ್ನಿಯು ಯಜಮಾನನು ತನಗೆ ಒಪ್ಪಿಸಿರುವ ಕಾರ್ಯಗಳನ್ನು ಖಂಡಿತವಾಗಿಯೂ ನೆರವೇರಿಸುತ್ತಾನೆ ಎಂದಾಗುತ್ತದೆ. ಈ ವಿಧವಾದ ವಿವರಣೆಯು ನ್ನಿನೇಶಕ್ಕೆ ಸಹಜವಾಗಿರುವಂತೆ ಕಾಣುತ್ತದೆ.

ಸತ್ಯಾ—ಬಟ್, ಶತ್, ಸತ್ಯಾ ಇತ್ಯಾದಿ ಆರು **ಸತ್ಯ** ನಾಮಗಳಲ್ಲಿ ಪರಿತವಾಗಿರುವುದರಿಂದ (ನಿ. ೩–೧೩) **ತ್ಯಾ** ಎಂದರೆ ಸತ್ಯವಾಗಿಯೂ ಎಂದರ್ಥ ಅಥವಾ ಸದಾಕಾಲದಲ್ಲಿಯೂ ಎಂದಾದರೂ ಆಗಬಹುದು

ಅಮೃತಾನಿ—ನಿತ್ಯಗಳಾದ ಎಂದಾಗಲಿ ಅಥವಾ **ಅಮೃತಂ ಹಿರಣ್ಯಂ** (ಅ ಸಂ ೫–೨೪–೧೧) ಎಂಬ ಶ್ರುತಿವಾಕ್ಯವಿರುವುದರಿಂದ ಹಿರಣ್ಯಗಳನ್ನು ಎಂದಾಗಲಿ ಎಂದು ಅರ್ಥವಾಗುತ್ತದೆ ಮೊದಲನೇ ಅರ್ಥದ ಪ್ರಕಾರ **ಅಮೃತಾನಿ–ನಿತ್ಯಾನಿ ಹವಿರ್ನಯನಾದೀನಿ ವಿಶ್ವಾ—ಸರ್ವಾಣಿ** । ಹವಿರ್ನಯನನೇ ಮೊದಲಾದ ತನ್ನ ಸಕಲ ಕಾರ್ಯಗಳನ್ನೂ ನೆರವೇರಿಸುತ್ತಾನೆಂದರ್ಥ

ರಯೀಣಾಂ—ಹವಿರ್ಲಕ್ಷಣಾನಾಂ ಸರ್ವೇಷಾಂ ಯಜಮಾನಧನಾನಾಂ—ಹವಿಸ್ಸಿನ ರೂಪದ ಯಜ ಮಾನನ ಸಕಲ ಧನಕ್ಕೂ **ರಯಿಪತಿಃ**—ಅಧಿಪತಿಯಾಗಿ, ಅಥವಾ ಸಕಲ ವಿಧವಾದ ಧನಕ್ಕೂ ಅಧಿಪತಿಯಾಗಿ ಎಂದರ್ಥ

ನರ್ಯಾ—ನರ್ಯಃ, ನೃಭ್ಯೋ ಹಿತಃ, ನರಾಪತ್ಯಮಿತಿ ವಾ । (ನಿ ೧೧–೩೬) । ನರರಿಗೆ ಹಿತವಾದುದು ಅಥವಾ **ಸಂತಾನ** ಎಂದು ನಿರುಕ್ತಕಾರರು ವಿವರಿಸಿದ್ದಾರೆ ಇಲ್ಲಿಯೂ ಸಹ **ನರ್ಯಾ ಪುರೂಣಿ**—ಎನ್ನುವುದಕ್ಕೆ ಅತ್ಯಧಿಕವಾದುದೂ ಯಜ್ಞಕರ್ತರಾದ **ಮಾನವರಿಗೆ** ಹಿತಕಾರಿಯಾದುದೂ **ಆದ** ಧನವನ್ನು **ದಧಾನಃ** ಯಾವಾಗಲೂ ಹಿಡಿದುಕೊಂಡು ಅನುಗ್ರಹ ಮುಖವುಳ್ಳವನಾಗಿಯೇ ಎಂದಾಗಲಿ ಅಥವಾ ಅತ್ಯಧಿಕವಾದುದೂ ಸಂತಾನರೂಪ ವಾದುದೂ ಆದ ಫಲವನ್ನು ಹಿಡಿದುಕೊಂಡು ಎಂದಾಗಲಿ ಅರ್ಥವಾಗುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

ಕಾವ್ಯಾ—ನಪುಂಸಕದಲ್ಲಿ ದ್ವಿತೀಯಾ ಬಹುವಚನದಲ್ಲಿ ಶಸ್ಸಿಗೆ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ

ಕಃ—ಡುಕೃಞ್ ಕರಣೇ ಧಾತು **ವರ್ತಮಾನಾರ್ಥ**ದಲ್ಲಿ **ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಸೂತ್ರದಿಂದ ಇಕಾರಲೋಪ **ಚ್ಲೌ ಲುಙಿ** ಎಂಬುದರಿಂದ ಲುಙ್‌ನಲ್ಲಿ ಚ್ಲಿ ವಿಕರಣ ಅದಕ್ಕೆ **ಮಂತ್ರೇಘಸಹ್ವರಣ**—(ಪಾ. ಸೂ. ೨–೪–೮೦) ಎಂಬುದರಿಂದ

ಚ್ಲಿಗೆ ಲುಕ್ ತಿಪ್ ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ. **ಉರಣ್ರಪರಃ** ಎಂಬುದರಿಂದ ರಪರವಾಗಿ ಬರುತ್ತದೆ ಆಗ ಹಲಿನ ಪರದಲ್ಲಿ ತಿಪ್ ಬಂದುದರಿಂದ **ಹಲ್ಙ್ಯಾಭ್ಯೋ**—ಎಂಬುದರಿಂದ ಆದಕ್ಕೆ ಲೋಪ ರೇಫಕ್ಕೆ **ಖರವಸಾನಯೋರ್ವಿಸರ್ಜನೀಯಃ** ಸೂತ್ರದಿಂದ ವಿಸರ್ಗ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಂಗಕ್ಕೆ ಅಡಾಗಮ ಬರುವುದಿಲ್ಲ ಅತಿಙಂತದ ಪರದಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ

ದಧಾನಃ—ಡುಧಾಞ್ ಧಾರಣಪೋಷಣಯೋಃ ಧಾತು ಲಡರ್ಥದಲ್ಲಿ ಶಾನಚ್ ಪ್ರತ್ಯಯ **ಜುಹೋತ್ಯಾದಿಭ್ಯಃ ಶ್ಲುಃ** ಎಂಬುದರಿಂದ ಶ್ಲು ವಿಕರಣ ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ ಜಸ್ತ್ವ. **ಅಭ್ಯಸ್ತಾನಾಮಾದಿಃ** (ಪಾ ಸೂ ೬-೧ ೧೯೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ನರ್ಯಾ—**ನರಾಯ ಹಿತಂ** ಎಂಬರ್ಥ ವಿವಕ್ಷಾನುಮಾಡಿದಾಗ ಗವಾದಿಗಣದಲ್ಲಿ ಇದು ಸೇರಿರುವುದರಿಂದ **ಉಗವಾದಿಭ್ಯೋಯತ್** (ಪಾ. ಸೂ ೫-೧-೨) ಎಂಬುದರಿಂದ ನರ ಶಬ್ದಕ್ಕೆ ಯತ್ ಪ್ರತ್ಯಯ ಅಥವಾ **ತತ್ರ ಸಾಧುಃ** (ಪಾ ಸೂ. ೪-೪-೪೪) ಎಂಬುದರಿಂದ ಸಾಧ್ವರ್ಥದಲ್ಲಿ ಯತ್ ಸ್ತ್ರತ್ಯಯ. ನಪುಂಸಕದಲ್ಲಿ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ. **ಯತೋಽನಾವಃ** (ಪಾ ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ

ರಯಿಪತಿಃ—**ರಯೀಣಾಂ ಪತಿಃ ರಯಿಪತಿಃ ಪತ್ಯಾವೈಶ್ವರ್ಯೇ**—(ಪಾ ಸೂ ೬-೩ ೧೭) ಎಂಬುದರಿಂದ ಉತ್ತರಪದಕ್ಕೆ ಆದ್ಯುದಾತ್ತಸ್ವರ ಬರುತ್ತದೆ

ಚಕ್ರಾಣಃ--ಡುಕೃಞ್ ಕರಣೇ ಧಾತು ಇದಕ್ಕೆ ಲಡರ್ಥದಲ್ಲಿ ಶಾನಚ್ ಪ್ರತ್ಯಯ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಶ್ಲು ಆದೇಶ. **ಶ್ಲೌ** ಎಂಬುವುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಉರದತ್ವ ಹಲಾದಿ ಶೇಷ. **ಕುಹೋಶ್ಚುಃ** ಎಂಬುದರಿಂದ ಚಕಾರಾದೇಶ ಧಾತುವಿನ ಋಕಾರಕ್ಕೆ ಯಣಾದೇಶ. ರೇಫದ ಪರದಲ್ಲಿ ನಕಾರ ಬಂದುದರಿಂದ **ಅಟ್ಕುಪ್ವಾಙ್**—ಸೂತ್ರದಿಂದ ಣತ್ವ ಹೀಗೆ ಪ್ರಕ್ರಿಯೆ ಹೇಳಿದರೆ **ಚಕ್ರಾಣಃ** ಎಂದು ರೂಪಸಿದ್ಧಿಯಾಗುತ್ತದೆ ಆದರೆ **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೯೯) ಎಂಬುದರಿಂದ ಆದ್ಯುದಾತ್ತಸ್ವರ ಬರಬೇಕಾಗುತ್ತದೆ ಆದುದರಿಂದ ಲಿಟ್ಪಿಗೆ **ಲಿಟಃ ಕಾನಜ್ವಾ** ಎಂಬುದರಿಂದ ಕಾನಜಾದೇಶ ಇದು ಶಿತ್ವಾಗದಿದ್ದುದರಿಂದ **ಆರ್ಧಧಾತುಕಂ ಶೇಷಃ** ಎಂಬುದರಿಂದ ಆರ್ಧಧಾತುಕಸಂಜ್ಞೆಯನ್ನು ಹೊಂದುವುದರಿಂದ ಅಭ್ಯಸ್ತ ನಿಮಿತ್ತಕವಾದ ಆದ್ಯುದಾತ್ತಸ್ವರವು ಬರುವುದಿಲ್ಲ ಆಗ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ ಸ್ವರವೇ ಬರುತ್ತದೆ

ವಿಶ್ವಾ— **ಶೇಶ್ಛಂದಸಿ ಬಹುಲಂ** (ಪಾ ಸೂ ೬ ೧-೭೦) ಎಂಬುದರಿಂದ ಸಪ್ತಂಸಕದಲ್ಲಿ ಶಿಗೆ ಲೋಪ ॥೧॥

॥ সংহিতাপাঠঃ ॥

অস্মে᳡ বৎসং পরি ষন্তং ন বিন্দন্নিচ্ছন্তো বিশ্বে᳡ অমৃতা᳡ অমূরাঃ ।
শ্রমযুবঃ পদবীয়ো᳡ ধিয়ংধাস্তস্থুঃ পদে᳡ পরমে᳡ চার্বগ্নেঃ ॥ ৯ ॥

॥ পদপাঠঃ ॥

অস্মে᳡ ইতি᳡ । বৎসং । পরি᳡ । সন্তং । ন । বিন্দন্ । ইচ্ছন্তঃ । বিশ্বে᳡ অমৃতা᳡ঃ । অমূরাঃ ।
শ্রমযুবঃ । পদবীয়ঃ । ধিয়ংধাঃ । তস্থুঃ । পদে᳡ । পরমে᳡ চারৌ᳡ । অগ্নেঃ ॥ ৯ ॥

॥ সায়ণভাষ্যম্ ॥

অস্মে᳡ অস্মাকং বৎসং বৎসবদহ্যংতং প্রিয়ং । যদ্বা । বৎসঃ পুত্রঃ পশ্চাদুত্পন্ন ত্বাত্ । তদ্বদগ্নিরপ্যস্মাকং পুত্রঃ । তথা চাম্নায়তে । মন্যুর্ব সস্নহ হব্যাস্যগ্নে পুত্রঃ পিত্রে লোককৃজ্জাতবেদঃ । তৈ. ব্রা. ৩-৫-৫-৩ । ইতি । পরি পংতং পরিতঃ সর্বত্র বর্তমানং । দেবেভ্যো নির্গত্যাশ্ব ত্থ্বেণ্বাদিষু নিলীনং সংতমিত্যর্থঃ । এবংবিধমগ্নিমিচ্ছংতো বিশ্বেঽমৃতাঃ সর্বেঽমরণধর্মাণো দেবা অমূরা অমূঢ়া মরুতঃ ন বিন্দন্ । তমগ্নিং নালভংত । অলভমানাশ্চ তে শ্রমযুবো হব্যবাহনস্যাভাবে হবিষামভাবাত্তজ্জন্যেন শ্রমেণ ক্লেশেনৈকেভূতাঃ তস্যাগ্নেরন্বেষণায় পদব্য সাদ্যৈর্গচ্ছংতঃ ধিয়ংধা ধিয়োমগ্নেঃ কর্মনাসনস্থানাদিলক্ষণানাং কর্মণাং ধারয়ি

ತಾರಃ । ಏವಂವಿಧಾ ಸಂತಶ್ಚಾರು ಚಾರುಣಿ ಶೋಭನೇಽಗ್ನೇಃ ಪರಮ ಉತ್ತಮೇಽಂತ್ಯೇ ಪದೇ । ಯತ್ರ ಹ್ಯಗ್ನಿರ್ನಿಲೀನೋ ವರ್ತತೇ ತತ್ರೈತ್ಯರ್ಥಃ । ತಸ್ಮಿನ್ಪದೇ ತಸ್ಥುಃ । ಸ್ಥಿತವಂತಃ । ಬಹುವಿಧೇನ ಪ್ರಯಾಸೇನಾಗ್ನಿಂ ದದೃಶುರಿತ್ಯರ್ಥಃ ॥ ಪರಿ ಷಂತಂ । ಉಪಸರ್ಗಸ್ಯಾದುಭ್ಯಾಮಸ್ತಿರ್ಯಚ್ಪರಃ । ಪಾ ೮-೩-೮೭। ಇತಿ ಷತ್ವಂ । ಶ್ರಮಯುವಃ । ಯು ಮಿಶ್ರಣೇ । ಶ್ರಮೇಣ ಯೂಯಂತ ಇತಿ ಶ್ರಮಯುವಃ । ಕ್ವಿಬ್ಬಹುಲಂ-ಪ್ರಭ್ವೀಶ್ವರ್ಯಾದಿನಾ । ಉ. ೨-೫೭ । ವಿಧೀಯಮಾನೌ ಕ್ವಿಬ್ವೀರ್ಘಾವಸ್ಯಾದಪಿ ಧಾತೋರ್ಭವತಃ । ತನ್ಯಾದಿತ್ವಾದುವಙ್ । ಪದವ್ಯಃ । ಏ ಗತ್ಯಾದಿಷು । ಸಾದೇನ ವಿಯಂತಿ ಗಚ್ಛಂತೀತಿ ಪದವ್ಯಃ। ಕ್ವಿಪ್ಪ್ರತ್ಯಯಃ । ಧಿಯಂಧಾಃ । ಅತೋಽನುಪಸರ್ಗೇ ಕ ಇತಿ ಕಃ । ತತ್ಪುರುಷೇ ಕೃತಿ ಬಹುಲಮಿತಿ ಬಹುಲವಚನಾದ್ದ್ವಿತೀಯಾಯಾ ಅಸ್ಯಲುಕ್ । ತಸ್ಥುಃ । ಸಾದಾದಿತ್ವಾನ್ನ ಭಾತಾಭಾವಃ । ಚಾರು । ಸುಸಾಂ ಸುಲುಗಿತಿ ಸಪ್ತಮ್ಯಾ ಲುಕ್ ॥

॥ ಪ್ರತಿಪದಾರ್ಥ ।

ಅಸ್ಮೈ—ನಮಗೆ । **ವತ್ಸಂ** -ಪುತ್ರನಂತೆ (ಪ್ರೀತಿಪಾತ್ರನಾದ) । **ಪರಿ ಷಂತಂ**—ಸರ್ವತ್ರಸ್ಥಿತನಾದ, (ಅಗ್ನಿಯನ್ನು) । **ಇಚ್ಛಂತಃ**—ಅಪೇಕ್ಷಿಸುವ । **ವಿಶ್ವೇ ಅಮೃತಾಃ** ಎಲ್ಲಾ ಅಮರರೂ (ದೇವತೆಗಳೂ) । **ಅಮೂರಾಃ**—ಮೂಢರಲ್ಲದ (ಮರುದ್ದೇವತೆಗಳೂ) । **ನ ವಿಂದ**—(ಅಗ್ನಿಯನ್ನು) ಹೊಂದಲಿಲ್ಲ । **ಶ್ರಮಯುವಃ**—(ಅಗ್ನ್ಯಾಧೇಯವಾದ ಹವಿಸ್ಸಿಲ್ಲದೇ) ಶ್ರಮದಿಂದ ಏಕೀಭೂತರಾಗಿ । **ಅಗ್ನೇಃ**—ಅಗ್ನಿಯ (ಅನ್ವೇಷಣಕ್ಕಾಗಿ)। **ಪದವ್ಯಃ**—ಪಾದಚಾರಿಗಳಾಗಿ । **ಧಿಯಂಧಾಃ**—(ಅಗ್ನಿಯ ಶಯನಾದಿ) ಕರ್ಮಗಳನ್ನು (ಮನಸ್ಸಿನಲ್ಲಿ) ಧರಿಸಿದವರಾಗಿ । **ಚಾರು**—ರಮಣೀಯನಾದ । **ಪರಮೇ**—ಉತ್ತಮವಾದ । **ಪದೇ**—(ಅಗ್ನಿಯು ಅಡಗಿದ್ದ) ಪ್ರದೇಶದಲ್ಲಿ । **ತಸ್ಥುಃ**—ನಿಂತರು

॥ ಭಾವಾರ್ಥ ॥

ಎಲ್ಲಾ ದೇವತೆಗಳೂ, ಅಜ್ಞಾನಿಗಳಲ್ಲದ ಮರುದ್ದೇವತೆಗಳೂ ನಮಗೆ ಪುತ್ರನಂತೆ ಪ್ರೀತಿಪಾತ್ರನಾದ, ಎಲ್ಲೆಡೆಗಳಲ್ಲಿಯೂ ಇರುವ ಅಗ್ನಿಯನ್ನು ಹುಡುಕಿದರೂ ಅವನು ಪ್ರಾಪ್ತವಾಗಲಿಲ್ಲ (ಅಗ್ನಿಯಿಂದಾಹೃತವಾಗುವ ಹವಿಸ್ಸಿಲ್ಲದೆ) ಶ್ರಾಂತರಾಗಿ ಎಲ್ಲರೂ ಒಟ್ಟಾಗಿ ಸೇರಿ, ಅವನನ್ನು ಪಾದಚಾರಿಗಳಾಗಿ ಪುಡುಕುತ್ತಾ, ಕೊನೆಗೆ ರಮಣೀಯವಾದ ಉತ್ತಮವಾದ ಪ್ರದೇಶದಲ್ಲಿ (ಅವನನ್ನು ಕಂಡು) ನಿಂತರು

English Translation.

All the immortals, and the unbewildered (Maruts) wishing for him who was (dear) to us as a son, and was everywhere around, discovered him not, oppressed with fatigue, wandering on foot, and cognizant of his acts, they stopped at the last beautiful (hiding) place of Agni.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಕರ್ಮಾನುಷ್ಠಾನದ ಮಹಿಮೆಯನ್ನು ವರ್ಣಿಸಿದೆ. ಕರ್ಮಗಳ ಹಿರಿಮೆಯನ್ನರಿಯದೆ ಎಷ್ಟೇ ತಪಸಿಸಿದರೂ ಸಹ ಅಗ್ನಿಯ ಅನುಗ್ರಹವು ಸಿಕ್ಕಲಾರದು ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಾ ದೇವತೆಗಳೂ, ಪ್ರಾಜ್ಞರಾದ ಮರುತ್ತುಗಳೂ ಕೂಡ ಬಹಳ ಕಾಲ ಅಲೆದ ಮೇಲೆ, ತಮ್ಮ ತಮ್ಮ ಕರ್ಮಗಳನ್ನು ಧರಿಸಿದವರಾಗಿ ಎಂದರೆ ಕರ್ಮಾನುಷ್ಠಾನ ಪರರಾಗಿ ಶ್ರದ್ಧೆಯಿಂದ ಹುಡುಕಿ ಅನಂತರ ಅಗ್ನಿಯ ಮನೋಹರವಾದ ಸ್ಥಾನವನ್ನು ಕಂಡುಹಿಡಿದರು ಎಂದು ಅಗ್ನಿಯ ಮಹಾತ್ಮ್ಯವನ್ನು ವರ್ಣಿಸಿದೆ

ಅಸ್ಮೇ—ಅಸ್ಮಾಕಂ- ನಮ್ಮಗಳ ಎಂದು ಅರ್ಥವು (ಸಿ ೬–೭) **ಅಥ ದ್ವಾತ್ರಿಂಶತಂ ಪದಾನಿ** ಎಂದು ಪ್ರಾರಂಭಮಾಡಿ ಅರ್ಧವನ್ನು ವಿವರಿಸಿರುವ ಪದಗಳಲ್ಲಿ ಅಸ್ಮೇ ಎಂಬ ಪದವು ಉಕ್ತವಾಗಿರುವುದು. ಇದು ಎಲ್ಲಾ ವಿಭಕ್ತಿಗಳಲ್ಲಿಯೂ ಒಂದೇ ವಿಧವಾದ ರೂಪದಲ್ಲಿ ಇರುವುದು ಆದ್ದರಿಂದ ಇದು ಅನೇಕಾರ್ಥವಾಗಿ ಇರುತ್ತದೆ. **''ಅಸ್ಮೇ ತೇ ಬಂಧುಃ''** ಎಂಬಲ್ಲಿ ಪ್ರಥಮಾ ವಿಭಕ್ತ್ಯಂತವಾಗಿ ಇರುವುದು. **ಅಸ್ಮೇ ಯಾತಂ ನಾಸತ್ಯಾ ಸಜೋಷಾಃ''** ಎಂಬಲ್ಲಿ ದ್ವಿತೀಯಾ ವಿಭಕ್ತಿಯ ಅರ್ಥವನ್ನು ಬೋಧಿಸುವುದು ಇದೇ ರೀತಿಯಲ್ಲಿ ಏಳು ವಿಭಕ್ತಿಗಳಿಗೂ ಉದಾಹರಣೆಯನ್ನು ನಿರುಕ್ತದಲ್ಲಿ ಕೊಟ್ಟಿರುವರು. ಸ್ಕಂದಸ್ವಾಮಿಗಳು **''ಅಸ್ಮೇ ಇತಿ ತಾದರ್ಥ್ಯೇ ಚತುರ್ಥೀ। ಅಸ್ಮಾಕಂ ಹವಿರ್ನಯನಾರ್ಥಂ''** ಅಸ್ಮೇ ಎಂಬುವುದು ತಾದರ್ಥ್ಯಚತುರ್ಥೀವಿಭಕ್ತಿಯ ರೂಪವಾಗುತ್ತದೆ ನಮಗೆ ಸಂಬಂಧಿಸಿದ ಹವಿಸ್ಸುಗಳನ್ನು ತಂದುಕೊಡುವುದಕ್ಕಾಗಿ ಎಂದು ಅರ್ಥವನ್ನು ಹೇಳುವರು

ವತ್ಸಂ ನ—ನ ಎಂಬ ಪದವು (ಸಿ. ೧–೪) ನಿಷೇಧವೆಂಬ ಅರ್ಥವನ್ನು ಬೋಧಿಸುವುದಾಗಿರುತ್ತದ ಇದರಂತೆಯೇ **ನ ಇತಿ ಪ್ರತಿಷೇಧಾರ್ಥೀಯಃ ಉಪಮಾರ್ಥೇ ಚ ಇತ್ಯುಭಯಮಪಿ ದ್ರಷ್ಟವ್ಯಂ।** ನ ಎಂಬುವುದು ಉಪಮಾರ್ಥವನ್ನೂ ಬೋಧಿಸುವುದು (ಸಿ. ೧–೪) **ವತ್ಸಮಿವ**—ಪುತ್ರನ ಹಾಗೆ ಎಂದು ಸ್ಕಂದಸ್ವಾಮಿಗಳೂ **ನ ವಿಂದ್ರ ನ ಲಭಂತ** ಹೊಂದಲಿಲ್ಲ ಎಂದು ನಿಷೇಧಾರ್ಥವಾಗಿ ನ ಶಬ್ದಕ್ಕೆ ಸಾಯಣರೂ ಅರ್ಥಮಾಡಿರುವರು **ವತ್ಸವತ್ ಅತ್ಯಂತಂ ಪ್ರಿಯಂ**-ಅಗ್ನಿಯು ಮಗುವಿನ ಹಾಗೆ ಬಹಳ ಪ್ರೀತಿಪಾತ್ರನಾಗಿರುವನು. ಅಥವಾ **ವತ್ಸ** ಎಂದರೆ ಪುತ್ರನು ನಮ್ಮ ಅನಂತರ ನಮ್ಮಿಂದ ಅರಣಿಯಲ್ಲಿ ಉತ್ಪನ್ನನಾದ ಕಾರಣ ಯಜ್ಞ ಮಾಡತಕ್ಕ ನಮಗೆ ಪುತ್ರನಾಗಿರುವನು.

ಮಮೈವ ಸನ್ ವಹ ಹವಾನ್ಯಗ್ನೇ। ಪುತ್ರಃ ಪಿತ್ರೇ ಲೋಕಕೃತ್ ಜಾತವೇದಃ

(ತೈ. ಬ್ರಾ ೩–೭–೭–೧೦)

"ಲೋಕವನ್ನು ಸೃಷ್ಟಿಮಾಡುವ ಎಲೈ ಅಗ್ನಿಯೇ, ನೀನು ನನಗೆ ಪುತ್ರನಾಗಿ ಹವಿರ್ಭಾಗಗಳನ್ನು ವಹಿಸು'' ಎಂದು ಈ ಮಂತ್ರದ ಅರ್ಥವು ಪುತ್ರನು ತಂದೆಯು ಹೇಳಿದ ಕಾರ್ಯಗಳನ್ನು ಮಾಡುತ್ತಾ ತಂದೆಗೆ ಪ್ರೀತಿಪಾತ್ರನಾಗಿರುವಂತೆ ಇರುವನಾದ್ದರಿಂದ ಪುತ್ರನೆಂದು ಗೌಣವ್ಯಪದೇಶವು ಇದನ್ನೇ ಔಪಚಾರಿಕವೆಂದು ಹೇಳುವರು

ಪರಿ ಷಂತಂ—ದೇವತೆಗಳ ಮಧ್ಯದಿಂದ ಹೊರಟು ಅರಳೀಮರ, ಬಿದಿರುಮಳೆ, ಇನೇ ಮೊದಲಾದ ಮರಗಳಲ್ಲಿ ಅಡಗಿಕೊಂಡು ಇರುವವನು ಎಂದು ಸಾಯಣರ ಅರ್ಥವು. ಹವಿಸ್ಸುಗಳನ್ನು ವಹಿಸಬೇಕೆಂಬ ಭಯದಿಂದ ಅಲ್ಲಲ್ಲಿ ಕಾಣಿಸದಂತೆ ಮಕ್ಕಳಹಾಗೆ, ಅವಿತುಕೊಂಡಿರುವನೆಂದು ಸ್ಕಂದಸ್ವಾಮಿಗಳ ಅರ್ಥವು.

ಅಮೂರಾಃ—ಅಮೂಢಚೇತಸಃ ಮೋಹವನ್ನು ಹೊಂದದೆ ಇರುವ ಬುದ್ಧಿಯುಳ್ಳವರು **ಅಮೂರ** ಶಬ್ದವು (ನಿ. ೬-೮) ಮೂವತ್ತೆರಡು ಪದಗಳಲ್ಲಿ ಉಕ್ತವಾಗಿರುವುದು **ಮೂರಾ ಅಮೂರ ನ ವಯೋ ಚಿಕಿತ್ವಃ** (ಋ. ಸಂ. ೧೦ ೪-೪) ಎಂಬ ಋಕ್ಕಿನಲ್ಲಿ ಅಮೂರ ಶಬ್ದವೂ ಮೂರ ಶಬ್ದವೂ ಉದಾಹೃತವಾಗಿರುವುದು **ಅಮೂರಾ ಅಮೂಢಾ** ಎಂದೂ, **ಮೂರಾಃ ಮೂಢಾ ವಯೋ ಸ್ಮೈ** ಎಂದೂ ಅರ್ಥವನ್ನು ನಿರುಕ್ತದಲ್ಲಿ ವಿವರಿಸಿರುವರು.

ಶ್ರಮಯುವಃ—ಶ್ರಮೇಣ ಯೋಯುವಂತ ಇತಿ ಶ್ರಮಯುವಃ । ಅಗ್ನಿಯು ಅವಿತುಕೊಂಡಿರುವಾಗ ತಮ್ಮ ತಮ್ಮ ಹವಿರ್ಭಾಗಗಳನ್ನು ಸಹಿಸುವವರು ಇಲ್ಲದಿರುವ ಕಾರಣ ದೇವತೆಗಳಿಗೆ ಹವಿಸ್ಸುಗಳು ಇಲ್ಲದೆ ಇರುವುದರಿಂದ ಅದರಿಂದ ಉಂಟಾದ ಆಯಾಸವನ್ನು ಹೊಂದಿರುವ ದೇವತೆಗಳು ಒಟ್ಟಾಗಿ ಅಗ್ನಿಯನ್ನು ಹುಡುಕುವ ಕಾರ್ಯದಲ್ಲಿ ನಿರತರಾಗಿದ್ದರು ಎಂದು ಅರ್ಥವು **ಶ್ರಮಯುವಃ** ಎಂಬ ಶಬ್ದದಲ್ಲಿ ಯು ಎಂಬುವ ಶಬ್ದವು ಮತ್ವರ್ಥದಲ್ಲಿ ಇರುವುದು **ಅಶ್ವಯುರ್ಗವ್ಯೂ ರಥಯುಃ** (ಋ. ಸಂ ೮-೫೧-೧೪) ಎಂಬ ಋಕ್ಕಿನಲ್ಲಿರುವಂತೆ ಅಶ್ವಯುಃ, ಗವ್ಯುಃ, ರಥಯುಃ, ಎಂಬ ಶಬ್ದಗಳ ಅರ್ಥದಂತೆ ಶ್ರಮಯುಃ ಎಂಬ ಶಬ್ದಕ್ಕೆ ಶ್ರಮವಂತನೆಂದು ಸ್ಕಂದಸ್ವಾಮಿ ಭಾಷ್ಯದಲ್ಲಿ ಅರ್ಥವನ್ನು ವಿವರಿಸಿರುವರು

ಪದವ್ಯಃ—ಪಾದೇನ ವಿಯಂತಿ ಗಚ್ಛಂತೀತಿ ಪದವ್ಯಃ ನಾಹನಾರೂಢರಾಗಿರದೆ ಬರಿಯ ಕಾಲುಗಳಿಂದಲೇ ನಡೆಯುತ್ತಿರುವರು, ಪಾದಸಂಚಾರಿಗಳು ಎಂದು ಸಾಯಣರ ಅರ್ಥವು **ಸಕಲ** ಜಗತ್ತುಗಳಿಗೂ ಆಶ್ರಯನಾಗಿರುವ ಕಾರಣಾತ್ಮನು ಎಂದು ಪದಶಬ್ದಕ್ಕೆ—

ಪದಂ ದೇವಸ್ಯ ನಮಸಾ ವ್ಯಂತಃ ಶ್ರವಸ್ಯವಃ ಶ್ರವ ಆಪನ್ನಮೃಕ್ತಂ ।

(ಋ. ಸಂ ೬-೧-೪)

ಎಂಬ ಋಕ್ಕಿನಲ್ಲಿ ಇರುವ ವಿಧಾತುವು **ಪೆಶ್ಯತಿ** ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವಂತೆ ಜ್ಞಾನಾರ್ಥದಲ್ಲಿ ಉಪಯುಕ್ತವಾಗಿರುವುದು ಆದ್ದರಿಂದ ಕಾರಣಾತ್ಮನನ್ನು ತಿಳಿಯುವವರು ಎಂದು ಸ್ಕಂದಸ್ವಾಮಿಗಳ ಅರ್ಥವು

ಧಿಯಂಧಾಃ—ಸ್ವಸ್ಯ ಕರ್ಮಣೋ ಧಾರಯಿತಾರಃ । ಅಗ್ನಿಯು ಶಯನಾಸನಾದಿಕರ್ಮಗಳ ಸ್ಥಾನಗಳನ್ನು ನಿಶ್ಚಯಮಾಡುವ ಕಾರ್ಯವನ್ನು ಬಿಡದೆ ಇರುವವರು ಎಂದು ವ್ಯಾಖ್ಯಾನವು

ಚಾರು—ಚಾರೂಣಿ. ಮಂಗಳಕರವಾದ, ಉತ್ತಮವಾದ, ಅಗ್ನಿಯು ಅವಿತುಕೊಂಡಿರುವ ಸ್ಥಾನವು ಉತ್ತಮವಾಗಿರುವುದು ಎಂದು ಚಾರು ಶಬ್ದವನ್ನು **ಪರಮೇ ಪದೇ** ಎಂಬ ಪದಕ್ಕೆ ವಿಶೇಷಣನನ್ನಾಗಿ ಭಾಷ್ಯಕಾರರು ವಿವರಿಸಿರುವರು ಸ್ಕಂದಸ್ವಾಮಿಗಳು ಈ ಅಭಿಪ್ರಾಯವನ್ನು ವಿವರಿಸಿ, ಚಾರು ಎಂಬ ಪದವು ಕ್ರಿಯಾವಿಶೇಷಣವಾಗಿರುವುದು. ಇದರಿಂದ ದೇವತೆಗಳು ಅಗ್ನಿಯು ಅವಿತುಕೊಂಡಿರುವ ಪ್ರದೇಶಗಳು ಚೆನ್ನಾಗಿ ಗೊತ್ತಾಗುವಹಾಗೆ ಅಲ್ಲಲ್ಲಿ ಹುಡುಕಿದರು ಎಂದೂ ಅರ್ಥವನ್ನು ಮಾಡಿರುವರು. **ಮತ್ತು—ಪರಮೇ ಪದೇ** ಎಂಬಲ್ಲಿ ಪರಮಶಬ್ದದಿಂದ ವಿಶೇಷಿತವಾದ ಪದಶಬ್ದದಿಂದ ಸ್ಥಾನವೆಂದು ಅರ್ಥವು **ಮತ್ತು** ಪದಶಬ್ದಕ್ಕೆ—

ಯೇನಾ ನಃ ಪೂರ್ವೇ ಪಿತರಃ ಪದಜ್ಞಾಃ ಸ್ವರ್ವಿದೋ ಅಭಿ ಗಾ ಅದ್ರಿಮುಷ್ಣನ್ ।

(ಋ ಸಂ ೯-೯೭-೩೯)

ಎಂಬ ಋಕ್ಕಿನಲ್ಲಿ ಪ್ರಯುಕ್ತವಾಗಿರುವ ಪದಜ್ಞಶಬ್ದಬೋಧ್ಯರಾದ ಅಂಗಿರಸ್ಸುಗಳೆಂದು ಅರ್ಥವು. **ಈ ಅರ್ಥಕ್ಕನುಗುಣವಾಗಿ ವಿಶ್ವೇ, ಅಮೂರಾ ಎಂಬ ಶಬ್ದಗಳೂ ಇಲ್ಲಿ ಉಕ್ತವಾಗಿರುತ್ತವೆ ಆದ್ದರಿಂದ ಈ ಋಕ್ಕಿನಲ್ಲಿ ದೇವತೆಗಳು** ಎಂದು ಅರ್ಥವನ್ನು ಹೇಳಬಾರದು ವಿಶ್ವೇ, ಅಮೂರಾಃ ಅಮೃತಾಃ ಈ ಪದಗಳಿಂದ ಅಂಗಿರಸ್ಸುಗಳು ಉಕ್ತರಾಗುವರು ಎಂದು ಅರ್ಥ ವಿವರಿಸಿ, ಪಿತೃದೇವತೆಗಳು ಆಡಗಿಕೊಂಡಿರುವ ಅಗ್ನಿಗೆ ತಮ್ಮ ತಮ್ಮ ತೇಜಸ್ಸುಗಳನ್ನು ಸೇರಿಸಿದರು ಎಂಬುವ ವಿಷಯವನ್ನು ಸೌಚೀಕಸೂಕ್ತದಲ್ಲಿ ವಿವರಿಸುವೆವು ಎಂದು ವ್ಯಾಖ್ಯಾನವನ್ನು ಮಾಡಿರುತ್ತಾರೆ ಈ ವಿಧವಾದ ವ್ಯಾಖ್ಯಾನದಲ್ಲಿ ಅಗ್ನಿಯ ಅನುಗ್ರಹದಿಂದ ಅಗ್ನಿಯ ಸಾಲೋಕ್ಯವು ಉಂಟಾಗುವುದೆಂದು **ಪರಮೇ ಪದೇ ತಸ್ಥುಃ** ಎಂಬುವುದರಿಂದ ತಿಳಿದುಬರುವುದು

॥ ವ್ಯಾಕರಣಪ್ರಕ್ರಿಯಾ ॥

ಪರಿಷಂತಮ್— ಅಸ ಭುವಿ ಧಾತು ಇದಕ್ಕೆ ಲಡರ್ಥದಲ್ಲಿ ಶತೃಪ್ರತ್ಯಯ **ಸಾರ್ವಧಾತುಕಮಪಿತ್** ಸೂತ್ರದಿಂದ ಇದಕ್ಕೆ ಜಿತ್ವ ಬರುವುದರಿಂದ **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಎಂಬುದರಿಂದ ಅಸ್ಸಿನ ಅಕಾರಕ್ಕೆ ಲೋಪ ಸತ್ ಶಬ್ದವಾಗುತ್ತದೆ. **ಉಪಸರ್ಗಾತ್ಸುಧ್ಯಾಮಸ್ತಿರ್ಯಚ್ ಪರಃ** (ಪಾ. ಸೂ. ೮-೩-೬೬) ಉಪಸರ್ಗ ಮತ್ತು ಪ್ರಾದುಸ್ ಎಂಬುದರ ಪರದಲ್ಲಿರುವ ಅಚ್ ಅಥವಾ ಯಕಾರಪರವಾದ ಅಸ್ ಧಾತುವಿನ ಸಕಾರಕ್ಕೆ ಷತ್ವ ಎಂಬುದರಿಂದ ಇಲ್ಲಿ ಪರಿ ಎಂಬ ಉಪಸರ್ಗದ ಪರದಲ್ಲಿ ಅಟ್ ಪರವಾದ ಸಕಾರ ಬಂದುದರಿಂದ ಷತ್ವ ಬರುತ್ತದೆ ದ್ವಿತೀಯಾ ಏಕವಚನದಲ್ಲಿ ಉಗಿತ್ತಾದುದರಿಂದ ನುಮಾಗಮ ಬರುತ್ತದೆ.

ವಿಂದನ್—ವಿದ್‌ಲೃ ಲಾಭೇ ಧಾತು ಲಜ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ ಅಂತಾದೇಶ. ಇಕಾರಲೋಪ. **ಶೇಮುಚಾದೀನಾಂ** (ಪಾ ಸೂ ೭-೧-೫೯) ಎಂಬುದರಿಂದ ಮುಚಾದಿಯಲ್ಲಿ ಸೇರಿರುವುದರಿಂದ ಧಾತುವಿಗೆ ನುಮಾಗಮ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಇಚ್ಛಂತಃ—ಇಷ ಇಚ್ಛಾಯಾಂ ಧಾತು ತುದಾದಿ ಲಡರ್ಥದಲ್ಲಿ ಶತೃಪ್ರತ್ಯಯ ಶ ವಿಕರಣ. **ಇಷಗಮಿಯಮಾಂ ಛಃ** (ಪಾ. ಸೂ ೭-೩-೭೭) ಎಂಬುದರಿಂದ ಧಾತುವಿಗೆ ಛಾದೇಶ ಇಚ್ಛತ್ ಶಬ್ದವಾಗುತ್ತದೆ ವಿಕರಣಸ್ವರ ಸತಿಶಿಷ್ಟವಾಗುವುದರಿಂದ ಉಳಿಯುತ್ತದೆ ಪ್ರಥಮಾ ಬಹುವಚನದಲ್ಲಿ ಉಗಿತ್ತಾದುದರಿಂದ ನುಮಾಗಮ

ಶ್ರಮಯುವಃ—ಯು ಮಿಶ್ರಣೇ ಧಾತು. ಶ್ರಮೇಣ ಯೂಯಂತೇ ಇತಿ ಶ್ರಮಯುವಃ **ಕ್ವಿಪ್ಚವಿ ಪೈಚ್ಚಿಪೈ**—ಎಂಬ ವಾರ್ತಿಕದಿಂದ ವಿಧಿಸಲ್ಪಡುವ ಕ್ವಿಪ್ ದೀರ್ಘಗಳು ಈ ಧಾತುವಿನ ಮೇಲೂ ಬರುತ್ತವೆ ಶ್ರಮಯೂ ಶಬ್ದವಾಗುತ್ತದೆ. ಇದಕ್ಕೆ ಜಸ್ ಪರವಾದಾಗ ಇದು ತನ್ವಾದಿಯಲ್ಲಿ ಸೇರಿರುವುದರಿಂದ ಉವಙಾದೇಶ ಬರುತ್ತದೆ. **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಪದವ್ಯಃ—ವೀ ಗತ್ಯಾದಿಷು ಧಾತು. ಪಾದೇನ ವಿಯಂತಿ ಗಚ್ಛಂತಿ ಇತಿ ಪದವ್ಯಃ **ಕ್ವಿಪ್ ಚ** (ಪಾ. ಸೂ ೩-೩-೯೭) ಎಂಬುದರಿಂದ ಉಪಪದವಾಗಿರುವಾಗ ಈ ಧಾತುವಿಗೆ ಕ್ವಿಪ್ ಪ್ರತ್ಯಯ ಪದವೀ ಎಂದು ರೂಪವಾಗುತ್ತದೆ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬಂದಾಗ ಈಕಾರ ಉದಾತ್ತವಾಗುತ್ತದೆ. ಜಸ್ ಪರವಾದಾಗ ಈಕಾರಕ್ಕೆ ಯಣಾದೇಶ ಉದಾತ್ತಸ್ಥಾನದಲ್ಲಿ ಬಂದ ಯಣಿನ ಪರದಲ್ಲಿ ಅನುದಾತ್ತ ಬಂದುದರಿಂದ (ವಿಭಕ್ತಿ ಆಕಾರ) **ಉದಾತ್ತೆಸ್ವರಿತಯೋರ್ಯಣಃ**— (ಪಾ ಸೂ ೮-೪-೪) ಎಂಬುದರಿಂದ ಅನುದಾತ್ತಕ್ಕೆ ಸ್ವರಿತಸ್ವರ ಬರುತ್ತದೆ

ಧಿಯಂಧಾಃ—**ಧಿಯೋಂ ಧಾರಯಿತಾರಃ ಧಿಯಂಧಾಃ**। ಡುಧಾಞ್ ಧಾರಣಪೋಷಣಯೋಃ ಧಾತು **ಆತೋಽನುಪಸರ್ಗೇ ಕಃ** (ಪಾ ಸೂ ೩-೨-೩) ಎಂಬುದರಿಂದ ಉಪಸರ್ಗ ಭಿನ್ನವಾದದ್ದು ಉಪಪದವಾಗಿರುವುದರಿಂದ ಕ ಪ್ರತ್ಯಯ. **ಆತೋಲೋಪ ಇಟಿಚ** (ಪಾ ಸೂ ೬-೪-೬೪) ಎಂಬುದರಿಂದ ಪ್ರತ್ಯಯ ನಿಮಿತ್ತವಾಗಿ ಆಕಾರಲೋಪ. **ತತ್ಪುರುಷೇ ಕೃತಿ ಬಹುಲಂ** (ಪಾ ಸೂ ೬-೩-೧೪) ಎಂಬುದರಿಂದ ಬಹುಲವಚನ ಸಾಮರ್ಥ್ಯದಿಂದ ತತ್ಪುರುಷ ಸಮಾಸಮಾಡಿದಾಗ ದ್ವಿತೀಯಾ ವಿಭಕ್ತಿಗೂ ಅಲುಕ್ ಬರುತ್ತದೆ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ

ತಸ್ಥುಃ—ಷ್ಠಾ ಗತಿನಿವೃತ್ತೌ ಧಾತು. **ಧಾತ್ವಾದೇಃ ಷಃ ಸಃ** ಸೂತ್ರದಿಂದ ಷಕಾರಕ್ಕೆ ಸಕ್ಕ ಲೆಟ್ ಪ್ರಥಮಪುರುಷ ಬಹುವಚನದಲ್ಲಿ **ಪೆರಸ್ಮೈಪದಾನಾಂ**—ಎಂಬುದರಿಂದ ಉಸಾದೇಶ. ಧಾತುವಿಗೆ ದ್ವಿತ್ವ. **ಶಪೂರ್ವಾಃ ಖಯಃ** (ಪಾ ಸೂ ೭-೪-೬೧) ಎಂಬುದರಿಂದ ತಕಾರಕ್ಕೆ ಶೇಷ. **ಆತೋಲೋಪ ಇಟಿಚ** ಎಂಬುದರಿಂದ ಆಕಾರಕ್ಕೆ ಲೋಪ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತ ಸ್ವರದಿಂದ ಅಂತೋದಾತ್ತವಾದ ಸದವಾಗುತ್ತದೆ

ಚಾರು—ಇದಕ್ಕೆ ಸಪ್ತಮೀ ವಿಭಕ್ತಿ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ಆದಕ್ಕೆ ಲುಕ್ ॥ ೨ ॥

॥ ಸಂಹಿತಾಪಾಠಃ ॥

ತಿಸ್ರೋ ಯದಗ್ನೇ ಶರದಸ್ತ್ವಾಮಿಚ್ಛುಚಿಂ ಘೃತೇನ ಶುಚಯಃ ಸಪರ್ಯಾನ್ ।
ನಾಮಾನಿ ಚಿದ್ದಧಿರೇ ಯಜ್ಞಿಯಾನ್ಯಸೂದಯಂತ ತನ್ವಃ ೧ ಸುಜಾತಾಃ ॥ ೩ ॥

॥ पदपाठः ॥

तिस्रः । यत् । अग्ने । शरदः । त्वाम् । इत् । शुचिम् । घृतेन । शुचयः । सपर्यान् ।

नामानि । चित् । दधिरे । यज्ञियानि । असूदयन्त । तन्वः । सुऽजातासः ॥ ३ ॥

॥ सायणभाष्यम् ॥

शुचयः शोधयितारो दीप्ता नो मरुतो हे अग्ने शुचिं शुद्धं दीप्यमानं नो त्वामिद्देवेभ्यो निर्गतं त्वामेवोद्दिश्य तिस्रः शरदस्त्रीन् संवत्सरान्यृतेनाज्येन यद्यदा सपर्यान् पूजां कुर्युः तदानीं त्वमाविरभूः । तदनंतरं ते मरुतस्त्वयानुगृहीताः संतो यज्ञियानि यज्ञार्हाणि यज्ञे प्रयोक्तुं योग्यानि नामानि चित् नामान्यपि दधिरे । आधारयन् । नामानि च त्रैष्टुभीयकेषु समाम्नायंते । ईदृक् चान्यादृक् च तादृङ् च प्रतिदृङ् च मितश्च संमितश्च सभराः । त्रै. सं. ४-६-४-४ । इदाद्यानि । एतैश्चाग्निचयनेन मारुताः सप्तकपालाहूयंते । नामानि धारयित्वा च सुजाताः पूर्वं रूपं परित्यज्य शोभनमन्यत्तत्त्वं प्राप्ताः संतस्तन्वः स्वकीयानि शरीराण्यसूदयंत । स्वर्गं प्रापितवंतः ॥ तिस्रः शसि त्रिचतुरोः स्त्रियां तिसृचतसृ इति पूर्वसवर्णदीर्घत्वे प्राप्ते ऽजे र ऋत इति रेफादेशः । त्रिशब्दः फिषः । फि. ८-८ । इत्यंतोदात्तः । तिस्रादेशस्यापि स्थानिवद्भावेनान्तोदात्तत्वे उदात्तयणो हल्पूर्वादिति शस उदात्तत्वम् । शरदः । शॄ हिंसायाम् । शीर्यंतेऽस्यामोषधय इति शरत्संवत्सरः । शॄदॄभसोऽदिः । उ. ८-७९ । इत्यदिप्रत्ययः । उभयत्र कालाध्वनोरत्यंतसंयोगे । पा. २-३-५ । इति द्वितीया । सपर्यान् । सपर पूजायाम् । कंड्वादिः । लेट्यडागमः । इतश्च लोप इतीकारलोपः । यज्ञियानि । यज्ञार्हाणि यज्ञार्हार्थे घप्रत्ययः ॥

॥ ಪ್ರತಿಪದಾರ್ಥ ॥

ಅಗ್ನೇ—ಅಗ್ನಿಯೇ। **ಶುಚಯಃ**—ಶುದ್ಧಿಮಾಡುವ, (ಕಾಂತಿಯುಕ್ತರಾದ ಮರುತ್ತುಗಳು)। **ಶುಚಿಂ**—ಶುದ್ಧನಾದ, (ದೀಪ್ತನಾದ)। **ತ್ವಾಮಿತ್**—ನಿನ್ನನ್ನು ಉದ್ದೇಶಿಸಿಯೇ। **ತಿಸ್ರಃ ಶರದಃ**—ಮೂರು ಸಂವತ್ಸರಗಳು। **ಘೃತೇನ**—ಆಜ್ಯದಿಂದ। **ಯತ್**—ಯಾವಾಗ। **ಸಪರ್ಯನ್**—ಪೂಜೆಮಾಡಿದರೋ (ಆಗ)। **ಯಜ್ಞಿಯಾನಿ**—ಯಜ್ಞದಲ್ಲಿ (ಪ್ರಯೋಗಿಸಲು) ಅರ್ಹವಾದ। **ನಾಮಾನಿ ಚಿತ್**—ನಾಮಧೇಯಗಳನ್ನೂ ಕೂಡ। **ದಧಿರೇ**—ಧರಿಸಿದರು। **ಸುಜಾತಾಃ**—ಮಂಗಳಕರವಾದ ಅಮೃತವನ್ನು ಹೊಂದಿದವರಾಗಿ। **ತನ್ವಃ**—ತಮ್ಮ ಶರೀರಗಳನ್ನು। **ಅಸೊದಯಂತ**—ಸ್ವರ್ಗಕ್ಕೆ ಸೇರಿಸಿದರು

॥ ಭಾವಾರ್ಥ ॥

ಎಲೈ ಅಗ್ನಿಯೇ, (ಸ್ವತಃ) ಶುದ್ಧರಾದ ಮರುತ್ತುಗಳು ನಿನ್ನನ್ನುದ್ದೇಶಿಸಿ ಮೂರುಸಂವತ್ಸರಗಳು ಆಜ್ಯದಿಂದ ಪೂಜಾದಿ (ಹೋಮಾದಿ) ಗಳನ್ನು ಮಾಡಿದ ಮೇಲೆಯೇ ಯಜ್ಞಾರ್ಹವಾದ ನಾಮಧೇಯಗಳನ್ನು ಪಡೆದರು ಅಮೃತತ್ವವನ್ನು ಪಡೆದವರಾಗಿ, ಸ್ವರ್ಗವನ್ನು ಸೇರಿದರು

English Translation

Inasmuch, Agni, as the pure (Maruts) worshipped you (equally) pure, with clarified butter for three years, therefore they aquired names worthy (to be repeated) at sacrifices, and being regenerated, obtained celestial bodies.

॥ ನಿರೀಕ್ಷಣವಿಷಯಗಳು ॥

ಶುಚಯಃ—ಪವಿತ್ರರನ್ನಾಗಿ ಮಾಡುವ ಅಥವಾ ಕಾಂತಿಯುಕ್ತರಾದ ಮರುದ್ದೇವತೆಗಳೆಂದು ಸಾಯಣರೂ, **ಶುದ್ಧಾತ್ಮಾನಃ**—ಪರಿಶುದ್ಧವಾದ ತನು ಮತ್ತು ಮನುಸ್ಸುಳ್ಳವರಾದ ಯಜ್ಞಮಾಡುವರು ಎಂದು ಸ್ಕಂದಸ್ವಾಮಿಗಳೂ ಅರ್ಥಮಾಡಿರುವರು.

ಶುಚಿಂ—ಪರಿಶುದ್ಧನಾದ ಅಥವಾ ಕಾಂತಿಯುಳ್ಳವನಾದ ಅಗ್ನಿಯನ್ನು ಮರುದ್ದೇವತೆಗಳು ಆಜ್ಯದಿಂದ ಹೋಮವನ್ನು ಮಾಡಿ ಪೂಜಿಸಿದರು ಎಂದು ಅರ್ಥವು **ಶುಚಿ** ಶಬ್ದವು (ನಿ. ೬-೧) **ಅಶುಶುಕ್ಷಣಿ** ಪದದ ಉತ್ಪತ್ತಿಯನ್ನು ನಿರ್ವಚನಮಾಡುವಾಗ ಉಕ್ತವಾಗಿರುವುದು **ಶುಚಿಃ ಶೋಚತೇರ್ಜ್ವಲತಿಕರ್ಮಣಃ**। **ಜ್ವಲತಿ**-ಪ್ರಕಾಶವುಳ್ಳವನಾಗಿರುತ್ತಾನೆ ಎಂಬ ಅರ್ಥವುಳ್ಳ **ಶುಚ ದೀಪ್ತೌ** ಎಂಬ ಧಾತುವಿನಿಂದ ನಿಷ್ಪನ್ನವಾದ **ಶುಚಿ** ಶಬ್ದವು ದೀಪ್ತಿಯುಳ್ಳವನೆಂಬ ಅರ್ಥವನ್ನು ಬೋಧಿಸುವುದು ಇದರಿಂದ ಶುಚಿಶಬ್ದದಿಂದ ಬೋಧ್ಯನಾದ ಅಗ್ನಿಯೂ **ಅಶುಶುಕ್ಷಣಿ** ಪದದಿಂದ ಬೋಧ್ಯನಾದ ಅಗ್ನಿಯೂ ಬೇರೆಯಾಗಿರುವನು ಎಂದು ಅರ್ಥವು **ಅಯಮಪೀತರಃ**

ಶುಚಿರೇತಸ್ಮಾದೇವ ಇತಿ ವೈಯಾಕರಣಾ ಮನ್ಯಂತೇ ಎಂಬುವುದಾಗಿ ಇರುವ ನಿರುಕ್ತವಚನವು ಈ ಅರ್ಥವನ್ನೇ ಬೋಧಿಸುವುದು ಮತ್ತು--

ತ್ವಮಗ್ನೇ ದ್ಯುಭಿಸ್ತ್ವಮಾಶುಶುಕ್ಷಣಿಸ್ತ್ವಮದ್ಭ್ಯಸ್ತ್ವಮಶ್ಮನಸ್ಪರಿ ।
ತ್ವಂ ವನೇಭ್ಯಸ್ತ್ವಮೋಷಧೀಭ್ಯಸ್ತ್ವಂ ನೃಣಾಂ ನೃಪತೇ ಜಾಯಸೇ ಶುಚಿಃ

(ಋ. ಸಂ. ೨-೧-೧)

ಎಂಬ ಋಕ್ಕಿನಲ್ಲಿ ಉಕ್ತವಾಗಿರುವ **ಆಶುಶುಕ್ಷಣಿಃ ಶುಚಿಃ** ಎಂಬ ಎರಡು ಪದಗಳಿಗೂ ಅಗ್ನಿಯು ಎಂದು ಅರ್ಥವೇ ಆದರೂ **ಪರಸ್ಪರವಾಗಿ** ಇರುವ ಭೇದವನ್ನು ನಿರುಕ್ತದಲ್ಲಿ ಸ್ಪಷ್ಟವಾಗಿ ಉಪಪಾದನೆ ಮಾಡಿರುವರು

ಶರದಃ—**ಶೀರ್ಯಂತೇ ಅಸ್ಯಾಂ ಓಷಧಯಃ ಇತಿ ಶರತ್ ಸಂವತ್ಸರಃ** ಮೂಲಿಕೆಗಳು ಈ ಕಾಲದಲ್ಲಿ ಪಕ್ವವಾಗಿ (ಹಣ್ಣಾಗಿ) ನೆಲದ ಮೇಲೆ ಬೀಳುತ್ತವೆಯಾದ್ದರಿಂದ ಸಂವತ್ಸರವು ಎಂದು ಅರ್ಥವು ಮರುದ್ದೇವತೆಗಳು ಮೂರು ಸಂವತ್ಸರಗಳವರಿಗೂ ಅಗ್ನಿಯನ್ನು ಆಜ್ಯಹೋಮಾದಿಗಳಿಂದ ಪೂಜಿಸಿದರು ಯಾಸ್ಕರು **ಶರತ್** ಎಂಬ ಶಬ್ದದ ಬಹುವಚನವಾದ **ಶರದಃ** ಎಂಬ ಶಬ್ದದ ಅರ್ಥವನ್ನು ವಿವರಿಸುವಾಗ **ಶರಚ್ಛೃತಾ ಅಸ್ಯಾಮೋಷಧಯೋ ಭವಂತಿ । ಶೀರ್ಣಾ ಅಪಿ ಇತಿ ವಾ ।** (ನಿ ೪-೨೬) ಈ ಕಾಲದಲ್ಲಿ ಮೂಲಿಕೆಗಳು ಶೀರ್ಣವಾಗುವುವು. ನೀರು ಗಳೂ ಒಣಗುವವು ಆದ್ದರಿಂದ **ಶರದಃ** ಎಂದು ಹೆಸರು ಆಗಿರುವುದು ಎಂದು ಅರ್ಥವನ್ನು ಮಾಡಿ ಸಂವತ್ಸರ ಎಂಬ ಅರ್ಥವನ್ನು ಬೋಧಿಸುವ ಅನೇಕವಾದ ರೋಗಗಳಿಂದ ವ್ಯಾಪ್ತವಾದ ಈ ಕಾಲದಲ್ಲಿ ಆರೋಗ್ಯದಿಂದ ಇರುವುದು **ಅಪೇಕ್ಷಿಸಲ್ಪಡುತ್ತದೆ** ಎಂಬ ಅರ್ಥವುಳ್ಳ—

ಪುನಃ ಪತ್ನೀಮಗ್ನಿರದಾದಾಯುಷಾ ಸಹ ವರ್ಚಸಾ ।
ದೀರ್ಘಾಯುರಸ್ಯಾ ಯಃ ಪತಿರ್ಜೀವಾತಿ ಶರದಃ ಶತಂ ॥

(ಋ ಸಂ. ೧೦-೮೫-೩೯)

ಎಂಬ ಋಕ್ಕನ್ನು ಉದಹರಿಸಿರುವರು

ಯಜ್ಞಿಯಾನಿ ನಾಮಾನಿ ಚಿತ್ ದಧಿರೇ—ಮರುದ್ದೇವತೆಗಳು ಅಗ್ನಿಯನ್ನು ಸಂತೋಷಪಡಿಸಿ ಅವನ ಅನುಗ್ರಹಕ್ಕೆ ಪಾತ್ರರಾಗಿ ಯಜ್ಞದಲ್ಲಿ ಸ್ತೋತ್ರಮಾಡಲು ಯೋಗ್ಯವಾಗಿರುವ ಹೆಸರುಗಳನ್ನು ಹೊಂದಿದರು. ಈ ಹೆಸರುಗಳೂ

ಈದೃಜ್ ಚಾನ್ಯಾದೃಜ್ ಚೈತಾದೃಜ್ ಚ ಪ್ರತಿದೃಜ್ ಚ ಮಿತಶ್ಚ ಸಂಮಿತಶ್ಚ ಸಭರಾಃ

(ತೈ. ಸಂ. ೪-೬-೫-೫)

ಎಂಬ ಮಂತ್ರಗಳಲ್ಲಿ ಪ್ರಸಿದ್ಧವಾಗಿರುತ್ತವೆ ಈ ಮಂತ್ರಗಳಿಂದಲೇ ಅಗ್ನಿಚಯನದಲ್ಲಿ ಮರುದ್ದೇವತಾಕವಾಗಿ ಏಳು ಕಪಾಲಗಳಲ್ಲಿ ಹವಿಸ್ಸು ಹೋಮಮಾಡಲ್ಪಡುತ್ತದೆ ಈ ಮರುದ್ದೇವತೆಗಳು ಹೀಗೆ ಹೆಸರಿನಿಂದ ಪ್ರಸಿದ್ಧರಾಗಿ ತಮ್ಮ ಹಿಂದಿನ ರೂಪವನ್ನು ತ್ಯಾಗಮಾಡಿ ಉತ್ತಮವಾದ ದೇವತ್ವವನ್ನು ಹೊಂದಿ ತಮ್ಮ ಶರೀರಗಳನ್ನು ಸ್ವರ್ಗದಲ್ಲಿರುವಂತೆ

ಮಾಡಿಕೊಂಡಿರುವರು. ಇದರಿಂದಲೆ, **ಸುಜಾತಾಃ ತನ್ವಃ ಅಸೂದಯನ್ತ** ಎಂದು ಈಮಂತ್ರದಲ್ಲಿ ನಿರ್ದಿಷ್ಟವಾಗಿರುತ್ತದೆ. ಸ್ಕಂದಸ್ವಾಮಿಗಳು—ಯಾರು ಅಗ್ನಿಯನ್ನು ಮೂರುವರ್ಷಗಳವರೆಗೂ, ಆಜ್ಯದಿಂದ ಹೋಮಮಾಡಿ ಸಂತೋಷಪಡಿಸುವರೋ, ಅಥವಾ ಹೋಮಮಾಡಿ ಸಂತೋಷಪಡಿಸಲು ದಾರಿದ್ರ್ಯಾದಿ ದೋಷಗಳಿಂದ ಅಶಕ್ತರಾಗಿ ಅಗ್ನಿಯ ನಾಮಗಳನ್ನು ಪಠಿಸುವರೋ ಅವರಿಬ್ಬರೂ ಅಗ್ನಿಯ ವಿಷಯದಲ್ಲಿ ಭಕ್ತಿಯಿಂದ ವರ್ತಿಸುವವರಾದಕಾರಣ ಉತ್ತಮವಾದ ಸರಿಶುದ್ಧವಾದ ಸಂಸ್ಕಾರದಿಂದ ಸಂಸ್ಕೃತರಾಗಿ ವಿದ್ಯೆಯೂ ಮತ್ತು ಐಶ್ವರ್ಯವೂ ಇವುಗಳನ್ನು ಅಗ್ನಿಯ ಅನುಗ್ರಹದಿಂದ ಹೊಂದಿದವರು ಎಂದು ಅರ್ಥವನ್ನು ವಿವರಿಸಿರುವರು

ಸಪರ್ಯನ್—**ಪೂಜಾಂ ಚಕ್ರುಃ** ಪೂಜೆಯನ್ನು ಮಾಡಿದರು ಎಂದು ಸಾಯಣರೂ, **ಪರಿಚರಂತಿ** ಸೇವಿಸುವರು ಎಂದು ಸ್ಕಂದಸ್ವಾಮಿಗಳೂ ಅರ್ಥವನ್ನು ಹೇಳುವರು. **ಸಪರ್ಯತಿ** ಎಂಬ ಪರಿಚರಣಕರ್ಮಾರ್ಥಕವಾದ ಶಬ್ದದಿಂದ **ಸಪರ್ಯನ್** ಎಂದು ಆಗಿರುತ್ತದೆ **ಸಪರ್ಯತಿ** ಎಂಬ ಪದವೆ ಹತ್ತು ಪರಿಚರಣಕರ್ಮವಾಚಕಗಳಲ್ಲಿ (ಸಿ ೩-೧೩) ಉಕ್ತವಾಗಿರುವುದು

॥ ವ್ಯಾಕರಣಪ್ರಕ್ರಿಯಾ ॥

ತಿಸ್ರಃ—ತ್ರಿ ಶಬ್ದಕ್ಕೆ ದ್ವಿತೀಯಾ ವಿಭಕ್ತಿಯಲ್ಲಿ ಶಸ್ ಪರವಾದಾಗ **ತ್ರಿಚತುರೋಃ ಸ್ತ್ರಿಯಾಂ ತಿಸೃ ಚತಸೃ** (ವಾ ಸೂ ೭-೩-೯೯) ಎಂಬುದರಿಂದ ಸ್ತ್ರೀಲಿಂಗದಲ್ಲಿ ತಿಸೃ ಆದೇಶ ತಿಸೃ+ಶಸ್ ಎಂದಿರುವಾಗ ಪೂರ್ವಸವರ್ಣದೀರ್ಘವು ಪ್ರಾಪ್ತವಾದರೆ **ಆಚಿರ ಋತಃ** (ಪಾ ಸೂ ೭-೩-೧೧೦) ಎಂಬುದರಿಂದ ಆದಕ್ಕೆ ಅಪವಾದವಾಗಿ ಋಕಾರಕ್ಕೆ ರೇಫಾದೇಶ ಬರುತ್ತದ ಸಕಾರಕ್ಕೆ ರುತ್ವ ವಿಸರ್ಗ ತಿಸ್ರಃ ಎಂದು ರೂಪವಾಗುತ್ತದೆ. ತ್ರಿ ಶಬ್ದವು **ಫಿಷಃ** (ಫಿ ಸೂ ೧) ಎಂಬುದರಿಂದ ಅಂತೋದಾತ್ತವಾಗುತ್ತದೆ ತಿಸ್ರಾದೇಶಕ್ಕೂ **ಸ್ಥಾನಿವದಾದೇಶೋ೨ನಲ್ವಿಧೌ** ಎಂಬುದರಿಂದ ಸ್ಥಾನಿವದ್ಭಾವ ಬರುವುದರಿಂದ ಅಂತೋದಾತ್ತತ್ವವು ಪ್ರಾಪ್ತವಾದರೆ **ಉದಾತ್ತಯಣೋ ಹಲ್ ಪೂರ್ವಾತ್** (ಪಾ ಸೂ ೬-೧-೧೭೪) ಎಂಬುದರಿಂದ ಶಸ್ಸಿಗೆ ಉದಾತ್ತಸ್ವರ ಬರುತ್ತದ.

ಶರದಃ—ಶೃ ಹಿಂಸಾಯಾಮ್ ಧಾತು. ಶೀರ್ಯಂತೇ ಅಸ್ಯಾಂ ಓಷಧಯಃ ಇತಿ ಶರತ್ ಸಂವತ್ಸರಃ (ಓಷಧಿಗಳು ಈ ಕಾಲದಲ್ಲಿ ಒಣಗುತ್ತವೆ). **ಶೃದಭಸೋ೨ದಿಃ** (ಉ ಸೂ ೧-೧೩೭) ಎಂಬುದರಿಂದ ಅದಿಪ್ರತ್ಯಯ ಪ್ರತ್ಯಯ ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ. ಶರದ್ ಶಬ್ದವಾಗುತ್ತದ ದ್ವಿತೀಯಾ ಬಹುವಚನಾಂತರೂಪ. ಎರಡು ಶಬ್ದಗಳಿಗೂ **ಕಾಲಾಧ್ವನೋರತ್ಯಂತಸಂಯೋಗೇ ದ್ವಿತೀಯಾ** (ಪಾ ಸೂ ೨-೩-೫) ಎಂಬುದರಿಂದ ಎಡೆಬಿಡದೆ ಎಂಬರ್ಥ ತೋರುವುದರಿಂದ ದ್ವಿತೀಯಾ ವಿಭಕ್ತಿ ಬಂದಿದೆ

ಸಪರ್ಯನ್—ಸಪರ ಪೂಜಾಯಾಂ ಧಾತು. ಕಂಡ್ವಾದಿ ಲೇಟ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. **ಝೋಂತಃ** ಎಂಬುದರಿಂದ ಅಂತಾದೇಶ. **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಅಂತ್ಯ ಇಕಾರಲೋಪ. **ಕಂಡ್ವಾದಿಭ್ಯೋ ಯಕ್** (ಪಾ ಸೂ ೩-೧-೨೭) ಎಂಬುದರಿಂದ ಸ್ವಾರ್ಥದಲ್ಲಿ ಯಕ್ ಪ್ರತ್ಯಯ. **ಅತೋ ಲೋಪಃ** ಎಂಬುದರಿಂದ ತನ್ನಿಮಿತ್ತವಾಗಿ ಅಕಾರಲೋಪ. **ಸಂಯೋಗಾಂತಸ್ಯ ಲೋಪಃ** ಎಂಬುದರಿಂದ ಅಂತ್ಯತಕಾರಕ್ಕೆ ಲೋಪ. **ಸಪರ್ಯನ್** ಎಂದು ರೂಪನಾಗುತ್ತದೆ ಯತ್ ಎಂದು ಹಿಂದೆ

ಸಂಬಂಧವಿರುವುದರಿಂದ **ಯೆದ್ಪೈತ್ತಾನ್ನಿತ್ಯೆಮ್** ಎಂಬುದರಿಂದ ನಿಘಾತಸ್ವರ ಪ್ರತೀಷೆಧ ಬರುವುದರಿಂದ ಯಕಾರಸ್ವರ ಉಳಯುತ್ತದೆ.

ದಧಿರೇ— ಡುಧಾಞ್ ಧಾರಣಪೋಷಣಯೋಃ ಧಾತು. ಲಿಟ್ ಪ್ರಥಮಪುರುಷ ಬಹುವಚನರೂಪ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಯಜ್ಞಿಯಾನಿ – ಯಜ್ಞಾಯ ಅರ್ಹಾಣಿ ಯಜ್ಞಿಯಾನಿ **ಯಜ್ಞಾತ್ತ್ರಿಗಾ‍ಚ್ಯಂ ಘಖಞೌ** (ಪಾ.ಸೂ ೪-೧-೭೧) ಎಂಬುದರಿಂದ ಯಜ್ಞಶಬ್ದದ ಮೇಲೆ ಅರ್ಹಾರ್ಥದಲ್ಲಿ ಘ ಪ್ರತ್ಯಯ. **ಆಯನೇಯೀನೀ**—(ಪಾ ಸೂ ೭-೧-೨) ಎಂಬುದರಿಂದ ಆದಕ್ಕೆ ಇಯಾದೇಶ **ಯಸ್ಯೇತಿ ಚ** ಎಂಬುದರಿಂದ ಪ್ರತ್ಯಯನಿಮಿತ್ತವಾಗಿ ಪ್ರಕೃತಿಯ ಆಕಾರಕ್ಕೆ ಲೋಪ. ಪ್ರತ್ಯಯದ ಆದ್ಯುದಾತ್ತ ಸ್ವರದಿಂದ ಇಕಾರ ಉದಾತ್ತವಾಗುತ್ತದೆ ದ್ವಿತೀಯಾ ಬಹುವಚನಾಂತರೂಪ.

ಅಸೂದಯಂತ—ಷೂದ ಕ್ಷರಣೇ ಧಾತು ಭ್ವಾದಿ. ಪ್ರೇರಣಾ ತೋರುವುದರಿಂದ **ಹೇತುಮತಿ ಚ** ಎಂಬುದರಿಂದ ಣಿಚ್ ಣಿಜಂತದ ಮೇಲೆ ಲಙ್ ಪ್ರಥಮಪುರುಷ ಬಹುವಚನದಲ್ಲಿ ಝ ಪ್ರತ್ಯಯ. ಅಂತಾದೇಶ. ಅಂಗಕ್ಕೆ ಆಡಾಗಮ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ ॥ ೩ ॥

॥ ಸಂಹಿತಾಪಾಠಃ ॥

ಆ ರೋದಸೀ ಬೃಹತೀ ವೇವಿದಾನಾಃ ಪ್ರ ರುದ್ರಿಯಾ ಜಭ್ರಿರೇ ಯಜ್ಞಿಯಾಸಃ ।
ವಿದನ್ಮರ್ತೋ ನೇಮಧಿತಾ ಚಿಕಿತ್ವಾನಗ್ನಿಂ ಪದೇ ಪರಮೇ ತಸ್ಥಿವಾಂಸಂ ॥ ೪ ॥

॥ ಪದಪಾಠಃ ॥

ಆ । ರೋದಸೀ ಇತಿ । ಬೃಹತೀ ಇತಿ । ವೇವಿದಾನಾಃ । ಪ್ರ । ರುದ್ರಿಯಾ ।
ಜಭ್ರಿರೇ । ಯಜ್ಞಿಯಾಸಃ ।
ವಿದತ್ । ಮರ್ತಃ । ನೇಮಧಿತಾ । ಚಿಕಿತ್ವಾನ್ । ಅಗ್ನಿಂ । ಪದೇ । ಪರಮೇ ।
ತಸ್ಥಿವಾಂಸಂ ॥ ೪ ॥

॥ ಸಾಯಣಭಾಷ್ಯಂ ॥

ಬೃಹತೀ ಮಹತ್ಯೌ ರೋದಸೀ ದ್ಯಾವಾಪೃಥಿವ್ಯಾವಾ ವೇವಿದಾನಾ ಅತ್ಯರ್ಥಂ ಜ್ಞಾಪಯಂತಃ । ಕುತ್ಯಾಗ್ನಿರ್ವರ್ತತ ಇತಿ ಪರಸ್ಪರಂ ವದಂತೋ ದ್ಯಾವಾಪೃಥಿವ್ಯೋರ್ಮಧ್ಯೇ ವರ್ತಮಾನಾ ಇತ್ಯರ್ಥಃ । ಯದ್ವಾ । ಮಹತ್ಯೋರ್ದ್ಯಾವಾಪೃಥಿವ್ಯೋರ್ಮಧ್ಯ ಆ ವೇವಿದಾನಾ ಅಗ್ನಿಮುಪಲಭಮಾನಾಃ । ಏವಂಭೂತಾ ಯಜ್ಞಿಯಾಸೋ ಯಜ್ಞಾರ್ಹಾ ದೇವಾ ರುದ್ರಿಯಾಃ । ರುದ್ರೋಽಗ್ನಿಃ । ದೇವಾನಾಮಸುರೈಃ ಸಹ ಯುದ್ಧಸಮಯೇ ತೈರ್ದೇವೈಃ ಸ್ಥಾಪಿತಂ ಧನಮಪಹೃತ್ಯ ಗತವಂತಮಗ್ನಿಂ ದೇವಾ ಅಗತ್ಯಾಗ್ನಿಸಕಾಶಾದ್ಬಲೇನ ತದ್ಧನಮಗೃಹ್ಣನ್ । ತದಾನೀಂ ಸೋಽಗ್ನಿರರೋದೀತ್ । ತಸ್ಮಾದ್ರುದ್ರ ಇತ್ಯಾಖ್ಯಾಯತೇ । ತಥಾ ಚ ತೈತ್ತಿರೀಯಕಂ । ತದಗ್ನಿರ್ನ್ಯಕಾಮಯತ ತೇನಾಸಾಕ್ರಾಮತ್ ತದ್ದೇವಾ ವಿಜಿತ್ಯಾವರುರುತ್ಸಮಾನಾ ಅನ್ವಾಯನ್ ತದಸ್ಯ ಸಹಸಾದಿತ್ಸಂತ ಸೋಽರೋದೀದ್ಯದರೋದೀತ್ತದ್ರುದ್ರಸ್ಯ ರುದ್ರತ್ವಂ । ತೈ. ಸಂ. ೧-೫-೧-೧ । ಇತಿ । ತಸ್ಯ ರುದ್ರಸ್ಯಾರ್ಹಾಣಿ ಸ್ತೋತ್ರಾಣಿ ಪ್ರ ಜಭ್ರಿರೇ । ಪ್ರಜಹ್ರುರಿತ್ಯರ್ಥಃ । ಚಕ್ರುರಿತ್ಯರ್ಥಃ । ನೇಮಧಿತಾ । ನೇಮಶಬ್ದೋಽರ್ಧವಚನಃ । ತಥಾ ಚ ಯಾಸ್ಕಃ । ತ್ವೋ ನೇಮ ಇತ್ಯರ್ಧಸ್ಯ । ನಿ. ೩-೨೦ । ಇತಿ । ಸರ್ವೇಷಾಂ ದೇವಾನಾಮರ್ಧಭಾಗೇನ ಧೀಯತೇ ಧಾರ್ಯತ ಇತಿ ನೇಮಧಿತ ಇಂದ್ರಃ । ಸರ್ವೇ ದೇವಾ ಏಕೋಽರ್ಧಃ । ಇಂದ್ರ ಏಕ ಏವಾಪರೋಽರ್ಧ ಇತಿ ಯಾವತ್ । ತಥಾ ಚ ತೈತ್ತಿರೀಯಕಂ । ಯತ್ಸರ್ವೇಷಾಮರ್ಧಮಿಂದ್ರಃ ಪ್ರತಿ ತಸ್ಮಾದಿಂದ್ರೋ ದೇವತಾನಾಂ ಭೂಯಿಷ್ಠಭಾಕ್ತಮಃ । ತೈ. ಸಂ. ೫-೪-೪-೩ । ಇತಿ । ತೇನೇಂದ್ರೇಣ ಸಹಿತೋ ಮರ್ತೋ ಮರುದ್ಗಣಃ ಪರಮ ಉತ್ತಮೇಽಂತ್ಯೇ ಪದೇ ಸ್ಥಾನೇಽಶ್ವತ್ಥಾದೌ ತಸ್ಥಿವಾಂಸಂ ಸ್ಥಿತವಂತಮಗ್ನಿಂ ಚಿಕಿತ್ವಾಜ್ಞಾನಸ್ವಿದತ್ । ಅಲಭತ ॥ ವೇವಿದಾನಾಃ । ವಿದೇರ್ಜ್ಞಾನಾರ್ಥಾಲ್ಲಾಭಾರ್ಥಾದ್ವಾ ಯಙಂತಾಲ್ಲಟಃ ಶಾನಚ್ । ಬಹುಲಂ ಛಂದಸೀತಿ ಶಪೋ ಲುಕ್ । ಛಂದಸ್ಯುಭಯಥೇತಿ ಶಾನಚಃ ಆರ್ಧಧಾತುಕತ್ವಾದತೋಲೋಪಯಲೋಪೌ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ವಿದತ್ । ವಿದ್ಲೃ ಲಾಭೇ । ಲುಙ್ಲಙ್ಲಿಟ್ಸ್ವಾತ್ ಚ್ಲೇರಙಾದೇಶಃ । ನೇಮಧಿತಾ । ದಧಾತೇಃ ಕರ್ಮಣಿ ನಿಷ್ಠಾ । ಸುಧಿತ ವಸುಧಿತ ನೇಮಧಿತ।

ಸಾ. ೭-೪-೪೫ । ಇತಿ ಧಿಧಾವೋ ನಿಪಾತ್ಯತೇ । ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವಂ । ಸುಷಾಂ ಸುಲುಗಿತಿ ತೃತೀಯಾಯಾ ಆಕಾರಃ । ತಸ್ಥಿವಾಂಸಂ । ತಿಷ್ಠತೇರ್ಲಿಟಃ ಕ್ವಸುಃ । ವಸ್ವೇಕಾಜಾದ್ಧಸಾಮಿತೀಡಾಗಮಃ ॥

॥ ಪ್ರತಿಪದಾರ್ಥ ॥

ಬೃಹತೀ—ವಿಸ್ತಾರವಾದ । **ರೋದಸೀ**—ಭೂಮ್ಯಾಕಾಶಗಳನ್ನು । **ಆ ವೇವಿದಾನಾಃ**—(ಅಗ್ನಿಯು) ಇರುವನೆಂಬುದಕ್ಕೆ ಜ್ಞಾಪಿಸಿಕೊಳ್ಳುವ । **ಯಜ್ಞಿಯಾಸಃ**—ಯಜ್ಞಾರ್ಹರಾದ (ದೇವತೆಗಳು) । **ರುದ್ರಿಯಾ**—ರುದ್ರನಾಮಕ ಅಗ್ನಿಯನ್ನುದ್ದೇಶಿಸಿದ ಮಂತ್ರಗಳನ್ನು । **ಪ್ರ ಜಭ್ರಿರೇ**—ಉಚ್ಚರಿಸಿದರು । **ನೇಮಧಿತಾ**—ಅರ್ಧ ಹವಿರ್ಭಾಗಾರ್ಹನಾದ ಇಂದ್ರನೊಡಗೂಡಿದ । **ಮರ್ತಃ**—ಮರುದ್ಗಣವು । **ಪರಮೇ**—ಉತ್ತಮವಾದ (ಅಂತ್ಯವಾದ) । **ಪದೇ**—(ಅಶ್ವತ್ಥಾದಿ) ಸ್ಥಾನದಲ್ಲಿ । **ತಸ್ಥಿವಾಂಸಂ**—ಇರುವ । **ಅಗ್ನಿಂ**—ಅಗ್ನಿಯನ್ನು । **ಚಿಕಿತ್ವಾ**—ತಿಳಿದವರಾಗಿ । **ವಿದತ್**—(ಅಗ್ನಿಯನ್ನು) ಪಡೆದರು.

॥ ಭಾವಾರ್ಥ ॥

ಯಜ್ಞಾರ್ಹವಾದ ದೇವತೆಗಳು ವಿಸ್ತಾರವಾದ ಭೂಮ್ಯಾಕಾಶಗಳ ಮಧ್ಯೆ ಅಗ್ನಿಯನ್ನು ಅಸ್ತಿತ್ವಮಾಡುವನವರಾಗಿ, ರುದ್ರನಾಮಕ ಅಗ್ನಿಯನ್ನು ಸ್ತುತಿಸಿದರು ದೇವತೆಗಳ ಹವಿಸ್ಸಿನಲ್ಲಿ ಅರ್ಧಭಾಗಕ್ಕೆ ಆರ್ಹನಾದ ಇಂದ್ರನೊಡಗೂಡಿದ ದೇವತೆಗಳು (ಮರುತ್ತುಗಳು) ಉತ್ತಮವಾದ ಅಶ್ವತ್ಥಾದಿ ಸ್ಥಾನದಲ್ಲಿದ್ದ ಅಗ್ನಿಯನ್ನು ಪಡೆದರು.

English Translation.

Those who are to be worshipped, (the Gods), inquiring between the expansive heaven and earth (for Agni), recited (hymns) dedicated to Rudra; the troop of mortal (Maruts), with (Indra), the sharer of half the oblation, knowing where Agni was hiding, found him in his excellent retreat.

॥ ವಿಶೇಷವಿಷಯಗಳು ॥

ರೋದಸೀ—ಸ್ವರ್ಧೇ ಪುರಂಧೀ ಮೊದಲಾದ ಇಪ್ಪತ್ತನಾಲ್ಕು ದ್ಯಾವಾಪೃಥಿವೀನಾಮಗಳಲ್ಲಿ ರೋದಸೀ ಎಂಬ ಶಬ್ದವು ಪಠಿತವಾಗಿರುವುದರಿಂದ ರೋದಸೀ ಎಂದರೆ ಭೂಮ್ಯಂತರಿಕ್ಷಗಳೆಂದರ್ಥವು (ನಿ. ೩-೩೦)

ರುದ್ರಿಯಾಃ—ರುದ್ರಸ್ಯಾರ್ಹಾಣಿ ಸ್ತೋತ್ರಾಣಿ ಅಗ್ನಿಯನ್ನು ಸ್ತುತಿಮಾಡಲು ಯೋಗ್ಯವಾದ ಸ್ತೋತ್ರಗಳೆಂದು ಅರ್ಥವು ರುದ್ರ ಶಬ್ದವು ಅಗ್ನಿವಾಚಕವಾಗಿರುವುದು ದೇವತೆಗಳಿಗೂ ಅಸುರರಿಗೂ ಯುದ್ಧವು ನಡೆಯುತ್ತಿರುವಾಗ ದೇವತೆಗಳು ಬಚ್ಚಿಟ್ಟಿದ್ದ ಧನವನ್ನು ಅಗ್ನಿಯು (ದೇವತೆಗಳು ಕಾಣದಂತೆ) ದೇವತೆಗಳಿಗೆ ತಿಳಿಸದೆ ತೆಗೆದುಕೊಂಡುಹೋಗಿ ಅಡಗಿಸಿಕೊಂಡಿದ್ದನು. ಯುದ್ಧವಾದನಂತರ ದೇವತೆಗಳು ಅಗ್ನಿಯನ್ನು ಹುಡುಕಿಕೊಂಡುಹೋಗಿ

ತನ್ಮ್ಯ ಧನವನ್ನು ತನ್ಮ್ಯ ಸಾಮರ್ಥ್ಯದಿಂದ ಅಗ್ನಿಯಿಂದ ಹಿಂತಿರಿಗಿ ತಂದರು ಆಗ ಅಗ್ನಿಯು ಅತ್ತನು **ರುದಿರ್ ಅಶ್ರುವಿಮೋಚನೇ** ಎಂಬ ಧಾತುವಿನಿಂದ ನಿಷ್ಪನ್ನವಾದ ಕಾರಣ ರುದ್ರಶಬ್ದವು ಅಳುವುದು, ಎಂಬ ಅರ್ಥವನ್ನು ಬೋಧಿಸುವ ಕಾರಣದಿಂದ ಅಗ್ನಿಯು ಅತ್ತದ್ದರಿಂದ ರುದ್ರನೆಂದರೆ ಅಗ್ನಿಯು ಎಂದು ಅರ್ಥವಾಗಿರುತ್ತದೆ **ತದಗ್ನಿರ್ನ್ಯರ್ಕಾಮಯತ** ಎಂದು ಪ್ರಾರಂಭಿಸಿ **ಸೋ೭ರೋದೀದ್ಯದರೋದೀತ್ ತದ್ರುದ್ರಸ್ಯ ರುದ್ರತ್ವಂ** (ತೈ ಸಂ ೧-೫-೯-೧) ಎಂಬವರಿಗೂ ಇರುವ ವಚನವು ಈ ಅಭಿಪ್ರಾಯವನ್ನು ಬೋಧಿಸುವುದು ಅಗ್ನಿಯು ಅವಿತುಕೊಂಡಿದ್ದಾಗ ಯಜ್ಞದ ಹವಿರ್ಭಾಗಗಳನ್ನು ಹೊಂದಲು ಅರ್ಹವಾದ ದೇವತೆಗಳಿಗೆ ಹವಿರ್ಭಾಗಗಳು ಇಲ್ಲದ ಕಾರಣ ಅವರು ದೊಡ್ಡದಾಗಿರುವ ವ್ಯಾವಸೃಥಿವಿಗಳನ್ನು ಚೆನ್ನಾಗಿ ತಿಳಿದು ಇರುವುದರಿಂದ ಅಲ್ಲೆಲ್ಲಾ ಅಗ್ನಿಯನ್ನು ಹುಡುಕಿ ಅವನನ್ನು ಕಂಡು ಉಚಿತವಾದ ಸ್ತೋತ್ರಗಳಿಂದ ಸ್ತುತಿಮಾಡಿದರು ಎಂದು ಸಾಯಣರು ಅರ್ಥ ಮಾಡಿರುವರು

ನೇಮಧಿತಾ—**ನೇಮ** ಎಂಬ ಶಬ್ದವು ಅರ್ಧವು ಎಂಬ ಅರ್ಥವನ್ನು ಬೋಧಿಸುವುದು **ತ್ಯೋ ನೇಮ ಇತ್ಯರ್ಧಸ್ಯ** (ನಿ. ೩-೨೦) ಎಂದು ಯಾಸ್ಕರು ನೇಮ ಶಬ್ದವನ್ನು ಮೇಳೆ ಅದರ ಅರ್ಥವನ್ನು ವಿಮರ್ಶೆಮಾಡಿರುವಾಗ " ದೇವತೆಗಳು ಎಲ್ಲರ ಅರ್ಧಭಾಗದಿಂದ ಧರಿಸಲ್ಪಟ್ಟರುವ ಕಾರಣ ಇಂದ್ರನು **ನೇಮಧಿತಃ** ಎಂದು ಸ್ತುತಿಸಲ್ಪಟ್ಟನಾಗಿರುವನು ದೇವತೆಗಳೆಲ್ಲರೂ ಒಂದು ಅರ್ಧವು ಇಂದ್ರನು ಒಬ್ಬನೇ ಇನ್ನೊಂದು ಅರ್ಧವು " ಎಂದು ಹೇಳಿರುವರು. **ಯತ್ಸರ್ವೇಷಾಮರ್ಧಮಿಂದ್ರಃ** (ತೈ ಸಂ. ೫-೪-೮-೩) ಎಂಬ ವಚನವು ದೇವತೆಗಳೆಲ್ಲರ ಅರ್ಧಭಾಗದಿಂದ ಇರುವ ಇಂದ್ರನು ದೇವತೆಗಳೆಲ್ಲರಿಗಿಂತಲೂ ಅತಿಶಯವಾದ ಹವಿರ್ಭಾಗವುಳ್ಳವನು" ಎಂದು ಬೋಧಿಸುವುದು ಈ ವಚನವು ಇಂದ್ರನು ದೇವತೆಗಳಲ್ಲಿ ಅರ್ಧಭಾಗವಾಗಿರುವನೆಂಬ ಅಂಶದಲ್ಲಿ ಪ್ರಮಾಣವಾಗಿರುತ್ತದೆ

ಮರ್ತಃ—ಮರ್ತಶಬ್ದವು ಇಪ್ಪತ್ತೈದು ಮನುಷ್ಯವಾಚಕಗಳಲ್ಲಿ (ನಿ ೩-೬) ಉಕ್ತವಾಗಿರುವುದು. ಇಲ್ಲಿ **ಮರುದ್ಗಣಃ** ದೇವತೆಗಳ ಸಮೂಹವು ಎಂದು ಸಾಯಣರು ಅರ್ಥಮಾಡಿರುವರು ಸ್ಕಂದಸ್ವಾಮಿಗಳು—ರುದ್ರ ಶಬ್ದವು ಹದಿಮೂರು ಸ್ತೋತ್ರನಾಮಗಳಲ್ಲಿ (ನಿ ೩-೧೯) ಉಕ್ತವಾಗಿರುವುದರಿಂದ ರುದ್ರವೆಂದರೆ ಸ್ತೋತ್ರವು ಮರ್ತ ಶಬ್ದವು ಮನುಷ್ಯವಾಚಿಯಾಗಿರುವ ಕಾರಣ ಈ ಪದಕ್ಕೆ **ಚಿಕಿತ್ವಾ** ಎಂಬ ಪದವನ್ನು ವಿಶೇಷಣವನ್ನು ಮಾಡಿರುವರು. **ಚಿಕಿತ್ವಾ ಮರ್ತಃ**—ಜ್ಞಾನಿಯಾದ ಮನುಷ್ಯನು **ನೇಮಧಿತಾ**—(ಸಂಗ್ರಾಮ) ಯುದ್ಧಕ್ಕೆ ಸವನಾದ ಸಂಸಾರದಲ್ಲಿರುವನಾಗಿ ಪರಮಪದವಾದ ಪರಮಾತ್ಮರೂಪವಾದ ಉತ್ತಮವಾದ ಸ್ಥಿತಿಯಲ್ಲಿ ಇರುವ ಅಥವಾ ಯಜ್ಞವೇದಿಯಲ್ಲಿರುವ ಅಗ್ನಿಯನ್ನು ಯಜ್ಞಗಳಿಂದ ಪೂಜಿಸುವನು ಮತ್ತು ಸ್ತೋತ್ರಮಾಡುವನು.

ಆ ವೇವಿದಾನಾಃ—ತಿಳಿಯಬೇಕಾದವುಗಳೆಲ್ಲವನ್ನೂ ತಿಳಿದಿರುವ **ಯಜ್ಞಿಯಾಸಃ** ಯಾಗಶೀಲರಾದವರೂ ಕೂಡ ಅಗ್ನಿಯನ್ನು ಸ್ತೋತ್ರಮಾಡಿ (ಯಜ್ಞಮಾಡಿ) ಯಜ್ಞದಲ್ಲಿ ಹವಿರ್ಭಾಗಗಳಿಂದ ಪೂಜಿಸುವರು ಎಂದು ಅರ್ಥವನ್ನು ವಿವರಿಸಿರುವರು

ಯಜ್ಞಿಯಾಸಃ—**ಯಜ್ಞಾರ್ಹಾಃ ದೇವಾಃ**। ಯಜ್ಞದಿಂದ ಪೂಜಿಸಲ್ಪಡಲರ್ಹರಾದ ದೇವತೆಗಳು ಎಂದು ಸಾಯಣರೂ, **ಯಜ್ಞಸಂಪಾದಿನೋ ಮನುಷ್ಯಾಃ** ಯಾಗವನ್ನಾಡುವ ಮನುಷ್ಯರು ಎಂದು ಸ್ಕಂದಸ್ವಾಮಿಗಳೂ ಅರ್ಥವನ್ನು ವಿವರಿಸಿರುವರು

॥ ವ್ಯಾಕರಣಪ್ರಕ್ರಿಯಾ ॥

ಬೃಹತೀ—ಬೃಹತ್ ಶಬ್ದ. ದ್ವಿತೀಯಾ ದ್ವಿವಚನರೂಪ **ಬೃಹನ್ಮಹತೋರುಪಸಂಖ್ಯಾನಂ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ನೇವಿದಾನಾಃ—ವಿದ ಜ್ಞಾನೇ ಅಥವಾ ವಿದ್‌ಲೃ ಲಾಭೇ, ಧಾತು. ಇದಕ್ಕೆ ಅತಿಶಯಾರ್ಥ ತೋರುವಾಗ **ಧಾತೋರೇಕಾಚಃ ಕ್ರಿಯಾಸಮಭಿಹಾರೇ ಯೆಜ್** (ಪಾ ಸೂ. ೩–೧–೨೨) ಎಂಬುದರಿಂದ ಯಜ್ **ಸನ್ಯಙೋಃ** ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ ಬಂದ ಮೇಲೆ **ಗುಣೋಯಙ್‌ಲುಕೋಃ** (ಪಾ. ಸೂ ೭–೪–೮೨) ಎಂಬುದರಿಂದ ಗುಣ. **ಸನಾದ್ಯಂತಾಧಾತವಃ ಸೂತ್ರ**ದಿಂದ ನೇವಿದ್ಯ ಎಂಬುದು ಧಾತುಸಂಜ್ಞೆಯನ್ನು ಹೊಂದುತ್ತದೆ. ಋಬಂತದ ಮೇಲೆ ಲಡರ್ಥದಲ್ಲಿ ಶಾನಚ್ ಪ್ರತ್ಯಯ **ಬಹುಲಂ ಛಂದಸಿ** ಎಂಬುದರಿಂದ ಶಪ್ಪಿಗೆ ಲುಕ್. **ಛಂದಸ್ಯುಭಯಥಾ** ಎಂಬುದರಿಂದ ಶಾನಚಿಗೆ ಆರ್ಧಧಾತುಕ ಸಂಜ್ಞೆಯು ಬರುವುದರಿಂದ **ಅತೋ ಲೋಪಃ** (ಪಾ. ಸೂ. ೬–೪–೪೮) ಎಂಬುದರಿಂದ ಯಜಿನ ಅಕಾರಕ್ಕೆ ಲೋಪ. **ಯಸ್ಯ ಹಲಃ** (ಪಾ. ಸೂ. ೬–೪–೪೯) ಎಂಬುದರಿಂದ ಯಕಾರಕ್ಕೆ ಲೋಪ. ನೇವಿದಾನ ಎಂದು ರೂಪವಾಗುತ್ತದ **ಅಭ್ಯಸ್ತಾನಾಮಾದಿಃ** (ಪಾ ಸೂ. ೬–೧–೧೮೯) ಎಂಬುದರಿಂದ ಶಾನಚಿಗೆ ಸಾರ್ವಧಾತುಕಸಂಜ್ಞೆಯೂ ಇರುವುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಯೆಜ್ಞಿಯಾಸಃ—ಪ್ರಥಮಾ ಬಹುವಚನದಲ್ಲಿ ಜಸ್ ಬಂದಾಗ **ಆಜ್ಜಸೇರಸುಕ್** (ಪಾ ಸೂ. ೭–೧–೫೦) ಎಂಬುದರಿಂದ ಅಸುಕಾಗಮ. ಸಕಾರಕ್ಕೆ ರುತ್ವ ವಿಸರ್ಗ

ವಿದನ್—ವಿದ್‌ಲೃ ಲಾಭೇ ಧಾತು. ಲಙ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ ಅಂತಾದೇಶ **ಇತಶ್ಚ** ಎಂಬುದರಿಂದ ಇಕಾರಲೋಪ. ಧಾತುವು ಲೃದಿತ್ತಾದುದರಿಂದ **ಪುಷಾದಿದ್ಯುತಾದಿ**—(ಪಾ. ಸೂ. ೩–೧–೫೫) ಎಂಬುದರಿಂದ ಲುಙ್‌ನಲ್ಲಿ ಪ್ರಾಪ್ತವಾದ ಚ್ಲಿಗೆ ಅಙಾದೇಶ. ಬೆತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. **ಬಹುಲಂ ಛಂದಸ್ಯಮಾಙ್ಯೋಗೇ೨ಪಿ** ಎಂಬುದರಿಂದ ಅಂಗಕ್ಕೆ ಅಡಾಗಮ ಬರುವುದಿಲ್ಲ. **ಸಂಯೋಗಾಂತಸ್ಯ ಲೋಪಃ** ಸೂತ್ರದಿಂದ ಅಂತ್ಯತಕಾರಕ್ಕೆ ಲೋಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣಸ್ವರ ಅಙ್ ಉಳಿಯುತ್ತದೆ.

ನೇಮಧಿತಾ—ಡುಧಾಞ್ ಧಾರಣಪೋಷಣಯೋಃ ಧಾತು ಇದಕ್ಕೆ ಕರ್ಮಣಿಯಲ್ಲಿ ಕ್ತಪ್ರತ್ಯಯ ನೇಮ ಎಂಬುದು ಉಪಪದವಾಗಿರುವಾಗ **ಸುಧಿತ ವಸುಧಿತ ನೇಮಧಿತ**—(ಪಾ ಸೂ. ೭–೪–೪೫) ಎಂಬುದರಿಂದ ಧಿಭಾವದಿಂದ ನಿಪಾತಿತವಾಗಿದೆ. **ತೃತೀಯಾಕರ್ಮಣಿ** (ಪಾ. ಸೂ ೬–೨–೪೮) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಇದಕ್ಕೆ ತೃತೀಯಾ ವಿಭಕ್ತಿಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ವಿಭಕ್ತಿಗೆ ಆಕಾರಾದೇಶ ಬರುತ್ತದೆ

ಚಿಕಿತ್ವಾನ್—ಕಿತ ಜ್ಞಾನೇ ಧಾತು. ಇದಕ್ಕೆ ಲಿಡರ್ಥದಲ್ಲಿ ಕ್ವಸು ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ ಚುತ್ವ ಕಿತ್ತಾದುದರಿಂದ ಪ್ರತ್ಯಯನಿಮಿತ್ತವಾಗಿ ಧಾತುವಿನ ಲಘೂಪಧಕ್ಕೆ ಗುಣ ಬರುವುದಿಲ್ಲ. ಪ್ರಥಮಾ ಸು ಪರವಾದಾಗ **ಅತ್ವಸಂತಸ್ಯ**—ಸೂತ್ರದಿಂದ ಉಪಧಾದೀರ್ಘ ಉಗಿತ್ತಾದುದರಿಂದ

ನುಮಾಗನು. **ಹಲ್‌ಜ್ಯಾಭ್ಯೋ**—ಸೂತ್ರದಿಂದ ಸುಲೋಪ ಸಂಯೋಗಾಂತಲೋಪದಿಂದ ಸಕಾರಲೋಪ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

ತಸ್ಥಿವಾಂಸಂ—ಷ್ಠಾ ಗತಿನಿವೃತ್ತೌ ಧಾತು. ಇದಕ್ಕೆ ಹಿಂದಿನಂತೆ **ಕ್ವಸುಶ್ಚ** (ಪಾ. ಸೂ. ೩-೨-೧೦೭) ಎಂಬುದರಿಂದ ಲಿಟ್‌ಗೆ ಕ್ವಸುರಾದೇಶ. **ವಸ್ವೇಕಾಜಾದ್ಧಸಾಂ** (ಪಾ ಸೂ. ೭-೨-೬೭) ಎಂಬ ನಿಯಮ ಸೂತ್ರದಿಂದ ಈ ಧಾತುವು ಏಕಾಜಾದುದರಿಂದ ಇದರ ಪರದಲ್ಲಿರುವ ವಸುವಿಗೆ ಇಡಾಗಮ. ಧಾತುವಿಗೆ ದ್ವಿತ್ವ. **ಶರ್ಪೂರ್ವಾಃ ಖಯಃ** ಎಂಬುದರಿಂದ ಅಭ್ಯಾಸದಲ್ಲಿ ತಕಾರಕ್ಕೆ ಶೇಷ. **ಆತೋಲೋಪ ಇಟಿಚ** (ಪಾ ಸೂ ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ತಸ್ಥಿವಸ್ ಶಬ್ದವಾಗುತ್ತದೆ ಇದಕ್ಕೆ ದ್ವಿತೀಯಾ ಏಕವಚನ ಪರವಾದಾಗ **ಅತ್ವಸಂತಸ್ಯಚಾಧಾತೋಃ** ಎಂಬುದರಿಂದ ಉಪಧಾದೀರ್ಘ **ಉಗಿದಚಾಂ ಸರ್ವ**-ಎಂಬುದರಿಂದ ನುಮಾಗನು. ಅದಕ್ಕೆ ಅನುಸ್ವಾರ ಪರಸವರ್ಣ. ॥ ೪ ॥

॥ ಸಂಹಿತಾಪಾಠಃ ॥

ಸಂಜಾನಾನಾ ಉಪ ಸೀದನ್ನಭಿಜ್ಞು ಪತ್ನೀವಂತೋ ನಮಸ್ಯಂ ನಮಸ್ಯನ್

ರಿರಿಕ್ವಾಂಸಸ್ತನ್ವಃ ಕೃಣ್ವತ ಸ್ವಾಃ ಸಖಾ ಸಖ್ಯುರ್ನಿಮಿಷಿ ರಕ್ಷಮಾಣಾಃ ॥ ೫ ॥

॥ ಪದಪಾಠಃ ॥

ಸಂ ಜಾನಾನಾಃ । ಉಪ । ಸೀದನ್ । ಅಭಿ ಜ್ಞು । ಪತ್ನೀವಂತಃ । ನಮಸ್ಯಂ । ನಮಸ್ಯನ್ನಿತಿ ನಮಸ್ಯನ್ ।

ರಿರಿಕ್ವಾಂಸಃ । ತನ್ವಃ । ಕೃಣ್ವತ । ಸ್ವಾಃ । ಸಖಾ । ಸಖ್ಯುಃ । ನಿ ಮಿಷಿ । ರಕ್ಷಮಾಣಾಃ ॥ ೫ ॥

॥ सायणभाष्यं ॥

घर्मार्भिष्ववे संजानानाना इत्येषा । अथोत्तरमिति खण्डे सूत्रितं । संजानानाना उप सीदन्नग्निज्ञ्ञ्ञ्ञ् दशभिर्विमस्तः । अ. ४-६ । इति ॥

हे अग्ने त्वां संजानानानाः समग्गच्छन्तोदेवा उप सीदन् । उपसीदन्तिस्वाप्नुवन्ति । उपसत्तिं कृत्वा च पत्नीवन्तः सपत्नीकाः सन्तोनमस्यं नमस्कारार्हमभिज्ञ्ञ् अभिमुख्येनावस्थितजानुयुक्तं त्वां नमस्यन् । अपूजयन् । पूजयित्वा च सख्युर्मित्रस्य तव निमिषि दर्शनेनिमित्तभूते सति रक्षमाणास्त्वयापरिरक्ष्यमाणाः सखा सखायोदेवाः स्वास्तन्वः स्वकीयानि शरीराणि रिरिक्वांसोऽनशनादिरूपेणदीक्षानियमेन रिक्तीकुर्वन्तः शोषयन्तः कृण्वते । यागानकुर्वन् । देवा वैयज्ञ्ञमतन्वत । ऐ. ब्रा. ३-८८ । इति श्रुतेः ॥ नमस्यन् । ननोवरिवश्चित्रज इति पूजार्थे क्यच् । उजि बहुलं छन्दस्यमाङ्योगेऽपीत्येडभावः । रिरिक्वांसः । रिचिर् विरेचने । लिटः क्वसुः । निमिषि । मिष स्पर्धायां । अत्रोपसर्गवशाद्दर्शनार्थः । संपदादिलक्षणोभावे क्विप् । रक्षमाणाः । कर्मणि लटः शानच् । यकि प्राप्ते व्यत्ययेन शप् ॥

॥ प्रतिपदार्थ ॥

(अग्ने—अग्नियेः) । संजानाना—(नीसिद्ध स्थलवन्नु) तिळदंधा (देवतेगळु) । उप सीदन्—(निन्नन्नु) समीपिसिदरु । नमस्यं—नमस्कारार्हनाद (निन्नन्नु) । पत्नीवन्तः—सपत्नीकरागि । अभिज्ञ्ञ्—अभिमुखवागि माडल्पट्ट जानुगळुळ्ळवरागि । नमस्यन्—नमस्करिसिदरु (पूजिसिदरु) । सख्युः—मित्रनाद (निन्न) । निमिषि—दर्शनवागलु । रक्षमाणाः—(निन्निंद) रक्षितराद । सखा—स्नेहितराद (देवतेगळु) । स्वाः तन्वः—तन्म शरीरगळन्नु । रिरिक्वांसः—(अनशनादिगळिंद) देहवन्नु शोषिसिदवरागि । कृण्वत—(यागगळन्नु) माडिदरु.

॥ भावार्थ ॥

एलैे अग्नियेः, नीनिद्द स्थलवन्नु तिळिद देवतेगळु, सपत्नीकरागि, निन्नन्नु समीपिसि, ज्ञानुगळन्नूरि निनगे नमस्करिसिदरु. मित्रनाद निन्न दर्शन मात्रदिंदलेे रक्षितरेंदु भावसिदवरागि, अनशनादिदीक्षाबद्धरागि, निन्न संबंधवाद यज्ञ्ञगळन्नु कैगॊंडरु

English Translation.

The Gods, discovering you, sat down, and with their wives paid reverential adoration to you upon their knees. Secure on beholding their friend, of being protected, your friends, the Gods, abandoned the rest of their bodies in sacrifice.

॥ ವಿಶೇಷನಿಷಯಗಳು ॥

ಘರ್ಮಾಭಿಷ್ಟವಕ್ಕಾಗಿ **ಸಂಜಾನಾನಾ** ಎಂಬ ಈ ಋಕ್ಕಿನ ಪ್ರಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ **ಅಥೋತ್ತರಂ** ಎಂಬ ಖಂಡದ **ಸಂಜಾನಾನಾ ಉಪ ಸೀದನ್ನಭಿಜ್ಞ್ವಾ ದೇಶಭಿರ್ವಿವಸ್ವತಃ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೪-೭).

ಸಂಜಾನಾನಾಃ—ಅಗ್ನಿಯ ವಿಷಯವನ್ನು ಚೆನ್ನಾಗಿ ತಿಳಿದಿರುವ ದೇವತೆಗಳೆಂದು ಸಾಯಣರೂ, ಮನುಷ್ಯರೆಂದು ಸ್ಕಂದಸ್ವಾಮಿಗಳೂ ಅರ್ಥವನ್ನು ಮಾಡಿರುವರು. ಪ್ರಥಮಾಂತ ಪದಗಳೆಲ್ಲವನ್ನೂ ದೇವತೆಗಳಿಗೆ ವಿಶೇಷಣವನ್ನಾಗಿ ಅರ್ಥಮಾಡಿರುವ ಸಾಯಣರು **ದೇವಾ ವೈ ಯಜ್ಞಮತನ್ವತ** (ಐ ಬ್ರಾ. ೨-೧೧) ಎಂಬ ಶ್ರುತಿಯನ್ನು ಪ್ರಮಾಣವಾಗಿ ಉದಹರಿಸಿ ದೇವತೆಗಳು ತಮ್ಮ ಪತ್ನಿಯರೊಡಗೂಡಿ, ನಿಯಮವಾಗಿರುತ್ತಾ ತಮ್ಮ ಶರೀರವನ್ನೂ ಅನಶನಾದಿನಿಯಮಗಳಿಂದ ಕೃಶವನ್ನಾಗಿ ಮಾಡಿಕೊಂಡು ತಮಗೆ ಅಭಿಮುಖನಾಗಿರುವ ನಮಸ್ಕಾರಾರ್ಹನಾದ ಅಗ್ನಿಯನ್ನು ಯಾಗಗಳಿಂದ ಪೂಜಿಸಿದರು. ಮತ್ತು ಅಗ್ನಿಯಿಂದ ಸಂರಕ್ಷಿತರಾಗಿದ್ದರು ಎಂದು ಅರ್ಥವನ್ನು ವಿವರಿಸಿರುವರು

ಸ್ಕಂದಸ್ವಾಮಿಗಳು ಈ ವಿಶೇಷಣಗಳೆಲ್ಲವನ್ನೂ ಮನುಷ್ಯರ ಸರವಾಗಿ ಅನ್ವಯವನ್ನು ಮಾಡಿ ಇದೇ ಅರ್ಥವನ್ನು ಹೇಳಿದ್ದಾಗ್ಯೂ **ತನ್ವಃ ಕೃಣ್ವತೆ ಸ್ವಾಃ**—ಎಂಬ ಪದಗಳ ಅರ್ಥವನ್ನು ಬೇರೆ ವಿಧವಾಗಿ ಹೇಳಿರುವರು **ಕೃಣ್ವತೆ** ಎಂಬ ಪದವು **ಡುಕೃಞ್ ಕರಣೇ** ಎಂಬ ಧಾತುವಿನಿಂದ ನಿಷ್ಪನ್ನವಾಗಿರುವುದು ಇದು ಸಂ ಎಂಬ ಉಪಸರ್ಗಪೂರ್ವಕವಾಗಿ ಸಂಸ್ಕಾರ ಎಂಬ ಅರ್ಥದಲ್ಲಿ ಇಲ್ಲಿ ಪ್ರಯುಕ್ತವಾಗಿ ಇರುವುದು. ಇದರಿಂದ ಅಗ್ನಿಯನ್ನು ಯಜ್ಞಾದಿಗಳಿಂದ ಪೂಜಿಸುವ ಸಪತ್ನೀಕರಾದ ಯಜ್ಞಮಾಡುವ ಯಜಮಾನರುಗಳು ಅನುಗ್ರಹವನ್ನು ಮಾಡುವ ನಮಸ್ಕಾರಾರ್ಹನಾದ ಅಗ್ನಿಯಿಂದ ಸಂರಕ್ಷಿಸಲ್ಪಡುವವರಾಗಿ ವಿದ್ಯೈಶ್ವರ್ಯವೇ ಮೊದಲಾದವುಗಳಿಂದ ಸಂಸ್ಕಾರವನ್ನು ಹೊಂದುವರು ಎಂದು ಅರ್ಥವನ್ನು ಹೇಳಿರುವರು

ಅಭಿಜ್ಞು—**ಅಭಿಗತೇ ಜಾನುನೀ ಯಸ್ಮಿನ್ ಉಪಸದನೇ ಅಭಿಜ್ಞು. ಭೂಮೌ ಜಾನುನೀ ನಿಷಾದ್ಯ ಉಪಸೀದಂತೀತ್ಯರ್ಥಃ** ಅಗ್ನಿಯನ್ನು ಪೂಜಿಸುವಾಗ ಭೂಮಿಯಲ್ಲಿ ಮೊಣಕಾಲುಗಳನ್ನು ಊರಿ ಕೂತುಕೊಂಡು ಅಗ್ನಿಯನ್ನು ಪೂಜಿಸುವರು ಎಂದು ಅಭಿಜ್ಞು ಪದವನ್ನು ಕ್ರಿಯಾವಿಶೇಷಣವನ್ನಾಗಿ ಹೇಳಿರುವರು ಮತ್ತು ಶ್ರದ್ಧೆಯಿಂದ ಮಾಡುವ ಕರ್ಮಗಳಲ್ಲಿಯೂ ಮೊಣಕಾಲನ್ನು ಊರಿಕೊಂಡು ಮಾಡುವುದು ರೂಢಿಯಲ್ಲಿದ್ದಂತೆ ಕಂಡುಬರುವುದು.

ಅಚ್ಛಾ ಜಾಮು ದೆಷ್ಟಿಣತೋ ನಿಷದ್ಯೇಮಂ ಯಜ್ಞಮುಭಿಗೃಣೇತ ವಿಶ್ವೇ ।

(ಋ ಸಂ ೧೦-೧೫೫-೬)

ಎಂಬ ಋಕ್ಕು ಈ ವಿಷಯವನ್ನು ಸಮರ್ಥಿಸುವುದು

ರಿರಿಕ್ವಾಂಸಃ--ಅಗ್ನಿಯ ಅನುಗ್ರಹದಿಂದ ಅತಿಶಯವಾದ ಮಹಿಮೆಯನ್ನು ಹೊಂದಿರುವ ಶರೀರವುಳ್ಳವ ರೆಂದು ಸ್ಯಂದಸ್ವಾಮಿಗಳೂ, ಅಗ್ನಿಯನ್ನು ಪೂಜಿಸುವಾಗ ನಿಯಮಗಳಿಂದ ಕೃಶವಾದ ಶರೀರವುಳ್ಳವರೆಂದು ಸಾಯಣರೂ ಅರ್ಥವನ್ನು ಹೇಳಿರುವರು

। ವ್ಯಾಕರಣಪ್ರಕ್ರಿಯಾ ॥

ಸಂಜಾನಾನಾಃ—ಜ್ಞಾ ಅವಬೋಧನೇ ಧಾತು. ಇದಕ್ಕೆ ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ಜ್ಞಾ ಜನೋ ರ್ಜಾ** (ಪಾ. ಸೂ. ೬-೪-೭೯) ಎಂಬುದರಿಂದ ಧಾತುವಿಗೆ ಜಾದೇಶ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. ಜಾನಾನ ಎಂದು ರೂಪವಾಗುತ್ತದೆ **ಚಿತೇಃ** ಸೂತ್ರದಿಂದ ಅಂತೋದಾತ್ತಸ್ವರ ಬರುತ್ತದೆ. ಸಮಾಸವಾದಾಗ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಸೀದನ್—ಷದ್ಲೃ ವಿಶರಣಗತ್ಯವಸಾದನೇಷು. ಧಾತು ಇದಕ್ಕೆ ಲಙ್ ಪ್ರಥಮಪುರುಷ ಬಹುವಚನದಲ್ಲಿ **ಝೋಂತಃ** ಎಂಬುದರಿಂದ ಅಂತಾದೇಶ. ಇಕಾರಲೋಪ. **ಕರ್ತರಿ ಶಪ್** ಸೂತ್ರದಿಂದ ಶಪ್ ವಿಕರಣ. ಶಪ್ ಪರವಾದಾಗ **ಸಾರ್ವಧಾತುಕಾರ್ಧಧಾತೋಃ**—ಸೂತ್ರದಿಂದ ಧಾತುವಿಗೆ ಸೀದಾದೇಶ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಸಂಯೋಗಾಂತಲೋಪದಿಂದ ಪ್ರತ್ಯಯಾಂತ ತಕಾರಲೋಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ನಮಸ್ಯನ್—**ನಮೋವರಿವಶ್ಚಿತ್ರಙಃ ಕ್ಯಚ್** (ಪಾ. ಸೂ. ೩-೧-೧೯) ಎಂಬುದರಿಂದ ಪೂಜಾರ್ಥ ತೋರುವಾಗ ನಮಸ್ ಎಂಬ ಪ್ರಾತಿಪದಿಕದ ಮೇಲೆ **ಕ್ಯಚ್** ಪ್ರತ್ಯಯ. **ಸೇನಾದ್ಯೈಂತಾ ಧಾತವಃ** ಎಂಬುದರಿಂದ ನಮಸ್ಯ ಎಂಬುದು ಧಾತು ಸಂಜ್ಞೆಯನ್ನು ಹೊಂದುತ್ತದೆ ಇದರ ಮೇಲೆ ಲಙ್ ಪ್ರಥಮಪುರುಷ ಬಹುವಚನ ಬಂದಾಗ ಅಂತಾದೇಶ. ಇಕಾರಲೋಪ. **ಅತೋ ಗುಣೇ** ಎಂಬುದರಿಂದ ಪರರೂಪ. **ಬಹುಲಂ ಛಂದಸ್ಯಮಾಙ್-ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಸಂಯೋಗಾಂತಲೋಪದಿಂದ ಅಂತ್ಯ ತಕಾರಲೋಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ರಿರಿಕ್ವಾಂಸಃ—ರಿಚಿರ್ ವಿರೇಚನೇ ಧಾತು ಇದಕ್ಕೆ ಲಿಟ್ ಬಂದಾಗ **ಕ್ವಸುಶ್ಚ** (ಪಾ ಸೂ. ೩-೨-೧೦೭) ಎಂಬುದರಿಂದ ಕ್ವಸು ಪ್ರತ್ಯಯ **ತನ್ನಿಮಿತ್ತವಾಗಿ** ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಧಾತುವಿನ ಚಕಾರಕ್ಕೆ ಕುತ್ವ. ಪ್ರಥಮಾ ಬಹುವಚನದಲ್ಲಿ ಉಪಧಾದೀರ್ಘ ನುಮಾಗಮ. ಅದಕ್ಕೆ ಅನುಸ್ವಾರ. ಪ್ರತ್ಯಯ ಸ್ವರದಿಂದ ಆಕಾರ ಉದಾತ್ತವಾಗುತ್ತದೆ.

ಕೃಣ್ವತೆ—ಕೃವಿ ಹಿಂಸಾಕರಣಯೋಶ್ಚ ಧಾತು ಧಾತುಗಳಿಗೆ ಅನೇಕಾರ್ಥವಿರುವುದರಿಂದ ಕರಣಾರ್ಥದಲ್ಲಿ ಪ್ರಯುಕ್ತವಾಗಿದೆ. ಲಙ್ ಪ್ರಥಮಪುರುಷ ಬಹುವಚನದಲ್ಲಿ **ಅತ್ಮನೇಪದೇಷ್ವನತಃ** (ಪಾ. ಸೂ ೭-೧-೫) ಎಂಬುದರಿಂದ ಅತಾದೇಶ. **ಇದಿತೋನುಮ್ ಧಾತೋಃ** ಸೂತ್ರದಿಂದ ಧಾತುವಿಗೆ ನುಮಾಗಮ. **ಧಿನ್ವಿಕೃಣ್ವ್ಯೋರ ಚ** (ಪಾ ಸೂ. ೩-೧-೮೦) ಎಂಬುದರಿಂದ ಅಕಾರ ಅಂತಾದೇಶ ಉ ವಿಕರಣ. **ಅತೋ ಲೋಪಃ** ಸೂತ್ರದಿಂದ ಅಕಾರಲೋಪ ಯಣಾದೇಶ. **ಬಹುಲಂ ಛಂದಸ್ಯ**—ಎಂಬುದರಿಂದ ಆಡಾಗಮ ಒರುವುದಿಲ್ಲ ಅಲೋಪಕ್ಕೆ ಸ್ಥಾನಿವದ್ಭಾವ ಬರುವುದರಿಂದ ಉ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ ತಿಙಂತನಿಘಾತಸ್ವರ ಬರುತ್ತದೆ.

ನಿಮಿಷಿ - ವಿಷ ಸ್ಪರ್ಧಾಯಾಮ್. ಧಾತು **ಉಪಸರ್ಗೇಣ ಧಾತ್ವರ್ಥಃ ಬಲಾದನ್ಯಃ ಪ್ರತೀಯತೇ** ಎಂಬ ವಚನಾನುಸಾರವಾಗಿ ಉಪಸರ್ಗವಶದಿಂದ ಇಲ್ಲಿ ದರ್ಶನಾರ್ಥವು ತೋರುತ್ತದೆ **ಸಂಪದಾದಿಭ್ಯಃ ಕ್ವಿಪ್** ಎಂಬುದರಿಂದ ಕ್ವಿಪ್ ಪ್ರತ್ಯಯ ಸಮಾಸದಲ್ಲಿ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ **ಸಪ್ತಮಿ** ಏಕವಚನರೂಪ.

ರಕ್ಷಮಾಣಾಃ--ರಕ್ಷ ಪಾಲನೇ ಧಾತು ಇದಕ್ಕೆ ಕರ್ಮಣಿಯಲ್ಲಿ ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಶಾನಚ್ ಪರವಾದಾಗ **ಸಾರ್ವಧಾತುಕೇ ಯಕ್** ಎಂಬುದರಿಂದ ಯಕ್ ಪ್ರಾಪ್ತವಾದಾಗ ವ್ಯತ್ಯಯದಿಂದ ಶಪ್ **ಆನೇಮುಕ್** ಎಂಬುದರಿಂದ ಅಜಂತಕ್ಕೆ ಮುಕಾಗಮ ಲಸಾರ್ವಧಾತುಕವು (ಶಾನಚ್) **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತೆ ॥ ೫ ॥

॥ ಸಂಹಿತಾಪಾಠಃ ॥

ತ್ರಿಃ ಸಪ್ತ ಯದ್ಗುಹ್ಯಾನಿ ತ್ವೇ ಇತ್ಪದಾವಿದನ್ನಿಹಿತಾ ಯಜ್ಞಿ-
ಯಾಸಃ ।
ತೇಭಿ ರಕ್ಷಂತೇ ಅಮೃತಂ ಸಜೋಷಾಃ ಪಶೂಇ್ಚ ಸ್ಥಾತೄಇ್ಚ ರಥ-
ರಥಂ ಚ ಪಾಹಿ ॥ ೬ ॥

॥ पदपाठः ॥

त्रिः । सप्त । यत् । गुह्यानि । त्वे इति । इत् । पदा । अविदन् ।
निऽहिता । यज्ञियासः ।
तेभिः । रक्षन्ते । अमृतम् । सऽजोषाः । पशून् । च । स्थात्र्यान् ।
चरथम् । च । पाहि ॥ ६ ॥

॥ सायणभाष्यं ॥

त्रिः सप्त एकविंशतिसंख्याकानि गुह्यानि रहस्यानि वेदैकसमधिगम्यानि यदानि पदा पदानि । पद्यते गम्यते स्वर्ग एभिरिति व्युत्पत्त्या पदशब्देनात्र यज्ञा उच्यन्ते । ते चैकविंशतिसंख्याकाः । ज्योतिष्टोमहोमनैश्वदेवातदयः सप्त पाकयज्ञाः । अग्न्या-धेयदर्शपूर्णमासाचातदयः सप्त हविर्यज्ञाः । अग्निष्टोमोमात्यग्निष्टोमादयः सप्त सोमयज्ञाः । एवमेकविंशतिसंख्याकानि यज्ञलक्षणानि पदानि हे अग्ने त्वे इत् त्वय्येव निहिता स्थापितानि । तेषां सर्वेषां त्वत्प्रधानत्वात् । न ह्यग्निमंतरेण यागा अनुष्ठातुं शक्यंते । यज्ञियासो यज्ञार्हा अर्थित्वसामर्थ्यवैदुष्यादि-भिरधिकारहेतुभिर्युक्ताः । तथा चोक्तं । अर्थिनः समर्थान् विद्वान् शास्त्रेणापयुर्-दस्तः कर्मण्यधिकारिति । एवंविधलक्षणोपेता यजमानास्तानि पदान्यविदन् । अलभंत । लब्ध्वा च तेभिर्यज्ञलक्षणैः पदैरमृतममरणधर्माणं त्वां रक्षंतः । पालयंति । यजंतीत्यर्थः । सजोषास्त्वैर्यजमानैः समानप्रीतिस्त्वं पशून् गवाश्वादिपशूंश्च स्थात्र्यान् प्रेम्याद्यासु स्थावराणि चरथं पशुव्यतिरिक्तमन्यद्यत्त्वाणिजातमस्ति तच्च पाहि । रक्ष । तेषु हि रक्षितेषु त्वदीया यागाः कर्तुं शक्यंते नान्यथा । अतस्त्वमेवमुच्यस इत्यर्थः ॥ यत् । सुपां सुलुगिति विभक्तेर्लुक् । गुह्यानि । गुहायां भवानि । भवे छंदसीति यत् । यतोऽनाव इत्याद्युदात्तत्वं । त्वे । सुपां सुलुगिति सप्तम्याः शेआदेशः । अविदन् । विद्लृ लाभे । लुङि लृदित्त्वादङ् । पशून् स्थात्र्यान् । उभयतोऽभयथर्क्षु । पा. ७-३-७ । इत्युभयथाभावान्नकारस्य रुत्वाभावः ॥

॥ ಪ್ರತಿಪದಾರ್ಥ ॥

ಯಜ್ಞಿಯಾಸಃ—ಯಜ್ಞಮಾಡಲು ಅರ್ಹರಾದವರು (ಅಧಿಕಾರಿಗಳು) । **ತ್ರಿಃ ಸಪ್ತ**—ಇಪ್ಪತ್ತ್ರೊಂದು ಸಂಖ್ಯಾಕಗಳಾದ, (ಅಗ್ನ್ಯಾಧೇಯಾದಿ) । **ಗುಹ್ಯಾನಿ**—ರಹಸ್ಯವಾದ (ವೇದದಿಂದ ಮಾತ್ರ ತಿಳಿಯಬಹುದಾದ) । **ಯೆತ್**—ಯಾವ । **ಪದಾ**—ಯಜ್ಞಗಳನ್ನೆಯೋ (ಅವುಗಳನ್ನು) । **ತ್ವೇ ಇತ್**—ನಿನ್ನಲ್ಲೇ । **ನಿಹಿತಾ**—ಸ್ಥಾಪಿತವನ್ನಾಗಿ (ಆಚರಿಸಬೇಕಾದವುಗಳನ್ನಾಗಿ) । **ಅವಿರ್ದ**—ತಿಳಿದರು । **ತೇಭಿಃ**—ಆ ಯಾಗಗಳಿಂದ । **ಅಮೃತಂ**—ಅಮರನಾದ (ನಿನ್ನನ್ನು) । **ರಕ್ಷಂತೇ**—ಪಾಲಿಸುತ್ತಾರೆ (ಪೂಜಿಸುತ್ತಾರೆ) । **ಸಜೋಷಾಃ**—ಸಮಾನ ಪ್ರೀತಿಯುಳ್ಳ (ನೀನು) । **ಪಶೂನ್**—ಗೋವೇ ಮೊದಲಾದ ಪಶುಗಳನ್ನೂ । **ಸ್ಥಾತ್ರ್ಯನ್ ಚ**—ಸ್ಥಾಪರವಾದ ವ್ರೀಹ್ಯಾದಿಗಳನ್ನೂ । **ಚರಥಂ ಚ**—ಚರವಾದ ಇತರ ಪ್ರಾಣಿಗಳನ್ನೂ । **ಪಾಹಿ**—ಕಾಪಾಡು

॥ ಭಾವಾರ್ಥ ॥

ಯಜ್ಞಮಾಡಲು ಅರ್ಹರಾದ ಅಧಿಕಾರಿಗಳು ರಹಸ್ಯವಾದ ಅಗ್ನ್ಯಾಧೇಯಾದಿ ಇಪ್ಪತ್ತ್ರೊಂದು ಯಾಗಗಳನ್ನೂ ನಿನ್ನಲ್ಲೇ ಆಚರಿಸಬೇಕಾದವುಗಳನ್ನಾಗಿ ತಿಳಿದು, ಅಮರನಾದ ನಿನ್ನನ್ನು ಆ ಯಾಗಗಳಿಂದ ಪೂಜಿಸುತ್ತಾರೆ. ಅದೇ ರೀತಿ ಪ್ರೀತಿಯುಕ್ತನಾಗಿ ನೀನು, (ಅವರ) ಗೋವುಗಳು, ವ್ರೀಹ್ಯಾದಿಗಳು ಮತ್ತು ಇತರ ಪಶುಗಳನ್ನೂ (ಯಾಗ ಸಾಧನಗಳಾದುದರಿಂದ) ರಕ್ಷಿಸು.

English Translation

(Devout men), competent to offer sacrifices, have known the thrice seven mystic rites comprised in you, and with them, worshipped you do you, therefore, with like affection, protect their cattle, and all that (belongs to them), moveable or stationary.

॥ ವಿತೇಷವಿಷಯಗಳು ॥

ತ್ರಿಸ್ಸಪ್ತಗುಹ್ಯಾನಿ ಪದಾನಿ—**ಪದ್ಯತೇ ಗಮ್ಯತೇ ಸ್ವರ್ಗ ಏಭಿರಿತಿ ಪದಶಬ್ದೇನಾತ್ರ ಯಜ್ಞಾ ಉಚ್ಯಂತೆ** । ಇವುಗಳ ಆಚರಣೆಯಿಂದ ಸ್ವರ್ಗವು ಹೊಂದಲ್ಪಡುವಕಾರಣ ಪದಶಬ್ದವು ಯಜ್ಞವಾಚಿಯಾಗಿರುವುದು. ಔಪಾಸನಹೋಮ ವೈಶ್ವದೇವ ಇವೇ ಮೊದಲಾದ ಏಳು ಪಾಕಯಜ್ಞಗಳು, ಅಗ್ನ್ಯಾಧೇಯ, ದರ್ಶಪೂರ್ಣಮಾಸ ಎಂಬ ಇವೇ ಮೊದಲಾದವುಗಳು ಏಳು ಹವಿರ್ಯಜ್ಞಗಳು, ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ ಎಂಬ ಇವೇ ಮೊದಲಾದವುಗಳು ಏಳು ಸೋಮಯಜ್ಞಗಳು ಇವೆಲ್ಲವೂ ಸೇರಿ ಇಪ್ಪತ್ತ್ರೊಂದು ಆಗುವುವು. ಇವುಗಳನ್ನು ಆಚರಿಸಲು ಅಗ್ನಿಯು ಇಲ್ಲದೇ ಆಗದಿರುವ ಕಾರಣ ಅಗ್ನಿಯಸ್ಥಾನಗಳಾಗಿ ಇವುಗಳು ಅಗ್ನಿಯನ್ನು ಪೂಜಿಸುವರಿಂದ ವೇದಮಾತ್ರದಿಂದಲೇ ತಿಳಿಯಲು ಯೋಗ್ಯವಾದವುಗಳಾಗಿ ಇರುವುವು.

ಯಜ್ಞಿಯಾಸಃ—**ಯಜ್ಞಾರ್ಹಾಃ** । ಯಜ್ಞಗಳನ್ನು ಮಾಡಲು ಸರಿಯಾದ ಯೋಗ್ಯತೆಯನ್ನು ಹೊಂದಿ ಇರುವವರು. ಯಜ್ಞವನ್ನು ನಿರವೇರಿಸಲು ಬೇಕಾಗುವ ಪದಾರ್ಥಗಳನ್ನು ಯಾಚನೆಮಾಡಿಯಾದರೂ ಸಿದ್ಧಮಾಡುವ ಸಾಮರ್ಥ್ಯವನ್ನು ಹೊಂದಿರುವುದು, ಯಜ್ಞದ ಕಾರ್ಯಗಳನ್ನು ಮಾಡುವ ಶಕ್ತಿಯನ್ನು ಹೊಂದಿರುವುದು, ಯಜ್ಞದ ಆಚರಣೆಯಲ್ಲಿ ಶಾಸ್ತ್ರದಲ್ಲಿ ಹೇಳಿರುವ ಕ್ರಮವನ್ನು ತಿಳಿಯುವ ಜ್ಞಾನವುಳ್ಳವರಾಗಿರುವುದು ಎಂಬ ಈ ಮೂರುವಿಧ ಸಾಮರ್ಥ್ಯವುಳ್ಳವರು ಯಜ್ಞವನ್ನು ಮಾಡಲು ಅಧಿಕಾರಿಗಳಾಗಿರುವರು. **ಅರ್ಥೀ ಸಮರ್ಥೋ ವಿದ್ವಾ ಶಾಸ್ತ್ರೇಣಾಪಯ್ಯುದಸ್ತಃ ಕರ್ಮಣ್ಯಧಿಕಾರೀ** ಎಂಬುದಾಗಿ ಶಾಸ್ತ್ರವೂ ಯಜ್ಞಾಧಿಕಾರಿಗಳನ್ನು ವಿನೇಚನೆಮಾಡಿ ಹೇಳಿರುವುದು ಈ ಕ್ರಮವನ್ನು ಅನುಸರಿಸಿ ಇರುವ ಯಜಮಾನರುಗಳು ಅಗ್ನಿಯ ಇಪ್ಪತ್ತೊಂದು ವಿಧವಾದ ಯಜ್ಞರೂಪವಾದ ಸ್ಥಾನಗಳನ್ನು ಎಂದರೆ ಇಪ್ಪತ್ತೊಂದು ಯಜ್ಞಕರ್ಮಗಳನ್ನು ತಿಳಿದಿರುವರು ಮತ್ತು ಈ ಕ್ರಮದಿಂದ ಅಗ್ನಿಯ ಅನುಗ್ರಹಕ್ಕೆ ಪಾತ್ರರಾಗುವರು

ಸಜೋಷಾಃ ಸ್ಥಾತ್ಯೈ ಚರಥಂ ಚ ಪಾಹಿ—ಯಜ್ಞವನ್ನು ಆಚರಿಸುವ ಯಜಮಾನರು ಅಗ್ನಿಯ ವಿಷಯದಲ್ಲಿ ಇರಿಸಿರುವ ಪ್ರೀತಿಗನುಸಾರವಾದ ಪ್ರೀತಿಯನ್ನು ಯಜಮಾನರ ವಿಷಯದಲ್ಲಿ ಹೊಂದಿರುವ ಅಗ್ನಿಯು—**ಸಜೋಷಾಃ** ಎಂಬ ಪದದಿಂದ ಹೇಳಲ್ಪಡುವನು ಸ್ಥಾವರರೂಪವಾಗಿರುವ ಮತ್ತು ಜಂಗಮ (ಚರ) ಪ್ರಾಣಿಗಳ ರೂಪದಿಂದ ಇರುವ ಯಜಮಾನರುಗಳ ಧನವನ್ನು ಅಗ್ನಿಯು ರಕ್ಷಿಸದಿದ್ದರೆ ಯಾಗಾದಿಗಳು ನಿರವೇರುವುದಿಲ್ಲವಾದ ಕಾರಣ ಅವುಗಳನ್ನು ರಕ್ಷಿಸು ಎಂದು ಅಗ್ನಿಯನ್ನು ಕುರಿತು ಪ್ರಾರ್ಥನೆಯು ಇಲ್ಲಿ ಭೋಧ್ಯವಾಗಿರುತ್ತದೆ.

ಸ್ಕಂದಸ್ವಾಮಿಗಳು ಭಾಷ್ಯದಲ್ಲಿ ಹೇಳಿರುವ ಕ್ರಮ.—

ತ್ರಿಃ ಸಪ್ತ ಯದ್ ಗುಹ್ಯಾನಿ ಪದಾನಿ—ಇಲ್ಲಿ ಒಂದು ಇತಿಹಾಸವನ್ನು ಹೇಳುವರು. ದೇವತೆಗಳು—ಇಪ್ಪತ್ತೊಂದು ಛಂದಸ್ಸುಗಳನ್ನೂ ಅಗ್ನಿಯಲ್ಲಿ ಗೂಢವಾಗಿ ಬಚ್ಚಿಟ್ಟಿದ್ದರು ಆಂಗಿರಾಗೋತ್ರರ ಋಷಿಗಳು ಅಗ್ನಿಯನ್ನು ಪ್ರಾರ್ಥಿಸಿ ಅವುಗಳನ್ನು ಅಗ್ನಿಯ ಅನುಗ್ರಹದಿಂದ ತಿಳಿದುಕೊಂಡರು ಈ ಇತಿಹಾಸವು ಇಲ್ಲಿ ಈ ಮಂತ್ರದಿಂದ ಸೂಚಿತವಾಗುತ್ತದೆ. ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ ಎಂಬ ಏಳು ಛಂದಸ್ಸುಗಳು. ಇವುಗಳಲ್ಲಿ ನಾಲ್ಕು ಛಂದಸ್ಸುಗಳು ಶ್ರೇಷ್ಠವಾದವುಗಳು ಇವುಗಳು ಪ್ರತಿಯೊಂದು ಛಂದಸ್ಸೂ ಬ್ರಾಹ್ಮ, ದೇವ, ಆರ್ಷ, ಎಂಬ ಭೇದದಿಂದ ಮೂರು ವಿಧವಾಗಿರುವುವು. ಅಥವಾ ಪೂರ್ಣ, ನ್ಯೂನ, ಅಧಿಕ, ಎಂಬ ಭೇದಗಳಿಂದ ಇಪ್ಪತ್ತೊಂದು ವಿಧಗಳಾಗುವುವು. ಪೂರ್ಣವೆಂದರೆ, ಆಯಾಯ ಛಂದಸ್ಸಿನ ಮರ್ಯಾದೆಗೆ ಅನುಸಾರವಾಗಿರುವ ಅಕ್ಷರಗಳಿಂದ ತುಂಬಿರುವುದು ಕಡಿಮೆಯಾದ ಅಕ್ಷರಗಳಿಂದ ಇರುವವು ನ್ಯೂನವೆನಿಸಿರುವವು. ಛಂದಸ್ಸಿನ ಮರ್ಯಾದೆಗಿಂತ ಮೀರಿ ಹೆಚ್ಚಾಗಿರುವ ಅಕ್ಷರಗಳನ್ನು ಹೊಂದಿರುವುದು ಅಧಿಕವೆನಿಸಿರುವುದು ಗಾಯತ್ರೀ ಛಂದಸ್ಸು ಇದೇ ಮೊದಲಾದವುಗಳು ಒಂದು ಅಕ್ಷರ ಅಥವಾ ಎರಡು ಅಕ್ಷರಗಳಿಂದ ಕಡಿಮೆಯಾಗಿರುವುದು ಒಂದು ಅಕ್ಷರವು ಕಡಿಮೆಯಾದಾಗ **ನಿಚೃತ್ ಗಾಯತ್ರೀ** ಎಂದು ಹೆಸರನ್ನು ಹೊಂದುವುದು. ಎರಡು ಅಕ್ಷರಗಳು ಕಡಿಮೆಯಾದಾಗ **ವಿರಾಡ್ ಗಾಯತ್ರೀ** ಎನಿಸಿರುವುದು. ಇದರಂತೆಯೇ ಒಂದು ಅಕ್ಷರವು ಅಧಿಕವಾದಾಗ **ಭೂರಿಕ್ ಗಾಯತ್ರೀ** ಎನಿಸಿರುವುದು. ಎರಡು ಅಕ್ಷರವು ಅಧಿಕವಾದಾಗ **ಸ್ವರಾಡ್ ಗಾಯತ್ರೀ** ಎನಿಸಿರುವುದು. ಗಾಯತ್ರೀ ಛಂದಸ್ಸಿಗೆ ಅಕ್ಷರಗಳ ನ್ಯೂನಾಧಿಕಭಾವವು ಉಂಟಾದಾಗ ನಿಚೃತ್, ವಿರಾಟ್, ಭೂರಿಕ್, ಸ್ವರಾಟ್ ಎಂಬ ನಾಮಾಂತರಗಳು ಬಂದರೂ ತನ್ನ ಪ್ರಸಿದ್ಧವಾದ ಗಾಯತ್ರವೆಂಬ ಹೆಸರು ಮಾತ್ರ ಹೋಗುವುದಿಲ್ಲ—

ನ ವಾ ಏಕೇನಾಕ್ಷರೇಣ ಛಂದಾಂಸಿ ವಿಯಂತಿ ನ ದ್ವಾಭ್ಯಾಂ

(ಆ ಬ್ರಾ. ೧-೧)

ಎಂದು ಶ್ರುತಿಯಲ್ಲಿಯೂ ಹೀಗೆ ಹೇಳಿರುವುದು. ಗಾಯತ್ರೀ ಛಂದಸ್ಸಿಗಿಂತಲೂ ಬೇರೆಯಾಗಿರುವ ಛಂದಸ್ಸುಗಳು **ಕೆಲವು** ಹೆಚ್ಚಾಗಿ ಇರುವುವು. ಇನ್ನೂ **ಕೆಲವು** ಛಂದಸ್ಸುಗಳು ಗಾಯತ್ರೀ ಛಂದಸ್ಸಿನ ವಿಚಾರಗಳಾಗಿ ಇರುವುವು ಆದ್ದರಿಂದ ಅವುಗಳನ್ನು ಬೇರೆ ಬೇರೆಯಾಗಿ ಎಣಿಕೆಮಾಡಿರುವುದಿಲ್ಲ. ಇದರಿಂದ ಛಂದಸ್ಸುಗಳು ಇಪ್ಪತ್ತೊಂದು ಆಗಿರುತ್ತವೆ ಗಾಯತ್ರಿಯೇ ಮೊದಲಾದ ಏಳು ಛಂದಸ್ಸುಗಳಲ್ಲಿರುವ ಅಕ್ಷರಗಳಲ್ಲಿರುವ ಅಕ್ಷರಗಳ ನ್ಯೂನಾಧಿಕಭಾವದಿಂದ ಛಂದಸ್ಸುಗಳು ಇಪ್ಪತ್ತೊಂದು ಆಗಲು ಕಾರಣವಾಗಿರುವುದು ಇದನ್ನು ಈ ಮಂತ್ರದಲ್ಲಿ **ತ್ರಿಃ ಸಪ್ತ ಪದಾನಿ** ಎಂದು ಹೇಳಿರುವುದು. **ಯಜ್ಞಿಯಾಸಃ**--ಯಜ್ಞಮಾಡಲು ಅರ್ಹರಾದ ಅಂಗಿರಾಋಷಿಗಳು ತಮ್ಮ ಜ್ಞಾನದ ಬಲದಿಂದ ಅಗ್ನಿಯಲ್ಲಿ ದೇವತೆಗಳು ಗೂಢವಾಗಿ ಇರಿಸಿದ್ದ ಈ ಛಂದಸ್ಸಿನ ಗುಣಗಳ ಮೂಲಕವಾಗಿ ಅಗ್ನಿಯ ಗುಣಗಳನ್ನು ತಿಳಿದುಕೊಂಡರು. ಅಗ್ನಿಯ ಪ್ರಭಾವವನ್ನು ಚೆನ್ನಾಗಿ ತಿಳಿದನಂತರ ಅವರು ದೇವತೆಯಾಗಿರುವ ಅಗ್ನಿಯನ್ನು ರಕ್ಷಿಸಿದರು ಅಂದರೆ ಆಯಾಯ ಛಂದಸ್ಸಿನ ಮಂತ್ರಗಳಿಂದ ಅಗ್ನಿಯನ್ನು ಸ್ತೋತ್ರಮಾಡಿದ್ದರಿಂದ ಅಗ್ನಿಯ ಗುಣಗಳು ಮರೆತುಹೋಗುವುದರಿಂದ ಅವುಗಳು ನಾಶವಾಗುವುವು ಆದ್ದರಿಂದ ಅಗ್ನಿಯ ಗುಣಗಳು ಪ್ರಖ್ಯಾತಿಯಾಗುವಂತೆ ಅಂಗಿರಾ ಋಷಿಗಳು ಮಾಡಿರುವ ಕಾರ್ಯಗಳು ಅಗ್ನಿಯ ರಕ್ಷಣವೆಂದು ಉಪಚರಿತವಾಗಿರುತ್ತವೆ **ಎಲೈ** ಅಗ್ನಿಯೇ ನೀನು ನಮ್ಮ ಪಶುಗಳನ್ನೂ ಸ್ಥಿರಚರಾತ್ಮಕವಾಗಿರುವ ನಮ್ಮ ಧನವೆಲ್ಲವನ್ನೂ ಕೂಡ ನಮ್ಮಲ್ಲಿ ಸಮನಾದ ಪ್ರೀತಿಯಿಂದ ರಕ್ಷಿಸು ಎಂದು ಪ್ರಾರ್ಥನೆಯು ಈ ಮಂತ್ರದ ಅರ್ಥವೆಂದು ಹೇಳಿರುವರು

॥ ವ್ಯಾಕರಣಪ್ರಕ್ರಿಯಾ ॥

ಪದಾ—ನಪುಂಸಕ ಬಹುವಚನದಲ್ಲಿ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ

ಯತ್--ಯಚ್ಛಬ್ದಕ್ಕೆ ಜಸ್ ಪರವಾದಾಗ **ಸುಸಾಂ ಸುಲುಕ್**—ಸೂತ್ರದಿಂದ ಜಸ್ಸಿಗೆ ಲುಕ್

ಗುಹ್ಯಾನಿ—ಗುಹಾಯಾಂ ಭವಾನಿ ಗುಹ್ಯಾನಿ **ಭವೇ ಛಂದಸಿ** (ಪಾ ಸೂ ೪-೪-೧೧೦) ಎಂಬುದರಿಂದ ಯತ್ ಪ್ರತ್ಯಯ. **ಯಸ್ಯೇತಿ ಚ** ಸೂತ್ರದಿಂದ ಗುಹಾ ಶಬ್ದದ ಆಕಾರಕ್ಕೆ **ಲೋಪ** ಬಹುವಚನರೂಪ **ಯತೋ೭ನಾವಃ** (ಪಾ ಸೂ ೬-೧-೭೫) ಎಂಬುದರಿಂದ ಸ್ವರಿತವು ಬಾಧಿತವಾಗಿ ಆದ್ಯುದಾತ್ತಸ್ವರ ಬರುತ್ತದೆ

ತ್ವೇ—ಯುಷ್ಮದ್ಶಬ್ದ ಸಪ್ತಮಿ ಏಕವಚನ ಪರವಾದಾಗ **ತ್ವಮಾವೇಕವಚನೇ** (ಪಾ ಸೂ ೭-೧-೩೨) ಎಂಬುದರಿಂದ ಮಪರ್ಯಂತಕ್ಕೆ ತ್ವಾದೇಶ. **ಸುಸಾಂ ಸುಲುಕ್**—ಎಂಬುದರಿಂದ ವಿಭಕ್ತಿಗೆ ೭ ಆದೇಶ **ಶೇಷೇ ಲೋಪಃ** (ಪಾ. ಸೂ ೭-೧-೬೦) ಸೂತ್ರದಿಂದ ಅದಿಗೆ ಲೋಪ **ಅತೋ ಗುಣೇ** ಸೂತ್ರದಿಂದ ಸರರೂಪ.

ಅನಿದನ್--ವಿದ್ ಲೃ ಲಾಭೇ ಧಾತು. ಲುಙ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ ಅಂತಾದೇಶ **ಇತಶ್ಚ** ಸೂತ್ರದಿಂದ ಇಕಾರಲೋಪ ಧಾತುವು ಲೃದಿತ್ತಾದುದರಿಂದ **ಪುಷಾದಿದ್ಯುತಾದಿ**—(ಪಾ ಸೂ ೩-೧-೫೫) ಎಂಬುದರಿಂದ ಲುಙಿನಲ್ಲಿ ಪ್ರಾಪ್ತವಾದ ಚ್ಲಿಗೆ ಅಙಾದೇಶ ಇದು ಜಿತ್ತಾದುದರಿಂದ ಇದನ್ನು ನಿಮಿತ್ತೀಕರಿಸಿ ಧಾತುವಿನ

ುಪಧೆಗೆ ಗುಣ ಬರುವುದಿಲ್ಲ ಆಂಗಕ್ಕೆ ಆಡಾಗಮ. ಸಂಯೋಗಾಂತಲೋಪದಿಂದ ತಕಾರ ಲೋಪ ಅತಿಜಂತದ ರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಯಜ್ಞಿಯಾಸಃ—ಯಜ್ಞಾಯ ಅರ್ಹಾಣಿ ಯಜ್ಞಿಯಾನಿ. ಅರ್ಹಾರ್ಥದಲ್ಲಿ ಯಜ್ಞಶಬ್ದದ ಮೇಲೆ **ಯಜ್ಞಾರ್ಹಿಗಾಭ್ಯಂ ಛಖಞೌ** (ಪಾ. ಸೂ. ೫-೧-೭೧) ಎಂಬುದರಿಂದ **ಛ** ಪ್ರತ್ಯಯ. **ಆಯನೇಯೀನಾ**— ಎಂಬುದರಿಂದ ಆದಕ್ಕೆ ಇಯಾದೇಶ. **ಯಸ್ಯೇತಿ ಚ** ಸೂತ್ರದಿಂದ ಇಕಾರಲೋಪ. ಯಜ್ಞಿಯ ಶಬ್ದಕ್ಕೆ ಶಸ್ ರವಾದಾಗ **ಅಜ್ಞಸೇರಸುಕ್** ಎಂಬುದರಿಂದ ಜಸ್ಸಿಗೆ ಅಸುಕಾಗಮ

ತೇಭಿಃ—ತಚ್ಛಬ್ದಕ್ಕೆ ತೃತೀಯಾ ಬಹುವಚನ ಭಿಸ್ ಪರವಾದಾಗ **ತ್ಯದಾದೀನಾಮಃ** ಸೂತ್ರದಿಂದ ಅತ್ವ. **ನಾ ಛಂದಸಿ** (ಪಾ ಸೂ ೭-೧-೧೦) ಎಂಬುದರಿಂದ ಭಿಸಿಗೆ ಐಸಾದೇಶ ಬರುವುದಿಲ್ಲ. **ಬಹುವಚನೇ ಝಲ್ಯೇತ್** ಸೂತ್ರದಿಂದ ಏತ್ವ ಸಕಾರಕ್ಕೆ ರುತ್ವ ವಿಸರ್ಗ.

ರಕ್ಷಂತೇ—ರಕ್ಷ ಪಾಲನೇ ಧಾತು ಲಟ್ ಪ್ರಥಮಪುರುಷ ಬಹುವಚನರೂಪ. ಅತಿಜಂತದ ಪರದಲ್ಲಿರುವುದ ಂದ ನಿಘಾತಸ್ವರ ಬರುತ್ತದೆ.

ಪಶೂನ್, ಸ್ಥಾತ್ರ್ಯನ್—ಈ ಎರಡು ಶಬ್ದಗಳಿಗೂ ಮುಂದೆ ಜಕಾರ ಪರದಲ್ಲಿರುವುದರಿಂದ **ನಶ್ಚವ್ಯಪ್ರಶಾನ್** ಪಾ. ಸೂ. ೮-೩-೭) ಎಂಬುದರಿಂದ ರುತ್ವವು ಪ್ರಾಪ್ತವಾದರೂ **ಉಭಯಥರ್ಕ್ಷು** (ಪಾ. ಸೂ. ೮-೩-೮) ಎಂಬುದ ಂದ ಎರಡು ರೀತಿಯಾಗಿಯೂ ಆಗುವುದು ಎಂದರೆ ವಿಕಲ್ಪವಾದುದರಿಂದ ಇಲ್ಲಿ ನಕಾರಕ್ಕೆ ರುತ್ವ ಬರುವುದಿಲ್ಲ.

ಚರಥಂ—ಚರ ಗತಿ ಭಕ್ಷಣಯೋಃ ಧಾತು ಇದಕ್ಕೆ ಟೆಣಾದಿಕವಾದ ಅಥ ಪ್ರತ್ಯಯ. ಪ್ರತ್ಯಯದ ಉದ್ಯುದಾತ್ತ ಸ್ವರದಿಂದ ಮಧ್ಯೋದಾತ್ತವಾದ ಶಬ್ದವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ಪಾಹಿ—ಪಾ ರಕ್ಷಣೇ. ಧಾತು. ಅದಾದಿ. ಲೋಣ್ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಸೇರ್ಹ್ಯಪಿಚ್ಚ** ಪಾ. ಸೂ. ೩-೪-೮೭) ಎಂಬುದರಿಂದ ಆದಕ್ಕೆ ಹಿ ಆದೇಶ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್ ತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ವಿದ್ವಾ ಅಗ್ನೇ ವಯುನಾನಿ ಕ್ಷಿತೀನಾಂ ವ್ಯಾನುಷಕ್ಛುರುಧೋ ಜೀವಸೇ ಧಾಃ ।

ಅಂತರ್ವಿದ್ವಾ ಅಧ್ವನೋ ದೇವಯಾನಾನತಂದ್ರೋ ದೂತೋ
ಅಭವೋ ಹವಿರ್ವಾಟ್ ॥ ೭ ॥

॥ ಪದಪಾಠಃ ॥

ವಿದ್ವಾನ್ । ಅಗ್ನೇ । ವಯುನಾನಿ । ಕ್ಷಿತೀನಾಂ । ವಿ । ಆನುಷಕ್ । ಶುರುಧಃ ।
ಜೀವಸೇ । ಧಾಃ ।
ಅಂತಃ ವಿದ್ವಾನ್ । ಅಧ್ವನಃ । ದೇವ ಯಾನಾನ್ । ಅತಂದ್ರಃ । ದೂತಃ ।
ಅಭವಃ । ಹವಿಃ ವಾಟ್ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಯುನಾನಿ । ಜ್ಞಾನನಾಮೈತತ್ ಇಹ ತು ಜ್ಞಾತವ್ಯೇ ವರ್ತತೇ । ಸರ್ವಾಣಿ ಜ್ಞಾತವ್ಯಾನಿ ವಿದ್ವಾನ್ ಜಾನಂಸ್ತ್ವಂ ಕ್ಷಿತೀನಾಂ ಯಜಮಾನಲಕ್ಷಣಾನಾಂ ಪ್ರಜಾನಾಂ ಜೀವಸೇ ಜೀವಿತುಂ ಶುರುಧಃ ಕ್ಷುದ್ರೂಪಸ್ಯ ಶೋಕಸ್ಯ ರೋಢಯಿತ್ರೀರಿಷೋಽನ್ನಾನ್ಯಾನುಷಕ್ ಅನುಷಕ್ತಂ ಸಂತತಂ ಯಥಾ ಭವತಿ ತಥಾ ವಿ ಧಾಃ । ವಿಧೇಹಿ । ಕುರ್ವಿತ್ಯರ್ಥಃ । ಏವಂ ಯಜಮಾನಾನನ್ನಸಮ್ಯಗ್ದಾನ್ಯೈಕೃತ್ವಾನಂತರಂ ಹವಿರ್ವಾಟ್ ತೈರ್ದೇವೇಭ್ಯಃ ಪ್ರೇತ್ಯಂ ಹವಿರ್ವಹನ್ದೂತೋಽಭವಃ । ದೇವಾನಾಂ ದೂತೋ ಭವಸಿ । ಕೀದೃಶಸ್ತ್ವಂ । ಅಂತರ್ವಿದ್ವಾನ್ ದ್ಯಾವಾಪೃಥಿವ್ಯೋರ್ಮಧ್ಯೇ ಜಾನನ್ । ಕಿಂ ಜಾನನ್ । ಅಧ್ವನೋ ಮಾರ್ಗಾನ್ । ಕೀದೃಶಾನ್ । ದೇವಯಾನಾನ್ । ದೇವಾ ಯೈರ್ಮಾರ್ಗೈರ್ಯಾಂತಿ ಗಚ್ಛಂತಿ ತಾಞ್ಜಾನನ್ನಿತ್ಯರ್ಥಃ । ಅತಂದ್ರಃ ಪುನರ್ಹವಿರ್ವಹನೇಽಸ್ಯನಲಸಃ ॥ ವಯುನಾನಿ । ಅಜ ಗತಿಕ್ಷೇಪಣಯೋಃ । ಆಜಿಯಮಿಶೀಙ್ಭ್ಯಶ್ಚ । ಉ. ೩-೬೧ । ಇತಿ ಕರ್ಮಣ್ಯನಪ್ರತ್ಯಯಃ । ಆಜೇರ್ವ್ಯಘಞಪೋಃ । ಪಾ ೨-೪-೫೬ । ಇತಿ ವೀಭಾವಃ । ಕ್ಷಿತೀನಾಂ । ಕ್ಷಿಯಂತಿ ನಿವಸಂತೀತಿ ಕ್ಷಿತಯೋ ಮನುಷ್ಯಾಃ । ಕ್ತಿಚ್ಕ್ತೌ ಚ ಸಂಜ್ಞಾಯಾಮಿತಿ ಕರ್ತರಿ ಕ್ತಿಚ್ । ಅಂತೋದಾತ್ತಾದ್ಭ್ರಸ್ವಾಂತಾತ್ಕ್ಷಿತಿಶಬ್ದಾದುತ್ತರಸ್ಯ ನಾಮೋ ನಾಮನ್ಯತರಸ್ಯಾಮಿತ್ಯುದಾತ್ತತ್ವಂ । ಶುರುಧಃ । ಶುಚಂ ರುಂಧಂತೀತಿ ಶುರುಧಃ । ಕ್ವಿಸ್ಯೇತಿ ಕ್ವಿಪ್ । ಪೂರ್ವಪದಸ್ಯಾಂತ್ಯಲೋಪಃ । ಸೃಷೋದರಾದಿತ್ವಾತ್ ॥

॥ ಪ್ರತಿಪದಾರ್ಥ ॥

ಅಗ್ನೇ- ಎಲೈ ಅಗ್ನಿಯೇ। **ವಯುನಾನಿ**—ಜ್ಞಾತವ್ಯಗಳಾದ ಎಲ್ಲವನ್ನೂ । **ವಿದ್ವಾ**—ತಿಳಿದ (ನೀನು) **ಕ್ಷಿತೀನಾಂ**—(ಯಜಮಾನರ) ಪ್ರಜೆಗಳ। **ಜೀವಸೇ**—ಜೀವಧಾರಣಮಾಡಲು। **ಶುರುಧಃ**—ಹಸಿವೆಯನ್ನು ಹೋಗಲಾಡಿಸುವ (ಅನ್ನಗಳನ್ನು) । **ಅನುಷಕ್**—ಸಂತತವಾಗಿ ಇರುವಂತೆ। **ವಿ ಧಾಃ**—ಮಾಡು। **ದೇವ-ಯಾನಾ**—ದೇವತೆಗಳು ಸಂಚರಿಸುವ। **ಅಧ್ವನಃ**—ಮಾರ್ಗಗಳನ್ನು । **ಅಂತರ್ವಿದ್ವಾ**—ಭೂಮ್ಯಾಕಾಶಗಳ ಮಧ್ಯೆ ತಿಳಿದವನಾಗಿ। **ಅತಂದ್ರಃ**—(ಹವಿರ್ವಹನದಲ್ಲಿ) ಅಲಸಿಕೆಯಿಲ್ಲದವನಾಗಿ। **ಹವಿರ್ವಾಟ್**—(ಪ್ರಜೆಗಳಿಂದ ದತ್ತವಾದ) ಹವಿಸ್ಸನ್ನು ವಹಿಸುವ। **ದೂತಃ**—ದೂತನು। **ಅಭವಃ**—ಆಗುತ್ತೀ.

॥ ಭಾವಾರ್ಥ ॥

ಸರ್ವಜ್ಞನಾದ ಎಲೈ ಅಗ್ನಿಯೇ, ಯಾಗ ಮಾಡತಕ್ಕ ಪ್ರಜೆಗಳ ಹಸಿವು ನಿವಾರಣೆಯಾಗುವುದಕ್ಕೋಸ್ಕರ ಅನ್ನವನ್ನು ಸತತವಾಗಿ ಅನುಗ್ರಹಿಸು (ಅನಂತರ) ಭೂಮ್ಯಾಕಾಶಗಳ ಮಧ್ಯೆ ದೇವತೆಗಳು ಸಂಚರಿಸುವ ಮಾರ್ಗವನ್ನು (ಚೆನ್ನಾಗಿ) ತಿಳಿದಿರುವ, ದೇವತೆಗಳಿಗೆ ಹವಿಸ್ಸನ್ನು ವಹಿಸುವವರೆಲ್ಲಿ ಸರ್ವದಾ ಜಾಗೃತನಾಗಿರುವ ನೀನು, (ಆ ಪ್ರಜೆಗಳಿಂದ ದತ್ತವಾದ) ಹವಿಸ್ಸನ್ನು ದೇವತೆಗಳಿಗೆ ಒಯ್ದುಕೊಡುವ ದೂತನಾಗು.

English Translation

Agni, you are cognizant of all things to be known, ever provide for the subsistance of men, grief-alleviating (food); so shall you be the diligent bearer of oblations, and messenger of the Gods, knowing the paths between (earth and heaven), by which they travel.

॥ ವಿಶೇಷವಿಷಯಗಳು ॥

ವಯುನಾನಿ—ವಯುನ ಶಬ್ದವು ಕೇತಃ, ಕೇತುಃ ಎಂಬ ಹನ್ನೊಂದು ಪ್ರಜ್ಞಾನಾವ ಗಳಲ್ಲಿ (ನಿ ೩-೧೩) ಉಕ್ತವಾಗಿರುವುದರಿಂದ ಜ್ಞಾನವೆಂದು ಅರ್ಥವು ಇಲ್ಲಿ ಜ್ಞಾತವ್ಯ, ಅಥವಾ ಜ್ಞೇಯ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುತ್ತದೆ **ತೈದೈಕ್ತಿರೂಪಾಣಿ ಪ್ರಜ್ಞಾನಾನಿ** ಆಗ್ನಿಯ ವಿಷಯದಲ್ಲಿ ಉಂಟಾಗಿರುವ ಭಕ್ತಿರೂಪವಾದ ಜ್ಞಾನಗಳು ಎಂದು ಸ್ಕಂದಸ್ವಾಮಿವಿವರಣೆಯು

ಕ್ಷಿತೀನಾಂ—ಕ್ಷಿತಿಶಬ್ದವು ಇಪ್ಪತ್ತೊಂದು ಪೃಥಿವೀನಾಮಗಳಲ್ಲಿ (ನಿ. ೨-೫) ಉಕ್ತವಾಗಿರುತ್ತದೆ. ಮತ್ತು- **ಮನುಷ್ಯಃ, ನರಃ,** ಎಂಬ ಇಪ್ಪತ್ತೈದು ನಾಮಗಳಲ್ಲಿ (ನಿ. ೩-೮) ಉಕ್ತವಾಗಿರುವುದರಿಂದ ಮನುಷ್ಯರು ಎಂದು ಅರ್ಥವು.

ಶುರುಧಃ—ಶುರುಧಃ ಆಪೋ ಭವಂತಿ ಎಂದು ನಿರುಕ್ತದಲ್ಲಿಉಕ್ತವಾಗಿರುವುದು.—

ಋತಸ್ಯ ಹಿ ಶುರುಧಃ ಸಂತಿ ಪೂರ್ವೀರ್ಯತಸ್ಯ ಧೀತಿರ್ವಜಿನಾನಿ ಹಂತಿ ।

(ಋ. ಸಂ. ೪-೨೩-೮)

ಎಂದು ಋಕ್ಕನ್ನು ಉದಹರಿಸಿರುವುದರಿಂದ (ನಿ. ೬-೧೬) ಶುರುಧಃ ಎಂದರೆ ನೀರುಗಳು ಎಂದು ಅರ್ಥವು

ದೇವಯಾನಾನ್—ದೇವಾಃ ಯೈಃ ಮಾರ್ಗೈಃ ಗಚ್ಛಂತಿ ದೇವತೆಗಳು ಸಂಚರಿಸುವ ಮಾರ್ಗಗಳು- ಎಂದು ಅರ್ಥವು. ಎಲೈ ಅಗ್ನಿಯೇ, ನೀನು ಯಜ್ಞಮಾಡುವ ಯಜಮಾನರುಗಳಿಗೆ ಹಸಿವೆಯು ಆಗದಿರುವಂತೆ, ಅನ್ನವನ್ನು ಯಾವಾಗಲೂ ಕೊಡು ಅದರಿಂದ ಅವರು ದೇವತೆಗಳ ಉದ್ದೇಶದಿಂದ ಅರ್ಪಿಸುವ ಹವಿರ್ಭಾಗಗಳನ್ನು ದೇವತೆಗಳಿಗೆ ತಲಪಿಸುವುದಕ್ಕಾಗಿ ದೇವತೆಗಳಿಗೆ ದೂತನಾಗಿರುವ ನೀನು ದೇವತೆಗಳು ಸಂಚರಿಸುವ ಮಾರ್ಗಗಳನ್ನು ತಿಳಿದುಕೊಂಡು ಇರುತ್ತೀಯೆ. ಆದ್ದರಿಂದ ಸೋಮಾರಿತನವಿಲ್ಲದಿರುವಂತೆ ಕೆಲಸಮಾಡು ಎಂದು ಯಜ್ಞಮಾಡುವ ಯಜಮಾನರುಗಳ ಪ್ರಾರ್ಥನೆಯು ಈ ಮಂತ್ರದಿಂದ ಉಕ್ತನಾಗಿರುತ್ತದೆ

॥ ವ್ಯಾಕರಣಪ್ರಕ್ರಿಯಾ ॥

ವಿದ್ವಾನ್ ಅಗ್ನೇ- -ದೀರ್ಘಾದಟಿ ಸಮಾನಪಾದೇ (ಪಾ ಸೂ ೮-೩-೯) ಎಂಬುದರಿಂದ ಸ-ಾರಕ್ಕೆ ರುತ್ವ. **ಆತೋ೭ಟಿ ನಿತ್ಯಂ** (ಪಾ ಸೂ. ೮-೩-೩) ಸೂತ್ರದಿಂದ ಆಕಾರಕ್ಕೆ ನಿತ್ಯಾನುನಾಸಿಕತ್ವ

ವಯುನಾನಿ—ಅಜ ಗತಿಕ್ಷೇಪಣಯೋಃ ಧಾತು ಇದಕ್ಕೆ **ಅಜಿ ಯುಮಿ ಶೀಙ್ಭ್ಯಶ್ಚ** (ಉ ಸೂ. ೩-೩೪೧) ಎಂಬುದರಿಂದ ಕರ್ಮಣಿಯಲ್ಲಿ ಉನಸ್ ಪ್ರತ್ಯಯ ಇದಕ್ಕೆ **ಆರ್ಧಧಾತುಕಂ ಶೇಷಃ** ಎಂಬುದರಿಂದ ಆರ್ಧಧಾತುಕ ಸಂಜ್ಞೆ ಬರುವುದರಿಂದ ಇದು ಪರವಾದಾಗ **ಅಜೇರ್ವ್ಯಘಞಪೋಃ** (ಪಾ. ಸೂ. ೭-೩-೫೬) ಘಞ್, ಅಪ್ ಈ ಎರಡು ಪ್ರತ್ಯಯಗಳನ್ನು ಬಿಟ್ಟು ಆರ್ಧಧಾತುಕ ಪರವಾದಾಗ ಧಾತುವಿಗೆ ವೀಭಾವ ಎಂಬುದರಿಂದ ಇಲ್ಲಿ ವೀಭಾವ ಬರುತ್ತದೆ ಪ್ರತ್ಯಯ ನಿಮಿತ್ತವಾಗಿ **ಆದಕ್ಕೆ** ಗುಣ. ಅಯಾದೇಶ. ವಯುನ ಎಂದು ರೂಪವಾಗುತ್ತದೆ ದ್ವಿತೀಯಾ ಬಹುವಚನರೂಪ ಪ್ರತ್ಯಯ ಸ್ವರದಿಂದ ಉಕಾರ ಉದಾತ್ತವಾಗುತ್ತದ

ಕ್ಷಿತೀನಾಂ— ಕ್ಷಿಯಂತಿ ನಿವಸಂತಿ ಇತಿ ಕ್ಷಿತಯೋ ಮನುಷ್ಯಾಃ ಕ್ಷಿ ನಿವಾಸಗತ್ಯೋಃ ಧಾತು **ಕ್ತಿಚ್ ಕ್ತಿಚಿ ಸಂಜ್ಞಾಯಾಂ** (ಪಾ ಸೂ ೩-೩-೧೭೪) ಎಂಬುದರಿಂದ ಇಲ್ಲಿ ಸಂಜ್ಞಾ ತೋರುವುದರಿಂದ ಕರ್ತರಿಯಲ್ಲಿ ಕ್ತಿಚ್ ಪ್ರತ್ಯಯ. ಇದು ಕಿತ್ತಾದುದರಿಂದ ಧಾತುವಿಗೆ ಇದನ್ನು ನಿಮಿತ್ತೀಕರಿಸಿ ಗುಣ ಬರುವುದಿಲ್ಲ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಇದಕ್ಕೆ ನಷ್ಠೀ ಬಹುವಚನದಲ್ಲಿ ಆಮ್ ಪ್ರತ್ಯಯ ಬಂದಾಗ **ಹ್ರಸ್ವನದ್ಯಾಪೋ ನುಟ್** ಎಂಬುದರಿಂದ ನುಡಾಗಮ **ನಾಮಿ ಸೂತ್ರದಿಂದ** ಅಜಂತಾಂಗಕ್ಕೆ ದೀರ್ಘ. ಅಂತೋದಾತ್ತವಾದ ಹ್ರಸ್ವದ ಪರದಲ್ಲಿ ನಾಮ್ ಬಂದುದರಿಂದ **ನಾಮನ್ಯತರಸ್ಯಾಂ** (ಪಾ. ಸೂ ೬-೧-೧೭೨) ಎಂಬುದರಿಂದ ನಾಮಿಗೆ ಆದ್ಯುದಾತ್ತ ಸ್ವರ ಬರುತ್ತದೆ

ಶುರುಧಃ—ಶುಚಂ ರುಂಧಂತಿ ಇತಿ ಶುರುಧಃ ರುಧಿರ್ ಆವರಣೇ ಧಾತು ಇದಕ್ಕೆ **ಕ್ವಿಪ್ ಚ** (ಪಾ ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ ಪೃಷೋದರಾದಿಯಲ್ಲಿ ಸೇರಿರುವುದರಿಂದ **ಪೃಷೋದರಾದೀನಿ ಯಥೋಪದಿಷ್ಟಂ** ಎಂಬುದರಿಂದ ಪೂರ್ವಪದದ (ಶುಚ್) ಅಂತ್ಯಕ್ಕೆ ಲೋಪ ಬರುತ್ತದೆ. ಶುರುಧ್ ಶಬ್ದವಾಗುತ್ತದ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ

ಜೀವಸೇ—ಜೀವ ಪ್ರಾಣಧಾರಣೇ ಧಾತು. ಇದಕ್ಕೆ ತುಮರ್ಥದಲ್ಲಿ **ತುಮರ್ಥೇ ಸೇಸೇಸನಸೇ**—(ಪಾ. ಸೂ. ೩-೪-೯) ಎಂಬುದರಿಂದ ಅಸೇ ಪ್ರತ್ಯಯ. ಪ್ರತ್ಯಯದ ಅದ್ಯುದಾತ್ತಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ. **ಕೃನ್ಮೇ ಜಂತೇಃ** ಎಂಬ ಸೂತ್ರದಿಂದ ಏಜಂತವಾದ ಕೃದಂತವಾದುದರಿಂದ ಅವ್ಯಯಸಂಜ್ಞಾ ಬರುತ್ತದೆ

ಧಾಃ—ಡುಧಾಞ್ ಧಾರಣಪೋಷಣಯೋಃ ಧಾತು. ಲೋಡರ್ಥದಲ್ಲಿ **ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ಲುಙ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತೆಶ್ಚ** ಸೂತ್ರದಿಂದ ಇಕಾರಲೋಪ. ಚ್ಲಿಗೆ ಪ್ರಾಪ್ತವಾದ ಸಿಚ್ಚಿಗೆ **ಗಾತಿಸ್ಥಾಘುಪಾಭೂಭ್ಯಃ**—(ಪಾ. ಸೂ ೨-೪-೭೭) ಎಂಬುದರಿಂದ ಲುಕ್ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಪ್ರತ್ಯಯ ಸಕಾರಕ್ಕೆ ರುತ್ವ. ವಿಸರ್ಗ. ಅತಿಜಂತದ ಪರದಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ.

ಅತಂದ್ರಃ—ನ ತಂದ್ರಃ ಅತಂದ್ರಃ. ನಞ್ ತತ್ಪುರುಷ ಸಮಾಸದಲ್ಲಿ **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ ೬-೨-೨) ಎಂಬುದರಿಂದ ಅವ್ಯಯ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಹವಿರ್ವಾಟ್—ಹವಿಃ ವಹತಿ ಇತಿ ಹವಿರ್ವಾಟ್ **ವಹ ಪ್ರಾಪಣೇ** ಧಾತು. ಇದಕ್ಕೆ ಛಂದಸ್ಸಿನಲ್ಲಿ **ವಹಶ್ಚ** (ಪಾ. ಸೂ. ೩-೨-೬೪) ಎಂಬುದರಿಂದ ಣ್ವಿ ಪ್ರತ್ಯಯ. ಣಿತ್ವಾದುದರಿಂದ **ಅತ ಉಪಧಾಯಾಃ** ಎಂಬುದರಿಂದ ಉಪಧಾವೃದ್ಧಿ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ॥ ೬ ॥

॥ ಸಂಹಿತಾಪಾಠಃ ॥

ಸ್ವಾಧ್ಯೋ ದಿವ ಆ ಸಪ್ತ ಯಹ್ವೀ ರಾಯೋ ದುರೋ ವ್ಯೃತಜ್ಞಾ ಅಜಾನನ್ ।
ವಿದದ್ಗವ್ಯಂ ಸರಮಾ ದೃಳ್ಹಮೂರ್ವಂ ಯೇನಾ ನು ಕ್ರಂ ಮಾನುಷೀ ಭೋಜತೇ ವಿಟ್ ॥ ೮ ॥

॥ पदपाठः ॥

सुऽआध्यः । दिवः । आ । सप्त । यह्वीः । राया । दुरः । वि ।
ऋतऽज्ञाः । अजानन् ।

विदत् । गव्यं । सरमा । दृळ्हं । ऊर्वं । येन । नु । क्रं ।
मानुषीः । भोजते । विट् ॥ ८ ॥

॥ सायणभाष्यं ॥

स्वाध्यः शोभनकर्मयुक्ता यह्वीर्यहृ्व्यो महत्यः सप्त गंगाद्याः सप्त नद्यो दिवो द्युलोकादागत्य भूमाम्यां प्रवहंतीति शेषः । हे अग्ने ईदृग्विधा नद्यस्त्वया स्थापिताः । अग्नौ होमे सति हि तेन तृप्तः सूर्यो वृष्टिं करोति । तस्मिन्नर्थे स्मृतिः पूर्वमुदाहृता । अतो वृष्टिद्वारा ग्निरेव नदीः करोतीत्युच्यते । तथा ऋतज्ञा ऋतं यज्ञं जानंतोऽंगिरसो राया वलनाम्ना सुरक्षितापहृतस्य-गोरूपस्य धनस्य दुरो द्वाराणि गमनमार्गान जानन् । त्वया ज्ञातवंतः । त्वत्साध्येन यागेन प्रीत इंद्रो गवामन्वेषणाय सरमां नाम देवशुनीं प्रेषितवान् । सा च सरमा गवां स्थानमवगत्येंद्रस्य न्यवेदयत् । इंद्रश्च तानंगिरसो गाः प्रापयत् । अत ऐतत्सर्वं त्वमेव कृतवान् । आंगिरोभ्यः सकाशाद्गव्यं गवि भवं दृळ्हं स्थूलं । बहुलमित्यर्थः । ऐवंविधं महोलक्षणमूर्वमन्नं सरमा देवशुनी विदत् । अलभत । किमित्येतत्पादपूरणं । येन नु येन हि गन्येन मानुषीः विट् मनोः संबंधिनीः प्रजा भोजतेः इदानीं भुंक्ते । तद्गव्यमपि परंपरयाग्निरेव करोति ॥ स्वाध्यः । सुआङ्पूर्वाद्धिञ्शब्बाज्जस्येरनेकाच इति यणादेशः । यह्वीः । वा छंदसीति पूर्वसवर्णदीर्घत्वं । गव्यं । सर्वत्र गोरजादिप्रत्ययप्रसंगे यद्वक्तव्यमिति भावार्थे यत् । ऊर्वं । ऊर्वीं हिंसार्थः । ऊर्वति क्षुधं हिनस्तीत्यूर्वमन्नं । सहाद्यच् । भोजतेः । भुज पालनाभ्यवहारयोः । श्नमि प्राप्ते व्यत्ययेन शप् ॥

॥ ಪ್ರತಿಪದಾರ್ಥ ॥

(**ಅಗ್ನೇ**—ಎಲೈ ಅಗ್ನಿಯೇ) । **ಸ್ವಾಧ್ಯಃ**—ಮಂಗಳಕರವಾದ ಕರ್ಮಯುಕ್ತರಾದ । **ಯೆಹ್ವೀಃ**—ಹೊಡ್ಡದಾದ । **ಸಪ್ತ**—ಏಳು (ಗಂಗಾನದಿಗಳು) । **ದಿವಃ**—ಸ್ವರ್ಗಲೋಕದಿಂದ (ಬಂದು ಭೂಮಿಯಲ್ಲಿ ಪ್ರವಹಿಸುತ್ತವೆ) । **ಋತಜ್ಞಾ**—ಯಜ್ಞಗಳನ್ನು (ಮಾಡುವ ವಿಧಾನವನ್ನು) ತಿಳಿದ (ಅಂಗಿರಸರು) । **ರಾಯಃ**—(ವಲಸಿಂದಸಹೃತವಾದ ಗೋರೂಪವಾದ) ಧನದ । **ದುರಃ**—ದ್ವಾರಗಳನ್ನು (ಗಮನ ಮಾರ್ಗಗಳನ್ನು) । **ಅಜಾನನ್**—ತಿಳಿದರು । **ಯೀಮ ನು**—ಯಾವ (ಗೋಸಂಬಂಧವಾದ ಕ್ಷೀರದಿಂದ) । **ಮಾನುಷೀ ವಿಟ್**—ಮನುಸಂಬಂಧಿಯಾದ ಪ್ರಜೆಯು । **ಭೂಜತೇ**—(ಈಗಲೂ) ಭುಜಿಸುತ್ತಾರೋ । **ತಂ**—ಅಂತಹ । **ಗವ್ಯಂ**—ಗೋವಿನಲ್ಲಿರುವ । **ದೃಳ್ಹಂ**—ಸ್ಥೂಲವಾದ (ಹೆಚ್ಚಾದ) । **ಊರ್ಧಂ**—(ಪಯೋರೂಪವಾದ) ಅನ್ನವನ್ನು । **ಸರಮಾ**—ದೇವಶುನಿಯು । **ವಿದತ್**—ಹೊಂದಿತು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನಿಂದಲೇ, ಗಂಗಾದಿ ಸಪ್ತಮಹಾನದಿಗಳು ಸ್ವರ್ಗದಿಂದ ಬಂದು ಭೂಲೋಕದಲ್ಲಿ ಹರಿಯುತ್ತಿವೆ. ನಿನ್ನಿಂದಲೇ, ಯಾಗಾದಿಗಳನ್ನು ತಿಳಿದ ಅಂಗಿರಸರು (ವಲಸಿಂದಸಹೃತವಾದ) ಗೋವುಗಳ ಮಾರ್ಗವನ್ನು ತಿಳಿದರು ನಿನ್ನಿಂದಲೇ ದೇವಶುನಿಯಾನ ಸರಮೆಯು ಗೋಕ್ಷೀರವನ್ನು ಪಡೆದಳು. ಮತ್ತು ನಿನ್ನಿಂದಲೇ ಈಗಲೂ ಪ್ರಜೆಗಳು ಗೋಕ್ಷೀರವನ್ನು ಪಡೆದು ಪುಷ್ಟರಾಗುತ್ತಾರೆ

English Translation.

The seven pure rivers that flow from heaven (are directed, Agni, by you ; the priests), skilled in sacrifices, knew the doors of the (cave where) the treasure, (their cattle), were concealed ; for you Sarama discovered the abundant milk of the cows with which man, the progeny of Manu still is nourished.

॥ ವಿಶೇಷವಿಷಯಗಳು ॥

ಯೆಹ್ವೀಃ—**ಅವನಯೇ, ಯೆಹ್ವ್ಯಃ**-ಎಂಬ ಮೂವತ್ತೇಳು ನದೀನಾಮಗಳಲ್ಲಿ ಈ ಶಬ್ದವೂ (ನಿ ೨-೨೪) ಉಕ್ತವಾಗಿರುವುದರಿಂದ ನದಿಗಳೆಂದು ಅರ್ಥವು. **ಮಹತ್, ಬೃಧ್ನಃ**-ಎಂಬ ಇಪ್ಪತ್ತೈದು ಮಹನ್ನಾಮಗಳಲ್ಲಿ (ನಿ. ೩-೧೩) ಉಕ್ತವಾಗಿರುವುದರಿಂದ ಮಹತ್ತಾದವುಗಳೆಂದೂ ಅರ್ಥವು ಈ ಋಕ್ಕಿನಲ್ಲಿ ಸಾಯಣರು ಎರಡು ವಾಕ್ಯಗಳನ್ನು ಮಾಡಿ ಅವುಗಳಿಗೆ ಪರಸ್ಪರಸಂಬಂಧವಿಲ್ಲದಿರುವಂತೆ ಅರ್ಥವನ್ನು ಮಾಡಿದರು ಒಟ್ಟಿನಲ್ಲಿ ಅಗ್ನಿಯ ಪ್ರಭಾವವು ಅತಿಶಯವಾಗಿರುವುದನ್ನು ಪ್ರಕಟಗೊಳಿಸಿರುವರು. ಈ ಋಕ್ಕಿನ ಮೊದಲನೆಯ ಅರ್ಧದಿಂದ ಅಗ್ನಿಯು ಸ್ವರ್ಗಲೋಕದಲ್ಲಿಯೂ ಪ್ರವಹಿಸುವ ಗಂಗೆಯೇ ಮೊದಲಾದ ಏಳು ದೊಡ್ಡ ನದಿಗಳು ಭೂಮಿಯಲ್ಲಿಯೂ ಹರಿಯುತ್ತವೆ ಯಜ್ಞ

ಮಾಡುವವರು ಅಗ್ನಿಯಲ್ಲಿ ಆರ್ಪಿಸುತ್ತಿರುವ ಆಹುತಿಗಳು ಸೂರ್ಯನಿಗೆ ತಲಪುವುವು. ಆದಿತ್ಯನಿಂದ ವೃಷ್ಟಿಯೂ ಅದರಿಂದ ಅನ್ನವೂ, ಅದರಿಂದ ಪ್ರಜೆಗಳೂ ಉತ್ಪನ್ನವಾಗುತ್ತಿರುವುವು ಈ ವಿಷಯವನ್ನು—

ಅಗ್ನೌ ಪ್ರಾಸ್ತಾಹುತಿಸ್ಸಮ್ಯಗಾದಿತ್ಯಮುಪತಿಷ್ಠತೇ ।
ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥

ಎಂಬ ಸ್ಮೃತಿವಚನವು ವಿಶದಪಡಿಸುವುದು. ಈ ಪ್ರಕಾರವಾಗಿ ಲೋಕದ ಆಭಿವೃದ್ಧಿ, ವೃಷ್ಟಿ, ನದಿಗಳ ಪ್ರವಾಹಗಳು ಇವುಗಳೆಲ್ಲಕ್ಕೂ ಅಗ್ನಿಯೇ ಮುಖ್ಯವಾದ ಕಾರಣನಾಗಿರುವನು

ಋತಜ್ಞಾಃ—ರಾಯಃ-ದುರಃ-ಅಜಾನರ್ತ—ಋತಜ್ಞ ಶಬ್ದವು—

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮ್ಯಾಸಃ ।
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋ೭ವಂತು ಪಿತರೋ ಹವೇಷು ॥

(ಋ ಸಂ ೧೦-೧೫-೧)

ಎಂಬ ಋಕ್ಕಿನಲ್ಲಿ ಉಕ್ತವಾಗಿರುವುದರಿಂದ ಪಿತೃವಾಚಕವಾಗಿರುತ್ತದೆ (ನಿ ೧೧-೧೯) **ಋತ** ಶಬ್ದವು ನೂರೊಂದು ಉದಕನಾಮಗಳಲ್ಲಿಯೂ ಪರಿತನಾಗಿರುವುದು (ನಿ ೨-೨೪)

ನ ಯಾತವ ಇಂದ್ರ ಜೂಜುವುರ್ನೋ ನ ವಂದನಾ ಶವಿಷ್ಠ ವೇದ್ಯಾಭಿಃ ।
ಸ ಶರ್ಧದರ್ಯೋ ವಿಷುಣಸ್ಯ ಜಂತೋರ್ಮಾ ಶಿಶ್ನದೇವಾಃ ಅಪಿ ಗುರ್ಋತಂ ನಃ ॥

(ಋ ಸಂ. ೫-೩-೩-೫)

ಎಂಬ ಋಕ್ಕಿನಲ್ಲಿ ಉದಹರಿಸಿರುವ **ಋತ** ಶಬ್ದಕ್ಕೆ (ನಿ ೪-೧೯) **ಸತ್ಯಂ ವಾ ಯಜ್ಞಂ ವಾ** ಎಂದು ಅರ್ಥವನ್ನು ಹೇಳಿರುವುದು **ಋತಜ್ಞ** ಶಬ್ದದಿಂದ ಸತ್ಯವನ್ನು ತಿಳಿದವರು, ಅಥವಾ ಯಜ್ಞವನ್ನು ಒಲ್ಲವರು ಎಂದು ಅರ್ಥವು.

ರಾಯಃ—ಎಂಬ ಶಬ್ದವು **ಧನಸ್ಯ**-ದ್ರವ್ಯದ ಎಂಬ ಅರ್ಥವನ್ನು ಬೋಧಿಸುವುದು- -

ಪರಿಷದ್ಯಂ ಹ್ಯರಣಸ್ಯ ರೇಕ್ಣೋ ನಿತ್ಯಸ್ಯ ರಾಯಃ ಪತಯಃ ಸ್ಯಾಮ ।

(ಋ. ಸಂ ೫-೨-೬-೨)

ಎಂಬ ಋಕ್ಕಿನಲ್ಲಿ **ರೈ** ಶಬ್ದವು ಧನವಾಚಕವಾಗಿರುವುದು ಎಂದು (ನಿ ೩-೩) ಉದಾಹರಿಸುವರು. ಮತ್ತು—

ಈಷಿರೇಣ ತೇ ಮನಸಾ ಸುತಸ್ಯ ಭಕ್ಷೀಮಹಿ ಪಿತ್ರ್ಯಸ್ಯೇವ ರಾಯಃ ।
ಸೋಮ ರಾಜರ್ ಪ್ರ ಣ ಆಯೂಂಷಿ ತಾರೀರಹಾನೀವ ಸೂರ್ಯೋ ವಾಸರಾಣಿ ॥

(ಋ ಸಂ ೬-೪-೧೨-೨)

ಎಂಬ ಋಕ್ಕಿನಲ್ಲಿಯೂ ರಾಯಃ ಎಂಬ ಶಬ್ದವು ಧನವಾಚಕವಾಗಿರುವುದು ಎಂದು (ನಿ. ೪-೨) ಉದಹರಿಸಿರುವರು. ಸತ್ಯವನ್ನೂ ಯಜ್ಞವನ್ನೂ ತಿಳಿದು ಇರುವ ಅಂಗಿರಾ ಋಷಿಗಳ ಗೋರೂಪವಾದ ಧನವನ್ನು ವಲನೆಂಬ ಅಸುರನು

ಅಪಹರಿಸಿದಾಗ ಆ ಅಸುರನಿಂದ ಅವುಗಳನ್ನು (ತಿರಿಗಿ) ಪುನಃ ಹೊಂದುವುದಕ್ಕಾಗಿ ಅವರು ಅಗ್ನಿಯ ಅನುಗ್ರಹದಿಂದ ಉಪಾಯಗಳನ್ನು ಮಾಡಿದರು. ಇಂದ್ರನನ್ನು ಉದ್ದೇಶಮಾಡಿಕೊಂಡು ಯಾಗಗಳನ್ನು ಆಚರಿಸಿದರು. ಆಗ ಇಂದ್ರನು ವಲಾಸುರನು ಇರುವ ವಾಸಸ್ಥಾನವನ್ನು ತಿಳಿಯುವುದಕ್ಕಾಗಿ ಸರಮಾ ಎಂದು ಹೆಸರುಳ್ಳ ದೇವತೆಗಳ ನಾಯಿಯನ್ನು ಕಳುಹಿಸಿದನು ಸರಮೆಯು ಅಂಗಿರಾಋಷಿಗಳ ಗೋವುಗಳು ಇರುವ ಪ್ರದೇಶವನ್ನು ಕಂಡ ಹಿಡಿದು ತಿಳಿಸಿತು. ಇಂದ್ರನು ವಲಾಸುರನನ್ನು ನಿಗ್ರಹಮಾಡಿ ಅಂಗಿರಾಋಷಿಗಳ ಧನವೆಲ್ಲವನ್ನೂ ಅವರಿಗೆ ಒಪ್ಪಿಸಿದನು. ಇದರಿಂದ ಸಂತುಷ್ಟರಾದ ಆ ಋಷಿಗಳು ಸರಮೆಗೆ ಹಾಲು ಮೊಸರು ಮೊದಲಾದವುಗಳನ್ನು ಹೆಚ್ಚಾಗಿ ಕೊಟ್ಟು ತೃಪ್ತಿಪಡಿಸಿದರು.

ದೃಳ್ಹಂ—ದೃಢ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು. ಈ ಪ್ರಕಾರವಾದ ಪ್ರಯೋಗವು ವೇದದಲ್ಲಿ ಮಾತ್ರ ಕಂಡುಬರುತ್ತದೆ.

ಊರ್ವ ಇವ ಸಪ್ರಥೇ ಕಾಮೋ ಅಸ್ಮೇ ತಮಾ ಪೃಣ ವಸುಪತೇ ವಸೂನಾಂ ।

(ಋ. ಸಂ ೩–೩೦–೧೯)

ಎಂಬ ಋಕ್ಕಿನ ವಾಕ್ಯದಲ್ಲಿ **ಊರ್ವ** ಶಬ್ದವು (ನಿ ೬–೨) ಅಗ್ನಿವಾಚಕವಾಗಿರುವುದು ಸಾಯಣರು ಈ ಶಬ್ದಕ್ಕೆ **ಪೆಯೋಲಕ್ಷಣಂ ಅನ್ನಂ** ಗೋವಿನಿಂದ ಉತ್ಪನ್ನವಾದ ಹಾಲು ಮೊದಲಾದ ತಿನ್ನುವ ಪದಾರ್ಥಗಳೆಂದು ಅರ್ಥವನ್ನು ವಿವರಿಸಿರುವರು. **ಊರ್ವತಿ ಕ್ಷುಧಂ ಹಿನಸ್ತಿ ಇತಿ ಊರ್ವಂ ಅನ್ನಂ**–ಹಸಿವೆಯನ್ನು ನಾಶಮಾಡುವ ಪದಾರ್ಥವು ಎಂದು ಊರ್ವಶಬ್ದಾರ್ಥ ವಿವರಣೆಯನ್ನು ಮಾಡಿರುವರು. ಸ್ವಂದಸ್ವಾಮಿಗಳು—

ಯೆಂತಾರೋ ಯೇ ಮಘವಾನೋ ಜನಾನಾಮೂರ್ವಾನ್ಪಯೆಂತ ಗೋನಾಂ ।

(ಋ ಸಂ ೭–೧೬–೭)

ತ ಏತಮೂರ್ವಂ ವಿ ಭಜಂತ ಗೋನಾಮಥೈತದ್ವಚಃ ಪಣಯೋ ವಮನ್ನಿತ್ ।

(ಋ ಸಂ ೧೦–೧೦೮–೪)

ಈ ಋಕ್ಕುಗಳಲ್ಲಿ ಊರ್ವಶಬ್ದವು ಸಮೂಹ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದರಿಂದ **ಗವ್ಯಂ** ಎಂಬ ಪದದೊಡನೆ ಅನ್ವಯವನ್ನು ಹೇಳಿ **ಗವ್ಯಂ ಊರ್ವಂ** ಗೋ ಸಮೂಹವು ಎಂದು ಅರ್ಥವನ್ನು ಹೇಳಿರುವರು. ಮತ್ತು ಈ ಋಕ್ಕಿನಲ್ಲಿ ಎರಡು ವಾಕ್ಯವಿರುವುದು ಎಂದು ಅಂಗೀಕರಿಸಿರುವರು ಅಂಗಿರಾಋಷಿಗಳ ಮತ್ತು ದೇವಗೋವುಗಳ ಪರವಾಗಿ ವ್ಯಾಖ್ಯಾನಮಾಡಿರುವರು **ಸ್ವಾಧ್ಯಃ**–ಮಂಗಳಕರವಾದ ಮನಸ್ಸುಳ್ಳ ಅಂಗಿರಾಋಷಿಗಳು **ದಿವಃ ಆ ಸಪ್ತೆ ಯೆಹ್ವೀಃ** ಸ್ವರ್ಗನೇ ಮೊದಲಾದ ಏಳು ಲೋಕಗಳನ್ನೂ, ಧನವು ಲಭಿಸುವ ಉಪಾಯಗಳನ್ನೂ, ಯಜ್ಞಗಳನ್ನೂ ಅಗ್ನಿಯ ಅನುಗ್ರಹದಿಂದ ತಿಳಿದುಕೊಂಡರು. ಅವರು ಜೀವಂತರಾಗಿರುವಾಗ ಯಜ್ಞಗಳನ್ನು ಆಚರಿಸಿ ಧನವನ್ನು ಹೊಂದಿ, ಜ್ಞಾನವಂತರಾಗಿ ಸುಖವನ್ನೂ ಅನುಭವಿಸಿ ಮರಣದನಂತರ ಸ್ವರ್ಗನೇ ಮೊದಲಾದ ಏಳು ಲೋಕಗಳನ್ನೂ ಹೊಂದಿದರು. ಮನುಷ್ಯರು ಮನುಷ್ಯಲೋಕದಲ್ಲಿರುವ ಗೋವುಗಳಿಂದ ಉಂಟಾಗುವ ಸುಖವನ್ನು ಅನುಭವಿಸುವದೂ ದೇವಗೋವುಗಳ ಅನುಗ್ರಹದಿಂದಲಾಗಲಿ, ಅಥವಾ ದೇವಗೋವುಗಳು ಕಾಮಧೇನುಗಳಾಗಿ ಈ ಲೋಕದ ಗೋವುಗಳಿಗೆ ಕಾರಣವಾಗಿರುವುದರಿಂದಲಾಗಲಿ ಉಂಟಾಗಿರುತ್ತದೆ ಎಂದು ವ್ಯಾಖ್ಯಾನಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ಸ್ಪಾರ್ಹ್ಯಃ –ಸು, ಆರ್ಹ್ ಉನಸಗರ್. ಧೈರ್ಯ ಚಿಂತಾಯಾಂ ಧಾತು. ಇದಕ್ಕೆ ಕ್ವಿಪ್ ಪರನಾದಾಗ **ಧ್ಯಾಯತೇಃ ಸಂಪ್ರಸಾರಣಂ ಚ** ಎಂಬುದರಿಂದ ಸಂಪ್ರಸಾರಣ, ಪೂರ್ವರೂಪ. ಸು ಆರ್ಹ್ ಪೂರ್ವಕ ಧೀ ಶಬ್ದಕ್ಕೆ ಜಸ್ ಪರವಾದಾಗ **ಏರನೇಕಾಚೋಽಸಂಯೋಗಪೂರ್ವಸ್ಯ** ಎಂಬುದರಿಂದ ಯಣಾದೇಶ ಉದಾತ್ತ ಸ್ಥಾನದಲ್ಲಿ ಯಣಾದೇಶ ಬಂದು ಅದರ ಪರದಲ್ಲಿ ವಿಭಕ್ತಿ ಬಂದುದರಿಂದ **ಉದಾತ್ತೆ ಸ್ವರಿತಯೋರ್ಯಣಃ ಸ್ವ**—ಎಂಬುದರಿಂದ ವಿಭಕ್ತಿಗೆ ಸ್ವರಿತಸ್ವರ ಬರುತ್ತದೆ

ಯಹ್ವೀಃ—ಯಹ್ವೀ ಶಬ್ದಕ್ಕೆ ಪ್ರಥಮಾ ಬಹುವಚನ ಜಸ್ ಪರನಾದಾಗ **ವಾ ಛಂದಸಿ** ಎಂಬುದರಿಂದ ಪೂರ್ವಸವರ್ಣದೀರ್ಘವು ಏಕಾದೇಶವಾಗಿ ಬರುತ್ತದೆ

ರಾಯಃ—ರೈ ಶಬ್ದ ಷಷ್ಠೀ ಏಕವಚನಾಂತರೂಪ **ಊಡಿದಂ ಪದಾದಿ**- (ಪಾ ಸೂ ೬-೧-೬೭) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಋತಜ್ಞಾಃ—ಋತಂ ಜಾನಂತಿ ಇತಿ ಋತಜ್ಞಾಃ ಜ್ಞಾ ಅವಬೋಧನೇ ಧಾತು. **ಕ್ವಿಪ್ ಚ** ಎಂಬುದರಿಂದ ಇದಕ್ಕೆ ಕ್ವಿಪ್ ಪ್ರತ್ಯಯ. ಪ್ರಥಮಾ ಬಹುವಚನಾಂತರೂಪ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ

ಅಜಾನನ್—ಜ್ಞಾ ಅವಬೋಧನೇ ಧಾತು ಲಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯಕ್ಕೆ ಅಂತಾದೇಶ. ಇಕಾರಲೋಪ **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. **ಜ್ಞಾಜನೋರ್ಜಾ** (ಪಾ ಸೂ ೭-೩-೭೯) ಎಂಬುದರಿಂದ ಧಾತುವಿಗೆ ಜಾದೇಶ. **ಶ್ನಾಭ್ಯಸ್ತಯೋರಾತಃ** ಎಂಬುದರಿಂದ ಆಕಾರಲೋಪ ಸಂಯೋಗಾಂತಲೋಪದಿಂದ ಅಂತ್ಯ ತಕಾರಕ್ಕೆ ಲೋಪ. ಅಂಗಕ್ಕೆ ಆಡಾಗಮ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ವಿದತ್—ವಿದ್ಲೃ ಲಾಭೇ ಧಾತು. ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. ಇಕಾರ ಲೋಪ. ಲೃದಿತ್ವಾದುದರಿಂದ **ಪುಷಾದಿದ್ಯುತಾದಿ**—(ಪಾ. ಸೂ. ೩-೧-೫೫) ಎಂಬುದರಿಂದ ಚ್ಲಿಗೆ ಅಙಾದೇಶ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ. ವಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಅಙ್ ಸ್ವರ ಉಳಿಯುತ್ತದೆ

ಗವ್ಯಂ—ಗವಿ ಭವಂ, ಗವ್ಯಂ. ಎಲ್ಲಾ ಕಡೆಯಲ್ಲಿಯೂ **ಗೋರಜಾದಿಪ್ರತ್ಯಯಪ್ರಸಂಗೇ ಯದ್ವಕ್ತವ್ಯಂ** ಎಂಬುದರಿಂದ ಭಾವಾರ್ಥದಲ್ಲಿ ಯತ್ ಪ್ರತ್ಯಯ. **ವಾಂತೋ ಯಿ ಪ್ರತ್ಯಯೇ** (ಪಾ. ಸೂ ೬-೧-೭೯) ಎಂಬುದರಿಂದ ಓಕಾರಕ್ಕೆ ಅವಾದೇಶ **ಯತೋನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಊರ್ವಂ—ಉರ್ವೀ ಧಾತುವು ಹಿಂಸಾರ್ಥದಲ್ಲಿ ಪಠಿತವಾಗಿದೆ. ಊರ್ವತಿ ಕ್ಷುಧಂ ಹನಸ್ತಿ ಇತಿ ಊರ್ವ ಮನ್ನಂ. ಪಚಾದಿಯಲ್ಲಿ ಸೇರಿರುವುದರಿಂದ **ನಂದಿಗ್ರಹಿ ಪಚಾದಿಭ್ಯೋ**—(ಪಾ. ಸೂ. ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ. ರೇಫಾಂತ ಉಪಧೆಗೆ ದೀರ್ಘ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ

ಮಾನುಷೀ—**ಮನೋರ್ಜಾತಾವಞ್ಯತೌ ಷುಕ್ಚ** (ಪಾ. ಸೂ. ೪-೧-೧೬೧) ಎಂಬುದರಿಂದ ಮನು ಶಬ್ದಕ್ಕೆ ಅಞ್ ಪ್ರತ್ಯಯ -ತತ್ಸಂನಿಯೋಗದಿಂದ ಷುಕಾಗಮ. ಙಿತ್ ಪ್ರತ್ಯಯವಾದುದರಿಂದ **ತದ್ಧಿತೇಷ್ವಚಾ**-ಎಂಬುದರಿಂದ ಆದಿವೃದ್ಧಿ. ಸ್ತ್ರೀತ್ವ ವಿವಕ್ಷಾ ಮಾಡಿದಾಗ ಅಞಂತವಾದುದರಿಂದ **ಟಿಡ್ಢಾಣಞ್**-ಎಂಬುದರಿಂದ ಙೀಪ್ ಪ್ರತ್ಯಯ. **ಙ್ನಿತ್ಯಾದಿರ್ನಿತ್ಯಮ್**-ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ.

ಭೋಜಸೇ—ಭುಜ ಪಾಲನಾಭ್ಯವಹಾರಯೋಃ ಧಾತು. ಪ್ರಥಮಪುರುಷ ಏಕವಚನದಲ್ಲಿ **ಭುಜೋಽನವನೇ** (ಪಾ. ಸೂ. ೧-೩-೬೬) ಎಂಬುದರಿಂದ ಆತ್ಮನೇಪದ ತ ಪ್ರತ್ಯಯ. **ಟಿತಆತ್ಮನೇ**-ಸೂತ್ರದಿಂದ ವಿತ್ವ ಪ್ರತ್ಯಯದಿಂದ ಶ್ನಮಿಗೆ ಶಪ್ ವಿಕರಣ. ತನ್ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ· ಯೇನ ಎಂದು ಹಿಂದೆ ಸಂಬಂಧ ವಿರುವುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ ॥ ೮ ॥

॥ ಸಂಹಿತಾಪಾಠಃ ॥

ಆ ಯೇ ವಿಶ್ವಾ ಸ್ವಪತ್ಯಾನಿ ತಸ್ಥುಃ ಕೃಣ್ವಾನಾಸೋ ಅಮೃತತ್ವಾಯ ಗಾತುಂ ।
ಮಹ್ನಾ ಮಹದ್ಭಿಃ ಪೃಥಿವೀ ವಿ ತಸ್ಥೇ ಮಾತಾ ಪುತ್ರೈರದಿತಿರ್ಧಾಯಸೇ ವೇಃ ॥ ೯ ॥

॥ ಪದಪಾಠಃ ॥

ಆ । ಯೇ । ವಿಶ್ವಾ । ಸ್ವ ಽಪತ್ಯಾನಿ । ತಸ್ಥುಃ । ಕೃಣ್ವಾನಾಸಃ । ಅಮೃತತ್ವಾಯ ।
ಗಾತುಂ ।
ಮಹ್ನಾ । ಮಹದ್ಭಿಃ । ಪೃಥಿವೀ । ವಿ । ತಸ್ಥೇ । ಮಾತಾ । ಪುತ್ರೈಃ ।
ಅದಿತಿಃ । ಧಾಯಸೇ । ನೇರಿತಿ ನೇಃ ॥ ೯ ॥

॥ ಸಾಯಣಭಾಷ್ಯಂ ॥

ಯ ಆದಿತ್ಯಾ ಅಮೃತತ್ವಾಯಾಮರಣತ್ವಸಿದ್ಧಯೇ ಗಾತುಂ ಮಾರ್ಗಮುಪಾಯಂ ಕೃಣ್ವಾನಾಸಃ ಕುರ್ವಾಣಾಃ ಸಂತೋ ವಿಶ್ವಾ ವಿಶ್ವಾನಿ ಸರ್ವಾಣಿ ಸ್ವಪತ್ಯಾನಿ ಶೋಭನಾನ್ಯಪತನಹೇತುಭೂತಾನಿ ಚತುರ್ದಶರಾತ್ರಷಟ್ತ್ರಿಂಶದ್ರಾತ್ರಾದಿತ್ಯಾನಾಮಯನಾದೀನಿ ಕರ್ಮಾಣ್ಯಾ ತಸ್ಥುಃ ಆಸ್ಥಿತವಂತಃ । ಕೃತವಂತ ಇತ್ಯರ್ಥಃ । ತಥಾ ಚ ತೈತ್ತಿರೀಯಕಂ । ಆದಿತ್ಯಾ ಅಕಾಮಯಂತ ಸುವರ್ಗಂ ಲೋಕಮಿಯಾಮೇತೀತಿ । ತ ಏತಗ್ಂ ಷಟ್ತ್ರಿಂಶದ್ರಾತ್ರಮಪಶ್ಯನ್ ತಮಾಹರನ್ ತೇನಾಯಜಂತೇತಿ ಚ । ತೈ. ಸಂ. ೭-೪-೬-೧ । ಮಹದ್ಭಿರನುಷ್ಠಾನೇನ ಮಹಾನುಭಾವೈಸ್ತೈಃ ಪುತ್ರೈಃ ಸಹಿತಾ ಮಾತಾ ಜನಯಿತ್ರ್ಯದಿತಿರದೀನಾ ಪೃಥಿವೀ ಧಾಯಸೇ ಸರ್ವಸ್ಯ ಜಗತೋ ಧಾರಣಾಯ ಮಹ್ನಾ ಸ್ವಕೀಯೇನ ಮಹತ್ತ್ವೇನ ವಿ ತಸ್ಥೇ । ವಿಶೇಷೇಣ ತಿಷ್ಠತಿ । ಹೇ ಅಗ್ನೇ ಯತಸ್ತ್ವಂ ವೇಃ ಆದಿತ್ಯೈರನುಷ್ಠಿತೇಷು ಯಾಗೇಷು ಚರುಪುರೋಡಾಶಾದೀನಿ ಹವೀಂಷ್ಯಭಕ್ಷಯಃ । ಅತ ಏತತ್ಸರ್ವಂ ಜಾತಮಿತ್ಯರ್ಥಃ ॥ ಕೃಣ್ವಾನಾಸಃ । ಕೃವಿ ಹಿಂಸಾಕರಣಯೋರ್ಧಾ । ವ್ಯತ್ಯಯೇನಾತ್ಮನೇಪದಂ । ಧಿನ್ವಿಕೃಣ್ವ್ಯೋರಚ್ಛೀತ್ಯುಪ್ರತ್ಯಯಃ । ತತ್ಸನಿಯೋಗೇನಾಕಾರಾಂತಾದೇಶಶ್ಚ । ತಸ್ಯಾತೋ ಲೋಪೇ ಸತಿ ಸ್ಥಾನಿವದ್ಭಾವಾದ್ಗುಣಾಭಾವಃ । ಶಾನಚಶ್ಚಿತ್ತ್ವಾದಂತೋದಾತ್ತತ್ವಂ । ಅಜ್ಜಸೇರಸುಕ್ । ಮಹ್ನಾ । ಮಹಿಮ್ನೋತ್ಯಸ್ಯ ವರ್ಣಲೋಪಶ್ಛಾಂದಸಃ । ಧಾಯಸೇ । ವಹಿಹಾಧಾಭ್ಯಶ್ಛಂದಸೀತಿ ದಧಾತೇರ್ಧಾವೇ ಽಸುನ್ । ಣಿದಿತ್ಯನುವೃತ್ತೇರಾತೋ ಯುಕ್ ಚಿಣ್ಕೃತೋರಿತಿ ಯುಕ್ । ವೇಃ । ವೀ ಗತಿಪ್ರಜನಕಾಂತ್ಯಶನಖಾದನೇಷು । ಅಜಾದಿಷ್ವದಾದಿತ್ವಾಚ್ಛಪೋ ಲುಕ್ । ಬಹುಲಂ ಛಂದಸ್ಯಮಾಙ್ಯೋಗೇ ಽಪೀತ್ಯಡಭಾವಃ । ಧಾಯಸ ಇತ್ಯಸ್ಯ ವಾಕ್ಯಾಂತರಗತತ್ವಾದಸ್ಯ ನಿಘಾತಾಭಾವಃ ॥

॥ ಪ್ರತಿಪದಾರ್ಥ

ಯೇ—ಯಾವ ಆದಿತ್ಯರು । **ಅಮೃತತ್ವಾಯ** ಅಮರಣತ್ವ ಸಾಧನೆಗಾಗಿ । **ಗಾತುಂ** ಮಾರ್ಗವನ್ನು (ಉಪಾಯವನ್ನು) । **ಕೃಣ್ವಾನಾಸಃ**— ಮಾಡುವವರಾಗಿ । **ವಿಶ್ವಾ**—ಎಲ್ಲಾ । **ಸ್ವಪತ್ಯಾನಿ**— ಮಂಗಳ

ಕರಗಳಾದ, ಬೀಳದೇ ಇರುವಂತೆ ಮಾಡುವ ಚತುರ್ದಶರಾತ್ರಾದಿ) ಕರ್ಮಗಳನ್ನು । **ಅ ತಸ್ಥುಃ**—ಮಾಡಿದರೋ। **ತೈಃ**—ಅಂತಹ । **ಮಹದ್ಭಿಃ**—(ಯಾಗಾನುಷ್ಠಾನದಿಂದ) ಮಹನೀಯರಾದ । **ಪುತ್ರೈಃ**—ಪುತ್ರರಿಂದ (ಯುಕ್ತ ಳಾದ)। **ಮಾತಾ**—ತಾಯಿಯಾದ । **ಅದಿತಿಃ**—ದೀನಳಲ್ಲದ । **ಪೃಥಿವೀ**—ಪೃಥ್ವಿಯು । **ಧಾಯಸೇ**—ಜಗದ್ಧಾರಣೆಗಾಗಿ । **ಮಹ್ನಾ**—ಸ್ವಕೀಯವಾದ ಮಹತ್ತ್ವದಿಂದ । **ವಿ ತಸ್ಥೇ**—ವಿಶೇಷವಾಗಿ ನಿಂತಿದ್ದಾಳೆ । **ನೇಃ**—(ಅದಿತ್ಯರಿಂದ ದತ್ತವಾದ ಪುರೋಡಾಶಾದಿಗಳನ್ನು) ಭಕ್ಷಿಸಿದೆ (ಆದ್ದರಿಂದ ಎಲ್ಲವನ್ನೂ ತಿಳಿದಿದ್ದೆ).

॥ ಭಾವಾರ್ಥ ।

ಆದಿತ್ಯರು, ಅಮರರಾಗಲು ಇಚ್ಛಿಸಿ, ತಾವು (ತಮ್ಮ ಸ್ಥಾನಗಳಿಂದ) ಬೀಳದೆ ಇರುವಂತೆ ಮಾಡುವ ಮಂಗಳಕರವಾದ ಯಾಗಗಳನ್ನು ಮಾಡಿ, ನಿನಗೆ ಪುರೋಡಾಶಾದಿಗಳನ್ನು ಅರ್ಪಿಸಿ, ಅದರಿಂದ ಮಹತ್ತ್ವವನ್ನು ಪಡೆದರು. ಇಂಥಾ ಮಹನೀಯರಾದ ಪುತ್ರರಿಂದ ಯುಕ್ತಳಾದ ದೀನಳಲ್ಲದ, ಪೃಥ್ವಿಯು ಜಗತ್ತನ್ನು ಧಾರಣ ಮಾಡುವುದಕ್ಕೋಸ್ಕರವೇ ನಿಂತಿದ್ದಾಳೆ

English Translation.

you have been fed, (Agni, with oblations), ever since the Aditya's, devising a road to immortality, instituted all (the sacred rites) that secured them from falling, and mother earth, Aditi, strove with her magnitude to uphold (the world), along with her mighty sons

॥ ವಿಶೇಷವಿಷಯಗಳು ॥

ಸ್ವಪತ್ಯಾನಿ—ಉತ್ತಮವಾದ ಅಥವಾ ಮಂಗಳಕರವಾದ ದುರ್ಗತಿಯನ್ನು ಉಂಟುಮಾಡದಿರುವುದರಲ್ಲಿ ಕಾರಣವಾದ ಕರ್ಮಗಳು-ಅದಿತಿ ಪುತ್ರರಾದ ದೇವತೆಗಳು ತಮ್ಮ ದೇವತ್ವವು ಯಾವಾಗಲೂ ಸ್ಥಿರವಾಗಿ ಇರುವುದಕ್ಕಾಗಿ ಚತುರ್ದಶರಾತ್ರ, ಷಟ್ತ್ರಿಂಶದ್ರಾತ್ರ, ಆದಿತ್ಯಾಯನ, ಎಂಬ ಇವೇ ಮೊದಲಾದ (ಕರ್ಮಗಳನ್ನು) ಯಜ್ಞಗಳನ್ನು ಆಚರಿಸಿದರು—

ಆದಿತ್ಯಾ ಆಕಾಮಯನ್ತ ಸುವರ್ಗಂ ಲೋಕಮಿಯಾಮೇತಿ ತ ಏತಗ್ಂ ಷಟ್ತ್ರಿಂಶದ್ರಾತ್ರಮು-ಪಶ್ಯ ನ್ತಮಾಹರನ್ತ ತೇನಾಯಜಂತ ಇತಿ ॥

(ತೈ. ಸಂ. ೭-೪-೬)

ಈ ಮಂತ್ರವು ಈ ಅಭಿಪ್ರಾಯವನ್ನು ಬೋಧಿಸುವುದರಲ್ಲಿ ಪ್ರಮಾಣವಾಗಿರುವುದು.

ಅದಿತಿಃ—ಅದಿತಿ ಶಬ್ದವು ಇಪ್ಪತ್ತೊಂದು ಪೃಥಿವೀನಾಮಗಳಲ್ಲಿ (ನಿ ೨-೫) ಉಕ್ತವಾಗಿರುತ್ತದೆ ಐವತ್ತೇಳು ವಾಙ್ನಾಮಗಳಲ್ಲಿಯೂ (ನಿ. ೨-೧೩) ಉಕ್ತವಾಗಿರುತ್ತದೆ ಒಂಭತ್ತು ಗೋನಾಮಗಳಲ್ಲಿ (ನಿ ೩-೯) ಉಕ್ತವಾಗಿರುತ್ತದೆ. ಇಪ್ಪತ್ತನಾಲ್ಕು ದ್ಯಾವಾಪೃಥಿವೀನಾಮಗಳ ಮಧ್ಯದಲ್ಲಿ (ನಿ ೩-೩೦) ಪಠಿತವಾಗಿ ಇರುತ್ತದೆ ಮತ್ತು **ಅದಿತಿ** ಶಬ್ದವು **ಅದೀನಾ ದೇವಮಾತಾ** (ನಿ ೪-೨೩) ಐತಿಹಾಸಕಪಕ್ಷದಲ್ಲಿ ದೇವತೆಗಳ ಜನನಿಯು ಎಂದು ಅರ್ಥವು.

ಅದಿತಿರ್ದ್ಯೌರದಿತಿರಂತರಿಕ್ಷಮದಿತಿರ್ಮಾತಾ ಸ ಪಿತಾ ಸ ಪುತ್ರಃ ।
ವಿಶ್ವೇದೇವಾ ಅದಿತಿಃ ಪಞ್ಚಜನಾ ಅದಿತಿರ್ಜಾತಮದಿತಿರ್ಜನಿತ್ವಂ ॥

(ಋ ಸಂ ೧೦-೮೪-೧೦)

ಈ ಋಕ್ಕಿನಲ್ಲಿ ಅದಿತಿಯ ಮಹಿಮೆಯು ಹೇಳಲ್ಪಡುವುದು ಇದರಿಂದಲೇ ಅದೀನಾ ಎಂದು ಅದಿತಿ ಶಬ್ದಕ್ಕೆ ಅರ್ಥವನ್ನು ಹೇಳಿರುತ್ತಾರೆ ಅದಿತಿ ಶಬ್ದವು ನಿರುಕ್ತದಲ್ಲಿ (ನಿ. ೧೧-೨೩) **ಅಥಾತೋ ಮಧ್ಯಸ್ಥಾನಾಃ ಸ್ತ್ರಿಯಃ** ಮಧ್ಯಸ್ಥಾನದೇವತೆಗಳಲ್ಲಿ ಸ್ತ್ರೀಯರನ್ನು ಉದಹರಿಸುವೆವು ಎಂದು ಪ್ರಾರಂಭಮಾಡಿ **ಅದಿತಿಃ** ಎಂಬ ಪದವು ಉಕ್ತವಾಗಿರುವುದು ಮತ್ತು **ಅದೀನಾ ದೇವಮಾತಾ** ಎಂದು ವ್ಯಾಖ್ಯಾನಮಾಡಿರುವರು.

ನೇಃ—ಏ ಎಂಬ ಧಾತುವು ಗಮನ, ಅಶನ, ಖಾದನ ಎಂಬ ಅರ್ಥಗಳಲ್ಲಿ ಪ್ರಸಿದ್ಧವಾಗಿರುವುದರಿಂದ ಹವಿಸ್ಸುಗಳನ್ನು ಭಕ್ಷಿಸಿರುತ್ತೀಯೆ ಎಂದು ಅರ್ಥವು. **ಅದಿತಿರ್ದ್ಯೌಃ** ಎಂಬ ಶ್ರುತಿಪ್ರತಿಪಾದ್ಯವಾದ ಮಹಿಮೆಯುಳ್ಳ ಅದಿತಿಯು ಬಹಳ ಮಹಿಮೆಯುಳ್ಳವರಾದ ಮಕ್ಕಳುಗಳಿಂದಲೆ ಜಗತ್ತೆಲ್ಲವನ್ನೂ ತನ್ನ ಮಹಿಮೆಯಿಂದ ಧರಿಸಲು ಶಕ್ತಳಾಗಿರುವುದು-ಅದಿತ್ಯರು ಅಗ್ನಿಯ (ಪ್ರಸಾದವನ್ನು) ಅನುಗ್ರಹವನ್ನು ಪಡೆಯುವುಕ್ಕಾಗಿ ಆಚರಿಸಿದ ಯಾಗಗಳಲ್ಲಿ ಆರ್ಪಿಸಿದ ಚರುಪುರೋಡಾಶಾದಿಗಳನ್ನು ಅಗ್ನಿಯು ಸ್ವೀಕರಿಸಿರುವುದರಿಂದ ಉಂಟಾಗಿರುತ್ತದೆ ಎಂದು ಅಗ್ನಿಯ ಪ್ರಭಾವನನ್ನು ವಿಶದಮಾಡಿ ಹೇಳಿರುವುದು

ಸ್ತಂದಸ್ಯುಮಿಗಳು--ಅಂಗಿರಾ ಋಷಿಗಳು ತಮ್ಮ ಪ್ರಭಾವಶಾಲಿಗಳಾದ ಪುತ್ರರಿಂದ ಕೂಡಿದವರಾಗಿ ಅಗ್ನಿಯನ್ನು ಸ್ತುತಿಮಾಡಿ ಬಹಳ ಧನಗಳನ್ನೂ ಮಕ್ಕಳನ್ನೂ ಹೊಂದಿದರು ಈ ಅಂಗಿರಾ ಋಷಿಗಳ ಅನುಗ್ರಹದಿಂದ ಭೂಮಿಯು ಮನುಷ್ಯರಿಗೆ ಸಸ್ಯಗಳನ್ನು ಉತ್ಪತ್ತಿ ಮಾಡಿಕೊಡುವುದೇ ಮೊದಲಾದ ಬಹಳ ವಿಧವಾದ ಉಪಕಾರಗಳನ್ನು ಉಂಟುಮಾಡಿಕೊಡುವುದು ಅಂಗಿರಾ ಋಷಿಗಳು ಇಂದ್ರನ ಸ್ನೇಹಿತರಾಗಿರುವ ಕಾರಣ ಭೂಮಿಯಲ್ಲಿ ವೃಷ್ಟಿಯು ಆಗುವಂತೆ ಅನುಗ್ರಹಿಸುವರು ವೃಷ್ಟಿಯು ಆಗುವುದರಿಂದ ಧರ್ಮವೂ, ಧರ್ಮಾಚರಣೆಯಿಂದ ದೇವತೆಗಳು ಮನುಷ್ಯರಿಗೆ ಉಪಕಾರಮಾಡುವುದೂ ಆಗಿರುತ್ತದೆ ಇವೆಲ್ಲವೂ ಅಗ್ನಿಯು ಅಂಗಿರಾ ಋಷಿಗಳು ಅರ್ಪಿಸುವ ಹವಿಸ್ಸನ್ನು ಸ್ವೀಕರಿಸಿ ತೃಪ್ತಿಯನ್ನು ಹೊಂದಿರುವುದರ ಫಲವಾಗಿರುತ್ತದೆ ಎಂದು ವ್ಯಾಖ್ಯಾನಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ವಿಶ್ವಾ—ವಿಶ್ವಾಸಿ ಎಂದಿರುವಾಗ **ಶೇಶ್ಛಂದಸಿ ಬಹುಲಮ್** ಎಂಬುದರಿಂದ ಶಿಗೆ ಲೋಪ.

ಸ್ವಪತ್ಯಾನಿ--ಶೋಭನಾನಿ ಅಪತ್ಯಾನಿ. **ನಞ್‌ಸುಭ್ಯಾಮ್** (ಪಾ ಸೂ ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ

ತಸ್ಥುಃ—ಷ್ಠಾ ಗತಿನಿವೃತ್ತೌ ಧಾತು ಲಿಟ್ ಪ್ರಥಮಪುರುಷ ಬಹುವಚನರೂಪ ಯಚ್ಛಬ್ದ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಕೃಣ್ವಾನಾಸಃ—ಕೃವಿ ಹಿಂಸಾಕರಣಯೋಶ್ಚ ಧಾತು. **ವ್ಯತ್ಯಯೋ ಬಹುಲಂ** ಎಂಬುದರಿಂದ ಆತ್ಮನೇ ಪದಿಯಾಗುತ್ತದೆ. ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ಧಿನ್ವಿಕೃನ್ವೋರಚ** (ಪಾ ಸೂ ೩-೧-೮೦) ಎಂಬುದರಿಂದ ಉವಿಕರಣ. ಆದರೊಡನೆ ಆಕಾರ ಅಂತಾದೇಶ. **ಇದಿತೋನುಮ್ ಧಾತೋಃ** ಎಂಬುದರಿಂದ ಧಾತುವಿಗೆ ನುಮಾಗನು **ಆಂತೋಲೋಪಃ** (ಪಾ ಸೂ. ೬-೪-೪೮) ಎಂಬುದರಿಂದ ಉ ನಿಮಿತ್ತಕವಾಗಿ ಆಕಾರಲೋಪ. **ಅಚಃ ಪರಸ್ಮಿನ್ ಪೂರ್ವವಿಧೌ** ಎಂಬುದರಿಂದ ಸ್ಥಾನಿವದ್ಭಾವ ಬರುವುದರಿಂದ ಉ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಕೃಣ-+ಆನ ಎಂದಿರುವಾಗ ಯಣಾದೇಶ ಶಾನಚ್ ಚಿತ್ವಾದುದುದರಿಂದ **ಚಿತೇಃ** ಸೂತ್ರದಿಂದ **ಅಂತೋದಾತ್ತಸ್ವರ** ಬರುತ್ತದೆ. ಬಹುವಚನ ಜಸ್ ಪರವಾದಾಗ **ಆಜ್ಜೇರಸುಕ್** (ಪಾ. ಸೂ ೭-೧-೫೦) ಎಂಬುದರಿಂದ ಜಸ್ಸಿಗೆ ಅಸುಗಾಗನು ಪೂರ್ವಸವರ್ಣದೀರ್ಘ **ಅಂತ್ಯಸಕಾರಕ್ಕೆ** ರುತ್ವ ವಿಸರ್ಗ

ಅಮೃತತ್ವಾಯೆ—ಅಮೃತಸ್ಯ ಭಾವಃ ಅಮೃತತ್ವಮ್, ತಸ್ಮೈ, **ತಸ್ಯಭಾವಸ್ತ್ವತಲೌ** ಎಂಬುದರಿಂದ ಭಾವಾರ್ಥದಲ್ಲಿ ತ್ವ ಪ್ರತ್ಯಯ ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ ಚತುರ್ಥೀ ಏಕವಚನರೂಪ

ಮಹ್ನಾ—ಮಹಿಮ್ನಾ ಎಂದು ರೂಪವಾಗುವಾಗ ಛಾಂದಸವಾಗಿ ವರ್ಣಲೋಪ ಬಂದು ಮಹ್ನಾ ಎಂದು ರೂಪವಾಗುತ್ತದೆ.

ತಸ್ಥೇ—ಷ್ಠಾ ಗತಿನಿವೃತ್ತ್ಯೌ ಧಾತು. ಹಿಂದೆ ವಿ ಎಂಬ ಉಪಸರ್ಗ ಸಂಬಂಧವಿರುವುದರಿಂದ **ಸಮವಪ್ರ-ವಿಭ್ಯಸ್ಥಃ** (ಪಾ. ಸೂ ೧-೩-೨೨) ಎಂಬುದರಿಂದ ಆತ್ಮನೇಪದಿಯಾಗುತ್ತದೆ ಲಿಟ್ ಪ್ರಥಮಪುರುಷ ಏಕವಚನ ರೂಪ. ಆತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಧಾಯಸೇ—ಡುಧಾಞ್ ಧಾರಣಪೋಷಣಯೋಃ, ಧಾತು **ವಹಿ ಹಾ ಧಾಞ್ಭ್ಯ ಶ್ಛಂದಸಿ.** (ಉ ಸೂ ೪-೬೬೦) ಎಂಬುದರಿಂದ ಭಾವಾರ್ಥದಲ್ಲಿ ಅಸುನ್ ಪ್ರತ್ಯಯ. **ಣಿತ್** ಎಂದು ಹಿಂದಿನ ಸೂತ್ರದಿಂದ ಅನುವೃತ್ತವಾಗುವುದರಿಂದ ಅಸುನಿಗೆ ಣಿವ್ವದ್ಭಾವ ಬರುವುದರಿಂದ, ಧಾತುವು ಆಕಾರಾಂತವಾಗುವುದರಿಂದ **ಆತೋ ಯುಕ್ ಚಿಣ್ ಕೃತೋಃ** (ಪಾ ಸೂ. ೭-೩-೩೩) ಎಂಬುದರಿಂದ ಧಾತುವಿಗೆ ಯುಕಾಗನು ಧಾಯಸ್ ರವ್ವವಾಗುತ್ತದೆ ಪ್ರತ್ಯಯ ನಿತ್ತಾದುದರಿಂದ **ಙ್ಸಿತ್ಯಾದಿರ್ನಿತ್ಯಂ** ಸೂತ್ರದಿಂದ ಆದ್ಯುದಾತ್ತಸ್ವರ ಬರುತ್ತದೆ ಚತುರ್ಥೀ ಏಕವಚನದಲ್ಲಿ ಧಾಯಸೇ ಎಂದು ರೂಪವಾಗುತ್ತದೆ

ನೇಃ—ಏ ಗತಿಪ್ರಜನಕಾಂತ್ಯಶನಖಾದನೇಷು ಧಾತು. ಆದಾದಿ ಲಙ್ ವ.ಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಸೂತ್ರದಿಂದ ಇಕಾರಲೋಪ. **ಆದಿಪ್ರ್ಯಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್ **ಬಹುಲಂ ಛಂದಸ್ಯಮಾಙ್ ಯೋಗೇಽಪಿ** ಎಂಬುದರಿಂದ ಅಡಾಗನು ಬರುವುದಿಲ್ಲ. ಸಿಪ್ ನಿಮಿತ್ತವಾಗಿ ಧಾತುವಿಗೆ ಗುಣ. ಸಕಾರಕ್ಕೆ ರುತ್ವ ವಿಸರ್ಗ. ಇಲ್ಲಿ ಧಾಯಸೇ ಎಂಬ ಪೂರ್ವಪದವು ವಾಕ್ಯಾಂತರ ಸಂಬದ್ಧವಾದುದರಿಂದ ಪದದ ಪರದಲ್ಲಿ ಬಾರದಿರುವುದರಿಂದ ತಿಙಂತನಿಘಾತಸ್ವರ ಬರುವುದಿಲ್ಲ ಧಾತುಸ್ವರದಿಂದ ಉದಾತ್ತವಾಗುತ್ತದೆ ॥ ೯ ॥

॥ संहितापाठः ॥

अधि श्रियं नि दधुश्चारुमस्मिन्दिवो यदक्षी अमृता अकृण्वन् ।
अध क्षरन्ति सिन्धवो न सृष्टाः प्र नीचीरग्ने अरुषीरजानन् ॥ ८० ॥

॥ पदपाठः ॥

अधि । श्रियं । नि । दधुः । चारुं । अस्मिन् । दिवः । यत् । अक्षी इति । अमृताः । अकृण्वन् ।
अध । क्षरन्ति । सिन्धवः । न । सृष्टाः । प्र । नीचीः । अग्ने । अरुषीः । अजानन् ॥ ८० ॥

॥ सायणभाष्यं ॥

अस्मिन्नग्नौ चारुं शोभनां श्रियं परिस्तरणपरिषेचनादिरूपां यज्ञसंपदमधि नि दधुः । यजमानाः स्थापितवन्तः । निधाय च यदा यदाक्षी यज्ञस्याज्यभागलक्षणे चक्षुषी अकृण्वन् कुर्वन्ति । चक्षुषी वा एते यज्ञस्य यदाज्यभागौ । तै. सं. १-६-१-८ । इति श्रुतेः । तदानीं दिवो द्युलोकादमृता अमरणधर्माणो देवा यागसमयो जातः इत्यवगम्यागच्छन्तीति शेषः । अधाज्यभागानन्तरं सृष्टा आग्नेरुत्सृष्टाः सिन्धवो न शीघ्रं गच्छन्त्यो नद्य इव नीचीर्निततरां सर्वासु दिक्षु गच्छन्तीररुषीरारोचमानाः । यदा । निर्मलरूपाः । हे अग्ने एवंभूतास्त्वदीया ज्वालाः क्षरन्ति । संचलन्ति । सर्वासु दिक्षूद्गच्छन्तीत्यर्थः । अगता देवाश्च स्वाजानन् । अस्माकं होमायेदृश्यो ज्वाला उत्सृष्टा इति हृष्टाः सन्तः प्रकर्षेण जानन्ति ॥ अक्षी । सरत्वान्नुमं बाधित्वा ईं च द्विवचने । पा. ६-१-८६ । इत्यक्षिशब्दस्येदं

ಕಾರಾಂತಾದೇಶಃ । ಸ ಚೋದಾತ್ತಃ । ಈತ್ಸೇ ಕೃತೇ ಸಕೃದ್ಗತಪರಿಭಾಷಯಾ । ಪರಿ. ೪೦ । ಪುನರ್ಮುಮ್ ಭವತಿ । ಸವರ್ಣದೀರ್ಘಃ । ನೀಚೀಃ । ನಿಪೂರ್ವಾದಂಚತೇರ್ಯುತ್ಪಿಗಿತ್ಯಾದಿನಾ ಕ್ವಿನ್ । ಅನಿದಿತಾಮಿತಿ ನಲೋಪಃ । ಅಂಚತೇಶ್ಚೋಪಸಂಖ್ಯಾನಮಿತಿ ಙೀಪ್ । ಅಚ ಇತ್ಯಕಾರಲೋಪೇ ಚಾವಿತಿ ದೀರ್ಘತ್ವಂ । ನೃಧೀ ಚ । ಪಾ. ೬-೨-೫೩ । ಇತಿ ಗತೇಃ ಪ್ರಕೃತಿಸ್ವರತ್ವಂ । ಅರುಷೀಃ । ಅರುಷಮಿತಿ ರೂಪನಾಮ । ಋಹನಿಭ್ಯಾಮುಷಜಿತ್ಯರ್ತೇರುಷಚ್ । ಛಂದಸೀವನಿಪಾವಿತಿ ಮತ್ವರ್ಥೀಯ ಈಕಾರಃ ॥

॥ ಪ್ರತಿಪದಾರ್ಥ ॥

ಅಸ್ಮಿನ್—ಈ ಅಗ್ನಿಯಲ್ಲಿ । **ಚಾರುಂ**—ಶೋಭನಕರವಾದ । **ಶ್ರಿಯಂ**—(ಪರಿಸ್ತರಣಾದಿ) ಯಜ್ಞಸಂಪತ್ತನ್ನು । **ಅಧಿ ನಿ ದಧುಃ**—ಸ್ಥಾಪಿಸಿದರು । **ಯತ್** – ಯಾವಾಗ । **ಅಕ್ಷೀ**—(ಯಜ್ಞದ) ಎರಡು ಕಣ್ಣುಗಳಂತಿರುವ (ಆಜ್ಯಭಾಗಗಳನ್ನು) । **ಅಕೃಣ್ವನ್**—ಹೋಮ ಮಾಡುತ್ತಾರೆಯೋ (ಆಗ) । **ದಿವಃ**-ಸ್ವರ್ಗಲೋಕದಿಂದ । **ಅಮೃತಾಃ**—ಅಮರರಾದ (ದೇವತೆಗಳು ಯಾಗಸಮಯವೆಂದು ತಿಳಿಯುತ್ತಾರೆ) । **ಅಧ**—ಆಜ್ಯಭಾಗಾನಂತರದಲ್ಲಿ । **ಸೃಷ್ಟಾ**—ಅಗ್ನಿಯಿಂದ ಉತ್ಪನ್ನವಾದ । **ನೀಚೀಃ**—ನಾನಾ ದಿಕ್ಕುಗಳಲ್ಲಿ ಸಂಚರಿಸುವ । **ಅರುಷೀಃ**—ಶುಭ್ರವಾದ । **ಜ್ಯಾಲಾಃ**—ಜ್ವಾಲೆಗಳು । **ಅಗ್ನೇ**—ಎಲೈ ಅಗ್ನಿಯೇ । **ಸಿಂಧವಃ ನ**—ನದಿಗಳಂತೆ । **ಪ್ಸರಂತಿ**—ಚಲಿಸುತ್ತವೆ । **ಪ್ರ ಅಜಾನನ್**—(ಬಂದ ದೇವತೆಗಳೂ ನಮ್ಮ ಹೋಮಕ್ಕೋಸ್ಕರ ಈ ಜ್ವಾಲೆಗಳು ಸೃಷ್ಟವಾಗಿವೆಯೆಂದು) ಹೆಚ್ಚು ಸಂತೋಷದಿಂದ ತಿಳಿದರು

॥ ಭಾವಾರ್ಥ ॥

(ಯಜಮಾನರು) ಅಗ್ನಿಯಲ್ಲಿ ಪರಿಸ್ತರಣಾದ್ಯಲಂಕರಣಗಳನ್ನು ಮಾಡಿ, ಯಜ್ಞದ ಎರಡು ಕಣ್ಣುಗಳಂತಿರುವ ಆಜ್ಯಭಾಗಗಳನ್ನು ಹೋಮ ಮಾಡುತ್ತಾರೆ ಆಗ ದೇವತೆಗಳು ಹೋಮಕಾಲವೆಂದು ತಿಳಿದು ಬರುತ್ತಾರೆ ಅಗ್ನಿಯಿಂದ ಹೊರಟ ಜ್ವಾಲೆಗಳು, ನದಿಗಳಂತೆ ನಾನಾದಿಕ್ಕುಗಳಲ್ಲಿ, ಶುಭ್ರವರ್ಣವುಳ್ಳವುಗಳಾಗಿ ಹೊರಡುತ್ತವೆ ಅವುಗಳನ್ನು ನೋಡಿ ದೇವತೆಗಳು ಬಹಳ ಸಂತೋಷಪಡುತ್ತಾರೆ

English Translation

(The offerers of oblations), have placed in this (Agni) the graceful honours (of the ceremony), and the two portions of clarified butter that are the two eyes (of the sacrifice), then the immortals come from heaven, and your bright flames, Agni, spread in all directions like rushing rivers, and the Gods perceive it (and rejoice)

॥ ವಿಶೇಷನಿಷಯಗಳು ॥

ಯತ್-ಅಕ್ಷೀ-ಅಕೃಣ್ವನ್—ಯಜ್ಞಮಾಡುವ ಯಜಮಾನರು ಯಜ್ಞವನ್ನು ಮಾಡುವ ಕಾಲದಲ್ಲಿ ಯಜ್ಞವೇದಿಯ ಸುತ್ತಲೂ, ಪರಿಸ್ತರಣ, ಪರಿಷೇಚನಗಳನ್ನು ಮಾಡಿದನಂತರ ಯಜ್ಞದ ಚಕ್ಷುಸ್ಸಿನರೂಪವಾಗಿರುವ

ಹವಿರ್ಭಾಗಗಳನ್ನು ಹೋಮಮಾಡಿದಾಗ ದೇವತೆಗಳು ಯಾಗವು ನಡೆಯುವುದೆಂದು ತಿಳಿದು ಸ್ವರ್ಗದಿಂದ ಬರುವರೆಂದು ಅರ್ಥವು.

ಆಕ್ಷೀ— ಚಕ್ಷುಷೀ ಯಜ್ಞದಲ್ಲಿ ಹೋಮಮಾಡುವಾಗ ಆಜ್ಯಭಾಗಗಳನ್ನು ನೋಡಲು ಹೋಮಮಾಡುವರು. ಇದನ್ನು ಚಕ್ಷುಷೀ ಎಂಬ ಪದದಿಂದ ಕರೆಯುವುದು ಯಾಜ್ಞಿಕರ ರೂಢಿಯಾಗಿರುತ್ತದೆ **ಚಕ್ಷುಷೀ ವಾ ಏತೆ ಯಜ್ಞಸ್ಯ ಯದಾಜ್ಯಭಾಗೌ** (ತೈ.ಸಂ. ೨-೬-೨-೧) ಎಂಬ ಶ್ರುತಿಯು ಚಕ್ಷುಶ್ಶಬ್ದಾರ್ಥವನ್ನು ವಿಶದಮಾಡಿರುವುದು ಇದನ್ನೇ ಆಕ್ಷೀ ಶಬ್ದಕ್ಕೆ ಅರ್ಥವನ್ನಾಗಿ ಸಾಯಣರು ಇಲ್ಲಿ ವಿವರಿಸಿರುವರು ಈ ವಿಷಯದಲ್ಲಿ ತೈತ್ತಿರೀಯ ಶ್ರುತಿಯು-

ಚಕ್ಷುಷೀ ವಾ ಏತೇ ಯಜ್ಞಸ್ಯ ಯದಾಜ್ಯಭಾಗೌ ಯದಾಜ್ಯಭಾಗೌ ಯಜತಿ ಚಕ್ಷುಷೀ ಏವ ತದ್ಯಜ್ಞಸ್ಯ ಪ್ರತಿ ದಧಾತಿ ಪೂರ್ವಾರ್ಧೇ ಜುಹೋತಿ ತಸ್ಮಾತ್ಪೂರ್ವಾರ್ಧೇ ಚಕ್ಷುಷೀ ಪ್ರಬಾಹುಗ್ಜುಹೋತಿ ತಸ್ಮಾತ್ಪ್ರಬಾಹುಕ್ಷ್ಣಷೀ ದೇವಲೋಕಂ ವಾ ಅಗ್ನಿನಾ ಯಜಮಾನೋನು ಪಶ್ಯತಿ ಪಿತೃಲೋಕಗ್ಂ ಸೋಮೇನೋತ್ತರಾರ್ಧೇ೨ಗ್ನಯೇ ಜುಹೋತಿ ದಕ್ಷಿಣಾರ್ಧೇ ಸೋಮಾಯೈವಮಿವ ಹೀಮೌ ಲೋಕಾವನಯೋರ್ಲೋಕಯೋರನುಖ್ಯಾತ್ಯೈ ರಾಜಾನೌ ವಾ ಏತೌ ದೇವತಾನಾಂ ಯದಗ್ನೀಷೋಮಾವಂತರಾ ದೇವತಾ ಇಜ್ಯೇತೇ ದೇವತಾನಾಂ ನಿಧೃತ್ಯೈ ತಸ್ಮಾದ್ರಾಜ್ಞಾ ಮನುಷ್ಯಾ ನಿಧೃತಾಃ ॥

(ತೈ ಸಂ ೨-೬-೨)

ಎಂದು ವಿವರಿಸುವುದು ಆಜ್ಯಭಾಗವೆಂದರೆ ಯಜ್ಞದಲ್ಲಿ ಪ್ರಧಾನದೇವತೆಗಳನ್ನುದ್ದೇಶಿಸಿ ಮಾಡುವ ಹೋಮಗಳಿಗೆ ಮುಂಚಿತವಾಗಿ ಅಗ್ನಿ ಸಂಸ್ಕಾರಾದಿಗಳಾದ ಮೇಲೆ ಅಗ್ನಿಯನ್ನುದ್ದೇಶಿಸಿ ಒಂದು ಹೋಮವನ್ನೂ, ಸೋಮನನ್ನುದ್ದೇಶಿಸಿ ಒಂದು ಹೋಮವನ್ನೂ ಆಜ್ಯಾಹುತಿ (ಕರಗಿಸಿದ ತುಪ್ಪ) ಯಿಂದ ಮಾಡುವರು ಈ ಎರಡು ಆಹುತಿಗಳಿಗೆ ಆಜ್ಯಭಾಗವೆಂದು ಹೆಸರು. ಈ ಆಜ್ಯಭಾಗಗಳೇ ಯಜ್ಞಕ್ಕೆ ಎರಡು ಕಣ್ಣುಗಳೆಂದು ಹೇಳುವರು. ಯಜಮಾನನು ಪೂರ್ವಾಭಿಮುಖವಾಗಿ ಕುಳಿತು ತನ್ನ ಎದುರಿಗೆ ಇರುವ ಅಗ್ನಿಯಲ್ಲಿನ ಉತ್ತರಪಾರ್ಶ್ವದಲ್ಲಿ ಅಗ್ನಯೇ ಸ್ವಾಹಾ ಎಂದು ಅಗ್ನಿಯನ್ನುದ್ದೇಶಿಸಿ ಒಂದು ಹೋಮಮಾಡುವನು ಬಳಿಕ ಅಗ್ನಿಯ ದಕ್ಷಿಣಪಾರ್ಶ್ವದಲ್ಲಿ ಸೋಮಾಯ ಸ್ವಾಹಾ ಎಂದು ಸೋಮನನ್ನುದ್ದೇಶಿಸಿ ಮತ್ತೊಂದು ಹೋಮವನ್ನು ಮಾಡುವನು. ಈ ಎರಡು ಹೋಮ ಪ್ರದೇಶಗಳ ಮಧ್ಯಭಾಗದ ಅಗ್ನಿಯಲ್ಲಿ ಯಜ್ಞದಲ್ಲಿ ನಿರ್ದಿಷ್ಟರಾದ ಪ್ರಧಾನದೇವತೆಗಳನ್ನುದ್ದೇಶಿಸಿ ಆಯಾ ಮಂತ್ರಗಳಿಂದ ಹೋಮಮಾಡುವುದು ಶಾಸ್ತ್ರವಿಹಿತವು. ಅಗ್ನಿಯನ್ನುದ್ದೇಶಿಸಿ ಹೋಮಮಾಡುವುದರಿಂದ ಯಜಮಾನನಿಗೆ ದೇವಲೋಕಪ್ರಾಪ್ತಿಯೂ, ಸೋಮನನ್ನುದ್ದೇಶಿಸಿ ಹೋಮಮಾಡುವುದರಿಂದ ಪಿತೃಲೋಕಪ್ರಾಪಿಯೂ ಉಂಟಾಗುವುದೆಂದು ಹೇಳಿರುವುದು ಈ ಅಗ್ನೀಷೋಮದೇವತೆಗಳು ದೇವತೆಗಳಲ್ಲೆಲ್ಲಾ ಶ್ರೇಷ್ಠರೆಂದೂ, ದೇವತೆಗಳಿಗೆ ರಾಜರೆಂದೂ ಹೇಳಲ್ಪಡುವುದರಿಂದ ದೇವಪಿತೃಲೋಕಗಳ ಪ್ರಾಪ್ತಿಗಾಗಿ ಈ ದೇವತೆಗಳನ್ನು ಉದ್ದೇಶಿಸಿ ಹೋಮಮಾಡಬೇಕು. ಇವರಿಗೆ ಹೋಮಮಾಡಿದ ನಂತರ ಅಗ್ನಿಯ ಮಧ್ಯಪ್ರದೇಶದಲ್ಲಿ ಇತರ ದೇವತೆಗಳಿಗೆ ಹೋಮಮಾಡಬೇಕು ಎಂದಭಿಪ್ರಾಯವು.

ಸಿಂಧವೋ ನ-ನದ್ಯ ಇವ--ನದಿಗಳ ಹಾಗೆ ಎಂದು ಅರ್ಥ. **ಅವನಯಃ, ಯಹ್ವ್ಯಃ,** ಎಂಬ ಮುಂದಿನ ತ್ರೀಲು ನದೀ ನಾಮಗಳಲ್ಲಿ **ಸಿಂಧವಃ** ಎಂಬ ಪದವು (ನಿ ೨-೨೪) ಉಕ್ತವಾಗಿರುತ್ತದೆ.

ಅರುಷೀಃ—**ಅರುಷೀ** ಶಬ್ದವು—**ವಿಭಾವರೀ, ಸೂನರೀ** ಎಂಬಿನೇ ಮೊದಲಾದ ಹದಿನಾರು **ಉಷೋ** ನಾಮಗಳಲ್ಲಿ (ನಿ. ೨-೧೯) ಪಠಿತವಾಗಿರುತ್ತದೆ. **ಆರೋಚಮಾನಾಃ, ನಿರ್ಮಲರೂಷಾಃ** ಬಹಳಮಟ್ಟಿಗೆ ಪ್ರಕಾಶಿಸುತ್ತಿರುವವುಗಳು. ಪರಿಶುದ್ಧವಾದವುಗಳು ಎಂದು ಅರ್ಥವನ್ನು ಹೇಳಿ ಅಗ್ನಿಯ ಜ್ವಾಲೆಗಳು ಆಜ್ಯಭಾಗವನ್ನು ಹೋಮ ಮಾಡಿದ ನಂತರ ಅಗ್ನಿಯಿಂದ ಉತ್ಪನ್ನವಾದ ಪರಿಶುದ್ಧವಾದ ಜ್ವಾಲೆಗಳು ವೇಗವಾಗಿ ಹರಿಯುವ ನದಿಗಳ ಹಾಗೆ ದಿಕ್ಕುಗಳೆಲ್ಲವನ್ನೂ ಪ್ರಕಾಶಗೊಳಿಸುವುವು ಯಜ್ಞಕ್ಕಾಗಿ ಬಂದ ದೇವತೆಗಳು ತಮ್ಮ ಸಂತೋಷಕ್ಕಾಗಿ ನಡೆಯುವ ಹೋಮಕ್ಕಾಗಿ ಅಗ್ನಿಯ ಈ ಜ್ವಾಲೆಗಳು ಉತ್ಪನ್ನವಾಗಿರುತ್ತವೆ ಎಂದು ಸಂತೋಷದಿಂದ ತಿಳಿಯುವರು.

ಸ್ಕಂದಸ್ವಾಮಿಗಳು—**ಅಹೋರಾತ್ರೆ ವಿಭಾಗಾರ್ಥಂ ಯದ್ದೈವ ಸೂರ್ಯಾಚಂದ್ರಮಸೌ ದೇವೌ ಉದ ಪೀಪದನ್ ತದ್ದೈವ ತ್ವಾಮಗ್ನಿಂ ದೀಪ್ತಿಮನ್ತಂ ಅಕಾರ್ಷುಃ** ॥ ಅಕ್ಷೀ ಎಂಬ ಶಬ್ದವು ದ್ವಿವಚನದಲ್ಲಿ ಇರುತ್ತಾ ಎರಡು ಎಂಬ ಸಂಖ್ಯಾವಿಶಿಷ್ಟವಾದ ವಸ್ತುವನ್ನು ಬೋಧಿಸುವುದರಿಂದಲೂ, ಚಕ್ಷುರ್ವಾಚಕವಾಗಿರುವುದರಿಂದಲೂ ಪ್ರಕಾಶವನ್ನು ಉಂಟುಮಾಡುವ ಸೂರ್ಯನೂ ಮತ್ತು ಚಂದ್ರನೂ ಆಗಿರುವರು ದೇವತೆಗಳು ಲೋಕದಲ್ಲಿ ಅಹಸ್ಸು ಮತ್ತು ರಾತ್ರಿಗಳು ಇವುಗಳ ವಿಭಾಗವು ಬೇರೆಬೇರೆಯಾಗಿ ತೋರುವುದಕ್ಕಾಗಿ ಸೂರ್ಯನನ್ನೂ ಮತ್ತು ಚಂದ್ರನನ್ನೂ ಬೆಳಕನ್ನು ಕೊಡುವ ಕಣ್ಣುಗಳನ್ನಾಗಿ ನಿರ್ಮಿಸಿದಾಗಲೆ, ಅಗ್ನಿಯಲ್ಲಿಯೂ ಇವರಿಗಿಂತ ಅತಿಶಯವಾದ ಪ್ರಕಾಶದಿಂದ ಕೂಡಿರುವ ಕಾಂತಿಯು ಬೆಳಗುವಂತೆ ಮಾಡಿರುವರು ಎಲೈ ಅಗ್ನಿಯೇ--ನಿನ್ನಲ್ಲಿ ಯಜಮಾನರು ಅರ್ಪಿಸಿದ ಆಹುತಿಗಳು ನಿನ್ನ ಪ್ರದೇಶವನ್ನು ಕುರಿತು ಪ್ರವಹಿಸುವ ನದಿಗಳ ಹಾಗೆ ಲೋಕೋಪಕಾರಕ್ಕಾಗಿ ವೃಷ್ಟಿರೂಪದಿಂದ ಅಧೋಮುಖವಾಗಿರುವ ಗಮನವನ್ನು ಹೊಂದುತ್ತವೆ ಮತ್ತು ಈ ಪ್ರಸಿದ್ಧವಾದ ಪ್ರಭಾವವು ಅಗ್ನಿಯಲ್ಲಿರುವುದೆಂದು ಜ್ಞಾನಿಗಳು ಅಗಿನಿಂದಲೂ ನಿನ್ನನ್ನು ತಿಳಿದು ಇರುವರು ಎಂದು ಅರ್ಥವಾಗುವಂತೆ, **ಹೇ ಅಗ್ನೇ ತ್ವಯಿ ವಿಸೃಷ್ಟಾಃ ಯಹ್ವ್ಯಃ ಅಭಿರಾಹುತಯಃ ಅರುಷೀಃ ಸಿಂಧವೋ ನ ಅಧಃ ಕ್ಷರಂತಿ । ತತಃ ಪ್ರಭೃತಿ ಜ್ಞಾನಿನೋಽಪಿ ತ್ವಾಂ ಜ್ಞಾತುಂ ಪ್ರಾರಬ್ಧವಂತಃ** ಎಂದು ಪದಗಳಿಗೆ ಸಂಬಂಧವನ್ನು ಹೇಳಿರ ತ್ತಾರೆ.

॥ ವ್ಯಾಕರಣಪ್ರಕ್ರಿಯಾ ॥

ದಧುಃ—ಡುಧಾಞ್ ಧಾರಣಪೋಷಣಯೋಃ ಧಾತು ಲಿಟ್ ಪ್ರಥಮ ಪುರುಷ ಬಹುವಚನ ರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ದಿವಃ—**ಊಡಿದಂಪದಾದಿ**-(ಪಾ ಸೂ. ೬-೧-೧೮೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಅಕ್ಷೀ—ಅಕ್ಷಿಶಬ್ದ ನಿತ್ಯನಪುಂಸಕವಾಗಿವೆ ಇದಕ್ಕೆ ದ್ವಿವಚನ ಪರವಾದಾಗ **ಇಕೋಚಿ ವಿಭಕ್ತೌ** ಎಂಬುದರಿಂದ ನುಮಾಗಮ ಪ್ರಾಪ್ತವಾದರೆ ಪರವಾದುದರಿಂದ ನುಮಾಗಮವನ್ನು ಬಾಧಿಸಿ **ಈ ಚ ದ್ವಿವಚನೇ** (ಪಾ. ಸೂ. ೬-೧-೬೬) ಎಂಬುದರಿಂದ ಅಕ್ಷಿ ಶಬ್ದಕ್ಕೆ ಈಕಾರಾಂತಾದೇಶವಾಗಿ ಬರುತ್ತದೆ ಬರತಕ್ಕ ಈಕಾರವು ಉದಾತ್ತವಾದುದರಿಂದ ವಿಭಕ್ತಿಯ ಔಕಾರಕ್ಕೆ ಬಂದ ಈಕಾರದೊಡನೆ (ಅನುದಾತ್ತ) ಏಕಾದೇಶವಾದುದರಿಂದ **ಏಕಾದೇಶ ಉದಾ-**

ತ್ತೇನೋದಾತ್ತಃ (ಪಾ. ಸೂ. ೮-೪-೫೫) ಎಂಬುದರಿಂದ ಉದಾತ್ತವಾಗುತ್ತದೆ. ಈತ್ವ ಬಂದ ಮೇಲೆ ಪುನಃ ನುಮಾಗವು ಬರಲಿ ಎಂದು ಶಂಕಿಸಬಾರದು. **ಸಕೃದ್ಗತೌ ವಿಪ್ರತಿಷೇಧೇನ ಯದ್ಬಾಧಿತಂ ತದ್ಬಾಧಿತಮೇವ** (ಪರಿಭಾ. ೪೦) ಎಂಬ ವಚನದಿಂದ ಒಂದು ಸಲ ಬಾಧಿತವಾದುದು ಬಾಧಿತವಾದಂತೆಯೇ. ಅದಕ್ಕೆ ಪುನರುತ್ಥಾನವಿಲ್ಲ ಎಂದು ತಾತ್ಪರ್ಯ.

ಅಕೃಣ್ವನ್—ಕೃವಿ ಹಿಂಸಾಕರಣಯೋಶ್ಚ ಧಾತು. ಲಙ್ ಪ್ರಥಮಪುರುಷ ಬಹುವಚನರೂಪ. ಇದರ ಪ್ರಕ್ರಿಯೆಯು ಹಿಂದಿನ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ ಹಿಂದೆ ಯದ್ಯೋಗವಿರುವುದರಿಂದ **ಯದ್ಧೃತ್ತಾನ್ನಿತ್ಯಮ್** (ಪಾ. ಸೂ ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಆಡಾಗಮ ಉದಾತ್ತವಾಗುದರಿಂದ ಆದ್ಯುದಾತ್ತವಾದ ಪದವಾಗುತ್ತದೆ

ಸೃಹ್ವಾಃ—ಸೃಜ ವಿಸರ್ಗೇ ಧಾತು. ಇದಕ್ಕೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ **ವ್ರಶ್ಚ ಭ್ರಸ್ಜ**—ಎಂಬುದರಿಂದ ಜಕಾರಕ್ಕೆ ಷಕಾರಾದೇಶ ಷ ಸಂಬಂಧದಿಂದ ಪ್ರತ್ಯಯ ತಕಾರಕ್ಕೆ ಷ್ಟುತ್ವ ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ

ನೀಚೀಃ—ಅಂಚು ಗತಿಪೂಜನಯೋಃ ಧಾತು ನಿಪೂರ್ವವಾಗಿರುವಾಗ **ಋತ್ವಿಕ್ ದಧೃಕ್** (ಪಾ ಸೂ. ೩-೨-೫೯) ಎಂಬುದರಿಂದ ಕ್ವಿನ್ ಪ್ರತ್ಯಯ. **ಅನಿದಿತಾಂ ಹಲ**-ಎಂಬುದರಿಂದ ಧಾತುವಿನ ಉಪಧಾನಕಾರಕ್ಕೆ ಲೋಪ ಸ್ತ್ರೀತ್ವ ವಿವಕ್ಷಾ ಮಾಡಿದಾಗ **ಅಂಚತೇರ್ಹ್ರೋಪಸಂಖ್ಯಾನಮ್** ಎಂಬುದರಿಂದ ಙೀಪ್ **ಅಚಃ** (ಪಾ. ಸೂ. ೬-೪-೧೩೮) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ. ಲುಪ್ತಾಕಾರನಕಾರ ಅಂಚು ಧಾತುವು ಪರವಾದುದರಿಂದ **ಚೌ** (ಪಾ. ಸೂ. ೬-೩-೧೩೮) ಎಂಬುದರಿಂದ ಪೂರ್ವಪದಕ್ಕೆ (ನಿ) ದೀರ್ಘ. ನೀಚೀ ಎಂದು ರೂಪವಾಗುತ್ತದೆ **ನ್ಯಧೀ ಚ** (ಪಾ. ಸೂ ೬-೨-೫೩) ಎಂಬುದರಿಂದ ಗತಿಗೆ (ನಿ) ಪ್ರಕೃತಿಸ್ವರ ಬರುತ್ತದೆ. ಜಸ್ ಪರವಾದಾಗ **ನಾ ಧಂದಿಸಿ** ಸೂತ್ರದಿಂದ ಪೂರ್ವಸವರ್ಣದೀರ್ಘ.

ಅರುಷೀಃ—ಅರುಷಮ್ ಎಂಬುದು ರೂಪದ ಹೆಸರು. ಋ ಗತೌ ಧಾತು ಇದಕ್ಕೆ **ಋಹನಿಭ್ಯಾಮುಷಚ್** (ಉ. ಸೂ ೪-೫೧೩) ಎಂಬುದರಿಂದ ಉಷಚ್ ಪ್ರತ್ಯಯ. ಅರುಷಮಸ್ಯ ಅಸ್ತಿ ಎಂಬರ್ಥ ವಿವಕ್ಷಾ ಮಾಡಿದಾಗ **ಧಂದಿಸೀವನಿಪಾ** (ವಾ. ೫೨೦೨-) ಎಂಬುದರಿಂದ ಮತ್ವರ್ಥದಲ್ಲಿ ಈ ಪ್ರತ್ಯಯ. **ಯಸ್ಯೇತಿ ಚ** ಸೂತ್ರದಿಂದ ಅಕಾರ ಲೋಪ ಪ್ರಥಮಾ ಬಹುವಚನದಲ್ಲಿ ಪೂರ್ವಸವರ್ಣದೀರ್ಘ

ಅಜಾನನ್—ಈ ನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಎಪ್ಪತ್ತೈರಡನೆಯ ಸೂಕ್ತ ಸಮಾಪ್ತವು

ಎಪ್ಪತ್ತ್ಮೂರನೆಯ ಸೂಕ್ತವು

ರಯಿರ್ನೇತಿ ದಶರ್ಚಂ ನವಮಂ ಸೂಕ್ತಂ ಪರಾಶರಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ಅನುಕ್ರಾಂತಂ ಚ । ರಯಿರ್ನೇತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತ್ಥೇ ವಿನಿಯೋಗಃ ॥

ಅನುವಾದವು—**ರಯಿರ್ನ** ಎಂಬ ಈ ಸೂಕ್ತವು ಹನ್ನೆರಡನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪರಾಶರನು ಋಷಿಯು. ಅಗ್ನಿಯು ದೇವತೆಯು ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ ರಯಿರ್ನ ಎಂದು ಮೊದಲಾಗಿ ಹೇಳಿರುವುದು ಪ್ರಾತರನುವಾಕಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದು

ಸೂಕ್ತ—೭೩

॥ ಓಂ ॥

॥ ಮಂಡಲ—೧ ॥ ಅನುವಾಕ—೧೨ ॥ ಸೂಕ್ತ—೭೩ ॥

॥ ಅಷ್ಟಕ—೧ ॥ ಅಧ್ಯಾಯ—೫ ॥ ವರ್ಗ—೧೯, ೩೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥

॥ ಋಷಿಃ—ಪಾರಾಶರಃ ಶಾಕ್ತ್ಯಃ ॥

ದೇವತಾ—ಅಗ್ನಿಃ ॥

ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ರ॒ಯಿರ್ನ ಯಃ ಪಿ॒ತೃವಿ॑ತ್ತ್ಯೋ॒ ವ॑ಯೋ॒ಧಾಃ ಸು॒ಪ್ರ॒ಣೀ॑ತಿಶ್ಚಿಕಿ॒ತುಷ್ಟೋ॒ ನ ಶಾಸು॑ಃ ।
ಸ್ಯೋ॒ನಶೀ॑ರತಿ॒ಥಿರ್ನ ಪ್ರೀ॒ಣಾನೋ॒ ಹೋತೇ॑ವ ಸದ್ಮ॑ ವಿದ॒ತೋ ವಿ ತಾ॑ರೀತ್ ॥ ೧ ॥

॥ ಪದಪಾಠಃ ॥

ರಯಿಃ । ನ । ಯಃ । ಪಿತೃ ೱ ವಿತ್ತಃ । ವಯಃ ೱ ಧಾಃ । ಸು ೱ ಪ್ರಣೀತಿಃ । ಚಿಕಿತುಷಃ ।
ನ । ಶಾಸುಃ ।
ಸ್ಯೋನ ೱ ಶೀಃ । ಅತಿಥಿಃ । ನ । ಪ್ರೀಣಾನಃ । ಹೋತಾ ೱ ಇವ । ಸದ್ಮ । ವಿದ್ಧತಃ ।
ವಿ । ತಾರೀತ್ ॥ ೧೯ ॥

॥ ಸಾಯಣಭಾಷ್ಯಂ ॥

ಪಿತೃವಿತ್ತಃ ಪಿತುಃ ಸಕಾಶಾಲ್ಲಬ್ಧೋ ರಯಿರ್ಧನಮಿವ ಯೋ ೱ ಗ್ನಿರ್ವಯೋಧಾ ಅನ್ನಸ್ಯ ದಾತಾ । ಯಥಾ ಪೈತೃಕಂ ಧನಂ ವಿಶ್ರಂಭೇಣ ವ್ಯವಹ್ರಿಯಮಾಣಂ ಸದನ್ನಪ್ರದಂ ಭವತಿ ತದ್ವದಗ್ನಿರಪಿ ಸರ್ವೇಷು ಯಜ್ಞೇಷು ವಿಶ್ರಂಭೇಣ ವ್ಯವಹೃತಃ ಸನ್ ಅನ್ನಪ್ರದೋ ಭವತೀತ್ಯರ್ಥಃ । ಚಿಕಿತುಷೋ ನ ವಿದುಷೋ ಧರ್ಮಶಾಸ್ತ್ರಾಭಿಜ್ಞಸ್ಯ ಶಾಸುಃ ಶಾಸನಮಿವ ಸುಪ್ರಣೀತಿಃ ಸುಷ್ಠೇನ ಪ್ರಣೇತವ್ಯಃ । ಯಥಾ ವಿದ್ವಚ್ಛಾಸನಂ ಸರ್ವೇಷ್ವನುಷ್ಠೇಯೇಷು ತತ್ತತ್ಸಂಶಯನಿರ್ಣಯಾಯ ನೀಯತೇ ತದ್ವದಗ್ನಿರಪಿ ಸರ್ವೇಷು ಯಜ್ಞೇಷು ಪ್ರಣೀಯತೇ । ಯಶ್ಚ ಸ್ಯೋನಶೀಃ ಸುಖಪ್ರದೇ ಗಾರ್ಹಪತ್ಯಾಯತನಾದ್ಯಾ ಶಯಾನೋ ೱ ತಿಥಿರ್ನ ಸುಖಾಸನ ಉಪವೇಶಿತೋ ೱ ರ್ಘಪಾದ್ಯಾದಿಭಿಃ ಸತ್ಕೃತೋ ೱ ತಿಥಿರಿವ ಪ್ರೀಣಾನೋ ಹವಿರ್ಭಿಸ್ತರ್ಪಣೀಯಃ ಸೋ ೱ ಗ್ನಿರ್ವಿಧತಃ ಪರಿಚರತೋ ಯಜಮಾನಸ್ಯ ಸದ್ಮ ಗೃಹಂ ವಿ ತಾರೀತ್ । ಪ್ರವರ್ಧಯತಿ ದದಾತಿ ವಾ । ತತ್ರ ದೃಷ್ಟಾಂತಃ । ಹೋತೇವ । ಹೋತಾ ಹೋಮಕರ್ತಾರ್ಧ್ವರ್ಯುಸ್ತತ್ಕರ್ಮಕರಣೇನ ಫಲೈರ್ಯಜಮಾನಸ್ಯ ಗೃಹಂ ಯಥಾ ವರ್ಧಯತಿ ತದ್ವತ್ ॥ ಪಿತೃವಿತ್ತಃ । ವಿದ್ಲೃ ಲಾಭೇ । ಕರ್ಮಣಿ ನಿಷ್ಠಾ । ಯಸ್ಯ ವಿಭಾಷೇತೀಟ್ಪ್ರತಿಷೇಧಃ । ವಿಭಾಷಾ ಗಮಹನವಿದವಿಶಾಮಿತಿ ಕ್ವಸಾವಸ್ಯ ಧಾತೋರಿಟೋ ವಿಕಲ್ಪಿತತ್ವಾತ್ ತತ್ರಾಪಿ ವಿಶಿಸಾಹಚರ್ಯಾತ್ತೌದಾದಿಕ ಏವ ವಿದಿರ್ಗೃಹ್ಯತ ಇತ್ಯುಕ್ತಂ । ಕಾ ೭-೨-೬೮ । ವಿತ್ತೋ ಭೋಗಪ್ರತ್ಯಯಯೋಃ । ಪಾ ೮-೨ ೫೮ । ಇತಿ ನಿಷ್ಠಾನತ್ವಾಭಾವೋ ನಿಪಾತಿತಃ । ವಯೋಧಾಃ । ದುಧಾಞ್ ಧಾರಣಪೋಷಣಯೋಃ । ಆತೋ ಮನಿನ್ನಿತಿ ವಿಚ್ । ಸುಪ್ರಣೀತಿಃ । ಪ್ರಣೀಯತ ಇತಿ ಪ್ರಣೀತಿಃ । ಕರ್ಮಣಿ ಕ್ತಿನ್ । ತಾದೌ ಚೇತಿ ಗತೇಃ ಪ್ರಕೃತಿಸ್ವರತ್ವಂ । ಪುನಃ ಸುಶಬ್ದೇನ ಸಮಾಸೇ ಕೃದ್ಗ್ರಹಣೇ ಗತಿಕಾರಕಪೂರ್ವಸ್ಯಾಪಿ ಗ್ರಹಣಾತ್ಪುತ್ತರಪದಪ್ರಕೃತಿಸ್ವರತ್ವಂ । ಚಿಕಿತುಷಃ । ಲಿಟಃ ಕ್ವಸುಃ । ಷಷ್ಠ್ಯೇಕವಚನೇ ವಸೋಃ ಸಂಪ್ರಸಾರಣಮಿತಿ ಸಂಪ್ರಸಾರಣಂ । ಶಾಸಿವಸಿಘಸೀನಾಂ ಚೇತಿ ಷತ್ವಂ । ಶಾಸುಃ । ಶಾಸು ಅನುಶಿಷ್ಟೌ । ಶ್ನ-ಸ್ವ್ಯಸ್ನಿಹೀತ್ಯಾದಿನಾ ವಿಧೀಯಮಾನ ಉಪ್ರತ್ಯಯೋ ಬಹುಲವಚನಾದಸ್ಮಾದಪಿ ದ್ರಷ್ಟವ್ಯಃ । ತತ್ರ ನಿದಿತ್ಯನುವೃತ್ತೇರಾದ್ಯುದಾತ್ತತ್ವಂ । ಸ್ಯೋನಶೀಃ । ಸ್ಯೋನ-

मिति सुखनामा । स्योनेन सुखकरेण गार्हपत्याद्यधिष्ठानेन शेत इति स्योनशीः । क्विप्चेति क्विप् । प्रीणानः । प्रीञ् तर्पणे । कर्मणि शानचि व्यत्ययेन श्ना । विधतः । विध विधाने । विधतिः परिचरणकर्मेति नैरुक्ताः । तुदादित्वाच्छप्रत्ययः । शतुरनुम इति विभक्तेरुदात्तत्वं ।

॥ प्रतिपदार्थ ॥

पितृवित्तः—पितृविनिंद लब्धवाद । **रयिः न**—धनदंती । **यः**—यावद अग्नियु । **वयोधाः**—अन्नवन्नु कोडुत्तात्तनो । **चिकितुषः**—(धर्मशास्त्रज्ञनाद) पंडितन । **शासुः न**—शास्त्रनंती । **सुप्रणीतिः**—सुखवागि अनुसरिसल्पडतक्कवनो । **यज्ञः**—यागवनु । **अतिथिर्न**—(सत्कृतनाद) अतिथियंती । **स्योनशीः**—(गार्हपत्याद्ययतनदल्लि) सुखवागि मलगिरुत्तानेयो (**सः**—अंतह) । **प्रीणानः**—हविरादिगळिंद पूजिसल्पडुव अग्नियु । **विधतः**—सेवेमाडुव यजमानन । **सदम्**—मनेयन्नु । **होतेव**—होतृविनंती । **वि शारीत्**—वर्धिसुत्तानै ॥

॥ भावार्थ ॥

पितृविनिंद लब्धवाद धनदंती, एल्लरिगू अन्नप्रदनाद, धर्मशास्त्रज्ञनंती शास्त्रवाद, अतिथियंती (गार्हपत्याद्ययतनदल्लि) शयानन्नाद, हविरादिगळिंद पूजनीयनाद अग्नियु, होतृवु (स्तोत्रगळ मूलक यजमानन्निगे अभिवृद्धियन्नु कोरुवंती), यजमानन मनेयन्नु अभिवृद्धि पडिसुत्तानै.

English Translation.

Agni, like patrimonial wealth, is the giver of food; he is a director like the instructions of one learned in scripture; he rests in the sacrificial chamber like a welcome guest, and like an officiating priest, he brings prosperity on the house of the worshipper

॥ विशेषविषयगळु ॥

रयिर्न पितृवित्तः वयोधाः—**वयः** एंब शब्दवु **अंधः वाजः** एंब इप्पत्तैंटु अन्ननामगळल्लि (नि ८-७) उक्तवागिरुवुदरिंद **वयोधाः** एंब पदवु (अन्नप्रदनु) अन्नवन्नु कोडुवनु एंदु अर्थवन्नु बोधिसुवुदु लोकदल्लि तंदेयु संपादिसिरुव द्रव्यद व्यवहारदल्लि वृद्धियन्नु हॊंदुत्ता, संतोषवन्नु उंटुमाडुव अन्नवन्नु कोडुवंते अग्नियु यज्ञ

ಮಾಡುವುದರಿಂದ ಯಜಮಾನರುಗಳಿಗೆ ಆಯಾಯ ಯಜ್ಞಗಳಲ್ಲಿ ಹೋಮಮಾಡುವ ಹವಿರ್ಭಾಗಗಳನ್ನು ಸ್ವೀಕರಿಸುವ ವನಾಗಿ ಸುಖಕರವಾದ ಅನ್ನವನ್ನು ಉಂಟುಮಾಡುವನು.

ಚಿಕಿತುಷೋ ನ ಸುಪ್ರಣೀತಿಃ—ಪ್ರಣೀತಿಃ ಕಾರ್ಯೇಷು ಉಪದೇಶಃ । ಸುಪ್ರಣೀತಿಃ-ಸುಖೇನ ಕಾರ್ಯೇಷು ಉಪದೇಶಃ ಇತಿ (ಸ್ವಂ. ಭಾ) ಸುಖೇನ ಪ್ರಣೇತವ್ಯಃ ಇತಿ (ಸಾ. ಭಾ) ಸ್ವಂದಸ್ವಾಮಿಗಳು ಸುಪ್ರಣೀತಿ ಶಬ್ದಕ್ಕೆ ಆಯಾಸವಿಲ್ಲದೆ ಇರುವಂತೆ ಕಾರ್ಯಗಳನ್ನು ಆಚರಿಸುವುದು ಅಥವಾ ನೆರವೇರಿಸುವುದು ಎಂದು ಅರ್ಥವನ್ನು ವಿವರಿಸಿರುವರು. ಅಗ್ನಿಯು ಯಜಮಾನರಿಂದ ಆಯಾಸವು ಕಾರ್ಯಗಳನ್ನು ನೆರವೇರಿಸುವ ಕ್ರಮಗಳನ್ನು ತಿಳಿದಿರುವವರ ಅನುಮತಿಯಂತೆ ಸುಖವಾಗಿ ಆರಾಧಿಸಲು ಯೋಗ್ಯನಾಗಿರುವನು.

ಸ್ಯೋನಶೀರತಿಥಿರ್ನ ಪ್ರೀಣಾನಃ—ಸ್ಯೋನಮಿತಿ ಸುಖನಾಮ । ಸ್ಯೋನೇ ಸುಖಕರೇ ಗಾರ್ಹಪತ್ಯಾದಿಸ್ಥಾನೇ ಶೇತೇ ಇತಿ ಸ್ಯೋನಶೀಃ । ಶಂಙವಾತಾ, ಶತೆರಾ ಮೊದಲಾದ ಇಪ್ಪತ್ತು ಸುಖನಾಮಗಳಲ್ಲಿ **ಸ್ಯೋನ** ಪದವು (ನಿ ೩-೧೩) ಉಕ್ತವಾಗಿರುವುದು ಸುಖವನ್ನು ಉಂಟುಮಾಡುವ ಗಾರ್ಹಪತ್ಯವೆಂದು ಯಜ್ಞವೇದಿಯಲ್ಲಿ ನಿರ್ದಿಷ್ಟವಾದ ಪ್ರದೇಶದಲ್ಲಿ ಸುಖವಿಂದ ಉಪವಿಷ್ಟನಾಗಿರುವನು ಎಂದು ಅಗ್ನಿಗೆ ಈ ಪದವು ವಿಶೇಷಣವಾಗಿರುವುದೆಂದು ಸಾಯಣರು ವ್ಯಾಖ್ಯಾನಮಾಡಿರುವರು. ಸ್ವಂದಸ್ವಾಮಿಗಳು **ಸ್ಯೋನಶೀಃ** ಎಂಬ ಪದದಲ್ಲಿರುವ ಶೀಃ ಎಂಬುವುದು ಶಿಬ್‌ಧಾತುವಿನ ರೂಪವಾಗಿರುವ ಕಾರಣ **ಶೇತೇಽಸ್ಮಿನ್ ಸ್ಥಾನೇಽರ್ಥಃ ಶೀಃ** ಎಂಬುವುದು ಸ್ಥಾನವನ್ನು ನಿರ್ದೇಶಮಾಡುವುದು **ತಾಸಾಮಹಿಃ ಪತ್ಸುತಃ ಶೀರ್ಬಭೂವ** (ಋ. ವೇ ೧-೩೨-೮) ಎಂಬ ಋಕ್ಕಿನಲ್ಲಿ ನಿರ್ದಿಷ್ಟವಾಗಿರುವಂತೆ **ಅಂತರ್ಭಾವಿತ ಣಿಜರ್ಥ**ದಲ್ಲಿ ಉಪಯುಕ್ತವಾಗಿ **ಸುಖಸ್ಯ ಸ್ಥಾಪಯಿತಾ** ಸುಖವನ್ನು ಉಂಟುಮಾಡುವವನು ಎಂದು ಅರ್ಥವನ್ನು ಹೇಳಿರುವರು. ಅತಿಥಿಯು ಸುಖವಾದ ಆಸನದಲ್ಲಿ ಉಪವಿಷ್ಟನಾಗಿ ಅರ್ಘ್ಯಾದ್ಯಾದಿಗಳಿಂದ ಪೂಜಿತನಾಗಿ ತೃಪ್ತಿಯನ್ನು ಹೊಂದಿ ಸುಖಕರನಾಗಿರುವ ಹಾಗೆ ಅಗ್ನಿಯು ಗಾರ್ಹಪತ್ಯಾದಿ ವೇದಿಯಲ್ಲಿ ಸುಖೋಪವಿಷ್ಟನಾಗಿ ಯಜಮಾನರಿಂದ ಪೂಜಾದಿಗಳನ್ನೂ ಹವಿರ್ಭಾಗಗಳನ್ನೂ ಸ್ವೀಕರಿಸುತ್ತಾ ತೃಪ್ತನಾಗಿ ಸುಖಕರನೂ ಇಷ್ಟಗಳೆಲ್ಲವನ್ನೂ ನೆರವೇರಿಸುವನೂ ಆಗಿರುವನು.

ಹೋತೇವ ಸದ್ಮ ವಿಧತೋ ವಿತಾರೀತ್-—ಹೋಮಕರ್ತಾ ಅಧ್ವರ್ಯುಃ । ಹೋಮವನ್ನು ಆಚರಿಸುವ ಅಧ್ವರ್ಯು ಎಂಬ ಋತ್ವಿಜನು ಎಂದು ಇಲ್ಲಿ ಹೋತೃ ಪದಕ್ಕೆ ಅರ್ಥವು. ಅಧ್ವರ್ಯುವು ಆಯಾಯ ಕಾಲಾನುಗುಣವಾಗಿ ಯಜ್ಞಾದಲ್ಲಿ ಹವಿರ್ಭಾಗಗಳನ್ನು ಅಗ್ನಿಯಲ್ಲಿ ಹೋಮಮಾಡಿ ಹೇಗೆ ಯಜಮಾನನ ಮನೆಯು ವೃದ್ಧಿಯಾಗುವ ಹಾಗೆ ವರ್ತಿಸುವನೋ ಅದರಂತೆಯೇ ಅಗ್ನಿಯೂ ತೃಪ್ತನಾಗಿ ಯಜಮಾನನ ಮನೆಯನ್ನು ವೃದ್ಧಿಗೊಳಿಸುವನು.

॥ ವ್ಯಾಕರಣಪ್ರಕ್ರಿಯಾ ॥

ಪಿತೃವಿತ್ತಃ—ವಿದ್ಲೃ ಲಾಭೇ ಧಾತು ಇದಕ್ಕೆ **ನಿಷ್ಠಾ** ಎಂಬುದರಿಂದ ಕರ್ಮಣಿಯಲ್ಲಿ **ಕ್ತ** ಪ್ರತ್ಯಯ **ಯೆಸ್ಯವಿಭಾಷಾ** (ಪಾ. ಸೂ. ೭-೨-೬೫) ಎಂಬುದರಿಂದ ಇಟ್ ನಿಷೇಧ ಬರುತ್ತದೆ. ಎಲ್ಲಿಯಾದರೂ ಇಟ್ ವಿಕಲ್ಪಿತವಾದರೆ ನಿಷ್ಠಾದಲ್ಲಿ ಇಟ್ ಬರುವುದಿಲ್ಲವೆಂದು ಅದರ ತಾತ್ಪರ್ಯ. **ವಿಭಾಷಾ ಗಮಹನವಿದ ವಿಶಾಮ್** (ಪಾ. ಸೂ. ೭-೨-೬೮) ಎಂಬುದರಿಂದ ವಿಡಿನ ಪರದಲ್ಲಿರುವ ಕ್ತ ಸುವಿಗೆ ಇಟ್ ವಿಕಲ್ಪವಾಗಿ ವಿಹಿತವಾಗಿದೆ. ವಿದ ಧಾತುವು ಅನೇಕ

ವಿದ್ವರೂ ಸಾಹಚರ್ಯಪರಿಭಾಷೆಯಿಂದ ಇಲ್ಲಿ ವಿಶಿ ಸಾಹಚರ್ಯವಿರುವುದರಿಂದ ತುದಾದಿಸರಿತವಾದ ವಿದಿಧಾತುವೇ ಗೃಹೀತವಾಗಿರುವುದರಿಂದ ಹಿಂದಿನ ಸೂತ್ರದಿಂದ ಇಣ್ ನಿಷೇಧ ಬರಲು ಯಾವ ಅಭ್ಯಂತರವೂ ಇಲ್ಲ ದಕಾರದ ಪರದಲ್ಲಿ ನಿಷ್ಠಾ ತಕಾರ ಬಂದುದರಿಂದ ಣತ್ವವು ಪ್ರಾಪ್ತವಾದರೆ **ವಿತ್ತೋ ಭೋಗಪ್ರತ್ಯಯಯೋಃ** (ಪಾ. ಸೂ. ೮-೨-೫೮) ಎಂಬುದರಿಂದ ನಿಷ್ಠಾನತ್ವಾಭಾವವು ನಿಪಾತಿತವಾಗಿದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ ವಿತುಃ, ವಿತ್ತಃ, ವಿತ್ತವಿತ್ತುಃ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ

ವಯೋಧಾಃ—ಡುಧಾಞ್ ಧಾರಣಪೋಷಣಯೋಃ ಧಾತು. ಇದಕ್ಕೆ **ಆತೋ ಮನಿನ್ ವನಿಪ್ ಕ್ವನಿಪಶ್ಚ** (ಪಾ ಸೂ ೩-೨-೭೪) ಎಂಬುದರಿಂದ ಚಕಾರದಿಂದ ಸಮುಚ್ಚಿತವಾದ ವಿಚ್ ಪ್ರತ್ಯಯ. ವಿಚ್ಚಿನಲ್ಲಿ ಸರ್ವಲೋಪವಾಗುತ್ತದೆ ವಯಃ ದಧಾತಿ ಇತಿ ವಯೋಧಾಃ ಹಿಂದಿನಂತೆಯೇ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಸುಪ್ರಣೇತಿಃ—ಪ್ರಣೀಯತೇ ಇತಿ ಪ್ರಣೇತಿಃ. **ಸ್ತ್ರೀಯಾಂ ಕ್ತಿನ್** (ಪಾ ಸೂ ೩-೩-೯೪) ಎಂಬುದರಿಂದ ಕ್ತಿನ್ ಪ್ರತ್ಯಯ. ಕಿತ್ತಾದುದರಿಂದ ಧಾತುವಿಗೆ ಗುಣ ಬರುವುದಿಲ್ಲ. **ತಾದೌ ಚ**—(ಪಾ. ಸೂ ೬-೩ ೫೦) ಎಂಬುದರಿಂದ ಗತಿಗೆ (ಪ್ರ) ಪ್ರಕೃತಿಸ್ವರ ಬರುತ್ತದೆ ಆಮೇಲೆ ಶೋಭನಾ ಪ್ರಣೇತಿಃ ಸುಪ್ರಣೇತಿಃ ಎಂದು ಸು ಶಬ್ದದೊಡನೆ ಸಮಾಸವಾದಾಗ **ಕೃದ್‌ಗ್ರಹಣೇ ಗತಿಕಾರಕಪೂರ್ವಸ್ಯಾಪಿ ಗ್ರಹಣಮ್** ಎಂಬ ಪರಿಭಾಷೆಯಿಂದ ಕೃದಂತಕ್ಕೆ ಗ್ರಹಣವಿರುವಾಗ ಗತಿಕಾರಕಪೂರ್ವದಲ್ಲಿದ್ದರೆ ಅದಕ್ಕೂ ಗ್ರಹಣವಿರುವುದರಿಂದ ಇಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

ಚಿಕಿತುಷಃ—ಕಿತ ಜ್ಞಾನೇ ಧಾತು ಇದಕ್ಕೆ ಲಿಟ್ಪಿನಲ್ಲಿ **ಕ್ವಸುಶ್ಚ** (ಪಾ ಸೂ ೩-೨-೧೦೭) ಎಂಬುದರಿಂದ ಕ್ವಸುರಾದೇಶ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಚುತ್ವ ಕಿತ್ತಾದುದರಿಂದ ವಸು ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ ಚಿಕಿತ್ವಸ್ ಶಬ್ದವಾಗುತ್ತದೆ ಷಷ್ಠೀ ವಿಕವಚನದಲ್ಲಿ ಜಸ್ ಪರವಾದಾಗ ಭಸಂಜ್ಞೆ ಇರುವುದರಿಂದ **ವಸೋಃ ಸಂಪ್ರಸಾರಣಮ್** ಎಂಬ ಸೂತ್ರದಿಂದ ಸಂಪ್ರಸಾರಣ ಪೂರ್ವರೂಪ **ಶಾಸಿವಸಿಘಸೀನಾಂ ಚ** (ಪಾ ಸೂ ೮-೩-೬೦) ಎಂಬುದರಿಂದ ವಸುವಿನ ಸಕಾರಕ್ಕೆ ಷತ್ವ. ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗ ಚಿಕಿತುಷಃ ಎಂದು ರೂಪವಾಗುತ್ತದೆ.

ಶಾಸುಃ—ಶಾಸು ಅನುಶಿಷ್ಟೌ ಧಾತು ಅದಾದಿ ಉಣಾದಿಯಲ್ಲಿ ಒತ್ತುಲವಚನವಿರುವುದರಿಂದ ಶ್ನು **ಸ್ನು ಸ್ನುಹಿಂ**—(ಉ ಸೂ ೧-೧೦) ಎಂಬುದರಿಂದ ವಿಧಿಸಲ್ಪಡುವ ಉಪ್ರತ್ಯಯವು ಇದಕ್ಕೂ ಒರುತ್ತದೆ ಎಂದು ತಿಳಿಯಬೇಕು ಅಲ್ಲಿ ಪೂರ್ವಸೂತ್ರದಿಂದ ಸಿತ್ ಎಂದು ಅನುವೃತ್ತವಾಗುವುದರಿಂದ ಉ ಪ್ರತ್ಯಯಕ್ಕೆ ನಿಪ್ಪದ್ಯಾವವಿರುವುದರಿಂದ **ಙ್ಣಿತ್ಯಾದಿರ್ನಿತ್ಯಮ್** (ಪಾ ಸೂ ೬-೧-೧೯೭) ಎಂಬುದರಿಂದ ಆದ್ಯುದಾತ್ತ ಸ್ವರ ಒರುತ್ತದೆ

ಸ್ಯೋನಶೀಃ—ಸ್ಯೋನನೆಂಬುದು ಸುಖದ ಹೆಸರು. ಸ್ಯೋನೇ-ಸುಖಕರೇ-ಗಾರ್ಹಪತ್ಯಾದಿಸ್ಥಾನೇ ಶೇತೇ ಇತಿ ಸ್ಯೋನಶೀಃ ॥ ಶೀಙ್ ಸ್ವಪ್ನೇ ಧಾತು. **ಕ್ವಿಪ್ ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್‌ಪ್ರತ್ಯಯ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ

ಪ್ರೀಣಾನಃ—ಪ್ರೀಞ್ ತರ್ಪಣೇ. ಇದಕ್ಕೆ ಕರ್ಮಣಿಯಲ್ಲಿ ಲಡರ್ಥದಲ್ಲಿ ಶಾನಚ್. **ವ್ಯತ್ಯಯೋ ಬಹುಲಮ್** ಎಂಬುದರಿಂದ ಯಕ್ಕಿಗೆ ಬದಲಾಗಿ ಶ್ನಾ ವಿಕರಣ ಬರುತ್ತದೆ. **ಸಾರ್ವಧಾತುಕಮಪಿತ್** ಸೂತ್ರದಿಂದ ಙಿತ್ವ ಬರುವುದರಿಂದ ಶ್ನಾ ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ ಬರುವುದಿಲ್ಲ. ರೇಫನಿಮಿತ್ತವಿರುವುದರಿಂದ **ಆಟ್-ಕುಪ್ವಾಙ್**-ಸೂತ್ರದಿಂದ ನಕಾರಕ್ಕೆ ಣತ್ವ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ

ವಿಧತಃ– ವಿಧ ವಿಧಾನೇ ಧಾತು ತುದಾದಿ. **ವಿಧತಿಃ ಪರಿಚರಣಕರ್ಮಾ** ಎಂದು ನಿರುಕ್ತಕಾರರು ವಿವರಿಸಿರುತ್ತಾರೆ (ಸೇವಾರ್ಥ) ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ. **ತುದಾದಿಭ್ಯಃ ಶಃ** (ಪಾ ಸೂ ೩-೧-೭೭) ಎಂಬುದರಿಂದ ಶ ವಿಕರಣ ಙಿತ್ತಾದುದರಿಂದ **ಲಘೂಪಧಗುಣ** ಬರುವುದಿಲ್ಲ. ಷಷ್ಠೀ ವಿಕವಚನಾಂತರೂಪ ನುಮ್‌ರಹಿತವಾದ ಶತೃವಿನ ಪರದಲ್ಲಿ ವಿಭಕ್ತಿ ಬಂದುದರಿಂದ **ಶತರಸುಮೋ ನದ್ಯಜಾದೀ** (ಪಾ ಸೂ ೬-೧-೧೭೩) ಎಂಬುದರಿಂದ ಅಜಾದಿಯಾದ ಆ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ ॥ ೧ ॥

॥ ಸಂಹಿತಾಪಾಠಃ ॥

ದೇವ್ಯೋ ನ ಯಃ ಸವಿತಾ ಸತ್ಯಮನ್ಮಾ ಕ್ರತ್ವಾ ನಿಪಾತಿ ವೃಜನಾನಿ ವಿಶ್ವಾ ।
ಪುರುಪ್ರಶಸ್ತೋ ಅಮತಿರ್ನ ಸತ್ಯ ಆತ್ಮೇವ ಶೇವೋ ದಿಧಿಷಾಯ್ಯೋ ಭೂತ್ ॥ ೨ ॥

॥ ಪದಪಾಠಃ ॥

ದೇವಃ । ನ । ಯಃ । ಸವಿತಾ । ಸತ್ಯಽಮನ್ಮಾ । ಕ್ರತ್ವಾ । ನಿಽಪಾತಿ । ವೃಜನಾನಿ । ವಿಶ್ವಾ ।
ಪುರುಽಪ್ರಶಸ್ತಃ । ಅಮತಿಃ । ನ । ಸತ್ಯಃ । ಆತ್ಮಾಽಇವ । ಶೇವಃ । ದಿಧಿಷಾಯ್ಯಃ ।
ಭೂತ್ ॥ ೨ ॥

॥ ಸಾಯಣಭಾಷ್ಯಂ ॥

ದೇವೋ ನ ಸವಿತಾ ದ್ಯೋತಮಾನಃ ಸರ್ವಸ್ಯ ಪ್ರೇರಕಃ ಸೂರ್ಯ ಇವ ಯೋಽಗ್ನಿಃ ಸತ್ಯಮನ್ಮಾ ಸತ್ಯಜ್ಞಾನೋ ಯಥಾರ್ಥದರ್ಶೀ ಸೋಽಗ್ನಿಃ ಕೃತ್ವಾತ್ಮೀಯೇನ ಕರ್ಮಣಾ ವಿಶ್ವಾ ವೃಜನಾನಿ । ವಿಭಕ್ತಿ । ವ್ಯತ್ಯಯಃ । ಸರ್ವೇಭ್ಯಃ ಸಂಗ್ರಾಮೇಭ್ಯೋ ನಿಪಾತಿ ನಿತರಾಂ ಪಾಲಯತಿ। ವರ್ಜ್ಯಂತೇ ಹಿಂಸ್ಯಂತೇಽಸ್ಮಿನ್ನಿತಿ ವೃಜನಂ ಸಂಗ್ರಾಮಃ । ಅಪಿ ಚ ಪುರುಪ್ರಶಸ್ತಃ ಪುರುಭಿರ್ಯಜಮಾನೈಃ ಸ್ತುತೋಽಗ್ನಿರಮತಿರ್ನ । ರೂಪನಾಮೈತತ್ । ರೂಪಮಿವ ಸತ್ಯೋ ಬಾಧರಹಿತಃ । ರೂಪ್ಯತ ಇತಿ ರೂಪಂ ಸ್ವರೂಪಂ । ಯಥಾ ಪೃಥಿವ್ಯಾದೇಃ ಸ್ವರೂಪಮಾಗಮಾಪಾಯಿಷು ವಿಶೇಷೇಷು ಸತ್ಸ್ವಪಿ ಸ್ವಯಮೈಕರೂಪ್ಯೇಣ ನಿತ್ಯಂ ಭವತಿ ತದ್ವದಗ್ನಿರಪ್ಯುಚ್ಚಾವಚೇಷು ಸರ್ವೇಷು ಕರ್ಮಸು ಸ್ವಯಮೇಕ ಏವ ನ್ಯಾಪ್ಯ ವರ್ತತೇ । ಸೋಽಗ್ನಿಃ ಶೇವಃ ಸುಖಕರಃ । ತತ್ರ ದೃಷ್ಟಾಂತಃ । ಆತ್ಮೇವ॥ ಪರಮಪ್ರೇಮಾಸ್ಪದತಯಾ ನಿರತಿಶಯಾನಂದಸ್ವರೂಪ ಆತ್ಮಾ ಯಥಾ ಸರ್ವಾನ್ಸುಖಯತಿ । ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ । ಏಷ ಹ್ಯೇವಾನಂದಂ ಯಾತೀತಿ ಚ ಶ್ರವಣಾತ್ । ತದ್ವದಗ್ನಿರಪಿ ಸ್ವರ್ಗಾದಿಫಲಹೇತುತಯಾ ಸುಖಯತಿ । ಏವಂ ಭೂತೋಽಗ್ನಿರ್ದಧಿಷಾಯ್ಯೋ ಭೂತ್ । ಸರ್ವೈರ್ಯಜಮಾನೈರ್ಧಾರಣೀಯೋ ಭವತಿ । ಪರಿತ್ಯಾಗೇ ಹಿ ವೀರಹತ್ಯಾಲಕ್ಷಣೋ ದೋಷೋ ಭವತಿ । ತಥಾ ಚ ತೈತ್ತಿರೀಯಕಂ । ವೀರಹಾ ವಾ ಏಷ ದೇವಾನಾಂ ಯೋಽಗ್ನಿಮುದ್ವಾಸಯತೇ । ತೈ. ಸಂ. ೧-೫-೨-೧ ಇತಿ ॥ ಸತ್ಯಮನ್ಮಾ । ಮನನಂ ಮನ್ಮ । ಮನ ಜ್ಞಾನೇ । ಅನ್ಯೇಭ್ಯೋಽಪಿ ದೃಶ್ಯಂತ ಇತಿ ಮನಿನ್ । ಸತ್ಯಮವಿತಥಂ ಮನ್ಮ ಯಸ್ಯ । ಬಹುವ್ರೀಹಿಸ್ವರಃ । ವೃಜನಾನಿ । ವೃಜೀ ವರ್ಜನೇ । ಕ್ಯಪ್ಪ್ರತ್ಯಯಾದಿನಾ ಕ್ಯುಪ್ರತ್ಯಯಃ । ಪುರುಪ್ರಶಸ್ತಃ । ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವೇ ಪ್ರಾಪ್ತೇ ಪ್ರವೃದ್ಭಾದೀನಾಂ ಚ । ಪಾ. ೬-೨-೧೪೬ । ಇತ್ಯುತ್ತರಪದಾಂತೋದಾತ್ತತ್ವಂ । ಸ ಹ್ಯಾಕೃತಿಗಣ ಇತ್ಯುಕ್ತಂ । ಅಮತಿಃ । ಅಮ ಗತ್ಯಾದಿಷು । ಅಮೇರತಿಃ । ದಿಧಿಷಾಯ್ಯಃ । ದಧಾತೇರ್ದಿಧಿಷಾಯ್ಯಃ । ಉ. ೩-೯೭ । ಇತಿ ಸಾಯ್ಯಪ್ರತ್ಯಯಾಂತೋ ನಿಪಾತ್ಯತೇ ॥

॥ ಶ್ರುತಿಪದಾರ್ಥ ॥

ದೇವಃ ಸವಿತಾ ನ—ಪ್ರಕಾಶಮಾನನಾದ, ಸರ್ವಪ್ರೇರಕನಾದ ಸೂರ್ಯನಂತೆ । **ಯಃ**—ಯಾವ ಅಗ್ನಿಯು । **ಸತ್ಯಮನ್ಮಾ**—ಸತ್ಯವಾದ ಜ್ಞಾನವುಳ್ಳವನೋ (ಯಥಾರ್ಥ ದರ್ಶಿಯೋ) । (**ಸಃ**—ಆ ಅಗ್ನಿಯು) । **ಕೃತ್ವಾ**—ಸ್ವಕೀಯವಾದ ಕರ್ಮದಿಂದ । **ವಿಶ್ವಾ ವೃಜನಾನಿ**—ಎಲ್ಲಾ ಯುದ್ಧಗಳಿಂದಲೂ । **ನಿಪಾತಿ**—ಚೆನ್ನಾಗಿ ರಕ್ಷಿಸುತ್ತಾನೆ । **ಪುರುಪ್ರಶಸ್ತಃ**—ಬಹುಜನ (ಯಜಮಾನ)ರಿಂದ ಸ್ತುತನಾದ (ಅಗ್ನಿಯು) । **ಅಮತಿರ್ನ**—ರೂಪದಂತೆ । **ಸತ್ಯಃ**—ಬಾಧರಹಿತನಾಗಿ । **ಆತ್ಮೇವ**—ಆತ್ಮನಂತೆ । **ಶೇವಃ**—ಸುಖಕರನಾಗಿ । **ದಿಧಿಷಾಯ್ಯೋ ಭೂತ್**—ಎಲ್ಲರಿಂದಲೂ ಇಡಲ್ಪಡುತ್ತಾನೆ (ಗೌರವಿಸಲ್ಪಡುತ್ತಾನೆ).

॥ ಭಾವಾರ್ಥ ।

ಪ್ರಕಾಶಮಾನನಾದ ಸೂರ್ಯನಂತಿರುವ, ಯಥಾರ್ಥದರ್ಶಿಯಾದ, ಸ್ವಕೀಯ ಕರ್ಮಗಳಿಂದ (ಯಾಗ ಕರ್ತೃಗಳನ್ನು) ಎಲ್ಲಾ ಯುದ್ಧಗಳಲ್ಲಿಯೂ ರಕ್ಷಿಸುವ, ಬಹುಜನರಿಂದ ಸ್ತುತ್ಯನಾದ ಅಗ್ನಿಯು, ರೂಪದಂತೆ ಬಾಧರಹಿತನಾಗಿ, ಆತ್ಮನಂತೆ ಸುಖಕರನಾಗಿ, ಎಲ್ಲರ ಮನೆಯಲ್ಲಿಯೂ (ಸರ್ವದಾ) ಸ್ಥಾಪಿತನಾಗಿರುತ್ತಾನೆ

English Translation

He who is like the divine Sun, who knows the truth (of things) preserves by his actions (his votaries) in all encounters, like nature, he is unchangeable, and like soul, is the source of happiness he is ever to be cherished.

ವಿಶೇಷವಿಷಯಗಳು ॥

ಕೃತ್ವಾ ನಿಪಾತಿ ವೃಜನಾನಿ ವಿಶ್ವಾ—**ವೃಜನಾನಿ** ಎಂಬ ಪದವು—**ಯತಸ್ಯ ಹಿ ಶುರುಧಃ ಸಂತಿ ಪೂರ್ವೀರ್ಯತಸ್ಯ ಧೀತಿರ್ವೃಜಿನಾನಿ ಹನ್ತಿ** (ಋ ಸಂ ೪-೩೩-೪) ಎಂಬ ಮಂತ್ರದಲ್ಲಿ **ವರ್ಜನೀಯಾನಿ** ಎಂದು ಅರ್ಥಬೋಧಕವಾಗಿರುವುದು. **ಸಂಗ್ರಾಮೇಭ್ಯಃ** ಯುದ್ಧಗಳ ದೆಸೆಯಿಂದ ಎಂದು ಸಾಯಣರು ಅರ್ಥವನ್ನು ಹೇಳಿರುವರು **ವೃಜಿನಮಿತಿ ಬಲನಾಮಾನ್ಯತ್ರ ಇಹ ತು ವರ್ಜನೀಯೆತ್ವಾತ್ ವೃಜಿನಂ ಪಾಪಮುಚ್ಯತೇ। ಸರ್ವಾಣಿ ಪಾಪಾನಿ।** ವೃಜಿನವೆಂಬ ಪದವು ಬೇರೆಯ ಕಡೆಯಲ್ಲಿ ಬಲವೆಂಬ ಅರ್ಥವನ್ನು ಬೋಧಿಸುವುದು. ಇಲ್ಲಿ ತ್ಯಾಗಾರ್ಹವಾಗಿರುವುದು ಎಂಬ ಅರ್ಥವು ವಿವಕ್ಷಿತವಾಗಿರುವುದರಿಂದ ಪಾಪವೆಂದು ಅರ್ಥವು. ಎಲ್ಲಾ ಪಾಪಗಳಿಂದು ತಾತ್ಪರ್ಯವು (ಸ್ಕಂ. ಭಾ) ಅಗ್ನಿಯು, ವಿಪತ್ತುಗಳು ಉಂಟಾಗುವ ಸನ್ನಿವೇಶಗಳು ಒದಗುವುದರಿಂದ ವರ್ಜನೀಯವಾಗಿರುವ ಯುದ್ಧಗಳ ದೆಸೆಯಿಂದ ಯಜಮಾನರು ರಕ್ಷಿತರಾಗುವಂತೆ ಕರ್ಮಗಳನ್ನು ಆಚರಿಸುವ ಹಾಗೆ ಅನುಗ್ರಹವನ್ನು ಮಾಡಿ ಎಲ್ಲರನ್ನೂ ಅತಿಶಯವಾಗಿ ರಕ್ಷಣೆಮಾಡುವನು. ಎಲ್ಲಾ ಪಾತಕಗಳಿಂದ ರಕ್ಷಿಸುವನೆಂದು ಸ್ಕಂದಸ್ವಾಮಿಗಳು ಅರ್ಥವನ್ನು ಹೇಳುವರು.

ಸತ್ಯಮನ್ಮಾ—**ಮನನಂ ಮನ್ಮ, ಸತ್ಯಮವಿತಥಂ ಮನ್ಮ ಯಸ್ಯ। ಮನ್ಮ** ಎಂದರೆ ಸಂಕಲ್ಪವು. ವ್ಯರ್ಥವಾಗದಿರುವ ಸಂಕಲ್ಪವುಳ್ಳವನು ಎಂದು ಅರ್ಥ

ಅಮತಿರ್ನ ಸತ್ಯಃ—**ರೂಪನಾಮೈತತ್। ರೂಪಮಿವ ಸತ್ಯಃ ಬಾಧರಹಿತ** (ಸಾ ಭಾ.) **ಅಮತಿರಿತಿ ರೂಪನಾಮಾನ್ಯತ್ರ। ಇಹ ತು ಆತ್ಮಮತಿರಮತಿರುಚ್ಯತೇ। ಅಥವಾ ಗಮನಶೀಲೋ ಅದಿತ್ಯಃ ತದ್ವತ್ ಸತ್ಯಃ।** (ಸ್ಕಂದ ಭಾಷ್ಯ). **ನಿರ್ಣಿಕ್, ವಪ್ರಿಃ,** ಎಂಬ ಹದಿನಾರು ರೂಪನಾಮಗಳಲ್ಲಿ **ಅಮತಿ** ಶಬ್ದವು ಉಕ್ತವಾಗಿರುವುದರಿಂದ ರೂಪನಂತನೆಂದು ಅರ್ಥವು (ನಿ. ೩-೧೩) **ರೂಪ್ಯತೇ**—ಪದಾರ್ಥಗಳು ಬೇರೆಬೇರೆಯಾಗಿ ಇರುವಹಾಗೆ

ನೂಡುವ ವಸ್ತುಗಳ ಆಕಾರಗಳು ರೂಪವೆನಿಸುತ್ತದೆ. ಪೃಥಿವಿಯೇ ಮೊದಲಾದವುಗಳಲ್ಲಿ ವೃದ್ಧಿ ಹ್ರಾಸವು ಉಂಟಾಗುವುದಾದರೂ ಪೃಥಿವೀತ್ವವೆಂಬುವುದು ಒಂದು ಮಾತ್ರ ವ್ಯತ್ಯಾಸವನ್ನು ಹೊಂದದೆ ಇರುವಂತೆ ಅಗ್ನಿಯೂ ಅತಿಶಯವಾದ ಮಹತ್ತ್ವವನ್ನು ಉಂಟುಮಾಡುವ ಕರ್ಮಗಳಲ್ಲಿಯೂ ಇತರವಾದವುಗಳಲ್ಲಿ ತಾನು ಒಬ್ಬನೇ ವ್ಯಾಪಿಸಿ ಇರುವನು. ಇದರಂತೆಯೇ ಯಾವಾಗಲೂ ಯಾವ ವಿಧವಾದ ನ್ಯೂನತೆಯನ್ನೂ ಹೊಂದದೆ ಇರುವ ಸ್ಥಿತಿಯನ್ನು ಹೊಂದಿರುವನು ಎಂದು ಸಾಯಣರು ವ್ಯಾಖ್ಯಾನನುಡಿರುವರು. ಸ್ಕಂದಸ್ವಾಮಿಗಳು ಅಗ್ನಿಯು **ಆತ್ಮವಿಷಯವಾದ** ಜ್ಞಾನವುಳ್ಳವನು ಆದ್ದರಿಂದಲೇ ಅಮತಿ ಎಂದು ವ್ಯವಹರಿಸಲ್ಪಡುವನು ಅಥವಾ ಅಮ ಎಂಬ ಧಾತುವು ಗಮನವೇ ಮೊದಲಾದ ಅರ್ಥಬೋಧಕವಾಗಿರುವುದರಿಂದ **ಅಮತಿ** ಎಂದರೆ ಗಮನಶೀಲನಾಗಿರುವ ಆದಿತ್ಯನ ಹಾಗೆ ಸ್ಥಿತಿಯನ್ನು ಹೊಂದಿ ಇರುವನು ಎಂದು ವಿವರಿಸಿರುವರು.

ಆತ್ಮೇವ ಶೇವಃ ದಿಧಿಷಾಯ್ಯೇ—ಅತಿಶಯವಾದ ಪ್ರೀತಿಗೆ ಆಸ್ಪದವಾಗಿರುವ ಆತ್ಮಸ್ವರೂಪದ ಹಾಗೆ ಅಗ್ನಿಯು ಎಲ್ಲರಿಗೂ ಸುಖಕರನಾಗಿಯೂ, ನಿರತಿಶಯವಾದ ಆನಂದರೂಪನಾಗಿ ಇರುವ ಆತ್ಮನು ಎಲ್ಲರಿಗೂ ಸುಖವನ್ನು ಉಂಟುಮಾಡುವ ಹಾಗೆ ಸ್ವರ್ಗವೇ ಮೊದಲಾದ ಉತ್ತಮವಾದ ಫಲಗಳನ್ನು ಉಂಟುಮಾಡುವುದರಿಂದ ಸುಖಜನಕನಾಗಿಯೂ ಇರುವನು ಆತ್ಮಸ್ವರೂಪವು ನಿರತಿಶಯಾನಂದ ರೂಪದಿಂದ ಇರುವ ವಿಷಯವನ್ನು **ಏತಸ್ಯೈವಾನಂದ ಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ** (ಬೃ ಉ. ೪-೩-೩೨) ಈ ಆತ್ಮನ ಆನಂದದ ಲೇಶದಿಂದಲೇ ಇತರ ಎಲ್ಲಾ ಪ್ರಾಣಿಗಳೂ ಸುಖದಿಂದ ಇರುವುವು. **ಏಷ ಹ್ಯೇವಾನಂದ ಯಾತಿ** (ತೈ ಆ ೮-೭) ಈ ಆತ್ಮನೇ ಆನಂದರೂಪನಾಗಿರುವವನು ಎಂದು ಶ್ರುತಿಯು ಬೋಧಿಸುವುದು.

ಯಜ್ಞಮಾಡುವವರಿಗೂ ಇತರರಿಗೂ ಯಾವಾಗಲೂ ಆತ್ಮನಂತೆ ಸುಖಕರನಾಗಿರುವ ಅಗ್ನಿಯನ್ನು ಪೂಜಿಸದೆ ಇರುವವನು ವೀರಹತ್ಯಾ ಎಂಬ ಪಾತಕಕ್ಕೆ ಒಳಗಾಗುವನು.

ವೀರಹಾ ವಾ ಏಷ ದೇವಾನಾಂ ಯೋ ಅಗ್ನಿಮುದ್ವಾಸಯತೇ ।

(ತೈ. ಸಂ ೧-೫-೨-೧)

ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗಿರುತ್ತದೆ ಆದ್ದರಿಂದ ಅಗ್ನಿಯನ್ನು ಅವಶ್ಯವಾಗಿ ಪೂಜಿಸಬೇಕೆಂದು ತಾತ್ಪರ್ಯವು.

ಆತ್ಮನಂತೆ ಸರ್ವರಿಗೂ ಸುಖಕರನಾಗಿರುವ ಅಗ್ನಿಯು ಎಲ್ಲವನ್ನೂ ಧರಿಸಿ ಇರುವನೆಂದು ಸ್ಕಂದಸ್ವಾಮಿಗಳು ವ್ಯಾಖ್ಯಾನಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ಸತ್ಯಮನ್ಮಾ—ಮನನಂ ಮನ್ಮ. ಮನ ಜ್ಞಾನೇ ಧಾತು ಇದಕ್ಕೆ **ಅನ್ಯೇಭ್ಯೋಽಪಿ ದೃಶ್ಯಂತೇ** (ಪಾ. ಸೂ ೩-೨-೭೫) ಎಂಬುದರಿಂದ ಮನಿನ್ ಪ್ರತ್ಯಯ. **ಸತ್ಯಂ ಅವಿತಥಂ ಮನ್ಮ ಯಸ್ಯ ಸತ್ಯಮನ್ಮಾ.** ಸತ್ಯಮನ್ಮನ್ ಶಬ್ದ. ಪ್ರಥಮಾ ಏಕವಚನದಲ್ಲಿ **ಸರ್ವನಾಮಸ್ಥಾನೇಚ್ಚಾಸಂಬುದ್ಧೌ** ಎಂಬುದರಿಂದ ಉಪಧಾದೀರ್ಘ. **ಹಲ್‌ಙ್ಯಾದಿಭ್ಯೋ**– ಸೂತ್ರದಿಂದ ಸುಲೋಪ **ನಲೋಪಃ ಪ್ರಾತಿಪದಿಕಾಂತಸ್ಯ** ಸೂತ್ರದಿಂದ

ನಲೋಪ ಬಹುವ್ರೀಹಿಸಮಾಸವಾದುದರಿಂದ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** (ಪಾ. ಸೂ ೬-೩-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ನಿಪಾತಿ—ಪಾ ರಕ್ಷಣೇ ಧಾತು ಅದಾದಿ ಲಟ್‌ಪ್ರಥಮಪುರುಷ ಏಕವಚನರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ

ವೃಜನಾನಿ—ವೃಜೀ ವರ್ಜನೇ ಧಾತು ಕೃಪೃವೃಜಿ—(ಉ ಸೂ ೨-೬೫) ಎಂಬುದರಿಂದ ಇದಕ್ಕೆ ಕ್ಯು ಪ್ರತ್ಯಯ ಕಿತ್ತಾದುದರಿಂದ ಲಘೂಪಧ ಗುಣ ಬರುವುದಿಲ್ಲ **ಯುವೋರನಾಕೌ** ಎಂಬುದರಿಂದ ಕ್ಯುವಿನಲ್ಲಿ ಉಳಿಯುವ ಯು ಎಂಬುದಕ್ಕೆ ಅನಾದೇಶ. ವೃಜನ ಎಂದು ರೂಪವಾಗುತ್ತದೆ. ಪ್ರತ್ಯಯದ ಆದ್ಯುದಾತ್ತ ಸ್ವರದಿಂದ ಮಧ್ಯೋದಾತ್ತವಾದಪದವಾಗುತ್ತದೆ ದ್ವಿತೀಯಾ ಬಹುವಚನಾಂತರೂಪ

ವಿಶ್ವಾ—ನಪುಂಸಕದಲ್ಲಿ ಶಸ್ಸಿಗೆ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಮ್** ಎಂಬುದರಿಂದ ಶಿಗೆ ಲೋಪ

ಪುರುಪ್ರಶಸ್ತಃ—ಶಂಸು ಸ್ತುತೌ ಧಾತು ಇದಕ್ಕೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ **ಅನಿದಿತಾಂ ಹಲಉ**—ಎಂಬುದರಿಂದ ಉಪಧಾನಕಾರಲೋಪ. **ಪುರುಭಿಃ (ಪ್ರಕರ್ಷೇಣ) ಶಸ್ತಃ ಪುರುಪ್ರಶಸ್ತಃ. ತೃತೀಯಾಕರ್ಮಣಿ** (ಪಾ. ಸೂ. ೩-೩-೪೮) ಎಂಬುದರಿಂದ ಪೂರ್ವಪದಪ್ರಕೃತಿಸ್ವರವು ಪ್ರಾಪ್ತವಾದರೆ **ಪ್ರವೃದ್ಧಾದೀನಾಂ ಚ** (ಪಾ. ಸೂ ೬-೩-೧೪೬) ಎಂಬುದರಿಂದ ಇದು ಆ ಗಣದಲ್ಲಿ ಪಠಿತವಾದುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ. ಪ್ರವೃದ್ಧಾದಿಯು ಆಕೃತಿಗಣವಾದುದರಿಂದ ಅನುಶಾಸನವಿಲ್ಲದೆ ಉತ್ತರಪದಾಂತೋದಾತ್ತಸ್ವರ ಬಂದಲ್ಲಿ ಈ ಗಣದಲ್ಲಿ ಪಠಿತವಾಗಿದೆಯೆಂದು ಊಹಿಸಬೇಕು.

ಅಮತಿಃ—ಅವು ಗತ್ಯಾದಿಷು, ಧಾತು ಇದಕ್ಕೆ **ಅಮೇರತಿಃ** (ಉ ಸೂ ೩-೪೯) ಎಂಬುದರಿಂದ ಅತಿ ಪ್ರತ್ಯಯ ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ

ದಿಧಿಷಾಯ್ಯಃ—ಡುಧಾಞ್ ಧಾರಣಪೋಷಣಯೋಃ, ಧಾತು ಜುಹೋತ್ಯಾದಿ. **ದಿಧಿಷಾಯ್ಯಃ**—(ಉ ಸೂ ೩-೬೭) ಎಂಬುದರಿಂದ ಸಾಯ್ಯ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಪ್ರತ್ಯಯಸ್ವರ ಬರುತ್ತದೆ. ॥ ೬ ॥

॥ संहितापाठः ॥

द्यावो न यः पृथिवीं विश्वधायसा उपक्षेति हितमित्रो न राजा ।
पुरःसदः शर्मसदो न वीरा अनवद्या पतिजुष्टेव नारिः ॥ ३ ॥

॥ पदपाठः ॥

द्यावः । न । यः । पृथिवीम् । विश्वऽधायसाः । उपऽक्षेति । हितऽमित्रः ।
न । राजा ।
पुरःऽसदः । शर्मऽसदः । न । वीराः । अनवद्याः । पतिजुष्टाऽइव ।
नारिः ॥ ३ ॥

॥ सायणभाष्यम् ॥

द्यावो न द्योतमानः सूर्य इव योऽग्निर्विश्वधायसः सर्वस्य जगतो धर्ता । यथा सूर्यो वृष्ट्यादिप्रदानेन सर्वं जगद्धत्ते एवमग्निरपि यज्ञादिसाधनेन कृत्स्नस्य जगतो धारयिता । सोऽग्निः पृथिवीं पृथिव्यामुपक्षेति । सर्वेषां प्रियः सन्यज्ञं गृहादौ निवसति । तत्र दृष्टान्तः । हितमित्रो न राजा । हितान्यनुकूलानि मित्राणि यस्य स तादृशो राजा यथा सुखेन निवसति तद्वत् । यथा सर्वजनमित्रो राजा एवमग्निरपि सर्वजनमित्र इत्यर्थः । न ह्यग्निं कश्चन द्विष्टे । यस्याग्नेः पुरःसदः पुरस्तात्सीदन्त उपविशन्तः पुरुषाः शर्मसदो न वीराः पितृगृहे वर्तमानाः पुत्रा इव वर्तन्ते । पिता पुत्रानिवाग्निः स्वस्य परिचारकान्रक्षतीति भावः । सोऽयमग्निरतिशयेन शुद्धः कर्मयोग्यो भवति । तत्र दृष्टान्तः । अनवद्यानिन्दिता पतिजुष्टेव

ನಾರೀ ಸ್ವಪತಿನಾ ಸೇವಿತಾ ಸ್ತ್ರೀಕೃತಾ ಯೋಷಿದಿವ । ಸಾ ಯಥಾ ಸಾತಿವ್ರತ್ಯೇನ ಶುದ್ಧಾ ಸತೀ ಸರ್ವ-ಕರ್ಮಯೋಗ್ಯಾ ಭವತಿ ಏವಮಗ್ನಿರಪಿ॥ ವಿಶ್ವಧಾಯಾಃ । ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚೇತಿ ವಚನಾತ್ಕಾರಕಪೂರ್ವಾದಪಿ ದಧಾತೇರ್ವಹಿಹಾಧಾಙ್ಭ್ಯಶ್ಛಂದಸೀತ್ಯಸುನ್ । ಣಿದಿತ್ಯನುವೃತ್ತೇ-ರಾತೋ ಯುಕ್ ಚಿಣ್ಕೃತೋರಿತಿ ಯುಕ್ । ಮರುದ್ವೃಧಾದಿತ್ವಾತ್ಪೂರ್ವಪದಾಂತೋದಾತ್ತತ್ವಂ । ಉಪಕ್ಷೇತಿ । ಕ್ಷಿ ನಿವಾಸಗತ್ಯೋಃ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಅನವದ್ಯಾ । ಬಹುವ್ರೀಹೌ ನಞ್ಸ್ಪಾಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಪತಿಜುಷ್ಟೈವ । ತೃತೀಯಾ ಕರ್ಮಣೀತಿ ಪೂರ್ವಪದ-ಪ್ರಕೃತಿಸ್ವರತ್ವಂ । ನಾರೀ । ನೃನರಯೋರ್ವ್ಯದ್ಧಿಶ್ಚ । ಸಾ. ೪-೧-೬೩ । ಇತಿ ಶಾರ್ಙ್ಗರವಾದಿಷು ಸಾಙಾತ್ ಙೀನಂತ ಆದ್ಯುದಾತ್ತಃ ॥

॥ ಕ್ರತಿಪದಾರ್ಥ ॥

ದೇವೋ ನ—ಪ್ರಕಾಶಮಾನನಾದ ಸೂರ್ಯನಂತೆ । **ಯಃ**—ಯಾವ ಅಗ್ನಿಯು । **ವಿಶ್ವಧಾಯಾಃ**—ಸಮಸ್ತ ಜಗತ್ತಿಗೂ ಧಾರಕನೋ (ಆ ಅಗ್ನಿಯು) । **ಹಿತಮಿತ್ರಃ ರಾಜಾ ನ**—ಹಿತರಾದ ಮಿತ್ರರುಳ್ಳ ರಾಜನಂತೆ । **ಪೃಥಿವೀಂ**—ಭೂಮಿಯಲ್ಲಿ । **ಉಪಕ್ಷೇತಿ**—(ಯಜ್ಞಗೃಹಾದಿಗಳಲ್ಲಿ) ವಾಸಿಸುತ್ತಾನೆ । **ಪುರಃಸದಃ**—(ಯಾವ ಅಗ್ನಿಯ) ಪುರೋಭಾಗದಲ್ಲಿ ಕುಳಿತವರು । **ಶರ್ಮಸದಃ ವೀರಾ ನ**—ಪಿತೃಗೃಹದಲ್ಲಿ ಸುಖವಾಗಿ ಕುಳಿತಿರುವ ಪುತ್ರರಂತೆ (ಇರುವ) (ಆ ಅಗ್ನಿಯು) । **ಅನವದ್ಯಾ**—ನಿರ್ದುಷ್ಟವಾದ । **ಪತಿಜುಷ್ಟಾ**—ಪತಿಯಿಂದ ಸ್ವೀಕೃತ ವಾದ । **ನಾರೀವ**—ಸ್ತ್ರೀಯಂತೆ (ಶುದ್ಧನೂ ಮತ್ತು ಕರ್ಮಯೋಗ್ಯನೂ ಆಗಿರುವನು.)

॥ ಭಾವಾರ್ಥ ॥

ಸೂರ್ಯನಂತೆ ಸಮಸ್ತ ಜಗದಾಧಾರನಾದ ಅಗ್ನಿಯು, ಹಿತಮಿತ್ರರೊಡಗೂಡಿದ ರಾಜನಂತೆ ಈ ಭೂಮಿಯಲ್ಲಿರುವ ಯಾಗಶಾಲೆಗಳಲ್ಲಿ ಸ್ಥಾಪಿತನಾಗಿ, ತನ್ನ ಸಮೀಪದಲ್ಲಿರುವವರೆಲ್ಲರಿಗೂ, ತಂದೆಯು ತನ್ನ ಆಶ್ರಯದಲ್ಲಿರುವ ಪುತ್ರರಿಗೆಲ್ಲಾ ರಕ್ಷಕನಾಗಿರುವಂತೆ, ರಕ್ಷಕನಾಗಿರುತ್ತಾನೆ ಮತ್ತು ನಿರ್ದುಷ್ಟವಾದ, ಪತಿಯಿಂದ ಅಂಗೀಕೃತಳಾದ ನಾರಿಯಂತೆ, ಶುದ್ಧನೂ, ಕರ್ಮಯೋಗ್ಯನೂ ಆಗಿರುತ್ತಾನೆ.

English Translation

He, who, like the divine (Sun,) is the supporter of the universe, abides on earth like a prince, (sorrounded by) faithful friends; in his presence, men sit down like sons in the dwelling of a parent, and (in purity he resembles) an irreproachable and beloved wife

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಹಿಂದಿನ ಋಕ್ಕಿನಲ್ಲಿರುವಂತೆಯೇ ನಾಲ್ಕು ಉಪಮಾ ಅಲಂಕಾರವುಳ್ಳ ವಾಕ್ಯಗಳಿರುವುವು. ಅವುಗಳಲ್ಲಿ **ದೇವೋ ನ ಯಃ ವಿಶ್ವಧಾಯಾಃ** ಎಂಬುವುದು ಮೊದಲನೆಯ ವಾಕ್ಯವು ಇದರಲ್ಲಿ **ನ** ಎಂಬುವ ಪದವು ಉಪಮಾನವಾಚಕವಾಗಿರುತ್ತದೆ ಪ್ರಕಾಶವುಳ್ಳವನಾದ ಸೂರ್ಯನು ವೃಷ್ಟಿಗಳಿಂದ

ಜಗತ್ತನ್ನು ಧರಿಸಿರುವಂತೆ, ಪ್ರಕಾಶಮಾನನಾದ ಅಗ್ನಿಯೂ ಯಜ್ಞಾದಿಸಾಧನಗಳನ್ನು ದೊರಕಿಸಿ ಜಗತ್ತಿಲ್ಲವನ್ನೂ ಧರಿಸಿರುವನು. ಉಪಮಾಲಂಕಾರಯುಕ್ತವಾದ **ಈ ವಾಕ್ಯಕ್ಕೆ ಹಿತಮಿತ್ರೋ ನ ರಾಜಾ ಪೃಥಿವೀಂ ಉಪಕ್ಷೇತಿ** ಎಂಬ ವಾಕ್ಯವೂ ಉಪಮಾನವಾಗಿ ಹೇಳಲ್ಪಟ್ಟಿರುತ್ತದೆ. ರಾಜನಿಗೆ ಅನುಕೂಲರಾದ ಹಿತವನ್ನು ಆಚರಿಸುವ ಮಿತ್ರರು ಇರುವರು. ಅಗ್ನಿಯು ಜಗತ್ತಿಗೆ ಹಿತವನ್ನು ಉಂಟುಮಾಡುವನು. ರಾಜನು ಎಲ್ಲಾ ಜನರ ಪ್ರೀತಿಗೂ ಪಾತ್ರನಾಗಿ ಸುಖದಿಂದ ವಾಸಮಾಡುವನು. ಅಗ್ನಿಯೂ ಈ ರಾಜನ ಹಾಗೆ ಸರ್ವಜನರ ಪ್ರೀತಿಗೂ ಪಾತ್ರನಾಗಿ ಯಜ್ಞವೇದಿಕೆಯಲ್ಲಿ ಸುಖದಿಂದ ಇರುವನಾದ್ದರಿಂದ ಹಿತಮಿತ್ರತ್ವವೂ, ಸರ್ವಜನ ಪ್ರಿಯನಾಗಿ ಭೂಮಿಯಲ್ಲಿ ಇರುವಿಕೆಯೂ ಅಗ್ನಿಗೂ ರಾಜನಿಗೂ ಸಮಾನವಾಗಿರುವುದು. ಇವೆರಡು ವಾಕ್ಯಗಳು ಪರಸ್ಪರವಾಗಿ ದೃಷ್ಟಾಂತ ವಿಧದಿಂದ ಇರುವ ಹಾಗೆ ಮುಂದಿನ ಅರ್ಧದಲ್ಲಿಯೂ ಎರಡು ಉಪಮಾಲಂಕಾರದಿಂದ ಕೂಡಿರುವ ವಾಕ್ಯಗಳು ಇರುತ್ತವೆ.

ಪುರಃಸದಃ ಶರ್ಮಸದಃ ನ ವೀರಾಃ-- **ಪುರಃ**— ಮುಂದುಗಡೆಯಲ್ಲಿ **ಸದಃ**— ಕೂತುಕೊಂಡಿರುವವರು ಅಗ್ನಿಯ ಮುಂದುಗಡೆಯಲ್ಲಿ ಕೂತುಕೊಂಡಿರುವರು ಸುಖದಿಂದ ಸಂತೋಷವಾಗಿ ಉಪವಿಷ್ಟರಾಗಿರುವರು. ಸುಖೋಪವಿಷ್ಟ ಎಂಬ ಅರ್ಥವು **ಶರ್ಮಸದಃ** ಎಂಬ ಪದಕ್ಕೆ ಇರುವುದು **ವೀರಾ ಇವ ಶರ್ಮಸದಃ** ಎಂಬ ಈ ವಾಕ್ಯಕ್ಕೆ ಸಾಯಣರೂ ಸ್ಕಂದಸ್ವಾಮಿಗಳೂ ಬೇರೆಬೇರೆಯಾದ ಅರ್ಥವನ್ನು ಉಲ್ಲೇಖಿಸಿರುವರು **ಅಗ್ನಿಯು** ತನ್ನ ಮುಂದೆ ಇರುವವರನ್ನು ತಂದೆಯು ತನ್ನ ಮಕ್ಕಳನ್ನು ರಕ್ಷಿಸುವ ಹಾಗೆ ಕಾಪಾಡುತ್ತಿರುವನು. ಆದ್ದರಿಂದ ತಂದೆಯ ಮನೆಯಲ್ಲಿರುವ ಮಕ್ಕಳ ಹಾಗೆ **ಶರ್ಮಸದಃ** ಸುಖದಿಂದ ಕೂಡಿದವರಾಗಿರುವರೆಂದು ಅಗ್ನಿಯನ್ನು ಸೇವಿಸುವರ ವಿಷಯದಲ್ಲಿ ಅಗ್ನಿಗೆ ಇರುವ ಪ್ರೀತಿಯು ವ್ಯಕ್ತವಾಗುತ್ತದೆ. ಈ ಪ್ರೀತಿಯು ತಂದೆಗೆ ತನ್ನ ಮಕ್ಕಳ ವಿಷಯದಲ್ಲಿ ಇರುವ ಪ್ರೀತಿಯಂತೆ ಇರುವುದೆಂದು ತಾತ್ಪರ್ಯವು. (ಸಾ. ಭಾ.)

ಪುರಸ್ಸದಃ—ಸೇನಾಯಾಃ ಅಗ್ರತೋ ವ್ಯವಸ್ಥಾತಾರಃ । ಶರ್ಮ—ಸಂಗ್ರಾಮಂ ಯಜ್ಞಸುಖಂ ತದರ್ಥಂ ಸೀದಂತೀತಿ ಶರ್ಮಸದಃ ಯಥಾ ಚ ಶರ್ಮಸದೋ ಪುರಸ್ಸದಃ ನ ವೀರಾಃ ಶತ್ರೂನಭಿಭವಿತಾರಃ ತದ್ವದಭಿಭವಿತೇತ್ಯರ್ಥಃ । ಸೇನೆಯ ಮುಂಭಾಗದಲ್ಲಿ ಶಿಸ್ತಿನಿಂದ ಇರುವ ವೀರ (ಶೂರ) ರಾದ ಜನರು ಯುದ್ಧವೆಂಬ ಯಜ್ಞದಿಂದ ಉಂಟಾಗುವ ಸುಖವನ್ನು ಅನುಭವಿಸುವದಕ್ಕಾಗಿ ಸಿದ್ಧರಾಗಿ ಶತ್ರುಗಳನ್ನು ತಿರಸ್ಕರಿಸುವಂತೆ, ಅಗ್ನಿಯು ಯಜ್ಞದಿಂದ ಉಂಟಾಗುವ ಸುಖವನ್ನು ತಾನೂ ಅನುಭವಿಸುತ್ತಾ ಯಜ್ಞಮಾಡುವವರಿಗೂ ಉಂಟುಮಾಡುವನು ಮತ್ತು ಶತ್ರುಗಳನ್ನು ತಿರಸ್ಕಾರಮಾಡುವನು. ಮತ್ತು ತಿರಸ್ಕಾರಮಾಡಿಸುವನು ಎಂದು ಸ್ಕಂದಸ್ವಾಮಿಗಳು ವಿವರಿಸಿರುತ್ತಾರೆ.

ಅನವದ್ಯಾ ಪತಿಜುಷ್ಟೇವ ನಾರೀ-- **ಪತಿಜುಷ್ಟಾ ಪತಿವ್ರತಾ** ಪತಿಯಿಂದ ಕೂಡಿದವಳು. ಪತಿವ್ರತೆಯು, ಪರಿಶುದ್ಧಳು. ಹೀಗೆಯೇ ಅಗ್ನಿಯೂ ಪರಿಶುದ್ಧನು ಎಂದು ಸಾಯಣರ ವಿವರಣೆಯು. **ಅನವದ್ಯಾ**-- **ರೂಪವತೀ**—**ಭರ್ತ್ರಾಸೇವಿತಾ ನಾರೀ ಶೋಭತೇ ನಿತ್ಯಪ್ರೀತಿಯುಕ್ತಾ ವಾ ತದ್ವತ್ ಶೋಭತೇ ನಿತ್ಯಪ್ರೀತಿಯುಕ್ತೋ ವಾ** । ರೂಪವತಿಯಾಗಿರುವ (ಸೌಂದರ್ಯವತಿಯಾದ) ಸ್ತ್ರೀಯು ಪತಿಯ ಸೇವೆಯನ್ನು ಮಾಡುತ್ತಾ ಪತಿಯ ಪ್ರೀತಿಗೆ ಪಾತ್ರಳಾಗಿ ಕಾಂತಿಯುಳ್ಳವಳಾಗಿ ಶೋಭಿಸುವಂತೆ, ಅಗ್ನಿಯೂ ರೂಪವತ್ತ್ವ, ನಿತ್ಯಪ್ರೀತಿಯುಕ್ತತ್ವ ರೂಪ ಧರ್ಮವುಳ್ಳವನಾಗಿ ಶೋಭಿಸುತ್ತಿರುವನು ಎಂದು ಸ್ಕಂದಸ್ವಾಮಿಗಳು ವ್ಯಾಖ್ಯಾನವನ್ನು ಮಾಡಿರುತ್ತಾರೆ.

ವಿಶ್ವಧಾಯಾಃ–ಧೇಟ್ ಪಾನೇ। ಸರ್ವಾಹುತಿಲಕ್ಷಣಂ ಆಜ್ಯಾದಿಸೇಯಂ ಯಸ್ಯ ಸಃ। ಸರ್ವಾಸಾಂ ಆಹುತೀನಾಂ ಹಾತಾ। ಧೇಟ್ ಎಂಬ ಧಾತುವಿನಿಂದ ಧಾಯ ಎಂಬ ಶಬ್ದವು ನಿಷ್ಪನ್ನವಾಗಿರುವುದು. ಧಾಯಾ ಎಂಬ ಶಬ್ದಕ್ಕೆ ಧಾರಕನು ಎಂದು ಅರ್ಥಮಾಡಿ ಎಲ್ಲವನ್ನೂ ಅಗ್ನಿಯು ಧರಿಸಿರುವನೆಂದು ಸಾಯಣರೂ, **ಧಾಯಾ** ಎಂಬ ಶಬ್ದವು ಪಾನಮಾಡುವುದಕ್ಕೆ ಅರ್ಹವಾದ ಪೇಯದ್ರವ್ಯವೆಂದು (ಕುಡಿಯುವುದಕ್ಕೆ ಯೋಗ್ಯವಾದ ವಸ್ತುವು, ಹಾಲು ಮುಂತಾದವು) ಅರ್ಥಮಾಡಿ ಅಗ್ನಿಯು ಆಜ್ಯವೇ ಮೊದಲಾದ ದ್ರವರೂಪವಾಗಿರುವ ಆಹುತಿಗಳೆಲ್ಲವನ್ನೂ ಪಾನ ಮಾಡುವನೆಂದೂ ಸ್ಕಂದಸ್ವಾಮಿಗಳೂ ವಿವರಿಸಿರುವರು

ವೀರಾಃ--ವೀರವಂತಃ ಕಲ್ಯಾಣವೀರಾ ವಾ। ವೀರೋ ವೀರಯತ್ಯಮಿತ್ರಾನ್ ವೇತೇರ್ವಾ ಗತಿಕರ್ಮಣಃ ವೀರಯತೇರ್ವಾ। ವೀರ ಎಂಬ ಪದವು ಅನೇಕ ವಿಧವಾಗಿ ಶತ್ರುಗಳನ್ನು ನಾಶಮಾಡುವವನು ಅಥವಾ ಶತ್ರುಗಳಿಗೆ ಅಭಿಮುಖವಾಗಿ ಹೋಗುವವನು ಎಂಬ ಅರ್ಥಬೋಧಕವಾಗಿರುವುದು

॥ ವ್ಯಾಕರಣಪ್ರಕ್ರಿಯಾ ॥

ವಿಶ್ವಧಾಯಾಃ—ಡುಧಾಞ್ ಧಾರಣಪೋಷಣಯೋಃ ಧಾತು. **ಗತಕಾರಕಯೋರಪಿ ಪೂರ್ವಪದ ಪ್ರಕೃತಿಸ್ವರತ್ವಂ ಚ** (ಉ. ಸೂ ೪-೬೬) ಎಂಬ ಉಣಾದಿ ಸೂತ್ರದಿಂದ ಕಾರಕಪೂರ್ವವಾದ ಈ ಧಾತುವಿಗೆ **ವಹಿಹಾಧಾಞ್ಭ್ಯಶ್ಛಂದಸಿ** (ಉ. ಸೂ ೪-೬೬೦) ಎಂಬುದರಿಂದ ತಿಸುನ್ ಪ್ರತ್ಯಯ **ವಸೇರ್ನಿತ್** (ಉ ಸೂ ೪-೪೫೭) ಎಂಬುದರಿಂದ ನಿತ್ ಎಂದು ಅನುವೃತ್ತವಾಗುವುದರಿಂದ ಅಸುನಿಗೆ ನಿಮಿತ್ತಾಭಾವ ಬರುವುದರಿಂದ **ಆತೋ-ಯುಕ್ ಚಿಣ್ ಕೃತೋಃ** (ಪಾ ಸೂ ೭-೩-೩೩) ಎಂಬುದರಿಂದ ಆದಂತವಾದ ಈ ಧಾತುವಿಗೆ ಯುಕಾಗಮ **ಆದ್ಯಂತೌ ಟಕಿತೌ** ಎಂಬ ಪರಿಭಾಷೆಯಿಂದ ಕಿತ್ತಾದುದರಿಂದ ಅಂತಾವಯವವಾಗಿ ಬರುತ್ತದೆ, ವಿಶ್ವಧಾಯಸ್ ಶಬ್ದ ವಾಗುತ್ತದೆ ಪ್ರಥಮಾ ಸು ಪರವಾದಾಗ **ಅತ್ವಸಂತಸ್ಯಾಽಧಾತೋಃ** ಎಂಬುದರಿಂದ ಉಪಧಾದೀರ್ಘ **ಹಲ್ಙಾಭ್ಯೋ**—ಸೂತ್ರದಿಂದ ಸುಲೋಪ. ಸಕಾರಕ್ಕೆ ರುತ್ವವಿಸರ್ಗ. ಮರದ್ಭ್ಯೋಧಾದಿಯಲ್ಲಿ ಸೇರಿರುವುದರಿಂದ ಪೂರ್ವಪದಾಂತೋದಾತ್ತ ಸ್ವರ ಬರುತ್ತದೆ

ಉಪಕ್ಷೇತಿ—ಉಪ ಉಪಸರ್ಗ ಕ್ಷಿ ನಿವಾಸ ಗತ್ಯೋಃ ಧಾತು ಇದಕ್ಕೆ ಲಟ್ ಪ್ರಥಮಪುರುಷ ಏಕವಚನ ದಲ್ಲಿ ತಿಪ್ ಪ್ರತ್ಯಯ **ಬಹುಲಂ ಛಂದಸಿ**—ಎಂಬುದರಿಂದ ವಿಕರಣಕ್ಕೆ ಲುಕ್ ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕ್ಕಿಗೆ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಗುಣ **ಯಿ**ಃ ಎಂದು ಹಿಂದೆ ಯಚ್ಛಬ್ದದ ಯೋಗ-ವಿರುವುದರಿಂದ **ಯೆದ್ವ್ಯತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುತ್ತದೆ ತಿಪ್ ನಿತ್ತಾದುದರಿಂದ ಅನುದಾತ್ತ. ಧಾತುಸ್ವರ ಉಳಿಯುತ್ತದೆ ಉದಾತ್ತವುಳ್ಳ ತಿಙಂತವು ಪರವಾದುದರಿಂದ **ತಿಙಿ ಚೋದಾತ್ತವತಿ** (ಪಾ ಸೂ ೮-೧-೭೧) ಎಂಬುದರಿಂದ ಗತಿಗೆ (ಉಪ) ನಿಘಾತಸ್ವರ ಬರುತ್ತದೆ

ಹಿತಮಿತ್ರಃ—**ಹಿತಾನಿ ಮಿತ್ರಾಣಿ ಯಸ್ಯ ಹಿತಮಿತ್ರಃ. ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಪುರಃಸದಃ—ಪುರಃ ಸೀದಂತಿ ಇತಿ ಪುರಃಸದಃ. ಷದ್ಲೃ ವಿಶರಣಗತ್ಯವಸಾದನೇಷು, ಧಾತು. ಇದಕ್ಕೆ **ಕ್ವಿಪ್ಚಿ** ಎಂಬುದರಿಂದ ಕ್ವಿಪ್ಪ್ರತ್ಯಯ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿ ಸ್ವರ ಬರುತ್ತದೆ. ಹೀಗೆಯೇ **ತರ್ಮಸದಃ** ಎಂಬಲ್ಲಿಯೂ ಪ್ರಕ್ರಿಯೆ

ಅನವದ್ಯಾ—ನ ವಿದ್ಯತೇ ಅವದ್ಯಂ ಯಸ್ಯಾಃ ಸಾ. ಅನವದ್ಯಾ. ಬಹುವ್ರೀಹಿಸಮಾಸ **ನಞ್ ಸುಭ್ಯಾಮ್** ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ ಆಬಂತದ ಪರದಲ್ಲಿರುವುದರಿಂದ **ಹಲ್-ಜಾಭ್ಯೋ**—ಸೂತ್ರದಿಂದ ಪ್ರಥಮಾ ಸುವಿಗೆ ಲೋಪ.

ಪತಿಜುಷ್ಪೇವ—ಪತ್ಯಾ ಜುಷ್ಟಾ ಸೇವಿತಾ ಪತಿಜುಷ್ಟಾ ತೃತೀಯಾ ತತ್ಪುರುಷ ಸಮಾಸ. **ತೃತೀಯಾ-ಕರ್ಮಣಿ** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಸೇವನಾರ್ಥಕ (ಸ್ವೀಕಾರ) ಜುಷ್ ಧಾತುವಿಗೆ ಕ್ತ ಪ್ರತ್ಯಯ ಮಾಡಿದಾಗ ಷ್ಟುತ್ವದಿಂದ ಜುಷ್ಟಾ ಎಂದು ರೂಪವಾಗಿದೆ.

ನಾರೀ—**ನೃ ನರಯೋರ್ವೃದ್ಧಿಶ್ಚ** (ಪಾ ಸೂ. ೪-೧-೭೩ ಗ. ಸೂ.) ಎಂದು ಶಾರ್ಙ್ಗರವಾದಿ ಗಣದಲ್ಲಿ ಪಠಿತವಾದುದರಿಂದ ಙೀನ್ ಪ್ರತ್ಯಯ ಸ್ತ್ರೀತ್ವದಲ್ಲಿ ಬರುತ್ತದೆ ವೃದ್ಧಿಯು ಗಣಸೂತ್ರದಿಂದ ಬರುವುದರಿಂದ ನಾರೀ ಎಂದು ರೂಪವಾಗುತ್ತದೆ. ನಿತ್ತಾದುದರಿಂದ **ಙ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಇದುಃಉದ್ಯುದಾತ್ತವಾಗುತ್ತದೆ.॥೩॥

॥ ಸಂಹಿತಾಪಾಠಃ ॥

ತಂ ತ್ವಾ ನರೋ ದಮ ಆ ನಿತ್ಯಮಿದ್ಧಮಗ್ನೇ ಸಚಂತ ಕ್ಷಿತಿಷು ಧ್ರುವಾಸು ।
ಅಧಿ ದ್ಯುಮ್ನಂ ನಿ ದಧುರ್ಭೂರ್ಯಸ್ಮಿನ್ಭವಾ ವಿಶ್ವಾಯುರ್ಧರುಣೋ ರಯೀಣಾಂ ॥ ೪ ॥

॥ ಸವಸಾರಃ ॥

ತಂ । ತ್ವಾ । ನರಃ । ದಮೇ । ಆ । ನಿತ್ಯಂ । ಇದ್ಧಂ । ಅಗ್ನೇ । ಸಚಂತ । ಕ್ಷಿತಿಷು ।
ಧ್ರುವಾಸು ।
ಅಧಿ । ದ್ಯುಮ್ನಂ । ನಿ । ದಧುಃ । ಭೂರಿ । ಅಸ್ಮಿನ್ । ಭವ । ವಿಶ್ವಸ್ಆಯುಃ ।
ಧರುಣಃ । ರಯೀಣಾಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತಂ ತ್ವಾ ಪೂರ್ವೋಕ್ತಗುಣವಿಶಿಷ್ಟಂ ತ್ವಾಂ ನರೋ ಯಜ್ಞಸ್ಯ ನೇತಾರೋ ಯಜಮಾನಾ ಧ್ರುವಾಸು ಕ್ಷಿತಿಷು ನಿಶ್ಚಲಾಸು ಚಲನರಹಿತಾಸು ಭೂಮಿಷು । ನಿರುಪದ್ರವೇಷು ಗ್ರಾಮೇಷ್ವಿತ್ಯರ್ಥಃ । ದಮೇ ಸ್ವಕೀಯೇ ಯಜ್ಞಗೃಹೇ ನಿತ್ಯಮಿದ್ಧಮನವರತಂ ಸಮಿದ್ಭಿಃ ಪ್ರಜ್ವಲಿತಂ ಕೃತ್ವಾ ಆ ಸಚಂತ । ಆಭಿಮುಖ್ಯೇನ ಸೇವಂತೇ । ಕಿಂಚಾಸ್ಮಿನ್ನಗ್ನೌ ದ್ಯುಮ್ನಂ ಹವಿರ್ಲಕ್ಷಣಮನ್ನಂ ಭೂರಿ ಚರುಪುರೋಡಾಶಾದಿರೂಪೇಣ ಬಹುವಿಧಮಧಿ ನಿ ದಧುಃ । ಸ್ಥಾಪಿತವಂತಃ । ಏವಂಗುಣವಿಶಿಷ್ಟೋ ಯೋಽಗ್ನಿಃ ಸ ತ್ವಂ ವಿಶ್ವಾಯುರುಕ್ತಪ್ರಕಾರೇಣ ಸರ್ವಾನ್ನೋ ಭೂತ್ವಾ ರಯೀಣಾಂ ಧನಾನಾಂ ಧರುಣೋ ಧಾರಯಿತಾ ಭವ । ಅಸ್ಮಭ್ಯಂ ದಾತುಂ ಧನಾನಿ ಧಾರಯೇತ್ಯರ್ಥಃ ॥ ಸಚಂತ । ಷಚ ಸಮವಾಯೇ । ಛಾಂದಸೋ ವರ್ತಮಾನೇ ಲಙ್ । ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ । ಭವ । ದ್ಯಚೋಽತಸ್ತಿಙ ಇತಿ ಸಂಹಿತಾಯಾಂ ದೀರ್ಘಃ । ಧರುಣಃ ಧಾರೇರ್ಣಿಲುಕ್ಕೇತ್ಯುನಪ್ರತ್ಯಯಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ತಂ ತ್ವಾ**-ಆ (ಪೂರ್ವೋಕ್ತ ಗುಣವಿಶಿಷ್ಟನಾದ) ನಿನ್ನನ್ನು । **ನರಃ**-(ಯಾಗದ ಮುಖಂಡರಾದ) ಮನುಷ್ಯರು । **ಧ್ರುವಾಸು ಕ್ಷಿತಿಷು**—ಅಚಲವಾದ (ನಿರುಪದ್ರವವಾದ) ಪ್ರದೇಶಗಳಲ್ಲಿ । **ದಮೇ**—ಸ್ವಕೀಯವಾದ ಯಜ್ಞಗೃಹದಲ್ಲಿ । **ನಿತ್ಯಂ**—ಪ್ರತಿದಿನವೂ । **ಇದ್ಧಾಂ**—(ಸಮಿಧಾದಿಗಳಿಂದ) ಜ್ವಲಿತನನ್ನಾಗಿ । **ಆ ಸಚಂತ**—ಅಭಿಮುಖೀಕರಿಸಿಕೊಂಡು ಸೇವಿಸುತ್ತಾರೆ । **ಅಸ್ಮಿನ್**—ಅಗ್ನಿಯಲ್ಲಿ । **ದ್ಯುಮ್ನಂ**—ಹವಿರ್ಲಕ್ಷಣವಾದ ಅನ್ನವನ್ನು । **ಭೂರಿ**—ಹೆಚ್ಚಾಗಿ । **ಅಧಿ ನಿ ದಧುಃ**—ಸ್ಥಾಪಿಸಿದರು । **ವಿಶ್ವಾಯುಃ**—(ಅಂತಹ ನೀನು) ಎಲ್ಲವೂ ಅನ್ನವಾಗಿ ಉಳ್ಳ (ನಮಗೆ) । **ರಯೀಣಾಂ**- ಧನದ । **ಧರುಣಃ**—ಧಾರಕನಾಗಿ ಆಗು ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ಹಿಂದೆ ವರ್ಣಿಸಿರುವ ನಿನ್ನನ್ನು ಯಾಗಕರ್ತೃಗಳು ನಿರುಪದ್ರವವಾದ ಪ್ರದೇಶದಲ್ಲಿರುವ ತಮ್ಮ ತಮ್ಮ ಯಾಗಶಾಲೆಗಳಲ್ಲಿ ಪ್ರತಿನಿತ್ಯವೂ ಸಮಿಧಾದಿಗಳಿಂದ ಪ್ರಜ್ವಲಿತನನ್ನಾಗಿ ಮಾಡಿ, ಹವಿರಾದಿಗಳನ್ನು ಯಥೇಚ್ಛವಾಗಿ ಅರ್ಪಿಸುತ್ತಾರೆ ಅಂತಹ ಸರ್ವಭಕ್ಷಕನಾದ ನೀನು (ನಮಗೆಲ್ಲಾ) ಧನವನ್ನು ಅನುಗ್ರಹಿಸು.

English Translation

Such as you are, Agni, men preserve you constantly kindled in their dwellings, in secure places, and offer upon you abundant (sacrificial) food; you in whom is all existence, are the bearer of riches (for advantage).

॥ ವಿಶೇಷನಿಷಯಗಳು ॥

ಧ್ರುವಾಸು ಕ್ಷಿತಿಷು—ನಿರುಪದ್ರವೇಷು ಗ್ರಾಮೇಷ್ವಿತ್ಯರ್ಥಃ। ಗೌಃ ಗ್ಮಾ ಎಂಬ ಪೃಥಿವೀನಾಮಗಳಲ್ಲಿ ಕ್ಷಿತಿ ಶಬ್ದವು (ನಿ ೨-೫) ಉಕ್ತವಾಗಿರುವುದರಿಂದ ಭೂಮಿ ಎಂದು ಅರ್ಥವು **ಕ್ಷಿತಿಶಬ್ದಕ್ಕೆ ಸ್ಥಿರ** ಎಂಬ ಅರ್ಥವುಳ್ಳ ಧ್ರುವ ಶಬ್ದವು ವಿಶೇಷಣವಾಗಿರುವುದರಿಂದ ಚಲನರಹಿತವಾದ ಭೂಮಿಯು ಎಂದು ಅರ್ಥವನ್ನು ಸಾಯಣರು ವಿವರಿಸಿರುವರು ಯಾವಾಗಲೂ ಸ್ಥಿರವಾಗಿರುವ ಭೂಮಿಗೆ ಧ್ರುವ ಪದವನ್ನು ವಿಶೇಷಣಮಾಡಿರುವುದು ಅರ್ಥಾಂತರ ಪ್ರತ್ಯಾಯಕವಾಗಿ ಉಪಲಕ್ಷಣದ ರೀತಿಯಿಂದ ಪ್ರಾಣಿಗಳು ವಾಸಮಾಡುವ ಪ್ರದೇಶವೆಂದು ಅರ್ಥವಾಗುವುದು. ಈ ಪ್ರದೇಶವು ಯಾವ ವಿಧವಾದ ತೊಂದರೆಗೂ ಆಸ್ಪದವಿಲ್ಲದಿರುವ ಗ್ರಾಮವಾಗಿರುವುದು ಎಂದು ತಾತ್ಪರ್ಯವು

ಸ್ಕಂದಸ್ವಾಮಿಗಳು—**ಕ್ಷಿತಿಷು ಧ್ರುವಾಸು। ಕ್ಷಿತಿರಿತಿ ಪೃಥಿವೀನಾಮ। ಇಹ ಚ ಅಥಾಪಿ ತದ್ಧಿತೇನ ಕೃತ್ಸ್ನವನ್ನಿಗಮಾ ಭವಂತಿ** (ನಿ ೨-೫) **ಇತ್ಯೇವಂ ತದವಯವೇಷು ಪ್ರಯುಕ್ತಂ। ಪೃಥಿವ್ಯವಯವೇಷು ನೇದ್ಯಾಖ್ಯೇಷು ಧ್ರುವೇಷು।**—ಯಾಸ್ಕರು "ನಾಮೈಕದೇಶವನ್ನು ಋಕ್ಕುಗಳಲ್ಲಿ ಪ್ರಯೋಗಮಾಡಿದ್ದರೂ ಸಂಪೂರ್ಣವಾಗಿ ಆಯಾಯ ನಾಮಗಳು ಉಕ್ತವಾಗಿರುವುವು" ಎಂದು ಹೇಳಿರುವುದರಿಂದ ಸಮಸ್ತವಾದ ಪೃಥಿವಿಯು ಇಲ್ಲಿ ಕ್ಷಿತಿಪದದಿಂದ ಉಪಸ್ಥಿತವಾದಾಗ್ಯೂ ಬಹುವಚನದಿಂದ ಭೂಮಿಯ ಅವಯವಗಳು ಎಂದು ಅರ್ಥವಾಗುವುದು ಯಜ್ಞದಲ್ಲಿ ಅಗ್ನಿಯನ್ನು ಹೋಮಮಾಡುವುದಕ್ಕಾಗಿ ಪ್ರತಿಷ್ಠೆಮಾಡುವ ವೇದಿಗಳೆಂದು—ಅರ್ಥವನ್ನು ಹೇಳುವರು

ದಮೇ—ಗಯಃ ಕೃದರಃ ಮೊದಲಾದ ಇಪ್ಪತ್ತೆರಡು **ಗೃಹನಾಮ**ಗಳಲ್ಲಿ (ನಿ. ೩-೧೩) **ದಮ**ಶಬ್ದವು ಉಕ್ತವಾಗಿರುವುದು. ಇಲ್ಲಿ ಅಗ್ನಿಯು ಯಾವಾಗಲೂ ಸಮಿತ್ತುಗಳಿಂದಲೂ ಹವಿಸ್ಸುಗಳಿಂದಲೂ ಪ್ರಜ್ವಲಿತನಾಗಿರುವ ಯಜ್ಞಗೃಹವೆಂದು ಅರ್ಥವು.

ದ್ಯುಮ್ನಂ—ಚರುಪುರೋಡಾಶಾದಿಹವಿರ್ಲಕ್ಷಣಂ ಅನ್ನಂ। ಅಗ್ನಿಯಲ್ಲಿ ಹವಿರ್ಭಾಗಗಳಾಗಿ ಹೋಮಮಾಡುವ ಚರುಪುರೋಡಾಶನೇ ಮೊದಲಾದ ರೂಪದಿಂದ ಇರುವ ಅನ್ನವು ಎಂದು ಅರ್ಥವು ಯಾಸ್ಕರು **ದ್ಯುಮ್ನಂ**

ದ್ಯೋತತೇರ್ಯಶೋ ವಾ ಅನ್ನಂ ವಾ ಎಂದು **ದ್ಯುಮ್ನ** ಶಬ್ದವನ್ನು **ಅನ್ನಮೇವ ಭುಂಜಾನಸ್ಯ ದೀಪ್ತಿರ್ಭವತಿ** ಅನ್ನವೇ ತಿನ್ನುವವನಿಗೆ ಕಾಂತಿಯನ್ನು ಉಂಟುಮಾಡುವುದು ಮತ್ತು ಶತ್ರುಗಳನ್ನು ನಾಶಮಾಡಿದಾಗ ಯಶಸ್ಸೂ ಕೂಡ ಕಾಂತಿಯನ್ನು ಉಂಟುಮಾಡುವ ಸ್ವಭಾವವುಳ್ಳದ್ದಾಗಿರುವುದು ಎಂದು ಅರ್ಥವನ್ನು ವಿವರಿಸಿ ಅನ್ನ ಮತ್ತು ಯಶಸ್ಸುಗಳ ವಾಚಕವನ್ನಾಗಿ ಹೇಳಿರುವರು. **ಜಹಿ ವರ್ಧನುಷೋ ಮರ್ತ್ಯಸ್ಯಾಸ್ಮೇ ದ್ಯುಮ್ನಮಧಿ ರತ್ನಂ ಚ ಧೇಹಿ** (ಋ ಸಂ ೨-೩೫-೩) ಎಂದು ಉದಾಹರಣೆಯನ್ನು (ನಿ ೨-೬) ಕೊಟ್ಟಿರುವರು.

ಧರುಣಃ—ಧಾರಯಿತಾ ಧರಿಸಿರುವವನು ಎಂದು ಸಾಯಣರ ಅರ್ಥವು ಧರುಣ ಶಬ್ದವು ನೂರೊಂದು ಉದಕನಾಮಗಳಲ್ಲಿ (ನಿ. ೨-೨೪) ಪಠಿತವಾಗಿರುವುದು ಸ್ಕಂದಸ್ವಾಮಿಗಳು ಧರುಣ ಶಬ್ದವು **ಧೃ ಧಾರಣೇ ಅನ್ಯತ್ರ ಇಹ ತು ಸಾಮರ್ಥ್ಯಾದ್ದಾನವಚನಃ** । **ಧೃ ಧಾರಣೇ** ಎಂಬ ಧಾತುವಿನಿಂದ ನಿಷ್ಪನ್ನವಾಗಿ ಧಾರಣವೆಂಬ ಅರ್ಥವನ್ನು ಬೇರೆಯ ಕಡೆಯಲ್ಲಿ ಬೋಧಿಸುವುದಾದರೂ, ಇಲ್ಲಿ ಸ್ತುತಿಪಾದ್ಯವಾದ ವಸ್ತುಪ್ರಭಾವವನ್ನು **ಪ್ರಕಾಶಮಾಡುವಕಾರಣ** ದಾನರೂಪವಾದ ಅರ್ಥವನ್ನು ಬೋಧಿಸುವುದರಿಂದ ಅಗ್ನಿಯು **ರಯೀಣಾಂ ಧನಾನಾಂ ಧರುಣಃ ದಾತಾ** ಅಗ್ನಿಯು ಧನವನ್ನೂ ಕೊಡುವವನೆಂದು ಅರ್ಥವನ್ನು ವಿವರಿಸಿರುವರು

ಭವ ವಿಶ್ವಾಯುಃ - ಸರ್ವಾನ್ನಃ । ಅಗ್ನಿಯು ಎಲ್ಲವನ್ನೂ ಅನ್ನವನ್ನು ತಿನ್ನುವಂತೆ ಭಕ್ಷಿಸುವವನು ಎಂದು ಸಾಯಣರು ಅರ್ಥವನ್ನು ವಿವರಿಸಿರುವರು ಆಯುಶ್ಶಬ್ದವು ಲೋಕದಲ್ಲಿಯೂ, ವೇದದಲ್ಲಿಯೂ ಆಯುಸ್ಸು ಜೀವಿಸಿರುವ ಕಾಲವೆಂದು ರೂಢಿಯಾದ ಅರ್ಥವನ್ನು ಬೋಧಿಸುವುದು **ಪ್ರಣ ಆಯೂಂಷಿ ತಾರಿಷತ್** (ಋ ಸಂ ೧೦-೧೫೬-೧) (ನಿ. ೧೦-೩೭) ಎಂದು ಶ್ರುತಿಯಲ್ಲಿಯೂ ಆಯುಶ್ಶೋಧಕವಾಗಿರುವುದು ಆದರೆ ಇಲ್ಲಿ **ಇಪ್ಪತ್ತೆಂಟು** ಅನ್ನನಾಮಗಳಲ್ಲಿ ಉಕ್ತವಾಗಿರುವುದರಿಂದ (ನಿ ೩-೯) ಅನ್ನವೆಂದು ಅರ್ಥವು ಸ್ಕಂದಸ್ವಾಮಿಗಳು **ಸರ್ವಾನ್ನ** ಸಂಬದ್ಧಃ ಹವಿರ್ಭೋಕ್ತಾ ಎಲ್ಲಾ ವಿಧವಾದ ಅನ್ನಗಳನ್ನೂ ಹವಿಸ್ಸಿನ ರೂಪದಿಂದ ಭಕ್ಷಿಸುವವನು ಮತ್ತು **ಸರ್ವೇಷಾಮನ್ನಾನಾಂ ದಾತಾ** ಅನ್ನವೆಲ್ಲವನ್ನೂ ಕೊಡುವವನು ಎಂದು ಅರ್ಥವನ್ನು ವಿವರಿಸಿರುವರು

॥ ವ್ಯಾಕರಣಪ್ರಕ್ರಿಯಾ ॥

ನಿತ್ಯಮ್—ತ್ಯಬ್ನೇಧ್ರ್ರುವ ಇತಿ ವಕ್ತವ್ಯಮ್ (ವಾ ೨೬೦೦) ಎಂಬ ವಚನದಿಂದ ನಿ ಎಂಬ ಅವ್ಯಯಕ್ಕೆ ನಿಶ್ಚಲಾರ್ಥದಲ್ಲಿ ತ್ರಪ್ ಪ್ರತ್ಯಯ ಪಿತ್ತಾದ್ದರಿಂದ ಪ್ರತ್ಯಯವು ಅನುದಾತ್ತವಾಗುತ್ತದೆ

ಇದ್ಧಮ್—ಞಿ ಇಂಧೀ ದೀಪ್ತಿದೇವನಯೋಃ ಧಾತು ಇದಕ್ಕೆ **ಕ್ತ** ಪ್ರತ್ಯಯ ಪರವಾದಾಗ **ಅನಿದಿತಾಂ ಹಲ ಉಪಧಾ**—ಎಂಬುದರಿಂದ ಉಪಧಾ ನಕಾರ ಲೋಪ **ಝಷಸ್ತಥೋರ್ಧೋಽಧಃ** ಎಂಬುದರಿಂದ ಧಕಾರದ ಪರದಲ್ಲಿರುವ ತಕಾರಕ್ಕೆ ಧಕಾರಾದೇಶ **ಝಲಾಂ ಜಶ್ ಝಶಿ** ಎಂಬುದರಿಂದ ಪೂರ್ವಧಕಾರಕ್ಕೆ ಜಶ್ತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗ ತ್ತದೆ

ಅಗ್ನೇ—ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ವಾ ಸೂ ೬-೧-೧೯೮) ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ

ಸಚೆಂತೆ—ಸಚ ಸಮವಾಯೇ ಧಾತು. ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲಙ್. ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯಕ್ಕೆ **ಝೋಽಂತಃ** ಎಂಬುದರಿಂದ ಅಂತಾದೇಶ. ಧಾತ್ವಾದಿಗೆ ಸಕಾರಾದೇಶ. **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ **ಆಮಂತ್ರಿತಂ ಪೂರ್ವಮವಿದ್ಯಮಾನವತ್** ಎಂಬುದರಿಂದ ಪೂರ್ವದಲ್ಲಿರುವ ಅಗ್ನೇ ಎಂಬ ಆಮಂತ್ರಿತಕ್ಕೆ ಅವಿದ್ಯಮಾನವದ್ಭಾವವಿರುವುದರಿಂದ ಪಾದಾದಿಯಲ್ಲಿ ಬಂದಂತಾದುದರಿಂದ ನಿಘಾತಸ್ವರ ಬರುವುದಿಲ್ಲ ಆದುಪದೇಶದ ಪರದಲ್ಲಿ ಬಂದುದರಿಂದ ಲಸಾರ್ವಧಾತುಕವು (ಅಂತ) **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

ಕ್ಷೈತಿಷು—ಕ್ಷಿ ನಿವಾಸಗತ್ಯೋಃ ಧಾತು ಇದಕ್ಕೆ **ಕ್ತಿಚ್‌ಕ್ತೌಚ ಸಂಜ್ಞಾಯಾಮ್** ಎಂಬುದರಿಂದ ಕ್ತಿಚ್ ಪ್ರತ್ಯಯ. **ಚಿತಃ** ಎಂಬುದರಿಂದ ಅಂತೋದಾತ್ತ ಸ್ವರ ಬರುತ್ತದೆ. ಸಪ್ತಮೀ ಬಹುವಚನಾಂತರೂಪ

ದಧುಃ—ಡುಧಾಞ್ ಧಾರಣಪೋಷಣಯೋಃ ಧಾತು ಲಿಟ್ ಪ್ರಥಮಪುರುಷ ಬಹುವಚನರೂಪ. ತಿಙಂತನಿಘಾತಸ್ವರ ಬರುತ್ತದೆ

ಭವ—ಭೂ ಸತ್ತಾಯಾಂ ಧಾತು ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ಪಿಗೆ ಹಿ ಆದೇಶ ಬಂದಾಗ **ಅತೋಹೇಃ** ಎಂಬುದರಿಂದ ಹಿಗೆ ಲೋಪ **ದ್ವ್ಯಚೋಽತಸ್ತಿಙಃ** (ಪಾ ಸೂ ೬-೩-೧೩೫) ಎಂಬುದರಿಂದ ಹಿಲೋಪವಾದಾಗ ದ್ವ್ಯಚ್ಕವಾದುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ

ವಿಶ್ವಾಯುಃ—ವಿಶ್ವಂ ಆಯುಃ ಯಸ್ಯ ಸಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಧರುಣಃ—ಧೃಞ್ (ಅವಸ್ಥಾನೇ) ಧಾರಣೇ. ಧಾತು ಇದಕ್ಕೆ ಪ್ರಯೋಜಕ ವ್ಯಾಪಾರ ತೋರುವಾಗ **ಹೇತುಮತಿ ಚ** ಸೂತ್ರದಿಂದ ಣಿಚ್. ಣಿಜಂತದ ಮೇಲೆ **ಧಾರೇರ್ಣಿಲುಕ್‌ಚ** ಎಂಬುದರಿಂದ ಉನ ಪ್ರತ್ಯಯ ತತ್ಸಂನಿಯೋಗದಿಂದ ಣಿಗೆ ಲುಕ್ ಆದುದರಿಂದ ಪ್ರತ್ಯಯ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ **ಉರಣ್ರಪರಃ** ಪರಿಭಾಷೆಯಿಂದ ರಪರವಾಗಿ ಬರುವುದರಿಂದ ರೇಫನಿಮಿತ್ತವಾಗಿ **ಅಟ್‌ಕುಪ್ವಾಙ್** ಸೂತ್ರದಿಂದ ಸ್ವರ್ಯಯ ನಕಾರಕ್ಕೆ ಣತ್ವ ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಧ್ಯೋದಾತ್ತವಾದ ಸದವಾಗುತ್ತದೆ.

ರಯೀಣಾಂ—**ನಾಮಾನ್ಯತರಸ್ಯಾಂ** ಎಂಬುದರಿಂದ ನಾಮಿಗೆ ಉದಾತ್ತಸ್ವರ ಬರುತ್ತದೆ ॥ ೪ ॥

॥ ಸಂಹಿತಾಪಾಠಃ ॥

ವಿ ಪೃಕ್ಷೋ ಅಗ್ನೇ ಮಘವಾನೋ ಅಶ್ಯುರ್ವಿ ಸೂರಯೋ ದದತೋ ವಿಶ್ವಮಾಯುಃ ।
ಸನೇಮ ವಾಜಂ ಸಮಿಥೇಷ್ವರ್ಯೋ ಭಾಗಂ ದೇವೇಷು ಶ್ರವಸೇ ದಧಾನಾಃ ॥ ೫ ॥

॥ ಪದಪಾಠಃ ॥

ವಿ । ಪೃಕ್ಷಃ । ಅಗ್ನೇ । ಮಘಽವಾನಃ । ಅಶ್ಯುಃ । ವಿ । ಸೂರಯಃ । ದದತಃ ।
ವಿಶ್ವಂ । ಆಯುಃ ।
ಸನೇಮ । ವಾಜಂ । ಸಂಽಇಥೇಷು । ಅರ್ಯಃ । ಭಾಗಂ । ದೇವೇಷು । ಶ್ರವಸೇ ।
ದಧಾನಾಃ ॥ ೫ ॥

॥ ಸಾಯಣಭಾಷ್ಯಂ ।

ಹೇ ಅಗ್ನೇ ಮಘವಾನೋ ಹವಿರ್ಲಕ್ಷಣೇನ ಧನೇನ ಯುಕ್ತಾ ಯಜಮಾನಾಃ ಪೃಕ್ಷೋಽನ್ನಾನಿ ವ್ಯಶ್ಯುಃ । ವ್ಯಾಪ್ನುವಂತು । ತ್ವಯಾನುಗೃಹೀತಾಃ ಸರ್ವಾಣ್ಯನ್ನಾನಿ ಲಭಂತಾಂ । ಯೇ ಚ ಸೂರಯೋ ವಿದ್ವಾಂಸಸ್ತ್ವಾಂ ಸ್ತುವಂತಿ । ದದತೋ ಯೇ ಚ ತುಭ್ಯಂ ಹವೀಂಷಿ ದದತಃ ಪ್ರಯಚ್ಛಂತೋ ವರ್ತಂತೇ ತೇ ಸರ್ವೇ ವಿಶ್ವಮಾಯುಃ ಸರ್ವಂ ಜೀವಿತಂ ವ್ಯಶ್ಯುಃ । ವ್ಯಾಪ್ನುವಂತು । ವಯಂ ಚ ಸಮಿಥೇಷು ಸಂಗ್ರಾಮೇಷ್ವರ್ಯೋಽರೇಃ ಶತ್ರೋಃ ಸಂಬಂಧಿನಂ ವಾಜಮನ್ನಂ ಸನೇಮ । ತ್ವದನುಗ್ರಹಾತ್ಸಂಭಜೇಮಹಿ । ತದನಂತರಂ ದೇವೇಷು ತ್ವತ್ಪ್ರಮುಖೇಷ್ವಿಂದ್ರಾದಿಷು ಶ್ರವಸೇ ಯಶಸೇ ತದರ್ಥಂ ಭಾಗಂ ಹವಿರ್ಭಾಗಂ ದಧಾನಾಃ ಸ್ಥಾಪಯಂತೋ ಭೂಯಾಸ್ಮೇತಿ ಶೇಷಃ ॥ ಅಶ್ಯುಃ । ಅಶೂ ವ್ಯಾಪ್ತೌ । ವ್ಯತ್ಯಯೇನ ಪರಸ್ಮೈಪದಂ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ದದತಃ । ನಾಭ್ಯಸ್ತಾಚ್ಛತುರಿತಿ ನುಮಾಗಮಸ್ಪ್ರತಿಷೇಧಃ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ಸನೇಮ । ವನ ಷಣ ಸಂಭಕ್ತೌ ।

व्यत्ययेन शः । अर्यः । अरिशब्दात्प्रत्ययेकवचनेन जसादिषु छन्दसि वा वचनमिति घेर्ङितीति गुणाभावे यणादेशः । अरिशब्द अच इतीत्प्रत्ययान्तोऽन्तोदात्तः । उदात्तयणः इति विभक्तेरुदात्तत्वं । भागं । कर्मार्थत्वेत इत्यन्तोदात्तत्वं ॥

॥ ಪ್ರತಿಪದಾರ್ಥ ॥

ಅಗ್ನೇ— ಎಲೈ ಅಗ್ನಿಯೆ । **ಮಘವಾನಃ**—(ಹವಿರ್ಲಕ್ಷಣವಾದ) ಧನಯುಕ್ತರಾದವರು (ಯಜಮಾನರು) **ಪೃಚ್ಛಃ**—ಅನ್ನಗಳನ್ನು । **ವಿ ಆಶ್ನ್ಯಃ**—ವ್ಯಾಪಿಸಲಿ (ಪಡೆಯಲಿ) । **ಸೂರಯಃ**—(ನಿನ್ನನ್ನು) ಸ್ತುತಿಸುವ (ವಿದ್ವಾಂಸರೂ) । **ದದತಃ**—(ನಿನಗೆ ಹವಿಸ್ಸನ್ನು) ಅರ್ಪಿಸುವವರೂ । **ವಿಶ್ವಮಾಯುಃ**—(ಅವರ) ಜೀವಿತಕಾಲ ಪೂರ್ಣವಾಗಿ । **ವಿ ಆಶ್ನ್ಯಃ**—ಜಿ ವಿಸಲಿ । **ಸಮಿಥೇಷು**—ಸಂಗ್ರಾಮಗಳಲ್ಲಿ । **ಆರ್ಯಃ**—ಶತ್ರುಸಂಬಂಧವಾದ । **ವಾಜಂ**—ಅನ್ನವನ್ನು । **ಸನೇಮ**—(ನಾವು) ಹೊಂದೋಣ (ಅನಂತರ) । **ದೇವೇಷು**—ನಿನ್ನ ಆದಿಯಾದ ಇಂದ್ರಾದಿಗಳಲ್ಲಿ । **ಶ್ರವಸೇ**—ಯಶಸ್ಸಿಗಾಗಿ । **ಭಾಗಂ**—ಹವಿರ್ಭಾಗವನ್ನು । **ದಧಾನಾಃ**—ಸ್ಥಾಪಿಸುವವರಾಗಿ (ಅರ್ಪಿಸುವವರಾಗಿ) ಆಗೋಣ.

॥ ಭಾವಾರ್ಥ ॥

ಎಲೈ ಅಗ್ನಿಯೆ, ಶ್ರೀಮಂತರಾದ ನಿನ್ನ ಆರಾಧಕರು ಹೆಚ್ಚಾಗಿ ಆಹಾರವನ್ನು ಪಡೆಯಲಿ, (ನಿನ್ನನ್ನು ಸ್ತುತಿಸುವ) ವಿದ್ವತ್ತು (ನಿನಗೆ ಹವಿರಾದಿಗಳನ್ನು) ಅರ್ಪಿಸುವವರು, ಬಹುಕಾಲ ಬಾಳಲಿ ಸಂಗ್ರಾಮಗಳಲ್ಲಿ ಶತ್ರುಗಳಿಂದ ವಿಪುಲವಾದ ಧನಾದಿಗಳನ್ನು ಪಡೆಯೋಣ, (ಆ ಧನದಿಂದ) ನಿನಗೂ, ಇಂದ್ರ ಮೊದಲಾದ ದೇವತೆಗಳಿಗೆಲ್ಲರಿಗೂ ಅವರವರ ಭಾಗಗಳನ್ನು ಅರ್ಪಿಸೋಣ

English Translation.

May your opulent worshippers, Agni, obtain, (abundant) food, may the learned (who praise you) and offer you (oblations), acquire long life; may we gain in battles booty from our foes, presenting their portion to the Gods for (the acquisition of) renown

॥ ವಿಶೇಷನಿಷಯಗಳು ॥

ಪೃಚ್ಛಃ, ವಾಜಃ—ಈ ಎರಡು ಶಬ್ದಗಳೂ **ಅಂಧಃ ವಾಜಃ** ಎಂಬ ಇಪ್ಪತ್ತೈರಡು ಅನ್ನನಾಮಗಳಲ್ಲಿ (ನಿ ೩-೯) ಪರಿತವಾಗಿರುವುದರಿಂದ ಅನ್ನವೆಂದು ಅರ್ಥವು

ಆರ್ಯಃ—**ರಾಷ್ಟ್ರೀ, ಆರ್ಯಃ** ಎಂಬ ನಾಲ್ಕು ಈಶ್ವರ ವಾಚಕಗಳಲ್ಲಿ (ನಿ. ೩-೧೧) ಉಕ್ತವಾಗಿರುತ್ತದೆ ಆದರೆ ಇಲ್ಲಿ ಈ ಪದವನ್ನು ಶತ್ರುವಾಚಕವಾದ ಅರಿ ಶಬ್ದದಿಂದ ಉಂಟಾದ ರೂಪವನ್ನಾಗಿ ಹೇಳಿ ಶತ್ರುಸಂಬಂಧವಾದ ಎಂದು ವಿವರಿಸಿರುವರು

ಸಮಿಥೇಷು--ರಣಃ, **ವಿವಾಕ್** ಎಂಬ ನಲವತ್ತಾರು ಸಂಗ್ರಾಮನಾಮಗಳಲ್ಲಿ (ನಿ ೩-೯) ಉಕ್ತವಾಗಿರುವುದರಿಂದ ಯುದ್ಧಗಳಲ್ಲಿ ಎಂದು ಅರ್ಥವು

ಸ್ಕಂದಸ್ವಾಮಿಗಳು—**ದೇವೇಷು** ಎಂಬ ಶಬ್ದವು ಸಪ್ತಮ್ಯಾ ವಿಭಕ್ತ್ಯಂತವಾಗಿ ಅಧಿಕರಣಾರ್ಥದಲ್ಲಿ ಪ್ರಯುಕ್ತವಾಗಿದ್ದರೂ **ಸಮುಮಬ್ರಾಹ್ಮಣೇ ದಾನಂ** ಎಂಬ ಪ್ರಯೋಗದಂತೆ **ಸಂಪ್ರದಾನಾರ್ಥ**ವನ್ನು ಬೋಧಿಸುವುದರಿಂದ ದೇವತೆಗಳಿಗೋಸ್ಕರ ಎಂದು ಅರ್ಥವನ್ನು ಹೇಳಿರುವರು

ಶ್ರವಸೇ--**ಶ್ರವ ಇತ್ಯನ್ನನಾಮ, ಅನ್ನಾರ್ಥಂ । ಮಘಂ, ರೇಕ್ಣಃ** ಎಂಬ ಇಪ್ಪತ್ತೆಂಟು ಧನನಾಮಗಳಲ್ಲಿ (ನಿ ೩-೯) **ಶ್ರವಃ** ಎಂಬ ಪದವು ಉಕ್ತವಾಗಿದ್ದರೂ, **ಶ್ರವ ಇತ್ಯನ್ನನಾಮ ಶ್ರೂಯತ ಇತಿ ಸತಃ** (ನಿ ೧೦-೩) ಎಂದು ಯಾಸ್ಕರು ಹೇಳಿ, **ಅಸಸ್ರಾಣಾಸಃ** (ಋ ಸಂ ೬-೫೭-೩) ಎಂಬ ಋಕ್ಕನ್ನು ಉದಾಹರಿಸಿರುವ **ಶ್ರವ** ಶಬ್ದವು ಅನ್ನವಾಚಕವಾಗಿ ಇರುವುದು ಎಂದು ಅರ್ಥವನ್ನು ಹೇಳಿರುವರು ಸಾಯಣರು—**ಶ್ರವಸೇ - ಯಶಸೇ** ಕೀರ್ತಿಗೋಸ್ಕರ ಎಂದು ಅರ್ಥವನ್ನು ಮಾಡಿರುವರು ಯಾಸ್ಕರು **ಶ್ರವಃ** ಎಂಬ ಪದವು ಯಶಸ್ಸು, ಕೀರ್ತಿ ಎಂಬ ಅರ್ಥಗಳನ್ನು ಬೋಧಿಸುವುದು ಎಂದು ಹೇಳಿ ಆ ವಿಷಯದಲ್ಲಿ ಪ್ರಮಾಣವಾಗಿ ಮೂರು ಉದಾಹರಣೆಗಳನ್ನು ಹೇಳಿರುವರು--

ಆಮಂದಾ ಸ್ತೋಮಾ ಮ ಉಪ ಭರೇ ಮನೀಷಾ ಸಿಂಧಾವಧಿ ಕ್ಷಿಯತೋ ಭಾವ್ಯಸ್ಯ ।
ಯೋ ಮೇ ಸಹಸ್ರಮಮಿಮೀತ ಸವಾನತೂರ್ಕೋ ರಾಜಾ ಶ್ರವ ಇಚ್ಛಮಾನಃ ॥

(ಋ ಸಂ ೮-೬೬-೧)

ಇಲ್ಲಿ— **ಶ್ರವ ಇಚ್ಛಮಾನಃ ಪ್ರಶಂಸಾಮಿಚ್ಛಮಾನಃ** ಕೀರ್ತಿಯನ್ನು ಅಪೇಕ್ಷಿಸುವವನು ಎಂದರ್ಥವು

(ನಿ ೮-೧೧)

ಪ್ರ ವೋ ಮಹೇ ಮಂದಮಾನಾಯಾಂಧಸೋ೭ರ್ಚಾ ವಿಶ್ವಾನರಾಯ ವಿಶ್ವಾಭುವೇ ।
ಇಂದ್ರಸ್ಯ ಯಸ್ಯ ಸುಮಖಂ ಸಹೋ ಮಹಿ ಶ್ರವೋ ನೃಮ್ಣಂ ಚ ರೋದಸೀ ಸಪರ್ಯತಃ ।

(ಋ ಸಂ ೧೦ ೫೬ ೧)

ಇಲ್ಲಿಯೂ--**ಮಹಿ ಶ್ರವಃ=ಮಹಚ್ಛ್ರವಣೀಯಂ ಯಶಃ** ಎಂದರೆ ಕೀರ್ತಿಯೆಂದೇ ಅರ್ಥಮಾಡಿರುವರು

(ನಿ ೧೧-೧೦)

ಅತಿಶಯವಾದ ಕೇಳುವುದಕ್ಕೆ ಹಿತವಾದ ಕೀರ್ತಿಯು

ಉತ ಸ್ಮೈನಂ ವಸ್ತ್ರಮಥಿಂ ನ ತಾಯುಮನು ಕ್ರೋಶಂತಿ ಕ್ಷಿತಯೋ ಭರೇಷು ।
ನೀಚಾಯಮಾನಂ ಜಸುರಿಂ ನ ಶ್ಯೇನಂ ಶ್ರವಶ್ಚಾಚ್ಛಾ ಪಶುಮಚ್ಚ ಯೂಥಂ ।

(ಋ ಸಂ ೩-೩೭-೫)

ಇಲ್ಲಿಯೂ—**ಶ್ರವಚ್ಚಾಚ್ಛಾ ಪಶುಮಚ್ಚ ಯೂಥಂ । ಶ್ರವಶ್ಚಾಪಿ ಪಶುಮಚ್ಚ ಯೂಥಂ ಪ್ರಶಂಸಾಂ ಚ ಯೂಥಂ ಚ ಧನಂ ಚ ಯೂಥಂ ಚೇತಿ ವಾ ।** ಎಂದರೆ ಕೀರ್ತಿಯೆಂದೇ ಹೇಳಿರುವರು.

(ನಿ ೮-೬೦)

ಉತ್ತಮವಾದ ಪ್ರಶಂಸೆಯು ಕೀರ್ತಿಯು ಎಂದು ಅರ್ಥವು ಇದನ್ನು ಅನುಸರಿಸಿ ಸಾಯಣರು **ಯಶಸೇ**—ಕೀರ್ತಿಗಾಗಿ ಹವಿರ್ಭಾಗಗಳನ್ನೂ ಹೋಮ ಮಾಡುತ್ತಾ ಅಗ್ನಿಯನ್ನೂ ಪೂಜಿಸೋಣ ಎಂದು ಅರ್ಥಮಾಡಿರುವರು

ಮಘವಾನಃ—**ಮಘ** ಶಬ್ದವು ಧನನಾಮಗಳಲ್ಲಿ (ನಿ. ೩-೯) ಉಕ್ತವಾಗಿರುವುದರಿಂದ ಧನವುಳ್ಳವರು ಎಂದು ಅರ್ಥವು. ಹಣಗಾರರು ಅಗ್ನಿಯನ್ನು ಯಾಗಾದಿಗಳಿಂದ ಪೂಜಿಸಿ ಸಂತೋಷಪಡಿಸುವರು ಬಡವರು ಸ್ತುತಿ ಮಾಡಿ ಸಂತೋಷಪಡಿಸುವರು. ಅಗ್ನಿಯು ಇವರಿಬ್ಬರಿಗೂ ಆಯುಸ್ಸನ್ನೂ ಧನಾದಿಗಳನ್ನೂ ಅನುಗ್ರಹಿಸುವನೆಂದು ಸ್ಕಂದಸ್ವಾಮಿಗಳು ವಿವರಿಸಿರುವರು

॥ ವ್ಯಾಕರಣಪ್ರಕ್ರಿಯಾ ॥

ಅಶ್ಯಾಃ—ಅಶೂ ವ್ಯಾಪ್ತೌ ಧಾತು ಆತ್ಮನೇಪದಿ. **ವ್ಯತ್ಯಯೋ ಬಹುಲಂ** ಎಂಬುದರಿಂದ ಪರಸ್ಮೈಪದ ಪ್ರತ್ಯಯ ಬರುತ್ತದೆ. ವಿಧಿಲಿಙ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ **ಝೋರ್ಜಸ್** (ಪಾ. ಸೂ. ೩-೪-೧೦೮) ಎಂಬುದರಿಂದ ಜುಸಾದೇಶ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ (ಶ್ನ) ಲುಕ್ **ಯಾಸುಟ್ ಪರೆ**—ಎಂಬುದರಿಂದ ಲಿಙಿಗೆ ಯಾಸುಟಾಗಮ. **ಉಸ್ಯ ಪದಾಂತಾತ್** (ಪಾ ಸೂ ೬-೧-೯೬) ಎಂಬುದರಿಂದ ಪರರೂಪ, ಅತಿಬಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ದದತಃ—ಡುದಾಞ್ ದಾನೇ ಧಾತು ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ. **ಜುಹೋತ್ಯಾದಿಭ್ಯಃ ಶ್ಲುಃ** ಸೂತ್ರದಿಂದ ಶ್ಲು **ವಿಕರಣ ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. **ನಾಭ್ಯಸ್ತಾಚ್ಛತುಃ** (ಪಾ ಸೂ ೭-೧-೭೮) ಎಂಬುದರಿಂದ ಅಭ್ಯಸ್ತ ಸಂಜ್ಞಾ ಇರುವುದರಿಂದ ಉಗಿತ್ತಾದರೂ ನ ಮಾಗಮ ಬರವುದಿಲ್ಲ ಪ್ರಥಮಾ ಬಹುವಚನಾಂತ ರೂಪ **ಅಭ್ಯಸ್ತಾನಾಮಾದಿಃ** (ಪಾ ಸೂ. ೬-೧-೧೯೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದ

ಸನೇಮ—ವನ **ಷಣ** ಸಂಭಕ್ತೌ ಧಾತು ವಿಧಿಲಿಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ನಿತ್ಯಂ ಙಿತಃ** (ಪಾ ಸೂ ೩-೪-೯೯) ಎಂಬುದರಿಂದ ಸಕಾರಕ್ಕೆ ಲೋಪ. **ವ್ಯತ್ಯಯೋ ಬಹುಲಂ** ಎಂಬುದರಿಂದ ಶ ವಿಕರಣ. ಲಿಙಿಗೆ ಯಾಸುಟಾಗಮ. **ಅತೋಯೇಯಃ** (ಪಾ ಸೂ ೭-೩-೮೦) ಎಂಬುದರಿಂದ ಯಾಸ್ ಎಂಬುದಕ್ಕೆ ಇಯಾದೆ ಶ ಯಕಾರಕ್ಕೆ **ಲೋಪೋವ್ಯೋರ್ವಲಿ** ಎಂಬುದರಿಂದ ಲೋಪ. ಸನ+ಇಮ ಎಂದಿರುವಾಗ ಗುಣ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ವಿಕರಣಸ್ವರ ಸತಿತಿಷ್ಠವಾಗಿರುವುದರಿಂದ ಮಧ್ಯೋದಾತ್ತವಾದ ಪದವಾಗುತ್ತದೆ

ಅರ್ಯಃ—ಅರಿ ಶಬ್ದ ಶತ್ರು ಎಂಬ ಅರ್ಥವನ್ನು ಕೊಡುತ್ತದೆ ಇದಕ್ಕೇ ಷಷ್ಠೀ ಏಕವಚನ ಪರವಾದಾಗ **ಜಸಾದಿಷು ಛಂದಸಿ ವಾ ವಚನಂ** ಎಂಬ ವಚನದಿಂದ **ಝೇರ್ಜಿತಿ** (ಪಾ. ಸೂ. ೭-೩-೧೧೧) ಎಂಬುದರಿಂದ ಗುಣವು ಬಾರದಿರಲು **ಇಕೋ ಯಣಚಿ** ಸೂತ್ರದಿಂದ ಯಣಾದೇಶ ಋ ಗತೌ ಧಾತು ಇದಕ್ಕೆ **ಅಚ ಇಃ** (ಉ. ಸೂ. ೪-೫೭) ಎಂಬುದರಿಂದ ಇಪ್ರತ್ಯಯ ತನ್ನಿಮಿತ್ತವಾಗಿ ಧಾತುವಿಗೆ ಗುಣ. ಋಕಾರಕ್ಕೆ ಬರುವುದರಿಂದ ರಪರವಾಗಿ

ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಉದಾತ್ತಸ್ಥಾನದಲ್ಲಿ ಯಣಾದೇಶ ಬಂದು ಅದರ ಪರದಲ್ಲಿ ವಿಭಕ್ತಿ ಬಂದುದರಿಂದ **ಉದಾತ್ತಯೆನೋ ಹಲ್ ಪೂರ್ವಾತ್** (ಪಾ. ೬-೧-೧೭೪) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಭಾಗಂ—ಭಜ ಸೇವಾಯಾಂ ಧಾತು. ಇದಕ್ಕೆ ಘಞ್ ಪ್ರತ್ಯಯ ಮಾಡಿದಾಗ **ಚಜೋಃ ಕು ಘಿಣ್ಯತೋಃ** (ಪಾ ಸೂ ೭-೩-೫೨) ಎಂಬುದರಿಂದ ಜಕಾರಕ್ಕೆ ಕುತ್ವ **ಅತ ಉಪಧಾಯಾಃ** ಎಂಬುದರಿಂದ ಉಪಧಾವೃದ್ಧಿ ಆದ್ಯುದಾತ್ತಸ್ವರವು ಪ್ರಾಪ್ತವಾದರೆ **ಕರ್ಮಾಶ್ವತಃ**—(ಪಾ. ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ

ಶ್ರವಸೇ—ಶ್ರು ಶ್ರವಣೇ ಧಾತು. ಇದಕ್ಕೆ ಟಿಣಾದಿಕವಾದ ಅಸುನ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ಶ್ರವಸ್ ಶಬ್ದವಾಗುತ್ತದೆ **ಜ್ಞಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಚತುರ್ಥೀ ಏಕವಚನಾಂತರೂಪ ॥ ೫ ॥

॥ ಸಂಹಿತಾಪಾಠಃ ॥

ಋತಸ್ಯ ಹಿ ಧೇನವೋ ವಾವಶಾನಾಃ ಸ್ಮದೂಧ್ನೀಃ ಪೀಪಯಂತ ಭಗಭಕ್ತಾಃ ।
ಪರಾವತಃ ಸುಮತಿಂ ಭಿಕ್ಷಮಾಣಾ ವಿ ಸಿಂಧವಃ ಸಮಯಾ ಸಸ್ರುರದಿಂ ॥ ೬ ॥

॥ पदपारः ॥

ऋतस्य । हि । धेनवः । वावशानाः । स्मत् । पुरूधीः । पीपयन्त ।
दुऽभक्ताः ।
पराऽवतः । सुऽमतिम् । भिक्षमाणाः । वि । सिन्धवः । समुया ।
सस्रुः । अद्रिम् ॥ ३ ॥

॥ सायणभाष्यम् ॥

ऋतस्य हि ऋतं देवयजनदेशं प्राप्तमग्निमेव धेनवोऽग्निहोत्रादिहवि-षां दोग्ध्र्यो गावः पीपयन्त । क्षीरादिलक्षणं गव्यमुपापयेयुः । कीदृश्यो गावः । वावशानाः अग्निं पुनःपुनः कामयमानाः स्मदूधीः । स्मच्छब्दो नित्यशब्द-समानार्थः । नित्यमूधसो युक्ताः । सर्वदा पयसः प्रदात्र्य इत्यर्थः । दुऽभक्ताः विना प्रकाशेन संभक्ताः संश्लिष्टाः । तेजस्विन्य इत्यर्थः । अपि च सिन्धवः स्यन्दनशीला नद्यः सुमतिमस्माग्नेः शोभनामनुग्रहात्मिकां बुद्धिं भिक्षमाणा याचमानाः सत्योऽद्रिं समुयाद्रेः पर्वतस्य समीपे परावतोः दूरदेशाद्वि सस्रुः । विशेषेण गच्छन्ति प्रवहन्ति । अग्नयेऽग्नये दातव्यानां हविषां निष्पत्तयेऽग्नीं प्रवहन्तीत्यर्थः ॥ऋतस्य । क्रियाग्रहणं कर्तव्यमिति कर्मणः संप्रदानत्वाच्चतुर्थ्यर्थे षष्ठी । वावशानाः । वश कान्तौ । यजिजनोरित्यनङ् । न वशः । पा. ६-१-३० । इति संप्रसारणप्रतिषेधः । बहुलं छन्दसीति शपो लुक् । छन्दस्युभयथेति शानचि आर्धधातुकत्वादतोलोपः । यलोपस्तस्मात्सुट्यलोपः । अत एव लसार्वधातुकानुदात्तत्वाभावे चित्स्वर एव शिष्यते । स्मदूधीः । स्मत् नित्यान्यूधांसि यासां । ऊधसोऽनङ् । पा. ५-४-१३८ । इत्यनङादेशः समा-सान्तः । संख्याव्ययादेर्ङीरिति ङीप् । पा. ४-१-३६ । इति ङीप् । भसंज्ञायामल्लोपो-ऽन इत्यलोपः । ङीपः पित्त्वादनुदात्तत्वे बहुव्रीहिस्वर एव शिष्यते । पीपयन्त । पा पाने । अस्माद्धेतुमति णिच् । शाछासाह्वेति युक् । ण्यन्ताल्लुङि च्लेश्चङादेशादि । चङ्यन्यतरस्यामिति चङः पूर्वस्योदात्तत्वं । हि चेति निघातप्रतिषेधः । परावतः । परागतात् । दूरं हि परागतं भवति । अस्मान्द्वात्वर्थे गम्यमान उपसर्गाच्छन्दसि धात्वर्थेर्ङे । पा. ५-१-११७ । इति वतिः ॥

॥ ಪ್ರತಿಪದಾರ್ಥ ॥

ಯತಸ್ಯ ಹಿ—ಯಾಗಶಾಲೆಯನ್ನು ಪ್ರಾಪ್ತನಾದ ಅಗ್ನಿಗೇ। **ವಾವಶಾನಾಃ**—ಅಗ್ನಿಯನ್ನು ಪುನಃ ಪುನಃ ಇಚ್ಛಿಸುವ। **ಸ್ಮದೂಧ್ನೀಃ**—ನಿತ್ಯವಾದ ಕೆಚ್ಚಲುಳ್ಳ (ಸರ್ವದಾ ಕ್ಷೀರವನ್ನು ಕೊಡುವ)। **ದ್ಯುಭಕ್ತಃ**—ತೇಜೋವಿಶಿಷ್ಟವಾದ। **ಧೇನವಃ**—(ಹವಿಸ್ಸಿಗೆ ಕಾರಣಭೂತವಾದ) ಗೋವುಗಳು। **ಪೀಪಯಂತ**—ಕ್ಷೀರಾದಿಗಳನ್ನು ಪಾನಮಾಡಿಸಿದವು। **ಸಿಂಧವಃ**—ಪ್ರವಹಿಸುತ್ತಿರುವ ನದಿಗಳು। **ಸುಮತಿಂ**—(ಅಗ್ನಿಯ) ಶುಭಾನಹವಾದ ಬುದ್ಧಿಯನ್ನು। **ಭಿಕ್ಷಮಾಣಾಃ**—ಯಾಚಿಸುವುವುಗಳಾಗಿ। **ಅದ್ರಿಂ ಸುಮಯಾ**—ಪರ್ವತದ ಸಮೀಪದಲ್ಲಿ। **ಪರಾವತಃ**—ದೂರಪ್ರದೇಶದಿಂದ। **ವಿ ಸಸ್ರುಃ**—ಪ್ರವಹಿಸಿ ಬಂದುವು

॥ ಭಾವಾರ್ಥ

ಅಗ್ನಿಯನ್ನು ಪ್ರೀತಿಸುವ, ನಿತ್ಯವೂ ಹಾಲುಕೊಡುವ, ಕಾಂತಿಯುಕ್ತನಾದ ಗೋವುಗಳು, ಯಾಗಶಾಲೆಗೆ ಬಂದಿರುವ ಅಗ್ನಿಯ ಉಪಯೋಗಕ್ಕಾಗಿ ಕ್ಷೀರಾದಿಗಳನ್ನು ಕೊಡುತ್ತವೆ ನದಿಗಳು, ಅಗ್ನಿಯ ವಿಶ್ರಾಮವನ್ನು ಹೇಕ್ಷಿಸುವವುಗಳಾಗಿ, ಪರ್ವತದ ಸಮೀಪದಲ್ಲಿ, ಬಹುದೂರದಿಂದ ಪ್ರವಹಿಸಿಬಂದಿವೆ

English Translation

The cows, loving (Agni, who has come to the hall of sacrifice), sharing his splendour, have brought with full udders (their milk) to be drunk The rivers, soliciting his good will, have flowed from a distance in the vicinity of the mountains

॥ ವಿಶೇಷವಿಷಯಗಳು ॥

ಯತಸ್ಯ—ಕ್ರಿಯಾಗ್ರಹಣಂ ಕರ್ತವ್ಯಂ ಇತಿ ಕರ್ಮಣಿ ಸಂಪ್ರದಾನತ್ವಾತ್ ಚತುರ್ಥ್ಯರ್ಥೇ ಷಷ್ಠೀ। ಇಲ್ಲಿ ಷಷ್ಠೀ ವಿಭಕ್ತಿಯು ಸಂಪ್ರದಾನರೂಪವಾದ ಚತುರ್ಥೀ ವಿಭಕ್ತಿಯ ಅರ್ಥದಲ್ಲಿ ಬಂದಿರುತ್ತದೆ ಯಾಸ್ಕರು **ಯತಮಿತ್ಯುದಕನಾಮ** ಪ್ರತ್ಯೃತಂ ಭವತಿ (ನಿ. ೨-೨೫) ಎಂದು ಋತಶಬ್ದಕ್ಕೆ ಉದಕವೆಂದೂ ಸಾಯಣರು **ಯತಂ**—**ದೇವಯಜನದೇಶಂ** ದೇವತೆಗಳನ್ನು ಉದ್ದೇಶಮಾಡಿ ಯಜ್ಞಮಾಡುವ ಪ್ರದೇಶವೆಂದೂ ಅರ್ಥ ವಿವರಣೆಮಾಡಿರುವರು

ಸ್ಕಂದಸ್ವಾಮಿಗಳು **ಯತುರರ್ತೇರ್ಗತಿಕರ್ಮಣಃ** (ನಿ. ೨-೨೫) **ಯು ಗತೌ** ಎಂಬ ಧಾತುವಿನಿಂದ **ಯತ** ಶಬ್ದದ ರೂಪಸಿದ್ಧಿಯಾಗಿರುವುದರಿಂದ **ಯತಸ್ಯ**—**ಸರ್ವತ್ರ ಗತಸ್ಯ** ಎಲ್ಲಾ ಪ್ರದೇಶದಲ್ಲಿಯೂ ಸಂಚರಿಸಬಲ್ಲವನಾದ ಎಂದು ಅರ್ಥವನ್ನು ಹೇಳುವರು.

ಸ್ಮದೂಧ್ನೀಃ—**ಸ್ಮಚ್ಛಬ್ದಃ ಪ್ರಶಸ್ತವಚನಃ। ಅಮೃತಪದವಚನತ್ವಾತ್ ಪ್ರಶಸ್ತಮೂಧೋ ಯಾಸಾಂ ತಾಃ** ಸ್ಮತ್ ಎಂಬ ಪದವು ಶ್ರೇಷ್ಠ ಅಥವಾ ಉತ್ತಮ ಎಂಬ ಅರ್ಥವನ್ನು ಬೋಧಿಸುವುದು. ಅಮೃತವನ್ನು

ಪಚನನಮಾಡುವುದರಿಂದ ಶ್ರೇಷ್ಠವಾದ ಕೆಚ್ಚಲು ಉಳ್ಳ ಗೋವುಗಳೆಂದು ಅರ್ಥವು. ಸಾಯಣರು ಸೃತ್ ಶಬ್ದವು ನಿತ್ಯ ಎಂಬ ಪದದ ಅರ್ಥವನ್ನೇ ಬೋಧಿಸುವುದರಿಂದ ಯಾವಾಗಲೂ ಹಾಲನ್ನು ಕರೆಯುವ ಕೆಚ್ಚಲು ಉಳ್ಳ ಹಸುಗಳು ಎಂದು ಅರ್ಥವನ್ನು ಹೇಳುವರು

ದ್ಯುಭಕ್ತಾಃ—ದಿವಾ ಪ್ರಕಾಶೇನ ಸಂಶ್ಲಿಷ್ಟಾಃ ತೇಜಸ್ವಿನ್ಯ ಇತ್ಯರ್ಥಃ ಸಾಯಣರು ಈ ಶಬ್ದಕ್ಕೆ ಹಗಲಿನ ಪ್ರಕಾಶದಿಂದ ಕೂಡಿರುವುವುಗಳಾದಕಾರಣ ಹಸುಗಳು ತೇಜಶ್ಶಾಲಿಗಳಾಗಿರುವುವು ಎಂದು ಅರ್ಥವನ್ನು ಹೇಳುವರು. ಸ್ಕಂದಸ್ವಾಮಿಗಳು **ದಿವಂ ಯಾ ಭಜಂತೇ ತಾ ದ್ಯುಭಕ್ತಾಃ । ಸ್ವರ್ಗನಿವಾಸಿನ್ಯ ಇತ್ಯರ್ಥಃ** ಸ್ವರ್ಗವನ್ನು ಹೊಂದುವವರು ದ್ಯುಭಕ್ತರೆನಿಸುವರು. ಆದ್ದರಿಂದ ಸ್ವರ್ಗನಿವಾಸಿಗಳೆಂದು ಅರ್ಥವನ್ನು ಹೇಳುವರು. ಯಾವಾಗಲೂ ಹಾಲನ್ನು ಕರೆಯುವ, ಉತ್ತಮವಾದ ಕೆಚ್ಚಲುಗಳುಳ್ಳ ತೇಜಶ್ಶಾಲಿಗಳಾಗಿ ಇರುವ ಅವೃತಸಜನಮಾಡುವ ಸ್ವರ್ಗನಿವಾಸಿಗಳಾದ ಗೋವುಗಳು ಅಗ್ನಿಯನ್ನು ತಮ್ಮ ಹಾಲಿನಿಂದ ಸಂತೋಷಪಡಿಸುವುವು ಎಂದಭಿಪ್ರಾಯವು ಸ್ಕಂದಸ್ವಾಮಿಗಳು ಬೇರೆಯ ವಿಧವಾಗಿ ಅರ್ಥವನ್ನು ಹೇಳುತ್ತಾರೆ.

ಪರಾವತಃ—ಪರಾಗತಾತ್ । ದೂರಂ ಹಿ ಪರಾಗತಂ ಭವತಿ ।

ಸಿಂಧವಃ=ನದಿಗಳು, ಅಮೃತಕ್ಕೆ ಸಮನಾದ ನೀರುಗಳಿಂದ ಪ್ರವಹಿಸುತ್ತಾ ಅಗ್ನಿಯನ್ನು ಹುಡುಕುವವುಗಳಾಗಿ ಅನೇಕ ಪ್ರಕಾರವಾಗಿ ಹರಿಯುತ್ತವೆ.

ಸಮಯಾ ಅದ್ರಿಂ । ಸಮಯಾ ಶಬ್ದಃ ಸಾಮೀಪ್ಯೇ । ಅದ್ರಿರ್ಮೇರು ನಾಮಾ ಪರ್ವತಃ ಮೇರೋಃ ಸಮೀಪೇನೇತ್ಯರ್ಥಃ । ಅಗ್ನೇಃ ಸ್ವಭೂತಾ ಗಾವಃ ಗವ್ಯೂತಿತೋ ಮೇರುಬುಧ್ನೇನಃ ಪ್ರತ್ಯಾಗತ್ಯ ವಿವಿಧಮಗ್ನಿಮಭಿಗಚ್ಛಂತಿ । ಅಭಿಗಮ್ಯ ಚ ಸ್ವೇನಾ ಮೃತರೂಪೇಣ ಪಯಸಾ ಅಗ್ನಿಮಾಪ್ಯಾಯಯಂತ್ಯಿ ಇತಿ ಸಮಸ್ತಾರ್ಥಃ ಪರಾಗತ ಎಂಬ ಶಬ್ದವು ದೂರ ಎಂಬ ಅರ್ಥವನ್ನು ಬೋಧಿಸುವುದು. ಸಮಯಾ ಎಂಬ ಅವ್ಯಯವು ಸಮೀಪ ಎಂಬ ಅರ್ಥವನ್ನು ಬೋಧಿಸುವುದು. ಅದ್ರಿ ಶಬ್ದದಿಂದ ಇಲ್ಲಿ ಮೇರುಪರ್ವತವೆಂದು ಅರ್ಥವಾಗುವುದು ಅಗ್ನಿಯು ಸ್ವಭೂತ ಎಂದರೆ ಅಗ್ನಿಯಹಾಗೆ ತೇಜಶ್ಶಾಲಿಗಳೂ ಪಾತ್ರಗಳೂ ಆಗಿರುವ ಗೋವುಗಳು ಮೇರು ಪರ್ವತದ ಪ್ರದೇಶದ ದೂರದಿಂದಲೂ ಅಗ್ನಿಯ ಸೇವೆಗಾಗಿ ಬಂದು ಅನೇಕ ಪ್ರಕಾರವಾಗಿ ತಮ್ಮ ಅವೃತಕ್ಕೆ ಸಮನಾದ ಹಾಲುಗಳಿಂದ ಅಗ್ನಿಯು ಸಂತೋಷಪಡುವಂತೆ (ಮಾಡುತ್ತವೆ) ಸೇವಿಸುತ್ತವೆ. ಈ ಋಕ್ಕಿಗೆ ಇನ್ನೊಂದು ವಿಧವಾದ ಅರ್ಥವನ್ನೂ ಹೇಳುವರು. ಧೀಙ್ ಪ್ರೀಣನೇ ಎಂಬ ಧಾತುವಿನಿಂದ ಉಂಟಾದ ಧೇನು ಶಬ್ದಕ್ಕೆ ಅಗ್ನಿಯನ್ನು ಸಂತೋಷಪಡಿಸುವ ಆಹುತಿಗಳೆಂದು ಅರ್ಥವು. ಇವುಗಳು ಬಹಳ ಮಟ್ಟಿಗೆ ಅಗ್ನಿಯಿಂದ ಅಪೇಕ್ಷಿತಗಳಾಗಿ ಇರುತ್ತವೆ. ಆಹುತಿಗಳ ರಸಸ್ಥಾನವು ಉತ್ತಮವಾದ ಊಧಶ್ಶಬ್ದದಿಂದ ವ್ಯವಹೃತವಾಗಿ ಇರುತ್ತವೆ. ಈ ಆಹುತಿಗಳು ಅಮೃತರಸದಿಂದ ಕೂಡಿದವುಗಳಾಗಿ ಇರುತ್ತವೆ. ಇವುಗಳು ಭೂಮಿಗಿಂತ ದೂರವಲ್ಲಿರುವ ಸ್ವರ್ಗವನ್ನು ಸೇರಿ ಅಮೃತರಸವನ್ನು ಪಾನಮಾಡುವಂತೆ ಪಾನಮಾಡಲ್ಪಡುತ್ತವೆ. **ಧೇನವ ಇತಿ ಧಿನೋತೇಃ ಪ್ರೀಣನಾರ್ಥಸ್ಯ ರೂಪಂ । ಯತಸ್ಯಾಗ್ನೇಃ ಪ್ರೀಣಯಿತ್ರ್ಯಃ ಆಹುತಯಃ ಅತ್ಯರ್ಥಂ ಕಾಮಯಮಾನಾಃ ಅಮೃತರಸಯುಕ್ತಾಃ ದ್ಯುಗಾಮಿನ್ಯಃ ಪೃಥಿವೀತಃ ದೂರಾತ್ ಅಗ್ನಿಮಾಪ್ಯಾಯಯಂತ್ಯಿ ।** ಆದ್ದರಿಂದ ಈ ಆಹುತಿಗಳು ಅಗ್ನಿಯನ್ನು ಸುಖವಾಗಿರುವಂತೆ ಮಾಡುತ್ತವೆ.

॥ ವ್ಯಾಕರಣಪ್ರಕ್ರಿಯಾ ॥

ಋತೇಸ್ಯ—ಸಂಪ್ರದಾನಸಂಜ್ಞಾವಿಧಾಯಕಸೂತ್ರದಲ್ಲಿ **ಕ್ರಿಯಾಗ್ರಹಣಂ ಕರ್ತವ್ಯಂ** ಎಂಬ ವಚನ ವಿರುವುದರಿಂದ ಇಲ್ಲಿ ಕರ್ಮಕ್ಕೆ ಸಂಪ್ರದಾನ ಸಂಜ್ಞೆ ಬರುವುದರಿಂದ ಚತುರ್ಥ್ಯರ್ಥದಲ್ಲಿ ಷಷ್ಠೀ ವಿಭಕ್ತಿ ಬರುತ್ತದೆ.

ವಾವಶಾನಾಃ—ವಶ ಕಾಂತೌ ಧಾತು ಅತಿಶಯಾರ್ಥ ತೋರುವಾಗ **ಧಾತೋರೇಕಾಚೋಹಲಾದೇಃ**—ಎಂಬುದರಿಂದ ಯಙ್ **ಸನ್ಯಙೋಃ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ. **ದೀರ್ಘೋ೭ಕಿತಿ** (ಪಾ. ಸೂ. ೭-೪-೮೩) ಎಂಬುದರಿಂದ ಅದಕ್ಕೆ ದೀರ್ಘ. ವಾವಶ್ಯ ಎಂಬುದು **ಸನಾದ್ಯಂತಾ ಧಾತವಃ** ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಇದಕ್ಕೆ ಲಡರ್ಥದಲ್ಲಿ ಶಾನಚ್ ಪ್ರತ್ಯಯ **ನವಶಃ** (ಪಾ. ಸೂ ೩-೧-೨೦) ಎಂಬುದರಿಂದ ಯಙ್ ಪರವಾದಾಗ ಸಂಪ್ರಸಾರಣ ನಿಷೇಧ. **ಬಹುಲಂ ಛಂದಸಿ** ಎಂಬುದರಿಂದ ಶಪ್ಪಿಗೆ ಲುಕ್ **ಛಂದಸ್ಯುಭಯಥಾ** ಎಂಬುದರಿಂದ ಶಾನಚಿಗೆ ಆರ್ಧಧಾತುಕಸಂಜ್ಞೆಯೂ ಇರುವುದರಿಂದ **ಯಸ್ಯೇಹಲಃ** ಸೂತ್ರದಿಂದ ಯಕಾರಕ್ಕೂ **ಅತೋಲೋಪಃ** ಸೂತ್ರದಿಂದ ಅಕಾರಕ್ಕೂ ಲೋಪ ವಾವಶಾನ ಎಂದು ರೂಪವಾಗುತ್ತದೆ. ಅದುಪದೇಶದ ಪರದಲ್ಲಿಲ್ಲದಿರುವುದರಿಂದ ಲಸಾರ್ವಧಾತುಕಾನುದಾತ್ತಸ್ವರ ಬಾರದಿರುವುದರಿಂದ ಶಾನಚ್ ಚಿತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ

ಸ್ಮದೂಧ್ನೀಃ—ಸ್ಮತ್ ನಿತ್ಯಾನಿ ಊಧಾಂಸಿ ಯಾಸಾಂ ತಾಃ **ಊಧಸೋ೭ನಙ್** (ಪಾ.ಸೂ. ೫-೪-೧೩೧) ಎಂಬುದರಿಂದ ಅನಙಾದೇಶವು ಸಮಾಸಾಂತವಾಗಿ ಬರುತ್ತದೆ ಅವ್ಯಯ ಪೂರ್ವಪದವಾಗಿರುವುದರಿಂದ ಸ್ತ್ರೀತ್ವದಲ್ಲಿ **ಸಂಖ್ಯಾವ್ಯಯಾದೇರ್ಙೀಷ್** (ಪಾ. ಸೂ. ೪-೧-೨೬) ಎಂಬುದರಿಂದ ಙೀಷ್ ಪ್ರತ್ಯಯ. ಸ್ಮದೂಧನ್ ಈ ಎಂದಿರುವಾಗ **ಅಲ್ಲೋಪೋ೭ನಃ** ಎಂಬುದರಿಂದ ಅಸಿನ ಅಕಾರಕ್ಕೆ ಲೋಪ. ಙೀಷ್ ಪಿತ್ವಾದುದರಿಂದ **ಅನುದಾತ್ತೌ ಸುಪ್ಪಿತೌ** ಸೂತ್ರದಿಂದ ಅನುದಾತ್ತವಾಗಿರುವುದರಿಂದ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** ಎಂಬುದರಿಂದ ಬಂದ ಬಹುವ್ರೀಯ ಸ್ವರವು (ಪೂರ್ವಪದ ಪ್ರಕೃತಿಸ್ವರವು) ಉಳಯುತ್ತದೆ. ಇದಕ್ಕೆ ಜಸ್ ಪರವಾದಾಗ **ವಾ ಛಂದಸಿ** ಎಂಬುದರಿಂದ ಪೂರ್ವಸವರ್ಣದೀರ್ಘ ಬರುತ್ತದೆ.

ಪೀಪಯಂತ—ಪಾ ಪಾನೇ ಧಾತು ಪ್ರಯೋಜಕವ್ಯಾಪಾರ ತೋರುವುದರಿಂದ **ಹೇತುಮತಿ ಚ** (ಪಾ. ಸೂ ೩-೧-೨೬) ಎಂಬುದರಿಂದ ಣಿಚ್ **ಶಾಚ್ಛಾಸಾಹ್ವಾ**—(ಪಾ ಸೂ. ೭-೩-೩೭) ಎಂಬುದರಿಂದ ಣಿಚ್ ಪರವಾದಾಗ ಧಾತುವಿಗೆ ಯುಕಾಗಮ **ಸನಾದ್ಯಂತಾ ಧಾತವಃ** ಎಂಬುದರಿಂದ ಪಾಯಿ ಎಂಬ ಣಿಜಂತಕ್ಕೆ ಧಾತು ಸಂಜ್ಞೆ ಬರುತ್ತದೆ ಇದರನಂತರ ಲುಙ್ ಪ್ರಥಮಪುರುಷ ಬಹುವಚನ ಝಿ ಪ್ರತ್ಯಯ. **ಝೇರಂತಃ** ಎಂಬುದರಿಂದ ಅಂತಾದೇಶ. **ಣೇಶ್ಚಿದ್ಯುಸ್ಪುಭ್ಯಃ ಚಿಣ್** (ಪಾ ಸೂ ೩-೧-೫೮) ಎಂಬುದರಿಂದ ಚ್ಲಿಗೆ ಚಿಣಾದೇಶ. **ಚಿಣ್** (ಪಾ. ಸೂ. ೬-೧-೧೧) ಎಂಬುದರಿಂದ ಧಾತುವಿನ ಪ್ರಥಮೈಕಾಚಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಹ್ರಸ್ವ **ಣೌಚಙ್ಯುಪಧಾಯಾಃ**—(ಪಾ. ಸೂ. ೭-೪-೧) ಎಂಬುದರಿಂದ ಧಾತುವಿನ ಉಪಧೆಗೆ ಹ್ರಸ್ವ ಬಂದನಂತರ **ಸನ್ಯತಃ** ಎಂಬುದರಿಂದ ಅಭ್ಯಾಸಕ್ಕೆ ಇತ್ವ **ದೀರ್ಘೋ೭ಕಿತಿ** (ಪಾ. ಸೂ ೭-೪-೮೩) ಎಂಬುದರಿಂದ ಇಕಾರಕ್ಕೆ ದೀರ್ಘ. **ಸೇರಯಿಟಿ** ಸೂತ್ರದಿಂದ ಣಿಚಿಗೆ ಲೋಪ. **ಅತೋಗುಣೇ** ಸೂತ್ರದಿಂದ ಪರರೂಪ ಪೀಪಯಂತ ಎಂದು ರೂಪ

ವಾಗುತ್ತದೆ. **ಚಜೋಸ್ಯತರಸ್ಯಾಂ** (ಪಾ. ಸೂ ೬-೧-೫೮) ಎಂಬುದರಿಂದ ಚಜೋನ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಹಿಂದೆ ಹಿ ಎಂಬ **ನಿಘಾತವಿರುವುದರಿಂದ ಹಿ ಚೆ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತ ಪ್ರತಿಷೇಧ ಬರುತ್ತದೆ

ಪರಾವತಃ—ಪರಾಗತ ಶಬ್ದದಿಂದ ಈ ಶಬ್ದವಾಗಿದೆ ದೂರಂ ಹಿ ಪರಾಗತಂ ಭವತಿ ಪರಾಗತವೆಂದು ಧಾತ್ವರ್ಥ ತೋರುವಾಗ **ಉಪಸರ್ಗಾಚ್ಛಂದಸಿ ಧಾತ್ವರ್ಥೇ** (ಪಾ ಸೂ. ೫-೧-೧೧೮) ಎಂಬುದರಿಂದ ಪರಾ ಎಂಬ ಉಪಸರ್ಗದ ಮೇಲೆ ವತಿ ಪ್ರತ್ಯಯ ಪರಾವತ್ ಶಬ್ದವಾಗುತ್ತದೆ ಪಂಚಮಿಾ ಏಕವಚನರೂಪ. ಪ್ರತ್ಯಯದ ಉದ್ಯುದಾತ್ತಸ್ವರ ಬರುತ್ತದೆ.

ಸಸ್ರುಃ—ಸೃ ಗತೌ ಧಾತು **ವರ್ತಮಾನಾರ್ಥ**ದಲ್ಲಿ ಛಾಂದಸವಾದ ಲಿಟ್. ಪ್ರಥಮಪುರುಷ ಬಹುವಚನದಲ್ಲಿ ಉಸಾದೇಶ. ದ್ವಿತ್ವ ಉರದತ್ವ. ಹಲಾದಿಶೇಷ ಯಣಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ತ್ವೇ ಅ॑ಗ್ನೇ ಸುಮ॒ತಿಂ ಭಿ॒ಕ್ಷಮಾ॑ಣಾ ದಿ॒ವಿ ಶ್ರವೋ॑ ದಧಿರೇ ಯ॒ಜ್ಞಿಯಾ॑ಸಃ ।
ನಕ್ತಾ॒ ಚ॒ ಚಕ್ರು॒ರುಷ॑ಸಾ॒ ವಿರೂ॑ಪೇ॒ ಕೃಷ್ಣಂ॒ ಚ॒ ವರ್ಣ॑ಮರು॒ಣಂ ಚ॒ ಸಂ ಧುಃ ॥ ೭ ॥

॥ पदपाठः ॥

त्वे इति । अग्ने । सुऽमतिं । भिक्षमाणाः । दिवि । श्रवः । ददिरे ।
यज्ञियासः ।
नक्ता । च । चक्रुः । उषसा । विरूपे इति विऽरूपे । कृष्णं । च ।
वर्णं । अरुणं । च । सं । धुरिति धुः ॥ २ ॥

॥ सायणभाष्यं ॥

हे अग्ने सुमतिं शोभनामनुग्रहात्मिकां बुद्धिं भिक्षमाणा याचमाना यज्ञियासो यज्ञार्हाः सर्वे देवा दिवि द्योतमाने त्वे त्वयि श्रवो हविर्लक्षणमन्नं ददिरे। अस्थापयन्। अग्निर्देवानामन्नाद इति श्रुतेः। तदनंतरं कार्यशे हविर्युक्तायानुष्ठानायै विरूपे विविधरूपे उषसोषःकालोपलक्षितमहर्नक्ता च नक्तं रात्रिं च चक्रुः। अकुर्वन्। एतदेव स्पष्टयति। कृष्णं च वर्णं रात्र्यां श्यामलवर्णमंधकारमह्न्यरुणमारोचनं श्वेतवर्णं तेजश्च सं धुः। समक्स्थापितवंतः॥ त्वे। सुपां सुलुगिति सप्तम्याः शेआदेशः। नक्ता। तेनैव द्वितीयायाडादेशः। उषसा। तेनैव विभक्तेरराकारः। धुः। डुधाञ् धारणपोषणयोः। लुङ् गातिस्थेति सिचोलुक्। आत इति ङोर्जुसादेशः। बहुलं छंदस्यमाङ्योगेऽपीत्यडभावः॥

॥ प्रतिपदार्थ ॥

अग्ने—ಎಲೈ ಅಗ್ನಿಯೇ । **सुमतिं**—ಶುಭಾವಹವಾದ (ನಿನ್ನ) ಬುದ್ಧಿಯನ್ನು । **भिक्षमाणाः**—ಯಾಚಿಸುವವರಾಗಿ । **यज्ञियासः**—ಯಜ್ಞಾರ್ಹರಾದ (ದೇವತೆಗಳು) । **दिवि**—ಪ್ರಕಾಶಯುಕ್ತವಾದ । **त्वे**—ನಿನ್ನಲ್ಲಿ । **श्रवः**—ಹವಿರ್ಲಕ್ಷಣವಾದ ಅನ್ನವನ್ನು । **ददिरे**—ಸ್ಥಾಪಿಸಿದರು (ಹವಿರಾದಿ ಅನುಷ್ಠಾನಕ್ಕಾಗಿ)। **विरूपे**—ವಿವಿಧವರ್ಣಗಳಾದ । **उषसा**—ಉಷಸ್ಸಿನಿಂದ ಯುಕ್ತವಾದ (ಹಗಲನ್ನೂ) । **नक्ता च**—ರಾತ್ರಿಯನ್ನೂ । **चक्रुः**—ಮಾಡಿದರು । **कृष्णं च वर्णं**—ಕೃಷ್ಣವರ್ಣವಾದ ಅಂಧಕಾರವನ್ನು । **अरुणं च**—ಶ್ವೇತವರ್ಣವಾದ ಬೆಳಕನ್ನು । **सं धुः**—ಚೆನ್ನಾಗಿ ಸ್ಥಾಪಿಸಿದರು ।

॥ ಭಾವಾರ್ಥ ॥

ಯಜ್ಞದಲ್ಲಿ ಪೂಜಾರ್ಹರಾದ ದೇವತೆಗಳು, ನಿನ್ನ ವಿಶ್ವಾಸಾಪೇಕ್ಷೆಗಳಾಗಿ, ದೀಪ್ತನಾದ ನಿನ್ನ ವಶಕ್ಕೆ ಹವಿರಾದಿ ಅನ್ನವನ್ನು ಒಪ್ಪಿಸಿದರು (ಯಾಗಾದಿಗಳನ್ನು ಕ್ರಮವಾಗಿ ನಡೆಯಿಸುವುದಕ್ಕೋಸ್ಕರ) ಅವರು ಹಗಲು ರಾತ್ರಿಗಳನ್ನು, ಬೆಳಕು ಮತ್ತು ಕತ್ತಲೆಯುಳ್ಳವುಗಳನ್ನಾಗಿ ಮಾಡಿದರು

English Translation

(The Gods), who are entitled to worship, soliciting your good will, have instructed to you, resplendent Agni, the (sacrificial) food and, (for the due observance of sacred rites), they have made the night and morning of different colours, or black and purple.

॥ ವಿಶೇಷವಿಷಯಗಳು ॥

ಸುಮತಿಂ— **ಶೋಭನಾಮನುಗ್ರಹಾತ್ಮಿಕಾಂ ಬುದ್ಧಿಂ** ಸಾಯಣರು- -ಅನುಗ್ರಹಮಾಡುವ ರೂಪದಿಂದ ಇರುವ ಒಳ್ಳೆಯ ಬುದ್ಧಿಯನ್ನು ಎಂದು ಅರ್ಥಮಾಡಿರುವರು ಸುಮತಿ ಶಬ್ದವು ಇದೇ ಅರ್ಥದಲ್ಲಿ ಬೆ ರೆಯ ಋಕ್ಕು ಗಳಲ್ಲಿ ಉದಾಹೃತವಾಗಿರುವುದು

ಆಷ್ವಿಷೇಣೋ ಹೋತ್ರಮೃಷಿರ್ನಿಷೀದ ದೇವಾಪಿರ್ದೇವಸುಮತಿಂ ಚಿಕಿತ್ವಾ ।

(ಋ. ಸಂ ೧೦-೯೮-೫)

ಇಲ್ಲಿ **ಸುಮತಿಂ** ಎಂದರೆ **ಕಲ್ಯಾಣೀಂ ಮತಿಂ**—ಉತ್ತಮವಾದ ಬುದ್ಧಿಯನ್ನು ಎಂದು ಅರ್ಥವು.

ವೈಶ್ವಾನರಸ್ಯ ಸುಮತೌ ಸ್ಯಾಮ ರಾಜಾಹಿ ಕಂ ಭುವನಾನಾಮಭಿಶ್ರೀಃ

(ಋ ಸಂ ೧-೯೮-೧)

ಇಲ್ಲಿಯೂ **ಸುಮತೌ ಕಲ್ಯಾಣ್ಯಾಂ ಮತೌ** ಎಂದರೆ ಒಳ್ಳೆಯ ಬುದ್ಧಿಯಲ್ಲಿ ಎಂದರ್ಥವು. (ನಿ ೭-೨೨)

ವಯಂ ದೇವಸ್ಯ ಧೀಮಹಿ ಸುಮತಿಂ ಸತ್ಯಧರ್ಮಣಃ

(ಅ ಸಂ. ೭-೧೭-೨)

ಇಲ್ಲಿಯೂ **ಸುಮತಿಂ ಕಲ್ಯಾಣೀಂ ಮತಿಂ** । (ನಿ. ೧೧-೧೨) ಉತ್ತಮವಾದ ಬುದ್ಧಿಯನ್ನು ಎಂದೇ ಅರ್ಥವು.

ತೇಷಾಂ ವಯಂ ಸುಮತೌ ಯಜ್ಞಿಯಾನಾಮಪಿ ಭದ್ರೇ ಸೌಮನಸೇ ಸ್ಯಾಮ ।

(ಋ. ಸಂ. ೧೦-೧೪-೬)

ಇಲ್ಲಿಯೂ **ಸುಮತೌ ಕಲ್ಯಾಣ್ಯಾಂ ಮತೌ** (ನಿ. ೧೧-೨೦) ಎಂದರೆ ಉತ್ತಮವಾದ ಬುದ್ಧಿಯಲ್ಲಿರುವಂತೆ ಎಂದರ್ಥವು.

ದೇವಾನಾಂ ಭದ್ರಾ ಸುಮತಿರ್ಋಜೂಯತಾಂ ದೇವಾನಾಂ ರಾತಿರಭಿ ನೋ ನಿವರ್ತತಾಂ ।

(ಋ. ಸಂ. ೮-೮೪. ೨)

ಇಲ್ಲಿಯೂ—**ದೇವಾನಾಂ ವಯಂ ಸುಮತೌ ಕಲ್ಯಾಣ್ಯಾಂ ಮತೌ ಸುಮತಿಃ ಶೋಭನಾ ಮತಿಃ ಪ್ರಸಾದಾಭಿಮುಖೀ ಮತಿಃ ।** (ನಿ. ೧೮-೪೦) ಎಂದೆರೆ ಉತ್ತಮನಾದ ಬುದ್ಧಿಯೆಂದೇ ಅರ್ಥವು

ಈ ಋಕ್ಕುಗಳಲ್ಲಿ ಇರುವ ಸುಮತಿ ಶಬ್ದಕ್ಕೆ ಸಾಯಣರು ವ್ಯಾಖ್ಯಾನ ಮಾಡಿರುವಂತೆಯೇ ನಿರುಕ್ತಾರ್ಥವೂ ಇರುವುದು

ಸ್ಕಂದಸ್ವಾಮಿಗಳು—**ಸುಮತಿ** ಶಬ್ದಕ್ಕೆ ಧನವೆಂದು ಅರ್ಥಮಾಡಿ **ಸುಮತಿಂ ಭಿಕ್ಷಮಾಣಾಃ ಧನಾನಿ ಯಾಚಮಾನಾಃ** ದ್ರವ್ಯವನ್ನು ಯಾಚಿಸುವವರೆಂದು ವ್ಯಾಖ್ಯಾನಮಾಡಿರುವರು

ಯಜ್ಞಿಯಾಸಃ ದಿವಿ ತ್ವೇ ಶ್ರವಃ ದಧಿರೇ-ದಿವಿ ಶ್ರವಃ ಹವಿರ್ಲಕ್ಷಣಮನ್ನಂ ದಧಿರೇ ದೇವೇಭ್ಯೋ ಹವೀಂಷಿ ದಧಿರೇ ಇತ್ಯರ್ಥಃ । ಅಥವಾ ದಿವಿ ಇತಿ ಸಪ್ತಮ್ಯಾ ನಿರ್ದೇಶಾತ್ ದಿವಿ ವ್ಯವಸ್ಥಿತಾಯ ತುಭ್ಯಂ ಶ್ರವಃ ದಧಿರೇ ದದತಿ । ಸ್ಕಂದಸ್ವಾಮಿಗಳು--ಯಜ್ಞಮಾಡುವವರು ದೇವತೆಗಳಿಗಾಗಿ ನಿನ್ನಲ್ಲಿ ಹವಿರ್ಭಾಗಗಳನ್ನು ಆರ್ಪಿಸುವರು. ಅಥವಾ ಸ್ವರ್ಗದಲ್ಲಿ ಇರುವ ನಿನಗಾಗಿ ಹವಿಸ್ಸುಗಳನ್ನು ಹೋಮಮಾಡುವರು ಎಂದು ಎರಡು ವಿಧವಾಗಿ ಅರ್ಥವನ್ನು ಹೇಳಿರುವರು

ನಕ್ತಾ ಚ ಚಕ್ರುರುಷಸಾ ವಿರೂಪೇ ಕೃಷ್ಣಂ ಚ ವರ್ಣಮರುಣಂ ಚ ಸಂಧುಃ--ಈ ಶಬ್ದಗಳಿಗೆ ಸ್ಕಂದಸ್ವಾಮಿಗಳು--**ನಕ್ತೇತಿ ರಾತ್ರಿನಾಮ । ಯೇಷ್ಟಾರಃ ರಾತ್ರೌ ಚೈತತ್ ಕುರ್ವಂತಿ ಉಷಸಾ ಉಷಸಿ ಚ । ಉಷಸಾ ಚ ಅತ್ರ ಅನಂತರ್ಯಾದಹರ್ಲಕ್ಷತೇ । ಅಹನಿ ಚೇತ್ಯರ್ಥಃ । ಸುಸಮಿದ್ಧಸ್ಯಾಗ್ನೇರ್ಜ್ವಾಲಾಯಾ ಉಪರಿ ಕೃಷ್ಣೋಭವತಿ ತಿಪ್ಪೇ ಅರುಣಃ । ತೌ ಸಂಧುಃ ಸಂದಧತಿ । ಯಥಾ ತವ ಕೃಷ್ಣಾರುಣೌ ವರ್ಣಾವಪಿ ಭಿನ್ನೌ ಭವತ ಇತ್ಯರ್ಥಃ । ನಕ್ತೌ** ಎಂಬ ಪದವುಇಪ್ಪತ್ತಮೂರು ರಾತ್ರಿನಾಮಗಳಲ್ಲಿ (ನಿ. ೩-೫) ಉಕ್ತವಾಗಿರುವುದರಿಂದ ರಾತ್ರಿ ಎಂದು ಅರ್ಥವು ಯಜ್ಞಮಾಡುವವರು ರಾತ್ರಿಯಲ್ಲಿಯೂ ಹಗಲಿನಲ್ಲಿಯೂ ಕೂಡ ಅಗ್ನಿಯನ್ನು ದೀಪ್ತನನ್ನಾಗಿ ಮಾಡಿ ಹೋಮಮಾಡುವರು ಆಗ ಅಗ್ನಿಯ ಜ್ವಾಲೆಗಳು ಚೆನ್ನಾಗಿ ಪ್ರಕಾಶಿಸುತ್ತಿರುವ ಕಾಲದಲ್ಲಿ ಜ್ವಾಲೆಯ ಮೇಲುಗಡೆಯ ಕಪ್ಪು ಬಣ್ಣವೂ ಸ್ಫುತಸ್ಸಿದ್ಧವಾದ ಅರುಣವರ್ಣವು ಮೂಲಭಾಗದಲ್ಲಿಯೂ ಚೆನ್ನಾಗಿ ಬೇರೆ ಬೇರೆಯಾಗಿ ಇರುವವುಗಳಾದರೂ ಅವುಗಳು ಸ್ಪಧಕ್ಕಾಗಿ ಸ್ಪಷ್ಟವಾಗಿ ಎಲ್ಲರೂ ತಿಳಿಯುವ ಮಟ್ಟಿಗೆ ಅಗ್ನಿಯನ್ನು ಕಾಂತಿಯುಳ್ಳವನನ್ನಾಗಿ ಮಾಡುವರು. ಅಥವಾ **ನಕ್ತಾ ಚ ಚಕ್ರುರುಷಸಾ ವಿರೂಪೇ** ಇತಿ ದ್ವಿತೀಯಾಂತಾನ್ಯೇತಾನಿ ನ । **ಚ ಸಪ್ತಮ್ಯಂತಾನಿದಿವಿಶ್ರವೋ ದಧಿರೇ ಯಜ್ಞಿಯಾಸಃನಕ್ತೋಷಸಾ ವಿಭಿನ್ನರೂಪೇ ಕುರ್ವಂತೀತ್ಯರ್ಥಃ । ನಕ್ತೋಷಸೋರೇವ ಕೃಷ್ಣಂ ಚ ವರ್ಣಮರುಣಂ ಚ ಸಂಧುಃ । ಯಾಗಕಾರಿತ್ವಾತ್ ಯಾಗಸ್ಯ ಚ ಧರ್ಮತ್ವಾತ್ ಕೃತ್ಸ್ನಸ್ಯ ಜಗತೋ ಧರ್ಮಮೂಲತ್ವಾತ್ ।** ನಕ್ತಾ ಉಷಸಾ ವಿರೂಪೇ ಈ ಪದಗಳು ಸಪ್ತಮ್ಯಾವಿಭಕ್ತ್ಯಂತಗಳಾಗಿರದೆ ದ್ವಿತೀಯಾವಿಭಕ್ತ್ಯಂತಗಳಾಗಿರುವುದು ಹವಿರ್ಭಾಗಗಳನ್ನು ಆರ್ಪಿಸುವಾಗ ಯಜ್ಞಮಾಡುವವರು ರಾತ್ರಿಯನ್ನು ಕೃಷ್ಣವರ್ಣವುಳ್ಳದ್ದನ್ನಾಗಿಯೂ, ಉಷಃಕಾಲವು ಅರುಣವರ್ಣವುಳ್ಳದ್ದನ್ನಾಗಿಯೂ ಇರುವ

ಹಾಗೆ ಮಾಡಿರುವರು ರಾತ್ರಿಯ ಕಾಲದಲ್ಲಿ ಯಾಗಮಾಡುವಾಗ ಚೆನ್ನಾಗಿ ಉದ್ದೀಪ್ತನಾದ ಅಗ್ನಿಯ ಜ್ವಾಲೆಗಳ ಅಗ್ರ ಭಾಗವು ಕಪ್ಪಾಗಿ ಕಾಣುವುದರಿಂದ ರಾತ್ರಿಯು ಕಪ್ಪುಬಣ್ಣವುಳ್ಳದ್ದಾಯಿತೆಂದು ಹೇಳುವರು. ಉಷಃಕಾಲವು ಮೊದಲು ಅರುಣವರ್ಣವುಳ್ಳದ್ದಾಗಿ ಅನಂತರ ಕ್ರಮವಾಗಿ ಶುಭ್ರವಾದ ತೇಜಸ್ಸನ್ನು ಹೊಂದುವುದು ಉಷಃಕಾಲ ವಾಯ್ತು ರಾತ್ರಿ ಕಾಲಗಳು ಅಗ್ನಿಯಲ್ಲಿ ಯಜಮಾನರು ಹೋಮಮಾಡುವಾಗ ಅಗ್ನಿಯ ಕಾಂತಿಯಿಂದ ಮಿಶ್ರವಾಗಿರುವುದರಿಂದ ವಿರೂಪೇ ಎಂದು ಹೇಳಿಸಿಕೊಳ್ಳುವುವು. ಧರ್ಮಮೂಲವಾಗಿರುವುದರಿಂದ ಸಮಸ್ತವಾದ ಜಗದ್ವ್ಯವಹಾರಗಳೂ ಆಯಾಯ ಕಾಲಗಳಲ್ಲಿ ನಡೆಯುವಂತೆ ಅಹೋರಾತ್ರಗಳ ವಿಭಾಗಗಳು ಯಜಮಾನರು ಮಾಡುವ ಯಾಗಗಳಿಂದ ಉಂಟಾಗುತ್ತವೆ ಎಂದು ವಿವರಿಸಿರುವರು. ಇವುಗಳೆಲ್ಲಕ್ಕೂ ಅಗ್ನಿಯೇ ಕಾರಣನಾಗಿರುವನು ಎಂದು ತಾತ್ಪರ್ಯವು.

॥ ವ್ಯಾಕರಣಪ್ರಕ್ರಿಯಾ ॥

ತ್ವೇ—ಯುಷ್ಮದ್ ಶಬ್ದ ಸಪ್ತಮಿ ವಿಕವಚನ ಪರವಾದಾಗ **ತ್ವಮಾವೇಕವಚನೇ** ಎಂಬುದರಿಂದ ಮಪರ್ಯಂತಕ್ಕೆ ತ್ವಾದೇಶ **ಸುಪಾಂ ಸುಲುಕ್** ಎಂಬುದರಿಂದ ವಿಭಕ್ತಿಗೆ ಶೇ ಆದೇಶ **ಶೇಷೇಲೋಪಃ** ಸೂತ್ರದಿಂದ ಆದಿಗೆ ಲೋಪ. **ಆತೋಗುಣೇ** ಎಂಬುದರಿಂದ ಪರರೂಪ

ದಿವಿ—**ಊಡಿದಂ ಪದಾದಿ**—ಎಂಬುದರಿಂದ ಸಪ್ತಮೀ ವಿಕವಚನಕ್ಕೆ ಉದಾತ್ತಸ್ವರ ಬರುತ್ತದೆ

ದಧಿರೇ—ಡುಧಾಞ್ ಧಾರಣಪೋಷಣಯೋಃ ಧಾತು. ಲಿಟ್ ಪ್ರಥಮಪುರುಷ ಬಹುವಚನರೂಪ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಯಜ್ಞಿಯಾಸಃ—ಅರ್ಹಾರ್ಥದಲ್ಲಿ ಯಜ್ಞಶಬ್ದದ ಮೇಲೆ **ಯಜ್ಞಾತ್ಖಿಗ್ಭ್ಯಾಂ ಘಖಞೌ** (ಪಾ. ಸೂ ೪-೧-೭೧) ಎಂಬುದರಿಂದ ಘ ಪ್ರತ್ಯಯ **ಆಯನೇಯಿನೀ**—ಎಂಬುದರಿಂದ ಇಯಾದೇಶ **ಯಸ್ಯೇತಿ ಚ** ಎಂಬುದರಿಂದ ಅಕಾರಲೋಪ ಯಜ್ಞಿಯ ಶಬ್ದಕ್ಕೆ ಜಸ್ ಪರವಾದಾಗ **ಆಜ್ಜಸೇರಸುಕ್** ಎಂಬುದರಿಂದ ಜಸ್ಸಿಗೆ ಅಸುಕಾಗಮ

ನಕ್ತಾ—ನಕ್ತ ಶಬ್ದಕ್ಕೆ ದ್ವಿತೀಯಾ ವಿಭಕ್ತಿ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ಆದಕ್ಕೆ ಡಾದೇಶ.

ಚಕ್ರುಃ—ಡುಕೃಞ್ ಕರಣೇ ಧಾತು ಲಿಟ್ ಪ್ರಥಮಪುರುಷ ಬಹುವಚನರೂಪ **ಚಿವಾಯೋಗೇ ಪ್ರಥಮಾ** (ಪಾ ಸೂ. ೮-೧-೫೯) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ ಪ್ರತ್ಯಯಸ್ವರದಿಂದ ಅಂತೋದಾತ್ತಸ್ವರ ಬರುತ್ತದೆ.

ಉಷಸಾ—**ಸುಪಾಂ ಸುಲುಕ್**—ಸೂತ್ರದಿಂದ ವಿಭಕ್ತಿಗೆ ಆಕಾರ

ಧುಃ—ಡುಧಾಞ್ ಧಾರಣಪೋಷಣಯೋಃ ಧಾತು. ಲುಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಆದೇಶ ಲುಙ್‌ನಲ್ಲಿ ಪ್ರಾಪ್ತವಾದ ಚ್ಲಿಗೆ ಆದೇಶವಾಗಿ ಬಂದ ಸಿಚಿಗೆ **ಗಾತಿಸ್ಥಾಘುಪಾಭೂಭ್ಯಃ**—(ಪಾ. ಸೂ ೨-೪-೭೭) ಎಂಬುದರಿಂದ ಲುಕ್. **ಆತಃ** (ಪಾ. ಸೂ ೩-೪-೧೧೦) ಸಿಚ್ ಲುಕ್ಕಾದಾಗ ಆದಂತದ ಪರದಲ್ಲಿರುವ ಝಿಗೆ ಜುಸಾದೇಶ ಎಂದುದರಿಂದ ಇಲ್ಲಿ ಜುಸಾದೇಶ ಬರುತ್ತದೆ. **ಉಸ್ಯಪದಾಂತಾತ್** (ಪಾ. ಸೂ. ೬-೧-೯೬) ಎಂಬುದರಿಂದ ಪರರೂಪ ಏಕಾದೇಶವಾಗಿ ಬರುತ್ತದೆ **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಅತಿಙಂತದ ಪರದಲ್ಲಿ ಬಂದುದರಿಂದ **ತಿಙ್ಙತಿಙಃ** (ಪಾ ಸೂ ೮-೧-೨೮) ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೬ ॥

॥ ಸಂಹಿತಾ ॥

ಯಾನ್ರಾಯೇ ಮರ್ತಾꣳ್ಸುಷೂದೋ ಅಗ್ನೇ ತೇ ಸ್ಯಾಮ
ಮಘವಾನೋ ವಯಂ ಚ ।
ಛಾಯೇವ ವಿಶ್ವಂ ಭುವನಂ ಸಿಸಕ್ಷ್ಯಾಪಪ್ರಿವಾನ್ರೋದಸೀ ಅಂತರಿಕ್ಷಂ ॥ ೮ ॥

॥ ಪದಪಾಠಃ ॥

ಯಾನ್ । ರಾಯೇ । ಮರ್ತಾನ್ । ಸುಸೂದಃ । ಅಗ್ನೇ । ತೇ । ಸ್ಯಾಮ । ಮಘವಾನಃ । ವಯಂ । ಚ ।
ಛಾಯಾಃ ಇವ । ವಿಶ್ವಂ । ಭುವನಂ । ಸಿಸಕ್ಷಿ । ಆಪಪ್ರಿವಾನ್ । ರೋದಸೀ ಇತಿ । ಅಂತರಿಕ್ಷಂ ॥ ೮ ॥

॥ ಸಾಯಣಭಾಷ್ಯಂ ॥

ಯಾನ್ಮರ್ತಾನ್ಮನುಷ್ಯಾನಸ್ಮಾನ್ರಾಯೇ ಧನಾಯ ಸುಷೂದಃ ಅಗ್ನಿಹೋತ್ರಾದಿಕರ್ಮಸು ಪ್ರೇರಯಸಿ ತೇ ತಾದೃಶಾ ವಯಂ ಚ ಮಘವಾನೋ ಧನಿನಃ ಸ್ಯಾಮ । ಭವೇಮ । ರೋದಸೀ ದ್ಯಾವಾಪೃಥಿವ್ಯಾವಂತರಿಕ್ಷಂ ಚಾಪಪ್ರಿವಾನ್ ಸ್ವತೇಜಸಾ ವೃಷ್ಟ್ಯುದಕೇನ ವಾಪೂರಿತವಾಂಸ್ತ್ವಂ ಚ ವಿಶ್ವಂ ಭುವನಂ ಸರ್ವಂ ಜಗತ್ ಸಿಸಕ್ಷಿ । ಸೇವಸೇ । ಅನುಗೃಹ್ಯ ಸರ್ವಂ ರಕ್ಷಸೀತ್ಯರ್ಥಃ । ತತ್ರ ದೃಷ್ಟಾಂತಃ । ಛಾಯೇವ । ಯಥಾ ಛತ್ರಾದೇಶ್ಛಾಯಾತಪಾದಿಜನಿತಂ ಕ್ಲೇಶಂ ನಿವಾರ್ಯ ರಕ್ಷತಿ ತದ್ವತ್ ॥ ರಾಯೇ । ಊಡಿದಮಿತಿ ವಿಭಕ್ತೇರುದಾತ್ತತ್ವಂ । ಸುಷೂದಃ । ಷೂದ ಪ್ರೇರಣೇ । ಲೇಟ್ಯಡಾಗಮಃ । ಬಹುಲಂ ಛಂದಸೀತಿ ಶಪಃ ಶ್ಲುಃ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ಯದ್ವೃತ್ತಾನ್ನಿತ್ಯಮಿತಿ ನಿಘಾತಪ್ರತಿಷೇಧಃ । ಸಿಸಕ್ಷಿ । ಷಚ ಸಮವಾಯೇ । ಬಹುಲಂ ಛಂದಸೀತಿ ಶಪಃ ಶ್ಲುಃ । ಇದಿತ್ಯನುವೃತ್ತೌ ಬಹುಲಂ ಛಂದಸೀತ್ಯಭ್ಯಾಸಸ್ಯೇತ್ವಂ । ಅಪಪ್ರಿವಾನ್ । ಪ್ರಾ ಪೂರಣೇ । ಲಿಟಃ ಕ್ವಸುಃ । ವಸ್ವೇಕಾಜಾದ್ಧಸಾಮಿತೀಡಾಗಮಃ । ಆತೋ ಲೋಪ ಇಟಿ ಚೇತ್ಯಾಕಾರಲೋಪಃ । ದ್ವಿರ್ವಚನೇ ಽಚೀತಿ ಸ್ಥಾನಿವದ್ಭಾವಾತ್ ದ್ವಿರ್ಭಾವಾದಿ ॥

॥ ಪ್ರತಿಪದಾರ್ಥ ॥

ಯರ್ ಮರ್ತಾನ್—ಯಾವ ಮನುಷ್ಯರನ್ನು (ನಮ್ಮನ್ನು) । **ರಾಯೇ**—ಧನಕ್ಕೋಸ್ಕರ । **ಸುಷೂದಃ**—(ಅಗ್ನಿಹೋತ್ರಾದಿ ಕರ್ಮಗಳಲ್ಲಿ) ಪ್ರೇರಿಸುತ್ತೀಯೋ । **ತೇ ವಯಂ ಚ**—ಅಂತಹ ನಾವೂ ಕೂಡ । **ಮಘವಾನಃ**—ಧನವಂತರಾಗಿ । **ಸ್ಯಾಮ**—ಆಗೋಣ । **ರೋದಸೀ**—ಸ್ವರ್ಗ ಮತ್ತು ಭೂಲೋಕಗಳನ್ನೂ । **ಅಂತರಿಕ್ಷಂ ಚ**—ಆಕಾಶವನ್ನೂ । **ಅಪಪ್ರಿವಾ**—ನಿನ್ನ ತೇಜಸ್ಸಿನಿಂದ (ವೃಷ್ಟ್ಯುದಕದಿಂದ) ತುಂಬಿದ (ನೀನು) । **ಛಾಯೇವ**—ನೆರಳನಂತೆ । **ವಿಶ್ವಂ ಭುವನಂ**—ಸಮಸ್ತ ಜಗತ್ತನ್ನೂ । **ಸಿಸಕ್ಷಿ**—ನೆ ವಿಸುತ್ತೀ ।

॥ ಭಾವಾರ್ಥ ॥

ಐಶ್ವರ್ಯಪ್ರಾಪ್ತಿಗಾಗಿ, (ಯಾಗಾದಿಗಳನ್ನು ಮಾಡಿ ಎಂದು) ನಿನ್ನಿಂದ ಪ್ರೇರಿತರಾದ ಮರ್ತ್ಯರಾದ ನಾವು (ನಿನ್ನ ಅನುಗ್ರಹದಿಂದ) ಧನಿಕರಾಗೋಣ ನೀನು ನಿನ್ನ ತೇಜಸ್ಸಿನಿಂದ (ವೃಷ್ಟ್ಯುದಕದಿಂದ), ಭೂಮಿ, ಆಕಾಶ, ಸ್ವರ್ಗಗಳನ್ನು ಆವರಿಸಿಕೊಂಡು, ಸಮಸ್ತ ಜಗತ್ತನ್ನೂ, (ಆಶ್ರಯಕೊಡುವ) ನೆರಳನಂತೆ ರಕ್ಷಿಸುತ್ತೀ.

English Translation.

May we mortals, whom you have directed (to the performance of sacrifices) for the sake of riches, become opulent; filling heaven and earth and the firmanent (with your radiance), you protect the whole world like a (sheltering) shade

॥ ವಿಶೇಷವಿಷಯಗಳು ॥

ವಿಶ್ವಂ ಛಾಯೇವ ಸಿಸಕ್ಷಿ— **ಭುವನಂ ಸರ್ವಂ ಕ್ಲೇಶಂ ನಿವಾರ್ಯ ರಕ್ಷತಿ ಛಾಯಾ ತದ್ವತ್** । ಸಾಯಣರು—ಛತ್ರಿಯನ್ನು ಹಿಡಿದುಕೊಂಡಾಗ ಅದರ ನೆರಳು ಬಿಸಿಲು ಮೊದಲಾದ ಕ್ಲೇಶಗಳಿಂದ ತೊಂದರೆಯು ಉಂಟಾಗದ ಹಾಗೆ ರಕ್ಷಿಸುವಂತೆ ಅಗ್ನಿಯು ಜಗತ್ತೆಲ್ಲವನ್ನೂ ರಕ್ಷಿಸುತ್ತಿರುವನು ಎಂದು ಅರ್ಥವನ್ನು ವಿವರಿಸಿರುವರು ಸ್ವಂದಸ್ವಾಮಿಗಳು—**ಯಥಾ ಛಾಯಾ ನಿತ್ಯಸನ್ನಿಹಿತಾ ಏವಂ ತ್ವಂ ವಿಶ್ವಂ ಭುವನಂ ಭೂತಜಾತಂ ಸಿಸಕ್ಷಿ ದಹನಪಚನಾದಿನಾ ಸೇವಸೇ** । ಪ್ರಾಣಿಗಳ ನೆರಳು ಯಾವಾಗಲೂ (ಸಮೀಪದಲ್ಲಿದ್ದು) ಸೇವೆಮಾಡುವುದಕ್ಕೆ ಸಿದ್ಧವಾಗಿರುವಂತೆ **ಅಗ್ನಿ**ಯು ಪ್ರಪಂಚದ ಎಲ್ಲಾ ಪ್ರಾಣಿಗಳ ಆಹಾರವನ್ನೂ ಪಚನೆಮಾಡುವುದೇ ಮೊದಲಾದ ಕಾರ್ಯಗಳನ್ನು ನೆರವೇರಿಸುವುದರಿಂದ ಎಲ್ಲರನ್ನೂ ಅನುಗ್ರಹಮಾಡಿ ರಕ್ಷಿಸುವನು ಎಂದು ವಿವರಿಸಿರುವರು

ರೋದಸೀ ಆಪಪ್ರಿವಾ—**ಸ್ವಧೇ, ಪುರಂಧೀ** ಎಂಬ ಇಪ್ಪತ್ತುನಾಲ್ಕು ದ್ಯಾವಾಪೃಥಿವೀ ನಾಮಗಳಲ್ಲಿ **ರೋದಸೀ** ಎಂಬ ಪದವು (ನಿ ೩-೩೦) ಉಕ್ತವಾಗಿರುವುದರಿಂದ ದ್ಯಾವಾಪೃಥಿವೀ ಎಂದು ಅರ್ಥವು ಇದೇಅರ್ಥದಲ್ಲಿ **ರೋದಸೀ** ಎಂಬ ಶಬ್ದವು ಅನೇಕಕಡೆಗಳಲ್ಲಿ ಪ್ರಯುಕ್ತವಾಗಿರುತ್ತದೆ. **ವಿತ್ತಂ ಮೇ ಅಸ್ಯ ರೋದಸೀ** (ನಿ ೪-೬) **ಇಮೇ ಚಿದಿಂದ್ರ ರೋದಸೀ** (ನಿ ೬-೧) ಇತ್ಯಾದಿ. ಅಗ್ನಿಯು ಭೂವ್ಯಂತರಕ್ಷಗಳನ್ನು ಪೂರ್ಣವಾಗಿ ತನ್ನ ತೇಜಸ್ಸುಗಳಿಂದಲೂ, ವೃಷ್ಟ್ಯುದಕಗಳಿಂದಲೂ ವ್ಯಾಪಿಸಿರುವನು ಎಂದು ಅರ್ಥವು

॥ ವ್ಯಾಕರಣಪ್ರಕ್ರಿಯಾ ।

ರಾಯೇ—ಶೈ ಶಬ್ದ. ಚತುರ್ಥೀ ಏಕವಚನ ಬಳಿ ಸರವಾದಾಗ ಅಯಾದೇಶ **ಊಡಿದಂ ಪದಾದಿ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಸುಷೂದಃ—ಷೂದ ಪ್ರೇರಣೇ ಧಾತು. ಲೇಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ **ಇತಶ್ಚ ಲೋಪ ಪರಸ್ಮೈಪದೇಷು** ಸೂತ್ರದಿಂದ ಇಕಾರಲೋಪ **ಲೇಟೋಽಡಾಟೌ** ಎಂಬುದರಿಂದ ಅದಕ್ಕೆ ಆಡಾಗಮ **ಬಹುಲಂ ಛಂದಸಿ** ಎಂಬುದರಿಂದ ಶಪ್ಪಿಗೆ ಶ್ಲು ಆದೇಶ **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ. ಹ್ರಸ್ವ ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ ಯಚ್ಛಬ್ದ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಂ** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಸ್ವರಿತನಿಷೇಧ ಬರುತ್ತದೆ **ಆಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತವಾಗುತ್ತದೆ

ಸ್ಯಾಮ—ಜಸ ಭುವಿ ಧಾತು. ವಿಧಿಲಿಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ನಿತ್ಯಂ ಙಿತಃ** ಎಂಬುದರಿಂದ ಸಕಾರಲೋಪ. **ಯಾಸುಟ್ ಪರಸ್ಮೈ**—ಎಂಬುದರಿಂದ ಯಾಸುಟಾಗಮ. ಆದಕ್ಕೆ ಙಿತ್ವ ವಿಧಾನಮಾಡಿರುವುದರಿಂದ **ಶ್ನಸೋರಲ್ಲೋಪಃ** (ಪಾ ಸೂ ೬-೪-೧೧೧) ಸೂತ್ರದಿಂದ ಧಾತುವಿನ ಅಕಾರಕ್ಕೆ **ಲೋಪ ಲಿಙಃ ಸಲೋಪೋನಂತ್ಯಸ್ಯ** (ಪಾ ಸೂ ೭-೨-೭೯) ಎಂಬುದರಿಂದ ಸಕಾರಕ್ಕೆ ಲೋಪ ಅತಿಬಂತದ ಪರದಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ.

ಸಿಸಕ್ಷಿ—ಷಚ ಸಮವಾಯೇ ಧಾತು **ಧಾತ್ವಾದೇ ಷಃಸಃ** ಎಂಬುದರಿಂದ ಆದಿಗೆ ಸತ್ವ. ಲಟ್ ಮಧ್ಯಮ ಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ **ಬಹುಲಂ ಛಂದಸಿ** ಎಂಬುದರಿಂದ ಶಪ್ಪಿಗೆ ಶ್ಲುವಿಕರಣ **ಶ್ಲೌ** ಸೂತ್ರದಿಂದ ಧಾತುವಿಗೆ ದ್ವಿತ್ವ **ಬಹುಲಂ ಛಂದಸಿ** ಎಂಬುದರಿಂದ ಇಲ್ಲಿಯೂ **ಭೃಞಾಮಿತ್** ಸೂತ್ರದಿಂದ ಇತ್ ಎಂದು ಅನುವೃತ್ತವಾಗುವುದರಿಂದ ಅಭ್ಯಾಸಕ್ಕೆ ಇತ್ವ ಬರುತ್ತದೆ **ಚೋಃಕುಃ** ಎಂಬುದರಿಂದ ಧಾತುವಿನ ಚಕಾರಕ್ಕೆ ಕಕಾರಾದೇಶ **ಆದೇಶಪ್ರತ್ಯಯಯೋಃ** ಸೂತ್ರದಿಂದ ಪ್ರತ್ಯಯ ಸಕಾರಕ್ಕೆ ಷತ್ವ. ಸಿಸಕ್ಷಿ ಎಂದು ರೂಪವಾಗುತ್ತದೆ. ಅತಿಬಂತದ ಪರದಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ.

ಆ ಸಪ್ರಿವಾನ್—ಪ್ರಾ ಪೂರಣೇ ಧಾತು ಇದಕ್ಕೆ ಲಿಟ್ ಬಂದಾಗ ಆದಕ್ಕೆ **ಕ್ವಸುಶ್ಚ** (ಪಾ ಸೂ ೩-೨-೧೦೭) ಎಂಬುದರಿಂದ ಕ್ವಸು ಪ್ರತ್ಯಯ ಧಾತುವು ಏಕಾಚಾದುದರಿಂದ **ವಸ್ವೇಕಾಚಾದ್ಭಸಾಂ** (ಪಾ ಸೂ. ೭-೨-೬೭) ಎಂಬುದರಿಂದ ವಸುವಿಗೆ ಇಡಾಗಮ ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ ಪಪ್ರಾ+ಇವಸ್ ಎಂದಿರುವಾಗ **ಆತೋಲೋಪ ಇಟಚ** (ಪಾ ಸೂ ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ **ದ್ವಿರ್ವಚನೇಚಿ** (ಪಾ. ಸೂ ೧-೧-೫೯) ಎಂಬುದರಿಂದ ಮೊದಲು ಆಲೋಪವಾದರೂ ಸ್ಥಾನಿವದ್ಭಾವ ಬರುವುದರಿಂದ ದ್ವಿತ್ವಾದಿಗಳು ಹಿಂದಿನಂತೆಯೇ ಬರುತ್ತವೆ ಸ್ಯತ್ಯಯ ಸ್ವರದಿಂದ ವಕಾರೋತ್ತರಾಕಾರ ಉದಾತ್ತವಾಗುತ್ತದೆ. ಪ್ರಥಮಾ ಸು ಪರವಾದಾಗ **ಅತ್ವಸಂತಸ್ಯ**—ಎಂಬುದರಿಂದ ಉಪಧಾದೀರ್ಘ. ಉಗಿತ್ವಾದುದರಿಂದ ನುಮಾಗಮ **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ ಸಂಯೋಗಾಂತಲೋಪದಿಂದ ಸಕಾರ ಲೋಪ. ಆದು ಅಸಿದ್ಧವಾಗುವುದರಿಂದ **ನಲೋಪಃ**—ಸೂತ್ರದಿಂದ ನಕಾರಕ್ಕೆ ಲೋಪ ಬರುವುದಿಲ್ಲ. ॥ ೮ ॥

॥ ಸಂಹಿತಾಪಾಠಃ ॥

ಅರ್ವದ್ಭಿರಗ್ನೇ ಅರ್ವತೋ ನೃಭಿರ್ನೃಮ್ಣೈರ್ವೀರಾನ್ಗಮ್ಯಾ-
ಯಾಮಾ ತ್ವೋತಾಃ ।
ಈಶಾನಾಸಃ ಪಿತೃವಿತ್ತಸ್ಯ ರಾಯೋ ವಿ ಸೂರಯಃ ಶತಹಿಮಾ
ನೋ ಅಶ್ಯುಃ ॥ ೯ ॥

॥ पदपाठः ॥

अर्वत्ऽभिः । अग्ने । अर्वतः । नृऽभिः । नृऽन् । वीरैः । वीरान् ।
वनुयामु । त्वाऽऊतायः ।
ईशानासः । पितृऽवित्तस्य । रायः । वि । सूरयः । शतऽहिमाः । नः ।
अश्युः ॥ ९ ॥

। सायणभाष्यं ।

हे अग्ने त्वोतास्त्वया रक्षिताः संतो वयमर्वद्भिरस्मदीयैरश्वैरर्वतः शत्रुसंबन्धिनोऽश्वान्नृभिरस्मदीयैर्भर्तृभिर्नॄन् शत्रोरर्भटान् । वीर्याज्जायंत इति वीराः पुत्राः । तैर्वीरान् शत्रुपुत्रांश्च वनुयाम । हनन्याम । वनुष्यतिर्हन्तिकर्मानवगतसंस्कारो भवति । नि ४-७ । इति यास्कः । पितृवित्तस्य पित्रादिपरंपरयालब्धस्य रायो धनस्येशानासः स्वामिनः सूरयो विद्वांसो नोऽस्माकं पुत्राः शतहिमाः शतं संवत्सरान् जीवंतः संतो व्यश्युः । विशेषेण भुंजताम् । अस्मदीयानां पुत्राणामारोग्यं दीर्घमायुश्च भवत्वित्यर्थः ॥ त्वोतास्त्वयोतास्प्रत्ययोत्तरपदयोश्चेति मपर्यंतस्य त्वादेशः । व्यत्ययेनात्त्वं । तृतीयार्थे कर्मणीति पूर्वपदप्रकृतिस्वरत्वं । शतहिमाः । अत्र हिमशब्देन तद्वान्लक्ष्यतेमंतोलक्ष्यते । ब्राह्मणं च भवति । शतं हिमा इत्याह शतं त्वा हेमंतानि धिषीयेति वावैतदाहेति । शतं हिमाः शतं हेमंतास्तर्वो येषां ते शतसंवत्सरजीविन इत्यर्थः । अश्युः । अश भोजनेऽ । बहुलं छंदसीति विकरणस्य लुक् ॥

॥ प्रतिपदार्थ ॥

अग्ने—ಎಲೈ ಅಗ್ನಿಯೇ । **त्वोतासः**—ನಿನ್ನಿಂದ ರಕ್ಷಿತರಾದ (ನಾವು) । **अर्वद्भिः**- (ನಮ್ಮ) ಅಶ್ವಗಳಿಂದ । **अर्वतः**—(ಶತ್ರು ಸಂಬಂಧವಾದ) ಅಶ್ವಗಳನ್ನೂ । **नृभिः**—(ನಮ್ಮ) ಭಟರಿಂದ । **नॄन्**—(ಶತ್ರುಗಳ) ಭಟರನ್ನೂ । **वीरैः**—(ನಮ್ಮ) ವೀರರಿಂದ (ಪುತ್ರರಿಂದ) । **वीरान्**—(ಶತ್ರುಪಕ್ಷದ) ವೀರರನ್ನೂ (ಪುತ್ರರನ್ನೂ) । **वनुयाम**—ವಧಮಾಡೋಣ । **पितृवित्तस्य**—ಪಿತೃಪರಂಪರೆಯಾಗಿ ಬಂದ । **रायः**—ಧನಕ್ಕೆ । **ईशानासः**—ಸ್ವಾಮಿಗಳಾದ । **सूरयः**—ವಿದ್ವಾಂಸರಾದ । **नः**—ನಮ್ಮ ಪುತ್ರರು । **शतहिमाः**—ನೂರುವರ್ಷವುಳ್ಳವರಾಗಿ (ನೂರು ವರ್ಷಕಾಲ ಜೀವಿಸುವವರಾಗಿ) । **वि अश्युः**—ಚೆನ್ನಾಗಿ ಭುಜಿಸಲಿ (ಬಾಳಲಿ).

॥ ಭಾವಾರ್ಥ ॥

ಅಗ್ನೀ, ನಾವು ನಿನ್ನಿಂದ ರಕ್ಷಿತರಾಗಿ, ಶತ್ರುಗಳ ಅಶ್ವಗಳನ್ನು ನಮ್ಮ ಅಶ್ವಗಳಿಂದ, ಅವರ ಭಟರನ್ನು ನಮ್ಮ ಭಟರ ಮೂಲಕ, ಅವರ ಪುತ್ರರನ್ನು ನಮ್ಮ ಪುತ್ರರಮೂಲಕ, ನಾಶಮಾಡೋಣ. ಪಿತ್ರಾರ್ಜಿತವಾದ ಐಶ್ವರ್ಯಯುಕ್ತರಾದ ಮತ್ತು ವಿದ್ವಾಂಸರಾದ ನಮ್ಮ ಪುತ್ರರು ನೂರು ವರ್ಷಗಳು ಬದುಕಲಿ

English Translation

Defended, Agni, by you, may we destroy the horses (of our enemies) by (our) horses, their men by our men, their sons by (our) sons, and may our sons, learned, and inheritors of ancestral wealth, live for a hundred winters

॥ ವಿಶೇಷವಿಷಯಗಳು ॥

ಅರ್ವದ್ಭಿಃ ಅರ್ವತಃ—**ಅರ್ವ ಶಬ್ದವು**— **ಅತ್ಯಃ ಹಯಃ,** ಎಂಬ ಇಪ್ಪತ್ತಾರು **ಅಶ್ವ**ನಾಮಗಳಲ್ಲಿ (ನಿ ೨-೨೬) ಉಕ್ತವಾಗಿರುವುದರಿಂದ ಕುದುರೆಗಳೆಂದು ಅರ್ಥವು

ವೀರೈಃ ವೀರಾ—**ವೀರ್ಯಾತ್ ಜಾಯಂತ ಇತಿ ವೀರಾಃ ಪುತ್ರಾಃ** (ಸಾ. ಭಾ.) ವೀರ್ಯದಿಂದ ಉತ್ಪನ್ನರಾಗುವಕಾರಣ ಪುತ್ರರಿಗೆ ವೀರರೆಂದು ಹೆಸರು ಉಂಟಾಗಿರುವುದು. **ವೀರೋ ವೀರಯತ್ಯಮಿತ್ರಾ ನೇತ್ತೇವಾ ಸ್ಯಾದ್ಗತಿಕರ್ಮಣೋ ವೀರಯತೇವಾ** (ನಿ. ೧-೭) ವೀರಶಬ್ದವು ಶತ್ರುಗಳನ್ನು ಅನೇಕ ವಿಧದಿಂದ ನಾಶಮಾಡುವನು, ಎಂಬ ಅರ್ಥವನ್ನು ಬೋಧಿಸುವುದು, ಗಮನವೆಂಬ ಅರ್ಥವುಳ್ಳ ಧಾತುವಿನಿಂದಲಾಗಲಿ ವೀರ-ಶಬ್ದವರೂಸವು ಸಿದ್ಧವಾಗುವುದು **ಬೃಹದ್ವದೇಮ ವಿದಥೇ ಸುವೀರಾಃ** (ಋ ಸಂ ೨-೬-೬-೬) (ನಿ ೧-೭) ಇಲ್ಲಿ ಸುವೀರಾಃ ಎಂಬ ಪದಕ್ಕೆ ಪುತ್ರರು, ಶತ್ರುಗಳನ್ನು ನಾಶಮಾಡುವ ಶೂರರು ಎಂದು ಎರಡು ವಿಧವಾದ ಅರ್ಥ ಗಳನ್ನೂ ಮಾಡಿರುತ್ತಾರೆ

ರಾಯಃ—ಮಘಂ, ರೇಕ್ಣಃ, ಎಂಬ ಇಪ್ಪತ್ತೆಂಟು ಧನನಾಮಗಳಲ್ಲಿ (ನಿ ೩-೯) **ಈ** ಶಬ್ದವು ಉಕ್ತವಾಗಿರುವುದ. **ಪಿತ್ರ್ಯಸ್ಯೇವ ರಾಯಃ** (ಋ ಸಂ ೬-೪-೧೨-೨) (ನಿ-೪-೨) ಇಲ್ಲಿ ರಾಯಃ ಎಂಬ ಪದಕ್ಕೆ **ಧನ**ವೆಂದು ಅರ್ಥವು

ಶತಹಿಮಾಃ—ಶತಂ ಸಂವತ್ಸರಾ ನೂರು ವರ್ಷಗಳು ಎಂದು ಅರ್ಥವು ಇಲ್ಲಿ ಹಿಮ ಎಂಬ ಶಬ್ದದಿಂದ ಹಿಮವು ಬಹಳವಾಗಿರುವ ಹೇಮಂತಋತುವೆಂದು ಅರ್ಥವು **ಶತಂ ಹಿಮಾ ಇತ್ಯಾಹ ಶತಂ ತ್ವಾ ಹೇಮಂತಾ ಇಂಧಿಷೀಯೇತಿ ವಾವೈತದಾಹ** (ತೈ ಸಂ. ೧-೫-೮-೫) **ಇತಿ** । ಎಂಬದಾಗಿ ತೈತ್ತಿರೀಯ ಸಂಹಿತೆಯ ವಾಕ್ಯವು ಈ ಅಭಿಪ್ರಾಯವನ್ನು ಬೋಧಿಸುವುದು. **ಶತಂ ಹಿಮಾಃ—ಶತಂ ಹೇಮಂತರ್ತವೋ ಯೇಷಾಂ ತೇ** ನೂರು ಆವೃತ್ತಿಯಾದ ಹೇಮಂತ ಋತುಗಳ ಪೂರ್ತಿಯಾಗುವವರಿಗೂ ಇರುವವರು ಎಂದು ಅರ್ಥವು.

ಅರ್ವದ್ಭಿಃ ಅರ್ವತಃ, ವೀರೈಃ ವೀರಾ, ನೃಭಿಃ ನ್ಯ ವನುಯಾಮ—ಎಲ್ಲೆ ಅಗ್ನಿಯೇ, ನಾವು ನಿನ್ನಿಂದ ರಕ್ಷಿತರಾಗಿ ಶತ್ರುಗಳನ್ನು ಅನೇಕ ವಿಧವಾಗಿ ನಿಗ್ರಹಮಾಡಿ ಶತ್ರುಗಳನ್ನು ಕೊಲ್ಲೋಣ ಎಂದು ಪ್ರಾರ್ಥನೆಯು ಇಲ್ಲಿ ಉಕ್ತವಾಗಿರುತ್ತದೆ. ವನುಧಾತುವು **ವನುಷ್ಯತಿರ್ಹಂತಿಕರ್ಮಾ ನವಗತಸಂಸ್ಕಾರೋ ಭವತಿ** (ನಿ. ೫-೩) **ಹನನ** ಎಂಬ ಕರ್ಮಬೋಧಕವಾಗಿ ಇರುವುದು ಎಂದು ಯಾಸ್ಕರು ಅರ್ಥಮಾಡಿರುವರು

ನಃ ಶತಹಿಮಾಃ ವ್ಯಶ್ಯಃ—**ಅಸ್ಮಾಕಂ ಪುತ್ರಾಃ ಶತಸಂವತ್ಸರಾ ಜೀವಂತಃ ವಿಶೇಷೇಣ ಭುಂಜತಾಂ** । ನಮ್ಮ ಮಕ್ಕಳು ನೂರು ವರ್ಷಗಳವರೆಗೂ ಜೀವಿಸುವವರಾಗಿ ಅತಿಶಯವಾದ ಐಶ್ವರ್ಯವನ್ನು ಅನುಭವಿಸಲಿ, ಎಂದು ಅಗ್ನಿಯನ್ನು ಕುರಿತು ಪ್ರಾರ್ಥನೆಯು ಇಲ್ಲಿ ಉಕ್ತವಾಗಿರತ್ತದ

॥ ವ್ಯಾಕರಣಪ್ರಕ್ರಿಯಾ ॥

ಅರ್ವದ್ಭಿಃ- ಋ ಗತೌ ಧಾತು. ಇದಕ್ಕೆ **ಅನ್ಯೇಭ್ಯೋಽಪಿದೃಶ್ಯತೇ** (ವಾ ಸೂ ೩ ೭-೭೫) ಎಂಬುದರಿಂದ ವಸಿವ್ ಪ್ರತ್ಯಯ ತಸ್ಮಿನ್ನಿತ್ತ್ವಾಗಿ ಧಾತುವಿಗೆ ಗುಣ ರಪರತ್ವ ಅರ್ವನ್ ಶಬ್ದವಾಗುತ್ತದೆ ಇದಕ್ಕೆ ಭಿಸ್ ಪರವಾದಾಗ **ಅರ್ವಣಸ್ತ್ರಸಾವನಡಾಹಃ** ಎಂಬುದರಿಂದ ತ್ರ ಅಂತಾದೇಶವಾಗಿ ಬರುತ್ತದೆ

ವನುಯಾಮ—ವನು ಚ ನೋಚ್ಯತೇ ಎಂದು ಧಾತುಪಾರದಲ್ಲಿ ಪರಿತವಾಗಿದೆ ಇದಕ್ಕೆ **ಅನೇಕಾರ್ಥ** ವಿರುವುದರಿಂದ ಇದೇ ಅರ್ಥವೆಂದು ನಿರ್ಧರಿಸಲಾಗುವುದಿಲ್ಲವೆಂದು ತಾತ್ಪರ್ಯ ನಿರುಕ್ತದಲ್ಲಿ **ವಿವೃತವಾದಂತೆ** ಇಲ್ಲಿ ಹಿಂಸಾರ್ಥದಲ್ಲಿ ಪ್ರಯುಕ್ತವಾಗಿದೆ ವಿದಿಲಿಙ್ ಉತ್ತಮಪುರುಷ ಬಹುವಚನರೂಪ ಆತಿಜಂತದ ಸರದಲ್ಲಿ ಬಂದುದರಿಂದ ಸ್ವಘಾತಸ್ವರ ಬರುತ್ತದ

ತ್ವೋತಾಃ -ತ್ರಯಾಣಾಮುತಾಃ ತ್ವೋತಾಃ ಯುಷ್ಮಚ್ಛಬ್ದವು ಏಕತ್ವವಿಶಿಷ್ಟಾರ್ಥಪ್ರತಿಪಾದಕವಾಗಿದ್ದು ಇದಕ್ಕೆ ಉತ್ತರವದ ಪರದಲ್ಲಿರುವುದರಿಂದ **ಪ್ರತ್ಯಯೋತ್ತರಪದಯೋಶ್ಚ** (ಪಾ ಸೂ ೭-೩-೯೮) ಎಂಬುದರಿಂದ ಮಪರ್ಯಂತಕ್ಕೆ ತ್ವಾದೇಶ **ಶೇಷೇ ಲೋಪಃ** ಸೂತ್ರದಿಂದ ಆದಿಗೆ ಲೋಪ. ವ್ಯತ್ಯಯದಿಂದ ಆತ್ಮ **ಬರುತ್ತದೆ ತೃತೀಯಾಕರ್ಮಣಿ** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಈಶಾನಾಸಃ – ಈಶಾನ ಶಬ್ದಕ್ಕೆ ಜಸ್ ಪರವಾದಾಗ **ಆಜ್ಜಸೇರಸುಕ್** ಎಂಬುದರಿಂದ ಜಸ್ಸಿಗೆ ಅಸುಗಾಗಮ.

ಪಿತೃವಿತ್ತಸ್ಯ—ಪಿತ್ರಾ ವಿತ್ತಃ ತಸ್ಯ ಇದರ ಪ್ರಕ್ರಿಯೆಯು ೭೨ನೇ ಸೂಕ್ತದ ಒಂದನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದ

ರಾಯಃ—ರೈ ಶಬ್ದ ಷಷ್ಠೀ ಏಕವಚನಾಂತರೂಪ **ಊಡಿದಂಪದಾದಿ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಶತಹಿಮಾಃ—ಇಲ್ಲಿ ಹಿಮ ಶಬ್ದದಿಂದ ಹಿಮವುಳ್ಳ ಹೇಮಂತಋತುವು ಲಕ್ಷಣಾದಿಂದ ಬೋಧಿತವಾಗುತ್ತದೆ. ಬ್ರಾಹ್ಮಣದಲ್ಲಿಯೂ ಇದು ಹೀಗೇ ಪ್ರಯುಕ್ತವಾಗಿದೆ. **ಶತಂ ಹಿಮಾ ಇತ್ಯಾಹ ಶತಂ ತ್ವಾ ಹೇಮಂತಾನಿಂದಿಷೀಯೇತಿ ವಾನ್ಯೈತದಾಹ** (ತೈ ಸಂ. ೧-೫-೮-೫) ಇತಿ ಶತಂ ಹಿಮಾಃ ಶತಂ ಹೇಮಂತರ್ತವೋ ಯೇಷಾಂ ತೇ

ಶತಹಿಮಾಃ ಶತಸಂವತ್ಸರಜೀವಿನ ಇತ್ಯರ್ಥಃ (ನೂರುವರ್ಷ ಬದುಕುವವರು) **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಅಕ್ಯುಃ- ಅಶ ಭೋಜನೇ ಧಾತು. ವಿಧಿಲಿಙ್ ಪ್ರಥಮಪುರುಷ ಬಹುವಚನದಲ್ಲಿ **ಯೇರ್ಜುಸ್** ಎಂಬುದರಿಂದ ಜುಸಾದೇಶ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ (ಶ್ನಾ) ಲುಕ್ ಲಿಬಿಗೆ ಯಾಸುಟ್ಆಗಮ ಆತಿಙಂತದ ಸರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೯ ॥

ಸಂಹಿತಾಪಾಠಃ

ಏತಾ ತೇ ಅಗ್ನ ಉಚಥಾನಿ ವೇಧೋ ಜುಷ್ಟಾನಿ ಸಂತು ಮನಸೇ ಹೃದೇ ಚ ।
ಶಕೇಮ ರಾಯಃ ಸುಧುರೋ ಯಮಂ ತೇಽಧಿ ಶ್ರವೋ ದೇವಭಕ್ತಂ ದಧಾನಾಃ ॥ ೧೦ ॥

॥ ಪದಪಾಠಃ ॥

ಏತಾ । ತೇ । ಅಗ್ನೇ । ಉಚಥಾನಿ । ವೇಧಃ । ಜುಷ್ಟಾನಿ । ಸಂತು । ಮನಸೇ । ಹೃದೇ । ಚ ।
ಶಕೇಮ । ರಾಯಃ । ಸುಽಧುರಃ । ಯಮಂ । ತೇ । ಅಧಿ । ಶ್ರವಃ । ದೇವಽ-ಭಕ್ತಂ । ದಧಾನಾಃ ॥ ೧೦ ॥

। ಸಾಯಣಭಾಷ್ಯಂ ।

ಹೇ ವೇಧಃ । ಮೇಧಾವಿನಾಮೈತತ್ । ಮೇಧಾವಿನ್ನಗ್ನೇ ಏತೋಽಚಥಾನ್ಯೇತಾನೀದಾನೀಮ-ಸ್ಮಾಭಿಃ ಪ್ರಯುಕ್ತಾನಿ ಸ್ತೋತ್ರಾಣಿ ತೇ ತವ ಮನಸೇ ಮನೋವೃತ್ತಯೇ ಹೃದೇ ತದ್ವೃತ್ತಿಮತೇಽಂತಃ-ಕರಣಾಯ ಚ ಜುಷ್ಟಾನಿ ಸಂತು । ಪ್ರಿಯಾಣಿ ಭವಂತು । ತೇ ತವ ಸಂಬಂಧಿನಃ ಸುಧುರಃ ಸುಷ್ಠು ನಿ-ರ್ವಾಹಕಸ್ಯ । ಯದ್ವಾ । ಶೋಭನಂ ಧೂರ್ವತಿ ದಾರಿದ್ರ್ಯಂ ಹಿನಸ್ತೀತಿ ಸುಧೂಃ । ತಾದೃಶಸ್ಯ ರಾಯೋ ಧನಸ್ಯ ಯಮಂ ನಿಯಮನಂ ಕರ್ತುಂ ಶಕೇಮ । ಶಕ್ತಾ ಭವಾಮಸ್ಮ । ಕಿಂ ಕುರ್ವಂತಃ । ದೇವಭಕ್ತಂ ದೇವೈಃ ಸಂಭಜನೀಯಂ ಶ್ರವೋ ಹವಿರ್ಲಕ್ಷಣಮನ್ನಮಧಿ ದಧಾನಾಃ । ಆಗ್ನೇರುಪರಿ ಧಾರಯಂತಃ । ಆಗ್ನೌ ಹವಿರ್ಭಿರ್ಹೋಮಂ ಕುರ್ವಂತ ಇತ್ಯರ್ಥಃ ॥ ಉಚಥಾನಿ । ವಚ ಪರಿಭಾಷಣೇ । ರುವಿದಿಭ್ಯಾಂ ಕಿತ್ । ಉ. ೩-೧೧೬ । ಇತಿ ವಿಧೀಯಮಾನೋಽಥಪ್ರತ್ಯಯಃ ಕಿತ್ತ್ವಂ ಚ ಬಹುಲವಚನಾದಸ್ಮಾದಪಿ ಭವತಿ । ವಚ್ಯಾದಿನಾ ಸಂಪ್ರಸಾರಣಂ । ಜುಷ್ಟಾನಿ । ಜುಷ್ಟಾರ್ಪಿತೇ ಚ ಛಂದಸಿ ನಿತ್ಯಂ ಮಂತ್ರೇ । ಪಾ. ೬-೧ ೨೦೯, ೨೧೦ । ಇತ್ಯಾದ್ಯುದಾತ್ತತ್ವಂ । ಹೃದೇ । ಪದ್ಸನ್ನಿತ್ಯಾದಿನಾ ಹೃದಯಶಬ್ದಸ್ಯ ಹೃದಾದೇಶಃ । ಶಕೇಮ । ಶಕ್ಲೃ ಶಕ್ತೌ । ಲಿಜ್ಯಾಶಿಷ್ಯಜ್ । ಸುಧುರಃ । ಧುರ್ವೀ ಹಿಂಸಾರ್ಥೇಽ । ಕ್ವಿಪ್ಸ್ಥೇತಿ ಕ್ವಿಪ್ । ರಾಲ್ಲೋಪ ಇತಿ ವಕಾರಲೋಪಃ । ನ ಪೂಜನಾದಿತಿ ಸಮಾಸಾಂತಪ್ರತಿಷೇಧಃ । ದೇವೈರ್ಭಕ್ತಂ ದೇವಭಕ್ತಂ । ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವಂ ॥

। ಪ್ರತಿಪದಾರ್ಥ ।

ವೇಧಃ ಅಗ್ನೇ –ಮೇಧಾವಿಯಾದ ಎಲೈ ಅಗ್ನಿಯೇ । **ಏತಾ ಉಚಥಾನಿ**—ಈ (ಸಮ್ಮುಂದ ಈಗ ಪ್ರಯುಕ್ತವಾಗುವ) ಸ್ತುತಿವಾಕ್ಯಗಳು । **ತೇ**—ನಿನ್ನ । **ಮನಸೇ** –ಮನೋವೃತ್ತಿಗೂ । **ಹೃದೇ ಚ**—ಅಂತಃಕರಣಕ್ಕೂ । **ಜುಷ್ಟಾನಿ ಸಂತು**—ಪ್ರಿಯವಾಗಲಿ । **ತೇ**—ನಿನ್ನ (ಸಂಬಂಧವಾದ) । **ಸುಧುರಃ** –ನಿರ್ವಾಹಕವಾದ (ದಾರಿದ್ರ್ಯ ಪರಿಹಾರಕವಾದ) । **ರಾಯಃ**—ಧನದ । **ಯಮಂ**—ನಿಯಮನವನ್ನು (ಮಾಡಲು) । **ದೇವಭಕ್ತಂ**—ದೇವತೆಗಳಿಂದ ಭೊಜ್ಯವಾದ । **ಶ್ರವಃ**—ಹವಿರ್ಲಕ್ಷಣವಾದ ಅನ್ನವನ್ನು । **ಅಧಿ ದಧಾನಾಃ**—(ಅಗ್ನಿಯಲ್ಲಿ) ಇಡುವವರಾಗಿ (ಹಾಕುವವರಾಗಿ) । **ಶಕೇಮ** -ಶಕ್ತರಾಗೋಣ

। ಭಾವಾರ್ಥ ।

ಮೇಧಾವಿಯಾದ ಎಲೈ ಅಗ್ನಿಯೇ, ನಾವು (ಈಗ ಮಾಡುತ್ತಿರುವ) ಸ್ತೋತ್ರವು ನಿನ್ನ ಮನಸ್ಸಿಗೂ, ಹೃದಯಕ್ಕೂ ಒಡಿಸುವಂತಾಗಲಿ ದಾರಿದ್ರ್ಯಹಾರಕವಾದ, ನಿರ್ವಾಹಕನಾದ, ದೇವತೆಗಳ ಭಾಗವಾದ ಹವಿಸ್ಸನ್ನು ನಿನ್ನಲ್ಲಿ ಅರ್ಪಿಸಿ, ನಿನ್ನಿಂದ (ದತ್ತವಾಗುವ) ಐಶ್ವರ್ಯವನ್ನು ಅನುಭವಿಸಲು ಯೋಗ್ಯರಾಗೋಣ

English Translation.

May these our praises, sapient Agni, be grateful to you, both in mind and heart, may we be competent, to detain your well-supporting wealth, offering upon you their share of the (sacrificial) food to the Gods

॥ ವಿಶೇಷವಿಷಯಗಳು ॥

ವೇಧಃ—ವಿಪ್ರಃ ವಿಗ್ರಃ ಎಂಬ ಇಪ್ಪತ್ತು ಮೇಧಾವಿನಾಮಗಳಲ್ಲಿ ವೇಧಾಃ ಎಂಬ ಶಬ್ದವು (ನಿ ೩-೧೯) ಉಕ್ತವಾಗಿರುವುದರಿಂದ ಮೇಧಾವಿ ಎಂದು ಅರ್ಥವು ಮತ್ತು ಯಾಸ್ಕರು **ಮೇಧಾವಿ** ಶಬ್ದಕ್ಕೆ **ಮೇಧಾವೀ ಕಸ್ಮಾತ್ ಮೇಧಯಾ ತದ್ವಾ ಭವತಿ ಮೇಧಾ ಮತೌ ಧೀಯತೇ** ಮನುಷ್ಯನ ಶಕ್ತಿಯು ಅವನ ಬುದ್ಧಿಯಲ್ಲಿ ಪ್ರಕಟವಾಗುತ್ತದೆಯಾದಕಾರಣ **ಮೇಧಾ** ಎಂದರೆ ಬುದ್ಧಿಯು ಎಂದೂ (ಬುದ್ಧಿಯುಳ್ಳವನು) ಮೇಧೆಯುಳ್ಳವನು **ಮೇಧಾವಿಯು** ಎಂದೂ ವ್ಯಾಖ್ಯಾನವನ್ನು ಮಾಡಿರುವರು. ವೇಧಶ್ಶಬ್ದವೂ ಮೇಧಾವಿ ಶಬ್ದದ ಸಮಾನಾರ್ಥಕವಾದ ಪರ್ಯಾಯ ಪದವಾಗಿರುವುದರಿಂದ ಮೇಧಾವಿಯೆಂದು ಅರ್ಥವು ಎಲೈ ಅಗ್ನಿಯೇ, ನಾವು ನಿನ್ನನ್ನು ಉದ್ದೇಶಮಾಡಿ ಹೇಳಿರುವ ಸ್ತೋತ್ರಗಳು ಮೇಧಾವಿಯಾದ ನಿನ್ನ ಮನಸ್ಸಿಗೂ ಅನ್ತಃಕರಣಕ್ಕೂ ಸಂತೋಷವನ್ನು ಉಂಟುಮಾಡಲಿ ಎಂದು ಪ್ರಾರ್ಥನೆಯು ಉಕ್ತವಾಗಿರುವುದು.

ಸುಧುರಃ—ಸುಷ್ಠು ನಿರ್ವಾಹಕಸ್ಯ ಯದ್ವಾ ಶೋಭನಂ ಧೂರ್ವತಿ ದಾರಿದ್ರ್ಯಂ ಹಿನಸ್ತೀತಿ ಸುಧೂಃ | ಈ ಶಬ್ದವು ಧನವಾಚಕವಾಗಿರುವ ರಾಯಃ ಎಂಬ ಪದಕ್ಕೆ ವಿಶೇಷಣವಾಗಿರುವುದು. ಧನವು ಯಾವಾಗಲೂ ಕಾರ್ಯಗಳನ್ನು ಸರಿಯಾಗಿ ನೆರವೇರಿಸುವುದು. ಅಥವಾ ಬಡತನವನ್ನು ಪೂರ್ಣವಾಗಿ ನಾಶಗೊಳಿಸುವುದು. ಆದ್ದರಿಂದ ಸುಧೂಃ ಎಂಬ ಶಬ್ದದಿಂದ ಶೋಭ್ಯವಾಗಿರುತ್ತದೆ. ಎಂದು ಸಾಯಣರು ಅರ್ಥಮಾಡಿರುವರು

ಸ್ಕಂದಸ್ವಾಮಿಗಳು **ರಾಯಃ ಸುಧುರೋ ಯಮಂ ತೇ ಶಕೇಮ | ಶೋಭನಾ ಧೂರ್ಯಸ್ಯ ಸ ಸುಧುರಃ ರಥಃ | ತಸ್ಯ ಯಮಂ ಬಂಧನಂ | ಸ್ಪನೇದ್ಯಾಂ ಧಾರಣಮಿತ್ಯರ್ಥಃ** ಎಲೈ ಮೇಧಾವಿಯಾದ ಅಗ್ನಿಯೇ, ನಾವೂ ದೇವತೆಗಳಂದ ಸೇವಿತವಾದ ಅಥವಾ ದೇವತೆಗಳಿಗೆ ಆಹಾರವಾದ ಹವಿಸ್ಸುಗಳನ್ನು ನಿನಗೆ ಕೊಡುವವರಾಗಿ (ಮಂಗಳಕರವಾದ) ದೃಢವಾದ ಅಚ್ಚುಉಳ್ಳದ್ದಾದ ನಿನ್ನ ರಥವು ಯಜ್ಞವೇದಿಯಲ್ಲಿ ಸ್ಥಿರವಾಗಿ ಇರುವಂತೆ ಅದನ್ನು ಬಂಧನಮಾಡುವುದಕ್ಕೆ ನಿನ್ನ ಅನುಗ್ರಹದಿಂದ ಶಕ್ತರಾಗೋಣ ಮತ್ತೆ ಧನವನ್ನು ಹೊಂದುವುದಕ್ಕಾಗಿ ನಿನಗೆ ಹವಿರ್ಭಾಗಗಳನ್ನು ಒಪ್ಪಿಸಿ ನಿನ್ನನ್ನು ಸಂತೋಷಪಡಿಸೋಣ ಎಂದು ಅಪೇಕ್ಷಿಸಡುತ್ತೇನೆ ಎಂದು ಅರ್ಥವನ್ನು ವಿವರಿಸಿರುವರು.

॥ ವ್ಯಾಕರಣಪ್ರಕ್ರಿಯಾ ॥

ಏತಾ— ಏತಚ್ಶಬ್ದ. ನಪುಂಸಕದಲ್ಲಿ ಶಿ ಆದೇಶ ಬಂದು ರೂಪ ನಿಷ್ಪತ್ತಿಯಾದಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ

ಉಚಥಾನಿ—ವಚ ಪರಿಭಾಷಣೇ ಧಾತು ಆದಾದಿ. ಉಣಾದಿಯಲ್ಲಿ ಬಹುಲವಚನವಿರುವುದರಿಂದ **ರುವಿದಿಭ್ಯಾಂ ಕಿತ್** (ಉ ಸೂ ೩-೩೬೫) ಎಂಬುದರಿಂದ ವಿಧಿಸಲ್ಪಡುವ ಆಧ ಪ್ರತ್ಯಯವೂ ಕಿತ್ವವೂ ಈ ಧಾತುವಿಗೂ ಬರುತ್ತವೆ ವಚ್+ಆಧ ಎಂದಿರುವಾಗ ಕಿತ್ವಾತಿದೇಶವಿರುವುದರಿಂದ **ವಚಿಸ್ವಪಿಯಜಾದೀನಾಂ ಕ್ಙಿತಿ** (ಪಾ ಸೂ ೬-೧-೧೫) ಎಂಬುದರಿಂದ ಧಾತುವಿಗೆ (ವಕಾರಕ್ಕೆ) ಸಂಪ್ರಸಾರಣ. **ಸಂಪ್ರಸಾರಣಾಚ್ಚ** ಸೂತ್ರದಿಂದ ಪೂರ್ವರೂಪ ಉಚಧ ಎಂದು ರೂಪವಾಗುತ್ತದೆ ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ ನಸ್ಸಂಸಕದಲ್ಲಿ ಪ್ರಥಮಾ ಬಹುವಚನರೂಪ

ಜುಷ್ಟಾನಿ—ಜುಷೀ ಪ್ರೀತಿಸೇವನಯೋಃ ಧಾತು ಇದಕ್ಕೆ ಕರ್ಮಣಿಯಲ್ಲಿ **ನಿಷ್ಠಾ** ಎಂಬುದರಿಂದ ಕ್ತ ಪ್ರತ್ಯಯ ಕಿತ್ತಾಗುವುದರಿಂದ ಲಘೂಪಧ ಗುಣ ಬರುವುದಿಲ್ಲ ಷಕಾರಯೋಗವಿರುವುದರಿಂದ ಪ್ರತ್ಯಯ ತಕಾರಕ್ಕೆ ಷ್ಟುತ್ವ ಪ್ರತ್ಯಯ ಸ್ವರದಿಂದ ಅಂತೋದಾತ್ತಸ್ವರ ಪ್ರಾಪ್ತವಾದರೆ **ಜುಷ್ಟಾರ್ಪಿತೇ ಚ ಚ್ಛಂದಸಿ, ನಿತ್ಯಂ ಮಂತ್ರೇ** (ಪಾ. ಸೂ ೬-೧-೨೧೯, ೨೧೦) ಎಂಬುದರಿಂದ ಸಂಹಿತಾದಲ್ಲಿ ನಿತ್ಯವಾಗಿ ಆದ್ಯುದಾತ್ತವಾಗುತ್ತದೆ ಪ್ರಥಮಾ ವಿಭಕ್ತಿ ಬಹುವಚನಾಂತರೂಪ

ಸಂತು—ಅಸ ಭುವಿ ಧಾತು ಆದಾದಿ. ಲೋಟ್ ಪ್ರಥಮಪುರುಷ ಬಹುವಚನದಲ್ಲಿ ಅಂತಾದೇಶ, ಉತ್ತ **ಸಾರ್ವಧಾತುಕಮಪಿತ್** ಸೂತ್ರದಿಂದ ಬಿದ್ವದ್ಭಾವವಿರುವುದರಿಂದ **ಶ್ನಸೋರಲ್ಲೋಪಃ** (ಪಾ ಸೂ ೬-೪-೧೧೧) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ ತಿಙಂತ ನಿಘಾತಸ್ವರ ಬರುತ್ತದೆ

ಹೃದೇ—ಹೃದಯಶಬ್ದ ಇದಕ್ಕೆ ಚತುರ್ಥೀ ಏಕವಚನ ಪರವಾದಾಗ **ಹೃದ್ಸನ್ನೇಮಾಸ್ ಹೃದ್**—(ಪಾ. ಸೂ ೬-೧-೬೩) ಎಂಬುದರಿಂದ ಹೃದಾದೇಶ **ಊಡಿದಂ ಪದಾದಿ**—(ಪಾ ಸೂ ೬-೧-೧೬೧) ಎಂಬುದರಿಂದ ಸಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಶಕೇಮ—ಶಕ್ಲೃ ಶಕ್ತೌ ಧಾತು ಆಶೀರ್ಲಿಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ನಿತ್ಯಂ ಙಿತಃ** ಎಂಬುದರಿಂದ ಸಕಾರಲೋಪ. **ಲಿಙ್ಯಾಶಿಷ್ಯಙ್** (ಪಾ ಸೂ ೩-೧-೮೬ ಎಂಬುದರಿಂದ ಲಿಙ್ **ಛಂದಸ್ಯುಭಯಥಾ** ಎಂಬುದರಿಂದ ಸಾರ್ವಧಾತುಕ ಸಂಜ್ಞೆಯೂ ಇರುವುದರಿಂದ **ಅತೋಯೇಯಃ** ಸೂತ್ರದಿಂದ ಯಾಸುಟ್‌ಗೆ ಇಯಾದೇಶ **ಲೋಪೋವ್ಯೋರ್ವಲಿ** ಎಂಬುದರಿಂದ ಯಕಾರಲೋಪ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಆಬ್‌ನ ಸ್ವರ ಸತಿಶಿಷ್ಟವಾಗುವುದರಿಂದ ಮಧ್ಯೋದಾತ್ತವಾದ ಪದವಾಗುತ್ತದೆ

ಸುಧುರಃ—ಧುರ್ವೀ ಧಾತುವು ಹಿಂಸಾರ್ಥದಲ್ಲಿದ. ಇದಕ್ಕೆ **ಕ್ವಿಪ್ ಚ** (ಪಾ ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ **ರಾಲ್ಲೋಪಃ** (ಪಾ. ಸೂ ೬-೪-೨೧) ಎಂಬುದರಿಂದ ರೇಫದ ಸರದಲ್ಲಿರುವ ವಕಾರಕ್ಕೆ ಲೋಪ ಧುರ್ ಶಬ್ದವಾಗುತ್ತದೆ ಇದಕ್ಕೆ ಸುಶಬ್ದದೊಡನೆ ಸಮಾಸವಾದಾಗ **ಋಕ್‌ಪೂರ**—(ಪಾ ಸೂ ೫-೪-೭೪) ಎಂಬುದರಿಂದ ಸಮಾಸಾಂತ (ಅಪ್) ಪ್ರಾಪ್ತವಾದರೆ **ನಪೂಜನಾತ್** (ಪಾ ಸೂ ೫-೪-೯೯) ಎಂಬುದರಿಂದ ನಿಷೇಧ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ ಷಷ್ಠೀ ಏಕವಚನಾಂತರೂಪ

ದೇವಭಕ್ತಂ—ಭಜ ಸೇವಾಯಾಂ ಧಾತು. ಇದಕ್ಕೆ ಕ್ತ ಪರವಾದಾಗ **ಚೋಃಕುಃ** ಎಂಬುದರಿಂದ ಕುತ್ವ ಭಕ್ತ ಎಂದು ರೂಪವಾಗುತ್ತದೆ ದೇವೈಃ ಭಕ್ತಂ ದೇವಭಕ್ತಂ **ತೃತೀಯಾ ಕರ್ಮಣಿ** (ಪಾ. ಸೂ. ೬-೨-೪೮) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ದಧಾನಾ—ಡುಧಾಞ್ ಧಾರಣಪೋಷಣಯೋಃ ಧಾತು ಇದಕ್ಕೆ ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಶ್ಲು ವಿಕರಣ ಬರುವುದರಿಂದ ಧಾತುವಿಗೆ ದ್ವಿತ್ವಾದಿ **ಅಭ್ಯಸ್ತಾನಾಮಾದಿಃ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ॥ ೧೦ ॥

ಎಪ್ಪತ್ತಮೂರನೆಯ ಸೂಕ್ತ ಸಮಾಪ್ತವು.

ಎಪ್ಪತ್ತನಾಲ್ಕನೆಯ ಸೂಕ್ತವು

ತ್ರಯೋದಶಾನುವಾಕೇ ಏಕಾದಶ ಸೂಕ್ತಾನಿ । ತತ್ರೋಪಪ್ರಯಂತ ಇತಿ ನವರ್ಚಂ ಪ್ರಥಮಂ ಸೂಕ್ತಂ । ಅತ್ರಾನುಕ್ರಮ್ಯತೇ । ಉಪಪ್ರಯಂತೋ ನವ ಗೋತಮೋ ರಾಹೂಗಣೋ ಗಾಯತ್ರಂ ತ್ವಿತಿ ಅಸ್ಯಾಯಮರ್ಥಃ । ರಹೂಗಣನಾಮಾ ಕಶ್ಚಿದೃಷಿಃ । ತಸ್ಯ ಪುತ್ರೋ ಗೋತಮೋಽಸ್ಯ ಸೂಕ್ತಸ್ಯ ಋಷಿಃ । ಗಾಯತ್ರಂ ತ್ವಿತ್ಯುಕ್ತತ್ವಾದಿದಮುತ್ತರಂ ಚ ಗಾಯತ್ರ್ಯಚ್ಛಂದಸ್ಕಂ । ಪರಮಾಗ್ನೇಯಮೈಂದ್ರಾ-ದಿತಿ ಪರಿಭಾಷಿತತ್ವಾದಗ್ನಿರ್ದೇವತಾ ॥ ಪ್ರಾತರನುವಾಕಸ್ಯಾಗ್ನೇಯೇ ಕ್ರತೌ ಗಾಯತ್ರೇ ಛಂದಸ್ಯೇತ-ದಾದಿಕೇ ದ್ವೇ ಸೂಕ್ತೇ । ಸೂತ್ರಿತಂ ಚ । ಆಪೋ ರೇವತೀಃ ಕ್ಷಯಥಾ ಹಿ ವಸ್ಯ ಉಪಪ್ರಯಂತ ಇತಿ ಸೂಕ್ತೇ । ಆ. ೪-೧೩ । ಇತಿ ॥ ಆಶ್ವಿನಶಸ್ತ್ರೇಽಸ್ಯೇತೇ ಸೂಕ್ತೇ ಪ್ರಾತರನುವಾಕನ್ಯಾಯೇನ । ಆ ೬-೫ । ಇತ್ಯತಿದೇಶಾತ್ ॥ ಪೃಷ್ಠ್ಯಷಡಹಸ್ಯ ಪ್ರಥಮೇಽಹನ್ಯೇತದೇವ ಸೂಕ್ತಮಾಜ್ಯಶಸ್ತ್ರಂ । ಸೂತ್ರಿತಂ ಚ । ಉಪಪ್ರಯಂತ ಇತಿ ತು ಪ್ರಥಮೇಽಹನ್ಯಾಜ್ಯಂ । ಆ. ೭-೧೦ । ಇತಿ ॥

ಅನುವಾದವು—ಎಪ್ಪತ್ತನಾಲ್ಕನೆಯ ಸೂಕ್ತದಿಂದ ಹದಿಮೂರನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕನಲ್ಲಿ ಹನ್ನೊಂದು (೭೪-೮೪) ಸೂಕ್ತಗಳಿರುವವು. ಅವುಗಳಲ್ಲಿ **ಉಪಪ್ರಯಂತಃ** ಎಂಬ ಮೊದಲನೆಯ ಸೂಕ್ತದಲ್ಲಿ ಒಂಭತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ಉಪಪ್ರಯಂತೋ ನವ ಗೋತಮೋ ರಾಹೂಗಣೋ ಗಾಯತ್ರಂ ತ್ವಿತಿ** ಎಂದು ಹೇಳಿರುವುದು ಎಂದರೆ ರಹೂಗಣನೆಂಬುವನು ಒಬ್ಬ ಋಷಿಯು ಅವನ ಮಗನಾದ ಗೋತಮನೆಂಬುವನೇ ಈ ಸೂಕ್ತಕ್ಕೆ ಋಷಿಯು. ಈ ಸೂಕ್ತವೂ ಮುಂದಿನ ಸೂಕ್ತವೂ ಗಾಯತ್ರೀಛಂದಸ್ಸವು ಅಗ್ನಿಯು ದೇವತೆಯು. ಪ್ರಾತರನುವಾಕ ಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತ ಮತ್ತು ಮುಂದಿನ ಸೂಕ್ತಗಳ ವಿನಿಯೋಗವಿರುವುದೆಂದು

ಆಶ್ವಲಾಯನ ಶ್ರೌತಸೂತ್ರದ-**ಆಪೋ ರೇವತೀಃ ಕ್ಷಯಥಾ ಹಿ ವಸ್ವ ಉಪಪ್ರಯಂತ ಇತಿ ಸೂಕ್ತೇ** ಎಂಬ ಸೂತ್ರವು ನಿರ್ದೇಶಿಸುವುದು (ಆ ೪-೧೩) ಆಶ್ವಿನಶಸ್ತ್ರಮಂತ್ರಪರನಕ್ಯಾಗಿಯೂ ಈ ಎರಡು ಸೂಕ್ತಗಳ ವಿನಿಯೋಗ ವಿರುವುದೆಂದು ಆಶ್ವಲಾಯನಶ್ರೌತಸೂತ್ರದಲ್ಲಿಯೇ ಹೇಳಿರುವುದು (ಆ. ೬-೫) ಆರುದಿವಸ-ಳು ಮಾಡಬೇಕಾದ ಪೃಷ್ಠ್ಯಷಡಹವೆಂಬ ಯಾಗದ ಮೊದಲನೆಯ ದಿನ ಈ ಸೂಕ್ತವನ್ನು ಆಜ್ಯಶಸ್ತ್ರಮಂತ್ರಪರನದಲ್ಲಿ ವಿನಿಯೋಗಿಸ ಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಉಪಪ್ರಯಂತ ಇತಿ ತು ಪ್ರಥಮೇಽಹನ್ಯಾಜ್ಯಂ** ಎಂಬ ಸೂತ್ರದಿಂದ ನಿರ್ವ್ಯತವಾಗಿರುವುದು (ಆ ೭-೧೦)

ಸೂಕ್ತ—೭೪

॥ ಓಂ ॥

॥ ಮಂಡಲ ೧ ॥ ಅನುವಾಕ ೧೨ ಸೂಕ್ತ ೭೪ ॥

। ಅಷ್ಟಕ- ೧ ॥ ಅಧ್ಯಾಯ- ೫ । ವರ್ಗ- ೨೧, ೨೨ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ -೯ ॥

॥ ಋಷಿಃ—ಗೋತಮೋ ರಾಹೂಗಣಃ ।

ದೇವತಾ— ಆಗ್ನಿಃ ॥

ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

ಉಪಪ್ರಯಂತೋ ಅಧ್ವರಂ ಮಂತ್ರಂ ವೋಚೇಮಾಗ್ನಯೇ ।
ಆರೇ ಅಸ್ಮೇ ಚ ಶೃಣ್ವತೇ ॥ ೧ ॥

॥ ಪದಪಾಠಃ ।

ಉಪ ಪ್ರಯಂತಃ । ಅಧ್ವರಂ । ಮಂತ್ರಂ । ವೋಚೇಮ । ಅಗ್ನಯೇ ।
ಆರೇ । ಅಸ್ಮೇ ಇತಿ । ಚ । ಶೃಣ್ವತೇ ॥ ೧ ॥

॥ ಸಾಯಣಭಾಷ್ಯಂ ॥

ಅಧ್ವರಂ ಹಿಂಸಾಪ್ರತ್ಯವಾಯರಹಿತಮಗ್ನಿಷ್ಟೋಮಾದಿಯಜ್ಞಮುಪಪ್ರಯಂತ ಉಪೈತ ಪ್ರಕರ್ಷೇಣ ಯಂತೋ ಗಚ್ಛಂತಃ । ಪ್ರಾಪ್ತ್ಯಭಿಚ್ಛೇದೇನ ಸಮ್ಯಗನುತಿಷ್ಠಂತ ಇತ್ಯರ್ಥಃ । ತಾದೃಶಾ ವಯಮಗ್ನಯೇ೭ಂಗನಾದಿಗುಣಯುಕ್ತಾಯ ದೇವಾಯ ಮಂತ್ರಂ ಮನಸಸಾಧನಮೇತತ್ಸೂಕ್ತರೂಪಂ ಸ್ತೋತ್ರಂ ವೋಚೇಮ । ವಕ್ತಾರೋ ಭೂಯಾಸ್ಮೇತ್ಯಾಶಾಸ್ಯತೇ । ಕೀದೃಶಾಯಾಗ್ನಯೇ । ಆರೇ೭ಸ್ಮೇ ಚ ಶೃಣ್ವತೇ । ಚಶಬ್ದೋ೭ಸ್ಯರ್ಥ ಆರೇಶಬ್ದಾತ್ಪರೋ ದ್ರಷ್ಟವ್ಯಃ । ಆರೇ ಚ ದೂರೇ೭ಪಿ ಸ್ಥಿತಾಸ್ಮಾಕಂ ಸ್ತುತೀಃ ಶೃಣ್ವತೇ । ಅಸ್ಮಾಸು ಪ್ರೀತ್ಯತಿಶಯೇನ ಸರ್ವತ್ರ ಪ್ರವರ್ತಮಾನೋ೭ಗ್ನಿರಸ್ಮದೀಯಮೇವ ಸ್ತೋತ್ರಂ ಶೃಣೋತೀತಿ ಭಾವಃ ॥ ವೋಚೇಮ । ಬ್ರುವೋ ವಚಿಃ । ಲಿಙ್ಯಾಶಿಷ್ಯಙ್ । ವಚ ಉಮಿತ್ಯುಮಾಗಮಃ । ಶೃಣ್ವತೇ । ಶತುರನುಮ ಇತಿ ನಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅಧ್ವರಂ—ಹಿಂಸಾದಿ ಪ್ರತ್ಯವಾಯರಹಿತವಾದ ಯಜ್ಞಕ್ಕೆ । **ಉಪಪ್ರಯಂತಃ**—ಸಮೀಪಿಸಿ ಯಾಗಾನುಷ್ಠಾನಮಾಡುವ (ನಾವು) । **ಆರೇ ಚ**—ದೂರದಲ್ಲಿದ್ದರೂ । **ಅಸ್ಮೇ**—ನಮ್ಮ (ಸ್ತುತಿಗಳನ್ನು) । **ಶೃಣ್ವತೇ**—ಕೇಳುವ । **ಅಗ್ನಯೇ**—ಅಗ್ನಿಗೆ । **ಮಂತ್ರಂ**—ಈ ಸೂಕ್ತರೂಪವಾದ ಮಂತ್ರವನ್ನು । **ವೋಚೇಮ**—ಉಚ್ಚರಿಸೋಣ

ಭಾವಾರ್ಥ ॥

(ನಾವು) ಯಾಗಶಾಲೆಗೆ ಶೀಘ್ರವಾಗಿ ಹೋಗಿ, ಬಹುದೂರದಲ್ಲಿದ್ದರೂ ನಮ್ಮ ಸ್ತುತಿಗಳನ್ನು ಕೇಳುವ ಅಗ್ನಿಗೆ, ಸ್ತುತಿರೂಪವಾದ (ಈ ಸೂಕ್ತವನ್ನು) ಉಚ್ಚರಿಸೋಣ

English Translation

Hastening to the sacrifice, let us repeat a prayer to Agni, who hears us from afar

॥ ವಿಶೇಷವಿಷಯಗಳು ॥

ಈ ಸೂಕ್ತಕ್ಕೆ ರಹೂಗಣ ಪುತ್ರನಾದ ಗೋತಮನೆಂಬುವನು ಋಷಿಯು. ಇವನು ಸಪ್ತರ್ಷಿಗಳಲ್ಲಿ ಒಬ್ಬನು ಈ ಋಷಿದೃಷ್ಟವಾದ ಋಕ್ಕುಗಳು ಋಗ್ವೇದದಲ್ಲಿ—ಪ್ರಥಮ ಮಂಡಲದಲ್ಲಿ ೭೪–೭೩ ಸೂಕ್ತಗಳಲ್ಲಿರುವ ೭೦೪ ಋಕ್ಕುಗಳು, ಒಂಭತ್ತನೆಯ ಮಂಡಲದ ೫೧ ನೆಯ ಸೂಕ್ತದಲ್ಲಿ ೬ ಋಕ್ಕುಗಳು, ೬೭ ನೆಯ ಸೂಕ್ತದಲ್ಲಿ (೭–೯) ೩ ಋಕ್ಕುಗಳು, ಒಟ್ಟು ೭೧೩ ಋಕ್ಕುಗಳಿರುವವು.

ಅಧ್ವರಂ--ನ ವಿದ್ಮತೇ ಧ್ವರೋ ಯಸ್ಯ । ಹಿಂಸಾರಹಿತವಾದ ಕರ್ಮ ಎಂದರೆ ದೇವತೆಗಳನ್ನು ಆರಾಧಿಸುವ ಕರ್ಮ ಅಥವಾ ಯಜ್ಞ. ಯಜ್ಞದಲ್ಲಿ ಅಗ್ನಿಷ್ಟೋಮಾದಿ ಅನೇಕ ಭೇದಪ್ರಭೇದಗಳಿರುವುದರಿಂದ ಪ್ರಸಕ್ತ ಋಕ್ಕಿನಲ್ಲಿ ಅಧ್ವರಂ ಎಂದರೆ ಪ್ರಕೃತ ನೆರವೇರುತ್ತಿರುವ ಯಾವ ಯಜ್ಞಬೇಕಾದರೂ ಆಗಬಹುದು. ನಾವು ಮಾಡುತ್ತಿರುವ ಯಜ್ಞಶಾಲೆಗೆ ಹೋಗೋಣವೆಂದು ಗೋತಮಋಷಿಯು ಋತ್ವಿಜರೊಡನೆ ಹೇಳಿರುವುದನ್ನು ಇಲ್ಲಿ ನರ್ದಿಸಿದೆ

ಉಪಪ್ರಯಂತಃ– ಉಪ ಎಂದರೆ ಸಮೀಪ, ಪ್ರ ಎಂದರೆ ಪ್ರಕರ್ಷ ರೀತಿಯಿಂದ, ಆಸಕ್ತಿಯಿಂದ, ಯಂತಃ–ಹೋಗುವವರು, ಯಜ್ಞನಡೆಯುತ್ತಿರುವ ಪ್ರದೇಶದ ಸಮೀಪಕ್ಕೆ ಉದ್ದೇಶಪೂರ್ವಕವಾಗಿ ಹೋಗೋಣವೆಂದು ಮುಖ್ಯಾಭಿಪ್ರಾಯವು

ಮಂತ್ರಂ—ಮನನಸಾಧನಮೇತತ್ಸೂಕ್ತರೂಪಂ । ಮನಸ್ಸಿನಲ್ಲಿ ನಾವು ಅಗ್ನಿಯ ವಿಷಯವಾಗಿ ಪ್ರಶಂಸಮಾಡುತ್ತಾ ಬಾಹ್ಯದಲ್ಲಿ ಶಬ್ದೋಚ್ಚಾರಣೆಗಳಿಂದ ಪಠಿಸುವ ಈ ಸೂಕ್ತರೂಪವಾದ ಸ್ತೋತ್ರವು. ಇದನ್ನು ಮಂತ್ರವೆಂದು ಋಷಿಯು ಹೇಳಿರುವನು. ಅಗ್ನಿಪ್ರಶಂಸಾತ್ಮಕವಾದ ಈ ಸೂಕ್ತರೂಪವಾದ ಮಂತ್ರವನ್ನು ಉಚ್ಚರಿಸೋಣವೆಂದು ಋಷಿಯು ಹೋತೃ ಪೋತಾದಿ ಋತ್ವಿಜರೊಡನೆ ಹೇಳುವನು.

ಅಗ್ನಯೇ—ಅಗ್ನಿಗಾಗಿ, ಅಗ್ನಿಯನ್ನುದ್ದೇಶಿಸಿ

ಆರೇ–ಆಕೇ, ಸರಾಕೇ ಮೊದಲಾದ ಏಸು ದೂರನಾಮಗಳ ಮಧ್ಯದಲ್ಲಿ ಆರೇ ಎಂಬ ಶಬ್ದವು ಪಠಿತವಾಗಿರುವುದರಿಂದ ಆರೇ ಎಂದರೆ ದೂರದಲ್ಲಿ ಎಂದರ್ಥವು. (ನಿ ೩–೨೦)

ಚ—ಈ ಶಬ್ದವನ್ನು ಆರೇ ಎಂಬ ಶಬ್ದಾನಂತರ ಸೇರಿಸಿ ಆರೇ ಚ ಎಂದು ಉಚ್ಚರಿಸಿ ಅರ್ಥಮಾಡಬೇಕು. ಆಗ ಆರೇ ಚ ಎಂಬ ಶಬ್ದಗಳಿಗೆ ದೂರದಲ್ಲಿದ್ದರೂ ಕೂಡ ಎಂದರ್ಥವಾಗುವುದು. ಮನುಷ್ಯಾದಿ ನನಗೆ ಸಮೀಪದಲ್ಲಿರುವಾಗ ಮಾತ್ರ ಶಬ್ದವು ಕೇಳಿಸುವುದು. ದೂರದಲ್ಲಿರುವವರು ಮಾತನಾಡುವ ಶಬ್ದವನ್ನು ಕೇಳುವ ಸಾಮರ್ಥ್ಯ ವಿರುವುದಿಲ್ಲ. ಅಗ್ನಿಯೋ ಪೃಥ್ವಿಮ್ಯಂತರಿಕ್ಷ ಸ್ವರ್ಗಗಳಲ್ಲಿ ಇರುವುದರಿಂದ ದೂರದಲ್ಲಿ ನಾವು ಮಾಡುವ ಸ್ತೋತ್ರಾದಿಗಳನ್ನು ಕೇಳುವ ಸಾಮರ್ಥ್ಯವು ಇರುವುದೆಂದಭಿಪ್ರಾಯವು

ವ್ಯಾಕರಣಪ್ರಕ್ರಿಯಾ

ಉಪ ಪ್ರಯಂತಃ—ಉಪ, ಪ್ರ, ಉಪಸರ್ಗ ಇಣ್ ಗತೌ ಧಾತು. ಲಡರ್ಥದಲ್ಲಿ ಶತೃ ಪ್ರತ್ಯಯ **ಇಣೋ ಯಣ್** (ಪಾ. ಸೂ. ೬–೪–೮೧) ಎಂಬುದರಿಂದ ಧಾತುವಿನ ಇಕಾರಕ್ಕೆ ಯಣಾದೇಶ. ಪ್ರಥಮಾ ಬಹು. ವಚನಾಂತರೂಪ

ವೋಚೇಮ—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಇದಕ್ಕೆ **ಆಶೀರ್ಲಿಙ್** ಉತ್ತಮಪುರುಷ ಬಹು ವಚನದಲ್ಲಿ ಮಸ್ ಪ್ರತ್ಯಯ. **ನಿತ್ಯಂ ಙಿತಃ** ಎಂಬುದರಿಂದ ಸಕಾರಲೋಪ **ಲಿಙಾಶಿಷಿ** (ಪಾ. ಸೂ ೩–೪–೧೧೬) ಎಂಬುದರಿಂದ ಆಶೀರ್ಲಿಙ್‌ಗೆ ಅರ್ಧಧಾತುಕಸಂಜ್ಞೆ ಇರುವುದರಿಂದ ಇದು ಪರವಾದಾಗ **ಬ್ರುವೋ ವಚಿಃ** (ಪಾ. ಸೂ

೨-೪-೫೩) ಎಂಬುದರಿಂದ ವಚ್ಯಾದೇಶ. **ಲಿಙ್ಯಾಶಿಷ್ಯಙ್** (ಪಾ. ಸೂ. ೩-೧-೪೬) ಎಂಬುದರಿಂದ ಆಜಾದೇಶ. **ವಚಿ ಉಮ್** (ಪಾ. ಸೂ. ೭-೪-೨೦) ಎಂಬುದರಿಂದ ಧಾತುವಿಗೆ ಉನುಗಾಗಮ. **ಮಿದಚೋಽನ್ತ್ಯಾತ್ಪರಃ** (ಪಾ. ಸೂ. ೧-೧-೪೭) ಎಂಬುದರಿಂದ ಅಂತ್ಯಾಚ್ಚಿನ ಪರನಾಗಿ ಬರುತ್ತದೆ. ಗುಣಸಂಧಿ **ವೋಚೇಮ** ಎಂದು ರೂಪವಾಗುತ್ತದೆ ಅತಿಡಂತದ ಪರದಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ

ಶೃಣ್ವತೇ—ಶ್ರು ಶ್ರವಣೇ ಧಾತು. ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ. **ಶ್ರುವಃ ಶೃಚ್** (ಪಾ. ಸೂ. ೩-೧-೪೪) ಎಂಬುದರಿಂದ **ಶಿತ್** ಪ್ರತ್ಯಯ ಪರವಾದುದರಿಂದ ಧಾತುವಿಗೆ ಶೃ ಆದೇಶ. ಶಪ್ಪಿಗೆ ಶ್ನುವಿಕರಣ **ಸಾರ್ವಧಾತುಕಮಪಿತ್** ಎಂಬುದರಿಂದ ಙಿದ್ವದ್ಭಾವವಿರುವುದರಿಂದ ಗುಣಬರುವುದಿಲ್ಲ. ಯಙಾದೇಶ. ಶೃಣ್ವತ್ ಶಬ್ದವಾಗುತ್ತದೆ ಚತುರ್ಥೀ ಏಕವಚನಾಂತರೂಪ. ನುಮ್‌ರಹಿತವಾದ ಶತೃವಿನ ಪರದಲ್ಲಿ ವಿಭಕ್ತಿ ಬಂದುದರಿಂದ **ಶತುರನುನೋ ನದ್ಯಜಾದೀ** (ಪಾ. ಸೂ ೬-೧-೧೭೩) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ. ॥ ೧ ॥

॥ ಸಂಹಿತಾಪಾಠಃ ॥

ಯಃ ಸ್ಮೀಹಿತೀಷು ಪೂರ್ವ್ಯಃ ಸಂಜಗ್ಮಾನಾಸು ಕೃಷ್ಟಿಷು ।
ಅರಕ್ಷದ್ದಾಶುಷೇ ಗಯಂ ॥ ೨ ॥

॥ ಪದಪಾಠಃ ॥

ಯಃ । ಸ್ಮೀಹಿತೀಷು । ಪೂರ್ವ್ಯಃ । ಸಂ ಽ ಜಗ್ಮಾನಾಸು । ಕೃಷ್ಟಿಷು ।
ಅರಕ್ಷತ್ । ದಾಶುಷೇ । ಗಯಂ ॥ ೨ ॥

॥ ಸಾಯಣಭಾಷ್ಯಂ ॥

ಪೂರ್ವ್ಯಶ್ಚಿರಂತನೋ ಯೋಽಗ್ನಿಃ ಸ್ನೇಹಿತೀಷು ವಧಕಾರಿಣೀಷು ಕೃಷ್ಟಿಷು ಶತ್ರುಭೂತಾಸು ಪ್ರಜಾಸು ಸಂಜಗ್ಮಾನಾಸು ಸಂಗತಾಸು ಸತೀಷು ದಾಶುಷೇ ಹವೀಂಷಿ ದತ್ತವತ್ತೇ ಯಜಮಾನಾಯ ಗಯಂ ಧನಮರಕ್ಷತ್ । ರಕ್ಷತಿ । ತಸ್ಮೈ ಮಂತ್ರಂ ವೋಚೇಮೇತಿ ಪೂರ್ವೇಣ ಸಂಬಂಧಃ॥ ಸ್ನೇಹಿತೀಷು । ಷ್ಣಿಹ ಸ್ನೇಹನೇ । ಚುರಾದಿಃ । ಸ್ನೇಹಯತೀತಿ ವಧಕರ್ಮಸು ಪಠಿತಃ । ಸ್ನೇಹ್ಯಂತೇ ಹಿಂಸ್ಯಂತೇ ಪ್ರಜಾ ಅಭಿರಿತಿ ಸ್ನೇಹಿತಯಃ । ಕರಣೇ ಕ್ತಿನ್ । ತಿತುತ್ರೇಷ್ವಗ್ರಹಾದೀನಾಮಿತಿ ವಕ್ತವ್ಯಮಿತಿ ವಚನಾನ್ನಿಗೃಹೀತಿರ್ನಿಪರಿತಿರಿತಿವದಿಡಾಗಮಃ । ಮ. ೭-೨-೯ ೧ । ವ್ಯತ್ಯಯೇನೈಕಾರಸ್ಯೈಕಾರಾದೇಶಃ । ಕ್ತಿನೋ ದೀರ್ಘತ್ವಂ । ನಿತ್ತ್ವಾದಾದ್ಯುದಾತ್ತತ್ವಂ । ಸಂಜಗ್ಮಾನಾಸು । ಸಮೋ ಗಮ್ಯೃಚ್ಛೀತ್ಯಾತ್ಮನೇಪದಂ । ಲಿಟಃ ಕಾನಚ್ । ಗಮಹನೇತ್ಯಾದಿನೋಪಧಾಲೋಪಃ । ಅರಕ್ಷತ್ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲಙ್ ॥

॥ ಪ್ರತಿಪದಾರ್ಥ ॥

ಸ್ನೇಹಿತೀಷು - ವಧಕಾರಿಗಳಾದ । **ಕೃಷ್ಟಿಷು**—ಶತ್ರುರೂಪರಾದವರು । **ಸಂಜಗ್ಮಾನಾಸು**—ಯುದ್ಧ ಮಾಡಲು ಬಂದಾಗ । **ಪೂರ್ವ್ಯಃ**—ಪುರಾತನನಾದ । **ಯಃ**—ಯಾವ (ಅಗ್ನಿಯು) । **ದಾಶುಷೇ**—(ಹವಿರಾದಿ ಗಳನ್ನು ಅರ್ಪಿಸಿದವನ । **ಗಯಂ**—ಧನವನ್ನು । **ಅರಕ್ಷತ್**—ರಕ್ಷಿಸುತ್ತಾನೋ (ಜವನನ್ನು ಸ್ತುತಿಸೋಣ) ।

॥ ಭಾವಾರ್ಥ ॥

ಹಿಂಸಾಕಾರಿಗಳಾದ ಶತ್ರುಗಳು ಸಂಧಿಸಿದಾಗ, ಪುರಾತನನಾದ ಯಾವ ಅಗ್ನಿಯು ಹವಿರಾದಿದಾತೃವಾದ ಯಜಮಾನನಿಗೋಸ್ಕರ ಧನವನ್ನು ರಕ್ಷಣೆ ಮಾಡುತ್ತಾನೆಯೋ (ಅಂತಹ ಅಗ್ನಿಯನ್ನು ಸ್ತುತಿಸೋಣ)

English Translation

Who, existing of old, has preserved wealth for the sacrificer, when malevolent men are assembled together.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಯಚ್ಛಬ್ದಪ್ರಯೋಗವಿರುವುದರಿಂದಲೂ ಇದು ಅಗ್ನಿಗೆ ಸಂಬಂಧವನ್ನು ಸೂಚಿಸುವುದ ರಿಂದಲೂ ಈ ಋಕ್ಕಿನಲ್ಲಿ ವಿವರಿಸಿರುವ ಅರ್ಥವನ್ನು ಅಗ್ನಿಗೆ ವಿಶೇಷಣವನ್ನಾಗಿ ಹೇಳಿ ಹಿಂದಿನ ಋಕ್ಕಿನಲ್ಲಿರುವ **ಮಂತ್ರಂ ವೋಚೇಮಾಗ್ನಯೇ** ಎಂಬ ಶಬ್ದಗಳನ್ನು ಅಧ್ಯಾಹಾರಮಾಡಿ ಅಂತಹ ಅಗ್ನಿಯನ್ನು ಮಂತ್ರಗಳಿಂದ ಸ್ತುತಿಸೋಣ ಎಂದು ಅರ್ಥಸಮನ್ವಯಮಾಡಬೇಕೆಂದು ಭಾಷ್ಯಕಾರರು ಹೇಳಿರುವರು.

ಸ್ನೇಹಿತೀಷು ಸಂಜಗ್ಮಾನಾಸು ಕೃಷ್ಟಿಷು—ಷ್ಣಿಹ ಸ್ನೇಹನೇ । ಸ್ನೇಹಯತೀತಿ ವಧಕರ್ಮಸು ಪಠಿತಃ । ಸ್ನೇಹಿತೀಷು ಎಂಬ ಶಬ್ದವು ಷ್ಣಿಹ ಸ್ನೇಹನೇ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ ದಭ್ನೋತಿ,

ಶ್ನಥತಿ ಮೊದಲಾದ ಮೂವತ್ತಮೂರು ವಧಕರ್ಮಾರ್ಥಕಗಳಾದ ಶಬ್ದಗಳ ಮಧ್ಯದಲ್ಲಿ ಸ್ನೇಹಯತಿ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩–೧೦) ಈ ಶಬ್ದಕ್ಕೆ ಕೊಲ್ಲುವವರು, ಶತ್ರುಗಳು ಎಂದರ್ಥವು ಇಂತಹ ಶತ್ರುಗಳು ನಮ್ಮೊಡನೆ ಯುದ್ಧಮಾಡುವುದಕ್ಕೆ ಬಂದಾಗ ಎಂದಭಿಪ್ರಾಯವು. ಕೃಷ್ಟಿಶಬ್ದವು ಮನುಷ್ಯವಾಚಕವು ವಧಾಪೇಕ್ಷೆಗಳಾಗಿ ಬರುವ ಮನುಷ್ಯರು ಎಂದರೆ ಯುದ್ಧಕ್ಕಾಗಿ ಬರುವ ಶತ್ರುಗಳು

ಪೂರ್ವ್ಯಃ—ಪೂರ್ವಸ್ಮಿನ್ ಕಾಲೇ ಭವಃ। ಚಿರಂತನಃ।—ಹಿಂದಿನಕಾಲದಲ್ಲಿಯೂ ಇದ್ದವನು. ಎಂದರೆ ಯಾವಾಗಲೂ ಇರುವವನು, ಮರಣರಹಿತನು (ಅಗ್ನಿಯು).

ಗಯಂ—ತುಕ್, ತೋಕಂ ಮೊದಲಾದ ಹದಿನೈದು ಅಪತ್ಯನಾಮಗಳಲ್ಲಿ ಗಯಶಬ್ದವು ಪಠಿತವಾಗಿರುವುದರಿಂದ ಗಯಶಬ್ದಕ್ಕೆ ಅಸತ್ಯ ಅಥವಾ ಪುತ್ರಾದಿ ಸಂತತಿಯೆಂದೂ (ನಿ ೩–೨), ಮಖಂ ರೇಕ್ಣಃ ಮೊದಲಾದ ಇಪ್ಪತ್ತೆಂಟು ಧನನಾಮಗಳ ಮಧ್ಯದಲ್ಲಿ ಈ ಶಬ್ದವು ಪಠಿತವಾಗಿರುವುದರಿಂದ (ನಿ. ೩–೯) ಗಯಶಬ್ದಕ್ಕೆ ಧನವೆಂದೂ; ಗಯಃ, ಕ್ಷದರಃ ಮೊದಲಾದ ಇಪ್ಪತ್ತೆರಡು ಗೃಹನಾಮಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ (ನಿ ೩–೧೩) ಗಯ ಶಬ್ದಕ್ಕೆ ಗೃಹವೆಂದೂ ಮೂರು ವಿಧವಾದ ಅರ್ಥಗಳಿರುವುವು. ಇಲ್ಲಿ ಭಾಷ್ಯಕಾರರು ಧನವೆಂಬ ಒಂದು ಅರ್ಥವನ್ನು ಮಾತ್ರ ಹೇಳಿರುವರು. ಯುದ್ಧಮಾಡುವ ಶತ್ರುಗಳಿಂದ ಜನಗಳ ಪ್ರಾಣ, ಧನ, ಮನೆ ಇವುಗಳ ರಕ್ಷಣೆಯು ಅವಶ್ಯಕವಾದುದರಿಂದ ಇಲ್ಲಿ ನಿರುಕ್ತದಲ್ಲಿ ಹೇಳಿರುವಂತೆ, ಪುತ್ರ, ಧನ, ಗೃಹ ಎಂಬ ಮೂರು ವಿಧವಾದ ಅರ್ಥಗಳಲ್ಲಿ ಯಾವುದನ್ನು ಬೇಕಾದರೂ ಹೇಳಬಹುದು

ದಾಶುಷೇ—ಹವೀಂಷಿ ದತ್ತವತೇ ಯಜಮಾನಾಯ—ಯುದ್ಧಸಂಭವಿಸುವಕಾಲದಲ್ಲಿ ಅಗ್ನಿಯನ್ನು ಹವಿರಾದಿದ್ರವ್ಯಗಳಿಂದ ಆರಾಧನೆಮಾಡುವ ಯಜಮಾನನ ಧನಾದಿಗಳನ್ನು ಅಗ್ನಿಯು ಅವಶ್ಯಕವಾಗಿ ರಕ್ಷಿಸುವನೆಂದ ಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ಸ್ನೇಹಿತೀಷು—ಷ್ಣಿಹ ಸ್ನೇಹನೇ ಧಾತು ಚುರಾದಿ ಇದು **ಸ್ನೇಹಯತಿ** (ನಿರು. ೨–೧೯–೧೩) ಎಂಬುದಾಗಿ ವಧಕರ್ಮಾರ್ಥದಲ್ಲಿ ಪಠಿತವಾಗಿದೆ. ಸ್ನೇಹ್ಯಂತೇ ಹಿಂಸ್ಯಂತೇ ಪ್ರಜಾ ಅಭಿರಿತಿ ಸ್ನೇಹಿತಯಃ (ಇವುಗಳಿಂದ ಹಿಂಸಿಸಲ್ಪಡುತ್ತಾರೆ) ಕರಣಾರ್ಥದಲ್ಲಿ **ಸ್ತ್ರಿಯಾಂಕ್ತಿನ್** (ಪಾ ಸೂ. ೩–೩–೯೪) ಎಂಬುದರಿಂದ ಕ್ತಿನ್ ಪ್ರತ್ಯಯ. ಯದ್ಯಪಿ **ತಿತುತ್ರ**—(ಪಾ ಸೂ ೭–೩–೯) ಎಂಬುದರಿಂದ ಇದಕ್ಕೆ ಇಣ್ನಿಷೇಧ ಬರುತ್ತದೆ. ಆದರೆ ಆ ಸೂತ್ರದಲ್ಲಿ **ತಿತುತ್ರೇಷ್ವಗ್ರಹಾದೀನಾಮಿತಿ ವಕ್ತವ್ಯಂ** (ಪಾ. ಸೂ. ೭–೩–೯–೧) ಎಂಬ ವಚನವಿರುವುದರಿಂದ ನಿಗೃಹೀತಿ, ನಿಪಠಿತಿ ಎಂಬಲ್ಲಿ ಹೇಗೆ ಇಡಾಗಮ ಆ ವಚನದಿಂದ ಸಿದ್ಧವಾಗುವುದೋ ಅದರಂತೆ ಇಲ್ಲಿಯೂ ಇಡಾಗಮ ಬರುತ್ತದೆ. **ವ್ಯತ್ಯಯೋ ಬಹುಲಂ** ಎಂಬುದರಿಂದ ಧಾತುವಿನ ಏಕಾರಕ್ಕೆ ಈಕಾರಾದೇಶವೂ ಕ್ತಿನ್ನಿಗೆ ದೀರ್ಘವೂ ಬರುತ್ತದೆ. ಪ್ರತ್ಯಯ ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಸಪ್ತಮೀ ಬಹುವಚನಾಂತರೂಪ.

ಸಂಜಗ್ಮಾನಾಸು—ಸಮ್ ಉಪಸರ್ಗ- ಗಮ್ಲೃಗತೌ. ಧಾತು. **ಸಮೋ ಗಮ್ಯೃಚ್ಛಿಭ್ಯಾಂ** (ಪಾ ಸೂ. ೧-೩-೨೯) ಎಂಬುದರಿಂದ ಆತ್ಮನೇಪದಿಯಾಗುತ್ತದೆ ಲಿಟ್ ವಿವಕ್ಷಾಮಾಡಿದಾಗ **ಲಿಟಃ ಕಾನಜ್ವಾ** ಎಂಬುದರಿಂದ **ಕಾನಚ್** ಪ್ರತ್ಯಯ ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ **ಕುಹೋಶ್ಚುಃ** (ಪಾ. ಸೂ. ೭-೪-೬೨) ಎಂಬುದರಿಂದ ಚುತ್ವದಿಂದ ಜಕಾರಾದೇಶ **ಗಮಹನಜನ** -(ಪಾ. ಸೂ ೬-೪-೯೮) ಎಂಬುದರಿಂದ ಧಾತುವಿನ ಉಪಧೆಗೆ ಲೋಪ. ಸಂಜಗ್ಮಾನ ಎಂದು ರೂಪವಾಗುತ್ತದೆ. ಸ್ತ್ರೀತ್ವದಲ್ಲಿ **ಅಜಾದ್ಯತಷ್ಟಾಪ್** ಸೂತ್ರದಿಂದ ಟಾಪ್ **ಚಿತೇಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ ಸಪ್ತಮಿ ಬಹುವಚನಾಂತರೂಪ

ಅರಕ್ಷತ್—ರಕ್ಷ ಪಾಲನೇ ಧಾತು ವರ್ತಮಾನಾರ್ಥ ತೋರುವಾಗ **ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ಲಙ್ ಪ್ರಥಮಪುರುಷ ಏಕವಚನದರೂಪ. ಸಾದಾದಿಯಲ್ಲಿರುವುದರಿಂದ ಸಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಸದವಾಗುತ್ತದೆ

ದಾಶುಷೇ—ಡುದಾಞ್ ದಾನೇ ಧಾತು **ದಾಶ್ವಾನ್ ಸಾಹ್ವಾನ್**—(ಪಾ ಸೂ. ೬-೧-೧೨) ಎಂಬುದರಿಂದ **ಕ್ವಸು** ಪ್ರತ್ಯಯಾಂತವಾಗಿ ನಿಪಾತಿತವಾಗಿದೆ ಚತುರ್ಥೀ ಏಕವಚನದಲ್ಲಿ **ವಸೋಃ ಸಂಪ್ರಸಾರಣಂ** ಎಂಬುದರಿಂದ 'ಸಂಪ್ರಸಾರಣ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ **ಶಾಸಿವಸಿಘುಸೀನಾಂ ಚ** (ಪಾ ಸೂ. ೮-೩-೬೦) ಎಂಬುದರಿಂದ ಸಕಾರಕ್ಕೆ ಷತ್ವ ಪ್ರತ್ಯಯಸ್ವರದಿಂದ ಮಧ್ಯೋದಾತ್ತನಾಗುತ್ತದೆ ॥ ೨ ॥

॥ ಸಂಹಿತಾಪಾಠಃ ॥

ಉತ ಬ್ರುವಂತು ಜಂತವ ಉದಗ್ನಿರ್ವೃತ್ರಹಾಜನಿ ।
ಧನಂಜಯೋ ರಣೇರಣೇ ॥ ೩ ॥

॥ ಪದಪಾಠಃ ॥

ಉತ । ಬ್ರುವಂತು । ಜಂತವಃ । ಉತ್ । ಅಗ್ನಿಃ । ವೃತ್ರಽಹಾ । ಅಜನಿ ।
ಧನಂಽಜಯಃ । ರಣೇಽರಣೇ ॥ ೩ ॥

॥ ಸಾಯಣಭಾಷ್ಯಂ ॥

ಅಗ್ನಿಮಂಥನೇ ಜಾತಾಯೊನುಬ್ರೂಹೀತ್ಯುಕ್ತೆ ಉತ ಬ್ರುವಂತ್ವಿತ್ಯೇಷಾನುವಚನೀಯಾ। ಸ್ಯಾತರ್ವೈಶ್ವದೇನ್ಯಾಮಿತಿ ಖಂಡೇ ಸೂತ್ರಿತಂ। ಶಿಷ್ಟೇನೋತ್ತರಾಮುತ ಬ್ರುವಂತು ಜಂತವಃ। ಆ. ೨-೧೬। ಇತಿ ॥ ತಥಾ ಸಾಕಮೇಧೇಷು ಮರುದ್ಭ್ಯಃ ಕ್ರೀಡಿಭ್ಯಃ ಪುರೋಡಾಶಮಿತ್ಯಸ್ಯಾಮಿಷ್ಟಾವೇ-ಷ್ಯೆವ ಪ್ರಥಮಾಜ್ಯಭಾಗಾನುವಾಕ್ಯಾ। ಸೂತ್ರಿತಂ ಚ। ಮರುದ್ಭ್ಯಃ ಕ್ರೀಡಿಭ್ಯ ಉತ್ತರೋತ ಬ್ರುವಂತು ಜಂತವಃ। ಆ ೨-೧೮। ಇತಿ ॥

ಅಗ್ನಿರುದಜನಿ। ಅರಣ್ಯೋಃ ಸಕಾಶಾದುತ್ಪನ್ನಃ। ಉತಾನಂತರಂ ಜಂತವೋ ಜಾತಾಃ ಸರ್ವ ಋತ್ವಿಜೋ ಬ್ರುವಂತು। ತಮಗ್ನಿಂ ಸ್ತುವಂತು। ಕೀದೃಶೋಽಗ್ನಿಃ। ವೃತ್ರಹಾ ವೃತ್ರಾಣಾಮಾವರಕಾಣಾಂ ಶತ್ರೂಣಾಂ ಹಂತಾ ರಣೇ ರಣೇ ಸರ್ವೇಷು ಸಂಗ್ರಾಮೇಷು ಧನಂಜಯಃ ಶತ್ರುಧನಾನಾಂ ಜೇತಾ ॥ ಧನಂಜಯಃ। ಸಂಜ್ಞಾಯಾಂ ಭೃತ್ಯೃವೃಜೀತಿ। ಪಾ. ೩-೨-೪೬। ಖಚ್। ಅರುರ್ದ್ವಿಷದಜಂತಸ್ಯ। ಪಾ. ೬-೩-೬೭। ಇತಿ ಮುಮ್। ಚಿತ್ಸ್ವರೇಣಾಂತೋದಾತ್ತತ್ವಂ। ರಣೇ ರಣೇ। ರಣ ಶಬ್ದಾರ್ಥಃ। ರಣಂತಿ ದುಂದುಭಯೋಽಸ್ಮಿನ್ನಿತಿ ರಣಃ ಸಂಗ್ರಾಮಃ। ವಷಿರಣ್ಯೋರುಪಸಂಖ್ಯಾನಂ। ಪಾ. ೩ ೩ ೫೮-೩ ಇತ್ಯಪ್। ನಿತ್ಯವೀಪ್ಸಯೋರಿತಿ ದ್ವಿರ್ವಚನಂ। ಅನ್ಯೇದಿತಾನುದಾತ್ತತ್ವಂ ॥

॥ ಪ್ರತಿಪದಾರ್ಥ ॥

ವೃತ್ರಹಾ—ಶತ್ರುನಾಶಕನಾದ। **ರಣೇ ರಣೇ**—ಎಲ್ಲಾ ಯುದ್ಧಗಳಲ್ಲಿಯೂ। **ಧನಂಜಯಃ** ಶತ್ರು ಧನವನ್ನು ಜಯಿಸುವವನಾದ। **ಅಗ್ನಿಃ**—ಅಗ್ನಿಯು। **ಉತ್ ಅಜನಿ**—(ಅರಣಿಗಳಿಂದ) ಜನಿಸಿದನು। **ಉತ**—ಅನಂತರ। **ಜಂತವಃ**—ಉತ್ಪನ್ನರಾದ ಋತ್ವಿಜರು। **ಬ್ರುವಂತು**—(ಅಗ್ನಿಯನ್ನು) ಸ್ತುತಿಸಲಿ

॥ ಭಾವಾರ್ಥ ॥

ಜನ್ಮತಾಳಿದ ಎಲ್ಲರೂ (ಋತ್ವಿಜರು ಮೊದಲಾದವರು), (ಅರಣಿಗಳಿಂದ) ಉತ್ಪನ್ನನಾದ, (ಯುದ್ಧದಲ್ಲಿ) ಶತ್ರು ಧನವನ್ನು ಸಂಪಾದಿಸುವ, ಮತ್ತು ಶತ್ರುನಾಶಕನಾದ, ಅಗ್ನಿಯನ್ನು ಸ್ತುತಿಸಲಿ

English Translation

Let men praise Agni as soon as grenerated, the slayer of Vritra. and the winner of booty in many a battle

॥ ವಿಶೇಷವಿಷಯಗಳು ॥

ಅಗ್ನಿಮಂಥನಕಾಲದಲ್ಲಿ ಎಂದರೆ ಅರಣಿಗಳೆಂಬ ಎರಡು ಮರದ ತುಂಡುಗಳನ್ನು ಉಪಯೋಗಿಸಿ ಒಂದಕ್ಕೊಂದನ್ನು ಉಜ್ಜುವುದರಿಂದ ಯಜ್ಞದಲ್ಲಿ ಅಗ್ನಿಯನ್ನು ಉತ್ಪತ್ತಿಮಾಡುವ (ಕಡೆಯುವ) ಕಾಲದಲ್ಲಿ ಅಧ್ವರ್ಯುವು ಹೋತೃ

ವನ್ನುದ್ದೇಶಿಸಿ "**ಅಗ್ನಯೇ ಜಾತಾಯಾನುಬ್ರೂಹಿ**—ಅಗ್ನಿಯ ಉತ್ಪತ್ತಿಯನ್ನು ವರ್ಣಿಸುವ ಋಕ್ಕನ್ನು ಪಠಿಸು" ಎಂದು ಹೇಳುವಾಗ **ಉತ ಬ್ರುವಂತು** ಎಂಬ **ಈ** ಋಕ್ಕನ್ನು ಅನುವಚನೀಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಸ್ಯಾತಿರ್ವೈಶ್ವದೇವ್ಯಾಂ** ಎಂಬ ಖಂಡದಲ್ಲಿ—**ಶಿಷ್ಟೇನೋತ್ತರಾಮುತ ಬ್ರುವಂತು ಜಂತವಃ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ ೨-೧೬) ಮತ್ತು ಮರುದ್ದೇವತೆಗಳನ್ನುದ್ದೇಶಿಸಿ ಸಾಕಮೇಧವೆಂಬ ಇಷ್ಟಿಯಲ್ಲಿ ಪುರೋಡಾಶ ಹೋಮಮಾಡುವಾಗ **ಈ** ಋಕ್ಕನ್ನು ಪ್ರಥಮಾಜ್ಯಭಾಗದ ಪುರೋನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಮರುದ್ಭ್ಯಃ ಕ್ರೀಡಿಭ್ಯ ಉತ್ತರೋತ ಬ್ರುವಂತು ಜಂತವಃ** ಎಂಬ ಸೂತ್ರದಿಂದ ನಿರ್ದಿಷ್ಟವಾಗಿರುವುದು (ಆ ೨-೧೮)

ಉತ—ಇಲ್ಲಿ ಉತಶಬ್ದವು ಸಮುಚ್ಚಯಾರ್ಥದಲ್ಲಿ ಪ್ರಯುಕ್ತವಾಗಿದೆ **ಉತ** ಎಂದರೆ ಮತ್ತು ಎಂದರ್ಥವು

ಬ್ರುವಂತು ಜಂತವಃ—ಜಂತು ಶಬ್ದಕ್ಕೆ ಇಲ್ಲಿ **ಜಾತಾಃ**—ಹುಟ್ಟಿದ, ಉತ್ಪನ್ನರಾದ ಮನುಷ್ಯರು ಎಂದರೆ ಯಜ್ಞದಲ್ಲಿ ಭಾಗವಹಿಸುತ್ತಿರುವ ಋತ್ವಿಕ್ಕುಗಳು ಎಂದು ಭಾಷ್ಯಕಾರರು ಅರ್ಥಮಾಡಿದ್ದಾರೆ. **ಬ್ರುವಂತು ಜಂತವಃ** ಎಂದರೆ ಅಗ್ನಿಯ ಸ್ತುತಿರೂಪವಾದ ಮಂತ್ರಗಳನ್ನು ಹೇಳಲಿ, ಅಗ್ನಿಯನ್ನು ಸ್ತೋತ್ರಮಾಡಲಿ ಎಂದಭಿಪ್ರಾಯವು

ಉತ್ ಅಜನಿ—ಅರಣ್ಯೋಃ ಸಕಾಶಾದುತ್ಪನ್ನಃ । ಯಜ್ಞದಲ್ಲಿ ಅರಣಿಗಳಲ್ಲಿ ಮಂತ್ರಪುರಸ್ಸರವಾಗಿ ಉತ್ಪನ್ನನಾದವನು ಋತ್ವಿಕ್ಕುಗಳು ಅರಣಿಗಳಲ್ಲಿ ಅಗ್ನಿಯನ್ನು ಕಡೆದು ಉತ್ಪನ್ನಮಾಡಿದರು ಎಂದಭಿಪ್ರಾಯವು

ವೃತ್ರಹಾ—ವೃತ್ರಾಣಾಮಾವರಕಾಣಾಂ ಶತ್ರೂಣಾಂ ಹಂತಾ । ಯುದ್ಧಾಭಿಲಾಷಿಗಳಾಗಿ ಬಂದು ಮುತ್ತುವ ಶತ್ರುಗಳನ್ನು ಸಂಹಾರಮಾಡುವವನು. ಇಲ್ಲಿ **ವೃತ್ರ** ಶಬ್ದಕ್ಕೆ—ಯುದ್ಧಮಾಡುವುದಕ್ಕಾಗಿ ಬಂದು ಮುತ್ತುವ ಶತ್ರುಗಳು ಎಂದು ಭಾಷ್ಯಕಾರರು ಅರ್ಥಮಾಡಿರುವರು. ಕೆಲವು ಕಡೆ ವೃತ್ರವಧಾದಿರೂಪವಾದ ಇಂದ್ರನ ಗುಣಗಳನ್ನು ಅಗ್ನಿಯಲ್ಲಿ ಆರೋಪಣೆಮಾಡಿ ಅಗ್ನಿಯನ್ನು ಸ್ತುತಿಸಿರುವುದು. ಆದುದರಿಂದ ವೃತ್ರನನ್ನು ಸಂಹಾರಮಾಡಿದ ಎಂಬರ್ಥವನ್ನು ಹೇಳಬಹುದು ಆದರೆ ಇಲ್ಲಿ ಭಾಷ್ಯಕಾರರ ಹೇಳಿರುವ ತರ್ಥವೇ ಸಮಂಜಸವಾಗಿರುವುದು.

ಧನಂಜಯಃ ಶತ್ರುಧನಾನಾಂ ಜೇತಾ । ಶತ್ರುಗಳಲ್ಲಿರುವ ಧನವನ್ನು ಗೆಲ್ಲುವವನು. ಯುದ್ಧಮಾಡುವಾಗ ಶತ್ರುಗಳಿಗೆ ಪರಾಭವವನ್ನುಂಟುಮಾಡಿ ಅವರಲ್ಲಿರುವ ಧನವನ್ನು ಸ್ತೋತ್ರಮಾಡುವವರಿಗೆ ಕೊಡುವವನಾದುದರಿಂದ ಅಗ್ನಿಯನ್ನು ಧನಂಜಯ ಶಬ್ದದಿಂದ ಸ್ತುತಿಸಲಾಗಿರುವುದು. ಧನಂಜಯ ಶಬ್ದವನ್ನು ಇತರ ದೇವತೆಗಳ ಪರವಾಗಿಯೂ ಉಚ್ಚರಿಸಲಾಗಿರುವುದು

ಸ ಪವಸ್ವ ಧನಂಜಯ ಪ್ರಯಂತಾ ರಾಧಸೋ ಮಹಃ ।

(ಋ ಸಂ ೯ ೪೬ ೫)

ಧನಂಜಯಃ ಪವತೇ ಕೃತ್ಯೋ ರಸೋ ವಿಪ್ರಃ ಕವಿಃ ಕಾವ್ಯೇನಾ ಸ್ವರ್ಚನಾಃ ।

(ಋ ಸಂ ೯ ೪೬ ೫)

ಈ ಋಕ್ಕುಗಳಲ್ಲಿ ಧನಂಜಯ ಶಬ್ದವು ಸೋಮದೇವತೆಯ ಪರವಾಗಿರುವುದು.

ವಿದ್ಮಾ ಹಿ ತ್ವಾ ಧನಂಜಯಂ ವಾಜೇಷು ದಧೃಷಂ ಕವೇ ।

(ಋ ಸಂ ೩-೪೭-೬)

ವಿದ್ಮಾ ಹಿ ತ್ವಾ ಧನಂಜಯಮಿಂದ್ರ ದೃಳ್ಹಾ ಚಿದಾರುಜಂ ।

(ಋ ಸಂ ೮-೪೫-೧೩)

ಈ ಋಕ್ಕುಗಳಲ್ಲಿರುವ ಧನಂಜಯಶಬ್ದವು ಇಂದ್ರನ ಪರವಾಗಿರುವುದು

ತಮು ತ್ವಾ ಸಾಳ್ಹೋ ವೃಷಾ ಸಮೋಧೇ ದಸ್ಯುಹಂತಮಂ ।
ಧನಂಜಯಂ ರಣೇರಣೇ ॥

(ಋ ಸಂ ೬-೧೬-೧೫)

ಈ ಋಕ್ಕಿನಲ್ಲಿ ಧನಂಜಯಶಬ್ದವು ಅಗ್ನಿಯ ಪರವಾಗಿರುವುದು ಇವಲ್ಲದೆ ಪ್ರಸಕ್ತ ಋಕ್ಕಿನಲ್ಲಿರುವ ಪಾದವೇ ಪುನಃ ಪರಿತವಾಗಿರುವುದ. ಪ್ರಥಮಾವಿಭಕ್ತಿಗೆ ಬದಲಾಗಿ ದ್ವಿತೀಯಾವಿಭಕ್ತಿಯ ಪ್ರಯೋಗವಿರುವುದು. ಇಂದ್ರನ ಪರವಾದ ಉದಾಹರಣೆಗಳಲ್ಲಿಯೂ ಸಹ **ವಿದ್ಮಾ ಹಿ ತ್ವಾ ಧನಂಜಯಂ** ಎಂಬ ಪಾದವು ಪುನಃ ಪರಿತವಾಗಿರುವುದು. ಈ ಋಕ್ಕುಗಳಿಗೆ ಋಷಿಗಳು ಬೇರೆ ಬೇರೆಯಾಗಿದ್ದರೂ ಒಂದೇ ವಿಧವಾದ ವಾಕ್ಯಗಳನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಉಪಯೋಗಿಸಿರುವ ವಿಷಯವು ಗಮನಾರ್ಹವಾಗಿರುವುದು. ಧನಂಜಯಶಬ್ದದ ಪ್ರಯೋಗವು ಈ ಋಕ್ಕುಗಳಲ್ಲಲ್ಲದೆ ಋಗ್ವೇದದಲ್ಲಿ ಇನ್ನೆಲ್ಲಿಯೂ ಇರುವುದಿಲ್ಲ

ರಣೇರಣೇ—ರಣಂತಿ ದುಂದುಭಯೋಽಸ್ಮಿನ್ನಿತಿ ರಣಃ ಸಂಗ್ರಾಮಃ । ರಣಶಬ್ದಕ್ಕೆ ಶಬ್ದಮಾಡು, ಧ್ವನಿಮಾಡು ಎಂದರ್ಥವಿರುವುದು ಯುದ್ಧದಲ್ಲಿ ದುಂದುಭಿ, ನಗಾರಿ ಮೊದಲಾದ ನಿರ್ಘೋಷವಿರುವುದರಿಂದ ಅಂತಹ ಧ್ವನಿಯುಕ್ತವಾದ ಯುದ್ಧಕ್ಕೆ ರಣವೆಂದು ಹೆಸರು. **ರಣಃ ವಿವಾಕ್** ಮೊದಲಾದ ನಲವತ್ತಾರು ಸಂಗ್ರಾಮನಾಮಗಳ ಮಧ್ಯದಲ್ಲಿ **ರಣಃ** ಎಂಬ ಶಬ್ದವು ಪರಿತವಾಗಿರುವುದರಿಂದ ರಣಶಬ್ದಕ್ಕೆ ಯುದ್ಧವೆಂದು ಅರ್ಥವಿರುವುದು ಮತ್ತು ನಿರುಕ್ತಕಾರರು—

ಮರುತ್ವಾ೯ ಇಂದ್ರ ವೃಷಭೋ ರಣಾಯ ಪಿಬಾ ಸೋಮಮನುಷ್ವಧಂ ಮದಾಯ ।

(ಋ. ಸಂ ೩-೪೭-೧).

ಮಹೇ ಯತ್ತ್ವಾ ಪುರೂರವೋ ರಣಾಯಾವರ್ಧಯನ್ವಸ್ಯುಹತ್ಯಾಯ ದೇವಾಃ ।

(ಋ. ಸಂ ೧೦-೯೫-೭)

ಎಂಬ ಋಕ್ಕುಗಳನ್ನು ಉದಾಹರಣೆಯಾಗಿ ಕೊಟ್ಟು ಅವುಗಳಲ್ಲಿರುವ **ರಣಾಯ** ಎಂಬ ಶಬ್ದಕ್ಕೆ **ರಮಣೀಯಾಯ ಸಂಗ್ರಾಮಾಯ**—ರಮಣೀಯವಾದ ಯುದ್ಧಕ್ಕಾಗಿ ಎಂದು ಅರ್ಥವಿವರಣೆಮಾಡಿರುವರು (ನಿ. ೪-೮ ಮತ್ತು ೧೦-೪೭) ಮತ್ತು—

ಅಪೋ ಹಿ ಷ್ಮಾ ಮಯೋಭುವಸ್ತಾ ನ ಊರ್ಜೇ ದಧಾತನ ।
ಮಹೇ ರಣಾಯ ಚಕ್ಷಸೇ ॥

(ಋ. ಸಂ ೧೦-೯-೧)

ಎಂಬ ಋಕ್ಕಿನಲ್ಲಿರುವ **ರಣಾಯ** ಎಂಬ ಶಬ್ದಕ್ಕೆ **ರಮಣೀಯಾಯ** ಎಂದು ಅರ್ಥವಿವರಣೆಮಾಡಿ **ಚಕ್ಷಸೇ ದರ್ಶನಾಯ** ಎಂಬ ಪದಕ್ಕೆ ವಿಶೇಷಣವನ್ನಾಗಿ ಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ಬ್ರುವಂತು —ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಲೋಟ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ ಆದಕ್ಕೆ ಅಂತಾದೇಶ ಉತ್ವ **ಸಾರ್ವಧಾತುಕಮಪಿತ್** ಎಂಬುದರಿಂದ ಙಿತ್ವವಿರುವುದರಿಂದ ಧಾತುವಿಗೆ ಗುಣಬರುವುದಿಲ್ಲ. **ಅಚಿಶ್ನುಧಾತುಭ್ರುವಾಂ**—ಎಂಬುದರಿಂದ ಉವಙಾದೇಶ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಧನಂಜಯಃ -ಜಿ ಜಯೇ ಧಾತು **ಸಂಜ್ಞಾಯಾಂ ಭೃತೃವೃಜಿ**--(ಪಾ ಸೂ ೩-೨-೪೬) ಎಂಬುದರಿಂದ ಖಚ್ ಪ್ರತ್ಯಯ ಖಿತ್ ಪ್ರತ್ಯಯ ಪರದಲ್ಲಿರುವುದರಿಂದ **ಅರುರ್ದ್ವಿಷದಜಂತಸ್ಯ ಮುಮ್** (ಪಾ. ಸೂ. ೬-೩-೬೭) ಎಂಬುದರಿಂದ ಪೂರ್ವದಲ್ಲಿರುವ ಅಜಂತವಾದ ಧನ ಎಂಬುದಕ್ಕೆ ಮುಮಾಗಮ ಖಚ್ ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ ಅಯಾದೇಶ ಚಿತ್ತಾದುದರಿಂದ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ **ಅಂತೋದಾತ್ತಸ್ವರ** ಬರುತ್ತದೆ

ರಣೇ ರಣೇ—ರಣ ಶಬ್ದಾರ್ಥಕವಾದ ಧಾತು ರಣಂತಿ ದುಂದುಭಯೋಽಸ್ಮಿನ್ನಿತಿ ರಣಃ ಸಂಗ್ರಾಮಃ (ದುಂದುಭ್ಯಾದಿಗಳು ಶಬ್ದಮಾಡಲ್ಪಡುವುದರಿಂದ ಯುದ್ಧಕ್ಕೆ ಹೆಸರು) **ವಶಿರನ್ಯೋರುಪಸಂಖ್ಯಾನಂ** (ಪಾ ಸೂ ೩-೩-೫೮-೩) ಎಂಬ ವಚನದಿಂದ ಇದಕ್ಕೆ ಅಪ್ ಪ್ರತ್ಯಯ. ರಣ ಎಂದು ರೂಪವಾಗುತ್ತದೆ ವೀಪ್ಸಾ ತೋರುವುದರಿಂದ **ನಿತ್ಯವೀಪ್ಸಯೋಃ** (ಪಾ. ಸೂ ೮-೧-೪) ಎಂಬುದರಿಂದ ದ್ವಿರ್ವಚನ ಬರುತ್ತದೆ. **ತಸ್ಯ ಪರಮಾಮ್ರೇಡಿತಂ** ಎಂಬುದರಿಂದ ದ್ವಿರುಕ್ತಿ ಬಂದಾಗ ಪರಕ್ಕೆ **ಆಮ್ರೇಡಿತ** ಸಂಜ್ಞೆ ಬರುತ್ತದೆ. ಆಗ **ಅನುದಾತ್ತಂ ಚ** (ಪಾ ಸೂ ೮-೧-೩) ಎಂಬುದರಿಂದ ಪರಕ್ಕೆ ಅನುದಾತ್ತಸ್ವರ ಬರುತ್ತದೆ ॥ ೩ ॥

॥ ಸಂಹಿತಾಪಾಠಃ ॥

ಯಸ್ಯ॑ ದೂ॒ತೋ ಅಸಿ॒ ಕ್ಷಯೇ॑ ವೇಷಿ॑ ಹ॒ವ್ಯಾನಿ॑ ವೀ॒ತಯೇ॑ ।

ದ॒ಸ್ಮತ್ಕೃ॑ಣೋಷ್ಯ॒ಧ್ವರಂ ॥ ೪ ॥

॥ ಪದಪಾಠಃ ॥

ಯಸ್ಯ॑ । ದೂ॒ತಃ । ಅಸಿ॑ । ಕ್ಷಯೇ॑ । ವೇಷಿ॑ । ಹ॒ವ್ಯಾನಿ॑ । ವೀ॒ತಯೇ॑ ।

ದ॒ಸ್ಮತ್ । ಕೃ॒ಣೋ॒ಷಿ॑ । ಅ॒ಧ್ವರಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯಸ್ಯ ಯಜಮಾನಸ್ಯ ಕ್ಷಯೇ ದೇವಯಜನಲಕ್ಷಣೇ ಗೃಹೇ ದೇವಾನಾಂ ದೂತಸ್ತ್ವಮಸಿ ಭವಸಿ । ಯಸ್ಯ ಚ ಹವ್ಯಾನಿ ಚರುಪುರೋಡಾಶಾದೀನಿ ಹವೀಂಷಿ ವೀತಯೇ ದೇವಾನಾಂ ಭಕ್ಷಣಾಯ ವೇಷಿ ಗಮಯಸಿ । ಯಸ್ಯ ಚಾಧ್ವರಂ ಯಜ್ಞಂ ದಸ್ಮತ್ ಸರ್ವೈರ್ದರ್ಶನೀಯಂ ಕೃಣೋಷಿ ಕರೋಷಿ । ತಮಿತ್ಸುಹವ್ಯಮಿತ್ಯುತ್ತರಯಾ ಸಂಬಂಧಃ ॥ ವೇಷಿ । ವೀ ಗತ್ಯಾದಿಷು । ಅಂತರ್ಭಾವಿತಣ್ಯರ್ಥಾಲ್ಲಟ್ । ಅದಾದಿತ್ವಾಚ್ಛಪೋ ಲುಕ್ । ಸಾದಾದಿತ್ವಾನ್ನಿಘಾತಾಭಾವಃ । ದಸ್ಮತ್ । ದಸಿ ದಂಸನದರ್ಶನಯೋಃ । ಇಷಿಯುಧೀಂಧೀತ್ಯಾದಿನಾ ಮಕ್ । ದಸ್ಮಮಿತ್ಯತ್ರ ಮಕಾರಸ್ಯ ವರ್ಣವ್ಯಾಪತ್ತ್ಯಾ ತಕಾರಃ । ಕೃಣೋಷಿ । ಕೃವಿ ಹಿಂಸಾಕರಣಯೋಶ್ಚ । ಧಿನ್ವಿಕೃಣ್ವ್ಯೋರಚ್ಛೇತ್ಯುಪ್ರತ್ಯಯಃ । ತಕ್ಪಂನಿಯೋಗೇನ ವಕಾರಸ್ಯಾಕಾರಃ । ತಸ್ಯಾತೋ ಲೋಪೇ ಸತಿ ಸ್ಥಾನಿವದ್ಭಾವಾಲ್ಲಘೂಪಧಗುಣಾಭಾವಃ । ಯಸ್ಯೇತ್ಯನುಸಂಗಾನ್ನಿಘಾತಾಭಾವಃ ॥

॥ ಪ್ರತಿಪದಾರ್ಥ ॥

ಅಗ್ನೇ—ಅಗ್ನಿಯೇ । **ಯಸ್ಯ**—ಯಾವ (ಯಜಮಾನನ) । **ಕ್ಷಯೇ**—ಯಾಗಗೃಹದಲ್ಲಿ **ದೂತಃ ಅಸಿ**—(ನೀನು ದೇವತೆಗಳ) ದೂತನು ಆಗಿದ್ದೀಯೇ । **ಹವ್ಯಾನಿ**—(ದೇವತೆಗಳಿಗೆ ಅರ್ಪಿತವಾದ) ಚರುಪುರೋಡಾಶಾದಿಗಳನ್ನು । **ವೀತಯೇ**—(ದೇವತೆಗಳ) ಭಕ್ಷಣೆಗಾಗಿ । **ವೇಷಿ**—ಹೊರಡಿಸುತ್ತೀಯೇ (ತೆಗೆದುಕೊಂಡುಹೋಗಿ ಕೊಡುತ್ತೀಯೇ) । **ಅಧ್ವರಂ**—ಯಜ್ಞವನ್ನು । **ದಸ್ಮತ್**—(ಎಲ್ಲರಿಗೂ) ದರ್ಶನೀಯವಾಗಿ । **ಕೃಣೋಷಿ**—ಮಾಡುತ್ತೀಯೇ

" ಭಾವಾರ್ಥ "

ಯಾವ ಯಜಮಾನನ ಯಾಗಗೃಹದಲ್ಲಿ ನೀನು ದೇವತೆಗಳ ದೂತನಾಗಿರುವಿಯೋ (ಯಾವನನ್ನು) ಅರ್ಪಿಸಿದ ಹವಿರಾದಿಗಳನ್ನು ದೇವತೆಗಳಿಗೆ ಸೇರಿಸುತ್ತೀಯೋ ಮತ್ತು (ಯಾವನ) ಯಜ್ಞವನ್ನು ಎಲ್ಲರಿಂದಲೂ ಪ್ರೇಕ್ಷಣೀಯವನ್ನಾಗಿ ಮಾಡುತ್ತೀಯೋ (ಅಂಥಹ ನಿನ್ನನ್ನು ಒಳ್ಳೆಯ ಯಜ್ಞಕರ್ತನಾಗಿರುವನೆಂದು ಹೇಳುವರು)

English Translation

(The Sacrificer), in whose house you are the messenger of the Gods whose offering you convey for their food, and whose sacrifice you render acceptable

" ವಿಶೇಷನಿಷ್ಕರ್ಷೆಗಳು

ಯಸ್ಯ ದೂತೋ ಅಸಿ ಕ್ಷಯೇ—ಯಾವ ಯಜ್ಞಮಾಡುವ ಯಜಮಾನನ ಯಾಗಶಾಲೆಯಲ್ಲಿ ಪ್ರತಿನಿಧಿತನಾಗಿ ಅವನು ದೇವತೆಗಳನ್ನುದ್ದೇಶಿಸಿ ನಿನ್ನಲ್ಲಿ ಅರ್ಪಿಸುವ (ಹೋಮಮಾಡುವ) ಹವಿಸ್ಸು ಮೊದಲಾದವುಗಳನ್ನು ದೇವತೆಗಳಿಗೆ ತೆಗೆದುಕೊಂಡು ಹೋಗುವ ದೂತನಾಗಿರುವಿಯೋ ಎಂದಭಿಪ್ರಾಯವು

ಕ್ಷಯೇ—ದೇವಯಜನಲಕ್ಷಣೇ ಗೃಹೇ । ಕ್ಷಿ ನಿವಾಸಗತ್ಯೋಃ ಎಂಬ ಧಾತುವಿನಿಂದ ನಿಷ್ಪನ್ನವಾದ ಕ್ಷಯಶಬ್ದಕ್ಕೆ ವಾಸಗೃಹವೆಂದು ಅರ್ಥವು ಇಲ್ಲಿ ಕ್ಷಯೇ ಎಂದರೆ ಯಜಮಾನನು ಯಜ್ಞಮಾಡುವ ಯಾಗಶಾಲೆಯೆಂದಭಿಪ್ರಾಯವು

ವೀತಯೇ—**ವೀ ಗತ್ಯಾದಿಷು** । **ವೀತಯೇ ದೇವಾನಾಂ ಭಕ್ಷಣಾಯ** । ದೇವತೆಗಳು ಭಕ್ಷಿಸುವುದಕ್ಕಾಗಿ

ವೇಷಿ - **ವೀ ಗತ್ಯಾದಿಷು** । **ಗಮಯಸಿ** । ತೆಗೆದುಕೊಂಡು ಹೋಗುವೆಯೋ

ದಸ್ಮತ್—**ಸರ್ವೈರ್ದರ್ಶನೀಯಃ** । ಎಲ್ಲರಿಂದ ನೋಡಲರ್ಹನಾದ, ಸುಂದರನಾದ, ರಮಣೀಯನಾದ ಇತ್ಯಾದಿ

ಈ ಋಕ್ಕಿನಲ್ಲಿ— **ಯಸ್ಯ ದೂತೋ ಅಸಿ ಕ್ಷಯೇ**–ಯಾವ ಯಜಮಾನನ ಮನೆಯಲ್ಲಿರುವ ನೀನು ಅವನ ಪರವಾಗಿ ದೇವತೆಗಳಿಗೆ ದೂತನಾಗಿರುವೆಯೋ **ವೇಷಿ ಹವ್ಯಾನಿ ವೀತಯೇ**–ದೇವತೆಗಳ ಭಕ್ಷಣಾರ್ಥವಾಗಿ ಹವಿಸ್ಸನ್ನು ತೆಗೆದುಕೊಂಡು ಹೋಗುವೆಯೋ, **ದಸ್ಮತ್ಕೃಣೋಷ್ಯಧ್ವರಂ**–ಯಾವ ಯಜಮಾನನ ಯಜ್ಞವನ್ನು ದರ್ಶನೀಯವನ್ನಾಗಿ (ಸಕಲರೂ ಮೆಚ್ಚುವಂತೆ) ಮಾಡುವಿಯೋ ಎಂಬ ಪ್ರತ್ಯೇಕವಾದ ಮೂರು ಉಪವಾಕ್ಯಗಳಿರುವವು ಇವುಗಳೆಲ್ಲವೂ ಮುಂದಿನ ಋಕ್ಕಿನಲ್ಲಿರುವ **ಸುಬರ್ಹಿಷಂ**–ಶ್ರೇಷ್ಠನಾದ ಯಜ್ಞಕರ್ತನನ್ನಾಗಿ ಎಂಬ ಶಬ್ದಕ್ಕೆ ವಿಶೇಷಣರೂಪವಾಗಿರುವುದೆಂದು ಭಾಷ್ಯಕಾರರು ವಿವರಿಸಿರುವರು.

॥ ವ್ಯಾಕರಣಪ್ರಕ್ರಿಯಾ ॥

ಅಸಿ—ಅಸ ಭುವಿ ಧಾತು. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ತಾಸೇಸ್ಥ್ಯೇಲೋರ್ಲೋಪಃ** ಎಂಬುದರಿಂದ ಸಲೋಪ ಯಚ್ಛಬ್ದ ಸಂಬಂಧವಿರುವುದರಿಂದ ನಿಘಾತ ಪ್ರತಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ.

ವೇಷಿ—ವೀ ಗತ್ಯಾದಿಷು. ಧಾತು. ಪ್ರೇರಣಾವ್ಯಾಪಾರತೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಈ ಧಾತುವಿಗೆ **ಲಟ್** ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಇಕ್ಕಿಗೆ ಗುಣ **ಅದೇಶಪ್ರತ್ಯಯಯೋಃ** ಎಂಬುದರಿಂದ ಷತ್ವ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಸಿಪ್ ಪಿತ್ತಾದುದರಿಂದ ಅನುದಾತ್ತವಾಗುವುದರಿಂದ ಧಾತು ಸ್ವರ ಉಳಿಯುತ್ತದೆ

ದಸ್ಮತ್—ದಸು ದಂಸನದರ್ಶನಯೋಃ ಧಾತು. ಇದಕ್ಕೆ **ಇಷಿಯುಧೀಂಧಿ**—(ಉ ಸೂ. ೧-೧೪೬) ಎಂಬುದರಿಂದ **ಮುಕ್** ಪ್ರತ್ಯಯ ದಸ್ಮ ಎಂದು ರೂಪವಾಗುತ್ತದೆ. ಇದಕ್ಕೆ ದ್ವಿತೀಯಾ ಅಮ್, ಪರವಾದಾಗ **ಅನಿುಪೂರ್ವಃ** ಎಂಬುದರಿಂದ ಪೂರ್ವರೂಪ ದಸ್ಮಮ್ ಎಂದಿರುವಾಗ ಮಕಾರಕ್ಕೆ ವರ್ಣವ್ಯತ್ಯಯದಿಂದ ತಕಾರ ಬರುತ್ತದ ಮಕಾರೋತ್ತರಾಕಾರವು ಪ್ರತ್ಯಯಸ್ವರದಿಂದ ಉದಾತ್ತವಾದಾಗ ಅದಕ್ಕೆ ಏಕಾದೇಶ ಬಂದುದರಿಂದ **ವಿಕಾದೇಶಉದಾತ್ತೇನೋದಾತ್ತಃ** (ಪಾ ಸೂ ೮-೪-೫) ಎಂಬುದರಿಂದ ಉದಾತ್ತವಾಗುತ್ತದೆ

ಕೃಣೋಷಿ—ಕೃವಿ ಹಿಂಸಾಕರಣಯೋಶ್ಚ ಧಾತು ಇದಕ್ಕೆ ಲಟ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್ **ಧಿನ್ವಿಕೃಣ್ವ್ಯೋರಚಿ** (ಪಾ ಸೂ ೩-೧-೮೦) ಎಂಬುದರಿಂದ ಉ ಪ್ರತ್ಯಯ ತತ್ಸಂನಿಯೋಗದಿಂದ ಅಂತ್ಯನಕಾರಕ್ಕೆ ಅಕಾರಾದೇಶ **ಇದಿತೋನುಮ್ಧಾತೋಃ** ಎಂಬುದರಿಂದ ಧಾತುವಿಗೆ ನುಮಾಗಮ ಕೃಣ+ಉ+ಸಿ ಎಂದಿರುವಾಗ **ಅತೋ ಲೋಪಃ** ಎಂಬುದರಿಂದ ಉ ನಿಮಿತ್ತವಾಗಿ ಅಕಾರಲೋಪ **ಅಚಿಃ ಪರಸ್ಮಿನ್ ಪೂರ್ವವಿಧೌ** (ಪಾ. ಸೂ ೧-೧-೫೭) ಎಂಬುದರಿಂದ ಸ್ಥಾನಿವದ್ಭಾವ ಬರುವುದರಿಂದ ಉನಿಮಿತ್ತವಾಗಿ ಲಘೂಪಧಗುಣ ಬರುವುದಿಲ್ಲ ಷಕಾರದ ಪರದಲ್ಲಿ ನಕಾರ ಬಂದುದರಿಂದ ನಕಾರಕ್ಕೆ ಣತ್ವ. ಸಿಪ್ ನಿಮಿತ್ತವಾಗಿ ಉಕಾರಕ್ಕೆ ಗುಣ ಕೃಣೋಷಿ ಎಂದು ರೂಪವಾಗುತ್ತದೆ. ಯಸ್ಯ ಎಂಬುದಕ್ಕೆ ಇಲ್ಲಿಯೂ ಅನುಷಂಗ (ಸಂಬಂಧ)ವಿರುವುದರಿಂದ **ಯೆದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದೆ. ಆಗ ಉಪ್ರತ್ಯಯದ ಸ್ವರವು ಸತಿಶಿಷ್ಟವಾಗುವುದರಿಂದ ಮಧ್ಯೋದಾತ್ತವಾದ ಪದವಾಗುತ್ತದೆ ॥ ೪ ॥

॥ ಸಂಹಿತಾಪಾಠಃ ॥

ತಮಿ᳓ತ್ಸುಹವ್ಯ᳓ಮಂಗಿರಃ ಸುದೇ᳓ವಂ ಸ᳓ಹಸೋ ಯಹೋ ।
ಜನಾ᳓ ಆಹುಃ ಸುಬರ್ಹಿ᳓ಷಂ ॥ ೫ ॥

॥ ಪದಪಾಠಃ ॥

ತಂ । ಇತ್ । ಸು ೩ ಹವ್ಯಂ । ಅಂಗಿರಃ । ಸು ೩ ದೇವಂ । ಸಹಸಃ । ಯಹೋ ಇತಿ । ಜನಾಃ । ಆಹುಃ । ಸು ೩ ಬರ್ಹಿಷಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸಹಸೋ ಯಹೋ ಬಲಸ್ಯ ಪುತ್ರ ಆಂಗಿರೋ೩ಂಗನಾದಿಗುಣಯುಕ್ತಾಗ್ನೇ ಯೋ ಯಜಮಾನಃ ಪೂರ್ವಮುಕ್ತಸ್ತಮಿತ್ ತಮೇವ ಯಜಮಾನಂ ಸುಹವ್ಯಂ ಶೋಭನಹವಿಷ್ಕಂ ಸುದೇವಂ ಶೋಭನದೈವತಂ ಸುಬರ್ಹಿಷಂ । ಬರ್ಹಿರಿತಿ ಯಜ್ಞನಾಮ । ಶೋಭನಯಜ್ಞಂ ಚ ಜನಾಃ ಸರ್ವೇ ಮನುಷ್ಯಾ ಆಹುಃ । ಕಥಯಂತಿ ॥ ಸುಹವ್ಯಮಿತ್ಯಾದಿಷು ನಿಘ್ಸ್ವಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಸಹಸೋ ಯಹೋ । ಸುಜಾಮಂತ್ರಿತ ಇತಿ ಸರಾಂಗವದ್ಭಾವಾತ್ಪ್ಲಾ ೩ ಮಂತ್ರಿತಸಮುದಾಯಸ್ಯಾಷ್ಟ-ಮಿಕ್ರಮಾಮಂತ್ರಿತಾನುದಾತ್ತತ್ವಂ ॥

॥ ಪ್ರತಿಪದಾರ್ಥ

ಸಹಸೋ ಯಹಃ—ಬಲದ ಪುತ್ರನಾದ । **ಆಂಗಿರಃ**—ಎಲೈ ಅಂಗಿರಸನೇ (ಅಗ್ನಿಯೇ) । **ತಮಿತ್**—(ಹಿಂದೆ ಹೇಳಿದ) ಅವನನ್ನೇ (ಯಜಮಾನನನ್ನೇ) । **ಸುಹವ್ಯಂ**—ಶುಭವಾದ ಹವಿಸ್ಸುಳ್ಳವನೆಂದೂ । **ಸುದೈವಂ**—ಸುದೈವಿಯೆಂದೂ । **ಸುಬರ್ಹಿಷಂ**—ಮಂಗಳಕರವಾದ ಯಜ್ಞವುಳ್ಳವನೆಂದೂ । **ಜನಾಃ**—ಜನರು । **ಆಹುಃ**—ಹೇಳುತ್ತಾರೆ.

॥ ಭಾವಾರ್ಥ ॥

ಬಲದ ಪುತ್ರನಾದ ಅಂಗಿರಸ್ ಎಂಬ ಅಗ್ನಿಯೇ, (ಹಿಂದೆ ವರ್ಣಿಸಿದ) ಯಜಮಾನನನ್ನೇ, ಹವಿರ್ದಾನ, (ಪೂಜ್ಯವಾದ) ದೇವತೆ, ಮತ್ತು (ಕರ್ತವ್ಯವಾದ) ಯಜ್ಞ, ಇವುಗಳೆಲ್ಲದರಲ್ಲಿಯೂ ಅದೃಷ್ಟಶಾಲಿಯೆಂದು, ಜನರೆಲ್ಲರೂ ಹೇಳುತ್ತಾರೆ.

English Translation.

Him, Angiras, son of strength, men call fortunate in his sacrifice, his diety, his oblations.

॥ ವಿಶೇಷವಿಷಯಗಳು ॥

ತಮಿತ್---ತಮೇವ ಯಜಮಾನಂ—ಇಲ್ಲಿ ಇತ್ ಎಂಬ ಶಬ್ದಕ್ಕೆ ಏವ ಎಂದರ್ಥವು ತಮಿತ್---ಆ ಯಜಮಾನನನ್ನೇ ಎಂದರ್ಥವು

ಅಂಗಿರಃ---ಇಲ್ಲಿ ಅಂಗಿರಃ ಎಂಬ ಶಬ್ದವನ್ನು ಅಗ್ನಿಯನ್ನು ಸಂಬೋಧನೆಮಾಡುವುದಕ್ಕಾಗಿ ಉಪಯೋಗಿಸಿದೆ ಋಗ್ವೇದದಲ್ಲಿ ಅಗ್ನಿಯನ್ನು ಸಂಬೋಧನೆಮಾಡುವ ಅನೇಕ ಸಂದರ್ಭಗಳಲ್ಲಿ **ಅಂಗಿರಃ** ಎಂಬ ಶಬ್ದದ ಪ್ರಯೋಗವಿರುವುದು ಉದಾಹರಣೆಗಾಗಿ—

ಯದಂಗ ದಾಶುಷೇ ತ್ವಮಗ್ನೇ ಭದ್ರಂ ಕರಿಷ್ಯಸಿ । ತವೇತ್ತತ್ಸತ್ಯಮಂಗಿರಃ ॥

(ಋ. ಸಂ ೧-೧-೬)

ತ್ವಮಗ್ನೇ ಪ್ರಥಮೋ ಅಂಗಿರಾಋಷಿರ್ದೇವೋ ದೇವಾನಾಮಭವಃ ಶಿವಃ ಸಖಾ ।

(ಋ ಸಂ ೧-೩೧-೧)

ಮನುಷ್ವದಗ್ನೇ ಅಂಗಿರಸ್ವದಂಗಿರೋ ಯಯಾತಿವತ್ಸದನೇ ಪೂರ್ವವಚ್ಛುಚೇ ।

(ಋ. ಸಂ. ೧-೩೧-೧೭)

ಉತ ಬ್ರಹ್ಮಾಣ್ಯಂಗಿರೋ ಜುಷಸ್ವ ಸಂ ತೇ ಶಸ್ತಿರ್ದೇವವಾತಾ ಜರೇತ ।

(ಋ ಸಂ ೪-೩-೧೫)

ಅಸ್ಮಾಕಂ ಜೋಷ್ಯಧ್ವರಮಸ್ಮಾಕಂ ಯಜ್ಞಮಂಗಿರಃ ।

(ಋ ಸಂ ೪-೯-೭)

ಸ ನೋ ಜುಷಸ್ವ ಸಮಿಧಾನೋ ಅಂಗಿರೋ ದೇವೋ ಮರ್ತಸ್ಯ ಯಶಸಾ ಸುದೀತಿಭಿಃ ।

(ಋ ಸಂ. ೫-೮-೪)

ತ್ವಂ ನೋ ಅಗ್ನೇ ಅಂಗಿರಃ ಸ್ತುತಃ ಸ್ತವಾನ ಆ ಭರ ।

(ಋ ಸಂ ೫-೧೦-೭)

ಸ ಜಾಯಸೇ ಮಥ್ಯಮಾನಃ ಸಹೋ ಮಹತ್ತ್ವಾಮಾಹುಃ ಸಹಸಸ್ಪುತ್ರಮಂಗಿರಃ ।

(ಋ. ಸಂ ೫-೧೧-೬)

ಇತ್ಯಾದಿ ಅನೇಕ ಋಕ್ಕುಗಳಲ್ಲಿ ಅಗ್ನಿಯನ್ನು **ಅಂಗಿರಃ** ಎಂಬ ಶಬ್ದದಿಂದ ಸಂಬೋಧಿಸಲಾಗಿದೆ ಅಗ್ನಿಗೆ ಈ ಹೆಸರು ಬರಲು ಕಾರಣವೇನು? ಅಗ್ನಿಗೂ ಅಂಗಿರಾಋಷಿಗೂ ಇರುವ ಸಂಬಂಧವೇನು? ಇವೇ ಮೊದಲಾದ ವಿಷಯಗಳನ್ನು ಋ. ಸಂ. ಭಾಗ ೧ರಲ್ಲಿ 640-641ನೇ ಪೇಜುಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿರುವುದು.

ಸುಹವ್ಯಂ, ಸುದೇವಂ--ಈ ಶಬ್ದಗಳು ತಂ ಎಂಬ ಯಜಮಾನನ್ನು ಸೂಚಿಸುವ ಶಬ್ದಕ್ಕೆ ವಿಶೇಷಣವಾಗಿರುವವು. ದೇವತೆಗಳಿಗೆ ಅರ್ಪಿಸುವುದಕ್ಕಾಗಿ ಉತ್ತಮವಾದ ಹವಿಸ್ಸನ್ನು ಸಿದ್ಧಪಡಿಸಿಟ್ಟುಕೊಂಡಿರುವ, ಒಳ್ಳೆಯ ದೇವತೆಯನ್ನು ಆರಾಧಿಸಬೇಕೆಂದಿರುವ ಎಂದು ಈ ಶಬ್ದಗಳ ಅರ್ಥವು

ಸಹಸೋ ಯಹೋ – ಓಜಃ ಪ್ರಾಜಃ ಮೊದಲಾದ ಇಪ್ಪತ್ತೆಂಟು ಬಲನಾಮಗಳ ಮಧ್ಯದಲ್ಲಿ ಸಹಸ್ ಶಬ್ದವು ಪರಿತವಾಗಿರುವುದರಿಂದ **ಸಹಃ** ಎಂದರೆ ಬಲವು ಎಂದರ್ಥವು (ನಿ ೩-೯) **ತುಕ್ ತೋಕಂ** ಮೊದಲಾದ ಹದಿನೈದು ಅಪತ್ಯನಾಮಗಳಲ್ಲಿ **ಯಹುಃ** ಎಂಬ ಶಬ್ದವು ಪರಿತವಾಗಿರುವುದರಿಂದ **ಯಹು** ಶಬ್ದಕ್ಕೆ ಪುತ್ರನೆಂದು ಅರ್ಥವು. (ನಿ ೩-೨) **ಸಹಸೋ ಯಹೋ** ಎಂದರೆ ಬಲದ ಪುತ್ರನೇ ಎಂದರೆ ಬಲಪ್ರಯೋಗದಿಂದ (ಅರಣಿಯಲ್ಲಿ ಬಲಪ್ರಯೋಗಮಾಡಿ ಕಡೆಯುವುದರಿಂದ ಉತ್ಪನ್ನನಾದ) ಪುತ್ರನೇ ಎಂದು ಅಗ್ನಿಯನ್ನು ಸಂಬೋಧನೆಮಾಡಲಾಗಿರುವುದು. ಕೆಲವುಕಡೆ ಇಂದ್ರನನ್ನು ಈ ಶಬ್ದಗಳಿಂದ ಸ್ತುತಿಸಲಾಗಿರುವುದು **ಸಹಸೋ ಯಹುಃ** ಎಂಬ ಶಬ್ದಗಳಲ್ಲದೆ ಇದೇ ಅರ್ಥವನ್ನೇ ಹೇಳುವ **ಸಹಸಃ ಸೂನುಃ, ಸಹಸಸ್ಪುತ್ರಃ** ಎಂಬ ಶಬ್ದಗಳ ಪ್ರಯೋಗವೂ ಅನೇಕ ಋಕ್ಕುಗಳಲ್ಲಿರುವುದು. ಉದಾಹರಣೆಗಾಗಿ ಕೆಲವು ಋಕ್ಕುಗಳನ್ನು ಇಲ್ಲಿ ಕೊಡುತ್ತೇವೆ—

ಅಗ್ನಿಂ ಹೋತಾರಂ ಮನ್ಯೇ ದಾಸ್ವಂತಂ ವಸುಂ ಸೂನುಂ ಸಹಸೋ ಜಾತವೇದಸಂ ಯಸ್ಯ ನ ಜಾತವೇದಸಂ ।

(ಋ. ಸಂ ೧-೧೮-೭-೧)

ದ್ಯುಕ್ಷೈನ್ನಃ ಸರ್ಪಿರಾಸುತಿಃ ಪ್ರತ್ನೋ ಹೋತಾ ವರೇಣ್ಯಃ ।
ಸಹಸಸ್ಪುತ್ರೋ ಅದ್ಭುತಃ ।

(ಋ ಸಂ ೩-೭-೬)

ಅಗ್ನಿಂ ಸೂನುಂ ಸನಶ್ರುತಂ ಸಹಸೋ ಜಾತವೇದಸಂ ।

(ಋ. ಸಂ ೩-೧೧-೪)

ವಿದ್ಯುದ್ರಥಃ ಸಹಸಸ್ಪುತ್ರೋ ಅಗ್ನಿಃ ಶೋಚಿಷ್ಕೇಶಃ ಪೃಥಿವ್ಯಾಂ ಪಾಜೋ ಅಶ್ರೇತ್ ।

(ಋ ಸಂ ೩-೧೪-೧)

ಅಗ್ನೇ ದ್ಯುಮ್ನೇನ ಜಾಗೃವೇ ಸಹಸಃ ಸೂನವಾಹುತ ।

(ಋ ಸಂ ೩-೨೪-೩).

ಅಸ್ಮಾಕಮಗ್ನೇ ಅಧ್ವರಂ ಜುಷಸ್ವ ಸಹಸಃ ಸೂನೋ ತ್ರಿಷಧಸ್ಥ ಹವ್ಯಂ ।

(ಋ ಸಂ ೫-೪-೮)

ಹುವೇ ವಃ ಸೂನುಂ ಸಹಸೋ ಯುವಾನಮದ್ರೋಘವಾಚಂ ಮತಿಭಿರ್ಯವಿಷ್ಠಂ ।

(ಯಜು ಸಂ. ೬-೫-೧)

ಇತ್ಯಾದಿ ಅನೇಕ ಮಂತ್ರಗಳಲ್ಲಿ **ಸಹಸಃ ಸೂನು, ಸಹಸಸ್ಪುತ್ರ** ಎಂಬ ಶಬ್ದಗಳು ಅಗ್ನಿಯ ಪರವಾಗಿ ಪ್ರಯೋಗಿಸಲ್ಪಟ್ಟಿವೆ

ಜನಾ ಆಹುಃ ಸುಬರ್ಹಿಷಂ—ಇಲ್ಲಿ **ಬರ್ಹಿಃ** ಎಂದರೆ ಯಜ್ಞವೆಂದು ಭಾಷ್ಯಕಾರರು ಅರ್ಥಮಾಡಿರುವರು. **ಜನಾ ಆಹುಃ ಸುಬರ್ಹಿಷಂ** ಎಂಬ ವಾಕ್ಯಕ್ಕೆ ಯಜಮಾನನು ಶ್ರೀಮಂತನಾದ ಯಜ್ಞಕರ್ತನೆಂದು ಜನರು ಹೇಳುವರು. ಎಂದರೆ **ಈ ವಿಷಯವು** ಪ್ರಸಿದ್ಧವಾಗಿರುವುದು ಎಂದಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ಸುಹವ್ಯಂ—ಶೋಭನಂ ಹವ್ಯಂ ಯಸ್ಯ ಸುಹವ್ಯಃ—ಹೀಗೆಯೇ ಸುದೇವಮ್, ಸುಬರ್ಹಿಷಮ್, ಎಂಬಲ್ಲಿಯೂ ಬಹುವ್ರೀಹಿ ಸಮಾಸ. ಈ ಮೂರು ಸ್ಥಳಗಳಲ್ಲಿಯೂ **ನಞ್ ಸುಭ್ಯಾಮ್** (ಪಾ. ಸೂ ೬-೩-೧೭೩) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ

ಆಂಗಿರಃ—ಸಂಬುದ್ಧಿ ಏಕವಚನಾಂತರೂಪ. **ಆಮಂತ್ರಿತಸ್ಯ ಚ** (ಪಾ ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಸಹಸೋ ಯಹೋ—ಯಹೋ ಎಂಬುದು ಆಮಂತ್ರಿತ. ಇದಕ್ಕೆ ಪೂರ್ವದಲ್ಲಿ **ಸಹಸಃ** ಎಂದು ಷಷ್ಠ್ಯಂತವಿರುವುದರಿಂದ **ಸುಬಾಮಂತ್ರಿತೇ ಪರಾಂಗವತ್ ಸ್ವರೇ** (ಪಾ. ಸೂ. ೬-೧-೨) ಎಂಬುದರಿಂದ ಪರಾಂಗವದ್ಭಾವವಿರುವುದರಿಂದ ಸಂಪೂರ್ಣ ಸಮುದಾಯಕ್ಕೆ **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ

ಆಹುಃ—ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು ಇದಕ್ಕೆ ಲಟ್ ಪ್ರಥಮಪುರುಷ ಬಹುವಚನ ಪರವಾದಾಗ **ಬ್ರುವಃ ಪಂಚಾನಾಮಾದಿತ ಆಹೋ ಬ್ರುವಃ** (ಪಾ. ಸೂ. ೩-೪-೮೪) ಎಂಬುದರಿಂದ ಝಿಗೆ ಉಸಾದೇಶ ಧಾತುವಿಗೆ ಆಹಾದೇಶ. **ಉಸ್ಯಪದಾಂತಾತ್** ಎಂಬುದರಿಂದ ಪರರೂಪ. ಅತಿಙಂತದ ಪರವಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ. ॥ ೫ ॥

॥ ಸಂಹಿತಾಪಾಠಃ ॥

ಆ ಚ ವಹಾಸಿ ತಾಁ ಇಹ ದೇವಾಁ ಉಪ ಪ್ರಶಸ್ತಯೇ ।
ಹವ್ಯಾ ಸುಶ್ಚಂದ್ರ ವೀತಯೇ ॥ ೬ ॥

॥ ಪದಪಾಠಃ ॥

ಆ । ಚ । ವಹಾಸಿ । ತಾನ್ । ಇಹ । ದೇವಾನ್ । ಉಪ । ಪ್ರ ಽ ಶಸ್ತಯೇ ।
ಹವ್ಯಾ । ಸು ಽ ಚಂದ್ರ । ವೀತಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸುಶ್ಚಂದ್ರ ಶೋಭನಾಹ್ಲಾದನಾಗ್ನೇ ತಾನ್ದೇವಾನಿಹಾಸ್ಮಿನ್ಮರ್ಮಣ್ಯಸಾಸ್ಮತ್ಸಮೀಪಂ ಪ್ರಶಸ್ತಯೇ ಸ್ತುತಯೇ ಆ ವಹಾಸಿ ಚ । ಆವಹ ಸ್ಯಾಪಯೇ ಚ । ಆಗತೇಭ್ಯಸ್ತೇಭ್ಯೋ ಹವ್ಯಾ ಹವ್ಯಾನಿ ಚರುಪುರೋಡಾಶಾದೀನಿ ಹವೀಂಷಿ ವೀತಯೇ ಭಕ್ಷಣಾಯ ಪ್ರಾಪಯೇತ್ಯರ್ಥಃ ॥ ವಹಾಸಿ ವಹ ಪ್ರಾಪಣೇ । ಲೇಟ್ಯಾಡಾಗಮಃ । ಪ್ರಶಸ್ತಯೇ । ಶಸ್ಸು ಸ್ತುತೌ । ಭಾವೇ ಕ್ತಿನ್ । ತಿತುತ್ರೇತೀಟ್ಸೆತಿಸೇಧಃ । ಅನಿದಿತಾಮಿತಿ ನಲೋಪಃ । ತಾದೌ ಚೇತಿ ಗತೇಃ ಪ್ರಕೃತಿಸ್ವರತ್ವಂ । ಸುಶ್ಚಂದ್ರ । ಹ್ರಸ್ವಾಚ್ಚಂದ್ರೋತ್ತರ-ಪದೇ ಮಂತ್ರ ಇತಿ ಸುಟ್ ॥

॥ ಪ್ರತಿಪದಾರ್ಥ ॥

ಸುಶ್ಚಂದ್ರ—ಅಹ್ಲಾದಕನಾದ ಎಲೈ ಅಗ್ನಿಯೇ । **ತಾ ದೇವಾ**—(ಆಯಾತರಾದ) ಆ ದೇವತೆಗಳನ್ನು । **ಇಹ**- ಈ ಕರ್ಮದಲ್ಲಿ । **ಪ್ರಶಸ್ತಯೇ**—ಸ್ತುತಿಸುವುದಕ್ಕೂ । **ಹವ್ಯಾ**—ಹುತವಾದ ಚರ್ವಾದಿಗಳನ್ನು । **ವೀತಯೇ ಚ**—ಭಕ್ಷಿಸುವುದಕ್ಕೂ । **ಉಪ**—(ನಮ್ಮ) ಸಮೀಪಕ್ಕೆ । **ಆ ವಹಾಸಿ**—ಕರೆದುಕೊಂಡು ಬರುತ್ತೀಯೇ.

॥ ಭಾವಾರ್ಥ ॥

ಅಹ್ಲಾದಕರನಾದ ಎಲೈ ಅಗ್ನಿಯೇ, ನಮ್ಮ ಸ್ತುತಿ ಮತ್ತು ನಾವು ಅರ್ಪಿಸುವ ಹವಿರಾದಿಗಳು, ಇವುಗಳನ್ನು ಸ್ವೀಕರಿಸಲು, ಆ ದೇವತೆಗಳನ್ನು ನಮ್ಮ ಸಮೀಪಕ್ಕೆ ಕರೆದುಕೊಂಡು ಬಾ,

English Translation.

Bring hither, radiant Agni, the Gods to (receive) our praise and our oblations for their food.

॥ ವಿಶೇಷವಿಷಯಗಳು ॥

ಪ್ರಶಸ್ತಯೇ—ಅಸ್ಮಾಭಿಃ ಕೃತಂ ಸ್ತೋತ್ರಂ ಶ್ರೋತುಂ। ನಾವು ಮಾಡುವ ಸ್ತೋತ್ರಗಳನ್ನು ಕೇಳುವುದಕ್ಕಾಗಿ,

ಸುಶ್ಚಂದ್ರ—ಶೋಭನಾಹ್ಲಾದನಾಗ್ನೇ। ಅತ್ಯಂತ ಆಹ್ಲಾದಕನಾದ ಅಗ್ನಿಯೇ. ನಿರುಕ್ತಕಾರರು—**ಚಂದಕ್ಷ್ಚಂದತೇಃ ಕಾಂತಿಕರ್ಮಣಃ**—ಎಂದರೆ ಕಾಂತಿಕರ್ಮವನ್ನು ಸೂಚಿಸುವ ಚಂದ್ರತಿ ಧಾತುವಿನಿಂದ ಚಂದ್ರ ಶಬ್ದವು ನಿಷ್ಪನ್ನವಾಗಿದೆಯೆಂದು ಹೇಳಿ (ನಿ. ೧೧-೫) **ಚಂದ್ರೆ** ಎಂದರೆ ಕಾಂತಿಯುಕ್ತನಾದವನು, ಆಹ್ಲಾದಕರನು ಎಂದು ಅರ್ಥವಿವರಣೆ ಮಾಡಿರುವರು.

ವೀತಯೇ—ಭಕ್ಷಣಾರ್ಥಂ। ಹವಿಸ್ಸನ್ನು ಭಕ್ಷಿಸುವುದಕ್ಕಾಗಿ,

ಚೆ— **ಚೆ** ಶಬ್ದವು ಸಮುಚ್ಚಯಾರ್ಥದಲ್ಲಿ ಪ್ರಯುಕ್ತನಾಗಿರುವುದು **ಪ್ರಶಸ್ತಯೇ** ಮತ್ತು **ವೀತಯೇ** ಎಂಬ ಶಬ್ದಗಳನ್ನು ಇದು ಸೇರಿಸುವುದು

ಉಸ—ಸಮೀಪ ನಾವು ಯಜ್ಞಮಾಡುತ್ತಿರುವ ಪ್ರದೇಶದ ಸಮೀಪಕ್ಕೆ, ನಮ್ಮ ಸಮೀಪಕ್ಕೆ, ಎಂದಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ವಹಾಸಿ— ವಹ ಪ್ರಾಪಣೇ ಧಾತು. ಲೇಟ್‌ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ **ಲೇಟೋಽಾಟೌ** (ಪಾ ಸೂ ೩-೪-೯೪) ಎಂಬುದರಿಂದ **ಅದಕ್ಕೆ** ಆಡಾಗಮ. ಶಪ್ ವಿಕರಣ. ವಹಾಸಿ ಎಂದು ರೂಪವಾಗುತ್ತದೆ. **ಚ ವಾಯೋಗೇ ಪ್ರಥಮಾ** (ಪಾ. ಸೂ ೮-೧-೫೯) ಎಂಬುದರಿಂದ ನಿಘಾತ ಪ್ರತಿಷೇಧ ಬರುತ್ತದೆ ವಿಕರಣ, ಆಗಮ, ಪ್ರತ್ಯಯಗಳು ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ

ಪ್ರಶಸ್ತಯೇ—ಶಂಸು ಸ್ತುತೌ ಧಾತು. ಇದಕ್ಕೆ **ಸ್ತ್ರಿಯಾಂಕ್ತಿನ್** (ಪಾ. ಸೂ ೩-೩-೯೪) ಎಂಬುದರಿಂದ ಭಾವಾರ್ಥದಲ್ಲಿ ಕ್ತಿನ್ ಪ್ರತ್ಯಯ **ತಿತುತ್ರತಥಸಿ**—(ಪಾ. ಸೂ ೭-೨-೯) ಎಂಬುದರಿಂದ ಇಡಾಗಮ ನಿಷೇಧ ಬರುತ್ತದೆ. ಪ್ರತ್ಯಯ ಕಿತ್ತಾದುದುರಿಂದ **ಅನಿದಿತಾಂಹಲ ಉಪಧಾಯಾಃ**—ಎಂಬುದರಿಂದ ಧಾತುವಿನ ಉಪಧಾನಕಾರಕ್ಕೆ ಲೋಪ ಶಸ್ತ ಎಂದು ರೂಪವಾಗುತ್ತದೆ ಪ್ರ ಎಂಬುದರಿಂದನೆ ಸವರ್ಣಾಸವಾದಾಗ **ತಾದೌಚ ನಿತಿ**(ಪಾ ಸೂ. ೬-೭-೫೦) ಎಂಬುದರಿಂದ ಗತಿಗೆ ಪ್ರಕೃತಿಸ್ವರ ಬರುತ್ತದೆ. ಚತುರ್ಥೀ ಏಕವಚನಾಂತರೂಪ.

ಹವ್ಯಾ—ಹೂಯತೇ ಇತಿ ಹವ್ಯಮ್ ನಪುಂಸಕದಲ್ಲಿ ಶಿ ಆದೇಶ ಬಂದು ರೂಪವಾದಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪಬರುತ್ತದೆ.

ಸುಶ್ಚಂದ್ರ—ಸುಷ್ಠು ಚಂದಯತಿ ಇತಿ ಸುಶ್ಚಂದ್ರಃ **ಹ್ರಸ್ವಾಚ್ಚಂದ್ರೋತ್ತರಪದೇ** (ಪಾ ಸೂ ೬-೧-೧೫೧) ಎಂಬುದರಿಂದ ಚಂದ್ರಶಬ್ದದ ಪೂರ್ವದಲ್ಲಿರುವ ಸು ಎಂಬಲ್ಲಿರುವ ಹ್ರಸ್ವಕ್ಕೆ ಸುಡಾಗಮ ಸಂಬುದ್ಧಿಯಲ್ಲಿ ಆಮಂತ್ರಿತ ಸಂಜ್ಞೆ ಇರುವುದರಿಂದ **ಆಮಂತ್ರಿತಸ್ಯ ಚ** (ಪಾ. ಸೂ ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೬ ॥

ಸಂಹಿತಾಪಾಠಃ ॥

ನ ಯೋರುಪಬ್ದಿರಶ್ವ್ಯಃ ಶೃಣ್ವೇ ರಥಸ್ಯ ಕಚ್ಚನ ।
ಯದಗ್ನೇ ಯಾಸಿ ದೂತ್ಯಂ ॥ ೭ ॥

॥ ಪದಪಾಠಃ ॥

ನ । ಯೋಃ । ಉಪಬ್ದಿಃ । ಅಶ್ವ್ಯಃ । ಶೃಣ್ವೇ । ರಥಸ್ಯ । ಕತ್ । ಚನ ।
ಯತ್ । ಅಗ್ನೇ । ಯಾಸಿ । ದೂತ್ಯಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯದ್ಯದಾ ದೂತ್ಯಂ ದೇವಾನಾಂ ದೂತತ್ವಂ ಯಾಸಿ ಪ್ರಾಪ್ನೋಷಿ ಕಚ್ಚನ ಕದಾಚನ ತದಾನೀಂ ಸರ್ವದಾಪಿ ಯೋರ್ಗಚ್ಛತಸ್ತವ ರಥಸ್ಯಾಶ್ವ್ಯೋಽಶ್ವೈರುತ್ಪಾದಿತ ಉಪಬ್ದಿಃ ಶ್ರವಣಾರ್ಹಃ ಶಬ್ದೋ ನ ಶೃಣ್ವೇ । ನ ಶ್ರೂಯತೇ । ರಥಸ್ಯ ಶೀಘ್ರಗಮನೇನಾಸ್ಮಾಭಿಃ ಶಬ್ದೋ ನೋಪಲಭ್ಯತ ಇತ್ಯರ್ಥಃ ॥ ಯೋಃ । ಯಾ ಪ್ರಾಪಣ ಇತ್ಯಸ್ಮಾತ್ ಯೋ ದ್ವೇ ಚ । ಉ. ೧-೨೨ । ಇತ್ಯೌಣಾದಿಕಃ ಕುಪ್ರತ್ಯಯಃ । ಬಹುಲವಚನಾದ್ವಿರ್ಭಾವಾಭಾವಃ ಉಪಬ್ದಿರಿತ್ಯೇತತ್ ಶ್ರೋತುಮರ್ಹಸ್ಯ ಶಬ್ದಸ್ಯಾಖ್ಯಾ । ತಥಾ ಚ ತೈತ್ತಿರೀಯಾಣಾಂ ಪ್ರಾತಿಶಾಖ್ಯಂ ಸಶಬ್ದಮುಪಬ್ದಿಮತ್ । ತೈ. ಪ್ರಾ ೨೩-೯ । ಇತಿ । ಶೃಣ್ವೇ । ಶ್ರು ಶ್ರವಣೇ । ಕರ್ಮಣಿ ಲಟಿ ಶ್ರುವಃ ಶೃ ಚೇತಿ ವ್ಯತ್ಯಯೇನ ಶ್ನುಃ ಶೃಭಾವಶ್ಚ । ಲೋಪಸ್ತ ಆತ್ಮನೇಪದೇಷ್ವಿತಿ ತಲೋಪಃ । ಹುಶ್ನುವೋಃ ಸಾರ್ವಧಾತುಕ ಇತಿ ಯಣಾದೇಶಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ಯತ್**—ಯಾವಾಗ । **ದೂತ್ಯಂ**—(ದೇವತೆಗಳ) ದೂತತ್ವವನ್ನು । **ಯಾಸಿ**—ಹೊಂದುತ್ತಿಯೋ । **ಕಚ್ಚನ**—ಆಗ । **ಯೋಃ**—ಹೋಗುತ್ತಿರುವ (ನಿನ್ನ) । **ರಥಸ್ಯ**—ರಥದ । **ಅಶ್ವ್ಯಃ**—ಅಶ್ವಸಂಬಂಧವಾದ (ಅವುಗಳಿಂದ ಉತ್ಪನ್ನವಾದ) । **ಉಪಬ್ದಿಃ**—ಶ್ರವಣಾರ್ಹವಾದ ಶಬ್ದವು । **ನ ಶೃಣ್ವೇ**—ಕೇಳಿಸುವುದಿಲ್ಲ

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ದೇವತೆಗಳ ದೂತತ್ವವನ್ನು ವಹಿಸಿ ಹೋಗುವಾಗ, (ವೇಗವಾಗಿ) ಹೋಗುತ್ತಿರುವ (ನಿನ್ನ) ರಥದ ಅಶ್ವಗಳ ಶಬ್ದವೂ ಕೇಳಿಸುವುದಿಲ್ಲ

English Translation

Whenever you go, Agni, on a mission of the gods, the neighing of the horses of your (swift), moving chariot, however audible, is not heard,

॥ ವಿಶೇಷವಿಷಯಗಳು ॥

ಯೋಃ— ಯಾ ಪ್ರಾಪಣೇ । ಷಷ್ಠೀ ಏಕವಚನ ಹೋಗುತ್ತಿರುವ ನಿನ್ನ ಎಂಬರ್ಥವು

ಉಪಬ್ದಿಃ—ಶ್ರವಣಾರ್ಹಃ ಶಬ್ದಃ । ಕಿವಿಗಳಿಂದ ಕೇಳಲು ಸಾಧ್ಯವಾದ ಶಬ್ದವು **ಶ್ಲೋಕಃ ಧಾರಾ** ಮೊದಲಾದ ಏನತ್ತೇಳು ವಾಙ್ಮಾಮಗಳ ಮಧ್ಯದಲ್ಲಿ **ಉಪಬ್ದಿಃ** ಎಂಬ ಶಬ್ದವು ಪಠಿತವಾಗಿರುವುದರಿಂದ ಉಪಬ್ದಿ ಯೆಂದರೆ ಶಬ್ದವು ಎಂದರ್ಥವು (ನಿ ೬–೨೩).

ಅಶ್ವ್ಯಃ—ಅಶ್ವೈರುತ್ಪಾದಿತಃ । ರಥದ ಅಶ್ವಗಳಿಂದ ಮಾಡಲ್ಪಡುವ ಹೇಷಾರವಾದಿ ಶಬ್ದಗಳು ಅಥವಾ ಇಲ್ಲಿ **ರಥಸ್ಯ** ಎಂಬ ಶಬ್ದವಿರುವುದರಿಂದ ರಥವು ಚಲಿಸುತ್ತಿರುವಾಗ ಘರ್ಷಣಾದಿಗಳಿಂದ ಆಗುವ ಶಬ್ದವು ಈ ಶಬ್ದವು **ಉಪಬ್ದಿ** ಎಂಬ ಶಬ್ದಕ್ಕೆ ವಿಶೇಷಣವಾಗಿರುವುದು.

ಕಚ್ಚನ—ಕದಾಚನ, ತದಾನೀಂ ಸರ್ವದಾಪಿ । ಒಂದೊಂದು ಕಾಲದಲ್ಲಿ ಎಂದರೆ ಯಾವ ಯಾವ ಕಾಲಗಳಲ್ಲಿ ನೀನು ದೂತತ್ವವನ್ನು ವಹಿಸಿ ದೇವತೆಗಳ ಬಳಿಗೆ ಹೋಗುತ್ತೀಯೋ ಅಂತಹ ಕಾಲಗಳಲ್ಲೆಲ್ಲಾ ಎಂದಭಿಪ್ರಾಯವು

ನ ಶೃಣ್ವೇ—ಕೇಳಿಸುವುದಿಲ್ಲ ಎಂದರೆ ರಥವು ಅತ್ಯಂತ ವೇಗವಾಗಿ ಚಲಿಸುವುದರಿಂದ, ಅಶ್ವಗಳ ಹೇಷಾರವವಾಗಲಿ, ರಥಚಕ್ರಗಳ ಘರ್ಷಣಶಬ್ದವಾಗಲಿ ಕೇಳಲವಕಾಶವಿರುವುದಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ಯೋಃ—ಯಾ ಪ್ರಾಪಣೇ ಧಾತು ಇದಕ್ಕೆ **ಯೋದ್ವೇಚ** (ಉ ಸೂ ೧-೨೧) ಎಂಬುದರಿಂದ ಟೆಣಾದಿಕವಾದ ಕು ಪ್ರತ್ಯಯ ದ್ವೇ ಚ ಎಂದು ದ್ವಿತ್ವ ವಿಧಾನಮಾಡಿದರೂ ಬಹುಲವಚನದಿಂದ ಇಲ್ಲಿ ದ್ವಿತ್ವ ಒರುವುದಿಲ್ಲ. ಪ್ರತ್ಯಯ ಕಿತ್ತಾದುದರಿಂದ **ಆತೋಲೋಪಇಟಿ ಚ** (ಪಾ ಸೂ. ೬-೪-೬೪) **ಎಂಬುದರಿಂದ** ಧಾತುವಿನ ಆಕಾರಕ್ಕೆ ಲೋಪ ಯು ಶಬ್ದವಾಗುತ್ತದೆ. ಪ್ರತ್ಯಯಸ್ವರ ಬರುತ್ತದೆ. ಷಷ್ಠೀಏಕವಚನಾಂತರೂಪ.

ಉಪಬ್ದಿಃ— ಉಪಬ್ದ ಎಂಬುದು ಕೇಳುವುದಕ್ಕೆ ಯೋಗ್ಯವಾಗಿರುವ ಶಬ್ದದ ಹೆಸರು. ಹೀಗೆಂದೇ ತೈತ್ತಿರೀಯರ ಪ್ರಾತಿಶಾಖ್ಯೆಯಲ್ಲಿ ವಿವೃತವಾಗಿದೆ. **ಸಶಬ್ದಮುಪಬ್ದಿಮತ್** (ತೈ. ಪ್ರಾ ೨೩-೯) ಇತಿ ಅವ್ಯುತ್ಪನ್ನವಾದ ಪ್ರಾತಿಪದಕವೆಂದಾಗುತ್ತದೆ

ಶೃಣ್ವೇ—ಶ್ರು ಶ್ರವಣೇ ಧಾತು ಕರ್ಮಣಿಯಲ್ಲಿ ಲಟ್ ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ ಯದ್ಯಪಿ **ಸಾರ್ವಧಾತುಕೇ ಯಕ್** ಎಂಬುದರಿಂದ ಯಕ್ ಪ್ರಾಪ್ತವಾಗುತ್ತದೆ ಆದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ **ಶ್ರುವಃ ಶೃ ಚ** (ಪಾ ಸೂ ೩-೧-೭೪) ಎಂಬುದರಿಂದ ಶ್ನು ವಿಕರಣವೂ ಧಾತುವಿಗೆ ಶೃ ಭಾವವೂ ಬರುತ್ತವೆ. ಶೃಣುತೇ ಎಂದಿರುವಾಗ **ಲೋಪಸ್ತಆತ್ಮನೇಪದೇಷು** (ಪಾ ಸೂ. ೭-೧-೪೧) ಎಂಬುದರಿಂದ ಪ್ರತ್ಯಯದ ತಕಾರಕ್ಕೆ ಲೋಪ ಆಗ **ಹುಶ್ನುವೋಃಸಾರ್ವಧಾತುಕೇ** (ಪಾ ಸೂ. ೬-೪-೮೭) ಎಂಬುದರಿಂದ ಉವಙಿಗೆ ಅಪವಾದವಾಗಿ ಯಣಾದೇಶ ಪಾದಾದಿಯಲ್ಲಿ ಬಂದುದರಿಂದ ನಿಘಾತಸ್ವರ ಬರುವುದಿಲ್ಲ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಯಾಸಿ—ಯಾ ಪ್ರಾಪಣೇ ಧಾತು ಅದಾದಿ. ಲಟ್‌ಮಧ್ಯಮಪುರುಷ ಏಕವಚನರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಸಿಪ್ ಶಿತ್ತಾದುದರಿಂದ ಅನುದಾತ್ತ ಧಾತುಸ್ವರ ಉಳಿಯುತ್ತದೆ. ॥ ೬ ॥

॥ ಸಂಹಿತಾಪಾಠಃ ॥

ತ್ವೋತೋ ವಾಜ್ಯಹ್ರಯೋಽಭಿ ಪೂರ್ವಸ್ಮಾದಪರಃ ।

ಪ್ರ ದಾಶ್ವಾ ಅಗ್ನೇ ಅಸ್ಥಾತ್ ॥ ೮ ॥

॥ ಪದಪಾಠಃ ॥

ತ್ವಾ ऽ ಊತಃ । ವಾಜೀ । ಅಹ್ರಯಃ । ಅಭಿ । ಪೂರ್ವಸ್ಮಾತ್ । ಅಪರಃ ।
ಪ್ರ । ದಾಶ್ವಾನ್ । ಅಗ್ನೇ । ಅಸ್ಥಾತ್ ॥ ೮ ॥

॥ ಸಾಯಣಭಾಷ್ಯಂ ॥

ಯಃ ಪುರುಷಃ ಪೂರ್ವಸ್ಮಾತ್ ಸ್ವಸ್ಮಾದಧಿಕಾರಾದಪರೋ ನಿಕೃಷ್ಟೋ ಭವತಿ ಹೇ ಅಗ್ನೇ ಸ ಇದಾನೀಂ ದಾಶ್ವಾನ್ ತುಭ್ಯಂ ಹವೀಂಷಿ ದಾತಾ ಸನ್ ತ್ವೋತಸ್ತ್ವಯೋತೋ ರಕ್ಷಿತೋ ವಾಜ್ಯನ್ನವಾನ್ ಅಹ್ರಯೋ ಲಜ್ಜಾರಹಿತಃ ಏವಂಭೂತಃ ಸನ್ ಅಭಿ ಸ್ರಾಸ್ಥಾತ್ । ಐಶ್ವರ್ಯಮಭಿಪ್ರಾಪ್ಯ ಪ್ರತಿತಿಷ್ಠತಿ । ಸರ್ವೋತ್ಕೃಷ್ಟೋ ಭವತೀತ್ಯರ್ಥಃ ॥ ಅಹ್ರಯಃ । ಹ್ರೀ ಲಜ್ಜಾಯಾಂ । ಜಿಹ್ರೀತೀತಿ ಹ್ರಯಃ । ನ ಹ್ರಯೋ ऽಹ್ರಯಃ । ಅವ್ಯಯಪೂರ್ವಪದಪ್ರಕೃತಿಸ್ವರತ್ವಂ । ದಾಶ್ವಾನ್ । ದಾಶೃ ದಾನೇ । ದಾಶ್ವಾನ್ ಸಾಹ್ವಾನಿತಿ ಕ್ವಸುಪ್ರತ್ಯಯಾಂತೋ ನಿಪಾತಿತಃ ॥

॥ ಪ್ರತಿಪದಾರ್ಥ ॥

ಹೇ ಅಗ್ನೇ—ಎಲೈ ಅಗ್ನಿಯೇ । **ಪೂರ್ವಸ್ಮಾತ್**—ತನ್ನ ಅಧಿಕಾರದಿಂದ (ಯಾವನು) । **ಅಪರಃ**—ನಿಕೃಷ್ಟನಾಗಿದ್ದನೋ (ಅವನು ಈಗ) । **ದಾಶ್ವಾನ್**—(ನಿನಗೆ ಹವಿರಾದಿಗಳನ್ನು) ಕೊಟ್ಟವನಾಗಿ । **ತ್ವೋತಃ**—(ನಿನ್ನಿಂದ) ರಕ್ಷಿತನಾಗಿಯೂ । **ವಾಜೀ**—ಅನ್ನವುಳ್ಳವನಾಗಿಯೂ । **ಅಹ್ರಯಃ**—ಲಜ್ಜಾರಹಿತನಾಗಿಯೂ । **ಅಭಿ ಪ್ರ ಅಸ್ಥಾತ್**—(ಐಶ್ವರ್ಯವನ್ನು) ಹೊಂದಿ ಪ್ರತಿಷ್ಠಿತನಾಗಿರುತ್ತಾನೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ತನ್ನ ಅಧಿಕಾರದಿಂದ (ಚ್ಯುತನಾದ) ನಿಕೃಷ್ಟನಾದ ಮನುಷ್ಯನು, ಈಗ ನಿನ್ನನ್ನು ಹವಿರಾದಿಗಳಿಂದ ಪೂಜಿಸಿದ ಬಳಿಕ ನಿನ್ನಿಂದ ರಕ್ಷಿತನಾಗಿಯೂ, ಲಜ್ಜಾದಿರಹಿತನಾಗಿಯೂ, ಅನ್ನಯುಕ್ತನಾಗಿಯೂ, ಪ್ರತಿಷ್ಠಿತನಾಗಿರುತ್ತಾನೆ

English Translation.

He who was formerly subject to a superior, having been protected, Agni, by you now stands in your presence as an offerer (of oblations) without bashfulness and supplied with food.

॥ ವಿಶೇಷವಿಷಯಗಳು ॥

ತ್ವೋತಃ- ಕ್ವಯಾ ಊತೋ ರಕ್ಷಿತಃ । ನಿನ್ನಿಂದ ರಕ್ಷಿಸಲ್ಪಟ್ಟವನಾಗಿ, ನಿನ್ನ ರಕ್ಷಣೆಯನ್ನು ಪಡೆದನಂತರ.

ಅಪರಃ—ಪರಃ ಎಂದರೆ ಶ್ರೇಷ್ಠ, ಉತ್ತಮ, ಅಪರ ಎಂದರೆ ಶ್ರೇಷ್ಠನಲ್ಲದವನು, ಸ್ವತಂತ್ರನಲ್ಲದವನು, ಇನ್ನೊಬ್ಬರ ಅಧೀನದಲ್ಲಿರುವವನು ಎಂದಭಿಪ್ರಾಯವು

ವಾಜೀ - ಅಂಧಃ, ವಾಜಃ ಮೊದಲಾದ ಇಪ್ಪತ್ತೆಂಟು ಅನ್ನನಾಮಗಳ ಮಧ್ಯದಲ್ಲಿ ವಾಜಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ ೩-೭) ವಾಜವೆಂದರೆ ಅನ್ನವು ವಾಜಃ ಅಸ್ಯಾಸ್ತೀತಿ ವಾಜೀ-ಅನ್ನವುಳ್ಳವನಿಗೆ ವಾಜೀ ಎಂದು ಹೆಸರು ಅಗ್ನಿಯ ಅನುಗ್ರಹದಿಂದ ಅನ್ನವನ್ನು ಪಡೆದಿರುವನೆಂದಭಿಪ್ರಾಯವು

ಅಹ್ರಯಃ—**ಹ್ರೀ ಲಜ್ಜಾಯಾಂ । ಜಿಹ್ರೇತೀತಿ ಹ್ರಯಃ । ನ ಹ್ರಯೋಽಹ್ರಯಃ ।** ನಾಚಿಕೆ ಅಥವಾ ಅಸಮಾನವಾಗುವುದೆಂಬ ಶಂಕೆಯಿಂದ ಭಯಪಡಬೇಕಾಗಿಲ್ಲದವನು ಒಬ್ಬರ ಅಧೀನದಲ್ಲಿರುವ ಪುರುಷನು ಅವನ ಆಜ್ಞೆಗೆ ಒಳಪಟ್ಟು ನಡೆಯಬೇಕಾಗಿರುವುದರಿಂದ ಅನೇಕ ವೇಳೆ ಅಸಮಾನವು ಸಂಭವಿಸುವುದುಂಟು. ಅಗ್ನಿಯ ಅನುಗ್ರಹದಿಂದ ಅನ್ನಾದಿದ್ರವ್ಯಗಳನ್ನು ಪಡೆದು ಸ್ವತಂತ್ರನಾಗಿರುವಾಗ ಯಾವ ವಿಧವಾದ ಲಜ್ಜೆಯೇ ಆಗಲಿ, ಭಯವಾಗಲಿ ಅವನಿಗಿರುವುದಿಲ್ಲ ಎಂದಭಿಪ್ರಾಯವು

ದಾಶ್ವಾನ್—**ಹವೀಂಷಿ ದಾತಾ ।** ಅಗ್ನಿಗೆ ಹವಿಸ್ಸನ್ನರ್ಪಿಸುವವನು ಹವಿಸ್ಸನ್ನರ್ಪಿಸುವುದಕ್ಕೆ ಮುಂಚೆ ಆ ಪುರುಷನು ಪರಾಧೀನನಾಗಿದ್ದು ಅನ್ನಾದಿಗಳಿಗೆ ಕೊರತೆಯುಂಟಾಗಿ ಕಷ್ಟಪಡುತ್ತಿದ್ದರೂ ಅಗ್ನಿಗೆ ಹವಿಸ್ಸನ್ನು ಅರ್ಪಿಸಿದನಂತರ ಅಗ್ನಿಯ ಅನುಗ್ರಹದಿಂದ **ಆ** ಪುರುಷನಿಗೆ ಅನ್ನಾದಿ ದ್ರವ್ಯಗಳು ಲಭಿಸಿ ಯಾವ ಲಜ್ಜಾಭಯಗಳೂ ಇಲ್ಲದೆ ನಿರ್ಭೀತನಾಗಿ ಜನರಲ್ಲಿ ಶ್ರೇಷ್ಠತೆಯನ್ನು ಪಡೆದು ಬಾಳುವನು ಎಂದು ಮುಟ್ಯಾಭಿಪ್ರಾಯವು

ವ್ಯಾಕರಣಪ್ರಕ್ರಿಯಾ ।

ವಾಜೀ—ವಾಜಮಸ್ಯಾಸ್ತೀತಿ ವಾಜೀ **ಅತಇನಿಠನೌ** (ಪಾ ಸೂ ೫-೨-೧೧೫) ಎಂಬುದರಿಂದ ಸ್ವತಂತ್ರಾರ್ಥದಲ್ಲಿ ಇನಿ ಪ್ರತ್ಯಯ ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ

ಅಹ್ರಯಃ—**ಹ್ರೀ ಲಜ್ಜಾಯಾಂ** ಧಾತು. ಜಿಹ್ರೇತಿ ಇತಿ ಹ್ರಯಃ ಸಜಾದಿಯಲ್ಲಿ ಸೇರಿರುವುದರಿಂದ ಲಿಟ್ ಪ್ರತ್ಯಯ ತನ್ನಿಮಿತ್ತವಾಗಿ ಧಾತುವಿನ ಇಕಾರಕ್ಕೆ ಗುಣ ಆಯಾದೇಶ ನ ಹ್ರಯಃ, ಅಹ್ರಯಃ ನಞ್ತತ್ಪುರುಷ ಸಮಾಸ **ತತ್ಪುರುಷೇ ತುಲ್ಯಾರ್ಥ**—(ಪಾ ಸೂ ೬-೩-೨) ಎಂಬುದರಿಂದ ಅವ್ಯಯಸ್ಥಾನಪದಸ್ಥಕೃತಿಸ್ವರ ಬರುತ್ತದೆ

ದಾಶ್ವಾನ್ - ದಾಶೃ ದಾನೇ ಧಾತು. ಇದಕ್ಕೆ **ದಾಶ್ವಾನ್ ಸಾಹ್ವಾನ್**—(ಪಾ ಸೂ ೬-೧-೧೨) ಎಂಬುದರಿಂದ ಕ್ವಸುಪ್ರತ್ಯಯ ಬಂದು ನಿಪಾತಿತವಾಗಿದ ದಾಶ್ವಸ್ ಶಬ್ದವಾಗುತ್ತದೆ ಇದಕ್ಕೆ ಸು ಪರವಾದಾಗ **ಅತ್ವಸಂತಸ್ಯ**—ಸೂತ್ರದಿಂದ ಉಪಧಾದೀರ್ಘ ಉಗಿತ್ತಾದುದರಿಂದ ನುಮಾಗವು **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ. ಸಂಯೋಗಾಂತಲೋಪದಿಂದ ಸಕಾರಲೋಪ ದಾಶ್ವಾನ್+ಅಗ್ನೇ ಎಂದಿರುವಾಗ ನಕಾರಕ್ಕೆ ಅಟ್ ಪರವಾದುದರಿಂದ **ದೀರ್ಘಾದಟಿ ಸಮಾನಪಾದೇ** (ಪಾ. ಸೂ ೮-೩-೯) ಎಂಬುದರಿಂದ ನಕಾರಕ್ಕೆ ರುತ್ವ **ಆತೋಟಿ ನಿತ್ಯಮ್** (ಪಾ ಸೂ. ೮-೩-೩) ಎಂಬುದರಿಂದ ಪೂರ್ವದ ಆಕಾರಕ್ಕೆ ನಿತ್ಯವಾಗಿ ಅನುನಾಸಿಕತ್ವ.

ಅಸ್ಥಾತ್—ಷ್ಠಾ ಗತಿನಿವೃತ್ತೌ ಧಾತು ಇದಕ್ಕೆ ಛಾಂದಸವಾದ ಲುಙಿನಲ್ಲಿ ಪ್ರಥಮಪುರುಷದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ ಚ್ಲಿಗೆ ಪ್ರಾಪ್ತವಾದ ಸಿಚ್ಚಿಗೆ **ಗಾತಿಸ್ಥಾಘುಪಾ**-(ಪಾ. ಸೂ. ೨-೪-೭೭) ಎಂಬುದರಿಂದ ಲುಕ್. ಅತಿಙಂತದ ಪರದಲ್ಲಿರುವುದರಿಂದ **ತಿಜ್ಞಿತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ- ॥ ೪ ॥

॥ ಸಂಹಿತಾಪಾಠಃ ॥

ಉತ ದ್ಯುಮತ್ಸುವೀರ್ಯಂ ಬೃಹದ್ಅಗ್ನೇ ವಿವಾಸಸಿ ।
ದೇವೇಭ್ಯೋ ದೇವ ದಾಶುಷೇ ॥ ೯ ॥

॥ ಪದಪಾಠಃ ॥

ಉತ । ದ್ಯುಽಮತ್ । ಸುಽವೀರ್ಯಂ । ಬೃಹತ್ । ಅಗ್ನೇ । ವಿವಾಸಸಿ ।
ದೇವೇಭ್ಯಃ । ದೇವ । ದಾಶುಷೇ ॥ ೯ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಹೇ ದೇವ ದ್ಯೋತಮಾನಾಗ್ನೇ ದೇವೇಭ್ಯೋ ದಾಶುಷೇ ಚರುಪುರೋಡಾಶಾದೀನಿ ಹವೀಂಷಿ ದತ್ತವತೇ ತಸ್ಮೈ ಯಜಮಾನಾಯ ಬೃಹತ್ಪ್ರಭೂತಂ ಧನಂ ವಿವಾಸಸಿ । ಗಮಯಿತುಮಿಚ್ಛಸಿ । ಪ್ರಾಪಯಸೀತಿ ಯಾವತ್ । ಕೀದೃಶಂ । ದ್ಯುಮದತಿಶಯೇನ ದೀಪ್ತಂ ಸುವೀರ್ಯಂ ಶೋಭನ-ವೀರ್ಯೋಪೇತಂ ॥ ಸುವೀರ್ಯಂ । ವೀರವೀರ್ಯೌ ಚೇತ್ಯುತ್ತರಪದಾದ್ಯುದಾತ್ತತ್ವಂ । ವಿವಾಸಸಿ । ವಾ ಗತಿಗಂಧನಯೋಃ । ಸನಿ ದ್ವಿರ್ಭಾವೇ ಸನ್ಯತ ಇತೀತ್ವಂ । ದಾಶುಷೇ । ಚತುರ್ಥ್ಯೇಕವಚನೇ ವಸೋಃ ಸಂಪ್ರಸಾರಣಮಿತಿ ಸಂಪ್ರಸಾರಣಂ । ಶಾಸಿವಸಿಘಸೀನಾಂ ಚೇತಿ ಷತ್ವಂ ॥

॥ ಪ್ರತಿಪದಾರ್ಥ ॥

ಉತ—ಮತ್ತು । **ದೇವ**—ದೇದೀಪ್ಯಮಾನನಾದ । **ಅಗ್ನೇ**—ಎಲೈ ಅಗ್ನಿಯೇ । **ದೇವೇಭ್ಯಃ**—ದೇವತೆಗಳಿಗೆ । **ದಾಶುಷೇ**—(ಪುರೋಡಾಶಾದಿಗಳನ್ನು) ಕೊಡುವ (ಯಜಮಾನನಿಗೆ) । **ದ್ಯುಮತ್**—ದೀಪ್ತವಾದ । **ಸುವೀರ್ಯಂ**—ಒಳ್ಳೆಯ ವೀರ್ಯದಾಯಕವಾದ । **ಬೃಹತ್**—ಹೆಚ್ಚಾದ (ಧನವನ್ನು) । **ವಿವಾಸಸಿ**—ಕೊಡಲು ಇಚ್ಛಿಸುತ್ತೀಯೆ.

॥ ಭಾವಾರ್ಥ ॥

ದೇದೀಪ್ಯಮಾನನಾದ ಎಲೈ ಅಗ್ನಿಯೇ, ದೇವತೆಗಳಿಗೆ ಪುರೋಡಾಶಾದಿಗಳನ್ನು ಕೊಡುವ ಯಜಮಾನನಿಗೆ, ಪ್ರಕಾಶಮಾನವಾದ, ಮತ್ತು ವೀರ್ಯದಾಯಕವಾದ, ಧನವನ್ನು, ಹೆಚ್ಚಾಗಿ ಅನುಗ್ರಹಿಸು

English Translation

Verily, divine Agni, you are desirous of bestowing upon the offerer (of oblations) to the Gods, ample (wealth) brilliant, and giving vigour.

॥ ವಿಶೇಷವಿಷಯಗಳು ।

ದ್ಯುಮತ್—**ಅತಿಶಯೇನ ದೀಪ್ತಂ** । ಅತ್ಯಂತಪ್ರಕಾಶಮಾನವಾದ, ಇಲ್ಲಿ ಪ್ರಕಾಶಮಾನವೆಂದರೆ ಅತ್ಯಂತ ಶ್ರೇಷ್ಠವಾದ, ಉತ್ತಮವಾದ, ಉಪಯೋಗಕರವಾದ ಎಂದು ಮೊದಲಾದ ಅರ್ಥಗಳನ್ನು ಹೇಳಬಹುದು

ಸುವೀರ್ಯಂ—**ಶೋಭನವೀರ್ಯೋಪೇತಂ**—ಉತ್ತಮವಾದ ಸಾಮರ್ಥ್ಯ ಅಥವಾ ಪರಾಕ್ರಮವನ್ನು, ಅಥವಾ ಪರಾಕ್ರಮಿಗಳಾದ ವೀರರಿಂದ ಯುಕ್ತವಾದ ಎಂದರ್ಥವು

ಬೃಹತ್—ಈ ಶಬ್ದಕ್ಕೆ ಹೆಚ್ಚಾಗಿ ಅಥವಾ ದೊಡ್ಡದಾದ ಎಂಬರ್ಥವಿದ್ದರೂ ಇಲ್ಲಿ ಭಾಷ್ಯಕಾರರು ಹೆಚ್ಚಾದ ಧನವನ್ನು ಎಂಬ ಅರ್ಥವನ್ನು ಹೇಳಿರುವರು

ವಿವಾಸಸಿ ವಾ ಗತಿಗಂಧನಯೋಃ । ಪ್ರಾಪಯಸಿ । ಯೊಂದುವಂತೆ ಮಾಡುತ್ತೀಯೆ ಎಂದರೆ ಕೊಡುತ್ತೀಯೆ ಎಂದಭಿಪ್ರಾಯವು

ವ್ಯಾಕರಣಪ್ರಕ್ರಿಯಾ


ಸುವೀರ್ಯಮ್- ಶೋಭನಂ ವೀರ್ಯಂ ಯಸ್ಯ ಸಃ ಸುವೀರ್ಯಃ ತಮ್ **ವೀರವೀರ್ಯೌ ಚ** (ಪಾ ಸೂ ೬-೩-೧೩೦) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ

ವಿವಾಸಸಿ—ವಾ ಗತಿಗಂಧನಯೋಃ ಧಾತು. ಇಚ್ಛಾತೋರುವಾಗ **ಧಾತೋಃಕರ್ಮಣಃ**—(ಪಾ ಸೂ. ೩-೧-೭) ಎಂಬುದರಿಂದ ಸನ್. **ಸನ್ಯಙೋಃ** (ಪಾ. ಸೂ. ೬-೧-೯) ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ **ಹ್ರಸ್ವಃ** ಸೂತ್ರದಿಂದ ಹ್ರಸ್ವ **ಸನ್ಯತಃ** (ಪಾ. ಸೂ ೭-೪-೭೯) ಎಂಬುದರಿಂದ ಇತ್ವ. **ಸನಾದ್ಯಂತಾ-ಧಾತವಃ** ಎಂಬುದರಿಂದ ವಿವಾಸ ಎಂಬುದು ಧಾತುಸಂಜ್ಞೆಯನ್ನು ಹೊಂದುತ್ತದೆ. ಇದರಮೇಲೆ ಲಿಟ್ ಮಧ್ಯಮ ಪುರುಷ ಏಕವಚನದಲ್ಲಿ ಸಿಪ್ ಶಪ್, **ಅತೋಗುಣೇ** ಸೂತ್ರದಿಂದ ಪರರೂಪ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ದಾಶುಷೇ—ದಾಶ್ವಸ್ ಶಬ್ದ, ಹಿಂದಿನಮಂತ್ರದಲ್ಲಿ ವ್ಯಾಖ್ಯಾತವಾಗಿದೆ ಚತುರ್ಥೀ ಏಕವಚನದಲ್ಲಿ **ವಸೋಃ ಸಂಪ್ರಸಾರಣಮ್** ಎಂಬುದರಿಂದ ಸಂಪ್ರಸಾರಣ. **ಸಂಪ್ರಸಾರಣಾಚ್ಚ** ಸೂತ್ರದಿಂದ ಪೂರ್ವರೂಪ **'ಶಾಸಿವಸಿ-ಘಸೀನಾಂಚ** (ಪಾ ಸೂ ೮-೩-೬೦) ಎಂಬುದರಿಂದ ವಸುವಿನ ಸಕಾರಕ್ಕೆ ಷತ್ವ ದಾಶುಷೇ ಎಂದು ರೂಪ ವಾಗುತ್ತದೆ ಪ್ರತ್ಯಯದ ಆದ್ಯುದಾತ್ತ ಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ

ದೇವ-- **ಅಮಂತ್ರಿತಸ್ಯ ಚ** (ಪಾ ಸೂ ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೯ ॥

ಎಪ್ಪತ್ತನಾಲ್ಕನೇ ಸೂಕ್ತವು ಸಮಾಪ್ತವು



ಎಪ್ಪತ್ತೈದನೆಯ ಸೂಕ್ತವು.

ಜುಷಸ್ವೇತಿ ಪಂಚರ್ಚಂ ದ್ವಿತೀಯಂ ಸೂಕ್ತಂ। ಅನುಕ್ರಾಂತಂ ಚ। ಜುಷಸ್ವ ಪಂಚೇತಿ। ಋಷ್ಯಾದ್ಯಾಃ ಪೂರ್ವವತ್ ॥ ಪ್ರಾತರನುವಾಕಾಶ್ವಿನಶಸ್ತ್ರಯೋಃ ಪೂರ್ವಸೂಕ್ತೇನ ಸಹೋಕ್ತಃ ಸೂಕ್ತ ವಿನಿಯೋಗಃ ॥ ಪಶೌ ಸ್ತೋಕಾನುವಚನ ಆದ್ಯಾ ವಿನಿಯುಕ್ತಾ। ಸೂತ್ರಿತಂ ಚ। ಪ್ರೇಷಿತಃ ಸ್ತೋಕೇಭ್ಯೋ೬ನ್ವಾಹ ಜುಷಸ್ವ ಸಪ್ರಥಸ್ತಮಂ। ಅ. ೩-೪। ಇತಿ ॥

ಅನುವಾದವು—**ಜುಷಸ್ವ** ಎಂಬ ಈ ಸೂಕ್ತವು ಹದಿಮೂರನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು ಅನುಕ್ರಮಣಿಕೆಯಲ್ಲಿ-**ಜುಷಸ್ವ ಪಂಚೇತಿ** ಎಂದು ಹೇಳಿರುವುದು ಈ ಸೂಕ್ತದ ಋಷಿದೇವತಾ ಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳ ಪರನಕ್ಯಾಗಿ ಹಿಂದಿನ ಸೂಕ್ತದ ಮತ್ತು ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಿರುವುದು. ಇದಲ್ಲದೆ ಪಶುಯಾಗ ದಲ್ಲಿ ಸ್ತೋಕಾನುವಚನಮಂತ್ರಪರನಕ್ಯಾಗಿ ಈ ಸೂಕ್ತದ ಮೊದಲನೆಯ ಋಕ್ಕನ್ನು ಉಪಯೋಗಿಸಬೇಕೆಂದು ಆಶ್ವ ಲಾಯನಶ್ರೌತಸೂತ್ರದ **ಪ್ರೇಷಿತಃ ಸ್ತೋಕೇಭ್ಯೋ೬ನ್ವಾಹ ಜುಷಸ್ವ ಸಪ್ರಥಸ್ತಮಂ** ಎಂಬ ಸೂತ್ರದಿಂದ ನಿರ್ದಿಷ್ಟವಾಗಿರುವುದು. (ಅ ೩-೪)

ಸೂಕ್ತ—೭೫.

॥ ಮಂಡಲ—೧ ॥ ಅನುವಾಕ—೧೩ ॥ ಸೂಕ್ತ—೭೫ ॥
॥ ಅಷ್ಟಕ—೧ ॥ ಅಧ್ಯಾಯ ೫ ॥ ವರ್ಗ—೨೩ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
॥ ಋಷಿಃ—ಗೋತಮೋ ರಾಹೂಗಣಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಜುಷಸ್ವ ಸಪ್ರಥಸ್ತಮಂ ವಚೋ ದೇವಪ್ಸರಸ್ತಮಂ ।
ಹವ್ಯಾ ಜುಹ್ವಾನ ಆಸನಿ ॥ ೧ ॥

॥ ಪದಪಾಠಃ ॥

ಜುಷಸ್ವ । ಸಪ್ರಥಃ ತಮಂ । ವಚಃ । ದೇವಪ್ಸರಃ ತಮಂ ।
ಹವ್ಯಾ । ಜುಹ್ವಾನಃ । ಆಸನಿ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸಪ್ರಥಸ್ತಮಮತಿಶಯೇನ ವಿಸ್ತೀರ್ಣಂ ವಚಃ ಸ್ತೋತ್ರಲಕ್ಷಣಮಸ್ಮದೀಯಂ ವಚನಂ ಜುಷಸ್ವ । ಸೇವಸ್ವ । ಕೀದೃಶಂ । ದೇವಪ್ಸರಸ್ತಮಂ ದೇವಾನಾಂ ಪ್ರೀಣಯಿತೃತಮಂ । ಕಿಂ ಕುರ್ವನ್ । ಆಸನಿ ತವಾಸ್ಯೇ ಹವ್ಯಾ ಹವ್ಯಾನಿ ಸ್ತೋಕಲಕ್ಷಣಾನಿ ಹವೀಂಷಿ ಜುಹ್ವಾನಃ ಪ್ರಕ್ಷಿಪನ್ । ಇಮಾನಿ ಸ್ತೋಕಲಕ್ಷಣಾನಿ ಹವೀಂಷಿ ವೃಥಾ ಮಾ ಭುವನ್ ತತ್ಸರ್ವಂ ತ್ವದೀಯೇನ ಮುಖೇನ ಸ್ವೀಕುರ್ವಿತ್ಯರ್ಥಃ॥ ದೇವಪ್ಸರಸ್ತಮಂ । ಸ್ಪೃ ಪ್ರೀತಿಬಲಯೋಃ । ದೇವಾನ್ ಸ್ಪೃಣೋತಿ ಪ್ರೀಣಯತೀತಿ ದೇವಪ್ಸರಾಃ । ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚೇತ್ಯಸುನ್ ಪೂರ್ವಪದಪ್ರಕೃತಿಸ್ವರತ್ವಂ ಚ। ಸಕಾರಪಕಾರಯೋಃ ಸ್ಥಾನವಿಪರ್ಯಯಃ । ಅತಿಶಯೇನ ದೇವಪ್ಸರಾ ದೇವಪ್ಸರಸ್ತಮಃ । ಜುಹ್ವಾನಃ । ಜುಹೋತೇರ್ವ್ಯತ್ಯಯೇನ ಶಾನಚ್ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ಆಸನಿ । ಪದ್ವನ್ನಿತ್ಯಾದಿನಾಸ್ಯಶಬ್ದಸ್ಯಾಸನ್ನಾದೇಶಃ ॥

॥ ಪ್ರತಿಪದಾರ್ಥ ॥

(ಅಗ್ನೇ—ಎಲೈ ಅಗ್ನಿಯೇ) । **ಸಪ್ರಥಸ್ತಮಂ**—ಹೆಚ್ಚಾಗಿ ವಿಸ್ತೀರ್ಣವಾದ । **ದೇವಪ್ಸರಸ್ತಮಂ**—ದೇವತೆಗಳಿಗೆ ಅತ್ಯಂತ ಪ್ರಿಯವಾದ । **ವಚಃ**—(ನಮ್ಮ ಸ್ತುತಿರೂಪವಾದ) ವಾಕ್ಯಗಳನ್ನು । **ಆಸನಿ**—ನಿನ್ನ ಬಾಯಿಯಲ್ಲಿ । **ಹವ್ಯಾ**—ಹವಿಸ್ಸುಗಳನ್ನು । **ಜುಹ್ವಾನಃ**—ಹಾಕಿಕೊಳ್ಳುತ್ತಾ । **ಜುಷಸ್ವ**—ಸೇವಿಸು (ಸ್ವೀಕರಿಸು) ॥

॥ ಭಾವಾರ್ಥ ॥

ನಾವು ಅರ್ಪಿಸುವ ಹವಿರಾದಿಗಳನ್ನು (ನಿನ್ನ) ಮುಖದಿಂದ ಸ್ವೀಕರಿಸುತ್ತಾ, ನಾವು ಮಾಡುವ, ದೇವತೆಗಳಿಗೆ ಅತ್ಯಂತಪ್ರಿಯವಾದ, ಸ್ತುತಿವಾಕ್ಯಗಳಿಗೆ ಕಿವಿಗೊಡು

English Translation

Attended to our most earnest address, propitiatory of the Gods accepting our oblations in your mouth

॥ ವಿಶೇಷವಿಷಯಗಳು ॥

ಸಪ್ರಥಸ್ತಮಂ ವಚಃ - ಅತಿ ವಿಸ್ತಾರವಾದ ವಾಕ್ಯ ಎಂದರೆ ದೊಡ್ಡದಾದ ಸ್ತೋತ್ರವನ್ನು

ದೇವಪ್ಸರಸ್ತಮಂ—ಸ್ಪೃ ಪ್ರೀತಿಬಲಯೋಃ । **ದೇವಾನ್ ಸ್ಪೃಣೋತೀತಿ ದೇವಪ್ಸರಾಃ** । ದೇವತೆಗಳಿಗೆ ಪ್ರೀತಿಪಾತ್ರವಾದ **ಅತಿಶಯೇನ ದೇವಪ್ಸರಾ ದೇವಪ್ಸರಸ್ತಮಃ** । ದೇವತೆಗಳಿಗೆ ಅತ್ಯಂತ ಪ್ರಿಯವಾದುದು ಎಂದರ್ಥವು

ಆಸನಿ—ಮುಖದಲ್ಲಿ, ಬಾಯಿಯಲ್ಲಿ ಆಸ್ಯಶಬ್ದದ ರೂಪಾಂತರವು

ಮುಖ್ಯಾಭಿಪ್ರಾಯವು—ಎಲೈ ಅಗ್ನಿಯೇ ನಾವು ಮಾಡುವ ದೊಡ್ಡದಾದ ಈ ಸ್ತೋತ್ರವನ್ನು ಕೇಳಿ, ನಾವು ಅರ್ಪಿಸುವ ಹವಿಸ್ಸುಗಳನ್ನು ಭಕ್ಷಿಸಿ ಅದರಿಂದ ಸಂತುಷ್ಟನಾಗು

॥ ವ್ಯಾಕರಣಪ್ರಕ್ರಿಯಾ ॥

ಜುಷಸ್ವ—ಜುಷೀ ಪ್ರೀತಿಸೇವನಯೋಃ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ **ಥಾಸಃ ಸೇ** (ಪಾ ಸೂ ೩-೪-೮೦) ಎಂಬುದರಿಂದ ಸೇ ಆದೇಶ ಬಂದಾಗ **ಸವಾಭ್ಯಾಂ ವಾಮೌ** (ಪಾ. ಸೂ ೩-೪-೮೧) ಸೂತ್ರದಿಂದ ಏಕಾರಕ್ಕೆ ವಕಾರಾದೇಶ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣ ಸ್ವರ (ಶ) ಉಳಿಯುತ್ತದೆ.

ದೇವಪ್ಸರಸ್ತಮಮ್—ಸ್ಪೃ ಪ್ರೀತಿಬಲಯೋಃ ಧಾತು ದೇವಾನ್ ಸ್ಪೃಣೋತಿ ಪ್ರೀಣಯತಿ ಇತಿ ದೇವಪ್ಸರಾಃ. **ಗತಿಕಾರಕಯೋರಪಿಪೂರ್ವಪದಪ್ರಕೃತಿಸ್ವರತ್ವಂ ಚ** (ಉ ಸೂ. ೪-೬೬೬) ಎಂಬುದರಿಂದ

ಕಾರಕಸ್ಪರ್ವದಲ್ಲಿರುವಾಗ ಈ ಧಾತುವಿಗೆ ಅಸುನ್ ಪ್ರತ್ಯಯ. ಕೃದುತ್ತರಪದಪ್ರಕೃತಿಸ್ವರಕ್ಕೆ ಬಾಧಕವಾಗಿ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕ್ಕೆಗೆ **ಸಾರ್ವಧಾತುಕಾರ್ಧಧಾತುಕಯೋಃ** (ವಾ ಸೂ. ೭-೩-೮೪) ಎಂಬುದರಿಂದ ಗುಣ. **ಉರಣ್ರಪರಃ** ಸೂತ್ರದಿಂದ ರಪರವಾಗಿ ಬರುತ್ತದೆ ಪ್ರತ್ಯಯದಿಂದ ಧಾತುವಿನಲ್ಲಿ ಸಕಾರ ಹಕಾರಗಳಿಗೆ ಸ್ಥಾನ ವಿಪರ್ಯಯ ಬಂದಿದೆ. ಅತಿಶಯೇನ ದೇವಸ್ಸರಾಃ ದೇವಪ್ಸರಸ್ತಮಃ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ ೫-೩-೫೫) ಎಂಬುದರಿಂದ ತಮಪ್ ಪ್ರತ್ಯಯ ಇದು ನಿತ್ವಾದುದರಿಂದ ಅನುದಾತ್ತವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ

ಹವ್ಯಾ -ಶೇಶ್ಛಂದಸಿ ಬಹುಲಮ್ (ಪಾ. ಸೂ. ೬-೧-೭೦) ಎಂಬುದರಿಂದ ನಸ್ಪೂರ್ವಪದದಲ್ಲಿ ತಿಗೆ ಲೋಪ

ಜುಹ್ವಾನಃ—ಹು ದಾನಾದನಯೋಃ ಧಾತು **ವ್ಯತ್ಯಯೋ ಬಹುಲಮ್** ಎಂಬುದರಿಂದ ಲಡರ್ಥದಲ್ಲಿ ಶಾನಚ್ ಪ್ರತ್ಯಯ **ಜುಹೋತ್ಯಾದಿಭ್ಯಃ ಶ್ಲುಃ** ಎಂಬುದರಿಂದ ಶ್ಲು ವಿಕರಣ. **ಶ್ಲೌ** ಸೂತ್ರದಿಂದ ಧಾತ್ವವಯವಕ್ಕೆ ದ್ವಿತ್ವ **ಕುಹೋಶ್ಚುಃ** ಸೂತ್ರದಿಂದ ಹಕಾರಕ್ಕೆ ಚುತ್ವ. ಜಸ್ತ್ವ. **ಹುಶ್ನುವೋಃ ಸಾರ್ವಧಾತುಕೇ** (ಪಾ ಸೂ ೬-೪-೮೭) ಎಂಬುದರಿಂದ ಯಣಾದೇಶ **ಆಭ್ಯಸ್ತಾನಾಮಾದಿಃ** (ಪಾ ಸೂ ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಆಸನಿ—ಆಸ್ಯಶಬ್ದ ಇದಕ್ಕೆ ಸಪ್ತಮಿಯಾ ಏಕವಚನಪರವಾದಾಗ **ಪದ್ದನ್ನೋಮಾಸ್**—(ಪಾ. ಸೂ ೬-೧-೬೩) ಎಂಬುದರಿಂದ ಆಸನ್ ಆದೇಶ **ವಿಭಾಷಾ ಜಸಿ**ಶ್ಯೋಃ (ಪಾ ಸೂ ೬-೪-೧೩೬) ಎಂಬುದರಿಂದ ಸಪ್ತಮಿಯಾ ಏಕವಚನದಲ್ಲಿ ವಿಕಲ್ಪವಾಗಿ ಆಸನ ಆಕಾರಕ್ಕೆ ಲೋಪಸಂಬುದರಿಂದ ಇಲ್ಲಿ ಆಕಾರಲೋಪ ಬರುವುದಿಲ್ಲ ಆಸನಿ ಎಂದು ರೂಪವಾಗುತ್ತದೆ ॥ ೧ ॥

॥ ಸಂಹಿತಾಪಾಠ

ಅಥಾ ತೇ ಅಂಗಿರಸ್ತಮಾಗ್ನೇ ವೇಧಸ್ತಮ ಪ್ರಿಯಂ ।

ವೋಚೇಮ ಬ್ರಹ್ಮ ಸಾನಸಿ ॥ ೨ ॥

॥ ಪದಪಾಠ

ಅಥ । ತೇ । ಅಂಗಿರಃ ತಮ । ಅಗ್ನೇ । ವೇಧಃ ತಮ । ಪ್ರಿಯಂ ।

ವೋಚೇಮ । ಬ್ರಹ್ಮ । ಸಾನಸಿ ॥ ೨ ॥

॥ ಸಾಯಣಭಾಷ್ಯಂ ॥

ಹೇ ಆಂಗಿರಸ್ತಮಾತಿಶಯೇನಾಂಗನಾದಿಗುಣಯುಕ್ತ । ಯದ್ವಾ । ಆಂಗಿರಸಾಂ ವರಿಷ್ಠ । ವೇಧಸ್ತಮ। ವೇಧಾ ಇತಿ ಮೇಧಾವಿನಾಮ। ಅತಿಶಯೇನ ಮೇಧಾವಿನ್ನಗ್ನೇ। ಅಥಾನಂತರಂ ತೇ ತುಭ್ಯಂ ಸಾನಸಿ ಸಂಭಜನೀಯಂ ಪ್ರಿಯಂ ಪ್ರೀತಿಕರಂ ಬ್ರಹ್ಮ ಸ್ತೋತ್ರಂ ವೋಚೇಮ। ವಕ್ತಾರೋ ಭೂಯಾಸ್ಮ ॥ ವೋಚೇಮ । ಲಿಙ್ಯಾಶಿಷ್ಯಙ್ । ವಚ ಉಮಿತ್ಯುಮಾಗಮಃ । ಸಾನಸಿ । ವನ ಷಣ ಸಂಭಕ್ತೌ । ಸಾನಸಿ-ಧರ್ಣಸೀತ್ಯಾದಾವಸಿಚ್ ಪ್ರತ್ಯಯೋಂತೋ ನಿಪಾತ್ಯತೇ ॥

॥ ಪ್ರತಿಪದಾರ್ಥ ॥

ಅಥ--ಅನಂತರ । **ಆಂಗಿರಸ್ತಮ**—ಆಂಗಿರಸರಲ್ಲಿ ಶ್ರೇಷ್ಠನೂ । **ವೇಧಸ್ತಮ**– ಮೇಧಾವಿಗಳಲ್ಲಿ ಶ್ರೇಷ್ಠನೂ, ಆದ । **ಅಗ್ನೇ**—ಎಲೈ ಅಗ್ನಿಯೇ । **ತೇ**—ನಿನಗೆ । **ಸಾನಸಿ**– ಸ್ವೀಕಾರಕ್ಕೆ ಯೋಗ್ಯವಾದ । **ಪ್ರಿಯಂ**—ಪ್ರೀತಿಕರವಾದ । **ಬ್ರಹ್ಮ**—ಸ್ತೋತ್ರವನ್ನು । **ವೋಚೇಮ**--ಉಚ್ಚರಿಸೋಣ ॥

॥ ಭಾವಾರ್ಥ ॥

ಅನಂತರ, ಆಂಗಿರಸರಲ್ಲಿ ಶ್ರೇಷ್ಠನೂ, ಮೇಧಾವಿಯೂ ಆದ ಎಲೈ ಅಗ್ನಿಯೇ, ನಿನ್ನಿಂದ ಸ್ವೀಕೃತವಾಗಲು ಯೋಗ್ಯವಾದ, (ನಿನಗೆ) ಪ್ರೀತಿಕರವಾದ ಸ್ತೋತ್ರವನ್ನು ಮಾಡೋಣ

English Translation

And then, most wise Agent, chief of the Angirasas, may we address (to you) an acceptable and gratifng prayer

॥ ವಿಶೇಷವಿಷಯಗಳು ।

ಅಥ— ಛಂದಸ್ಸಿನ ಅನುಕೂಲಕ್ಕಾಗಿ ಈ ಶಬ್ದದ ಅಂತ್ಯಾಕ್ಷರವು ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ಆಂಗಿರಸ್ತಮ— ಅಂಗನಾದಿಗುಣಯುಕ್ತನಾದವನು ಅಥವಾ ಆಂಗಿರಾ ಋಷಿಗಳಲ್ಲಿ ಶ್ರೇಷ್ಠನೆನಿಸಿದವನು ಅಗ್ನಿಯನ್ನು ಅಂಗಿರಶಬ್ದದಿಂದ ಕರೆಯುವುದು ರೂಢಿಯು. ಈ ಹೆಸರು ಅಗ್ನಿಗೆ ಹೇಗೆ ಬಂತೆಂಬ ವಿಚಾರವನ್ನು ನಾವು ಋ. ಸಂ. ಭಾಗ ೧ ಪೇಜು 640-641 ಗಳಲ್ಲಿ ವಿವರಿಸಿದೇವೆ. ಆಂಗಿರಸ್ತಮ ಎಂದರೆ ಆಂಗಿರಸರಲ್ಲಿ ಶ್ರೇಷ್ಠನಾದವನು ಎಂದರ್ಥವು

ವೇಧಸ್ತಮ—ವಿಶ್ವಃ ವಿಗ್ರಃ ಮೊದಲಾದ ಇಪ್ಪತ್ತನಾಲ್ಕು ಮೇಧಾವಿನಾಮಗಳ ಮಧ್ಯದಲ್ಲಿ ವೇಧಸ್ ಶಬ್ದವು ಪರಿಶವಾಗಿರುವುದರಿಂದ (ನಿ ೩-೧೯) ವೇಧಸ್ ಎಂದರೆ ಮೇಧಾವಿಯು, ಬುದ್ಧಿವಂತನು, ವಿವೇಕಿಯು. ವೇಧಸ್ತಮ ಎಂದರೆ ಅತಿಶಯನಾದ ಬುದ್ಧಿವಂತನು ಎಂದರ್ಥವು

ಬ್ರಹ್ಮ—ಬ್ರಹ್ಮಶಬ್ದಕ್ಕೆ ಅನ್ನವೆಂದೂ, ಧನವೆಂದೂ (ನಿ ೩-೯) ಅರ್ಥವಿದ್ದರೂ ಭಾಷ್ಯಕಾರರು ಇಲ್ಲಿ ಸ್ತೋತ್ರವೆಂದು ಅರ್ಥಮಾಡಿರುವರು

ಸಾನಸಿ—ವನ ಷಣ ಸಂಭಕ್ತೌ । ಸಂಭಜನೀಯಂ । ಸ್ಮೃಕರಾರ್ಹವಾದ, ಉತ್ತಮವಾದ

॥ ವ್ಯಾಕರಣಸ್ರಕ್ರಿಯಾ ॥

ಅಥ—ನಿಪಾತಸ್ಯ ಚ—(ಪಾ ಸೂ ೬-೩-೧೩೬) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಅಂಗಿರಸ್ತಮ—ಅಂಗಿರಸಾಂ ವರಿಷ್ಠಃ ಅಂಗಿರಸ್ತಮಃ **ಅತಿಶಾಯನೇ ತಮಬಿಷ್ಠನೌ** ಎಂಬುದರಿಂದ ತಮಪ್ ಪ್ರತ್ಯಯ. ಸಂಬುದ್ಧಿಯಲ್ಲಿ ಸುಲೋಪವಾದಾಗ **ಆಮಂತ್ರಿತಸ್ಯ ಚ** (ಪಾ ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ ಹೀಗೆಯೇ ವೇಧಸ್ತಮ ಎಂಬಲ್ಲಿಯೂ ಪ್ರಕ್ರಿಯೆ

ವೋಚೇಮ—ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು ಇದಕ್ಕೆ ಆರ್ಧಧಾತುಕವಿವಕ್ಷಾಮಾಡಿದಾಗ **ಬ್ರುವೋ ವಚಿಃ** (ಪಾ. ಸೂ. ೨-೪-೫೪) ಎಂಬುದರಿಂದ ವಚ್ಯಾದೇಶ ಆಶೀರ್ಲಿಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ನಿತ್ಯಂ ಙಿತಃ** (ಪಾ ಸೂ. ೩-೪-೯೯) ಎಂಬುದರಿಂದ ಅದರ ಸಕಾರಕ್ಕೆ ಲೋಪ **ಲಿಙ್ಯಾಶಿಷ್ಯಙ್** (ಪಾ ಸೂ ೩-೧-೮೯) ಎಂಬುದರಿಂದ ಅಙಾದೇಶ. **ವಚ ಉಮ್** (ಪಾ ಸೂ. ೭-೪-೨೦) ಎಂಬುದರಿಂದ ಉಮಾಗಮ **ಮಿದಚೋಂತ್ಯಾತ್ಪರಃ** ಎಂಬುದರಿಂದ ಅಂತ್ಯಾಚಿನ ಪರವಾಗಿ ಬರುತ್ತದೆ **ಆಗ** ಗುಣದಿಂದ ಓಕಾರ ಅಕಾರದ ಪರದಲ್ಲಿ ಯಾಸುಟ್ ಬಂದುದರಿಂದ ಇಯಾದೇಶ **ಲೋಪೋವ್ಯೋರ್ವಲಿ** ಎಂಬುದರಿಂದ ಯಲೋಪ. ಪುನಃ ಗುಣ ಪಾದಾದಿಯಲ್ಲಿ ಒಂದುದರಿಂದ ನಿಘಾತಸ್ವರ ಬರುವುದಿಲ್ಲ ಪ್ರತ್ಯಯ ಸ್ವರದಿಂದ (ಯಾಸುಟ್ ದಾತ್ತ) ಮದ್ಯೋದಾತ್ತವಾದ ಪದವಾಗುತ್ತದೆ

ಸಾನಸಿ—ವನ ಷಣ ಸಂಭಕ್ತೌ ಧಾತು. ಇದು **ಸಾನಸಿ ಧರ್ಣಸಿ**—(ಉ ಸೂ ೪-೨೪೬) ಎಂಬುದರಿಂದ ಅಸಿಚ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ **ಚಿತ್ತಾದುದರಿಂದ ಚಿತಃ** ಸೂತ್ರದಿಂದ ಅಂತೋದಾತ್ತವಾಗುತ್ತದೆ ॥ ೨ ॥

॥ ಸಂಹಿತಾಪಾಠಃ ॥

ಕಸ್ತೇ ಜಾಮಿರ್ಜನಾನಾಮಗ್ನೇ ಕೋ ದಾಶ್ವಧ್ವರಃ ।

ಕೋ ಹ ಕಸ್ಮಿನ್ನಸಿ ಶ್ರಿತಃ ॥ ೩ ॥

॥ ಪದಪಾಠಃ ॥

ಕಃ । ತೇ । ಜಾಮಿಃ । ಜನಾನಾಂ । ಅಗ್ನೇ । ಕಃ । ದಾಶುಽಅಧ್ವರಃ ।

ಕಃ । ಹ । ಕಸ್ಮಿನ್ । ಅಸಿ । ಶ್ರಿತಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಜನಾನಾಂ ಮನುಷ್ಯಾಣಾಂ ಮಧ್ಯೇ ತೇ ತವ ಕೋ ಜಾಮಿಃ ಕೋ ಬಂಧುಃ । ತ್ವಂ ಸರ್ವೈರ್ಗುಣೈರಧಿಕೋಽಸಿ । ತವಾನುರೂಪೋ ಬಂಧುರ್ನಾಸ್ತೀತಿ ಭಾವಃ । ಕೋ ದಾಶ್ವಧ್ವರಃ । ದಾಶುರ್ದತ್ತೋಽಧ್ವರೋ ಯಜ್ಞೋ ಯೇನ ಸ ತಥೋಕ್ತಃ । ತ್ವಾಂ ಯಷ್ಟುಮಪಿ ಸಮರ್ಥಃ ಕೋಽಪಿ ನಾಸ್ತೀತ್ಯರ್ಥಃ । ಕೋ ಹ ತ್ವಂ ಕಥಂಭೂತಸ್ತ್ವಂ । ಈದೃಗ್ರೂಪ ಇತಿ ಸರ್ವೈರ್ನ ಜ್ಞಾಯಸ ಇತ್ಯರ್ಥಃ । ಕಸ್ಮಿನ್ ಸ್ಥಾನೇ ಶ್ರಿತ ಆಶ್ರಿತೋಽಸಿ । ವರ್ತಸೇ । ತೇನಾಪಿ ನ ಕೇನಚಿತ್ ಜ್ಞಾಯತೇ । ಅತಸ್ತ್ವಮಸ್ಮಾಭಿರ್ಮಾಂಸದೃಷ್ಟಿಭಿಃ ಕಥಮುಪಲಭ್ಯ ಇತ್ಯಗ್ನಿಃ ಪ್ರಶಸ್ಯತೇ ॥ ದಾಶ್ವಧ್ವರಃ । ದಾಶೃ ದಾನೇ । ಉಣಾದಯೋ [ಬಹುಲಮಿತಿ ಬಹುಲವಚನಾತ್ಕರ್ಮಣ್ಯಣ್ಪ್ರತ್ಯಯಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಯಣಾದೇಶ ಉದಾತ್ತಸ್ವರಿತಯೋರ್ಯಣಃ ಸ್ವರಿತೋಽನುದಾತ್ತಸ್ಯೇತಿ ಸ್ವರಿತತ್ವಂ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ಜನಾನಾಂ ಮಧ್ಯೇ—ಮನುಷ್ಯರ ಮಧ್ಯದಲ್ಲಿ । ತೇ—ನಿನಗೆ । ಕಃ ಜಾಮಿಃ—ಬಂಧುವು ಯಾರು? । ಕಃ ದಾಶ್ವಧ್ವರಃ—(ನಿನ್ನ) ಯಜ್ಞಮಾಡಿರುವವನು ಯಾರು? । ಕೋ ಹ—(ನೀನು) ಯಾರು? । ಕಸ್ಮಿನ್—ಎಲ್ಲಿ (ಯಾವ ಸ್ಥಾನದಲ್ಲಿ) । ಶ್ರಿತಃ ಅಸಿ—ಆಶ್ರಯಿಸಿಕೊಂಡಿದ್ದೀಯೇ? ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನಗೆ (ಅನುರೂಪರಾದ) ಬಂಧುಗಳು ಮನುಷ್ಯರಲ್ಲಿ ಯಾರು? ನಿನ್ನ ಯಜ್ಞಮಾಡುವವರು ತಾನೇ ಯಾರು? ನಿಜವಾಗಿಯೂ, ನೀನು ಯಾರು? ನೀನು ಇರುವುದು ಎಲ್ಲಿ? (ಯಾವುದನ್ನೂ ತಿಳಿಯಲು ನಾವು ಸಮರ್ಥರಲ್ಲ)

English Translation.

Who, Agni, amongst men is your kinsman? who is worthy to offer you sacrifice? who, indeed, are you and where do you abide?

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಪ್ರತ್ಯೇಕವಾದ ನಾಲ್ಕು ವಾಕ್ಯಗಳಿರುವವು ಋಷಿಯು ಪ್ರಶ್ನೋತ್ತರರೂಪವಾಗಿ ಅಗ್ನಿಯ ಗುಣಗಳನ್ನು ವರ್ಣಿಸಿರುವನು ಪ್ರಶ್ನೆಯು ಮಾತ್ರ ಹೇಳಲ್ಪಟ್ಟಿರುವುದು ಉತ್ತರವನ್ನು ಅಧ್ಯಾಹಾರಮಾಡಿ ಕೊಳ್ಳಬೇಕು.

ಜಾಮಿಃ—ಜಾಮಿಶಬ್ದಕ್ಕೆ ಯಾಸ್ಕರು ಈ ರೀತಿ ನಿರ್ವಚನವನ್ನು ಹೇಳಿರುವರು—

ಜಾಮಿರನ್ಯೇಽಸ್ಯಾಂ ಜನಯಂತಿ ಜಾಮಪತ್ಯಂ । ಜಮತೇರ್ವಾ ಸ್ಯಾದ್ಗತಿಕರ್ಮಣೋ ನಿರ್ಗಮನಪತ್ನ್ಯಾ ಭವತಿ ।

(ನಿ ೩-೭)

ಜಾಮಿ ಎಂದರೆ ಭಗಿನೀ ಎಂದರ್ಥವನ್ನು ಹೇಳಿ ಇತರರು (ಪತಿಯಾದವನು) ಇವಳಲ್ಲಿ ಸಂತಾನವನ್ನು ಉತ್ಪತ್ತಿ ಮಾಡುವುದರಿಂದ ಭಗಿನಿಗೆ ಜಾಮಿಯೆಂದು ಹೆಸರು ಅಥವಾ ಜಮತಿರ್ಧಾತುವಿಗೆ ಗಮನಾರ್ಥವಿರುವುದರಿಂದ ಹೋಗುವವಳು ಎಂದರೆ ಪತಿಯ ಗೃಹಕ್ಕೆ ಹೊರಟುಹೋಗುವವಳಾದ್ದರಿಂದ ಭಗಿನಿಗೆ ಜಾಮಿಯೆಂದು ಹೆಸರು. ಇಲ್ಲಿ ಭಾಷ್ಯಕಾರರು ಈ ಶಬ್ದಕ್ಕೆ ಬಂಧುವೆಂಬ ಸಾಮಾನ್ಯಾರ್ಥವನ್ನು ಹೇಳಿರುವರು

ಕಃ ತೇ ಜಾಮಿಃ ಜನಾನಾಂ—ಮನುಷ್ಯರಲ್ಲಿ ನಿನಗೆ ಬಂಧುವಾದವನು ಯಾರು? ನೀನು ಮನುಷ್ಯರಲ್ಲಿಲ್ಲದ ಅನೇಕ ಗುಣಗಳಿಂದ ಯುಕ್ತನಾಗಿ ಎಲ್ಲರಿಗಿಂತಲೂ ಶ್ರೇಷ್ಠನಾದುದರಿಂದ ನಿನಗೆ ಸಮನಾದ ಬಂಧುವು ಮನುಷ್ಯರಲ್ಲಿ ಯಾರೂ ಇಲ್ಲವೆಂದಭಿಪ್ರಾಯವು

ಕೋ ದಾಶ್ವಧ್ವರಃ--ನಿನ್ನನ್ನು ಕ್ರಮವಾಗಿ ಯಜ್ಞಾದಿಗಳಿಂದ ಆರಾಧಿಸಲು ಯಾರು ಸಮರ್ಥರು? ನಿನ್ನ ಗುಣಗಳಿಗೆ ತಕ್ಕಂತೆ ವಿಧ್ಯುಕ್ತರೀತಿಯಿಂದ ನಿನ್ನನ್ನು ಯಜ್ಞಾದಿಗಳಿಂದ ಪೂಜಿಸಲು ಮನುಷ್ಯರಲ್ಲಿ ಸಮರ್ಥನಾದವನು ಯಾರೂ ಇಲ್ಲ ನೀನು ಅತ್ಯಂತ ಗುಣಾಧಿಕನು

ಕೋ ಹ—ನೀನು ಯಾರು? ನಿನ್ನ ಸ್ವರೂಪವೇನು? ನಿನ್ನ ಅತಿಶಯನಾದ ಸ್ವರೂಪವನ್ನೂ ಮಹಿಮೆಯನ್ನೂ ಯಾವನೂ ತಿಳಿಯಲಾರನು ಎಂದಭಿಪ್ರಾಯವು

ಕಸ್ಮಿನ್ ಅಸಿ ಶ್ರಿತಃ—ಯಾವ ಸ್ಥಾನದಲ್ಲಿ ನಿನ್ನ ಆಶ್ರಯವಿರುವುದು? ನೀನು ಭೂಮ್ಯಂತರಿಕ್ಷ ಸ್ವರ್ಗಗಳೆಂಬ ಮೂರು ಸ್ಥಾನಗಳಲ್ಲಿರುವವನೆಂದು ಪ್ರಸಿದ್ಧವಾಗಿದ್ದರೂ ನಿನ್ನ ನಿಜವಾದ ವಾಸಸ್ಥಾನದ ಅಥವಾ ಆಶ್ರಯದ ಸ್ವರೂಪವನ್ನು ಯಾರೂ ತಿಳಿಯಲಾರರು

॥ ವ್ಯಾಕರಣಪ್ರಕ್ರಿಯಾ ॥

ಅಗ್ನೇ--ಪಾದಾದಿಯಲ್ಲಿರುವುದರಿಂದ ಅಷ್ಟಮಿಕ ನಿಘಾತಸ್ವರ ಬರುವುದಿಲ್ಲ **ಅಮಂತ್ರಿತಸ್ಯ** (ಪಾ ಸೂ ೬-೧-೧೯೯) ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ

ದಾಶ್ವಧ್ವರಃ—ದಾಶೃ ದಾನೇ ಧಾತು. **ಉಣಾದಯೋಬಹುಲಮ್** (ಪಾ ಸೂ. ೩-೩-೧) ಎಂಬುದರಿಂದ ಬಹುಲಗ್ರಹಣಸಾಮರ್ಥ್ಯದಿಂದ ಕರ್ಮಣಿಯಲ್ಲಿ ಉಣ್ ಪ್ರತ್ಯಯ. ದಾಶು ಎಂದು ರೂಪವಾಗುತ್ತವೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ದಾಶುಃ ದತ್ತಃ ಅಧ್ವರಃ ಯೇನ ಸಃ ದಾಶ್ವಧ್ವರಃ **ಬಹುವ್ರೀಹೌ-ಪ್ರಕೃತ್ಯಾಪೂರ್ವಪದಮ್** (ಪಾ ಸೂ ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಇಲ್ಲಿ ಉದಾತ್ತಸ್ಥಾನದಲ್ಲಿ ಯಣಾದೇಶ ಬಂದುದರಿಂದ **ಉದಾತ್ತಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** (ಪಾ ಸೂ ೮-೪-೪) ಎಂಬುದರಿಂದ ಸ್ವರಿತ ಸ್ವರ ಬರುತ್ತದೆ

ಅಸಿ—ಅಸ ಭುವಿ. ಧಾತು ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ತಾಸಸ್ಯೋಲ್ಲೋಪಃ** (ಪಾ ಸೂ. ೮-೪-೩೦) ಎಂಬುದರಿಂದ ಅಸಿನ ಸಕಾರಕ್ಕೆ ಲೋಪ. ಅತಿಜಂತದ ಸರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಶ್ರಿತಃ—ಶ್ರಿಞ್ ಸೇವಾಯಾಂ ಧಾತು ಕರ್ಮಣಿಯಲ್ಲಿ ಕ್ತಪ್ರತ್ಯಯ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ ॥ ೩ ॥

॥ ಸಂಹಿತಾಪಾಠಃ ॥

ತ್ವಂ ಜಾಮಿರ್ಜನಾನಾಮಗ್ನೇ ಮಿತ್ರೋ ಅಸಿ ಪ್ರಿಯಃ ।

ಸಖಾ ಸಖಿಭ್ಯ ಈಡ್ಯಃ ॥ ೪ ॥

॥ ಪದಪಾಠಃ ।

ತ್ವಂ । ಜಾಮಿಃ । ಜನಾನಾಂ । ಅಗ್ನೇ । ಮಿತ್ರಃ । ಅಸಿ । ಪ್ರಿಯಃ ।

ಸಖಾ । ಸಖಿಭ್ಯಃ । ಈಡ್ಯಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಮುಕ್ತಪ್ರಕಾರೇಣಾಚಿಂತ್ಯರೂಪೋ೭ಪ್ಯನುಗ್ರಹೀತೃತಯಾ ಸರ್ವೇಷಾಂ ಜನಾನಾಂ ಜಾಮಿರ್ಬಂಧುರಸಿ । ತಥಾ ಪ್ರಿಯಃ ಪ್ರೀಣಯಿತಾ ತ್ವಂ ಯಜಮಾನಾನಾಂ ಮಿತ್ರಃ ಪ್ರಮಿತೇಸ್ತ್ರಾಯಕೋ೭ಸಿ । ಈಡ್ಯಃ ಸ್ತುತಿಭಿಃ ಸ್ತುತ್ಯಸ್ತ್ವಂ ಸಖಿಭ್ಯಃ ಸಮಾನಖ್ಯಾನೇಭ್ಯ ಋತ್ವಿಗ್ಭ್ಯಃ ಸಖಾ ಸಖಿವದತ್ಯಂತಂ ಪ್ರಿಯೋ೭ಸಿ ॥ ಜಾಮಿಃ । ಜಮು ಆದನೇ । ಜಮಂತಿ ಸಹೈಕಸ್ಮಿನ್ಪಾತ್ರೇ೭ದಂತೀತಿ ಜಾಮಯೋ ಬಂಧವಃ । ಜನಿಷುಸಿಭ್ಯಾಮಿಣ್ । ಉ. ೪-೧೨೯ । ಇತಿ ವಿಧೀಯಮಾನ ಇಣ್ ಬಹುಲವಚನಾದಸ್ಮಾದಪಿ ದೃಶ್ಯತ್ವಯಃ । ಈಡ್ಯಃ । ಈಡ ಸ್ತುತೌ । ಈಡವಂದವೃಶಂಸದುಹಾಂ ಣ್ಯತ ಇತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ತ್ವಂ**—ನೀನು (ಹಿಂದೆ ಹೇಳಿದಂತೆ ಅಚಿಂತ್ಯರೂಪನಾದರೂ) । **ಜನಾನಾಂ**—ಜನಗಳಿಗೆ (ಅನುಗೃಹೀತೃವಾದುದರಿಂದ) । **ಜಾಮಿಃ ಅಸಿ**—ಬಂಧುವಾಗಿದ್ದೀ । **ಪ್ರಿಯಃ ಮಿತ್ರಃ**—ಪ್ರೀತಿಪಾತ್ರನಾದ ಮಿತ್ರನೂ (ಆಗಿದ್ದೀ) । **ಈಡ್ಯಃ**—(ಸ್ತೋತ್ರಗಳಿಂದ) ಸ್ತುತ್ಯನಾದ (ನೀನು) । **ಸಖಿಭ್ಯಃ**—ಋತ್ವಿಜರಿಗೆ । **ಸಖಾ**—ಸ್ನೇಹಿತನೂ (ಆಗಿದ್ದೀ)

॥ ಭಾವಾರ್ಥ ॥

(ಮೇಲೆ ಹೇಳಿದಂತೆ ಅಚಿಂತ್ಯರೂಪನಾದರೂ, ಅನುಗ್ರಹೀತೃವಾದ) ನೀನು ಜನರಿಗೆ ಬಂಧುವೂ, ಪ್ರಿಯ ಮಿತ್ರನೂ ಸ್ತುತ್ಯನೂ ಮತ್ತು ಋತ್ವಿಜರಿಗೆ ಸ್ನೇಹಿತನೂ ಆಗಿದ್ದೀಯೇ

English Translation

But, O Agni, you are a kinsman to the people, a dear friend, a praiseworsty companion amongst (all) companions (or a friend to the priests).

॥ ವಿಶೇಷವಿಷಯಗಳು ॥

ಮುಖ್ಯಾಭಿಪ್ರಾಯವು— ಹಿಂದಿನ ಋಕ್ಕಿನಲ್ಲಿ ಅಗ್ನಿಗೆ ಬಂಧುವಾದವನು ಯಾರೂ ಇಲ್ಲವೆಂದು ಹೇಳಿರುವುದಷ್ಟೆ ಅಲ್ಲಿ ಬಂಧುಶಬ್ದಕ್ಕೆ ಸಮಾನಗುಣವುಳ್ಳವನು ಎಂದರ್ಥವನ್ನು ಮಾಡಬೇಕಾಗಿರುವುದು ಬಂಧುಗಳಾದವರಲ್ಲಿ ಸಮಾನವಾದ ಗುಣಗಳಿರಬೇಕಾದುದು ಸಹಜವು. ಆದರೆ ಅಗ್ನಿಗೆ ಸಮಾನಾದ ಗುಣಗಳುಳ್ಳವನು ಯಾರೂ ಇರುವುದಿಲ್ಲವೆಂದೂ ಆದುದರಿಂದಲೇ ಬಂಧುತ್ವಕ್ಕೆ ಯೋಗ್ಯನಾದ ಪುರುಷನಿಲ್ಲವೆಂದೂ ಪ್ರಕಾರಾಂತರದಿಂದ ಪ್ರಶ್ನರೂಪವಾಗಿ ಹೇಳಿರುವನು. ಈ ಋಕ್ಕಿನಲ್ಲಿ ಅಗ್ನಿಯು ಜನರಿಗೆ ಬಂಧುವೆಂದು ಹೇಳಿರುವನು ಇದು ವಿರೋಧವಲ್ಲವೇ ಎಂದರೆ ಹಾಗಲ್ಲ ಬಂಧುಗಳಲ್ಲಿ ಇರಬೇಕಾದ ಗುಣವು ಮತ್ತೊಂದು ಇರುವುದು. ಬಂಧುಗಳು ಒಬ್ಬರನ್ನೊಬ್ಬರು ಪ್ರೀತಿಸುತ್ತಾ ಒಬ್ಬರಿಗೊಬ್ಬರು ಹಿತೈಷಿಗಳಾಗಿ ಕಷ್ಟಸುಖಗಳಲ್ಲಿ ಭಾಗಿಗಳಾಗಿರುವರು ಇದು ಬಂಧುತ್ವಲಕ್ಷಣವು ಅಗ್ನಿಯೂ ಸಹ ಜನರ

ಹಿತಕಾಂಕ್ಷಿಯಾಗಿ ಸ್ತೋತ್ರಮಾಡುವವರಿಗೆ ಇಷ್ಟಾರ್ಥಗಳನ್ನು ಸಲ್ಲಿಸುತ್ತಾ ಅವರಿಗೆ ಅನುಗ್ರಹವನ್ನುಂಟುಮಾಡುವನು. ಈ ವಿಧವಾದ ದೃಷ್ಟಿಯಿಂದ ಅಗ್ನಿಯು ಜನರಿಗೆ ಬಂಧುವೆಂದು ಈ ಋಕ್ಕಿನಲ್ಲಿ ಹೇಳಲ್ಪಟ್ಟಿರುವನು. ಈ ವಿಧವಾದ ಅರ್ಥವನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ಮಿತ್ರ, ಪ್ರಿಯ, ಸಖಾ ಎಂಬ ಶಬ್ದಗಳ ಪ್ರಯೋಗವಿರುವುದು

॥ ವ್ಯಾಕರಣಪ್ರಕ್ರಿಯಾ ॥

ಜಾಮಿಃ—ಜನು ಅದನೇ. ಧಾತು ಜನಂತಿ ಸಹ ಏಕಸ್ಮಿನ್ ಪಾತ್ರೇ ಅದಂತೀತಿ ಜಾಮಯಃ ಬಂಧವಃ (ಒಂದೇ ಪಾತ್ರೆಯಲ್ಲಿ ಊಟಮಾಡುವವರು ಬಂಧುಗಳು) **ಜನಿಘೃಸಿಭ್ಯಾಮಿಞ್** (ಉ. ಸೂ. ೪-೧೮೯) ಎಂಬುದರಿಂದ ವಿಧಿಸಲ್ಪಡುವ ಇಞ್ ಪ್ರತ್ಯಯವು ಉಣಾದಿಯಲ್ಲಿ ಬಹುಲವಚನವಿರುವುದರಿಂದ ಇದಕ್ಕೂ ಬರುತ್ತದೆ. ಣಿತ್ತಾದುದರಿಂದ **ಅತೇಉಪಧಾಯಾಃ** ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ

ಈಡ್ಯಃ—ಈಡ ಸ್ತುತೌ ಧಾತು. ಅದಾದಿ. ಇದಕ್ಕೆ **ಋಹಲೋರ್ಣ್ಯತ್** (ಪಾ ಸೂ ೩-೧-೧೨೪) ಎಂಬುದರಿಂದ ಣ್ಯತ್ ಪ್ರತ್ಯಯ. **ಈಡವಂದವೃಶಂಸದುಹಾಂ ಣ್ಯತಃ** (ಪಾ ಸೂ. ೬-೧-೩೧೪) ಎಂಬುದರಿಂದ ತಿತ್ ಸ್ವರವು ಬಾಧಿತವಾಗಿ ಆದ್ಯುದಾತ್ತಸ್ವರ ಬರುತ್ತದೆ ॥ ೪ ॥

॥ ಸಂಹಿತಾಪಾಠಃ ॥

ಯಜಾ ನೋ ಮಿತ್ರಾವರುಣಾ ಯಜಾ ದೇವಾಁ ಋತಂ ಬೃಹತ್ ।
ಅಗ್ನೇ ಯಕ್ಷಿ ಸ್ವಂ ದಮಂ ॥ ೫ ॥

॥ ಪದಪಾಠಃ ॥

ಯಜ । ನಃ । ಮಿತ್ರಾವರುಣಾ । ಯಜ । ದೇವಾನ್ । ಋತಂ । ಬೃಹತ್ ।
ಅಗ್ನೇ । ಯಕ್ಷಿ । ಸ್ವಂ । ದಮಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ನೋಽಸ್ಮದರ್ಥಂ ಮಿತ್ರಾವರುಣಾ ವಿಶ್ವೇಽಪ್ಯಜ್ಞಿಯಾ ದೇವಾಃ ಯಜ । ಹವಿಷಾ ಪೂಜಯ । ತಥಾ ದೇವಾನಿಂದ್ರಾದೀನ್ಯಜ । ಪೂಜಯ । ಋತಂ ಸತ್ಯಂ ಯಥಾರ್ಥಫಲಂ ಯಜ್ಞಂ ಚ ಯಂ ಜೇತ್ಯೇವ। ತದರ್ಥಂ ಬೃಹತ್ ಪ್ರೌಢಂ ಸ್ವಂ ಸ್ವಕೀಯಂ ದಮಂ ಯಜ್ಞಗೃಹಂ ಯಕ್ಷಿ । ಯಜ । ಸಂಗಚ್ಛಸ್ವ । ತ್ವಯ್ಯಂತರ್ವಿದ್ಯಮಾನೇ ಸತಿ ಹಿ ಯಜ್ಞಗೃಹಂ ಪೂಜ್ಯತೇ ॥ ಯಜ । ದ್ವ್ಯಚೋತಸ್ತಿಙಿ ಇತಿ ಸಂಹಿತಾಯಾಂ ದೀರ್ಘತ್ವಂ । ದೇವಾನ್ । ದೀರ್ಘಾದಟಿಸಮಾನಪಾದ ಇತಿ ಸಂಹಿತಾಯಾಂ ನಕಾರಸ್ಯ ರುತ್ವಂ। ಅತೋಽಟಿ ನಿತ್ಯಮಿತ್ಯನುನಾಸಿಕ ಆಕಾರಃ । ಯಕ್ಷ್ವಲೋಪೌ । ಯಕ್ಷಿ । ಯೆಜೇರ್ಬಹುಲಂ ಛಂದಸೀತಿ ಶಪೋ ಲುಕ್ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ನಃ**—ನಮಗೋಸ್ಕರ । **ಮಿತ್ರಾವರುಣಾ**—ಮಿತ್ರ ಮತ್ತು ವರುಣರನ್ನು । **ಯಜ**—(ಹವಿಸ್ಸಿನಿಂದ) ಪೂಜಿಸು. । **ದೇವಾನ್**—ಇಂದ್ರಾದಿಗಳನ್ನು । **ಯಜ**—ಪೂಜಿಸು । **ಋತಂ**—ಯಥಾರ್ಥ ಫಲಪ್ರದವಾದ ಯಜ್ಞವನ್ನು । (**ಯಜ**—ಪೂಜಿಸು) । **ಬೃಹತ್**—ದೊಡ್ಡದಾದ । **ಸ್ವಂ ದಮಂ**—ಸ್ವಕೀಯವಾದ (ಯಜ್ಞ) ಗೃಹವನ್ನು । **ಯಕ್ಷಿ**—ಪೂಜಿಸು (ಸೇರು) ।

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮಗೋಸ್ಕರ ಮಿತ್ರ ಮತ್ತು ವರುಣರನ್ನು ಪೂಜಿಸು, ಇಂದ್ರಾದಿ ಸಮಸ್ತ ದೇವತೆಗಳನ್ನೂ ಪೂಜಿಸು, ಯಜ್ಞವನ್ನು ಪುಷ್ಟೀಕರಿಸು; ಮತ್ತು ನಿನ್ನ ಗೃಹವಾದ ಯಾಗಶಾಲೆಯನ್ನು ಪೂಜಾರ್ಹವನ್ನಾಗಿ ಮಾಡು. (ಎಂದರೆ ಯಾಗಶಾಲೆಯನ್ನು ಪ್ರವೇಶಿಸು)

English Translation.

Worship for us, Mitra and Varuna, worship for us, all the Gods, (celebrate) a great sacrifice; be present in your own dwelling.

॥ ವಿಶೇಷವಿಷಯಗಳು ॥

ಋತಂ—ಸತ್ಯಫಲಪ್ರದವಾದ ಯಜ್ಞವು ಎಂದು ಭಾಷ್ಯಕಾರರು ಹೇಳಿರುವರು. **ಯೋಸ್ಕರು**—**ಋತಂ ಸತ್ಯಂ ವಾ ಯಜ್ಞಂ ವಾ** । ಎಂದರೆ ಋತಶಬ್ದಕ್ಕೆ ಸತ್ಯ ಅಥವಾ ಯಜ್ಞವೆಂಬ ಅರ್ಥವಿರುವುದು ಎಂದು ನಿರ್ವಚನವನ್ನು ಹೇಳಿರುವರು. (ನಿ. ೪-೧೯) ಈ ಶಬ್ದದ ವಿಸ್ತಾರವಾದ ಅರ್ಥವಿವರಣೆಗಾಗಿ ಋ. ಸಂ. ಭಾಗ ೧ ಪೇಜು ೬೪೭ ನೋಡಿ.

ಇಲ್ಲಿ ಅಗ್ನಿಯನ್ನು ದ್ದೇಶಿಸಿ **ಯೆಜ**–ಯಜ್ಞಮಾಡು ಅಥವಾ ಪೂಜಿಸು ಎಂದು ಹೇಳಿರುವುದರಿಂದ ಅಗ್ನಿಯಲ್ಲಿ ದೇವತೆಗಳನ್ನು ದ್ದೇಶಿಸಿ ಸಮರ್ಪಿಸಿದ ಹವಿರಾದಿದ್ರವ್ಯಗಳನ್ನು ಅವರಿಗೆ ಸೇರುವಂತೆ ಮಾಡು ಎಂದಭಿಪ್ರಾಯವು. **ಈ ಕಾರಣದಿಂದಲೇ ಯೆಜ ದೇವಾನ್** ಎಂಬ ಪದಗಳಿಗೆ ದೇವತೆಗಳಿಗೆ ಸಮರ್ಪಿಸಬೇಕಾದ ದ್ರವ್ಯಗಳನ್ನು ಅಗ್ನಿಯಾದ ನಿನ್ನಲ್ಲಿ ಹೋಮಮಾಡುವುದರಿಂದ ನಾವು ಅರ್ಪಿಸುತ್ತೇವೆ. ಅವುಗಳನ್ನು ದೇವತೆಗಳಿಗೆ ಸೇರುವಂತೆ ಮಾಡುವ ಕರ್ತವ್ಯವು ನಿನ್ನ (ಅಗ್ನಿಯ)ದಾದ್ದರಿಂದ **ದೇವಾನ್ ಯೆಜ**—ದೇವತೆಗಳನ್ನು ಪೂಜಿಸು ಎಂಬ ಶಬ್ದಗಳನ್ನು ಪ್ರಯೋಗಿಸಲಾಗಿರುವುದು.

ಬೃಹತ್, ಅಗ್ನೇ ಯೆಕ್ಷಿ ಸ್ವೆ ದಮಂ—ದಮ ಎಂದರೆ ಗೃಹವು. (ನಿ. ೩–೧೩) ಅಗ್ನಿಯನ್ನು ದ್ದೇಶಿಸಿ ಸ್ವಕೀಯವಾದ ಗೃಹವೆಂದು ಹೇಳುವಾಗ ಅಗ್ನಿಯು ಪ್ರತಿಷ್ಠಸಲ್ಪಟ್ಟಿರುವ ಯಾಗಶಾಲೆಯೇ ದರ್ಥವು. ಬೃಹತ್ ಶಬ್ದಕ್ಕೆ ದೊಡ್ಡದಾದ ಅಥವಾ ವಿಸ್ತಾರವಾದ ಎಂದರ್ಥವು. ಯಾಗಶಾಲೆಯನ್ನು ಪೂಜಿಸುವುದೆಂದರೆ, ಯಾಗಶಾಲೆಯಲ್ಲಿ ನೀನು (ಅಗ್ನಿಯು) ಇರುವುದರಿಂದ ಅದು ಪೂಜಾರ್ಹವಾಗುವುದೆಂದು ಭಾಷ್ಯಕಾರರು ಹೇಳಿರುವರು

॥ ವ್ಯಾಕರಣಪ್ರಕ್ರಿಯಾ ॥

ಯೆಜ—ಯಜ ದೇವಪೂಜಾಸಂಗತಿಕರಣದಾನೇಷು. ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ಪಿಗೆ ಹಿ ಆದೇಶ. ಶಪ್‌ವಿಕರಣ. **ಅತೋ ಹೇಃ** ಎಂಬುದರಿಂದ ಹಿಗೆ ಲುಕ್. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಶಪ್ ಪಿತ್ತಾದುದರಿಂದ ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ **ದ್ವ್ಯಚೋಽತಸ್ತಿಙಃ** (ಪಾ ಸೂ. ೬–೩–೧೩೫) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ

ಮಿತ್ರಾವರುಣಾ—ಇದಕ್ಕೆ ದ್ವಿತೀಯಾ ದ್ವಿವಚನಸರವಾದಾಗ (ಔ) **ಸುಪಾಂ ಸುಲುಕ್**—ಎಂಬುದರಿಂದ ಅದಕ್ಕೆ ಆಕಾರಾದೇಶ.

ದೇವಾನ್—ಇದಕ್ಕೆ ಅರ್ (ಋ) ಪರವಾದುದರಿಂದ **ದೀರ್ಘಾದಟಿಸಮಾನಪಾದೇ** (ಪಾ ಸೂ. ೮–೩–೯) ಎಂಬುದರಿಂದ ಸಂಹಿತಾದಲ್ಲಿ ನಕಾರಕ್ಕೆ ರುತ್ವ. **ಅತೋಟಿನಿತ್ಯಮ್** ಎಂಬುದರಿಂದ ಪೂರ್ವದಲ್ಲಿರುವ ಆಕಾರಕ್ಕೆ ನಿತ್ಯಾನುನಾಸಿಕತ್ವ. ರುತ್ವಕ್ಕೆ **ಭೋಭಗೋ ಅಘೋ**—ಸೂತ್ರದಿಂದ ಯಕಾರಾದೇಶ. **ಲೋಪಃ-ಶಾಕಲ್ಯಸ್ಯ** ಎಂಬುದರಿಂದ ಯಕಾರಕ್ಕೆ ಲೋಪ

ಯೆಕ್ಷಿ—ಯಜ ದೇವಪೂಜಾಸಂಗತಿಕರಣದಾನೇಷು. ಧಾತು ಭ್ವಾದಿ. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಬಹುಲಂ ಛಂದಸಿ** ಎಂಬುದರಿಂದ ಪ್ರಾಪ್ತವಾದ ಶಪ್ಪಿಗೆ ಲುಕ್. **ವ್ರಶ್ಚಭೃಸ್ಜ**—ಸೂತ್ರದಿಂದ ಝಲ್‌ಪರದಲ್ಲಿರುವುದರಿಂದ ಷತ್ವ **ಷಢೋಃ ಕಃ ಸಿ** ಸೂತ್ರದಿಂದ :ಅದಕ್ಕೆ ಕತ್ವ. ಅದನ್ನು ನಿಮಿತ್ತೀಕರಿಸಿ ಪ್ರತ್ಯಯಸಕಾರಕ್ಕೆ **ಆದೇಶಪ್ರತ್ಯಯಯೋಃ** ಎಂಬುದರಿಂದ ಷತ್ವ. ಯೆಕ್ಷಿ ಎಂದು ರೂಪವಾಗುತ್ತವೆ. ಪೂರ್ವದಲ್ಲಿ ಆಮಂತ್ರಿತವಿರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ. ಸೂ. ೮–೧–೭೨) ಎಂಬುದರಿಂದ

ಆದಕ್ಕೆ ಅವಿದ್ಯಮಾನವದ್ಭಾವ ಬರುವುದರಿಂದ ಇಲ್ಲದಂತಾಗುತ್ತದೆ. ಆಗ ಪದಾದಿಯಲ್ಲಿ ಬಂದಂತಾಗುವುದರಿಂದ ನಿಘಾತಸ್ವರ ಬರುವುದಿಲ್ಲ. ಸಿಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ. ಆಗ ಧಾತುವಿನ ಆಂಶೋದಾತ್ತಸ್ವರವು ಉಳಿಯುತ್ತದೆ

ಇಲ್ಲಿಗೆ ಎಪ್ಪತ್ತೈದನೆಯ ಸೂಕ್ತವು ಸಮಾಪ್ತವು

ಎಪ್ಪತ್ತಾರನೆಯ ಸೂಕ್ತವು

ಕಾ ತ ಇತಿ ಸಂಚರ್ಚಂ ತೃತೀಯಂ ಸೂಕ್ತಂ । ಕಾ ತ ಇತ್ಯನುಕ್ರಾಂತಂ । ರಾಹೂಗಣೋ ಗೋತಮ ಋಷಿಃ । ತ್ರಿಷ್ಟುಪ್ ಛಂದಃ । ಅಗ್ನಿರ್ದೇವತಾ ॥ ಪ್ರಾತರನುವಾಕಸ್ಯಾಗ್ನೇಯೇ ಕೃತೌ ತ್ರೈಷ್ಟುಭೇ· ಛಂದಸೀದಮಾದಿಕೇ ದ್ವೇ ಸೂಕ್ತೇ । ಸೂತ್ರಿತಂ ಚ । ಉಪ ಪ್ರ ಜಿನ್ವನ್ನಿತಿ ಶ್ರೀಣಿ ಕಾ ತ ಉಸೇತಿರಿತಿ ಸೂಕ್ತೇ । ಆ. ೪-೧೩ । ಇತಿ ॥ ಅಶ್ವಿನಶಸ್ತ್ರೇಽಸ್ಯೇತೇ ಪ್ರಾತರನುವಾಕಾತಿದೇಶಾತ್ ॥

ಅನುವಾದವು—**ಕಾ ತೇ** ಎಂಬ ಈ ಸೂಕ್ತವು ಹದಿಮೂರನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ಕಾ ತೇ** ಎಂದು ಹೇಳಿರುವುದು. ಈ ಸೂಕ್ತಕ್ಕೆ ರಹುಗಣ ಪುತ್ರನಾದ ಗೋತಮನು ಋಷಿಯು. ಅಗ್ನಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು. ಪ್ರಾತರನುವಾಕಮಂತ್ರ ಪರನಕಾಲದಲ್ಲಿ ಆಗ್ನೇಯಕೃತುಸಂಬಂಧವಾದ ತ್ರಿಷ್ಟುಪ್ಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರ ಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ-**ಉಪ ಪ್ರ ಜಿನ್ವನ್ನಿತಿ ಶ್ರೀಣಿ ಕಾ ತ ಉಸೇತಿರಿತಿ ಸೂಕ್ತೇ** ಎಂಬ ಸೂತ್ರದಿಂದ ವಿನ್ಯತವಾಗಿರುವುದು (ಆ ೪-೧೩)

ಸೂಕ್ತ—೭೬

॥ ಓಂ ॥

॥ ಮಂಡಲ—೧ ॥ ಅನುವಾಕ—೧೩ ॥ ಸೂಕ್ತ—೭೬ ॥

॥ ಅಷ್ಟಕ—೧ ॥ ಅಧ್ಯಾಯ—೫ ॥ ವರ್ಗ—೨೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥

॥ ಋಷಿಃ—ಗೋತಮೋ ರಾಹೂಗಣಃ ॥

ದೇವತಾ—ಅಗ್ನಿಃ ॥

ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಕಾ ತ ಉಪೇತಿರ್ಮನಸೋ ವರಾಯ ಭುವದಗ್ನೇ ಶಂತಮಾ ಕಾ ಮನೀಷಾ ।

ಕೋ ವಾಂ ಯಜ್ಞೈಃ ಪರಿ ದಕ್ಷಂ ತ ಆಪ ಕೇನ ವಾ ತೇ ಮನಸಾ ದಾಶೇಮ ॥ ೧ ॥

॥ ಪದಪಾಠಃ ॥

ಕಾ । ತೇ । ಉಪ೬ಇತಿಃ । ಮನಸಃ । ವರಾಯ । ಭುವತ್ । ಅಗ್ನೇ । ಶಂ೬-ತಮಾ । ಕಾ । ಮನೀಷಾ ।

ಕಃ । ವಾಂ । ಯಜ್ಞೈಃ । ಪರಿ । ದಕ್ಷಂ । ತೇ । ಆಪ । ಕೇನ । ವಾ । ತೇ । ಮನಸಾ । ದಾಶೇಮ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತೇ ತವ ಮನಸೋ ವರಾಯ ನಿವಾರಣಾಯೋಸ್ಮಾತ್ಸ್ವಸ್ಥಾಪನಾಯ ಕೋಪೇತಿ-ರ್ಭುವತ್ । ಕೀದೃಶಮುಪಗಮನಂ ಭವೇತ್ । ನ ಕಾಪ್ಯಸ್ತಿ । ತವೋಚಿತಮುಪಗಮನಂ ವಯಂ ಕರ್ತುಂ ನ ಶಕ್ನುಮ ಇತಿ ಭಾವಃ । ಮನೀಷಾ ಸ್ತುತಿಃ ಶಂತಮಾ ತವಾತಿಶಯೇನ ಸುಖಕರೀ ಕಾ ಕೀದೃಶೀ ಭವೇತ್ । ತವೋಚಿತಾ ಸ್ತುತಿರಪಿ ನಾಸ್ತೀತ್ಯರ್ಥಃ । ಕೋ ವಾ ಯಜಮಾನೋ ಯಜ್ಞೈಸ್ತವ ಸಂಬಂಧಿಭಿರ್ಯಾಗೈರ್ದಕ್ಷಂ ವೃದ್ಧಿಂ ಬಲಂ ವಾ ಪರ್ಯಾಪ । ಪರ್ಯಾಪ್ನೋತ್ । ನಕೋಽಪೀತ್ಯರ್ಥಃ । ತವೋಚಿತಾನ್ಯಾಗಾನನುಷ್ಠಾಯ ಕೈಃ ಫಲಂ ಪ್ರಾಪ್ಯತ ಇತ್ಯೇತದಪಿ ದುರ್ಘಟಮೇನೇತಿ ಭಾವಃ । ಉಪ-ಗಮನಾದಿಕಂ ತಾವದಾಸ್ತಾಂ । ತಸ್ಯ ಸರ್ವಸ್ಯ ಸಾಧನಭೂತಂ ಮನ ಏವಾಸ್ಮಾಕಂ ದುರ್ಲಭಮಿತ್ಯಾಹ । ಕೇನೇತಿ । ಹೇ ಅಗ್ನೇ ತೇ ತುಭ್ಯಂ ಕೇನ ಮನಸಾ ಕೀದೃಶ್ಯಾ ಬುದ್ಧ್ಯಾ ದಾಶೇಮ । ಹವೀಂಷಿ ಪ್ರಯ-ಚ್ಛಾಮ । ತವೋಪಗಮನಾದ್ಯನುರೂಪೇಂ ಮನೋಽಸ್ಮಾಕಂ ನೋತ್ಪದ್ಯತ ಇತ್ಯರ್ಥಃ ॥ ಉಪೇತಿಃ । ತಾದೌ ಚೇತಿ ಗತೇಃ ಪ್ರಕೃತಿಸ್ವರತ್ವಂ । ವರಾಯ । ವೃಞ್ ವರಣೇ । ಅಸ್ಮಾದಂತರ್ಭಾವಿತಣ್ಯರ್ಥಾದ್ಲೃ ಹವ್ಯದೈನಿಷ್ಠಿಗಮಶ್ಚ । ಪಾ. ೩-೩-೫೮ । ಇತ್ಯಪ್ । ತಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ । ಭುವತ್ । ಲೇಟ್ಯಡಾಗಮಃ । ಬಹುಲಂ ಛಂದಸೀತಿ ಶಪೋ ಲುಕ್ । ಭೂಸುವೋಸ್ತಿಙೀತಿ ಗುಣಪ್ರತಿ-ಷೇಧಃ । ದಕ್ಷಂ । ದಕ್ಷ್ಲೃವೃದ್ಧೌ । ಭಾವೇ ಕರಣೇ ವಾ ಘಞ್ । ಞಿತ್ತ್ವಾದನುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ತೇ ಮನಸಃ**—ನಿನ್ನ ಮನಸ್ಸಿನ । **ವರಾಯ**—ನಿವಾರಣೆಗೆ (ನಮ್ಮಲ್ಲಿ ಪ್ರಸನ್ನವಾಗಲು) । **ಉಪೇತಿಃ**—(ನಿನ್ನನ್ನು) ಸಮೀಪಿಸಲು ಪ್ರಯತ್ನವು । **ಕಾ ಭುವತ್**—ಎಂತಹುದು ಆದಿತು ? । **ಮನೀಷಾ**—(ನಮ್ಮ) ಸ್ತುತಿಯು । **ಶಂತಮಾ**—(ನಿನಗೆ) ಹೆಚ್ಚಾಗಿ ಸುಖಕರವಾಗಲು । **ಕಾ**--ಎಂತಹುದು (ಆಗಬೇಕು) ? । **ಕೋ ವಾ**—ಯಾವ ಯಜಮಾನನು ತಾನೇ । **ಯಜ್ಞೈಃ**—(ನಿನ್ನ ಸಂಬಂಧವಾದ) ಯಾಗಗಳಿಂದ । **ದಕ್ಷಂ**—ಏಳಿಗೆಯನ್ನು (ಬಲವನ್ನು) । **ಪರಿ ಆಪ**—ಹೊಂದಿದನು ? । **ತೇ**—ನಿನಗೆ । **ಕೇನ ಮನಸಾ**--ಎಂತಹ ಮನಸ್ಸಿನಿಂದ । **ದಾಶೇಮ**—(ಹವಿರಾದಿಗಳನ್ನು) ಅರ್ಪಿಸೋಣ ? ।

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಮನಸ್ಸನ್ನು ಪ್ರಸನ್ನೀಕರಿಸಿಕೊಳ್ಳಲು ನಾವು ಯಾವ ರೀತಿ ಪ್ರಯತ್ನಪಡಬೇಕು ? (ನಾವು ಮಾಡುವ) ಸ್ತುತಿಯು (ನಿನಗೆ) ಹಿತಕರವಾಗಲು ಹೇಗಿರಬೇಕು ? (ನಿನಗೆ ಇಷ್ಟವಾದ) ಯಜ್ಞಗಳನ್ನು ಮಾಡಿ ಯಾವನು ಬಲಾದಿಗಳನ್ನು ಪಡೆದಿದ್ದಾನೆ ? (ನಾವು) ಯಾವ ಮನೋಭಾವದಿಂದ (ನಿನಗೆ) ಹವಿರಾದಿಗಳನ್ನು ಅರ್ಪಿಸೋಣ ?

English Translation.

What approximation of the mind, Agni, to you, can be accomplished for our good, what can a hundred encomiums (effect.); who, by sacrifices, has obtained your might? with what intent may we offer you (oblations)?

॥ ವಿಶೇಷವಿಷಯಗಳು ॥

ಮನಸೋ ವರಾಯೆ ಕಾ ಉಪೇತಿಃ—ನಿವಾರಣಾಯೆ ಅವಸ್ಥಾಪನಾಯೆ ಕೀದೃಶಮುಪಗಮನಂ ಭವೇತ್ । ಯಜ್ಞವಮಾಡುವ ಯಜಮಾನರುಗಳಾದ ನಾವು ಯಜ್ಞವಾಡುವುದೇ ಮೊದಲಾದ ಕರ್ಮಗಳ ಆಚರಣೆಯಿಂದ ನಿನ್ನ ಮನಸ್ಸು ನಮ್ಮಲ್ಲಿಯೇ ನೆಲಸುವಹಾಗೆಯೂ, ಬೇರೆಯವರಲ್ಲಿ ಬೆರೆಯದಿರುವಂತೆಯೂ ಇರುವಹಾಗೆ ಒಲಿಸಿಕೊಳ್ಳುವ ಉಪಾಯವು ಯಾವುದೆಂಬುದಾಗಿ ತಿಳಿದು ಆದರಂತೆ ನಡೆಸಲು ನಾವು ಸಮರ್ಥರಾಗಿಲ್ಲವು ಎಂದು ಅಗ್ನಿಯ ಮಹಿಮೆಯ ಅತಿಶಯವು ಈ ಪ್ರಶ್ನೆಯಿಂದ ತಿಳಿಯುವುದು. ವರಾಯ ಎಂಬ ಶಬ್ದಕ್ಕೆ ಸಾಯಣರು **ಮನಸಃ ವಿಷಯೋಂತರೇಭ್ಯಃ ನಿವಾರಣಂ ತ್ವಯ್ಯೇವ ಅವಸ್ಥಾಪನಂ** ನಮ್ಮ ಮನಸ್ಸನ್ನು ಬೇರೆಯ ಕಡೆಗೆ ಹೋಗದಂತೆ ತಪ್ಪಿಸಿ ನಿನ್ನಲ್ಲಿಯೇ ನೆಲಸುವಂತೆ ಮಾಡುವುದು ಎಂಬ ಅರ್ಥವು ಬರುವಹಾಗೆ ನಿನ್ನ ಮನಸ್ಸನ್ನು ಒಲಿಸಿಕೊಳ್ಳುವ ಉಪಾಯ ಎಂದು ಅರ್ಥವನ್ನು ಮಾಡಿರುವರು. ಸ್ಕಂದಸ್ವಾಮಿಗಳು—**ವರಾಯೆ-ವರಶಬ್ದಃ ಶ್ರೇಷ್ಠವಚನಃ** ವರಶಬ್ದವು ಶ್ರೇಷ್ಠವೆಂಬ ಅರ್ಥವನ್ನು ಬೋಧಿಸುವುದು. ಎಂದು ವ್ಯಾಖ್ಯಾನವಮಾಡಿ **ಕಾ ತವ ಉಪೇತಿಃ** ಎಲೈ ಅಗ್ನಿಯೇ ನಿನ್ನನ್ನು ಹೊಂದುವ ಶ್ರೇಷ್ಠವಾದ ಉಪಾಯವು ಯಾವುದು? ಎಂದು ಅರ್ಥ ಮಾಡಿರುವರು

ಕೋ ವಾ ಯಜ್ಞೈಃ ದಕ್ಷಂ ತೇ ಪರಿ ಆಸೆ-ಕೋ ವಾ ಯೆಜಮಾನಃ ತವ ಸಂಬಂಧಿಭಿರ್ಯಾಗೈಃ ವೃದ್ಧಿಂ ಬಲಂ ವಾ ಪರ್ಯಾಪ್ನೋತ್ । ಅಗ್ನಿಯನ್ನು ಸ್ತೋತ್ರವಾಡುವದು ಅಥವಾ ಯಜ್ಞವನ್ನು ಆಚರಿಸುವುದು ಎಂಬ ಎರಡು ವಿಧವಾದ ಕರ್ಮಾಚರಣೆಯಿಂದ ನಿನ್ನನ್ನು ಒಲಿಸಿಕೊಳ್ಳುವುದು (ನೈಯತ್ಯವು) ನಿಯತವಾಗಿ ಆಗುವುದಾದರೆ ನಮ್ಮ ಮನಸ್ಸು ಈ ಕರ್ಮಗಳನ್ನು ಆಚರಿಸಲು ನಿನ್ನಲ್ಲಿ ಸ್ಥಿರವಾಗಿ ಇರಬೇಕಾದದ್ದು ಆವಶ್ಯಕವು. ಸ್ಥಿರವಾದ ಮನಸ್ಸಿಲ್ಲದೆ ಆಚರಿಸಿದ ಕರ್ಮವಾಗಲಿ ಸ್ತುತಿಯಾಗಲಿ ಸರಿಯಾದ ಫಲವನ್ನು ಕೊಡದಿರುವ ಕಾರಣ ಆಯಾಯ ಉಪಾಸನೆಯು ಆಯಾಯ ದೇವತಾಪ್ರೀತಿಜನಕವಾಗಲು ಉಚಿತವಾಗುವುದಿಲ್ಲ ಆದ್ದರಿಂದಲೇ **ಕೇನ ಮನಸಾ ಹವೀಂಷಿ ದಾಶೇಮ** ನಿನ್ನ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ನಿನಗೆ ಹವಿಸ್ಸನ್ನು ಅರ್ಪಿಸುವ ಮನಸ್ಸನ್ನು ನಮಗೆ ಅನುಗ್ರಹಿಸು ಎಂಬರ್ಥವು—ಯಾವ ಮನಸ್ಸಿನಿಂದ ನಿನಗೆ ಹವಿಸ್ಸನ್ನು ಅರ್ಪಿಸೋಣ ಎಂಬ ಪ್ರಶ್ನೆಯಿಂದ ತಿಳಿದುಬರುವುದು. ದಕ್ಷ ಶಬ್ದಕ್ಕೆ ಬಲ, ವೃದ್ಧಿ ಎಂದು ಅರ್ಥವನ್ನು ಸಾಯಣರು ಹೇಳಿರುವರು. ಸ್ಕಂದಸ್ವಾಮಿಗಳು—**ಕೋ ವಾ ಯೆಜ್ಞೈಃ ದಕ್ಷಂ ತೇ ಪರ್ಯಾಪ** ಎಂಬ ಈ ವಾಕ್ಯದಲ್ಲಿ **ದಕ್ಷಶಬ್ದೋತ್ರಾತ್ಮವಚನಃ** ದಕ್ಷ ಶಬ್ದವು ಇಲ್ಲಿ ಆತ್ಮವಾಚಿಯಾಗಿರುವುದು ಎಂದು ಹೇಳಿ,

ಉತ ಸ್ವೇನ ಕ್ರತುನಾ ಸಂ ವದೇತ ಶ್ರೇಯೋಂಸಂ ದಕ್ಷಂ ಮನಸಾ ಜಗೃಭ್ಯಾತ್ ।

(ಋ ಸಂ. ೧೦-೨೧-೨)

ಎಂಬ ಋಕ್ಕನ್ನು ಉದಹರಿಸಿರುವರು ಮತ್ತು ದಕ್ಷಶಬ್ದವು **ಮನೋ ವಚನೋ ವಾ** ಮನಸ್ಸು ಎಂಬ ಅರ್ಥವನ್ನು ಬೋಧಿಸುವದು ಈ ವಿಷಯದಲ್ಲಿ—

ಇಂದ್ರ ಶ್ರೇಷ್ಠಾನಿ ದ್ರವಿಣಾನಿ ಧೇಹಿ ಚಿತ್ತಿಂ ದಕ್ಷಸ್ಯ ಸುಭಗತ್ವಮಸ್ಮೇ ।

(ಋ. ಸಂ. ೨-೨೧-೬)

ಎಂಬ ಋಕ್ಕಿನಲ್ಲಿ ದಕ್ಷಶಬ್ದವು ಮನೋವಾಚಿಯಾಗಿರುತ್ತದೆ. ಎಂದು ವ್ಯಾಖ್ಯಾನಮಾಡಿರುವರು ಇದರಿಂದ **ತವಾತ್ಮಾನಂ ಮನೋ ವಾ ಪರ್ಯಾಪ ಸರ್ವತೋ ವ್ಯಾಪ್ನೋತಿ**—ಎಲೈ ಅಗ್ನಿಯೇ, ನಿನ್ನ ಆತ್ಮನನ್ನಾಗಲಿ, ನಿನ್ನ ಮನಸ್ಸನ್ನಾಗಲಿ ಎಲ್ಲಾ ವಿಧದಿಂದಲೂ ವ್ಯಾಪಿಸುವ ಉಪಾಯವು ಯಾವುದು? ಅದನ್ನು ತಿಳಿದು ನಾವುಗಳು ನಿನಗೆ ಹವಿಸ್ಸನ್ನು ಅರ್ಪಿಸಿ ನಿನ್ನ ಪ್ರೀತಿಯನ್ನು ಸಂಪಾದಿಸುವ ಕರ್ಮಗಳನ್ನು ಆಚರಿಸೋಣ ಎಂದು ಅರ್ಥವನ್ನು ಮಾಡಿರುವರು. ದಕ್ಷಶಬ್ದವು ಓಜಃ, ಸಾಹಃ, ಮೊದಲಾದ ಇಪ್ಪತ್ತೈದು ಬಲನಾಮಗಳಲ್ಲಿ (ನಿ ೩-೯) ಪರಿಗಣಿತವಾಗಿರುತ್ತದೆ. ಈ ಶಬ್ದವು ಅಕಾರಾಂತವಾಗಿಯೂ ಸಕಾರಾಂತವಾಗಿಯೂ ಇರುವುದು **ದಕ್ಷತಿರುತ್ಸಾಹಾರ್ಥಃ ದಕ್ಷ ಇತಿ ಸಕಾರಾಂತಂ ಬಲನಾಮ** ಎಂದು ಸ್ಕಂದಸ್ವಾಮಿಗಳು ಹೇಳಿ ಈ ವಿಷಯಸಮರ್ಥನೆಗಾಗಿ—

ಮಿತ್ರಂ ಹುವೇ ಪೂತದಕ್ಷಂ ವರುಣಂ ಚ ರಿಶಾದಸಂ ।

(ಋ. ಸಂ. ೧-೨೩-೨)

ಮಿತ್ರಂ ವಯಂ ಹವಾಮಹೇ ವರುಣಂ ಸೋಮಪೀತಯೇ ।
ಜಜ್ಞಾನಾ ಪೂತದಕ್ಷಸಾ ॥

(ಋ. ಸಂ. ೧-೨೩-೪)

ಎಂಬ ಋಕ್ಕುಗಳನ್ನು ಉದಾಹರಣೆಗಾಗಿ ಕೊಟ್ಟಿರುವರು

॥ ವ್ಯಾಕರಣಪ್ರಕ್ರಿಯಾ ॥

ಉಪೇತಿಃ—ಉಪ ಉಪಸರ್ಗ ಇಣ್ ಗತೌ ಧಾತು ಇದಕ್ಕೆ ಭಾವಾರ್ಥದಲ್ಲಿ **ಸ್ತ್ರಿಯಾಂ ಕ್ತಿನ್** ಎಂಬುದರಿಂದ ಕ್ತಿನ್ ಪ್ರತ್ಯಯ ತಾದಿ ನಿತ್ ಆದ ಪ್ರತ್ಯಯಾಂತವು ಪರದಲ್ಲಿರುವುದರಿಂದ **ತಾದೌ ಚ ನಿತಿ** (ಪಾ ಸೂ. ೬-೩-೫೧) ಎಂಬುದರಿಂದ ಗತಿಗೆ (ಋ) ಪ್ರಕೃತಿಸ್ವರ ಬರುತ್ತದೆ

ವರಾಯೆ—ವೃಞ್ ವರಣೇ ಧಾತು ಪ್ರಯೋಜಕವ್ಯಾಪಾರತೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಈ ಧಾತುವಿಗೆ **ಗ್ರಹವೃದೃನಿಶ್ಚಿಗಮಶ್ಚ** (ಪಾ. ಸೂ ೩-೩-೫೮) ಎಂಬುದರಿಂದ ಅಪ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ ಅಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

ಭುವತ್—ಭೂ ಸತ್ತಾಯಾಂ, ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ **ಇತಶ್ಚ ಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೭) ಎಂಬುದರಿಂದ ಅದರ ಇಕಾರಕ್ಕೆ ಲೋಪ **ಲೇಟೋಽಡಾಟೌ** (ಪಾ ಸೂ ೩-೪-೯೪) ಎಂಬುದರಿಂದ ಅದಕ್ಕೆ ಅಡಾಗಮ **ಬಹುಲಂ ಛಂದಸಿ** ಸೂತ್ರದಿಂದ ಶಪಿಗೆ ಲುಕ್. ಕೇವಲ ತಿಪ್ ಪರದಲ್ಲಿರುವುದರಿಂದ **ಭೂಸುವೋಸ್ತಿಙಿ** (ಪಾ. ಸೂ ೭-೩-೮೮) ಎಂಬುದರಿಂದ ಧಾತುವಿನ ಇಕ್ಕಿಗೆ

ಗುಣನಿಷೇಧ. **ಅಚಿಶ್ನುಧಾತುಭ್ರುವಾಂ** ಸೂತ್ರದಿಂದ ಉವಙಾದೇಶ. ಭುವತ್ ಎಂದು ರೂಪವಾಗುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಸಿಪ್ ಪಿತ್ತಾದುದರಿಂದ ಅನುದಾತ್ತ ಆಗ ಧಾತುಸ್ವರ ಉಳಿಯುತ್ತದೆ

ದಕ್ಷಂ—ದಕ್ಷ ವೃದ್ಧೌ ಧಾತು ಇದಕ್ಕೆ ಭಾವಾರ್ಥದಲ್ಲಿ ಅಥವಾ ಕರಣಾರ್ಥದಲ್ಲಿ ಘಞ್ ಪ್ರತ್ಯಯ. ಞಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ಆಪಃ—ಆಪ್ಲೃ ವ್ಯಾಪ್ತೌ ಧಾತು ಲಿಟ್ ಪ್ರಥಮಪುರುಷ ಏಕವಚನಾಂತರೂಪ. ಆತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ದಾಶೇಮ—ದಾಶೃ ದಾನೇ, ಧಾತು. ಲಿಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ನಿತ್ಯಂ ಙಿತಃ** (ಪಾ. ಸೂ. ೩-೪-೯೯) ಎಂಬುದರಿಂದ ಸಕಾರಲೋಪ. ಯಾಸುಟಾಗಮ. ಇಯಾದೇಶ ಯಲೋಪ. ಆತಿಙಂತದಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೧ ॥

॥ ಸಂಹಿತಾಪಾಠಃ ॥

ಏಹ್ಯಗ್ನ ಇಹ ಹೋತಾ ನಿ ಷೀದಾದಬ್ರುಃ ಸು ಪುರಏತಾ ಭವಾ ನಃ ।
ಅವತಾಂ ತ್ವಾ ರೋದಸೀ ವಿಶ್ವಮಿನ್ವೇ ಯಜಾ ಮಹೇ ಸೌಮನಸಾಯ ದೇವಾನ್ ॥ ೨ ॥

॥ ಪದಪಾಠಃ ॥

ಆ । ಇಹಿ । ಅಗ್ನೇ । ಇಹ । ಹೋತಾ । ನಿ । ಷೀದ । ಅದಬ್ಧಃ । ಸು । ಪುರಃ ಎತಾ । ಭವ । ನಃ ।

ಅವತಾಂ । ತ್ವಾ । ರೋದಸೀ ಇತಿ । ವಿಶ್ವಮಿನ್ವೇ ಇತಿ ವಿಶ್ವಂ ಇನ್ವೇ । ಯಜ । ಮಹೇ । ಸೌಮನಸಾಯ । ದೇವಾನ್ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಏಹಿ । ಆಗಚ್ಛ । ಇಹಾಸ್ಮಿನ್ಯಜ್ಞೇ ಹೋತಾ ದೇವಾನಾಮಾಹ್ವಾತಾ ಸನ್ನಿ ಷೀದ । ಉಪವಿಶ । ನೋಽಸ್ಮಾಕಂ ಪುರಏತಾ ಪುರತೋ ಗಂತಾ ಸು ಭವ । ಸುಷ್ಠು ಭವ । ಯಸ್ಮಾತ್ತ್ವಮದಬ್ಧೋ ರಾಕ್ಷಸಾದಿಭಿರಹಿಂಸ್ಯೋಽಸಿ । ತಾದೃಶಂ ತ್ವಾಂ ವಿಶ್ವಮಿನ್ವೇ ಸರ್ವಂ ವ್ಯಾಪ್ನುವತ್ಯೈ ರೋದಸೀ ದ್ಯಾವಾಪೃಥಿವ್ಯೌ ತ್ವಾ ತ್ವಾಮವತಾಂ । ರಕ್ಷತಾಂ । ಆಗತ್ಯೋಪವಿಶ್ಯ ಚ ದ್ಯಾವಾಪೃಥಿವೀಭ್ಯಾಂ ರಕ್ಷಿತಶ್ಚ ಸನ್ ಮಹೇ ಮಹತೇ ಸೌಮನಸಾಯ ಸೌಮನಸ್ಯಾಯ ದೇವಾನ್ದಾನಾದಿಗುಣಯುಕ್ತಾನಿಂದ್ರಾದೀನ್ಯಜ । ಹವಿರ್ಭಿಃ ಪೂಜಯ ॥ ನಿ ಷೀದ । ಸದೇರಪ್ರತೇರಿತಿ ಷತ್ವಂ । ಸೌಮನಸಾಯ । ಸುಮನಸೋ ಭಾವಃ ಸೌಮನಸಂ । ತಸ್ಯೇದಮಿತಿ ಸಂಬಂಧಸಾಮಾನ್ಯ ಇತ್ಯಣ್ಪ್ರತ್ಯಯಃ । ಸ ಚಾತ್ರ ಭಾವಲಕ್ಷಣೇ ಸಂಬಂಧವಿಶೇಷೇ ಪರ್ಯವಸ್ಯತಿ । ಯದ್ವಾ । ಹಾಯನಾಂತಯುವಾದಿಭ್ಯೋಽಣ್ । ಪಾ. ೫-೧-೧೩೦ । ಇತಿ ಭಾವೇಽಣ್ । ಯುವಾದಿಸ್ವಸ್ಯ ಸಾಕೋ ದ್ರಷ್ಟವ್ಯಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲ್ಲೆ ಅಗ್ನಿಯೇ । **ಏಹಿ**—ಬಾ । **ಇಹ**—ಈ ಯಜ್ಞದಲ್ಲಿ । **ಹೋತಾ**—(ದೇವತೆಗಳನ್ನು) ಆಹ್ವಾನಮಾಡುವವನಾಗಿ । **ನಿ ಷೀದ**--ಕುಳಿತುಕೋ । **ಅದಬ್ಧಃ**—ರಾಕ್ಷಸಾದಿಗಳಿಂದ ಅಹಿಂಸ್ಯನಾದ (ನೀನು) । **ನಃ**—ನಮ್ಮ । **ಪುರ ಏತಾ**—ಮುಂದೆ ಹೋಗುವವನಾಗಿ (ಮುಂದಾಳಾಗಿ) । **ಸು ಭವ**—ಚೆನ್ನಾಗಿ ಆಗು । **ವಿಶ್ವಮಿನ್ವೇ**--ಎಲ್ಲವನ್ನೂ ವ್ಯಾಪಿಸಿರುವ । **ರೋದಸೀ**—ಭೂಮ್ಯಾಕಾಶಗಳು । **ತ್ವಾ**—(ಅಂತಹ) ನಿನ್ನನ್ನು । **ಅವತಾಂ**—ರಕ್ಷಿಸಲಿ । **ಮಹೇ**—ಹೆಚ್ಚಾದ । **ಸೌಮನಸಾಯ**—ಮನಃಪ್ರಸಾದಕ್ಕಾಗಿ । **ದೇವಾನ್**—(ಇಂದ್ರಾದಿ) ದೇವತೆಗಳನ್ನು । **ಯಜ**—(ಹವಿರಾದಿಗಳಿಂದ) ಪೂಜಿಸು

॥ ಭಾವಾರ್ಥ ॥

ಎಲೈ ಅಗ್ನಿಯೇ, ಇಲ್ಲಿಗೆ ಬಾ, (ದೇವತೆಗಳ) ಹೋತೃವೇ, ಇಲ್ಲಿ ಆಸೀನನಾಗು, ರಾಕ್ಷಸಾದಿಗಳಿಂದ ಅಪ್ರತಿಹತನಾದ ನೀನು ನಮಗೆ ಮುಂದಾಳಾಗು, ಸರ್ವವ್ಯಾಪಿಗಳಾದ ಭೂಮ್ಯಾಕಾಶಗಳು ನಿನ್ನನ್ನು ರಕ್ಷಿಸಲಿ, ಇಂತಹ ನೀನು, ದೇವತೆಗಳಿಗೆ ತೃಪ್ತಿಯಾಗುವಂತೆ ಹವಿರಾದಿಗಳಿಂದ ಅವರನ್ನು ಪೂಜಿಸು.

English Translation

Come, Agni, hither, invoker (of the Gods), sit down, be our preceder; for you are irresistable, may the all-expansive heaven and earth defend you, that you may worship the Gods to their great satisfaction.

॥ ವಿಶೇಷನಿಷಯಗಳು ॥

ವಿಶ್ವಮಿನ್ವೇ ರೋದಸೀ ತ್ವಾ ಅವತಾಂ—ಸರ್ವಂ ವ್ಯಾಪ್ನುವಂತ್ಯೌ ದ್ಯಾವಾಪೃಥಿವ್ಯೌ ತ್ವಾಂ ರಕ್ಷತಾಂ। ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಭೂಮ್ಯಂತರಿಕ್ಷಗಳು ರಾಕ್ಷಸರಿಂದ ಯಾವ ವಿಧನಾದ ಹಿಂಸೆಗೂ ಒಳಗಾಗದೆ ಇರುವ ನಿನ್ನನ್ನು ರಕ್ಷಿಸಲಿ ಎಂದು ಅಗ್ನಿಯ ವಿಷಯದಲ್ಲಿ ಯಾಗಮಾಡುವವರ ಪ್ರಾರ್ಥನೆಯು **ಉರು, ತುವಿ** ಮೊದಲಾದ ಬಹು ಎಂಬ ಅರ್ಥವನ್ನು ಬೋಧಿಸುವ ಹನ್ನೆರಡು ನಾಮಗಳಲ್ಲಿ (ನಿ. ೩-೧೩) ಪಠಿತವಾಗಿರುವ ವಿಶ್ವಶಬ್ದವು ಇಲ್ಲಿ **ಸರ್ವ** ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುತ್ತದೆ

ಅಗ್ನಿಯನ್ನು ರಕ್ಷಿಸುವ ಮಟ್ಟಿನ ಮಹಿಮೆಯು ದ್ಯಾವಾಪೃಥಿವಿಗಳಿಗೆ ಇರುವುದನ್ನು ಯಾಸ್ಕರು ನಿರುಕ್ತದಲ್ಲಿ —

ಕತರಾ ಪೂರ್ವಾ ಕತರಾಪರಾಯೋಃ ಕಥಾ ಜಾತೇ ಕವಯಃ ಕೋ ವಿನೇದ।
ವಿಶ್ವಂ ತ್ಮನಾ ಬಿಭೃತೋ ಯದ್ಧ ನಾಮ ವಿ ವರ್ತೇತೇ ಅಹನೀ ಚಕ್ರಿಯೇವ ॥

(ಋ. ಸಂ. ೧-೧೮೫-೧)

ಎಂಬ ಋಕ್ಕನ್ನು ಉದಹರಿಸಿ **ದ್ಯಾವಾಪೃಥಿವ್ಯೋರ್ಮಹಿಮಾನಮಾಚಷ್ಟೇ** ಎಂದು ಹೇಳಿರುವರು. ಈ ದ್ಯಾವಾಪೃಥಿವಿಗಳಿಗೆ ಇರುವ ಪೂರ್ವಾಪರಭಾವವು ಸ್ಪಷ್ಟವಾಗಿ ತಿಳಿಯಲು ಶಕ್ಯವಲ್ಲವು. ಇವು ಒಟ್ಟಿಗೆ ಉತ್ಪನ್ನವಾಗಿರುತ್ತವೆಯೋ ಅಥವಾ ಯಾವ ರೀತಿಯಿಂದ ಉತ್ಪನ್ನವಾಗಿರುತ್ತವೆಯೋ ಅದನ್ನು ಯಾವನೂ ತಿಳಿದಿಲ್ಲವು ಆದರೆ ಶಾಸ್ತ್ರಗಳ ಸ್ವಾವಾಣ್ಯದಿಂದ **ತೇ ಅಣ್ಣಕಪಾಲೇ ರಜತಂ ಚ ಸುವರ್ಣಂ ಚಾಭವತಾಂ, ತದ್ಯತ್ ರಜತಂ ಸೇಯಂ ಪೃಥಿವೀ ಯತ್ ಸುವರ್ಣಂ ಸಾ ದ್ಯೌರಿತಿ।** ಅಣ್ಣದ ಎರಡು ಭಾಗಗಳಾದವು. ಅವುಗಳಲ್ಲಿ ಒಂದು ಬೆಳ್ಳಿಯದಾಯಿತು. ಇನ್ನೊಂದು ಚಿನ್ನದ್ದಾಯಿತು. ಬೆಳ್ಳಿಯ ಕಪಾಲವು ಭೂಮಿಯಾಗಿಯೂ, ಚಿನ್ನದ ಕಪಾಲವು ದ್ಯುಲೋಕವಾಗಿಯೂ ಆಯಿತು ಎಂಬುವುದರಿಂದ ಈ ದ್ಯಾವಾಪೃಥಿವಿಗಳು ಒಟ್ಟಿಗೆ ಉತ್ಪನ್ನಗಳಾಗಿರುವುವು ಎಂದು ತಿಳಿದುಬರುವುದು ಮತ್ತು ಈ ದ್ಯಾವಾಪೃಥಿವಿಗಳು ಎಲ್ಲವನ್ನೂ, ಎಲ್ಲ ಪ್ರಾಣಿಗಳನ್ನೂ ಧರಿಸಿರುವುವು. ಅಹೋರಾತ್ರಿಗಳೂ ಕೂಡ ರಥದ ಚಕ್ರಗಳ ಹಾಗೆ ಇವುಗಳಿಗೆ ಸಂಬಂಧಪಟ್ಟಿರುತ್ತವೆ ಎಂದು ಈ ಮಂತ್ರದ ಅರ್ಥವು. ಇದರಿಂದ ದ್ಯಾವಾಪೃಥಿವಿಗಳ ಮಹಿಮೆಯು ಉಕ್ತವಾಗಿರುವುದು.

ಮಹೇ—ಮಹತೇ, ಸೌಮನಸಾಯ, ಸೌಮನಸ್ಯಾಯ—ಯಾಗಮಾಡುವ ನಮಗೆ ಅತಿಶಯವಾದ ಗುಣಗಳಿಂದ **ಕೂಡಿದ** ಮನಸ್ಸು ಉಂಟಾಗುವುದಕ್ಕಾಗಿ ದೇವತೆಗಳನ್ನು ಹವಿರ್ಭಾಗಗಳಿಂದ ಪೂಜಿಸು ಎಂದು ಅಗ್ನಿಯನ್ನು ಕುರಿತು ಪ್ರಾರ್ಥನೆಯು.

॥ ವ್ಯಾಕರಣಪ್ರಕ್ರಿಯಾ ॥

ಏಹಿ—ಆ+ಇಹಿ ಏಹಿ-ಆಙ್ ಉಪಸರ್ಗ ಇಣ್ ಗತೌ ಧಾತು ಹಿಗೆ ಜಿತ್ವವಿಧಾನಮಾಡಿರುವುದರಿಂದ ತನ್ನಿಮಿತ್ತವಾಗಿ ಧಾತುವಿಗೆ ಗುಣಬರುವುದಿಲ್ಲ ಉಪಸರ್ಗದೊಡನೆ ಗುಣಸಂಧಿ ತಿಙಂತನಿಘಾತಸ್ವರ ಬರುತ್ತದೆ

ನಿಷೀದ—ನಿ ಉಪಸರ್ಗ ಷದ್ಲೃ ವಿಶರಣಗತ್ಯವಸಾದನೇಷು ಧಾತು ಲೋಟ್‌ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ **ಸೇರ್ಧ್ಯಪಿಚ್ಚೆ** ಎಂಬುದರಿಂದ ಅದಕ್ಕೆ ಹಿ ಆದೇಶ ಶಪ್ ವಿಕರಣ. **ಪಾಘ್ರಾ-ಧ್ಮಾಸ್ಥಾ—**(ಪಾ ಸೂ ೭-೩-೭೮) ಎಂಬುದರಿಂದ ಧಾತುವಿಗೆ ಸೀದಾದೇಶ. **ಅತೋಹೇಃ** (ಪಾ ಸೂ. ೬-೪-೧೦೫) ಎಂಬುದರಿಂದ ಹಿಗೆ ಲುಕ್ **ಸದಿರಪ್ರತೇಃ** (ಪಾ. ಸೂ ೮-೩-೬೬) ಪ್ರತಿಭಿನ್ನವಾದ ಉಪಸರ್ಗದಲ್ಲಿರುವ ನಿಮಿತ್ತದ (ಇಣ್) ಪರದಲ್ಲಿರುವ ಸದ್ ಧಾತುವಿನ ಸಕಾರಕ್ಕೆ ಷತ್ವ. ಎಂಬುದರಿಂದ ಇಲ್ಲಿ ಉಪಸರ್ಗದಲ್ಲಿರುವ ಇಕಾರದ ಪರದಲ್ಲಿರುವುದರಿಂದ ಷತ್ವ ತಿಙಂತಕ್ಕೆ ನಿಘಾತಸ್ವರ ಬರುತ್ತದೆ

ಅದಬ್ಧಃ—ನ ದಬ್ಧಃ ಅದಬ್ಧಃ ನಞ್‌ತತ್ಪುರುಷಸಮಾಸ **ತತ್ಪುರುಷೇ ತುಲ್ಯಾರ್ಥ—**(ಪಾ ಸೂ. ೬-೩-೭) ಎಂಬುದರಿಂದ (ನಞ್) ಪೂರ್ವಪದ ಪ್ರಕೃತಿಸ್ವರ ಬರುತ್ತದ

ಪುರವಿತಾ—ಇಣ್ ಗತೌ ಧಾತು ಇದಕ್ಕೆ ಶರ್ತೃರ್ಧದಲ್ಲಿ ತೃಚ್ ಪ್ರತ್ಯಯ ತನ್ನಿಮಿತ್ತವಾಗಿ ಧಾತುವಿಗೆ ಗುಣ ಪುರಃಏತಾ ಪುರ ಏತಾ. **ಗತಿಕಾರಕೋಪಪದಾತ್ ಕೃತ್** (ಪಾ ಸೂ ೬-೨-೧೯೬) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ ಏತಾ ಎಂಬುದು **ಚಿತಃ** ಸೂತ್ರದಿಂದ ಅಂತೋದಾತ್ತವಾಗುತ್ತದೆ

ಅವತಾಂ—ಅವ ರಕ್ಷಣೇ ಧಾತು. ಲೋಟ್ ಪ್ರಥಮಪುರುಷದ್ವಿವಚನದಲ್ಲಿ ತಸ್ ಪ್ರತ್ಯಯ. **ಲೋಟೋ ಲಙ್ವತ್** ಸೂತ್ರದಿಂದ ಲಙ್ವದ್ಭಾವವಿರುವುದರಿಂದ **ತಸ್ಥಸ್ಥ—**(ಪಾ ಸೂ ೩-೪-೧೦೧) ಎಂಬುದರಿಂದ ತಸಿಗೆ ತಾಮಾದೇಶ. ಶಪ್ ವಿಕರಣ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಅದುಪದೇಶದ ಪರದಲ್ಲಿ ಲಸಾರ್ವಧಾತುಕವು (ಣಮ್) **ತಾಸ್ಯನುದಾತ್ತೇತ್—**(ಪಾ. ಸೂ ೬-೧-೧೮೬) ಎಂಬುದರಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

ಯಜ—ಯಜ ದೇವಪೂಜಾಸಂಗತಿಕರಣದಾನೇಷು. ಲೋಣ್ಮಧ್ಯಮ-ಪುರುಷ ಏಕವಚನರೂಪ ಹಿಂದೆ ಭವ ಎಂಬಲ್ಲಿಯೂ ಇಲ್ಲಿಯೂ **ದ್ವ್ಯಚೋ೭ತಸ್ತಿಙಃ** (ಪಾ ಸೂ ೬-೩-೧೩೫) ಎಂಬುದರಿಂದ ಎರಡು ಸ್ವರವಿರುವುದರಿಂದ ಸಂಹಿತಾರ್ಥದಲ್ಲಿ ದೀರ್ಘ ಬರುತ್ತದೆ.

ಮಹೇ—ಮಹತ್ ಶಬ್ದ ಚತುರ್ಥೀ ಏಕವಚನದಲ್ಲಿ ಮಹತೇ ಎಂದು ರೂಪವಾದಾಗ ಛಾಂದಸವಾಗಿ ತಕಾರಲೋಪವಾಗುತ್ತದೆ.

ಸೌಮನಸಾಯ—ಸುಹೃನಸೋ ಭಾವಃ ಸೌಮನಸಮ್. **ತಸ್ಯೇದಂ** (ಪಾ ಸೂ. ೪-೩-೧೨೦) ಎಂಬುದರಿಂದ ಸಂಬಂಧಸಾಮಾನ್ಯತೋರುವಾಗ ಅಣ್ ಪ್ರತ್ಯಯ. ಇಲ್ಲಿ ಭಾವರೂಪಸಂಬಂಧವಿಶೇಷದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಣಿತ್ತಾದುದರಿಂದ **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೨-೧೧೭) ಎಂಬುದರಿಂದ ಆದಿವೃದ್ಧಿ ಅಥವಾ **ಹಾಯನಾಂತಯುವಾದಿಭ್ಯೋಽಣ್** (ಪಾ. ಸೂ. ೪-೧-೧೩೦) ಎಂಬುದರಿಂದ ಭಾವಾರ್ಥದಲ್ಲಿ ಅಣ್ ಪ್ರತ್ಯಯ. ಯುವಾದಿಗಣದಲ್ಲಿ ಇದು ಪಠಿತವಾಗಿದೆ. ಹಿಂದಿನಂತೇ ಪ್ರಕ್ರಿಯಾ ಪ್ರತ್ಯಯಸ್ವರದಿಂದ ಆಂತೋದಾತ್ತವಾಗುತ್ತದೆ. ಚತುರ್ಥೀ ಏಕವಚನಾಂತರೂಪ ॥ ೭ ॥

॥ ಸಂಹಿತಾಪಾಠಃ ॥

ಪ್ರ ಸು ವಿಶ್ವಾನ್ರಕ್ಷಸೋ ಧಕ್ಷ್ಯಗ್ನೇ ಭವಾ ಯಜ್ಞಾನಾಮಭಿಶಸ್ತಿಪಾವಾ ।
ಅಥಾ ವಹ ಸೋಮಪತಿಂ ಹರಿಭ್ಯಾಮಾತಿಥ್ಯಮಸ್ಮೈ ಚಕೃಮಾ ಸುದಾನ್ವೇ ॥ ೩ ॥

॥ ಪದಪಾಠಃ ॥

ಪ್ರ । ಸು । ವಿಶ್ವಾನ್ । ರಕ್ಷಸಃ । ಧಕ್ಷಿ । ಅಗ್ನೇ । ಭವ । ಯಜ್ಞಾನಾಂ । ಅಭಿಶಸ್ತಿಽಪಾವಾ ।
ಅಥ । ಆ । ವಹ । ಸೋಮಽಪತಿಂ । ಹರಿಽಭ್ಯಾಂ । ಆತಿಥ್ಯಂ । ಅಸ್ಮೈ । ಚಕೃಮ । ಸುಽದಾನ್ವೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಿಶ್ವಾನ್ಸರ್ವಾನ್ರಕ್ಷಸೋ ರಾಕ್ಷಸಾನ್ಪ್ರ ಸು ಧಕ್ಷಿ । ಪ್ರಕರ್ಷೇಣ ದಹ । ದಗ್ಧ್ವಾ ಚ ಯಜ್ಞಾನಾಮಸ್ಮಾಭಿರನುಷ್ಠೇಯಾನಾಂ ಯಾಗಾನಾಮಭಿಶಸ್ತಿಪಾವಾಭಿಶಸ್ತೇರ್ಹಿಂಸಾಯಾಃ ಪಾತಾ ರಕ್ಷಿತಾ ಭವ । ಅಥಾನಂತರಂ ಸೋಮಪತಿಂ ಸರ್ವೇಷಾಂ ಸೋಮಾನಾಂ ಪಾಲಕಮಿಂದ್ರಂ ಹರಿಭ್ಯಾಂ ತದೀಯಾಶ್ವಾಭ್ಯಾಮಾ ವಹ । ಅಸ್ಮದ್ಯಜ್ಞಂ ಪ್ರಾಪಯ । ಆಗತಾಯಾಸ್ಮೈ ಸುದಾನ್ವೇ ಶೋಭನಸ್ಯ ಫಲಸ್ಯ ದಾತ್ರೇ ಇಂದ್ರಾಯಾತಿಥ್ಯಮತಿಥ್ಯರ್ಹಂ ಸತ್ಕಾರಂ ಚಕೃಮ । ಕುರ್ಮಃ ॥ ಧಕ್ಷಿ । ದಹ ಭಸ್ಮೀಕರಣೇ । ಬಹುಲಂ ಛಂದಸೀತಿ ಶಪೋ ಲುಕ್ । ಥಶ್ಚೇಭಷ್ಟಾವಕರ್ತ್ವಷತ್ವಾನಿ । ಅಭಿಶಸ್ತಿಪಾವಾ । ಶಸು ಹಿಂಸಾಯಾಂ । ಅಸ್ಮಾದಭಿಪೂರ್ವಾದ್ಭಾವೇ ಕ್ತಿನ್ । ಅಭಿಶಸ್ತೇಃ ಪಾತೀತ್ಯಭಿಶಸ್ತಿಪಾವಾ । ಪಾ ರಕ್ಷಣೇ । ಅತೋ ಮನಿನ್ನಿತಿ ವನಿಪ್ । ಸೋಮಪತಿಂ । ಪತ್ಯಾದೈಶ್ವರ್ಯ ಇತಿ ಪೂರ್ವಪದಪ್ರಕೃತಿಸ್ವರತ್ವಂ । ಸುದಾನ್ವೇ । ಪೂರ್ವವದ್ದಾತೇರ್ವನಿಪ್ । ಅಲ್ಲೋಪೋ೭ನ ಇತ್ಯಾಕಾರಲೋಪಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ವಿಶ್ವಾನ್**--ಎಲ್ಲಾ । **ರಕ್ಷಸಃ**—ರಾಕ್ಷಸರನ್ನೂ । **ಪ್ರ ಸು ಧಕ್ಷಿ**--ಚೆನ್ನಾಗಿ ದಹಿಸು । **ಯಜ್ಞಾನಾಂ**—(ನಮ್ಮಿಂದ ಮಾಡಲ್ಪಡುವ) ಯಜ್ಞಗಳಿಗೆ । **ಅಭಿಶಸ್ತಿಪಾವಾ**—ಹಿಂಸೆಯಿಂದ ರಕ್ಷಿಸುವವನಾಗಿ । **ಭವ**--ಆಗು । **ಅಥ**—ಅನಂತರ। **ಸೋಮಪತಿಂ**--ಸೋಮಪತಿಯಾದ ಇಂದ್ರನನ್ನು । **ಹರಿಭ್ಯಾಂ**—(ಅವನ) ಎರಡು ಅಶ್ವಗಳಿಂದ । **ಆ ವಹ**—(ನಮ್ಮ ಯಜ್ಞಕ್ಕೆ) ಬರುವಂತೆ ಮಾಡು । **ಅಸ್ಮೈ**—(ಬಂದಂಥಾ) ಈ । **ಸುದಾನ್ವೇ**—ಒಳ್ಳೆಯ ಫಲಗಳನ್ನು ಕೊಡುವ ಇಂದ್ರನಿಗೆ । **ಆತಿಥ್ಯಂ**—ಆತಿಥಿಸತ್ಕಾರವನ್ನು । **ಚಕೃಮ**—ಮಾಡೋಣ

॥ ಭಾವಾರ್ಥ ॥

ಎಲೈ ಅಗ್ನಿಯೇ, ಎಲ್ಲಾ ರಾಕ್ಷಸರನ್ನೂ ನಾಶಮಾಡಿ, ನಮ್ಮ ಯಜ್ಞಗಳನ್ನು ನಿರ್ಬಾಧವನ್ನಾಗಿ ಮಾಡು ಅನಂತರ ಸೋಮಪತಿಯಾದ ಇಂದ್ರನನ್ನು ಯಾಗಶಾಲೆಗೆ ಬರಮಾಡು. ಆಗತನಾದ, ಸತ್ಫಲಪ್ರದಾತನಾದ ಇಂದ್ರನಿಗೆ ಆತಿಥಿಸತ್ಕಾರಮಾಡುತ್ತೇವೆ

English Translation

Utterly consume all the Rakshasas, Agni, and be the protecter of our sacrifices against interruption Bring hither the guardian of the Soma-Juice (Indra), with his steeds, that we may show hospitality to the giver of good.

॥ ವಿಶೇಷವಿಷಯಗಳು ॥

ಅಭಿಶಸ್ತಿಪಾವಾ—ಶಸು ಹಿಂಸಾಯಾಂ । ಪಾ ರಕ್ಷಣೇ । ಅಭಿಶಸ್ತೇರ್ಹಿಂಸಾಯಾಃ ಪಾತಾ ರಕ್ಷಿತಾ ಭವ । ಯಜ್ಞಗಳನ್ನು ಆಚರಿಸುವ ಯಜಮಾನರಿಗೂ ಮತ್ತು ಯಾಗಗಳಿಗೂ ಯಾವ ವಿಧವಾದ ಹಿಂಸೆಯೂ ಆಗದಿರುವಂತೆ ರಕ್ಷಿಸುವವನಾಗಿರು ಎಂದು ಅಗ್ನಿಯನ್ನು ಪ್ರಾರ್ಥಿಸುವುದು ಎಂದು ಸಾಯಣರೂ, ಯಾಗಗಳಿಗೂ ಯಾಗಮಾಡುವ ನಮಗೂ, ಹಿಂಸೆಮಾಡುವವರಿಂದಲೂ, ಹಿಂಸೆಯಿಂದಲೂ ತೊಂದರೆಯಾಗದಿರುವಂತೆ ರಕ್ಷಿಸುವವನಾಗು ಎಂದು ಸ್ಕಂದಸ್ವಾಮಿಗಳೂ ಅರ್ಥವನ್ನು ಮಾಡಿರುವರು.

ಸೋಮಪತಿಂ—ಸರ್ವೇಷಾಂ ಸೋಮಾನಾಂ ಪಾಲಕಂ—ಪಾ ರಕ್ಷಣೇ । ಎಂಬ ಧಾತುವಿನಿಂದ ನಿಷ್ಪನ್ನವಾದ ಪತಿಶಬ್ದಕ್ಕೆ ರಕ್ಷಿಸುವವನು ಎಂದು ಅರ್ಥವು. ದೇವತೆಗಳನ್ನು ಸಂತೋಷಪಡಿಸುವ ಹವಿಸ್ಸುಗಳ ರೂಪದಿಂದ ಇರುವ ದ್ರವ್ಯವು ಸೋಮಪದಕ್ಕೆ ಅರ್ಥವು. ಅಥವಾ ಹವಿರ್ಭಾಗಗಳನ್ನು ಸ್ವೀಕರಿಸುವ ಮಧ್ಯಸ್ಥಾನ ದೇವತೆಗಳು ಎಂದು ಅರ್ಥವು ಇವೆಲ್ಲಕ್ಕೂ ಇಂದ್ರನು ರಕ್ಷಕನಾಗಿರುವನು

ಹರಿಭ್ಯಾಂ ಆ ವಹ—ತದೀಯಾಶ್ವಾಭ್ಯಾಂ ಇಂದ್ರಂ ಅಸ್ಮದ್ಯಜ್ಞಂ ಪ್ರಾಪಯ—ಹರೀ ಇಂದ್ರಸ್ಯ (ನಿ. ೭–೨೮) ಇಂದ್ರನ ರಥದ ಕುದುರೆಗಳಿಗೆ ಹರೀ ಎಂದು ಹೆಸರು. ಇಂದ್ರನನ್ನು (ಅವನ ಕುದುರೆಗಳನ್ನು ಕಟ್ಟಿದ ರಥದಿಂದ) ನಮ್ಮ ಯಜ್ಞಕ್ಕೆ ಬರುವಹಾಗೆ ಮಾಡು, ಎಂದು ಅಗ್ನಿಯನ್ನು ಯಜ್ಞ ಮಾಡುವವರು ಪ್ರಾರ್ಥಿಸುವರು

ಸುದಾನ್ವೇ—ಶೋಭನಸ್ಯ ಫಲಸ್ಯ ದಾತ್ರೇ ಉತ್ತಮವಾದ ಸುಖಕರವಾದ ಫಲವನ್ನು ಯಾಗಮಾಡುವವರಿಗೂ ಇತರರಿಗೂ ಕೊಡುವವನಾದುದರಿಂದ ಇಂದ್ರನಿಗೆ ಈ ಪದದ ಅರ್ಥವು ಸರಿಯಾಗಿ ಒಪ್ಪುವುದಾಗಿರುವುದು

॥ ವ್ಯಾಕರಣಪ್ರಕ್ರಿಯಾ ॥

ಧಪ್ಸೈ—ದಹ ಭಸ್ಮೀಕರಣೇ ಧಾತು. ಇದಕ್ಕೆ ಲೋಟ್‌ಮಧ್ಯಮಪುರುಷ ಏಕವಚನದಲ್ಲಿ ಸಿಪ್ **ಸರ್ವೇ ವಿಧಯೆಶ್ಛಂದಸಿ ವಿಕಲ್ಪ್ಯಂತೇ** ಎಂಬುದರಿಂದ ಸಿಪ್ಪಿಗೆ ಹಿ ಆದೇಶ ಬರುವುದಿಲ್ಲ **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್ ದಹ್+ಸಿ ಎಂದಿರುವಾಗ **ಹೋಢಃ** (ಪಾ ಸೂ ೮-೨ ೩೧) ಎಂಬುದರಿಂದ ಹಕಾರಕ್ಕೆ ಢತ್ವ **ಏಕಾಚೋಬಶೋಭಷ್**—(ಪಾ ಸೂ. ೮-೨-೩೭) ಎಂಬುದರಿಂದ ಸಕಾರನಿಮಿತ್ತವಾಗಿ ದಕಾರರೂಪ ಬಶ್ಶಿಗೆ ಧತ್ವ. **ಷಢೋಃ ಕಃ ಸಿ** (ಪಾ ಸೂ. ೮-೨-೪೧) ಎಂಬುದರಿಂದ ಢಕಾರಕ್ಕೆ ಸಕಾರಪರದಲ್ಲಿರುವುದರಿಂದ ಕತ್ವ. ಆಗ ಕಕಾರ ನಿಮಿತ್ತವಾಗಿ ಪ್ರತ್ಯಯಸಕಾರಕ್ಕೆ **ಆದೇಶಪ್ರತ್ಯಯಯೋಃ** (ಪಾ ಸೂ ೮-೩-೫೯) ಎಂಬುದರಿಂದ ಷತ್ವ. ಧಪ್ಸೈ ಎಂದು ರೂಪವಾಗುತ್ತದೆ

ಭವ—ಭೂ ಸತ್ತಾಯಾಂ ಧಾತು ಲೋಟ್‌ಮಧ್ಯಮಪುರುಷ ಏಕವಚನರೂಪ ಹಿಂದೆ ಆಮಂತ್ರಿತವಿರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ.ಸೂ. ೮-೧-೭೨) ಎಂಬುದರಿಂದ ಅದಕ್ಕೆ ಅವಿದ್ಯಮಾನವದ್ಭಾವವಿರುವುದರಿಂದ ಅದರ ಹಿಂದೆ ತಿಙಂತವಿರುವುದರಿಂದ ಅತಿಙಃ ಎಂದು ಪರ್ಯುದಾಸಮಾಡಿರುವುದರಿಂದ ನಿಘಾತ ಸ್ವರ ಬರುವುದಿಲ್ಲ ಧಾತುಸ್ವರ ಉಳಿಯುತ್ತದೆ.

ಅಭಿಶಸ್ತಿಪಾವಾ—ಶಸು ಹಿಂಸಾಯಾಂ ಧಾತು ಇದಕ್ಕೆ ಅಭಿ ಎಂಬ ಉಪಸರ್ಗವು ಪೂರ್ವಪದದಲ್ಲಿರುವಾಗ ಭಾವಾರ್ಥದಲ್ಲಿ **ಸ್ತ್ರಿಯಾಂಕ್ತಿನ್** (ಪಾ. ಸೂ. ೩-೩-೯೪) ಎಂಬುದರಿಂದ ಕ್ತಿನ್ ಪ್ರತ್ಯಯ ಅಭಿಶಸ್ತಿ ಎಂದು ರೂಪವಾಗುತ್ತದೆ. ಹಿಂಸಾ ಎಂದರ್ಥ. ಅಭಿಶಸ್ತೇಃ (ಪಂಚಮಿ) ಪಾತೀತಿ ಅಭಿಶಸ್ತಿಪಾವಾ. ಪಾ ರಕ್ಷಣೇ ಧಾತು. ಅದಾದಿ. **ಅತೋಮನಿನ್**—(ಪಾ. ಸೂ. ೩-೨-೭೪) ಎಂಬುದರಿಂದ ವನಿಪ್ ಪ್ರತ್ಯಯ. ಅಭಿಶಸ್ತಿಪಾವನ್ ಶಬ್ದವಾಗುತ್ತದೆ ಸು ಪರವಾದಾಗ **ಸರ್ವನಾಮಸ್ಥಾನೇಚಾಸಂಬುದ್ಧೌ** (ಪಾ. ಸೂ ೬-೪-೮) ಎಂಬುದರಿಂದ ಉಪಧಾದೀರ್ಘ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ಸುಲೋಪ. **ನ ಲೋಪಃ ಪ್ರಾ**—ಎಂಬುದರಿಂದ ನಲೋಪ. ವನಿಪ್ ಪಿತ್ತಾದುದರಿಂದ ಪಾವನ್ ಎಂಬುದು ಧಾತುಸ್ವರವನ್ನು ಹೊಂದುತ್ತದೆ. ಕಾರಕಪೂರ್ವಪದವಾಗಿರುವುದರಿಂದ **ಗತಿಕಾರಕೋಪಪದಾತ್‌ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ವಹ—ವಹ ಪ್ರಾಪಣೇ ಧಾತು. ಲೋಟ್ ಮಧ್ಯಮಪುರುಷಏಕವಚನದಲ್ಲಿ ವಹ ಎಂದು ರೂಪವಾಗುತ್ತದೆ. ತಿಙಂತನಿಘಾತಸ್ವರ ಬರುತ್ತದೆ

ಸೋಮಪತಿಂ—ಸೋಮಾನಾಂ ಪತಿಃ ಸೋಮಪತಿಃ ಸಮಾಸಾಂತಸ್ವರವು ಪ್ರಾಪ್ತವಾದರೆ **ಪತ್ಯಾವೈಶ್ವರ್ಯೇ** (ಪಾ. ಸೂ. ೬-೩-೧೮೮) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ

ಅತಿಥ್ಯಂ—ನ ವಿದ್ಯತೇ ತಿಥಿಃ ಯಸ್ಯ ಸಃ ಅತಿಥಿಃ ಅತಿಥೇಃ ಅರ್ಹಂ ಅತಿಥ್ಯಮ್. ಷ್ಯಞ್ ಪ್ರತ್ಯಯ.

ಚಕೃಮ—ಡುಕೃಞ್ ಕರಣೇ ಧಾತು. ಲಿಟ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ಪರಸ್ಮೈಪದಾನಾಂ**—(ಪಾ. ಸೂ ೩-೪-೮೨) ಎಂಬುದರಿಂದ ಅದಕ್ಕೆ ಮಾದೇಶ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಉರದತ್ವ, ಹಲಾದಿಶೇಷ, ಚುತ್ವ. **ಕೃಸೃಭೃ**—(ಪಾ. ಸೂ ೭-೨-೧೩) ಸೂತ್ರದಿಂದ ನಿಯಮಮಾಡಿರುವುದರಿಂದ ಇಡಾಗಮ ಬರುವುದಿಲ್ಲ **ಅಸಂಯೋಗಾಲ್ಲಿಟ್‌ಕಿತ್** (ಪಾ. ಸೂ. ೧-೨-೫) ಎಂಬುದರಿಂದ ಕಿದ್ವದ್ಭಾವವಿರುವುದರಿಂದ ಗುಣಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸುದಾನ್ವೇ—ಸು ಉಪಪದವಾಗಿರುವಾಗ ದಾಞ್ (ದಾನೇ) ಧಾತುವಿಗೆ ಹಿಂದಿನಂತೆ **ಅತೋಮನಿನ್**—ಸೂತ್ರದಿಂದ ವನಿಪ್ ಪ್ರತ್ಯಯ ಸುದಾವನ್ ಶಬ್ದವಾಗುತ್ತದೆ ಚತುರ್ಥೀ ಏಕವಚನಪರವಾದಾಗ ಭ ಸಂಜ್ಞಾ ಇರುವುದರಿಂದ **ಅಲ್ಲೋಪೋ೨ನಃ** (ಪಾ. ಸೂ ೬-೪-೧೩೪) ಎಂಬುದರಿಂದ ಅನಿನ ಅಕಾರಕ್ಕೆ ಲೋಪ. ಸುದಾನ್ವೇ ಎಂದು ರೂಪವಾಗುತ್ತದೆ. **ಗತಿಕಾರಕೋಪಪದಾತ್‌ಕೃತ್** ಸೂತ್ರದಿಂದ ಗತಿಪೂರ್ವದಲ್ಲಿರುವುದರಿಂದ ಪ್ರಕೃತಿಸ್ವರ ಬರುತ್ತದೆ ॥ ೩ ॥

॥ संहितापाठः ॥

प्रजावता वचसा वह्निरासा च हुवे नि च सत्सीह देवैः ।
वेषि होत्रमुत पोत्रं यजत्र बोधि प्रयन्त-
र्जनितर्वसूनां ॥ ४ ॥

॥ पदपाठः ॥

प्रजाऽवता । वचसा । वह्निः । आसा । आ । च । हुवे । नि । च ।
सत्सि । इह । देवैः ।
वेषि । होत्रं । उत । पोत्रं । यजत्र । बोधि । प्रऽयंतः ।
जनितः । वसूनां ॥ ४ ॥

॥ सायणभाष्यं ॥

प्रजावता यजमानेभ्यो दातव्यापत्यादिफलोपेतेन वचसा स्तोत्रेण स्तुतेः सन् योऽग्निरासास्यस्थानीयया ज्वालया वह्निर्देवनेभ्यो हविषां वोढा तमग्निमा च हुवे । आह्वयामि । आहूतेः सन् त्वमिहास्मिन्यर्मणि देवैरस्मैः सह नि सत्सि च । निषीद च । निसद्य च हे यजत्र यजनीयाग्ने होत्रं होत्रा क्रियमाणं कर्म उताऽपि च पोत्रं पोत्रा कृतं कर्म च वेषि । कामयसे । वसूनां धनानां प्रयंतः प्रकर्षेण नियंतः वसून्यस्मदायत्तानि कुर्वन् जनितरात्मीयानां जनयितरग्ने बोधि । अस्मान्प्रबोधय ॥ आसा । पदं न्निर्त्यादिनास्यशब्दस्यासन्नादेशः । सुपां सुलुगिति तृतीयायाया डादेशः । टेर्लोपः उदात्तनिवृत्तिस्वरेण विभक्तेरुदात्तत्वं ।

ಹುವೇ। **ಹ್ವೇಷ್ಟೋ ಲಟಿ ಬಹುಲಂ ಛಂದಸೀತಿ ಸಂಪ್ರಸಾರಣಂ।** **ಬಹುಲಂ ಛಂದಸೀತಿ ಶಪೋ ಲುಕ್।** **ಚವಾಯೋಗೇ ಪ್ರಥಮೇತಿ ನಿಘಾತಪ್ರತಿಷೇಧಃ।** **ಬೋಧಿ।** **ಬುಧ ಅವಗಮನೇ।** **ಅಸ್ಮಾಣ್ಣ್ಯಂತಾಚ್ಛಂದಸ್ಯುಭಯಥೇತಿ ಹೇರಾರ್ಧಧಾತುಕತ್ವಾಣ್ಣೇರನಿಟೀತಿ ಣಿಲೋಪಃ।** **ಹುರುಶ್ಚೌ ಹೇರ್ಧಿಃ।** **ಧಾತೋರಂತ್ಯಲೋಪಶ್ಚಾಂದಸಃ।** **ಹೇರಪಿತ್ತ್ವಾತ್ತ್ವಸ್ಯೈವ ಸ್ವರಃ ಶಿಷ್ಯತೇ ॥**

॥ ಸ್ತುತಿಪದಾರ್ಥ ॥

ಪ್ರಜಾವತಾ—(ಯಜ್ಞದ) ಯಜಮಾನರಿಗೆ ಸಂತಾನದಾಯಕವಾದ। **ವಚಸಾ**—ಸ್ತುತಿಯಿಂದ (ಸ್ತುತನಾಗಿ)। **ಅಸಾ**—ಬಾಯಿಯಂತಿರುವ ಜ್ವಾಲೆಗಳಿಂದ। **ವಹ್ನಿಃ**—ದೇವತೆಗಳಿಗೆ ಹವಿಸ್ಸನ್ನು ಒಯ್ಯುವ (ಅಗ್ನಿಯನ್ನು)। **ಆ ಚ ಹುವೇ**—ಆಹ್ವಾನಿಸುತ್ತೇನೆ. (ಆಹೂತನಾಗಿ ನೀನು)। **ಇಹ**—ಈ ಕರ್ಮದಲ್ಲಿ (ನಡೆಯುವ ಸ್ಥಳದಲ್ಲಿ)। **ದೇವೈಃ**—(ಇತರ) ದೇವತೆಗಳೊಡನೆ। **ನಿ ಷತ್ಸಿ ಚ**—ಆಸೀನನಾಗು। **ಯಜತ್ರ**—ಯಜ್ಞದಲ್ಲಿ ಪೂಜ್ಯನಾದ ಎಲೈ ಅಗ್ನಿಯೇ। **ಹೋತ್ರಂ**—ಹೋತೃವಿನಕರ್ಮವನ್ನೂ। **ಉತ**—ಮತ್ತು। **ಪೋತ್ರಂ**—ಪೋತೃವಿನ ಕರ್ಮವನ್ನೂ। **ವೇಷಿ**—ಇಚ್ಛಿಸು (ಮಾಡು)। **ವಸೂನಾಂ**—ಧನದ। **ಪ್ರಯಂತಃ**—ನಿಯಮನಮಾಡುವವನೂ। **ಜನಿತಃ**—(ಸಮಸ್ತ ಪದಾರ್ಥಗಳ) ಉತ್ಪತ್ತಿಕಾರಣನೂ (ಆದ ಅಗ್ನಿಯೇ) **ಬೋಧಿ**—(ನಮ್ಮನ್ನು) ಜಾಗೃತರನ್ನಾಗಿ ಮಾಡು

॥ ಭಾವಾರ್ಥ ॥

ಜ್ವಾಲೆಗಳ ಮೂಲಕ ದೇವತೆಗಳಿಗೆ ಹವಿರ್ವಾಹಕನಾದ ಎಲೈ ಅಗ್ನಿಯೇ. ನಿನ್ನನ್ನು ನಮ್ಮ ಯಜ್ಞಕ್ಕೆ ಆಹ್ವಾನಿಸುತ್ತೇವೆ. (ಆಹೂತನಾಗಿ) ನೀನು ಇತರ ದೇವತೆಗಳೊಡನೆ ಬಂದು (ಸುಖವಾಗಿ) ಆಸೀನನಾಗು (ಆಸೀನನಾಗಿ) ಹೋತೃ ಮತ್ತು ಪೋತೃಗಳ ಕರ್ಮಗಳನ್ನು ಮಾಡು. ಧನಕ್ಕೆ ಆಶ್ರಯನೂ, (ಅದರ) ಉತ್ಪತ್ತಿಗೆ ಕಾರಣನೂ ಆದ ನೀನು, ನಮ್ಮನ್ನು (ನಮ್ಮ ಕರ್ಮಗಳಲ್ಲಿ) ಜಾಗೃತರನ್ನಾಗಿ ಮಾಡು.

English Translation

I invoke (you), you are the conveyer (of oblations) with your flames, with a hymn productive of progeny (to the worshipper), sit down here with the Gods, and deserving of worship, discharge the office of Hotri, or of Potri, and awaken us; you are the depositary and generator of riches

॥ ವಿಶೇಷವಿಷಯಗಳು ॥

ಪ್ರಜಾವತಾ ವಚಸಾ—**ಯಜಮಾನೇಭ್ಯೋ ದಾತವ್ಯಾಪತ್ಯಾದಿಫಲೋಪೇತೇನ ಸ್ತೋತ್ರೇಣ ಸ್ತುತಃ।** ಯಜ್ಞಮಾಡುವ ಯಜಮಾನರಿಗಾಗಿ ಪುತ್ರಾದಿ ಸಂತತಿಯನ್ನು ಅನಗ್ರಹಿಸುವ ಗುಣಗಳುಳ್ಳ

ಸ್ತೋತ್ರದಿಂದ ಅಗ್ನಿಯು ಸ್ತುತಿಸಲ್ಪಡುವನು ಎಂದು ಈ ಪದಗಳನ್ನು ಸಾಯಣರು ಅಗ್ನಿಪದಕ್ಕೆ ವಿಶೇಷಣಮಾಡಿರುವರು. ಮತ್ತು **ಆಸಾ** ಎಂಬ ಪದಕ್ಕೆ ಮುಖಸ್ಥಾನದಲ್ಲಿರುವ ಜ್ವಾಲೆಯೆಂದೂ ಇದರಿಂದ ಇತರ ದೇವತೆಗಳ ಹವಿರ್ಭಾಗಗಳನ್ನು **ಅವರಿಗಾಗಿ** ಯಜಮಾನರುಗಳು ಆರ್ಪಿಸುವುದನ್ನು ವಹಿಸುವವನಾಗಿರುವದರಿಂದ ವಹ್ನಿಯೆಂದೂ **ಅರ್ಥ**ವನ್ನು ಹೇಳಿರುವರು. ಸ್ಕಂದಸ್ವಾಮಿಗಳು—ಯಜ್ಞಮಾಡುವ ಯಜಮಾನರು ದೇವತೆಗಳಿಗಾಗಿ ಆರ್ಪಿಸುವ ಹವಿರ್ಭಾಗಗಳನ್ನು ವಹಿಸುವವನಾಗಿಯೂ ಬಲವುಳ್ಳವನಾಗಿಯೂ ಇರುವ ವಹ್ನಿಯಾದ ನೀನು **ಪ್ರಜಾವತಾ ಆಸಾ ವಚಸಾ** ಅತಿಶಯವಾದ ಗುಣಗಳುಳ್ಳ ಪುತ್ರರೂಪವಾದ ಫಲವನ್ನು ಅನುಗ್ರಹಿಸುವ, ತಾನಾಗಿ ಉಚ್ಚಾರಣೆಯನ್ನು ಹೊಂದಿರುವ, ಇತರ ದೇವತೆಗಳನ್ನು (ಕರೆಯುವ) ಆಹ್ವಾನಮಾಡುವ ವಾಕ್ಯಗಳಿಂದ ದೇವಾದಿಗಳನ್ನು ಆಹ್ವಾನಮಾಡು ಎಂದು ಅರ್ಥವನ್ನು ವಿವರಿಸಿರುವರು

ಹೋತ್ರಂ—ಹೋತ್ರಾ ಕ್ರಿಯಮಾಣಂ ಕರ್ಮ। ಯಜ್ಞದಲ್ಲಿ ಹವಿರ್ಭಾಗಗಳ ಸ್ವೀಕಾರಕ್ಕಾಗಿ ಆಯಾಯ ದೇವತೆಗಳನ್ನು ಅವರವರ ಸ್ತೋತ್ರಗಳನ್ನು ಹೇಳಿ ಕರೆಯುವವನು ಹೋತೃವೆನಿಸಿರುವನು ಇವನಿಂದ ಆಚರಿಸಲ್ಪಡುವ **ಕಾರ್ಯವು ಹೋತ್ರ**ವೆನಿಸಿರುವುದು. ಹೋತೃವೆಂಬ ಋತ್ವಿಜನ ಕರ್ತವ್ಯಕರ್ಮವಾದ ದೇವತೆಗಳ ಆಹ್ವಾನವು ಎಂದಭಿಪ್ರಾಯವು

ಪೋತ್ರಂ—ಪೋತ್ರಾ ಕೃತಂ ಕರ್ಮ। ಹೋತೃವಿನ ಪಾಗೆಯೇ ಪೋತೃವಿಗೂ ಅವನ ಕರ್ತವ್ಯ ಕರ್ಮವಿರುವದು. ಇವನು ಆಚರಿಸುವ ಕರ್ಮವು ಪೋತ್ರವೆನಿಸಿರುವುದು ಸ್ಕಂದಸ್ವಾಮಿಗಳ ಭಾಷ್ಯದಲ್ಲಿ **ಎಲೈ** ಅಗ್ನಿಯೇ ನೀನು ಹೋತೃ, ಪೋತೃ ಕರ್ಮಗಳನ್ನು ಆಚರಿಸು. ನೀನು ಯಾಗವನ್ನು ಆಚರಿಸುವವನಾಗಿ **ಯಜತ್ರ** ಎಂಬ ಶಬ್ದಕ್ಕೆ ವಾಚ್ಯನಾಗಿಯೂ ಇರುವ ಕಾರಣ ಯಾಗಾರ್ಹನಾಗಿಯೂ ಇರುತ್ತೀಯೆ. ಆದ್ದರಿಂದ ನಮ್ಮ ಸ್ತುತಿಗಳ ಅಭಿಪ್ರಾಯವನ್ನು ನೀನು ತಿಳಿದು ನನಗೆ ಬೇರೆ ಬೇರೆ ಉಪಾಯಗಳಿಂದ ಧನವನ್ನು ಅತಿಶಯವಾಗಿ ಕೊಡು ಎಂದು ಅರ್ಥವನ್ನು ವಿವರಿಸಿರುವರು.

ಜನಿತಃ—ಆಹುತಿದ್ವಾರಾ ಸರ್ವಸ್ಯ ಜನಯಿತಃ। ಜನೀ ಪ್ರಾದುರ್ಭಾವೇ ಎಂಬ ಧಾತುವು ಉತ್ಪತ್ತಿ ಎಂಬ ಅರ್ಥವುಳ್ಳದ್ದಾಗಿರುವುದು. ಅದು ಇಲ್ಲಿ ಪ್ರೇರಣಾರ್ಥದಲ್ಲಿ ಪ್ರಯುಕ್ತವಾಗಿರುವುದರಿಂದ ಅಗ್ನಿಯು ಯಜ್ಞಗಳಲ್ಲಿ ಹವಿರ್ಭಾಗಗಳನ್ನು ಸ್ವೀಕರಿಸಿ ಉತ್ಪನ್ನವಾಗಬಹುದಾದವುಗಳನ್ನು ಉತ್ಪತ್ತಿಯಾಗುವಂತೆ ಮಾಡುವನು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಪ್ರಜಾವತಾ—ಪ್ರಜಾಃ ಅಸ್ಯ ಸಂತಿ ಇತಿ ಪ್ರಜಾವತ್. **ತದಸ್ಯಾಸ್ತಿ**—(ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ. ಅಕಾರದ ಪರದಲ್ಲಿ ಬಂದುದರಿಂದ **ಮಾದುಪಧಾಯಾಶ್ಚ**—(ಪಾ. ಸೂ ೮-೨-೯೯) ಎಂಬುದರಿಂದ ಮಕಾರಕ್ಕೆ ವಕಾರಾದೇಶ. ತೃತೀಯಾ ಏಕವಚನಾಂತರೂಪ.

ವಚಸಾ—ವಚ ಸಂಭಾಷಣೇ ಧಾತು ಔಣಾದಿಕ ಅಸುನ್ ಪ್ರತ್ಯಯ ವಚಸ್ ಶಬ್ದವಾಗುತ್ತದೆ **ಘ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ತೃತೀಯಾ ಏಕವಚನಾಂತರೂಪ.

ಆಸಾ—ಆಸ್ಯಶಬ್ದ. ಇದಕ್ಕೆ ತೃತೀಯಾ ಏಕವಚನಪರವಾದಾಗ **ಪದ್ದನ್ನೋಮಾಸ್**—(ಪಾ. ಸೂ. ೬-೧-೬೩) ಎಂಬುದರಿಂದ ಆಸನ್ ಆದೇಶ. ತೃತೀಯಾವಿಭಕ್ತಿಗೆ **ಸುಸಾಂ ಸುಲುಕ್**—ಸೂತ್ರದಿಂದ ಡಾದೇಶ ಡಿತ್ತಾದುದರಿಂದ **ಡಿತಿ ಭಸ್ಯ ಟೇರ್ಲೋಪಃ** ಎಂಬುದರಿಂದ ಆಸನ್ ಎಂಬಲ್ಲಿರುವ ಟಿಗೆ(ಅನ್) ಲೋಪ ಅನುದಾತ್ತವಾವ ಟಾ ಪರವಾದಾಗ ಉದಾತ್ತಸ್ವರವಿಶಿಷ್ಟ ಅನಿಗೆ ಲೋಪಬಂದುದರಿಂದ **ಅನುದಾತ್ತಸ್ಯ ಚ ಯತ್ರೋದಾತ್ತ ಲೋಪಃ** (ಪಾ ಸೂ ೬-೧-೧೬೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಹುವೇ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ. ಧಾತು ಭ್ವಾದಿ ಲಟ್ ಉತ್ತಮಪುರುಷ ಏಕವಚನದಲ್ಲಿ ಇಟ್ ಪ್ರತ್ಯಯ. **ಬಹುಲಂ ಛಂದಸಿ** ಎಂಬುದರಿಂದ ನಿಮಿತ್ತವಿಲ್ಲದಿದ್ದರೂ ಧಾತುವಿಗೆ ಸಂಪ್ರಸಾರಣ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. **ಟಿತಆತ್ಮನೇಪದಾನಾಂ**-- ಎಂಬುದರಿಂದ ಪ್ರತ್ಯಯಕ್ಕೆ ಏತ್ವ **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್ **ಅಚೆಶ್ನುಧಾತುಭ್ರುವಾಂ**--ಎಂಬುದರಿಂದ ಉವಙಾದೇಶ ಚಕಾರವು ಹಿಂದ ಇರುವುದರಿಂದ **ಚವಾಯೋಗೇ ಪ್ರಥಮಾ** (ಪಾ ಸೂ. ೮-೧-೭೯) ಎಂಬುದರಿಂದ ನಿಘಾತಸ್ವತಿಷೇಧ ಬರುತ್ತದೆ ಆಗ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಸತ್ಸಿ—ಷದ್ಲೃ ವಿಶರಣಗತ್ಯವಸಾದನೇಷು ಧಾತು. ಇದಕ್ಕೆ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್ ನಿಮಿತ್ತವಿಲ್ಲದಿದ್ದುದರಿಂದ **ಸಾಹ್ವಾಧ್ಮಾ**—ಸೂತ್ರದಿಂದ ಸೀದಾದೇಶ ಬರುವುದಿಲ್ಲ **ಖರಿ ಚ** (ಪಾ ಸೂ ೮-೪-೫೫) ಎಂಬುದರಿಂದ ಚರ್ತ್ವ ತಿಜಂತನಿಘಾತಸ್ವರ ಬರುತ್ತದೆ.

ವೇಷಿ—ವೀ, ಗತಿವ್ಯಾಪ್ತಿಪ್ರಜನಕಾಂತ್ಯಸನಖಾದನೇಷು ಧಾತು ಅದಾದಿ. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. ಶಪಿಗೆ ಲುಕ್ ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ ಪ್ರತ್ಯಯಕ್ಕೆ ಷತ್ವ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ

ಬೋಧಿ--ಬುಧ ಅವಗಮನೇ. ಧಾತು ಪ್ರಯೋಜಕವ್ಯಾಪಾರತೋರುವುದರಿಂದ **ಹೇತುಮತಿ ಚ** (ಪಾ ಸೂ ೩-೧-೨೬) ಎಂಬುದರಿಂದ ಣಿಚ್. **ಪುಗಂತಲಘೂಪಧಸ್ಯ ಚ** ಎಂಬುದರಿಂದ ಣಿಚ್ ನಿಮಿತ್ತವಾಗಿ ಧಾತುವಿನ ಲಘೂಪಧಿಗೆ ಗುಣ ಣಿಜಂತಪದಮೇಲೆ ಲೋಟ್‌ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಅದಕ್ಕೆ ಹಿ ಆದೇಶ **ಛಂದಸ್ಯುಭಯಥಾ** ಎಂಬುದರಿಂದ ಹಿಗೆ ಆರ್ಧಧಾತುಕಸಂಜ್ಞೆ ಬರುವುದರಿಂದ ಇದನ್ನ ನಿಮಿತ್ತೀಕರಿಸಿ **ಸೇರಸಿಚಿ** (ಪಾ ಸೂ ೬-೧-೭೧) ಸೂತ್ರದಿಂದ ಣಿಗೆ ಲೋಪ. ಬೋಧ್+ಹಿ ಎಂದಿರುವಾಗ **ಹುಝಲ್‌ಭ್ಯೋ ಹೇರ್ಧಿಃ** (ಪಾ ಸೂ ೬-೪-೧೦೧) ಎಂಬುದರಿಂದ ಝಲಂತದಪರದಲ್ಲಿರುವುದರಿಂದ ಹಿಗೆ ಧಿತ್ವ. ಧಾತುವಿನ ಅಂತ್ಯ ಧಕಾರಕ್ಕೆ ಛಾಂದಸವಾಗಿ ಲೋಪಬರುತ್ತದೆ ಬೋಧಿ ಎಂದು ರೂಪವಾಗುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಹಿಗೆ ಅಪಿತ್ವವನ್ನು ಹೇಳಿರುವುದರಿಂದ ಪ್ರತ್ಯಯಸ್ವರ ಬರುವುದರಿಂದ ಅಂತೋದಾತ್ತವಾಗುತ್ತದೆ. ॥ ೪ ॥

॥ संहितापाठः ॥

यथा विप्रस्य मनुषो हविर्भिर्देवाँ अयजः कविभिः
कविः सन् ।
एवा होतः सत्यतर त्वमद्याग्ने मन्द्रयाजुह्वा
यजस्व ॥ ५ ॥

॥ पदपाठः ॥

यथा । विप्रस्य । मनुषः । हविःऽभिः । देवान् । अयजः । कविऽ-
भिः । कविः । सन् ।
एव । होतरिति । सत्यऽतर । त्वं । अद्य । अग्ने । मन्द्रया ।
जुह्वा । यजस्व ॥ ५ ॥

॥ सायणभाष्यं ॥

एकादशिनस्याग्नेयस्य सशेषस्यार्धा विप्रस्येत्येषा हविषुपुरोडाशस्य याज्या । सूत्रितं च प्रदानानामिति मण्डले । यथा विप्रस्य मनुषो हविर्भिः प्र कारवो मनना वच्यमानाः । अ. ३-२ । इति ॥

कविः क्रान्तदर्शी सन्हविर्भिर्मेधाविभिर्ऋत्विग्भिः सह विप्रस्य मेधाविनो मनुषो मनोर्यज्ञे हविर्भिर्हविरुपुरोडाशादिभिर्हेतुभूतैर्देवाँ अग्ने यथा देवानयजः एवमेव होतर्होर्मनिष्पादक सत्यतराति शयितेन सत्सु साधो अग्ने त्वमद्यास्मिन्यज्ञे मन्द्रयाहर्षयित्र्या जुह्वा होममुसाधनभूतया स्रुचा यजस्व । देवान्हविर्भिः पूजय ॥ मनुषः । मन ज्ञाने । बहुलमन्यत्रापीति मनेरुसिन्प्रत्ययः ॥

॥ ಶ್ರುತಿಪದಾರ್ಥ ॥

ಕವಿಃ ಸನ್—ಭೂತಜ್ಞಾನಿಯಾದ (ಸೀನು) । **ಕವಿಭಿಃ**—ಮೇಧಾವಿಗಳಾದ ಋತ್ವಿಜರಿಂದ (ಕೂಡಿ) । **ವಿಪ್ರಸ್ಯ**—ಜ್ಞಾನಿಯಾದ । **ಮನುಷಃ**—ಮನುವಿನ (ಯಜ್ಞದಲ್ಲಿ) । **ಹವಿರ್ಭಿಃ**—ಚರ್ವಾದಿಗಳಿಂದ । **ಯಥಾ**—ಹೇಗೆ । **ದೇವಾನ್**—(ಇಂದ್ರಾದಿ) ದೇವತೆಗಳನ್ನು । **ಅಯಜಃ**—ಪೂಜಿಸಿದೆಯೋ । (**ತಥಾ**—ಹಾಗೆ) । **ಹೋತಃ**—ಹೋಮನಿಷ್ಪಾದಕನಾದ । **ಸತ್ಯತರ**—ಸಾಧುಗಳಲ್ಲಿ ಉತ್ತಮನಾದ । **ಅಗ್ನೇ**—ಅಗ್ನಿಯೇ । **ತ್ವಂ**—ನಿನು । **ಅದ್ಯ**—ಈಗ (ಈ ಯಜ್ಞದಲ್ಲಿ) । **ಮಂದ್ರಯಾ**—ಹರ್ಷಜನಕವಾದ । **ಜುಹ್ವಾ**—(ಹೋಮಸಾಧನನಾದ) ಸ್ರುಕ್ಕಿನಿಂದ । **ಯಜಸ್ವ**—(ದೇವತೆಗಳನ್ನು ಹವಿರಾದಿಗಳಿಂದ) ಪೂಜಿಸು

॥ ಭಾವಾರ್ಥ ॥

ತ್ರಿಕಾಲಜ್ಞಾನಿಯಾದ ಎಲೈ ಅಗ್ನಿಯೇ, ನೀನು (ಹಿಂದೆ) ಜ್ಞಾನಿಯಾದ ಮನುವಿನ ಯಜ್ಞದಲ್ಲಿ, ಮೇಧಾವಿಗಳಾದ ಋತ್ವಿಜರಿಂದೊಡಗೂಡಿ, ಹೇಗೆ ದೇವತೆಗಳನ್ನು ಚರುಪುರೋಡಾಶಾದಿಗಳಿಂದ ತೃಪ್ತಿಪಡಿಸಿದೆಯೋ ಹಾಗೆ, ಈಗ ನಮ್ಮ ಯಜ್ಞದಲ್ಲಿ ಸಂತೋಷದಾಯಕವಾದ ಸ್ರುಕ್ಕಿನಿಂದ, ದೇವತೆಗಳನ್ನು ತೃಪ್ತಿಪಡಿಸು.

English Translation

As at the sacrifice of the holy Manu, you, a sage amongst sages did worship the Gods, with oblations, so also, Agni, veracious invoker of the Gods, do you today (present the oblations), with an exhilarating ladle

॥ ವಿಶೇಷವಿಷಯಗಳು ॥

ಏಕಾದಶಿನವೆಂಬ ಯಾಗದಲ್ಲಿ ಅಗ್ನಿಯನ್ನುದ್ದೇಶಿಸಿ ಮಾಡುವ ಪಶುಯಾಗದಲ್ಲಿ ಪಶುಪುರೋಡಾಶಹೋಮ ಮಾಡುವಾಗ **ಯಥಾ ವಿಪ್ರಸ್ಯ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಪ್ರದಾನಾನಾಂ** ಎಂಬ ಖಂಡದಲ್ಲಿ—**ಯಥಾ ವಿಪ್ರಸ್ಯ ಮನುಷೋ ಹವಿರ್ಭಿಃ ಪ್ರ ಕಾರವೋ ಮನನಾ ವಚ್ಯಮಾನಾಃ** ಎಂಬ ಸೂತ್ರದಿಂದ ವಿನಿಯೋಗವಾಗಿರುವುದು

ಮನ್ದ್ರಯಾ—**ಹರ್ಷಯಿತ್ರ್ಯಾ** । ಸ್ತುತಿ, ಮೋದ, ಮದ ಮೊದಲಾದ ಅನೇಕಾರ್ಥಗಳನ್ನು ಬೋಧಿಸುವ ಮದಿ ಧಾತುವಿನಿಂದ ನಿಷ್ಪನ್ನವಾದ **ಮನ್ದ್ರಾ** ಎಂಬ ಶಬ್ದವು ಇಲ್ಲಿ ಹೋಮಸಾಧನವನ್ನು ಬೋಧಿಸುವ **ಜುಹೂ** ಎಂಬುವ ಪದಕ್ಕೆ ವಿಶೇಷಣವಾಗಿರುವುದರಿಂದ ಸಂತೋಷವನ್ನು ಉಂಟುಮಾಡುವುದೆಂದು ಅರ್ಥವನ್ನು ಬೋಧಿಸುವುದು

ಜುಹ್ವಾ—**ಹೋಮಸಾಧನಭೂತಯಾ ಸ್ರುಚಾ** । ಯಜ್ಞದಲ್ಲಿ ಆಜ್ಯವನ್ನಾಗಲಿ **ಚರುಪುರೋಡಾಶ**ವನ್ನಾಗಲಿ ಅಗ್ನಿಯಲ್ಲಿ ಹೋಮವನ್ನು ಮಾಡುವಾಗ ಹೋಮಮಾಡುವ ಸ್ರುಕ್ಕಿಗೆ **ಜುಹೂಃ** ಎಂದು ಸಾಯಣರು

ಅರ್ಥಮಾಡಿರುವರು **ಮಂದ್ರಯಾ ಜುಹ್ವಾ** ಎಂದು ವಿಶೇಷಣವು ಇರುವುದರಿಂದ **ಮೋದಯಿತ್ರ್ಯಾ ಜುಹ್ವಾ ಹೂಯಮಾನತ್ವಾತ್ ಆಹುತಿರಭಿಪ್ರೇತಾ** ಹರ್ಷವನ್ನುಂಟುಮಾಡುವ ಆಹುತಿಯು ಎಂದು **ಜುಹೂ** ಶಬ್ದದ ಅರ್ಥವನ್ನು ಸ್ವಂದಸ್ವಾಮಿಗಳು ವಿವರಿಸಿರುವರು

ಕವಿಭಿಃ—ಮೇಧಾವಿಭಿಃ ಋತ್ವಿಗ್ಭಿಃ । ಕವಿಗಳು ಎಂದರೆ ಜ್ಞಾನವಂತರಾದವರು ಎಂದು ಅರ್ಥವು. ಇಲ್ಲಿ ತಿಳುವಳಿಕೆಯುಳ್ಳ ಋತ್ವಿಜರೆಂದು ಅರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಯಥಾ—ನಿಘಾತಸ್ಯ ಚ ಎಂಬುದರಿಂದ ಸಂಹಿತಾರ್ಥದಲ್ಲಿ ದೀರ್ಘ ಬರುತ್ತದೆ

ಮನುಷಃ- - ಮನ ಜ್ಞಾನೇ ಧಾತು **ಬಹುಲಮನ್ಯತ್ರಾಪಿ** (ಉ ಸೂ. ೨-೭೭) ಎಂಬುದರಿಂದ ಉಸಿನ್ ಪ್ರತ್ಯಯ. **ಆದೇಶಪ್ರತ್ಯಯಯೋಃ** ಎಂಬುದರಿಂದ ಪ್ರತ್ಯಯ ಸಕಾರಕ್ಕೆ ಷತ್ವ ಪ್ರತ್ಯಯವು ನಿತ್ತಾದುದರಿಂದ **ಇಷ್ಟಿತ್ಯಾದಿನಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಷಷ್ಠೀ ಏಕವಚನಾಂತರೂಪ.

ಆಯಜಃ—ಯಜ ದೇವಪೂಜಾಸಂಗತಿಕರಣದಾನೇಷು ಧಾತು ಲಿಟ್ ಮಧ್ಯಮಪುರುಷ ಏಕವಚನರೂಪ. **ನಿಘಾತೈರ್ಯೆ—**(ಪಾ ಸೂ. ೮-೧-೩೦) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ

ಸತ್ಯತರ—ಸತ್ಯಂ ಅಸ್ಯ ಅಸ್ತಿ ಸತ್ಯಃ **ಅರ್ಶಆದಿಭ್ಯೋಅಚ್** (ಪಾ ಸೂ. ೫-೨-೧೨೭) ಎಂಬುದರಿಂದ ಮತುಪರ್ಥದಲ್ಲಿ ಅಚ್ ಪ್ರತ್ಯಯ. ಅತಿಶಯೇನ ಸತ್ಯಃ ಸತ್ಯತರಃ **ದ್ವಿವಚನವಿಭಜ್ಯೋಪಪದೇ ತರಬೀಯಸುನೌ** (ಪಾ. ಸೂ. ೫-೩-೫೭) ಎಂಬುದರಿಂದ ಅತಿಶಯಾರ್ಥ ತೋರುವಾಗ ತರಪ್ ಪ್ರತ್ಯಯ. ಸಂಬುದ್ಧಿ ಏಕವಚನರೂಪ **ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ

ಅಗ್ನೇ—ಪಾದಾದಿಯಲ್ಲಿರುವುದರಿಂದ ಆಷ್ಟಮಿಕ (**ಆಮಂತ್ರಿತನಿಘಾತಸ್ವರ** ಬರುವುದಿಲ್ಲ **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ **ಆದ್ಯುದಾತ್ತಸ್ವರ** ಬರುತ್ತದೆ

ಯೆಜಸ್ವ—ಯಜ ದೇವಪೂಜಾಸಂಗತಿಕರಣದಾನೇಷು ಧಾತು ಲೋಟ್ ಮಧ್ಯಮಪುರುಷ ಏಕವಚನದಲ್ಲಿ **ಥಾಸಃ ಸೇ** (ಪಾ ಸೂ. ೩-೪-೮೦) ಎಂಬುದರಿಂದ ಸೇ ಆದೇಶ ಶಪ್ ವಿಕರಣ. **ಸವಾಭ್ಯಾಂವಾಮೌ** (ಪಾ. ಸೂ. ೩-೪-೯೧) ಎಂಬುದರಿಂದ ಸಕಾರದ ಪರದಲ್ಲಿರುವ ಏಕಾರಕ್ಕೆ ವಕಾರಾದೇಶ ಅತಿಜಂತವ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೫ ॥

ಎಪ್ಪತ್ತಾರನೆಯ ಸೂಕ್ತವು ಸಮಾಪ್ತವು.

ಎಪ್ಪತ್ತೇಳನೆಯ ಸೂಕ್ತವು

ಕಥೇತಿ ಪಂಚರ್ಚಂ ಚತುರ್ಥಂ ಸೂಕ್ತಂ ತ್ರೈಷ್ಟುಭಂ ಗೋತಮಸ್ಯಾರ್ಷಮಾಗ್ನೇಯಂ । ಅನುಕ್ರಾಂತಂ ಚ । ಕಥೇತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋಃ ಪೂರ್ವಸೂಕ್ತೇನ ಸಹೋಕ್ತಃ ಸೂಕ್ತ-ವಿನಿಯೋಗಃ ॥

ಅನುವಾದವು--**ಕಥಾ ದಾಶೇಮ** ಎಂಬ ಈ ಸೂಕ್ತವು ಹದಿನೂರನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋತಮನು ಋಷಿಯು ಅಗ್ನಿಯು ದೇವತೆಯು ಅನುಕ್ರಮಣಿಕೆಯಲ್ಲಿ **ಕಥಾ**--ಎಂದು ಮೊದಲಾಗಿ ಹೇಳಿರುವುದು ಪ್ರಾತರನುವಾಕಮಂತ್ರ ಮತ್ತು ಆಶ್ವಿನಶಸ್ತ್ರ ಮಂತ್ರಗಳಿಗಾಗಿ ಈ ಸೂಕ್ತವು ಹಿಂದಿನ ಸೂಕ್ತಗಳೊಡನೆ ವಿನಿಯೋಗಿಸಲ್ಪಡುವುದು

ಸೂಕ್ತ - ೭೭

॥ ಮಂಡಲ--೧ ॥ ಅನುವಾಕ—೧೫ ॥ ಸೂಕ್ತ—೭೭ ॥
॥ ಅಷ್ಟಕ—೧ ॥ ಅಧ್ಯಾಯಃ ೫ । ವರ್ಗ—೨೫ ।
। ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
॥ ಋಷಿಃ—ಗೋತಮೋ ರಾಹೂಗಣಃ ॥
॥ ದೇವತಾ—ಅಗ್ನಿಃ ।
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಕಥಾ ದಾಶೇಮಾಗ್ನಯೇ ಕಾಸ್ಮೈ ದೇವಜುಷ್ಟೋಚ್ಯತೇ
ಭಾಮಿನೇ ಗೀಃ ।
ಯೋ ಮರ್ತ್ಯೇಷ್ವಮೃತ ಋತಾವಾ ಹೋತಾ ಯಜಿಷ್ಠ ಇತ್ಕೃ-
ಣೋತಿ ದೇವಾನ್ ॥ ೧ ॥

॥ ಪದಪಾಠಃ ॥

ಕಥಾ । ದಾಶೇಮ । ಅಗ್ನಯೇ । ಕಾ । ಅಸ್ಮೈ । ದೇವಽಜುಷ್ಟಾ । ಉಚ್ಯತೇ ।
ಭಾಮಿನೇ । ಗೀಃ ।
ಯಃ । ಮರ್ತ್ಯೇಷು । ಅಮೃತಃ । ಋತಽವಾ । ಹೋತಾ । ಯಜಿಷ್ಠಃ । ಇತ್ ।
ಕೃಣೋತಿ । ದೇವಾನ್ ॥ ೧ ॥

॥ ಸಾಯಣಭಾಷ್ಯಂ ॥

ಅಸ್ಮಾ ಅಗ್ನಯೇ ಕಥಾ ದಾಶೇಮ । ಕಥಂ ಹವೀಂಷಿ ದದಾಮ । ಅಗ್ನೇರನುರೂಪಂ ಯಜ್ಞಂ ಕರ್ತುಮಶಕ್ತಾ ವಯಮಿತ್ಯರ್ಥಃ । ಅಥವಾಸ್ಮೈ ಭಾಮಿನೇ ತೇಜಸ್ವಿನೇಽಗ್ನಯೇ ದೇವಜುಷ್ಟಾ ಸರ್ವೈರ್ದೇವೈಃ ಸೇವಿತವ್ಯಾ ಗೀರ್ವಾಕ್ ಸ್ತುತಿರಪಿ ಕಾ ಕೀದೃಶ್ಯುಚ್ಯತೇ । ತಾದೃಶೀಂ ಸ್ತುತಿಮಪಿ ಕರ್ತುಂ ನ ಶಕ್ತಾ ಇತ್ಯರ್ಥಃ । ಅಮೃತೋ ಮರಣರಹಿತ ಋತಾವಾ ಋತವಾನ್ ಸತ್ಯವಾನ್ಯಜ್ಞವಾನ್ ವಾ ಹೋತಾ ದೇವಾನಾಮಾಹ್ವಾತಾ ಹೋಮನಿಷ್ಪಾದಕೋ ವಾ ಯಜಿಷ್ಠೋಽತಿಶಯೇನ ಯಷ್ಟಾ ಏವಂಭೂತೋ ಯೋಽಗ್ನಿರ್ಮರ್ತ್ಯೇಷು ಮರಣಧರ್ಮಸ್ವಸ್ಮಾಸು ವರ್ತಮಾನಃ ಸನ್ನೇವಾನಿತ್ಕೃಣೋತಿ ಹವಿರ್ಭಿರ್ಯುಕ್ತಾನ್ಕರೋತ್ಯೇವ । ತಾದೃಶಾಯಾಗ್ನಯೇ ಕಥಾ ದಾಶೇಮೇತಿ ಪೂರ್ವೇಣಾನ್ವಯಃ ॥ ಕಥಾ । ಥಾ ಹೇತೌ ಚ ಚ್ಛಂದಸೀತಿ ಥಾಪ್ರತ್ಯಯಃ । ಭಾಮಿನೇ । ಭಾ ದೀಪ್ತೌ । ಅರ್ತಿಸ್ತುಸ್ವಿತ್ಯಾದಿನಾ ಮನ್ಪ್ರತ್ಯಯಃ । ತತೋ ಮತ್ವರ್ಥೀಯ ಇನಿಃ । ಋತಾವಾ । ಛಂದಸೀವನಿಪಾವಿತಿ ಮತ್ಸರ್ಥೀಯೋ ವನಿಪ್ । ಅನ್ಯೇಷಾಮಪಿ ದೃಶ್ಯತ ಇತಿ ದೀರ್ಘತ್ವಂ ॥

॥ ಪ್ರತಿಪದಾರ್ಥ ॥

ಅಮೃತಃ—ಮರಣರಹಿತನಾದವನೂ । ಋತಾವಾ—ಸತ್ಯವಂತನಾದ (ಯಜ್ಞಯುಕ್ತನಾದ) ವನೂ, ಹೋತಾ- ದೇವತೆಗಳನ್ನು ಆಹ್ವಾಸಿಸುವವನೂ । ಯಜಿಷ್ಠಃ—ಹೆಚ್ಚಾಗಿ ಯಜನಮಾಡುವವನೂ ಆದ । ಯಃ—ಯಾವ (ಅಗ್ನಿಯು) । ಮರ್ತ್ಯೇಷು – ಮರಣಾಧೀನರಾದ (ನಮ್ಮಲ್ಲಿ ಇರುವ) । ದೇವಾನ್—ದೇವತೆಗಳನ್ನು । ಕೃಣೋತಿ ಇತ್—(ಹವಿರ್ಯುಕ್ತರನ್ನಾಗಿ) ಮಾಡಿಯೇ ಮಾಡುತ್ತಾನೋ । ಅಸ್ಮೈ ಅಗ್ನಯೇ—ಅಂತಹ ಅಗ್ನಿಗೆ । ಕಥಾ—ಹೇಗೆ (ಯಾವ ಪ್ರಕಾರವಾಗಿ) । ದಾಶೇಮ—ಹವಿರಾದಿಗಳನ್ನು ಕೊಡೋಣ? । ಭಾಮಿನೇ- ತೇಜಸ್ವಿಯಾದ (ಅಗ್ನಿಗೆ) । ದೇವಜುಷ್ಟಾ—ದೇವತೆಗಳಿಂದ ನೇಮಿಸಲ್ಪಡುವ । ಗೀಃ (ಸ್ತುತಿ ರೂಪವಾದ) ವಾಕ್ಯ । ಕಾ—ಎಂತಹುದು? । ಉಚ್ಯತೇ—(ಹೇಗೆ) ಉಚ್ಚರಿಸಲ್ಪಡುತ್ತದೆ?

॥ ಭಾವಾರ್ಥ ॥

ಅಮರನೂ, ಸತ್ಯವಂತನೂ, ದೇವತೆಗಳ ಹೋತೃವೂ, ಯಜ್ಞಕರ್ತೃವೂ ಆದ ಯಾವ ಅಗ್ನಿಯು, ಮರ್ತ್ಯರಾದ ನಮ್ಮಗಳಲ್ಲಿ ಇದ್ದು, ದೇವತೆಗಳಿಗೆ ಹವಿರಾದಿಗಳನ್ನು ಒದಗಿಸುತ್ತಾನೋ ಅಂತಹ ಅಗ್ನಿಗೆ ನಾವು ಅರ್ಪಿಸಬಹುದಾದ (ಹವಿರಾದಿಗಳು) ಎಂತಹವು? ಅಥವಾ ಕಾಂತಿಯುಕ್ತನಾದ ಅವನಿಗೆ ದೇವತೆಗಳಿಗೊಪ್ಪುವ ರೀತಿಯಲ್ಲಿ ಉಪಯೋಗಿಸಬಹುದಾದ ಸ್ತುತಿಯಾದರೂ ಯಾವುದು?

English Translation

What (oblations) may we offer to Agni? What praise is addressed to the luminous (Agni) that is agreeable to the Gods? that Agni who is immortal and observant of truth, who is the invoker of the Gods, the performer of sacrifices, and who (present) amongst men, conveys oblations to the deities,

॥ ವಿಶೇಷವಿಷಯಗಳು ॥

ಕಥಾ ದಾಶೇಮ ಅಗ್ನಯೇ—ಹೇಗೆ ಅಥವಾ ಯಾವ ವಿಧಾನದಿಂದ ಅಗ್ನಿಗೆ ಹವಿಸ್ಸನ್ನರ್ಪಿಸೋಣ? ಅಗ್ನಿಗೆ ಅನುರೂಪವಾದ ಮತ್ತು ಶ್ರೇಷ್ಠವಾದ ಹವಿರಾದಿ ದ್ರವ್ಯಗಳನ್ನು ಅರ್ಪಿಸಲು ನಮ್ಮಂತಹ ಮನುಷ್ಯರಿಗೆ ಅಸಾಧ್ಯವೆಂದಭಿಪ್ರಾಯವು

ಕಾ ದೇವಜುಷ್ಟಾ ಗೀಃ ಅಸ್ಮೈ ಭಾಮಿನೇ ಉಚ್ಯತೇ—ಇಂತಹ ತೇಜಸ್ವಿಯಾದ ಅಗ್ನಿಗೆ ಅರ್ಪಿಸುವ ಸ್ತೋತ್ರರೂಪವಾದ ವಾಕ್ಯವು ಹೇಗೆ ಇರಬೇಕು? ಅಂತಹ ಉತ್ತಮವಾದ ಸ್ತೋತ್ರವು ಯಾವುದು? ನಾವು ಅಗ್ನಿಯ ಗುಣಗಳಿಗೆ ಅನುಸಾರವಾದ ಉತ್ತಮವಾದ ಸ್ತೋತ್ರವನ್ನು ಮಾಡಲಸಮರ್ಥರೆಂದರ್ಥವು.

ದೇವಜುಷ್ಟಾ—**ಜುಷೀ ಪ್ರೀತಿಸೇವನಯೋಃ। ಸರ್ವೈರ್ದೇವೈಃಸೇವಿತವ್ಯಾ।** ಸಮಸ್ತ ದೇವತೆಗಳಿಗೂ ಇಷ್ಟವಾದ, ಪ್ರೀತಿಪಾತ್ರವಾದ

ಮರ್ತ್ಯೇಷು—ಮರಣಧರ್ಮಯುಕ್ತರಾದ ಮನುಷ್ಯರಲ್ಲಿ ಎಂದರೆ ಸ್ವಭಾವಸಿದ್ಧವಾಗಿ ಸಾವಿಗೀಡಾಗುವವರು, ಮನುಷ್ಯರು ಹುಟ್ಟಿದ ಮನುಷ್ಯರೆಲ್ಲ ಒಂದಲ್ಲ ಒಂದು ದಿನ ಸಾವಿಗೀಡಾಗಲೇ ಬೇಕು ಆದುದರಿಂದ ಮನುಷ್ಯರನ್ನು ಮರ್ತ್ಯರೆಂದೂ, ಮರಣಧರ್ಮರಹಿತರಾದ ದೇವತೆಗಳನ್ನು ಅಮರ್ತ್ಯರೆಂದೂ ಹೇಳುವ ರೂಢಿ ಇರುವುದು ಈ ಅರ್ಥದಲ್ಲಿ ಮರ್ತ್ಯ, ಅಮರ್ತ್ಯ ಎಂಬ ಶಬ್ದಗಳ ಪ್ರಯೋಗವು ಋಗ್ವೇದದಲ್ಲಿ ವಿಶೇಷವಾಗಿರುವುದು.

ಅಮೃತಃ—ಮರಣರಹಿತಃ। ಸಾವಿಲ್ಲದವನು, ಯಾವಾಗಲೂ ಇರುವವನು

ಋತಾವಾ—ಋತವೆಂದರೆ ಸತ್ಯ ಅಥವಾ ಯಜ್ಞ ಋತಾವಾ ಎಂದರೆ ಸತ್ಯಸ್ವಭಾವನು ಅಥವಾ ಯಜ್ಞಾದಿಗಳಲ್ಲಿ ಸ್ವಜಾರ್ಹನಾದವನು

ಹೋತಾ—ಮನುಷ್ಯರು ಮಾಡುವ ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸುವುದಕ್ಕಾಗಿ ದೇವತೆಗಳನ್ನು ಆಹ್ವಾನ ಮಾಡುವವನು. (ಅಗ್ನಿಯು)

ಯೆಜಿಷ್ಠಃ—ಅತಿಶಯೇನ ಯಷ್ಟಾ। ಹೋಮನಿಷ್ಪಾದಕನು. ಯಜ್ಞದಲ್ಲಿ ಯಜಮಾನನು ಅಗ್ನಿಯಲ್ಲಿ ಹೋಮಮಾಡಿದ ಆಹುತಿಗಳನ್ನು ದೇವತೆಗಳಿಗೆ ಒಯ್ಯುವುದರಿಂದ ಅಗ್ನಿಯನ್ನು ಯಜ್ಞನಿಷ್ಪಾದಕನೆಂದು ಹೇಳುವರು ಅಥವಾ ಅಗ್ನಿಯಿಲ್ಲದೆ ಯಜ್ಞವಿಲ್ಲವಾದ್ದರಿಂದಲೂ ಯಜ್ಞದಲ್ಲಿ ಅಗ್ನಿಗೇ ಮುಖ್ಯಪಾತ್ರವಿರುವುದರಿಂದಲೂ ಅಗ್ನಿಯನ್ನು ಯಜಿಷ್ಠ ಎಂದು ಹೇಳುವ ರೂಢಿ ಇದೆ

॥ ವ್ಯಾಕರಣಪ್ರಕ್ರಿಯಾ ॥

ಕಥಾ—ಕಿಮ್ ಶಬ್ದ. **ಥಾ ಹೇತೌ ಚ ಚ್ಛಂದಸಿ** (ಪಾ ಸೂ ೫-೩-೨೬) ಹೇತ್ವರ್ಥದಲ್ಲಿಯೂ ಪ್ರಕಾರಾರ್ಥದಲ್ಲಿಯೂ ಕಿಮ್ ಶಬ್ದಕ್ಕೆ ಥಾ ಪ್ರತ್ಯಯ ಎಂಬುದರಿಂದ ಇಲ್ಲಿ ಪ್ರಕಾರಾರ್ಥದಲ್ಲಿ ಥಾ ಪ್ರತ್ಯಯ **ಪ್ರಾಗ್‌ದಿಶೋ ವಿಭಕ್ತಿಃ** (ಪಾ ಸೂ. ೫-೩-೧) ಎಂಬುದರಿಂದ ಇದಕ್ಕೆ ವಿಭಕ್ತಿ ಸಂಜ್ಞೆ ಇರುವುದರಿಂದ ಇದು ಪರವಾದಾಗ **ಕಿಮಃ ಕಃ** (ಪಾ. ಸೂ ೭-೩-೧೦೩) ಎಂಬುದರಿಂದ ಕಿಮಿಗೆ ಕಾದೇಶ ಪ್ರತ್ಯಯಸ್ವರದಿಂದ ಅಂತೋದಾತ್ತ ವಾಗುತ್ತದೆ

ದಾಶೇಮ— ದಾಶೃ ದಾನೇ ಧಾತು ವಿಧಿಲಿಙ್ ಉತ್ತಮಪುರುಷದಲ್ಲಿ ಮಸ್ ಪ್ರತ್ಯಯ **ನಿತ್ಯಂಙಿತಃ** (ಪಾ. ಸೂ ೩-೪-೯೯) ಸೂತ್ರದಿಂದ ಆದರ ಸಕಾರಕ್ಕೆ ಲೋಪ. **ಯಾಸುಟ್ ಪರಸ್ಮೈಪದೇಷ್ವಲಿ** ಸೂತ್ರದಿಂದ ಯಾಸುಟಾಗಮ. ಶಪ್ ವಿಕರಣ. **ಅತೋಯೇಯಃ** (ಪಾ.ಸೂ.೭-೩-೮೦) ಎಂಬುದರಿಂದ ಇಯಾದೇಶ **ಲೋಪೋವ್ಯೋರ್ವಲಿ** ಎಂಬುದರಿಂದ ಯಕಾರಲೋಪ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ದೇವಜುಷ್ಟಾ—ಜುಷೀ ಪ್ರೀತಿಸೇವನಯೋಃ ಧಾತು ಕರ್ಮಣಿಯಲ್ಲಿ ಇದಕ್ಕೆ **ನಿಷ್ಠಾ** ಎಂಬುದರಿಂದ ಕ್ತ ಪ್ರತ್ಯಯ. ಷ್ಟುತ್ವದಿಂದ ತಕಾರಕ್ಕೆ ಟಕಾರಾದೇಶ ದೇವೈಃ **ಜುಷ್ಟಾ** ದೇವಜುಷ್ಟಾ **ತೃತೀಯಾಕರ್ಮಣಿ** (ಪಾ. ಸೂ ೬-೨-೪೮) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಉಚ್ಯತೇ—ವಚ ಪರಿಭಾಷಣೇ ಧಾತು. ಕರ್ಮಣಿಯಲ್ಲಿ **ಲಟ್** ಪ್ರಥಮಪುರುಷ ಏಕವಚನಕ್ಕೆ **ಟಿತಆತ್ಮನೇಪದಾನಾಂ**—ಸೂತ್ರದಿಂದ ಏತ್ವ. **ಸಾರ್ವಧಾತುಕೇ ಯಕ್**—(ಪಾ. ಸೂ. ೩-೧-೬೭) ಎಂಬುದರಿಂದ ಯಕ್. ಕಿತ್ ಪ್ರತ್ಯಯವಾದುದರಿಂದ **ವಚಿಸ್ವಪಿಯಜಾದೀನಾಂ ಕಿತಿ** (ಪಾ ಸೂ ೬-೧-೧೫) ಎಂಬುದರಿಂದ ಧಾತುವಿನ ವಕಾರಕ್ಕೆ ಸಂಪ್ರಸಾರಣ ಪೂರ್ವರೂಪ ಉಚ್ಯತೇ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಭಾಮಿನೇ—ಭಾ ದೀಪ್ತೌ ಧಾತು ಇದಕ್ಕೆ **ಅರ್ತಿಸ್ತುಸು**—(ಉ. ಸೂ. ೧-೧೫೭) ಎಂಬುದರಿಂದ ಮನ್ ಪ್ರತ್ಯಯ. ಭಾಮ ಎಂದು ರೂಪವಾಗುತ್ತದೆ ಭಾನುಃ ಅಸ್ಯ ಅಸ್ತಿ ಎಂದು ಅರ್ಥ ವಿವಕ್ಷಾಮಾಡಿದಾಗ **ಅತಇನಿಠನೌ**

(ಪಾ. ಸೂ ೫-೩-೧೧೫) ಎಂಬುದರಿಂದ ಇಸಿಪ್ರತ್ಯಯ. ಭಾಮಿನ್ ಶಬ್ದವಾಗುತ್ತದೆ ಸ್ವರ್ತ್ಯಯಸ್ವರದಿಂದ ಇಕಾರ ಉದಾತ್ತವಾಗುತ್ತದೆ

ಋತಾವಾ– ಋತಂ ಅಸ್ಯ ಅಸ್ತಿ ಇತಿ ಋತಾವಾ **ಛಂದಸೀವನಿಪೌ** ಎಂಬ ವಾರ್ತಿಕದಿಂದ ವತ್ವರ್ಥದಲ್ಲಿ ವನಿಪ್ ಪ್ರತ್ಯಯ ಋತವನ್ ಶಬ್ದವಾಗುತ್ತದೆ. ಸ್ವರ್ಧಮಾ ಸು ಪರವಾದಾಗ **ಸರ್ವನಾಮಸ್ಥಾನೇಚ್ಚಾಸಂಬುದ್ಧೌ** ಸೂತ್ರದಿಂದ ಉಪಧಾದೀರ್ಘ **ಹಲ್ಙ್ಯಾಭ್ಯೋ**– ಸೂತ್ರದಿಂದ ಸುಲೋಪ **ನಲೋಪಃ ಪ್ರಾತಿ**–ಎಂಬುದರಿಂದ ನಲೋಪ **ಅನ್ಯೇಷಾಮಪಿ ದೃಶ್ಯತೇ** (ಪಾ ಸೂ ೬-೩-೧೩೭) ಎಂಬುದರಿಂದ ತಕಾರಕ್ಕೂ ದೀರ್ಘ ಬರುತ್ತದೆ

ಯಜಿಷ್ಠಃ–ಅತಿಶಯೇನ ಯಷ್ಟಾ ಯಜಿಷ್ಠಃ **ತುಶ್ಛಂದಸಿ** (ಪಾ. ಸೂ ೫-೩-೫೯) ಎಂಬುದರಿಂದ ಅತಿಶಯಾರ್ಥತೋರ್ಯುಗಾಗ ಯಷ್ಟೃ ಎಂಬ ತೃಜಂತದ ಮೇಲೆ ಇಷ್ಠನ್ ಪರವಾದಾಗ ತೃಚ್ಚಿಗೆ ಲೋಪ ಯಜಿಷ್ಠ ಎಂದು ರೂಪವಾಗುತ್ತದೆ ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಕೃಣೋತಿ–ಕೃವಿ ಹಿಂಸಾಕರಣಯೋಶ್ಚ ಧಾತು. ಲಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. **ಧಿಷ್ಣಿಕೃಣ್ವ್ಯೋರಚೆ** (ಪಾ. ಸೂ. ೩-೧-೯೦) ಎಂಬುದರಿಂದ ಅಕಾರಾಂತಾದೇಶ ಉಸ್ಸು. ಇದಿತ್ತಾದುದರಿಂದ ನುಮಾಗಮ ಯಚ್ಛಬ್ದಸಂಬಂಧವಿರುವುದರಿಂದ **ಯದ್ಯತ್ತಾನ್ನಿತ್ಯಂ** (ಪಾ ಸೂ ೮-೧-೬೬) ಎಂಬುದರಿಂದ ನಿಘಾತಸ್ವರ ನಿಷೇಧ ಬರುತ್ತದೆ ಉ ಪ್ರತ್ಯಯ ಸ್ವರ ಉಳಿಯುವುದರಿಂದ ವಾಧ್ಯೋದಾತ್ತವಾಗುತ್ತದೆ ॥ ೧ ॥

॥ ಸಂಹಿತಾಪಾಠಃ ॥

ಯೋ ವಿಧ್ಯರೇಷು ಶಂತಮ ಋತಾವಾ ಹೋತಾ ತಮೂ
ನಮೋಭಿರಾ ಕೃಣುಧ್ವಂ ।
ಅಗ್ನಿರ್ಯದ್ದೇವಮರ್ತಾಯ ದೇವಾನ್ತ್ಸ ಚಾ ಬೋಧಾತಿ ಮನ-
ಸಾ ಯಜಾತಿ ॥ ೨ ॥

॥ ಪದಪಾಠಃ ॥

ಯಃ । ಅಧ್ವರೇಷು । ಶಂತಮಃ । ಋತಾವಾ । ಹೋತಾ । ತಂ । ಊಂ ಇತಿ । ನಮೋಭಿಃ । ಆ । ಕೃಣುಧ್ವಂ ।
ಅಗ್ನಿಃ । ಯತ್ । ವೇಃ । ಮರ್ತಾಯ । ದೇವಾನ್ । ಸಃ । ಚ । ಬೋಧಾತಿ । ಮನಸಾ । ಯಜಾತಿ ॥ ೨ ॥

॥ ಸಾಯಣಭಾಷ್ಯಂ ॥

ಯೋಽಗ್ನಿರಧ್ವರೇಷು ಯಾಗೇಷು ಶಂತಮೋಽತಿಶಯೇನ ಸುಖಕಾರೀ ಋತಾವಾ ಸತ್ಯವಾನ್ । ಯಥಾರ್ಥದರ್ಶೀತ್ಯರ್ಥಃ । ಹೋತಾ ದೇವಾನಾಮಾಹ್ವಾತಾ ಭವತಿ ಹೇ ಋತ್ವಿಗ್ಯಜಮಾನಾ ಯೂಯಂ ತಮು ತಮೇವಾಗ್ನಿಂ ನಮೋಭಿಃ ಸ್ತೋತ್ರೈರಾ ಕೃಣುಧ್ವಂ । ಅಭಿಮುಖೀಕುರುತ । ಯದ್ಯದಾಯಮಗ್ನಿರ್ಮರ್ತಾಯ ಮನುಷ್ಯಾಯ ಯಜಮಾನಾರ್ಥಂ ದೇವಾನ್ವೇಃ ವೇತಿ ಗಚ್ಛತಿ ತದಾನೀಂ ಸೋಽಗ್ನಿರ್ಯಷ್ಟವ್ಯಾನ್ದೇವಾನ್ವೇದಾನ್ಬೋಧಾತಿ ಚ । ಜಾನಾತಿ ಚ । ಜ್ಞಾತ್ವಾ ಚ ಮನಸಾ ನಮಸಾ ತಾನ್ಯಜಾತಿ । ಹವಿರ್ಭಿಃ ಪೂಜಯತಿ । ಅತಸ್ತಮೇವಾಗ್ನಿಮಾ ಕೃಣುಧ್ವಮಿತಿ ಯೋಜ್ಯಂ ॥ ವೇಃ । ವೀ ಗತ್ಯಾದಿಷು । ಭಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲಙ್ । ತಿಜಾಂ ತಿಜ್ಗೋ ಭವಂತೀತಿ ಪ್ರಥಮಪುರುಷೈಕವಚನಸ್ಯ ಮಧ್ಯಮಪುರುಷೈಕವಚನಾದೇಶಃ । ಬೋಧಾತಿ । ಬುಧ ಅವಗಮನೇ । ಲೇಟ್ಯಾಡಾಗಮಃ । ಶಪಃ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ಚವಾಯೋಗೇ ಪ್ರಥಮೇತಿ ನಿಘಾತಪ್ರತಿಷೇಧಃ । ಮನಸಾ । ಮಕಾರನಕಾರಯೋಃ ಸ್ಥಾನವಿಪರ್ಯಯಃ ॥

॥ ಪ್ರತಿಪದಾರ್ಥ ॥

ಯಃ—ಯಾವನು । **ಅಧ್ವರೇಷು**—ಯಾಗಗಳಲ್ಲಿ । **ಶಂತಮಃ**—ಅತ್ಯಂತ ಸುಖಕಾರಿಯೂ । **ಋತಾವಾ**—ಯಥಾರ್ಥದರ್ಶಿಯೂ । **ಹೋತಾ**—ದೇವತೆಗಳನ್ನು ಆಹ್ವಾನ ಮಾಡುವವನೂ (ಆಗಿದಾನೆಯೋ) । **ತಮು**—ಅದೇ ಅಗ್ನಿಯನ್ನೇ । **ನಮೋಭಿಃ**—ಸ್ತೋತ್ರಗಳಿಂದ । **ಆ ಕೃಣುಧ್ವಂ**—ಅಭಿಮುಖನನ್ನಾಗಿ ಮಾಡಿಕೊಳ್ಳಿ । **ಯತ್**—ಯಾವಾಗ । **ಅಗ್ನಿಃ**—ಅಗ್ನಿಯು । **ಮರ್ತಾಯ**—ಮನುಷ್ಯನಿಗಾಗಿ (ಯಜಮಾನನಿಗೋಸ್ಕರ) । **ದೇವಾನ್**—ದೇವತೆಗಳನ್ನು (ದೇವತೆಗಳ ಹತ್ತಿರ) ಆಹ್ವಾನಮಾಡುವುದಕ್ಕಾಗಿ । **ವೇಃ**—ಹೋಗುತ್ತಾನೆಯೋ । (**ತದಾನೀಂ**—ಆಗ) । **ಸಃ**—ಆ ಅಗ್ನಿಯು । **ಬೋಧಾತಿ**—(ಯಷ್ಟವ್ಯರಾದ ದೇವತೆಗಳನ್ನು) ತಿಳಿಯುತ್ತಾನೆ । **ಮನಸಾ**—ಸ್ತುತಿಗಳಿಂದ । **ಯಜಾತಿ ಚ**—(ಹವಿರಾದಿಗಳಿಂದ) ಪೂಜಿಸಿಯೂ ಪೂಜಿಸುತ್ತಾನೆ

॥ ಭಾವಾರ್ಥ ॥

ಅಗ್ನಿಯು ಯಾಗದ ಯಜಮಾನನ ಪರವಾಗಿ ದೇವತೆಗಳ ಹತ್ತಿರ ಹೊರಟಾಗ, (ಯಾರು ಯಾರನ್ನು ಪೂಜಿಸಬೇಕೆಂಬುದನ್ನು) ತಿಳಿದು, (ಅವರವರನ್ನು ತಕ್ಕ) ಸ್ತುತಿಗಳಿಂದ ತೃಪ್ತಿಪಡಿಸುತ್ತಾನೆ ಆದ್ದರಿಂದ ಯಾಗಗಳಲ್ಲಿ ಸುಖಕರನೂ, ಯಥಾರ್ಥದರ್ಶಿಯೂ, ದೇವತೆಗಳನ್ನು ಕರೆಯುವವನೂ ಆದ ಅಗ್ನಿಯನ್ನು ಸ್ತುತಿವಾಕ್ಯಗಳಿಂದ ಅಭಿಮುಖೀಕರಿಸಿಕೊಳ್ಳಿ.

English Translation.

bring hither, with prises, him who is most constant in sacrificies, observant of truth, and the invoker (of the Gods), for Agni, when he repairs to the Gods on the part of man, knows those (who are to be worshipped), and worships them with reverence.

॥ ವಿಶೇಷವಿಷಯಗಳು ॥

ಶಂತಮಃ—ತಿಂಚಾತಾ, ಶತೆರಾ ಮೊದಲಾದ ಇಪ್ಪತ್ತು ಸುಖನಾಮಗಳ ಮಧ್ಯದಲ್ಲಿ ಶಂ ಎಂಬ ಶಬ್ದವು ಪರಿತವಾಗಿರುವುದರಿಂದ ಶಂ ಎಂದರೆ ಸುಖವು (ನಿ ೩-೧೩) **ಅತಿಶಯೇನ ಸುಖಕಾರೀ**—(ಮನುಷ್ಯರಿಗೆ) ವಿಶೇಷವಾಗಿ ಸುಖವನ್ನುಂಟುಮಾಡುವವನು ಎಂದರ್ಥವು.

ಋತಾವಾ, ಹೋತಾ ಮರ್ತಾಯೆ—ಈ ಶಬ್ದಗಳ ವಿವರಣೆಯು ಹಿಂದಿನ ಋಕ್ಕಿನಲ್ಲಿ ಇರುವುದು

ವೇಃ—ವೀ ಗತ್ಯಾದಿಷು । ವೀ ಧಾತುವಿಗೆ ಗತ್ಯರ್ಥವಿರುವುದು. ಇಲ್ಲಿ ವೇಃ ಎಂದು ಮಧ್ಯಮಪುರುಷೈಕವಚನಕ್ಕೆ ಪ್ರಥಮಪುರುಷೈಕವಚನದ ಅರ್ಥವನ್ನು ಹೇಳಬೇಕೆಂದು ಭಾಷ್ಯಕಾರರು ಹೇಳಿರುವರು. **ವೇಃ**—ಹೋಗುತ್ತೀಯೆ ಎನ್ನುವುದಕ್ಕೆ ಬದಲಾಗಿ **ವೇಃ—ಹೋಗುತ್ತಾನೆ ಎಂಬರ್ಥವನ್ನು** ಹೇಳಬೇಕೆಂದಭಿಪ್ರಾಯವು

ದೇವಾನ್ ಸ ಚ ಬೋಧಾತಿ—ದೇವತೆಗಳನ್ನು ತಿಳಿಯುತ್ತಾನೆ ಎಂದರೆ ಯಜಮಾನನು ಯಜ್ಞದಲ್ಲಿ ಯಾವ ಯಾವ ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ಹೋಮಮಾಡುತ್ತಾನೆಯೋ ಆಯಾ ದೇವತೆಗಳನ್ನು ಯಜ್ಞವೇದಿಗೆ ಕರೆತರುವನೆಂದಭಿಪ್ರಾಯವು ಯಾವ ಕಾಲದಲ್ಲಿ ಯಾವ ದೇವತೆಗಳನ್ನು ಯಜ್ಞಭೂಮಿಗೆ ಕರೆತರಬೇಕೆಂಬ ತಿಳಿವಳಿಕೆಯು ಅಗ್ನಿಗೆ ಇರುವುದೆಂದಭಿಪ್ರಾಯವು

ನಮೋಭಿಃ—ನಮಸ್ಕಾರಗಳಿಂದ, ಸ್ತೋತ್ರಗಳಿಂದ (ನಿ. ೩-೨೦)

॥ ವ್ಯಾಕರಣಪ್ರಕ್ರಿಯಾ ॥

ಶಂತಮಃ—ಅತಿಶಯೇನ ಶಂ ಸುಖಂ ಕರೋತಿ. ಶಂತಮಃ **ಅತಿಶಾಯನೇ ತಮಬಿಷ್ಠನೌ** ಎಂಬುದರಿಂದ ತಮಪ್ ಪ್ರತ್ಯಯ ಇದು ಪಿತ್ತಾದುದರಿಂದ ಅನುದಾತ್ತವಾಗುತ್ತದೆ

ಋತಾವಾ—ಹಿಂದಿನ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಕೃಣುಧ್ವಮ್—ಕೃವಿ ಹಿಂಸಾಕರಣಯೋಶ್ಚ. ಧಾತು ಲೋಟ್ ಮಧ್ಯಮಪುರುಷ ಬಹುವಚನದಲ್ಲಿ ಧ್ವಮ್ ಪ್ರತ್ಯಯ. **ಧ್ವಿನ್ವಿಕೃನ್ಧ್ವೋರಚಿ** (ಪಾ ಸೂ. ೩-೧-೮೦) ಎಂಬುದರಿಂದ **ಆಕಾರಾಂತಾದೇಶ** ಉ ವಿಕರಣ ಇದಿತ್ತಾದುದರಿಂದ ಧಾತುವಿಗೆ ನುಮಾಗಮ. **ಅತೋಲೋಪಃ** ಎಂಬುದರಿಂದ ಉ ನಿಮಿತ್ತವಾಗಿ ಆಕಾರಲೋಪ. ಆದಕ್ಕೆ **ಅಚಃಪರಸ್ಮಿನ್**—ಸೂತ್ರದಿಂದ ಸ್ಥಾನಿವದ್ಭಾವ ಬರುವುದರಿಂದ ಉ ನಿಮಿತ್ತವಾಗಿ ಧಾತುವಿನ **ಲಘೂಪಧೆಗೆ** ಗುಣ ಬರುವುದಿಲ್ಲ. ಉಕಾರಕ್ಕೆ ಧ್ವಮ್ ನಿಮಿತ್ತವಾಗಿ ಗುಣ ಬರಲು **ಕ್ಙಿತಿಚ** ಎಂಬುದರಿಂದ ನಿಷೇಧ ಬರುತ್ತದೆ. **ಸಾರ್ವಧಾತುಕಮಪಿತ್** ಎಂಬುದರಿಂದ ಅದಕ್ಕೆ ಪಿತ್ವ ಬರುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ನೇಃ—ಏ ಧಾತುವು ಗತ್ಯಾದಿ ಅನೇಕಾರ್ಥಗಳಲ್ಲಿದೆ. ವರ್ತಮಾನಾರ್ಥತೋರುವಾಗ **ಛಂದಸಿ ಲುಙ್ ಲಙ್ಲಿಟಃ** ಎಂಬುದರಿಂದ ಲಙ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. **ಸಾರ್ವಧಾತುಕಾರ್ಧಧಾತುಕಯೋಃ** ಸೂತ್ರದಿಂದ ಸಿಪ್ ನಿಮಿತ್ತವಾಗಿ ಧಾತುವಿನ ಇಕ್ಕೆಗೆ ಗುಣ. ಇಲ್ಲಿ **ತಿಜಾಂ ತಿಜೋ ಭವಂತಿ** ಎಂಬುದರಿಂದ ಪ್ರಥಮಪುರುಷ ಪ್ರತ್ಯಯಸ್ಥಾನದಲ್ಲಿ ಮಧ್ಯಮಪುರುಷ ಬಂದಿದೆ ಎಂದು ತಿಳಿಯಬೇಕು. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಂಗಕ್ಕೆ ಅಡಾಗಮ ಬರುವುದಿಲ್ಲ. ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ. ಯತ್ ಎಂದು ಹಿಂದೆ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಂ** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುವಿನ ಆಂತೋದಾತ್ತಸ್ವರ ಉಳಿಯುತ್ತದೆ.

ಬೋಧಾತಿ—ಬುಧ ಅವಗಮನೇ. ಧಾತು ಇದಕ್ಕೆ ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಲೇಟೋಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಆಡಾಗಮ. **ಕರ್ತರಿ ಶಪ್** ಸೂತ್ರದಿಂದ ಶಪ್ ವಿಕರಣ. ತನ್ನಿಮಿತ್ತವಾಗಿ **ಪುಗಂತಲಘೂ**—ಸೂತ್ರದಿಂದ ಧಾತುವಿನ ಲಘೂಪಧೆಗೆ ಗುಣ ಬೋಧಾತಿ ಎಂದು ರೂಪವಾಗುತ್ತದೆ. ಹಿಂದೆ ಚಕಾರಯೋಗವಿರುವುದರಿಂದ ಚವಾಯೋಗೇಪ್ರಥಮಾ (ಪಾ ಸೂ ೮-೧-೭೫) ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದ ಶಪ್ ಪಿತ್ತಾದುದರಿಂದ ಅನುದಾತ್ತ ಆಗ ಧಾತುಸ್ವರ ಉಳಿಯುತ್ತದ.

ಮನಸಾ—ನಮಸಾ ಎಂದು ರೂಪ. ಛಂದಸ್ಸಿನಲ್ಲಿ ಮಕಾರ ನಕಾರಗಳಿಗೆ ವ್ಯತ್ಯಯ ಬಂದಿದೆ.

ಯಜಾತಿ—ಯಜ ದೇವಪೂಜಾಸಂಗತಿಕರಣದಾನೇಷು. ಧಾತು ಹಿಂದಿನಂತೆ ಲೇಟ್ ಪ್ರಥಮಪುರುಷ ಏಕವಚನರೂಪ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೨ ॥

॥ ಸಂಹಿತಾಪಾಠಃ ॥

ಸ ಹಿ ಕ್ರತುಃ ಸ ಮರ್ಯಃ ಸ ಸಾಧುರ್ಮಿತ್ರೋ ನ ಭೂದದ್ಭುತಸ್ಯ ರಥೀಃ ।
ತಂ ಮೇಧೇಷು ಪ್ರಥಮಂ ದೇವಯಂತೀರ್ವಿಶ ಉಪ ಬ್ರುವತೇ ದಸ್ಮವಾರೀಃ ॥ ೩ ॥

॥ ಪದಪಾಠಃ ॥

ಸಃ । ಹಿ । ಕ್ರತುಃ । ಸಃ । ಮರ್ಯಃ । ಸಃ । ಸಾಧುಃ । ಮಿತ್ರಃ । ನ । ಭೂತ್ । ಅದ್ಭುತಸ್ಯ । ರಥೀಃ ।
ತಂ । ಮೇಧೇಷು । ಪ್ರಥಮಂ । ದೇವಯಂತೀಃ । ವಿಶಃ । ಉಪ । ಬ್ರುವತೇ । ದಸ್ಮಂ । ಆರೀಃ ॥ ೩ ॥

॥ ಸಾಯಣಭಾಷ್ಯಂ ॥

ಸ್ಯ ಹ್ಯಗ್ನಿಃ ಕ್ರತುಃ ಕರ್ಮಣಾಂ ಕರ್ತಾ । ಸ ಏವ ಮರ್ಯೋ ಮಾರಯಿತಾ ವಿಶ್ವಸ್ಯೋಪಸಂಹರ್ತಾ ಸಾಧುಃ ಸಾಧಯಿತೋತ್ಪಾದಯಿತಾಪಿ ಸ ಏವಾದ್ಭುತಸ್ಯಾಭೂತಸ್ಯಾಲಬ್ಧಸ್ಯ ಧನಸ್ಯ ರಥೀ ರಂಹಯಿತಾ ಪ್ರಾಪಯಿತಾ ಭೂತ್ । ಭವತಿ । ತತ್ರ ದೃಷ್ಟಾಂತಃ । ಮಿತ್ರೋ ನ । ಯಥಾ ಸಖಾ ಧನಾನಿ ಪ್ರಾಪಯತಿ ತದ್ವತ್ । ಏವಂಭೂತೋ ಯೋಽಗ್ನಿಸ್ತಮೇವ ಮೇಧೇಷು ಯಜ್ಞೇಷು ದೇವಯಂತೀರ್ದೇವಯಂತ್ಯೋ ದೇವಾನಾತ್ಮನ ಇಚ್ಛಂತ್ಯೋ ವಿಶಃ ಪ್ರಜಾಃ ಪ್ರಥಮಮುಪ ಬ್ರುವತೇ । ಸ್ತುತಿಭಿರುಪೇತ್ಯ ಪ್ರಧಾನಭೂತ ಇತಿ ಕಥಯಂತಿ । ಕೀದೃಶ್ಯೋ ವಿಶಃ । ದಸ್ಮಂ ದರ್ಶನೀಯಂ ತಮಗ್ನಿಮಾರೀರ್ಗಚ್ಛಂತ್ಯಃ । ಭಜಂತ್ಯ ಇತ್ಯರ್ಥಃ ॥ ಮರ್ಯಃ । ಮೃಙ್ ಪ್ರಾಣತ್ಯಾಗೇ । ಅಸ್ಮಾದಂತರ್ಭಾವಿತಣ್ಯರ್ಥಾಚ್ಛಂದಸಿ ನಿಷ್ಪದ್ಯೇತ್ಯಾದೌ ನಿಪಾತನಾದ್ಯತ್ । ಕೃತ್ಯಲ್ಯುಟೋ ಬಹುಲಮಿತಿ ಬಹುಲವಚನಾತ್ಕರ್ತರಿ ದ್ರಷ್ಟವ್ಯಃ । ಯತೋಽನಾವ ಇತ್ಯಾದ್ಯುದಾತ್ತತ್ವಂ । ದೇವಯಂತೀಃ । ನಾ ಛಂದಸೀತಿ

ಪೂರ್ವಸವರ್ಣದೀರ್ಘತ್ವಂ ।ಅರೀಃ । ಯು ಗತೌ । ಜನಿಘಸಿಭ್ಯಾಮಿಣ್ । ಉ ೪-೧೨೯ । ಇತಿ ಬಹುಲಗ್ರಹಣಾದಸ್ಮಾದಪೀಣ್ಪ್ರತ್ಯಯಃ । ಕೃದಿಕಾರಾದಕ್ತಿನ ಇತಿ ಙೀಷ್ । ನಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ । ವ್ಯತ್ಯಯೇನಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಸ ಹಿ—ಅವನೇ (ಆ ಅಗ್ನಿಯೇ) । **ಕ್ರತುಃ**—ಕರ್ಮಗಳನ್ನು ಮಾಡುವವನು । **ಸಃ**—ಅವನೇ । **ಮರ್ಯಃ**—(ಸಮಸ್ತಪದಾರ್ಥಗಳಿಗೂ) ಸಂಹರ್ತೃವು । **ಸಾಧುಃ**—ಸಾಧಿಸುವವನು । **ಸಃ**—ಅವನೇ । **ಮಿತ್ರೋ ನ**—ಸ್ನೇಹಿತನಂತೆ । **ಅದ್ಭುತಸ್ಯ**—ಅಭೂತವಾದ (ಅಲಬ್ಧವಾದ ಧನವನ್ನು) । **ರಥೀಃ**—ಒದಗಿಸುವವನು । **ಭೂತ್**--ಆಗುತ್ತಾನೆ । **ತಂ**—ಅಂತಹ (ಅಗ್ನಿಯನ್ನೇ) । **ಮೇಧೇಷು**—ಯಜ್ಞಗಳಲ್ಲಿ । **ದೇವಯಂತೀಃ**—ದೇವತೆಗಳನ್ನು ಅಪೇಕ್ಷಿಸುವ (ಪೂಜಿಸುವವರೂ) । **ದಸ್ಮಂ ಅರೀಃ**—ಸುಂದರನಾದ ಅಗ್ನಿಯನ್ನು ಭಜಿಸುವವರೂ ಆದ । **ವಿಶಃ**—ಪ್ರಜೆಗಳು । **ಪ್ರಥಮಂ**—ಆದಿಯಲ್ಲಿ । **ಉಪ ಬ್ರುವತೇ**—ಹೇಳುತ್ತಾರೆ (ಸ್ತೋತ್ರಮಾಡುತ್ತಾರೆ.)

॥ ಭಾವಾರ್ಥ ॥

ಅಗ್ನಿಯೇ ಯಜ್ಞಕರ್ತೃವು. ಅವನೇ ಸಮಸ್ತ ಪದಾರ್ಥಗಳ ಸಂಹರ್ತೃವು ಮತ್ತು ಸೃಷ್ಟಿಕರ್ತೃವು, ಸ್ನೇಹಿತನಂತೆ ಅಲಬ್ಧವಾದ ಧನವನ್ನು ಒದಗಿಸುವವನೂ ಅವನೇ, ಇಂತಹ ಸುರೂಪಿಯಾದ ಅಗ್ನಿಯನ್ನೇ, ದೇವತೆಗಳನ್ನು (ಯಜ್ಞದಲ್ಲಿ) ಅಪೇಕ್ಷಿಸುವ ಪ್ರಜೆಗಳು ಮೊದಲು ಪೂಜಿಸುತ್ತಾರೆ.

English Translation.

For he is the performer of rites, he is the destroyer and reviver (of all things), and, like a friend, he is the donor of unattained wealth; all men reverencing the Gods, and approaching the well-looking Agni, repeat his name first in holy rites.

॥ ವಿಶೇಷವಿಷಯಗಳು ॥

ಸ ಹಿ ಕ್ರತುಃ—ಸ ಹ್ಯಗ್ನಿಃ ಕರ್ಮಣಾಂ ಕರ್ತಾ । ಆ ಅಗ್ನಿಯೇ ಯಜ್ಞಾದಿಕರ್ಮಗಳನ್ನು ನೆರವೇರಿಸುವವನು. ಅಗ್ನಿಯು ಯಜ್ಞಾದಿಕರ್ಮಗಳಿಗೆ ಅವಶ್ಯಕವಾಗಿ ಬೇಕೇ ಬೇಕು. ಆದ ದರಿಂದ ಅಗ್ನಿಯೇ ಯಜ್ಞಸ್ವರೂಪನಾಗಿರುವನು

ಸ ಮರ್ಯಃ—ಸ ಏವ ಮಾರಯಿತಾ ವಿಶ್ವಸ್ಯೋಪಸಂಹರ್ತಾ । ಅಗ್ನಿಯು ದಹಿಸುವ ಸಾಮರ್ಥ್ಯವುಳ್ಳವನಾದ್ದರಿಂದ ಸಕಲವನ್ನೂ ಸಂಹಾರಮಾಡಲು ಶಕ್ತಿಯುಳ್ಳವನು.

ಸ ಸಾಧುಃ—ಸಾಧಯಿತಾ, ಉತ್ಪಾದಯಿತಾ । ಅಗ್ನಿಯು ಸಂಹಾರಕರ್ತೃಮಾತ್ರವಲ್ಲ, ಸಕಲವನ್ನೂ ಉತ್ಪತ್ತಿಮಾಡತಕ್ಕವನು ಯಜ್ಞಾದಿಗಳಿಗೆ ಮುಖ್ಯಕಾರಣನಾಗಿರುವುದರಿಂದಲೂ ಯಜ್ಞಾದಿಗಳಿಗೆ ವೃಷ್ಟಿಯೂ ನೃಷ್ಟಿಯಿಂದ ಸಸ್ಯಾದಿಗಳ ಉತ್ಪತ್ತಿಯೂ ಪರಂಪರೆಯಾಗಿ ಆಗುವುದರಿಂದ ಅಗ್ನಿಯು ಉತ್ಪತ್ತಿಮಾಡುವನು ಎಂದು ಹೇಳಲಾಗಿದೆ

ಮಿತ್ರೋ ನ ಆದ್ಭುತಸ್ಯ ರಥೀಃ—ಯಥಾ ಸಖಾ ಧನಾನಿ ಪ್ರಾಪಯತಿ ತದ್ವದಗ್ನಿರಪಿ ಅಭೂತ-ಸ್ಯಾಲಬ್ಧಸ್ಯ ಧನಸ್ಯ ರಂಹಯಿತಾ ಪ್ರಾಪಯಿತಾ ಭೂತ್ । ಸ್ನೇಹಿತನಾದವನು ಕಷ್ಟದಲ್ಲಿರುವ ತನ್ನ ಮಿತ್ರರಿಗೆ ಧನಾದಿಗಳನ್ನು ಕೊಟ್ಟು ಸಹಾಯಮಾಡುವಂತೆ ಅಗ್ನಿಯು ತನ್ನನ್ನು ಸ್ತೋತ್ರಮಾಡುವವರಿಗೆ ವಿಶೇಷವಾಗಿ ಧನವನ್ನು ಕೊಟ್ಟು ಕಾಪಾಡುವನು ಎಂದಭಿಪ್ರಾಯವು.

ಮೇಧೇಷು—ಯಜ್ಞೇಷು ನೇನಃ ಮೊದಲಾದ ಹದಿನೈದು ಯಜ್ಞನಾಮಗಳಲ್ಲಿ **ಮೇಧಃ** ಎಂಬ ಶಬ್ದವು ಪಠಿತವಾಗಿರುವುದರಿಂದ ಮೇಧೇಷು ಎಂದರೆ ಯಜ್ಞಗಳಲ್ಲಿ (ನಿ ೩-೧೯)

ಮೇಧೇಷು ಪ್ರಥಮಂ ದೇವಯಂತೀರ್ವಿಶ ಉಪ ಬ್ರುವತೇ—ದೇವಯಂತೀಃ ಎಂದರೆ ದೇವತೆಗಳನ್ನು ಯಜ್ಞಭೂಮಿಗೆ ಬರುವಂತೆ ಅಪೇಕ್ಷಿಸುವವರು ಎಂದರ್ಥವು ಇಂತಹ ಯಜಮಾನರಾದಿಯಾದ ಜನರು ಯಜ್ಞಗಳಲ್ಲಿ ದೇವತೆಗಳನ್ನು ಆಹ್ವಾನಮಾಡುವಾಗ ಎಲ್ಲರಿಗಿಂತಲೂ ಮೊದಲು ಅಗ್ನಿಯನ್ನು ಸ್ತೋತ್ರಮಾಡುವರು. ಅಗ್ನಿಯ ಮೂಲಕವೇ ಇತರ ದೇವತೆಗಳನ್ನು ಆಹ್ವಾನಮಾಡಬೇಕಾಗಿರುವುದರಿಂದ ಯಜ್ಞದಲ್ಲಿ ಅಗ್ನಿಗೇ ಪ್ರಧಾನ ಸ್ಥಾನವಿರುವುದು ಅವನನ್ನೇ ಮೊದಲು ಪೂಜಿಸುವರು ಎಂದಭಿಪ್ರಾಯವು

ದಸ್ಮಂ—ದಸ್ಮಃ ಎಂದರೆ ದರ್ಶನೀಯಂ-ಸುಂದರನಾದ ಅಗ್ನಿಯನ್ನು

ಅರೀಃ—ಋ ಗತೌ । ಅರೀರ್ಗಚ್ಛಂತ್ಯಸ್ಮೈ । ಅಗ್ನಿಯನ್ನು ಸಮೀಪಿಸಿ ಪೂಜಿಸುವವರು ಎಂದಭಿಪ್ರಾಯವು. ಈ ಶಬ್ದವು **ವಿಶಃ** ಎಂಬ ಶಬ್ದಕ್ಕೆ ವಿಶೇಷಣವಾಗಿರುವುದು

॥ ವ್ಯಾಕರಣಪ್ರಕ್ರಿಯಾ ॥

ಮರ್ಯಃ—ಮೃಙ್ ಪ್ರಾಣತ್ಯಾಗೇ ಧಾತು. ಪ್ರಯೋಜಕವ್ಯಾಪಾರತೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಈ ಧಾತುವಿನ ಮೇಲೆ **ಛಂದಸಿ ನಿಷ್ಯ್ವಕ್ರ್ಯದೇ—**(ಪಾ. ಸೂ ೩-೧-೧೩೩) ಎಂಬುದರಿಂದ ನಿಪಾತ ಮಾಡಿರುವುದರಿಂದ ಯತ್ ಪ್ರತ್ಯಯ **ಕೃತ್ಯಲ್ಯುಟೋ ಬಹುಲಂ** (ಪಾ ಸೂ ೩-೩-೧೧೩) ಎಂಬಲ್ಲಿ ಬಹುಲ ಗ್ರಹಣಮಾಡಿರುವುದರಿಂದ ಕರ್ತರಿಯಲ್ಲಿ ಇಲ್ಲಿ ಇದು ಬಂದಿರುತ್ತದೆ ಯತ್ ನಿಮಿತ್ತವಾಗಿ **ಸಾರ್ವಧಾತುಕಾರ್ಧ—** ಎಂಬುದರಿಂದ ಧಾತುವಿನ ಇಕ್ಕೆಗೆ ಗುಣ **ಉರಣ್ರಪರಃ** ಎಂಬ ಪರಿಭಾಷೆಯಿಂದ ರಪರವಾಗಿ ಬರುತ್ತದೆ. **ಯತೋ೭ನಾವಃ** (ಪಾ. ಸೂ ೬-೧-೧೩೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಭೂತ್—ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲುಙ್ ಪ್ರಥಮಪುರುಷ ಏಕವಚನರೂಪ **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ತಿಙಂತ ನಿಘಾತಸ್ವರ ಬರುತ್ತದೆ

ದೇವಯಂತೀಃ—ದೇವಾನ್ ಆತ್ಮನಃ ಇಚ್ಛಂತ್ಯಃ ದೇವಯಂತ್ಯಃ **ಸುಸಂಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಎಂಬುದರಿಂದ ಇಚ್ಛಾರ್ಥದಲ್ಲಿ ದೇವ ಎಂಬ ಸುಬಂತದ ಮೇಲೆ ಕ್ಯಚ್ ಪ್ರತ್ಯಯ. **ಸನಾದ್ಯಂತಾಧಾತವಃ** ಸೂತ್ರದಿಂದ ದೇವಯ ಎಂಬ ಸನ್ನಂತಕ್ಕೆ ಧಾತುಸಂಜ್ಞಾ ಬರುತ್ತದೆ. **ನಛಂದಸ್ಯಪುತ್ರಸ್ಯ** ಎಂಬುದರಿಂದ ಕ್ಯಚ್‌ನಿಮಿತ್ತವಾಗಿ ಇತ್ವ ದೀರ್ಘಗಳು ಬರುವುದಿಲ್ಲ. ಕ್ಯಜಂತದಮೇಲೆ ಲಡರ್ಥದಲ್ಲಿ ಶತೃ ಪ್ರತ್ಯಯ. ದೇವಯತ್ ಶಬ್ದ ವಾಗುತ್ತದೆ. ಇದಕ್ಕೆ ಸ್ತ್ರೀತ್ವ ವಿವಕ್ಷಾಮಾಡಿದಾಗ **ಉಗಿತಶ್ಚ** ಎಂಬುದರಿಂದ ಙೀಷ್ ಪ್ರತ್ಯಯ. ದೇವಯಂತೀ+ಜಸ್ ಎಂದಿರುವಾಗ **ವಾ ಛಂದಸಿ** ಎಂಬುದರಿಂದ ಪೂರ್ವಸವರ್ಣದೀರ್ಘ

ಬ್ರುವತೇ--ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು. ಅದಾದಿ ಲಟ್ ಪ್ರಥಮಪುರುಷ ಬಹುವಚನದಲ್ಲಿ ರುಪ್ರತ್ಯಯ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. **ಆತ್ಮನೇಪದೇಷನ್ಯತೇಃ** (ಪಾ. ಸೂ. ೭-೧-೫) ಎಂಬುದರಿಂದ ಅಕಾರಭಿನ್ನಾಕ್ಷರದ ಪರದಲ್ಲಿರುವುದರಿಂದ ರುಪ್ರತ್ಯಯಕ್ಕೆ ಅತಾದೇಶ. **ಟಿತ ಆತ್ಮನೇಪದಾನಾಂ**—ಸೂತ್ರದಿಂದ ಏತ್ವ **ಸಾರ್ವಧಾತುಕಮಪಿತ್** (ಪಾ ಸೂ ೧-೨-೪) ಸೂತ್ರದಿಂದ ಇದಕ್ಕೆ ಙಿತ್ವ ಬರುವುದರಿಂದ ಇದನ್ನು ನಿಮಿತ್ತೀಕರಿಸಿ ಧಾತುವಿಗೆ ಗುಣ ಬರುವುದಿಲ್ಲ. **ಆಚಿಶ್ನುಧಾತುಭ್ರುವಾಂ**—ಸೂತ್ರದಿಂದ ಉಕಾರಕ್ಕೆ ಉವಙಾದೇಶ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅರೀಃ—ಋ ಗತೌ ಧಾತು **ಜನಿಘಸಿಭ್ಯಾಮಿಣ್** (ಉ ಸೂ. ೪-೫೬) ಎಂಬುದರಿಂದ ಇದಕ್ಕೂ ಬಹುಲಗ್ರಹಣವಿರುವುದರಿಂದ ಇಣ್ ಪ್ರತ್ಯಯ. ಣಿತ್ವಾದುದರಿಂದ **ಆಚೋಞ್ಣಿತಿ** ಎಂಬುದರಿಂದ ಧಾತುವಿಗೆ ವೃದ್ಧಿ. **ಉರಣ್ರಪರಃ** ಪರಿಭಾಷೆಯಿಂದ ರಪರವಾಗಿ ಬರುತ್ತದೆ. ಅರಿ ಎಂದು ರೂಪವಾಗುತ್ತದೆ ಇದಕ್ಕೆ ಸ್ತ್ರೀತ್ವ ವಿವಕ್ಷಾ ಮಾಡಿದಾಗ, **ಕೃದಿಕಾರಾದಕ್ತಿನಃ**-ಕ್ತಿನ್ ವ್ಯತಿರಿಕ್ತವಾದ ಇಕಾರಾಂತಕೃದಂತ ಶಬ್ದಕ್ಕೆ ಙೀಷ್ ಎಂಬುದರಿಂದ ಙೀಷ್ ಪ್ರತ್ಯಯ. ಅರೀ ಶಬ್ದವಾಗುತ್ತದೆ. ಇದಕ್ಕೆ ಜಸ್ ಪರವಾದಾಗ **ವಾ ಛಂದಸಿ** ಎಂಬುದರಿಂದ ಪೂರ್ವಸವರ್ಣದೀರ್ಘ. ಸಕಾರಕ್ಕೆ ರುತ್ವ ವಿಸರ್ಗ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ಅಂತೋದಾತ್ತತ್ವವು ಪ್ರಾಪ್ತವಾದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೩ ॥

॥ ಸಂಹಿತಾಪಾಠಃ ॥

ಸ ನೋ ನೃಣಾಂ ನೃತಮೋ ರಿಶಾದಾ ಅಗ್ನಿರ್ಗಿರೋಽವಸಾ
ವೇತು ಧೀತಿಂ ।
ತನಾ ಚ ಯೇ ಮಘವಾನಃ ಶವಿಷ್ಠಾ ವಾಜಪ್ರಸೂತಾ ಇಷ-
ಯಂತ ಮನ್ಮ ॥ ೪ ॥

॥ ಪದಪಾಠಃ ॥

ಸಃ। ನಃ। ನೃಣಾಂ। ನೃತಮಃ। ರಿಶಾದಾಃ। ಅಗ್ನಿಃ। ಗಿರಃ। ಅವಸಾ। ವೇತು। ಧೀತಿಂ ।
ತನಾ। ಚ। ಯೇ। ಮಘವಾನಃ। ಶವಿಷ್ಠಾಃ। ವಾಜಪ್ರಸೂತಾಃ। ಇಷಯಂತ।
ಮನ್ಮ ॥ ೪ ॥

॥ ಸಾಯಣಭಾಷ್ಯಂ ॥

ನೃಣಾಂ ಯಜ್ಞಸ್ಯ ನೇತೄಣಾಂ ಮಧ್ಯೇ ನೃತಮೋಽತಿಶಯೇನ ನೇತಾ ರಿಶಾದಾ ರಿಶಾನಾಂ ಶತ್ರೂಣಾಮತ್ತಾ ಭಕ್ಷಯಿತಾ । ಯದ್ವಾ । ರಿಶತಾಂ ಹಿಂಸಕಾನಮಸಿತಾ ನಿರಸಿತಾ । ಏವಂವಿಧಃ ಸೋಽಗ್ನಿರ್ನೋಽಸ್ಮಾಕಂ ಗಿರಃ ಸ್ತುತೀರವಸಾ ಹವಿರ್ಲಕ್ಷಣೇನಾನ್ನೇನ ಯುಕ್ತಾಂ ಧೀತಿಂ ಕರ್ಮ ಚ ವೇತು। ಕಾಮಯತಾಂ। ಅಪಿ ಚ ಯೇ ಯಜಮಾನಾಸ್ತನಾ। ಧನನಾಮೈತತ್। ವಿಸ್ತೃತೇನ ಧನೇನ ಮಘವಾನೋ ಧನವಂತಃ ಶವಿಷ್ಠಾ ಅತಿಶಯೇನ ಬಲಿನಶ್ಚ ಸಂತೋ ವಾಜಪ್ರಸೂತಾಃ ಪ್ರಸೂತಂ ಪ್ರೇರಿತಂ ವಾಜೋ ಹವಿರ್ಲಕ್ಷಣಮನ್ನಂ ಯೈಸ್ತಾದೃಶಾ ಭೂತ್ವಾ ಮನ್ಮಾಗ್ನೇರ್ಮನನರೂಪಂ ಸ್ತೋತ್ರಮಿಷಯಂತ ಏಷಯಂತಿ ಯತ್ವಿಗ್ಭಿಃ ಕಾರಯಿತುಮಿಚ್ಛಂತಿ । ತೇಷಾಮಸಿ ಸ್ತುತಿಮಗ್ನಿಃ ಕಾಮಯತಾಮಿತಿ ಭಾವಃ॥ ನೃಣಾಂ। ನೃ ಚೇತ್ಯುಭಯಥಾಭಾವಾದ್ವೀರ್ಯಾಭಾವಃ। ನಾಮನ್ಯತರಸ್ಯಾಮಿತಿ ನಾಮ ಉದಾತ್ತತ್ವಂ। ತನಾ। ತನು ವಿಸ್ತಾರೇ । ಪಚಾದ್ಯೈಚ್ । ತೃತೀಯೈಕವಚನಸ್ಯ ಸುಪಾಂ ಸುಲುಗಿತ್ಯಾಕಾರಃ । ವೃಷಾದೇರಾಕೃತಿ-

ಗಣಿತ್ವಾದಾದ್ಯುದಾತ್ತತ್ವಂ । ತವಿಷ್ಠಾಃ । ತವ ಇತಿ ಬಲನಾಮ । ಅಸ್ಮಾಯೂನೋಧೇತಿ ಮತ್ವರ್ಥೀಯೋ ವಿನಿಃ । ತತ ಅತಿಶಾಯನಿಕ ಇಷ್ಠನ್ । ವಿನ್ಮತೋರ್ಲುಗಿತಿ ವಿನೋ ಲುಕ್ । ಟೇರಿತಿ ಟಿಲೋಪಃ । ಇಷ್ಠನೋ ನಿತ್ತ್ವಾದಾದ್ಯುದಾತ್ತತ್ವಂ । ಇಷಯಂತ । ಇಷು ಇಚ್ಛಾಯಾಂ । ಅಸ್ಮಾಣ್ಣ್ಯಂತಾಚ್ಛಾಂದಸೋ ಲಙ್ । ಸಂಜ್ಞಾಪೂರ್ವಕಸ್ಯ ವಿಧೇರನಿತ್ಯತ್ವಾನ್ನಾ ಲಘೂಪಧಗುಣಾಭಾವಃ । ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಣಿಚ ಏವ ಸ್ವರಃ ಶಿಷ್ಯತೇ ॥

॥ ಪ್ರತಿಪದಾರ್ಥ ॥

ನೃಣಾಂ—(ಯಜ್ಞವನ್ನು) ನಡೆಸುವವರಲ್ಲಿ । **ನೃತಮಃ**—ಉತ್ತಮ ನೇತೃವಾದ । **ರಿಶಾದಾಃ**—ಶತ್ರುನಾಶಕನಾದ (ಯಜ್ಞಹಿಂಸಕರನ್ನು ನಾಶಮಾಡುವ) । **ಸಃ ಅಗ್ನಿಃ**—ಆ ಅಗ್ನಿಯು । **ನಃ**—ನಮ್ಮ । **ಗಿರಃ**—(ಸ್ತುತಿರೂಪವಾದ) ವಾಕ್ಯಗಳನ್ನೂ । **ಅವಸಾ**—ಪೂರ್ವಕ್ಷಣವಾದ ಅನ್ನದಿಂದ ಯುಕ್ತವಾದ । **ಧೀತಿಂ**—ಕರ್ಮವನ್ನೂ । **ನೇತು**—ಇಚ್ಛಿಸಲಿ । **ಚೆ**—ಮತ್ತೂ । **ಯೀ**—ಯಾರು (ಯಜಮಾನರು) । **ತನಾ**—(ಹೆಚ್ಚಾದ) ಧನದಿಂದ । **ಮಘವಾನಃ**—ಧನಿಕರಾಗಿ । **ತವಿಷ್ಮಾ**—ಬಲಿಷ್ಠರಾಗಿ । **ವಾಜಸ್ಯಸೂತಾಃ**—ಅರ್ಪಿಸಲ್ಪಟ್ಟ ಹವಿಸ್ಸುಳ್ಳವರಾಗಿ । **ಮನ್ಮ**—(ಅಗ್ನಿ ಸ್ತುತಿರೂಪವಾದ) ವಾಕ್ಯಗಳನ್ನು । **ಇಷಯಂತೆ**—(ಸ್ತುತ್ಪ್ರೇರಿಂದ ಮಾಡಿಸಲು) ಇಚ್ಛಿಸುತ್ತಾರೆಯೋ (ಅದನ್ನೂ ಅಗ್ನಿಯು ಇಚ್ಛಿಸಲಿ).

॥ ಭಾವಾರ್ಥ ॥

ಯಾಗ ನಡೆಸುವವರಲ್ಲಿ ಉತ್ತಮನೂ, ಶತ್ರುನಾಶಕನೂ, ಆದ ಅಗ್ನಿಯು ಹವಿರಾದಿಗಳಿಂದ ಯುಕ್ತವಾದ ನಮ್ಮ ಸ್ತುತಿಯನ್ನೂ, ಹವಿಃಪ್ರದಾನವನ್ನೂ ಅಂಗೀಕರಿಸಲಿ, ಧನಾಢ್ಯರೂ, ಬಲಿಷ್ಠರೂ, ಹವಿರಾದಿಗಳನ್ನು ಸಿದ್ಧಪಡಿಸಿಕೊಂಡಿರುವವರೂ ಆದ ಯಾಗ ಕರ್ತೃಗಳು ಅಗ್ನಿಯನ್ನು ಸ್ತುತಿಸುತ್ತಾರೆ (ಅದನ್ನೂ ಅಗ್ನಿಯು ಅಂಗೀಕರಿಸಲಿ).

English Translation

May Agni, who is the cheif directer of sacrifices, and the destroyer of enemies, accept our praise and worship: with oblations, and many those who are affluent with great wealth, who are endowed with strength and, by whom the sacrificial food has been prepared, be desirous to offer adoration.

॥ ವಿಶೇಷನಿಷಯಗಳು ॥

ಸ ನಃ ನೃಣಾಂ ನೃತಮಃ—**ನೃತಮಃ ಅತಿಶಯೇನ ನೇತಾ । ಯಜ್ಞಸ್ಯ ನೇತೃಣಾಂ ಮಧ್ಯೇ ಅತಿಶಯೇನ ನೇತಾ ।** ಯಜ್ಞದಲ್ಲಿ ಮುಖ್ಯ ಪಾತ್ರವಹಿಸಿ ಅದನ್ನು ನೆರವೇರಿಸುವ ಋತ್ವಿಗ್ಯಜಮಾನರಾದಿಯಾದವರಲ್ಲಿ ಅತಿಶಯವಾಗಿ ಮುಖ್ಯನೆನಿಸಿದವನು ಯಜ್ಞವನ್ನು ಸಾಂಗವಾಗಿ ನೆರವೇರಿಸುವನೇ ಈ ಅಗ್ನಿಯು.

ರಿಶಾದಾಃ—ರಿಶಾನಾಂ ಶತ್ರೂಣಾಂ ಅತ್ತಾ ಭಕ್ಷಯಿತಾ । **ಯದ್ವಾ ರಿಶತಾಂ ಹಿಂಸತಾಮಸಿತಾ ನಿರಾಸಿತಾ** । ಶತ್ರುಗಳನ್ನು (ಭಕ್ಷಿಸಿ, ದಹಿಸಿ) ಧ್ವಂಸಮಾಡುವವನು ಅಥವಾ ಹಿಂಸೆಮಾಡುವವರನ್ನು ಓಡಿಸುವವನು.

ಅಗ್ನಿಃ ಗಿರಃ ಅವಸಾ ವೇತು ಧೀತಿಂ—ಅಂಧಃ ವಾಜಃ ಮೊದಲಾದ ಇಪ್ಪತ್ತೈಂಟು ಅನ್ನನಾಮಗಳ ಮಧ್ಯದಲ್ಲಿ ಅವಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) ಅವಸಾ ಎಂದರೆ ಅನ್ನದಿಂದ ಅಥವಾ ಹವಿರ್ಲಕ್ಷಣೋಪೇತವಾದ ಅನ್ನದಿಂದ ಯುಕ್ತವಾದ ಎಂದರ್ಥವು. ನಾವು ಮಾಡುವ ಸ್ತೋತ್ರವನ್ನು ಅಗ್ನಿಯು ಅಪೇಕ್ಷಿಸಿ, ಅದನ್ನೂ ನಾವು ಅರ್ಪಿಸುವ ಹವಿಸ್ಸ್ವರೂಪವಾದ ಅನ್ನವನ್ನೂ ಸ್ವೀಕರಿಸಲಿ ಎಂದಭಿಪ್ರಾಯವು

ತನಾ—**ತನು ವಿಸ್ತಾರೇ** ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ತೃತೀಯೈಕವಚನವು ಮೇಳಂ, ರೇಕ್ಣಃ ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ತನಾ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ ೩-೯) ತನಾ ಎಂದರೆ ವಿಸ್ತಾರವಾದ (ಬಹಳವಾದ) ಧನದಿಂದ ಸಹಿತರಾದ ಎಂದರ್ಥವು

ಮಘವಾನಃ—ಮಘವೆಂದರೆ ಧನವು (ನಿ ೩-೯) ಮಘವಾನಃ ಎಂದರೆ ಧನವಂತರು ಪ್ರಥಮಾ ಬಹುವಚನಾಂತ ಪದವು.

ಶವಿಷ್ಠಾಃ—ಓಜಃ ಸಾಜಃ ಮೊದಲಾದ ಇಪ್ಪತ್ತೈಂಟು ಬಲನಾಮಗಳ ಮಧ್ಯದಲ್ಲಿ ಶವಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ ೩-೯) ಶವಿಷ್ಠಾಃ ಎಂದರೆ ಅತಿಶಯವಾಗಿ ಬಲವುಳ್ಳವರು ಎಂದರ್ಥವು

ವಾಜಪ್ರಸೂತಾಃ—ಅಂಧಃ ವಾಜಃ ಮೊದಲಾದ ಇಪ್ಪತ್ತೈಂಟು ಅನ್ನನಾಮಗಳ ಮಧ್ಯದಲ್ಲಿ ವಾಜಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ ೩-೯) ವಾಜವೆಂದರೆ ಅನ್ನವು ಪ್ರಸೂತವೆಂದರೆ ಪ್ರೇರಿತವೆಂದರ್ಥವು **ವಾಜ-ಪ್ರಸೂತಾಃ**—**ಪ್ರಸೂತಂ ಪ್ರೇರಿತಂ ವಾಜೋ ಹವಿರ್ಲಕ್ಷಣಮನ್ನಂ ಯೈಃ** । ಹವಿರ್ಲಕ್ಷಣೋಪೇತವಾದ ಅನ್ನವನ್ನು ದೇವತೆಗಳಿಗೆ ಅರ್ಪಿಸುತ್ತಿರುವ (ಯಜಮಾನರು) ಎಂದರ್ಥವು. ಮಘವಾನಃ, ಶವಿಷ್ಠಾಃ, ವಾಜಪ್ರಸೂತಾಃ ಎಂಬ ಶಬ್ದಗಳು ಪ್ರಥಮಾ ಬಹುವಚನಾಂತಪದಗಳಾಗಿ ಯೇ (ಯಜಮಾನಾಃ) ಎಂಬ ಶಬ್ದಕ್ಕೆ ವಿಶೇಷಣಗಳಾಗಿರುವವು

ಮನ್ಮ—**ಅಗ್ನೇರ್ಮನನರೂಪಂ ಸ್ತೋತ್ರಂ** । ನಾವು ಭಕ್ತಿಯಿಂದ ಪಠಿಸುತ್ತಿರುವ ಸ್ತೋತ್ರರೂಪವಾದ ಈ ಮಂತ್ರವನ್ನು

ಇಷಯಂತ--**ಇಷು ಇಚ್ಛಾಯಾಂ** । **ಏಷಯಂತಿ ಋತ್ವಿಗ್ಭಿಃ ಕಾರಯಿತುಮಿಚ್ಛಂತಿ** । ಯಜ್ಞ ಮಾಡುವ ಯಜಮಾನರು ಋತ್ವಿಕ್ಕುಗಳಿಂದ ಅಗ್ನಿಯ ಸ್ತೋತ್ರವನ್ನು ಮಾಡಿಸಲು ಇಪೇಕ್ಷಿಸುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

ನೃಣಾಂ—ನೃ ಶಬ್ದ. ಇದಕ್ಕೆ ಷಷ್ಠೀಬಹುವಚನದಲ್ಲಿ ಆಮ್ ಪ್ರತ್ಯಯ ಬಂದಾಗ **ಹ್ರಸ್ವನದ್ಯಾಪೋನುಟ್** ಎಂಬುದರಿಂದ ಅದಕ್ಕೆ ನುಡಾಗಮ. **ನೃಚ** (ಪಾ. ಸೂ. ೬-೪-೬) ಎಂಬುದರಿಂದ ದೀರ್ಘವಿಕಲ್ಪವಿಧಾನಮಾಡಿರು

ವುದರಿಂದ ಇಲ್ಲಿ ದೀರ್ಘವಿರುವುದಿಲ್ಲ. **ಯುವರ್ಣಾನ್ನಸ್ಯ ಣತ್ವಂ ವಾಚ್ಯಂ** ಎಂಬುದರಿಂದ ನಕಾರಕ್ಕೆ ಣತ್ವ. **ನಾಮನ್ಯತರಸ್ಯಾಂ** (ಪಾ ಸೂ ೬-೧-೧೭೬) ಎಂಬುದರಿಂದ ನಾಮಿಗೆ ಉದಾತ್ತಸ್ವರ ಬರುತ್ತದೆ.

ರಿಶಾದಾಃ—ರಿಶಾನ್ ಅತ್ತಿ ಇತಿ ರಿಶಾದಾಃ. ಅದ ಭಕ್ಷಣೇ ಧಾತು. ಇದಕ್ಕೆ **ಗತಿಕಾರಕೋಪಪದಯೋಃ ಪೂರ್ವಪದಪ್ರಕೃತಿಸ್ವರತ್ವಂ ಚ** (ಉ ಸೂ ೪-೬೬) ಎಂಬುದರಿಂದ ಅಸಿ ಪ್ರತ್ಯಯ. ರಿಶಾದಸ್ ಶಬ್ದವಾಗುತ್ತದೆ ಪ್ರಥಮಾ ಏಕವಚನಾಂತರೂಪ

ನೇತು—ಣೀ ಗತ್ಯಾದಿಷು ಧಾತು. ಇಲ್ಲಿ ಇಚ್ಛಾರ್ಥದಲ್ಲಿ ಪ್ರಯುಕ್ತವಾಗಿದೆ **ಲೋಟ್‌ಮಧ್ಯಮ** ಪುರುಷ ಏಕವಚನದಲ್ಲಿ ನೇತು ಎಂದು ರೂಪವಾಗುತ್ತದೆ ಅತಿಙಂತದ ಪರದಲ್ಲಿರುವುದರಿಂದ ತಿಙಂತನಿಘಾತಸ್ವರ ಬರುತ್ತದೆ

ತನಾ—ತನು ವಿಸ್ತಾರೇ ಧಾತು. ಪಚಾದಿಯಲ್ಲಿ ಸೇರಿರುವುದರಿಂದ **ನಂದಿಗ್ರಹಪಚಾದಿಭ್ಯಃ**—(ಪಾ. ಸೂ ೩-೧-೧೩೪) ಎಂಬುದರಿಂದ ಲುಚ್ ಪ್ರತ್ಯಯ. ತನ ಎಂದು ರೂಪವಾಗುತ್ತದೆ ಇದಕ್ಕೆ ತೃತೀಯಾ ಏಕವಚನ ಪರವಾದಾಗ **ಸುಪಾಂಸುಲುಕ್**—ಎಂಬುದರಿಂದ ಅದಕ್ಕೆ ಆಕಾರಾದೇಶ ತನಾ ಎಂದು ರೂಪವಾಗುತ್ತದೆ ಚಿತ್ ಪ್ರತ್ಯಯಾಂತವಾದುದರಿಂದ ಅಂತೋದಾತ್ತವಾಗಿ. ಅದಕ್ಕೆ ಏಕಾದೇಶಬಂದಾಗಲೂ ಅಂತೋದಾತ್ತವು ಪ್ರಾಪ್ತವಾಗುತ್ತದೆ. ಆದರೆ ವೃಷಾದಿಯು ಆಕೃತಿಗಣವಾದುದರಿಂದ **ವೃಷಾದೀನಾಂ ಚ** (ಪಾ. ಸೂ ೬-೧-೨೦೩) ಎಂಬುದರಿಂದ ಆದರಲ್ಲಿ ಸೇರಿದೆ ಎಂದು ಆದ್ಯುದಾತ್ತಸ್ವರ ಬರುತ್ತದೆ.

ಶವಿಷ್ಠಾಃ—ಶವ ಎಂಬುದು ಬಲದ ಹೆಸರು. **ಶವಃ ಅಸ್ಯ ಅಸ್ತಿ** ಎಂದು ಮತ್ವರ್ಥವಿನಕ್ಪಾ ಮಾಡಿದಾಗ ಸಾಂತವಾದುದರಿಂದ **ಅಸ್ಮಾಯಾಮೇಧಾ**—(ಪಾ. ಸೂ. ೫-೨-೧೨೧) ಎಂಬುದರಿಂದ ವಿನಿ ಪ್ರತ್ಯಯ ಶವಿನ್ ಶಬ್ದವಾಗುತ್ತದೆ ಅತಿಶಯೇನ ಶವಸ್ವೀ ಶವಿಷ್ಠಃ **ಅತಿಶಾಯನೇ ತಮಬಿಷ್ಠನೌ** (ಪಾ ಸೂ. ೫-೩-೫೫) ಎಂಬುದರಿಂದ ಅತಿಶಯಾರ್ಥದಲ್ಲಿ ಇಷ್ಠನ್ ಪ್ರತ್ಯಯ. ಇಷ್ಠನ್ ಪರವಾದಾಗ **ವಿನ್‌ಮತೋರ್ಲುಕ್** (ಪಾ ಸೂ ೫-೪-೭೫) ಎಂಬುದರಿಂದ ವಿನ್ನಿಗೆ ಲುಕ್. **ಟೇಃ** (ಪಾ ಸೂ. ೬-೪-೧೫೫) ಎಂಬುದರಿಂದ ಶವಸ್ ಎಂಬಲ್ಲಿರುವ (ಅಸ್) ಟಿಗೆ ಲೋಪ ಇಷ್ಠನ್ ಸಿತ್ವಾದುದುರಿಂದ **ಜ್ಞಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಇಷಯಂತ—ಇಷು ಇಚ್ಛಾಯಾಂ ಧಾತು. ಪ್ರಯೋಜಕವ್ಯಾಪಾರ ಕೋರುವುದರಿಂದ **ಹೇತುಮತಿ ಚ** (ಪಾ. ಸೂ. ೩-೧ ೩೬) ಎಂಬುದರಿಂದ ಣಿಚ್. **ಸನಾದ್ಯಂತಾಧಾತವಃ** ಎಂಬುದರಿಂದ ಇಷಿ ಎಂಬುದು ಧಾತು ಸಂಜ್ಞೆಯನ್ನು ಹೊಂದುತ್ತದೆ. **ಸಂಜ್ಞಾಪೂರ್ವಕೋ ವಿಧಿರನಿತ್ಯಃ** ಎಂಬ ವಚನದಿಂದ ಣಿಚ್ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣಬರುವುದಿಲ್ಲ. ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲಙ್ ಪ್ರಥಮಪುರುಷ ಬಹುವಚನದಲ್ಲಿ **ಝೋಽಂತೇ** ಎಂಬುದರಿಂದ ಅಂತಾದೇಶ ಶಪ್ ವಿಕರಣ. ಶಪ್ ನಿಮಿತ್ತವಾಗಿ ಣಿಚಿಗೆ **ಸಾರ್ವಧಾತುಕಾರ್ಧ**—ಎಂಬುದರಿಂದ ಗುಣ ಅಯಾ ದೇಶ **ಅತೋ ಗುಣೇ** ಸೂತ್ರದಿಂದ ಶಪ್ಪಿಗೆ ಪರರೂಪ **ಬಹುಲಂ ಛಂದಸ್ಯಮಾಙ್ ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ ಯಚ್ಚಬ್ದ

ಸಂಬಂಧವಿರುವುದರಿಂದ **ಯೆದ್ಧೃತ್ತಾನ್ನಿತ್ಯಮ್** (ಪಾ. ಸೂ ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ ಆದುಪದೇಶದ ಪರದಲ್ಲಿರುವ ಲಸಾರ್ವಧಾತುಕವು **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತವಾಗುತ್ತದೆ ಆಗ ಣಿಚ್ಚಿನ ಸ್ವರ ಉಳಿಯುತ್ತದೆ ॥ ೪ ॥

॥ ಸಂಹಿತಾಪಾಠಃ ।

ಏವಾಗ್ನಿರ್ಗೋತಮೇಭಿರ್ಋತಾವಾ ವಿಪ್ರೇಭಿರಸ್ತೋಷ್ಟ ಜಾತ-
ವೇದಾಃ ।
ಸ ಏಷು ದ್ಯುಮ್ನಂ ಪೀಪಯತ್ಸ ವಾಜಂ ಸ ಪುಷ್ಟಿಂ ಯಾತಿ
ಜೋಷಮಾ ಚಿಕಿತ್ವಾನ್ ॥ ೫ ॥

॥ ಪದಪಾಠಃ ।

ಏವ । ಅಗ್ನಿಃ । ಗೋತಮೇಭಿಃ । ಋತವಾ । ವಿಪ್ರೇಭಿಃ । ಅಸ್ತೋಷ್ಟ । ಜಾತವೇದಾಃ ।
ಸಃ । ಏಷು । ದ್ಯುಮ್ನಂ । ಪೀಪಯತ್ । ಸಃ । ವಾಜಂ । ಪುಷ್ಟಿಂ । ಯಾತಿ ।
ಜೋಷಂ । ಆ । ಚಿಕಿತ್ವಾನ್ ॥ ೫ ॥

॥ ಸಾಯಣಭಾಷ್ಯಂ ॥

ಋತಾವಾ ಋತವಾನ್ಯಜ್ಞವಾನ್ ಜಾತವೇದಾ ಜಾತಧನೋ ಜಾತಪ್ರಜ್ಞೋ ವಾಯಮಗ್ನಿರ್ವಿ-ಪ್ರೇಭಿರ್ಮೇಧಾವಿಭಿರ್ಗೋತಮೇಭಿರ್ಗೋತಮೈರ್ಋಷಿಭಿರೇವಮುಕ್ತೇನ ಪ್ರಕಾರೇಣಾಸ್ತೋಷ್ಟ । ಸ್ತುತೋಽಭೂತ್ । ಸ್ತುತಶ್ಚ ಸೋಽಗ್ನಿರೇಷು ಗೋತಮೇಷು ದ್ಯುಮ್ನಂ ದ್ಯೋತಮಾನಂ ಸೋಮಂ ಪೀಪಯೆನ್ । ಅಪಿಬತ್ । ಯದ್ವಾ । ತಾನೃಷೀನಪಾಯಯತ್ । ತಥಾ ಸೋಽಗ್ನಿರ್ವಾಜಂ ಹವಿರ್ಲಕ್ಷಣ-ಮನ್ನಂ ಪೀಪಯದಿತ್ಯೇವ । ಏವಂ ಸೋಮಲಕ್ಷಣಂ ಚರುಪುರೋಡಾಶಾದಿಲಕ್ಷಣಂ ಹವಿಶ್ಚ ಸ್ವೀಕೃತ್ಯ ಸೋಽಗ್ನಿರ್ಜೋಷಮಸ್ಮಾಭಿಃ ಕೃತಂ ಸೇವನಮಾ ಚಿಕಿತ್ವಾನ್ ಆ ಸಮಂತಾಜ್ಜಾನನ್ ಪುಷ್ಟಿಂ ಯಾತಿ । ಪೋಷಂ ಪ್ರಾಪ್ನೋತು । ಯದ್ವಾ । ಅಸ್ಮಾಕಂ ಧನಾನಿ ಪೋಷಂ ಪ್ರಾಪಯತು ॥ ಗೋತಮೇಭಿಃ । ಋಷ್ಯಂಧಕವೃಷ್ಣಿಕುರುಭ್ಯಶ್ಚ । ಪಾ. ೪-೧-೧೧೪ । ಇತಿ ವಿಹಿಸ್ಯಾನ್ಯೋಽತ್ರಿಭೃಗುಕುತ್ಸವಸಿಷ್ಠಗೋತ-ಮಾಂಗಿರೋಭ್ಯಶ್ಚ । ಪಾ ೨-೪-೬೫ । ಇತಿ ಬಹುಷು ಲುಕ್ । ಅಸ್ತೋಷ್ಟ । ಸ್ತೌತೇಃ ಕರ್ಮಣಿ ಲುಙ್ ಚಿಣಭಾವಶ್ಚಾಂದಸಃ । ಪೀಪಯೆತ್ । ಪಾ ಪಾನೇ । ಣ್ಯಂತಾಲ್ಲುಙ್ ಚ್ಲೇರ್ಲಜಾದಿ । ಜೋಷಂ । ಜುಷೀ ಪ್ರೀತಿಸೇವನಯೋಃ । ಭಾವೇ ಘಞ್ । ಞಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಋತಾವಾ—ಸತ್ಯವಂತನೂ (ಯಜ್ಞವುಳ್ಳವನೂ) । **ಜಾತವೇದಾಃ**—ಪ್ರಜ್ಞಾವಂತನೂ (ಧನಾಢ್ಯನೂ) ಆದ । **ಅಗ್ನಿಃ**—ಅಗ್ನಿಯು । **ವಿಪ್ರೇಭಿಃ**—ಮೇಧಾವಿಗಳಾದ । **ಗೋತಮೇಭಿಃ**—ಗೋತಮವಂಶಸ್ಥ ಋಷಿಗಳಿಂದ । **ಅಸ್ತೋಷ್ಟ**—ಸ್ತುತಿಸಲ್ಪಟ್ಟಿರುವನು । **ಸಃ**—(ಸ್ತುತನಾದ) ಆ ಅಗ್ನಿಯು । **ದ್ಯುಮ್ನಂ**—ಹೊಳೆಯುತ್ತಿರುವ ಸೋಮ ವನ್ನು । **ಏಷು**—ಈ ಗೋತಮರಲ್ಲಿ (ಗೋತಮರಿಗೆ) । **ಪೀಪಯತ್**—ಪಾನಮಾಡಿದನು (ಪಾನಮಾಡಿಸಿದನು) । **ಸಃ**—(ಹಾಗೆಯೇ) ಆ ಅಗ್ನಿಯು । **ವಾಜಂ**—ಹವಿರ್ಲಕ್ಷಣವಾದ ಅನ್ನವನ್ನೂ (ಸ್ವೀಕರಿಸಿದನು) । **ಸಃ**—(ಈ ರೀತಿ ಸೋಮ ಮತ್ತು ಹವಿಸ್ಸನ್ನು ಸ್ವೀಕರಿಸಿದ) ಅಗ್ನಿಯು । **ಜೋಷಂ**—(ನಮ್ಮಿಂದ ಮಾಡಲ್ಪಟ್ಟ) ಸೇವೆಯನ್ನು । **ಆ ಚಿಕಿತ್ವಾನ್**—ಚೆನ್ನಾಗಿ ತಿಳಿದವನಾಗಿ । **ಪುಷ್ಟಿಂ ಯಾತಿ**—ಪುಷ್ಟಿಯನ್ನು ಹೊಂದುತ್ತಾನೆ (ನಮ್ಮ ಧನವನ್ನು ಪುಷ್ಟೀಕರಿಸಲಿ)

॥ ಭಾವಾರ್ಥ ॥

ಸತ್ಯವಂತನೂ, ಸರ್ವಜ್ಞನೂ ಆದ ಅಗ್ನಿಯು, ಮೇಧಾವಿಗಳಾದ ಗೋತಮರಿಂದ ಸ್ತುತನಾಗಿ. (ಇವರಿಂದ ಅರ್ಪಿತವಾದ) ಸೋಮ ಮತ್ತು ಹವಿಸ್ಸುಗಳನ್ನು ಸ್ವೀಕರಿಸಿದನು. ಅಂತಹ ಅಗ್ನಿಯು ನಮ್ಮಿಂದ ಮಾಡಲ್ಪಟ್ಟ ಸೇವೆಯನ್ನೂ (ಸ್ವೀಕರಿಸಿ) ನಮ್ಮ ಧನಾದಿಗಳನ್ನು ಪುಷ್ಟೀಕರಿಸಲಿ

English Translation.

Thus has Agni, the celebrator of sacrifices, and by whom all things are known, been hymned by the pious descendants of Gotama, to them

has he given the bright Soma-juice to drink, along with the sacrificial food, and, gratified by our devotion, he obtains nutriment (for himself.)

॥ ವಿಶೇಷವಿಷಯಗಳು ॥

ಏಷು—ಇವರಲ್ಲಿ ಎಂದರೆ ಗೋತಮವಂಶಸ್ಥರಾದ ಋಷಿಗಳಲ್ಲಿ ಅಥವಾ ಋಷಿಗಳಿಗೆ. **ಈ** ಋಕ್ಕಿನಲ್ಲಿ **ಗೋತಮೇಭಿಃ ಆಸ್ತೋಷ್ಟ**—ಗೋತಮವಂಶಸ್ಥರಿಂದ **ಈ** ಸ್ತೋತ್ರವು ಮಾಡಲ್ಪಟ್ಟಿತು ಎಂದು ಇರುವುದರಿಂದ **ಏಷು** ಎಂಬ **ಈ** ಸರ್ವನಾಮಶಬ್ದವು ಆ ಗೋತಮವಂಶಸ್ಥರಾದ ಋಷಿಗಳನ್ನೇ ಸೂಚಿಸುವುದು

ದ್ಯುಮ್ನಂ- ಮಘಂ ರೇಕ್ಣಃ ಮೊದಲಾದ ಇಪ್ಪತ್ತೆಂಟು ಧನನಾಮಗಳ ಮಧ್ಯದಲ್ಲಿ ದ್ಯುಮ್ನ ಶಬ್ದವು ಪರಿತವಾಗಿರುವುದರಿಂದ ದ್ಯುಮ್ನವೆಂದರೆ ಧನವೆಂದು ಅರ್ಥವು (ನಿ ೩-೯) ಮತ್ತು ಯಾಸ್ಕರು **ಈ** ಶಬ್ದಕ್ಕೆ ನಿರ್ವಚನವನ್ನು ಹೇಳಿವಾಗ—

ಶತಂ ತೇ ಶಿಪ್ರಿನ್ನೂತಯಃ ಸುದಾಸೇ ಸಹಸ್ರಂ ಶಂಸಾ ಉತ ರಾತಿರಸ್ತು ।
ಜಹಿ ವಧರ್ವನುಷೋ ಮರ್ತ್ಯಸ್ಯಾಸ್ಮೇ ದ್ಯುಮ್ನಮಧಿ ರತ್ನಂ ಚ ಧೇಹಿ ॥

(ಋ ಸಂ ೭-೨೫-೩)

ಎಂಬ ಋಕ್ಕನ್ನು ಉದಾಹರಿಸಿ- **ದ್ಯುಮ್ನಂ ದ್ಯೋತತೇರ್ಯಶೋ ವಾ ಅನ್ನಂ ವಾ ॥** ಎಂದರೆ ದ್ಯುಮ್ನ ಶಬ್ದಕ್ಕೆ ಉಜ್ಜ್ವಲವಾದ ಕೀರ್ತಿ ಅಥವಾ ಅನ್ನವೆಂಬ ಎರಡು ವಿಧವಾದ ಅರ್ಥಗಳನ್ನು ಹೇಳಿರುವರು. ಪ್ರಸಕ್ತ ಋಕ್ಕಿನಲ್ಲಿ ಪೀಪಯತ್ ಎಂಬ ಸಾನಾರ್ಥಕಕ್ರಿಯಾಪದವಿರುವುದರಿಂದ ಭಾಷ್ಯಕಾರರು **ದ್ಯುಮ್ನಂ ದ್ಯೋತಮಾನಂ ಸೋಮಂ ಪೀಪಯೆತ್**—ಪ್ರಕಾಶಮಾನವಾದ ಸೋಮರಸವನ್ನು ಪಾನಮಾಡಿದನು (ಪಾನಮಾಡಿಸಿದನು) ಎಂದು ಅರ್ಥವಿವರಣೆ ನೂಡಿರುವರು. **ಈ** ಶಬ್ದಕ್ಕೆ ಅಗ್ನಿಯು ಹವಿರ್ಲಕ್ಷಣೋಪೇತವಾದ ಅನ್ನವನ್ನು ಸ್ವೀಕರಿಸಿದನು ಎಂಬ ಅರ್ಥವನ್ನು ಬೇಕಾದರೂ ಹೇಳಬಹುದು

ಋತಾನಾ—ಮುಂದಿನ ಋಕ್ಕಿನಲ್ಲಿ **ಈ** ಶಬ್ದದ ಅರ್ಥವಿವರಣೆ ಇರುವುದು

ವಿಪ್ರೇಭಿಃ—ವಿಪ್ರಃ ವಿಗ್ರಃ ಮೊದಲಾದ ಇಪ್ಪತ್ತುನಾಲ್ಕು ಮೇಧಾವಿನಾಮಗಳಲ್ಲಿ ವಿಪ್ರಶಬ್ದವು ಪರಿತವಾಗಿರುವುದರಿಂದ ವಿಪ್ರೇಭಿಃ ಎಂದರೆ ಮೇಧಾವಿಗಳಾದ, ಅಥವಾ ಬುದ್ಧಿವಂತರಾದ ಎಂದರ್ಥವು. (ನಿ ೩-೯)

ಜಾತವೇದಾಃ—**ಜಾತಧನೋ ಜಾತಪ್ರಜ್ಞೋ ವಾ ।** ವೇದಸ್ ಶಬ್ದಕ್ಕೆ ಧನವೆಂದು (ನಿ. ೩-೯) ಪ್ರಜ್ಞೆಯೆಂದೂ ಎರಡು ಅರ್ಥಗಳಿರುವವು ಆದುದರಿಂದ ಜಾತವೇದಾಃ ಎಂದರೆ ಧನಾಢ್ಯನು ಅಥವಾ ಪ್ರಜ್ಞಾವಂತನು ಎಂದರ್ಥವು.

ವಾಜಂ—ಅಂಧಃ, ವಾಜಃ ಮೊದಲಾದ ಇಪ್ಪತ್ತೆಂಟು ಅನ್ನನಾಮಗಳ ಮಧ್ಯದಲ್ಲಿ ವಾಜಃ ಎಂಬ ಶಬ್ದವು ಪರಿತವಾಗಿರುವುದರಿಂದ ವಾಜಂ ಎಂದರೆ ಅನ್ನವನ್ನು ಎಂದರ್ಥವು (ನಿ ೩-೯).

ಪುಷ್ಟಿಂ– ಪುಷ್ಟಿಯನ್ನು ಅಥವಾ ಪುಷ್ಟಿಕರವಾದ ಆಹಾರವನ್ನು (nourishing food).

ಜೋಷಂ—**ಜುಷೀ ಪ್ರೀತಿಸೇವನಯೋಃ । ಅಸ್ಮಾಭಿಃ ಕೃತಂ ಸೇವನಂ**—ನಮ್ಮಿಂದ ಮಾಡಲ್ಪಟ್ಟ ಸೇವೆಯನ್ನು, ಶುಶ್ರೂಷೆಯನ್ನು.

ಆ ಚಿಕಿತ್ವಾನ್—**ಕಿತ ಜ್ಞಾನೇ** । ನಾವು ಮಾಡುವ ಸ್ತೋತ್ರರೂಪವಾದ ಸೇವೆಯನ್ನು ತಿಳಿದವನಾಗಿ

॥ ವ್ಯಾಕರಣಪ್ರಕ್ರಿಯಾ ॥

ಗೋತಮೇಭಿಃ—ಗೋತಮಸ್ಯ ಅಪತ್ಯಾನಿ ಪುಮಾಂಸಃ ಎಂದು ಅಪತ್ಯಾರ್ಥವಿವಕ್ಷಾ ಮಾಡಿದಾಗ **ಋಷ್ಯಂಧಕ ವೃಷ್ಣಿ ಕುರುಭ್ಯಶ್ಚ** (ಪಾ. ಸೂ. ೪-೧-೧೧೪) ಎಂಬುದರಿಂದ **ಅಣ್** ಪ್ರತ್ಯಯ ಬರುತ್ತದೆ. ಅದಕ್ಕೆ ಬಹುತ್ವ ತೋರುವಾಗ **ಅತ್ರಿಭೃಗುಕುತ್ಸವಸಿಷ್ಠಗೋತಮಾಂಗಿರೋಭ್ಯಶ್ಚ** (ಪಾ ಸೂ. ೨-೪-೬೫) ಎಂಬುದರಿಂದ ಲುಕ್ ಗೋತಮ ಎಂದೇ ಉಳಿಯುತ್ತದೆ. ಇದಕ್ಕೆ ತೃತೀಯಾ ಬಹುವಚನ ಭಿಸ್ ಪರವಾದಾಗ **ವಾ ಛಂದಸಿ** ಎಂಬುದರಿಂದ ಭಿಸ್ಸಿಗೆ ಐಸ್ ಬರುವುದಿಲ್ಲ. **ಬಹುವಚನೇಝ್ಯುಲ್ಯೇತ್** ಎಂಬುದರಿಂದ ಏತ್ವ. ಸಕಾರಕ್ಕೆ ರುತ್ವ ವಿಸರ್ಗ.

ಋತವಾ—೭೭ನೇ ಸೂಕ್ತದ ಒಂದನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ

ಅಸ್ತೋಷ್ಟ—ಷ್ಟುಞ್ ಸ್ತುತೌ ಧಾತು. **ಧಾತ್ವಾದೇಃ ಷಃ ಸಃ** ಎಂಬುದರಿಂದ ಆದಿಗೆ ಸತ್ವ ಇದಕ್ಕೆ ಕರ್ಮಣಿಯಲ್ಲಿ ಲುಙ್ ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ **ಚಿಣ್ ಭಾವಕರ್ಮಣೋಃ** (ಪಾ ಸೂ ೩-೧-೬೬) ಎಂಬುದರಿಂದ ಇಲ್ಲಿ ಚ್ಲಿಗೆ **ಚಿಣ್** ಪ್ರಾಪ್ತವಾದರೂ ಛಾಂದಸವಾಗಿ ಬರುವುದಿಲ್ಲವೆನ್ನಬೇಕು ಆಗ **ಚ್ಲೇಃಸಿಚ್** ಎಂಬುದರಿಂದ ಸಿಜಾದೇಶ. ಅಸಿಟ್ ಧಾತುವಾದುದರಿಂದ ಇಡಾಗಮ ಬರುವುದಿಲ್ಲ. **ಸಾರ್ವಧಾತುಕಾರ್ಧ-** ಎಂಬುದರಿಂದ ಧಾತುವಿನ ಇಕ್ಕಿಗೆ ಗುಣ **ಆದೇಶಪ್ರತ್ಯಯಯೋಃ** ಎಂಬುದರಿಂದ ಸಿಚ್ಚಿನ ಸಕಾರಕ್ಕೆ ಷತ್ವ ತಸ್ಥಿ ವಿತ್ವವಾಗಿ ಪ್ರತ್ಯಯ ತಕಾರಕ್ಕೆ ಷ್ಟುತ್ವ ಆಂಗಕ್ಕೆ ಆಡಾಗಮ. ಅಸ್ತೋಷ್ಟ ಎಂದು ರೂಪವಾಗುತ್ತದೆ. ಆತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಪೀಪಯೆತ್—ಪಾ ಪಾನೇ ಧಾತು ಪ್ರಯೋಜಕವ್ಯಾಪಾರತೋರುವಾಗ **ಹೇತುಮತಿಚ** (ಪಾ ಸೂ ೩-೧-೨೬) ಎಂಬುದರಿಂದ ಣಿಚ್ ಪರವಾದಾಗ **ಶಾಚ್ಛಾಸಾಹ್ವಾವ್ಯಾವೇಪಾಂ ಯುಕ್** (ಪಾ. ಸೂ. ೭-೩-೩೭) ಎಂಬುದರಿಂದ ಧಾತುವಿಗೆ ಯುಕಾಗಮ. ಪಾಯಿ ಎಂಬ ಣಿಜಂತದ ಮೇಲೆ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರ ಲೋಪ **ಣೌಶ್ಚ್ಲ್ಯುಸ್ಸ್ಯುಭ್ಯಃ**—(ಪಾ. ಸೂ ೩-೧-೪೮) ಎಂಬುದರಿಂದ ಚ್ಲಿಗೆ ಚಙಾದೇಶ. **ಚಙಿ** (ಪಾ .ಸೂ. ೬-೧-೧೧) ಎಂಬುದರಿಂದ ಧಾತುವಿನ ಪ್ರಥಮೈಕಾಚ್ಚಿಗೆ ದ್ವಿತ್ವ ಛಾಂದಸವಾಗಿ **ಲೋಪಃ ಪಿಬತೇಃ**—(ಪಾ. ಸೂ. ೭-೪-೪) ಎಂಬುದರಿಂದ ಉಸಥಾಲೋಪ ಅಭ್ಯಾಸ ಈತ್ವ ಬರುವುದಿಲ್ಲ **ಣೌಚಙ್ಯುಪಧಾಯಾ ಹ್ರಸ್ವಃ** (ಪಾ. ಸೂ. ೭-೪-೧) ಎಂಬುದರಿಂದ ಧಾತುವಿನ ಉಪಧೆಗೆ ಹ್ರಸ್ವ **ಸನ್ವಲ್ಲಘುನಿ ಚಙ್ಪರೇಽನಗ್ಲೋಪೇ** (ಪಾ. ಸೂ. ೭-೪-೯೩) ಎಂಬುದರಿಂದ ಸನ್ವದ್ಭಾವ ಬರುವುದರಿಂದ

ಸನ್ಯತಃ (ಪಾ ಸೂ. ೭-೪-೭೯) ಎಂಬುದರಿಂದ ಅಭ್ಯಾಸಕ್ಕೆ ಇತ್ವ **ದೀಘೋ೯ ಲಘೋಃ** (ಪಾ ಸೂ. ೭-೪-೯೪) ಎಂಬುದರಿಂದ ಅದಕ್ಕೆ ದೀರ್ಘ **ಸೇರನಿಟಿ** (ಪಾ. ಸೂ ೯-೪-೫೧) ಎಂಬುದರಿಂದ ಜಜ್ನಿಮಿತ್ತವಾಗಿ ಣಿಗೆ **ಲೋಪ ಬಹುಲಂ ಛಂದಸ್ಯಮಾಙ್ಯೋಗೇ೭ಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಅತಿಜಂತದ ಪರಬಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಜೋಷಮ್—ಜುಷೀ ಪ್ರೀತಿಸೇವನಯೋಃ ಧಾತು ಇದಕ್ಕೆ ಭಾವಾರ್ಥದಲ್ಲಿ ಘಞ್ ಪ್ರತ್ಯಯ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಲಘೂಪಧಗುಣ ದ್ವಿತೀಯಾ ಏಕವಚನಾಂತರೂಪ. ಞಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಎಪ್ಪತ್ತೇಳನೆಯ ಸೂಕ್ತ ಸಮಾಪ್ತವು.

ಎಪ್ಪತ್ತೆಂಟನೆಯ ಸೂಕ್ತವು

ಅಭಿ ತ್ವೇತಿ ಪಂಚರ್ಚಂ ಪಂಚಮಂ ಸೂಕ್ತಂ ಗೋತಮಸ್ಯಾರ್ಷಮಾಗ್ನೇಯಂ ಗಾಯತ್ರಂ। ತಥಾ ಚಾನುಕ್ರಾಂತಂ। ಅಭಿ ತ್ವಾ ಗಾಯತ್ರಂ ತ್ರಿತಿ ॥ ವಿನಿಯೋಗೋ ಲೈಂಗಿಕಃ ॥

ಅನುವಾದವು—**ಅಭಿ ತ್ವಾ ಗೋತಮಾ** ಎಂಬ ಸೂಕ್ತವು ಹದಿನೂರನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಗೋತಮನು ಋಷಿಯು. ಅಗ್ನಿಯೇ ದೇವತೆಯು. ಗಾಯತ್ರೀ ಛಂದಸ್ಸು. ಅನುಕ್ರಮಣಿಕೆಯಲ್ಲಿ-**ಅಭಿ ತ್ವಾ ಗಾಯತ್ರಂ ತ್ರಿತಿ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

ಸೂಕ್ತ---೭೮

॥ ಮಂಡಲ---೧ ॥ ಅನುವಾಕ---೧೩ ॥ ಸೂಕ್ತ---೭೮ ॥

॥ ಅಷ್ಟಕ---೧ ॥ ಅಧ್ಯಾಯಃ ೫ ॥ ವರ್ಗ---೨೬ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ---೫ ॥

॥ ಋಷಿಃ---ಗೋತಮೋ ರಾಹೂಗಣಃ ॥

॥ ದೇವತಾ---ಅಗ್ನಿಃ ॥

॥ ಛಂದಃ---ಗಾಯತ್ರೀ ॥

। ಸಂಹಿತಾಪಾಠಃ ॥

ಅಭಿ ತ್ವಾ ಗೋತಮಾ ಗಿರಾ ಜಾತವೇದೋ ವಿಚರ್ಷಣೇ ।
ದ್ಯುಮ್ನೈರಭಿ ಪ್ರ ಣೋನುಮಃ ॥ ೧ ॥

॥ ಪದಪಾಠಃ ॥

ಅಭಿ । ತ್ವಾ । ಗೋತಮಾಃ । ಗಿರಾ । ಜಾತಽವೇದಃ । ವಿಽಚರ್ಷಣೇ ।
ದ್ಯುಮ್ನೈಃ । ಅಭಿ । ಪ್ರ । ಣೋನುಮಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಜಾತವೇದೋ ಜಾತಾನಾಂ ವೇದಿತರ್ವಿಚರ್ಷಣೇ ವಿಶೇಷೇಣ ಸರ್ವಸ್ಯ ದ್ರಷ್ಟಃ ಏವಂಭೂತಾಗ್ನೇ ತ್ವಾ ತ್ವಾಂ ಗೋತಮಾ ಅಸ್ಯ ಸೂಕ್ತಸ್ಯ ದ್ರಷ್ಟಾ ಗೋತಮ ಋಷಿಃ । ಋಷೇರೇಕತ್ವೇಽಪಿ ಪೂಜಾರ್ಥಂ ಬಹುವಚನಂ । ಗಿರಾ ಸ್ತೋತ್ರಲಕ್ಷಣಯಾ ವಾಚಾಭ್ಯಾಭಿಮುಖ್ಯೇನಾಸ್ತೌದಿತಿ ಶೇಷಃ । ತದ್ವದ್ವಯಮಪಿ ತ್ವಾಂ ದ್ಯುಮ್ನೈಸ್ತ್ವದೀಯೈರ್ಗುಣಪ್ರಕಾಶಕೈರ್ಮಂತ್ರೈರಭಿ ಪ್ರ ಣೋನುಮಃ । ಅಭಿಮುಖ್ಯೇನ ಪುನಃಪುನಃ ಸ್ತುಮಃ ॥ ನೋನುಮಃ । ಣು ಸ್ತುತೌ । ಅಸ್ಮಾದ್ಯಜ್ಲುಗಂತಾಲ್ಲಟ್ । ಉಪಸರ್ಗಾದಸಮಾಸೇಽಪೀತಿ ಣತ್ವಂ ॥

॥ ಪ್ರತಿಪದಾರ್ಥ ॥

ಜಾತವೇದಃ - ಜನಿಸಿರುವುದೆಲ್ಲವನ್ನೂ ತಿಳಿದಿರುವ । **ವಿಚರ್ಷಣೇ**—ಸಮಸ್ತವನ್ನೂ ವಿಶೇಷವಾಗಿ ನೋಡುವ ಎಲೈ ಅಗ್ನಿಯೇ । **ತ್ವಾ**— ನಿನ್ನನ್ನು । **ಗೋತಮಾಃ**—(ಈ ಸೂಕ್ತದ್ರಷ್ಟೃವಾದ) ಗೋತಮ ವಂಶಸ್ಥರಾದ ಋಷಿಗಳು । **ಗಿರಾ**– ಸ್ತುತಿರೂಪವಾದ ವಾಕ್ಯಿನಿಂದ । **ಅಭಿ**—ಅಭಿಮುಖವಾಗಿ ನಿಂತು ಸ್ತುತಿಸಿದರು (ಆದರಂತೆಯೇ ನಾವೂ) । **ದ್ಯುಮ್ನೈಃ**—(ನಿನ್ನ) ಗುಣಗಳನ್ನು ಪ್ರಕಾಶಪಡಿಸುವ (ಮಂತ್ರಗಳಿಂದ) । **ಅಭಿ ಪ್ರ ಣೋನುಮಃ**—ಅಭಿಮುಖವಾಗಿ ಪುನಃ ಪುನಃ ಸ್ತುತಿಸುತ್ತೇವೆ

॥ ಭಾವಾರ್ಥ ॥

ಸರ್ವಜ್ಞನೂ, ಸರ್ವದ್ರಷ್ಟೃವೂ ಆದ ಎಲೈ ಅಗ್ನಿಯೇ, ಗೋತಮ ವಂಶಸ್ಥರು ನಿನ್ನನ್ನು ಸ್ತುತಿರೂಪವಾದ ವಾಕ್ಯಗಳಿಂದ ಸ್ತುತಿಸುತ್ತಾರೆ, (ಆದರಂತೆಯೇ ನಾವೂ) ನಿನ್ನ ಗುಣದ್ಯೋತಕವಾದ ಮಂತ್ರಗಳಿಂದ ನಿನ್ನನ್ನು ಅಭಿಮುಖೀಕರಿಸಿಕೊಂಡು ಪುನಃ ಪುನಃ ಸ್ತುತಿಸುತ್ತೇವೆ

English Translation.

Knower and beholder of all that exists, Gotama celebrates you Agni, with praise; we praise you repeatedly with commendatory (hymns).

॥ ವಿಶೇಷವಿಷಯಗಳು ॥

ಗೋತಮಾಃ—ಗೋತಮವಂಶಸ್ಥರಾದ ಋಷಿಗಳು. ಈ ಋಕ್ಕಿನಲ್ಲಿ ಗೋತಮಾಃ ಎಂಬ ಬಹುವಚನ ಶಬ್ದವಿದ್ದರೂ ಗೌರವಕ್ಕಾಗಿ ಬಹುವಚನಪ್ರಯೋಗವಿರುವುದೆಂದೂ ಆದುದರಿಂದ ಈ ಶಬ್ದಕ್ಕೆ ಗೋತಮಋಷಿಯು ಎಂಬ ಏಕವಚನಾರ್ಥವನ್ನು ಮಾತ್ರ ಹೇಳಬೇಕೆಂದೂ ಸಾಯಣರು ಅರ್ಥವಿವರಣೆ ಮಾಡಿರುವರು ಈ ಸೂಕ್ತಕ್ಕೆ ಗೋತಮನೇ ಋಷಿಯಾದ್ದರಿಂದ ಭಾಷ್ಯಕಾರರ ಈ ವಿಧವಾದ ವಿವರಣೆಯು ಸಮಂಜಸವಾಗಿರುವುದು. ಆಧುನಿಕ ಭಾಷೆಯಲ್ಲಿಯೂ ಕೂಡ ಕವಿಗಳೂ ಗ್ರಂಥಕರ್ತರೂ ಗ್ರಂಥಗಳಲ್ಲಿ ತಮ್ಮ ಹೆಸರನ್ನು ಸೂಚಿಸುವಾಗ ನಾವು, ನಮ್ಮ ಎಂಬ ಬಹುವಚನ ಶಬ್ದಗಳನ್ನೇ ಉಪಯೋಗಿಸುವುದು ರೂಢಿಯಲ್ಲಿರುವುದು. ಅದರಂತೆ ಇಲ್ಲಿಯೂ ಪ್ರಯೋಗ ವಿರುವುದೆಂದು ಭಾವಿಸಬೇಕು. ಅಥವಾ ಗೋತಮಾಃ ಎಂಬ ಶಬ್ದಕ್ಕೆ ಗೋತಮಋಷಿಯೂ ಅವನ ಪುತ್ರಪೌತ್ರಾದಿ ಸಂತತಿಯವರೂ ಎಂಬ ಅರ್ಥವನ್ನಾದರೂ ಹೇಳಬಹುದು

ವಿಚರ್ಷಣೇ—ವಿಶೇಷೇಣ ಸರ್ವಸ್ಯ ದ್ರಷ್ಟಃ । ಸಮಸ್ತವನ್ನೂ ವಿಶೇಷವಾಗಿ ನೋಡುವವನು

ದ್ಯುಮ್ನೈಃ—ಈ ಶಬ್ದದ ಅರ್ಥವಿವರಣೆಯನ್ನು ಹಿಂದಿನ ಋಕ್ಕಿನಲ್ಲಿಯೇ ವಿವರಿಸಿದೆನೆ ದ್ಯುಮ್ನಶಬ್ದಕ್ಕೆ ಪ್ರಕಾಶಾರ್ಥವಿದ್ದರೂ ಭಾಷ್ಯಕಾರರು ಮಂತ್ರೈಃ ಎಂಬ ಶಬ್ದವನ್ನು ಅಧ್ಯಾಹಾರಮಾಡಿ, ನಿನ್ನ ಗುಣಗಳನ್ನು ಪ್ರಕಾಶಪಡಿಸುವ ಸ್ತೋತ್ರಗಳಿಂದ ಎಂದರ್ಥವಿವರಣೆ ಮಾಡಿರುವರು.

ನೋನುಮಃ—ಪುನಃ ಪುನಃ ಸ್ತುಮಃ । ಮತ್ತೆ ಮತ್ತೆ (ಅನೇಕಾವರ್ತಿ) ಸ್ತೋತ್ರಮಾಡುವೆವು ಎಂದ ಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಗಿರಾ—ರೇಫಾಂತ ಸ್ತ್ರೀಲಿಂಗ ಗಿರ್ ಶಬ್ದ. ತೃತೀಯಾ ಏಕವಚನಾಂತರೂಪ. **ಸಾವೇಕಾಚೆಸ್ತೃತೀಯಾದಿಃ** (ಪಾ. ಸೂ ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಜಾತವೇದಃ—ಸಂಬುದ್ಧಿ ಏಕವಚನಾಂತರೂಪ ಪಾದಾದಿಯಲ್ಲಿರುವುದರಿಂದ ಆಷ್ಟಮಿಕನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. **ಆಮಂತ್ರಿತಂ ಪೂರ್ವಮವಿದ್ಯಮಾನವತ್** ಸೂತ್ರದಿಂದ ಇದಕ್ಕೆ ಅವಿದ್ಯಮಾನವದ್ಭಾವವಿರುವುದರಿಂದ ಪದದ ಪರದಲ್ಲಿ ಬಂದಂತಾಗದಿದ್ದುರಿಂದ ಮುಂದಿರುವ ವಿಚರ್ಷಣೇ ಎಂಬ ಆಮಂತ್ರಿತಕ್ಕೂ ನಿಘಾತಸ್ವರ ಬರುವುದಿಲ್ಲ ಹಿಂದಿನ ಸೂತ್ರದಿಂದ ಆದ್ಯುದಾತ್ತವಾಗುತ್ತದೆ.

ಪ್ರ ನೋನುಮಃ—ಣು ಸ್ತುತೌ ಧಾತು ಅದಾದಿ, ಅತಿಶಯ ಅಥವಾ ಪುನಃ ಪುನಃ ಎಂದು ಅರ್ಥತೋರುವುದರಿಂದ **ಧಾತೋರೇಚೋಹಲಾ** (ಪಾ. ಸೂ. ೩-೧-೨೨) ಎಂಬುದರಿಂದ ಇದಕ್ಕೆ ಯಙ್. **ಯೆಜಿಕೋ೭ಚಿಚಿ** (ಪಾ. ಸೂ. ೨-೪-೭೪) ಎಂಬುದರಿಂದ ಯಙ್‌ಗೆ ಲುಕ್. **ಸನ್ಯಙೋಃ** (ಪಾ. ಸೂ ೬-೧-೯) ಎಂಬುದರಿಂದ ಧಾತುವಿಗೆ ದ್ವಿತ್ವ **ಗುಣೋಯಙ್‌ಲುಕೋಃ** (ಪಾ. ಸೂ ೭-೪-೮೨) ಎಂಬುದರಿಂದ ಯಙ್‌ಲುಙ್ ನಿಮಿತ್ತವಾಗಿ ಅಭ್ಯಾಸಕ್ಕೆ ಗುಣ. **ಸನಾದ್ಯಂತಾ ಧಾತವಃ** ಎಂಬುದರಿಂದ ಧಾತುಸಂಜ್ಞಾ ಬರುವುದರಿಂದ ಇದರ ಮೇಲೆ ಲಟ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ ನೋನುಮಃ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ಹಿಂದೆ ಪ್ರ ಎಂಬ ಉಪಸರ್ಗವಿರುವಾಗ **ಉಪಸರ್ಗಾದಸಮಾಸೇ೭ಪಿ ಣೋಪದೇಶಸ್ಯ** (ಪಾ ಸೂ ೮-೪-೧೪) ಎಂಬುದರಿಂದ ಣೋಪದೇಶವಾದ ಈ ಧಾತುವಿನ ನಕಾರಕ್ಕೆ ಉಪಸರ್ಗದಲ್ಲಿರುವ ನಿಮಿತ್ತದ (ರೇಫ) ಪರದಲ್ಲಿರುವುದರಿಂದ ಣತ್ವ. ಪ್ರ ಣೋನುಮಃ ಎಂದು ರೂಪವಾಗುತ್ತದೆ. ॥ ೧ ॥

॥ ಸಂಹಿತಾಪಾಠಃ ॥

ತಮು᳡ ತ್ವಾ ಗೋತ᳡ಮೋ ಗಿರಾ ರಾಯಸ್ಕಾ᳡ಮೋ ದುವಸ್ಯತಿ ।
ದ್ಯುಮ್ನೈ᳡ರಭಿ ಪ್ರ ಣೋ᳡ನುಮಃ ॥ ೨ ॥

॥ ಪದಪಾಠಃ ॥

ತಂ । ಊಂ ಇ᳡ತಿ । ತ್ವಾ । ಗೋತ᳡ಮಃ । ಗಿರಾ । ರಾಯಃ ಕ᳡ಾಮಃ । ದುವಸ್ಯತಿ ।
ದ್ಯುಮ್ನೈಃ᳡ । ಅಭಿ । ಪ್ರ । ಣೋ᳡ನುಮಃ ॥ ೨ ॥

॥ ಸಾಯಣಭಾಷ್ಯಂ ॥

ರಾಯಸ್ಕಾಮೋ ಧನಕಾಮೋ ಗೋತಮೋ ಯಮಗ್ನಿಂ ಗಿರಾ ಸ್ತುತ್ಯಾ ದುವಸ್ಯತಿ ಪರಿಚರತಿ ತಮು ತಮೇವ ತ್ವಾಂ ದ್ಯುಮ್ನೈರ್ದ್ಯೋತಮಾನೈಃ ಸ್ತೋತೃಭಿರಾಭಿಮುಖ್ಯೇನ ಪುನಃಪುನಃ ಸ್ತುಮಃ ॥ ರಾಯಸ್ಕಾಮಃ । ರಾಯೋ ಧನಾನಿ ಕಾಮಯತ ಇತಿ ರಾಯಸ್ಕಾಮಃ । ಕರ್ಮಣ್ಯಣ್ । ತತ್ಪುರುಷೇ ಕೃತಿ।ಬಹುಲಮಿತಿ ಬಹುಲವಚನಾದಲುಕ್ । ಊಡಿದಮಿತ್ಯಾದಿನಾ ಪೂರ್ವಪದಸ್ಯ ವಿಭಕ್ತೇರುದಾತ್ತತ್ವಂ । ದಾಸೀಭಾರಾದಿತ್ವಾತ್ಪೂರ್ವಪದಪ್ರಕೃತಿಸ್ವರತ್ವಂ । ಅತಃ ಕೃಕಮಿಕಂಸಕುಂಭೇತಿ । ಪಾ. ೮-೩-೪೬ । ವಿಸರ್ಜನೀಯಸ್ಯ ಸತ್ವಂ । ದ್ಯುವಸ್ಯತಿ । ದುವಸ ಉಪಸಪರ್ಯಾಯೇ ಪರಿಚರಣೇ ಚ । ಕಂಡ್ವಾದಿಃ ॥

॥ ಪ್ರತಿಪದಾರ್ಥ ॥

ರಾಯಸ್ಕಾಮಃ—ಧನವನ್ನು ಪೇಕ್ಷಿಸುವ । **ಗೋತಮಃ**—ಗೋತಮಋಷಿಯು (ಯಾವ ಅಗ್ನಿಯನ್ನು) । **ಗಿರಾ**—ಸ್ತುತಿಯಿಂದ । **ದುವಸ್ಯತಿ**—ಸೇವನೆಮಾಡುತ್ತಾನೆಯೋ । **ತಮು**—ಅಂತಹ ಅಗ್ನಿಯನ್ನೇ । **ದ್ಯುಮ್ನೈಃ**—ಗುಣದ್ಯೋತಕವಾದ ಸ್ತುತಿಗಳಿಂದ । **ಅಭಿ ಪ್ರ ಣೋನುಮಃ**—ಪುನಃ ಪುನಃ ಸ್ತುತಿಸುತ್ತೇನೆ

॥ ಭಾವಾರ್ಥ ॥

ಧನಕಾಮರಾಗಿ ಗೌತಮರು, ಯಾವ ಅಗ್ನಿಯನ್ನು ಸ್ತುತಿಸಿದರೋ, ಅದೇ ಅಗ್ನಿಯನ್ನೇ (ನಾವೂ) ಗುಣದ್ಯೋತಕವಾದ ವಾಕ್ಯಗಳಿಂದ ಸ್ತುತಿಸುತ್ತೇನೆ

English Translation.

To you, that (Agni) whom Gotama, desirous of riches, worships with praise, we offer adoration with commendatory (hymns).

॥ ವಿಶೇಷವಿಷಯಗಳು ॥

ಗಿರಾ—ವಾಕ್ಯದಿಂದ ಎಂದರೆ ಸ್ತೋತ್ರರೂಪವಾದ ವಾಕ್ಯದಿಂದ.

ರಾಯಸ್ಕಾಮಃ—ಮಘಂ ರೇಕ್ಣಃ ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ **ರಾಯಃ** ಎಂಬ ಶಬ್ದವು ಪರಿತನಾಗಿರುವುದರಿಂದ **ರಾಯಃ** ಎಂದರೆ ಧನವು (ನಿ ೩–೯) **ರಾಯಸ್ಕಾಮಃ** ಎಂದರೆ ಧನವನ್ನಪೇಕ್ಷಿಸುವವನು ಎಂದರ್ಥವು. ಈ ಸೂಕ್ತದ ಋಷಿಯಾದ ಗೋತಮನು ಧನಪ್ರಾಪ್ತಿಗಾಗಿ ಅಗ್ನಿಯನ್ನು ಸ್ತೋತ್ರ ಮಾಡಿರುವನು

ದುವಸ್ಯತಿ—ಪರಿಚರತಿ । ಸೇವೆಮಾಡುತ್ತಾನೆ ಇರಜ್ಯತಿ, ವಿಧೇಮ ಮೊದಲಾದ ಹತ್ತು ಪರಿಚರಣ ಕರ್ಮನಾಮಗಳಲ್ಲಿ **ದುವಸ್ಯತಿ** ಎಂಬ ಶಬ್ದವು ಪರಿತವಾಗಿರುವುದರಿಂದ **ದುವಸ್ಯತಿ** ಎಂದರೆ ಸೇವೆಮಾಡುತ್ತಾನೆ. ಶುಶ್ರೂಷೆಮಾಡುತ್ತಾನೆ ಎಂದರ್ಥವು (ನಿ. ೩–೧೩). ಈ ಶಬ್ದಪ್ರಯೋಗವಿರುವ ಒಂದೆರಡು ಋಕ್ಕುಗಳನ್ನು ಉದಾಹರಣೆಯಾಗಿ ಕೊಡುವೆವು.

ಆಕರೇ ವಸೋರ್ಜರಿತಾ ಪನಸ್ಯತೇ೨ನೇಹಸಃ ಸ್ತುಭ ಇಂದ್ರೋ ದುವಸ್ಯತಿ ।

(ಋ. ಸಂ. ೩–೫೧–೩)

ಅಗ್ನಿರ್ಹಿ ದೇವಾಁ ಅಮೃತೋ ದುವಸ್ಯತ್ಯಥಾ ಧರ್ಮಾಣಿ ಸನತಾ ನ ದೂದುಷತ್ ।

(ಋ. ಸಂ ೩–೩–೧).

ಕ್ಷೇಮೇಣ ಮಿತ್ರೋ ವರುಣಂ ದುವಸ್ಯತಿ ಮರುದ್ಭಿರುಗ್ರಃ ಶುಭಮನ್ಯ ಈಯತೇ ।

(ಋ. ಸಂ. ೭–೮೨–೫).

ನಮಸ್ಯತ ಹವ್ಯದಾತಿಂ ಸ್ತೆದ್ವರಂ ದುವಸ್ಯತ ದಮ್ಯಂ ಜಾತವೇದಸಂ ।

(ಋ. ಸಂ ೩–೨–೮).

ಇತ್ಯಾದಿ ಋಕ್ಕುಗಳಲ್ಲಿರುವ **ದುವಸ್ಯತಿ** ಶಬ್ದಕ್ಕೆ ಪರಿಚರಣಕರ್ಮವೆಂದೇ ಅರ್ಥವು

ದ್ಯುನ್ಮ್ನೈರಭಿ ಪ್ರ ಣೋನುಮಃ—ಈ ಸೂಕ್ತದಲ್ಲಿರುವ ಐದು ಋಕ್ಕುಗಳಲ್ಲಿಯೂ ಈ ಪಾದವು ಪಲ್ಲವಿಯಂತೆ ಪುನಃ ಪುನಃ ಪರಿತವಾಗಿರುವುದು

॥ व्याकरणप्रक्रिया ॥

रायेऽस्यामः—रायः धनानि कामयते इति रायेऽस्यामः कमु कान्तौ धातु इदकै कर्मवाचकशब्दवु उपपदवागिरुवाग **कर्मण्यण्** (पा सू ३-२-१) एंबुदरिंद अण् प्रत्ययः. **अतेऽउपधायाः**(पा सू ६-४-१४६) एंबुदरिंद उपधावृद्धि. **सुपोधातुप्रातिपदिकयोः** एंबुदरिंद द्वितीयाविभक्तिगे लुक् प्राप्तवादरे **तत्पुरुषे कृति बहुलं** (पा सू. २-३-१४) एंबल्लि बहुलग्रहणमाडिरुवुदरिंद इल्लियू लुक् बरुत्तदे **ऊडिदं पदादि**—(पा सू ६-१-१६१) एंबुदरिंद **रायेः** एंबुदु विभक्तिगे उदात्तस्वर बरुवुदरिंद अंतोदात्तवागुत्तदे. दाक्षीभावादियल्लि परिगणिसदिरुवुदरिंद वृत्तियल्लि पूर्वपदप्रकृतिस्वर बरुत्तदे रायेः कामः एंदिरुवाग **अतः कृकमिकंसकुंभ**—(पा सू. ७-३-४६) एंबुदरिंद कम् धातुवु परदल्लिरुवुदरिंद विसर्गक्के सत्व बरुत्तदे.

दुवस्यति—दुवस उपसेवायां चरिचरणेचेत धातु कण्ड्वादि **कंड्वादिभ्यो यक्** (पा सू ३-१-२७) एंबुदरिंद स्वार्थदल्लि यक् प्रत्ययः. **सनाद्यन्ता धातवः** एंबुदरिंद दुवस्य एंब यगंतक्के धातुसंज्ञे बरुत्तदे. इदरमेले वर्तमानार्थदल्लि लट् प्रथमपुरुष एकवचनदल्लि तिप् प्रत्ययः शप् विकरण. **अतोगुणे** एंबुदरिंद परररूप दुवस्यति एंदु रूपवागुत्तदे अदिंतद परदल्लिरुवुदरिंद गुणस्वर बरुत्तदे

द्युम्नैः-**ऊडिदंपदादि**(पा सू ६-१-१६१) एंबुवरिंद विभक्तिगे उदात्तस्वर बरुत्तदे.

नोनुमः मुंदिन मंत्रदल्लि व्याख्यातवागिदे ॥ ६ ॥

॥ संहिताकारः ॥

तमू॑ त्वा॒ वाज॑सातममंगिरस्वद्ध॒वामहे ।

द्युम्नै॑रभि प्र ण॑ोनुमः ॥ ३ ॥

॥ क्रमपाठः ॥

तं । ऊं इति । त्वा । वाज॑सातमं । अंगिरस्वत् । हवामहे ।

द्युम्नैः । अभि । प्र । नोनुमः ॥ ३ ॥

VI 33

॥ सायणभाष्यं ॥

हे अग्ने नाजसातेमं नाजानामन्नानामतिशयेन सनितारं दातारं तमेव त्वा त्वामंगिरस्वत् । अंगिरस इव हवामहे । अद्येमामः । शिष्यं गतं॥ नाजसातेमं । षणु दाने । जनसनखनक्रमगमो विट् । विड्वनोरनुनासिकस्यात्कित्यात्क्ङिति । अतिशयेन नाजसा नाजसातेमः । तमपः पित्त्वादनुदात्तत्वे कृदुत्तरपदप्रकृतिस्वर एव शिष्यते । अंगिरस्वत् । तेन तुल्यमिति वतिः । नभोऽङ्गिरोमनुषां वत्युपसंख्यानं । सा ८-४-८४-३ । इति भत्वेन पदत्वाभावाद्रुत्वाद्यभावः ॥

॥ प्रतिपदार्थ ॥

अग्ने- ಎಲೈ ಅಗ್ನಿಯೇ, (ನಾವು) । **नाजसातेमं**—ಅನ್ನವನ್ನು ಅತಿಶಯವಾಗಿ ಅನುಗ್ರಹಿಸುವ । **तमु**—ಅದೇ । **त्वा**—ನಿನ್ನನ್ನು । **अंगिरस्वत्**—ಅಂಗಿರಸರಂತೆ (ಅಂಗಿರಾ ಋಷಿಯಂತೆ) । **हवामहे**—ಆಹ್ವಾನಿಸುತ್ತೇವೆ । **द्युभिस्मै**—(ನಿನ್ನ) ಗುಣದ್ಯೋತಕವಾದ ಮಂತ್ರಗಳಿಂದ । **अभि स्मै नोनुमः**—ಪುನಃ ಪುನಃ ಸ್ತುತಿಸುತ್ತೇವೆ ।

॥ भावार्थ ॥

ಎಲೈ ಅಗ್ನಿಯೇ, ವಿಶೇಷವಾಗಿ ಅನ್ನವನ್ನು ಅನುಗ್ರಹಿಸುವ ನಿನ್ನನ್ನು ಅಂಗಿರಸರಂತೆ ನಾವು (ನಮ್ಮ ಯಜ್ಞಕ್ಕೆ) ಆಹ್ವಾನಿಸುತ್ತೇವೆ. (ಬಂದಂಥಾ ನಿನ್ನನ್ನು) ಗುಣದ್ಯೋತಕವಾದ ಮಂತ್ರಗಳಿಂದ ಪುನಃ ಪುನಃ ಸ್ತುತಿಸುತ್ತೇವೆ.

English Translation.

We invoke you, such as you are, the giver of abundant food, in like manner as did Angiras, we praise you repeatedly which commendatory (hymns).

॥ विशेषविषयंगळु ॥

नाजसातेमं—अन्नानामतिशयेन दातारं । ನಾಜವೆಂದರೆ ಅನ್ನವು. (ನಿ ೩-೯) ಅತಿಶಯವಾಗಿ ಅನ್ನವನ್ನು ಕೊಡುವನನಾದ್ದರಿಂದ ಅಗ್ನಿಯನ್ನು ನಾಜಸಾತಮಂ ಎಂದು ಸ್ತುತಿಸಲಾಗಿದೆ.

अंगिरस्वत्—ಅಂಗಿರಾ ಋಷಿಯು ಅಗ್ನಿಯನ್ನು ಆಹ್ವಾನಮಾಡಿದಂತೆ. ಈ ಉಪಮಾನವು ಋಗ್ವೇದವ ಅನೇಕ ಋಕ್ಕುಗಳಲ್ಲಿ ಹೇಳಿರುವುದು—

ಮನುಷ್ವದಗ್ನೇ ಅಂಗಿರಸ್ವದಂಗಿರೋ ಯಯಾತಿವತ್ಸದನೇ ಪೂರ್ವವಚ್ಛುಚೇ ।

(ಋ ಸಂ ೧-೩೧-೧೭)

ಅಂಗಿರಸ್ವನ್ಮಹಿವ್ರತ ಪ್ರಸ್ಕಣ್ವಸ್ಯ ಶ್ರುಧೀ ಹವಂ ।

(ಋ ಸಂ ೧-೪೫-೩)

ತದಸ್ಮೈ ನವ್ಯಮಂಗಿರಸ್ವದರ್ಚತ ಶುಷ್ಮಾ ಯದಸ್ಯ ಪ್ರತ್ನಥೋದೀರತೇ ।

(ಋ ಸಂ ೩-೩೨-೧)

ತಮಂಗಿರಸ್ವನ್ನಮಸಾ ಸಪರ್ಯನ್ನವ್ಯಂ ಕೃಣೋಮಿ ಸನ್ಯಸೇ ಪುರಾಜಾಂ ।

(ಋ ಸಂ ೩-೩೧-೧೯)

ಉತ ತ್ವಾ ಭೃಗುವಚ್ಛುಚೇ ಮನುಷ್ವದಗ್ನ ಆ ಹುತ ।
ಅಂಗಿರಸ್ವದ್ಧವಾಮಹೇ ।

(ಋ ಸಂ ೮-೪೩-೧೩)

ಇತ್ಯಾದಿ ಋಕ್ಕುಗಳಲ್ಲಿ ಅಂಗಿರಾಋಷಿಯು ಅಗ್ನಿಯನ್ನು ಆಹ್ವಾನಮಾಡಿ ಸರಿಚರಿತ್ರೆ ಮಾಡಿರುವ ವಿಷಯವು ವರ್ಣಿತವಾಗಿದೆ ಆ ವಿಧಾನವು ಅತ್ಯತ್ತಮವಾದುದೆಂದು ಪರಿಗಣಿಸಲ್ಪಟ್ಟಿರುವುದರಿಂದ ಅನೇಕ ಋಷಿಗಳು ಈ ಉದಾಹರಣೆಯನ್ನೇ ಕೊಟ್ಟಿರುವರ

॥ ವ್ಯಾಕರಣಪ್ರಕ್ರಿಯಾ ॥

ವಾಜಸಾತಮಮ್—ಷಣು ದಾನೇ ಧಾತು ವಾಜ ಎಂಬುದು ಉಪಪದವಾಗಿರುವಾಗ **ಜನಸನಖನ-ಕ್ರಮಗಮೋ ವಿಟ್** (ಪಾ ಸೂ ೩-೨-೬೭) ಎಂಬುದರಿಂದ ಇದಕ್ಕೆ ವಿಟ್ ಪ್ರತ್ಯಯ ವಿಟ್‌ಪರವಾದಾಗ ಇದು ಅನುನಾಸಿಕಾಂತಧಾತುವಾದುದರಿಂದ **ವಿಡ್ವನೋರನುನಾಸಿಕಸ್ಯಾತ್** (ಪಾ ಸೂ. ೬-೪-೪೧) ಎಂಬುದರಿಂದ ಆತ್ಸವರ್ಣದೀರ್ಘ. ವಾಜಸಾ ಎಂದು ರೂಪವಾಗುತ್ತದೆ ಅತಿಶಯೇನ ವಾಜಸಾ ವಾಜಸಾತಮಃ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ ೬-೪-೧೫೫) ಎಂಬುದರಿಂದ ತಮಪ್ ಪ್ರತ್ಯಯ ತಮಪ್ ಪಿತ್ತಾದುದರಿಂದ ಅನುದಾತ್ತವಾಗುತ್ತದೆ **ಗತಿಕಾರಕೋಪಪದಾತ್ ಕೃತ್** (ಪಾ ಸೂ ೬-೨-೧೩೯) ಎಂಬುದರಿಂದ ಬಂದ ಕೃದುತ್ತರಪದ ಪ್ರಕೃತಿಸ್ವರನೇ ಉಳಿಯುತ್ತದೆ ದ್ವಿತೀಯಾ ಏಕವಚನಾಂತರೂಪ

ಅಂಗಿರಸ್ವತ್—ಅಂಗಿರಸ ಇವ ಅಂಗಿರಸ್ವತ್ **ತೇನ ತುಲ್ಯಂ ಕ್ರಿಯಾ ಚೇದ್ವತಿಃ** (ಪಾ. ಸೂ ೫-೧-೧೧೫) ಎಂಬುದರಿಂದ ವತಿಪ್ರತ್ಯಯ ವತಿ ಸರವಾದಾಗ ಪದಸಂಜ್ಞೆ ಬರುವುದರಿಂದ ರುತ್ವವು ಪ್ರಾಪ್ತವಾದರೆ **ನಭೋಂಗಿರೋಮನುಷಾಂ ವತ್ಯುಪಸಂಖ್ಯಾನಮ್** (ಪಾ ಸೂ. ೮-೪-೮೪-೩) ಎಂಬ ವಚನದಿಂದ ಭ ಸಂಜ್ಞೆಯು ಬರುವುದರಿಂದ ಪದಸಂಜ್ಞೆ ಇಲ್ಲದಿರುವುದರಿಂದ ರುತ್ವಾದಿಗಳು ಒರುವುದಿಲ್ಲ.

ಹವಾಮಹೇ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. ಲಟ್ ಉತ್ತಮಪುರುಷ ಬಹುವಚನದಲ್ಲಿ ಮಹಿಙ್ ಪ್ರತ್ಯಯ. **ಟಿತ ಆತ್ಮನೇ**—ಎಂಬುದರಿಂದ ವಿಕ್ಕ. ಶಪ್ ವಿಕರಣ. **ಬಹುಲಂ ಛಂದಸಿ** (ಪಾ. ಸೂ ೭-೧-೭೪) ಎಂಬುದರಿಂದ ನಿಮಿತ್ತವಿಲ್ಲದಿದ್ದರೂ ಧಾತುವಿಗೆ ಸಂಪ್ರಸಾರಣ ಬರುತ್ತದೆ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. ಹು ಎಂದಾದಾಗ ಶಪ್ ನಿಮಿತ್ತವಾಗಿ ಗುಣ ಅವಾದೇಶ **ಅತೋದೀರ್ಘೋಯಞಿ** (ಪಾ ಸೂ. ೭-೩-೧೦೧) ಎಂಬುದರಿಂದ ಮಹಿಙ್ ನಿಮಿತ್ತವಾಗಿ ಹನ ಎಂಬ ಅಂಗಕ್ಕೆ ದೀರ್ಘ ಅತಿಙಂತದ ಪರದಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ ॥ ೩ ॥

॥ ಸಂಹಿತಾಪಾಠಃ ॥

ತಮು ತ್ವಾ ವೃತ್ರಹಂತಮಂ ಯೋ ದಸ್ಯೋರವಧೂನುಷೇ ।
ದ್ಯುಮ್ನೈರಭಿ ಪ್ರ ಣೋನುಮಃ ॥ ೪ ॥

॥ ಪದಪಾಠಃ ॥

ತಂ । ಊಂ ಇತಿ । ತ್ವಾ । ವೃತ್ರಹನ್ತಮಂ । ಯಃ । ದಸ್ಯೋನ್ । ಅವ ಽ-
ಧೂನುಷೇ ।
ದ್ಯುಮ್ನೈಃ । ಅಭಿ । ಪ್ರ । ಣೋನುಮಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದಸ್ಯೂನ್ ಉಪಕ್ಷಪಯಿತ್ನೂನ್ ರಾಕ್ಷಸಾದೀನ್ಯಸ್ತ್ವಮವಧೂನುಷೇ ಅವಜಾಲಯಸಿ ಸ್ಥಾನಾತ್ಪ್ರಚ್ಯಾವಯಸಿ ವೃತ್ರಹಂತಮಂ ವೃತ್ರಾಣಾಂ ಪಾಪ್ಮನಾಮತಿಶಯೇನ ಹಂತಾರಂ ತಮು ತ್ವಾ ತಮೇವ ತ್ವಾಂ ದ್ಯುಮ್ನೈರಿತ್ಯಾದಿ ಪೂರ್ವವತ್ ॥ ವೃತ್ರಹಂತಮಂ । ಅತಿಶಯೇನ ವೃತ್ರಹಾ ವೃತ್ರಹಂತಮಃ । ಪದಸಂಜ್ಞಾಯಾಂ ನಲೋಪೇ ನಾದ್ಯಸ್ಯ । ಪಾ. ೮-೨-೧೬ । ಇತಿ ತಮಪೋ ನುಟ್ । ದಸ್ಯೂನ್ । ದೀರ್ಘಾದಟಿ ಸಮಾನಪಾದ ಇತಿ ನಕಾರಸ್ಯ ರುತ್ವಂ । ಅತ್ರಾನುನಾಸಿಕಃ ಪೂರ್ವಸ್ಯ ತು ವೇತ್ಯೊಕಾರಃ ಸಾನುನಾಸಿಕಃ ॥

॥ ಪ್ರತಿಪದಾರ್ಥ ॥

(ಅಗ್ನೇ—ಎಲೈ ಅಗ್ನಿಯೇ)। ದಸ್ಯೂ—ರಾಕ್ಷಸರನ್ನು । ಯಃ—ಯಾವ (ಯಾವ ನೀನು)। ಅವಧೂನುಷೇ—ಓಡಿಸುತ್ತೀಯೋ । ವೃತ್ರಹಂತಮಂ—ಪಾಪನಾಶಕನಾದ । ತಮು ತ್ವಾ—ಅಂತಹ ನಿನ್ನನ್ನು । ದ್ಯುಮ್ನೈಃ—ಗುಣದ್ಯೋತಕವಾದ ಸ್ತುತಿಗಳಿಂದ । ಅಭಿ ಪ್ರ ಣೋನುಮಃ—ಪುನಃ ಪುನಃ ಸ್ತುತಿಸುತ್ತೇವೆ

॥ ಭಾವಾರ್ಥ ॥

ಎಲೈ ಅಗ್ನಿಯೇ, (ಯಜ್ಞಹಿಂಸಕರಾದ) ರಾಕ್ಷಸರನ್ನು ನಾಶಮಾಡುವ ಮತ್ತು ಪಾಪನಾಶಕನಾದ ನಿನ್ನನ್ನೇ ಸ್ತುತಿರೂಪವಾದ ಮಂತ್ರಗಳಿಂದ ಪುನಃ ಪುನಃ ಸ್ತುತಿಸುತ್ತೇವೆ

English Translation.

We praise you, repeatedly with commendatory (hymns), you are the destroyer of Vritra, and you put the Dasyus to flight

॥ ವಿಶೇಷನಿಷಯಗಳು ॥

ದಸ್ಯೂನ್—ಈ ಶಬ್ದಕ್ಕೆ ರಾಕ್ಷಸರೆಂದು ಸಾಮಾನ್ಯಾರ್ಥವನ್ನು ಹೇಳಬಹುದಾದರೂ ಯಾಸ್ಕರ ವಿವರಣೆಯನ್ನು ಕೊಡುವುದು ಉಚಿತವಾಗಿರುವುದು—

ದಸ್ಯುರ್ದಸ್ಯತೇ ಕ್ಷಯೋರ್ಥಾದುಪದಸ್ಯಂತ್ಯಸ್ಮಿನ್ರಸಾ ಉಪದಾಸಯತಿ ಕರ್ಮಾಣಿ ।

(ನಿ. ೭–೨೩)

ರಸಾದಿದ್ರವ್ಯಗಳನ್ನು, ಉದಕವನ್ನು ಒಣಗಿಸಿ ನಾಶಮಾಡುವವನು, ಅನಾವೃಷ್ಟಿಯನ್ನುಂಟುಮಾಡುವವನು ಈ ಕಾರಣದಿಂದಲೇ ಯಜ್ಞಾದಿಕರ್ಮಗಳಿಗೆ ವಿಘ್ನವನ್ನುಂಟುಮಾಡುವನು ಎಂದು ದಸ್ಯ ಶಬ್ದದ ಅರ್ಥವು. ಪಾಶ್ಚಾತ್ಯರು ದಸ್ಯುವೆಂದರೆ ಈ ದೇಶದಲ್ಲಿ ಆಗ ನೆಲಸಿದ್ದ ಪೂರ್ವನಿವಾಸಿಗಳಾದ ಕಪ್ಪುಜನರೆಂದೂ ಇವರು ಕಳ್ಳತನವನ್ನು ಮಾಡುತ್ತಾ ಆರ್ಯರ ಯಜ್ಞಾದಿಗಳಿಗೆ ತೊಂದರೆಯನ್ನುಂಟುಮಾಡುತ್ತಿದ್ದುದರಿಂದ ಇವರನ್ನು ರಾಕ್ಷಸರೆಂದು ಕರೆಯುತ್ತಿದ್ದರೆಂದೂ ಅಭಿಪ್ರಾಯಪಡುವರು ಇಂತಹ ದಸ್ಯು ಜನರನ್ನು ಸಂಹಾರಮಾಡಿ ತಮ್ಮನ್ನು ಕಾಪಾಡಬೇಕೆಂದು ಋಷಿಗಳು ಅಗ್ನಿಯನ್ನೂ, ಇಂದ್ರನನ್ನೂ ಅನೇಕ ಋಕ್ಕುಗಳಲ್ಲಿ ಸ್ತುತಿಸಿರುವರು—

ಮಹಾಂತಂ ಚಿದರ್ಬುದಂ ನಿ ಕ್ರಮಿಃ ಸದಾ ಸನಾದೇವ ದಸ್ಯುಹತ್ಯಾಯ ಜಜ್ಞಿಷೇ ।

(ಋ. ಸಂ ೧–೫೧–೬)

ಉಪಪ್ರಯನ್ದಸ್ಯುಹತ್ಯಾಯ ವಜ್ರೀ ಯದ್ಧ ಸೂನುಃ ಶ್ರವಸೇ ನಾಮ ದಧೇ ।

(ಋ ಸಂ ೧–೧೦೩–೪)

ಮಹೇ ಯತ್ತ್ವಾ ಪುರೂರವೋ ರಣಾಯಾವರ್ಧಯನ್ಸ್ವುಹತ್ಯಾಯ ದೇವಾಃ ।

(ಋ. ಸಂ ೧೦-೯೫-೭)

ತಮು ತ್ವಾ ಪಾಥ್ಯೋ ವೃಷಾ ಸಮಿದ್ಧೇ ದಸ್ಯುಹಂತಮಂ ।

(ಋ. ಸಂ ೬-೧೬-೧೫)

ತವಾಗನ್ನ ತ್ರಿಪಸ್ತ್ಯಂ ಮಂಧಾತುರ್ದಸ್ಯುಹಂತಮಮಗ್ನಿಂ ಯಜ್ಞೇಷು ಪೂರ್ವ್ಯಂ ನಭಂತಾಮನ್ಯಕೇ ಸನೇ ।

(ಋ. ಸಂ. ೮-೪೯-೮)

ಇತ್ಯಾದಿ ಅನೇಕ ಉದಾಹರಣೆಗಳನ್ನು ಕೊಡಬಹುದು

ವೃತ್ರಹಂತಮಂ— ದಸ್ಯುಹನನ ವಿಷಯದಲ್ಲಿ ಹೇಳಿರುವ ವಿಷಯವೇ ವೃತ್ರಹನನದಲ್ಲಿಯೂ ಅನ್ವಯಿಸುವುದು ಈ ಶಬ್ದವು ಇಂದ್ರನ ಪರವಾದ ಅರ್ಥಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದರೂ, ಕೆಲವು ಸಂದರ್ಭಗಳಲ್ಲಿ ಇಂದ್ರನ ಗುಣಗಳನ್ನು ಅಗ್ನಿಯಲ್ಲಿ ಆರೋಪಿಸಿ ಈ ಶಬ್ದವನ್ನು ಅಗ್ನಿಗೂ ವಿಶೇಷಣ ಪದವನ್ನಾಗಿ ಉಪಯೋಗಿಸಲಾಗಿರುವುದು. ಉದಾಹರಣೆಗಾಗಿ—

ಅಗ್ನಿಂ ದೇವಾಸೋ ಅಗ್ರಿಯಮಿಂಧತೇ ವೃತ್ರಹಂತಮಂ ।

(ಋ. ಸಂ ೬-೧೬-೪೮)

ಅಗನ್ನ ವೃತ್ರಹಂತಮಂ ಜ್ಯೇಷ್ಠಮಗ್ನಿಮಾನವಂ ।

(ಋ. ಸಂ. ೮-೭೪-೪)

ಈ ಉದಾಹರಣೆಗಳಲ್ಲಿ ವೃತ್ರಹಂತಮಂ ಎಂಬ ಶಬ್ದವು ಅಗ್ನಿಪರವಾಗಿರುವುದು ಇಂದ್ರನ ಪರವಾಗಿ ಉಪಯೋಗಿಸಿದಾಗ ಈ ಶಬ್ದಕ್ಕೆ ವೃತ್ರಾಸುರನನ್ನ ಸಂಹಾರಮಾಡಿದನೆಂದೂ ಅಗ್ನಿಯ ಪರವಾಗಿ ಉಪಯೋಗಿಸುವಾಗ ವೃತ್ರಶಬ್ದಕ್ಕೆ ಶತ್ರುವೆಂಬ ಸಾಧಾರಣಾರ್ಥವನ್ನು ಕಲ್ಪಿಸಿ ಶತ್ರುನಾಶಕನೆಂಬ ಅರ್ಥವನ್ನು ಹೇಳುವುದು ಸಮಂಜಸವಾಗಿರುವುದು ಪ್ರಸಕ್ತ ಋಕ್ಕಿನಲ್ಲಿ ಭಾಷ್ಯಕಾರರು ಪಾಪ್ಮಾನ ಎಂದರೆ ದುರಿತ ಪಾಪ ಎಂಬ ಅರ್ಥವನ್ನು ಹೇಳಿರುವರು

॥ ವ್ಯಾಕರಣಪ್ರಕ್ರಿಯಾ ॥

ವೃತ್ರಹಂತಮಮ್— ವೃತ್ರಂ ಹತವಾನ್ ವೃತ್ರಹಾ ತಂ ಹಿಂಸಾಗತ್ಯೋಃ ಧಾತು ಇವಕ್ಕೆ ವೃತ್ರ ಶಬ್ದ ಉಪಪದವಾಗಿರುವಾಗ **ಬ್ರಹ್ಮಭ್ರೂಣ ವೃತ್ರೇಷು ಕ್ವಿಪ್** (ಪಾ ಸೂ ೩-೨-೮೭) ಎಂಬುದರಿಂದ ಭೂತಾರ್ಥದಲ್ಲಿ ಕ್ವಿಪ್ ಪ್ರತ್ಯಯ ವೃತ್ರಹನ್ ಶಬ್ದವಾಗುತ್ತದೆ ಅತಿಶಯೇನ ವೃತ್ರಹಾ ವೃತ್ರಹಂತಮಃ **ಅತಿಶಾಯನೇ ತಮಬಿಷ್ಠನೌ** (ಪಾ ಸೂ ೫-೩-೫೫) ಎಂಬುದರಿಂದ ಅತಿಶಯಾರ್ಥದಲ್ಲಿ ತಮಪ್ ಪ್ರತ್ಯಯ. **ಸ್ವಾದಿಷ್ವಸರ್ವನಾಮಸ್ಥಾನೇ** ಸೂತ್ರದಿಂದ ಇಲ್ಲಿ ಪದಸಂಜ್ಞೆ ಬರುವುದರಿಂದ **ನಲೋಪಃ ಪ್ರಾತಿಪದಿಕಾಂತಸ್ಯ** ಸೂತ್ರದಿಂದ ಹಸಿನ ನಕಾರಕ್ಕೆ ಲೋಪ. **ನಾದ್ಧಸ್ಯ** (ಪಾ ಸೂ ೮-೭-೭೭) ತರಪ್ ತಮಪ್ ಪ್ರತ್ಯಯಗಳಿಗೆ ಥ ಎಂದು ಹೆಸರು.

ನಕಾರದ ಪರದಲ್ಲಿರುವ ಳಿಕ್ಕೆ ನುಡಾಗನು ಎಂಬುದರಿಂದ ಇಲ್ಲಿ ತನುಪಿಗೆ ನುಡಾಗನು. ವೃತ್ರಹಂತನು ಎಂದು ರೂಪ ವಾಗುತ್ತದೆ. ತಮುಸ್ ಪಿತ್ತಾದುದರಿಂದ ಅನುದಾತ್ತ. ಆಗ ಪೂರ್ವದಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ದಸ್ಯೂನ್—ಇದಕ್ಕೆ ಅವಧೂನುಷೇ ಎಂಬಲ್ಲಿರುವ ಆಕಾರ ರೂಪ ಅಟ್ ಪರವಾದುದರಿಂದ **ದೀರ್ಘಾದಟಿ ಸಮಾನಪಾದೇ** (ಪಾ. ಸೂ. ೮-೩-೯) ಎಂಬುದರಿಂದ ನಕಾರಕ್ಕೆ ರುತ್ವ. **ಅತ್ರಾನುನಾಸಿಕಃ ಪೂರ್ವಸ್ಯ ತು ವಾ** (ಪಾ. ಸೂ ೮-೩-೩) ಎಂಬುದರಿಂದ ಪೂರ್ವದ ಊಕಾರಕ್ಕೆ ಅನುನಾಸಿಕತ್ವ ಬರುತ್ತದೆ

ಅವಧೂನುಷೇ—ಅವ ಉಪಸರ್ಗ. ಧೂಞ್ ಕಂಪನೇ ಧಾತು. ಲಟ್ ಮಧ್ಯಮಪುರುಷ ಏಕವಚನದಲ್ಲಿ **ಥಾಸಃ ಸೇ** ಎಂಬುದರಿಂದ ಸೇ ಆದೇಶ **ಸ್ವಾದಿಭ್ಯಃ ಶ್ನುಃ** ಎಂಬುದರಿಂದ ಶ್ನು ವಿಕರಣ. ಅತಿಙಂತದ ಪರದಲ್ಲಿರು ವುದರಿಂದ ನಿಘಾತ ಸ್ವರ ಬರುತ್ತದೆ ॥ ೪ ॥

॥ ಸಂಹಿತಾಪಾಠಃ ॥

अवोचाम रहूगणा अग्नयेऽ मधुमद्वचः ।

द्युम्नैर्भि ष्णोनुमः ॥ ५ ॥

॥ ಪದಪಾಠಃ ॥

अवोचाम । रहूगणाः । अग्नयेऽ । मधुऽमत् । वचः ।

द्युम्नैः । अभि । स्प । नोनुमः ॥ ५ ॥

॥ ಸಾಯಣಭಾಷ್ಯಂ ॥

ಋಷಿಃ ಕೃತಂ ಸ್ತೋತ್ರಮನಯೋಪಸಂಹರತಿ । ರಹೂಗಣಾ ರಹೂಗಣಸ್ಯ ಪುತ್ರಾ ವಯಂ ಗೋತಮಾ ಅಗ್ನಯೇ ಅಂಗನಾದಿಗುಣಯುಕ್ತಾಯ ದೇವಾಯ ಮಧುಮದ್ವಚೋ ಮಾಧುರ್ಯೋಪೇತಂ ವಚನಮವೋಚಾಮ ಸ್ತಾವಾದಿಷ್ಮ । ತಥ್ಯವಚನರೂಪೈರ್ದ್ಯುಮ್ನೈರ್ದ್ಯೋತಮಾನೈಃ ಸ್ತೋತ್ರೈಃ ಪುನಃ-ಪುನರಗ್ನಿಂ ವಯಮಭಿ ಸ್ಪ ಣೋನುಮಃ । ಅಭಿನುಮಸ್ಯೇನ ಸ್ತ್ರಕರ್ಷೇಣ ಸ್ತುಮಃ ॥

॥ ಪ್ರತಿಪದಾರ್ಥ ॥

ರಹೂಗಣಾಃ—ರಹೂಗಣನಂಶದವರಾದ ಗೋತಮರೆಂಬ (ನಾವು) । **ಅಗ್ನಯೇ**—ಸುರೂಪಿಯಾದ ಅಗ್ನಿಗೆ । **ಮಧುಮಧ್ವಃಚಃ**—ಮಾಧುರ್ಯೋಪೇತವಾದ ಸ್ತೋತ್ರರೂಪವಾದ ಈ ವಾಕ್ಯಗಳನ್ನು । **ಅವೋಚಾಮ**—ಉಚ್ಚರಿಸಿದೆವು (ಮತ್ತು) । **ದ್ಯುಮ್ನೈಃ**—ಗುಣದ್ಯೋತಕವಾದ ವಾಕ್ಯಗಳಿಂದ । **ಅಭಿ ಪ್ರ ಣೋನುಮಃ**—ಪುನಃ ಪುನಃ ಸ್ತುತಿಸುತ್ತೇನೆ.

॥ ಭಾವಾರ್ಥ ॥

ರಹೂಗಣಪುತ್ರರಾದ ಗೋತಮರೆಂಬ ನಾವು ಸ್ವರೂಪ್ಯುಪಿಯಾದ ಅಗ್ನಿಯನ್ನು ಮಧುರವಾದ ಮತ್ತು ಗುಣದ್ಯೋತಕವಾದ (ಸ್ತುತಿರೂಪ) ವಾಕ್ಯಗಳಿಂದ ಪುನಃ ಪುನಃ ಸ್ತುತಿಸಿದೆವು

English Translation

The descendants of Rahugana have recited sweet speeches to Agni, we praise him repeatedly with commendatory (hymns)

॥ ವಿಶೇಷವಿಷಯಗಳು ॥

ರಹೂಗಣಾಃ—ರಹೂಗಣನೆಂಬ ಋಷಿಯ ಪುತ್ರರಾದ ಗೋತಮಾದಿಗಳು ಅಥವಾ ರಹೂಗಣ ಋಷಿಯ ವಂಶಸ್ಥರು ಅಥವಾ ಆ ಋಷಿಯ ಸಂಬಂಧಿಗಳು. **ಈ ಸೂಕ್ತದ** ಋಷಿಯು ರಹೂಗಣಋಷಿಯ ಪುತ್ರನಾದ ಗೋತಮನು ನಾದುದರಿಂದ ಅವನೂ ಅವನ ಸಂಬಂಧಿಗಳಾದ ಇತರ ಜನರೂ ಸೇರಿ ಈ ಸ್ತೋತ್ರವನ್ನು ಮಾಡಿರುವೆವು ಎಂಬುದನ್ನು ಹೇಳಿ ಸೂಕ್ತವನ್ನು ಉಪಸಂಹಾರಮಾಡುವನು.

ಮಧುಮತ್ ವಚಃ—**ಮಾಧುರ್ಯೋಪೇತಂ ವಚನಂ** । ಕೇಳುವುದಕ್ಕೆ ಆಹ್ಲಾದಕರವಾಗಿರುವ, ಅಗ್ನಿಗೆ ಪ್ರೀತಿಕರವಾದ ಇತ್ಯಾದಿ

॥ ವ್ಯಾಕರಣಪ್ರಕ್ರಿಯಾ ॥

ಅವೋಚಾಮ—ವಚ ಪರಿಭಾಷಣೇ ಧಾತು ಲುಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ನಿತ್ಯಂ ಙಿತಃ** ಸೂತ್ರದಿಂದ ಸಕಾರಲೋಪ. **ಆಸ್ಯತಿವಕ್ತಿಖ್ಯಾತಿಭ್ಯೋಽಙ್** (ಪಾ ಸೂ ೩-೧-೫) ಎಂಬುದರಿಂದ ಚ್ಲಿಗೆ ಅಙ್ ಪ್ರತ್ಯಯ. **ವಚಿಉಮ್** (ಪಾ ಸೂ ೭-೪-೨೦) ಸೂತ್ರದಿಂದ ಧಾತುವಿಗೆ ಉಮಾಗಮ **ಮಿದೇ-ಚೋಽಂತ್ಯಾತ್ಪರಃ** ಪರಿಭಾಷೆಯಿಂದ ಅಂತ್ಯಾಚಿನ ಪರವಾಗಿ ಬರುತ್ತದೆ ಗುಣ **ಆತೋಽಟಿನಿತ್** ಸೂತ್ರದಿಂದ ಮಸ್ ನಿಮಿತ್ತವಾಗಿ ಅದಂತಾಂಗಕ್ಕೆ ದೀರ್ಘ. ಅಂಗಕ್ಕೆ ಆಡಾಗಮ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಉದಾತ್ತವಾದುದರಿಂದ ಅದ್ಯುದಾತ್ತವಾಗುತ್ತದೆ.

ಮಧುಮತ್—ಮಧು ಅಸ್ಯ ಅಸ್ತಿ ಇತಿ ಮಧುಮತ್ **ತದಸ್ಯಾಸ್ತಿ**—(ಪಾ ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ. ಇದು ಪಿತ್ತಾದುದರಿಂದ ಅನುದಾತ್ತನಾಗುತ್ತದೆ. ಇದಕ್ಕೆ ದ್ವಿತೀಯಾ ಅಮ್ ಪರನಾದಾಗ **ಸ್ಯಮೋರ್ನಪುಂಸಕಾತ್** ಎಂಬುದರಿಂದ ಅಮಿಗೆ ಲುಕ್

ವಚಃ—ವಚ ಪರಿಭಾಷಣೇ ಧಾತು ಇದಕ್ಕೆ ಸರ್ವಧಾತು ನಿಬಂಧನವಾದ ಅಸುನ್ ಪ್ರತ್ಯಯ. ನಿತ್ತಾದುದರಿಂದ **ಘ್ನಿತ್ಯಾದಿರ್ನಿತ್ಯಮ್** (ಪಾ ಸೂ ೬-೧-೧೯೭) ಎಂಬುದರಿಂದ ಆದ್ಯುದಾತ್ತವಾಗುತ್ತದೆ ದ್ವಿತೀಯಾ ಏಕವಚನಾಂತರೂಪ ॥ ೫ ॥

ಎಪ್ಪತ್ತೈಂಟನೆಯ ಸೂಕ್ತವು ಸಮಾಪ್ತವು

ಎಪ್ಪತ್ತೊಂಭತ್ತನೆಯ ಸೂಕ್ತವು

ಹಿರಣ್ಯಕೇಶ ಇತಿ ದ್ವಾದಶರ್ಚಂ ಷಷ್ಠಂ ಸೂಕ್ತಂ । ರಹೂಗಣಪುತ್ರಸ್ಯ ಗೋತಮಸ್ಯಾರ್ಷಂ । ಅತ್ರಾನುಕ್ರಮ್ಯತೇ । ಹಿರಣ್ಯಕೇಶೋ ದ್ವಾದಶಾದ್ಯೌ ತೃಚೌ ತ್ರೈಷ್ಟುಭೌಷ್ಣಿಹೌ ಪೂರ್ವೋಽಗ್ನಯೇ ವಾ ಮಧ್ಯಮಾಯೇತಿ । ಪೂರ್ವತ್ರ ಗಾಯತ್ರಂ ತ್ವಿತ್ಯುಕ್ತದ್ವಾದಿದಮಪಿ ಗಾಯತ್ರಂ ಸೂಕ್ತಂ । ವಿತಾವಾಂಸ್ತು ವಿಶೇಷಃ । ಆದ್ಯಸ್ತೃಚಸ್ತ್ರೈಷ್ಟುಭಃ । ದ್ವಿತೀಯಸ್ತ್ವೌಷ್ಣಿಹಃ । ಪ್ರಥಮತೃಚಸ್ಯ ಮಧ್ಯಮಸ್ಥಾನೋ ವೈದ್ಯುತೋಽಗ್ನಿಃ ಶುದ್ಧಾಗ್ನಿರ್ವಾ ದೇವತಾ । ಶಿಷ್ಟಾ ನವರ್ಚಃ ಕೇವಲಾಗ್ನಿ ದೇವತಾಕಾಃ ॥ ಪ್ರಾತರನುವಾಕಸ್ಯಾಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚಾದ್ಯಸ್ತೃಚಃ । ಸೂತ್ರಿತಂ ಚ । ಹಿರಣ್ಯಕೇಶ ಇತಿ ತಿಸ್ರೋಽಪಶ್ಯಮಸ್ಯ ಮಹತ ಇತಿ ಸೂಕ್ತೇ । ಆ ೪-೧೩ । ಇತಿ ॥ ಕಾರೀರ್ಯಾಮಗ್ನೇರ್ಧಾಮಚ್ಛದೋ ಹಿರಣ್ಯಕೇಶ ಇತಿ ದ್ವೇ ಋಚೌ ಯಾಜ್ಯಾನುವಾಕ್ಯೇ । ಸೂತ್ರಿತಂ ಚ । ಹಿರಣ್ಯಕೇಶೋ ರಜಸೋ ವಿಸಾರ ಇತಿ ದ್ವೇ ತ್ವಂ ತ್ಯಾ ಚಿದಚ್ಯುತಾ ಧಾಮಂತೇ ವಿಶ್ವಂ ಭುವನಮಧಿ ಶ್ರಿತಮಿತಿ ವಾ । ಆ. ೨-೧೩ । ಇತಿ ॥

ಆನ ವಾದವು— **ಹಿರಣ್ಯಕೇಶಃ** ಎಂಬ ಈ ಸೂಕ್ತವು ಹದಿವ್ಮೂರನೆಯ ಅನುವಾಕದಲ್ಲಿ ಆರನೆಯ ಸೂಕ್ತವು ಇದರಲ್ಲಿ ಹನ್ನೆರಡು ಋಕ್ಕುಗಳಿರುವುವು ಈ ಸೂಕ್ತಕ್ಕೆ ರಹೂಗಣಪುತ್ರನಾದ ಗೋತಮನು ಋಷಿಯು. ಅನುಕ್ರಮಣಿಕೆಯಲ್ಲಿ—**ಹಿರಣ್ಯಕೇಶೋ ದ್ವಾದಶಾದ್ಯೌ ತೃಚೌ ತ್ರೈಷ್ಟುಭೌಷ್ಣಿಹೌ ಪೂರ್ವೋಽಗ್ನಯೇ ವಾ ಮಧ್ಯಮಾಯೇತಿ** ಎಂದು ಹೇಳಿರುವುದು ಹಿಂದೆ ಹೇಳಿರುವಂತೆ ಈ ಸೂಕ್ತವು ಗಾಯತ್ರೀ ಛಂದಸ್ಕವಾದರೂ

ಇದರಲ್ಲಿ ಕೆಲವು ವಿಶೇಷಗಳಿರುವುವು. ಮೊದಲಿನ ಮೂರು ಋಕ್ಕುಗಳು ತ್ರಿಷ್ಟುಪ್ ಛಂದಸ್ಸಿನವು ಮೂರರಿಂದ ಆರರ ವರೆಗಿನ ಋಕ್ಕುಗಳು ಉಷ್ಣಿಕ್ ಛಂದಸ್ಸಿನವು. ಉಳಿದ ಋಕ್ಕುಗಳು ಗಾಯತ್ರೀ ಛಂದಸ್ಸಿನವು. ಮೊದಲಿನ ಮೂರು ಋಕ್ಕುಗಳಿಗೆ ಮಧ್ಯಮಸ್ಥಾನ (ಅಂತರಿಕ್ಷ)ದಲ್ಲಿರುವ ವಿದ್ಯುದ್ರೂಪನಾದ ಅಗ್ನಿ ಅಥವಾ ಕೇವಲ ಅಗ್ನಿಯು ದೇವತೆಯು. ಉಳಿದ ಒಂಭತ್ತು ಋಕ್ಕುಗಳಿಗೂ ಕೇವಲ ಅಗ್ನಿಯೇ ದೇವತೆಯು. ಪ್ರಾತರನುವಾಕಮಂತ್ರಪಠನ ಕಾಲದಲ್ಲಿ ಆಗ್ನೇಯಶಸ್ತ್ರತುಸಂಬಂಧವಾದ ತ್ರಿಷ್ಟುಪ್ ಛಂದಸ್ಸಿನ ಋಕ್ಕುಗಳಿಗಾಗಿಯೂ **ಆಶ್ವಿನಶಸ್ತ್ರ**ಮಂತ್ರಗಳಿಗಾಗಿಯೂ ಈ ಸೂಕ್ತದ ಮೊದಲ ಮೂರು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಹಿರಣ್ಯಕೇಶ ಇತಿ ತಿಸ್ರೋಽಪಶ್ಯಮಸ್ಯ ಮಹತ ಇತಿ ಸೂಕ್ತೇ** ಎಂಬ ಸೂತ್ರದಿಂದ ವಿನ್ಯತವಾಗಿರುವುದು. (ಆ. ೪-೧೩) ಮತ್ತು ಕಾರೀರೇಷ್ಟಿಯಲ್ಲಿ **ಹಿರಣ್ಯಕೇಶ** ಎಂಬ ಮೊದಲ ಎರಡು ಋಕ್ಕುಗಳನ್ನು ಯಾಜ್ಯಾನುವಾಕ್ಯಾಋಕ್ಕುಗಳನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ **ಹಿರಣ್ಯಕೇಶೋ ರಜಸೋ ವಿಸಾರ ಇತಿ ದ್ವೇ ತ್ವಂ ತ್ಯಾ ಚಿದಚ್ಯುತಾ ಧಾಮಂತೇ ವಿಶ್ವಂ ಭುವನಮಧಿ ಶ್ರಿತಮಿತಿ ವಾ** ಎಂಬ ಸೂತ್ರದಿಂದ ನಿರ್ದಿಷ್ಟವಾಗಿರುವುದು (ಆ. ೨-೧೩)

ಸೂಕ್ತ---೭೯

॥ ಮಂಡಲ--೧ ॥ ಅನುವಾಕ—೧೩ ॥ ಸೂಕ್ತ—೭೯ ॥

॥ ಅಷ್ಟಕ—೧ । ಅಧ್ಯಾಯ. ೫ ॥ ವರ್ಗ—೨೭, ೨೮ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ—೧-೩ ಅಗ್ನಿರಗ್ನಿರ್ವಾಧ್ಯಮೋ ವಾ । ೪-೧೨ ಅಗ್ನಿಃ ॥

॥ ಛಂದಃ—೧-೩ ತ್ರಿಷ್ಟುಪ್ । ೪-೬ ಉಷ್ಣಿಕ್ । ೭-೧೨ ಗಾಯತ್ರೀ ।

॥ ಸಂಹಿತಾಸ್ವರಃ ॥

ಹಿರಣ್ಯಕೇಶೋ ರಜಸೋ ವಿಸಾರೇಽಹಿರ್ಧುನಿರ್ವಾತ ಇವ ಪ್ರಜೇಮಾನ್ ।

ಶುಚಿಭ್ರಾಜಾ ಉಷಸೋ ನವೇದಾ ಯಶಸ್ವತೀರಪಸ್ಯುವೋ ನ ಸತ್ಯಾಃ ॥ ೧ ॥

॥ पदपाठः ॥

हिरण्यऽकेशः । रजसः । निऽसारे । अहिः । धुनिः । वातःऽइव ।
ध्रजीमानन् ।
शुचिऽभ्राजाः । उषसः । नवेदाः । यशस्वतीः । अपस्युवः । न ।
सत्याः ॥ ८ ॥

॥ सायणभाष्यं ॥

हिरण्यकेशो हितरमणेयोः केशस्थानीयो ज्वाला यस्य स हकथोक्तः सुवर्णवर्णोरोचनोनज्वालो वा अहिरागत्य हंता मेघानां धुनिस्तेषां कंपयिता वातः इव वायुरिव ध्रजीमानन् शीघ्रगतियुक्तः एवंभूतोः वैद्युतोऽग्निः रजसः उदकस्य निसारे निसरणे मेघान्निर्गमने निमित्तभूते सति शुचिभ्राजाः शोभनदीप्तिः सन् मेघाज्जलानि निर्गमयितुं जानाति । उषसः उषोदेवता नवेदाः । न विदंति इति नवेदाः । मेघादुदकस्य निःसारणमग्निरेव जानाति उषसस्तु न जानंतीत्यर्थः । अज्ञानेन दृष्टांतः । यशस्वतीरन्नयुक्ता अन्नवत्योऽपस्युवोऽपः कर्मात्मन इच्छंत्यः सत्या अवितथारंभा न । एवंभूताः प्रजा इव । अतोरोषसामज्ञानेनाग्निः प्रशस्यते न तु ता निंद्यंते । न हि निंदा निंद्यं निंदितुं अपि तु स्तुत्यं स्तोतुमिति न्यायात् ॥ ध्रजीमान् । ध्रज गतौ । इन्सर्वधातुभ्य इति भाव इन्प्रत्ययः । ततोमतुप् । तस्य पित्त्वादनुदात्तत्वे इनोनित्त्वात्प्रकृतिसदिकस्याद्युदात्तत्वं । नवेदाः । नञ्पूर्वाद्वेत्तेः सुपांसुलुगित्याकारादेशः । नञ्छ्यान्नसादिभ्यादिना नञः प्रकृतिभावः । अपस्युवः । अपस्यशब्दात्सुप आत्मनः क्यच् । काम्यच्छंदसीत्युप्रत्ययः । तन्नादीनां छंदसि बहुलमुपसंख्यानं । पा. ६-४-७७ । इत्युवङ् ॥

॥ प्रतिपदार्थ ॥

हिरण्यकेशः—हितवाद मत्तु रमणीयवाद केशगळंतिरुव ज्वालेगळुळ्ळवनू (सुवर्ण कांतियुळ्ळ ज्वालेगळुळ्ळवनू) । अहिः—बंदु (मेघगळन्नु) नाशमाडुवनवनू । धुनिः—(मेघगळन्नु) कंपिसुवंते माडुवनवनू । वातःइव—वायुविनंते शीघ्रगतियुळ्ळवनू अव (विद्युदग्नियु) । रजसः निसारे—मेघगळिंद उदकवु हॊरदलु । शुचिभ्राजाः - शुभ्रनागि

ಕಾಂತಿಯುಳ್ಳವನಾಗಿ (ಮೇಘದಿಂದ ನೀರನ್ನು ಹೊರಡಿಸಲು ತಿಳಿದಿರುತ್ತಾನೆ)। (ಆದರೆ) **ಉಷಸಃ**—ಉಷೋದೇವತೆಗಳು। **ಯತಸ್ರುಚೀಃ**—ಅನ್ನಯುಕ್ತರಾದ। **ಅಪಸ್ಯುವಃ**—ತಮ್ಮ ತಮ್ಮ ಕರ್ಮಗಳಲ್ಲಿ ಅಸಕ್ತರಾದ। **ಸತ್ಯಾಃ ನೆ**—ಸತ್ಯವಂತರಾದ (ಪ್ರಜೆಗಳ) ಹಾಗೆ। **ನವೇದಾಃ**—(ಮೇಘದಿಂದ ಜಲನಿರ್ಗಮನವನ್ನು) ತಿಳಿದಿಲ್ಲ

॥ ಭಾವಾರ್ಥ ॥

ಸುವರ್ಣಕಾಂತಿಯಂತಿರುವ ಜ್ವಾಲಾಯುಕ್ತನೂ, ಮೇಘಗಳನ್ನು ಅಲ್ಲಾಡಿಸಿ, ಅವುಗಳನ್ನು ನಾಶಮಾಡುವವನೂ (ಉದಕರಹಿತವನ್ನಾಗಿ ಮಾಡುವವನೂ), ವಾಯುವಿನಂತೆ ಶೀಘ್ರಗಮನನೂ, ಆದ ಅಗ್ನಿಯು, ಶುಭ್ರವಾದ ಕಾಂತಿಯುಳ್ಳವನಾಗಿ, ಮೇಘಗಳಿಂದ ನೀರನ್ನು ಕೆಳಕ್ಕೆ ಬೀಳುವಂತೆ ಮಾಡುತ್ತಾನೆ. ಸತ್ಯವಂತರಾದ ಪ್ರಜೆಗಳು, ಅನ್ನಾದಿಗಳಿಂದ ಯುಕ್ತರಾಗಿ, ತಮ್ಮ ತಮ್ಮ ಕಾರ್ಯಗಳಲ್ಲಿ (ಮಾತ್ರ) ಅಸಕ್ತರಾಗಿ ಮತ್ತೇನನ್ನೂ ತಿಳಿಯದಿರುವಂತೆ ಅಗ್ನಿಯ ಈ ವಿಧವಾದ ಜಲವಿಮೋಚನೆಯನ್ನು ಉಷೋದೇವತೆಗಳೂ ಸಹ ತಿಳಿದಿರುವುದಿಲ್ಲ

English Translation.

The Golden haired Agni is the agitator of the clouds when the rain is poured forth, and moving with the swiftness of the wind, shines with a bright radiance. The mornings know not (of the showers), like honest (people) who, provided with food, are intent upon their own labours

॥ ವಿಶೇಷವಿಷಯಗಳು ॥

ಈ ಸೂಕ್ತಿನ ಅರ್ಥವು ಸ್ವಲ್ಪ ತೊಡಕಾಗಿರುವುದು- ವಿದ್ಯುದ್ರೂಪ (ಮಿಂಚಿನ ರೂಪ)ದಿಂದಿರುವ ಅಗ್ನಿಯು ಅಂತರಿಕ್ಷದಲ್ಲಿ ಪ್ರಕಾಶಮಾನನಾಗಿ ಬೆಳಗುತ್ತಾ ಮೇಘಗಳಲ್ಲಿರುವ ನೀರನ್ನು ವೃಷ್ಟಿರೂಪದಿಂದ ಭೂಮಿಯ ಮೇಲೆ ಬೀಳುವಂತೆ ಮಾಡುತ್ತಾನೆ ಈ ಅಗ್ನಿಯ ಜ್ವಾಲೆಗಳು ಅಗ್ನಿಗೆ ಸುವರ್ಣಮಯವಾದ ಕೂದಲುಗಳಂತೆ ಒಪ್ಪುತ್ತಿರುವವು ಮತ್ತು ಅಗ್ನಿಯು (ಮಿಂಚಿನರೂಪದಿಂದಿರುವ ಅಗ್ನಿಯು) ವಾಯುವಿನಂತೆ ಒಹಳ ಶೀಘ್ರವಾದ ಗಮನವುಳ್ಳವನು (ಎಂದರೆ ಮಿಂಚಿನ ಪ್ರಕಾಶವು ದೇದೀಪ್ಯಮಾನನಾಗಿ ಅಂತರಿಕ್ಷದಲ್ಲಲ್ಲಿ ಕ್ಷಣಾರ್ಧದಲ್ಲಿ ಕಾಣಿಸಿಕೊಂಡು ಕೂಡಲೇ ಅದೃಶ್ಯವಾಗುವುದು) ಮತ್ತು ಮೇಘಗಳಿಂದ ಮಳೆಯ ನೀರನ್ನು ಸುರಿಸುವಂತೆ ಮಾಡುವುದು ವಿದ್ಯುದ್ರೂಪದಿಂದ ಇರುವ ಅಗ್ನಿಗೆ ಮಾತ್ರ ತಿಳಿದಿರುವುದು ಉಷೋದೇವತೆಗಳಿಗೆ ಈ ವಿಧವಾದ ಸಾಮರ್ಥ್ಯವಿಲ್ಲ ಎಂದರೆ ಉಷೋದೇವತೆಗೂ ಮಳೆಗೂ ಏನೂ ಸಂಬಂಧವಿರುವುದಿಲ್ಲ ಲೋಕದಲ್ಲಿ ಆಹಾರಾದಿಸುಖಸಂಪತ್ತುಗಳಿಂದ ಯುಕ್ತರಾದ ಜನರು ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿಯೂ ಸುಖಲೋಲುಪತೆಯಲ್ಲಿಯೂ ಮಗ್ನರಾಗಿ ಗಹನವಾದ ಇತರ ವಿಷಯಗಳನ್ನು ಗಮನಿಸದಿರುವಂತೆ ಉಷೋದೇವತೆಗೂ ಮೇಘಗಳಿಂದ ವೃಷ್ಟ್ಯುದಕವನ್ನು ಸುರಿಸುವ ವಿಧಾನವು ತಿಳಿಯದು. ವಿದ್ಯುದ್ರೂಪನಾದ ಅಗ್ನಿಗೆ ಮಾತ್ರವೇ ತಿಳಿದಿರುವುದು ಎಂದು ಮುಖ್ಯಾಭಿಪ್ರಾಯವು.

ಹಿರಣ್ಯಕೇಶಃ—ಅಗ್ನಿಯು ಧಗಧಗನೆ ಉರಿಯುತ್ತಿರುವಾಗ ಅದರ ಜ್ವಾಲೆಗಳು ಸ್ವಲ್ಪ ಕೆಂಪುಛಾಯೆಯಿಂದ ಕೂಡಿ ಅತಿಪ್ರಕಾಶಮಾನವಾಗಿ ಬೆಳಗುತ್ತಿರುವುದರಿಂದ ಆ ಜ್ವಾಲೆಗಳನ್ನು ಅಗ್ನಿಯ ಸುವರ್ಣದೃಶವಾದ ಕೇಶಗಳಿಗೆ

ಹೋಲಿಸುವುದು ರೂಢಿಯಾಗಿರುವುದು ಸುವರ್ಣವು ಧಳಧಳನೆ ಹೊಳೆಯುತ್ತಿರುವಂತೆ ಅಗ್ನಿಯ ಜ್ವಾಲೆಗಳು ಪ್ರಕಾಶಿಸುವವು ಇವು ಅಗ್ನಿಯಿಂದ ಹೊರಹೊರಟು ಊರ್ಧ್ವಮುಖವಾಗಿ ಎದ್ದು ಏರಿಸಿನ ಮೇಲಿರುವ ಕೇಶಗಳಂತೆ ಕಾಣುತ್ತಿರುವುದರಿಂದ ಕೇಶಗಳ ಉಪಮಾನವು ಜ್ವಾಲೆಗಳಿಗೆ ಒಪ್ಪುವುದು ಈ ಶಬ್ದದ ಪ್ರಯೋಗವು ಋಗ್ವೇದದಲ್ಲಿ ಈ ಋಕ್ಕಿನಲ್ಲಿ ಮಾತ್ರ ವಿರುವುದು. ಬೇರೆಲ್ಲಿಯೂ ಇರುವುದಿಲ್ಲ. ಇಂದ್ರನ ಹರೀ ಎಂಬ ಕುದುರೆಗಳ ಸರವಾಗಿ

ಇಹ ತ್ಯಾ ಸಧಮಾದ್ಯಾ ಹರೀ ಹಿರಣ್ಯಕೇಶ್ಯಾ ।

(ಋ. ಸಂ. ೮-೩೮-೭)

ಎಂಬ ಋಕ್ಕಿನಲ್ಲಿ ಹಿರಣ್ಯಕೇಶ್ಯಾ ಎಂಬ ಶಬ್ದಪ್ರಯೋಗವಿರುವುದು ಅಗ್ನಿಯ ಜ್ವಾಲೆಗೆ ಹಿರಣ್ಯಕೇಶ್ಯಃ ಎಂಬ ಶಬ್ದದ ಉಪಮಾನವನ್ನೂ ಋ. ಸಂ ೬-೮೧-೩ ಎಂಬ ಋಕ್ಕಿನಲ್ಲಿ ಹೇಳಿರುವುದು

ರಜಸಃ—ಈ ಶಬ್ದಕ್ಕೆ ಯಾಸ್ಕರು- **ರಜಃ । ರಜೋ ರಜತೇರ್ಜ್ಯೋತೀ ರಜ ಉಚ್ಯತೇ । ಉದಕಂ ರಜ ಉಚ್ಯತೇ । ಲೋಕಾ ರಜಾಂಸ್ಯುಚ್ಯಂತೇ । ಅಸ್ಯಗಹನೀ ರಜಸೀ ಉಚ್ಯೇತೇ ।** (ನಿ ೪-೧೯) ಎಂದು ನಿರ್ವಚನವನ್ನು ಹೇಳಿರುವರು ಎಂದರೆ

(೧) **ರಜಃ** ಎಂಬ ಶಬ್ದವು ರಜತಿಧಾತುವಿನಿಂದ ನಿಷ್ಪನ್ನವಾಗಿ ಪ್ರಕಾಶಿಸುವುದು ಎಂದರ್ಥವಿರುವುದರಿಂದ **ರಜಃ** ಎಂದರೆ ಜ್ಯೋತಿ, ಬೆಳಕು ಎಂದರ್ಥವು ತನ್ನ ಬೆಳಕಿನಿಂದ ಇತರ ದ್ರವ್ಯಗಳನ್ನು ಕಾಣುವಂತೆ ಮಾಡುವುದು ಆದುದರಿಂದ ರಜಶ್ಶಬ್ದಕ್ಕೆ ಜ್ಯೋತಿಯೆಂದು ಹೆಸರು ಉದಾಹರಣೆಗಾಗಿ-

ಯಾ ತೇ ಅಗ್ನೇ ರಜಃಶಯಾ ತನೂ ಎಂಬ ಮಂತ್ರವನ್ನು ಕೊಟ್ಟಿರುವರು

(೨) **ಉದಕಂ ರಜ ಉಚ್ಯತೇ—ರಜಃ** ಎಂದರೆ ಉದಕವು ಈ ಅರ್ಥವಿರುವ ಉದಾಹರಣೆಗಾಗಿ —

ನವ ಚ ಯನ್ನವತಿಂ ಚ ಸ್ರವಂತೀಃ ಶ್ಯೇನೋ ನ ಭೀತೋ ಅತರೋ ರಜಾಂಸಿ ।

(ಋ ಸಂ ೧ ೩೨-೧೪).

ಭುವೋ ಯಜ್ಞಸ್ಯ ರಜಸಶ್ಚ ನೇತಾ ಯತ್ರಾ ನಿಯುದ್ಭಿಃ ಸಚಸೇ ಶಿವಾಭಿಃ ।

(ಋ. ಸಂ ೧೦-೮-೬)

ಈ ಋಕ್ಕುಗಳಲ್ಲಿರುವ ರಜಃಶಬ್ದವು ಉದಕವೆಂಬ ಅರ್ಥವನ್ನು ಹೇಳುವುದು

ಪೂರ್ವೇ ಅರ್ಧೇ ರಜಸೋ ಅಸ್ಯ್ಯಸ್ಯ ಗವಾಂ ಜನಿತ್ರ್ಯಕೃತ ಪ್ರ ಕೇತುಂ ।

(ಋ ಸಂ ೧-೧೩೪-೫).

ಇಂದ್ರಶ್ಚ ಯಾ ಚಕ್ರಥುಃ ಸೋಮ ತಾನಿ ಧುರಾ ನ ಯುಕ್ತಾ ರಜಸೋ ವಹಂತಿ ।

(ಋ. ಸಂ ೧-೧೩೪-೧೯)

(೩) ಈ ಋಕ್ಕುಗಳಲ್ಲಿರುವ ರಜಶ್ಶಬ್ದವು ಲೋಕವೆಂಬ ಅರ್ಥವನ್ನು ಸೂಚಿಸುವುದು

(೪) **ಅಸೃಗಹನೀ ರಜಸೀ ಉಚ್ಯೇತೇ । ಅಸೃಕ್ ರುಧಿರಂ, ಅಹಶ್ಚ ಅಸೃಗಹನೀ ತೇ ಅಪಿ ರಜಸೀ ಉಚ್ಯೇತೇ ।** ರಜಸೀ ಎಂಬ ಶಬ್ದವು ರಕ್ತ ಮತ್ತು ಹಗಲು ಎಂಬ ಅರ್ಥವನ್ನು ಹೇಳುವುದು.

ಅಹಶ್ಚ ಕೃಷ್ಣಮಹರರ್ಜುನಂ ಚ ವಿ ವರ್ತೇತೇ ರಜಸೀ ವೇದ್ಯಾಭಿಃ ।

(ಋ ಸಂ ೬-೯-೧)

ಈ ಋಕ್ಕಿನಲ್ಲಿರುವ ರಜಶಬ್ದವು ಅಹಸ್ಸೆಂಬ ಅರ್ಥವನ್ನು ಹೇಳುವುದು ಪ್ರಕೃತ ಸಂದರ್ಭದಲ್ಲಿ ರಜಶ್ಶಬ್ದಕ್ಕೆ ಪ್ರಕಾಶವು ಬೆಳಕು ಎಂದರ್ಥವು.

ಧ್ರಜೀಮಾನ್—ಧ್ರಜ ಗತೌ । ವೇಗವಾಗಿ ಗಮನವುಳ್ಳವನು. ವಾಯುವು ಯಾವರೀತಿ ವೇಗವಾಗಿ ಚಲಿಸುವುದೋ ಅದರಂತೆ ಅಗ್ನಿಯು ಶೀಘ್ರಗಮನವುಳ್ಳವನು

ಶುಚಿಧ್ರಾಜಃ—ಶೋಭನದೀಪ್ತಿಃ । ಅತ್ಯಂತಪ್ರಕಾಶಮಾನನಾದವನು. ವೈದ್ಯುತಾಗ್ನಿಯು (ಮಿಂಚು) ಅತಿಪ್ರಕಾಶಮಾನವಾಗಿರುವುದು ಲೋಕಪ್ರಸಿದ್ಧಿಯು.

ಉಷಸೋ ನವೇದಾಃ---ಮೇಘಗಳಿಂದ ಮಳೆಯನ್ನು ಸುರಿಯುವಂತೆ ಮಾಡುವ ಚಾತುರ್ಯವು ಉಷೋದೇವತೆಗೆ ತಿಳಿದಿಲ್ಲ ಎಂದು ಹೇಳಿರುವುದರಿಂದ ಉಷೋದೇವತೆಯನ್ನು ನಿಂದೆ ಮಾಡಿದಂತಾಗಲಿಲ್ಲ. ಅಗ್ನಿಯ ಪ್ರಶಂಸೆಯನ್ನು ಪುಷ್ಟೀಕರಿಸುವುದಕ್ಕಾಗಿ ಋಷಿಯು ಈರೀತಿ ವರ್ಣಿಸಿರುವನೆಂದು ಭಾಷ್ಯಕಾರರು ವಿವರಿಸಿರುವರು

ಯಶಸ್ವತೀಃ ಅಪಸ್ಯುವಃ—ಅಣಃ ಕ್ಲೋದಃ ಮೊದಲಾದ ನೂರೊಂದು ಉದಕನಾಮಗಳ ಮಧ್ಯದಲ್ಲಿ ಯಶಃಶಬ್ದವು ಪತಿತವಾಗಿರುವುದರಿಂದ (ನಿ ೨-೨೪) ಯಶಃ ಎಂದರೆ ಉದಕವೆಂದೂ, ಅಂಧಃ ವಾಜಃ ಮೊದಲಾದ ಇಪ್ಪತ್ತೆಂಟು ಅನ್ನನಾಮಗಳ ಮಧ್ಯದಲ್ಲಿ ಯಶಃಶಬ್ದವು ಪತಿತವಾಗಿರುವುದರಿಂದ ಯಶಃ ಎಂದರೆ ಅನ್ನವೆಂದೂ, (ನಿ. ೩-೯) ಮಘಂ ರೇಕ್ಣಃ ಮೊದಲಾದ ಇಪ್ಪತ್ತೆಂಟು ಧನನಾಮಗಳ ಮಧ್ಯದಲ್ಲಿ ಯಶಶ್ಶಬ್ದವು ಪತಿತವಾಗಿರುವುದರಿಂದ ಯಶಃ ಎಂದರೆ ಧನವೆಂದೂ (ನಿ. ೩-೯). ಮತ್ತು ಈ ಶಬ್ದಕ್ಕೆ ಸಾಮಾನ್ಯವಾಗಿ ರೂಢಿಯಲ್ಲಿರುವ ಕೀರ್ತಿ ಎಂದೂ ಅರ್ಥಗಳಿರುವುವು ಇವುಗಳಲ್ಲಿ ಅನ್ನವೆಂಬ ಅರ್ಥವನ್ನು ಭಾಷ್ಯಕಾರರು ಸ್ವೀಕರಿಸಿರುವರು. ಏತಕ್ಕೆಂದರೆ ಯಶಸ್ವತೀಃ ಎಂಬ ಶಬ್ದವು **ಅಪಸ್ಯುವಃ**—ಉದಕಗಳು ಅಥವಾ ನೈಷ್ಪ್ಯದಕಗಳು ಎಂಬ ಶಬ್ದಕ್ಕೆ ವಿಶೇಷಣವಾಗಿರುವುದರಿಂದಲೂ ವೃಷ್ಟಿಯಿಂದ ಸಸ್ಯಾದಿಗಳ ಉತ್ಪತ್ತಿಯಾಗಿ ಅನ್ನ ಅಥವಾ ಆಹಾರೋತ್ಪತ್ತಿಗೆ ಕಾರಣಭೂತವಾಗಿರುವುದರಿಂದಲೂ ಇಲ್ಲಿ ಯಶಃಶಬ್ದಕ್ಕೆ ಅನ್ನವೆಂಬ ಅರ್ಥವೇ ಸಮಂಜಸವಾಗಿರುವುದು. ಯಶಸ್ವತೀಃ—ಎಂದರೆ ಅನ್ನ ಅಥವಾ ಆಹಾರೋತ್ಪತ್ತಿಗೆ ಸಾಧನಭೂತವಾದ ಎಂದರ್ಥವು

ಸತ್ಯಾಃ—ಅವಿತಥಾರಂಭಾಃ । ಈ ಶಬ್ದಕ್ಕೆ ಭಾಷ್ಯಕಾರರು ಸತ್ಯವಂತರಾದ ಪ್ರಜೆಗಳು ಎಂದರ್ಥ ಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ವಿಸಾರೀ—ಸೃ ಗತೌ ಧಾತು ಇದಕ್ಕೆ ಘಞ್ ಪ್ರತ್ಯಯ. ನಿತ್ವಾದುದರಿಂದ **ಆಚೋಽಞ್ಣಿತಿ** ಸೂತ್ರದಿಂದ ಅಜಂತಾಂಗಕ್ಕೆ ವೃದ್ಧಿ. **ಕರ್ಮಾತ್ಮತಃ**-(ಪಾ ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತವಾಗುತ್ತದೆ. ವಿಯೊಡನೆ (ಗತಿ) ಸಮಾಸನಾದಾಗ **ಗತಿಕಾರಕೋಪಪದಾತ್ ಕೃತ್**—ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

ಧ್ರುಜೀಮಾನ್—ಧ್ರುಜ ಗತೌ ಧಾತು **ಇನ್‌ಸರ್ವಧಾತುಭ್ಯಃ** (ಉ ಸೂ ೪-೧೧೫) ಎಂಬುದರಿಂದ ಇದಕ್ಕೆ ಭಾವಾರ್ಥದಲ್ಲಿ ಇನ್ ಪ್ರತ್ಯಯ ಧ್ರುಜಿ ಎಂದು ರೂಪವಾಗುತ್ತದೆ ಇದು ಉಳ್ಳದ್ದು ಎಂಬರ್ಥವಿವಕ್ಷಾಮಾಡಿದಾಗ **ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್** ಸೂತ್ರದಿಂದ ಮತುಪ್ ಪ್ರತ್ಯಯ **ಅಸ್ಯೇಷಾಮಪಿದೃಶ್ಯತೇ** (ಪಾ ಸೂ. ೬-೩-೧೩೭) ಎಂಬುದರಿಂದ ಪೂರ್ವಪದಕ್ಕೆ ದೀರ್ಘ ಪ್ರಥಮಾ ಸುಪರವಾದಾದಾಗ ಉಗಿತ್ತಾದುದರಿಂದ **ಉಗಿದಚಾಂಸ**—ಸೂತ್ರದಿಂದ ನುಮಾಗಮ **ಅತ್ವಸಂತಸ್ಯಚಾ**—ಸೂತ್ರದಿಂದ ಉಸಧಾದೀರ್ಘ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ಸುಲೋಪ ಸಂಯೋಗಾಂತಲೋಪದಿಂದ ತಕಾರಲೋಪ ಇದು ಅಸಿದ್ಧವಾದುದರಿಂದ ನಲೋಪ ಬರುವುದಿಲ್ಲ. ಮತುಪ್ ನಿತ್ವಾದುದರಿಂದ ಅನುದಾತ್ತವಾಗುತ್ತದೆ ಇನ್ ನಿತ್ವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಸೂತ್ರದಿಂದ ಪ್ರಾತಿಪದಿಕಕ್ಕೆ ಆದ್ಯುದಾತ್ತಸ್ವರ ಬರುತ್ತದೆ

ನವೇದಾಃ ಏವ ಜ್ಞಾನೇ ಧಾತು ಇದಕ್ಕೆ ನಞ್‌ಸ್ವರವಾದಾಗ **ನಂದಿಗ್ರಹಪಚಾದಿಭ್ಯಃ**—(ಪಾ ಸೂ ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ ಇದು ಗಚಾದಿಯಲ್ಲಿ ಸೇರಿದೆ ಪ್ರತ್ಯಯಸಹಿತ್ತವಾಗಿ **ಪುಗಂತಲಘೂಪಧಸ್ಯಚ** ಸೂತ್ರದಿಂದ ಧಾತುವಿನ ಉಪಧೆಗೆ ಗುಣ **ನಲೋಪೋ ನಞಃ** (ಪಾ. ಸೂ ೬-೩-೭೩) ಸೂತ್ರದಿಂದ ನ ಇನ ನಕಾರಕ್ಕೆ ಲೋಪಪ್ರಾಪ್ತವಾದರೆ **ನಭ್ರಾಣ್ ನಸಾತ್**—(ಪಾ ಸೂ. ೬-೩-೭೩) ಎಂಬುದರಿಂದ ಅದಕ್ಕೆ ಪ್ರಕೃತಿಭಾವ ಬರುತ್ತದೆ **ತತ್ಪುರುಷೇ ತುಲ್ಯಾರ್ಥ**—(ಪಾ ಸೂ. ೬-೩-೨) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಅಪಸ್ಯುವಃ—ಅಪಸ್ ಶಬ್ದದ ಮೇಲೆ ಇಚ್ಛಾರ್ಥದಲ್ಲಿ **ಸುಪ ಆತ್ಮನಃ ಕ್ಯಚ್** (ಪಾ ಸೂ ೩-೧-೮) ಎಂಬುದರಿಂದ ಕ್ಯಚ್ ಪ್ರತ್ಯಯ **ಸನಾದ್ಯಂತಾಧಾತವಃ** ಸೂತ್ರದಿಂದ ಅಪಸ್ಯ ಎಂಬ ಕೃಜಂತಕ್ಕೆ ಧಾತುಸಂಜ್ಞಾ ಇದರ ಮೇಲೆ **ಕ್ಯಾಶ್ಛಂದಸಿ** (ಪಾ ಸೂ ೩-೧-೧೭೦) ಎಂಬುದರಿಂದ ಉ ಪ್ರತ್ಯಯ ಉ ಪರವಾಗಿ **ಅತೋ ಲೋಪಃ** ಸೂತ್ರದಿಂದ ಕ್ಯಚ್ಚಿನ ಅಕಾರಕ್ಕೆ ಲೋಪ. ಅಪಸ್ಯು ಶಬ್ದವಾಗುತ್ತದೆ. ಇದಕ್ಕೆ ಜಸ್ ಪರವಾದಾಗ **ಜಸಿಚ** ಸೂತ್ರದಿಂದ ಗುಣವು ಪ್ರಾಪ್ತವಾದರೆ **ತನ್ವಾದೀನಾಂ ಛಂದಸಿ ಬಹುಲಮುಪಸಂಖ್ಯಾನಂ** (ಪಾ ಸೂ. ೬-೪-೭೭-೧) ಎಂಬುದರಿಂದ ಉವಙ್ ಸಕಾರಕ್ಕೆ ರುತ್ವವಿಸರ್ಗ. ಅಪಸ್ಯುವಃ ಎಂದು ರೂಪವಾಗುತ್ತದೆ ಉಪ್ರತ್ಯಯ ಸ್ವರ ಬರುತ್ತದೆ. ॥೧॥

॥ संहितापाठः ॥

आ तेऽ सुपर्णा अमिनन्तऽ एव्यैः कृष्णोऽ नोनाव वृषभोऽ यदीदं ।
शिवाभिर्न स्मयमानाभिरागात्पतन्ति मिहः स्तनयन्त्यभ्रा ॥ ७ ॥

॥ पदपाठः ॥

आ । तेऽ । सुऽपर्णाः । अमिनन्त । एव्यैः । कृष्णः । नोनाव । वृषभः ।
यदि । इदं ।
शिवाभिः । न । स्मयमानाभिः । आ । अगात् । पतन्ति । मिहः । स्तन-
यन्ति । अभ्रा ॥ ७ ॥

॥ सायणभाष्यम् ॥

हे अग्ने तेऽ तव सुपर्णाः शोभनपतनाः रश्मयः एव्यैर्गन्तृभिर्मरुद्भिः सहा-
मिनन्त । आ समन्तान्मेघं हिंसन्ति । वर्षणार्थं ताडयन्ति । प्रहृतश्च कृष्णः कृष्ण-
वर्णोऽग्निः वृषभोऽवर्षिता मेघोऽ नोनाव । भृशं शब्दमकरोत् । यदि यदेदं-
मिदृशं कर्म तदानीं शिवाभिर्न सुखकारिणीभिः स्मयमानाभिर्हर्षसमवतीभिः कान्ता-
भिरिव [शुभ्रवर्णाभिः फेनयुक्ताभिरद्भिर्मिद्युद्भिर्वा सहागात् । वैद्युताग्निप्रेरितः
पर्जन्य आगच्छति । तदनन्तरं मिहऽ आपः पतन्ति । दिवः सकाशात्प्रवृष्टा भवन्ति । अभ्रा-
भ्राण्यद्भिः पूर्णा मेघाः स्तनयन्ति । इतस्ततः शब्दं कुर्वन्ति ॥ अमिनन्तऽ मिञ्
हिंसायाम् । क्र्यादिकः । व्यत्ययेनात्मनेपदेशः । ईषाअक्षादित्वात्पूर्वकृतिभावः । अनोऽ-
स्यगृहस्य । पा ७-४-३९ । इति वैकल्पिकमवसानेऽ विधीयमानमनुनासिकत्वं व्यत्ययेऽ-

ನಾತ್ರ ಸಂಹಿತಾಯಾಮಪಿ ದ್ರಷ್ಟವ್ಯಂ । ನೋನಾವ । ನೌತೇರ್ಯಙ್ಲುಗಂತಾಲ್ಲಿಟ್ಯಮಂತ್ರೇ । ಪಾ. ೩-೧-೩೫ । ಇತಿ ನಿಷೇಧಾದಾಮ್ಪ್ರತ್ಯಯಾಭಾವಃ । ಸ್ಮಯಮಾನಾಭಿಃ । ಸ್ಮಿಙ್ ಈಷದ್ಧಸನೇ । ಶಪಃ ಪಿತ್ತ್ವಾದನುದಾತ್ತತ್ವಂ । ಶಾನಚೋ ಲಸಾರ್ವಧಾತುಕಸ್ವರೇಣ ಧಾತುಸ್ವರಃ ಶಿಷ್ಯತೇ । ಸ್ತನಯಂತಿ । ಸ್ತನ ಶಬ್ದೇ । ಚುರಾದಿರದಂತಃ । ಪತಂತಿ ಸ್ತನಯಂತೀತ್ಯನಯೋಃ ಪಾದಾದಿತ್ವಾದ್ಯಾಕ್ಯಾದಿತ್ವಾಚ್ಚ ನಿಘಾತಾಭಾವಃ ॥

॥ ಪ್ರತಿಪದಾರ್ಥ

(ಆಗ್ನೇ- ಎಲೈ ಅಗ್ನಿಯೇ) । **ತೇ**- ನಿನ್ನ । **ಸುಪರ್ಣಾಃ** - ಲಕ್ಷಣವಾಗಿ ಬೀಳುವ ಜಳವನ್ನು ಪ್ರಸರಿಸುವ (ಕಿರಣಗಳು) । **ವಿಮೈಃ**--ಗಮನಶೀಲವಾದ ಮರುತ್ತುಗಳೊಡನೆ । **ಆ ಅಮಿನಂತ**—ಸುತ್ತಲೂ (ಮೇಘಗಳನ್ನು) ಹಿಂಸೆಮಾಡುತ್ತವೆ. । **ಕೃಷ್ಣಃ**—ಕಪ್ಪಾದ । **ವೃಷಭಃ**—ವೃಷ್ಟಿಯನ್ನುಂಟುಮಾಡುವ ಮೇಘವು । **ನೋನಾವ**—ಹೆಚ್ಚಾಗಿ ಶಬ್ದವನ್ನುಂಟುಮಾಡಿತು । **ಯದಿ ಇದಂ**—ಯಾವಾಗ ಈ ಕೆಲಸವು (ನಡೆಯಿತೋ) (ಆಗ) । **ಶಿವಾಭಿಃ**---ಸುಖಕರವಾದ । **ಸ್ಮಯಮಾನಾಭಿಃ** ನ—ನಗುತ್ತಿರುವ ಸ್ತ್ರೀಯರ ದಂತಸಂಕ್ತಿಗಳಂತೆ (ಪ್ರಕಾಶಮಾನವಾದ ವೃಷ್ಟ್ಯುದಕವು) । **ಆ ಅಗಾತ್**—ಬರುತ್ತದೆ (ಬೀಳುತ್ತದೆ) । (**ಅನಂತರ**) **ಮಿಹಃ**—ನೀರು । **ಪತಂತಿ**—(ಆಕಾಶದಿಂದ) ಬೀಳುತ್ತದೆ । **ಅಭ್ರಾಃ**—(ನೀರಿನಿಂದ ತುಂಬಿದ) ಮೇಘಗಳು । **ಸ್ತನಯಂತಿ**—ಗುಡುಗುತ್ತವೆ (ಶಬ್ದಮಾಡುತ್ತವೆ)

॥ ಭಾವಾರ್ಥ ॥

ಚಲಿಸುತ್ತಿರುವ ವಾಯುವಿನಿಂದ ಯುಕ್ತವಾದ ಮತ್ತು ಅತಿ ಪ್ರಕಾಶಮಾನವಾದ ನಿನ್ನ ಕಿರಣಗಳು ಮೇಘಗಳನ್ನು ಹಿಂಸಿಸುತ್ತವೆ. ಆದರಿಂದ ಕಪ್ಪಾದ ಮೇಘಗಳು ಗರ್ಜಿಸುತ್ತವೆ, ಆನಂತರ ನಗುತ್ತಿರುವ ಸ್ತ್ರೀಯರ ದಂತ ಕಾಂತಿಯಂತೆ ಬೆಳ್ಳಗಿರುವ ಹನಿಗಳು ಬೀಳುತ್ತದೆ, ಆಕಾಶದಿಂದ ಮಳೆಯು ಬೀಳುತ್ತದೆ, ಮೋಡಗಳು ಗುಡುಗುತ್ತವೆ

English Translation

Your falling (rays), accompanied by the moving (Maruts), strike against (the cloud), the black shedder of rain has roared, when this is done (the shower) comes hith delightful and smiling (drops), the rain descends, the clouds thunder.

॥ ವಿಶೇಷವಿಷಯಗಳು ॥

ಮುಖ್ಯಾಭಿಪ್ರಾಯವು- ಋಷಿಯು ಈ ಋಕ್ಕಿನಲ್ಲಿ ಮಿಂಚು, ಸಿಡಿಲು ಗುಡುಗು ಇವುಗಳೊಡನೆ ಮತ್ತು ಆರ್ಭಟದಿಂದ ಬೀಳುವ ಮಳೆಯನ್ನು ವರ್ಣಿಸಿರುವನು ಮಿಂಚು ಅಂತರಿಕ್ಷದಲ್ಲಿ ಧಳಧಳನೆ ಹೊಳೆಯುತ್ತಾ ಬಹು ಪ್ರಕಾಶಮಾನವಾಗಿ ಅಂತರಿಕ್ಷವನ್ನೆಲ್ಲಾ ಸ್ವಪ್ರಕಾಶದಿಂದ ಬೆಳಗುತ್ತಾ ಜಲಪೂರ್ಣವಾದ ಕಪ್ಪಾದ ಮೇಘಗಳ ಮಧ್ಯದಲ್ಲಿ ಮಹಾಶಬ್ದದೊಡನೆ (ಸಿಡಿಲು) ವ್ಯಕ್ತವಾಗುವುದು. ಆ ಕ್ಷಣದಲ್ಲಿಯೇ ಮಹಾಧ್ವನಿಯುಕ್ತವಾದ ಮತ್ತು ಕರ್ಣಕಠೋರ

ವಾದ ಶಿಡಿಲಿನ ಶಬ್ದವು ಕೇಳಬರುವುದು. ಇದನ್ನೇ ಋಷಿಯು--ವಿದ್ಯುದ್ಭೂಸದಿಂದಿರುವ ಅಗ್ನಿಯು ಜಲಪೂರ್ಣವಾದ ಕಪ್ಪಾದ ಮೇಘಗಳನ್ನು ಮರುತ್ತುಗಳ (ಗಾಳಿಯ) ಸಹಾಯದಿಂದ ಚದುರಿಸುತ್ತಾ ಅವುಗಳನ್ನು ಪ್ರಹರಿಸುವನೆಂದೂ ಆ ಏಟುಗಳಿಂದ ನೊಂದ ಮೇಘಗಳು ಆರ್ಭಟದಿಂದ (ಶಿಡಿಲು, ಗುಡುಗು) ಆರ್ತನಾದ ಮಾಡುತ್ತಾ ಎಂದರೆ ರೋದನ ಮಾಡುತ್ತಾ ಅನ್ನಾದ್ಯಾಹಾರಗಳಿಗೆ ಕಾರಣಭೂತವಾದ ವೃಷ್ಟ್ಯುದಕವನ್ನು ಭೂಮಿಯ ಮೇಲೆ ಸುರಿಸುವವು ಎಂದೂ ಅಂತರಿಕ್ಷದಲ್ಲಿ ಥಟ್ಟನೆ ಕಾಣಿಸುವ ವಿದ್ಯುತ್ಪ್ರಕಾಶವು ಯೌವನವತಿಯರಾದ ಚೆಲುವೆಯರ ಮುಗುಳುನಗೆಯಂತಿರುವುದೆಂದೂ ವರ್ಣನೆ ಮಾಡಿರುವನು. ಶಿಡಿಲು ಮಿಂಚುಗಳ ಆರ್ಭಟವಾದೊಡನೆಯೇ ಗುಡುಗುಶಬ್ದಗಳಿಂದ ಸಹಿತವಾಗಿ ಮಳೆಯ ಹನಿಗಳು ಭೂಮಿಯ ಮೇಲೆ ಬೀಳುವವು ಎಂದೂ ವರ್ಣಿಸಿರುವನು.

ಸುಪರ್ಣಾಃ ಅಮಿನಂತೆ—ಶೋಭನಪತನಾ ರಶ್ಮಯಃ । ಕೆಳಗೆ ಬೀಳುವ ಎಂದರೆ ಹರಡುವ ವಿದ್ಯುತ್ತಿನ (ಮಿಂಚಿನ) ರಶ್ಮಿಗಳು. ಮಿಂಚಿನ ಪ್ರಕಾಶವು ಕಪ್ಪಾದ ಮೋಡಗಳ ಮೇಲೆ ಬಿದ್ದು ಅವುಗಳನ್ನು ಹಿಂಸಿಸುವವು ಎಂದಭಿಪ್ರಾಯವು

ಏವೈಃ-- **ಏವೈರ್ಗಂತೃಭಿರ್ಮರುದ್ಭಿಃ** । **ಏವೈಃ** ಎಂಬ ಶಬ್ದಕ್ಕೆ ಹೋಗುವ, ಚಲಿಸುವ ಎಂಬ ಅರ್ಥ ವಿರುವುದರಿಂದ ಯಾವಾಗಲೂ ಚಲಿಸುವ (ಬೀಸುವ) ಸ್ವಭಾವವುಳ್ಳ ಮರುತ್ತುಗಳು (ರಭಸದಿಂದ ಬೀಸುವ ಗಾಳಿಗಳು) ಎಂದು ಭಾಷ್ಯಕಾರರು ವಿವರಿಸಿರುವರು ಮಳೆಯು ಹುಯ್ಯುವಾಗ ಗಾಳಿಯು ರಭಸವಾಗಿ ಬೀಸುವುದು ಸಹಜವು.

ಕೃಷ್ಣೋ ವೃಷಭಃ—ಕೃಷ್ಣವರ್ಣೋ ವರ್ಷಿತಾ ಮೇಘಃ । ವೃಷ್ಟಿಯನ್ನು ಸುರಿಸುವ ಕಪ್ಪಾದ ಮೇಘಗಳು; ಜಲದಿಂದ ಪೂರ್ಣವಾದ ಮೇಘಗಳು ಮಳೆ ಹುಯ್ಯುವುದಕ್ಕೆ ಮುಂಚೆ ಕಪ್ಪಾಗಿರುವುವು ದೊಡ್ಡ ಮಳೆಯು ಬರುವ ಸಂದರ್ಭದಲ್ಲಿ ಕಪ್ಪಾದ ಮೇಘಗಳು ಅಂತರಿಕ್ಷದಲ್ಲಿ ಗುಂಪಾಗಿ ಸೇರಿ ಕತ್ತಲೆ ಕವಿಯುವಂತೆ ಮಾಡುವುವು. ಆದುದರಿಂದ ಋಷಿಯು ಕೃಷ್ಣ-ಕಪ್ಪಾದ ಎಂಬ ಶಬ್ದವನ್ನು ಉಪಯೋಗಿಸಿರುವನು. ಯಾಸ್ಕರು ವೃಷಭ ಶಬ್ದದ ವಿಷಯದಲ್ಲಿ

ಪ್ರ ನೂ ಮಹಿತ್ವಂ ವೃಷಭಸ್ಯ ವೋಚಂ ಯಂ ಪೂರವೋ ವೃತ್ರಹಣಂ ಸಚಂತೇ ।

(ಋ ಸಂ ೧೦-೪೫ ೬)

ಎಂಬ ಋಕ್ಕನ್ನು ಉದಹರಿಸಿ.ವೃಷಭಸ್ಯ-ವರ್ಷಿತುರಸ್ಯಾಂ, ನೀರನ್ನು ಸುರಿಸುವ ಎಂದು ಅರ್ಥವಿವರಣೆ ಮಾಡಿರುವಶು (ನಿ ೭-೨೩) ಮತ್ತೂ---

ವೃಷಭಃ । ವೃಷಭಃ ಪ್ರಜಾಂ ವರ್ಷತೀತಿ ನಾತಿಬೃಹತಿ ರೇತ ಇತಿ ನಾ ತದ್ವೃಷಲಮಾ ವರ್ಷಣಾದ್ವೃಷಭಃ ॥

(ನಿ ೯-೨೨)

ಎಂದು ವೃಷಭಶಬ್ದದ ರೂಪನಿಷ್ಪತ್ತಿಯನ್ನು ಹೇಳಿರುವರು ಎಂದರೆ, ಪ್ರಜೋತ್ಪತ್ತಿಗೆ ಕಾರಣವಾದ ರೇತಸ್ಸನ್ನು (ವೀರ್ಯವನ್ನು) ಯೋನಿಯಲ್ಲಿ ಬಿಡುವ ಪುರುಷನಿಗೆ ವೃಷಭನೆಂದು ಹೆಸರು. **ಅಥವಾ ರೇತಃ** ಎಂಬ ಶಬ್ದಕ್ಕೆ ಉದಕ

(ನೀರು) ಎಂದೂ ಅರ್ಥವಿರುವುದರಿಂದ (೨-೪೪) ನೀರನ್ನೂ ವಿಶೇಷವಾಗಿ (ನೃಷ್ಟಿ ಅಥವಾ ಮಳೆಯ ರೂಪದಿಂದ) ಸುರಿಸುವುದಕ್ಕೆ ವೃಷಣನೆಂದು ಹೆಸರು. ಅಂತಹ ಉದಕವರ್ಷಣವನ್ನು ಮಾಡುವ ಪುರುಷನಿಗೆ ವೃಷಭನೆಂದು ಹೆಸರು ಎಂದು ಹೇಳಿ---

ನ್ಯಕ್ರಂದಯನ್ನಸಯಂತ ಏನಮನುನೇಹಯನ್ವೃಷಭಂ ಮಧ್ಯ ಆಜೇಃ ।

(ಋ ಸಂ ೧೦-೧೦೩-೫)

ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು

ಶಿವಾಭಿಃ---ಸುಖಕಾರಿಣೀಭಿಃ । ಸುಖವನ್ನುಂಟುಮಾಡುವ. ಮನಸ್ಸಿಗೆ ಸಂತೋಷವನ್ನುಂಟುಮಾಡುವ

ಸ್ಮಯಮಾನಾಭಿರ್ನ---ಸ್ಮಿಙ್ ಈಷದ್ಹಸನೇ । ಹಸನವತೀಭಿಃ ಕಾಂತಾಭಿರಿವ । ಮಂದಹಾಸದಿಂದ ಅಥವಾ ಮುಗುಳು ನಗೆಯಿಂದ ಶೋಭಿಸುತ್ತಿರುವ ಕಾಮಿನಿಯರಂತೆ ಸುಂದರಿಯರೂ ತರುಣಿಯರೂ ಆದ ಭೂಮಿನಿಯರು ಸಂತೋಷವನ್ನು ವ್ಯಕ್ತಪಡಿಸುವಾಗ 'ಮಂದಹಾಸವನ್ನು ಸೂಸುತ್ತಾ ತಮ್ಮ ಅತಿಶುಭ್ರವೂ ಮನೋಹರವೂ ಆದ ದಂತಪಂಕ್ತಿಯನ್ನು ಪ್ರಕಟಿಸುವಂತೆ ವೃಷ್ಟಿ ಬಿಂದುಗಳು ಅತಿಶುಭ್ರವಾಗಿ ಬೆಳ್ಳಗಿರುವ ನೊರೆಗಳಿಂದ ಕೂಡಿ ಶೋಭಿಸುತ್ತಿರುವವು ಎಂದು ಉಪಮಾರ್ಥವು

ಮಿಹಃ- ಮಿಹ ಸೇಚನೇ । ಆಪಃ । ನನೆಯಿಸತಕ್ಕೆ ನೀರು.

ಸ್ತನಯಂತಿ---ಸ್ತನ ಶಬ್ದೇ । ಇತಸ್ತತಃ ಶಬ್ದಂ ಕುರ್ವಂತಿ । ಅಲ್ಲಲ್ಲಿ ಅಥವಾ ನಮೇ ಶಬ್ದ ಮಾಡುವವು ಎಂದರೆ ಗುಡುಗು ಶಬ್ದವು ಕೇಳಿಸುತ್ತಿರುವವು ಎಂದಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ಅಮಿನಂತ---ವಿಪೂರ್ವ ಹಿಂಸಾಯಾಂ ಧಾತು. ಕ್ರ್ಯಾದಿ ಲಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ **ವ್ಯತ್ಯಯೋ ಬಹುಲಂ** ಎಂಬುದರಿಂದ ಇದಕ್ಕೆ ಅನ್ತಾದೇಶ **ಕ್ರ್ಯಾದಿಭ್ಯಃ ಶ್ನಾ** ಸೂತ್ರದಿಂದ ಶ್ನಾ ವಿಕರಣ **ಪ್ಸಾದೀನಾಂ ಹ್ರಸ್ವಃ** (ಪಾ ಸೂ. ೭-೩-೭೦) ಎಂಬುದರಿಂದ ಶ್ನಾ ಪರವಾದಾಗ ಧಾತುವಿಗೆ ಹ್ರಸ್ವ. **ಶ್ನಾಭ್ಯಸ್ತಯೋರಾತಃ** (ಪಾ ಸೂ ೬-೪-೧೧೨) ಎಂಬುದರಿಂದ ಆಜಾದಿ ಙಿತ್ ಪ್ರತ್ಯಯ ಪರವಾದುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಲೋಪ ಅಂಗಕ್ಕೆ ಅಡಾಗಮ ಅಮಿನಂತ ಎಂದು ರೂಪವಾಗುತ್ತದ. **ಈಷಾ ಆಕ್ಷಾದಿಗಣದಲ್ಲಿ** ಸೇರಿರುವುದರಿಂದ ಇದಕ್ಕೆ ಪ್ರಗೃಹ್ಯಸಂಜ್ಞಾಪ್ರಯುಕ್ತವಾಗಿ ಅಚ್ (ಏನೈಃ) ಪರದಲ್ಲಿದ್ದರೂ ವೃದ್ಧಿಗೆ ಬಾಧಕವಾಗಿ ಸ್ವಕೃತಿಭಾವಸಂಧಿ ಬರುತ್ತದ ಯದ್ಯಪಿ ಪ್ರಗೃಹ್ಯಸಂಜ್ಞಾ ಇರುವುದರಿಂದ **ಅಪ್ರಗೃಹ್ಯಸ್ಯ** ಎಂದು ನಿಷೇಧಿಸಿರುವುದರಿಂದ ಅಂತ್ಯಕ್ಕೆ ಅನುನಾಸಿಕಬರಲು ನಿಮಿತ್ತವಿಲ್ಲ ಆದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ ಸಂಹಿತಾದಲ್ಲಿ ಮಾತ್ರ **ಆನೋ೨ಪ್ರಗೃಹ್ಯಸ್ಯಾನುನಾಸಿಕಃ** (ಪಾ. ಸೂ ೮-೪-೫೭) ಎಂಬುದರಿಂದ ನೈಕಲ್ಪಿಕವಾದ ಅನುನಾಸಿಕವು ಅವಸಾನದಲ್ಲಿ ಬರುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದ

ನೋನವ---ಣು ಸ್ತುತೌ ಧಾತು. **ಕೋನಃ** ಎಂಬುದರಿಂದ ಣಕಾರಕ್ಕೆ ನಕಾರಾದೇಶ ಅತಿಶಯಾರ್ಥ ತೋರುವಾಗ **ಧಾತೋರೇಕಾಚಃ ಹಲಾದೇಃ**---(ಪಾ ಸೂ ೩-೧-೨೨) ಎಂಬುದರಿಂದ ಯಙ್. ಅದಕ್ಕೆ

ಯೆಜ್ಞೋ೨ಟಿಚ (ಪಾ ಸೂ. ೨-೪-೭೪) ಎಂಬುದರಿಂದ ಲುಕ್. **ಸನ್ಯಜೋಃ** (ಪಾ. ಸೂ ೬-೧-೯) ಎಂಬುದರಿಂದ ಧಾತುವಿಗೆ ದ್ವಿತ್ವ. **ಗುಣೋ ಯ೜್ಲುಕೋಃ** (ಪಾ ಸೂ ೭-೪-೮೨) ಸೂತ್ರದಿಂದ ಅಭ್ಯಾಸಕ್ಕೆ ಗುಣ ನೋನು ಎಂದು ರೂಪವಾಗುತ್ತದೆ. **ಸನಾದ್ಯಂತಾ ಧಾತವಃ** ಎಂಬುದರಿಂದ ಧಾತುಸಂಜ್ಞೆ ಬರುವುದರಿಂದ ಇದಕ್ಕೆ ಲಿಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಪರಸ್ಮೈಪದಾನಾಂ**—ಎಂಬುದರಿಂದ ಅದಕ್ಕೆ ಣಲ್ ಆದೇಶ. ಪ್ರತ್ಯಯಾಂತವಾದರೂ **ಕಾಸ್ಪ್ರತ್ಯಯಾದಮಂತ್ರೇ ಲಿಟಿ** (ಪಾ ಸೂ. ೩-೧-೩೫) ಎಂಬಲ್ಲಿ ಅಮಂತ್ರೇ ಎಂದು ನಿಷೇಧಮಾಡಿರುವುದರಿಂದ ಲಿಟಿನಲ್ಲಿ ಆಮ್ಪ್ರತ್ಯಯ ಬರುವುದಿಲ್ಲ. ಣಲ್ ಣಿತ್ತಾದುದರಿಂದ **ಅಚೋಞ್ಣಿತಿ** ಎಂಬುದರಿಂದ ಅಜಂತಾಂಗಕ್ಕೆ ವೃದ್ಧಿ. ಆವಾದೇಶ. ನೋನಾವ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರಬರುತ್ತದೆ

ಸ್ಮಯಮಾನಾಭಿಃ—ಸ್ಮಿಙ್ ಈಷದ್ಹಸನೇ ಧಾತು ಇದಕ್ಕೆ ಲಡರ್ಥದಲ್ಲಿ ಶಾನಚ್ ಪ್ರತ್ಯಯ **ಕರ್ತರಿ ಶಪ್** (ಪಾ ಸೂ ೩-೧-೬೮) ಎಂಬುದರಿಂದ ಶಪ್ ವಿಕರಣ. **ಸಾರ್ವಧಾತುಕಾರ್ಧಧಾ** -(ಪಾ. ಸೂ ೭-೩-೮೪) ಎಂಬುದರಿಂದ ಶಪ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ ಆಯಾವೇಶ **ಆನೇಮುಕ್** (ಪಾ ಸೂ. ೭-೨ ೮೨) ಎಂಬುದರಿಂದ ಅಜಂತಾಂಗಕ್ಕೆ ಮುಕಾಗಮ ಕಿತ್ತಾದುದರಿಂದ ಅಂತಾವಯವವಾಗಿ ಬರುತ್ತದೆ ಸ್ಮಯಮಾನ ಎಂದು ರೂಪವಾಗುತ್ತದೆ. ಶಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ. ಅದುಸದೇಶದ ಪರದಲ್ಲಿರುವುದರಿಂದ ಲಸಾರ್ವಧಾತ ಕವು **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತ. ಆಗ ಧಾತುಸ್ವರ ಉಳಿಯುವುದರಿಂದ ಆದ್ಯುದಾತ್ತವಾಗುತ್ತದೆ. ತೃತೀಯಾ ಬಹುವಚನರೂಪ

ಅಗಾತ್—ಇಙ್ ಗತೌ ಧಾತು. ಅದಾದಿ. ಇದಕ್ಕೆ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಸೂತ್ರದಿಂದ ಇಕಾರಲೋಪ **ಇಣೋ ಗಾ ಲುಙಿ** (ಪಾ. ಸೂ. ೨-೪-೪೫) ಎಂಬುದರಿಂದ ಧಾತುವಿಗೆ ಗಾದೇಶ ಚ್ಲಿಗೆ **ಚ್ಲೇಃ ಸಿಚ್** ಎಂಬುದರಿಂದ ಸಿಚಾದೇಶ. **ಗಾತಿಸ್ಥಾಘುಪಾ**—(ಪಾ. ಸೂ ೭-೪-೭೭) ಎಂಬುದರಿಂದ ಸಿಚಿಗೆ ಲುಕ್. ಅಂಗಕ್ಕೆ ಆಡಾಗಮ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಪತೆಂತಿ—ಪತ್ಲೃ ಗತೌ ಧಾತು. ಲಟ್ ಪ್ರಥಮಪುರುಷ ಬಹುವಚನರೂಪ. ತಿಜಂತದ ಪರದಲ್ಲಿರುವುದರಿಂದಲೂ ಪಾದಾದಿಯಲ್ಲಿರುವುದರಿಂದಲೂ ನಿಘಾತಸ್ವರ ಬರುವುದಿಲ್ಲ ಶಪ್ ಲಸಾರ್ವಧಾತುಕ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ

ಸ್ತನಯಂತಿ—ಸ್ತನ ಶಬ್ದೇ ಧಾತು ಚುರಾದಿ ಇದು ಅದಂತವಾಗಿದೆ. ಇದಕ್ಕೆ ಸ್ವಾರ್ಥದಲ್ಲಿ **ಸತ್ಯಾಪಪಾಶ**- (ಪಾ ಸೂ. ೩-೧-೨೫) ಸೂತ್ರದಿಂದ ಣಿಚ್ **ಅತೋಲೋಪಃ** ಎಂಬುದರಿಂದ ಣಿಚ್ ನಿಮಿತ್ತವಾಗಿ ಧಾತುವಿನ ಅಂತ್ಯ ಅಕಾರಕ್ಕೆ ಲೋಪ. ಇದಕ್ಕೆ **ಅಚಿಃ ಪರಸ್ಮಿನ್**—ಸೂತ್ರದಿಂದ ಸ್ಥಾನಿವದ್ಭಾವ ಬರುವುದರಿಂದ ಣಿಚ್ ನಿಮಿತ್ತವಾಗಿ ಉಪಧಾವೃದ್ಧಿ ಬರುವುದಿಲ್ಲ. ಲಟ್ ಪ್ರಥಮಪುರುಷ ಬಹುವಚನರೂಪ. ಇದು ವಾಕ್ಯಾದಿಯಲ್ಲಿ ಬಂದುದರಿಂದ ನಿಘಾತಸ್ವರ ಬರುವುದಿಲ್ಲ ಣಿಚ್ ಸ್ವರದಿಂದ ನಕಾರೋತ್ತರಾಕಾರ ಉದಾತ್ತವಾಗುತ್ತದೆ ॥ ೨ ॥

॥ ಸಂಹಿತಾಪಾಠಃ ॥

ಯದೀಮೃತಸ್ಯ ಪಯಸಾ ಪಿಯಾನೋ ನಯನ್ನೃತಸ್ಯ ಪಥಿಭೀ
ರಜಿಷ್ಠೈಃ ।
ಅರ್ಯಮಾ ಮಿತ್ರೋ ವರುಣಃ ಪರಿಜ್ಮಾ ತ್ವಚಂ ಪೃಂಚಂತ್ಯು-
ಪರಸ್ಯ ಯೋನೌ ॥ ೩ ॥

॥ ಪದಪಾಠಃ ॥

ಯತ್ । ಈಂ । ಋತಸ್ಯ । ಪಯಸಾ । ಪಿಯಾನಃ । ನಯನ್ । ಋತಸ್ಯ । ಪಥಿ ೬-
ಭಿಃ । ರಜಿಷ್ಠೈಃ ।
ಅರ್ಯಮಾ । ಮಿತ್ರಃ । ವರುಣಃ । ಪರಿ ೬ ಜ್ಮಾ । ತ್ವಚಂ । ಪೃಂಚಂತಿ । ಉಪರಸ್ಯ ।
ಯೋನೌ ॥ ೩ ॥

॥ ಸಾಯಣಭಾಷ್ಯಂ ॥

ಯದೀಂ ಯದಾಯಮಗ್ನಿರ್ಯತಸ್ಯೋದಕಸ್ಯ ಪಯಸಾ ಪಯೋವತ್ಸಾರಭೂತೇನ ರಸೇನ
ಪಿಯಾನೋ ಜಗದಾಪ್ಯಾಯನಂ ಕುರ್ವನ್ ಆಪ್ಯಾಯಿತಂ ಚ ಜಗದೃತಸ್ಯೋದಕಸ್ಯ ಸಂಬಂಧಿಭೀ
ರಜಿಷ್ಠೈರ್ಋಜುತಮೈಃ ಪಥಿಭಿರ್ಮಾರ್ಗೈಃ ಸ್ಥಾನಸಾನಾದಿಭಿರ್ನಯನ್ ಪ್ರಾಪಯನ್ತಸ್ತರ್ತದೇ ತದಾನೀ-
ಮರ್ಯಮಾ ಮಿತ್ರೋ ವರುಣಶ್ಚ ಪರಿಜ್ಮಾ ಪರಿತೋ ಗಂತಾ ಮರುದ್ಗಣಶ್ಚೋಪರಸ್ಯ ಮೇಘಸ್ಯ
ಯೋನೌ ವೃಷ್ಟ್ಯುದಕೋತ್ಪತ್ತಿಸ್ಥಾನೇ ತ್ವಚಂ ಪೃಂಚಂತಿ । ವೃಷ್ಟ್ಯುದಕಸ್ಯಾಚ್ಛಾದಕಂ ಪ್ರದೇಶಂ
ಸ್ವಕೀಯೈರಾಯುಧೈಃ ಸಂಯೋಜಯಂತೀತಿ ಯಾವತ್ ॥ ಪಿಯಾನಃ । ಸ್ಫಾಯೀ
ಓಪ್ಯಾಯೀ ವೃದ್ಧೌ । ಬಹುಲಂ ಛಂದಸೀತಿ ಶಪೋ ಲುಕ್ । ಧಾತೋರ್ವ್ಯತ್ಯಯೇನ ಪೀಭಾವಃ ।

ಅನುದಾತ್ತೇತ್ತ್ವಲ್ಲಸಾರ್ವಧಾತುಕಾನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ರಜಿಷ್ಟೈಃ । ಋಜುಶಬ್ದಾದಿಷ್ಠನಿ ವಿಭಾಷಜೋಽಶ್ಚಂದಸಿ । ಪಾ. ೬-೪-೧೬೨ । ಇತ್ಯೃಕಾರಸ್ಯ ರತ್ವಂ । ಟೀರಿತಿ ಟಿಲೋಪಃ । ಪೃಂಚಂತಿ । ಪೃಚೀ ಸಂಪರ್ಕೇ । ರೌಧಾದಿಕಃ ॥

॥ ಪ್ರತಿಪದಾರ್ಥ ॥

ಯದೀಂ—ಯಾವಾಗ ಈ ಅಗ್ನಿಯು । **ಋತಸ್ಯ**—ಉದಕವ । **ಪಯಸಾ**—ಕ್ಷೀರದಂತೆ ಸಾರವತ್ತಾದ ರಸದಿಂದ । **ಪಿಯಾನಃ**—(ಪ್ರಪಂಚಕ್ಕೆ) ಅಪ್ಯಾಯನವನ್ನುಂಟುಮಾಡುತ್ತಾ (ಅಪ್ಯಾಯಿತವಾದ ಜಗತ್ತನ್ನು) । **ಋತಸ್ಯ**—ಉದಕದ (ಸಂಬಂಧವಾದ) । **ರಜಿಷ್ಟೈಃ**—ಅತ್ಯಂತ ಋಜುವಾದ (ನ್ಯಾಯವಾದ) । **ಪಥಿಭಿಃ**—ಮಾರ್ಗಗಳಿಂದ (ಸ್ನಾನಪಾನಾದಿಗಳಿಂದ) । **ನಯನ್**—ಒದಗಿಸುತ್ತಾ (ಇರುತ್ತಾನೋ ಆಗ) । **ಆರ್ಯಮಾ ಮಿತ್ರಃ ವರುಣಃ**—ಆರ್ಯಮ ಮಿತ್ರ, ವರುಣ (ಮತ್ತು) । **ಪರಿಜ್ಮಾ**—ಸರ್ವಪ್ರದೇಶದಲ್ಲಿಯೂ ಸಂಚರಿಸುವ ಮರುತ್ತುಗಳೂ । **ಉಪರಸ್ಯ**—ಮೇಘದ । **ಯೋನೌ**—(ವೃಷ್ಟಿಯ) ಉತ್ಪತ್ತಿಸ್ಥಾನದಲ್ಲಿ । **ತೃಚಂ**—ಚರ್ಮವನ್ನು (ಆವರಣವನ್ನು) । **ಪೃಂಚಂತಿ**—(ತಮ್ಮ ಆಯುಧಗಳಿಂದ) ಚುಚ್ಚುತ್ತಾರೆ

॥ ಭಾವಾರ್ಥ ॥

ಅಗ್ನಿಯು ಕ್ಷೀರದಂತೆ ಸಾರವತ್ತಾದ ವೃಷ್ಟ್ಯುದಕದಿಂದ ಪ್ರಪಂಚವನ್ನೆಲ್ಲಾ ಸ್ನಾನಪಾನಾದಿಗಳಿಂದ ತೃಪ್ತಿಪಡಿಸುತ್ತಿರುವಾಗ, ಆರ್ಯಮ, ಮಿತ್ರ, ವರುಣ ಮತ್ತು ಸರ್ವದಾ ಗತಿಶೀಲರಾದ ಮರುದ್ಗಣ, ಇವರುಗಳು ವೃಷ್ಟಿಯ ಉತ್ಪತ್ತಿಸ್ಥಾನವನ್ನು ಚುಚ್ಚಿ. (ಮಳೆ ಬೀಳುವಂತೆ ಮಾಡುತ್ತಾರೆ)

English Translation

When this, (the lightning, Agni), nourishes the world with the milk of the rain, and conducts it by the most direct ways, to (the enjoyment of) water, then Mitra, Aryaman, Varuna, and the circumambient (troops of Maruts) pierce through the (investing) membrane into the womb of the cloud.

॥ ವಿಶೇಷವಿಷಯಗಳು ॥

ಋತಸ್ಯ—**ಅಣಃ ಕ್ಷೋದಃ** ಮೊದಲಾದ ನೂರೊಂದು ಉದಕನಾಮಗಳ ಮಧ್ಯದಲ್ಲಿ ಋತಂ ಎಂಬ ಶಬ್ದವು ಪಠಿತವಾಗಿರುವುದರಿಂದ ಋತಸ್ಯ ಎಂದರೆ ಉದಕದ ಎಂದರ್ಥವು (ನಿ. ೨-೨೪)

ಪಯಸಾ—**ಪಯಃ** ಎಂಬ ಶಬ್ದವು ಉದಕವೆಂದೂ ಕ್ಷೀರವೆಂದೂ ಅರ್ಥವಾಗುವುದು. ಇಲ್ಲಿ ಭಾಷ್ಯಕಾರರು ಕ್ಷೀರದಂತೆ (ಹಾಲಿನಂತೆ) ಸಾರಭೂತವಾದ ಉದಕದಿಂದ ಎಂದರ್ಥಮಾಡಿರುವರು

ಪಿಯಾನಃ—ಸ್ಥಾಯಿಾ ಓಸ್ಯಾಯಿಾ ವೃದ್ಧಿ । ಆಸ್ಯಾಯನನಮಾಡುವ, ತೃಪ್ತಿಯನ್ನುಂಟುಮಾಡುವ.

ನಯೆನ್ ಋತಸ್ಯ ಪಥಿಭಿಃ ರಜಿಷ್ಠೈಃ—ನೀರಿನಿಂದ ಸಹಜವಾಗಿ ಆಗಬೇಕಾದ ಸ್ನಾನ, ಪಾನ, ಮೊದಲಾದ ವಿಧವಿಧ ಮಾರ್ಗಗಳಿಂದ ಜಗತ್ತಿಗೆ ಅನುಕೂಲವನ್ನುಂಟುಮಾಡುತ್ತಾ ಎಂದಭಿಪ್ರಾಯವು

ಉಪರಸ್ಯ—ಅದ್ರಿಃ ಗ್ರಾವಾ ಮೊದಲಾದ ಮೂವತ್ತು ಮೇಘನಾಮಗಳ ಮಧ್ಯದಲ್ಲಿ ಉಪರಃ ಎಂಬ ಶಬ್ದವು ಪರಿತವಾಗಿರುವುದರಿಂದ ಉಪರಸ್ಯ ಎಂದರೆ ಮೇಘದ ಎಂದರ್ಥವು

ತ್ವಚಂ—ಚರ್ಮದ ಅಥವಾ ಮೇಘದ ಆವರಣವನ್ನು ಚುಚ್ಚಿ ಒಳಗಿರುವ ನೀರನ್ನು ಸುರಿಯುವಂತೆ ಮಾಡಿದರು

ಅರ್ಯಮಾ, ಮಿತ್ರಃ, ವರುಣಃ, ಪರಿಜ್ಮಾ—ಅರ್ಯಮ, ಮಿತ್ರ, ವರುಣ ಮತ್ತು ಪರಿಜ್ಮ ದೇವತೆಗಳು ಮೇಘದಲ್ಲಿರುವ ನೀರನ್ನು ವಜ್ರದಿಂದ ಆಚ್ಛಾದನವನ್ನು ಉದ್ಘಾಟನೆಮಾಡಿ ನೀರು ಭೂಮಿಯ ಮೇಲೆ ಬೀಳುವಂತೆ ಮಾಡಿದರು ಇಲ್ಲಿ ಅರ್ಯಮಾ ಮೊದಲಾದ ದೇವತೆಗಳು ಮೇಘದಿಂದ ನೀರನ್ನು ಹೊರಡಿಸುವಂತೆ ಮಾಡಿರುವುದಕ್ಕೆ ಯಾವ ಕಾರಣವನ್ನೂ ಹೇಳಿರುವುಲ್ಲ

ಪರಿಜ್ಮಾ— ಪರಿತೋ ಗಂತಾ । ಎಲ್ಲೆಲ್ಲಿಯೂ ಸಂಚರಿಸುವ ವಾಯುವು ಎಂದರ್ಥವು

ವ್ಯಾಕರಣಪ್ರಕ್ರಿಯಾ ॥

ಪಿಯಾನಃ—ಸ್ಥಾಯಿಾ ಓಸ್ಯಾಯೀ ವೃದ್ಧಿ ಧಾತು ಇದಕ್ಕೆ ಲಡರ್ಥದಲ್ಲಿ ಶಾನಚಾದೇಶ **ಬಹುಲಂ-ಛಂದಸಿ** ಎಂಬ ದರಿಂದ ಪ್ರಾಪ್ತವಾದ ಶಪಿಗೆ ಲುಕ್. **ವ್ಯತ್ಯಯೋ ಬಹುಲಮ್** ಸೂತ್ರದಿಂದ ಧಾತುವಿಗೆ ಪೀ ಭಾವ ಪೀ+ಆನ ಎಂದಿರುವಾಗ **ಆಚಿಶ್ನುಧಾತು ಭ್ರುವಾಮ್**—ಎಂಬುದರಿಂದ ಧಾತುವಿನ ಇಕಾರಕ್ಕೆ ಇಯಙಾದೇಶ ಪಿಯಾನ ಎಂದು ರೂಪವಾಗುತ್ತದೆ ಧಾತುವು ಅನುದಾತ್ತವಾಗಿ ಇದರ ಪರದಲ್ಲಿ ಲಸಾರ್ವಧಾತುಕವು ಬಂದುದರಿಂದ **ತಾಸ್ಯನುದಾತ್ತೇತ್**—(ಪಾ ಸೂ ೬-೧-೧೮೬) ಎಂಬುದರಿಂದ ಅನುದಾತ್ತವಾಗುತ್ತದೆ ಆಗ ಧಾತುಸ್ವರ ಉಳಿಯುತ್ತದೆ.

ನಯೆನ್—ಣೀಞ್ ಪ್ರಾಪಣೇ ಧಾತು ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ. ಶಪ್ ವಿಕರಣ. ತನ್ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ಆಯಾದೇಶ ಇದಕ್ಕೆ ಸು ಪರವಾದಾಗ ಉಗಿತ್ತಾದುದರಿಂದ ನುಮಾಗಮ **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ ಸಂಯೋಗಾಂತಲೋಪದಿಂದ ತಕಾರಲೋಪ ಇಲ್ಲಿ ಅದುಪದೇಶದ ಪರದಲ್ಲಿರುವುದರಿಂದ ಹಿಂದಿನಂತೇ ಲಸಾರ್ವಧಾತುಕವು ಅನುದಾತ್ತವಾಗುತ್ತದೆ ಆಗ ಧಾತುಸ್ವರ ಉಳಿಯುತ್ತದೆ

ರಜಿಷ್ಠೈಃ—ಅತಿಶಯೇನ ಋಜವಃ ರಜಿಷ್ಠಾಃ ಋಜುಶಬ್ದದ ಮೇಲೆ ಅತಿಶಯಾರ್ಥ ತೋರುವಾಗ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ ೫-೩-೫೫) ಎಂಬುದರಿಂದ ಇಷ್ಠನ್ ಪ್ರತ್ಯಯ ಇದು ಪರವಾದಾಗ **ವಿಭಾಷಜೋರ್ಞಿಂದಸಿ** (ಪಾ ಸೂ ೬-೪-೧೬೨) ಎಂಬುದರಿಂದ ಋಜು ಶಬ್ದದ ಋಕಾರಕ್ಕೆ ರತ್ವ **ಟೇಃ** (ಪಾ ಸೂ ೬-೪-೧೫೫) ಎಂಬುದರಿಂದ ಟಿಗೆ ಲೋಪ (ಉಕಾರ) **ರಜಿಷ್ಠ** ಎಂದು ರೂಪವಾಗುತ್ತದೆ ಪ್ರತ್ಯಯ ನಿತ್ತಾದುದರಿಂದ **ಜ್ಞ್ನಿತ್ಯಾರ್ನಿತ್ಯೇಷು** ಎಂಬುದರಿಂದ ಆದ್ಯುದಾತ್ತನಾಗುತ್ತದೆ ತೃತೀಯಾ ಬಹುವಚನಾಂತರೂಪ

ಪರಿಜ್ಮಾ—ಪರಿ ಜಾಯತೇ ಇತಿ ಪರಿಜ್ಮಾ. ಜನೀ ಪ್ರಾದುರ್ಭಾವೇ ಧಾತು. **ಶ್ವನ್ಸುಕ್ಷನ್** - (ಉ. ಸೂ. ೧–೧೫೭) ಎಂಬುದರಿಂದ ಈ ಧಾತುವಿಗೆ ಪರಿ ಉಪಸರ್ಗ ಪೂರ್ವದಲ್ಲಿರುವಾಗ ಉಪಧಾಲೋಪವೂ ಮಕಾರಾಂತಾದೇಶವೂ ಕನಿ ಪ್ರತ್ಯಯವೂ ಬಂದು ನಿಪಾತಿತವಾಗಿದೆ. ಪ್ರಥಮಾ ಏಕವಚನಾಂತರೂಪ

ಕೃಣ್ವಂತಿ—ಕೃಞೀ ಸಂಪಕೇ೯ ಧಾತು.- ರುಧಾದಿ ಲಟ್ ಪ್ರಥಮಪುರುಷ ಬಹುವಚನದಲ್ಲಿ **ಧ್ವೋಂತಃ** ಎಂಬುದರಿಂದ ಅಂತಾದೇಶ. **ರುಧಾದಿಭ್ಯಃ ಶ್ನಮ್** ಎಂಬುದರಿಂದ ಶ್ನಮ್ ವಿಕರಣ. **ಮಿದಚೋಂತ್ಯಾತ್ಪರಃ** ಪರಿಭಾಷೆಯಿಂದ ಅಂತ್ಯಾಚನ ಪರವಾಗಿ ಬರುತ್ತದೆ. **ನಶ್ಚಾಪದಾಂತಸ್ಯ ಝಲಿ** ಸೂತ್ರದಿಂದ ಅದಕ್ಕೆ ಅನುಸ್ವಾರ. **ಅನುಸ್ವಾರಸ್ಯಯಯಿ ಪರಸವರ್ಣಃ** ಸೂತ್ರದಿಂದ ಪರಸವರ್ಣ ಅತಿಜಂತದ ಪರದಲ್ಲಿರುವುದರಿಂದ **ತಿಙ್ಶಿತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೩ ॥

॥ ಸಂಹಿತಾಪಾಠಃ ॥

ಅಗ್ನೇ ವಾಜಸ್ಯ ಗೋಮತ ಈಶಾನಃ ಸಹಸೋ ಯಹೋ ।
ಅಸ್ಮೇ ಧೇಹಿ ಜಾತವೇದೋ ಮಹಿ ಶ್ರವಃ ॥ ೪ ॥

॥ ಪದಪಾಠಃ ॥

ಅಗ್ನೇ । ವಾಜಸ್ಯ । ಗೋಽಮತಃ । ಈಶಾನಃ । ಸಹಸಃ । ಯಹೋ ಇತಿ ।
ಅಸ್ಮೇ ಇತಿ । ಧೇಹಿ । ಜಾತಽವೇದಃ । ಮಹಿ । ಶ್ರವಃ ॥ ೪ ॥

॥ ಸಾಯಣಭಾಷ್ಯಂ ॥

ಪ್ರಾತರನುವಾಕಸ್ಯಾಗ್ನೇಯೇ ಕ್ರತಾವೌಷ್ಣಿಹೇ ಛಂದಸ್ಯಾಶ್ವಿನಶಸ್ತ್ರೇ ಚಾಗ್ನೇ ವಾಜಸ್ಯೇತ್ಯಾದ್ಯಾಸ್ತಿಸ್ರೋ ಯುಚಃ । ಸೂತ್ರಿತಂ ಚ । ಆಗ್ನೇ ವಾಜಸ್ಯೇತಿ ತಿಸ್ರಃ ಪುರು ತ್ವಾ ತ್ವಾಮಗ್ನೇ । ಆ. ೪-೧೩ । ಇತಿ ॥

ಹೇ ಸಹಸೋ ಯಹೋ ಬಲಸ್ಯ ಪುತ್ರಾಗ್ನೇ ಗೋಮತೋ ಬಹುಭಿರ್ಗೋಭಿರ್ಯುಕ್ತಸ್ಯ ವಾಜಸ್ಯಾನ್ನಸ್ಯೇಶಾನ ಈಶ್ವರಸ್ತ್ವಮಸಿ । ಅತೋಽಸ್ಮೇ ಅಸ್ಮಾಸು ಹೇ ಜಾತವೇದೋ ಜಾತಧನ ಜಾತಾನಾಂ ವೇದಿತರ್ವಾಗ್ನೇ ಮಹಿ ಪ್ರಭೂತಂ ಶ್ರವೋಽನ್ನಂ ಧೇಹಿ । ಸ್ಥಾಪಯ ॥ ಸಹಸೋ ಯಹೋ । ಪರಾಂಗವದ್ಭಾವಾದಾಮಂತ್ರಿತಸ್ಯ ಚೇತಿ ಸರ್ವಾನ್ಯಮಂತ್ರಿತಸಮುದಾಯೋ ನಿಹನ್ಯತೇ । ಅಸ್ಮೇ । ಸುಪಾಂ ಸುಲುಗಿತಿ ಸಪ್ತಮ್ಯಾಃ ಶೇಆದೇಶಃ ॥

॥ ಶ್ರುತಿಪದಾರ್ಥ

ಸಹಸೋ ಯಹೋ—ಬಲದ ಪುತ್ರನಾದ । **ಅಗ್ನೇ**—ಎಲೈ ಅಗ್ನಿಯೇ (ನೀನು) । **ಗೋಮತಃ**—(ಅನೇಕ) ಗೋವುಗಳಿಂದ ಯುಕ್ತವಾದ । **ವಾಜಸ್ಯ**—ಅನ್ನಕ್ಕೆ । **ಈಶಾನಃ**—ಸ್ವಾಮಿಯು । **ಜಾತವೇದಃ**—ಜಾತಧನನಾದ (ಸರ್ವವನ್ನು ತಿಳಿದ ಎಲೈ ಅಗ್ನಿಯೇ) । **ಮಹಿ**—ಹೆಚ್ಚಾದ । **ಶ್ರವಃ**—ಅನ್ನವನ್ನು । **ಧೇಹಿ**—(ನಮ್ಮಲ್ಲಿ) ಸ್ಥಾಪಿಸು (ಕೊಡು)

॥ ಭಾವಾರ್ಥ ।

ಬಲಪ್ರಯೋಗದಿಂದ ಜನಿಸಿದವನಾದ್ದರಿಂದ ಬಲದ ಪುತ್ರನೆಂದು ಪ್ರಸಿದ್ಧನಾದ ಎಲೈ ಅಗ್ನಿಯೇ, ನೀನು ಗೋವುಗಳಿಗೂ, ಅನ್ನಾದ್ಯಾಹಾರಗಳಿಗೂ ಸ್ವಾಮಿಯು ನೀನು ಸರ್ವವನ್ನೂ ತಿಳಿದವನು ನನಗೆ ಬಹಳವಾಗಿ ಅನ್ನವನ್ನು ಕೊಡು

English Translation

Agni, son of strength, lord of food and of cattle, give us abundant sustenance ; you know all that exist

॥ ವಿಶೇಷವಿಷಯಗಳು ॥

ಪ್ರಾತರನುವಾಕ ಮಂತ್ರಪಠನಕಾಲದಲ್ಲಿ ಆಗ್ನೇಯಕ್ರತು ಸಂಬಂಧವಾದ ಔಷ್ಣಿಕ್ ಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ **ಅಗ್ನೇ ವಾಜಸ್ಯ** ಎಂದು ಮೊದಲಾದ ಮೂರು ಋಕ್ಕುಗಳ ವಿನಿಯೋಗ ವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಅಗ್ನೇ ವಾಜಸ್ಯೇತಿ ತಿಸ್ರಃ ಪುರು ತ್ವಾ ತ್ವಾಮಗ್ನೇ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ ೪-೧೩).

ಸಹಸೋ ಯಹೋ—ಸಹಸ್ ಶಬ್ದಕ್ಕೆ ಬಲವೆಂದರ್ಥವು (ನಿ. ೩-೯) ಯಹು ವೆಂದರೆ ಪುತ್ರನು. (ನಿ ೩-೨) ಆದುದರಿಂದ ಸಹಸೋ ಯಹೋ-ಬಲದ ಪುತ್ರನು. ಎಂದರೆ ಬಲಪ್ರಯೋಗವಾಡಿ ಅರಣಿಗಳಲ್ಲಿ ಕಡೆಯುವುದರಿಂದ ಅಗ್ನಿಯು ಉತ್ಪನ್ನನಾಗುವುದರಿಂದ ಅಗ್ನಿಯನ್ನು ಸಹಸೋ ಯಹೋ, ಸಹಸಸ್ಪುತ್ರ, ಸಹಸಃ ಸೂನೋ ಎಂಬ ಸಂಬೋಧನೆಗಳಿಂದ ಕರೆಯುವುದು ರೂಢಿಯಾಗಿದೆ

ವಾಜಸ್ಯ ಗೋಮತಃ—**ಬಹುಭಿರ್ಗೋಭಿರ್ಯುಕ್ತಸ್ಯಾನ್ನಸ್ಯ** । ವಾಜವೆ ದರೆ ಅನ್ನವು (ನಿ. ೩-೯). ಗೋವುಗಳಿಂದ ಯುಕ್ತವಾದ ಅನ್ನ ಎಂದರೆ ಗೋವುಗಳಿಗೂ ಅನ್ನಕ್ಕೂ (ಸ್ವಾಮಿ) ಯೆಂದಭಿಪ್ರಾಯವು

ಅಸ್ಮೇ ಧೇಹಿ—**ಅಸ್ಮಾಸು ಸ್ಥಾಪಯ** । ನಮ್ಮಲ್ಲಿ ಸ್ಥಾಪಿಸು ಎಂದರೆ ನಮಗೆ ಕೊಡು ಎಂದಭಿಪ್ರಾಯವು. ಅಸ್ಮೇ ಎಂಬ ಶಬ್ದವು ಋಗ್ವೇದದಲ್ಲಿ ಅಸ್ಮಚ್ಛಬ್ದದ ಎಲ್ಲಾ ವಿಭಕ್ತ್ಯರ್ಥಗಳಲ್ಲಿಯೂ ಉಪಯೋಗಿಸಲ್ಪಡುವುದು ಈ ವಿಷಯದಲ್ಲಿ ಯಾಸ್ಕರು (ನಿ. ೬-೭) ಈ ರೀ ವಿವರಿಸಿರುವರು—

(೧) **ಅಸ್ಮೇ ತೇ ಬಂಧುಃ** । **ವಯಮಿತ್ಯರ್ಥಃ** ।

ಅಸ್ಮೇ ಇತ್ಯೇತತ್ಪದಂ ಸರ್ವವಿಭಕ್ತ್ಯಂತಂ । **ತಸ್ಮಾದನೇಕಾರ್ಥಂ** । **ಏಕಮೇವ ಹ್ಯೇತಚ್ಛಬ್ದರೂಪಂ ಸಪ್ತಸ್ವಪಿ ವಿಭಕ್ತ್ಯರ್ಥೇಷು ವರ್ತತೇ** । **ಪ್ರಕರಣಾದಿವಶಾತ್ ತಸ್ಯ ನಿಯಮೋ ಭವತಿ** । **ತದ್ಯಥಾ**—**ಪ್ರಥಮಾಯಾಸ್ತಾವತ್**—**ಅಸ್ಮೇ ತೇ ಬಂಧುಃ** । **ವಯಮಿತ್ಯರ್ಥಃ** ॥ ಎಂದರೆ ಅಸ್ಮೇ ಎಂಬ ಶಬ್ದವು ಏಳು ವಿಭಕ್ತಿಗಳ ಅರ್ಥದಲ್ಲಿಯೂ ಸಂದರ್ಭಾನುಸಾರವಾಗಿ ಉಪಯೋಗಿಸಲ್ಪಡುವುದು ಎಂದರೆ ಆಯಾ ಪ್ರಕರಣಾನುಸಾರವಾಗಿ ಈ ಶಬ್ದಕ್ಕೆ ಏಳು ವಿಭಕ್ತಿಗಳಲ್ಲಿ ಯಾವ ವಿಭಕ್ತಿಯ ಅರ್ಥವನ್ನಾದರೂ ಹೇಳಬಹುದು ಹೇಗೆಂದರೆ- -**ಅಸ್ಮೇ ತೇ ಬಂಧುಃ** ಎಂಬ ವಾಕ್ಯದಲ್ಲಿ **ಅಸ್ಮೇ** ಎಂಬ ಶಬ್ದಕ್ಕೆ **ವಯಂ**—ನಾವು ಎಂಬರ್ಥವಿರುವುದು ಇದು ಪ್ರಥಮಾ ವಿಭಕ್ತಿಯ ಅರ್ಥಕ್ಕೆ ಉದಾಹರಣೆಯು.

(೨) **ಅಸ್ಮೇ ಯಾತಂ ನಾಸತ್ಯಾ ಸಜೋಷಾಃ** । **ಅಸ್ಮಾನಿತ್ಯರ್ಥಃ** ॥

ದ್ವಿತೀಯಾಸ್ತಾವತ್—ಅಸ್ಮೇಎಂಬ ಶಬ್ದಕ್ಕೆ ದ್ವಿತೀಯಾ ವಿಭಕ್ತಿಯಾದ ಅಸ್ಮಾನ್-ನಮ್ಮನ್ನು ಎಂದು ಅರ್ಥವು. ಈ ಅರ್ಥದ ಉದಾಹರಣೆಗಾಗಿ—

ಆ ಶ್ಯೇನಸ್ಯ ಜವಸಾ ನೂತನೇನಾಸ್ಮೇ ಯಾತಂ ನಾಸತ್ಯಾ ಸಜೋಷಾಃ ।
ಹವೇ ಹಿ ವಾಮಶ್ವಿನಾ ರಾತಹವ್ಯಃ ಶಶ್ವತ್ತಮಾಯಾ ಉಷಸೋ ವ್ಯುಷ್ಟೌ ।

(ಋ. ಸಂ ೧-೧೧೮-೧೧)

ಎಂಬ ಋಕ್ಕನ್ನು ಕೊಟ್ಟಿರುವರು ಈ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಕ್ಕೆ ಅಸ್ಮಾನ್-ನಮ್ಮನ್ನು ಎಂದರ್ಥವು

(೩) **ಅಸ್ಮೇ ಸಮಾನೇಭಿರ್ವೃಷಭ ಸೌಂಸ್ಯೇಭಿಃ** । **ಅಸ್ಮಾಭಿರಿತ್ಯರ್ಥಃ** ॥

ತೃತೀಯಾಸ್ತಾವತ್— ಇಲ್ಲಿ ಅಸ್ಮೇ ಎಂದರೆ ಅಸ್ಮಾಭಿಃ-ನಮ್ಮಿಂದ ಎಂದು ತೃತೀಯಾವಿಭಕ್ತ್ಯರ್ಥವು ಈ ವಿಷಯದಲ್ಲಿ--

ಭೂರಿ ಚಕರ್ಥ ಯುಜ್ಯೇಭಿರಸ್ಮೇ ಸಮಾನೇಭಿರ್ವೃಷಭ ಪೌಂಸ್ಯೇಭಿಃ ।
ಭೂರೀಣಿ ಹಿ ಕೃಣವಾಮಾ ಶವಿಷ್ಠೇಂದ್ರ ಕ್ರತ್ವಾ ಮರುತೋ ಯದ್ವಶಾಮ ॥

(ಋ. ಸಂ ೧-೧೬೫-೭)

ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು. ಇಲ್ಲಿ **ಅಸ್ಮೇ** ಎಂದರೆ **ಅಸ್ಮಾಭಿಃ**-ನವಿಂದ ಎಂದರ್ಥವು

(೪) **ಅಸ್ಮೇ ಪ್ರಯಂಧಿ ಮಘವನ್ಬೃಜೀಷಿನ್ । ಅಸ್ಮಭ್ಯಮಿತ್ಯರ್ಥಃ ॥**

ಚತುರ್ಥ್ಯಾಸ್ತಾವತ್- ಇಲ್ಲಿ ಅಸ್ಮೇ ಎಂದರೆ ಅಸ್ಮಭ್ಯಂ ನಮಗಾಗಿ ಎಂದು ಚತುರ್ಥೀವಿಭಕ್ತ್ಯರ್ಥವು ಉದಾಹರಣೆ-

ಅಸ್ಮೇ ಪ್ರ ಯಂಧಿ ಮಘವನ್ಬೃಜೀಷಿನ್ನಿಂದ್ರ ರಾಯೋ ವಿಶ್ವವಾರಸ್ಯ ಭೂರೇಃ ।
ಅಸ್ಮೇ ಶತಂ ಶರದೋ ಜೀವಸೇ ಧಾ ಅಸ್ಮೇ ವೀರಾಞ್ಛಶ್ವತ ಇಂದ್ರ ಶಿಪ್ರಿನ್ ॥

(ಋ ಸಂ ೩-೩೬-೧೦)

ಎಂಬ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಗಳಿಗೆ ಅಸ್ಮಭ್ಯಂ-ನನಗಾಗಿ ಎಂದು ಚತುರ್ಥೀ ವಿಭಕ್ತ್ಯರ್ಥವು

(೫) **ಅಸ್ಮೇ ಅರಾಚ್ಛಿದ್ದ್ವೇಷಃ ಸನುತರ್ಯುಯೋತು । ಅಸ್ಮದಿತ್ಯರ್ಥಃ ।**

ಪಂಚಮ್ಯಾಸ್ತಾವತ್—ಇಲ್ಲಿ ಅಸ್ಮೇ ಎಂದರೆ ಅಸ್ಮತ್-ನನ್ನ ದೆಶೆಯಿಂದ ಎಂಬರ್ಥವು ಉದಾಹರಣೆ—

ತಸ್ಯ ವಯಂ ಸುಮತೌ ಯಜ್ಞಿಯಸ್ಯಾಪಿ ಭದ್ರೇ ಸೌಮನಸೇ ಸ್ಯಾಮ ।
ಸ ಸುತ್ರಾಮಾ ಸ್ವವಾಁ ಇಂದ್ರೋ ಅಸ್ಮೇ ಅರಾಚ್ಛಿದ್ದ್ವೇಷಃ ಸನುತರ್ಯುಯೋತು ।

(ಋ ಸಂ ೬-೪೭-೧೩)

ಎಂಬ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಕ್ಕೆ ಅಸ್ಮತ್ ನನ್ನ ದೆಶೆಯಿಂದ ಎಂದು ಸಂಚಮ್ಯಾವಿಭಕ್ತ್ಯರ್ಥವು

(೬) **ಊರ್ವ ಇವ ಪಪ್ರಥೇ ಕಾಮೋ ಅಸ್ಮೇ । ಅಸ್ಮಾಕಮಿತ್ಯರ್ಥಃ ।**

ಷಷ್ಠ್ಯಾಸ್ತಾವತ್ -ಇಲ್ಲಿ ಅಸ್ಮೇ ಎಂದರೆ ಅಸ್ಮಾಕಂ-ನನಗೆ ಎಂದರ್ಥವು, ಈ ಅರ್ಥವಿವರಣೆಗಾಗಿ—

ಆ ನೋ ಭರ ಭಗಮಿಂದ್ರ ದ್ಯುಮಂತಂ ನಿ ತೇ ದೇಷ್ಣಸ್ಯ ಧೀಮಹಿ ಪ್ರರೇಕೇ ।
ಊರ್ವ ಇವ ಪಪ್ರಥೇ ಕಾಮೋ ಅಸ್ಮೇ ತಮಾ ಪೃಣ ವಸುಪತೇ ವಸೂನಾಂ ॥

(ಋ ಸಂ ೩-೩೧-೧೯)

ಈ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಕ್ಕೆ ಅಸ್ಮಾಕಂ-ನಮ್ಮ ನನಗೆ ಎಂದು ಷಷ್ಠೀವಿಭಕ್ತ್ಯರ್ಥವು

(೭) **ಅಸ್ಮೇ ಧತ್ತ ವಸವೋ ವಸೂನಿ । ಅಸ್ಮಾಸ್ವಿತ್ಯರ್ಥಃ ॥**

ಸಪ್ತಮ್ಯಾಸ್ತಾವತ್—ಇಲ್ಲಿ ಅಸ್ಮೇ ಎಂದರೆ ನಮ್ಮಲ್ಲಿ ಎಂದರ್ಥವು ಉದಾಹರಣೆ—

ಅಗ್ನೇ ವಾಜಸ್ಯ ಗೋಮತ ಈಶಾನಃ ಸಹಸೋ ಯಹೋ ।
ಅಸ್ಮೇ ಧೇಹಿ ಜಾತವೇದೋ ಮಹಿ ಶ್ರವಃ ॥

(ಋ ಸಂ ೧-೭೯-೪)

ಈ ಋಕ್ಕಿನಲ್ಲಿರುವ ಅಸ್ಮೇ-ಎಂಬ ಶಬ್ದಕ್ಕೆ ಅಸ್ಮಾಸು-ನನ್ನಲ್ಲಿ ಎಂದು ಸಪ್ತಮೀವಿಭಕ್ತ್ಯರ್ಥವು

॥ ವ್ಯಾಕರಣಪ್ರಕ್ರಿಯಾ ॥

ಗೋಮತಃ— ಗಾವಃ ಅಸ್ಯ ಅಸ್ತಿ ಗೋಮಾನ್ ತಸ್ಯ. **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** ಎಂಬುದರಿಂದ ಮತುಪ್ ಪ್ರತ್ಯಯ ಪಿತ್ತಾದುದರಿಂದ ಅನುದಾತ್ತವಾಗುತ್ತದೆ ಷಷ್ಠೀ ಏಕವಚನಾಂತರೂಪ.

ಸಹಸೋ ಯಹೋ— ಸಂಬುದ್ಧಿರೂಪವಾದುದರಿಂದ ಆಮಂತ್ರಿತಸಂಜ್ಞೆಯನ್ನು ಹೊಂದುತ್ತದೆ. **ಯಹೋ** ಎಂಬುದರ ಹಿಂದೆ **ಸಹಸೋ** ಎಂದಿರುವುದರಿಂದ **ಸುಜಾಮಂತ್ರಿತೇ ಪರಾಂಗವತ್ ಸ್ವರೇ** ಎಂಬುದರಿಂದ ಅದಕ್ಕೆ ಪರಾವಯವತ್ವವು ಬರುತ್ತದೆ. ಆಗ ಷಷ್ಠ್ಯಂತದಿಂದ ಕೂಡಿರುವ ಆ ಸಮುದಾಯಕ್ಕೆ **ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ

ಅಸ್ಮೇ— ಅಸ್ಮದ್ ಶಬ್ದ ಇದಕ್ಕೆ ಸಪ್ತಮಿಯಾ ಬಹುವಚನ (ಸುಪ್) ಸರವಾದಾಗ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ವಿಭಕ್ತಿಗೆ ಶೇ ಆದೇಶ. ಶಿತ್ತಾದುದರಿಂದ ಸರ್ವಾದೇಶವಾಗಿ ಬರುತ್ತದೆ. **ಶೇಷೇ ಲೋಪಃ** ಎಂಬುದರಿಂದ ಅಸ್ಮದ್ ಎಂಬಲ್ಲಿರುವ ಮಪರ್ಯಂತದ ಪರದಲ್ಲಿರುವ ಅದ್ ಎಂಬುದಕ್ಕೆ ಲೋಪ ಅಸ್ಮೇ ಎಂದು ರೂಪವಾಗುತ್ತದೆ

ಧೇಹಿ— ಡುಧಾಞ್ ಧಾರಣಪೋಷಣಯೋಃ ಧಾತು ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ಪಿಗೆ ಹಿ ಆದೇಶ. **ಜುಹೋತ್ಯಾದಿಭ್ಯಃ ಶ್ಲುಃ** ಎಂಬುದರಿಂದ ಶ್ಲು ವಿಕರಣ. **ಶ್ಲೌ** ಸೂತ್ರದಿಂದ ಧಾತುವಿಗೆ ದ್ವಿತ್ವ ಆಗ **ಹ್ವಿಸೋರೇದ್ಧಾವಭ್ಯಾಸಲೋಪಶ್ಚ** (ಪಾ ಸೂ. ೬-೪-೧೧೯) ಎಂಬುದರಿಂದ ಅಭ್ಯಾಸಲೋಪವೂ ಧಾತುವಿಗೆ ಏತ್ವವೂ ಬರುತ್ತವೆ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಶ್ರವಃ— ಶ್ರು ಶ್ರವಣೇ ಧಾತು. **ಸರ್ವಧಾತುಭ್ಯ ಅಸುನ್** (ಉ. ಸೂ. ೪-೬೨೪) ಎಂಬುದರಿಂದ ಅಸುನ್ ಪ್ರತ್ಯಯ ತನ್ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ ಅವಾದೇಶ **ಇಷ್ಣಾತ್ಯಾದಿರ್ನಿತ್ಯಮ್** (ಪಾ ಸೂ. ೬-೧-೧೬೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

॥ ಸಂಹಿತಾಪಾಠಃ ॥

ಸ ಇ॒ಧಾನೋ॑ ವಸು॒ಷ್ಕವಿ॒ರಗ್ನಿ॒ರೀ॑ಳೇ॒ನ್ಯೋ॑ ಗಿ॒ರಾ ।
ರೇ॒ವದ॒ಸ್ಮಭ್ಯಂ॑ ಪುರ್ವಣೀಕ ದೀದಿಹಿ ॥ ೫ ॥

॥ ಪದಪಾಠಃ ॥

ಸಃ । ಇ॒ಧಾನಃ । ವಸು॑ಃ । ಕವಿಃ । ಅ॒ಗ್ನಿಃ । ಈ॒ಳೇ॒ನ್ಯಃ । ಗಿ॒ರಾ ।
ರೇ॒ವತ್ । ಅ॒ಸ್ಮಭ್ಯಂ॑ । ಪು॒ರು॒ಽಅ॒ನೀ॒ಕ॒ । ದೀ॒ದಿ॒ಹಿ॒ ॥ ೫ ॥

॥ ಸಾಯಣಭಾಷ್ಯಂ ॥

ಸೋ೨ಗ್ನಿರಿಧಾನೋ ದೀಪನಶೀಲೋ ವಸುರ್ನಿವಾಸಯಿತಾ ಸರ್ವೇಷಾಂ ಕವಿಃ ಕ್ರಾಂತದರ್ಶನೋ ಮೇಧಾವೀ ವಾ ಗಿರಾ ಸ್ತೋತ್ರರೂಪಯಾ ವಾಚೇಳೇನ್ಯಃ ಸ್ತೋತವ್ಯೋ ಭವತಿ । ಹೇ ಪುರ್ವಣೀಕ । ಅನೀಕಂಮುಖಂ । ಪುರುಭಿರ್ಬಹ್ವೀಭಿರನೀಕಸ್ಥಾನೀಯಾಭಿರ್ಜ್ವಾಲಾಭಿರ್ಯುಕ್ತಾಗ್ನೇ ಅಸ್ಮಭ್ಯಂ ರೇವದ್ಧನಯುಕ್ತಮನ್ನಂ ಯಥಾ ಭವತಿ ತಥಾ ದೀದಿಹಿ । ದೀಪ್ಯಸ್ವ ॥ ಇಧಾನಃ । ಞ್ಇಂಧೀ ದೀಪ್ತೌ । ತಾಚ್ಛೀಲಿಕಶ್ಚಾನಶ್ । ಬಹುಲಂ ಛಂದಸೀತಿ ಶಪೋ ಲುಕ್ । ಈಳೇನ್ಯಃ । ಈಡ ಸ್ತುತೌ । ಔಣಾದಿಕ ಏನ್ಯಪ್ರತ್ಯಯಃ । ರೇವತ್ । ರಯೇರ್ಮತ್ವೌ ಬಹುಲಮಿತಿ ಸಂಪ್ರಸಾರಣಂ । ಛಂದಸೀರ ಇತಿ ಮತುಪೋ ವತ್ವಂ । ರೇಶಬ್ದಾಚ್ಚ ಮತುಪ ಉದಾತ್ತತ್ವಂ ವಕ್ತವ್ಯಂ । ಕಾ. ೬-೧ ೧೭೬-೧ । ಇತಿ ಮತುಪ ಉದಾತ್ತತ್ವಂ ॥ ದೀದಿಹಿ । ದೀದೇತಿಶ್ಛಾಂದಸೋ ದೀಪ್ತಿಕರ್ಮಾ ॥

॥ ಪ್ರತಿಪದಾರ್ಥ ॥

ಸಃ ಅಗ್ನಿಃ—ಆ ಅಗ್ನಿಯು । ಇಧಾನಃ—ಉರಿಯುವ ಸ್ವಭಾವವನ್ನುಳ್ಳವನು । ವಸುಃ—ನಿವಾಸಸ್ಥಾನಗಳನ್ನು ಕಲ್ಪಿಸುವವನು । ಕವಿಃ—ಹಿಂದೆ ನಡೆದುದೆಲ್ಲವನ್ನು ತಿಳಿಯುವವನು (ಮೇಧಾವಿಯು) । ಗಿರಾ—(ಸ್ತುತಿರೂಪವಾದ) ವಾಕ್ಯಗಳಿಂದ । ಈಳೇನ್ಯಃ—ಸ್ತುತಿಸಲ್ಪಡತಕ್ಕವನು । (ಹೇ) ಪುರ್ವಣೀಕ—ಅನೇಕ ಮುಖಗಳಿಂತಿರುವ ಜ್ವಾಲೆಗಳಿಂದ ಯುಕ್ತನಾದ ಎಲೈ ಅಗ್ನಿಯೇ । ಅಸ್ಮಭ್ಯಂ—ನನಗೆ । ರೇವತ್ ಧನಯುಕ್ತವಾದ ಅನ್ನವುಂಟಾಗುವಂತೆ । ದೀದಿಹಿ—ಪ್ರಕಾಶಿಸು

॥ ಭಾವಾರ್ಥ ॥

ಸರ್ವಜ್ಞನೂ, ನಿವಾಸಗಳನ್ನು ಕಲ್ಪಿಸುವವನೂ, ಜ್ವಲನಸ್ವಭಾವವುಳ್ಳವನೂ ಆದ ಅಗ್ನಿಯು ಸ್ತುತಿಗಳಿಂದ ಸ್ತುತ್ಯನು. ಅನೇಕ ಜ್ವಾಲೆಗಳಿಂದ ದೀಪ್ತವಾದ ಮುಖವುಳ್ಳ ಎಲೈ ಅಗ್ನಿಯೇ, ನಮಗೆ (ವಿಶೇಷ) ದ್ರವ್ಯಯುಕ್ತವಾದ ಅನ್ನವುಂಟಾಗುವಂತೆ ದೀಪ್ತನಾಗು.

English Translation

He, the blazing Agni, who is wise, and the granter of dwellings, is to be praised by our hymns: Oh; you whose mouth (glows) with many (flames) shine (propitiously so) that food-providing wealth may be ours.

॥ ವಿಶೇಷವಿಷಯಗಳು ॥

ಪುರ್ವಣೀಕ—**ಅನೀಕಂ ಮುಖಂ । ಪುರುಭಿರ್ಬಹ್ವೀಭಿರನೀಕಸ್ಥಾನೀಯಾಭಿರ್ಜ್ವಾಲಾಭಿರ್ಯುಕ್ತ** । ಅನೀಕವೆಂದರೆ ಮುಖವು. ಪುರು ಎಂದರೆ ಅನೇಕ ಅನೇಕ ಮುಖಗಳಿಂದ ಎಂದರೆ ಮುಖಸ್ಥಾನೀಯವಾದ ಅನೇಕ ಜ್ವಾಲೆಗಳಿಂದ ಯುಕ್ತನಾದ ಅಗ್ನಿಯು. ಜನರು ಮುಖದಿಂದ (ಬಾಯಿಂದ) ಭಕ್ಷಿಸುವಂತೆ ಅಗ್ನಿಯು ತನ್ನ ಜ್ವಾಲೆಯಿಂದ ಎಲ್ಲವನ್ನೂ ಭಕ್ಷಿಸುವನು (ದಹಿಸುವನು). ಆದುದರಿಂದ ಜನರಿಗೆ ಮುಖವು (ಬಾಯಿಯು) ಹೇಗೋ ಅಗ್ನಿಗೆ ಜ್ವಾಲೆಯು ಹಾಗೆ. ಅಂತಹ ಅನೇಕ ಜ್ವಾಲೆಗಳುಳ್ಳವನಾದ್ದರಿಂದ ಅನೇಕ ಮುಖಗಳುಳ್ಳ ಅಗ್ನಿಯು ಎಂದು ಋಷಿಯು ಉಪಮಾರ್ಥದಿಂದ ಅಗ್ನಿಯನ್ನು ಸಂಬೋಧನೆ ಮಾಡಿರುವನು

ಇಧಾನಃ, ಕವಿಃ, ವಸುಃ—ಈ ಶಬ್ದಗಳು ಸಾಧಾರಣನಾಗಿ ಅಗ್ನಿಯನ್ನು ಸ್ತುತಿಸುವಾಗ ಉಪಯೋಗಿಸಲ್ಪಡುವವು.

ರೇವತ್—**ಧನಯುಕ್ತಮನ್ನಂ** । ಧನಯುಕ್ತವಾದ ಅನ್ನವು ಎಂದರೆ ಧನವನ್ನೂ ಅನ್ನವನ್ನೂ ಕೊಡಬೇಕೆಂಬ ಪ್ರಾರ್ಥನೆಯು.

ದೀದಿಹಿ—ಭ್ರಾಜತೇ, ಭ್ರಾಶತೇ ಮೊದಲಾದ ಹನ್ನೊಂದು **ಜ್ವಲತಿಕರ್ಮಗಳನ್ನು** ಸೂಚಿಸುವ ಶಬ್ದಗಳ ಮಧ್ಯದಲ್ಲಿ ದೀದಯತಿ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ ೨-೭೮) ದೀದಯತಿ ಎಂದರೆ ಪ್ರಕಾಶಿಸುತ್ತಾನೆಂದೂ ದೀದಿಹಿ ಎಂದರೆ ಪ್ರಕಾಶಿಸು ಎಂದೂ ಅರ್ಥವು

॥ ವ್ಯಾಕರಣಪ್ರಕ್ರಿಯಾ ॥

ಇಧಾನಃ—ಇಂಧೀ ದೀಪ್ತೌ ಧಾತು. ಇದಕ್ಕೆ ತಚ್ಛೀಲಾರ್ಥ ತೋರುವಾಗ **ತಾಚ್ಛೀಲ್ಯವಯೋ**—(ಪಾ. ಸೂ ೩-೨-೧೨೯) ಎಂಬುದರಿಂದ ಚಾನಶ್ ಪ್ರತ್ಯಯ ಶಿತ್ವಾದುದರಿಂದ **ಕರ್ತರಿ ಶಪ್** ಸೂತ್ರದಿಂದ ಶಪ್. ಅದಕ್ಕೆ **ಬಹುಲಂ ಛಂದಸಿ** ಎಂಬುದರಿಂದ ಲುಕ್. **ಸಾರ್ವಧಾತುಕಮಪಿತ್** (ಪಾ ಸೂ. ೧-೨-೪) ಎಂಬುದರಿಂದ


ಪ್ರತ್ಯಯಕ್ಕೆ ಜಿತ್ವ ಬರುವುದರಿಂದ **ಅನಿದಿತಾಂ ಹಲ ಉಪಧಾಯಾಃ ಕ್ಡಿತಿ** ಸೂತ್ರದಿಂದ ಉಪಧಾಲೋಪ **ಪ್ರತ್ಯಯವು ಚಿತ್ತಾದುದರಿಂದ ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ **ಅಂತೋದಾತ್ತ**ವಾಗುತ್ತದೆ

ಈಳೇನ್ಯಃ—ಈಡ ಸ್ತುತೌ ಧಾತು. ಇದಕ್ಕೆ **ಟಿ**ಣಾದಿಕವಾದ ಏನ್ಯ ಪ್ರತ್ಯಯ. **ಈಳೇನ್ಯಃ** ಎಂದು ರೂಪ ವಾಗುತ್ತದೆ. ಪ್ರತ್ಯಯಸ್ವರದಿಂದ **ಮಧ್ಯೋದಾತ್ತ**ವಾಗುತ್ತದೆ.

ಗಿರಾ—ಗಿರ್ ಶಬ್ದ ತೃತೀಯಾ ಏಕವಚನಾಂತರೂಪ **ಸಾವೇಕಾಚಸ್ತೃತೀಯಾದಿಃ** (ಪಾ ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ರೇವತ್—ರಯಿ ಎಂಬುದು ಧನವಾಚಕ ಶಬ್ದ. **ರಯಿಃ ಅಸ್ಯ ಅಸ್ತಿ** ಎಂದು ಅರ್ಥ ವಿವಕ್ಷಾಮಾಡಿದಾಗ **ತದಸ್ಯಾಸ್ತಿ**—ಸೂತ್ರದಿಂದ **ಮತುಪ್** ಪ್ರತ್ಯಯ. **ರಯೇರ್ಮತೌ ಬಹುಲಂ** ಎಂಬ ವಚನದಿಂದ **ರಯಿ** ಎಂಬಲ್ಲಿ ಸಂಪ್ರಸಾರಣ. ಸಂಪ್ರಸಾರಣವನ್ನು ಹೊಂದುವುದು ಇಲ್ಲಿ ಎರಡು ವರ್ಣವಿರುವುದರಿಂದ **ನ ಸಂಪ್ರಸಾರಣೇ ಸಂಪ್ರಸಾರಣಂ** ಎಂಬುದರಿಂದ ಪೂರ್ವಕ್ಕೆ ನಿಷೇಧ. **ಇಗ್ಯಣಃ ಸಂಪ್ರಸಾರಣಂ** ಎಂಬುದರಿಂದ ಯಕಾರಕ್ಕೆ ಇಕಾರ ರೂಪ ಸಂಪ್ರಸಾರಣ ಬಂದಾಗ **ಸಂಪ್ರಸಾರಣಾಚ್ಚ** ಸೂತ್ರದಿಂದ ಪೂರ್ವರೂಪ ಅಕಾರದ ಪರದಲ್ಲಿ ಇಕಾರ ಬಂದುದರಿಂದ **ಆದ್ಗುಣಃ** ಎಂಬುದರಿಂದ ಗುಣ. **ಛಂದಸೀರಃ** (ಪಾ. ಸೂ ೮-೩-೧೫೫) ಎಂಬುದರಿಂದ ಮತುಪಿನ ಮಕಾರಕ್ಕೆ ವಕಾರಾದೇಶ ರೇವತ್ ಶಬ್ದವಾಗುತ್ತದೆ ಮತುಪ್ ಪಿತ್ತಾದುದರಿಂದ ಅನುದಾತ್ತಸ್ವರವು ಪ್ರಾಪ್ತವಾದರ **ರೇ ಶಬ್ದಾಚ್ಚ ಮತುಪ ಉದಾತ್ತತ್ವಂ ವಕ್ತವ್ಯಂ** (ಕಾ. ೬-೧-೧೬೬-೧) ಎಂಬ ವಚನದಿಂದ ಅದಕ್ಕೆ ಉದಾತ್ತ ಸ್ವರ ಬರುತ್ತದೆ

ದೀದಿಹಿ—ದೀದೀ ದೀಪ್ತಿದೇವನಯೋಃ ಧಾತು ಇದು ಕೇವಲ ಭಾಂದಸವಾದ ಧಾತು ದೀದೀಙ್ ಎಂದು ಅದಾದಿಯಲ್ಲಿ ಪರಿತವಾಗಿದೆ. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ಪಿಗೆ **ಹಿ** ಆದೇಶ ಅದಕ್ಕೆ ಅಪಿತ್ವವನ್ನು ಹೇಳಿರುವುದರಿಂದ ತನ್ನಿಮಿತ್ತವಾಗಿ ಧಾತುವಿನ ಇಕ್ಕೆಗೆ ಗುಣ ಬರುವುದಿಲ್ಲ ಅತಿಜಂತದ ಪರದಲ್ಲಿರುವುದ ರಿಂದ ನಿಘಾತಸ್ವರ ಬರುತ್ತದೆ. ॥ ೫ ॥



[ಸಂಸ್ಕಾರಾಃ]

ಕ್ಷಪೋ ರಾಜನ್ನುತ ತ್ಮನಾಗ್ನೇ ವಸ್ತೋರುತೋಷಸಃ ।
ಸ ತಿಗ್ಮಜಂಭ ರಕ್ಷಸೋ ದಹ ಪ್ರತಿ ॥ ೬ ॥

॥ ಪದಪಾಠಃ ॥

ಕ್ಷಪಃ । ರಾಜನ್ । ಉತ । ತ್ಮನಾ । ಅಗ್ನೇ । ವಸ್ತೋಃ । ಉತ । ಉಷಸಃ ।
ಸಃ । ತಿಗ್ಮಜಂಭ । ರಕ್ಷಸಃ । ದಹ । ಪ್ರತಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ರಾಜನ್ ರಾಜನಶೀಲಾಗ್ನೇ ಕ್ಷಪಃ । ಕ್ಷಪಯ । ರಾಕ್ಷಸಾದೀನ್ ಸ್ವಕೀಯೈಃ ಪುರುಷೈರ್ಬಾಧಸ್ವ । ಉತಾಪಿ ಚ ತ್ಮನಾ ನ ಕೇವಲಮನ್ಯೈರೇವಾತ್ಮನಾ ಚ ತಾನ್ಬಾಧಸ್ವ । ಕದೇತಿ ಚೇತ್ ಉಚ್ಯತೇ । ವಸ್ತೋಃ ಸರ್ವಾಣ್ಯಹಾನಿ ಉತಾಪಿ ಚೋಷಸ ಉಷಃಕಾಲೋಪಲಕ್ಷಿತಾ ರಾತ್ರೀಃ । ಅತ್ಯಂತ ಸಂಯೋಗೇ ದ್ವಿತೀಯಾ । ಸರ್ವೇಷ್ವಹಃಸು ಸರ್ವಾಸು ರಾತ್ರಿಷು ಚೇತ್ಯರ್ಥಃ । ಹೇ ತಿಗ್ಮಜಂಭ ತೀಕ್ಷ್ಣಮುಖಾಗ್ನೇ ರಕ್ಷಸೋ ರಾಕ್ಷಸಾನುಕ್ತಪ್ರಕಾರೇಣ ಕ್ಷಪಯಿತ್ವಾ ಸ ಏವ ತ್ವಂ ಪ್ರತಿ ದಹ । ಪ್ರತ್ಯೇಕಂ ದಹ । ನ ಕಿಂಚಿದ್ಪದ್ಗವ್ಯಮಿತ್ಯುದಾಸ್ತೇತ್ಯರ್ಥಃ ॥ ಕ್ಷಪಃ । ಕ್ಷಪ ಕ್ಷಾಂತ್ಯಾಂ । ಲೋಡರ್ಥೇ ಛಾಂದಸೋ ಲಙ್ । ಛಂದಸ್ಯುಭಯಥೇತಿ ತಪ ಆರ್ಧಧಾತುಕತ್ವಾನ್ನೇರನಿಟೀತಿ ಣಿಲೋಪಃ । ಉದಾತ್ತನಿವೃತ್ತಿಸ್ವರೇಣ ತಪ ಉದಾತ್ತತ್ವಂ । ತ್ಮನಾ । ಮಂತ್ರೇಷ್ವಾಙ್ಯಾದೇರಾತ್ಮನ ಇತ್ಯಾಕಾರಲೋಪಃ । ರಕ್ಷಸಃ ರಕ್ಷ ಪಾಲನೇ । ರಕ್ಷಿತವ್ಯಮಸ್ಮಾದಿತಿ ರಕ್ಷಃ । ಭೀಮಾದಿತ್ವಾತ್ । ಪಾ ೩-೪-೭೪ । ಆಪಾದಾನೇ೭ಸಿ-ಪ್ರತ್ಯಯಃ । ಕ್ಷರತೀರ್ವಾ ಣ್ಯಂತಾದಸಿಪ್ರತ್ಯಯೇ ಣಿಲೋಪೋ ವರ್ಣವಿಪರ್ಯಯೇಣ । ಅಸ್ಯ ಚ ರಕ್ಷಃ ಶಬ್ದಸ್ಯಾಸಿಪ್ರತ್ಯಯಾಂತತ್ವಾತ್ಪ್ರತ್ಯಯಸ್ವರ ಏವ ಶಿಷ್ಯತೇ ॥

॥ ಪ್ರತಿಪದಾರ್ಥ ॥

ರಾಜನ್ -ಪ್ರಕಾಶಶೀಲನಾದ । ಅಗ್ನೇ—ಎಲೈ ಅಗ್ನಿಯೇ । ವಸ್ತೋಃ—(ಎಲ್ಲಾ) ಹಗಲುಗಳಲ್ಲಿಯೂ । ಉತ—ಮತ್ತು । ಉಷಸಃ—ಉಷಃಕಾಲ ಸಹಿತವಾದ ರಾತ್ರಿಯಲ್ಲಿಯೂ । ಕ್ಷಪಃ—(ನಿನ್ನ ಕಡೆಯ ಪುರುಷರಿಂದ ರಾಕ್ಷಸರನ್ನು) ನಾಶಮಾಡಿಸು । ಉತ—ಮತ್ತು । ತ್ಮನಾ—ಸ್ವತಃ ನೀನೂ ಸಹ (ರಾಕ್ಷಸರನ್ನು ಬಾಧೆಪಡಿಸು) । ತಿಗ್ಮಜಂಭ—ತೀಕ್ಷ್ಣಮುಖವುಳ್ಳ ಎಲೈ ಅಗ್ನಿಯೇ । ಸಃ—ಈದೇ (ನೀನು) । ರಕ್ಷಸಃ—ರಾಕ್ಷಸರನ್ನು (ನಾಶಪಡಿಸಿ) । ಪ್ರತಿ ದಹ—ಪ್ರತ್ಯೇಕವಾಗಿ ದಹಿಸು.

॥ ಭಾವಾರ್ಥ ॥

ಪ್ರಕಾಶಮಾನನಾದ ಎಲೈ ಅಗ್ನಿಯೇ, ಹಗಲಿನಲ್ಲಾಗಲೀ, ರಾತ್ರಿಯಲ್ಲಿ ಯಾಗಲೀ, ನೀನೇ ಸ್ವತಃ ಅಥವಾ, ನಿನ್ನ ಕಡೆಯವರಿಂದ ರಾಕ್ಷಸರನ್ನು ನಾಶಪಡಿಸು, ತೀಕ್ಷ್ಣಮುಖವುಳ್ಳ ಎಲೈ ಅಗ್ನಿಯೇ. ನೀನು (ಈರೀತಿ) ರಾಕ್ಷಸರನ್ನು ಜೆನ್ನಾಗಿ ದಹಿಸಿ ನಾಶಮಾಡು.

English Translation

Shining Agni, drive off (all disturbers of the rite), either by yourself or (your servants), whether by day or by night, sharp-visaged Agni, destroy the Rakshasas, entirely.

ವಿಶೇಷವಿವರಣೆಗಳು

ರಾರ್ಜ – ಪ್ರಕಾಶಮಾನನಾದ ಅಗ್ನಿಯೆ ಯಾವಾಗಲೂ ಪ್ರಕಾಶಿಸುವ ಸ್ವಭಾವವುಳ್ಳವನು

ಕ್ಷಪಃ–**ಕ್ಷಪಃ ಕ್ಷಾಂತ್ಯಾಂ** । **ಕ್ಷಪಯ, ಬಾಧಸ್ವ** । ಹಿಂಸಿಪಡಿಸು, ನಾಶಮಾಡು

ತ್ಮನಾ—**ಆತ್ಮನಾ** । ಸ್ವತಃ ನೀನೂ ಸಹ । ಇಲ್ಲಿ ಛಂದಸ್ಸಿನ ಅನುಕೂಲಕ್ಕಾಗಿ ಆತ್ಮನಾ ಎಂಬ ಶಬ್ದದ ಆಕಾರವು ಲೋಪವಾಗಿ ತ್ಮನಾ ಎಂದು ಮಾತ್ರ ಪರಿತವಾಗಿರುವುದು ಈ ಶಬ್ದವು ಇದೇ ರೀತಿ—

ಆವ ತ್ಮನಾ ಭರತೇ ಕೇತವೇದಾ ಅವ ತ್ಮನಾ ಭರತೇ ಫೇನಮುದನ್

(ಋ. ಸಂ. ೧-೧೦೪-೩)

ಜಗ್ಮಂಭಾ ದೂರಆದಿಶಂ ಶ್ಲೋಕಮದ್ರೇರಧ ತ್ಮನಾ ।

(ಋ. ಸಂ. ೧-೧೪೯-೧೦)

ತ್ವಂ ವಾತೈರರುಣೈರ್ಯಾಸಿ ಶಂಗಯಸ್ತ್ವಂ ಪೂಷಾ ವಿಧತಃ ಪಾಸಿ ನು ತ್ಮನಾ ।

(ಋ. ಸಂ. ೬-೧-೬)

ಜಾತ ಆಪೃಣೋ ಭುವನಾನಿ ರೋದಸೀ ಅಗ್ನೇ ತಾ ವಿಶ್ವಾ ಪರಿಭೂರಸಿ ತ್ಮನಾ ।

(ಋ. ಸಂ. ೩-೩-೧೦)

ಪರಿ ತ್ಮನಾ ಮಿತದ್ರುರೇತಿ ಹೋತಾಗ್ನಿರ್ಮಂದ್ರೋ ಮಧುವಚಾ ಋತಾವಾ ।

(ಋ. ಸಂ. ೪-೬-೫)

ಇತ್ಯಾದಿ ಅನೇಕ ಋಕ್ಕುಗಳಲ್ಲಿ ಆತ್ಮನಾ ಎಂಬ ಅರ್ಥದಲ್ಲಿ ಪ್ರಯೋಕ್ತವಾಗಿದೆ

ವಸ್ತೋಃ ಉಷಸಃ—ವಸ್ತೋಃ ಸರ್ವಾಣ್ಯಹಾನಿ, ಉಷಃಕಾಲೋಪಲಕ್ಷಿತಾ ರಾತ್ರೀಶ್ಚ । ಉಷಃಕಾಲಯುಕ್ತವಾದ ರಾತ್ರಿಕಾಲಗಳಲ್ಲಿಯೂ ಹಗಲಿನಲ್ಲಿಯೂ ಸಹ ವಸ್ತೋಃ ಎಂಬ ಶಬ್ದವು ಹನ್ನೆರಡು ಅಹರ್ನಾಮಗಳಲ್ಲಿ ಪರಿತವಾಗಿರುವುದು (ನಿ ೭-೧೧) ಇಲ್ಲಿ ಉಷಸಃ ಎಂಬ ಶಬ್ದವು ಉಷಃಕಾಲವನ್ನು ಸೂಚಿಸುವುದಾಗಿದ್ದರೂ ಸೂರ್ಯೋದಯಕ್ಕೆ ಮುಂಚಿತವಾಗಿರುವ ಉಷಃಕಾಲವು ರಾತ್ರಿಕಾಲಕ್ಕೇ ಸೇರಿದ್ದಾಗಿರುವುದು ಆದುದರಿಂದ ಉಷಃಕಾಲಯುಕ್ತವಾದ ರಾತ್ರಿಕಾಲವೆಂದು ಭಾಷ್ಯಕಾರರು ಹೇಳಿರುವರು ಅಥವಾ ಈ ಋಕ್ಕಿನಲ್ಲಿ ವಸ್ತೋಃ ಎಂಬ ಅಹರ್ನಾಮದ ಜತೆಯಲ್ಲಿ ಉಷಸಃ ಎಂಬ ಶಬ್ದವು ಪರಿತವಾಗಿರುವುದರಿಂದ ಹಗಲು ಮತ್ತು ರಾತ್ರಿಕಾಲಗಳಲ್ಲಿ ಎಂಬ ಸಾಮಾನ್ಯಾರ್ಥವನ್ನು ಕೇಳಬಹುದು.

ತಿಗ್ಮಜಂಭ—ತಿಗ್ಮವೆಂದರೆ ತೀಕ್ಷ್ಣನೆಂದರ್ಥವು. ತಿಗ್ಮಜಂಭವೆಂದರೆ ತೀಕ್ಷ್ಣಮುಖ, ಸುಡುವ ಸ್ವಭಾವ ವುಳ್ಳವನು ಎಂದರ್ಥವು. ಸಾಧಾರಣವಾಗಿ ಈ ಶಬ್ದವು ಅಗ್ನಿಗೆ ವಿಶೇಷಣವಾಗಿಯೇ ಉಪಯೋಗಿಸಲ್ಪಡುವುದು. ಈ ಶಬ್ದವು ಋಗ್ವೇದದಲ್ಲಿ--

ಪ್ರ ತೇ ಅಗ್ನಿರ್ಭಭಸತ್ತಿಗ್ಮಜಂಭಸ್ತಪಿಷ್ಠೇನ ಶೋಚಿಷಾ ಯಃ ಸುರಾಧಾಃ ।

(ಋ ಸಂ. ೪-೫-೪)

ಅಸ್ಯ ಘಾ ವೀರ ಈವತೋಽಗ್ನೇರೀಶೀತ ಮರ್ತ್ಯಃ ।
ತಿಗ್ಮಜಂಭಸ್ಯ ಮೀಳ್ಹುಷಃ ॥

(ಋ ಸಂ. ೪-೧೫-೫)

ತಿಗ್ಮಜಂಭಾಯ ತರುಣಾಯ ರಾಜತೇ ಪ್ರಯೋ ಗಾಯಸ್ಯಗ್ನಯೇ ।

(ಋ ಸಂ ೮-೧೯-೨೨)

ಯಜ್ಞಾನಾಂ ರಥ್ಯೇ ವಯಂ ತಿಗ್ಮಜಂಭಾಯ ವೀಳವೇ ।

(ಋ ಸಂ ೮-೪೪-೨೭)

ಎಂಬ ಋಕ್ಕುಗಳಲ್ಲಿ ಮಾತ್ರ ಇರುವುದು ಇನ್ನೆಲ್ಲಿಯೂ ಇಲ್ಲ ಈ ಸ್ಥಳಗಳಲ್ಲೆಲ್ಲಾ ಈ ಶಬ್ದವು ಅಗ್ನಿಪರವಾಗಿಯೇ ಉಪಯೋಗಿಸಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಕ್ಷಪಃ—ಕ್ಷಪ ಕ್ಷಾಂತ್ಯಾಂ ಧಾತು. ಲೋಡರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ಲಙ್. ಣಿಜರ್ಥ ತೋರುವುದರಿಂದ **ಹೇತುಮತಿ ಚ** (ಪಾ ಸೂ ೩-೧-೨೬) ಎಂಬುದರಿಂದ ಣಿಚ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಇಕಾರಕ್ಕೆ ಲೋಪ. **ಕರ್ತರಿ ಶಪ್** ಸೂತ್ರದಿಂದ ಶಪ್ **ಛಂದಸ್ಯುಭಯಥಾ** ಎಂಬುದರಿಂದ ಶಪ್ಪಿಗೆ ಆರ್ಧಧಾತುಕಸಂಜ್ಞೆಯೂ ಬರುವುದರಿಂದ **ಸೇರ್ಯನಿಟಿ** (ಪಾ ಸೂ. ೬-೪-೫೧) ಎಂಬುದರಿಂದ ಣಿಚ್ಚಿಗೆ ಲೋಪ ಸಕಾರಕ್ಕೆ ರುತ್ವ ವಿಸರ್ಗ **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಶಪ್ ಪಿತ್ತಾದುದರಿಂದ ಅನುದಾತ್ತ. ಅನುದಾತ್ತವನ್ನ್ ನಿಮಿತ್ತೀಕರಿಸಿ ಉದಾತ್ತವಾದ ಣಿಚ್ ಲೋಪವಾದುದರಿಂದ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** (ಪಾ. ಸೂ ೬-೧-೧೬೧) ಎಂಬುದರಿಂದ ಶಪ್ಪಿಗೆ ಉದಾತ್ತಸ್ವರ ಬರುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ತ್ಮನಾ—ಆತ್ಮನಾ ಎಂದು ಆತ್ಮನ್ ಶಬ್ದದ ತೃತೀಯಾ ಏಕವಚನಾಂತರೂಪ. **ಮಂತ್ರೇಷ್ವಾಙ್ಯಾದೇರಾತ್ಮನಃ** (ಪಾ. ಸೂ ೬-೪-೧೪೮) ಎಂಬುದರಿಂದ ಸಂಹಿತಾದಲ್ಲಿ ಆಕಾರಲೋಪ ಬರುತ್ತದೆ.

ರಕ್ಷಸೇ—ರಕ್ಷ ಪಾಲನೇ ಧಾತು. ರಕ್ಷಿತವ್ಯಮಸ್ಯಾದಿತಿ ರಕ್ಷಃ (ಇವರಿಂದ ಜನರನ್ನು ರಕ್ಷಿಸಬೇಕು) ಭೀಮಾದಿಯಲ್ಲಿ ಸೇರಿರುವುದರಿಂದ **ಭೀಮಾದಯೋಽಪಾದಾನೇ** (ಪಾ ಸೂ ೩-೪-೭೪) ಎಂಬುದರಿಂದ ಅಪಾದಾ

ನಾರ್ಥದಲ್ಲಿ ಅಸಿ ಪ್ರತ್ಯಯ. ರಕ್ಷಸ್ ಶಬ್ದವಾಗುತ್ತದೆ. ಅಥವಾ ಕ್ಷರ ಧಾತುವಿಗೆ ಣಿಚ್ ಮಾಡಿದಾಗ ಣಿಜಂತದ ಮೇಲೆ ಹಿಂದಿನಂತೇ ಅಸಿ ಪ್ರತ್ಯಯ. **ಣೇರನಿಟಿ** ಸೂತ್ರದಿಂದ ಣಿಲೋಪ ಭಾಂದಸವಾಗಿ ವರ್ಣವಿಪರ್ಯಯ ಬರುತ್ತದೆ. ಪ್ರತ್ಯಯ ಸ್ವರದಿಂದ ರಕ್ಷಸ್ ಶಬ್ದ ಅಂತೋದಾತ್ತವಾಗುತ್ತದೆ.

ದಹ—ದಹ ಭಸ್ಮೀಕರಣೇ ಧಾತು ಲೋಟ್ ಮಧ್ಯಮಪುರುಷ ಏಕವಚನರೂಪ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ಅವಾ ನೋ ಅಗ್ನ ಊತಿಭಿರ್ಗಾಯತ್ರಸ್ಯ ಪ್ರಭರ್ಮಣಿ ।
ವಿಶ್ವಾಸು ಧೀಷು ವಂದ್ಯ ॥ ೭ ॥

॥ ಪದಪಾಠಃ ॥

ಅವ । ನಃ । ಅಗ್ನೇ । ಊತಿಽಭಿಃ । ಗಾಯತ್ರಸ್ಯ । ಪ್ರಽಭರ್ಮಣಿ ।
ವಿಶ್ವಾಸು । ಧೀಷು । ವಂದ್ಯ ॥ ೭ ॥

॥ ಸಾಯಣಭಾಷ್ಯಂ

ಪ್ರಾತರನುವಾಕಸ್ಯಾಗ್ನೇಯೀ ಕೃತೌ ಗಾಯತ್ರೀ ಛಂದಸ್ಯವಾ ನೋ ಅಗ್ನ ಇತ್ಯಾದ್ಯಾಃ ಸಪ್ತರ್ಚಃ। ಸೂತ್ರಿತಂ ಚ । ಅವಾನೋ ಅಗ್ನ ಇತಿ ಸಳಗ್ನಿಮಿಳೇ೨ಗ್ನಿಂ ದೂತಂ । ಆ. ೪-೧೩ । ಇತಿ ॥ ಆಶ್ವಿನಶಸ್ತ್ರೇ ಚೈತಾಃ ತಂಸನೀಯಾಃ ಪ್ರಾತರನುವಾಕಾತಿದೇಶಾತ್ ॥

ವಿಶ್ವಾಸು ಧೀಷು ಸರ್ವೇಷು ಕರ್ಮಸು ವಂದ್ಯ ಸ್ತುತ್ಯ ಹೇ ಅಗ್ನೇ ಗಾಯತ್ರಸ್ಯ ಗಾಯತ್ರ ಸಾಮ್ನೋ ಗಾಯತ್ರೀಚ್ಛಂದಸ್ಕಸ್ಯ ಸೂಕ್ತಸ್ಯ ವಾ ಪ್ರಭರ್ಮಣಿ ಪ್ರಭರಣೇ ಸಂಪಾದನೇ ನಿಮಿತ್ತಭೂತೇ ಸತಿ ಸೋ೨ಸ್ಮಾನೂತಿಭಿಸ್ತ್ವದಿಯೈಃ ಪಾಲನೈರವ । ರಕ್ಷ ॥ ಅವ । ದ್ವಚ್ಕೋ೨ತಸ್ತಿಙ ಇತಿ ಸಂಹಿತಾಯಾಂ ದೀರ್ಘತ್ವಂ ॥

॥ ಪ್ರತಿಪದಾರ್ಥ ॥

ವಿಶ್ವಾಸು ಧೀಷು—ಎಲ್ಲಾ ಕರ್ಮಗಳಲ್ಲಿಯೂ । **ವಂದ್ಯ**—ಸ್ತುತ್ಯನಾದ । **ಅಗ್ನೇ**—ಎಲೈ ಅಗ್ನಿಯೇ । **ಗಾಯತ್ರಸ್ಯ**—ಗಾಯತ್ರವೆಂಬ ಸಾಮದ ಅಥವಾ ಗಾಯತ್ರೀ ಛಂದಸ್ಸಿನ ಸೂಕ್ತದ । **ಪ್ರಭರ್ಮಣಿ**—ಉಚ್ಚಾರ ಕರ್ಮದಲ್ಲಿ (ಉಚ್ಚಾರದಿಂದ ತುಷ್ಟನಾಗಿ) । **ನಃ**—ನಮ್ಮನ್ನು । **ಊತಿಭಿಃ**—(ನಿನ್ನ) ಪಾಲನ ಕರ್ಮಗಳಿಂದ । **ಅವ**—ರಕ್ಷಿಸು.

॥ ಭಾವಾರ್ಥ ॥

ಸರ್ವಕರ್ಮಗಳಲ್ಲಿಯೂ ಪೂಜ್ಯನಾದ ಎಲೈ ಅಗ್ನಿಯೇ, ಗಾಯತ್ರೀ ಛಂದೋಬದ್ಧವಾದ ಸೂಕ್ತದಿಂದ (ತುಷ್ಟನಾದ) ನೀನು, ನಿನ್ನ ಪಾಲನಕರ್ಮಗಳಿಂದ ನಮ್ಮನ್ನು ರಕ್ಷಿಸು

English Translation

Agni, who in all rites is to be praised, guard us with your protection (propitiated) by the recitation of the metrical hymn

॥ ವಿಶೇಷವಿಷಯಗಳು ॥

ಪ್ರಾತರನುವಾಕ ಮಂತ್ರ ಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕು ಗಳನ್ನು ಪಠಿಸುವಾಗ **ಅವಾ ನೋ ಅಗ್ನ** ಎಂದು ಮೊದಲಾಗುವ ಈ ಆರು ಋಕ್ಕುಗಳ ವಿನಿಯೋಗವಿರುವುದೆಂದು **ಆಶ್ವಲಾಯನ ಶ್ರೌತಸೂತ್ರದ—ಅವಾ ನೋ ಅಗ್ನ ಇತಿ ಷಳೆಗ್ನಿಮಿಳೇ೨ಗ್ನಿಂ ದೂತಂ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಅ. ೪-೧೩) ಪ್ರಾತರನುವಾಕಮಂತ್ರಪಠನಸಂಬಂಧದಲ್ಲಿ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಋಕ್ಕುಗಳನ್ನು ಹೇಳಬೇಕೆಂದು ಅಲ್ಲಿಯೇ ನಿರ್ದಿಷ್ಟವಾಗಿರುವುದು.

ಅವ—ಛಂದಸ್ಸಿನ ಅನುಕೂಲಕ್ಯಾಗಿ ಈ ಶಬ್ದದ ಅಂತ್ಯಾಕ್ಷರವು ಸಂಹಿತಾಸಾರದಲ್ಲಿ ದೀರ್ಘವಾಗಿರುವುದು

ಗಾಯತ್ರಸ್ಯ—ಗಾಯತ್ರವೆಂಬ ಸಾಮವೇದದ ಮಂತ್ರವೀಶೇಷದ ಅಥವಾ ಗಾಯತ್ರೀಛಂದಸ್ಸಿನಿಂದ ಸಹಿತವಾದ ಋಕ್ಕುಗಳನ್ನೊಳಗೊಂಡ ಸೂಕ್ತದ (ಸ್ತೋತ್ರದ)

ವಿಶ್ವಾಸು ಧೀಷು ವಂದ್ಯ—ಅಪಃ ಅಶ್ನಃ ಮೊದಲಾದ ಇಪ್ಪತ್ತಾರು ಕರ್ಮನಾಮಗಳ ಮಧ್ಯದಲ್ಲಿ ಧೀಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೧) **ಧೀಷು** ಎಂದರೆ ಕರ್ಮಗಳಲ್ಲಿ ಎಂದರ್ಥವು. **ವಿಶ್ವಾಸು ಧೀಷು ವಂದ್ಯ** ಎಂದರೆ ಸಮಸ್ತವಾದ ಯಜ್ಞಾದಿಕರ್ಮಗಳಲ್ಲಿಯೂ ಸ್ತುತಿಸಲ್ಪಡುವ ಅಥವಾ ನಮಸ್ಕೃತನಾದ ಅಗ್ನಿಯೆಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಅವ—ಅನ ರಕ್ಷಣೇ ಧಾತು. ಲೋಟ್ ಮಧ್ಯಮಪುರುಷ ಏಕವಚನರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಪಿತ್ವಾದುದರಿಂದ ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ. ಧಾತುವು ದ್ವ್ಯಚ್ಕವಾಗಿರುವುದರಿಂದ **ದ್ವ್ಯಚೋಽತಸ್ತಿಙಃ** (ಪಾ. ಸೂ ೬-೩-೧೩೫) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ

ಊತಿಭಿಃ—**ಊತಿಯೂತಿಜೂತಿ**–(ಪಾ ಸೂ ೩-೩-೯೭) ಎಂಬುದರಿಂದ ನಿಪಾತಿತವಾಗಿದೆ ತೃತೀಯಾ ಬಹುವಚನಾಂತರೂಪ

ವಂದ್ಯೈ—ವದಿ ಅಭಿವಾದನಸ್ತುತ್ಯೋಃ ಧಾತು ನಂದಿತುಂ ಯೋಗ್ಯಃ ವಂದ್ಯಃ. ಯತ್ ಪ್ರತ್ಯಯ ಸಂಬುದ್ಧಿಯಲ್ಲಿ ವಂದ್ಯ ಎಂದು ರೂಪವಾಗುತ್ತದೆ **ಆಮಂತ್ರಿತಸ್ಯ ಚ** (ಪಾ ಸೂ ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೬ ॥

॥ ಸಂಹಿತಾಪಾಠಃ ॥

ಆ ನೋ ಅಗ್ನೇ ರಯಿಂ ಭರ ಸತ್ರಾಸಾಹಂ ವರೇಣ್ಯಂ ।
ವಿಶ್ವಾಸು ಪೃತ್ಸು ದುಷ್ಟರಂ ॥ ೮ ॥

॥ ಪದಪಾಠಃ ॥

ಆ । ನಃ । ಅಗ್ನೇ । ರಯಿಂ । ಭರ । ಸತ್ರಾ ೩ ಸಹಂ । ವರೇಣ್ಯಂ ।
ವಿಶ್ವಾಸು । ಪೃತ್ ೩ ಸು । ದುಸ್ತರಂ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ರಯಿಂ ಧನಂ ನೋಽಸ್ಮಭ್ಯಮಾ ಭರ । ಪ್ರಯಚ್ಛ । ಕೀದೃಶಂ । ಸತ್ರಾಸಾಹಂ ಸತ್ರಾ ಸಹ ಯುಗಪದೇವ ದಾರಿದ್ರ್ಯಸ್ಯ ನಾಶಕಂ । ವರೇಣ್ಯಂ ಸರ್ವೈರ್ವರಣೀಯಂ ವಿಶ್ವಾಸು ಪೃತ್ಸು ಸರ್ವೇಷು ಸಂಗ್ರಾಮೇಷು ದುಷ್ಪರಂ ಶತ್ರುಭಿಸ್ತಿರೀತುಮಶಕ್ಯಂ ॥ ಸತ್ರಾಸಾಹಂ । ಛಂದಸಿ ಸಹ ಇತಿಣ್ಪಿಃ । ವರೇಣ್ಯಂ । ವೃಞ ಏಣ್ಯಃ । ಪೃತ್ಸು । ಪದಾದಿಷು ಮಾಂಸ್ಪೃತ್ಸ್ನಾನಾಮುಪಸಂಖ್ಯಾನಮಿತಿ ಪೃತನಾಶಬ್ದಸ್ಯ ಪೃದ್ಭಾವಃ। ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅಗ್ನೇ— ಎಲೈ ಅಗ್ನಿಯೇ । **ಸತ್ರಾಸಾಹಂ**—ಒಂದೇಕ್ಷಣದಲ್ಲಿ ದಾರಿದ್ರ್ಯನಾಶಕವಾದ । **ವರೇಣ್ಯಂ**—(ಸಮಸ್ತರಿಂದಲೂ) ಅಪೇಕ್ಷಿತವಾದ । **ವಿಶ್ವಾಸು ಪೃತ್ಸು**—ಎಲ್ಲಾ ಸಂಗ್ರಾಮಗಳಲ್ಲಿ । **ದುಷ್ಪರಂ**—ಶತ್ರುಗಳಿಂದ ಪಡೆಯಲು ಅಸಾಧ್ಯವಾದ । **ರಯಿಂ**—ಧನವನ್ನು । **ನಃ**—ನಮಗೆ । **ಆ ಭರ**—ಅನುಗ್ರಹಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಕ್ಷಣಮಾತ್ರದಲ್ಲಿ ದಾರಿದ್ರ್ಯವನ್ನು ನಾಶಪಡಿಸುವ, ಎಲ್ಲರಿಗೂ ಇಷ್ಟವಾದ ಮತ್ತು ಸಂಗ್ರಾಮಗಳಲ್ಲಿ ಶತ್ರುಗಳು ಅಪಹರಿಸಲು ಆಗದೇ ಇರುವ ಧನವನ್ನು ನಮಗೆ ಅನುಗ್ರಹಿಸು

English Translation

Grant us, Agni, riches that dispel poverty, that are desirable (to all) and cannot be taken (from us) in all encounters (with our foes)

॥ ವಿಶೇಷವಿಷಯಗಳು ॥

ಸತ್ರಾಸಾಹಂ—ಸತ್ರಾ ಎಂಬ ಶಬ್ದವು ಬಹುಶ್ರುತ್ ಮೊದಲಾದ ಅರು ಸತ್ಯನಾಮಗಳಲ್ಲಿ ಪರಿಗಣಿಸಿರುವುದರಿಂದ ಸತ್ರಾ ಎಂದರೆ ಸತ್ಯವಾಗಿ ಎಂಬರ್ಥವನ್ನು ಯಾಸ್ಕರು ಹೇಳಿರುವರು. (ನಿ. ೩-೧೩) ಆದರೆ ಭಾಷ್ಯಕಾರರು ಈ ಋಕ್ಕಿನಲ್ಲಿ ಸತ್ರಾ ಎಂಬ ಶಬ್ದಕ್ಕೆ ಯುಗಪತ್ ಕೂಡಲೇ ತಕ್ಷಣವೇ ಎಂದರ್ಥಮಾಡಿರುವರು ಇದಲ್ಲದೆ ಸತ್ರಾಸಹಂ ಎಂದು ಪದವಿಭಾಗವಿರುವುದರಿಂದ ಕೂಡಲೇ ದಾರಿದ್ರ್ಯವನ್ನು ನಾಶಮಾಡುವುದು ಎಂದು ದಾರಿದ್ರ್ಯಶಬ್ದವನ್ನು ಅಧ್ಯಾಹಾರಮಾಡಿರುವರು ಯಾಸ್ಕರ ವಿವರಣೆಯುಂತೆ ಸತ್ರಾ ಎಂಬ ಶಬ್ದಕ್ಕೆ ಸತ್ಯವೆಂದು ಅರ್ಥಮಾಡಿದರೂ ಸತ್ಯವಾಗಿಯೂ ದಾರಿದ್ರ್ಯವನ್ನು ನಾಶಮಾಡುವ ಎಂಬ ಅರ್ಥವೂ ಸರಿಹೋಗುವುದು. ಈ ಶಬ್ದವು ಋಗ್ವೇದದಲ್ಲಿ—

ಸತ್ರಾಸಾಹಂ ವರೇಣ್ಯಂ ಸಹೋದಾಂ ಸಸವಾಂಸಂ ಸ್ವರಪಶ್ಚ ದೇವೀಃ ।

(ಋ ಸಂ ೩-೩೪ ೮)

विवस्वतः सदने अ हि षिष्रियेऽ सत्राऽसाहमभिमातिहसं स्तुहि ।

(ಋ. ಸಂ. ೩-೫೧-೩)

क्रमु वः सत्राऽसाहं विश्वासु गीष्वाऽयतं ।

(ಋ. ಸಂ ೮-೯೨-೭)

ಎಂಬ ಋಕ್ಕುಗಳಲ್ಲಿಯೂ, **सत्राऽसहः** ಎಂಬ ಶಬ್ದವು ಋ. ಸಂ ೨-೨೧-೩ ರಲ್ಲಿಯೂ **सत्राऽसहे** ಎಂಬ ಶಬ್ದವು ಋ ಸಂ. ೨-೨೧-೨ ರಲ್ಲಿಯೂ ಪರಿಶವಾಗಿರುವುದು ಮತ್ತೆಲ್ಲಿಯೂ ಈ ಶಬ್ದದ ಪ್ರಯೋಗವಿಲ್ಲ. ಮೇಲೆ ಕೊಟ್ಟಿರುವ ಮೊದಲನೆಯ ಋಕ್ಕನ್ನು ವಿವರಿಸುವಾಗ ಭಾಷ್ಯಕಾರರು **सत्राऽसाहं** ಎಂಬ ಶಬ್ದಕ್ಕೆ **वृत्रादिशत्रूनभिभवितारं–** ಶತ್ರುವನ್ನು ಪರಾಭವಗೊಳಿಸುವವನು (ಇಂದ್ರ) ಎಂದೂ, ಎರಡನೆಯ ಉದಾಹರಣೆಯಲ್ಲಿರುವ **सत्राऽसाह** ಶಬ್ದವನ್ನು ವಿವರಿಸುವಾಗ **शत्रूणामभिभवितारं** ಎಂಬ ಅದೇ ಅರ್ಥವನ್ನು ಹೇಳಿರುವರು. ಋ. ಸಂ. ೨-೨೧-೨ ಮತ್ತು ೨-೨೧-೩ ಋಕ್ಕುಗಳಲ್ಲಿಯೂ ಸಹ ಶತ್ರುಗಳನ್ನು ಪರಾಭವಗೊಳಿಸು ಎಂಬ ಅರ್ಥವನ್ನೇ ಹೇಳಿರುವರು. ಪ್ರಸಕ್ತ ಋಕ್ಕಿನಲ್ಲಿಯೂ ಸಹ ಈ ಅರ್ಥವನ್ನು ಹೇಳಬಹುದು

वरेण्यं--सर्वैर्वरणीयं । ಎಲ್ಲರಿಂದಲೂ ಅಪೇಕ್ಷಿಸಲ್ಪಡುವ ಧನವನ್ನು ಎಲ್ಲರೂ ಅಪೇಕ್ಷಿಸುವರು

पृत्सु-- ರಣಃ ಸಿವಾಕ್ ಮೊದಲಾದ ನಲವತ್ತಾರು ಸಂಗ್ರಾಮನಾಮಗಳ ಮಧ್ಯದಲ್ಲಿ ಪೃತ್ಸು ಎಂಬ ಶಬ್ದವು ಪರಿಶವಾಗಿರುವುದರಿಂದ ಈ ಶಬ್ದಕ್ಕೆ ಯುದ್ಧಗಳಲ್ಲಿ ಎಂದರ್ಥವು (ನಿ ೩-೯) ಈ ಶಬ್ದವು ಸಾಧಾರಣವಾಗಿ ಬಹುವಚನದಲ್ಲಿಯೇ ಪ್ರಯೋಗಿಸಲ್ಪಡುವುದು

दुष्परं—दुः-तरं । ಕಷ್ಟಸಾಧ್ಯವಾದ, ಹೊಂದುವುದಕ್ಕೆ ಅಸಾಧ್ಯವಾದ ಎಂದರೆ ಒಟ್ಟು ಶ್ರಮದಿಂದ ಮಾತ್ರ ಸಂಪಾದಿಸಲು ಸಾಧ್ಯವಾದ ಧನವೆಂದಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ಭರ- ಭೃಞ್ ಹರಣೇ ಧಾತು **लोटि** ಮಧ್ಯಮಪುರುಷ ಏಕವಚನದಲ್ಲಿ **हर** ಎಂದು ರೂಪವಾಗುತ್ತದೆ. **हृग्रहोर्भश्छन्दसि** ಎಂಬ ವಚನದಿಂದ ಸಂಹಿತಾದಲ್ಲಿ ಹಕಾರಕ್ಕೆ ಭಕಾರ ಆದೇಶ ಆತಿಙಂತದ ಪದದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

सत्राऽसाहम्—ಷಹ ಮರ್ಷಣೇ ಧಾತು **धात्वादेः षः सः** ಎಂಬುದರಿಂದ ಆದಿಗೆ ಸತ್ವ. **ष्टुंडसि सहः** (ಪಾ. ಸೂ. ೩-೨-೬೩) ಎಂಬುದರಿಂದ ಇದಕ್ಕೆ ಇಞ್ ಪ್ರತ್ಯಯ ಣಿತ್ವಾದುದರಿಂದ **अत उपधायाः** (ಪಾ. ಸೂ ೭-೨-೧೧೬) ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ **अन्येषामपि—**(ಪಾ ಸೂ. ೬-೩-೧೩೭) ಎಂಬುದರಿಂದ ಪೂರ್ವಪದಕ್ಕೆ ದೀರ್ಘ **गतिकारकोपपदात् कृत्** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ ದ್ವಿತೀಯಾ ಏಕವಚನಾಂತರೂಪ.

ವರೇಣ್ಯಮ್—ವೃಞ್ ವರಣೇ ಧಾತು. **ವೃಞಾ ಏಣ್ಯಃ**—(ಉ. ಸೂ. ೩–೩೭೪) ಎಂಬುದರಿಂದ ಇದಕ್ಕೆ ಏಣ್ಯ ಪ್ರತ್ಯಯ ತನ್ನಿಮಿತ್ತವಾಗಿ **ಸಾರ್ವಧಾತುಕಾರ್ಧ**—ಸೂತ್ರದಿಂದ ಧಾತುವಿನ ಇಕ್ಕೆಗೆ ಗುಣ **ವರೇಣ್ಯ** ಎಂದು ರೂಪವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ಪೃತ್ಸು—ಪೃತನಾ ಶಬ್ದ. ಇದಕ್ಕೆ ಸಪ್ತಮಿ ಬಹುವಚನಪರವಾದಾಗ **ಮಾಂಸ, ಪೃತನಾ ಸಾನೂನಾಂ ಮಾಂಸ್, ಪತ್, ಸ್ನವೋ ಶಸಾದೌ ನಾ ವಾಚ್ಯಾಃ** ಎಂಬ ವಾರ್ತಿಕದಿಂದ ಪೃತಾದೇಶ. **ಸಾವೇಕಾಚಸ್ತೃತೀಯಾದಿಃ** (ಪಾ. ಸೂ. ೬–೧–೧೭೮) ಎಂಬುದರಿಂದ ಏಕಾಚಾದುದರಿಂದ ಇದರ ಪರದಲ್ಲಿರುವ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ದುಷ್ಪರಮ್—ದುಃಖೇನ ಕರ್ತುಂ ಶಕ್ಯಂ ದುಷ್ಕರಮ್ ತೃ ಪ್ಲವನತರಣಯೋಃ ಧಾತು. ಇದಕ್ಕೆ ದುಸ್ ಎಂಬುದು ಉಪಪದವಾದಾಗ **ಈಷದ್ದುಃಸ್ಸುಷುಕೃ**—(ಪಾ. ಸೂ. ೩–೩–೧೨೬) ಎಂಬುದರಿಂದ ಕೃಚ್ಛ್ರ ಎಂಬರ್ಥ ತೋರುವಾಗ ಖಲ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿನ ಇಕ್ಕೆಗೆ ಗುಣ. **ಲಿತಿ** (ಪಾ. ಸೂ ೬–೧–೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ ॥ ೮ ॥

॥ ಸಂಹಿತಾಪಾಠಃ ॥

ಆ ನೋ ಅಗ್ನೇ ಸುಚೇತುನಾ ರಯಿಂ ವಿಶ್ವಾಯುಪೋಷಸಂ ।
ಮಾರ್ಡೀಕಂ ಧೇಹಿ ಜೀವಸೇ ॥ ೯ ॥

॥ ಪದಪಾಠಃ ॥

ಆ । ನಃ । ಅಗ್ನೇ । ಸು ಚೇತುನಾ । ರಯಿಂ । ವಿಶ್ವಾಯು ಪೋಷಸಂ ।
ಮಾರ್ಡೀಕಂ । ಧೇಹಿ । ಜೀವಸೇ ॥ ೯ ॥

॥ ಸಾಯಣಭಾಷ್ಯಂ ॥

ಆಯುಷ್ಕಾಮೇಷ್ಟ್ಯಾಂ ಪ್ರಥಮಸ್ಯಾಜ್ಯಭಾಗಸ್ಯಾನುವಾಕ್ಯಾ ಆ ನೋ ಅಗ್ನ ಇತಿ । ಸೂತ್ರಿತಂ ಚ । ಆಯುಷ್ಕಾಮೇಷ್ಟ್ಯಾಂ ಜೀವಾತುಮಂತಾವಾ ನೋ ಅಗ್ನೇ ಸುಚೇತುನಾ । ಅ. ೨-೧೦ । ಇತಿ ॥ ಮಹಾಪಿತೃಯಜ್ಞೇ೬ಸ್ಯೈವ ಪ್ರಥಮಾಜ್ಯಭಾಗಾನುವಾಕ್ಯಾ । ಸೂತ್ರಿತಂ ಚ । ಜೀವಾತುಮಂತೌ ಸವ್ಯೋತ್ತಮಯಜುಷಸ್ತಾಃ । ಅ. ೨-೧೯ । ಇತಿ ॥

ಹೇ ಅಗ್ನೇ ನೋ೬ಸ್ಮಾಕಂ ಜೀವಸೇ ಜೀವನಾಯ ಸುಚೇತುನಾ ಶೋಭನೇನ ಜ್ಞಾನೇನ ಯುಕ್ತಂ ರಯಿಂ ಧನಮಾ ಧೇಹಿ । ಆಸ್ಥಾಪಯ । ಕೀದೃಶಂ । ಮಾರ್ಡೀಕಂ । ಮೃಡೀಕಂ ಸುಖಂ । ತದ್ಧೇತುಭೂತಂ । ವಿಶ್ವಾಯುಪೋಷಸಂ ಸರ್ವಸ್ಮಿನ್ನಾಯುಷಿ ದೇಹಾದೇಃ ಪೋಷಕಂ । ಯಾವಜ್ಜೀವಮಸ್ಮದುಪಭೋಗಪರ್ಯಾಪ್ತಮಿತ್ಯರ್ಥಃ । ಸುಚೇತುನಾ । ಚಿತೀ ಸಂಜ್ಞಾನೇ । ಔಣಾದಿಕ ಉಪ್ರತ್ಯಯಃ । ಕೃದುತ್ತರಪದಪ್ರಕೃತಿಸ್ವರತ್ವಂ । ವಿಶ್ವಾಯುಪೋಷಸಂ । ವಿಶ್ವಮಾಯುರ್ಯಸ್ಮಿನ್ ಶರೀರಾದೌ ತದ್ವಿಶ್ವಾಯು । ಬಹುವ್ರೀಹೌ ವಿಶ್ವಂ ಸಂಜ್ಞಾಯಾಮಿತಿ ಪೂರ್ವಪದಾಂತೋದಾತ್ತತ್ವಂ । ತತ್ಪುಷ್ಣಾತೀತಿ ವಿಶ್ವಾಯುಪೋಷಾಃ । ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚೇತ್ಯಸುನ್ ಪೂರ್ವಪದ ಪ್ರಕೃತಿಸ್ವರತ್ವಂ ಚ । ಸಕಾರಲೋಪಶ್ಛಾಂದಸಃ । ದೀರ್ಘಾಯುತ್ವಾಯ ವರ್ಚಸ ಇತಿ ಯಥಾ ॥

॥ ಪ್ರತಿಪದಾರ್ಥ ॥

ಅಗ್ನೇ – ಎಲೈ ಅಗ್ನಿಯೇ, । **ನಃ** ನಮ್ಮ । **ಜೀವಸೇ**—ಜೀವನಕ್ಕಾಗಿ । **ಸುಚೇತುನಾ** ಒಳ್ಳೆಯ ಜ್ಞಾನಯುಕ್ತವಾದ । **ಮಾರ್ಡೀಕಂ** – ಸುಖಕರವಾದ । **ವಿಶ್ವಾಯುಪೋಷಸಂ**—ಜೀವಾವಧಿ (ದೇಹಾದಿ) ಪೋಷಕವಾದ । **ರಯಿಂ**—ಧನವನ್ನು । **ಆ ಧೇಹಿ**—ಚೆನ್ನಾಗಿ ಸ್ಥಾಪಿಸು (ಕೊಡು.)

॥ ಭಾವಾರ್ಥ

ಎಲೈ ಅಗ್ನಿಯೇ, ನಮ್ಮ ಜೀವನಕ್ಕಾಗಿ, ಒಳ್ಳೆಯ ಜ್ಞಾನಸಹಿತವಾದ, ಸುಖಕರವಾದ ಮತ್ತು (ನಮ್ಮ) ಜೀವಾವಧಿ (ದೇಹಾದಿಗಳನ್ನು) ಪೋಷಿಸುವ ಧನವನ್ನು (ನೆಲೆಯಾಗಿ) ನಿಲ್ಲಿಸು.

English Translation

Grant us, Agni, for our livelihood, wealth with sound understanding, conferring happiness, and sustaining (us) through life.

॥ ವಿಶೇಷವಿಷಯಗಳು ॥

ಆಯುಷ್ಕಾಮೇಷ್ಟಿಯಲ್ಲಿ ಹೋಮಮಾಡುವ ಎರಡು ಆಜ್ಯಭಾಗವೆಂಬ ಆಹುತಿಗಳಲ್ಲಿ ಮೊದಲನೆಯ ಆಹುತಿಯನ್ನು ಹೋಮಮಾಡುವಾಗ **ಆ ನೋ ಅಗ್ನೇ** ಎಂಬ ಈ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿ ಉಪಯೋಗಿಸ

ಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆಯುಷ್ಮಾನೇಷ್ಯಾಂ ಜೀವಾತುಮಂತಾವಾ ನೋ ಅಗ್ನೇ ಸುಚೇತುನಾ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೨-೧೦) ಮಹಾಪಿತೃಯಜ್ಞದಲ್ಲಿಯೂ ಕೂಡ ಪ್ರಥಮಾದ್ಯ ಭಾಗ ಹೋಮದಲ್ಲಿ ಪುರೋನುವಾಕ್ಯಮಂತ್ರವನ್ನಾಗಿ ಈ ಋಕ್ಕಿನ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತ ಸೂತ್ರದ—**ಜೀವಾತುಮಂತೌ ಸವ್ಯೋತ್ತರ್ಯುಪಸ್ಥಾಃ** ಎಂಬ ಸೂತ್ರದಿಂದ ನಿರ್ದೇಶಿಸಲ್ಪಟ್ಟಿರುವುದು (ಆ ೨-೧೯)

ಸುಚೇತುನಾ—ಚಿತೀ ಸಂಜ್ಞಾನೇ । ಶೋಭನೇನ ಜ್ಞಾನೇನ ಯುಕ್ತಂ (ರಯಿಂ) ಜ್ಞಾನದಿಂದ ಕೂಡಿದ ದ್ರವ್ಯವನ್ನು ಎಂದರೆ ಉತ್ತಮವಾದ ಜ್ಞಾನವನ್ನೂ ಧನವನ್ನೂ ಸಹ ಎರಡನ್ನೂ ಕೊಡಬೇಕೆಂದು ಪ್ರಾರ್ಥನೆಯು.

ವಿಶ್ವಾಯುಷೋಪಸಂ—ವಿಶ್ವಮಾಯುರ್ಯಸ್ಮಿನ್ ಶರೀರಾದೌ ತದ್ವಿಶ್ವಾಯು । ಸರ್ವಸ್ಮಿನ್ನಾಯುಷಿ ದೇಹಾದೇಃ ಪೋಷಕಂ । ಯಾವಜ್ಜೀವಮಸ್ಮದುಪಭೋಗಪರ್ಯಾಪ್ತಮಿತ್ಯರ್ಥಃ । ನಾವು ಜೀವಿಸಿರುವವರೆಗೂ ನಮ್ಮ ಸುಖಕ್ಕಾಗಿ ಸಾಧನಭೂತವಾದ ಧನವನ್ನು ಎಂದಭಿಪ್ರಾಯವು ಧನವಿದ್ದರೆ ದೇಹಾದಿ ಪೋಷಣೆಯು ಸಾಧ್ಯವು. ಆದುದರಿಂದ ಬಹುಕಾಲ ದೇಹಪೋಷಣೆಗೆ ಧನವು ಅತ್ಯಾವಶ್ಯಕವು

ಮಾರ್ಡೀಕಂ—ಮೃಡ ಸುಖನೇ । ಮೃಡೀಕಂ ಸುಖಂ । ತದ್ಧೇತುಭೂತಂ—ಸುಖಕ್ಕೆ ಕಾರಣವಾದ. ಧನದಿಂದ ಸುಖವು ಲಭಿಸುವುದು ಲೋಕಪ್ರಸಿದ್ಧಿಯು.

ಧೇಹಿ—ಆಸ್ಥಾಪಯ । ಸ್ಥಾಪಿಸು ಆಥವಾ ಕೊಡು

॥ ವ್ಯಾಕರಣಪ್ರಕ್ರಿಯಾ ।

ಸುಚೇತುನಾ— ಚಿತೀ ಸಂಜ್ಞಾನೇ ಧಾತು ಇದಕ್ಕೆ ಔಣಾದಿಕವಾದ ಉ ಪ್ರತ್ಯಯ. **ಪುಗಂತಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಎಂಬುದರಿಂದ ಪ್ರತ್ಯಯ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. ಸು ಎಂಬುದರೊಡನೆ ಗತಿಸಮಾಸವಾಪಾಗ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ತೃತೀಯಾ ಏಕವಚನಾಂತರೂಪ.

ವಿಶ್ವಾಯುಷೋಪಸಮ್—ವಿಶ್ವಂ ಆಯುಃ ಯಸ್ಮಿನ್ ಶರೀರಾದೌ ತತ್ ವಿಶ್ವಾಯು ಬಹುವ್ರೀಹಿ ಸಮಾಸ ಪೂರ್ವಪದಪ್ರಕೃತಿಸ್ವರಕ್ಕೆ ಬಾಧಕವಾಗಿ **ಬಹುವ್ರೀಹೌ ವಿಶ್ವಂ ಸಂಜ್ಞಾಯಾಂ** ಎಂಬುದರಿಂದ ಪೂರ್ವಪದಾಂತೋದಾತ್ತಸ್ವರ ಬರುತ್ತದೆ. ವಿಶ್ವಾಯು ಪುಷ್ಣಾತಿ ಇತಿ ವಿಶ್ವಾಯುಷೋಷಾಃ. ಪುಷ ಪುಷ್ಟೌ ಧಾತು. **ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚ** (ಪಾ ಸೂ ೪-೬-೬೬) ಎಂಬುದರಿಂದ ಇದಕ್ಕೆ ಅಸುನ್ ಪ್ರತ್ಯಯ. ತತ್ಸಂಪಿಯೋಗದಿಂದ ಪೂರ್ವಪದಪ್ರಕೃತಿಸ್ವರವೂ ಬರುತ್ತದೆ. ಆಯುಸ್ ಶಬ್ದದ ಸಕಾರಕ್ಕೆ ಛಾಂದಸವಾಗಿ ಲೋಪಬರುತ್ತದೆ. ವಿಶ್ವಾಯುಷೋಪಸ್ ಶಬ್ದವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ. ಇಂಥಾ ಸ್ಥಳದಲ್ಲಿ ಸಕಾರಲೋಪವೆಂಬುದು ಸ್ವಾಭಾವಿಕ **ದೀರ್ಘಾಯುತ್ವಾಯ ವರ್ಚಸೇ** ಇತ್ಯಾದಿ ಅನೇಕ ಸ್ಥಳಗಳು ಉದಾಹರಣೆಗೆ ದೊರೆಯುತ್ತವೆ.

ಧೇಹಿ—ಡುಧಾಞ್ ಧಾರಣಪೋಷಣಯೋಃ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ **ಶ್ಲುಸೋರೇದ್ಧಾವಭ್ಯಾಸಲೋಪಶ್ಚ** (ಪಾ ಸೂ. ೬-೪-೧೧೯) ಎಂಬುದರಿಂದ ಅಭ್ಯಾಸಲೋಪವೂ ಧಾತುವಿಗೆ ಏತ್ವವೂ ಬರುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಜೀವಸೇ—ಜೀವ ಪ್ರಾಣಧಾರಣೇ ಧಾತು ಇದಕ್ಕೆ ತುಮನರ್ಥದಲ್ಲಿ **ತುಮರ್ಥೇ ಸೇಸೇನಸೇ**— (ಪಾ ಸೂ ೩-೪-೯) ಎಂಬುದರಿಂದ ಅಸೇ ಪ್ರತ್ಯಯ **ಕೃನ್ಮೇಜಂತಃ** (ಪಾ ಸೂ ೧-೧-೩೯) ಎಂಬುದರಿಂದ ಏಜಂತವಾದುದರಿಂದ ಅವ್ಯಯಸಂಜ್ಞೆ ಬರುತ್ತದೆ ॥ ೯ ॥

ಸಂಹಿತಾಪಾಠಃ

ಪ್ರ ಪ್ರೂತಾಸ್ತಿಗ್ಮಶೋಚಿಷೇ ವಾಚೋ ಗೋತಮಾಗ್ನಯೇ ।
ಭರಸ್ವ ಸುಮ್ನಯುರ್ಗಿರಃ ॥ ೧೦ ॥

ಪದಪಾಠಃ

ಪ್ರ । ಪ್ರೂತಾಃ । ತಿಗ್ಮ । ಶೋಚಿಷೇ । ವಾಚಃ । ಗೋತಮ । ಅಗ್ನಯೇ ।
ಭರಸ್ವ । ಸುಮ್ನ । ಯುಃ । ಗಿರಃ ॥ ೧೦ ॥

ಸಾಯಣಭಾಷ್ಯಂ ॥

ಹೇ ಗೋತಮ ಸೂಕ್ತದ್ರವ್ಯಃ ಸುಮ್ನ ಯುಃ ಸುಮ್ನಂ ಧನಮಾತ್ಮನ ಇಚ್ಛಂಸ್ತ್ವಂ ತಿಗ್ಮಶೋಚಿಷೇ ತೀಕ್ಷ್ಣಜ್ವಾಲಾಯಾಗ್ನಯೇ ಪೂತಾಃ ಶುದ್ಧಾ ವಾಚೋಽಗ್ನೇರ್ಗುಣಾನ್ ಸಮ್ಯಗಭಿದಧತೀರ್ಗಿರಃ ಸ್ತುತೀಃ ಪ್ರಭರಸ್ವ । ಪ್ರಕರ್ಷೇಣ ಸಂಪಾದಯ ॥ ತಿಗ್ಮಶೋಚಿಷೇ । ತಿಜ ನಿಶಾನೇ । ಯುಜಿರುಚಿತಿಜಾಂ ಕುತ್ವಂ ಚ । ಉ. ೧-೧೪೫ । ಇತಿ ಮುಕ್ । ತಿಗ್ಮಾನಿ ಶೋಚೀಂಷಿ ಯಸ್ಯ । ಬಹುವ್ರೀಹೌ ಪೂರ್ವಪದಪ್ರಕೃತಿ-ಸ್ವರತ್ವಂ । ಸುಮ್ನಯುಃ । ಸುಮ್ನಶಬ್ದಾತ್ಕ್ಯಚಿ ನ ಛಂದಸ್ಯಪುತ್ರಸ್ಯೇತೀತ್ವದೀರ್ಘಯೋಃ ಪ್ರತಿಷೇಧಃ । ಕ್ಯಾಚ್ಛಂದಸೀತ್ಯುಪ್ರತ್ಯಯಃ ॥

॥ ಪ್ರತಿಪದಾರ್ಥ ॥

ಗೋತಮ—ಸೂಕ್ತದ್ರಷ್ಟೃವಾದ ಎಲೈ ಗೋತಮನೇ । **ಸುಮ್ನಯುಃ**—ಧನವನ್ನು ಇಚ್ಛಿಸುವ (ನೀನು) । **ತಿಗ್ಮಶೋಚಿಷೇ**—ತೀಕ್ಷ್ಣಜ್ವಾಲೆಗಳುಳ್ಳ । **ಅಗ್ನಯೇ**—ಅಗ್ನಿಗೆ । **ಪೂತಾಃ**—ಶುದ್ಧವಾದ । **ವಾಚಃ**—(ಅಗ್ನಿಯ ಗುಣಗಳನ್ನು ಚೆನ್ನಾಗಿ) ವ್ಯಕ್ತಪಡಿಸುವ । **ಗಿರಃ**—(ಸ್ತುತಿರೂಪವಾದ) ವಾಕ್ಯಗಳನ್ನು । **ಪ್ರ ಭರಸ್ವ**—ಹೆಚ್ಚಾಗಿ ಅರ್ಪಿಸು

॥ ಭಾವಾರ್ಥ ॥

ಸೂಕ್ತದ್ರಷ್ಟೃವಾದ ಎಲೈ ಗೋತಮನೇ, ದ್ರವ್ಯಾಪೇಕ್ಷೆಯಾದ ನೀನು, ತೀಕ್ಷ್ಣಜ್ವಾಲೆಗಳುಳ್ಳ ಅಗ್ನಿಗೆ, ಅವನ ಗುಣದ್ಯೋತಕವಾದ ಸ್ತುತಿವಾಕ್ಯಗಳನ್ನು ಹೆಚ್ಚಾಗಿ ಅರ್ಪಿಸು (ಸ್ತುತಿಸು).

English Translation.

Gotama, desirous of wealth, offers to the sharp-flaming Agni pure prayers and praises.

॥ ವಿಶೇಷವಿಷಯಗಳು ॥

ಪೂತಾಃ—ಶುದ್ಧವಾದ ಎಂದರೆ ಶ್ರೇಷ್ಠವಾದ ಉತ್ತಮವಾದ, ಭಕ್ತಿಭಾವದಿಂದ ಕೂಡಿದ ಇತ್ಯಾದಿ.

ತಿಗ್ಮಶೋಚಿಷೇ—ತೀಕ್ಷ್ಣವಾದ ಪ್ರಕಾಶವುಳ್ಳ ಎಂದರೆ ಜಾಜ್ವಲ್ಯಮಾನವಾಗಿ ಉರಿಯುತ್ತಿರುವ (ಅಗ್ನಿಗೆ).

ವಾಚಃ ಗಿರಃ—ಈ ಎರಡು ಶಬ್ದಗಳೂ ಸಮಾನಾರ್ಥವನ್ನೇ ಸೂಚಿಸುವುದಾದರೂ ಭಾಷ್ಯಕಾರರು ವಾಚಃ ಎಂಬ ಶಬ್ದಕ್ಕೆ ಅವಯವಾರ್ಥಭೂತವಾದ ಅಗ್ನಿಯ ಗುಣಗಳನ್ನು ಚೆನ್ನಾಗಿ ಪ್ರಕಾಶಪಡಿಸುವ ಎಂಬರ್ಥವನ್ನು ಹೇಳಿರುವರು.

ಸುಮ್ನಯುಃ—ಶಂಬಾತಾ ಶತರಾ ಮೊದಲಾದ ಇಪ್ಪತ್ತು ಸುಖ ನಾಮಗಳ ಮಧ್ಯದಲ್ಲಿ ಸುಮ್ನಂ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ ೩-೧೩) ಸುಮ್ನಂ ಎಂದರೆ ಸುಖವು **ಸುಮ್ನಮಿಚ್ಛನ್ ಸುಮ್ನಯುಃ** ಸುಖವನ್ನು ಪೇಕ್ಷಿಸುವ ಎಂದರ್ಥವು. ಭಾಷ್ಯಕಾರರು ಸುಮ್ನ ಶಬ್ದಕ್ಕೆ ಧನವೆಂದು ಅರ್ಥಮಾಡಿ ಸುಮ್ನಯು ವೆಂದರೆ ಧನವನ್ನು ಪೇಕ್ಷಿಸುವ ಗೋತಮನು ಎಂದು ಅರ್ಥವಿವರಣೆ ಮಾಡಿರುವರು.

ಭರಸ್ವ—**ಭೃಞ್ ಭರಣೇ** । **ಸಂಪಾದಯ** । ಸಂಪಾದಿಸು ಅಥವಾ ಅರ್ಪಿಸು. ಅಗ್ನಿಗೆ ಸ್ತೋತ್ರವನ್ನು ಸಮರ್ಪಿಸು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಪೂತಾಃ—ಪೂಞ್ ಪವನೇ ಧಾತು. ಕ್ರ್ಯಾದಿ ಇದಕ್ಕೆ ಕ್ತಪ್ರತ್ಯಯ. ಕಿತ್ತಾದುದರಿಂದ ಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ತಿಗ್ಮಶೋಚಿಷೇ—**ತಿಗ್ಮಾನಿ ಶೋಚೀಂಷಿ ಯಸ್ಯ ಸಃ** । ಬಹುವ್ರೀಹಿಸಮಾಸ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೩-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ ತಿಜ ನಿಶಾನೇ ಧಾತು. ಇದಕ್ಕೆ **ಯುಜಿ ರುಚಿ ತಿಜಾಂ ಕುತ್ವಂ ಚ** (ಉ. ಸೂ. ೧-೧೪೩) ಎಂಬುದರಿಂದ ನುಕ್ ಪ್ರತ್ಯಯ. ತತ್ಸಂನಿಯೋಗದಿಂದ ಧಾತುವಿನ ಜಕಾರಕ್ಕೆ ಕುತ್ವದಿಂದ ಗಕಾರಾದೇಶ. **ತಿಗ್ಮ** ಎಂದು ರೂಪವಾಗುತ್ತದೆ

ಭರಸ್ಯ—ಡುಭೃಞ್ ಭರಣೇ ಧಾತು. **ಲೋಟ್** ಮಧ್ಯಮಪುರುಷ ಏಕವಚನದಲ್ಲಿ **ಥಾಸಃ ಸೇ** ಸೂತ್ರದಿಂದ ಸೇ ಆದೇಶ. **ಸವಾಭ್ಯಾಂ ವಾಮೌ** (ಪಾ. ಸೂ. ೩-೪-೯೧) ಎಂಬುದರಿಂದ ಏಕಾರಕ್ಕೆ ವತ್ಸ ಶಪ್ ವಿಕರಣ ನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಶಪ್ ಪಿತ್ತಾದುದರಿಂದ ಅನುದಾತ್ತ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಸೂತ್ರದಿಂದ ಅನುದಾತ್ತ ಧಾತುಸ್ವರ ಉಳಿಯುತ್ತದೆ

ಸುಮ್ನಯುಃ—**ಸುಮ್ನಂ ಧನಂ ಆತ್ಮನಃ ಇಚ್ಛತಿ** ಎಂದು ವಿವಕ್ಷಾಮಾಡಿದಾಗ ಸುಮ್ನ ಶಬ್ದದ ಮೇಲೆ **ಸುಪ ಆತ್ಮನಃ ಕ್ಯಚ್** (ಪಾ ಸೂ ೩-೧-೮) ಎಂಬುದರಿಂದ ಕ್ಯಚ್ ಪ್ರತ್ಯಯ. ಅದಂತವಾದರೂ ಸುಮ್ನ ಶಬ್ದಕ್ಕೆ **ನಚ್ಛೆಂದಸ್ಯಪುತ್ರಸ್ಯ** (ಪಾ ಸೂ. ೭-೪-೩೫) ಎಂಬುದರಿಂದ ನಿಷೇಧವಾಗಿರುವುದರಿಂದ **ಈತ್ವಾದಿಗಳು** ಬರುವುದಿಲ್ಲ **ಸುಮ್ನಯೆ** ಎಂಬುದು **ಸನಾದ್ಯಂತಾಧಾತವಃ** ಸೂತ್ರದಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ ಇದರ ಮೇಲೆ **ಕ್ಯಾಚ್ಛಂದಸಿ** (ಪಾ ಸೂ ೩-೨-೧೭೦) ಎಂಬುದರಿಂದ ಉಪ್ರತ್ಯಯ ಇದು ಪರವಾದಾಗ **ಅತೋಲೋಪಃ** ಎಂಬುದರಿಂದ ಪೂರ್ವದ ಅಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ॥ ೧೦ ॥

॥ ಸಂಹಿತಾಪಾಠಃ ॥

ಯೋ ನೋ ಅಗ್ನೇಽಭಿದಾಸತ್ಯಂತಿ ದೂರೇ ಪದೀಷ್ಟ ಸಃ ।
ಅಸ್ಮಾಕಮಿದ್ವೃಧೇ ಭವ ॥ ೧೧ ॥

॥ ಪದಪಾಠಃ ॥

ಯಃ । **ನಃ** । **ಅಗ್ನೇ** । **ಅಭಿ** । **ದಾಸತಿ** । **ಅಂತಿ** । **ದೂರೇ** । **ಪದೀಷ್ಟ** । **ಸಃ** ।
ಅಸ್ಮಾಕಂ । **ಇತ್** । **ವೃಧೇ** । **ಭವ** ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ನೋಽಸ್ಮಾನ್ ಅಂತ್ಯಂತಿಕೇ ಸಮೀಪೇ ದೂರೇ ವಿಪ್ರಕೃಷ್ಟದೇಶೇಽವಸ್ಥಿತಃ ಸನ್ ಯಃ ಶತ್ರುರಭಿದಾಸತಿ ಉಪಕ್ಷಪಯತಿ ಸ ಶತ್ರುಃ ಪದೀಷ್ಟ । ಪತತು । ನಶ್ಯತು । ತ್ವಂ ಚಾಸ್ಮಾಕಮಿತ್ ಅಸ್ಮಾಕಮೇವ ವೃಧೇ ವರ್ಧನಾಯ ಭವ ॥ ಅಭಿದಾಸತಿ । ದಸು ಉಪಕ್ಷಯೇ । ಅಸ್ಮಾಣ್ಯಂತಾಲ್ಲಟಿ ಚ್ಛಂದಸ್ಯುಭಯಥೇತಿ ಶಪ ಆರ್ಧಧಾತುಕತ್ವಾನ್ಣೇರನಿಟೀತಿ ಣಿಲೋಪಃ । ಅಂತಿ । ಕಾದಿಲೋಪೋ ಬಹುಲಮಿತಿ ವಕ್ತವ್ಯಮಿತ್ಯಂತಿಕಶಬ್ದಸ್ಯ ಕಕಾರಲೋಪಃ । ವೃಧೇ । ವೃಧು ವೃದ್ಧೌ । ಸಂಪದಾದಿ-ಲಕ್ಷಣೋ ಭಾವೇ ಕ್ವಿಪ್ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅಗ್ನೇ- ಎಲ್ಲೆ ಅಗ್ನಿಯೇ । **ಯಃ**—ಯಾವ (ಶತ್ರುವು) । **ಅಂತಿ**—ಸಮೀಪದಲ್ಲಿಯಾಗಲೀ । **ದೂರೇ**—ದೂರದಲ್ಲಿಯಾಗಲೀ (ಇದ್ದು) । **ನಃ**—ನಮ್ಮನ್ನು । **ಅಭಿದಾಸತಿ**—ತೊಂದರೆಪಡಿಸುತ್ತಾನೆಯೋ । **ಸಃ**—ಅವನು (ಶತ್ರುವು) । **ಪದೀಷ್ಟ**—ಬೀಳಲಿ (ನಾಶಹೊಂದಲಿ) । **(ತ್ವಂ ಚ**—ನೀನಾದರೋ) । **ಅಸ್ಮಾಕ-ಮಿತ್**—ನಮ್ಮ । **ವೃಧೇ**—ಅಭಿವೃದ್ಧಿಗಾಗಿಯೇ । **ಭವ**- ಆಗು.

॥ ಭಾವಾರ್ಥ ॥

ಎಲ್ಲೆ ಅಗ್ನಿಯೇ, ಸಮೀಪದಲ್ಲಿಯೇ ಆಗಲೀ, ದೂರದಲ್ಲಿಯಾಗಲೀ ಇದ್ದು ನಮ್ಮನ್ನು ಹಿಂಸಿಸುವ ಶತ್ರುವು ನಾಶಹೊಂದಲಿ ನೀನಾದರೋ ನಮಗೆ ಅಭಿವೃದ್ಧಿಯನ್ನುಂಟುಮಾಡು.

English Translation

May he, Agni, who annoys us, whether nigh or afar, perish, and be to us (propitious) for our advancement.

॥ ವಿಶೇಷವಿಷಯಗಳು ॥

ಅಂತಿ- ಅಂತಿಕೇ । ಛಂದಸ್ಸಿನ ಅನುಕೂಲಕ್ಕಾಗಿ ಕೇ ಎಂಬ ಅಕ್ಷರವು ಲೋಪವಾಗಿರುವುದು. ಸಮೀಪದಲ್ಲಿ ಎಂದರ್ಥವು

ಅಸ್ಮಾಕಮಿದ್ವೃಧೇ ಭವ—ನಮ್ಮ ಶ್ರೇಯೋಭಿವೃದ್ಧಿಗಾಗಿಯೇ ನೀನು ನಮ್ಮ ವಿಷಯದಲ್ಲಿ ಅನುಗ್ರಹ ಬುದ್ಧಿಯುಳ್ಳವನಾಗಿರು ನಮ್ಮನ್ನು ಸರ್ವದಾ ಕಾಪಾಡುತ್ತಿರು ಎಂದಭಿಪ್ರಾಯವು.

ಅಭಿದಾಸತಿ—ದಸು ಉಪಕ್ಷಯೇ । ಹಿಂಸೆ ಅಥವಾ ತೊಂದರೆಪಡಿಸುವನು

ಪದೀಷ್ಟ—ಪತತು । ಬೀಳಲಿ ಎಂದರೆ ನಾಶವನ್ನು ಹೊಂದಲಿ ಎಂದಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ಅಭಿದಾಸತಿ—ಅಭ ಉಪಸರ್ಗ. ದಸು ಉಪಕ್ಷಯೇ ಧಾತು. ಪ್ರಯೋಜಕವ್ಯಾಪಾರ ತೋರುವಾಗ **ಹೇತುಮತಿಚ** (ಪಾ. ಸೂ ೩-೧-೨೬) ಎಂಬುದರಿಂದ ಣಿಚ್ ಪ್ರತ್ಯಯ **ಅತ ಉಪಧಾಯಾಃ** ಎಂಬುದರಿಂದ ತನ್ನಿಮಿತ್ತವಾಗಿ ಧಾತುವಿನ ಉಪಧೆಗೆ ವೃದ್ಧಿ ಣ್ಯಂತದ ಮೇಲೆ ಲಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಕರ್ತರಿ ಶಪ್** ಸೂತ್ರದಿಂದ ಶಪ್ ವಿಕರಣ **ಛಂದಸ್ಯುಭಯಥಾ** ಎಂಬುದರಿಂದ ಅದಕ್ಕೆ ಆರ್ಧಧಾತುಕಸಂಜ್ಞೆಯೂ ಇರುವುದರಿಂದ **ಸೇರನಿಟ** (ಪಾ ಸೂ. ೬-೪-೫೧) ಎಂಬುದರಿಂದ ಣಿಚಿಗೆ ಲೋಪ. ದಾಸತಿ ಎಂದು ರೂಪವಾಗುತ್ತದೆ. **ಯಃ** ಎಂದು ಹಿಂದೆ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** (ಪಾ ಸೂ ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಶಪ್, ಲಸಾರ್ವಧಾತುಕವು ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ. **ತಿಙ್ಶಿತೋದಾತ್ತವತಿ** (ಪಾ ಸೂ. ೮-೧-೭೧) ಎಂಬುದರಿಂದ ಉದಾತ್ತವುಳ್ಳ ತಿಙಂತ ಪರವಾದುದರಿಂದ ಗತಿಗೆ (ಅಭಿ) ನಿಘಾತಸ್ವರ ಬರುತ್ತದೆ.

ಅಂತಿ—ಅಂತಿಕ ಶಬ್ದ ಇದರ ಕಕಾರಕ್ಕೆ **ಕಾದಿಲೋಪೋ ಬಹುಲಮಿತಿ ವಕ್ತವ್ಯಮ್** ಎಂಬ ವಚನದಿಂದ ಛಂದಸ್ಸಿನಲ್ಲಿ ಲೋಪಬರುತ್ತದೆ

ವೃಧೇ—ವೃಧು ವೃದ್ಧೌ ಧಾತು. ಸಂಪದಾದಿಯಲ್ಲಿ ಸೇರಿರುವುದರಿಂದ **ಸಂಪದಾದಿಭ್ಯಃ ಕ್ವಿಪ್** (ವಾ. ೩೨೩೬) ಎಂಬುದರಿಂದ ಭಾವಾರ್ಥದಲ್ಲಿ ಕ್ವಿಪ್ ಪ್ರತ್ಯಯ. ವೃಧ್ ಶಬ್ದವಾಗುತ್ತದೆ ಚತುರ್ಥೀ ಏಕವಚನದಲ್ಲಿ ವೃಧೇ ಎಂದು ರೂಪವಾಗುತ್ತದೆ. ಏಕಾಚಾದುದರಿಂದ **ಸಾವೇಕಾಚಸ್ತೃತೀಯಾದಿಃ** (ಪಾ. ಸೂ ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ. ॥ ೧೧ ॥

॥ ಸಂಹಿತಾಪಾಠಃ ॥

ಸಹಸ್ರಾಕ್ಷೋ ವಿಚರ್ಷಣಿರಗ್ನೀ ರಕ್ಷಾಂಸಿ ಸೇಧತಿ ।

ಹೋತಾ ಗೃಣೀತ ಉಕ್ಥ್ಯಃ ॥ ೧೨ ॥

॥ ಪದಪಾಠಃ ॥

ಸಹಸ್ರಾಕ್ಷಃ । ವಿಚರ್ಷಣಿಃ । ಅಗ್ನಿಃ । ರಕ್ಷಾಂಸಿ । ಸೇಧತಿ ।

ಹೋತಾ । ಗೃಣೀತೇ । ಉಕ್ಥ್ಯಃ ॥ ೧೩ ॥

ಸಾಯಣಭಾಷ್ಯಂ ।

ಸಹಸ್ರಾಕ್ಷೋಽಸಂಖ್ಯಾತಜ್ವಾಲೋ ವಿಚರ್ಷಣಿರ್ವಿಶೇಷೇಣ ಸರ್ವಸ್ಯ ದ್ರಷ್ಟಾಯಮಗ್ನೀ ರಕ್ಷಾಂಸಿ ಸೇಧತಿ । ಪ್ರತಿಷೇಧತಿ । ಯಜ್ಞಾನ್ನಿರ್ಗಮಯತಿ । ಸ ಚಾಗ್ನಿರುಕ್ಥೈಃ ಉಕ್ಥ್ಯೈಃ ಶಸ್ತ್ರೈರಸ್ಮಾಭಿಃ ಸ್ತೂಯಮಾನಃ ಸನ್ ಹೋತಾ ದೇವಾನಾಮಾಹ್ವಾತಾ ಭೂತ್ವಾ ಗೃಣೀತೇ । ತಾನ್ಸ್ತೌತಿ ॥ ಸಹಸ್ರಾಕ್ಷಃ । ಬಹುವ್ರೀಹೌ ಸಕ್ಥ್ಯಕ್ಷ್ಣೋರಿತಿ ಸಚ್ ಸಮಾಸಾಂತಃ । ಸತಿ ಶಿಷ್ಟತ್ವಾತ್ತಸ್ಯೈವ ಸ್ವರಃ ಶಿಷ್ಯತೇ । ಸೇಧತಿ । ಷಿಧು ಗತ್ಯಾಂ । ಅತ್ರ ಕೇವಲೋಽಪಿ ಸೋಪಸರ್ಗಾರ್ಥೋ ದ್ರಷ್ಟವ್ಯಃ । ಗೃಣೀತೇ । ಗೃ ಶಬ್ದೇ । ಪ್ಸಾದೀನಾಂ ಹ್ರಸ್ವ ಇತಿ ಹ್ರಸ್ವತ್ವಂ ॥

॥ ಪ್ರತಿಪದಾರ್ಥ ।

ಸಹಸ್ರಾಕ್ಷಃ—ಅಸಂಖ್ಯಾತ ಜ್ವಾಲಾಯುಕ್ತನಾದ । **ವಿಚರ್ಷಣಿಃ**—ವಿಶೇಷವಾಗಿ (ಸಮಸ್ತವನ್ನೂ) ನೋಡುವ । **ಅಗ್ನಿಃ**—ಅಗ್ನಿಯು । **ರಕ್ಷಾಂಸಿ**—ರಾಕ್ಷಸರನ್ನು । **ಸೇಧತಿ**—ಪ್ರತಿಷೇಧಿಸುತ್ತಾನೆ (ಓಡಿಸುತ್ತಾನೆ) । **ಉಕ್ಥ್ಯಃ**—ಶಸ್ತ್ರಮಂತ್ರಗಳಿಂದ (ನಮ್ಮಿಂದ) ಸ್ತುತಿಸಲ್ಪಟ್ಟವನಾಗಿ (ಅಗ್ನಿಯು) । **ಹೋತಾ**—(ದೇವತೆಗಳನ್ನು) ಆಹ್ವಾನಿಸುವವನಾಗಿ । **ಗೃಣೀತೇ**—(ಅವರುಗಳನ್ನು) ಸ್ತುತಿಸುತ್ತಾನೆ.

। ಭಾವಾರ್ಥ ।

ಅಸಂಖ್ಯಾತ ಜ್ವಾಲೆಗಳುಳ್ಳ, ಸರ್ವದ್ರಷ್ಟವಾದ ಅಗ್ನಿಯು ರಾಕ್ಷಸರನ್ನು (ಯಾಗಶಾಲೆಗಳಿಂದ ಓಡಿಸಿ, ಶಸ್ತ್ರಮಂತ್ರಗಳಿಂದ (ಸ್ತುತಿವಾಕ್ಯಗಳಿಂದ) ಸ್ತುತನಾಗಿ, ದೇವತೆಗಳನ್ನು ಆಹ್ವಾನಿಸಿ, ಅವರನ್ನು (ನಮಗಾಗಿ) ಸ್ತುತಿಸುತ್ತಾನೆ

English Translation

The thousand-eyed, all beholding Agni, drives away the Rakshasas, and, (praised by us) with holy hymns, he (the invoker of the Gods) celebrates their praise

॥ ವಿಶೇಷವಿಷಯಗಳು ॥

ಸಹಸ್ರಾಕ್ಷಃ—ಈ ಶಬ್ದಕ್ಕೆ ಅವಯವಾರ್ಥವನ್ನು ಮಾಡುವುದಾದರೆ ಸಾವಿರಕಣ್ಣುಳ್ಳವನು ಎಂದರ್ಥವು. ಇಲ್ಲಿ ಈ ಶಬ್ದವು ಅಗ್ನಿಗೆ ವಿಶೇಷಣವಾಗಿರುವುದರಿಂದ ಅಕ್ಷಶಬ್ದಕ್ಕೆ ನೇತ್ರಸ್ಥಾನಭೂತವಾದ ಜ್ವಾಲೆಯು ಎಂದು ಹೇಳಬೇಕಾಗುವುದು. ಸಹಸ್ರಶಬ್ದಕ್ಕೆ—ಅಸಂಖ್ಯಾತವಾದ ಎಂದರ್ಥವು. ಆದುದರಿಂದ ಭಾಷ್ಯಕಾರರು ಹೇಳಿರುವಂತೆ **ಸಹಸ್ರಾಕ್ಷಃ ಅಸಂಖ್ಯಾತಜ್ವಾಲಃ**—ಎಂದರೆ ಅಸಂಖ್ಯಾತವಾದ ಜ್ವಾಲೆಗಳಿಂದ ಯುಕ್ತನಾದ ಅಗ್ನಿಯು ಎಂದಭಿಪ್ರಾಯವು. ಸಹಸ್ರಾಕ್ಷಃ ಎಂಬ ಶಬ್ದವು ಋಗ್ವೇದದಲ್ಲಿ

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।

(ಋ. ಸಂ ೧೦-೯೦-೧)

ಎಂಬ ಋಕ್ಕಿನಲ್ಲಿ ಮಾತ್ರವಿರುವುದು ಆಲ್ಲಿ ಈ ಶಬ್ದಕ್ಕೆ ಸಹಸ್ರ ಅಥವಾ ಅಸಂಖ್ಯಾತವಾದ ನೇತ್ರಗಳುಳ್ಳವನು ಎಂದೇ ಅರ್ಥವು ಮತ್ತೂ—

ಇಂದ್ರವಾಯೂ ಮನೋಜುವಾ ವಿಪ್ರಾ ಹವಂತ ಊತಯೇ ।
ಸಹಸ್ರಾಕ್ಷಾ ಧಿಯಸ್ಪತೀ ।

(ಋ. ಸಂ ೧-೨೩-೨)

ಎಂಬ ಋಕ್ಕಿನಲ್ಲಿರುವ ಸಹಸ್ರಾಕ್ಷಾ ಎಂಬ ಶಬ್ದಕ್ಕೆ ಭಾಷ್ಯಕಾರರು ಸಹಸ್ರಸಂಖ್ಯಾಕಾನಿ ಇಂದ್ರವಾಯೂ—ಸಹಸ್ರ ನೇತ್ರಗಳುಳ್ಳ ಎಂದೇ ಅರ್ಥಮಾಡಿರುವರು. ಈ ಶಬ್ದ ಪ್ರಯೋಗವು ಋಗ್ವೇದದಲ್ಲಿ ಮತ್ತೆಲ್ಲಿಯೂ ಇಲ್ಲ.

ವಿಚರ್ಷಣಿಃ—**ಟಿಕೃತ್ ಚಾಕಶನತ್** ಮೊದಲಾದ ಎಂಟು ಪಶ್ಯತಿಕರ್ಮವಾಚಕಶಬ್ದಗಳ ಮಧ್ಯದಲ್ಲಿ **ವಿಚರ್ಷಣಿಃ**–ಎಂಬ ಶಬ್ದವು ಪಠಿತವಾಗಿರುವುದರಿಂದ **ವಿಚರ್ಷಣಿಃ** ಎಂದರೆ ನೋಡುವವನು. **ವಿಶೇಷೇಣ ಸರ್ವಸ್ಯ ದ್ರಷ್ಟಾಯಮಗ್ನಿಃ**—ಸಮಸ್ತವನ್ನೂ ವಿಶೇಷವಾಗಿ ನೋಡುವ ಅಗ್ನಿಯು ಎಂದರ್ಥವು

ಸೇಧತಿ—**ಷಿಧು ಗತ್ಯಾಂ । ಪ್ರತಿಷೇಧತಿ । ಯಜ್ಞಾನ್ನಿರ್ಗಮಯತಿ ।** ಷಿಧುಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಗಮನಾರ್ಥವಿದ್ದರೂ ಇಲ್ಲಿ ಭಾಷ್ಯಕಾರರು ಹೇಳಿರುವಂತೆ,—**ಅತ್ರ ಕೇವಲೋಪ್ಯಸೌ ಸೋಪಸರ್ಗಾರ್ಥೋ ದ್ರಷ್ಟವ್ಯಃ**–ಎಂದರೆ ಪ್ರತಿ ಎಂಬ ಉಪಸರ್ಗದಿಂದ ಕೂಡಿರುವ ಪ್ರತಿಷೇಧತಿ ಎಂಬ ಶಬ್ದಕ್ಕೆ ಆಗುವ ಪ್ರತಿಷೇದಾರ್ಥವನ್ನೇ ಹೇಳಬೇಕು ಅಗ್ನಿಯು ರಾಕ್ಷಸಾದಿಗಳನ್ನು ಯಜ್ಞಪ್ರದೇಶದಿಂದ ಓಡಿಸುವವನು ಎಂದ ಭಿಪ್ರಾಯವು

ಹೋತಾ— ದೇವಾನಾಮಾಹ್ವಾತಾ । ಯಜ್ಞದಲ್ಲಿ ದೇವತೆಗಳನ್ನು ಆಹ್ವಾನಮಾಡುವ ಅಗ್ನಿಯು

ಗೃಣೇತೇ—**ಗೃ ಶಬ್ದೇ ।** ದೇವತೆಗಳನ್ನು ಸ್ತೋತ್ರಾದಿಗಳಿಂದ ಸ್ತುತಿಸಿ ಆಹ್ವಾನ ಮಾಡುತ್ತಾನೆ.

ಉಕ್ಥ್ಯಃ—ಉಕ್ಥಃ ಎಂದರೆ ಶಸ್ತ್ರರೂಪವಾದ ಮಂತ್ರವು. ಉಕ್ಥ್ಯಃ ಎಂದರೆ ಅಂತಹ ಶಸ್ತ್ರಮಂತ್ರಗಳಿಂದ ಸ್ತುತ್ಯನಾದವನು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಸಹಸ್ರಾಕ್ಷಃ—ಸಹಸ್ರಂ ಅಸಂಖ್ಯಾತಾನಿ ಅಕ್ಷೀಣಿ ಯಸ್ಯಃ ಸಃ ಸಹಸ್ರಾಕ್ಷಃ **ಬಹುವ್ರೀಹೌ ಸಕ್ಥ್ಯಕ್ಷ್ಣೋಃ ಸ್ವಾಂಗಾತ್ ಷಚ್** (ಪಾ ಸೂ. ೫-೪-೧೧೩) ಎಂಬುದರಿಂದ ಸಮಾಸಾಂತದಲ್ಲಿ ಷಚ್ ಪ್ರತ್ಯಯ **ಯಸ್ಯೇತಿಚ** ಸೂತ್ರದಿಂದ ಇಕಾರಲೋಪ. **ಸತಿಶಿಷ್ಟಸ್ವರಬಲೀಯಸ್ತ್ವಮ್** ಎಂಬ ವಚನದಿಂದ ಪ್ರತ್ಯಯಸ್ವರ ಉಳಿಯುತ್ತದೆ.

ರಕ್ಷಾಂಸಿ—ಇದೇ ಸೂಕ್ತದ ೬ನೇ ಮಂತ್ರದಲ್ಲಿ ವ್ಯಾಖ್ಯಾತನಾಗಿದೆ

ಸೇಧತಿ—ಷಿಧು ಗತ್ಯಾಮ್ ಧಾತು ಇದು ಕೇವಲವಾಗಿದ್ದರೂ ಉಸಸರ್ಗ ವಿಶಿಷ್ಟವಾದ ಧಾತುವಿನ ಅರ್ಥವನ್ನೇ ಹೇಳುತ್ತದೆ. **ಧಾತೂನಾಮನೇಕಾರ್ಥತ್ವಮ್** ಎಂಬ ವಚನವಿರುವುದರಿಂದ ಪ್ರತಿಷೇಧ ತೋರುತ್ತದೆ. ಲಟ್. ಪ್ರಥಮಪುರುಷ ಏಕವಚನರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಗೃಣೇತೇ—ಗೃ ಶಬ್ದೇ ಧಾತು ಕ್ರ್ಯಾದಿ **ಸ್ನಾದೀನಾಂ ಹ್ರಸ್ವಃ** (ಪಾ ಸೂ. ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ. ಲಟ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ **ಟಿತ ಆತ್ಮನೇಪದಾನಾಂ**—ಸೂತ್ರದಿಂದ ಏತ್ವ **ಕ್ರ್ಯಾದಿಭ್ಯಃ ಶ್ನಾ** (ಪಾ. ಸೂ. ೩-೧-೮೧) ಎಂಬುದರಿಂದ ಶ್ನಾ ವಿಕರಣ **ಸಾರ್ವಧಾತುಕಮಪಿತ್** ಸೂತ್ರದಿಂದ ಪ್ರತ್ಯಯಕ್ಕೆ ಙಿತ್ವವಿರುವುದರಿಂದ **ಈಹಲ್ಯಘೋಃ** (ಪಾ ಸೂ. ೬-೪-೧೧೩) ಎಂಬುದರಿಂದ ವಿಕರಣದ ಆಕಾರಕ್ಕೆ ಈತ್ವ ವಿಕರಣಕ್ಕೂ ಪೂರ್ವಸೂತ್ರದಿಂದ ಙಿತ್ವಾತಿದೇಶವಿರುವುದರಿಂದ ತನ್ನಿಮಿತ್ತವಾಗಿ ಧಾತುವಿನ ಇಕ್ಕೆಗೆ ಗುಣ ಬರುವುದಿಲ್ಲ. ಋಕಾರದ ಪರದಲ್ಲಿರುವುದರಿಂದ ನಕಾರಕ್ಕೆ ಣತ್ವ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೨ ॥

ಎಪ್ಪತ್ತೊಂಭತ್ತನೆಯ ಸೂಕ್ತವು ಸಮಾಪ್ತವು.

ಎಂಭತ್ತನೆಯ ಸೂಕ್ತವು

ಇತ್ಥೇತಿ ಷೋಡಶರ್ಚಂ ಸಪ್ತಮಂ ಸೂಕ್ತಂ ಗೋತಮಸ್ಯಾರ್ಷಮೈಂದ್ರಂ ಪಂಕ್ತಿಚ್ಛಂದಸ್ಯಂ। ಅನುಕ್ರಾಂತಂ ಚ। ಇತ್ಥಾ ಷೋಳಶೈಂದ್ರಂ ಪಾಂಕ್ತಂ ಹಿ। ಹಿಶಬ್ದಪ್ರಯೋಗಾತ್ತ್ವಹ್ಯಾದಿಪರಿಭಾಷಯೇದಮುತ್ತರೇ ಚ ದ್ವೇ ಪಂಕ್ತಿಚ್ಛಂದಸ್ಕೇ॥ ಪೃಷ್ಠ್ಯಷಡಹಸ್ಯ ಪಂಚಮೇಽಹನಿ ಮರುತ್ವತೀಯ ಇದಂ ಸೂಕ್ತಂ। ಸೂತ್ರಿತಂ ಚ। ಅವಿತಾಸೀತ್ಥಾ ಹೀಂದ್ರ ಪಿಬ ತುಭ್ಯಮಿತಿ ಮರುತ್ವತೀಯಂ। ಆ. ೭–೧೨। ಚತುರ್ವಿಂಶೇಽಹನ್ಯಚ್ಛಾವಾಕಸ್ಯಾದ್ಯಸ್ತೃಚೋ ವೈಕಲ್ಪಿಕೋಽನುರೂಪಃ। ಹೋತ್ರಕಾಣಾಮಿತಿ ಖಂಡೇ ಸೂತ್ರಿತಂ। ಇತ್ಥಾ ಹಿ ಸೋಮ ಇನ್ಮದ ಉಭೇ ಯದಿಂದ್ರ ರೋದಸೀ। ಆ. ೭–೪। ಇತಿ॥ ಮಹಾವ್ರತೇ ನಿಷ್ಕೇವಲ್ಯಸ್ಯ ದಕ್ಷಿಣಪಕ್ಷ ಇತ್ಥಾ ಹೀತ್ಯೇಕಾ। ತಥೈವ ಪಂಚಮಾರಣ್ಯಕೇ ಸೂತ್ರಿತಂ। ಇತ್ಥಾ ಹಿ ಸೋಮ ಇನ್ಮದ ಇತಿ ಪಂಕ್ತಿಃ। ಐ ಆ. ೫–೨–೨। ಇತಿ॥

ಅನುವಾದವು--**ಇತ್ಥಾ ಹಿ ಸೋಮೇ** ಎಂಬ ಈ ಸೂಕ್ತವು ಹದಿಮೂರನೆಯ ಅನುವಾಕದಲ್ಲಿ ಏಳನೆಯ ಸೂಕ್ತವು ಇದರಲ್ಲಿ ಹದಿನಾರು ಋಕ್ಕುಗಳಿರುವುವು ಈ ಸೂಕ್ತಕ್ಕೆ ಗೋತಮನು ಋಷಿಯು. ಇಂದ್ರನು ದೇವತೆಯು. ಪಂಕ್ತಿಶ್ಛಂದಸ್ಸು ಅನುಕ್ರಮಣಿಕೆಯಲ್ಲಿ **ಇತ್ಥಾ ಷೋಳಶೈಂದ್ರಂ ಪಾಂಕ್ತಂ ಹಿ** ಎಂದು ಹೇಳಿರುವುದು. ಹಿ ಎಂಬ ಶಬ್ದಪ್ರಯೋಗದಿಂದ ಈ ಸೂಕ್ತವೂ ಮುಂದಿನ ಎರಡು **ಸೂಕ್ತ**ಗಳೂ ಪಂಕ್ತಿಶ್ಛಂದಸ್ಸುಗಳೆಂದು ಸೂಚಿತವಾಗುವುದು ಪೃಷ್ಠ್ಯಷಡಹವೆಂಬ ಯಾಗದ ಐದನೆಯ ದಿವಸ ಮರುತ್ವತೀಯ ಸಂಬಂಧವಾದ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ--**ಅವಿತಾಸೀತ್ಥಾ ಹೀಂದ್ರ ಪಿಬ ತುಭ್ಯಮಿತಿ ಮರುತ್ವತೀಯಂ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೭–೧೨) ಇಪ್ಪತ್ತನಾಲ್ಕನೆಯ ದಿನ ಅಚ್ಛಾವಾಕನೆಂಬ ಋತ್ವಿಜನು **ಇತ್ಥಾ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ವೈಕಲ್ಪಿಕವಾಗಿ ಪರಿಸಬಹುದೆಂದು ಆಶ್ವಲಾಯನ ಶ್ರೌತಸೂತ್ರದ **ಹೋತ್ರಕಾಣಾಂ** ಎಂಬ ಖಂಡದಲ್ಲಿ—**ಇತ್ಥಾ ಹಿ ಸೋಮ ಇನ್ಮದ ಉಭೇ ಯದಿಂದ್ರ ರೋದಸೀ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ ೭–೪) ಮತ್ತು ಮಹಾವ್ರತದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿ **ಇತ್ಥಾ ಹಿ** ಎಂಬ ಒಂದು ಋಕ್ಕಿನ ವಿನಿಯೋಗವಿರುವುದೆಂದು ಐತರೇಯ ಆರಣ್ಯಕದ ಪಂಚಮಾರಣ್ಯಕದಲ್ಲಿ **ಇತ್ಥಾ ಹಿ ಸೋಮ ಇನ್ಮದ ಇತಿ ಪಂಕ್ತಿಃ** ಎಂಬ ವಾಕ್ಯದಿಂದ ನಿರ್ದೇಶಿಸಲ್ಪಟ್ಟಿರುವುದು. (ಐ ಆ ೫–೨–೨).

ಸೂಕ್ತ—೮೦

॥ ಮಂಡಲ—೧ ॥ ಅನುವಾಕ—೧೩ ॥ ಸೂಕ್ತ—೮೦ ॥
॥ ಅಷ್ಟಕ—೧ ॥ ಅಧ್ಯಾಯ ೫ ॥ ವರ್ಗ—೨೯, ೩೦, ೩೧॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೩ ॥
॥ ಋಷಿಃ—ಗೋತಮೋ ರಾಹೂಗಣಃ ॥
॥ ದೇವತಾ—ಇಂದ್ರಃ ॥
॥ ಛಂದಃ—ಪಂಕ್ತಿಃ

॥ ಸಂಹಿತಾಪಾಠಃ ॥

ಇತ್ಥಾ ಹಿ ಸೋಮ ಇನ್ಮದೇ ಬ್ರಹ್ಮಾ ಚಕಾರ ವರ್ಧನಂ ।
ಶವಿಷ್ಠ ವಜ್ರಿನ್ನೋಜಸಾ ಪೃಥಿವ್ಯಾ ನಿಃ ಶಶಾ ಅಹಿಮರ್ಚನ್ನನು
ಸ್ವರಾಜ್ಯಂ ॥ ೧ ॥

॥ ಪದಪಾಠಃ ॥

ಇತ್ಥಾ । ಹಿ । ಸೋಮೇ । ಇತ್ । ಮದೇ । ಬ್ರಹ್ಮಾ । ಚಕಾರ । ವರ್ಧನಂ ।
ಶವಿಷ್ಠ । ವಜ್ರಿನ್ । ಓಜಸಾ । ಪೃಥಿವ್ಯಾಃ । ನಿಃ । ಶಶಾಃ । ಅಹಿಂ । ಅರ್ಚನ್ ।
ಅನು । ಸ್ವಃ । ರಾಜ್ಯಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಶವಿಷ್ಠಾತಿಶಯೇನ ಬಲವನ್ ವಜ್ರಿನ್ವಜ್ರವನ್ನಿಂದ್ರ ಇತ್ಥಾ ಹಿ ಇತ್ಥಮೇವ ಅನೇನ ಶಾಸ್ತ್ರೋಕ್ತಪ್ರಕಾರೇಣೈವ ಮದೇ ಮದಕರೇ ಹರ್ಷಕರೇ ಸೋಮೇ ತ್ವಯಾ ಪೀತೇ ಸತಿ ಬ್ರಹ್ಮಾ ಬ್ರಾಹ್ಮಣಃ ಸ್ತೋತಾ ವರ್ಧನಂ ತವ ವೃದ್ಧಿಕರಂ ಸ್ತೋತ್ರಂ ಚಕಾರ । ಅನೇನ ಸೂಕ್ತೇನ ಕೃತವಾನ್ । ಇದಿಕ್ಕೇತತ್ಪಾದಪೂರಣಂ ಅತಸ್ತ್ವಮೋಜಸಾ ಬಲೇನ ಪೃಥಿವ್ಯಾಃ ಸಕಾಶಾದಹಿಮಾಗತ್ಯ ಹಂತಾರಂ

ವೃತ್ರಂ ನಿಃ ಶಶಾಃ । ನಿಃಶೇಷೇಣಾಶಾಃ। ಮಾ ಬಾಧಸ್ವೇತಿ ಶಾಸನಂ ಕೃತ್ವಾ ಪೃಥಿವ್ಯಾಃ ಸಕಾಶಾನ್ನಿರ್ಗಮಯೇ ಇತ್ಯರ್ಥಃ । ಕಿಂಕುರ್ವನ್ । ಸ್ವರಾಜ್ಯಂ ಸ್ವಸ್ಯ ರಾಜ್ಯಂ ರಾಜತ್ವಮನ್ವನುಲಕ್ಷ್ಯಾರ್ಚನ್ ಪೂಜಯನ್ । ಸ್ವಸ್ಯ ಸ್ವಾಮಿತ್ವಂ ಪ್ರಕಟಯನ್ನಿತ್ಯರ್ಥಃ ॥ ಶಶಾಃ । ಶಾಸು ಅನುಶಿಷ್ಟೌ । ಲಙಿ ಲುಕಿ ಪ್ರಾಪ್ತೇ ಬಹುಲಂ ಛಂದಸೀತಿ ಶಪಃ ಶ್ಲುಃ । ಸ್ವರಾಜ್ಯಂ । ರಾಜ್ಞೋ ಭಾವಃ ಕರ್ಮ ವಾ ರಾಜ್ಯಂ । ಪತ್ಯಂತಪುರೋಹಿತಾದಿಭ್ಯೋ ಯಕ್ । ಪಾ. ೫-೧-೧೨೮ । ಇತಿ ಯಕ್ । ತತ್ರ ಹಿ ರಾಜಾಸ ಇತಿ ಪತ್ಯತೇ । ಸ್ವಸ್ಯ ರಾಜ್ಯಂ ಸ್ವರಾಜ್ಯಂ । ಅಕರ್ಮಧಾರಯೇ ರಾಜ್ಯಂ । ಪಾ. ೬-೨-೧೩೦ । ಇತ್ಯುತ್ತರಪದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಶವಿಷ್ಮ—ಅತ್ಯಂತ ಬಲಿಷ್ಠನಾದ । **ವಜ್ರಿನ್**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । **ಇತ್ಥಾ ಹಿ** - ಹೀಗೆಯೇ (ಇದೇ ಶಾಸ್ತ್ರೋಕ್ತಪ್ರಕಾರವಾಗಿಯೇ) । **ಮದೇ**—ಸಂತೋಷಕರವಾದ । **ಸೋಮೇ**—ಸೋಮರಸವು (ನಿನ್ನಿಂದ ಪಾನಮಾಡಲ್ಪಡಲು) । **ಬ್ರಹ್ಮಾ**—ಬ್ರಾಹ್ಮಣನು ಅಥವಾ ಬ್ರಹ್ಮನೆಂಬ ಋತ್ವಿಜನು (ಸ್ತೋತೃವು) । **ವರ್ಧನಂ**—ವೃದ್ಧಿಕರವಾದ (ಸ್ತೋತ್ರವನ್ನು) । **ಚಕಾರ ಇತ್**—(ಈ ಸೂಕ್ತದಿಂದ) ಮಾಡಿದನು । (**ಅತಃ ತ್ವಂ**—ಆದುದರಿಂದ ನೀನು) । **ಸ್ವರಾಜ್ಯಂ**—(ನಿನ್ನ) ರಾಜತ್ವವನ್ನು । **ಅನು**--ಲಕ್ಷ್ಯದಲ್ಲಿಟ್ಟು । **ಅರ್ಚನ್**-ಪೂಜಿಸುತ್ತಾ (ಸ್ವಾಮಿತ್ವವನ್ನೂ ಪ್ರಕಟಗೊಳಿಸಿ) । **ಓಜಸಾ**—(ನಿನ್ನ) ಬಲದಿಂದ । **ಅಹಿಂ**--ಹನನನಮಾಡುವ ವೃತ್ರನನ್ನು (ಅಹಿನಾಮಕ ರಾಕ್ಷಸನನ್ನು) । **ಪೃಥಿವ್ಯಾಃ**—ಭೂಮಿಯಿಂದ । **ನಿಃ ಶಶಾಃ**—ಚೆನ್ನಾಗಿ ಕಾಸನ ನಾಡಿದೆ (ಓಡಿಸಿದೆ) ।

ಭಾವಾರ್ಥ

ಅತ್ಯಂತ ಬಲಿಷ್ಠನೂ, ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ, ಬ್ರಹ್ಮನೆಂಬ ಋತ್ವಿಜನು (ಸ್ತೋತೃವು) ವೃದ್ಧಿಕಾರಕವಾದ ಸ್ತುತಿಯಿಂದ ಸ್ತುತಿಸಿದ ಮೇಲೆ, ಮದಕಾರಕವಾದ ಸೋಮರಸವನ್ನು ಪಾನಮಾಡಿ ನಿನ್ನ ಸ್ವಾಮಿತ್ವವನ್ನು ಪ್ರಕಟಪಡಿಸುತ್ತಾ ಹಿಂಸಕನಾದ ವೃತ್ರನನ್ನು ಭೂಮಿಯಿಂದ, ಬಲಪ್ರಯೋಗಮಾಡಿ ಓಡಿಸಿದೆ

English Translation

Mighty weilder of the thunderbolt, when the priest had thus exalted you (by praise), and the exhilarating Soma-juice (had been druuk), you expelled, by your vigour, Ahi from the earth, manifesting your own sovereignty

॥ ವಿಶೇಷವಿಷಯಗಳು ॥

ಶವಿಷ್ಮ—ಅತಿಶಯೇನ ಬಲವಾನ್—ಬಹಳ ಬಲವುಳ್ಳವನೆಂದು ಅರ್ಥವು. **ಶವಃ** ಎಂಬ ಪದವು ಇಪ್ಪತ್ತೆಂಟು ಬಲನಾಮಗಳಲ್ಲಿಯೂ (ನಿ. ೩-೯) ಮತ್ತು ನೂರೊಂದು ಉದಕನಾಮಗಳಲ್ಲಿಯೂ (ನಿ. ೨-೨೪) ಪರಿಣತವಾಗಿದ್ದರೂ ಇಲ್ಲಿ ಒಲವೆಂಬ ಅರ್ಥದಲ್ಲಿ ಉಪಯುಕ್ತವಾಗಿದೆ

ಓಜಸಾ—ಪೃಥಿವ್ಯಾಃ ಅಹಿಂ ನಿಶ್ಶಶಾಃ—ಬಲೇನ ಪೃಥಿವ್ಯಾಸ್ಸಕಾಶಾದಾಗತ್ಯ ಹಂತಾರಂ ವೃತ್ರಂ ನಿಶ್ಶಶಾಃ ನಿಶ್ಶೇಷೇಣ ಅಶಾಃ ಮಾ ಬಾಧಸ್ವೇತಿ ಶಾಸನಂ ಕೃತ್ವಾ ಪೃಥಿವ್ಯಾಃ ಸಕಾಶಾತ್ ನಿರಗಮಯಃ ಓಜಶ್ಶಬ್ದವು ಇಪ್ಪತ್ತೆಂಟು ಬಲನಾಮಗಳಲ್ಲಿ (ನಿ. ೩-೯) ಉಕ್ತವಾಗಿರುತ್ತದೆ. ಇಂದ್ರನು ತನ್ನ ಶಕ್ತಿಯಿಂದ ಎಲ್ಲವನ್ನೂ ನಾಶಮಾಡುತ್ತಿದ್ದ ವೃತ್ರನನ್ನು । ನೀನು ಹೀಗೆ ಎಲ್ಲರನ್ನೂ ಬಾಧಿಸಬೇಡ ಎಂದು **ಆಜ್ಞೆ**ಮಾಡಿ **ಭೂಲೋಕ**ದಿಂದ ಹೊರಡಿಸಿದನು ಎಂದು ಅರ್ಥವು. ಅಹಿ ಶಬ್ದಕ್ಕೆ ಹಂತೃ(ಕೊಲೆಮಾಡುವ ಶತ್ರುವು) ಎಂದು ಅರ್ಥ. ಸ್ಯಂದಸ್ವಾಮಿಗಳು—ಅಹಿ ಶಬ್ದಕ್ಕೆ ನಿರುಕ್ತದಲ್ಲಿ ಉದಕ, ಮೇಘ, ಮಧ್ಯಸ್ಥಾನ ದೇವತಾ ಎಂದು ಅನೇಕಾರ್ಥಗಳನ್ನು ಹೇಳಿರುವುದರಿಂದ ಮೇಘವೆಂದು ಅರ್ಥವು. ಪೃಥಿವೀಶಬ್ದವು ಹದಿನಾರು ಅಂತರಿಕ್ಷನಾಮಗಳಲ್ಲಿ (ನಿ ೨-೨೩) ಉಕ್ತವಾಗಿರುವ ಕಾರಣ ಇಲ್ಲಿ ಅಂತರಿಕ್ಷವೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು ಆದುದರಿಂದ ಎಲೈ ಇಂದ್ರನೇ. ನೀನು ಬಹಳ ಬಲಶಾಲಿಯಾಗಿರುತ್ತೀಯೆ ಅಂತರಿಕ್ಷದಿಂದ (ಮೇಘವು) ವೃಷ್ಟಿಯು ಭೂಮಿಯಲ್ಲಿ ಬೀಳುವ ಹಾಗೆ ಮೇಘವನ್ನು ಹೊರಕ್ಕೆ ಹೊರಡಿಸು ಎಂದು ಅರ್ಥವನ್ನ ಹೇಳಿರುವರು

ಬ್ರಹ್ಮಾ—ಬ್ರಾಹ್ಮಣಃ ಸ್ತೋತಾ ಯಜ್ಞದಲ್ಲಿ ಹವಿರ್ಭಾಗಸ್ವೀಕಾರಕ್ಕಾಗಿ ಆಯಾಯ ದೇವತೆಗಳನ್ನು ಆಯಾಯ ಸ್ತೋತ್ರಗಳಿಂದ ಸ್ತುತಿಮಾಡುವ ಬ್ರಾಹ್ಮಣನು ಅಥವಾ ಬ್ರಹ್ಮವೆಂಬ ಋತ್ವಿಜನು ಎಂದು ಅರ್ಥವು.

ವರ್ಧನಂ—ವೃದ್ಧಿಕರಂ ಸ್ತೋತ್ರಂ. ವೃಧು ವೃದ್ಧೌ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಬಲವನ್ನು ಹೆಚ್ಚುಮಾಡುವ ಕಾರಣ ವೃದ್ಧಿಕರವಾದ ಸ್ತೋತ್ರವು ಎಂದು ಅರ್ಥವು. ಮನುಷ್ಯರು ಮಾಡುವ ಸ್ತೋತ್ರಗಳಿಂದ ದೇವತೆಗಳ ಶಕ್ತಿಯು ಹೆಚ್ಚುವುದು ಎಂದು ಪ್ರತೀತಿ ಇರುವುದು

ಸ್ವರಾಜ್ಯಂ—ರಾಜ್ಞೋ ಭಾವಃ ಕರ್ಮ ವಾ ರಾಜ್ಯಂ । ಸ್ವಸ್ಯ ರಾಜ್ಯಂ ಸ್ವರಾಜ್ಯಂ । ರಕ್ಷಣೆಗೆ ಅರ್ಹರಾದ ಪ್ರಜೆಗಳನ್ನು ರಕ್ಷಿಸುತ್ತಾ ಅವರವಶ ಅನುರಾಗವನ್ನು ಹೊಂದಲು ಯೋಗ್ಯವಾದ ರೀತಿಯಿಂದ ಇರುವಿಕೆಯು, ಅಥವಾ ಆ ಪ್ರಕಾರವಾದ ಕರ್ಮಗಳನ್ನು ಆಚರಿಸುವ ಸನ್ನಿವೇಶವನ್ನು ಹೊಂದಿರುವಿಕೆಯು ರಾಜ್ಯವೆನಿಸಿರುವುದು. ಹೀಗೆ ಇರುವ ಸ್ವರಾಜ್ಯಕ್ಕೆ ಮರ್ಯಾದೆಯನ್ನು ಕೊಟ್ಟು ವೃಷ್ಟ್ಯಾದಿಗಳನ್ನು ಭೂಮಿಗೆ ಉಂಟುಮಾಡಬೇಕೆಂದು ಇಂದ್ರನನ್ನು ಕುರಿತು ಪ್ರಾರ್ಥನೆಯು ಉಕ್ತವಾಗಿರುತ್ತದೆ

॥ ವ್ಯಾಕರಣಪ್ರಕ್ರಿಯಾ ॥

ಚಕಾರ—ಡುಕೃಞ್ ಕರಣೇ ಧಾತು. ಲಿಟ್ ಪ್ರಥಮಪುರುಷ ಏಕವಚನರೂಪ ಹಿ ಎಂಬುದರ ಯೋಗ ವಿರುವುದರಿಂದ **ಹಿಚಿ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ ಆಗ ಣಲ್ ಪ್ರತ್ಯಯ ಲಿತ್ತಾದುದರಿಂದ **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

ವರ್ಧನಮ್—ವೃಧು ವೃದ್ಧೌ ಧಾತು. ವರ್ಧಯತಿ ಇತಿ ವರ್ಧನಃ ಕರ್ತ್ರರ್ಥದಲ್ಲಿ **ಲ್ಯುಟ್** ಪ್ರತ್ಯಯ. **ಯುವೋರನಾಕೌ** ಸೂತ್ರದಿಂದ ಅನಾದೇಶ. ಪ್ರತ್ಯಯನಿಮಿತ್ತವಾಗಿ **ಪುಗಂತಲಘೂಪಧಸ್ಯ ಚ** ಸೂತ್ರದಿಂದ

ಧಾತುವಿನ ಲಘೂಪಧೆಗೆ ಗುಣ ಹಿಂದಿನಂತೆ ಪ್ರತ್ಯಯ ಲಿತ್ತಾದುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ

ಶವಿಷ್ಠ—ಶವಃ ಬಲಂ ಅಸ್ಯ ಅಸ್ತಿ ಇತಿ ಶವಸ್ವೀ **ಅಸ್ಮಾಯಾ**—ಎಂಬುದರಿಂದ ಮತ್ವರ್ಥದಲ್ಲಿ ಅಸಂತವಾದುದರಿಂದ ವಿನ್ ಪ್ರತ್ಯಯ **ಅತಿಶಯೇನ ಶವಸ್ವೀ ಶವಿಷ್ಠಃ. ಅತಿಶಯಾರ್ಥ ತೋರುವಾಗ ಅತಿಶಾಯನೇ-ತಮಬಿಷ್ಠನೌ** ಸೂತ್ರದಿಂದ ಇಷ್ಠನ್ ಪ್ರತ್ಯಯ. ಇದು ಪರವಾದಾಗ **ವಿನ್ಮತೋರ್ಲುಕ್** (ಪಾ. ಸೂ ೫-೩-೬೫) ಎಂಬುದರಿಂದ ವಿನಿಗೆ ಲುಕ್ **ಟೇಃ** ಸೂತ್ರದಿಂದ ಟಿ. ಲೋಪ ಸಂಬುದ್ಧಿಯಲ್ಲಿ ಶವಿಷ್ಠ ಎಂದು ರೂಪವಾಗುತ್ತದೆ. ಪಾದಾದಿಯಲ್ಲಿರ ವುದರಿಂದ **ಆಷ್ಟಮಿಕಸಿಘಾತಸ್ವರ** ಬರುವುದಿಲ್ಲ **ಆಮಂತ್ರಿತಸ್ಯ** (ಪಾ ಸೂ ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಒರುತ್ತದೆ.

ಶಶಾಃ—ಶಾಸು ಅನುಪಿಪ್ಪೆ ಧಾತು ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಸ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ **ಆದಿಸ್ಪೃತಿಭ್ಯಃ ಶಪಃ** ಸೂತ್ರದಿಂದ ಶಪ್ ಲುಕ್ ಪ್ರಾಪ್ತವಾದರೆ **ಬಹುಲಂ ಛಂದಸಿ** ಎಂಬುದರಿಂದ ಅದಕ್ಕೆ ಶ್ಲು ಆದೇಶ **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸಿಪ್ಪಿಗೆ ಲೋಪ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** (ಪಾ. ಸೂ ೬-೪-೭೫) ಎಂಬುದರಿಂದ ಅಂಗಕ್ಕೆ ಅಡಾಗಮ ಬರುವುದಿಲ್ಲ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಸ್ವರಾಜ್ಯಮ್—ರಾಜ್ಞೋ ಭಾವಃ ಕರ್ಮ ವಾ ರಾಜ್ಯಮ್. **ಸತ್ಯಂತಪುರೋಡಾಶಾದಿಭ್ಯೋ ಯಕ್** (ಪಾ ಸೂ ೫-೧-೧೨೪) ಎಂಬುದರಿಂದ ಯಕ್ ಪ್ರತ್ಯಯ. ಅಲ್ಲಿ **ರಾಜಾಸೇ** (ಪಾ. ಸೂ. ೫-೧-೧೨೪ ಗ) ಎಂದು ಪರಿತವಾಗಿದೆ ರಾಜನ್ ಶಬ್ದಕ್ಕೆ ಅಸಮಾಸದಲ್ಲಿ ಯಕ್ ಎಂದು ಅದರ ತಾತ್ಪರ್ಯ **ನಸ್ತದ್ಧಿತೇ** ಎಂಬುದರಿಂದ ಭಸಂಜ್ಞಾ ಇರುವುದರಿಂದ ನಾಂತವ ಟಿಗೆ (ಅನ್) ಲೋಪ. ಸ್ವಸ್ಯ ರಾಜ್ಯಂ ಸ್ವರಾಜ್ಯಮ್. **ಅಕರ್ಮಧಾರಯೇ ರಾಜ್ಯಮ್** (ಪಾ ಸೂ. ೬-೨-೧೩೦) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಒರುತ್ತದೆ ॥ ೧ ॥

॥ ಸಂಹಿತಾಪಾಠಃ ॥

ಸ ತ್ವಾಮದದ್ವೃಷಾ ಮದಃ ಸೋಮಃ ಶ್ಯೇನಾಭೃತಃ ಸುತಃ ।
ಯೇನಾ ವೃತ್ರಂ ನಿರಧ್ಬ್ಯೋಜಘಂಥ ವಜ್ರಿನ್ಓಜಸಾರ್ಚನ್ನನು
ಸ್ವರಾಜ್ಯಂ ॥ ೨ ॥

॥ ಪದಪಾಠಃ ॥

ಸಃ । ತ್ವಾ । ಅಮದತ್ । ವೃಷಾ । ಮದಃ । ಸೋಮಃ । ಶ್ಯೇನಃ । ಅಭೃತಃ । ಸುತಃ ।
ಯೇನ । ವೃತ್ರಂ । ನಿಃ । ಅತ್ಕಂ । ಜಘಂಥ । ವಜ್ರಿನ್ । ಓಜಸಾ । ಅರ್ಚನ್ ।
ಅನು । ಸ್ವಂ । ರಾಜ್ಯಂ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾ।ತ್ವಾಂ ಸ ಸೋಮೋ।ಮದತ್ । ಆಮದಯತ್ । ಹರ್ಷಂ ಪ್ರಾಪಯತ್ । ಕೀದೃಶಃ । ಸೋಮಃ । ವೃಷಾ ಸೇಚನಸ್ವಭಾವೋ ಮದೋ ಮದಕರೋ ಹರ್ಷಕಾರೀ ಶ್ಯೇನಾಭೃತಃ ಶ್ಯೇನರೂಪಮಾಪನ್ನಯಾ ಪಕ್ವಾ್ಯಕಾರಯಾ ಗಾಯತ್ರ್ಯಾ ದಿವಃ ಸಕಾಶಾದಾಹೃತಃ ಸುತೋ।ಭಿಷುತಃ । ಹೇ ವಜ್ರಿನ್ ವಜ್ರವನ್ನಿಂದ್ರ ಯೇನ ಪೀತೇನ ಸೋಮೇನೌಜಸಾ ಬಲಕರೇಣಾದ್ಭ್ಯೋ।ಂತರಿಕ್ಷಸಕಾಶಾದ್ವೃತ್ರಂ ನಿರ್ಜಘಂಥ ಹತವಾನಸಿ । ಅನ್ಯತ್ಪೂರ್ವವತ್ ॥ ಅಮದತ್ । ಮದೀ ಹರ್ಷೇ । ಅಸ್ಮಾಣ್ಣಿಚಿ ಮದೀ ಹರ್ಷಗ್ಲಪನಯೋರಿತಿ ಘಟಾದಿಷುಪಾಠಾತ್ ಮಿತ್ಸೇ ಸತಿ ಮಿತಾಂ ಹ್ರಸ್ವ ಇತಿ ಹ್ರಸ್ವತ್ವಂ । ಲಙಿ ಛಂದಸ್ಯುಭಯಥೇತಿ ಶಪ ಅರ್ಧಧಾತುಕತ್ವಾಣ್ಣೇರನಿಟೀತಿ ಣಿಲೋಪಃ । ಅದ್ಭ್ಯಃ । ಆಪ ಇತ್ಯಂತರಿಕ್ಷನಾಮ । ಆಪೋ ಭಿ । ಪಾ. ೭-೪-೪೮ । ಇತಿ ಪಕಾರಸ್ಯ ತತ್ವಂ । ಜಘಂಥ । ಕ್ರಾದಿನಿಯಮಾಪ್ರಾಪ್ತಸ್ಯೇಟ ಉಪದೇಶೇ।ತ್ವತ ಇತಿ ಪ್ರತಿಷೇಧಃ । ಅಭ್ಯಾಸಾಚ್ಛೇತಿ ಹಕಾರಸ್ಯ ಘತ್ವಂ । ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಯದ್ವೃತ್ತಯೋಗಾದನಿಘಾತಃ ॥

॥ ಪ್ರತಿಪದಾರ್ಥ ॥

ವಜ್ರಿನ್-- ವಜ್ರಾಯುಧಧರನಾದ ಎಲೈ ಎಂದ್ರನೇ । **ಓಜಸಾ**---ಬಲಕರವಾದ । **ಯೇನ**---ಯಾವ ಸೋಮರಸಪಾನದಿಂದ । **ಸ್ವರಾಜ್ಯಂ**---ನಿನ್ನ ಸ್ವಾಮಿತ್ವವನ್ನು । **ಅನು ಅರ್ಚನ್**---ಚೆನ್ನಾಗಿ ಪ್ರಕಟಿಸುತ್ತಾ । **ಅದ್ಭ್ಯಃ**---ಅಂತರಿಕ್ಷದಿಂದ । **ವೃತ್ರಂ**---ವೃತ್ರಾಸುರನನ್ನು । **ನಿಃ ಜಘಂಥ**---ವಧ ಮಾಡಿದೆಯೋ । **ಸಃ**---ಅಂತಹ । **ವೃಷಾ**---ಸೇಚನಸ್ವಭಾವವುಳ್ಳ । **ಮದಃ**---ಹರ್ಷಕರವಾದ । **ಶ್ಯೇನಾಭೃತಃ**---ಶ್ಯೇನ (ರೂಪವಾದ ಗಾಯತ್ರಿಯಿಂದ ಸ್ವರ್ಗದಿಂದ) ತರಲ್ಪಟ್ಟ । **ಸುತಃ**---ಸಿದ್ಧವಾದ । **ಸೋಮಃ**---ಸೋಮರಸವು । **ತ್ವಾ**---ನಿನ್ನನ್ನು । **ಅಮದತ್**---ಹೃಷ್ಟನನ್ನಾಗಿ ಮಾಡಿತು (ಸಂತೋಷಪಡಿಸಲಿ)

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ಮದಕಾರಕವಾದ ಮತ್ತು ಶ್ಯೇನರೂಪದ ಗಾಯತ್ರಿಯಿಂದ ತರಲ್ಪಟ್ಟ ಸೋಮರಸವು ನಿನಗಾಗಿ ಹಿಂಡಿ ಸಿದ್ಧಮಾಡಲ್ಪಟ್ಟಿರುವುದು. ಬಲಕರವಾದ ಅದನ್ನು ಪಾನಮಾಡಿ ನೀನು, ಸಂತುಷ್ಟನಾದೆ ಮತ್ತು ನಿನ್ನ ಸ್ವಾಮಿತ್ವವನ್ನು ಪ್ರಕಟಪಡಿಸುತ್ತಾ, ವೃತ್ರನನ್ನು ಅಂತರಿಕ್ಷದಿಂದ ಓಡಿಸಿದೆ.

English Translation

That exceedingly exhilarating Soma-juice, which was brought by the hawk (from heaven), when poured forth, has exhilarated you, so that in your vigour, thunderer, you have struck Vritra from the sky, manifesting your own sovereignty

॥ ವಿಶೇಷವಿಷಯಗಳು ॥

ವೃಷಾ—ಸೇಚನಸ್ವಭಾವಃ ನೀರುಗಳಿಂದ ತೋಯಿಸುವ ಸ್ವಭಾವವುಳ್ಳವನಾಗಿರುವ ಸೋಮನು ಎಂದು ಸಾಯಣರೂ, **ವರ್ಷಿತಾ ಯತ್ಪೀತ್ವಾ ಇಂದ್ರೋ ವರ್ಷತಿ ತದಿದಂ ಸೋಮ ಏವ ಉಪಚರ್ಯತೇ ।** ಸೋಮ ಪಾನದಿಂದ ತೃಪ್ತನಾಗಿ ಇಂದ್ರನು ಮಳೆಯು ಹುಯ್ಯುವಂತೆ ಮಾಡುವುದು ಸೋಮನಿಂದ ಆಗುವ ಕಾರಣ ಸೋಮನಿಗೆ **ವರ್ಷಿತಾ** ಎಂದು ಔಪಚಾರಿಕವಾದ ಪ್ರಯೋಗವಾಗಿರುತ್ತದೆ ಎಂದು ಸ್ವಂದಸಾಮಿಗಳೂ ಅರ್ಥವನ್ನು ಹೇಳುವರು

ಮದಃ—ಸುತಃ । ಮದಕರಃ ಹರ್ಷಕಾರೀ, ಅಭಿಷುತಃ । ಮದಃ ಎಂಬ ಶಬ್ದವು ಮದವನ್ನು ಉಂಟುಮಾಡುವುದು ಅಥವಾ ಹರ್ಷವನ್ನು ಉಂಟುಮಾಡುವುದು ಎಂಬ ಅರ್ಥದಲ್ಲಿಯೂ **ಸುತಃ** ಎಂಬ ಶಬ್ದವು ಹಿಂಡಲ್ಪಟ್ಟದ್ದು ಎಂಬ ಅರ್ಥದಲ್ಲಿಯೂ ಉಪಯೋಗಿಸಲ್ಪಟ್ಟಿರುತ್ತದೆ

ಶ್ಯೇನಾಭೃತಃ— ಶ್ಯೇನರೂಪಸಮಾಪನ್ನೇಯಾ ಪಕ್ಷ್ಯಾಕಾರಯಾ ಗಾಯತ್ರ್ಯಾ ದಿವಸ್ಸಕಾಶಾದಾಹೃತಃ । ಶ್ಯೇನ ಪಕ್ಷಿಯ ಆಕಾರವನ್ನು ಧರಿಸಿರುವ ಗಾಯತ್ರಿಯು ಸೋಮನನ್ನು ಸ್ವರ್ಗದಿಂದ ತಂದಿರುವ ಕಾರಣ ಸೋಮನು ಶ್ಯೇನಭೃತನೆಂದು ಇಲ್ಲಿ ಉಕ್ತವಾಗಿರುತ್ತದೆ ಐತರೇಯ ಬ್ರಾಹ್ಮಣ (೫ ಬ್ರಾ ೩–೫೫) ದಲ್ಲಿ ಈ ಇತಿಹಾಸವು ಪ್ರಸಿದ್ಧವಾಗಿರುವುದು ತೈತ್ತಿರೀಯ ಬ್ರಾಹ್ಮಣದಲ್ಲಿಯೂ—**ತೃತೀಯಸ್ಯಾಮಿತೋ ದಿವಿ ಸೋಮ ಆಸೀತ್ । ತಂ ಗಾಯತ್ರ್ಯಾಹರತ್** ಎಂದು ಉಕ್ತವಾಗಿರುವುದು ತೈತ್ತಿರೀಯ ಸಂಹಿತೆಯಲ್ಲಿಯೂ— **ಸಾಬ್ರವೀತ್ತೃತೀಯಸ್ಯಾಮಿತೋ ದಿವಿ ಸೋಮಸ್ತಮಾಹರ** ಎಂದು ಹೇಳಿರುವುದು. ರಾಜನಂತೆ ಶ್ರೇಷ್ಠನಾಗಿರುವ ಸೋಮನು ಸ್ವರ್ಗದಲ್ಲಿ ಇದ್ದನು ಭೂಮಿಯಲ್ಲಿ ಇರಲಿಲ್ಲ ಋಷಿಗಳೂ, ದೇವತೆಗಳೂ ಕೂಡ ಸೋಮನನ್ನು ಭೂಮಿಗೆ ಹೇಗೆ ತರುವುದು ಎಂದು ಯೋಚಿಸಿದರು. ಅನಂತರ ಅವರು— ನೀವು ಸೋಮನನ್ನು ಭೂಮಿಗೆ ಕರೆದು ತನ್ನಿರಿ ಎಂದು ಛಂದಸ್ಸುಗಳನ್ನು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನು ನಡಿಸಿಕೊಡಲು ಒಪ್ಪಿಕೊಂಡು ಛಂದಸ್ಸುಗಳು ಪಕ್ಷಿಗಳ ಆಕಾರವನ್ನು ತೊಂದಿ ಮೇಲಕ್ಕೆ ಹಾರಿದವು ಜಗತಿ, ಛಂದಸ್ಸು ಅವುಗಳಲ್ಲಿ ಎಲ್ಲಕ್ಕಿಂತಲೂ ಮೊದಲು ಹಾರಿಹೋಗಿ ಅರ್ಧದಾರಿಯಲ್ಲಿಯೇ ಆಯಾಸದಿಂದ ಸುಮ್ಮಗಾಯಿತು. ಅದು ಯಜ್ಞದಲ್ಲಿ (ದಾನವಾಗಿ) ಕೊಡುವ ದಕ್ಷಿಣೆಯನ್ನೂ ತಪಸ್ಸನ್ನೂ ತಂದಿತು ಬಳಿಕ ತ್ರಿಷ್ಟುಪ್ ಛಂದಸ್ಸು ಮೇಲಕ್ಕೆ ಹಾರಿ ಅರ್ಧದಾರಿಯಲ್ಲಿಯೇ ಆಯಾಸವನ್ನು ಹೊಂದಿ ದಕ್ಷಿಣೆಯನ್ನು ತಂದಿತು ಸೋಮನನ್ನು ತರಲಿಲ್ಲ ಅನಂತರ ಗಾಯತ್ರಿಯು ಪಕ್ಷಿಯ ರೂಪದಿಂದ ಮೇಲಕ್ಕೆ ಹಾರಿತು ಅದು ಸೋಮನು ಇರುವ ಪ್ರದೇಶವನ್ನು ತಲಪಿ,

ಸೋಮರಕ್ಷಕರನ್ನು ಹೆದರಿಸಿ, ಸೋಮನನ್ನು ತನ್ನ ಕಾಲುಗಳು ಮತ್ತು ಕೊಕ್ಕು ಇವುಗಳಿಂದ ಹಿಡಿದು ಭೂಮಿಗೆ ತಂದಿತು ಇದನ್ನು **ಐತರೇಯ ಬ್ರಾಹ್ಮಣದಲ್ಲಿ ಶ್ಯೇನಭೃತಃ** ಎಂಬುದಾಗಿ ಹೇಳಿರುತ್ತದೆ. ಆದ್ದರಿಂದಲೇ ಇಲ್ಲಿ ಶ್ಯೇನರೂಪಯಾ ಗಾಯತ್ರ್ಯಾ ಆಭೃತಃ ಶ್ಯೇನಾಭೃತಃ ಎಂದು ಹೇಳಿರುತ್ತದೆ

ಅಧ್ಯೃಕಿ—ಅಂತರಿಕ್ಷಸಕಾಶಾತ್ ವೃತ್ರಂ ನಿಃ ಜಘಂಥ—ಹತವಾನಸಿ, **ಯೇನ**—ಪೀತ್ವಾ, **ಸಾತುಂ ನಾ ಇತ್ಯರ್ಥಃ** । ಅಸ್ ಶಬ್ದವು ಅಂತರಿಕ್ಷವಾಚಿಯಾಗಿರುವುದು (ನಿ. ೨-೧೦) ವೃತ್ರಶಬ್ದಕ್ಕೆ ವೃತ್ರಾಸುರ ನೆಂದು ಅರ್ಥವು ಅಂತರಿಕ್ಷದಲ್ಲಿ ವೃತ್ರಾಸುರನನ್ನು ಹೊಡೆದಿರುತ್ತೀಯೆ ಎಂದು ಸಾಯಣರೂ, ಸೋಮಪಾನವನ್ನು ಮಾಡಿರುವ ಕಾರಣ ಬಲಯುಕ್ತನಾಗಿ, ಅಥವಾ ಸೋಮಪಾನಕ್ಕಾಗಿ **ವೃತ್ರಂ—ಮೇಘಂ ಅಸಾಮರ್ಥ್ಯಾಯ ನಿಜಘಂಥ ನಿಹ್ಯಯೇನ ಹಂಸಿ ಹತವಾನ್ ವಾ** । ಮೇಘವನ್ನು ಉದಕಕ್ಕಾಗಿ ಬಲವಾಗಿ ಹೊಡೆಯುತ್ತೀಯೆ ಅಥವಾ ಹೊಡೆದು ಇರುತ್ತೀಯೆ ಎಂದರೆ ಮೇಘಗಳಿಂದ ವೃಷ್ಟಿಯು ಆಗುವಂತೆ ಮಾಡುತ್ತೀಯೆ ಎಂದು ಸ್ಕಂದಸ್ವಾಮಿಗಳೂ ಅರ್ದವಿವರಣೆಯನ್ನು ಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ಅಮದತ್—ಮದೀ ಹರ್ಷೇ ಧಾತು ಪ್ರಯೋಜಕವ್ಯಾಪಾರ ತೋರುವುದರಿಂದ **ಹೇತುಮತಿ ಚ** (ಪಾ ಸೂ ೩-೧-೨೬) ಎಂಬುದರಿಂದ ಣಿಚ್ **ಅತ ಉಪಧಾಯಾಃ** ಎಂಬುದರಿಂದ ಣಿಚ್ ನಿಮಿತ್ತವಾಗಿ ಧಾತುವಿನ ಉಪಧೆಗೆ ವೃದ್ಧಿ **ಮದೀ ಹರ್ಷಗ್ಲೇಪನಯೋಃ** ಎಂದು ಘಟಾದಿಯಲ್ಲಿ ಪಾರಮಾಡಿರುವುದರಿಂದ ಹರ್ಷಾರ್ಥ ತೋರುವುದರಿಂದ ಇದಕ್ಕೆ ಮಿತ್ ಸಂಜ್ಞಾ ಬರುತ್ತದೆ. **ಮಿತಾಂ ಹ್ರಸ್ವಃ** (ಪಾ ಸೂ ೬-೪-೯೨) ಎಂಬುದರಿಂದ ಉಪಧೆಗೆ ಪುನಃ ಹ್ರಸ್ವ. ಣಿಜಂತದ ಮೇಲೆ ಲಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ ಇತಶ್ಚ ಸೂತ್ರದಿಂದ ಇಕಾರಲೋಪ. ಶಪ್ ವಿಕರಣ. **ಛಂದಸ್ಯುಭಯಥಾ** ಎಂಬುದರಿಂದ ಶಪ್ಪಿಗೆ ಆರ್ಧಧಾತುಕ ಸಂಜ್ಞೆ ಬರುವುದರಿಂದ **ಸೇರನಿಟ** (ಪಾ. ಸೂ ೬-೪-೫೧) ಎಂಬುದರಿಂದ ಣಿಚ್ಚಿಗೆ ಲೋಪ ಅಂಗಕ್ಕೆ ಆಡಾಗಮ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಅಧ್ಯೃಕಿ—ಅಸ್ ಎಂಬುದು ಇಲ್ಲಿ ಅಂತರಿಕ್ಷ (ಆಕಾಶ) ದ ಹೆಸರು ಇದು ಬಹುವಚನಾಂತವಾಗಿ ಸ್ತ್ರೀಲಿಂಗ ದಲ್ಲಿರುತ್ತದೆ. ಇದಕ್ಕೆ ಪಂಚಮಿಯಲ್ಲಿ ಭ್ಯಸ್ ಪರವಾದಾಗ ಭಕಾರಾದಿ ಪ್ರತ್ಯಯ ಪರವಾದುದರಿಂದ **ಅಪೋಭಿ** (ಪಾ. ಸೂ. ೭-೪-೪೮) ಎಂಬುದರಿಂದ ಪಕಾರಕ್ಕೆ ತಕಾರಾದೇಶ ಬರುತ್ತದೆ ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ **ಊಡಿದಂಪದಾದಿ**—(ಪಾ ಸೂ ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಜಘಂಥ—ಹನ ಹಿಂಸಾಗತ್ಯೋಃ ಧಾತು ಲಿಟ್ ಮಧ್ಯಮಪುರುಷ ಏಕವಚನದಲ್ಲಿ **ಹೆರಸ್ಯೈಹಪದಾನಾಂ**—(ಪಾ ಸೂ ೩-೪-೮೭) ಎಂಬುದರಿಂದ ಥಲಾದೇಶ. **ಲಿಣ್ಮಿತ್ಸ್ವಾನಾಂ** ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಹಲಾದಿಶೇಷ. ಚುತ್ವ. ಜಸ್ತ್ವ **ಅಭ್ಯಾಸಾಚ್ಚ** (ಪಾ. ಸೂ. ೭-೩-೫೫) ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಧಾತುವಿನ ಹಕಾರಕ್ಕೆ ಕುತ್ವ. **ಕೃಸೃಭೃ**—(ಪಾ ಸೂ ೭-೨-೧೩) ಸೂತ್ರದಲ್ಲಿ **ಲಿಟ್ಪಿನಲ್ಲಿ** ಇನ್ನಿಷೇಧ ಬರುವುದಾದರೆ ಈ ಸೂತ್ರ ಪರಿತವಾದವುಗಳಿಗೆ ಮಾತ್ರವೆಂದು ನಿಯಮಮಾಡಿರುವುದರಿಂದ ಇಲ್ಲಿ ಥಲಿಗೆ ಇಟ್ ಪ್ರಾಪ್ತವಾದರೆ **ಉಪದೇಶೇಶ್ವತಃ**

(ಪಾ. ಸೂ. ೭-೨-೬೨) ಎಂಬುದರಿಂದ ಅಕಾರವುಳ್ಳ ಧಾತುವಾದುದರಿಂದ ಪುನಃ ನಿಷೇಧ ಬರುತ್ತದೆ. ನಕಾರಕ್ಕೆ ಅನುಸ್ವಾರ ಪರಸವರ್ಣ ಜಘೆನ್ಥ ಎಂದು ರೂಪವಾಗುತ್ತದೆ. ಹಿಂದೆ ಯಚ್ಛಬ್ದ ಸಂಬಂಧವಿರುವುದರಿಂದ **ಯೆದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಪ್ರತ್ಯಯ **ಲಿತ್ವಾ**ದುದರಿಂದ **ಲಿತಿ** (ಪಾ. ಸೂ ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ

ಅರ್ಚನ್—ಅರ್ಚ ಪೂಜಾಯಾಂ ಧಾತು. ಲಡರ್ಥದಲ್ಲಿ ಶತೃಪ್ರತ್ಯಯ. ಶಪ್ ಏಕರಣ. **ಅತೋಗುಣೇ** ಎಂಬುದರಿಂದ ಪರರೂಪ. ಪ್ರಥಮಾ ಸುಪರವಾದಾಗ **ಉಗಿದಚಾಂ ಸ**—ಎಂಬುದರಿಂದ ನುಮಾಗಮ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ ಸಂಯೋಗಾಂತಲೋಪದಿಂದ ತಕಾರಲೋಪ ಶಪ್, ಲಸಾರ್ವ ಧಾತುಕವೂ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ ॥ ೭ ॥

[illegible]

[illegible]

ಪ್ರೇಹ್ಯಭೀಹಿ ಧೃಷ್ಣುಹಿ ನ ತೇ ವಜ್ರೋ ನಿ ಯಂಸತೇ ।
ಇಂದ್ರ ನೃಮ್ಣಂ ಹಿ ತೇ ಶವೋ ಹನೋ ವೃತ್ರಂ ಜಯಾಪೋಽರ್ಚನ್ನನು ಸ್ವರಾಜ್ಯಂ ॥ ೩ ॥

[illegible]

ಪ್ರ । ಇಹಿ । ಅಭಿ । ಇಹಿ । ಧೃಷ್ಣುಹಿ । ನ । ತೇ । ವಜ್ರಃ । ನಿ । ಯಂಸತೇ ।
ಇಂದ್ರ । ನೃಮ್ಣಂ । ಹಿ । ತೇ । ಶವಃ । ಹನಃ । ವೃತ್ರಂ । ಜಯಾಃ । ಅಪಃ ।
ಅರ್ಚನ್ । ಅನು । ಸ್ವ ರಾಜ್ಯಂ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಪ್ರೇಹಿ । ಪ್ರಕರ್ಷೇಣ ಗಚ್ಛ । ಅಭೀಹಿ । ಹಂತವ್ಯಾನ್ ಶತ್ರೂನಾಭಿಮುಖ್ಯೇನ ಪ್ರಾಪ್ನುಹಿ । ಪ್ರಾಪ್ಯ ಚ ಧೃಷ್ಣುಹಿ । ತಾನ್ ಶತ್ರೂನಭಿಭವ । ತೇ ತವ ವಜ್ರೋ ನ ನಿ ಯಂಸತೇ । ಶತ್ರುಭಿರ್ನ ನಿಯಮ್ಯತೇ । ಅಪ್ರತಿಹತಗತಿರಿತ್ಯರ್ಥಃ । ತಥಾ ತೇ ತವಸ್ತ್ವದೀಯಂ ಬಲಂ ನೃಮ್ಣಂ ಪುರುಷಾಣಾಂ ನಾಮಕಮಭಿಭಾವಕಂ ಹಿ ಯಸ್ಮಾದೇವಂ ತಸ್ಮಾದ್ವೃತ್ರಮಸುರಂ ಮೇಘಂ ವಾ ಹನಃ । ಜಹಿ । ತತೋಽನಂತರಂ ತೇನ ನಿರುದ್ಧಾ ಅಪ ಉದಕಾನಿ ಜಯೋಃ । ವೃತ್ರಂ ಹತ್ವಾ ತೇನಾವೃತಮುದಕಂ ಲಭಸ್ವೇತ್ಯರ್ಥಃ । ಅನ್ಯತ್ಸಮಾನಂ ॥ ಯಂಸತೇ । ಯಮೇಃ ಕರ್ಮಣಿ ಲೇಟಿ ಸಿಬ್ಬಹುಲಮಿತಿ ಸಿಪ್ । ಲೇಟೋಽಡಾಟಾವಿತ್ಯಡಾಗಮಃ । ಹನಃ । ಲೋಡರ್ಥೇ ಛಾಂದಸೋ ಲಙ್ । ಬಹುಲಂ ಛಂದಸೀತಿ ಶಪೋ ಲುಗಭಾವಃ । ಶಪಃ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ಪೂರ್ವಪದಸ್ಯಾಸಮಾನನಾಕೃಸ್ಥತ್ವಾನ್ನಿಘಾತಾಭಾವಃ । ಜಯೋಃ । ಜಯತೇರ್ಲೇಟ್ಯಾಡಾಗಮಃ । ಪೂರ್ವವತ್ಸ್ವರಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಪ್ರ ಇಹಿ—ಶೀಘ್ರವಾಗಿ ಹೋಗು । ಅಭಿ ಇಹಿ—(ಶತ್ರುಗಳನ್ನು) ಎದುರಿಸು । ಧೃಷ್ಣುಹಿ—(ಅವರನ್ನು) ಪರಾಜಯಗೊಳಿಸು । ಹಿ—ಯಾವ ಕಾರಣದಿಂದ । ತೇ—ನಿನ್ನ । ವಜ್ರಃ—ವಜ್ರಾಯುಧವು । ನ ನಿ ಯಂಸತೇ—(ಶತ್ರುಗಳಿಂದ) ನಿಯಮಿಸಲ್ಪಡುವುದಿಲ್ಲವೋ । ತೇ ತವಃ—ನಿನ್ನ ಬಲವು । ನೃಮ್ಣಂ—ಪುರುಷರನ್ನು ಸೋಲಿಸಶಕ್ಯವೋ (ಆ ಕಾರಣದಿಂದ) । ಸ್ವರಾಜ್ಯಂ—ನಿನ್ನ ಸ್ವಾಮಿತ್ವವನ್ನು । ಅನು ಆರ್ಚನ್—ಪ್ರಕಟಗೊಳಿಸುತ್ತಾ । ವೃತ್ರಂ—ವೃತ್ರಾಸುರನನ್ನು (ಮೇಘವನ್ನು) । ಹನಃ—ಹೊಡಿ । ಅಪಃ—(ತಡೆಯಲ್ಪಟ್ಟ) ಉದಕನನ್ನು । ಜಯೋಃ—ಜಯಿಸು (ಬರುವಂತೆ ಮಾಡು)

॥ ಭಾವಾರ್ಥ ॥

ಎಲೈ ಇಂದ್ರನೇ ಶೀಘ್ರವಾಗಿ ಹೋಗಿ, ಶತ್ರುಗಳನ್ನು ಎದುರಿಸಿ, ಅವರನ್ನು ಪರಾಭವಗೊಳಿಸು, ನಿನ್ನ ವಜ್ರಾಯುಧಕ್ಕೆ ತಡೆಯಿಲ್ಲ; ನಿನ್ನ ಶಕ್ತಿಯು ಮನುಷ್ಯರನ್ನೂ (ಶತ್ರುಗಳನ್ನೂ) ನಾಶಪಡಿಸುವಂತಹುದು, ಆದುದರಿಂದ, ನಿನ್ನ ಸ್ವಾಮಿತ್ವವನ್ನು ಪ್ರಕಟಗೊಳಿಸುತ್ತಾ, ವೃತ್ರನನ್ನೂ (ಮೇಘವನ್ನೂ) ಪ್ರಹರಿಸಿ ಅವನು ತಡೆದಿರುವ ವೃಷ್ಟ್ಯುದಕವನ್ನೂ ಬೀಳುವಂತೆ ಮಾಡು.

English Translation

Hasten, assail, subdue, your thunderbolt cannot fail; your vigour, Indra, destroys men ; slay Vritra, win the waters, manifesting your own sovereignty.

॥ ವಿಶೇಷವಿಷಯಗಳು ॥

ಇಂದ್ರ ಸ್ಯಮ್ನಂ ಹಿ ತೇ ಶವಃ—ಹೇ ಇಂದ್ರ ತ್ವದೀಯಂ ಬಲಂ ನ್ಯಾಣಾಂ ಪುರುಷಾಣಾಂ ನಾಮಕಮಭಿಭಾವಕಂ । ಎಲೈ ಇಂದ್ರನೇ ನಿನ್ನ ಬಲವು ಮನುಷ್ಯರನ್ನು ತಿರಸ್ಕರಿಸುವುದು ಎಂದು ಅರ್ಥವು ಶವಃ ಎಂಬ ಪದವು ಇಪ್ಪತ್ತೈಂಟು ಬಲನಾಮಗಳಲ್ಲಿ ಪರಿತವಾಗಿರುವುದರಿಂದ ಬಲವೆಂದು ಅರ್ಥವನ್ನೂ ಬೋಧಿಸುತ್ತದೆ. (ನಿ ೩–೯) ಸ್ಯಮ್ನಂ ಶಬ್ದವೂ ಇಪ್ಪತ್ತೈಂಟು ಬಲನಾಮಗಳಲ್ಲಿ (ನಿ ೩–೯) ಪಠಿತವಾಗಿರುವುದು ಮತ್ತು ಮಹಂ ರೇಕ್ಣಃ ಎಂಬ ಇಪ್ಪತ್ತೈಂಟು ಧನನಾಮಗಳಲ್ಲಿಯೂ (ನಿ ೩–೯) ಪರಿತವಾಗಿರುತ್ತದೆ. ಯಾಸ್ಕರು **"ನ್ಯನ್ ನತಮ್"** ಎಂದು ಭಾಷ್ಯದಲ್ಲಿ ಅರ್ಥವನ್ನು ವಿವರಿಸಿರುತ್ತಾರೆ. ಇದಕ್ಕೆ ಮನುಷ್ಯರನ್ನು ತಗ್ಗಿಸುವಂತೆ ಮಾಡುವುದು ಎಂದು ಅರ್ಥವು **"ನ್ಯೂನಾ ಶತ್ರುಭೂತಾನ್ ಪ್ರತಿ ನಮತಿ ನಮಯತಿ ಪ್ರಹ್ವೀಕರೋತಿ" ಇತಿ ಸ್ಕಂದಸ್ವಾಮಿನಾ.** ಶತ್ರುಗಳಾದವರನ್ನು ತಗ್ಗುವಂತೆ ನಾಡುತ್ತದೆ ಎಂದು ಸ್ಕಂದಸ್ವಾಮಿಗಳು ಅರ್ಥನಾಡಿರುವರು ಇಂದ್ರನ ಬಲವು ಶತ್ರುಗಳನ್ನು ತಿರಸ್ಕರಿಸುವುದು (ಸೋಲಿಸುವುದು) ಎಂದು ಅರ್ಥವು

ಅರ್ಚನ್—ಪೂಜಯೇ, ಸ್ವಸ್ಯ ಸ್ವಾಮಿತ್ವಂ ಪ್ರಕಟಯೇ । ಅರ್ಚತಿ ಎಂಬ ಕ್ರಿಯಾಪದವು ನಲವತ್ತನಾಲ್ಕು ಅರ್ಚತಿಕರ್ಮಬೋಧಕವಾದ ಪದಗಳಲ್ಲಿ (ನಿ ೩–೧೪) ಉಕ್ತವಾಗಿರುವುದರಿಂದಲೂ, **ಅರ್ಚ–ಪೂಜಾಯಾಂ** ಎಂಬ ಧಾತುವಿನಿಂದ ಅರ್ಚನ್ ಎಂಬ ಶಬ್ದರೂಪವು ನಿಷ್ಪನ್ನವಾಗಿರುವುದರಿಂದಲೂ ಪೂಜಿಸುವುದು ಎಂದು ಅರ್ಥವು ಇಲ್ಲಿ ಇಂದ್ರನು ತನಗೆ ಇರುವ ಸ್ವರಾಜ್ಯದ ವಿಷಯದಲ್ಲಿ ಆಚರಿಸಬೇಕಾದ ಪೂಜೆಯು ತನ್ನ ಪ್ರಭುತ್ವವು (ರಕ್ಷಣೆಯ ಕ್ರಮವು) ಎಲ್ಲರಿಗೂ ಅನುಕೂಲವಾಗಿ, ಸುಖಕರವಾಗಿರುವಂತೆ ನಡೆಯುವುದಾಗಿರುವುದರಿಂದ ತನ್ನ ಸ್ವಾಮಿತ್ವವು ಎಲ್ಲರಿಗೂ (ತೋರಿಸು) ಕಾಣುವಂತೆ ಆಚರಿಸುವುದು ಎಂದು ಅರ್ಥವು

ವೃತ್ರಂ ಹನಃ ಅಪಃ ಜಯಾಃ—ಅಸುರಂ ಮೇಘಂ ವಾ ಜಹಿ । ವೃತ್ರಂ ಹತ್ವಾ ತೇನಾವೃತಮುದಕಂ ಲಭಸ್ವ । ವೃತ್ರಶಬ್ದವು- ಅದ್ರಿಃ, ಗಿರಯಃ, ಎಂಬ ಮೂವತ್ತು ಮೇಘವಾಚಕ ಪದಗಳಲ್ಲಿ (ನಿ ೭–೨೧) ಉಕ್ತವಾಗಿರುವುದು ವೃಙ್ ವರಣೇ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು **ವೃಣೋತಿ ಆಚ್ಛಾದಯತಿ ಕೃತ್ಸ್ನಂ ನಭಃ** ಅಂತರಿಕ್ಷವೆಲ್ಲವನ್ನೂ ಆವರಿಸುವುದು ಎಂಬ ಅರ್ಥವನ್ನು ಬೋಧಿಸುವುದರಿಂದಲೂ **ಅಥವಾ** ವೃಧು ವೃದ್ಧೌ ಎಂಬ ಧಾತುವಿನಿಂದ ನಿಷ್ಪನ್ನವಾಗಿ **ವರ್ಧತೇ ಹಿ ವರ್ಷಾಸು** ವರ್ಷಋತುವಿನಲ್ಲಿ ವೃದ್ಧಿಯನ್ನು ಹೊಂದುವುದರಿಂದ ವೃತ್ರ ಶಬ್ದವು ಮೇಘವೆಂಬ ಅರ್ಥವನ್ನು ಬೋಧಿಸುವುದು. ಮತ್ತು ಈ ಶಬ್ದವು ಅಸು ಕ್ಷೇಪಣೇ ಎಂಬ ಧಾತುವಿನಿಂದ ನಿಷ್ಪನ್ನವಾದ ಅಸುರ ಶಬ್ದಕ್ಕೆ **ಅಸ್ಯತೇ ಕ್ಷಿಪ್ಯತೇ ಸ್ಥಾನೇ ಇಂದ್ರೇಣ ವರ್ಷಾರ್ಥಂ** ಇಂದ್ರನಿಂದ (ಉದಕವನ್ನು) ನೀರನ್ನು ಸುರಿಸುವುದಕ್ಕಾಗಿ ಪ್ರೇರಿಸಲ್ಪಡುವ ಕಾರಣ ಅಸುರಶಬ್ದವು ಮೇಘವಾಚಕವಾಗಿ ವೃತ್ರಶಬ್ದದ ಸಂಗಡ ಪರಿತವಾಗಿರುವುದು. ಇದರಂತೆಯೇ ಅಸುರಶಬ್ದಕ್ಕೆ ಜಲವಾನ್, ಪ್ರಾಣವಾನ್ ಇನೇ ಮೊದಲಾದ ಅರ್ಥಗಳೂ ಇರುತ್ತವೆ. ಅಪ್ ಶಬ್ದವು–ನೂರೊಂದು ಉದಕನಾಮಗಳಲ್ಲಿ ಅಮೃತಶಬ್ದದ ಸಂಗಡ ನಿರುಕ್ತದಲ್ಲಿ (ನಿ. ೭–೨೪) ಉಕ್ತವಾಗಿರುತ್ತದೆ. **ಲೋಕ ರಕ್ಷಣೆಗೆ ಅತ್ಯಂತ ಉಪಯುಕ್ತವಾಗಿರುವ ಉದಕಗಳನ್ನು ತಡದಿರುವ ಮೇಘಗಳನ್ನು ನಿಗ್ರಹಿಸಿ ಅಮೃತವನ್ನು (ಅಮೃತದಂತಿರುವ ನೀರನ್ನು) ಸುರಿಸುವಂತೆ ನಾಡು ಎಂದು ಇಂದ್ರನನ್ನು ಕುರಿತು ಪ್ರಾರ್ಥನೆಯು**

ಇತಿಹಾಸದಪಕ್ಷವಾದ ವ್ಯಾಖ್ಯಾನದಲ್ಲಿ ವೃತ್ರನೆಂಬ ಅಸುರನು ಇದ್ದನು. ಅವನು ದಿನದಿನಕ್ಕೆ ಇಷುಮಾತ್ರ ಪ್ರವರ್ಧಣ ದಿಂದ ಬೆಳೆದು ದೇವತೆಗಳಿಗೂ ಲೋಕಕ್ಕೂ ರಕ್ಷಣೆಗೆ ಸಾಧನವಾದ ಅಮೃತವನ್ನೂ ಉದಕವನ್ನೂ ತಡೆಯುತ್ತಿದ್ದ ನಾದುದರಿಂದ ಇಂದ್ರನು ವಜ್ರಾಯುಧವನ್ನು ಪ್ರಯೋಗಿಸಿ ಅವನನ್ನು ನಿಗ್ರಹಮಾಡಿ ಎಲ್ಲರಿಗೂ ಸುಖವನ್ನು ಉಂಟು ಮಾಡಿದನೆಂದು ಅರ್ಥವು

॥ ವ್ಯಾಕರಣಪ್ರಕ್ರಿಯಾ ॥

ಇಹಿ—ಇಣ್ ಗತೌ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪಿಗೆ ಹಿ ಆದೇಶ. **ಆದಿ ಪ್ರ್ಯಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. ಹಿಗೆ ಅಪಿತ್ವವನ್ನು ವಿಧಾನಮಾಡಿರುವುದರಿಂದ ಙಿತ್ಸು ಬರುವುದ ರಿಂದ ಅದನ್ನು ನಿಮಿತ್ತೀಕರಿಸಿ ಧಾತುವಿಗೆ ಗುಣ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಧೃಷ್ಣುಹಿ—ಇಣ್ ಧೃಷಾ ಪ್ರಾಗಲ್ಭ್ಯೇ. ಧಾತು ಸ್ವಾದಿ ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಹಿ ಆದೇಶ **ಸ್ವಾದಿಭ್ಯಃ ಶ್ನುಃ** ಎಂಬುದರಿಂದ ಶ್ನು ವಿಕರಣ. **ಸಾರ್ವಧಾತುಕಮಪಿತ್** ಎಂಬುದರಿಂದ ಇದಕ್ಕೆ ಙಿತ್ಸು ಬರುವುದರಿಂದ ಲಘೂಪಧಗುಣ ಬರುವುದಿಲ್ಲ. **ರಷಾಭ್ಯಾಂ ನೋ ನಃ ಸಮಾನಪದೇ** ಸೂತ್ರದಿಂದ ಪ್ರತ್ಯಯ ನಕಾರಕ್ಕೆ ಣತ್ವ. **ತಿಙ್ಙತಿಙಃ** ಸೂತ್ರದಲ್ಲಿ ಅತಿಙಃ ಎಂದು ಪರ್ಯುದಾಸಮಾಡಿರುವುದರಿಂದ ಇದರ ಹಿಂದೆ ಇಹಿ ಎಂಬ ತಿಙಂತವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಹಿಗೆ ಅಪಿತ್ವವಿರುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತ ವಾಗುತ್ತದೆ

ಯಂಸತೇ—ಯನು ಉಪರಮೇ ಧಾತು. ಇದಕ್ಕೆ ಕರ್ಮಣಿಯಲ್ಲಿ ಲೇಟ್ ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ. **ಟಿತಆತ್ಮನೇಪದಾನಾಂ**—ಸೂತ್ರದಿಂದ ಏತ್ವ **ಸಿಬ್ಬಹುಲಂ ಲೇಟಿ**(ಪಾ ಸೂ ೩-೧-೩೪) ಎಂಬು ದರಿಂದ ಸಿಪ್ **ಲೇಟೋಽಡಾಟೌ** (ಪಾ. ಸೂ ೩-೪-೪೪) ಎಂಬುದರಿಂದ ಪ್ರತ್ಯಯಕ್ಕೆ ಅಡಾಗಮ ಧಾತುವಿನ ಮಕಾರಾಕ್ಕೆ **ನಶ್ಚಾಪದಾಂತಸ್ಯ ಝಲಿ** ಸೂತ್ರದಿಂದ ಅನುಸ್ವಾರ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಹನಃ—ಹನ ಹಿಂಸಾಗತ್ಯೋಃ ಧಾತು ಅದಾದಿ. **ಲೋಡರ್ಥ ತೋರುವಾಗ ಛಂದಸಿ ಲುಙ್ಲಙ್ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ ಇಕಾರಲೋಪ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್ ಬರುವುದಿಲ್ಲ. **ಬಹುಲಂಛಂದಸ್ಯಮಾಙ್ಯೋಗೇಽಪಿ** ಎಂಬು ದರಿಂದ ಅಡಾಗಮ ಬರುವುದಿಲ್ಲ ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗ. ಇದರ ಪೂರ್ವಪದವು ವಾಕ್ಯಾಂತರ ಸಂಬದ್ಧ ವಾದುದರಿಂದ ಸಮಾನವಾಕ್ಯದಲ್ಲಿ ಪದದ ಪರದಲ್ಲಿ ಬಾರದಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಪಿತ್ವಾದುದ ರಿಂದ **ಅನುದಾತ್ತೌ ಸುಪ್ಪಿತೌ** ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

ಜಯೋಃ—ಜಿ ಜಯೇ ಧಾತು. ಲೇಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಇತೆತ್ವಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೨) ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ** ಎಂಬುದರಿಂದ ಅದಕ್ಕೆ ಅಡಾಗಮ. ಶಪ್ ವಿಕರಣ ನಿಮಿತ್ತನಾಗಿ ಧಾತುವಿನ ಇಕ್ಕಿಗೆ ಗುಣ. ಆಯಾದೇಶ ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ ಹಿಂದಿನಂತೇ ಧಾತುಸ್ವರ ಉಳಿಯುತ್ತದೆ .

ಅಪಃ—**ಊಡಿದಂ ಪದಾದಿ**—ಸೂತ್ರದಿಂದ ವಿಭಕ್ತಿಗೆ (ಶಸ್) ಉದಾತ್ತಸ್ವರ ಬರುತ್ತದೆ ॥ ೪ ॥

॥ ಸಂಹಿತಾಪಾಠಃ ॥

ನಿರಿಂದ್ರ ಭೂಮ್ಯಾ ಅಧಿ ವೃತ್ರಂ ಜಘಂಥ ನಿರ್ದಿವಃ ।
ಸೃಜಾ ಮರುತ್ವತೀರವ ಜೀವಧನ್ಯಾ ಇಮಾ ಅಪೋಽರ್ಚನ್ನನು
ಸ್ವರಾಜ್ಯಂ ॥ ೪ ॥

॥ ಪದಪಾಠಃ

ನಿಃ । ಇಂದ್ರ । ಭೂಮ್ಯಾಃ । ಅಧಿ । ವೃತ್ರಂ । ಜಘಂಥ । ನಿಃ । ದಿವಃ ।
ಸೃಜ । ಮರುತ್ವತೀಃ । ಅವ । ಜೀವಽಧನ್ಯಾಃ । ಇಮಾಃ । ಅಪಃ । ಅರ್ಚನ್ ।
ಅನು । ಸ್ವಽರಾಜ್ಯಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಭೂಮ್ಯಾ ಅಧಿ ಭೂಲೋಕಸ್ಯೋಪರಿ ವೃತ್ರಂ ನಿರ್ಜಘಂಥ । ನಿಃಶೇಷೇಣ ಹತೇವಾನಸಿ । ತಥಾ ದಿವೋ ದ್ಯುಲೋಕಾನ್ನಿರ್ಜಘಂಥ । ಹತ್ವಾ ಚೇಮಾ ಅಪೋ ವೃಷ್ಟ್ಯುದಕಾನ್ಯವ ಸೃಜ । ಅಧಃ ಪಾತಯ । ಕೀದೃಶೀಃರಪಃ । ಮರುತ್ವತೀರ್ಮರುದ್ಭಿಃ ಸಂಯುಕ್ತಾ ಜೀವಧನ್ಯಾ ಜೀವಾಃ ಪ್ರಾಣಿನೋ ಧನ್ಯಾಸ್ತೃಪ್ತಾ ಯಾಭಿಸ್ತಾಃ । ಅನ್ಯತ್ಪಮಾನಂ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಭೂಮ್ಯಾಃ ಅಧಿ**—ಭೂಲೋಕದ ಮೇಲೆ । **ವೃತ್ರಂ**—ವೃತ್ರಾಸುರನನ್ನು । **ನಿಃ ಜಘಂಥ**—ನಿಶ್ಶೇಷವಾಗಿ ವಧಿಸಿದ್ದೀಯೆ । **ದಿವಃ**—(ಹಾಗೆಯೇ) ದ್ಯುಲೋಕದಿಂದಲೂ । ನಿಃ (ಜಘಂಥ)—ವಧಿಸಿದ್ದೀಯೇ (ಅನಂತರ) । **ಇಮಾಃ**—ಈ । **ಮರುದ್ವತೀಃ**—ಮರುತ್ತಿನಿಂದ ಯುಕ್ತವಾದ । **ಜೀವಧನ್ಯಾಃ**—ಪ್ರಾಣಿಗಳು ಧನ್ಯರಾಗುವಂತಹ । **ಅಪಃ**—ವೃಷ್ಟ್ಯುದಕವನ್ನು । **ಸ್ವರಾಜ್ಯಂ**—ನಿನ್ನ ಸ್ವಾಮಿತ್ವವನ್ನು । **ಅನು ಅರ್ಚನ್**—ಪ್ರಕಟಗೊಳಿಸುತ್ತಾ । **ಅವ ಸೃಜ**—ಕೆಳಗೆ ಬೀಳುವಂತೆ ಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ವೃತ್ರನನ್ನು ಭೂಲೋಕ ಮತ್ತು ಆಕಾಶಗಳೆರಡರಿಂದಲೂ ಓಡಿಸಿದ್ದೀಯೇ, (ಈಗ) ವಾಯುವಿನಿಂದ ಯುಕ್ತವಾದ, ಜೀವಿಗಳನ್ನು ಧನ್ಯರನ್ನಾಗಿ ಮಾಡುವ ವೃಷ್ಟ್ಯುದಕವನ್ನು, ನಿನ್ನ ಸ್ವಾಮಿತ್ವವನ್ನು ಪ್ರಕಟಗೊಳಿಸುತ್ತಾ, ಕೆಳಗೆ ಬೀಳುವಂತೆ ಮಾಡು. (ಮಳೆ ಹುಯ್ಯುವಂತೆ ಮಾಡು)

English Translation.

You have struck Vritra from off the earth and from heaven; (now) let loose the wind-bound, life-sustaining rain, manifesting your own sovereignty.

॥ ವಿಶೇಷವಿಷಯಗಳು ॥

ಮರುತ್ವತೀಃ—ಮರುದ್ಭಿಃ ಸಂಯುಕ್ತಾಃ । ವಾಯುವಿನಿಂದ ಪ್ರೇರಿತವಾಗಿರುವ ವೃಷ್ಟಿಯಿಂದ ಭೂಮಿಗೆ ಬೀಳಲಾಗಿರುವ ಉದಕಗಳನ್ನು ಎಂದು ಅರ್ಥವು. ಮಳೆ ಹುಯ್ಯುವಾಗ ಗಾಳಿಯು ರಭಸದಿಂದ ಬೀಸುವುದು ಸ್ವಾಭಾವಿಕವು. ಸ್ಕಂದಸ್ವಾಮಿಗಳು–**ದಾತೃತ್ವೇನ ಮರುತೋ ಯಾಸಾಂ ಸಂತಿ**, ಮರುದ್ದೇವತೆಗಳು ಉದಕಗಳನ್ನು ಕೊಡುವುದರಲ್ಲಿ ಸಿದ್ಧರಾಗಿರುವರು, ಅಥವಾ **ತ್ವತ್ಸಖಾಯೋ ಮರುತಃ ಯೇ ದಾತುಂ ಸಮರ್ಥಾಃ** ನಿನ್ನ ಸ್ನೇಹಿತರಾದ ಮರುದ್ದೇವತೆಗಳು ಉದಕಗಳನ್ನು ಕೊಡುವುದರಲ್ಲಿ ಸಮರ್ಥರು ಎಂದೂ ಅರ್ಥವನ್ನು ಹೇಳಿರುವರು.

ಜೀವಧನ್ಯಾಃ—ಜೀವಾಃ ಪ್ರಾಣಿನೋ ಧನ್ಯಾಸ್ತೈಪ್ತಾ ಯಾಭಿಸ್ತಾಃ । ಪ್ರಾಣಿಗಳು ನೀರನ್ನು ಕುಡಿದು ಅಥವಾ ಬೇಕಾದ ಕಾರ್ಯಗಳಲ್ಲಿ ಉಪಯೋಗಿಸಿ ತೃಪ್ತಿಯನ್ನು ಅಥವಾ ಸಂತೋಷವನ್ನು ಹೊಂದುವುದರಿಂದ ನೀರಿಗೆ ಈ ಹೆಸರು ಬಂದಿರುವುದು. ಸ್ಕಂದಸ್ವಾಮಿಗಳು ಧನಶಬ್ದದಿಂದ ಧನ್ಯಶಬ್ದವು ನಿಷ್ಪನ್ನವಾಗಿರುವ ಕಾರಣ ಉದಕವು ಪ್ರಾಣಿಗಳಿಗೆ ಧನವಾಗಿರುವುದೆಂದೂ, ಅಥವಾ ಸಂತೋಷಪಡಿಸು ಎಂದು ಅರ್ಥವುಳ್ಳ **ಧಿಸು ಪ್ರೀಣನೇ** ಎಂಬ ಧಾತುವಿನಿಂದ ಧನ್ಯಶಬ್ದದ ರೂಪವು ನಿಷ್ಪನ್ನವಾಗಿರುವುದರಿಂದ **ಸರ್ವಜೀವಾನಾಂ ಪ್ರೀಣಯಿತ್ರೀಃ** ಎಲ್ಲಾ ಪ್ರಾಣಿಗಳನ್ನೂ ಸಂತೋಷಪಡಿಸುವವುಗಳು ಎಂದೂ ಅರ್ಥವನ್ನು ಹೇಳಿರುವರು

ವ್ಯಾಕರಣಸ್ಯ ಕ್ರಿಯಾ ।

ಜಘನ್ಥ—ಹನ ಹಿಂಸಾಗತ್ಯೋಃ ಧಾತು ಇದೇ ಋಕ್ಕಿನ ಎರಡನೇ ಮಂತ್ರದಲ್ಲಿ ವ್ಯಾಖ್ಯಾನವಾಗಿದೆ

ದಿವಃ—ದಿವ್ ಶಬ್ದ ಪಂಚಮೀ ಏಕವಚನಾಂತರೂಪ **ಊಡಿದಿದಂಪದಾದಿ**—(ಪಾ. ಸೂ ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಸೃಜ—ಸೃಜ ವಿಸರ್ಗೇ. ಧಾತು. ತುದಾದಿ ಲೋಟ್‌ಮಧ್ಯಮಪುರುಷ ಏಕವಚನದಲ್ಲಿ ಸಿಪ್ಪಿಗೆ ಹಿ ಆದೇಶ. **ತುದಾದಿಭ್ಯಃ ಶಃ** ಎಂಬುದರಿಂದ ಶವಿಕರಣ. **ಅತೋಃ ಹೇಃ** (ಪಾ. ಸೂ. ೬-೪-೧೦೫) ಎಂಬುದರಿಂದ ಹಿಗೆ ಲುಕ್. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣಸ್ವರದಿಂದ ಅಂತೋದಾತ್ತವಾಗುತ್ತದೆ

ಜೀವಧನ್ಯಾಃ—ಜೀವಾಃ ಧನ್ಯಾಃ ಯಾಭಿಸ್ತಾಃ ಜೀವಧನ್ಯಾಃ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ

ಮರುತ್ವತೀಃ—ಮರುತಃ ಅಸು ಸಂಜ್ಞಾ ಇತಿ ಮರುತ್ವಾನ್ನಿತ್ಯಃ **ತದಸ್ಯಾಸ್ತಿ**—(ಸೂ ಪಾ. ೫-೨-೯೪) ಎಂಬುದರಿಂದ **ಮತುಪ್** ಪ್ರತ್ಯಯ **ಋಯಶಃ** (ಸೂ. ಪಾ. ೮-೨-೧೦) ಎಂಬುದರಿಂದ **ಮತುಪಿನ ಮಕಾರಕ್ಕೆ ವತ್ವ.** ಉಗಿತ್ತಾದುದರಿಂದ ಸ್ತ್ರೀತ್ವದಲ್ಲಿ **ಉಗಿತಶ್ಚ** ಎಂಬುದರಿಂದ ಙೀಪ್. ದ್ವಿತೀಯಾ ಬಹುವಚನಾಂತರೂಪ ॥ ೪ ॥

॥ ಸಂಹಿತಾಪಾಠಃ ॥

ಇಂದ್ರೋ ವೃತ್ರಸ್ಯ ದೋಧತಃ ಸಾನುಂ ವಜ್ರೇಣ ಹೀಳಿತಃ ।
ಅಭಿಕ್ರಮ್ಯಾವ ಜಿಘ್ನತೇಽಪಃ ಸರ್ಮಾಯ ಚೋದಯನ್ನರ್ಚ-
ನ್ನನು ಸ್ವರಾಜ್ಯಂ ॥ ೫ ॥

॥ ಪದಪಾಠಃ ॥

ಇಂದ್ರಃ । ವೃತ್ರಸ್ಯ । ದೋಧತಃ । ಸಾನುಂ । ವಜ್ರೇಣ । ಹೀಳಿತಃ ।
ಅಭಿಽಕ್ರಮ್ಯ । ಅವ । ಜಿಘ್ನತೇ । ಅಪಃ । ಸರ್ಮಾಯ । ಚೋದಯನ್ ।
ಅರ್ಚನ್ । ಅನು । ಸ್ವಽರಾಜ್ಯಂ ॥ ೫ ॥

॥ ಸಾಯಣಭಾಷ್ಯಂ ।

ಹೀಳಿತಃ ಕ್ರುದ್ಧ ಇಂದ್ರೋಽಭಿಕ್ರಮ್ಯಾಭಿಮುಖ್ಯೇನ ಗತ್ವಾ ದೋಧತೋ ಭೃಶಂ ಕಂಪಮಾನಸ್ಯ ವೃತ್ರಸ್ಯ ಸಾನುಂ ಸಮುಚ್ಛ್ರಿತಂ ಹನುಪ್ರದೇಶಂ ವಜ್ರೇಣಾವ ಜಿಘ್ನತೇ । ಪ್ರಹರತಿ । ಕಿಂ ಕುರ್ವನ್ । ಅಪೋ ವೃಷ್ಟ್ಯುದಕಾನಿ ಸರ್ಮಾಯ ಸರಣಾಯ ನಿರ್ಗಮನಾಯ ಚೋದಯನ್ ಪ್ರೇರಯನ್ ॥ ದೋಧತಃ । ಧೂಞ್ ಕಂಪನೇ ಅಸ್ಮಾದ್ಯಙ್ಲುಗಂತಾಚ್ಛತರ್ಯಂತ್ಯಲೋಪಶ್ಚಾಂದಸಃ । ಅಭ್ಯಸ್ತಾನಾ-ಮಾದಿರಿತ್ಯಾದ್ಯುದಾತ್ತತ್ವಂ । ಹೀಳಿತಃ । ಹೇಡೃ ಹೋಡೃ ಅನಾದರೇ । ಹೇಳತ ಇತ್ಯೇತತ್ ಕ್ರುಧ್ಯತಿ-ಕರ್ಮಸು ಪಠಿತಂ । ಅಸ್ಮಾನ್ನಿಷ್ಠಾಯಾಂ ವರ್ಣವ್ಯಾಪತ್ತ್ಯೇಕಾರಃ । ಜಿಘ್ನತೇ । ಹಂತೇರ್ಲಟಿ ವ್ಯತ್ಯ-ಯೇನಾತ್ಮನೇಪದಂ ಬಹುವಚನಂ ಚ । ಬಹುಲಂ ಛಂದಸೀತಿ ಶಪಃ ಶ್ಲುಃ । ಇದಿತ್ಯನುವರ್ತ್ತೌ ಬಹುಲಂ ಛಂದಸೀತ್ಯಭ್ಯಾಸಸ್ಯೇತ್ತ್ವಂ । ಗಮಹನೇತ್ಯಾದಿನೋಪಧಾಲೋಪಃ । ಸರ್ಮಾಯ । ಸೃ ಗತೌ । ಅರ್ತಿ-ಸ್ತುಸ್ವ್ಯಾದಿನಾ ಭಾವೇ ಮನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಹೀಳಿತಃ—ಕ್ರುದ್ಧನಾದ । ಇಂದ್ರಃ—ಇಂದ್ರನು । ಅಭಿಕ್ರಮ್ಯ--(ವೃತ್ರನನ್ನ) ಎದುರಿಸಿ ।
ದೋಧತಃ- ನಡುಗುತ್ತಿದ್ದ । ವೃತ್ರಸ್ಯ—ವೃತ್ರಾಸುರನ । ಸಾನುಂ—ಗಲ್ಲದ ಮೇಲೆ । ಅಪಃ—ನೃಷ್ಟ್ಯುದಕ

ವನ್ನು । ಸರ್ಮಾಯೆ—ಹರಿಯುವುದಕ್ಕೆ । **ಚೋದಯೇನ್**—ಪ್ರೇರಿಸುತ್ತಾ । **ಸ್ವರಾಜ್ಯಂ**—ತನ್ನ ಸ್ವಾಮಿತ್ವವನ್ನು । **ಅನು ಅಚರ್ಷ**—ಪ್ರಕಟಗೊಳಿಸುತ್ತಾ । **ವಜ್ರೇಣ**—ವಜ್ರಾಯುಧದಿಂದ । **ಅವ ಜಿಘ್ನತೇ**—ಪ್ರಹರಿಸುತ್ತಾನೆ

॥ ಭಾವಾರ್ಥ ॥

ಕ್ರುದ್ಧನಾದ ಇಂದ್ರನು, ಸ್ವಸ್ವಾಮಿತ್ವವನ್ನು ಪ್ರಕಟಗೊಳಿಸುತ್ತಾ, (ವೃತ್ರನನ್ನು) ಎದುರಿಸಿ (ಭಯದಿಂದ) ನಡುಗುತ್ತಿದ್ದ ಅವನ ಗಲ್ಲದ ಮೇಲೆ ವಜ್ರಾಯುಧದಿಂದ ಹೊಡೆದು, (ನಿರುದ್ಧವಾದ) ಉದಕವು ಹೊರ ಹೊರಡುವಂತೆ ಮಾಡುತ್ತಾನೆ

English Translation

Indignant Indra, encountering him, has struck with his bolt the jaw of the trembling Vritra, setting the waters free to flow, and manifesting his own sovereignty

॥ ವಿಶೇಷವಿಷಯಗಳು ॥

ಹೀಳಿತಃ—**ಕ್ರುದ್ಧಃ** ಕೋಪವುಳ್ಳವನು ಎಂದು ಅರ್ಥವು **ಹೇಡೃ ಅನಾದರೇ ಕ್ರೋಧೇ ಚ** ಎಂಬ ಧಾತುವಿನಿಂದ ಹೀಳಿತಃ ಎಂಬ ಶಬ್ದರೂಪವು ನಿಷ್ಪನ್ನವಾಗಿರುತ್ತದೆ ರೇಳತೆ, ಹೇಳತೆ ಎಂಬ ಹತ್ತು ಕ್ರುಧ್ಯತಿಕರ್ಮವಾಚಕಗಳಾದ ಧಾತುಗಳಲ್ಲಿ (ನಿ. ೩-೯) ಈ ಧಾತುವು ಉಕ್ತವಾಗಿರುವುದು —

ಅಸ್ಯಾ ಊ ಷು ಣ ಉಪ ಸಾತಯೇ ಭುವೋ೨ಹೇಳಮಾನೋ ರರಿವಾಂ ಅಜಾಶ್ವ ಶ್ರವಸ್ಯತಾಮಜಾಶ್ವ ।

(ಋ. ಸಂ. ೧-೧೩೮-೪)

ಅಹೇಳಮಾನೋ ವರುಣೇಹ ಬೋಧ್ಯುರುಶಂಸ ಮಾ ನ ಆಯುಃ ಪ್ರ ಮೋಷೀಃ ।

(ಋ. ಸಂ. ೧-೨೪-೧೫)

ಎಂಬ ಋಕ್ಕುಗಳಲ್ಲಿ ಅನಾದರ ಮತ್ತು ಕ್ರೋಧ ಎಂಬ ಅರ್ಥದಲ್ಲಿ ಈ ಶಬ್ದದ ಪ್ರಯೋಗವಿರುವುದು.

ದೋಧತಃ—**ಭೃಶಂ ಕಂಪಮಾನಸ್ಯ** । ಬಹಳವಾಗಿ ನಡುಗುತ್ತಿರುವ ಕಂಪನ ನಡೆಗುವಿಕೆ ಎಂಬ ಅರ್ಥವುಳ್ಳ ಧೂಞ್ ಧಾತುವಿನಿಂದ ಈ ಶಬ್ದರೂಪವು ಸಿದ್ಧವಾಗಿರುವುದೆಂದು ಸಾಯಣರು ವ್ಯಾಖ್ಯಾನಿಸಿರುವರು. ಸ್ಕಂದಸ್ವಾಮಿಗಳು **ಕ್ರುಧ್ಯತಿಕರ್ಮಾಯಂ** ಈ ಶಬ್ದರೂಪವು ಕ್ರುಧ್ಯತಿ ಮೊದಲಾದ ಹತ್ತು ಕರ್ಮವಾಚಕಗಳಲ್ಲಿ ಉಕ್ತವಾಗಿರುವ ದೋಧತೇ ಎಂಬ ಧಾತುವಿನಿಂದ ಸಿದ್ಧವಾಗಿರುವಕಾರಣ ಕೋಪವುಳ್ಳ ಎಂದು ಅರ್ಥವನ್ನು ಹೇಳಿರುತ್ತಾರೆ. ಇದರಿಂದ ಬಹಳವಾಗಿ ನಡುಗುತ್ತಿರುವ ಎಂದು ಸಾಯಣರೂ, ಕೋಪದಿಂದ ಕೂಡಿರುವ ಎಂದು ಸ್ಕಂದಸ್ವಾಮಿಗಳೂ **ವೃತ್ರಸ್ಯ** ಎಂಬ ಪದಕ್ಕೆ ವಿಶೇಷಣವಾಗಿ ವ್ಯಾಖ್ಯಾನನನ್ನು ಮಾಡಿರುವರು

ಸರ್ಮಾಯೆ—ಸರಣಾಯೆ, ಭೂಮಿಂ ಪ್ರತಿಗಮನಾಯೆ—ಸೃ ಗತೌ ಎಂಬ ಗಮನಾರ್ಥದ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಗಮನವೆಂದು ಅರ್ಥವು. ನೀರುಗಳಿಗೆ ಉಂಟಾಗುವ ಗಮನವು ನಿನ್ನ ಪ್ರದೇಶಕ್ಕಾಗುವುದು ಸ್ವಭಾವವಾದಕಾರಣ ಭೂಮಿಯನ್ನು ಕುರಿತು ಹರಿಯುವುದು ಎಂದು ಅರ್ಥವು.

ಸಾನುಂ—ಸಮುಚ್ಛ್ರಿತಂ ಹನುಪ್ರದೇಶಂ ವೃತ್ರನೆಂಬ ಅಸುರನ ಎತ್ತರವಾದ (ದವಡೆಯ) ತಾಲು ಪ್ರದೇಶವನ್ನು ಎಂದು ಸಾಯಣರು ಅರ್ಧಮಾಡಿರುವರು. ಸ್ತ್ರಿಯಿಕವಾಗಿ ಸಾನು ಎಂಬ ಪದವು ಪರ್ವತದ ತಪ್ಪಲು ಎಂಬ ಅರ್ಥದಲ್ಲಿ ರೂಢವಾಗಿರುತ್ತದೆ. ಸ್ಕಂದಸ್ವಾಮಿಗಳು ಸಮುಚ್ಛ್ರಿತಂ–ಎತ್ತರವಾದ ಪ್ರದೇಶ ಎಂದು ವ್ಯಾಖ್ಯಾನ ಮಾಡಿರುತ್ತಾರೆ. ಸಾಯಣರು ಭಾಷ್ಯದಲ್ಲಿ ಬರೆದಿರುವ ಕ್ರಮದಿಂದ ಐತಿಹಾಸಿಕರೂಪವಾದ ವೃತ್ರಾಸುರವಧೆಯೂ ಕ್ರೋಢೀಕೃತವಾಗಿರುತ್ತದೆ ಎಂದು ತಿಳಿದುಬರುವುದು.

ವೃತ್ರಸ್ಯ—ವೃತ್ರನೆಂದು ಹೆಸರುಳ್ಳ ಅಸುರನ ಎಂದು ಅರ್ಥವು. ನಿರುಕ್ತದಲ್ಲಿ **ತತ್ಕೋ ವೃತ್ರಃ** ವೃತ್ರ ಪದಾರ್ಥವು ಯಾವುದು ಎಂದು ಪ್ರಶ್ನೆಯನ್ನು ಮಾಡಿ **ಮೇಘ ಇತಿ ನೈರುಕ್ತಾಃ**–ಪದದ ವ್ಯುತ್ಪತ್ತಿಯನ್ನು ಹೇಳುವವರು ಮೇಘವೆಂತಲೂ **ತ್ವಾಷ್ಟ್ರೋ ಽಸುರ ಇತಿ ಐತಿಹಾಸಿಕಾಃ**–ತ್ವಷ್ಟೃವಿನ ಮಗನಾದ ಅಸುರನು ಎಂದು ಇತಿಹಾಸವನ್ನು ತಿಳಿದವರೂ ಹೇಳುತ್ತಾರೆ **ವೃತ್ರೋ ವೃಣೋತೇರ್ವಾ ವರ್ತತೇರ್ವಾ ವರ್ಧತೇರ್ವಾ ವೃತ್ರಃ** । ವೃತ್ರ ಎಂಬ ಶಬ್ದವು ವೃಞ್ ವರಣೇ, ವೃತು ವರ್ತನೇ, ವೃಧು ವೃದ್ಧೌ, ಎಂಬ ಧಾತುಗಳಿಂದ ತಡೆಮಾಡುವುದು, ಸ್ಥಿತಿಯನ್ನು ಹೊಂದಿ ಇರುವುದು, ಅಥವಾ ವೃದ್ಧಿಯನ್ನು ಹೊಂದುವುದು, ಎಂಬ ಅರ್ಥವನ್ನು ಬೋಧಿಸುವುದಾಗಿ ಇರುತ್ತದೆ. **ಯದವೃಣೋತ್ತದ್ವೃತ್ರಸ್ಯ ವೃತ್ರತ್ವಂ** ಎಂಬ ಶ್ರುತಿವಾಕ್ಯವು ಹೇಳುವಂತೆ, ಅಂತರಿಕ್ಷವನ್ನೂ ಉದಕವನ್ನೂ ಆವರಿಸಿಕೊಂಡಿರುವುದರಿಂದಲೂ, ಅಥವಾ ಇಂದ್ರನು ಮೇಘವನ್ನು ಹೊಡೆದು ನೀರುಗಳು ಭೂಮಿಗೆ ಸರಿಯಾಗಿ ಬರುವಂತೆ ಮಾಡಿದಕಾರಣ ಉದಕಗಳು ವೃಷ್ಟಿಯರೂಪದಿಂದ ಉಂಟಾದವು ಎಂದು ವರ್ತನರೂಪವಾದ ಅರ್ಥವನ್ನೂ ಹೇಳಿರುವರು. ಮತ್ತು ಇತಿಹಾಸಪಕ್ಷದಲ್ಲಿ ವೃತ್ರನು ಬಹಳ ಹೆಚ್ಚಾದ ಪ್ರಮಾಣದಲ್ಲಿ ಎಂದರೆ— **ಸ ಇಷುಮಾತ್ರಮಿಷುಮಾತ್ರಮವರ್ಧತ**—ಅವನು ಪ್ರತಿಕ್ಷಣದಲ್ಲಿಯೂ ಒಂದು ಬಿಲ್ಲಿನ ಪ್ರಮಾಣದಷ್ಟು ಬೆಳೆಯುತ್ತಿದ್ದನೆಂದು ವೃದ್ಧ್ಯರ್ಥವನ್ನೂ ಹೇಳಿರುವರು

॥ ವ್ಯಾಕರಣಪ್ರಕ್ರಿಯಾ ॥

ದೋಧತಃ—ಧೂಞ್ ಕಂಪನೇ ಧಾತು ಅತಿಶಯಾರ್ಥತೋರುವಾಗ **ಧಾತೋರೇಕಾಚಃ**– (ಪಾ. ಸೂ ೩-೧-೩೭) ಎಂಬುದರಿಂದ ಯಙ್ ಪ್ರತ್ಯಯ. **ಯೆಙೋ ಽಚಿಚ** (ಪಾ ಸೂ ೨-೪-೭೪) ಎಂಬುದರಿಂದ ಆದಕ್ಕೆ ಲುಕ್. **ಸನ್ಯಙೋಃ** ಸೂತ್ರದಿಂದ ಧಾತುವಿಗೆ ದ್ವಿತ್ವ. **ಗುಣೋಯರ್ತಿಙ್ಲುಙ್ಲಙೋಃ** (ಪಾ ಸೂ. ೭-೪-೮೨) ಎಂಬುದರಿಂದ ಅಭ್ಯಾಸಕ್ಕೆ ಗುಣ. ಯಙ್ಲುಙ್ಲಙಂತದ ಮೇಲೆ ಲಡರ್ಥದಲ್ಲಿ ಶತೃ ಪ್ರತ್ಯಯ. ಶತೃ ಪರವಾದಾಗ ಭಾಂದಸವಾಗಿ ಧಾತುವಿನ ಊಕಾರಕ್ಕೆ ಲೋಪ. ದೋಧತ್ ಶಬ್ದವಾಗುತ್ತದೆ **ಅಭ್ಯಾಸ್ತಾನಾಮಾದಿಃ** (ಪಾ ಸೂ. ೬-೧-೧೮೯.) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಷಷ್ಠೀ ಏಕವಚನಾಂತರೂಪ.

ಹೀಳಿತಃ—ಹೇಡೃ ಹೋಡೃ ಅನಾದರೇ. ಧಾತು. **ಹೇಳತೇ** (ನಿರು ೨-೧೨-೨) ಎಂದು ಕ್ರೋಧಕರ್ಮ ಧಾತುಗಳಲ್ಲಿ ಪರಿತವಾಗಿದೆ. ಇದಕ್ಕೆ ಕ್ತ ಪ್ರತ್ಯಯ ಪರವಾದಾಗ **ಅರ್ಧಧಾತುಕಸ್ಯೇದ್ವಲಾದೇಃ** ಎಂಬುದರಿಂದ ಇಡಾಗಮ. **ವ್ಯತ್ಯಯೋ ಬಹುಲಮ್** ಎಂಬುದರಿಂದ ವರ್ಣವ್ಯತ್ಯಯದಿಂದ ಏಕಾರಕ್ಕೆ ಈಕಾರಾದೇಶ ಪ್ರತ್ಯಯ ಸ್ವರದಿಂದ ಆಂತೋದಾತ್ತವಾಗುತ್ತದೆ

ಜಿಘ್ನತೇ—ಹನ ಹಿಂಸಾಗತ್ಯೋಃ ಧಾತು. ಲಟ್ ಪ್ರಥಮಪುರುಷ ಏಕವಚನದಲ್ಲಿ **ವ್ಯತ್ಯಯೋ-ಬಹುಲಮ್** (ಪಾ. ಸೂ. ೩-೧-೮೫) ಎಂಬುದರಿಂದ ಆತ್ಮನೇಪದ ಪ್ರತ್ಯಯ ಬರುತ್ತದೆ ಹಾಗೆಯೇ ಬಹುವಚನವೂ ಬರುತ್ತದೆ. ಯ ಪ್ರತ್ಯಯಕ್ಕೆ **ಆತ್ಮನೇಪದೇಷ್ವನತಃ** (ಪಾ. ಸೂ. ೭-೧-೫). ಎಂಬುದರಿಂದ ಅತಾದೇಶ. **ಟಿತ ಆತ್ಮನೇ ಪದಾನಾಂ—**ಎಂಬುದರಿಂದ ಏತ್ವ **ಬಹುಲಂ ಛಂದಸಿ** ಸೂತ್ರದಿಂದ ಶಪ್ಪಿಗೆ ಶ್ಲು ಆದೇಶ **ಶ್ಲಾ** ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಚುತ್ವ, ಜಸ್ತ್ವ **ಅಭ್ಯಾಸಾಚ್ಚ** (ಪಾ. ಸೂ ೭-೩-೫೫) ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಧಾತುವಿನ ಹಕಾರಕ್ಕೆ ಕುತ್ವ ಪ್ರತ್ಯಯಕ್ಕೆ **ಸಾರ್ವಧಾತುಕಮಪಿತ್** ಸೂತ್ರದಿಂದ ಙಿತ್ವವಿರುವುದರಿಂದ **ಗಮಹನಜನ**—(ಪಾ. ಸೂ. ೬-೪-೯೮) ಎಂಬುದರಿಂದ ಉಪಧಾಲೋಪ **ಭೃಞಾಮಿತ್** ಸೂತ್ರದಿಂದ ಇತ್ ಎಂದು ಅನುವೃತ್ತವಾಗುವಾಗ **ಬಹುಲಂ ಛಂದಸಿ** ಎಂಬುದರಿಂದ ಧಾತುವಿನ ಅಭ್ಯಾಸಕ್ಕೆ ಇತ್ವ. ಜಘ್ನತೇ ಎಂದು ರೂಪವಾಗುತ್ತದೆ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸರ್ಮಾಯ—ಸೃ ಗತೌ ಧಾತು. ಇದಕ್ಕೆ ಭಾವಾರ್ಥದಲ್ಲಿ **ಅತಿಸ್ತು ಸು**—(ಉ. ಸೂ. ೧-೧೩೭) ಎಂಬುದರಿಂದ ಮನ್ ಪ್ರತ್ಯಯ ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕ್ಕಿಗೆ ಗುಣ ಸರ್ಮ ಎಂದು ರೂಪವಾಗುತ್ತದೆ. ಪ್ರತ್ಯಯ ನಿತ್ವಾದುದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಚತುರ್ಥೀ ಏಕವಚನಾಂತರೂಪ

ಚೋದಯನ್—ಚುದ ಪ್ರೇರಣೇ ಧಾತು. ಚುರಾದಿ **ಸತ್ಯಾಪಪಾಶ**—(ಪಾ ಸೂ ೩-೧-೨೫) ಎಂಬುದರಿಂದ ಸ್ವಾರ್ಥದಲ್ಲಿ ಣಿಚ್. ತನ್ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. **ಸನಾದ್ಯಂತಾ ಧಾತವಃ** ಎಂಬುದರಿಂದ ಚೋದಿ ಎಂಬುದು ಧಾತುಸಂಜ್ಞೆಯನ್ನು ಹೊಂದುತ್ತದೆ ಲಡರ್ಥದಲ್ಲಿ ಇದರಮೇಲೆ ಶತೃ ಪ್ರತ್ಯಯ ಶಪ್ ವಿಕರಣ ತನ್ನಿಮಿತ್ತವಾಗಿ ಣಿಚ್ಚಿಗೆ ಗುಣ, ಅಯಾದೇಶ. ಪ್ರಥಮಾ ಏಕವಚನಾಂತರೂಪ. ಣಿಚ್‌ಸ್ವರ ಉಳಿಯುತ್ತದೆ ॥ ೫ ॥

॥ ಸಂಹಿತಾಪಾಠಃ ॥

ಅಧಿ ಸಾನೌ ನಿ ಜಿಘ್ನತೇ ವಜ್ರೇಣ ಶತಪರ್ವಣಾ ।
ಮಂದಾನ ಇಂದ್ರೋ ಅಂಧಸಃ ಸಖಿಭ್ಯೋ ಗಾತುಮಿಚ್ಛತ್ಯ-
ರ್ಚನ್ನನು ಸ್ವರಾಜ್ಯಂ ॥ ೬ ॥

॥ ಪದಪಾಠಃ ॥

ಅಧಿ । ಸಾನೌ । ನಿ । ಜಿಘ್ನತೇ । ವಜ್ರೇಣ । ಶತಽಪರ್ವಣಾ ।
ಮಂದಾನಃ । ಇಂದ್ರಃ । ಅಂಧಸಃ । ಸಖಿಽಭ್ಯಃ । ಗಾತುಂ । ಇಚ್ಛತಿ । ಅರ್ಚನ್ । ಅನು । ಸ್ವಽರಾಜ್ಯಂ ॥ ೬ ॥

॥ ಸಾಯಣಭಾಷ್ಯಂ ॥

ಇಂದ್ರಃ ಶತಪರ್ವಣಾ ಶತಸಂಖ್ಯಕಧಾರಾಭಿರ್ಯುಕ್ತೇನ ವಜ್ರೇಣ ಸಾನಾವಧಿ ನಿ ಜಿಘ್ನತೇ । ಅಧಿಃ ಸಪ್ತಮ್ಯರ್ಥಾನುವಾದೀ । ಸಮುಚ್ಛ್ರಿತೇ ವೃತ್ರಸ್ಯ ಕಪೋಲಾದೌ ಸ್ಥಾನೇ ನಿತರಾಂ ಹಿನಸ್ತಿ । ಸ ಚೇಂದ್ರೋ ಮಂದಾನೋ ಮಂದಮಾನಃ ಸ್ತೂಯಮಾನಃ ಸನ್ ಸಖಿಭ್ಯಃ ಸಮಾನಖ್ಯಾನೇಭ್ಯಃ ಸ್ತೋತೃಭ್ಯೋಽಂಧಸೋಽನ್ನಸ್ಯ ಗಾತುಂ ಮಾರ್ಗಮುಪಾಯಮಿಚ್ಛತಿ । ಅನ್ಯತ್ಪೂರ್ವವತ್ ॥ ಮಂದಾನಃ । ಮದಿ ಸ್ತುತೌ । ಕರ್ಮಣಿ ಶಾನಚಿ ಯಕ್ । ಛಂದಸ್ಯುಭಯಥೇತಿ ಶಾನಚ ಆರ್ಧಧಾತುಕತ್ವಾದಪಠೋಲೋಪಯಲೋಪೌ । ಅನುದಾತ್ತೇತಶ್ಚ ಪರಸ್ಮಾತ್ ಶಾನಚೋ ಲಸಾರ್ವಧಾತುಕಾನುದಾತ್ತತ್ವೇ ಸತಿ ಯಕ ಏವೋದಾತ್ತತ್ವಂ । ಅನುದಾತ್ತೇ ಶಾನಚಿ ತಸ್ಯ ಯಕೋ ಲೋಪೇ ಸತ್ಯುದಾತ್ತನಿವೃತ್ತಿಸ್ವರೇಣ ಶಾನಚ ಉದಾತ್ತತ್ವಂ ಪ್ರಾಪ್ನೋತಿ । ಏವಂ ತರ್ಹಿ ಶಾನಚ ಆರ್ಧಧಾತುಕತ್ವಾದೇವ ಲಸಾರ್ವಧಾತುಕಾನುದಾತ್ತತ್ವಾಭಾವೇ ಚಿತ್ಸ್ವರ ಏವಾವಶಿಷ್ಯತೇ ॥

॥ ಪ್ರತಿಪದಾರ್ಥ ॥

(ಇಂದ್ರಃ—ಇಂದ್ರನು) । **ಶತಪರ್ವಣಾ**—ನೂರು ಅಲಗುಗಳುಳ್ಳ । **ವಜ್ರೇಣ**—ವಜ್ರಾಯುಧದಿಂದ । **ಸಾನೌ ಅಧಿ**—ಸಾನು ಪ್ರದೇಶದಲ್ಲಿ । **ನಿ ಜಿಘ್ನತೇ**—ಪ್ರಹರಿಸುತ್ತಾನೆ (ಮತ್ತು) । **ಇಂದ್ರಃ**—(ಆ) ಇಂದ್ರನು ।

ಮಂದಾನಃ—ಸ್ತುತನಾಗಿ । **ಸಖಿಭ್ಯಃ**—ಸ್ತೋತೃಗಳಿಗೆ । **ಸ್ವರಾಜ್ಯಂ**—ಸ್ವಸ್ವಾಮಿತ್ವವನ್ನು । **ಅನು ಅರ್ಚನ್**—ಪ್ರಕಟಿಸುತ್ತಾ । **ಅಂಧಸಃ**—ಅನ್ನದ (ಅನ್ನವನ್ನು) । **ಗಾತುಂ**—(ಪಡೆಯುವ) ಉಪಾಯವನ್ನೂ (ತೋರಿಸಲು) । **ಇಚ್ಛತಿ**—ಅಪೇಕ್ಷಿಸುತ್ತಾನೆ.

॥ ಭಾವಾರ್ಥ ॥

ಇಂದ್ರನು ನೂರು ಅಲುಗುಗಳುಳ್ಳ ವಜ್ರಾಯುಧದಿಂದ (ವೃತ್ರಾಸುರನನ್ನು) ಸಾನುಪ್ರದೇಶದಲ್ಲಿ ಹೊಡೆಯುತ್ತಾನೆ ಯಜ್ಞದಲ್ಲಿ ಯಜಮಾನರಿಂದ ಸ್ತುತನಾಗಿ, ತನ್ನ ಸ್ವಾಮಿತ್ವವನ್ನು ಪ್ರಕಟಗೊಳಿಸುತ್ತಾ. ಸ್ತೋತೃಗಳಿಗೆ ಆಹಾರವನ್ನು (ಪಡೆಯುವ) ಮಾರ್ಗವನ್ನು (ತೋರಿಸಲು) ಇಚ್ಛಿಸುತ್ತಾನೆ.

English Translation

India has struck him on the temple with his hundred-edged thunder bolt, and exulting, wishes to provide means of sustenance for his friends, manifesting his own sovereignty.

॥ ವಿಶೇಷವಿಷಯಗಳು ॥

ಅಧಿ—ಈ ಶಬ್ದಕ್ಕೆ ಯಾಸ್ಕರು **ಅಧೀತ್ಯುಪರಿಭಾವಮೈಶ್ವರ್ಯಂ ವಾ** ಎಂದರೆ ಅಧಿ ಶಬ್ದವು ಮೇಲುಭಾಗದಲ್ಲಿ ಅಥವಾ ಐಶ್ವರ್ಯವನ್ನು ಎಂಬ ಅರ್ಥವನ್ನು ಸೂಚಿಸುವುದೆಂದು ಹೇಳಿರುವರು (ನಿ ೧-೪) ಭಾಷ್ಯಕಾರರು ಇಲ್ಲಿ ಸಪ್ತಮಿಯಾ ವಿಭಕ್ತಿಯ ಅರ್ಥವನ್ನು ಸೂಚಿಸುವುದೆಂದು ಹೇಳಿರುವರು

ಶತಪರ್ವಣಾ—**ಶತಸಂಖ್ಯಾಕಧಾರಾಭಿರ್ಯುಕ್ತೇನ** । ಪರ್ವ ಶಬ್ದವು ಅಲುಗುಗಳೆಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ ವಜ್ರಾಯುಧಕ್ಕೆ ನೂರಾರು ಅಥವಾ ಅನೇಕವಾದ ಅಲಗುಗಳು ಇರುತ್ತವೆ ಎಂದು ಅರ್ಥವು

ಮಂದಾನಃ- **ಮದೀ ಸ್ತುತೌ** ಎಂಬ ಸ್ತುತ್ಯರ್ಥಕವಾದ ಮದಿ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ **ಮಂದಾನ—ಸ್ತೂಯಮಾನಃ** ಸ್ತುತಿಸಲ್ಪಡುವವನೆಂದು ಸಾಯಣರೂ, **ಮೋದಮಾನಃ ತೃಪ್ಯನ್** ಸಂತೋಷಪಡುವವನೆಂದು ಸ್ಕಂದಸ್ವಾಮಿಗಳೂ ಅರ್ಥಮಾಡಿರುವರು

ಸಖಿಭ್ಯಃ—ಸಮಾನಖ್ಯಾನೇಭ್ಯಃ ಸ್ತೋತೃಭ್ಯಃ । ಸ್ನೇಹಿತರು ಎಂಬ ಅರ್ಥವನ್ನು ಸ್ವೀಕರಿಸಿ **ಸಖೀನಾಮರ್ಥಾಯ** ಸ್ನೇಹಿತರ ಪ್ರಯೋಜನಕ್ಕಾಗಿ ಎಂದು ಸ್ಕಂದಸ್ವಾಮಿಗಳೂ, ಉಚಿತವಾದ ಕಾರ್ಯನೇ ಮೊದಲಾದವುಗಳನ್ನು ಪ್ರಕಟಮಾಡುವ ಹೊಗಳುವವರೂ ಎಂದೂ ಅರ್ಥಮಾಡಿರುವರು

ಅಂಧಸಃ ಗಾತುಮಿಚ್ಛತಿ--**ಅನ್ನಃ**, **ವಾಜಃ** ಎಂಬ ಇಪ್ಪತ್ತೈಂಟು ಅನ್ನನಾಮಗಳಲ್ಲಿ **ಅಂಧಃ** ಶಬ್ದವು (ನಿ ೩-೯) ಉಕ್ತವಾಗಿರುವುದರಿಂದ **ಅಂಧಃ** ಎಂದರೆ ಅನ್ನವೆಂದು ಅರ್ಥವು. ಇಂದ್ರನು ತನ್ನನ್ನು ಸ್ತುತಿಮಾಡುವವರಿಗೆ ಅನ್ನವು (ಉಂಟಾಗುವ) ಮೊರಕುವ ಉಪಾಯವನ್ನು ಅಪೇಕ್ಷಿಸುತ್ತಾನೆ ಅಂದರೆ ಅನ್ನವು ಮೊರಕುವ ಉಪಾಯವನ್ನು ತೋರಿಸಿಕೊಡುತ್ತಾನೆ ಎಂದು ಸಾಯಣಭಾಷ್ಯದಲ್ಲಿ ಹೇಳಿರುವುದು

ಸ್ಕಂದಸ್ವಾಮಿಗಳು ವೃತ್ರಶಬ್ದಕ್ಕೆ ಮೇಘವೆಂದು ಅರ್ಥವನ್ನು ಸ್ವೀಕರಿಸಿ ಇಂದ್ರನು ಸೋಮಪಾನದಿಂದ ತೃಪ್ತನಾಗಿ ಎತ್ತರವಾದ ಪ್ರದೇಶದಲ್ಲಿರುವ ಮೇಘವನ್ನು ನೂರು ಅಲಗುಗಳುಳ್ಳ ವಜ್ರಾಯುಧದಿಂದ ಹೊಡೆದು ನೃಷ್ಟಿರೂಪದಿಂದ ಉದಕಗಳು ಭೂಮಿಗೆ ಸ್ನೇಹಿತರಿಗಾಗಿ ಬೀಳಲಿ ಎಂದು ಅಪೇಕ್ಷೆಪಡುವನು ಎಂದು ಅರ್ಥವನ್ನು ಹೇಳುವರು

॥ ವ್ಯಾಕರಣಪ್ರಕ್ರಿಯಾ ॥

ಶತಪರ್ವಣಾ—ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್ (ಪಾ. ಸೂ ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ ತೃತೀಯಾ ಏಕವಚನಾಂತರೂಪ.

ಮಂದಾನಃ—ಮದಿ ಸ್ತುತೌ ಧಾತು. **ಇದಿತೋನುಮ್ ಧಾತೋಃ** (ಪಾ ಸೂ. ೭-೧ ೫೮) ಎಂಬುದರಿಂದ ನುಮಾಗಮ ಇದಕ್ಕೆ ಕರ್ಮಣಿಯಲ್ಲಿ ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಇದು ಪರವಾದಾಗ **ಸಾರ್ವಧಾತುಕೇ ಯೆಕ್** (ಪಾ ಸೂ. ೩-೧-೬೭) ಎಂಬುದರಿಂದ ಸ್ವಾರ್ಥದಲ್ಲಿ ಯಕ್. **ಭಂದಸ್ಯುಭಯಥಾ** ಎಂಬುದರಿಂದ ಶಾನಚಿಗೆ ಆರ್ಧಧಾತುಕಸಂಜ್ಞೆಯೂ ಇರುವುದರಿಂದ **ಅತೋ ಲೋಪಃ** ಎಂಬುದರಿಂದ ಅಕಾರಲೋಪ **ಯೆಸ್ಯ ಹಲಃ** (ಪಾ. ಸೂ. ೬-೪-೪೯) ಎಂಬುದರಿಂದ ಯ ಲೋಪ ಮಂದಾನ ಎಂದು ರೂಪವಾಗುತ್ತದೆ. ಅನುದಾತ್ತೇತ್ತಿನ ಪರವಾದುದರಿಂದ ಲಸಾರ್ವಧಾತುಕವಾದ ಶಾನಚಿಗೆ **ತಾಸ್ಯನುದಾತ್ತೇತ್**--(ಪಾ. ಸೂ ೬-೧-೧೮೬) ಎಂಬುದರಿಂದ ಅನುದಾತ್ತಸ್ವರ ಬರುವುದರಿಂದ ಯಕಿಗೆ ಉದಾತ್ತಸ್ವರ ಬರುತ್ತದೆ. ಅನುದಾತ್ತಪರವಾದಾಗ ಉದಾತ್ತವಾದ ಯಕಿಗೆ ಲೋಪಬಂದುದರಿಂದ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** (ಪಾ ಸೂ ೬-೧-೧೬೧) ಎಂಬುದರಿಂದ ಶಾನಚಿಗೆ ಉದಾತ್ತಸ್ವರ ಬರುತ್ತದೆ. ಹೀಗೆ ಹೇಳುವುದಕ್ಕಿಂತಲೂ ಶಾನಚಿಗೆ ಹಿಂದೆ ಹೇಳಿದಂತೆ ಆರ್ಧಧಾತುಕ ಸಂಜ್ಞೆಇರುವುದರಿಂದಲೇ ಲಸಾರ್ವಧಾತುಕಾನುದಾತ್ತಸ್ವರವು ಬಾರದಿರುವುದರಿಂದ **ಚಿತಃ** ಎಂಬುದರಿಂದ ಬಂದ ಅಂತೋದಾತ್ತ ಸ್ವರವೇ ಉಳಿಯುತ್ತದೆ.

ಇಚ್ಛೈತಿ—ಇಷು ಇಚ್ಛಾಯಾಂ ಧಾತು. ಲಟ್ ಪ್ರಥಮಪುರುಷ ಏಕವಚನಲ್ಲಿ ತಿಪ್ರತ್ಯಯ **ತುದಾದಿಭ್ಯಃ ಶಃ** ಎಂಬುದರಿಂದ ಶವಿಕರಣ. **ಇಷುಗಮಿಯಮಾಂ ಛಃ** (ಪಾ. ಸೂ. ೭-೩-೭೭) ಎಂಬುದರಿಂದ ಧಾತುವಿಗೆ ಛಕಾರಾಂತಾದೇಶ. ಅತಿಜಂತದಸರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೬ ॥

॥ ಸಂಹಿತಾಪಾಠಃ ॥

ಇಂದ್ರ ತುಭ್ಯಮಿದದ್ರಿವೋ ಽನುತ್ತಂ ವಜ್ರಿನ್ವೀರ್ಯಂ ।
ಯದ್ಧ ತ್ಯಂ ಮಾಯಿನಂ ಮೃಗಂ ತಮು ತ್ವಂ ಮಾಯಯಾವ-
ಧೀರರ್ಚನ್ನನು ಸ್ವರಾಜ್ಯಂ ॥ ೬ ॥

॥ ಪದಪಾಠಃ ॥

ಇಂದ್ರ । ತುಭ್ಯಂ । ಇತ್ । ಅದ್ರಿವಃ । ಅನುತ್ತಂ । ವಜ್ರಿನ್ । ವೀರ್ಯಂ ।
ಯತ್ । ಹ । ತ್ಯಂ । ಮಾಯಿನಂ । ಮೃಗಂ । ತಂ । ಊಂ ಇತಿ । ತ್ವಂ । ಮಾ-
ಯಯಾ । ಅವಧೀಃ । ಅರ್ಚನ್ । ಅನು । ಸ್ವ ಽ ರಾಜ್ಯಂ ॥ ೬ ॥

॥ ಸಾಯಣಭಾಷ್ಯಂ ॥

ಅದ್ರಿರಿತಿ ಮೇಘನಾಮ । ಹೇ ಅದ್ರಿವೋ ವಾಹನರೂಪಮೇಘಯುಕ್ತ ವಜ್ರಿನ್ ವಜ್ರವನ್ನಿಂದ್ರ ತುಭ್ಯಮಿತ್ । ಷಷ್ಠ್ಯರ್ಥೇ ಚತುರ್ಥೀ । ತವೈವ ವೀರ್ಯಂ ಸಾಮರ್ಥ್ಯಮನುತ್ತಂ ಶತ್ರುಭಿರತಿರಸ್ಕೃತಂ । ಯದ್ಧ ಯಸ್ಮಾತ್ ಖಲು ಮಾಯಿನಂ ಮಾಯಾವಿನಂ ತ್ಯಂ ತಂ ಪ್ರಸಿದ್ಧಂ ವಂಚಯಿತಾರಂ । ಲೋಕೋ-ಪದ್ರವಕಾರಿಣಮಿತ್ಯರ್ಥಃ । ಮೃಗಂ ಮೃಗರೂಪಮಾಪನ್ನಂ ತಂ ವೃತ್ರಂ ತ್ವಮಪಿ ಮಾಯಯೈವಾವಧೀಃ । ಹತವಾನಸಿ ॥ ಅನುತ್ತಂ । ನಸತ್ತನಿಷತ್ತೇತಿ ನಿಪಾತನಾನ್ನಿಷ್ಠಾನತ್ವಾಭಾವಃ । ಅವಧೀಃ । ಹಂತೇರ್ಲುಙ್ ಚ್ಲೇತಿ ವಧಾದೇಶಶ್ಚ । ಸ ಚಾದಂತಃ । ತಸ್ಯಾತೋ ಲೋಪೇ ಸತಿ ಸ್ಥಾನಿವದ್ಭಾವಾತ್ಸಿಚಿ ವೃದ್ಧ್ಯಭಾವಃ ॥

॥ ಪ್ರತಿಪದಾರ್ಥ ॥

ಅದ್ರಿವಃ—ಮೇಘನೇ ವಾಹನವಾಗಿ ಉಳ್ಳ । **ವಜ್ರಿ**-ವಜ್ರಾಯುಧಧಾರಿಯಾದ । **ಇಂದ್ರ**—ಎಲೈ ಇಂದ್ರನೇ । **ತುಭ್ಯಮಿತ್**—ನಿನ್ನದೇ ಆದ । **ವೀರ್ಯಂ**—ಸಾಮರ್ಥ್ಯವು । **ಅನುತ್ತಂ**—(ಶತ್ರುಗಳಿಂದ) ತಿರಸ್ಕೃತವಲ್ಲ । **ಯತ್**—ಏಕೆಂದರೆ । **ಮಾಯಿನಂ**—ಮಾಯಾವಿಯಾದ । **ತ್ಯಂ**—ಆ ಪ್ರಸಿದ್ಧನಾದ । **ಮೃಗಂ**—ಮೃಗರೂಪಿಯಾದ । **ತಂ**—ವೃತ್ರನನ್ನು । **ತ್ವಂ**—ನೀನೂ ಕೂಡ । **ಮಾಯಯಾ**—ಮಾಯೆಯಿಂದಲೇ । **ಸ್ವರಾಜ್ಯಂ ಅನು ಅರ್ಚನ್**—ಸ್ವಸ್ವಾಮಿತ್ವನನ್ನು ಪ್ರಕಟಿಸುತ್ತಾ । **ಅವಧೀಃ ಹ**—ವಧಿಸಿದೆಯಷ್ಟೆ

॥ ಭಾವಾರ್ಥ ॥

ಮೇಘವಾಹನನೂ, ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ, ನಿನ್ನ ಸಾಮರ್ಥ್ಯವು ಅಪ್ರತಿಹತವಾದುದು, ಏಕೆಂದರೆ, ಮಾಯಾವಿಯಾದ, ಮೃಗರೂಪಿಯಾದ ವೃತ್ರನನ್ನು, ನೀನೂ, ಮಾಯೆಯಿಂದಲೇ ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಾ, ವಧಿಸಿದೆಯಷ್ಟೆ.

English Translation

Cloud-borne, Indra, wielder of the thunder-bolt, verily your prowess is undisputed, since you with (superior) craft, have slain that deceptive deer (Vritra) manifesting your own sovereigntv.

॥ ವಿಶೇಷವಿಷಯಗಳು ॥

ಅದ್ರಿವಃ—ಅದ್ರಿರಿತಿ ಮೇಘನಾಮ। ಅದ್ರಿಶಬ್ದವು **ಅದ್ರಿಃ, ಗ್ರಾವಾ** ಎಂಬ ಮೂವತ್ತು ಮೇಘ ನಾಮಗಳಲ್ಲಿ (ನಿ. ೨–೫) ಉಕ್ತನಾಗಿರುವುದರಿಂದ ಮೇಘವೆಂದು ಅರ್ಥವು ಮೇಘವನ್ನು ವಾಹನನಾಗಿ ಹೊಂದಿರುವುದರಿಂದ ಇಂದ್ರನು ಮೇಘವಾಹನನೆಂದು ಪ್ರಸಿದ್ಧನಾಗಿರುವನು. ಸ್ಕಂದಸ್ವಾಮಿಗಳು **ಅದ್ರಯಃ—ಸೋಮಾಭಿಷವ ಗ್ರಾವಾಣಃ** ಸೋಮರಸವನ್ನು ಜಜ್ಜಿ ಹಿಂಡುವ ಕಲ್ಲುಗಳು ಎಂದು ಅರ್ಥವನ್ನು ಹೇಳಿರುವರು

ಅನುತ್ತಂ—ಅನುತ್ತಶಬ್ದವು ನಿಪಾತಿತವಾಗಿರುವುದು. ನಿಪಾತಿತವೆಂದರೆ ಪ್ರಕೃತಿಪ್ರತ್ಯಯಗಳ ವಿವೇಚನೆಯು ಸ್ಪಷ್ಟವಾಗಿ ತಿಳಿಯದಿರುವ ಕಾರಣ ಆ ಶಬ್ದಗಳನ್ನು ಹಾಗೆಯೇ ಪಾರಮಾಡುವುದು ನಿಪಾತನವೆನಿಸಿರುವುದು ಇದಕ್ಕೆ ಅವ್ಯಯವೆಂದೂ ಹೇಳುವರು. ಅನುತ್ತಂ ಎಂಬ ಶಬ್ದಕ್ಕೆ ತಿರಸ್ಕಾರವನ್ನು ಹೊಂದದೆ ಇರುವ ಸಾಮರ್ಥ್ಯವು ಇಂದ್ರನಿಗೆ ಇರುವುದೆಂದು ಅರ್ಥವನ್ನು ಹೇಳುವರು ಈ ಅರ್ಥದಲ್ಲಿ ಈ ಪದವು **ವೀರ್ಯಂ** ಎಂಬ ಪದಕ್ಕೆ ವಿಶೇಷಣವಾಗಿರುವುದು

ಮಾಯಿನಂ ಮೃಗಂ ಮಾಯೆಯೈವ ಅವಧೀಃ—ಮೋಸಮಾಡತಕ್ಕವನಾಗಿ ಲೋಕಕ್ಕೆ ಹಿಂಸೆಯನ್ನು ಉಂಟುಮಾಡುತ್ತಿರುವ ಮೃಗರೂಪದಿಂದ ಇರುವ ವೃತ್ರಾಸುರನನ್ನು ಮೋಸದಿಂದಲೇ ನಾಶಪಡಿಸಿರುತ್ತೀಯೆ ಎಂದು ಸಾಯಣರು ವ್ಯಾಖ್ಯಾನಮಾಡಿರುವರು. ಮೃಗವೆಂದು ಹೆಸರುಳ್ಳ ಅಸುರನನ್ನು ಅಥವಾ ವೃಷ್ಟಿಯನ್ನು ಸುರಿಸುವುದ ಕ್ಕಾಗಿ ಹುಡುಕಬೇಕಾಗಿರುವ ಮೇಘವನ್ನು ಇತರರು ಹೊಡೆಯಲು ಸಾಧ್ಯವಿಲ್ಲದಿರುವ ಕಾರಣ ನೀನು ಮೋಸದಿಂದಲೇ ಹೊಡೆದು ನಿನ್ನ ಸ್ವರಾಜ್ಯರಕ್ಷಣರೂಪವಾದ ಸಾಮ್ರಾಜ್ಯಕ್ಕೆ ಮರ್ಯಾದೆಯನ್ನು ಮಾಡಿರುತ್ತೀಯೆ ಎಂದು ಸ್ಕಂದ ಸ್ವಾಮಿಗಳು ಅರ್ಥವನ್ನು ಮಾಡಿರುವರು

ಅಸುರರು ಮಾಯಾವಿಗಳೆಂಬುದು ಪ್ರಸಿದ್ಧವು ಮಾಯಾವಿಗಳೆಂದರೆ ತಂತ್ರ ಅಥವಾ ಮೋಸದಿಂದ ಯುದ್ಧ ಮೊದಲಾದವುಗಳನ್ನು ಮಾಡುವವರು, ವಂಚಕರು ಎಂದರ್ಥವು. ಇಂತಹ ಶತ್ರುಗಳನ್ನು ತಂತ್ರ, ಉಪಾಯ, ಮೋಸ ಮೊದಲಾದವುಗಳಿಂದಲೇ ಇಂದ್ರನು ಸಂಹಾರಮಾಡಿದನೆಂದು ಋಗ್ವೇದದಲ್ಲಿ ಅನೇಕ ಕಡೆ ವರ್ಣಿತವಾಗಿದೆ—

ಮಾಯೋಭಿರಿಂದ್ರ ಮಾಯಿನಂ ತ್ವಂ ಶುಷ್ಣಮವಾತಿರಃ ।

(ಋ. ಸಂ. ೧-೧೧-೭)

ಈ ಋಕ್ಕಿನಲ್ಲಿ ಮೋಸಗಾರನಾದ ಶುಷ್ಣಾಸುರನನ್ನೂ, ಉಪಾಯಗಳಿಂದಲೇ ಸಂಹಾರಮಾಡಿದನೆಂದು ಹೇಳಿದೆ ಇದರಂತೆಯೇ—

ತ್ವಂ ಮಾಯೋಭಿರಪ ಮಾಯಿನೋಽಧಮಃ ಸ್ವಧಾಭಿರ್ಯೇ ಅಧಿ ಶುಷ್ಣಮಾವಜುಹ್ವತ ।

(ಋ. ಸಂ. ೧-೫೧-೫)

ವೃಜನೇನ ವೃಜಿನಾನ್ತ್ಸಂ ಪಿಪೇಷ ಮಾಯೋಭಿರ್ದಸ್ಯೂರಭಿಭೂತ್ಯೋಜಾಃ ।

(ಋ. ಸಂ. ೩-೩೪-೬)

ಅಹಿಮೋಹಾನುಸ ಅಶಯಾನಂ ಪ್ರ ಮಾಯೋಭಿರ್ಮಾಯಿನಂ ಸಕ್ಷದಿಂದ್ರಃ ।

(ಋ. ಸಂ ೫-೩೦-೬)

ಮಾಯೋಭಿರುತ್ಸಿಸೃಪ್ಸತ ಇಂದ್ರ ದ್ಯಾಮಾರುರುಕ್ಷತಃ । ಅವ ದಸ್ಯೂರಧೂನುಥಾಃ ॥

(ಋ. ಸಂ. ೮-೧೪-೧೪)

ತ್ವಂ ಮಾಯೋಭಿರನವದ್ಯ ಮಾಯಿನಂ ಶ್ರವಸ್ಯತಾ ಮನಸಾ ವೃತ್ರಮರ್ದಯಃ ।

(ಋ. ಸಂ ೧೦-೧೪೭-೩)

ಇತ್ಯಾದಿ ಸ್ಥಳಗಳಲ್ಲಿ ಇಂದ್ರನು ಮಾಯಾವಿಗಳಾದ ಅಸುರನನ್ನು ಮಾಯೆಯಿಂದಲೇ ಸಂಹಾರಮಾಡಿದನೆಂದು ವರ್ಣನೆಗಳಿವೆ

॥ ವ್ಯಾಕರಣಪ್ರಕ್ರಿಯಾ ॥

ಅದ್ರಿವಃ—ಅದ್ರಿ ಎಂಬುದು ಮೇಘದ ಹೆಸರು ಅದ್ರಿಃ ಅಸ್ಯ ಅಸ್ತಿ ಇತಿ ಅದ್ರಿವಾನ್ **ತದಸ್ಯಾಸ್ತಿ**—ಸೂತ್ರದಿಂದ ಮತುಪ್ ಪ್ರತ್ಯಯ **ಭಂದಸೀರಃ** (ಪಾ. ಸೂ ೮-೨-೧೫) ಎಂಬುದರಿಂದ ಮತುಪಿನ ಮಕಾರಕ್ಕೆ ವತ್ವ. **ಅದ್ರಿವತ್** ಶಬ್ದವಾಗುತ್ತದೆ ಸಂಬುದ್ಧಿಯಲ್ಲಿ **ಮತುವಸೋರುಃ ಸಂಬುದ್ಧೌ** (ಪಾ. ೮-೩-೧) ಎಂಬುದರಿಂದ ಮತುಪಿನ ತಕಾರಕ್ಕೆ ರುತ್ವ **ಖರವಸಾನಯೋರ್ವಿಸರ್ಜನೀಯಃ** ಸೂತ್ರದಿಂದ ವಿಸರ್ಗ.

ಆನುತ್ತಂ—ಣುದ ಪ್ರೇರಣೇ ಧಾತು ಕರ್ಮಣಿಯಲ್ಲಿ ಕ್ತ ಪ್ರತ್ಯಯ **ರದಾಭ್ಯಾಂ**—ಸೂತ್ರದಿಂದ ನಿಷ್ಠಾನತ್ವವು ಪ್ರಾಪ್ತವಾದರೆ **ನಸತ್ತನಿಷತ್ತ**—(ಪಾ ಸೂ. ೮-೪-೬೧) ಎಂಬುದರಿಂದ ನಿಪಾತಮಾಡಿರುವುದರಿಂದ ನತ್ವ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತ. ವಿಭಕ್ತಿಯೊಡನೆ (ಅಮ್) **ಏಕಾದೇಶವಾದಾಗ ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ ೮-೪-೫) ಎಂಬುದರಿಂದ ಉದಾತ್ತವಾಗುತ್ತದೆ

ಮಾಯಿನಂ—ಮಾಯಾಶಬ್ದವು ವ್ರೀಹ್ಯಾದಿಯಲ್ಲಿಯೂ ಪಠಿತವಾದುದರಿಂದ **ವ್ರೀಹ್ಯಾದಿಭ್ಯಶ್ಠ** (ಪಾ. ಸೂ. ೫-೨-೧೧೬) ಎಂಬುದರಿಂದ ಮತ್ವರ್ಥದಲ್ಲಿ ಇನಿ ಪ್ರತ್ಯಯ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ಇಕಾರ ಉದಾತ್ತವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ಅವಧೀಃ—ಹನ ಹಿಂಸಾಗತ್ಯೋಃ ಧಾತು. ಇದಕ್ಕೆ ಲುಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಇತಶ್ಚ** ಸೂತ್ರದಿಂದ ಇಕಾರ ಲೋಪ. **ಲುಙ್ಲಙ್ಲಿ** (ಪಾ. ಸೂ ೨-೪-೪೩) ಎಂಬುದರಿಂದ ಪ್ರಕೃತಿಗೆ ವಧಾದೇಶ. ಇದು ಅದಂತವಾಗಿದೆ ಚ್ಲಿಗೆ ಸಿಚ್ ಆದೇಶ. **ಅಸ್ತಿಸಿಚೋಽಪೃಕ್ತೇ** (ಪಾ. ಸೂ ೭-೩-೯೬) ಎಂಬುದರಿಂದ ಆಪೃಕ್ತಕ್ಕೆ ಈಡಾಗನು. ಸಿಚ್ಚಿಗೆ ಇಡಾಗನು. **ಅತೋಲೋಪಃ** ಎಂಬುದರಿಂದ ವಧಪ್ರಕೃತಿಯ ಅಕಾರಕ್ಕೆ ಲೋಪ. **ಇಟೋಽಚಿ** (ಪಾ ಸೂ. ೮-೩-೨೮) ಎಂಬುದರಿಂದ ಸಿಚ್ಚಿಗೆ ಲೋಪ **ಅಚೋಃ ಞಿತಿ** — ಸೂತ್ರದಿಂದ ಅಲೋಪಕ್ಕೆ ಸ್ಥಾನಿವದ್ಭಾವ ಬರುವುದರಿಂದ ಸಿಚ್ ನಿಮಿತ್ತವಾಗಿ ಧಾತುವಿಗೆ ವೃದ್ಧಿ ಬರುವುದಿಲ್ಲ ಆತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೬ ॥

॥ ಸಂಹಿತಾಪಾಠಃ ।

ವಿ ತ್ವೇ ವಜ್ರಾಸೋ ಅಸ್ಥಿರನ್ನವತಿಂ ನಾವ್ಯಾ ಅನು ।
ಮಹತ್ತ ಇಂದ್ರ ವೀರ್ಯಂ ಬಾಹ್ವೋಸ್ತೇ ಬಲಂ ಹಿತಮರ್ಚ-
ನ್ನನು ಸ್ವರಾಜ್ಯಂ ॥ ೮ ॥

॥ ಪದಪಾಠಃ ॥

ವಿ । ತ್ವೇ । ವಜ್ರಾಸಃ । ಅಸ್ಥಿರನ್ । ನವತಿಂ । ನಾವ್ಯಾಃ । ಅನು ।
ಮಹತ್ । ತ್ವೇ । ಇಂದ್ರ । ವೀರ್ಯಂ । ಬಾಹ್ವೋಃ । ತ್ವೇ । ಬಲಂ । ಹಿತಂ ।
ಅರ್ಚನ್ । ಅನು । ಸ್ವರಾಜ್ಯಂ ॥ ೮ ॥

ಸಾಯಣಭಾಷ್ಯಂ ।

ಹೇ ಇಂದ್ರ ತೇ ತವ ವಜ್ರಾಸೋ ವಜ್ರಾಸ್ತ್ವತ್ಸಕಾಶಾನ್ನಿರ್ಗತಾನ್ಯಾಯುಧಾನಿ ನಾವ್ಯಾ ನಾವಾ ತಾರ್ಯಾ ನವತಿಂ ನವತಿಸಂಖ್ಯಾಕಾ ವೃತ್ರೇಣ ನಿರುದ್ಧಾ ನದೀರನೂಪಲಕ್ಷ್ಯ ವ್ಯಸ್ಥಿರನ್ । ವಿವಿಧಮಸ್ಥಿಷತ । ಸರ್ವತ್ರ ವ್ಯಾಪ್ಯ ವರ್ತಮಾನಂ ವೃತ್ರಂ ಹಂತುಂ ತವ ವಜ್ರ ಏಕೋಽಪ್ಯನೇಕ ಇವಾಸೀದಿತ್ಯರ್ಥಃ । ಕಿಂಚ ಇಂದ್ರ ತೇ ತವ ವೀರ್ಯಂ ಮಹತ್ ಪ್ರಭೂತಂ । ಅನ್ಯೈರಜೇಯಮಿತ್ಯರ್ಥಃ । ತಥಾ ತೇ ಬಾಹ್ವೋಸ್ತ್ವದೀಯಯೋರ್ಹಸ್ತಯೋರ್ಬಲಂ ಹಿತಂ ನಿಹಿತಂ । ತ್ವದೀಯೌ ಬಾಹೂ ಅಸ್ಮತಿತಯೇನ ಬಲಿನಾವಿತ್ಯರ್ಥಃ । ಅನ್ಯತ್ಪೂರ್ವವತ್ ॥ ಅಸ್ಥಿರನ್ । ತಿಷ್ಠತೇರ್ಬುಜಿ ಸಮವಪ್ರವಿಭ್ಯಃ ಸ್ಥ ಇತ್ಯಾತ್ಮನೇಪದಂ । ಮಂತ್ರೇ ಘಸೇತಿ ಚ್ಲೇರ್ಲುಕ್ । ಸ್ಥಾಘ್ವೋರಿಚ್ಚೇ । ಪಾ. ೧-೨-೧೭ । ಇತೀತ್ವಂ । ವ್ಯತ್ಯಯೇನ ಝಸ್ಯ ರನಾದೇಶಃ । ನಾವ್ಯಾಃ । ನೌವಯೋಧರ್ಮೇತ್ಯಾದಿನಾ । ಪಾ. ೪-೪-೯೧ । ಯತ್ । ಯತೋಽನಾವ ಇತಿ ಪರ್ಯುದಾಸಾತ್ತ್ವಪ್ರತಿಷೇಧ ಇತಿ ಸ್ವರಿತತ್ವಂ । ಬಾಹ್ವೋಃ । ಉದಾತ್ತಯಣ ಇತಿ ವಿಭಕ್ತ್ಯುದಾತ್ತತ್ವಂ ॥

ಪ್ರತಿಪದಾರ್ಥ ।

ಇಂದ್ರ—ಎಲೈ ಇಂದ್ರನೇ । **ತೇ**—ನಿನ್ನ (ನಿನ್ನಿಂದ ಪ್ರಯೋಗಿಸಲ್ಪಟ್ಟ) । **ವಜ್ರಾಸಃ**—ವಜ್ರಾಯುಧಗಳು । **ನವತಿಂ**—ತೊಂಭತ್ತು । **ನಾವ್ಯಾಃ**—ನಾವೆಯಿಂದ ದಾಟಲ್ಪಡುವ (ನದಿಗಳನ್ನು) । **ಅನು**—ಲಕ್ಷ್ಯಮಾಡದೆ । **ವಿ ಅಸ್ಥಿರ**—ನಾನಾರೂಪವಾಗಿ ಇದ್ದುವು । **ತೇ**—ನಿನ್ನ । **ವೀರ್ಯಂ**—ವೀರ್ಯವು (ಪರಾಕ್ರಮವು) । **ಮಹತ್**—ಹೆಚ್ಚಾದದ್ದು । **ತಥಾ**—ಹಾಗೆಯೇ । **ತೇ**—ನಿನ್ನ । **ಬಾಹ್ವೋಃ**—ತೋಳುಗಳಲ್ಲಿ । **ಬಲಂ** ಬಲವು । **ಹಿತಂ**—ನಿನ್ನಿಂದ ಹಿತವಾಗಿದೆ । **ಹೇ ಇಂದ್ರ**—ಎಲೈ ಇಂದ್ರನೇ (ನಿನ್ನ) । **ಸ್ವರಾಜ್ಯಂ**—ಸ್ವಪ್ರಭುತ್ವವನ್ನು । **ಅರ್ಜನ್ ಅನು**—ಪ್ರಕಟಗೊಳಿಸುತ್ತಾ ಇರುವೆ

ಭಾವಾರ್ಥ ॥

(ನಿನ್ನಿಂದ ಪ್ರಯುಕ್ತವಾದ) ವಜ್ರಾಯುಧವು ನಾನಾರೂಪವಾಗಿ ವೃತ್ರನಿಂದ ನಿರುದ್ಧವಾದ ತೊಂಭತ್ತು ನದಿಗಳನ್ನೂ ಲಕ್ಷ್ಯಮಾಡದೆ ವ್ಯಾಪಿಸಿದೆ. ನಿನ್ನ ಶೌರ್ಯವು ಮಹತ್ತರವಾದುದು ಹಾಗೆಯೇ ನಿನ್ನ ಬಾಹುಗಳೂ ಬಲಯುಕ್ತವಾಗಿವೆ. ಇಂತಹ ನೀನು ನಿನ್ನ ಸ್ವಾಮಿತ್ವವನ್ನು ಪ್ರಕಟಗೊಳಿಸುತ್ತಿರುವೆ

English Translation.

Your thounderbolts were scattered widely over ninety-and nine rivers, great is your prowess, strength is deposited in your arms, manifesting your own sovereignty.

॥ ವಿಶೇಷವಿಷಯಗಳು ॥

ವಜ್ರಾಸಃ—**ದಿದ್ಯುತ್, ನೇಮಿಃ** ಎಂಬ ಹದಿನೆಂಟು ವಜ್ರನಾಮಗಳಲ್ಲಿ ವಜ್ರ ಶಬ್ದವು (ನಿ. ೩-೧೧) ಉಕ್ತವಾಗಿರುತ್ತದೆ. **ವರ್ಜಯತಿ ಪ್ರಾಣೈಃ ಶತ್ರೂನ್** ಇತಿ ಶತ್ರುಗಳನ್ನು ಅವರ ಪ್ರಾಣಗಳಿಂದ ಹೊರಗೆ ಹೋಗುವ ಹಾಗೆ ಮಾಡುತ್ತದೆ. ಎಂದರೆ ಶತ್ರುಗಳ ಪ್ರಾಣಾಪಹರಣಮಾಡುತ್ತದೆ. ಅಥವಾ **ವಿನಾಶಯತಿ ಶತ್ರೂನ್** ಶತ್ರುಗಳನ್ನು ನಾಶಮಾಡುತ್ತದೆ, ಆದ್ದರಿಂದ ಇಂದ್ರನ ಆಯುಧವು ವಜ್ರವೆನಿಸಿರುವುದು. ಇಲ್ಲಿ **ವಜ್ರಾಸಃ** ಎಂದು ಬಹುವಚನವನ್ನು ಉಪಯೋಗಿಸಿ ಇರುವುದರಿಂದ ಇಂದ್ರನು ಶತ್ರುಗಳ ವಿನಾಶಕ್ಕಾಗಿ ಉಪಯೋಗಿಸುವ ಆಯುಧಗಳೆಂದು ಅರ್ಥವು. ಆದರೆ **ನಾವ್ಯಾಃ ನವತಿಂ ಅನು ವಿ ಅಸ್ಥಿರನ್** ತೊಂಭತ್ತು ಸಂಖ್ಯೆಯುಳ್ಳದ್ದಾಗಿರುವ ದೊಡ್ಡ ನದಿಗಳೂ ಕೂಡ ವೃತ್ರಾಸುರನಿಂದ ತಡೆಯಲ್ಪಟ್ಟು ಇರುವುದನ್ನು ನೋಡಿ ಅನೇಕವಾದವು ಎಂದು ವಜ್ರಾಯುಧವನ್ನು ವರ್ಣಿಸಿರುವುದರಿಂದ ವೃತ್ರಾಸುರನನ್ನು ನಾಶಮಾಡುವಾಗ ಒಂದು ವಜ್ರಾಯುಧವೇ ಅನೇಕ ಆಯುಧಗಳ ಹಾಗೆ ಇತ್ತು ಎಂದು ಅರ್ಥವನ್ನು ಹೇಳುವುದೇ ಸೂಕ್ತವಾಗಿರುವುದು. ಇದರಿಂದ ವಜ್ರಾಯುಧದ ಮಹತ್ವವು ಇತರ ಆಯುಧಗಳಿಗಿಂತ ಅತಿಶಯವಾಗಿರುವುದೆಂದು ತಿಳಿದುಬರುವುದು.

ತೇ ಬಾಹ್ವೋರ್ಬಲಂ ಹಿತಂ—ನಿನ್ನ ತೋಳುಗಳಲ್ಲಿ ಎಲ್ಲರ ತೋಳುಗಳ ಬಲಕ್ಕಿಂತಲೂ ಅತಿಶಯವಾದ ಬಲವು ಇಡಲ್ಪಟ್ಟಿರುವುದು ಎಂದು ಅರ್ಥವು **ಓ ಹಾಕ್ ಗತೌ, ಓ ಹಾಕ್ ತ್ಯಾಗೇ** ಎಂಬ ಧಾತುಗಳು ಗಮನ, ತ್ಯಾಗ ಎಂಬ ಅರ್ಥಗಳಲ್ಲಿ ಇರುತ್ತವೆ ಇವುಗಳ ಮೇಲೆ **ಕ್ತ**ಪ್ರತ್ಯಯವು ಬಂದಾಗಲೂ ಹಿತ ಎಂದು ಶಬ್ದವಾಗಿ ಗತ, ತ್ಯಕ್ತ ಎಂದು ಅರ್ಥವಾಗುವುದು ಆದರೆ ಇಲ್ಲಿ ಧಾಞ್ ಧಾತುವಿನ ಮೇಲೆ **ದಧಾತೇರ್ಹಿಃ** ಎಂಬ ಸೂತ್ರದಿಂದ **ಕ್ತ**ಪ್ರತ್ಯಯವು ಬಂದು **ಹಿತ** ಎಂಬ ರೂಪವಾಗಿ (ಧರಿಸಿರುವ) ಇಡಲ್ಪಟ್ಟಿರುವ ಎಂದು ಅರ್ಥವಾಗುತ್ತದೆ.

ನವತಿಂ—**ನವತಿಸಂಖ್ಯಾಕಾ ವೃತ್ರೇಣ ನಿರುದ್ಧಾ ನದೀಃ**। ವೃತ್ರನಿಂದ ತಡೆಯಲ್ಪಟ್ಟ ತೊಂಭತ್ತು ನದಿಗಳೆಂದು ಭಾಷ್ಯಕಾರರು **ನವತಿಂ** ಎಂಬ ಶಬ್ದಕ್ಕೆ ಅರ್ಥವಿವರಣೆಮಾಡಿರುವರು ಇಲ್ಲಿ **ನವತಿಂ** ಎಂದರೆ ತೊಂಭತ್ತು ಎಂದು ನಿರ್ದಿಷ್ಟಸಂಖ್ಯೆಯ ನದಿಗಳೇ ಅಥವಾ **ಶತಂ, ಸಹಸ್ರಂ** ಮೊದಲಾದ ಸಂಖ್ಯಾವಾಚಕಶಬ್ದಗಳಿರುವಂತೆ ಅನೇಕಾರ್ಥವಿರುವುದೇ ಎಂಬುದೇ ಸಂಶಯಾಸ್ಪದವಾಗಿರುವುದು ಸಾಧಾರಣವಾಗಿ ಅನೇಕಾರ್ಥವನ್ನು ಸೂಚಿಸುವ ಕಡೆಗಳಲ್ಲಿ **ಶತೆ, ಸಹಸ್ರೆ** ಎಂಬ ಶಬ್ದಗಳ ಪ್ರಯೋಗನೇ ಬಳಕೆಯಲ್ಲಿರುವುದು. ಆದುದರಿಂದ **ನವತಿಂ** ಎಂಬ ಶಬ್ದವು ಒಂದು ನಿರ್ದಿಷ್ಟವಾದ ಸಂಖ್ಯೆಯನ್ನು ಮಾತ್ರ ಸೂಚಿಸುವುದೆಂದೂ ಅದರಲ್ಲಿಯೂ ನದಿಗಳ ವಿಷಯವಾಗಿ ಹೇಳುವಾಗ ಈ ಶಬ್ದದ ಪ್ರಯೋಗವು ವಿಶೇಷವಾಗಿ ಇರುವುದೆಂದೂ ಹೇಳಲು ಸಾಕಾದಷ್ಟು ಆಧಾರಗಳಿವೆ ಉದಾಹರಣೆಗೆ—

ನವ ಚ ಯನ್ನವತಿಂ ಚ ಸ್ರವಂತೀಃ ಶ್ಯೇನೋ ನ ಭೀತೋ ಅತರೋ ರಜಾಂಸಿ।

(ಋ. ಸಂ. ೧-೩೨-೧೪)

ಪ್ರಾಸ್ಯ ಪಾರಂ ನವತಿಂ ನಾವ್ಯಾನಾಮುಪಿ ಕರ್ತಮವರ್ತಯೋ೨ಯಜ್ಯೂನ್।

(ಋ ಸಂ ೧-೧೩೧-೧೩)

ನವ ಯದಸ್ಯ ನವತಿಂ ಚ ಭೋಗಾನ್ತ್ಸಕಂ ವಜ್ರೇಣ ಮಘವಾ ವಿವೃಶ್ಚತ್।

(ಋ. ಸಂ. ೫-೩೨-೬).

ನವತಿಂ ಸ್ರೋತ್ಯಾ ನವ ಚ ಸ್ರವಂತೀರ್ದೇವೇಭ್ಯೋ ಗಾತುಂ ಮನುಷೇ ಚ ವಿಂದಃ ।

(ಋ. ಸಂ. ೧೦-೧೦೪-೮).

ಎಂಬ ಋಕ್ಕುಗಳಲ್ಲಿ ನದೀಸಂಬಂಧವಾಗಿ ನವತಿ ಶಬ್ದದ ಪ್ರಯೋಗವಿರುವುದು. ಮತ್ತು ಎರಡನೆಯ ಉದಾಹರಣೆಯನ್ನು ಬಿಟ್ಟು ಉಳಿದ ಋಕ್ಕುಗಳಲ್ಲಿ **ನವ ನವತಿಂ** ಎಂದು ತೊಂಭತ್ತೊಂಭತ್ತು ಎಂಬ ಸಂಖ್ಯೆಯನ್ನೇ ಹೇಳಿರುವುದರಿಂದಲೂ ಶಂಬರಾಸುರ ಮೊದಲಾದ ಅಸುರರ ಪಟ್ಟಣಗಳನ್ನು ಇಂದ್ರನು ನಾಶಮಾಡಿದ ಸಂದರ್ಭಗಳಲ್ಲಿಯೂ **ನವ ನವತಿಂ**— ತೊಂಭತ್ತೊಂಭತ್ತು ಎಂಬ ಶಬ್ದಗಳ ಪ್ರಯೋಗವೇ ಇರುವುದರಿಂದಲೂ ಈ ಶಬ್ದಗಳು ಅನೇಕವೆಂಬ ಅರ್ಥವನ್ನು ಸೂಚಿಸಬಹುದೆಂಬ ಶಂಕೆಗೆ ಆಸ್ಪದವಿರುವುದು

ವ್ಯಾಕರಣಪ್ರಕ್ರಿಯಾ ।

ವಜ್ರಾಸಃ- ವಜ್ರ ಶಬ್ದದ ಮೇಲೆ ಜಸ್ ವಿವಕ್ಷಾವಶಾಡಿದಾಗ **ಅಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಜಸಿಗೆ ಅಸ್-ಕಾಗಮ. ಕಿತ್ತಾದುದರಿಂದ ಅಂತಾವಯವವಾಗಿ ಬರುತ್ತದೆ

ಅಸ್ಥಿರನ್—ಷ್ಠಾ ಗತಿನಿವೃತ್ತೌ ಧಾತು. ಇದಕ್ಕೆ ಲುಬ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯವಿ ಎಂಬ ಉಸಪರ್ಗದ ಯೋಗವಿರುವುದರಿಂದ **ಸಮವಪ್ರವಿಭ್ಯಃ ಸ್ಥಃ** (ಪಾ. ಸೂ ೧-೩-೨೨) ಎಂಬುದರಿಂದ ಆತ್ಮನೇ ಪದಿಯಾಗುತ್ತದೆ **ಚ್ಲಿ ಲುಙಿ** ಸೂತ್ರದಿಂದ ಚ್ಲಿ ಬಂದಾಗ **ಮಂತ್ರೇಘಸ**-(ಪಾ. ಸೂ ೨-೪-೮೦) ಎಂಬುದರಿಂದ ಧಾತುವಿನ ಆಕಾರಕ್ಕೆ ಇತ್ಸ **ಸ್ಥಾಘ್ವೋರಿಚ್ಚ** (ಪಾ ಸೂ ೧-೩-೧೬) ಎಂಬುದರಿಂದ ಝಿ ಪ್ರತ್ಯಯಕ್ಕೆ ರನಾದೇಶ ಬರುತ್ತದೆ. ಅಂಗಕ್ಕೆ ಉಡಾಗಮ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ನಾವ್ಯಾಃ—ನಾವಾ ತಾರ್ಯಾಃ ನಾವ್ಯಾಃ (ದೋಣಿಯಿಂದ ದಾಟಬೇಕಾದವುಗಳು) **ನೌವಯೋಧರ್ಮ**— (ಪಾ ಸೂ. ೪-೪-೯೧) ಎಂಬುದರಿಂದ ತಾರ್ಯ ಎಂಬರ್ಥತೋರುವಾಗ ನೌ ಶಬ್ದಕ್ಕೆ ಯತ್ ಪ್ರತ್ಯಯ **ವಾಂತೋಯಿಪ್ರತ್ಯಯೇ** ಎಂಬುದರಿಂದ ಆವಾದೇಶ. ನಾವ್ಯ ಎಂದು ರೂಪವಾಗುತ್ತದೆ. ಸ್ತ್ರೀತ್ವದಲ್ಲಿ **ಅಜಾದ್ಯತ**—ಸೂತ್ರದಿಂದ ಟಾಪ್. **ಯತೋಽನಾವಃ** (ಪಾ. ಸೂ. ೬-೧-೨೧೩) ಎಂಬ ಸೂತ್ರದಲ್ಲಿ ಅನಾವಃ ಎಂದು ಪರ್ಯುದಾಸಮಾಡಿರುವುದರಿಂದ **ತಿತ್ಸ್ವರಿತಂ** (ಪಾ. ಸೂ ೬-೧-೧೮೪) ಎಂಬುದರಿಂದ ಸ್ವರಿತಸ್ವರ ಬರುತ್ತದೆ

ಬಾಹ್ವೋಃ—ಬಾಹು ಶಬ್ದ. ಷಷ್ಠೀ ದ್ವಿವಚನಾಂತರೂಪ. ಇಲ್ಲಿ ಉದಾತ್ತಸ್ಥಾನದಲ್ಲಿ ಯಣ್ ಬಂದು ಅದರ ಪೂರ್ವದಲ್ಲಿ ಹಲ್ಲಿರುವುದರಿಂದ ಪರದಲ್ಲಿರುವ ವಿಭಕ್ತಿಗೆ **ಉದಾತ್ತೆಯಣೋಹಲ್ ಪೂರ್ವಾತ್** (ಪಾ. ಸೂ ೬-೧-೧೭೪) ಎಂಬುದರಿಂದ ಉದಾತ್ತಸ್ವರ ಬರುತ್ತದೆ ॥ ೮ ॥

॥ संहितापाठः ॥

सहस्रं साकमर्चत परि ष्टोभत विंशतिः ।
शतैनमन्वनोनवुरिन्द्राय ब्रह्मोद्यतमर्चन्ननु
स्वराज्यं ॥ ९ ॥

॥ पदपाठः ॥

सहस्रं । साकं । अर्चत । परि । स्तोभत । विंशतिः ।
शता । एनं । अनु । अनोनवुः । इन्द्राय । ब्रह्म । उत्ऽय-
यतं । अर्चन् । अनु । स्वऽराज्यं ॥ ९ ॥

॥ सायणभाष्यं ॥

सहस्रं सहस्रसंख्याका मनुष्याः साकमर्चत । एनमिन्द्रं युगपदेवापूजयन् । तथा विंशतिः । मोडशर्त्विजो यजमानः पत्नी च सदस्यः शमिता चेति विंशतिसंख्याकाः । शेषाणां या विंशतिसंख्या सा परि ष्टोभत । परितः सर्वतोऽस्तौत् । तथा च शता शतसंख्याका ऋषयः एनमिन्द्रमन्वनोनवुः । पुनःपुनरस्तुवन् । अस्मा एवेन्द्रायेयं ब्रह्म हविर्लक्षणमन्नमुद्यतं । दात्रेणोर्ध्वं धृतं । अत एवंविध इन्द्रो वृत्रमहन्नित्यर्थः । अन्यत्पूर्ववत् ॥ परि ष्टोभत । स्तोभतिः स्तुतिकर्मा । उपसर्गात्सुनोतीति षत्वं । अनोनवुः । णु स्तुतौ । अस्माद्यङ्लुगंताल्लुङ् सिजभ्यस्तविदिभ्यश्चेति रुरुरुसादेशः । उद्यतं । यमु उपरमे । उत्पूर्वादस्मात्कर्मणि निष्ठा । अनुदात्तोपदेशेत्यादिनानुनासिकलोपः । गतिरनंतर इति गतेः प्रकृतिस्वरत्वं ॥

॥ ಪ್ರತಿಪದಾರ್ಥ ॥

ಸ್ವರಾಜ್ಯಂ– (ಇಂದ್ರನ) ಸ್ವಾಮಿತ್ವವನ್ನು । **ಅನು ಅರ್ಚನ್**—ಪ್ರಕಟಿಸುತ್ತಾ । **ಸಹಸ್ರಂ**—ಸಹಸ್ರ ಸಂಖ್ಯಾಕರಾದ ಎಂದರೆ ಅನೇಕ ಮನುಷ್ಯರು । **ಸಾಕಮರ್ಚತ**—(ಇಂದ್ರನನ್ನು) ಏಕಕಾಲದಲ್ಲಿ ಅರ್ಚಿಸಿದರು । **ವಿಂಶತಿಃ**—ಹದಿನಾರು ಮಂದಿ ಋತ್ವಿಜರು, ಯಜಮಾನ, ಅವನ ಪತ್ನಿ, ಸದಸ್ಯ ಶಮಿತಾ ಎಂಬ ಇಪ್ಪತ್ತು ಜನರು । **ಪರಿ ಷ್ಟೋಭತ**—ಸುತ್ತಲೂ ನಿಂತು ಸ್ತುತಿಸಿದರು । **ಶತಾ**—ನೂರ್ತು ಜನರು (ಋಷಿಗಳು) । **ಏನಂ**—ಇವನನ್ನು (ಇಂದ್ರನನ್ನು) । **ಅಸ್ತುನೋನವುಃ**—ಪುನಃ ಪುನಃ ಸ್ತುತಿಸಿದರು । **ಇಂದ್ರಾಯ**—(ಇದೇ) ಇಂದ್ರನಿಗೆ । **ಬ್ರಹ್ಮ**—(ಹವಿಸ್ಸಿನ ರೂಪವಾದ) ಅನ್ನವನ್ನು (ಅರ್ಪಿಸುವುದಕ್ಕಾಗಿ) । **ಉದ್ಯತಂ**—ಮೇಲಕ್ಕೆ ಎತ್ತಿ ಹಿಡಿಯಲ್ಪಟ್ಟಿದೆ

॥ ಭಾವಾರ್ಥ ॥

ಇಂದ್ರನ ಸ್ವಾಮಿತ್ವವನ್ನು ಪ್ರಕಟಿಸುತ್ತಾ ಸಾವಿರಾರು ಜನರು ಇವನನ್ನು ಅರ್ಚಿಸಿದರು, (ಋತ್ವಿಜರಾದಿಯಾದ) ಇಪ್ಪತ್ತು ಜನರು ಸ್ತುತಿಸಿದರು, ನೂರು ಜನ ಋಷಿಗಳು ಪುನಃ ಪುನಃ ಸ್ತುತಿಸಿದರು, ಮತ್ತು ಅದೇ ಇಂದ್ರನಿಗೆ ಅರ್ಪಿಸುವುದಕ್ಕಾಗಿ ಹವಿಸ್ಸನ್ನು ಸಿದ್ಧಪಡಿಸಲಾಗಿದೆ

English Translation.

A thousand mortals worshipped him together, twenty have hymned (his praise); a hundred (sages) repeatedly glorify him, so, Indra, is the oblation lifted up, manifesting your own sovereignty

॥ ವಿಶೇಷವಿಷಯಗಳು ॥

ಸಹಸ್ರಂ ಸಾಕಮರ್ಚತ, ಪರಿ ಷ್ಟೋಭತ ವಿಂಶತಿಃ, ಶತೈನಮಸ್ತುನೋನವುಃ–ಸಹಸ್ರಸಂಖ್ಯಾಕಾಃ ಮನುಷ್ಯಾಃ—ಸಾವಿರ ಸಂಖ್ಯೆಯುಳ್ಳ ಮನುಷ್ಯರು ಎಂದರೆ ಸಾವಿರಾರು ಜನರು ಒಂದೇ ಕಾಲದಲ್ಲಿ ಈ ಇಂದ್ರನನ್ನು ಪೂಜಿಸಿದರು. ಹದಿನಾರು ಜನ ಋತ್ವಿಕ್ಕುಗಳೂ, ಯಜಮಾನ, ಇವನ ಪತ್ನೀ, ಸದಸ್ಯ, ಶಮಿತಾ ಎಂಬುವರೂ ಸೇರಿ ಯಜ್ಞಕ್ಕೆ ಸಂಬಂಧಪಟ್ಟ ಇಪ್ಪತ್ತು ಜನರೂ ಒಂದು ನೂರು ಸಂಖ್ಯೆಯುಳ್ಳ ಋಷಿಗಳೂ ಒಟ್ಟಾಗಿ ಸೇರಿ ಇಂದ್ರನನ್ನು ಸ್ತುತಿಮಾಡಿದರೆಂದು ಸಾಯಣರು ವ್ಯಾಖ್ಯಾನ ಮಾಡಿರುವರು. ಸ್ಕಂದಸ್ವಾಮಿಗಳು—**ಅರ್ಚತ–ಸ್ತೋತ್ರ ಮಾಡಿರಿ, ಪರಿಷ್ಟೋಭತ–ಪೂಜಿಸಿರಿ,** ಎಂದು ಅರ್ಥವನ್ನು ಮಾಡಿ ಎಲೈ ಪುತ್ರರೇ, ಎಲೈ ಪೌತ್ರರೇ, ಎಲೈ ಋತ್ವಿಕ್ಕುಗಳೇ ನೀವು ಸಹಸ್ರ ಸಂಖ್ಯೆಯುಳ್ಳವರಾಗುವಂತೆಯೂ, ಇಪ್ಪತ್ತು ಸಂಖ್ಯೆಯುಳ್ಳವರಾಗುವಂತೆಯೂ ಇಂದ್ರನನ್ನು ಸ್ತುತಿಮಾಡಿರಿ. ಪೂಜಿಸಿರಿ ಎಂದು ಅರ್ಥವನ್ನು ಹೇಳಿರುವರು. ಇದರಿಂದ **ಸಹಸ್ರ, ಶತ, ವಿಂಶತಿ**–ಸಾವಿರ, ನೂರು, ಇಪ್ಪತ್ತು ಎಂಬ ಶಬ್ದಗಳು ಆಸ್ಪೇ ಸಂಖ್ಯೆಯನ್ನು ಬೋಧಿಸುವುವು ಎಂದು ನಿಯಮವಿರುವುದಿಲ್ಲ ಒಬ್ಬರೇ ಅಷ್ಟು

ಸಂಖ್ಯೆಯುಳ್ಳ ಜನರು ಪೂಜಿಸುವಂತೆಯೂ, ಸ್ತೋತ್ರಮಾಡುವಂತೆಯೂ ಇಂದ್ರನನ್ನು ಪೂಜೆಮಾಡಿ ಸ್ತೋತ್ರಮಾಡಿರಿ ಎಂಬ ಅರ್ಥವೂ ತೋರುತ್ತದೆ. ಮತ್ತು-ಅರ್ಚನ್ ಎಂಬುವ ಪದವು ಅರ್ಚತೇ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು. ಇದರಿಂದ ನಃ-ನಮ್ಮ. ಅಥವಾ ನಮಗಾಗಿ ಸ್ವರಾಜ್ಯಂ ಅರ್ಚ-ಸುಖಕರವಾಗಿರುವಂತೆ ನಮ್ಮೆಲ್ಲರನ್ನೂ ರಾಜ್ಯವನ್ನೂ ಕೂಡ ಮರ್ಯಾದೆಯಿಂದ ವರ್ತಿಸು ವಂತೆ ರಕ್ಷಿಸುವ ಎಂದು ಅರ್ಥವನ್ನು ಹೇಳಿರುತ್ತಾರೆ ಸಹಸ್ರ, ಶತ, ವಿಂಶತಿ ಶಬ್ದಗಳು ಅಷ್ಟು ಸಂಖ್ಯೆಗಳುಳ್ಳ ಋಷಿಗಳು ಮತ್ತು ದೇವತಾ ವಾಚಕಗಳು ಅಥವಾ ಶತ, ಸಹಸ್ರ, ಎಂಬ ಶಬ್ದಗಳಿಗೆ ಅನೇಕಾರ್ಥವನ್ನು ಹೇಳಬಹುದು ಮತ್ತು—

ಅ ಯದಿಂದ್ರಶ್ಚ ದದ್ಮಹೇ ಸಹಸ್ರಂ ವಸುರೋಚಿಷಃ ।

(ಋ. ಸಂ, ೮-೩೪-೧೬)

ಎಂಬ ಋಕ್ಕಿನಲ್ಲಿ ಸಹಸ್ರಂ ಎಂಬ ಪದಕ್ಕೆ ಸಾವಿರ ಸಂಖ್ಯೆಯುಳ್ಳ ವಸುರೋಚಿಷರೆಂದು ಪ್ರಸಿದ್ಧರಾದ ಇಂದ್ರನನ್ನು ಸ್ತುತಿಮಾಡುವ ಋಷಿಗಳು ಎಂದು ಅರ್ಥವು **ವಿಂಶತಿಃ** ಇಪ್ಪತ್ತು ಎಂಬ ಶಬ್ದದಿಂದ ಇಪ್ಪತ್ತು ಜನರಾದ ಅಂಗಿರಸ್ಸುಗಳೆಂದು ಹೇಳಬಹುದು. ಇತಿಹಾಸಗಳಲ್ಲಿ ಅಂಗಿರಸ್ಸುಗಳು ಹತ್ತುಜನಗಳೆಂದು ಪ್ರಸಿದ್ಧವಾಗಿರುವುದು ಆದರೆ ಬೃಹಸ್ಪತಿಯೇ ಮೊದಲಾದ ಭ್ರಾತೃಗಳನ್ನು ಎಣಿಕೆಮಾಡಿದರೆ (ಅಂಗಿರಸ್ಸುಗಳು) ಅಂಗಿರಾಋಷಿಗಳು ಇಪ್ಪತ್ತುಜನರಾಗುವರು. [ಇವರೂ ಸಹ ಸಾವಿರ ವಸುರೋಚಿಷರ ಸಂಗಡ ಸೇರಿಕೊಂಡು ಇಂದ್ರನನ್ನು ಸ್ತುತಿಮಾಡುವರು. **ಪವಸ್ವೇತ್ಯೃಷಯಸ್ಸೂಕ್ತಂ ಶತಂ ವೈಖಾನಸಾ ವಿದುಃ** ಎಂಬ ವಚನಾನುಸಾರವಾಗಿ ವೈಖಾನಸರು ಒಂದು ನೂರು ಜನರೂ ಕೂಡ ಇಂದ್ರನನ್ನು ಸ್ತುತಿಮಾಡುವರು. ಇದೂ ಅಲ್ಲದೆ ಯಜ್ಞಮಾಡುವವರೂ ಕೂಡ ಇಂದ್ರನನ್ನು ಸ್ತುತಿಮಾಡುವರು ಎಂಬ ಅರ್ಥವನ್ನು ವಿವರಿಸಿರುವರು.

ಬ್ರಹ್ಮ—ಬ್ರಹ್ಮ ಶಬ್ದವು ಅಂಧಃ ವಾಜಃ (ನಿ. ೩-೯) ಎಂಬ ಇಪ್ಪತ್ತೆಂಟು ಅನ್ನನಾಮಗಳಲ್ಲಿ ಉಕ್ತವಾಗಿರುವುದರಿಂದ ಅನ್ನವೆಂಬ ಅರ್ಥವನ್ನು ಬೋಧಿಸುವುದು ಇಂದ್ರನಿಗಾಗಿ ಹವಿಸ್ಸಿನ ರೂಪದಿಂದ ಇರುವ ಅನ್ನವನ್ನು ಅರ್ಪಿಸಿರಿ ಎಂದು ಅರ್ಥವು

' ವ್ಯಾಕರಣಪ್ರಕ್ರಿಯಾ '

ಅರ್ಚತೆ—ಅರ್ಚ ಪೂಜಾಯಾಂ ಧಾತು **ವ್ಯತ್ಯಯೋ ಬಹುಲಂ** ಎಂಬುದರಿಂದ ಲಙ್‌ನಲ್ಲಿ ಝಾದೇಶ ಬರುತ್ತದೆ. **ಬಹುಲಂ ಛಂದಸಿ** ಸೂತ್ರದಿಂದ ಶಪಿಗೆ ಲುಕ್ **ಅತ್ಮನೇಪದೇಷ್ವನತಃ** ಎಂಬುದರಿಂದ ಝಾಪ್ರತ್ಯಯಕ್ಕೆ ಅತಾದೇಶ. **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಪರಿಷ್ಕೃಧ್ವತ—ಷ್ಕೃಭ ಧಾತುವು ಸ್ತೋತ್ರಾರ್ಧದಲ್ಲಿ ಪ್ರಯುಕ್ತವಾಗಿದೆ. ಹಿಂದಿನಂತೆಯೇ ಲಙ್ ಪ್ರಥಮಪುರುಷ ಬಹುವಚನರೂಪ. **ಉಪಸರ್ಗಾತ್ಸುನೋತಿ**—(ಪಾ. ಸೂ. ೮-೩-೬೫) ಎಂಬುದರಿಂದ ಧಾತುವಿನ ಸಕಾರಕ್ಕೆ ಷತ್ವ ಧಾತುವಿಗೆ ನಿಘಾತಸ್ವರ ಬರುತ್ತದೆ

ಅನೋನವುಃ—ಣು ಸ್ತುತೌ ಧಾತು. ಅದಾದಿ. **ಣೋ ನಃ** (ಪಾ. ಸೂ. ೬-೧-೬೫) ಎಂಬುದರಿಂದ ಆದಿಗೆ ನತ್ವ. ಅತಿಶಯಾರ್ಥತೋರುವಾಗ **ಧಾತೋರೇಕಾಚಃ**—ಸೂತ್ರದಿಂದ ಯಙ್. **ಯಙೋ೭ಚಿ ಚ** ಎಂಬುದರಿಂದ ಅನಿಮಿತ್ತವಾಗಿ ಆದಕ್ಕೆ ಲುಕ್. **ಸನ್ಯಙೋಃ** ಸೂತ್ರದಿಂದ ಧಾತುವಿಗೆ ದ್ವಿತ್ವ. **ಗುಣೋ೭ರ್ತಿಸಂಯೋಃ** (ಪಾ.ಸೂ. ೭-೪-೨೯) ಎಂಬುದರಿಂದ ಅಭ್ಯಾಸಕ್ಕೆ ಗುಣ. ಲುಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. **ಚ್ಲೌ ಲುಙಿ** ಎಂಬುದರಿಂದ ಚ್ಲಿ ಪ್ರತ್ಯಯ. **ಚ್ಲೇಃ ಸಿಚ್** ಸೂತ್ರದಿಂದ ಅದಕ್ಕೆ ಸಿಚಾದೇಶ. **ಸಿಚೇಭ್ಯಸ್ತೇವಿಭ್ಯಶ್ಚ** (ಪಾ. ಸೂ. ೩-೪-೧೦೯) ಎಂಬುದರಿಂದ ಸಿಚ್ಚಿನ ನ ಪರದಲ್ಲಿರುವ ಝಿ ಗೆ ಉಸಾದೇಶ. **ಹ್ರುಸ್ವಾದಂಗಾತ್**—(ಪಾ. ಸೂ. ೮-೩-೭೭) ಎಂಬುದರಿಂದ ಸಿಚ್ಚಿಗೆ **ಲೋಪ**. ಉಕಾರಕ್ಕೆ ಗುಣ-ಅವಾದೇಶ ಅಂಗಕ್ಕೆ ಆಡಾಗಮ. **ಅನೋನವುಃ** ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಉದ್ಯತೇಂ—ಉತ್ ಉಪಸರ್ಗ. ಯಮು ಉಪರಮೇ ಧಾತು. ಉತ್ ಪೂರ್ವವಾದ ಈ ಧಾತುವಿಗೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ. ಉದ್ಯಮ್+ತ ಎಂದಿರುವಾಗ ಕಿತ್ತಾದ ಪ್ರತ್ಯಯ ಪರವಾದುದರಿಂದ **ಅನುದಾತ್ತೋ-ಪದೇಶವನತಿ**—(ಪಾ. ಸೂ. ೬-೪-೩೭) ಎಂಬುದರಿಂದ ಧಾತುವಿನ ಅನುನಾಸಿಕಕ್ಕೆ ಲೋಪ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಉತ್) ಪ್ರಕೃತಿಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತ ರೂಪ. ॥ ೯ ॥

॥ ಸಂಹಿತಾಪಾಠಃ ॥

ಇಂದ್ರೋ ವೃತ್ರಸ್ಯ ತವಿಷೀಂ ನಿರಹನ್ನಹಸ್ತಾ ಸಹಃ ।
ಮಹತ್ತದಸ್ಯ ಪೌಂಸ್ಯಂ ವೃತ್ರಂ ಜಘನ್ವಾಁ ಅಸೃಜದರ್ಣವಾನು
ಸ್ವರಾಜ್ಯಂ ॥ ೧೦ ॥

॥ ಪದಪಾಠಃ ॥

ಇಂದ್ರಃ । ವೃತ್ರಸ್ಯ । ತವಿಷೀಂ । ನಿಃ । ಅಹನ್ । ಸಹಸಾ । ಸಹಃ ।
ಮಹತ್ । ತತ್ । ಅಸ್ಯ । ಪೌಂಸ್ಯಂ । ವೃತ್ರಂ । ಜಘನ್ವಾನ್ । ಅಸೃಜತ್ ।
ಅರ್ಣಾನ್ । ಅಮ್ನಾ । ಸ್ವರಾಜ್ಯಂ ॥ ೮೦ ॥

॥ ಸಾಯಣಭಾಷ್ಯಂ ॥

ಇಂದ್ರೋ ವೃತ್ರಸ್ಯಾಸುರಸ್ಯ ತವಿಷೀಂ ಬಲಂ ಸ್ವತೇಜಸೈವ ಬಲೇನ ನಿರಹನ್ । ಹತವಾನ್ । ಸಹಸಾ ಸಹನೇನಾಭಿಭವಸಾಧನೇನಾಯುಧೇನ ಸಹೋಽಭಿಭವಸಾಧನಂ ವೃತ್ರಾಯುಧಂ ನಿರಹನ್ । ಅಸ್ಯೇಂದ್ರಸ್ಯ ತತ್ಪೌಂಸ್ಯಂ ಬಲಂ ಮಹತ್ ಅತಿಪ್ರೌಢಂ । ಯಸ್ಮಾದಯಂ ವೃತ್ರಂ ಜಘನ್ವಾನ್ಹತವಾನ್ ಹತ್ವಾ ಚ ತನ್ನಿರುದ್ಧಾ ಆಪೋಽಸೃಜತ್ ತಸ್ಮಾದ್ವೃತ್ರಾನ್ನಿರಗಮಯತ್ । ಅನ್ಯತ್ಸರ್ವವತ್ ॥ ಪೌಂಸ್ಯಂ । ಪುಂಸ ಅಭಿವರ್ಧನೇ । ಚುರಾದಿಃ । ಅಚೋ ಯದಿತಿ ಯತ್ । ಯತೋಽನಾವ ಇತ್ಯಾದ್ಯುದಾತ್ತತ್ವಂ । ಜಘನ್ವಾನ್ । ಹಂತೇರ್ಲಿಟಃ ಕ್ವಸುಃ । ವಿಭಾಷಾ ಗಮಹನವಿದೇತೀಟೋ ವಿಕಲ್ಪಾದಭಾವಃ । ಅಭ್ಯಾಸಾಚ್ಚೇತ್ಯಭ್ಯಾಸಾದುತ್ತರಸ್ಯ ಹಂತೇರ್ಹಕಾರಸ್ಯ ಘತ್ವಂ ॥

॥ ಪ್ರತಿಪದಾರ್ಥ ॥

ಇಂದ್ರಃ—ಇಂದ್ರನು । ವೃತ್ರಸ್ಯ—ವೃತ್ರಾಸುರನ । ತವಿಷೀಂ—ಬಲವನ್ನು । ನಿರಹನ್—(ತನ್ನ ಬಲದಿಂದ) ನಾಶಮಾಡಿದನು । ಸಹಸಾ—ಅಭಿಭವಸಾಧನವಾದ (ಶತ್ರುವನ್ನು ಸೋಲಿಸುವ ಆಯುಧದಿಂದ) । ಸಹಃ—ಅಭಿಭವಸಾಧನವಾದ (ವೃತ್ರನ ಆಯುಧವನ್ನು) । (ನಿರಹನ್—ನಾಶಮಾಡಿದನು) । ಸ್ವರಾಜ್ಯಂ—ತನ್ನ ಸ್ವಾಮಿತ್ವವನ್ನು । ಅಮ್ನಾ ಅರ್ಚನ್—ಪ್ರಕಟಿಸುತ್ತಾ । (ಯಸ್ಮಾತ್—ಯಾವ ಬಲದಿಂದ) । ವೃತ್ರಂ—ವೃತ್ರಾಸುರನನ್ನು । ಜಘನ್ವಾನ್—ವಧಿಸಿದನೋ (ಮತ್ತು ಅವನು ತಡೆದು ನಿಲ್ಲಿಸಿದ್ದ ನೀರನ್ನೂ) । ಅಸೃಜತ್—ಬಿಡುಗಡೆ ಮಾಡಿದನೋ । ಅಸ್ಯ—ಆ ಇಂದ್ರನ । ತತ್ ಪೌಂಸ್ಯಂ—ಅಂತಹ ಬಲವು । ಮಹತ್—ಮಹತ್ತರವಾದದ್ದು.

॥ ಭಾವಾರ್ಥ ॥

ಇಂದ್ರನು ಸ್ವಸಾಮರ್ಥ್ಯದಿಂದ ವೃತ್ರನ ಸಾಮರ್ಥ್ಯವನ್ನೂ ತನ್ನ ಆಯುಧದಿಂದ ಅವನ ಆಯುಧವನ್ನೂ ನಾಶಮಾಡಿದನು; ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಾ, ವೃತ್ರಾಸುರನನ್ನು ವಧಿಸಿ, (ಅವನಿಂದ ನಿರುದ್ಧವಾದ ಉದಕವನ್ನು ಪ್ರವಹಿಸುವಂತೆ ಮಾಡಿದ ಅವನ ಬಲವೂ ಮಹತ್ತರವಾದದ್ದು.

English Translation.

Indra overcame by his strength the strength of Vritra, great, in his manhood, wherewith, having slain Vritra, he let loose the waters, manifesting his own sovereignty.

। ನಿಶೇಷವಿಷಯಗಳು ।

ತವಿಷೀಂ—ಬಲಂ। ತವಿಷೀ ಶಬ್ದವು ಇಪ್ಪತ್ತೈದಂಟು ಬಲನಾಮಗಳಲ್ಲಿ (ನಿ ೩-೯) ಉಕ್ತವಾಗಿರುವುದರಿಂದ ತವಿಷೀಂ ಎಂದರೆ ಬಲವನ್ನು ಎಂದರ್ಥವು. ಇದರಂತೆಯೇ ಪೌಂಸ್ಯಂ ಸಹಃ ಎಂಬ ಶಬ್ದಗಳೂ, ಬಲನಾಮಗಳಲ್ಲಿ ಪಠಿತವಾಗಿವೆ. ಆದರೆ ಬಲವೆಂದು ಅರ್ಥವನ್ನು ಬೋಧಿಸುವ ಈ ಮೂರು ಪದಗಳಲ್ಲಿ ತವಿಷೀ ಎಂಬ ಶಬ್ದವು ವೃತ್ರನ ಸಾಮರ್ಥ್ಯಪರವಾಗಿಯೂ, ಪೌಂಸ್ಯಂ ಎಂಬ ಪದವು ಇಂದ್ರನ ಶಕ್ತಿಪರವಾಗಿಯೂ ಇರುವುದು ಸಹಃ ಎಂಬ ಪದವು ಬಲವನ್ನು ಹೆಚ್ಚಾಗಿರುವ ಹಾಗೆ ತೋರಿಸುವ ಸಾಧನವಾದ ಆಯುಧಪರವಾಗಿ ಉಭಯಉಕ್ತವಾಗಿರುವುದು ಇದರಿಂದ **ಸಹಃ-ಅಭಿಭವಸಾಧನಂ ವೃತ್ರಾಯುಧಂ** ಇಂದ್ರನನ್ನು ತಿರಸ್ಕರಿಸುವುದಕ್ಕೆ ಸಾಧನವಾದ ಆಯುಧವೆಂದೂ **ಸಹಸಾ—ಸಹನೇನ ಅಭಿಭವಸಾಧನೇನ ಆಯುಧೇನ** ವೃತ್ರನನ್ನು ಸಂಹರಿಸುವುದಕ್ಕೆ ತಕ್ಕ ಶಕ್ತಿಯುಳ್ಳ ಇಂದ್ರನ ಆಯುಧವೆಂದೂ ಸಾಯಣರು ಅರ್ಥವನ್ನು ಹೇಳಿರುವರು ಸ್ಕಂದಸ್ವಾಮಿಗಳು ತವಿಷೀಂ ಎಂಬ ಪದಕ್ಕೆ ಸೇನೆಯ ರೂಪವಾದ ಬಲವೆಂದೂ ಸಹಃ ಎಂಬ ಶಬ್ದವು ಶರೀರಬಲಬೋಧಕವೆಂದೂ ವ್ಯಾಖ್ಯಾನಿಸಿರುವರು

। ವ್ಯಾಕರಣಪ್ರಕ್ರಿಯಾ ।

ಅಹನ್—ಹನ ಹಿಂಸಾಗತ್ಯೋಃ ಧಾತು ಲಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ ಇತಶ್ಚ ಎಂಬುದರಿಂದ ಇಕಾರಕ್ಕೆ ಲೋಪ. **ಅದಿ ಪ್ರಭೃತಿಭ್ಯಃ ಶಪಃ** ಸೂತ್ರದಿಂದ ಶಪ್ಪಿಗೆ ಲುಕ್. ಹಲಂತವ ಪರದಲ್ಲಿ ಪ್ರತ್ಯಯ ಬಂದುದರಿಂದ **ಹಲ್‌ಙ್ಯಾಭ್ಯೋ**—ಸೂತ್ರದಿಂದ ಅದಕ್ಕೆ ಲೋಪ ಅಂಗಕ್ಕೆ ಅಡಾಗಮ. ಅತಿಜಂತದ ಪರದಲ್ಲಿ ಬಂದುದರಿಂದ ನಿಘಾತಸ್ವರ ಬರುತ್ತದೆ.

ಪೌಂಸ್ಯಂ—ಪುಂಸ ಅಭಿವರ್ಧನೇ ಧಾತು. ಚುರಾದಿ. ಅದಂತವಾದ ಧಾತುವಾದುದರಿಂದ **ಅಚೋಯತ್** (ಪಾ. ಸೂ ೩-೧-೯೭) ಎಂಬುದರಿಂದ ಯತ್ ಪ್ರತ್ಯಯ **ಯತೋಽನಾವಃ** (ಪಾ ಸೂ ೬-೧-೨೧೩) ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ

ಜಘನ್ವಾನ್—ಹನ ಹಿಂಸಾಗತ್ಯೋಃ ಧಾತು. ಇದಕ್ಕೆ **ಲಿಟ್** ವಿನಕ್ಪ್ವಮಾಡಿದಾಗ **ಕ್ವಸುಶ್ಚ** ಎಂಬುದರಿಂದ ಅದಕ್ಕೆ ಕ್ವಸುರಾದೇಶ. ಇದಕ್ಕೆ **ವಸ್ವೇಕಾ**—ಸೂತ್ರದಿಂದ ಇಡಾಗಮ ಪ್ರಾಪ್ತವಾದರೆ **ವಿಭಾಷಾಗಮಹನಿವಿದ-ವಿಶಾಂ** ಎಂಬುದರಿಂದ ವಿಕಲ್ಪವಿಧಾನಮಾಡಿರುವುದರಿಂದ ಇಲ್ಲಿ ಬರುವುದಿಲ್ಲ ಪ್ರತ್ಯಯ ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಚುತ್ವ. ಜಶ್ತ್ವ. **ಅಭ್ಯಾಸಾಚ್ಚ** (ಪಾ. ಸೂ. ೭-೩-೫೫) ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಧಾತುವಿನ ಹಕಾರಕ್ಕೆ ಕುತ್ವ. ಜಘನ್ವಸ್ ಶಬ್ದವಾಗುತ್ತದೆ ಪ್ರಥಮಾ ಸು ಪರವಾದಾಗ

ಅತ್ಸಂತಸ್ಯ—ಎಂಬುದರಿಂದ ಉಪಧಾದೀರ್ಘ. ಪ್ರತ್ಯಯದಲ್ಲಿ ಉಗಿತ್ತಾದುದರಿಂದ **ಉಗಿದಚಾಂ**—ಸೂತ್ರದಿಂದ ನುಮಾಗಮ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ ಸಂಯೋಗಾಂತಲೋಪದಿಂದ ಪ್ರತ್ಯಯ ಸಕಾರಕ್ಕೆ ಲೋಪ. ಇದು ಅಸಿದ್ಧವಾದುದರಿಂದ ನಲೋಪ ಬರುವುದಿಲ್ಲ. ಪ್ರತ್ಯಯಸ್ವರದಿಂದ ಆಕಾರ ಉದಾತ್ತವಾಗುತ್ತದೆ.

ಅಸೃಜತ್—ಸೃಜ ವಿಸರ್ಗೇ ಧಾತು. ತುದಾದಿ ಲಙ್ ಪ್ರಥಮಪುರುಷ ಏಕವಚನರೂಪ. ಶ ವಿಕರಣಕ್ಕೆ **ಸಾರ್ವಧಾತುಕಮಪಿತ್** ಎಂಬುದರಿಂದ ಙಿತ್ವವಿರುವುದರಿಂದ ಧಾತುವಿನ ಲಘೂಪಧಕ್ಕೆ ಗುಣಬರುವುದಿಲ್ಲ ತಿಙಂತ ನಿಘಾತಸ್ವರ ಬರುತ್ತದೆ ॥ ೧೦ ॥

॥ ಸಂಹಿತಾಪಾಠಃ ॥

ಇಮೇ ಚಿತ್ತವ ಮನ್ಯವೇ ವೇಪೇತೇ ಭಿಯಸಾ ಮಹೀ ।
ಯದಿಂದ್ರ ವಜ್ರಿನ್ನೋಜಸಾ ವೃತ್ರಂ ಮರುತ್ವೋ ಅವಧೀರರ್ಚ-
ನ್ನನು ಸ್ವರಾಜ್ಯಂ ॥ ೧೧ ॥

॥ ಪದಪಾಠಃ ॥

ಇಮೇ ಇತಿ । ಚಿತ್ । ತವ । ಮನ್ಯವೇ । ವೇಪೇತೇ ಇತಿ । ಭಿಯಸಾ । ಮಹೀ ಇತಿ ।

ಯತ್ । ಇಂದ್ರ । ವಜ್ರಿನ್ । ಓಜಸಾ । ವೃತ್ರಂ । ಮರುತ್ವಾನ್ । ಅವಧೀಃ । ಅರ್ಚನ್ । ಅನು । ಸ್ವ ರಾಜ್ಯಂ ॥ ೧೧ ॥

॥ ಸಾಯಣಭಾಷ್ಯಂ ॥

ಮಹೀ ಮಹತ್ಯಾವಿಮೇ ದ್ಯಾವಾಪೃಥಿವ್ಯಾವಪಿ ಹೇ ಇಂದ್ರ ತವ ಮನ್ಯವೇ ತ್ವದೀಯಕೋಪಾದ್ಭಿಯಸಾ ಭೀತ್ಯಾ ವೇಪೇತೇ। ಕಂಪೇತೇ। ಹೇ ವಜ್ರಿನ್ವಜ್ರವನ್ನಿಂದ್ರ ಮರುತ್ವಾನ್ಮರುದ್ಭಿರ್ಯುಕ್ತಸ್ತ್ವಂ ಓಜಸಾ ಬಲೇನ ಯದ್ಯದಾ ವೃತ್ರಮವಧೀಃ। ತದಾನೀಂ ದ್ಯಾವಾಪೃಥಿವ್ಯಾವಪಿ ಭಯೇನಾಕಂಪಿಷಾತಾಮಿತ್ಯರ್ಥಃ॥ ವೇಪೇತೇ। ಟುವೇಪೃ ಕಂಪನೇ। ಭಿಯಸಾ। ಇಂಭೀ ಭಯೇ। ಔಣಾದಿಕಃ ಕಸಿಪ್ರತ್ಯಯಃ॥

। ಪ್ರತಿಪದಾರ್ಥ ।

ವಜ್ರಿನ್—ವಜ್ರಾಯುಧಧಾರಿಯಾದ। **ಇಂದ್ರ**—ಎಲೈ ಇಂದ್ರನೇ। **ಮರುತ್ವಾನ್**—ಮರುದ್ದೇವತೆಗಳಿಂದ ಯುಕ್ತನಾದ (ನೀನು)। **ಸ್ವರಾಜ್ಯಂ**—ಸ್ವಸ್ವಾಮಿತ್ವವನ್ನು। **ಅನು ಅರ್ಚನ್**—ಪ್ರಕಟಿಸುತ್ತಾ। **ಓಜಸಾ**—(ಸ್ವ) ಸಾಮರ್ಥ್ಯದಿಂದ। **ಯತ್**—ಯಾವಾಗ। **ವೃತ್ರಂ**—ವೃತ್ರಾಸುರನನ್ನು। **ಅವಧೀಃ**—ವಧಿಸಿದೆಯೋ। (**ತತ್**—ಆಗ)। **ಮಹೀ**—ದೊಡ್ಡದಾದ। **ಇಮೇ**—ಇವೆರಡು (ಭೂಮ್ಯಾಕಾಶಗಳು)। **ತವ**—ನಿನ್ನ। **ಮನ್ಯವೇ**—ಕೋಪಕ್ಕೆ (ಒಳಗಾಗಿ)। **ಭಿಯಸಾ**—ಭಯದಿಂದ। **ವೇಪೇತೇ**—ನಡುಗುತ್ತವೆ

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಾ, ನೀನು ಮರುದ್ದೇವತೆಗಳಿಂದ ಯುಕ್ತನಾಗಿ ಸ್ವಸಾಮರ್ಥ್ಯದಿಂದ ವೃತ್ರನನ್ನು ವಧಿಸಿದಾಗ, ದೊಡ್ಡದಾದ ಈ ಭೂಮ್ಯಾಕಾಶಗಳೆರಡೂ, ನಿನ್ನ ಕೋಪವನ್ನು ಕಂಡು ಭಯದಿಂದ ನಡುಗಿದುವು.

English Translation

This heaven and earth trembled, thunderer, at your wrath, when, attended by the Maruts, you slew Vritra by your prowess, manifesting your own sovereigntv.

॥ ವಿಶೇಷನಿಷಯಗಳು ॥

ಓಜಸಾ—**ಓಜಃ, ಸಾಜಃ,** ಎಂಬ ಇಪ್ಪತ್ತೈದು ಬಲನಾಮಗಳಲ್ಲಿ (ನಿ. ೩-೯) ಈ ಶಬ್ದವು ಉಕ್ತವಾಗಿರುವುದರಿಂದ ಬಲವೆಂದು ಅರ್ಥವು.

ಮಹೀ—**ಸ್ಥಭೇ ಪುರಂಧ್ರೀ,** ಮೊದಲಾದ (ನಿ. ೩-೩೨) ಇಪ್ಪತ್ತುನಾಲ್ಕು ದ್ಯಾವಾಪೃಥಿವೀನಾಮಗಳಲ್ಲಿ ಉಕ್ತವಾಗಿರುವುದರಿಂದ ಇಲ್ಲಿ ಭೂಮ್ಯಂತರಿಕ್ಷಗಳೆಂದು ಅರ್ಥವು

ಭಯೆಸಾ—" ಞಿಭೀ ಭಯೇ " ಎಂಬ ಧಾತುವಿಗೆ ಉಣಾದಿಪರಿತವಾದ ಕಸಿಪ್ರತ್ಯಯವು ಬಂದಿರುವುದರಿಂದ ಭಯನೆಂದು ಅರ್ಥವು

ಮನ್ಯವೇ—ಹೇಳಃ, ಹರಃ, ಮೊದಲಾದ ಹನ್ನೊಂದು ಕ್ರೋಧನಾಮಗಳಲ್ಲಿ (ನಿ ೩–೯) ಮನ್ಯ ಶಬ್ದವು ಉಕ್ತವಾಗಿರುವುದು. ಇಲ್ಲಿ ಇದು ಭಯಪ್ರಯೋಜಕವಾದ ಕಾರಣವಾಚಕವಾಗಿರುವುದರಿಂದ ಚತುರ್ಥೀ ವಿಭಕ್ತ್ಯಂತವಾಗಿದ್ದರೂ ಪಂಚಮೀ ವಿಭಕ್ತಿಯ ಅರ್ಥವನ್ನು ಬೋಧಿಸುವುದು **ಕ್ರೋಧದಿಂದ** ಎಂದು ಅರ್ಥವು ವೃತ್ರನನ್ನು ಸಂಹರಿಸುವ ಕಾಲದಲ್ಲಿ ಇಂದ್ರನ ಕ್ರೋಧದಿಂದ ದ್ಯಾವಾಪೃಥಿವಿಗಳೂ ಕೂಡ ನಡುಗಿದವು ಎಂದು ವ್ಯಾಖ್ಯಾನ ಮಾಡಿರುವರು

॥ ವ್ಯಾಕರಣಪ್ರಕ್ರಿಯಾ ॥

ವೇಪೇತೇ—ಟುವೇಪೃ ಕಂಪನೇ ಧಾತು. ಲಟ್ ಪ್ರಥಮಪುರುಷ ದ್ವಿವಚನದಲ್ಲಿ ಆತಾಮ್ ಪ್ರತ್ಯಯ. **ಟಿತಆತ್ಮನೇ**—ಎಂಬುದರಿಂದ ಟಿಗೆ (ಅಮ್) ಏತ್ವ. **ಆತೋಞಿತಃ** (ಪಾ ಸೂ. ೭–೩–೮೧) ಎಂಬುದರಿಂದ ಆಕಾರಕ್ಕೆ ಇಯಾದೇಶ. **ಲೋಪೋವ್ಯೋರ್ವಲಿ** ಎಂಬುದರಿಂದ ಯಕಾರಕ್ಕೆ ಲೋಪ. **ಕರ್ತರಿ ಶಪ್** ಸೂತ್ರದಿಂದ ಶಪ್ ವಿಕರಣ. ಇಕಾರ ಪರವಾದುದರಿಂದ ಗುಣ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ

ಭಿಯೆಸಾ—ಞಿಭೀ ಭಯೇ ಧಾತು ಜುಹೋತ್ಯಾದಿ. ಇವಕ್ಕೆ ಶ್ನಾದಿಕವಾದ ಕಸಿ ಪ್ರತ್ಯಯ. ಕಿತ್ತಾದುದರಿಂದ ಧಾತುವಿಗೆ ಗುಣ ಬರುವುದಿಲ್ಲ. **ಆಚಿಶ್ನುಧಾತುಭ್ರುವಾಂ**—ಸೂತ್ರದಿಂದ ಇಯಙಾದೇಶ. ಭಿಯಸ್ ಶಬ್ದವಾಗುತ್ತದೆ ಪ್ರತ್ಯಯಸ್ವರದಿಂದ ಯಕಾರೋತ್ತರಾಕಾರವು ಉದಾತ್ತವಾಗುತ್ತದೆ. ತೃತೀಯಾ ಏಕವಚನಾಂತರೂಪ.

ಅವಧೀಃ—ಇದೇ ಸೂಕ್ತದ ಏಳನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ

ವಜ್ರಿನ್—ವಜ್ರಃ ಅಸ್ಯಾಸ್ತೀತಿ ವಜ್ರೀ ಮತ್ವರ್ಥತೋರುವಾಗ **ಅತಇನಿಠನೌ** ಎಂಬುದರಿಂದ ಇನಿ ಪ್ರತ್ಯಯ ಸಂಬುದ್ಧಿಯಲ್ಲಿ **ನಜಿಸಂಬುದ್ಧ್ಯೋಃ** ಎಂಬುದರಿಂದ ನಲೋಪ ಪ್ರತಿಷೇಧ ಬರುತ್ತದೆ. **ಆಮಂತ್ರಿತಸ್ಯ ಚ** (ಪಾ ಸೂ. ೮–೧–೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೧೧ ॥

॥ संहितापाठः ॥

न वेपसा न तन्यतेन्द्रं वृत्रो वि बीभयत् ।
अभ्येनं वज्र आयसः सहस्रभृष्टिरायतार्च न्ननु स्वराज्यं ॥ ८७ ॥

॥ पदपाठः ॥

न । वेपसा । न । तन्यता । इन्द्रं । वृत्रः । वि । बीभयत् ।
अभि । एनं । वज्रः । आयसः । सहस्रऽभृष्टिः । आयत । अर्चन् ।
अनु । स्वऽराज्यं ॥ ८७ ॥

सायणभाष्यं

वृत्र इन्द्रं वेपसा स्वकीयेन वेपनेन कंपनेन न वि बीभयत् भीतं नाकरोत् । तथा तन्यता स्वकीयेन घोरेण गर्जनशब्देन न वि बीभयत् । अपि च इन्द्रेण विसृष्ट आयसोऽयोमयः सहस्रभृष्टिरनेकाभिर्धाराभिर्युक्तो वज्र एनं वृत्रमभ्यायत । हंतुमाभिमुख्येनागच्छत् । अन्यत्पूर्ववत् ॥ तन्यता । स्तन शब्दे । ऋतन्यंजीत्यादिना तनोतेर्निर्धीयमानो यतुच् बहुलवचनादस्मादपि भवति । अत एव सलोपश्च । सुसाम सुलुगिति तृतीयायाः डादेशः । उदात्तनिवृत्ति स्वरेण तस्योदात्तत्वं । बीभयत् । ञिभी भये । हेतुमति णिच् । अत्र वेपस्तन्यशब्दाभ्यां भयं न हेतोरुत्पत्तीति हेतुभययोरभावाद्भिन्नहेतुभये । पा. ३-३-१५६ । इत्याद्यभावः । ण्यंतात्लुङ् च्लेश्चङादि । आयत । आङ् यम गतौ । भ्वादिरात्मनेपदी ॥

॥ ಪ್ರತಿಪದಾರ್ಥ ॥

ವೃತ್ರೇ—ವೃತ್ರಾಸುರನು । **ಇಂದ್ರಂ**—ಇಂದ್ರನನ್ನು । **ವೇಪಸಾ**—(ತನ್ನ) ಕಂಪನದಿಂದ । **ನ ವಿ ಬೀಭಯೇತ್**—ಭಯಪಡಿಸಲಾಗಲಿಲ್ಲ । **ತನ್ಯತಾ**—(ತನ್ನ) ಘೋರಗರ್ಜನೆಯಿಂದಲೂ । **ನ (ವಿ ಬೀಭಯೇತ್)** ಹೆದರಿಸಲಾಗಲಿಲ್ಲ (ಆದರೆ, ಇಂದ್ರನು)। **ಸ್ವರಾಜ್ಯಂ**—ಸ್ವಸ್ವಾಮಿತ್ವವನ್ನು (ಸ್ವಪ್ರಭುತ್ವವನ್ನು)। **ಅನು ಅರ್ಚನ್**—ಪ್ರಕಟಿಸುತ್ತಾ । **ಅಯಸಃ**—ಕಬ್ಬಿಣದಿಂದ ಮಾಡಿದ । **ಸಹಸ್ರಭೃಷ್ಟಿಃ**—ಸಾವಿರಾರು ಅಲುಗುಗಳುಳ್ಳ । **ವಜ್ರಃ**—ಇಂದ್ರನ ವಜ್ರಾಯುಧವು । **ಏನಂ**—ಈ ವೃತ್ರನನ್ನು । **ಅಭಿ ಅಯತ**—ಎದುರಿಸಿತು.

॥ ಭಾವಾರ್ಥ ॥

ವೃತ್ರಾಸುರನ ಕಂಪನವಾಗಲೀ ಘೋರಗರ್ಜನೆಯಾಗಲೀ ಇಂದ್ರನನ್ನು ಭೀತನನ್ನಾಗಿ ಮಾಡಲಿಲ್ಲ. (ಆದರೆ) ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಾ, (ಇಂದ್ರನಿಂದ ಪ್ರಯುಕ್ತವಾದ) ಕಬ್ಬಿಣದಿಂದ ಮಾಡಿದ, ಅನೇಕ ಅಲುಗುಗಳುಳ್ಳ ವಜ್ರಾಯುಧವು ವೃತ್ರಾಸುರನನ್ನು ಎದುರಿಸಿಕೊಂಡು ಬಂದಿತು.

English Translation

Vritra deterred not Indra by his trembling or his clamour, the many-edged iron thunder-bolt fell upon him. (Indra Manifesting his own sovereigntv.

॥ ವಿಶೇಷವಿಷಯಗಳು ॥

ತನ್ಯತಾ—**ಸ್ತನ ಶಬ್ದೇ** ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಪದದಿಂದ ಶಬ್ದ ಅಥವಾ ಧ್ವನಿ ಎಂದು ಅರ್ಥವಾಗುತ್ತದೆ. ಇಲ್ಲಿ ವೃತ್ರ ಎಂಬ ಪದಕ್ಕೆ ವಿಶೇಷಣ ಮಾಡಿರುವುದರಿಂದ **ಘೋರೇಣ ಗರ್ಜನಶಬ್ದೇನ** ಭಯವನ್ನು ಉಂಟುಮಾಡುವ ಗರ್ಜನಧ್ವನಿಯೆಂದು ಅರ್ಥವಾಗುತ್ತದೆ.

ಸಹಸ್ರಭೃಷ್ಟಿಃ—ಸಹಸ್ರವೆಂಬ ಶಬ್ದವು ಸಾವಿರ ಸಂಖ್ಯೆಯೆಂಬ ಅರ್ಥವನ್ನು ಬೋಧಿಸುವುದಾದರೂ ಇಲ್ಲಿ ಅನೇಕ, ಬಹಳ ಎಂಬ ಅರ್ಥವನ್ನು ಬೋಧಿಸುವುದು. ಬಹಳ ಅಲಗುಗಳುಳ್ಳ ವಜ್ರಾಯುಧವೆಂದು ಅರ್ಥವು.

ಸ್ಕಂದಸ್ವಾಮಿಗಳು—**ಅರ್ಚನ್ ಅನು ಸ್ವರಾಜ್ಯಂ** ಎಂಬ ವಾಕ್ಯವನ್ನೂ ವಜ್ರಾಯುಧಕ್ಕೆ ವಿಶೇಷಣವನ್ನಾಗಿ ಹೇಳಿರುವರು. ಇಂದ್ರನು ತನಗೆ ಪ್ರಾಪ್ತವಾಗಿ ಬಂದಿರುವ ಸ್ವರಾಜ್ಯವನ್ನು ಬಹಳ ಮರ್ಯಾದೆಯಿಂದ ಕಾಣುವುದು ವಜ್ರಾಯುಧದ ಮಹಿಮೆಯಿಂದ ಉಂಟಾಗಿರುವ ಕಾರಣ ಸ್ವರಾಜ್ಯಾರ್ಚನವು ವಜ್ರಾಯುಧದಲ್ಲಿ ಔಪಚಾರಿಕವಾಗಿರುವುದು. ಅಥವಾ ಸ್ವರಾಜ್ಯವನ್ನು ಗೌರವದಿಂದ ಪಾಲಿಸುವ ಇಂದ್ರನಿಗೆ ವಜ್ರಾಯುಧವು ಅವನ ಸರ್ವಸ್ವವಾಗಿರುವುದು ಎಂದು ವಿವರಿಸಿರುವರು

॥ ವ್ಯಾಕರಣಪ್ರಕ್ರಿಯಾ ॥

ನೇಪಸಾ—ಟುನೇಪೃ ಕಂಪನೇ ಧಾತು **ಸರ್ವಧಾತುಭ್ಯ ಅಸುನ್** (ಉ. ಸೂ ೪-೬೮) ಎಂಬುದರಿಂದ ಅಸುನ್ ಪ್ರತ್ಯಯ. ನೇಪಸ್ ಶಬ್ದವಾಗುತ್ತದೆ. **ಇನ್ಸಿತ್ಯಾದಿನಿರ್ಜ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ತೃತೀಯಾ ಏಕವಚನಾಂತರೂಪ

ತನ್ಯತಾ—ಸ್ತನ ಶಬ್ದೇ ಧಾತು ಉಣಾದಿಯಲ್ಲಿ ಬಹುಲವಚನವಿರುವುದರಿಂದ **ಯತನ್ಯಞ್ಞಿ**—(ಉ. ಸೂ. ೩-೪೪೨) ಎಂಬುದರಿಂದ ತನುಧಾತುವಿಗೆ ವಿಧಿಸಲ್ಪಡುವ ಯತುಚ್ ಪ್ರತ್ಯಯವು ಬಹುಲಗ್ರಹಣದಿಂದ ಇದಕ್ಕೂ ಬರುತ್ತದೆ ಅದರಿಂದಲೇ ಸಲೋಪವೂ ಬರುತ್ತದೆ. ಆಗ ತನ್ಯತು ಎಂದು ರೂಪವಾಗುತ್ತದೆ ಉಕಾರಾಂತವಾದ **ಈ** ಶಬ್ದಕ್ಕೆ ತೃತೀಯಾ ವಿಭಕ್ತಿ ಪರವಾದಾಗ **ಸುಪಾಂಸುಲುಕ್**—(ಪಾ ಸೂ ೭-೧-೩೯) ಎಂಬುದರಿಂದ ಆದಕ್ಕೆ ಡಾದೇಶ. ಡಿತ್ವಾದುದರಿಂದ ಟಿಲೋಪವಾಗುತ್ತದೆ. ಅನುದಾತ್ತವಾದ ವಿಭಕ್ತಿ ಪರವಾದಾಗ ಉದಾತ್ತವಾದ ಪ್ರತ್ಯಯ ಉಕಾರವು ತನ್ನಿಮಿತ್ತವಾಗಿ ಲೋಪವಾಗುವುದರಿಂದ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** (ಪಾ ಸೂ. ೬-೧-೧೬೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಬೀಭಯೆತ್—ಞಿಭೀ ಭಯೇ ಧಾತು ಪ್ರಯೋಜಕವ್ಯಾಪಾರವು ತೋರುವುದರಿಂದ **ಹೇತುಮತಿ ಚ** (ಪಾ. ಸೂ ೩-೧-೨೬) ಎಂಬುದರಿಂದ ಣಿಚ್. ಇಲ್ಲಿ ಕಂಪನ ಮತ್ತು ಗರ್ಜನಗಳಿಂದ ಭಯವು ತೋರುವುದೇ ವಿನಾ ವೃತ್ರಾಸುರನಿಂದ (ಪ್ರಯೋಜಕನಿಂದ) ಭಯವು ತೋರದಿರುವುದರಿಂದ **ಬಿಭೇತೇರ್ಹೇತುಭಯೇ** (ಪಾ ಸೂ ೬-೧-೬೭) ಎಂಬುದರಿಂದ ಧಾತುವಿಗೆ ಣಿಚ್ ನಿಮಿತ್ತವಾಗಿ ಆತ್ವ ಬರುವುದಿಲ್ಲ ಣಿಜಂತದನೇಲೆ ಲುಙ್ ಪ್ರಥಮ ಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ **ಇತೆಶ್ಚ** ಎಂಬುದರಿಂದ ಇಕಾರಲೋಪ. **ಣೇಶ್ಚಿದ್ಯುಸುಭ್ಯಃ**—(ಪಾ. ಸೂ. ೩-೧-೪೮) ಎಂಬುದರಿಂದ ಚ್ಲಿಗೆ ಚಙಾದೇಶ. **ಚೆಙಿ** (ಪಾ. ಸೂ. ೬-೧-೧೧) ಎಂಬುದರಿಂದ ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. **ಅಭ್ಯಾಸಕ್ಕೆ ಹ್ರಸ್ವ ಜಸ್ತ್ವ.** ಣಿಚ್ ನಿಮಿತ್ತವಾಗಿ ಧಾತುವಿನ ಈಕಾರಕ್ಕೆ ಗುಣ. ಅಯಾದೇಶ **ಣೇರನಿಟಿ** (ಪಾ. ಸೂ. ೬-೪-೫೧) ಎಂಬುದರಿಂದ ಚಙ್ ನಿಮಿತ್ತವಾಗಿ ಣಿಚ್ಚಿಗೆ ಲೋಪ. **ಸನ್ವಲ್ಲಘುನಿ**—(ಪಾ ಸೂ. ೭-೪-೭೩) ಎಂಬುದರಿಂದ ಸನ್ವದ್ಭಾವ ಬರುವುದರಿಂದ **ದೀರ್ಘೋ ಲಘೋಃ** (ಪಾ. ಸೂ ೭-೪-೪೪) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ. **ಬಹುಲಂಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಂಗಕ್ಕೆ ಅಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಆಯಸಃ—ಅಯಸಃ. ವಿಕಾರಃ ಆಯಸಃ **ತಸ್ಯ ವಿಕಾರಃ** (ಪಾ. ಸೂ. ೪-೩-೧೩೪) ಎಂಬುದರಿಂದ ಅಣ್ ಪ್ರತ್ಯಯ. **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಆಯತೇ—ಅಯ ಪಯ ಗತೌ ಧಾತು. ಭ್ವಾದಿ. **ಆತ್ಮನೇಪದೀ ಲಙ್** ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ. **ಕರ್ತರಿ ಶಪ್ ಸೂತ್ರದಿಂದ** ಶಪ್ ವಿಕರಣ. **ಆದಾದೀನಾಂ**—(ಪಾ. ಸೂ. ೬-೪-೭೨) ಸೂತ್ರದಿಂದ ಆಡಾಗಮ. ತಿಙಂತನಿಘಾತಸ್ವರ ಬರುತ್ತದೆ. ॥ ೧೨ ॥

॥ ಸಂಹಿತಾಪಾಠಃ ॥

ಯದ್ವೃತ್ರಂ ತವ ಚಾಶನಿಂ ವಜ್ರೇಣ ಸಮಯೋಧಯಃ ।
ಅಹಿಮಿಂದ್ರ ಜಿಘಾಂಸತೋ ದಿವಿ ತೇ ಬದ್ಬಧೇ ಶವೋಽರ್ಚ-
ನ್ನನು ಸ್ವರಾಜ್ಯಂ ॥ ೧೩ ॥

॥ ಪದಪಾಠಃ ॥

ಯತ್ । ವೃತ್ರಂ । ತವ । ಚ । ಅಶನಿಂ । ವಜ್ರೇಣ । ಸಂ । ಅಯೋಧಯಃ ।
ಅಹಿಂ । ಇಂದ್ರ । ಜಿಘಾಂಸತಃ । ದಿವಿ । ತೇ । ಬದ್ಬಧೇ । ಶವಃ । ಅರ್ಚನ್ ।
ಅನು । ಸ್ವಃ । ರಾಜ್ಯಂ ॥ ೧೩ ॥

ಸಾಯಣಭಾಷ್ಯಂ ।

ಹೇ ಇಂದ್ರ ಯದ್ಯದಾ ವೃತ್ರಂ ತವ ಹನನಾರ್ಥಂ ತೇನ ಸೃಷ್ಟಾಮಶನಿಂ ಚ ಕ್ಷಂ ವಜ್ರೇಣ
ಸಮಯೋಧಯಃ ಸಮ್ಯಕ್ ಪ್ರಾಹಾರ್ಷೀಃ ತದಾನೀಮಹಿಮಾಗತ್ಯ ಹಂತಾರಂ ವೃತ್ರಂ ಜಿಘಾಂಸತೋ
ಹಂತುಮಿಚ್ಛತಸ್ತೇ ತವ ಶವೋ ಬಲಂ ದಿವಿ ಬದ್ಬಧೇ । ಬದ್ಧಮನುಸ್ಯೂತಂ ವ್ಯಾಪ್ತಮಾಸೀತ್ । ಶಿಷ್ಟಂ
ಪೂರ್ವವತ್ ॥ ಜಿಘಾಂಸತಃ । ಹಂತೇರಿಜ್ಭಾವೇರ್ಥೇ ಸನ್ಯಜ್ಝನಗಮಾಂ ಸನಿ । ಪಾ. ೬-೪-೧೬ । ಇತ್ಯು-
ಪಧಾದೀರ್ಘತ್ವಂ । ಬದ್ಬಧೇ । ಬಧ ಬಂಧನೇ । ಕರ್ಮಣಿ ಲಿಟಿ ವ್ಯತ್ಯಯೇನ ಹಲಾದಿಶೇಷಾಭಾವಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಯತ್—ಯಾವಾಗ । ವೃತ್ರಂ—ವೃತ್ರಾಸುರನನ್ನು । ತವ—ನಿನ್ನ
(ವಧೆಗಾಗಿ ಅವನಿಂದ ನಿಸೃಷ್ಟವಾದ) । ಅಶನಿಂ ಚ—ಆಯುಧವನ್ನು । ವಜ್ರೇಣ -(ನಿನ್ನ) ವಜ್ರಾಯುಧದಿಂದ
ಸಮಯೋಧಯಃ—ಪ್ರಹರಿಸಿದೆಯೋ । (ತತ್—ಆಗ) । ಅಹಿಂ—ಹನನಶೀಲನಾದ (ವೃತ್ರನನ್ನು)
ಜಿಘಾಂಸತಃ—ವಧಿಸಲು ಇಚ್ಛಿಸಿದ । ತೇ—ನಿನ್ನ । ಶವಃ—ಬಲವು । ಸ್ವರಾಜ್ಯಂ—ಸ್ವಸ್ವಾಮಿತ್ವವನ್ನು
ಅನು ಅರ್ಚನ್—ಪ್ರಕಟಿಸುತ್ತಾ । ದಿವಿ—ಆಕಾಶದಲ್ಲಿ । ಬದ್ಬಧೇ—ವ್ಯಾಪ್ತವಾಗಿತ್ತು (ಬೆಳಗುತ್ತಿತ್ತು).

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ (ವಧೆಗಾಗಿ ವೃತ್ರನಿಂದ ವಿಸೃಷ್ಟವಾದ) ಆಯುಧವನ್ನೂ, ವೃತ್ರನನ್ನೂ ವಜ್ರಾಯುಧದಿಂದ ಪ್ರಹರಿಸಿ, ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಾ, ಹನನಶೀಲನಾದ ವೃತ್ರನನ್ನು ವಧಿಸಲು ಇಚ್ಛಿಸಿದ ನಿನ್ನ ಬಲವು ಆಕಾಶವನ್ನೆಲ್ಲಾ ವ್ಯಾಪಿಸಿತ್ತು. (ಆಕಾಶದಲ್ಲಿ ಬೆಳಗುತ್ತಿತ್ತು)

English Translation

When you (Indra) encounterred with your bolt Vritra, and the thunderbolt (which he hurled), then, India, your strength determined to slay Ahi was displayed in the heavens. manifesting vour own sovereignty.

॥ ವಿಶೇಷವಿಷಯಗಳು ॥

ಬದ್ಬಧೇ—ಬದ ಬಂಧನೇ । ಬಧ ಧಾತುವು ಬಂಧನವೆಂಬ ಅರ್ಥವನ್ನು ಬೋಧಿಸುವುದು ಕರ್ಮಾರ್ಥದಲ್ಲಿ ಪ್ರಯುಕ್ತವಾಗಿರುವುದರಿಂದ **ಬದ್ಧಂ** ಕಟ್ಟಲ್ಪಟ್ಟಿತು ಎಂದು ಅರ್ಥವಾಗುವುದು **ದಿವಿ ಬದ್ಬಧೇ** ಸ್ವರ್ಗದಲ್ಲಿ ಕಟ್ಟಲ್ಪಟ್ಟಿತು ಎಂದರೆ ಸ್ವರ್ಗದಲ್ಲಿ **ಅನು ಸ್ಯೋತಂ ಬದ್ಧಂ ವ್ಯಾಪ್ತಂ** ವ್ಯಾಪಿಸಿರುವುದು ಎಂದು ಅರ್ಥವು ಆಕಾಶದಲ್ಲೆಲ್ಲಾ ವ್ಯಾಪಿಸಿ ಬೆಳಗುತ್ತಿತ್ತು ಎಂದರ್ಥವು

ಅಹಿಂ—ಅಹಿ ಶಬ್ದವು ನೂರೊಂದು ಉದಕನಾಮಗಳಲ್ಲಿ (ನಿ. ೨-೨೪) ಉಕ್ತವಾಗಿರುವಂತೆ ಮೂವತ್ತು ಮೇಘನಾಮಗಳಲ್ಲಿಯೂ (೨-೩೧) ಉಕ್ತವಾಗಿರುವುದು. ಸಾಯಣರು **ಅಗಚ್ಛ ಹಂತಾರಂ ತಾನಾಗಿ** ಎದುರಿಗೆ ನುಗ್ಗಿ ಬಂದು ಹೊಡೆಯುವವನು ಎಂದು ಅರ್ಥವನ್ನು ಹೇಳಿರುವರು ಅಹಿ ಶಬ್ದಕ್ಕೆ ಮೇಘ ಮತ್ತು ವೃತ್ರ ಎಂಬ ಅರ್ಥಗಳೆಂದು ಸ್ಕಂದಸ್ವಾಮಿಗಳು ವಿವರಿಸಿರುವರು.

ವೃತ್ರಂ ತವ ಚಾಶನಿಂ ವಜ್ರೇಣ—ಇಲ್ಲಿ ಅಶನಿಂ ಎಂದರೆ ವಜ್ರಾಯುಧವೆಂದರ್ಥವಾದರೂ ಇಲ್ಲಿ ಸಾಮಾನ್ಯವಾದ ಆಯುಧವೆಂಬ ಅರ್ಥವನ್ನು ಹೇಳಬೇಕು ಇಂದ್ರನು ತನ್ನ ವಜ್ರಾಯುಧದಿಂದ ವೃತ್ರನನ್ನೂ ಅವನ ಆಯುಧವನ್ನೂ ಚೆನ್ನಾಗಿ ಪ್ರಹರಿಸಿದನೆಂದಭಿಪ್ರಾಯವು

॥ ವ್ಯಾಕರಣಪ್ರಕ್ರಿಯಾ ॥

ಅಯೋಧಯಃ—ಯುಧ ಪ್ರಹಾರೇ ಧಾತು ಣಿಜಂತವೇಲೆ ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಇತಕ್ಷ** ಎಂಬುದರಿಂದ ಇಕಾರಲೋಪ ಶಪ್ ವಿಕರಣ. ತನ್ನಿಮಿತ್ತವಾಗಿ ಣಿಚ್ಚಿಗೆ ಗುಣ ಅಯಾದೇಶ ಣಿಚ್ ನಿಮಿತ್ತವಾಗ ಧಾತ ವಿನ ಲಘೂಪಧೆಗೆ ಗುಣ. ಅಂಗಕ್ಕೆ ಆಡಾಗಮ ಅಯೋಧಯಃ ಎಂದು ರೂಪವಾಗುತ್ತದೆ ಯಜ್ಯೋಗವಿರುವುದರಿಂದ **ಯಜ್ಯೃತ್ತಾನ್ನಿತ್ಯಂ** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದೆ ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಜಿಘಾಂಸತೇಃ—ಹನ ಹಿಂಸಾಗತ್ಯೋಃ ಧಾತು. ಇದಕ್ಕೆ ಇಚ್ಛಾರ್ಥತೋರುವಾಗ **ಧಾತೋಃ ಕರ್ಮಣಃ ಸಮಾ**—(ಪಾ. ಸೂ. ೩-೧-೭) ಎಂಬುದರಿಂದ ಸನ್. **ಸನ್ಯಙೋಃ** (ಪಾ. ಸೂ ೬-೧-೯) ಎಂಬುದರಿಂದ ಸನ್ನಂತದ ಪ್ರಥಮೈಕಾಚಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಚುತ್ವ. **ಸನ್ಯತಃ** (ಪಾ. ಸೂ. ೭-೪-೭೯) ಸೂತ್ರದಿಂದ ಇತ್ವ. **ಅಜ್ಝನಗಮಾಂ ಸನಿ** (ಪಾ. ಸೂ. ೬-೪-೧೬) ಎಂಬುದರಿಂದ ಧಾತುವಿನ ಉಪಧೆಗೆ ದೀರ್ಘ. **ಅಭ್ಯಾಸಾಚ್ಚ** (ಪಾ. ಸೂ. ೭-೪-೭೯) ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಧಾತುವಿನ ಹಕಾರಕ್ಕೆ ಕುತ್ವ. **ನಶ್ಚಾಪದಾಂತಸ್ಯ**—ಸೂತ್ರದಿಂದ ನಕಾರಕ್ಕೆ ಅನುಸ್ವಾರ **ಸನಾದ್ಯಂತಾ ಧಾತವಃ** (ಪಾ. ಸೂ. ೩-೧-೩೨) ಎಂಬುದರಿಂದ ಜಿಘಾಂಸ ಎಂಬ ಸನ್ನಂತಕ್ಕೆ ಧಾತುಸಂಜ್ಞಾ ಬರುತ್ತದೆ ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ **ಅತೋಗುಣೇ** ಸೂತ್ರದಿಂದ ಪರರೂಪ. **ಷಷ್ಠೀ ಏಕವಚನಾಂತರೂಪ. ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ದಿವಿ—ದಿವ್ ಶಬ್ದ ಸಪ್ತಮಿ ಏಕವಚನಾಂತರೂಪ. **ಊಡಿದಂಪದಾದಿ**—(ಪಾ. ಸೂ. ೬-೧-೧೬೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಬಪ್ಸಭೇ—ಬಧ ಬಂಧನೇ ಧಾತು. ಕರ್ಮಣಿಯಲ್ಲಿ ಲಿಟ್ ಪ್ರಥಮಪುರುಷ ಏಕವಚನದಲ್ಲಿ **ಲಿಟಸ್ತ-ಝುಯೋರೇಶಿರೇಚ್** (ಪಾ ಸೂ. ೩-೪-೮೧) ಎಂಬುದರಿಂದ ಏಶಾದೇಶ. ಧಾತುವಿಗೆ ದ್ವಿತ್ವ. **ವ್ಯತ್ಯಯೋ ಬಹುಲಂ** ಎಂಬುದರಿಂದ **ಹಲಾದಿಃಶೇಷಃ** ಎಂಬ ಸೂತ್ರವು ಪ್ರವರ್ತಿಸುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೩ ॥

॥ ಸಂಹಿತಾಪಾಠಃ ॥

ಅಭಿಷ್ಟನೇ ತೇ ಅದ್ರಿವೋ ಯತ್ಸ್ಥಾ ಜಗಚ್ಚ ರೇಜತೇ ।
ತ್ವಷ್ಟಾ ಚಿತ್ರವ ಮನ್ಯವ ಇಂದ್ರ ವೇವಿಜ್ಯತೇ ಭಿಯಾರ್ಚನ್ನನು
ಸ್ವರಾಜ್ಯಂ ॥ ೧೪ ॥

॥ ಪದಪಾಠಃ ॥

ಅಭಿ । ಸ್ತನೇ । ತೇ । ಅದ್ರಿವಃ । ಯತ್ । ಸ್ಥಾಃ । ಜಗತ್ । ಚ । ರೇಜತೇ ।
ತ್ವಷ್ಟಾ । ಚಿತ್ । ತವ । ಮನ್ಯವೇ । ಇಂದ್ರ । ವೇವಿಜ್ಯತೇ । ಭಿಯಾ । ಅರ್ಚನ್ ।
ಅನು । ಸ್ವ ರಾಜ್ಯಂ ॥ ೧೪ ॥

ಸಾಯಣಭಾಷ್ಯಂ ।

ಹೇ ಅದ್ರಿವೋ ವಜ್ರವನ್ನಿಂದ್ರ ತೇ ತವಾಭಿಷ್ಟನೇ ಸಿಂಹನಾದೇ ಸತಿ ಸ್ಥಾಃ ಸ್ಥಾವರಂ ಜಗಜ್ಜಂಗಮಂ ಚ ಯದಸ್ತಿ ತದುಭಯಂ ರೇಜತೇ । ಕಂಪತೇ । ತ್ವಷ್ಟಾ ಚಿತ್ ವಜ್ರನಿರ್ಮಾತಾ ತ್ವಷ್ಟಾ ಚ ತವ ಮನ್ಯವೇ ತ್ವದೀಯಾಯ ಕೋಪಾಯ ಭಿಯಾ ಭೀತ್ಯಾ ವೇವಿಜ್ಯತೇ । ಭೃಶಂ ಕಂಪತೇ । ಅನ್ಯತ್ಸಮಾನಂ ॥ ಸ್ಥಾಃ । ತಿಷ್ಠತೇಃ ಕ್ವಿಪ್ಪೇತಿ ಕ್ವಿಪ್ । ವೇವಿಜ್ಯತೇ । ಓವಿಜೀ ಭಯಚಲನಯೋಃ । ಅಸ್ಮಾತ್ಕ್ರಿಯಾಸಮಭಿಹಾರೇ ಯಜ್ । ಸನ್ಯಜೋರಿತಿ ದ್ವಿರ್ಭಾವಃ । ಅದುಸದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಯಜ ಏವ ಸ್ವರಃ ಶಿಷ್ಯತೇ । ಇಂದ್ರೇತ್ಯಸ್ಯ ಪಾದಾದೌ ವರ್ತಮಾನಸ್ಯಾಮಂತ್ರಿತಂ ಪೂರ್ವಮವಿದ್ಯಮಾನವದಿತ್ಯವಿದ್ಯಮಾನವತ್ತ್ವೇ ಸತ್ಯಸ್ಯ ಪಾದಾದಿತ್ವಾದಸಾದಾದಾವಿತಿ ಪರ್ಯುದಾಸಾನ್ನಿಘಾತಾಭಾವಃ ॥

। ಪ್ರತಿಪದಾರ್ಥ

ಅದ್ರಿವಃ—ವಜ್ರಾಯುಧಧಾರಿಯಾದ । **ಇಂದ್ರ**—ಎಲೈ ಇಂದ್ರನೇ । **ತೇ**- ನಿನ್ನ । **ಅಭಿಷ್ಟನೇ** ಗರ್ಜನ ಶಬ್ದಕ್ಕೆ । **ಸ್ಥಾಃ**—ಸ್ಥಾವರವಾದ (ಮತ್ತು) । **ಜಗತ್ ಚ**—ಜಂಗಮವಾದ । **ಯತ್**—ಯಾವುವು (ಇವೆಯೋ ಅವೆಲ್ಲವೂ) । **ರೇಜತೇ**—ನಡುಗುತ್ತವೆ । **ಸ್ವರಾಜ್ಯಂ**- ಸ್ವಸ್ವಾಮಿತ್ವವನ್ನು । **ಅನು ಅರ್ಚನ್**—ಪ್ರಕಟಿಸುತ್ತಾ । **ತ್ವಷ್ಟಾ ಚಿತ್**—(ವಜ್ರಾಯುಧ ನಿರ್ಮಾತೃವಾದ) ತ್ವಷ್ಟೃವೂ ಕೂಡ । **ತವ**—ನಿನ್ನ । **ಮನ್ಯವೇ**—ಕೋಪಕ್ಕೆ । **ಭಿಯಾ**—ಭಯದಿಂದ । **ವೇವಿಜ್ಯತೇ**—ಅತಿಶಯವಾಗಿ ಕಂಪಿಸುತ್ತಾನೆ

। ಭಾವಾರ್ಥ ।

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನೀನು ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಾ, ಸಿಂಹನಾದ ಮಾಡಲು, ಸ್ಥಾವರಜಂಗಮಾತ್ಮಕವಾದ ಪ್ರಪಂಚವೆಲ್ಲವೂ ನಡುಗಿತು ವಜ್ರಾಯುಧವನ್ನು ನಿರ್ಮಿಸಿದ ತ್ವಷ್ಟೃವೂ ಕೂಡ ನಿನ್ನ ಕೋಪಕ್ಕೆ ಹೆದರಿ ಹೆಚ್ಚಾಗಿ ನಡುಗುತ್ತಾನೆ

English Translation.

At your shout, wielder of the thunderbolt, all things, moveable or immoveable, trembled; even Twashtri shook with fear, Indra, at your wrath, manifesting your own sovereignty.

॥ ವಿಶೇಷವಿಷಯಗಳು ॥

ಅದ್ರಿವಃ—ಅದ್ರಿವಿಕಾರತ್ವಾತ್ । ಅದ್ರಿಃ ಅದ್ರಿಯ ವಿಕಾರವಾಗಿರುವುದರಿಂದ ವಜ್ರಾಯುಧವೂ ಅದ್ರಿ ಎಂಬ ಹೆಸರನ್ನು ಹೊಂದಿರುವುದು. ಅದ್ರಿಯನ್ನು ಹೊಂದಿರುವವನು ಅದ್ರಿವನ್ ವಜ್ರಾಯುಧವುಳ್ಳವನು ಇಂದ್ರನು ಎಂದು ಅರ್ಥವು.

ಸ್ಥಾಃ—ಷ್ಠಾ ಗತಿನಿವೃತ್ತೌ ಎಂಬ ಧಾತುವಿನಿಂದ **ಸ್ಥಾಃ** ಎಂಬ ರೂಪವಾಗುತ್ತದೆ. ಸ್ಥಿರವಾಗಿರುವ ಚಲಿಸದಿರುವ ವಸ್ತುಗಳೆಂದು ಅರ್ಥವು

ರೇಜತೇ—ಕಂಪತೇ ಭಯದಿಂದ ನಡುಗುತ್ತಾನೆ **ಭ್ಯಸತೇ, ರೇಜತೇ ಇತಿ ಭಯವೇಪನಯೋಃ ಧಾತುಃ ಭ್ಯಸತೇ ಇತಿ ರೇಜತೇ ಇತಿ ನೈರುಕ್ತೋ ಧಾತುಃ ಉಭಾವಪ್ಯುಭಯೋರರ್ಥಯೋಃ**—ಭ್ಯಸತೇ, ರೇಜತೇ ಎಂಬ ಎರಡು ಧಾತುಗಳೂ ಭಯ ಮತ್ತು ನಡಗುವುದು ಎಂಬ ಎರಡು ವಿಧವಾದ ಅರ್ಥಗಳಲ್ಲಿಯೂ ಉಪಯೋಗಿಸಲ್ಪಡುವವು ಎಂದು ನಿರುಕ್ತಕಾರರು ಹೇಳುವರು.

॥ ವ್ಯಾಕರಣಪ್ರಕ್ರಿಯಾ ।

ಅದ್ರಿವಃ—ಇದೇ ಸೂಕ್ತದ ವಿವರಣೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ

ಸ್ಥಾಃ—ಷ್ಠಾ ಗತಿನಿವೃತ್ತೌ ಧಾತು. **ಧಾತ್ವಾದೇಃ ಷಃ ಸಃ** ಎಂಬುದರಿಂದ ಆದಿಗೆ ಸತ್ವ. **ಕ್ವಿಪ್ಚ** (ಪಾ. ಸೂ. ೩-೨-೭೬) ಎಂಬುದರಿಂದ ಇದಕ್ಕೆ ಕ್ವಿಪ್. **ಕೃತ್ತದ್ಧಿತಸಮಾಸಾಶ್ಚ** ಎಂಬುದರಿಂದ ಪ್ರಾತಿಪದಿಕಸಂಜ್ಞಾ ಪ್ರಥಮಾ ಏಕವಚನಾಂತರೂಪ ಧಾತುಸ್ವರದಿಂದ ಉದಾತ್ತವಾಗುತ್ತದೆ

ರೇಜತೇ—ರೇಜೃ ಕಂಪನೇ ಧಾತು. ಲಟ್ ಪ್ರಥಮಪುರುಷ ಏಕವಚನರೂಪ ತಿಙಂತನಿಘಾತಸ್ವರ ಬರುತ್ತದೆ.

ವೇವಿಜ್ಯತೇ—ಓವಿಜೀ ಭಯಚಲನಯೋಃ ಧಾತು. ಇದಕ್ಕೆ ಭೃಶಾರ್ಥತೋರುವಾಗ **ಧಾತೋರೇಕಾಚ**—(ಪಾ. ಸೂ. ೩-೧-೨೨) ಎಂಬುದರಿಂದ ಯಙ್. **ಸನ್ಯಙೋಃ** (ಪಾ. ಸೂ ೬-೧-೯) ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಗುಣೋಯಙ್ಲುಕೋಃ** (ಪಾ ಸೂ ೭-೪-೮೨) ಎಂಬುದರಿಂದ ಅಭ್ಯಾಸಕ್ಕೆ ಗುಣ. **ಸನಾದ್ಯಂತಾ ಧಾತವಃ** ಸೂತ್ರದಿಂದ ವೇವಿಜ್ಯ ಎಂಬ ಯಙಂತಕ್ಕೆ ಧಾತುಸಂಜ್ಞಾ ಬರುತ್ತದೆ ಇದಕ್ಕೆ ವರ್ತಮಾನಾರ್ಥದಲ್ಲಿ ಲಟ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ **ಟಿತಆತ್ಮನೇಪದಾನಾಂ—**

ಸೂತ್ರದಿಂದ ಟಗೆ ಏತ್ವ. ವೇವಿಜ್ಯತೇ ಎಂದು ರೂಪವಾಗುತ್ತದೆ ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ತೇ) **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತವಾಗುವುದರಿಂದ ಯಜಿನ ಸ್ವರವೇ ಉಳಿಯುತ್ತದೆ ಇದರ ಪೂರ್ವದಲ್ಲಿ ಇಂದ್ರ ಎಂಬ ಪದವು ಪಾದಾದಿಯಲ್ಲಿದೆ. ಇದಕ್ಕೆ **ಆಮಂತ್ರಿತ** ಸಂಜ್ಞೆ ಇರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ ಸೂ. ೮-೧-೭೨) ಎಂಬುದರಿಂದ ಅದಕ್ಕೆ ಅವಿದ್ಯಮಾನವದ್ಭಾವ (ಇಲ್ಲದಿರುವಿಕೆ) ಇರುವುದರಿಂದ ವೇವಿಜ್ಯತೇ ಎಂಬುದೇ ಪಾದಾದಿಯಲ್ಲಿ ಬಂದಂತಾದುದರಿಂದ **ಅಸಾದಾದೌ** ಎಂದು ಪರ್ಯುದಾಸಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ಭಿಯೋಂ—ಇ'ಭೀ ಭಯೇ ಧಾತು ಇದಕ್ಕೆ ಕ್ವಿಪ್ ಪ್ರತ್ಯಯ ಕೃತೀಯಾ ಟಾ ಪರವಾದಾಗ **ಆಚಿಶ್ನು-ಧಾತುಭ್ರುವಾಂ**—ಸೂತ್ರದಿಂದ ಇಯಙಾದೇಶ. **ಸಾನೇಕಾಚಸ್ತೃತೀಯಾದಿಃ**—(ಪಾ. ಸೂ. ೬-೧-೧೬೮) ಎಂಬುದರಿಂದ ಏಕಾಚ್ಚಾದುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ ॥ ೧೪ ॥

॥ ಸಂಹಿತಾಪಾಠಃ ।

ನ॒ಹಿ ನು ಯಾದ॒ಧೀ॒ಮಸೀ॒ಂದ್ರಂ॑ ಕೋ ವೀ॒ರ್ಯಾ॑ ಪ॒ರಃ ।
ತಸ್ಮಿ॒ನ್ನೃ॒ಮ್ಣಮು॒ತ ಕ್ರತುಂ॑ ದೇ॒ವಾ ಓ॒ಜಾಂ॑ಸಿ ಸಂ ದ॑ದ್ಧುರ್ಬ॒ರ್ಹ-
ನ್ನ॒ನು ಸ್ವ॒ರಾಜ್ಯಂ॑ ॥ ೧೫ ॥

॥ ಪದಪಾಠಃ ।

ನ॒ಹಿ । ನು । ಯಾತ್ । ಅ॒ಧಿ॒ಽಇ॒ಮಸಿ । ಇಂ॒ದ್ರಂ॑ । ಕಃ । ವೀ॒ರ್ಯಾ॑ । ಪ॒ರಃ ।
ತಸ್ಮಿ॑ನ್ । ನೃ॒ಮ್ಣಂ । ಉ॒ತ । ಕ್ರತುಂ॑ । ದೇ॒ವಾಃ । ಓ॒ಜಾಂ॑ಸಿ । ಸಂ । ದ॒ದ್ಧುಃ ।
ಅ॒ರ್ಬ॒ನ್ । ಅ॒ನು । ಸ್ವ॒ಽರಾಜ್ಯಂ॑ ॥ ೧೫ ॥

॥ ಸಾಯಣಭಾಷ್ಯಂ ॥

ಯಾತ್ ಯಾಂತಂ ಸರ್ವತ್ರ ವ್ಯಾಪ್ಯ ವರ್ತಮಾನಮಿಂದ್ರಂ ನಹಿ ಸ್ವಧೀಮಸಿ । ವಯಂ ನ ಹ್ಯವ-ಗಚ್ಛಾಮಃ । ಯತೋ ವಯಮಲ್ಪಾಃ । ಪರ ಇತ್ಯೇತತ್ಸಕಾರಾಂತಮವ್ಯಯಂ ವೈದೂರ್ಯಮಾಚಷ್ಟೇ । ಪರೋ ದಿವಾ ಪರ ಏನಾ । ಋಗ್ವೇ. ೧೦-೮೨-೫ । ಇತಿ ಯಥಾ । ಪರಃ ಪರಸ್ತಾದತಿದೂರೇ ಮನುಷ್ಯೈ-ರನವಗಾಹ್ಯೇ ಸ್ವಾನೇ ವೀರ್ಯಾ ವೀರ್ಯೇಣ ಸಾಮರ್ಥ್ಯೇನ ವರ್ತಮಾನಮಿಂದ್ರಂ ಕೋ ಮನುಷ್ಯೋ ಜಾನೀಯಾತ್ । ನ ಕೋಽಪೀತ್ಯರ್ಥಃ । ಕಸ್ಮಾದಿತಿ ಚೇತ್ ಆಹ್ರಾಹ । ತಸ್ಮಿನ್ನಿತಿ । ಯಸ್ಮಾತ್ತಸ್ಮಿನ್ನಿಂದ್ರೇ ದೇವಾ ನೃಮ್ಣಂ ಧನಂ ಉತಾಪಿ ಚ ಕೃತುಂ ವೀರ್ಯಕರ್ಮೌಜಾಂಸಿ ಬಲಾನಿ ಚ ಸಂ ದಧುಃ ಸ್ಥಾಪಯಾಂ ಚಕ್ರುಃ । ತಸ್ಮಾದಿತ್ಯರ್ಥಃ ॥ ಯಾತ್ । ಯಾ ಪ್ರಾಪಣೇ । ಅಸ್ಮಾಲ್ಲಟಃ ಶತೃ । ಸುಪಾಂ ಸುಲುಗಿತಿ ದ್ವಿತೀಯಾಯಾ ಲುಕ್ । ಅಧೀಮಸಿ । ಇಙ್ ಗತೌ । ಇದಂತೋ ಮಸಿಃ । ವೀರ್ಯಾ । ಸುಪಾಂ ಸುಲುಗಿತಿ ತೃತೀಯಾಯಾ ಆಕಾರಃ ॥

॥ ಪ್ರತಿಪದಾರ್ಥ ॥

ಯಾತ್ – ಸರ್ವತ್ರವ್ಯಾಪ್ತನಾದ (ಇಂದ್ರನನ್ನು) । **ನಹಿ ನು ಅಧೀಮಸಿ**—(ನಾವು ಅಲ್ಪಜ್ಞರಾದ್ದರಿಂದ) ತಿಳಿಯಲು ಸಮರ್ಥರಲ್ಲ । **ಸ್ವರಾಜ್ಯಂ**—ಸ್ವಸ್ವಾಮಿತ್ವವನ್ನು । **ಅನು ಅರ್ಚನ್**—ಪ್ರಕಟಿಸುತ್ತಾ ಇರುವ । **ತಸ್ಮಿನ್**—ಅವನಲ್ಲಿ (ಇಂದ್ರನಲ್ಲಿ) । **ದೇವಾಃ**—(ಸಮಸ್ತ) ದೇವತೆಗಳೂ । **ನೃಮ್ಣಂ**—ಧನವನ್ನೂ । **ಉತ**—ಮತ್ತು । **ಕೃತುಂ**—ವೀರ್ಯಕರ್ಮವನ್ನೂ । **ಓಜಾಂಸಿ**—ಬಲವನ್ನೂ । **ಸಂ ದಧುಃ**—ಸ್ಥಾಪಿಸಿದ್ದಾರೆ । **(ತತ್**—ಆದುದರಿಂದ) । **ಪರಃ**—(ಅನವಗಾಹ್ಯವಾದ) ಅತಿ ದೂರದಲ್ಲಿರುವ । **ವೀರ್ಯಾ**—ಸಾಮರ್ಥ್ಯದಿಂದ ಯುಕ್ತನಾದ । **ಇಂದ್ರಂ**—ಇಂದ್ರನನ್ನು । **ಕಃ**—ಯಾವನು (ಮನುಷ್ಯನು) ತಾನೇ । **(ಜಾನೀಯಾತ್**—ತಿಳಿದಾನು?)

॥ ಭಾವಾರ್ಥ ॥

(ಸರ್ವತ್ರ) ವ್ಯಾಪ್ತನಾದ ಇಂದ್ರನನ್ನು ನಾವು ತಿಳಿಯಲಾರೆವು ಯಾವನಲ್ಲಿ (ಎಲ್ಲಾ) ದೇವತೆಗಳೂ (ತಮ್ಮ) ಧನ, ಕರ್ಮ ಮತ್ತು ಬಲಗಳನ್ನು ಸ್ಥಾಪಿಸಿದ್ದಾರೋ ಅಂತಹ, ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಾ, (ಮನುಷ್ಯರಿಗೆ ಅನವಗಾಹ್ಯವಾದ) ಅತಿ ದೂರ ಪ್ರದೇಶದಲ್ಲಿ ಸ್ವಸಾಮರ್ಥ್ಯದಿಂದ (ಇರುವ) ಇಂದ್ರನನ್ನು ಯಾವ ಮನುಷ್ಯನು (ತಾನೇ ತಿಳಿದಾನು?)

English Translation

We know not of a certainty the all-pervading Indra: who (does know him, abiding) afar off in his strength? for in him have the Gods concentrated riches, and worship, and power, manifesting his own severeignty.

॥ ವಿಶೇಷವಿಷಯಗಳು ॥

ಅತ್ರೇದಮುಕ್ತಂ ಭವತಿ—ಯತ್ ಕಿಮಪಿ ವಯಮಿಂದ್ರವಿಷಯೇ ಜಾನೀಮಸ್ತತ್ಸ್ಯಾತ್ಯಲ್ಪತ್ವಾತ್ ವಯಮಿಂದ್ರಂ ನೈವ ಜಾನೀಮ ಇತಿ ವಕ್ತವ್ಯಂ। ಕೋ ವಾ ಇಂದ್ರಂ ಜಾನೀಯಾತ್। ತಸ್ಯ ಹಿ ವೀರ್ಯಕರ್ಮಾಣಿ ಅನುತ್ತಮಾನಿ, ತೇಭ್ಯಃ ಶ್ರೇಷ್ಠಾನಿ ಕೋಽಪಿ ನ ಜಾನೀತೇ। ತಸ್ಮಿಂಶ್ಚ ಸರ್ವೇ ದೇವಾ ಶೌರ್ಯಂ ಪ್ರಜ್ಞಾಂ ಬಲಾನಿ ಚ ಸಮುಸ್ತಾನಿ ಸ್ಥಾಪಯಾಮಾಸುರಿತಿ ಕೃತ್ವಾ ಸ ಮಹಾಂತಿ ವೀರ್ಯಕರ್ಮಾಣಿ ಕರೋತೀತಿ ತೇಷಾಂ ಚ ಮಹೀಯಸ್ತ್ವಾತ್ ಅಲ್ಪಮತಯೋ ವಯಂ ತಂ ನ ಜಾನೀಮ ಇತಿ ಸಂಬಂಧಃ ॥

ಎಂದರೆ ಇಂದ್ರನ ವಿಷಯದಲ್ಲಿ ನಮಗೆ ತಿಳಿದಿರುವುದು ಅತ್ಯಲ್ಪವು. ಇಂದ್ರನ ವಿಷಯವನ್ನು ಯಾವನು ತಾನೇ ಚೆನ್ನಾಗಿ ತಿಳಿದಿರುವನು? ಯಾರೂ ಇಲ್ಲ ಅವನ ಸಾಹಸಕಾರ್ಯಗಳು ಅತ್ಯುತ್ತಮವಾದವು. ಅವುಗಳಿಗಿಂತ ಹೆಚ್ಚಿನ ಕರ್ಮಗಳಿರುವುದನ್ನು ಯಾರೂ ಕಂಡಿಲ್ಲ ಆ ಇಂದ್ರನಲ್ಲಿ ಸಮಸ್ತ ದೇವತೆಗಳೂ ಶೌರ್ಯ, ಪ್ರಜ್ಞೆ, ಬಲ ಮೊದಲಾದ ಶಕ್ತಿಸಾಮರ್ಥ್ಯಗಳನ್ನು ಸ್ಥಾಪಿಸಿರುವುದರಿಂದ ಆ ಇಂದ್ರನ ಶೌರ್ಯ ಪರಾಕ್ರಮಸಹಿತವಾದ ಕಾರ್ಯಗಳು ಅತ್ಯಂತ ಮಹತ್ತರವಾದವುಗಳಾದ್ದರಿಂದ ಅಲ್ಪಮತಿಗಳಾದ ನಮ್ಮಂತಹ ಮಾನವರು ಅದನ್ನು ತಿಳಿದುಕೊಳ್ಳಲು ಶಕ್ತರಲ್ಲ ಎಂದು ಮುಖ್ಯಾಭಿಪ್ರಾಯವು

ನ ಯೋತ್ ಅಧೀಮಸಿ—ಯಜ್ ಧಾತುವಿನಿಂದ ನಿಷ್ಪನ್ನವಾದ **ಯೋತ್** ಎಂಬ ಶಬ್ದವು ವಧನೆಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು—

ಅಹೇರ್ಯಾತಾರಂ ಕಮಪಶ್ಯ ಇಂದ್ರ ಹೃದಿ ಯತ್ತೇ ಜಘ್ನುಷೋ ಭೀರಗಚ್ಛತ್।

(ಋ. ಸಂ ೧-೩೨-೪)

ಎಂಬ ಋಕ್ಕಿನಲ್ಲಿರುವ **ಯಾತಾರಂ** ಎಂಬ ಶಬ್ದವೆ. ಉದಾಹರಣೆಯು— ಎಲ್ಲಾ ಶತ್ರುಗಳನ್ನೂ ಇಂದ್ರನು ಎದುರಿಸಿ ಕೊಲ್ಲುವನು ಇಂದ್ರನನ್ನು ಎದುರಿಸಿ ಯುದ್ಧಮಾಡಿ ಸೋಲಿಸುವವನು ಯಾರೂ ಇರುವುದಿಲ್ಲ. ಎಂದು ಸ್ವಂದ ಸ್ವಾಮಿಗಳು ಅರ್ಥವನ್ನು ವಿವರಿಸಿರುವರು. **ಸರ್ವತ್ರ ವ್ಯಾಪ್ಯ ವರ್ತಮಾನಮಿಂದ್ರಂ** ಎಲ್ಲಾ (ಕಡೆಯಲ್ಲಿಯೂ) ಪ್ರದೇಶಗಳಲ್ಲಿಯೂ ವ್ಯಾಪಿಸಿಕೊಂಡು ಇರುವ ಇಂದ್ರನನ್ನು ಅಲ್ಪರಾದ ನಾವು ತಿಳಿಯಲಾರೆವು ಎಂದು ಸಾಯಣರು ಅರ್ಥಮಾಡಿರುವರು

ಪರಃ ವೀರ್ಯಾ—ಇಂದ್ರನು ತನ್ನ ಸಾಮರ್ಥ್ಯದಿಂದ ಮನುಷ್ಯರು ತಿಳಿಯಲು ಅಶಕ್ಯವಾಗಿರುವ ಬಹಳ ದೂರವಾದ ಪ್ರದೇಶದಲ್ಲಿ ಇರುವನು ಎಂದು ಅರ್ಥವು. ಪರಶಬ್ದವು ಸಕಾರಾಂತವಾದ ಅವ್ಯಯವು ಬಹಳದೂರ ಎಂಬ ಅರ್ಥವನ್ನು ಬೋಧಿಸುವುದು.

ಪರೋ ದಿವಾ ಪರ ಏನಾ ಪೃಥಿವ್ಯಾ ಪರೋ ದೇವೇಭಿರಸುರೈರ್ಯದಸ್ತಿ।

(ಋ ಸಂ ೧೦-೮೬-೫)

ಎಂಬ ಋಕ್ಕಿನಲ್ಲಿ **ಪರಃ** ಎಂಬ ಶಬ್ದವು ಮೇಲೆ ಹೇಳಿದ ಅರ್ಥದಲ್ಲಿ ಪ್ರಯುಕ್ತವಾಗಿರುತ್ತದೆ

ನೃಮ್ಣಂ—ಈ ಶಬ್ದವು ಇಸ್ಪತ್ತೈಂಟು ಬಲನಾಮಗಳಲ್ಲಿ (ನಿ ೩–೯) ಉಕ್ತವಾಗಿರುತ್ತದೆ. ಮತ್ತು ಇಪ್ಪತ್ತೈಂಟು ಧನನಾಮಗಳಲ್ಲಿಯೂ (ನಿ. ೩–೯) ಪಠಿತವಾಗಿರುತ್ತದೆ. ದೇವತೆಗಳು ಧನವನ್ನೂ ಬಲವನ್ನೂ ಇಂದ್ರನಲ್ಲಿ ಅತಿಶಯವಾಗಿರುವಂತೆ ಸ್ಥಾಪಿಸಿರುವರು ಎಂದು ಅರ್ಥವು. ಇಂದ್ರನು ತನ್ನ ಸ್ವರಾಜ್ಯವನ್ನು ಅತಿಶಯವಾದ ಗೌರವದಿಂದ ರಕ್ಷಿಸುವುದಕ್ಕಾಗಿ ದೇವತೆಗಳು ಅವನಿಗೆ ಧನ, ಬುದ್ಧಿ ಶಕ್ತಿ, ಮರುದ್ದೇವತೆಗಳೆಂಬ ಸೇನಾಬಲ ಇವುಗಳನ್ನು ಉಂಟು ಮಾಡಿರುವರೆಂದು ಸ್ಕಂದಸ್ವಾಮಿಗಳು ವಿವರಿಸಿರುವರು.

। ವ್ಯಾಕರಣಪ್ರಕ್ರಿಯಾ ।

ಯಾತ್—ಯಾ ಪ್ರಾಪಣೇ ಧಾತು. ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ. **ಆದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪ್ಪಿಗೆ ಲುಕ್. ಯಾತ್ ಎಂದು ರೂಪವಾಗುತ್ತದೆ. ದ್ವಿತೀಯಾ ಏಕವಚನಪರವಾದಾಗ **ಸುಪಾಂ ಸುಲುಕ್**—(ಪಾ. ಸೂ ೭–೧–೩೯) ಎಂಬುದರಿಂದ ಅದಕ್ಕೆ ಲುಕ್. ಧಾತುಸ್ವರ ಉಳಿಯುತ್ತದೆ.

ಅಧೀಮಸಿ—ಅಧಿ ಉಪಸರ್ಗ. ಇಙ್ ಗತೌ ಧಾತು ಲಟ್ ಉತ್ತಮಪುರುಷ ಬಹುವನದಲ್ಲಿ ಮಸ್ ಪ್ರತ್ಯಯ. **ಆದಿಪ್ರಭೃತಿಭ್ಯಃ ಶಪಃ** ಸೂತ್ರದಿಂದ ಶಪಿಗೆ ಲುಕ್. **ಇದಂತೋಮಸಿಃ** (ಪಾ. ಸೂ. ೭–೧–೪೬) ಎಂಬುದರಿಂದ ಮಸ್ಸಿಗೆ ಇಕಾಗಮ. **ಹಿಜಿ** (ಪಾ. ಸೂ. ೮–೧–೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಕಾರೋತ್ತರಾಕಾರ ಉದಾತ್ತವಾಗುತ್ತದೆ. **ತಿಙಶ್ಚೋದಾತ್ತವತಿ** (ಪಾ. ಸೂ. ೮–೧–೭೧) ಎಂಬುದರಿಂದ ಗತಿಗೆ (ಅಧಿ) ಅನುದಾತ್ತಸ್ವರ ಬರುತ್ತದೆ

ವೀರ್ಯಾ—ವೀರ್ಯ ಶಬ್ದಕ್ಕೆ ತೃತೀಯಾ ಏಕವಚನ ಪರವಾದಾಗ **ಸುಪಾಂಸುಲುಕ್**—(ಪಾ. ಸೂ. ೭–೧–೩೯) ಎಂಬುದರಿಂದ ಅದಕ್ಕೆ ಆಕಾರಾದೇಶ.

ದೆಧುಃ—ಡುಧಾಞ್ ಧಾರಣಪೋಷಣಯೋಃ ಧಾತು. ಲಿಟ್ ಪ್ರಥಮಪುರುಷ ಬಹುವಚನರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೧೫ ॥

॥ संहितापाठः ॥

यामथर्वा मनुष्पिता दध्यङ् धियमत्नत ।
तस्मिन्ब्रह्माणि पूर्वथेन्द्र उक्था समग्मतार्चन्ननु
स्वराज्यं ॥ ७६ ॥

॥ पदपाठः ॥

यां । अथर्वा । मनुः । पिता । दध्यङ् । धियं । अत्नत ।
तस्मिन् । ब्रह्माणि । पूर्वऽथा । इन्द्रे । उक्था । सं । अग्मत ।
अर्चन् । अनु । स्वऽराज्यं ॥ ७६ ॥

॥ सायणभाष्यं ॥

अथर्वैतत्संज्ञक ऋषिः पिता सर्वासां प्रजानां पितृभूतो मनुश्च दध्यङ् अथर्वणः पुत्रो ऽपीतत्संज्ञक ऋषिश्च यां धियमत्नत यत्कर्मातनुत अकुर्वन् तस्मिन्कर्मणि यानि ब्रह्माणि हविर्लक्षणान्यन्नान्युक्था शस्त्ररूपाणि स्तोत्राणि च यानि सन्ति तानि सर्वाणि तस्मिन्निन्द्रे समग्मत । समगच्छन्त । तत्र दृष्टान्तः । पूर्वथा पूर्वेषामन्येषां वसिष्ठादीनां यज्ञेषु यथा सवीर्यशस्तोत्राणीन्द्रेण संगच्छन्ते तद्वत् । य इन्द्रः स्वराज्यं स्वस्य राज्यत्वमनुसृत्यार्चन् अनुपूजयन् । वृत्रवधादिरूपेण कर्मणा स्वकीयमधिपतित्वं प्रकटयन्नित्यर्थः ॥ अत्नत । तनु विस्तारे । बहुलं छन्दसीति विकरणस्य लुक् । तनिपतोश्छन्दसीत्युपधालोपः । पूर्वथा । पूर्व पूर्वविश्वेमात्थाल् छन्दसि । पा. ५-३-११५ । इतीवार्थे पूर्वशब्दात्थाल्प्रत्ययः । लित्स्वरेण प्रत्ययात्पूर्वस्योदात्तत्वं । उक्था । शेश्छन्दसि बहुलमिति शेर्लोपः । समग्मत । समो गम्यृच्छिभ्यामित्यात्मनेपदं । लुङ् मन्त्रे घसेति च्लेर्लुक् । गमहनेत्यादिनोपधायाः लोपः ॥

॥ ಪ್ರತಿಪದಾರ್ಥ ॥

ಅಥರ್ವಾ—ಅಥರ್ವಋಷಿಯೂ। **ಪಿತಾ**—(ಎಲ್ಲಾ ಪ್ರಜೆಗಳಿಗೂ) ಪಿತೃಭೂತನಾದ। **ಮನುಃ**—ಮನುವೂ। **ದಧ್ಯಙ್**—ದಧ್ಯಂಚನೆಂಬ ಋಷಿಯೂ। **ಯಾಂ ಧಿಯಂ**—ಯಾವ ಕರ್ಮವನ್ನು। **ಅತ್ನತ**—ಮಾಡಿದರೋ। **ತಸ್ಮಿನ್**—ಆ ಕರ್ಮದಲ್ಲಿ। **ಬ್ರಹ್ಮಾಣಿ**—ಹವಿರ್ಲಕ್ಷಣವಾದ ಅನ್ನಗಳೂ। **ಉಕ್ಥಾನಿ**—ಶಸ್ತ್ರರೂಪವಾದ ಸ್ತುತಿವಾಕ್ಯಗಳೂ। **ಸ್ವರಾಜ್ಯಂ**—ಸ್ವಸ್ವಾಮಿತ್ವವನ್ನು। **ಅನು ಅರ್ಚನ್**—(ವೃತ್ರವಧಾದಿ ರೂಪದಿಂದ) ಪ್ರಕಟಿಸುವ। **ಇಂದ್ರೇ**—ಇಂದ್ರನಲ್ಲಿಯೇ। **ಪೂರ್ವಥಾ**—ಹಿಂದೆ (ವಸಿಷ್ಠಾದಿಗಳ ಯಜ್ಞಗಳಲ್ಲಿ ಹೇಗೋ ಹಾಗೆ)। **ಸಮಗ್ಮತ**—ಸೇರಿರುವವು.

॥ ಭಾವಾರ್ಥ ॥

(ವೃತ್ರವಧಾದಿಗಳಿಂದ) ಸ್ವಸ್ವಾಮಿತ್ವವನ್ನು ಪ್ರಕಟಿಸುತ್ತಿರುವ ಇಂದ್ರನಿಗೆ, ಅಥರ್ವನೆಂಬ ಋಷಿಯೂ (ಮಾನವ ವರ್ಗಕ್ಕೇ) ಪಿತೃವಾದ ಮನುವೂ ಮತ್ತು ದಧೀಚಿಋಷಿಯೂ ಇವರುಗಳು (ಅರ್ಪಿಸಿದ) ಹವಿಸ್ಸುಗಳು, ಶಸ್ತ್ರರೂಪವಾದ ಸ್ತುತಿವಾಕ್ಯಗಳೂ, ಹಿಂದೆ (ವಸಿಷ್ಠಾದಿಗಳು ಮಾಡಿದ ಯಜ್ಞದಲ್ಲಿ ಇಂದ್ರನಿಗೇ ಸೇರಿದಂತೆ) ಸೇರಿದವು.

English Translation

In like manner as of old, so in whatever act of worship Atharvan, or father Manu, or Dadhyanch engaged, their oblations and their hymns were all congregated in that Indra, manifesting his own sovereignty

॥ ವಿಶೇಷವಿಷಯಗಳು ॥

ಮನುಃ—**ಅಶ್ವಿನೌ, ಉಷಾಃ** ಮೊದಲಾದ ಮಧ್ಯಸ್ಥಾನ ದೇವತಾ ಪದಗಳಲ್ಲಿ **ಮನುಃ, ದಧ್ಯಙ್, ಅಥರ್ವಾ** ಎಂಬ ಪದಗಳು (ನಿ ೧೨-೩೪) ಪಠಿತವಾಗಿರುತ್ತವೆ. **ಅಥರ್ವಾ** ಎಂಬ ಋಷಿಯೂ, **ಮನು** ಎಂಬುವನೂ. **ದಧ್ಯಙ್** ಅಥರ್ವನೆಂಬ ಋಷಿಯೂ ಕೂಡ ಆಚರಿಸಿ ಇರುವ ಕ್ರತುವು ಎಲ್ಲವೂ ಇಂದ್ರನಿಗೆ ಸಂಬಂಧಪಟ್ಟವುಗಳಾಗಿ ಇರುತ್ತವೆ.

ಉಕ್ಥಾ—ಯಜ್ಞಗಳಲ್ಲಿ ಆಯಾಯ ದೇವತೆಗಳ ಮಹಿಮೆಯನ್ನು ಪ್ರಕಟಗೊಳಿಸುವ ಸ್ತೋತ್ರಗಳು.

ಬ್ರಹ್ಮಾಣಿ—ಅಗ್ನಿಯಲ್ಲಿ ದೇವತೆಗಳನ್ನುದ್ದೇಶಿಸಿ ಹೋಮಮಾಡುವ ಹವಿಸ್ಸೇ ಮೊದಲಾದವುಗಳು ಎಂದು ಅರ್ಥವು

ಪೂರ್ವಥಾ—ಈ ಪದದಿಂದ ದೃಷ್ಟಾಂತ ದಾರ್ಷ್ಟಾಂತಿಕಭಾವವು ತೋರಿಬರುವುದು. ಪೂರ್ವಕರಾದ ವಸಿಷ್ಠರೇ ಮೊದಲಾದ ಋಷಿಗಳು ಯಜ್ಞಗಳನ್ನು ಮಾಡಿದ ಕಾಲದಲ್ಲಿ ಹವಿಸ್ಸುಗಳೂ, ಸ್ತೋತ್ರಗಳೂ ಇಂದ್ರನಿಗೆ

ಸಂಬಂಧಪಟ್ಟು ಇದ್ದಂತೆಯೂ, **ಮನು, ದಧ್ಯಙ್, ಅಥರ್ವ** ಎಂಬ ಋಷಿಗಳು ಆಚರಿಸಿದ ಕ್ರಮದಂತೆಯೂ, ಸ್ತೋತ್ರಾದಿಗಳು ಇಂದ್ರನಿಗೆ ಸಂಬಂಧಿಸಿರುವುವು ಎಂದು ತಾತ್ಪರ್ಯ

ಆರ್ಚನ್ ಅನು ಸ್ವರಾಜ್ಯಂ—ಇಂದ್ರನು ತಾನು ರಾಜನಾಗಿರುವಿಕೆಯನ್ನು ಅನುಸರಿಸಿ ಅದಕ್ಕೆ ಗೌರವಿಸಿ ವೃತ್ರವಧೆಯೇ ಮೊದಲಾದ ಕರ್ಮಗಳನ್ನು ಮಾಡುತ್ತಾ ತನ್ನ ಆಧಿಪತ್ಯವನ್ನು ಪ್ರಕಟಗೊಳಿಸುತ್ತಿರುವನೆಂದು ಅರ್ಥವನ್ನು ವಿವರಿಸಿರುವರು

ದಧ್ಯಙ್—ಪ್ರತ್ಯಕ್ತೋ ಧ್ಯಾನಮಿತಿ ವಾ । ಧ್ಯಾನವನ್ನು ಆರಂಭಿಸುವುದರಲ್ಲಿ ತನ್ನ ಅರ್ಹತೆಯನ್ನು ಹೊಂದಿರುವವನು. ಇವನಲ್ಲಿ ಧ್ಯಾನದ ಸಕಲಕಾರ್ಯಗಳೂ ಹೊಂದಲ್ಪಡುವವು ಎಂದು ಅರ್ಥವು **ದಧ್ಯಙ್, ಅಥರ್ವಾ, ಮನುಃ** ಎಂಬ ಈ ಪದಗಳಿಂದ ಬೋಧ್ಯರಾಗುವವರು ಮೂವರೂ ಒಬ್ಬನೇ ಆಗಿರುವನೆಂದು ಹೇಳುವುದಾದರೆ ಆದಿತ್ಯನೆಂದು ಅರ್ಥವು. ಇವರು ಮೂವರೂ ಬೇರೆ ಬೇರೆಯಾಗಿರುವರೆಂದು ಹೇಳುವುದಾದರೆ ಪುನಃ ದ್ಯುಸ್ಥಾನವುಳ್ಳವರಾದ ಮೂರುಜನ ಋಷಿಗಳು ಎಂದು ತಿಳಿಯಬೇಕು ಎಂದು ನಿರುಕ್ತದಲ್ಲಿ ವಾಖ್ಯಾನಮಾಡಿರುವರು.

ದಧ್ಯಙ್—ದಧ್ಯಙ್ ಅಥವಾ ದಧೀಚಿ ಎಂಬ ಋಷಿಯು ಪುರಾಣಾದಿಗಳಲ್ಲಿ ಪ್ರಸಿದ್ಧನಾದವನು. ಭಾಷ್ಯಕಾರರು ಇಲ್ಲಿ ಒಂದು ಉಪಾಖ್ಯಾನವನ್ನು ಹೇಳಿರುವರು—ಅಥರ್ವನೆಂಬುವನ ಪುತ್ರನಾದ ದಧ್ಯಙ್ ಎಂಬ ಋಷಿಯು ಜೀವಿಸಿದ್ದಾಗ ಅವನ ದರ್ಶನದಿಂದ ಅಸುರರು ಭೀತರಾಗಿ ಓಡಿಹೋಗಿದ್ದರು ಆವನು ಮೃತನಾಗಿ ಸ್ವರ್ಗಕ್ಕೆ ಹೋದ ಬಳಿಕ ಅಸುರರು ನಿರ್ಭಯವಾಗಿ ಭೂಮಿಯೆಲ್ಲವನ್ನೂ ವ್ಯಾಪಿಸಿದರು. ಬಳಿಕ ಇಂದ್ರನು ಈ ಅಸುರರೊಡನೆ ಯದ್ಧಮಾಡಲಶಕ್ತನಾಗಿ ಆ ಋಷಿಯನ್ನು ಹುಡುಕಿದನು ಋಷಿಯು ಸ್ವರ್ಗಸ್ಥನಾದನೆಂದು ತಿಳಿಯಬಂದಿತು. ಆಗ ಇಂದ್ರನು ಸಮಾಪದಲ್ಲಿದ್ದವರನ್ನು ಕುರಿತು ಆ ಋಷಿಯ ಅಂಗಗಳಲ್ಲಿ ಯಾವುದಾದರೂ ಅವಶೇಷವಿದೆಯೇ ಎಂದು ಕೇಳಲು ಆಗ ಅವರು—ದಧೀಚಿಋಷಿಯು ಒಂದಾನೊಂದು ಕಾಲದಲ್ಲಿ ಅಶ್ವಿನೀದೇವತೆಗಳಿಗೆ ಮಧುವಿದ್ಯವನ್ನು ಕಲಿಸಿದ ಕುದುರೆಯ ತಲೆಬುರುಡೆಯು ಮಾತ್ರ ಇರುವುದೆಂದೂ, ಅದೂ ಸಹ ಎಲ್ಲಿರುವುದೋ ಗೊತ್ತಿಲ್ಲವೆಂದೂ ಹೇಳಿದರು ಆಗ ಇಂದ್ರನು ಅದನ್ನು ಹುಡುಕುವಂತೆ ಅವರಿಗೆ ಹೇಳಲು, ಅವರು ಅದು ಕುರುಕ್ಷೇತ್ರದ ಸಮಾಪದಲ್ಲಿರುವ ಶರ್ಯಣಾವತ್ ಎಂಬ ಸರೋವರದಲ್ಲಿ ಬಿದ್ದಿರುವುದನ್ನು ಹಡಿಕಿ ತೆಗೆದುಕೊಂಡುಬಂದರು. ಇಂದ್ರನು ಆ ತಲೆಬುರುಡೆಯ ಮೂಳೆಗಳಿಂದ **ಅಸುರ**ನನ್ನು ಜಯಿಸಿದನು ಎಂದರೆ, ಒಂಬತ್ತ್ಸಲ ತೊಂಬತ್ತು ಎಂದರೆ ಎಂಟನೂರು ಹತ್ತಾವರ್ತಿ ಅಸುರರ **ಮಾಯಾ**ಜಾಲವನ್ನು ವಿಫಲಗೊಳಿಸಿದನು. ಇಲ್ಲಿ ಒಂಭತ್ತುಸಲ ತೊಂಭತ್ತು ಎಂಬ ಸಂಖ್ಯೆಯನ್ನು ವಿವರಿಸುವಾಗ ಭಾಷ್ಯಕಾರರು—ಮೂರು ಲೋಕಗಳಲ್ಲಿರುವ ದೇವತೆಗಳನ್ನು ಜಯಿಸಲು ಮೊದಲು ಅಸುರರಿಗೆ ಮೂರುವಿಧವಾದ ಮಾಯಾಭೇದಗಳಿದ್ದವು. ಅವುಗಳಲ್ಲಿ ಒಂದೊಂದೂ ವರ್ತಮಾನ ಭೂತ ಭವಿಷ್ಯತ್ ಎಂದು ಮೂರುವಿಧವಾಗಿದ್ದುದರಿಂದ ಒಟ್ಟು ಒಂಭತ್ತು ವಿಧಗಳಾದವು ಮತ್ತೆ ಆ ಒಂಬತ್ತು ಮಾಯೆಗಳು ಉತ್ಸಾಹಾದಿಶಕ್ತಿತ್ರಯಗಳಿಂದ ಕೂಡಿ ೯×೩=೨೭ ಆದುವು ಮತ್ತೆ ಅವು ಸಾತ್ವಿಕಾದಿ ಗುಣತ್ರಯಗಳಿಂದ ಕೂಡಿ ೨೭×೩=೮೧ ಆದುವು ಈ ಎಂಭತ್ತೊಂದು ಮಾಯೆಗಳು ದಶದಿಕ್ಕುಗಳಲ್ಲಿ ಆಚರಿಸಲ್ಪಡುವುದರಿಂದ ಒಟ್ಟು ೮೧×೧೦=೮೧೦ ಅಥವಾ ಒಂಬತ್ತುಸಲ ತೊಂಭತ್ತು ೯×೯೦=೮೧೦ ಆದುವು ಈ ವಿಧವಾದ ವೈವಿಧ್ಯರೂಪವಾದ ಅಸುರರ ಮಾಯಾಜಾಲಗಳನ್ನು ಇಂದ್ರನು ನಿರರ್ಥಕಗೊಳಿಸಿದನು ಎಂದು ವಿವರಿಸಿರುವರು

ಸ್ಕಂದಸ್ವಾಮಿಯು ಬೇರೊಂದು ಇತಿಹಾಸವನ್ನು ಹೇಳಿರುವರು–ಪೂರ್ವದಲ್ಲಿ ಕಾಲಕಂಜರೆಂಬ ಅಸುರರಿದ್ದರು. ಅವರು ಪ್ರಬಲರಾಗಿ ದೇವತೆಗಳನ್ನು ಕೊಲ್ಲುತ್ತಾ ತುಂಬಾ 'ತೊಂದರೆ ಕೊಡುತ್ತಿದ್ದರು. ಆಗ ದೇವತೆಗಳು ಬ್ರಹ್ಮನ ಸವಿಾಪಕ್ಕೆ ಹೋಗಿ ಈ ಅಸುರರನ್ನು ಸಂಹಾರಮಾಡಲು ಉಪಾಯವನ್ನು ತಿಳಿಸಬೇಕೆಂದು ಪ್ರಾರ್ಥಿಸಲು, ಬ್ರಹ್ಮನು—ಎಲೈ ದೇವತೆಗಳಿರಾ, ದಧ್ಯಙ್ ಎಂಬ ಋಷಿಯು ಇರುವನು. ನೀವು ಅವನ ಸಮಿಾಪಕ್ಕೆ ಹೋಗಿರಿ, ಅವನು ಅಸುರರ ಸಂಹಾರ ವಿಷಯದಲ್ಲಿ ತಕ್ಕ ಉಪಾಯವನ್ನು ತಿಳಿಸುವನು ಎಂದನು. ದೇವತೆಗಳು ಬ್ರಹ್ಮನ ಮಾತಿನಂತೆ ದಧೀಚಿ ಋಷಿಯ ಸಮಿಾಪಕ್ಕೆ ಹೋಗಿ ಬ್ರಹ್ಮನು ತಮ್ಮನ್ನು ಕಳಹಿಸಿರುವನೆಂದು ಅರಿಕೆಮಾಡಿದರು. ಆ ಋಷಿಯು ಯೋಗದೃಷ್ಟಿಯಿಂದ ಇವರು ಬಂದ ಕಾರ್ಯವನ್ನು ತಿಳಿದು ಯೋಗಸಮಾಧಿಯಿಂದ ತನ್ನ ಪ್ರಾಣಗಳನ್ನು ವಿಸರ್ಜಿಸಿದನು. ಆಗ ಆ ಋಷಿಯ ಮೂಳೆಗಳಿಂದ ಇಂದ್ರನು ಅಸುರರನ್ನು ಸಂಹಾರಮಾಡಿದನು ಈ ವಿಷಯವೇ ಈ ಋಕ್ಕಿನಲ್ಲ ವಿವರಿಸಲ್ಪಟ್ಟಿರುವುದೆಂದು ಸ್ಕಂದಸ್ವಾಮಿಯು ಹೇಳಿರುವರು.

ದಧೀಚಿಋಷಿಯ ತಲೆಯು ಕುದುರೆಯ ತರಯಹಾಗಿದ್ದಿತ್ತೆಂದೂ ಆದು ಅಶ್ವಿನೀದೇವತೆಗಳಿಂದ ಅವನಿಗೆ ಕೊಡಲ್ಪಟ್ಟಿದ್ದಿತೆಂದೂ ಪ್ರತೀತಿ ನಿರುವುದು. ದಧೀಚಿಋಷಿಯು ಮೃತನಾದಮೇಲೆ ಕುದುರೆಯ ತಲೆಯಂತ್ತಿದ್ದ ಅವನ ಶಿರಸ್ಸನ್ನು ಇಂದ್ರನು ಹುಡುಕಿದನು. ಅದು ಒಂದು ಪರ್ವತದ ಮುರೆಯಲ್ಲಿ ಶರ್ಯಣಾವತಿಯೆಂಬ ಒಂದು ಸರೋವರದಲ್ಲಿ ಸಿಕ್ಕಿತೆಂದು ಋ. ಸಂ ೧–೮೪–೧೩ ರಲ್ಲಿ ವಿವರಿಸಲಾಗಿರುವುದು.

ದಧೀಚಿಋಷಿಗೆ ಕುದುರೆಯ ಶಿರಸ್ಸು ಹೇಗೆಬಂದಿತೆಂಬ ವಿಚಾರದಲ್ಲಿ ಸ್ಕಂದಸ್ವಾಮಿಯು ಒಂದು ಪೂರ್ವೇತಿಹಾಸವನ್ನು ಹೇಳಿರುವರ —ಅಥರ್ವಣ ಪುತ್ರನಾದ ದಧೀಚಿಋಷಿಗೆ ಇಂದ್ರನು ಮಧುವೆಂಬ ಪರಬ್ರಹ್ಮನ ಸ್ವರೂಪವನ್ನು ಉಪದೇಶಮಾಡಿ ಇದನ್ನು ಯಾರಿಗೂ ಹೇಳಕೂಡದೆಂದೂ ಹಾಗೆ ಒಂದು ವೇಳೆ ಹೇಳಿದರೆ ನಿನ್ನ ತಲೆಯು ಬಿದ್ದುಹೋಗುವುದೆಂದೂ ಹೇಳಿದ್ದನು. ಕೆಲವು ಕಾಲದ ಮೇಲೆ ಅಶ್ವಿನೀದೇವತೆಗಳು ಆ ದಧೀಚಿಋಷಿಯ ಸಮಿಾಪಕ್ಕೆ ಬಂದು, ಇಂದ್ರನು ನಿನಗೆ ತಿಳಿಸಿದ ಬ್ರಹ್ಮಸ್ವರೂಪವನ್ನು ವಿವರಿಸೆನಲು, ದಧೀಚಿಯು ಅವನನ್ನು ಕುರಿತು ಈ ವಿಷಯವನ್ನು ನಾನು ನಿಮಗೆ ತಿಳಿಸಿದಲ್ಲಿ ನನ್ನ ತಲೆಯು ಬಿದ್ದುಹೋಗುವುದೆಂದು ಇಂದ್ರನು ಹೇಳಿರುವನು, ಆ ಭಯದಿಂದ ನಾನು ಹೇಳುವುದಿಲ್ಲವೆನ್ನಲು, ಅಶ್ವಿನೀದೇವತೆಗಳು ಅದಕ್ಕಾಗಿ ಚಿಂತಿಸಬೇಡ, ನಿನ್ನ ತಲೆಯು ಬಿದ್ದುಹೋದರೆ ನಮ್ಮ ತಲೆಯನ್ನು ನಿನಗೆ ಕೊಡುವುವೆಂದರು. ದಧೀಚಿಯು ಅದಕ್ಕೆ ಸಮ್ಮತಿಸಿ ಹೇಳಿದನು. ಅದರಿಂದ ದಧೀಚಿಋಷಿಯ ಶಿರಸ್ಸು ಬಿದ್ದುಹೋಗಲು ಅಶ್ವಿನೀದೇವತೆಗಳು ಒಂದು ಕುದುರೆಯ ಶಿರಸ್ಸನ್ನು ಕತ್ತರಿಸಿ ತಂದು ದಧೀಚಿಋಷಿಯ ಶರೀರಕ್ಕೆ ಸೇರಿಸಿದರು. ಆದರಿಂದ ದಧೀಚಿಋಷಿಯ ಶಿರಸ್ಸು ಕುದುರೆಯ ಶಿರಸ್ಸಿನಂತಿರುವುದು ಎಂದು ವರ್ಣಿತವಾಗಿದೆ ಈ ವಿಷಯವನ್ನು ಕಕ್ಷೀವಾನ್ ಎಂಬ ಋಷಿಯು ಋ. ಸಂ ೧–೧೧೬–೧೨ ಋಕ್ಕಿನಲ್ಲಿ ವರ್ಣಿಸಿರುವನು.

ಈ ಋಷಿಯ ಹೆಸರು ಋಗ್ವೇದ ಸಂಹಿತೆಯಲ್ಲಿ ೧–೮೦–೧೬ , ೧–೮೪–೧೩ ; ೧–೮೪–೧೪ , ೧–೧೧೬–೧೨ , ೧–೧೧೬–೧೨ , ೧–೧೧೯–೯ ಮೊದಲಾದ ಋಕ್ಕುಗಳಲ್ಲಿಯೂ ತೈತ್ತಿರೀಯ, ಸಂಹಿತಾ ೫–೧–೪–೪ , ೫–೬–೬–೩ ಕಾಠಕ ಸಂಹಿತಾ ೧೯–೪ , ಶತಪಥ ಬ್ರಾಹ್ಮಣ ೪–೧–೫–೧೪ ; ೬–೪–೩–೩ , ೧೪–೧–೧–೧೪ , ೧೪–೧–೧–೧೦ , ೧೪–೧–೧–೨೫ , ೧೪–೧–೪–೧೩ ; ಬೃಹದಾರಣ್ಯಕೋಪನಿಷತ್ ೨–೫–೨೨ , ೪–೫–೨೪ ಮೊದಲಾದ ಸ್ಥಳಗಳಲ್ಲಿ ಪರಿಚಿತನಾಗಿದೆ

ಅಥರ್ವಾ—ಅಥರ್ವಾ ಎಂಬ ಹೆಸರಿನ ಋಷಿಯು ಪ್ರಸಿದ್ಧವಾದ ಒಂದು ಋತ್ವಿಂಗ್ವಂಶಕ್ಕೆ ಮೂಲ ಪುರುಷನು. ಈ ಶಬ್ದದ ಬಹುವಚನಪ್ರಯೋಗವಿರುವ ಸ್ಥಳಗಳಲ್ಲಿ ಈ ಋಷಿಯ ವಂಶಸ್ಥರೆಂದು ಅರ್ಥವು. ಕೆಲವುಕಡೆ ಎಂದರೆ—

ದಶ ರಥಾನ್ ಪ್ರಷ್ಟಿಮತಃ ಶತಂ ಗಾ ಅಥರ್ವಭ್ಯಃ ।
ಅಶ್ವಥಃ ಪಾಯವೇ೨ದಾತ್ ॥

(ಋ. ಸಂ. ೬-೪೭-೭೪)

ಮೊದಲಾದ ಋಕ್ಕುಗಳಲ್ಲಿ ಅಶ್ವಥನೆಂಬ ರಾಜನು ಅಥರ್ವವಂಶದವರಿಗೆ ರಥ, ಗೋವುಗಳು ಮೊದಲಾದವುಗಳನ್ನು ಕೊಟ್ಟ ದಾನಸ್ತುತಿಯ ಪ್ರಶಂಸೆ ಇರುವುದು.

ಅಭಿ ತೇ ಮಧುನಾ ಪಯೋ೨ಥರ್ವಾಣೋ ಅಶಿಶ್ರಯುಃ ।
ದೇವಂ ದೇವಾಯ ದೇವಯು ॥

(ಋ. ಸಂ. ೯-೧೧೦-೬).

ಎಂಬ ಋಕ್ಕಿನಲ್ಲಿ ಈ ಅಥರ್ವವಂಶದವರು ಸೋಮನಿಗೆ ಹಾಲನ್ನು ಬೆರೆಸಿದ ಸೋಮರಸವನ್ನು ಅರ್ಪಿಸಿದ ವಿಷಯವು ಪ್ರಸ್ತಾಪಿಸಲ್ಪಟ್ಟಿರುವುದು. ಈ ಋಷಿಯ ಹೆಸರು—

ಯಜ್ಞೈರಥರ್ವಾ ಪ್ರಥಮಃ ಪಥಸ್ತತೇ ತತಃ ಸೂರ್ಯೋ ವ್ರತಪಾ ವೇನ ಆಜನಿ ।

(ಋ. ಸಂ ೧-೮೩-೫)

ತ್ವಾಮಗ್ನೇ ಪುಷ್ಕರಾದಧ್ಯಥರ್ವಾ ನಿರಮಂಥತ ।

(ಋ ಸಂ ೬-೧೬-೧೩)

ಏವಾ ಮಹಾನ್ಬೃಹದ್ದಿವೋ ಅಥರ್ವಾವೋಚತ್ಸ್ವಂ ತನ್ವ ೧ ಮಿಂದ್ರಮೇವ ।

(ಋ ಸಂ ೧೦-೧೫೦-೯).

ಎಂಬ ಋಕ್ಕುಗಳಲ್ಲಿ ಪರಿಚಿತವಾಗಿರುವುದು. ಈ ಅಥರ್ವಋಷಿಯು ವಂಶಸ್ಥನಾದ ಬೃಹದ್ದಿವ ಎಂಬ ಋಷಿದೃಷ್ಟವಾದ ಇಂದ್ರದೇವತಾಕವಾದ ಒಂದು ಸೂಕ್ತವು ಋಗ್ವೇದದ ಹತ್ತನೆಯ ಮಂಡಲದಲ್ಲಿ (ಋ ಸಂ ೧೦-೧೫೦) ಇರುವುದು

ಮನುಃ—ಋಗ್ವೇದದಲ್ಲಿ ಮನುವಿನ ಹೆಸರು ಅನೇಕಕಡೆ ಪರಿಚಿತವಾಗಿದ್ದರೂ ಹೆಚ್ಚು ವಿವರಣೆ ಎಲ್ಲಿಯೂ ದೊರೆಕುವುದಿಲ್ಲ. ಮನುವು ಮಾನವ ಕುಲಕ್ಕೆ ಮೂಲಪುರುಷನೆಂದೂ ಯಜ್ಞಯಾಗಾದಿಗಳ ಅನುಷ್ಠಾನಕ್ರಮದಲ್ಲಿ ಸೂರ್ಗದರ್ಶಕನೆಂದೂ ತಿಳಿಯಬರುವುದು ಇವನು ತನ್ನ ಆಸ್ತಿಯನ್ನು ತನ್ನ ಮಕ್ಕಳಿಗೆ ಹಂಚಿಕೊಡುವಾಗ ಇವನ ಕಿರಿಯಮಗನಾದ ನಾಭಾನೇದಿಷ್ಠನೆಂಬುವನು ಗುರುಕುಲದಲ್ಲಿ ಬ್ರಹ್ಮಚರ್ಯದಿಂದ ವಿದ್ಯಾಭ್ಯಾಸವನ್ನು ಮಾಡುತ್ತಿದ್ದುದರಿಂದ ಅವನಿಗೆ ಯಾವ ದಯಾಭಾಗವೂ ದೊರಕಲಿಲ್ಲವೆಂದೂ ಅವನು ವಿದ್ಯಾಭ್ಯಾಸ ಮುಗಿಸಿಕೊಂಡು ಬಂದು ತಂದೆ

ಯನ್ನು ತನ್ನ ದಾಯಭಾಗಕ್ಕಾಗಿ ಪ್ರಶ್ನೆಮಾಡಲು ಇವನನ್ನು—ಅಂಗಿರಾಋಷಿಗಳು ಯಜ್ಞಮಾಡುವ ಸ್ಥಳಕ್ಕೆ ಹೋಗಿ ಅವರಿಗೆ ಕೆಲವು ಮಂತ್ರಗಳನ್ನು ಉಪದೇಶಮಾಡಿದರೆ ಅವರು ನಿನಗೆ ಯಥೇಚ್ಛವಾಗಿ ಧನವನ್ನು ಕೊಡುವರೆಂದು ಹೇಳಿಕಳುಹಿಸಿದನು. ಈ ವೃತ್ತಾಂತವು ಏತರೇಯಬ್ರಾಹ್ಮಣದಲ್ಲಿಯೂ, ಯಜುರ್ವೇದತೈತ್ತಿರೀಯಸಂಹಿತೆಯಲ್ಲಿಯೂ ವಿವರಿಸಿರುವುದು ಮುಖ್ಯವಾಗಿ ಈ ಮನುವು ಮಾಡಿದ ಯಜ್ಞವು ಪ್ರಸಿದ್ಧಿಯಾಗಿರುವುದರಿಂದ ಋಗ್ವೇದದಲ್ಲಿ ಮನುವು ಮಾಡಿದ ಯಜ್ಞದ ವಿಷಯವು ಅಲ್ಲಲ್ಲಿ ಪ್ರಸ್ತಾಪಿಸಲ್ಪಟ್ಟಿರುವುದು. ಈ ಮನುವಿನ ವಿಷಯವು ಋಗ್ವೇದದಲ್ಲಲ್ಲದೆ ಅಥರ್ವವೇದ (೧೪-೨-೪೧) ತೈತ್ತಿರೀಯಸಂಹಿತಾ (೧-೫-೧-೩, ೭-೫-೧೫-೩, ೨-೫-೯-೧, ೨-೬-೭-೧, ೩-೩-೨-೧, ೫-೪-೧೦-೫; ೬-೬--೬-೧.) ಕಾಠಕಸಂಹಿತಾ (೮-೧೫) ಶತಪಥಬ್ರಾಹ್ಮಣ (೧-೧-೪-೧೪) ಜೈಮಿನೀಯ ಉಪನಿಷದ್ಬ್ರಾಹ್ಮಣ (೩-೧೫-೨) ಮೊದಲಾದ ಸ್ಥಳಗಳಲ್ಲಿ ಉಕ್ತವಾಗಿರುವುದು

ಮನುವಿಗೆ ವಿವಸ್ವಾನ್ (ಋ ಸಂ. ೮-೫೨-೧) ಎಂದೂ ವಿವಸ್ವಂತನ (ಒಬ್ಬ ದೇವತೆ) ಮಗನಾದುದರಿಂದ ವೈವಸ್ವತನೆಂದೂ (ಆಥ. ೮-೧೦-೨೪, ಶತ. ಬ್ರಾ. ೧೩-೪-೩-೩) ಸವರ್ಣಾ ಎಂಬ ಎಂಬುವಳ ವಂಶಸ್ಥನಾದುದರಿಂದ ಸಾವರ್ಣಿ ಎಂದೂ, ಸಂವರಣನ ವಂಶಸ್ಥನಾದುದರಿಂದ ಸಾಂವರಣಿ (ಋ ಸಂ ೮-೫೧-೧) ಎಂದೂ ಅನೇಕ ಹೆಸರುಗಳಿವೆ

ವ್ಯಾಕರಣಪ್ರಕ್ರಿಯಾ

ಅತ್ನತ—ತನು ವಿಸ್ತಾರೇ ಧಾತು. ಇದಕ್ಕೆ ಲಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ- **ಬಹುಲಂಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. **ಅತ್ಮನೇಪದೇಷ್ವನತೇಃ** (ಪಾ ಸೂ. ೭-೧-೫) ಎಂಬುದರಿಂದ ಝಿ ಪ್ರತ್ಯಯಕ್ಕೆ ಅತಾದೇಶ **ತನಿಪತ್ಯೋಶ್ಛಂದಸಿ** (ಪಾ ಸೂ ೮-೪-೮೦) ಎಂಬುದರಿಂದ ವೇದದಲ್ಲಿ ಧಾತುವಿನ ಉಪಧೆಗೆ ಲೋಪ ಅಂಗಕ್ಕೆ ಅಡಾಗಮ. **ಅತ್ನತ** ಎಂದು ರೂಪವಾಗುತ್ತದ ಯಾಮ್ ಎಂದು ಪೂರ್ವದಲ್ಲಿ ಯಚ್ಛಬ್ದ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಂ** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತ ಪ್ರತಿಷೇಧ ಬರುವುದರಿಂದ ಅಡಾಗಮ ಉದಾತ್ತನೆಂಬುದರಿಂದ ಆದ್ಯುದಾತ್ತವಾಗುತ್ತದೆ

ಪೂರ್ವಥಾ—ಪೂರ್ವ ಇವ ಪೂರ್ವಥಾ ಪೂರ್ವ ಶಬ್ದಕ್ಕೆ **ಪ್ರಶ್ನೆಪೂರ್ವವಿಶ್ವೇಮಾತ್ಥಾಲ್ ಛಂದಸಿ** (ಪಾ ಸೂ. ೫-೩-೧೧೧) ಎಂಬುದರಿಂದ ಇವಾರ್ಥದಲ್ಲಿ ಥಾಲ್ ಪ್ರತ್ಯಯ ಲಿತ್ತಾದುದರಿಂದ **ಲಿತಿ** (ಪಾ ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

ಉಕ್ಥಾ—ನಪುಂಸಕದಲ್ಲಿ ಶಿ ಆದೇಶ ಬಂದಾಗ **ಶೇಶ್ಛಂದಸಿಬಹುಲಂ** (ಪಾ. ಸೂ ೬-೧-೭೦) ಎಂಬುದರಿಂದ ಶಿಗೆ ಲೋಪ

ಸಮಗ್ಮತ—ಗಮ್ಲೃ ಗತೌ ಧಾತು. ಸಮ್ ಉಪಸರ್ಗದ ಪರದಲ್ಲಿರುವುದರಿಂದ **ಸನೋರ್ಗಮ್ಯಚ್ಛಿಭ್ಯಾಂ** (ಪಾ. ಸೂ. ೧-೩=೨೯) ಎಂಬುದರಿಂದ ಆತ್ಮನೇಪದಿಯಾಗುತ್ತದೆ ಲುಙ್ ಪ್ರಥಮಪುರುಷ ಬಹುವಚನಕ್ಕೆ **ಅತ್ಮನೇಪದೇಷ್ವನತೇಃ** (ಪಾ ಸೂ. ೭-೧-೫) ಎಂಬುದರಿಂದ ಝಿ ಪ್ರತ್ಯಯಕ್ಕೆ ಅತಾದೇಶ ಚ್ಲಿ ಬಂದಾಗ

ಮಂತ್ರೇಷುಸಹ್ವರ—(ಪಾ. ಸೂ ೨-೪-೮೦) ಎಂಬುದರಿಂದ ಅದಕ್ಕೆ ಲುಕ್. **ಗಮಹನಜನ**—(ಪಾ· ಸೂ. ೬-೪-೯೮) ಎಂಬುದರಿಂದ ಧಾತುವಿನ ಉಪಧೆಗೆ ಲೋಪ. ಅಂಗಕ್ಕೆ ಆಡಾಗಮ. ಅತಿಜಂತದ ಸರದಲ್ಲಿರುವುದರಿಂದ ಅಗ್ಮತ ಎಂಬ ತಿಜಂತಕ್ಕೆ ನಿಘಾತಸ್ವರ ಬರುತ್ತದೆ

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕ ಶ್ರೀ ವೀರಬುಕ್ಕಭೂಪಾಲ-
ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ
ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಪ್ರಥಮಾಷ್ಟಕೇ
ಸಂಚಮೋಽಧ್ಯಾಯಃ ಸಮಾಪ್ತಃ

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಪ್ರಥಮಾಷ್ಟಕದಲ್ಲಿ
ಐದನೆಯ ಅಧ್ಯಾಯವು ಸಮಾಪ್ತವಾದುದು

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ



ಆರ್. ಕೃಷ್ಣಶೆಟ್ಟಿ, ಪ್ರಿಂಟರ್, ಶ್ರೀ ಶಾರದಾ ಪ್ರೆಸ್, ಮೈಸೂರು.